KARNATAKA STATE ARCHIVES

KARNATAKA STATE ARCHIVES

Roll No: 139

Roll No: 139

ARS 34 APP 82

NAVAYUGA KANNADA WEEKLY

From 20:5:1943 contd from: Roll No. 138

ARS 34 APP 82

NAVAYUGA KANNADA
WEEKLY

Roll No.
From 20:5:1943 contd from: 138

ದಕ್ಷಿಣ ಕನ್ನಡ.

ಮಂಗಳೂರು.

ಶ್ರೀ ಶಂಕರ ಜಯಂತಿಯು ತಾ. ೯ ರಂದು ಮಂಗಳೂರಿನ ಪೋಲಿಸ್ ಡಿ. ಸುಪರಿಂಟೆಂಡ ರಾದ ರಾ. ಸಾ. ಶ್ರೀ ಜಿ. ಆರ್ ದೇವರಾಜ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಕೆನರಾ ಹೈಸ್ಕೂಲಿನಲ್ಲಿ ಜರಗಿತು. ಶ್ರೀ ಎಂ. ಎಸ್. ಅಚ್ಯುತ ಶರ್ಮರವರು 'ಶ್ರೀ ಶಂಕರಾಚಾರ್ಯ'ರ ಜೀವಿತದ ಕುರಿತು ಮಾತನಾಡಿದರು. ವಿದ್ವಾನ್ ಕುಮಾರಿ ಕ್ಯಾಮಿನಿ ಮತ್ತು ಶ್ರೀ ಶ್ರೀನಿವಾಸ ಉಡುಪರ ಸಂಗೀತವಿತ್ತು. ಕೊನೆಗೆ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶ್ರೀ ಶಂಕರಾಚಾರ್ಯರು ತಮ್ಮ 85 ವರ್ಷದ ಜೀವನದಲ್ಲಿ ಒಂದೂ ವೈದಿಕ ಮತವನ್ನು ತಿರುಗಿ ಸ್ಥಾಪನೆ ಮಾಡಿ ಭರತ ಖಂಡಕ್ಕೆ ಮಾಡಿದ ಉಪಕಾರವನ್ನು ವಿವರಿಸಿದರು. ಮುಂದಕ್ಕೆ ಶಂಕರ ಜಯಂತಿಯು ಕನ್ನಡ ಜಿಲ್ಲೆಯ ಅನೇಕ ಕಡೆಗಳಲ್ಲಿ ನಡೆಯಲೆಂದು ಆಶಿಸಿದರು. ಜಯಂತಿಯಲ್ಲಿ ಭಾಗವಹಿಸಿದ ಧರ್ಮಾಭಿಮಾನಿಗಳಿಗೆಲ್ಲ ಡಾ| ಎಂ. ವಿ. ಶಾಸ್ತ್ರಿ ಅವರು ಕೃತಜ್ಞತೆಯನ್ನರ್ಪಿಸುತ್ತಾರೆ.

ಐ. ಸಿ. ಎಸ್. ಪರೀಕ್ಷೆಗೆ ಕುಳಿತಿದ್ದ ನಮ್ಮ ಜಿಲ್ಲೆಯ ಶ್ರೀ ಎಂ. ಕೆ. ಶಾಮಭಟ್ಟರು ಉತ್ತೀರ್ಣರಾಗಿರುವರು.

ವರ್ಗ:—ಇಲ್ಲಿಯ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಅಚ್ಯುತಯ್ಯನವರಿಗೆ ವರ್ಗವಾಗಿದ್ದು ಸಬ್ ಇನ್ಸ್‌ಪೆಕ್ಟರ್ ಶ್ರೀ ರಾಜೀವ ಇವರು ಇಲ್ಲಿಗೆ ಬಂದಿರುತ್ತಾರೆ.

ಕೊಲೆ:—ವಿಟ್ಲ ಪಡ್ನೂರು ಗ್ರಾಮದಲ್ಲಿ ತಾ ೯ರಂದು ಶ್ರೀ ದಿವಾಣ ಸುಬ್ರಾಯ ಭಟ್ಟರೆಂಬವರನ್ನು ಅವರ ಒಕ್ಕಲಿಗನೊಬ್ಬನು ಚೂರಿ ಹಾಕಿ ಕೊಂದಿರುತ್ತಾನೆಂದು ವಾರ್ತೆ.

ಗೌಡ ವಿದ್ಯಾ ಸಂಘದ ವಾರ್ಷಿಕ ಸಭೆಯು ತಾ ೧೯ರಂದು ಸುಳ್ಯ ಬೋ. ಹಾ. ಎ. ಶಾಲೆಯಲ್ಲಿ ಶ್ರೀ ಎಂ. ಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಆಹಾರ ಸಮಸ್ಯೆ:—ಅಕ್ಕಿಯು ಮನಬಂದಂತೆ ಕ್ರಯದಲ್ಲಿ ಮಾರಾಟವಾಗುತ್ತಿದೆಯೆಂದು ದೂರು ಕೇಳಬರುತ್ತಿದೆ. ಚಿಲ್ಲರೆಯು ಚೇತರಿಕೆಯನ್ನೂ ಕಾಣುತ್ತಿಲ್ಲ.

ಅನಾಥಾಶ್ರಮ:—ಬಡವರ ಬಂಧು ಅನಾಥಾಶ್ರಮವನ್ನು ಜಿಲ್ಲಾ ಕಲೆಕ್ಟರ ಪತ್ನಿ ಬೇಗಂ ಕರಮತುಲ್ಲರು ತೆರೆದರು. ಅಧ್ಯಕ್ಷ ಪೀಠವನ್ನು ಜಿಲ್ಲಾ ಕಲೆಕ್ಟರರು ವಹಿಸಿದ್ದರು. ಸಂದರ್ಭೋಚಿತ ಭಾಷಣಗಳಾದ ಅನಂತರ ಸಭೆ ಮುಕ್ತಾಯವಾಯ್ತು.

ಪ್ರಕಟಣೆ

ಇನ್ನಂಜೆ ಶ್ರೀ ವಿಷ್ಣುಮೂರ್ತಿ ಹ್ಯಾಸ್ಕೂಲ್

ಇದೇ ಬರುವ ಜೂನ್ ತಾ. ೧ರಿಂದ ಇನ್ನಂಜೆ ಶ್ರೀ ವಿಷ್ಣುಮೂರ್ತಿ ಹೈಸ್ಕೂಲಿನ ಆರಂಭೋತ್ಸವವು ನೆರವೇರುವುದರೊಡನೆ ಹೈಸ್ಕೂಲಿನ ಅಂಗವಾಗಿ I, II, III, ಫಾರ್ಮುಗಳು ಹೊಸದಾಗಿ ತೆರೆಯಲ್ಪಡುವುವು. ಈ ತರಗತಿಗಳಿಗೆ ಸೇರಬಯಸುವ ವಿದ್ಯಾರ್ಥಿಗಳು ಇದೇ ಮೇ ತಾ. ೩೧ರೊಳಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಅಗತ್ಯವಿರುವ ಯಾವತ್ತು ಮಾಹಿತಿಯನ್ನೂ ಪಡೆದುಕೊಳ್ಳಬಹುದು.

"ಮ್ಯಾನೇಜರ್, ಇನ್ನಂಜೆ ಶ್ರೀ ವಿಷ್ಣುಮೂರ್ತಿ ಹಾಯರ್ ಎಲಿಮೆಂಟರಿ ಸ್ಕೂಲ್, ಕಾಪು ಪೋಸ್ಟ್, ಉಡುಪಿ ತಾಲ್ಲೂಕು, ದ. ಕ ಜಿಲ್ಲೆ."

ವಿ. ಸೂ:—ಈ ಶಾಲೆಗೆ ಸೇರುವ ಯಾವತ್ತು ವಿದ್ಯಾರ್ಥಿಗಳಿಗೂ ಅಗತ್ಯವಿರುವ ಸೌಕರ್ಯಗಳನ್ನು ಕಲ್ಪಿಸುವ ಏರ್ಪಾಡುಗಳನ್ನು ಮಾಡಲಾಗುತ್ತದೆ.

ಸಾಬಾಜಿ ಶ್ರೀನಿವಾಸಾಚಾರ್ಯ,
ಕರೆಸ್ಪಾಂಡೆಂಟ್.
ಉಡುಪಿ, ತಾ. ೧೦-೫ ೧೯೪೩.

The Canara Mutual
ASSURANCE COMPANY, LIMITED.

NEW APPOINTMENTS.

Applications from students of S. S. L. C. standard are invited for clerical posts in the Company. Students fresh from school will be prefered. The new posts will be 4 for gents and 2 for ladies.

Applicants should possess a good hand, a good command of English, a good moral character and should be sharp at figures.

All applications must be accompanied by two testimonials one from the Headmaster of the School and another from any local gentleman and should reach the office before the 1st June, 1943.

UDIPI,
10th May, 1943

Managing Director.

N B.—Canvassing or influencing will be a disqualification

ಶ್ರೀ ಬೆನಗಲ್ ರಾಮರಾಯರು ಕಣ್ಮರೆಯಾದರು!

ಕನ್ನಡನಾಡಿನ ಹಿರಿಯ ಸಾಹಿತಿಗಳಲ್ಲೊಬ್ಬರೂ ಮದ್ರಾಸ್ ಸರಕಾರದ ಮಾಜಿ ಕನ್ನಡ ಭಾಷಾಂತರಕಾರರೂ ಆಗಿದ್ದ ಶ್ರೀ| ಬೆನಗಲ್ ರಾಮರಾಯರು ಎಪ್ಪತ್ತೆಂಟನೆಯ ವಯಸ್ಸಿನ ತಾ ೯ರಂದು ಬೆಂಗಳೂರಿನ ಮಲ್ಲೇಶ್ವರದಲ್ಲಿದ್ದ ಸ್ವಗೃಹದಲ್ಲಿ ಹೃದಯ ವಿಕಾರದಿಂದ ನಿಧನಹೊಂದಿದರೆಂದು ತಿಳಿಸಲು ಬಹು ವಿಷಾದವೆನಿಸುತ್ತದೆ.

ಶ್ರೀ ಬೆನಗಲ್ಲರು ದಕ್ಷಿಣ ಕನ್ನಡ ಜಿಲ್ಲೆಯವರು ದಿವಂಗತ ಪಂಜೆ ಮಂಗೇಶರಾಯರ ಸಂಬಂಧಿಕರು ಕನ್ನಡ ನಾಡಿನ ಏಕೀಕರಣಕ್ಕಾಗಿಯೂ ಏಳ್ಗೆಗಾಗಿಯೂ ನಿರಂತರ ದುಡಿದವರು, ಕನ್ನಡಾಭಿಮಾನಿಗಳು, ಕಲಾಭಿಮಾನಿಗಳು, ಪ್ರತಿಗ್ರಂಥಕರ್ತರು. ಸಾಹಿತ್ಯಕ್ಷೇತ್ರದಲ್ಲಿ ಅವರು ತುಂಬ ಸೇವೆ ಸಲ್ಲಿಸಿರುವರು. ಹಿಂದೊಮ್ಮೆ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆಯನ್ನು ವಹಿಸಿದ್ದರು. ಅವರ ನಿಧನದಿಂದ ಕನ್ನಡನಾಡಿಗಾಗಿರುವ ನಷ್ಟ ಅಪರಿಹಾರ್ಯವಾದುದು ಅವರ ಬಂಧು ವರ್ಗದವರ ದುಃಖದಲ್ಲಿ ನಾವು ಸಮ್ಮಸಹಾನುಭೂತಿಯನ್ನು ಪ್ರದರ್ಶಿಸುತ್ತೇವೆ.

ಈ ನಿಧನದಿಂದುಂಟಾದ ದುಃಖ ಸೂಚನಾರ್ಥವಾಗಿ ಕನ್ನಡ ಸಾಹಿತ್ಯ ಪರಿಷತ್ತಿಂದಿದ್ದು ತಾ ೧೦ರಂದು ಮುಚ್ಚಲ್ಪಟ್ಟಿತ್ತು.

ಜಮೀನ್ದಾರರಲ್ಲಿ ವಿನಂತಿ:—ಪ್ರಸ್ತುತ ಜಿಲ್ಲೆಯಲ್ಲಿ ಆಹಾರದ ತುಟ್ಟಿಯು ದಿನೇದಿನೇ ಬೆಳೆಯುತ್ತಿರುವ ಕಾಲದಲ್ಲಿ ಆಹಾರದ ಬಿಕ್ಕಟ್ಟನ್ನು ಬಿಡಿಸಲು ಸರಕಾರವು ಹಲವರಲ್ಲಿದ್ದ ಅಕ್ಕಿಯನ್ನು ಸ್ವಾಧೀನಪಡಿಸುತ್ತಿದೆ. ಅದನ್ನು ಕಮ್ಮಿ ಬೆಲೆಗೆ ಮಾರಲು ಈ ಯೋಜನೆ. ಈ ಕಾರ್ಯವನ್ನು ಜಮೀನ್ದಾರರೇ ಮಾಡಿ ಬಡವರ ಹೊಟ್ಟೆಯುರಿಯನ್ನು ಶಾಂತಪಡಿಸಿದರೆ ಸರಕಾರ ಮಧ್ಯದಲ್ಲಿ ಬರುವುದಿಲ್ಲ. ಆದ್ದರಿಂದ ಇಂದಿನ ಸಮಯದಲ್ಲಿ ಜಮೀನ್ದಾರ [illegible] ವಡೆ ಬಡವರ ಕಡೆಗೆ ಕೊಡುಗೈ ಸಹಾಯ ನೀಡಬೇಕೆಂದು ಜಿಲ್ಲೆಯ ಪ್ರಮುಖ ಜಮೀನ್ದಾರರು ತಮ್ಮ ಬಂಧು ಜಮೀನ್ದಾರರೊಡನೆ ಒಂದು ವಿನಂತಿ ಮಾಡಿರುವರು

ಹೊಸ ವಿದ್ಯಾಧಿಕಾರಿ:—ಶಾಲೆಗಳ ಡೆಪ್ಯುಟಿ ಇನ್ಸ್‌ಪೆಕ್ಟರರಾದ ಮಿ. ಎಸ್. ಮಹಮ್ಮದ್ ಉಸ್ಮಾನ್ ಸಾಹೇಬ ಬಹಾದ್ದೂರರು ದ. ಕ. ಜಿಲ್ಲಾ ಎಜ್ಯುಕೇಶನಲ್ ಆಫೀಸರರಾಗಿ ನೇಮಿಸಲ್ಪಟ್ಟಿರುವರು.

ಪ್ರತಿಯೊಬ್ಬ ನಿರ್ಮಾತೃವೂ ಪ್ರೇಮಪರಿಚಯ ಮಾಡಿಕೊಡಬಲ್ಲನು. ಆದರೆ ಬೊಂಬೇ ಟಾಕೀಸಿನವರ ಪ್ರೇಮದಲ್ಲೊಂದು ಪರಿಹಾಸ್ಯವಿದೆ, ಸರಳತೆ ಇದೆ, ಸಂಭ್ರಮವಿದೆ, ಸುಲಲಿತ ಸಂಭಾಷಣೆಯಿದೆ. ಹೆಚ್ಚೇಕೆ ಪರಿಪೂರ್ಣತೆಯೇ ಇದೆ. ಇಂತಹ ಚಿತ್ರವೊಂದು

ಝೂಲಾ (ಬೊಂಬೆ ಟೋಕೀಸ್)

ಅಭಿನಯಿಸಿದವರು ದೈವನಿರ್ಮಿತ ಜೊತೆಗಳೆರಡು ಅಶೋಕ ಕುಮಾರ್, ಲೀಲಾಚಿಟ್ನೀಸ್ ಮತ್ತು ಮಮತಾಜ್ ಅಲಿ, ಷಾಜಾದಿ.
ಇವರೊಂದಿಗೆ ಷಾನವಾಜ್, ದೇಸಾಯಿ
ತಾ. **20—5—43**ರಿಂದ.
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ಸಮಯ ಬದಲಾವಣೆ ಗಮನಿಸಿರಿ.
ಮೆಟಿನಿ 3. 30ಕ್ಕೆ, ಸಾಯಂ 7. ಮತ್ತು ರಾತ್ರಿ 10 ಕ್ಕೆ,
ಬರುವ ಚಿತ್ರ ನೆಶನಲ್ಸ್‌ನವರ ಸಿಸ್ಟರ್ (ಸಹೋದರಿ)
ಶೇಖ್ ಮುಖ್ತಾರ್, ನಳಿನಿ ಜಯವಂತ್

ಉಡುಪಿ

ಹವಾಮಾನ:—ತಾ 17ನೇ ರಾತ್ರಿ ಮತ್ತು 18ನೇ ಹಗಲಲ್ಲಿ ವಿಶೇಷ ಮಳೆ ಬಂದಿದೆ. ಹವಾಮಾನವು ಮಳೆಗಾಲದ ಸ್ಥಿತಿಗೆ ಮಾರ್ಪಟ್ಟಿದ್ದಿತು.

ಬಯಲಾಟ:—ತಾ 19ರಲ್ಲಿ ಯುದ್ಧ ನಿಧಿಯ ಸಹಾಯಾರ್ಥವಾಗಿ ಆದಿಉಡುಪಿಯಲ್ಲಿ ಜೋಡಾಟ ನಡೆಯಿತು.

ಇನ್ನಂಜೆ ಶ್ರೀ ವಿಷ್ಣುಮೂರ್ತಿ ಹೈಸ್ಕೂಲ್—ಉಡುಪಿ ತಾಲೂಕಿನ ಇನ್ನಂಜೆ ಹೈಸ್ಕೂಲಿಗೆ ಇದೀಗಲೇ ಸರಕಾರದ ಅಪ್ಪಣೆ ದೊರಕಿದ್ದು ಅದಕ್ಕೆ ಸಂಬಂಧಿಸಿದ ಹೊಸತರಗತಿಗಳು ಜೂನಿನಲ್ಲಿ ಆರಂಭವಾಗುವುವು.

ಹೆಬ್ರಿ—ಸ್ಥಳೀಯ ಬೋ. ಹಾ. ಎ. ಶಾಲೆಯ ವಾರ್ಷಿಕೋತ್ಸವವು ತಾ. 15-5-43ರಲ್ಲು ಕಾರ್ಕಳ ತಾಲೂಕು ತಹಸಿಲ್ದಾರರಾದ ಶ್ರೀ ಸೆಲಿಮನ್ ಜೋನ್, ಬಿ. ಎ. ಯವರ ಸಭಾಧ್ಯಕ್ಷತೆಯಲ್ಲಿ ಜರಗಿ, ಶಾಲೆಯ ಪ್ರಗತಿಪರ ವರದಿವಾಚನ, ಬಾಲಾಭಿನಂದನ, ಪುರಸ್ಕಾರ ವಿತರಣ, 'ಸ್ವಾಮಿ ಭಕ್ತ ದುರ್ಗಾದಾಸ' ವೆಂಬ ಸಂಗೀತ ನಾಟಕವೇ ಮೊದಲಾದ ಮನೋರಂಜಕ ಕಾರ್ಯಕ್ರಮದೊಂದಿಗೆ ವಿಜೃಂಭಣೆಯಿಂದ ಕೊನೆಗೊಂಡಿರುವುದು ಈ ಯಶಸ್ಸಿಗೆ ಪಾತ್ರರಾದ ಶಾಲಾ ಅಧ್ಯಾಪಕ ವರ್ಗದವರು ಅಭಿನಂದನೀಯರು

ಕಾಪು:—ಬೋ ಹಾ. ಎ. ಶಾಲಾ ಹಳೇ ವಿದ್ಯಾರ್ಥಿಗಳ ಸಭೆಯೊಂದು ತಾ. 16-5-43ರಲ್ಲಿ ಪಂಚಾಯತ್ ಬೋರ್ಡು ಆಫೀಸಿನಲ್ಲಿ ಶ್ರೀ| ಯಶ್ವಂತ್ ಗೋವಿಂದರಾವ್. ಎಂ. ಎ. ಬಿ. ಒ. ಎಲ್. (ಲ್ಯಾಲ್‌ಕಾಲೇಜಿನ ಕನ್ನಡ ಪಂಡಿತರು)ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ನಿಯಮಾವಳಿಯನ್ನು ತಯಾರಿಸಿ, ಚಾಲ್ತಿವರ್ಷಕ್ಕೆ ಕಾರ್ಯನಿರ್ವಾಹಕ ಮಂಡಳಿಯನ್ನು ಆರಿಸಲಾಯಿತು.

WANTED.

Applications are invited upto the end of this month for the post of an accountant clerk with the minimum S. S. L. C. qualification. Candidates who know type-writting and office correspondance need apply. Pay according to qualifications

Navayuga Enterprise Ltd, UDIPI.

ಬೇಕಾಗಿದ್ದಾರೆ.

ಇನ್ನಂಜೆ ಶ್ರೀ ವಿಷ್ಣುಮೂರ್ತಿ ಹ್ಯಾಸ್ಕೂಲಿಗೆ ಬಿ. ಎ. ಎಲ್. ಟಿ. ಯ ಒಬ್ಬ ಉಪಾಧ್ಯಾಯರೂ ಸೆಕೆಂಡರಿ ಗ್ರೇಡಿನ ಇಬ್ಬರು ಉಪಾಧ್ಯಾಯರೂ, ಒಬ್ಬ ಡ್ರಾಯಿಂಗ್ ಮಾಸ್ತರರೂ ಒಬ್ಬ ಡ್ರಿಲ್ ಮಾಸ್ತರರೂ ಒಬ್ಬ ಕನ್ನಡ ಪಂಡಿತರೂ ಬೇಕಾಗಿದ್ದಾರೆ. ಉಮೇದುವಾರರು ಯಾವತ್ತು ವಿವರಗಳಿಗೆ ಇದೇ ಮೇ ತಾ. ೩೧ರೊಳಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು.

"ಮ್ಯಾನೇಜರ್, ಇನ್ನಂಜೆ ಶ್ರೀ ವಿಷ್ಣುಮೂರ್ತಿ ಹಾಯರ್ ಎಲಿಮೆಂಟರಿ ಸ್ಕೂಲ್, ಕಾಪು ಪೋಸ್ಟ್ ಉಡುಪಿ ತಾಲೂಕು ದಕ್ಷಿಣ ಕನ್ನಡ ಜಿಲ್ಲಾ".

ಸಾಬಾಜಿ ಶ್ರೀನಿವಾಸಾಚಾರ್ಯ.
ಕರೆಸ್ಪಾಂಡೆಂಟ್
ಉಡುಪಿ, ತಾ- 10—5—'43.

CHAMPAE'S
SNOW & CASTREX

ಚಿಕ್ಕ ಚೂರು

ವಾಯುವ್ಯ ಗಡಿನಾಡಿನ ಮುಸ್ಲಿಂ ಲೀಗ್ ಪ್ರಮುಖರಾದ ಸರ್ದಾರ್ ಮಹಮ್ಮದ್ ಔರಂಗಜೇಬ್ ಖಾನರನ್ನು ಮಂತ್ರಿ ಮಂಡಲ ರಚಿಸುವಂತೆ ಗವರ್ನರರು ಕೇಳಿಕೊಂಡಿದ್ದು ಅವರೀಗ ಮಂತ್ರಿಗಳನ್ನು ಹೆಕ್ಕಿದ್ದಾರೆ.

ಲೀಗಿನ ಹೊರತು ಮಿಕ್ಕಯಾವ ಪಕ್ಷದ ಮಂತ್ರಿಗಳಿಗೂ ಬಾಳುವೆ ಕಡಿಮೆಯೆಂಬುದು ಮಿ. ಅಲ್ಲಾಭಕ್ಷರ ಕೊಲೆಯನಂತರ ಅಧಿಕಾರಿಗಳಿಗೆ ವೇದ್ಯವಾಗಿರಬೇಕು.

O

ಉತ್ತರ ಶಾಂತಸಮುದ್ರದ 'ಅಟ್ಟು' ದ್ವೀಪಕ್ಕೀಗ ಅಮೇರಿಕಾದ ಸೇನೆಗಳಿಳಿದು ಅಲ್ಲಿ ತೀವ್ರ ಹೋರಾಟನಡೆಯುತ್ತಿದೆ.

'ಜಪಾನರನ್ನು 'ಅಟ್ಟು'ವದಿಲ್ಲವೆ?'—ಎಂದು ಪ್ರಶ್ನಿಸುವವರು ಇನ್ನಾದರೂ ಸುಮ್ಮಗಾಗಲಿ!

O

'ತಿಲಕ, ಗಾಂಧಿ, ಅಭ್ಯಂಕರ್—ಈ ತ್ರಿಮೂರ್ತಿಗಳಿಂದ ನನ್ನ ರಾಜಕೀಯ ಜೀವನ ಹಾಗೂ ಸ್ಫೂರ್ತಿ ರೂಪುಗೊಂಡಿತು'—ನಾಗಪುರ ನಗರಸಭೆಯ ಮಾನಪತ್ರಕ್ಕುತ್ತರವಾಗಿ ಈಗ ತಾನೇ ವೈಸರಾಯಿ ಕೌನ್ಸಿಲ್ ಮೆಂಬರಾಗಿ ನೇಮಕವಾಗಿರುವ ಡಾ| ಖಾರೆಯವರ ಮಾತು.

ಆದರೆ ರೂಪುಗೊಂಡುದು ಆ ತ್ರಿಮೂರ್ತಿಗಳಿಂದ —ಉಪಯೋಗಕ್ಕೆ ಬಿದ್ದುದು ಲೋರ್ಡ್ ಲಿನ್‌ಲಿತ್‌ಗೋರವರಿಗೆ, ಬಿಲ ಕೊರೆಯುವದು ಇಲಿ—ಒಳನುಗ್ಗುವದು ಹಾವು!

O

ಇದೇ ಮೆ. ತಾ 21ರಲ್ಲಿ 'ಟ್ಯುನಿಸಿಯಾದಿನ' ವಾಗಿ ರಜೆ ಮತ್ತು ವಿಜಯೋತ್ಸವಗಳನ್ನು ಹಿಂದೂ ದೇಶದಲ್ಲೆಲ್ಲಾ ಆಚರಿಸಬೇಕೆಂದು ವೈಸರಾಯರ ಅಜ್ಞೆ.

'ಒಂದು ವಿಜಯಕ್ಕಾಗಿ ಒಂದು ದಿನ ರಜ—ಶಾಶ್ವತ ವಿಜಯ ದೊರೆತಾಗ ತಮಗೆ ಶಾಶ್ವತ ರಜೆಯೆ?'—ಎಂದು ಕೆಲವು ನೌಕರರಲ್ಲಿ ಗಾಬರಿಯೆದ್ದಿದೆ!

O

ನವದಿಲ್ಲಿಯಿಂದ ವಿಮಾನಹತ್ತಿ ವೈಸರಾಯರು ಚಿತ್ತಗಾಂಗ್, ಫೆಣಿ, ಇಂಫಾಲ್ ಮೊದಲಾದ ಪೂರ್ವಗಡಿಯ ಯುದ್ಧ ನಿಲ್ದಾಣಗಳ ತನಿಖೆಕಾರ್ಯ ಮುಗಿಸಿ ಬಂದರು.

ಪ್ರಾಯಶಃ ತಾನು ನಿವೃತ್ತಿ ಹೊಂದಿದಾಗ ಯಾವ ಹಾದಿಯಿಂದ ಹೋಗುವದು ಕ್ಷೇಮದಾಯಿಯೆಂಬುವನ್ನು ನೋಡಿಕೊಂಡು ಬಂದರು!

O

'ಬ್ರಿಟಿಷರನ್ನೋಡಿಸಲು ಹಿಂದೂ ಮುಸ್ಲಿಮರೊಂದಾಗಬೇಕೆಂದು ವಿಸಂತಿಸಿದ ಮಿ. ಜಿನ್ನರನ್ನೂ ಬಂಧನದಲ್ಲಿಡಲಾಗುವದೇ?'—ಎಂದು ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಬಂದಾಗ 'ಆದರೆ ಕಾಂಗ್ರೆಸಿಗರ ಬಂಧನಕ್ಕೆ ಕಾರಣವಾದ ದುಷ್ಕೃತ್ಯಗಳನ್ನು ಜಿನ್ನರು ಮಾಡಿಲ್ಲ ಒದಲಾಗಿ 'ನಮ್ಮ ಸ್ವಂತ ಸರಕಾರವಿರುತ್ತಿದ್ದರೆ ನಾನೂ ಈ ಜನರನ್ನು ಬಂಧಿಸುತ್ತಿದ್ದೆ' ಎಂದು ಕಾಂಗ್ರೆಸಿಗರ ಸಂಬಂಧವಾಗಿ ಜಿನ್ನರಾಡಿದ್ದಾರೆ'—ಎಂದು ಮಿ. ಅಮೆರಿಯವರ ಉತ್ತರ.

ತನ್ನಂತೆಯೇ ಕಾಂಗ್ರೆಸಿಗರನ್ನು ಬಂಧನದಲ್ಲಿಡುವ ಬುದ್ಧಿಯುಳ್ಳ ಜಿನ್ನರಿಗೇನೇ ಅಧಿಕಾರ ಬಿಟ್ಟು ಕೊಡುವ ಬೇಡಿಕೆಗಾದರೂ ಅಮೆರಿಯವರೇಕೆ ಒಪ್ಪಲಿಲ್ಲ? ಈ ತಪ್ಪಿಗಾಗಿ ಮಿ. ಜಿನ್ನರು (. ರೆ) ಅಮೆರಿಯವರನ್ನೂ ಬಂಧಿಸಲಾರರೆ?

O

ಪಂಡಿತ ನೆಹರುಗಳ ತಂಗಿ ವಿಜಯಲಕ್ಷ್ಮೀ ಪಂಡಿತಾ ಮತ್ತು ಪುತ್ರಿ ಇಂದಿರಾ ನೆಹರುಗಳ ಬಿಡುಗಡೆಯಾಗಿದೆ. ಆದರೆ ಅವರಿಬ್ಬರೂ ಅಲ್ಮೋರಾ ಜಿಲ್ಲೆಯಲ್ಲಿ ತಮ್ಮ ಜಮೀನಿರುವ "ಖುತುಸಂಹಾರ್"ಗೆ ಹೋಗಿ ವಾಸಿಸತಕ್ಕದ್ದೆಂಬ ನಿರ್ಬಂಧಕಾಜ್ಞೆ ಬರೆದಿದೆ

ನೆಹರೂ ಕುಟುಂಬದ ಹಳೇ 'ಆನಂದ ಭವನ' ಕಾಂಗ್ರೆಸ್ ಭವನವಾಯಿತು; ಅವರ 'ಖುತು ಸಂಹಾರ' ಈಗ ಸರಕಾರೀ ಜೈಲಾಗಿ ಮಾರ್ಪಟ್ಟಿತೇ ಎಂದು ಸಂದೇಹ.

O

'ಇಟಲಿಯ ರಕ್ಷಣೆಗಾಗಿ ಗನ್ನು ಮತ್ತು ವಿಮಾನಗಳನ್ನು ದಯಪಾಲಿಸೋಣಾಗಲಿ'—ಎಂದು ಮುಸಲನಿ ಹಿಟ್ಲರರನ್ನು ಬೇಡಿಕೊಂಡಿದ್ದಾರಂತೆ.

'ವಿಮಾನ, ಗನ್ನುಗಳಿರುವಂತೆಯೇ ತಮಗೆ ಇಟಲಿಯನರೂ ಇದ್ದಾರೆ'—ಎಂದು ಭಾವಿಸಿಕೊಂಡಿದ್ದ... ಗೆ ... ಬೇಡಿಕೆಯಿಂದ ಆಶ್ಚರ್ಯವಾಗಬಹುದು.

O

ಆಫ್ರಿಕದ ಅಪಜಯವನ್ನು ಕೇಳಿದೊಡನೆ ಬರ್ಲಿನಿನಲ್ಲಿ ಜನರು ತಮ್ಮವರ ವಾರ್ತೆ ತಿಳಿಯಲು ಪ್ರಕಟಣಾ ಆಫೀಸನ್ನು ಮುತ್ತಿ ದಂಗೆಯೆಬ್ಬಿಸಿದರೆಂದು ಮಿತ್ರ ರಾಷ್ಟ್ರೀಯರಿಗೆ ದೊರೆತ ಸುದ್ದಿ.

ಟ್ಯುನಿಸಿಯಾ ವಾರ್ತೆ ಕೇಳಿದ ಹಿಟ್ಲರನು ಕಣ್ಣೀರು ತೆಗೆಯುವ—ಇದಿರಲ್ಲಿ ಗೋಬೆಲ್ಸನು ಕರವಸ್ತ್ರ ಹಿಡಿದು ನಿಂತಿರುವ ಭಾವಚಿತ್ರವು ಮಿತ್ರರಿಂದ ಪ್ರಕಟಿಸಲ್ಪಡುವದನ್ನು ಕಾಣುವ ಕುತೂಹಲದಲ್ಲಿದ್ದೇವೆ.

O

'ಮುಂದಿನ ವೈಸರಾಯರಾರು?'—ಈಗಿನ ಪ್ರಶ್ನೆ.

ವರುಷಾವಧಿಯ ಆರ್ಡಿನೆನ್ಸುಗಳನ್ನು ಕ್ಷಣಾವಧಿಯೊಳಗೆ ಹೊರಡಿಸಬಲ್ಲವರು!

—ವಿನೋದಿ.



An R I N ship in north Atlantic waters

ಏನು? ಉತ್ತರಧ್ರುವದಲ್ಲಿ ಹಿಂದುಸ್ಥಾನದ ಸಂರಕ್ಷಣೆಯೆ?

ಹೌದು, ರಾಯಲ್ ಇಂಡಿಯನ್ ನೇವಿಯ ಯುದ್ಧನಾಕೆಗಳು ಕೆಲವು ಸಲ ನಮ್ಮ ದೇಶದಿಂದ ಇಷ್ಟು ದೂರದಲ್ಲಿ ಸಂಚರಿಸುತ್ತವೆ. ಆಧುನಿಕ ಯುದ್ಧತಂತ್ರದ ವ್ಯಾಪ್ತಿಯು ಇಷ್ಟು ವಿಶಾಲವಾಗಿದೆ. ಪ್ರತಿದಿನವೂ ಕಷ್ಟಗಳನ್ನೂ ಎದುರಿಸುತ್ತ ಈ ನಾಕೆಗಳು ನಮ್ಮ ಸಾರಿಗೆ ಹಡಗುಗಳನ್ನು ರಕ್ಷಿಸುತ್ತವೆ; ಮತ್ತು ಯುದ್ಧದ ಅತ್ಯಾವಶ್ಯಕ ಸಾಧನಗಳು ನಮಗೆ ಸುರಕ್ಷಿತವಾಗಿ ತಲುಪುವಂತೆ ಮಾಡುತ್ತವೆ. ಅವುಗಳ ತೊಂದರೆ ಹೆಚ್ಚಾಗದಂತೆ ನಾವು ನೋಡಬೇಡವೇ? ನಮ್ಮ ಮನೆಯ ಗೋಡೆಗಳಿಗೆ ಹಚ್ಚುವ ಬಣ್ಣಗಳು ನಮ್ಮ ಹಡಗು ಪಡೆಗೆ ಬೇಕಾಗಿರುತ್ತವೆಂದು ತಿಳಿದೂ ಅವನ್ನು ಕೊಳ್ಳುವುದೆಂದರೆ, ಆ ತೊಂದರೆ ಹೆಚ್ಚಿಸಿದಂತೆಯೆ! ಬಣ್ಣ, ಪೆಟ್ರೋಲು, ರಬ್ಬರು, ಉಕ್ಕು, ಹಗ್ಗ—ಇನ್ನೂ ನೂರಾರು ಸಾಮಾನುಗಳು ನಮ್ಮ ಸಂರಕ್ಷಣೆಗೆ ಅತ್ಯಾವಶ್ಯಕವಾಗಿ ಬೇಕಾಗಿವೆ. ಅದರಂತೆಯೆ ಅವುಗಳಿಗಾಗಿ ನಾವು ವೆಚ್ಚಮಾಡುವ ಹಣ. ನಾವು ಪ್ರತಿಯೊಂದು ಸಾಮಾನಿನ ಮೇಲೆ ಮಾಡುವ ವೆಚ್ಚವನ್ನು ಕಡಿಮೆಮಾಡಿ, ಜಯವು ಸ್ಥಿರವಾಗುವಂತೆ ಮಾಡೋಣ;

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ಸ್
...ಇಲ್ಲವೆ ಡಿಫೆನ್ಸ್ ಲೋನ್ಸ್

ಇವುಗಳ ಹೊರತು ಮತ್ತೇನನ್ನೂ ಕೊಳ್ಳುವ ಮೊದಲು ಕೊಂಚ ಯೋಚಿಸಿರಿ.

OPU 23 Kn.

ಡಾಕ್ಟರ್ ಕೊರಡ್ಕಲ್ ಫಾರ್ಮಸಿಯ ದಿವ್ಯೌಷಧಗಳು.

1. 'ಓಜಸ್ವಿನಿ'—'ಧಾತುವರ್ಧಕ' ನರಗಳ ನಿತ್ರಾಣ ನಿರುತ್ಸಾಹ ನಿವಾರಕ.
2. 'ಭಗಿನೀಬಂಧು'—ಮುಟ್ಟುದೋಷ ಮುಂತಾದ ಗರ್ಭಕೋಶದ ಸಕಲ ಅಕ್ರಮ ನಿವಾರಕ,

೧೬ ದಿವಸದ ಗುಣದಾಯಕ ಸೇವನೆಯ ವೆಚ್ಚ ರೂ 3 ಮಾತ್ರ.

ದೊರೆಯುವಸ್ಥಳ—ಉಡುಪಿ ರಥಬೀದಿಯ ಡಾ| ಕೊರಡ್ಕಲ್ ಫಾರ್ಮಸಿ ಮತ್ತು ವಿಜಯಾ ಸ್ಟೋರ್ಸ್ ಉಡುಪಿ ದ. ಕ.

ಚೂರುಚೂರು

ವಾಯುವ್ಯ ಗಡಿನಾಡಿನ ಮುಸ್ಲಿಂ ಲೀಗ್ ಪ್ರಮುಖರಾದ ಸರ್ದಾರ್ ಮಹಮ್ಮದ್ ಔರಂಗಜೇಬ್ ಖಾನರನ್ನು ಮಂತ್ರಿಮಂಡಲ ರಚಿಸುವಂತೆ ಗವರ್ನರರು ಕೇಳಿಕೊಂಡಿದ್ದು ಅವರೀಗ ಮಂತ್ರಿಗಳನ್ನು ಹೆಕ್ಕಿದ್ದಾರೆ.

ಲೀಗಿನ ಹೊರತು ಮಿಕ್ಕಯಾವ ಪಕ್ಷದ ಮಂತ್ರಿಗಳಿಗೂ ಬಾಳುವೆ ಕಡಿಮೆಯೆಂಬುದು ಮಿ. ಅಲ್ಲಾಭಕ್ಷರ ಕೊಲೆಯನಂತರ ಅಧಿಕಾರಿಗಳಿಗೆ ವೇದ್ಯವಾಗಿರಬೇಕು.

O

ಉತ್ತರ ಶಾಂತಸಮುದ್ರದ 'ಅಟ್ಟು'ದ್ವೀಪಕ್ಕೀಗ ಅಮೇರಿಕಾದ ಸೇನೆಗಳಿಳಿದು ಅಲ್ಲಿ ತೀವ್ರ ಹೋರಾಟನಡೆಯುತ್ತಿದೆ.

'ಜಪಾನರನ್ನು 'ಅಟ್ಟು'ವದಿಲ್ಲವೆ?'— ಎಂದು ಪ್ರಶ್ನಿಸುವವರು ಇನ್ನಾದರೂ ಸುಮ್ಮಗಾಗಲಿ!

O

'ತಿಲಕ, ಗಾಂಧಿ, ಅಭ್ಯಂಕರ್—ಈ ತ್ರಿಮೂರ್ತಿಗಳಿಂದ ನನ್ನ ರಾಜಕೀಯ ಜೀವನ ಹಾಗೂ ಸ್ಫೂರ್ತಿ ರೂಪುಗೊಂಡಿತು'- ನಾಗಪುರ ನಗರಸಭೆಯ ಮಾನಪತ್ರಕ್ಕುತ್ತರವಾಗಿ ಈಗ ತಾನೇ ವೈಸರಾಯಿ ಕೌನ್ಸಿಲ್ ಮೆಂಬರಾಗಿ ನೇಮಕವಾಗಿರುವ ಡಾ| ಖಾರೆಯವರ ಮಾತು.

ಆದರೆ ರೂಪುಗೊಂಡುದು ಆ ತ್ರಿಮೂರ್ತಿಗಳಿಂದ —ಉಪಯೋಗಕ್ಕೆ ಬನ್ದುದು ಲೋರ್ಡ್ ಲಿನ್‌ಲಿತ್‌ಗೋರವರಿಗೆ; ಬಿಲ ಕೊರೆಯುವದು ಇಲಿ—ಒಳನುಗ್ಗುವದು ಹಾವು!

O

ಇದೇ ಮೆ. ತಾ|೨೧ರಲ್ಲಿ 'ಟ್ಯುನಿಸಿಯಾದಿನ' ವಾಗಿ ರಜೆ ಮತ್ತು ವಿಜಯೋತ್ಸವಗಳನ್ನು ಹಿಂದೂ ದೇಶದಲ್ಲೆಲ್ಲಾ ಆಚರಿಸಬೇಕೆಂದು ವೈಸರಾಯರ ಅಜ್ಞೆ.

'ಒಂದು ವಿಜಯಕ್ಕಾಗಿ ಒಂದು ದಿನ ರಜೆ—ಶಾಶ್ವತ ವಿಜಯ ದೊರೆತಾಗ ತಮಗೆ ಶಾಶ್ವತ ರಜೆಯೆ?'-ಎಂದು ಕೆಲವು ನೌಕರರಲ್ಲಿ ಗಾಬರಿಯೆದ್ದಿದೆ!

O

ನವದೆಹಲಿಯಿಂದ ವಿಮಾನಹತ್ತಿ ವೈಸರಾಯರು ಚಿತ್ತಗಾಂಗ್, ಫೆಣಿ, ಇಂಫಾಲ್ ಮೊದಲಾದ ಪೂರ್ವಗಡಿಯ ಯುದ್ಧ ನೆಲೆಗಳ ತನಿಖೆಕಾರ್ಯ ಮುಗಿಸಿ ಬಂದರು.

ಪ್ರಾಯಶಃ ತಾನು ನಿವೃತ್ತಿ ಹೊಂದುದಾಗ ಯಾವ ಹಾದಿಯಿಂದ ಹೋಗುವದು ಕ್ಷೇಮವಾಯಿಯೆಂಬುದನ್ನು ನೋಡಿಕೊಂಡು ಬಂದರು!

O

'ಬ್ರಿಟಿಷರನ್ನೋಡಿಸಲು ಹಿಂದೂ ಮುಸ್ಲೀಮರೊಂದಾಗಬೇಕೆಂದು ವಿನಂತಿಸಿದ ಮಿ. ಜಿನ್ನರನ್ನೂ ಬಂಧನದಲ್ಲಿಡಲಾಗುವದೇ?'-ಎಂದು ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಬಂದಾಗ 'ಆದರೆ ಕಾಂಗ್ರೆಸಿಗರ ಬಂಧನಕ್ಕೆ ಕಾರಣವಾದ ದುಷ್ಕೃತ್ಯಗಳನ್ನು ಜಿನ್ನರು ಮಾಡಿಲ್ಲ. ಬದಲಾಗಿ 'ನಮ್ಮ ಸ್ವಂತ ಸರಕಾರವಿರುತ್ತಿದ್ದರೆ ನಾನೂ ಈ ಜನರನ್ನು ಬಂಧಿಸುತ್ತಿದ್ದೆ' ಎಂದು ಕಾಂಗ್ರೆಸಿಗರ ಸಂಬಂಧವಾಗಿ ಜಿನ್ನರಾಡಿದ್ದಾರೆ'- ಎಂದು ಮಿ. ಅಮೆರಿಯವರ ಉತ್ತರ.

ತನ್ನಂತೆಯೇ ಕಾಂಗ್ರೆಸಿಗರನ್ನು ಬಂಧನದಲ್ಲಿಡುವ ಬುದ್ಧಿಯುಳ್ಳ ಜಿನ್ನರಿಗೇನೇ ಅಧಿಕಾರ ಬಿಟ್ಟು ಕೊಡುವ ಬೇಡಿಕೆಗಾದರೂ ಅಮೆರಿಯವರೇಕೆ ಒಪ್ಪಲಿಲ್ಲ? ಈ ತಪ್ಪಿಗಾಗಿ ಮಿ. ಜಿನ್ನರು (....ರೆ) ಅಮೆರಿಯವರನ್ನೂ ಬಂಧಿಸಲಾರರೆ?

O

ಪಂಡಿತ ನೆಹರುಗಳ ತಂಗಿ ವಿಜಯಲಕ್ಷ್ಮೀ ಪಂಡಿತ್ ಮತ್ತು ಪುತ್ರಿ ಇಂದಿರಾ ನೆಹರುಗಳ ಬಿಡುಗಡೆಯಾಗಿದೆ. ಆದರೆ ಅವರಿಬ್ಬರೂ ಅಲ್ಮೋರಾ ಜಿಲ್ಲೆಯಲ್ಲಿ ತಮ್ಮ ಜಮೀನಿರುವ "ಋತುಸಂಹಾರ"ಗೆ ಹೋಗಿ ವಾಸಿಸತಕ್ಕದ್ದೆಂಬ ನಿರ್ಬಂಧಕಾಜ್ಞೆ ಬಂದಿದೆ.

ನೆಹರೂ ಕುಟುಂಬದ ಹಳೇ 'ಆನಂದ ಭವನ' ಕಾಂಗ್ರೆಸ್ ಭವನವಾಯಿತು; ಅವರ 'ಋತು ಸಂಹಾರ' ಈಗ ಸರಕಾರೀ ಜೈಲಾಗಿ ಮಾರ್ಪಟ್ಟಿತೇ ಎಂದು ಸಂದೇಹ.

O

'ಇಟಲಿಯ ರಕ್ಷಣೆಗಾಗಿ ಗನ್ನು ಮತ್ತು ವಿಮಾನಗಳನ್ನು ದಯಪಾಲಿಸೋಣಾಗಲಿ'—ಎಂದು ಮುಸಲನಿ ಹಿಟ್ಲರರನ್ನು ಬೇಡಿಕೊಂಡಿದ್ದಾರಂತೆ.

'ವಿಮಾನ, ಗನ್ನುಗಳಿರುವಂತೆಯೇ ತಮಗೆ ಇಟಲಿಯಾನರೂ ಇದ್ದಾರೆ'—ಎಂದು ಭಾವಿಸಿಕೊಂಡಿರುವ ಜರ್ಮನರಿಗೆ ಈ ಬೇಡಿಕೆಯಿಂದ ಆಶ್ಚರ್ಯವಾಗಬಹುದು.

O

ಆಫ್ರಿಕದ ಅಪಜಯವನ್ನು ಕೇಳಿದೊಡನೆ ಬರ್ಲಿನಿನಲ್ಲಿ ಜನರು ತಮ್ಮವರ ವಾರ್ತೆ ತಿಳಿಯಲು ಪ್ರಕಟಣಾ ಆಫೀಸನ್ನು ಮುತ್ತಿ ದಂಗೆಯೆಬ್ಬಿಸಿದರೆಂದು ಮಿತ್ರ ರಾಷ್ಟ್ರೀಯರಿಗೆ ದೊರೆತ ಸುದ್ದಿ.

ಟ್ಯುನಿಸಿಯಾ ವಾರ್ತೆ ಕೇಳಿದ ಹಿಟ್ಲರನು ಕಣ್ಣೀರು ತೆಗೆಯುವ—ಇದಿರಲ್ಲಿ ಗೋಬೆಲ್ಸನು ಕರವಸ್ತ್ರ ಹಿಡಿದು ನಿಂತಿರುವ ಭಾವಚಿತ್ರವು ಮಿತ್ರರಿಂದ ಪ್ರಕಟಿಸಲ್ಪಡುವದನ್ನು ಕಾಣುವ ಕುತೂಹಲದಲ್ಲಿದ್ದೇವೆ.

O

'ಮುಂದಿನ ವೈಸರಾಯರಾರು?'—ಈಗಿನ ಪ್ರಶ್ನೆ.

ವರುಷಾವಧಿಯ ಆರ್ಡಿನೆನ್ಸುಗಳನ್ನು ಕ್ಷಣಾವಧಿಯೊಳಗೆ ಹೊರಡಿಸಬಲ್ಲವರು!

—ವಿನೋದಿ.

ಡಾಕ್ಟರ್ ಕೊರಡ್ಕಲ್ ಫಾರ್ಮೆಸಿಯ ದಿವ್ಯೌಷಧಗಳು.

1. 'ಓಜಸ್ವಿನಿ'-'ಧಾತುವರ್ಧಕ' ನರಗಳ ನಿತ್ರಾಣ ನಿರುತ್ಸಾಹ ನಿವಾರಕ.
2. 'ಭಗಿನೀಬಂಧು'-ಮುಟ್ಟುದೋಷ ಮುಂತಾದ ಗರ್ಭಕೋಶದ ಸಕಲ ಅಕ್ರಮ ನಿವಾರಕ,

೧೬ ದಿವಸದ ಗುಣದಾಯಕ ಸೇವನೆಯ ವೆಚ್ಚ ರೂ. 3 ಮಾತ್ರ.

ದೊರೆಯುವಸ್ಥಳ—ಉಡುಪಿ ರಥಬೀದಿಯ ಡಾ| ಕೊರಡ್ಕಲ್ ಫಾರ್ಮೆಸಿ ಮತ್ತು ವಿಜಯಾ ಸ್ಟೋರ್ಸ್ ಉಡುಪಿ ದ. ಕ.



An R.I.N ship in north Atlantic waters

ಏನು? ಉತ್ತರಧ್ರುವದಲ್ಲಿ ಹಿಂದುಸ್ಥಾನದ ಸಂರಕ್ಷಣೆಯೆ?

ಹೌದು, ರಾಯಲ್ ಇಂಡಿಯನ್ ನೇವಿಯ ಯುದ್ಧನೌಕೆಗಳು ಕೆಲವು ಸಲ ನಮ್ಮ ದೇಶದಿಂದ ಇಷ್ಟು ದೂರದಲ್ಲಿ ಸಂಚರಿಸುತ್ತಿವೆ. ಆಧುನಿಕ ಯುದ್ಧತಂತ್ರದ ವ್ಯಾಪ್ತಿಯು ಇಷ್ಟು ವಿಶಾಲವಾಗಿದೆ. ಪ್ರತಿದಿನವೂ ಕಷ್ಟಗಳನ್ನೂ ಎದುರಿಸುತ್ತ ಈ ನೌಕೆಗಳು ನಮ್ಮ ಸಾರಿಗೆ ಹಡಗುಗಳನ್ನು ರಕ್ಷಿಸುತ್ತಿವೆ; ಮತ್ತು ಯುದ್ಧದ ಅತ್ಯಾವಶ್ಯಕ ಸಾಧನಗಳು ನಮಗೆ ಸುರಕ್ಷಿತವಾಗಿ ತಲುಪುವಂತೆ ಮಾಡುತ್ತವೆ. ಅವುಗಳ ತೊಂದರೆ ಹೆಚ್ಚಾಗದಂತೆ ನಾವು ನೋಡಬೇಡವೇ? ನಮ್ಮ ಮನೆಯ ಗೋಡೆಗಳಿಗೆ ಹಚ್ಚುವ ಬಣ್ಣಗಳು ನಮ್ಮ ಹಡಗು ಪಡೆಗೆ ಬೇಕಾಗಿರುತ್ತವೆಂದು ತಿಳಿದೂ ಅವನ್ನು ಕೊಳ್ಳುವುದೆಂದರೆ, ಆ ತೊಂದರೆ ಹೆಚ್ಚಿಸಿದಂತೆಯೆ! ಬಣ್ಣ, ಪೆಟ್ರೋಲು, ರಬ್ಬರು, ಉಕ್ಕು, ಹಗ್ಗ—ಇನ್ನೂ ನೂರಾರು ಸಾಮಾನುಗಳು ನಮ್ಮ ಸಂರಕ್ಷಣೆಗೆ ಅತ್ಯಾವಶ್ಯಕವಾಗಿ ಬೇಕಾಗಿವೆ. ಆದಕಾರಣ ಅವುಗಳಿಗಾಗಿ ನಾವು ವೆಚ್ಚಮಾಡುವ ಹಣ, ನಾವು ಪ್ರತಿಯೊಂದು ಸಾಮಾನಿನ ಮೇಲೆ ಮಾಡುವ ವೆಚ್ಚವನ್ನು ಕಡಿಮೆಮಾಡಿ, ಜಯವು ಸ್ಥಿರವಾಗುವಂತೆ ಮಾಡೋಣ;

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ಸ್

...ಇಲ್ಲವೆ ಡಿಫೆನ್ಸ್ ಲೋನ್ಸ್

ಇವುಗಳ ಹೊರತು ಮತ್ತೇನನ್ನೂ ಕೊಳ್ಳುವ ಮೊದಲು ಕೊಂಚ ಯೋಚಿಸಿ.

ಸರ್ಟಿಫಿಕೇಟುಗಳು ನಿಮ್ಮ ಅಂಚೆ ಕಚೇರಿಯಲ್ಲಿ ಸಿಗುವವು. ೧೦ ರೂ. ೧೦ ವರ್ಷಗಳಲ್ಲಿ ರೂ. ೧೫ ಆಗಿ ಬರುವುದು.

DPU.23 Kan.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು)

ಮುಖ್ಯ ಕಾರ್ಯಾಲಯ — ಕೋರ್ಟ್ ರಸ್ತೆ, ಉಡುಪಿ ದಕ್ಷಿಣ ಕನ್ನಡ.

ಶಾಖೆಗಳು — ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಕಿನ್ನಿಗೋಳಿ

ಮುಷ್ಕಂ ರೇವಣಾಕಿಗಳು ತಾ. 31-7-1943 ಅಥವಾ ಈ ತರೀಕಿನ ಮೊದಲು ವ್ಯಾದೆಯಾಗುವುದಾದರೆ ಅಂಥಾ ವ್ಯಾದೆಯ ವರೆಗೆ ಸಾಲಿಯಾನ ಶೇಕಡಾ ೨ರ ಸಳ ಬಡ್ಡಿಯಲ್ಲಿ ೩, 4, 5 ಅಥವಾ 6ತಿಂಗಳ ವ್ಯಾದೆಯಿಂದ ಪ್ರತಿಯೊಂದು ಠೇವಿಯಲ್ಲಿ ಅಂಗೀಕರಿಸಲ್ಪಡುತ್ತವೆ.

ಬೇಂಕಿನ ಪ್ರತಿಯೊಂದು ವಿಧದ ವಹಿವಾಟುಗಳು ನಡೆಸಲ್ಪಡುತ್ತವೆ

ಹೆಚ್ಚಿನ ಮಾಹಿತಿಗೆ ಮೊಖತಾ ಅಥವಾ ಪತ್ರದ್ವಾರಾ ಸಮೀಪದ ಶಾಖೆಯಲ್ಲಿ ದಯವಿಟ್ಟು ವಿಚಾರಿಸಿರಿ

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕ, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು ಗಾಯಗಳು ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

RLGD.

ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತ.

P M Kunhi Raman, Manager, Parassini Madappura Temple, P O Parassinikkatavu (Via) Pappinisseri

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ-

ಪರಸಿನಿ ಕಡವು ದೇವಸ್ಥಾನದಿಂದ ಈ ಮೂಲಕ ಮಾಡುವ ವಿಜ್ಞಾಪನೆ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅಸಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ ಕುನ್ನಿರಾಮನ್.
ಮೆನೇಜರ್.

ನವಯುಗದ ಹೊಸ ಚಂದಾದರ

ಕಾಗದದ ಅಭಾವ ಹಾಗೂ ಸರಕಾರದ ಹೊಸ ಆಜ್ಞೆಯಂತೆ ಇದೇ ಎಪ್ರಿಲ್ ತಾ 1ರಿಂದ ನವಯುಗದ ಬಿಡಿ ಸಂಚಿಕೆಯ ಬೆಲೆಯನ್ನು 0-1-0ಗೆ ಏರಿಸಲಾಗಿದೆ ಜಾಹೀರಾತಿನ ದರವನ್ನೂ ಹೆಚ್ಚಿಸಲಾಗುವುದು. ವಾರ್ಷಿಕ ಚಂದಾ ದರವನ್ನು ಈ ಕೆಳಗಿನಂತೆ ಗೊತ್ತು ಮಾಡಲಾಗಿದೆ ಈಗಿದ್ದ ಚಂದಾದಾರರಿಗೆ ಮಾರ್ಚಿ ಅಂತ್ಯದ ವರೆಗೆ ಮೊದಲಿನಂತೆ ಚಂದಾ ದರ ಹಿಡಿದು ಉಳಿದ ಹಣದಲ್ಲಿ ಹೊಸ ದರದಂತೆ ಎಷ್ಟು ಸಮಯ ಕಳಿಸಬಹುದೋ ಅಷ್ಟು ಅವಧಿಯ ವರೆಗೆ ಪತ್ರಿಕೆ ಕಳಿಸಲಾಗುವುದು ಚಂದಾ ಬಾಕಿ ಇರುವವರು ಮಾರ್ಚ್ ತನಕ ಮೊದಲಿನ ದರದಂತೆಯೂ ಅನಂತರ ಹೊಸ ದರದಂತೆಯೂ ಚಂದಾ ಹಣ ಕಳಿಸುವಂತೆ ವಿನಂತಿ

ಹೊಸ ಚಂದಾದರ

	ಸ್ಥಳೀಕರಿಗೆ	ಪರಸ್ಥಳೀಕರಿಗೆ ಅಂಚೆ ವೆಚ್ಚ ಸೇರಿ
1 ವರ್ಷಕ್ಕೆ ರೂ.	3-12-0	4-4-0
6 ತಿಂಗಳಿಗೆ ರೂ.	2-0-0	2-8-0

ಎಂದಿನಂತೆ ವಾಚಕರೂ ಜಾಹೀರಾತುದಾರರೂ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಮೆನೇಜರ್

— ಮಕ್ಕಳನ್ನು ಹಡೆಯುವದು ಸಾಕು.—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಹಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಪತ್ಯೆ — ಪರಪುರುಷನ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0 ಪೋಸ್ಟ ಚಾರ್ಜು ೧೨ಆಣೆ

ಮಾಲಕರು — ಹಾಲಪ್ಪಾ ಫಕೀರಪ್ಪಾ, ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ

ಹುಬ್ಬಳ್ಳಿ ವಾರ್ಮಸಿ,—ಹುಬ್ಬಳ್ಳಿ ಗದಗ ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ಚಿಕ್ಕೋಡಿಯಲ್ಲಿ —ಹುಂಬರವಾಡಿ ಸ್ಟೋರ್ಸ. ದಾವಣಗೇರಿ —ದಾವಣಗೇರಿ ಪ್ರೆಸ್ ಆರ್ ಎಲ್. ಕವಲದ ಸಿ, ಕೆಮಿಸ್ಟ, ಹಾವೇರಿ, ಎಸ್ಪಾಂ ಏಜಂಟರು

The Moolky Bank, Ltd.,

MOOLKY, S.K

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು

M. R. Punja,
President & Manager

ಯಂ. ಆರ್. ಪುಂಜ,
ಪ್ರೆಸಿಡೆಂಟ್ ವ ಮತ್ತು ಮೆನೇಜರ್

ನವಜೀವಾಮೃತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೫ದಿವಸಗಳಿಗೆ ಬರುವವು, ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ,ಆಯುರ್ವೇದ ಭೂಷಣ, ನಂ 5 **ಕೊಡಿಯಾಲಬೈಲು, ದಕ**

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸಗೊರೆಯು ಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,

ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ. : · : · ಮಂಗಳೂರು



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಕಾಪಾಟ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಕಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಸ್ಥಾಪನೆ **ಕ್ರೌನ ರಬ್ಬರ ಸ್ಟಾಂಪ ಕಂಪನಿ** 1920

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co 18 Balmat Road, MANGALORE.

Approved firm by the Govt Mysore
Certified by the Agent of the Govt of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618.

Ested. 1921 ಸ್ಥಾಪನೆ

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೩ ಸಂಚಿಕೆ ೩೬	FOUNDER Sri. A. B. Shetty, M. L. A.	Vol 23 No 36

NAVAYUGA— Kannada Weekly —UDIPI, S. I.

ಉಡುಪಿ ● 27—5—1943 ● ಮಂಗಳೂರು.

ಹೊಸಕೆರೆ ಚಿದಂಬರಯ್ಯನವ
ರಿಂದ ರಚಿತವಾದ ಗೀತೆಯ
ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು ೩೫೧ ಪುಟಗಳು.

ಬೆಲೆ (ಸುಂದರ ಪ್ರತಿ) ೦—೮—೦

(ಕೆಲಿಕೋ ಬೈಂಡ್) ೦—೧೨—೦

(ಲೆದರ್ ಬೈಂಡ್) ೧—೪—೦

ಪ್ರತಿಗಳು ಪ್ರಸಿದ್ಧ ವ್ಯಾಪಾರಿಗಳಲ್ಲಿ ಸಿಗುವುದು.
0—10—0 ಸ್ಟಾಂಪು ಕಳಿಸಿದ್ದಲ್ಲಿ ಒಂದು
ಪ್ರತಿಯನ್ನು ಬುಕ್‌ಪೋಸ್ಟ್
ಮಾಡಲಾಗುತ್ತೆ.

**ನವಭಾರತ ಪುಸ್ತಕ ಭಂಡಾರ,
ಉಡುಪಿ.**

ಶ್ರೀಮತಿ ಶಿವರಾಣಿ ದೇವಿ ಪ್ರೇಮಚಂದ
(ದಿವಂಗತ ಪ್ರೇಮಚಂದರ ಪತ್ನಿ)
ರಚಿತವಾದ ಹಿಂದೀ ಕತೆಗಳ ಕನ್ನಡ
ಭಾಷಾಂತರ

ನಾರೀ ಹೃದಯ

ನಾರೀ ಹೃದಯದ ವಾಸ್ತವಿಕ ಚಿತ್ರ
ವನ್ನು ಚಿತ್ರಿಸುವ ಉತ್ತಮ ಕತೆಗಳ
ಸಂಗ್ರಹ.

ಬೆಲೆ 0—14—0
ಟ. ಖ. 0—2—0 ಪ್ರತ್ಯೇಕ.

ಒಂದು ರೂಪಾಯಿ ಸ್ಟ್ಯಾಂಪು ಕಳಿಸಿದರೆ ಒಂದು
ಪ್ರತಿಯನ್ನು ಕಳಿಸಲಾಗುತ್ತದೆ

**ಕಿರಿಯರ ಪ್ರಪಂಚ, ಉಡುಪಿ.
ಅಥವಾ ನವಭಾರತ ಬುಕ್
ಡಿಪೋ, ಉಡುಪಿ.**

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

The Canara Mutual Assurance Co., Ltd.,
UDIPI. (S. India).

ನೀವು ಈ ವರೆಗೆ ವಿಮೆಯನ್ನೇ ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಈಗಲೇ ವಿಮೆ ಇಳಿಸಿರಿ

ಏಕೆಂದರೆ:—

1 ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.

2 ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಅಶಕ್ಯರಾಗಿ ಹೋಗಬಹುದು.

3. ಆರೋಗ್ಯವು ಅನಿಶ್ಚಿತವೆಂದಾದರೆ, ಮೃತ್ಯುವು ಯಾರನ್ನೂ ಬಿಡುವಂತಿಲ್ಲ

4 ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.

5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ತಪ್ಪಿ, ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ.

ಕೊಟ್ಟಿಕಾರ್ ಬ್ರದರ್ಸ್ ಲಿಮಿಟೆಡ್

ಅಪ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಮುಖ ಏಜಂಟರು

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ, ದ. ಕನ್ನಡ.

ಅಥವಾ ಅವರ ಈ ಕೆಳಗಿನ ಯಾವುದೇ ದರೂ ಶಾಖೆಯಲ್ಲಿ ವಿಚಾರಿಸಿರಿ:—

ಮಂಗಳೂರು, ಕಲ್ಲಿಕೋಟೆ, ಸೇಲಂ, ತಿರುವಾಂಕೂರು, ಬೆಂಗಳೂರು
ನಗರ ಮತ್ತು ಬೊಂಬಾಯಿ.

THE BOMBAY LIFE ASSURANCE CO., LTD.

Sick or healthy, wounded or convalescent in a Prisoner's Camp or in the Line-

Our Men Need Your Help

SUBSCRIBE

to

H. E. The Governor's War Fund

earmarked

"RED CROSS"

or

"AMENITIES FOR TROOPS"

—as you choose, but—

SUBSCRIBE!

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ..ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಂಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು ಮುಂದಿದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ.-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ.— ಬಾಗಲಕೋಟೆ ಫಾರ್ಮಸಿ, ಧಾರವಾಡ.—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಸ್ಟೋರ್ಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ. ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.

ಅಂತರ್ರಾಷ್ಟ್ರೀಯ ಅಂತರ್ಗಾಮೀ ಬುಗ್ಗೆಯೊಣಗಿತು!

'ಕಾಮಿಂಟರ್ನ್' ಬರಖಾಸ್ತಾಯಿತು!

ರಶ್ಯದ ಅಂತರ್ರಾಷ್ಟ್ರೀಯ ಕಮ್ಯೂನಿಸ್ಟ್ ಸಂಸ್ಥೆಯ ಕಾರ್ಯಕಾರೀ ಸಮಿತಿಯು ಒಂದು ವಿಶೇಷ ನಿರ್ಣಯದ ಮೂಲಕ ಅಂತರ್ರಾಷ್ಟ್ರೀಯ ಕಮ್ಯೂನಿಸ್ಮನ್ನು (ಕಾಮಿಂಟರ್ನ್)ಬರಖಾಸ್ತು ಪಡಿಸಿಕೊಂಡಿರುವವೆಂದು ಇದೇ ತಾ 22ರಲ್ಲಿ ಮೋಸ್ಕೋ ರೇಡಿಯೋ ಸಾರಿದೆ. ಇದರಿಂದಾಗಿ ಇಂಗ್ಲಾಂಡು ಅಮೇರಿಕಗಳ ಉದರಶೂಲೆಯೊಂದು ನಿವಾರಣೆ ಗೊಂಡಂತಾಗಿದೆ. 'ಕಾಮಿಂಟರ್ನ್ ವಿರುದ್ಧ ಕರಾರು' ಮಾಡಿಕೊಂಡಿರುವ ಜರ್ಮನಿ, ಇಟೆಲಿ, ಜಾಪಾನುಗಳು ವೈರಿ ನಿರ್ಮಿತ ವಿಜಯವನ್ನು ತಾವು ಅನುಭವಿಸುವಂತಾಗಿದೆ!

ಮುತ್ಸದ್ದಿತನದ ಮಾದರಿ.

ಬದರೀ ಉಪಸಂಹಾರವು ರಷ್ಯನರ ಮುತ್ಸದ್ದಿತನದ ದ್ಯೋತಕವನ್ನಬೇಕು. ಇಂದಿನ ಯುದ್ಧವಾತಾವರಣದಲ್ಲಿ, ಕಾಮಿಂಟರ್ನ್ ಶಾಖೆಗಳು ನಡುಹಗಲ ನಕ್ಷತ್ರಗಳಂತೆ ಮರೆಯಾಗಿವೆ. ಆದರೆ ಪರಂಪರಾಗತ ಚಟದ ಬಲದಿಂದಾಗಿ 'ಕಮ್ಯೂನಿಸ್ಟ್' ರೆಂದೊಡನೆ ಅಮೇರಿಕಾಂಗ್ಲೇಯರು ಬೆಚ್ಚಿ ಬೀಳುತ್ತಿರುವ ಲಕ್ಷಣಗಳು ಅಲ್ಲಲ್ಲಿ ತೋರಿಬಂದಿವೆ. ದೃಷ್ಟಾಂತಕ್ಕಾಗಿ ಭಾರತದಲ್ಲಿ ಹಲವು ಕಮ್ಯೂನಿಸ್ಟರು ಬಂಧಿಸಲ್ಪಟ್ಟಿರುವರು; ಹಲವು ವಿಧದ ಅಡ್ಡಿ ಆತಂಕಗಳನ್ನಿದಿರಿಸಿರುವರು. 'ಕಮ್ಯೂನಿಸ್ಟ' ನೆನ್ನುವಾಗ ಅವನೊಂದು ವಿಲಕ್ಷಣ ವರ್ಗದವನೆಂಬ ಭಾವನೆಯು ಸಾಮನ್ಯತಃ ಮೂಡುವ ಕ್ರಮವಿದೆ. ಇದಕ್ಕೆ ಅವನು ರಶ್ಯದ ಸಂಬಂಧಿಯೆಂಬುದೇ ಕಾರಣ. ಈ ರೀತಿ ಇಂದಿನ ಪರಿಸ್ಥಿತಿಯಲ್ಲಿ ಕಲ್ಮಪಕ್ಕೆ ಹೊರತು ಕಾರ್ಯಕ್ಕೆ ಬೀಳದ ತನ್ನದೊಂದು ಸಂಸ್ಥೆಯನ್ನು ಬರಖಾಸ್ತು ಪಡಿಸಿಕೊಂಡ ರಶ್ಯದ ಧೋರಣೆಯಲ್ಲಿ ಜಟ್ಟೀ ಕಣಕ್ಕಿಳಿದವನು ಕನ್ನಡಕ ತೆಗೆದಿಟ್ಟ ಮುಂಜಾಗ್ರತೆಯೇ ಇದೆ.

ಚರಮಗೀತೆ.

ತನ್ನ ಬರಖಾಸ್ತು ವಿಜ್ಞಾಪನೆಯಲ್ಲಿ ಕಮ್ಯೂನಿಸ್ಟ್ ಸಂಸ್ಥೆಯು ಎಲ್ಲಾ ರಾಷ್ಟ್ರೀಯ ಸದಸ್ಯರನ್ನೂ ಈ ರೀತಿ ವಿನಂತಿಸಿಕೊಂಡಿದೆ. "ಕೆಲಸಗಾರರ ಅತಿಕ್ರೂರ ವೈರಿಯಾಗಿರುವ ಜರ್ಮನಿ ಫೆಸಿಸಮ್ ಹಾಗೂ ಅದರ ಮಿತ್ರವರ್ಗವನ್ನು ಕ್ಷಿಪ್ರವಾಗಿ ಕೆತ್ತೊಗೆಯುವುದಕ್ಕಾಗಿ ಹಿಟ್ಲರ್ ವಿರುದ್ಧ ಮಿತ್ರ ಸಂಗಡಗಳು ಹೂಡಿರುವ ಸ್ವಾತಂತ್ರ್ಯ ಯುದ್ಧಕ್ಕೆ ಎಲ್ಲಾ ಸದಸ್ಯರೂ ತಮ್ಮ ಸರ್ವಶಕ್ತಿಯನ್ನು ಕೇಂದ್ರೀಕರಿಸಿ,ಪೂರ್ಣ ಬೆಂಬಲ ಹಾಗೂ ಪ್ರತ್ಯಕ್ಷ ಭಾಗವಹಿಸಬೇಕು". ಅರ್ಥಾತ್ ಕಮ್ಯೂನಿಸ್ಟ್ ಪಕ್ಷದ ಪ್ರತ್ಯೇಕತೆಯಿನ್ನು ಉಳಿದಿಲ್ಲ—ಅದೂ ಈಗ ಒಂದು ಯುದ್ಧ ಸಹಾಯಕ ಶಾಖೆ. ಕಾಮಿಂಟರ್ನ್ ಸ್ಥಾಪನೆಯಾದಂದಿನಿಂದ ಸ್ಥಿತಿ ವ್ಯತ್ಯಾಸವಾಗುತ್ತಾ ಬಂದಿದೆ. ಮುಖ್ಯವಾಗಿ ಸದ್ಯದ ಯುದ್ಧಜನ್ಯವಾತಾವರಣದಲ್ಲಿ ಈ ಅಂತರ್ರಾಷ್ಟ್ರೀಯ ಕೆಲಸಗಾರರ ಸಂಸ್ಥೆಯ ಕಾರ್ಯಕಲಾಪಗಳೇನೇನೂ ಹೊಂದಿಕೆಯಾಗುವದಿಲ್ಲವೆಂದು ಕಾಮಿಂಟರ್ನ್ ಚಾಲಕರ ಅಂಬೋಣ. ಈ ನಿರ್ಧಾರದಿಂದಾಗಿ ರಶ್ಯಾ-ಅಮೇರಿಕ ಸಂಬಂಧವುತ್ತಮಗೊಳ್ಳಬಹುದು;ಇಂಗ್ಲಾಂಡಿನ ಮಟ್ಟಿಗೆ,ತನ್ನ ಸಾಮ್ರಾಜ್ಯದ ಅಸ್ತಿವಾರದೆಡೆಯಲ್ಲಿ ಹಬ್ಬಿರುವ ಆಲದ ಬೇರುಗಳೇ ಕಡಿದು ಹೋದಷ್ಟು ಸುರಕ್ಷಿತ ಭಾವನೆ ಮೂಡಬಹುದು. ಅವರಿವರೆಂದೇನು, ಲೋಕದ ಪ್ರತಿಯೊಂದು ಸರಕಾರವೂ ಪರಮಾನಂದ ಗೊಳ್ಳಬಹುದು.

ಕಮಿಂಟರ್ನ್ ಎಂದರೇನು?

ಅಂತರ್ರಾಷ್ಟ್ರೀಯ ಕಮ್ಯೂನಿಸ್ಟ್ ಸಂಸ್ಥೆಯು 1919ರಲ್ಲಿ ಬೋಲ್ಶೆವಿಕ್ ರಶ್ಯದ ಸ್ಥಾಪನಾಚಾರ್ಯ ಲೆನಿನರಿಂದಲೇ ಜನ್ಮ ತಾಳಿತು. 1914-18ರ ಯುದ್ಧವನ್ನು ಸಾಮ್ರಾಜ್ಯವಾದೀ ಸಮರವೆಂದು ವಿರೋಧಿಸಿದ್ದ ಎಲ್ಲಾ ರಾಷ್ಟ್ರಗಳ ಉಗ್ರ ಸಮತಾವಾದಿಗಳ, ರಶ್ಯ ಮತ್ತು ಜರ್ಮನಿಯ ಕಮ್ಯೂನಿಸ್ಟರ ಮಿಲನದೊಡನೆ ಈ ಪಕ್ಷ ವೃದ್ಧಿಸಿತು. ಅದರ ಧ್ಯೇಯವೆಂದರೆ ಹಳೇ ಸುಧಾರಣಾವಾದಿ ಸರಕಾರಗಳನ್ನು ತಳ ಮಗುಚಿ ಹಾಕಿ ಕ್ರಾಂತಿ ಧ್ವಜವೇರಿಸುವದೇ. 1928ರಲ್ಲಿ ಅದರ ಆರನೇ ಜಾಗತಿಕ ಸಮ್ಮೇಲನ ನಡೆದಾಗ ಈ ಸಂಸ್ಥೆಯ ಪೂರ್ಣ ಹತೋಟಿಗೊಳಪಟ್ಟು, ಅದ್ಭುತ ಕಾರ್ಯ ಸಾಧಿಸಿದ 66 ಶಾಖೆಗಳಿದ್ದವು. ಹಲವು ರಾಷ್ಟ್ರಗಳಲ್ಲಿ 'ಫೇಸಿಸಮ್' ಉದ್ಭವವಾದೊಡನೆ, ಈ ಕಮ್ಯೂನಿಸ್ಟ್ ಪಕ್ಷವು ಸಂದರ್ಭಕ್ಕೆ ಸರಿಯಾಗಿ ವರ್ತಿಸಿ 'ಜನಪ್ರಿಯ ಮುಖ' (Popular Front)ವನ್ನು ರಚಿಸಿಕೊಂಡು ಸರ್ವತ್ರ ವಿಜಯ ಪಡೆದಿದ್ದಿತು. ಶಾಂತಿ ಕಾಲದಲ್ಲಿ ಕಮ್ಯೂನಿಸ್ಟರೆಂದರೆ ಕಣ್ಣು ಕೆಂಪೇರದ ಸರಕಾರವಿರಲಿಲ್ಲ. ಇಡೀ ಪ್ರಪಂಚದ ಅಧಿಕಾರಗಳಿಗೆ ರಶ್ಯವೆಂದೊಡನೆ ವೈಯುರಿಯೇಳಲು ಈ ಕಮ್ಯೂನಿಸ್ಟ್ ಹಸ್ತಚಲನೆಯೇ ಕಾರಣ.

ಮುಖ್ಯ ಆರೋಪಗಳು

ಯುದ್ಧಾವಧಿಯ ಮೊದಲು ರಶ್ಯದ ಸ್ಮರಣೆಯು, ಪ್ರತಿಯೊಂದು ರಾಷ್ಟ್ರದ ಅಧ್ಯಕ್ಷ ಅಥವಾ ಮುಖ್ಯ ಮಂತ್ರಿಗೆ ಕಂಸ ಸ್ವಪ್ನದಂತಿದ್ದಿತು. ಕಾರಣವೆಂದರೆ ಎಲ್ಲರ ದೃಷ್ಟಿಯಲ್ಲೂ ರಶ್ಯವು ಅಧಿಕ ಪ್ರಸಂಗಿ, ಐಂದ್ರಜಾಲಿಕ! ತನ್ನ ಆಡಳಿತೆಯಿದಿರು ಕೆರೀ ಮೆಂಬರರನ್ನೆತ್ತಿ ಕಟ್ಟುವ ನೆರೆಮನೆಯ ಕುತಂತ್ರಿಯನ್ನು ಕಾಣುವ ಮನೆಯೊಡೆಯನ ದೃಷ್ಟಿಯಲ್ಲೇ ರಶ್ಯವನ್ನು ಪ್ರತಿಯೊಂದು ಸರಕಾರವೂ ಕಾಣುತ್ತಿತ್ತು. ಕಮ್ಯೂನಿಸ್ಟ್ ಪಕ್ಷಗಳೆಂದರೆ ರಶ್ಯವು ತನ್ನ ವಿದೇಶ ಧೋರಣೆಯನ್ನು ಹೇರಿ ಕಳುಹಿದ ವಾಹಕಗಳೆಂದೇ ಎಲ್ಲರ ನಂಬುಗೆ. ಇದು ಆಧಾರರಹಿತವಾದುದಲ್ಲ. ಪ್ರತಿಯೊಂದು ರಾಷ್ಟ್ರದ ಕಮ್ಯೂನಿಸ್ಟರೂ ಸೋವಿಯೆಟ್ ರಶ್ಯದ ರಕ್ಷಣೆಯನ್ನು ಪ್ರತಿಜ್ಞಾ ಪೂರ್ವಕ ಅಂಗೀಕರಿಸಿದ್ದರು. ಸೋವಿಯೆಟ್ ಈ ಕಾಮಿಂಟರ್ನಿನ ಮೂಲಕ ಅನ್ಯ ರಾಷ್ಟ್ರಗಳಲ್ಲಿ ಕ್ರಾಂತಿಯನ್ನೆಬ್ಬಿಸಿ, ಶೂಲದಿರಿತವನ್ನಲ್ಲವಾದರೂ-ಶೂಲೆಯನ್ನು ತಂದೊಡ್ಡಿ ದ್ರೋಹ ಸಾಧಿಸುತ್ತಿದೆ ಎಂಬುದು ಇನ್ನೊಂದು ಆರೋಪ. 'ಕಾಮಿಂಟರ್ನ್ ವಿರುದ್ಧ ಕರಾರನ್ನು(Anti-Comintern Pact) ಜರ್ಮನಿಯು ತಯಾರಿಸಲು ಕಾರಣವಿದೇ. ಈ ಕರಾರಿಗೆ ಇಟೆಲಿ, ಜಾಪಾನುಗಳಲ್ಲದೆ, ಇತ್ತೀಚೆಗೆ ಯುರೋಪಿನ ಹಲವು ಸಣ್ಣ ರಾಷ್ಟ್ರಗಳ

ವಿವಾಹ ಮುಹೂರ್ತಗಳು

ಮೇ. ವೈಶಾಖ ಶುಕ್ಲ

ಮೇ. ವೈಶಾಖ ಬಹುಳ

28 ಶುಕ್ರ ೯ ಉ.ಭಾದ್ರಾ	ಕುಂಭ ೪೯|೪		ರಾತ್ರಿ	1--43
ಜೂನ್ 3 ಗುರುವಾರ	ರಾತ್ರಿ	ಕುಂಭ ಲಗ್ನ	ಘಂಟೆ	12 44
,, 4 ಶುಕ್ರವಾರ	ಬೆಳಗ್ಗೆ	ಕರ್ಕಾಟಕ	,,	11·15
,, 9ಬುಧವಾರ	,,	,,	,,	10·5
,, 11 ಶುಕ್ರವಾರ		ಗೋಧೂಳಿ ಲಗ್ನ	,,	7·55
,, 16 ಬುಧವಾರ	ಬೆಳಗ್ಗೆ	ಕರ್ಕಾಟಕ	,,	10· 5
,, 17 ಗುರುವಾರ	,,	ಮಿಥುನ	,,	7· 6
,, 18 ಶುಕ್ರವಾರ	,,	ಕರ್ಕಾಟಕ	,,	10·42

ವಿವಾಹಕ್ಕೆ ನಿಮಗೆ ಆಮಂತ್ರಣ ಪತ್ರಿಕೆಗಳು ಬೇಕು. ಅವು ಸಕಾಲದಲ್ಲಿ ಸುಲಭದರದಲ್ಲಿ ನಾಜೂಕಾಗಿ ಮುದ್ರಣವಾಗ.. ಬೇಕು. ಅಂತಹ ಮುದ್ರಣವನ್ನು ನಾವು ಮಾಡಿಕೊಡುವೆವು.

Navayuga Press ನವಯುಗ ಪ್ರೆಸ್

Palukota, Santtakatte, ಪಾಲುಕೋಟೆ, ಸಂತೆಕಟ್ಟೆ, ಉಡುಪಿ.

(ಹನುಮಾನ್ ಆಫೀಸಿನ ಸಮೀಪ)

Degrees: Books: Medicines
Free H. L. M. S. M. B. H. M. D, etc. Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp:—
Principal Indian Homeopathi Institute & Society (Govt. Regd)
P.O. Datha (athiawar Dt. India.)

Sidha-Kalpa Kavach (Regd.)
No. 3 Rs 2. No. 2 Rs 5 No. 1 Rs. 7. Special Rs. 10, Extra Special Rs. 17 for ove marriage health, wealth. Ask any six questions with M. O. Re. 1/4 and get correct, answers by returnpost Life reading Rs.2 No V.P.P.Send M.O. Free pamplets.
Prof Dr. N. H Chhatbar.
P. O. Mabava. (Kathiawar India.)

BHUVANENDRA PRODUCTS Ltd.,

Head Office and Factory: **Katapadi,** S. Kanara

Depots: 1 Mahratha Galli, Hubli. 2. 57 Big street, Triplicane, Madras.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Aiveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಟಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ವಿಜಯಾ ಸ್ಟೋರ್ಸ್.

ಸಹಿಗಳನ್ನೂ ಹಿಟ್ಲರರು ಪಡಕೊಂಡಿದ್ದರು.

ಇದೊಂದು ಸೋಲು!

ಸಾಮಾನ್ಯರ ದೃಷ್ಟಿಯಲ್ಲಿ ರಶ್ಯದ ಈ ನಿರ್ಧಾರವು ಇಂದಿನ ಯುದ್ಧದ ಯಾವುದೇ ಮಹಾ ಘಟನೆಗಿಂತಲೂ ಹೆಚ್ಚಿನದೆನ್ನಬೇಕು. ಇಂದು ಲೋಕ ಸುಭಿಕ್ಷೆಯ ಗಂಭೀರ ಶಬ್ದಗಳನ್ನು ಉಚ್ಚರಿಸುತ್ತಿರುವ ಪ್ರಜಾಪ್ರಭುತ್ವವಾದಿ ಮುಖಂಡರಿಂದ ಚಿತ್ರಿಸಲ್ಪಡುತ್ತಿರುವ ಮುಂದಿನ ರಾಮರಾಜ್ಯವನ್ನೂ, ಇಂದಿನ ದುಸ್ಥಿತಿಯನ್ನೂ ಸೂಕ್ಷ್ಮ ದೃಷ್ಟಿಯಿಂದ ತುಲನೆ ಮಾಡುವವರಿಗೆ ಹೆಚ್ಚಿನ ವ್ಯತ್ಯಾಸವೇನೂ ಗೋಚರಿಸಲಾರದು. ಆದರೆ ಕಮ್ಯೂನಿಸ್ಟ್ ರಾಜ್ಯಭಾರ ಪದ್ಧತಿಯ ಭಿನ್ನತೆಯು ಅತ್ಯಂತ ಸ್ಪಷ್ಟವಿದ್ದು ಜನ ಸಾಮಾನ್ಯರ ಹಿತಸಾಧಕ ಪಥಗಳು ಅದರಲ್ಲಿರುವದರಿಂದಲೇ, ಅದರ ಆಕರ್ಷಣೆ ತಗ್ಗಿಸಲು ಇಂದಿನ ಯುದ್ಧವೊಂದಕ್ಕಲ್ಲದೆ ಸಂಕರಗಳಿಂದಾಗಲಿಲ್ಲ. 'ಸರ್ವ ಸಮಾನತೆ' 'ಕೂಲಿಗಾರ ಸರಕಾರ'ವೆಂಬ ಚಳವಳಗಳು ಪ್ರತಿಯೊಂದು ದೇಶದಲ್ಲೂ ತಲೆಯೆತ್ತಲು ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ರಶ್ಯವು-ರಶ್ಯದ ಈ ಅಂತರ್ರಾಷ್ಟ್ರೀಯ ಕಮ್ಯೂನಿಸ್ಟ್ ಪಕ್ಷವು-ಕಾರಣ. ಆದ್ದರಿಂದ ಇಂದಿನ ಪರಿಸ್ಥಿತಿಗೆ ತಕ್ಕಂತೆ ವರ್ತಿಸಿದ ರಶ್ಯನರ ಮುತ್ಸದ್ದಿತನವನ್ನು ಶ್ಲಾಘಿಸುವಾಗ, ಇಂತಹ ಒಂದು ಪ್ರಬುದ್ಧ ಜಾಗತಿಕ ಚಳವಳದ ಉಪಸಂಹಾರವನ್ನು ಅನಿವಾರ್ಯಗೊಳಿಸಿದ ಆ ಪರಿಸ್ಥಿತಿಯನ್ನು ದೂರದಿರಲಾಗುವದಿಲ್ಲ. ಆದರೆ ರಶ್ಯವು ಯುದ್ಧರಂಗದಿಂದ ಪ್ರಭಾವ ಹೆಚ್ಚಳದೊಡನೆ ಹೊರ ಬಿದ್ದರೆ, ಕಮ್ಯೂನಿಸ್ಟ್ ಪಕ್ಷಗಳಂತಹವು ಕಾಲಕ್ಕನುಗುಣವಾದ ರೂಪದೊಡನೆ ಪುನಃ ತಲೆಯೆತ್ತಬಹುದು; ಅಥವಾ ಯಾವ ಚಳವಳದ ಅಗತ್ಯವೂ ಇಲ್ಲದಷ್ಟು ರಶ್ಯದ ವಿಜಯದೊಡನೆ ಕಮ್ಯೂನಿಸ್ಟ್ ತತ್ವವು ಜಾಗತಿಕ ಪ್ರತಿಷ್ಠೆಯನ್ನು ಸಂಪಾದಿಸಬಹುದು.

ಪ್ರಕಟಣೆ

ಇನ್ನಂಜೆ ಶ್ರೀ ವಿಷ್ಣುಮೂರ್ತಿ ಹ್ಯಾಸ್ಕೂಲ್

ಇದೇ ಬರುವ ಜೂನ್ ತಾ. ೧ರಿಂದ ಇನ್ನಂಜೆ ಶ್ರೀ ವಿಷ್ಣುಮೂರ್ತಿ ಹ್ಯಾಸ್ಕೂಲಿನ ಆರಂಭೋತ್ಸವವು ನೆರವೇರುವುದರೊಡನೆ ಹ್ಯಾಸ್ಕೂಲಿನ ಅಂಗವಾಗಿ I, II, III, ಫಾರ್ಮುಗಳು ಹೊಸದಾಗಿ ತೆರೆಯಲ್ಪಡುವುವು. ಈ ತರಗತಿಗಳಿಗೆ ಸೇರಲು ಇಚ್ಛಿಸುವ ವಿದ್ಯಾರ್ಥಿಗಳು ಇದೇ ಮೇ ತಾ. ೩೧ರೊಳಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಅಗತ್ಯವಿರುವ ಯಾವತ್ತು ಮಾಹಿತಿಯನ್ನೂ ಪಡೆದುಕೊಳ್ಳಬಹುದು.

"ಮ್ಯಾನೇಜರ್, ಇನ್ನಂಜೆ ಶ್ರೀ ವಿಷ್ಣುಮೂರ್ತಿ ಹಾಯರ್ ಎಲಿಮೆಂಟರಿ ಸ್ಕೂಲ್, ಕಾಪು ಪೋಸ್ಟ್, ಉಡುಪಿ ತಾಲ್ಲೂಕು, ದ. ಕ. ಜಿಲ್ಲಾ."

ವಿ. ಸೂ:—ಈ ಶಾಲೆಗೆ ಸೇರುವ ಯಾವತ್ತು ವಿದ್ಯಾರ್ಥಿಗಳಿಗೂ ಅಗತ್ಯವಿರುವ ಸೌಕರ್ಯಗಳನ್ನು ಕಲ್ಪಿಸುವ ಏರ್ಪಾಡುಗಳನ್ನು ಮಾಡಲಾಗುತ್ತದೆ.

ಸಾಬಾಜಿ ಶ್ರೀನಿವಾಸಾಚಾರ್ಯ,
ಕರಸ್ಪೊಂಡೆಂಟ್.

ಉಡುಪಿ, ತಾ, ೧೦-೫-೧೯೪೩.

The Canara Mutual

ASSURANCE COMPANY, LIMITED.

NEW APPOINTMENTS.

Applications from students of S. S. L. C. standard are invited for clerical posts in the Company. Students fresh from school will be prefered. The new posts will be 4 for gents and 2 for ladies.

Applicants should possess a good hand, a good command of English, a good moral character and should be sharp at figures.

All applications must be accompanied by two testimonials one from the Headmaster of the School and another from any local gentleman and should reach the office before the 1st June, 1943.

UDIPI,
10th May, 1943

Managing Director

N. B.—Canvassing or influencing will be a disqualification.

ಒಂದು ಸಂದೇಹ.

ಅಂತೂ ರಶ್ಯದ ಈ ಉಪಸಂಹಾರಕ್ಕೆ ಸದ್ಯಸ್ಥಿತಿಗೆ ಹೊಂದಿಕೊಂಡು ಭವಿಷ್ಯವನ್ನು ಶುಭ್ರಗೊಳಿಸುವ ವಿಚಕ್ಷಣತೆಯೇ ಕೆಲಸ ಮಾಡಿದ್ದರೆ ವ್ಯಸನಕ್ಕವಕಾಶವಿಲ್ಲ. ಅದಕ್ಕೆ ಬದಲಾಗಿ ಇಂದಿನಿಂದ ಸದಾ ಸರ್ವದಾ ಬ್ರಿಟಿಷ್ ಅಮೇರಿಕೆಗಳ ಸಂಗ್ರಿಯಲ್ಲಿ ನಿಲ್ಲುವ ಇಚ್ಛೆಯಿಂದ ತನ್ನೀ ಉಪಕರಣವನ್ನು ಉಪಸಂಹರಿಸಿಕೊಂಡಿರಬಹುದೆ? ಟ್ಯುನಿಸಿಯಾದಲ್ಲಿ ಮಿತ್ರರು ಗೆದ್ದೊಡನೆಯೇ ರಶ್ಯವು ತನ್ನ ಅಂತರ್ರಾಷ್ಟ್ರೀಯ ಕಮ್ಯೂನಿಸ್ಟ್ ಸಂಸ್ಥೆಯನ್ನು ಬರಖಾಸ್ತು ಪಡಿಸಿಕೊಳ್ಳಲು, ಆಂಗ್ಲೋ—ಅಮೆರಿಕನರಿನ್ನು ಶಾಶ್ವತ ಮೈತ್ರಿಗರ್ಹರೆಂಬ ವಿಶ್ವಾಸ ಮೊಳೆತದ್ದೇ ಕಾರಣವಿರಬಹುದೆ? ಜಾಪಾನ್-ಜರ್ಮನಿಗಳ ಮೈತ್ರಿಗೆ ಮೂಲ ಕಾಮಿಂಟರ್ನ್ ವಿರುದ್ಧ ಒಪ್ಪಂದ. ಹಿಟ್ಲರನು ಟೋಜೋನನ್ನೀಗ ರಶ್ಯದ ಮೇಲೆ ಬೀಳಲು ಪ್ರೇರೇಪಿಸುತ್ತಿರಬಹುದಾದರೆ, ಜಪಾನಿಗೊಗ್ಗದ ಆ ಕಾಮಿಂಟರ್ನನ್ನು ಸ್ವಹಸ್ತದಿಂದ ನಿಗ್ರಹಿಸಿಕೊಂಡ-ಅಶ್ವತ್ಥ ಮರವು ತಾನೇ ತನ್ನೆಲೆಗಳನ್ನು ದುರಿಸಿಕೊಂಡು ಗಾಳಿಯ ಕಪಟವನ್ನು ಹುಸಿ ಮಾಡಿದ ಕತೆಯಂತಹ-ಆಟವಿದಾಗಿರಬಹುದೆ? ರಶ್ಯದ ಘೋಷಣೆಯು ನಿಗೂಢವಾದುದು-ಈ ಉಪಸಂಹಾರ ಕ್ರಿಯೆಯಾದರೂ ಅದಕ್ಕೊಂದು ಅಪವಾದನಾಗಿಲ್ಲ. ಆದರೆ ಪ್ರಪಂಚಕ ಸಮತಾವಾದಿಗಳು ರಶ್ಯದ ಧುರೀಣತ್ವದಲ್ಲಿ ಪೂರ್ಣ ಭರವಸೆಯಿಡಬಹುದಾದ್ದರಿಂದ ಸಮತಾವಾದದ ಭಾವೀ ಕಲ್ಯಾಣಕ್ಕಾಗಿಯೇ ಈ ಘೋಷಣೆಯನ್ನು ಮಾಡಿರಬೇಕೆಂದು ಭಾವಿಸಿ ನಿಶ್ಚಿಂತರಾಗಿರಬಹುದು.

ಪ್ರತಿಯೊಬ್ಬ ನಿರ್ಮಾತೃವೂ ಪ್ರೇಮ ಪರಿಚಯ ಮಾಡಿಕೊಡಬಲ್ಲನು. ಆದರೆ ಬೊಂಬೇ ಟಾಕೀಸಿನವರ ಪ್ರೇಮದಲ್ಲೊಂದು ಪರಿಹಾಸ್ಯವಿದೆ, ಸರಳತೆ ಇದೆ, ಸಂಭ್ರಮವಿದೆ, ಸುಲಲಿತ ಸಂಭಾಷಣೆಯಿದೆ. ಹೆಚ್ಚೇಕೆ ಪರಿಪೂರ್ಣತೆಯೇ ಇದೆ. ಇಂತಹ ಚಿತ್ರವೊಂದು

ಝೂಲಾ (ಬೊಂಬೆ ಟೋಕೀಸ್)

ಅಭಿನಯಿಸಿದವರು ದೈವನಿರ್ಮಿತ ಜೊತೆಗಳೆಡು ಅಶೋಕ ಕುಮಾರ್, ಲೀಲಾಚಿಟ್ನಿಸ್ ಮತ್ತು ಮುಮತಾಜ್ ಅಲಿ, ಷಾಹಾದಿ.

ಇವರೊಂದಿಗೆ ಷಾನವಾಜ್, ದೇಸಾಯಿ

ತಾ. 20—5—43 ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ಸಮಯ ಬದಲಾವಣೆ ಗಮನಿಸಿರಿ.

ಮಧ್ಯಾಹ್ನ 3 30ಕ್ಕೆ, ಸಾಯಂ 7. ಮತ್ತು ರಾತ್ರಿ 10 ಕ್ಕೆ,

ಬರುವ ಚಿತ್ರ ನೇಶನಲ್ಸನವರ ಸಿಸ್ಟರ್ (ಸಹೋದರಿ)

ಶೇಕ್ ಮುಖ್ತಾರ್, ನಳಿನಿ ಜಯವಂತ್

ದುರ್ಬೀನು

ಫ್ರಾನ್ಸಿನಲ್ಲಿ ಓಡಿದವರು ಟ್ಯುನಿಸಿನಲ್ಲಿ ಓಡಿಸಿದರು. ಹಿಂದೆ 'ದೂತ' ಎಂದವನನ್ನೇ ಮುಂದೆ 'ದಾತಾ' ಎಂದು ಕರೆಯಬೇಕಾದೀತು.

oo oo oo

ಜರ್ಮನಿಯ ಅಣೆಕಟ್ಟು ಒಡೆದರೆ ಬಿಜಾಪುರದ ಬರಗಾಲ ನಿಂತೀತೆ? ವಾಷಿಂಗ್ಟನಿನಲ್ಲಿ ಭಾಷಣ ನಡೆದರೆ ಭಾರತಕ್ಕೆ ಸ್ವಾತಂತ್ರ್ಯ ಬಂದೀತೆ?

oo oo oo

ರಸ್ತೇ ನಡೆಯುವಾಗ ಅಪರಿಚಯಸ್ಥನ ಭುಜಕ್ಕಾದರೂ ಭುಜ ತಾಗುತ್ತದೆ; ವಾಷಿಂಗ್ಟನಿಗೆ ಹೋದ ಮೇಲೆ ಚರ್ಚಿಲ್ಲರಾದರೂ ಮಿ. ಫಿಲಿಪ್ಸರೊಡನೆ ಮಾತಾಡುತ್ತಾರೆ.

oo oo oo

ನಾಯಿ ಮೈಮೇಲೆ ಬಂದಾಗ ಕಾಲಡಿಯ ಕಲ್ಲನ್ನಾದರೂ ಎತ್ತಿಕೊಳ್ಳುತ್ತೇವೆ; ವಿರೋಧಿಗಳ ಹೊಡೆತ ಬಲವಾದಾಗ ಹಿಂದೀಯರನ್ನಾದರೂ ಬ್ರಿಟಿಷರು ಆಧರಿಸುತ್ತಾರೆ.

oo oo oo

ಅಂಗಳದ ಕಸಗುಡಿಸಿದರೆ ಅಸ್ಪೃಶ್ಯನಿಗೆ ಸಂಬಳ—ಜಾಪಡಿ ಹತ್ತಿದರೆ ತಾಡನ. ಉತ್ತರಾಫ್ರಿಕೆಯಲ್ಲಿಯ ಹಿಂದೀ ಸೇನೆಗೆ ಮಹಾ ಮರ್ಯಾದೆ—ದಕ್ಷಿಣಾಫ್ರಿಕದಲ್ಲಿ ಹಿಂದೀಯರ ವಿರುದ್ಧ ಮಸೂದೆ!

oo oo oo

ಮನೆನುಗ್ಗಿದ ಕಳ್ಳನನ್ನೋಡಿಸುವದು ಸುಲಭ; ಮನೆಗೆ ಬಂದ ಅತಿಥಿಯನ್ನು ಹೊರಡಿಸುವದು ಕಷ್ಟ. ಭಾರತದಿಂದ ಬ್ರಿಟಿಷ್ ಸುಲಿಗೆಯನ್ನು ನಿಲ್ಲಿಸಬಹುದು; ಇಲ್ಲಿ ನೆಲೆನಿಂತ ಪಾಶ್ಚಾತ್ಯ ಸಂಸ್ಕೃತಿಯನ್ನು ಅಳಿಸುವದು ಪ್ರಯಾಸ

oo oo oo

ತೈಲದ ಕೊಡಹೊತ್ತರೂ ನೆತ್ತಿ ಉರಿಯುತ್ತದೆ; ರಕ್ಷಣಾ ಸಾಲದ ಹೊರೆ ಹೆಚ್ಚಿದರೂ ಕಷ್ಟವಿದ್ದೇ ಇದೆ.

oo oo oo

ಕರುವನ್ನು ಕಟ್ಟಿಹಾಕಿ ದನವನ್ನು ಬಿಟ್ಟರೆ ದನ ಮರಳಿ ಬಾರದೆ? ಅಧಿಕಾರ ಬಿಡದೆ ಗಾಂಧಿಯನ್ನು ಮಾತ್ರ ಬಿಟ್ಟರೆ ಗಾಂಧಿಯು ಮರಳಿ ಬರಲಾರರೆ?

oo oo oo

ಹಾಲು ಕುಡಿಯುವ ಹಸು ಕಡಿಯಬಹುದೆ? ಐಶ್ವರ್ಯವಪಹರಿಸಿದವರು ಅನಾಹುತ ಮಾಡಬಹುದೆ?

oo oo oo

ಅಂಬೆಗಾಲಿಡುತ್ತಿದ್ದ ಮಗು ನೆಟ್ಟಗೆ ನಿಂತರೆ ಅದೊಂದು ಸಾಹಸ; ಅಪಜಯದಲ್ಲಿದ್ದವರು ಅಲ್ಪ ವಿಜಯ ಪಡೆದರೂ ಅದೊಂದು ಮಹಾ ಸಂಭ್ರಮ.

'ಮಿತ ಸಂತತಿ' (ಮಕ್ಕಳಾಗದಂತೆ ಔಷಧ)-ಒಬ್ಬಳಿಗೆ ೬ ತಿಂಗಳ ಸಂಪೂರ್ಣ ಚಿಕಿತ್ಸೆಗೆ ರೂ. 4-0-0 (ಟ. ಖ. ಸೇರಿ 4-8-0) ಸೇವನಾ ಕ್ರಮ ಔಷಧಿಯೊಂದಿಗೆ.

ಸಿಗುವ ಸ್ಥಳ: ವಿಜಯಾ ಸ್ಟೋರ್ಸ್, ಉಡುಪಿ; V. R. ಕೊಡ್ವಲ್, ಉಡುಪಿ; ಮತ್ತು ಕಂಪೆನಿ ಕಂಬಳಕಟ್ಟೆ, ಮಂಗಳೂರು. ಪ್ರೊಪ್ರೈಟರ್:- ಕುಕ್ಕುಂದೂರು. P.O.

The Canara Banking Corporation Limited.
(Incorporated in British India with limited Liability.)
ESTD: 1906.

A Branch of the Corporation has been opened at **COIMBATORE** on 29-3-1943.

ಉಡುಪಿ, ಗುರುವಾರ, ೨೭-೫-೧೯೪೩

ನ್ಯಾಯಯಾಚನೆ

ಈಗ ಸ್ಥಾನಬದ್ಧತೆಯಲ್ಲಿರುವ ಕಾಂಗ್ರೆಸ್ ಮುಖಂಡರ ಮೇಲೆ ಸರಕಾರವು ಹೊರಿಸಿರುವ ಆರೋಪಣೆಗಳ ವಿಚಾರಣೆಗಾಗಿ ನಿಷ್ಪಕ್ಷಪಾತ ನ್ಯಾಯಸ್ಥಾನವೊಂದನ್ನೇ ಸ್ಥಾಪಿಸಬೇಕು, ಅಥವಾ ಪರಿಸ್ಥಿತಿಯ ಪುನರ್ವಿಮರ್ಶೆ ನಡೆಸಿ, ಸದ್ಯದ ಬಿಕ್ಕಟ್ಟು ನಿವಾರಣೋಪಾಯ ಕೈಕೊಳ್ಳಲನುಕೂಲವಾಗುವಂತೆ ಮುಖಂಡರ ಬಿಡುಗಡೆಯಾಗಬೇಕು—ಎಂದು ಸರ್. ಟಿ. ಬಿ. ಸಪ್ರು, ಡಾ. ಎಮ್. ಆರ್. ಜಯಕರ್, ಡಾ. ಎಸ್. ಸಿನ್ಹಾ, ಸರ್. ಸಿ. ಬಿ. ಮೆಹತಾ, ರಾಜಾ ಎಂ. ಡಿ. ಸೇಟ್, ಸರ್. ಜೆ. ಪ್ರಸಾದರು ಮತ್ತೊಮ್ಮೆ ಆಗ್ರಹದ ವಿನಂತಿ ಮಾಡಿಕೊಂಡಿದ್ದಾರೆ. "ಕಾಂಗ್ರೆಸಿನ ಆಗೋಸ್ತು 8ರ ನಿರ್ಧಾರವು ನಮಗೂ ದುಃಖದಾಯಿಯಿದೆ; ನಾವು ಹಿಂಸಾ ಕೃತ್ಯಗಳನ್ನು ಖಂಡಿಸಿದವರು; ಮಹಾತ್ಮಾ ಗಾಂಧಿ ಮತ್ತವರ ಮುಖ್ಯಾನುಯಾಯಿಗಳಿಗಾಗಿ ನಾವೆಂದೆಂದಿಗೂ ರಿಯಾಯಿತಿಯಾಚಿಸುವವರಲ್ಲ; ನಾವು ಅವರ ಕಡೆಯ ಅರ್ಜಿದಾರರಲ್ಲ. ನಮ್ಮ ಬೇಡಿಕೆಯು ಕೇವಲ ನ್ಯಾಯಕ್ಕಾಗಿ-ಅದಕ್ಕಿಂತ ಹೆಚ್ಚು ಬೇಡ, ಕಡಿಮೆಯೂ ಬೇಡ"-ಎನ್ನುವ ಅವರ ವಿಜ್ಞಾಪನೆಯು ಅಂತಃಕರಣದ ಅನುವಾದವೇ ಆಗಿದೆ.

ಹಿಂದೀ ಸರಕಾರವು ಈ ವಿನಂತಿಯನ್ನು ಅಲಕ್ಷ್ಯಿಸುವದೆಂದು ನಮಗೆ ಗೊತ್ತು; ಆದರೆ ಯಾವ ಮುಖದಿಂದ? ಕಾಂಗ್ರೆಸ್ ಮುಖಂಡರ ಬಿಡುಗಡೆಗೆ ಆಕ್ಷೇಪ ಹೇಳುವ ಜಾಯ ಸರಕಾರಕ್ಕಿದೆ; ಹಾಗೆ ಮಾಡಿದರೆ ಯುದ್ಧಕಾರ್ಯಕ್ಕೆ ಹಾನಿಯಿದೆ ಎಂದು ಸರಕಾರವೆನ್ನಬಹುದು. ಆದರೆ ಕಾಂಗ್ರೆಸಿನ ಮೇಲಿನ ಆರೋಪಗಳನ್ನು ವಿಚಾರಣೆಗಾಗಿ ನಿಷ್ಪಕ್ಷಪಾತೀ ನ್ಯಾಯಸ್ಥಾನವೊಂದಕ್ಕೊಪ್ಪಿಸಿರಿ ಎಂಬ ಬೇಡಿಕೆಯನ್ನು ಮನ್ನಿಸಿದರೂ ಜಪಾನರಿಗೆ ಸಹಾಯವಾಗಿಬಿಡುವಂತಾಗಬಹುದೆ? ಹಾಗಲ್ಲವಾದರೆ, 'ನಮ್ಮ ಶೋಧನೆಯೇ ಕೊನೆಯ ತೀರ್ಮಾನ' ಎಂದು ಸರಕಾರವೆನ್ನಬೇಕು. ಫೆಡರಲ್ ಕೋರ್ಟಿನ ಆ ಜಗತ್ಪ್ರಸಿದ್ಧ ತೀರ್ಮಾನದ ನಂತರವೂ 'ನಾವು ತೀರ್ಮಾನಿಸುವುದರಲ್ಲಿ ತಪ್ಪು ಬೀಳುವರಲ್ಲ ಎಂದು ಹೇಳಿದರೆ ಸರಕಾರವು ನಗೆಗೀಡಾಗಬಹುದು. ಈಗ ಕಾಲಪಕ್ವವಾಗಿಲ್ಲ. ನೀವು ಲೋಕದೆದುರು ಅಪರಾಧಿಗಳಾಗಿ ವಿಚಾರಣೆಗೆ ಗುರಿಯಾಗುವ ಕಾಲ ಮುಂದಿದೆಯೆಂಬುದನ್ನೂ ಆಗ ಸಾಧ್ಯವಿದ್ದರೆ ಅದನ್ನು ಅಲ್ಲವೆಂದು ರುಜುಪಡಿಸುವ ಜವಾಬ್ದಾರಿ ನಿಮ್ಮ ಮತ್ತು ನಿಮ್ಮ ಅನುಯಾಯಿಗಳ ಮೇಲಿದೆಯೆಂಬುದನ್ನೂ ನೆನಪಿನಲ್ಲಿಡಿರಿ' ಎಂದು ಗಾಂಧೀಜೀಯ ಜ್ಞಾಪಕಶಕ್ತಿಗೊಂದು ಹೊರೆ ಹೊರಿಸಿದ ಲೋರ್ಡ್ ಲಿನ್‌ಲಿತ್‌ಗೋರವರೇ ಈಗಲೇ ಹಿಂದುಸ್ಥಾನ ಸರಕಾರದ ಶಿರಸ್ಥಾಗಿದ್ದಾರೆ. 'ಗಾಂಧಿಯವರು ಲೋಕದೆದುರು ವಿಚಾರಣೆಗೆ ಗುರಿಯಾಗುವಷ್ಟು ಕಾಲವಿನ್ನೂ ಪಕ್ವವಾಗಿಲ್ಲ' ಎಂದು ವೈಸರಾಯರಾದರೂ ಮನಃಪೂರ್ವಕವಾಗಿ ಹೇಳಲಾಗದಂತಹ ಪರಿಸ್ಥಿತಿಯೀಗ ಒದಗಿದೆ. ಬ್ರಿಟಿಷ್, ಅಮೇರಿಕೆಗಳ ಪತ್ರಿಕೆಗಳು ಸರಕಾರದ ಆರೋಪವು ಏಕಪಕ್ಷೀಯವಾಗಿದ್ದು ಪಕ್ಷಪಾತರಹಿತ ವಿಚಾರಣೆಗೆ ಯೋಗ್ಯವಿದೆ ಎಂಬ ಅಭಿಪ್ರಾಯ ವ್ಯಕ್ತಮಾಡಿವೆ. ಕಾಲವು ಯಾರ ಪಕ್ಷಪಾತಿಯೂ ಅಲ್ಲ. ಸರಕಾರದ ಆರೋಪಗಳಿಗೆ ಕಾಲ ಒದಗಿತು—ಆದರೆ ವಿಚಾರಣೆಯ ಕಾಲ ಮಾತ್ರ ಬಂದಿಲ್ಲವೆಂಬುದಕ್ಕರ್ಥವಿಲ್ಲ. ಅಂದ ಮೇಲೆ ಈ ವಿನಂತಿಯನ್ನು ಸರಕಾರವು ಯಾವ ಮುಖದಿಂದ ತಿರಸ್ಕರಿಸುವದೆಂಬುದು ಶೋಧಕ್ಕೂ ಸಿಗದ ವಿಷಯ. ಹಿಂದುಸ್ಥಾನದ ಬಿಕ್ಕಟ್ಟು ನಿವಾರಿಸದಿರುವ ಕಾರಣಗಳನ್ನು ನಾವು ಬ್ರಿಟಿಷ್ ಪ್ರಮುಖರ ಬಾಯಿಂದ ಕೇಳಿ ಕೇಳಿ ಬೇಸತ್ತಿದ್ದೇವೆ. ಗಾಂಧೀಜೀ ಮೊದಲಾದ ಪ್ರಮುಖರ ನಿರ್ಬಂಧದ ಕಾರಣಗಳನ್ನು, ಕಂಠಪಾಠವಾಗುವಷ್ಟು ಸಲವೂ ಕೇಳಿಯಾಗಿದೆ. ಹಿಂಸಾಕೃತ್ಯಗಳಿಗೆ ಕಾಂಗ್ರೆಸನ್ನು ಹೊಣೆಮಾಡಿದ ಸರಕಾರೀ ದಾಖಲೆಗಳನ್ನು ನಿಷ್ಪಕ್ಷಪಾತ ವಿಮರ್ಶೆಗೊಳಗುಪಡಿಸಿರಿ. ಎಂದು ನ್ಯಾಯವಾದಿಗಳ ಬೇಡಿಕೆಯನ್ನು ಈ ಮೊದಲೂ ಕೇಳಿದ್ದೇವೆ, ಈಗಲೂ ಕೇಳುತ್ತಿದ್ದೇವೆ—ಸರಕಾರದ ಉತ್ತರವನ್ನು ಮಾತ್ರ ಕೇಳಿಲ್ಲ. ಇದರ ಗುಟ್ಟೇನು? ಕಾಂಗ್ರೆಸನ್ನು ದೂರುವ ಪ್ರತಿಯೊಂದು ಸಂದರ್ಭದಲ್ಲಿಯೂ 'ನ್ಯಾಯವು ನಮ್ಮ ಕಡೆಗಿದೆ' ಎಂದು ಬ್ರಿಟಿಷ್ ಪ್ರಮುಖರೆನ್ನುವ ವಾಡಿಕೆ. ಸರ್. ಸಪ್ರುಗಳೇ ಮೊದಲಾದವರ ಬೇಡಿಕೆಯಲ್ಲಾದರೂ 'ಅನ್ಯಾಯವೆಲ್ಲಿದೆ, ಶೋಧಿಸೋಣ, [illegible] ವಾದ. ನ್ಯಾಯವಾದೀ ಸರಕಾರವು ಈ ಬೇಡಿಕೆಗೂ ಅಂಜಬಹುದೆ? ಈ ಅಂಜಿಕೆಗೆ ಲೋಕವು ಯಾವ ಅರ್ಥಕಟ್ಟಬೇಕೆಂಬುದು ಸ್ಪಷ್ಟವಿದೆ. **ಸರಕಾರವು ಈ ಸೂಚನೆಯನ್ನೂ ಅಲ್ಲಗಳೆಯುವದಾದರೆ ಸಪ್ರು ಜಯಕರರಂತಹ ಪಕ್ಷರಹಿತ ಧುರೀಣರೇ 'ನಿಷ್ಪಕ್ಷಪಾತೀ ನ್ಯಾಯಸ್ಥಾನ'- ಯಾವ ರುಜುವಾತೂ ಇಲ್ಲದ ದೆಸೆಯಿಂದ ವಾದಿ ಸರಕಾರವು ಗೈರುಹಾಜರಿ- ಎಂಬುದು ಖಚಿತವಾಗಿ ಲೋಕದೆದುರು ತೀರ್ಮಾನವು ತಾನಾಗಿ ರೂಪುಗೊಳ್ಳುತ್ತದೆ!**

— ಸುದ್ದಿ ಸೂಚನೆ —

● ಬಿರುಗಾಳಿಯಿಂದಾಗಿ 'ಪೂನಾ-ಮದ್ರಾಸ್' ರೈಲ್ವೇ ಹಾದಿ ಹಾಳಾಗಿದೆ. ಪೂನಾ-ಮುಂಬಾಯಿಗಳ ಟೆಲಿಫೋನ್ ವ್ಯವಹಾರವು ಒಂದೆರಡು ದಿನ ನಿಂತು ಹೋಗಿದೆ.

● ರುಸವೆಲ್ಟರ ರಾಯಭಾರಿ ಡೇವಿಸರು ಸ್ಟಾಲಿನರಿಗೆ ಗುಪ್ತ ಪತ್ರವೊಪ್ಪಿಸಿದ್ದಾರೆ. ಅದೊಂದು ಸುದೀರ್ಘ ಪತ್ರವೆಂದೂ ತಮ್ಮ ಸಮ್ಮುಖದಲ್ಲೇ ಅದನ್ನು ಸ್ಟಾಲಿನರಿಗೆ ಭಾಷಾಂತರಿಸಿ ಹೇಳಲಾಯಿತೆಂದೂ ತಿಳಿಸಿದ್ದಾರೆ.

● ಚರ್ಚಿಲ್-ರುಸವೆಲ್ಟರ ವಾಷಿಂಗ್ಟನ್ ಸಂಭಾಷಣೆಯ ರೀತಿನೀತಿಗಳಿಂದ ಚೀನಕ್ಕೆ ನಿರಾಶೆಯುಂಟಾಗಿದೆಯಂತೆ.

● ವಿಮಾನ ಪ್ರಯಾಣ ಮಾಡುತ್ತಿದ್ದಾಗ ಜಪಾನಿನ ನೌಕಾ ಮಂತ್ರಿ ಯಾಮೊಮೊಟೋರವರನ್ನು ಮಿತ್ರ ವಿಮಾನಗಳು ಬೆಂಬತ್ತಿ ಕೆಡಹಿದ್ದರಿಂದ ಅವರು ಮಡಿದರು.

● ಚರ್ಚಿಲ್ಲರು ವಾಷಿಂಗ್ಟನಿನಲ್ಲಿರುವ ಸಂದರ್ಭವನ್ನು ಉಪಯೋಗಿಸಿ ಅಮೇರಿಕದ ಇಂಡಿಯಾ ಲೀಗಿನವರು 'ವಾಷಿಂಗ್ಟನ್ ಪೋಸ್ಟ್' ಪತ್ರಿಕೆಯಲ್ಲಿ 'ಜಪಾನನ್ನು ಸೋಲಿಸಲು ಭಾರತವೇ ಕೀಲಿಕೈ. ಮಧ್ಯಸ್ಥಿಕೆಗೆ ಇದೀಗ ಸುಕಾಲ' ಎಂಬ ಇಡೀ ಒಂದು ಪುಟದ ಜಾಹೀರಾತು ಪ್ರಕಟಿಸುತ್ತಿರುವರು.

● ಅಮೇರಿಕದ ಕೆಲವು ನದಿಗಳಲ್ಲಿ ಭಯಂಕರ ನೆರೆ ಬಂದು 10800 ಜನರು ನಿರಾಶ್ರಿತರಾಗಿರುವರು. 300 ಲಕ್ಷ ಡೋಲರುಗಳಷ್ಟು ನಷ್ಟವಾಗಿದೆ. 5000 ಸೈನಿಕರನ್ನು ರಕ್ಷಣಾ ವ್ಯವಸ್ಥೆಗೆ ಕಳುಹಿಸಲಾಗಿದೆ.

● ಇಡೀ ಹಿಂದುಸ್ಥಾನದಲ್ಲಿ ಕಳೆದ ತಾ. 21ರಲ್ಲಿ ಟ್ಯುನಿಸಿಯಾ ದಿನವು ಆಚರಿಸಲ್ಪಟ್ಟಿತು.

● ಇಟೆಲಿಯ 'ಸಿಸಿಲಿ' ದ್ವೀಪದ ಮೇಲೆ ಮಿತ್ರರು ಬಿಡೆಬಿಡದೆ ವಿಮಾನಧಾಳಿ ನಡೆಸಿದ್ದಾರೆ. ಇಟೆಲಿಯ ಹಲವು ಪ್ರಾಮುಖ್ಯ ಕೇಂದ್ರಗಳೂ ಧಾಳಿಗೊಳಗಾದವು.

● ಮಿ. ಚರ್ಚಿಲ್ಲರು ಮಿ. ಫಿಲಿಪ್ಸರೊಡನೆ ವಾಷಿಂಗ್ಟನಿನಲ್ಲಿ ಸಂಭಾಷಣೆ ನಡೆಸಿದ್ದಾರೆ.

● ಲಂಡನಿನ ಮೇಲೂ ಆಗಾಗ ನಾಜೀ ವಿಮಾನಧಾಳಿ ನಡೆಯುತ್ತಿದೆ. ಕಳೆದ ತಾ. 22ನೇ ರಾತ್ರಿ ಆ ವಾರದ ಹನ್ನೆರಡನೆ ರಾತ್ರಿ ಧಾಳಿನಡೆಯಿತು.

● ಮಿತ್ರರ ವಿಮಾನ ಧಾಳಿಯ ಪರಿಣಾಮವಾಗಿ ಜರ್ಮನಿಯು ಪೂರ್ವ ರಣರಂಗದಿಂದ ಹೆಚ್ಚಿನ ವಿಮಾನಗಳನ್ನು ಹಿಂದೆಗೆದು ಪಶ್ಚಿಮ ಮುಖಕ್ಕೆ ತರಬೇಕಾಗಿದೆ ಎಂದು ವಿಮಾನ ಮಂತ್ರಿ ಸರ್. ಆರ್ಚಿಬಾಲ್ಡ್ ಸಿಂಕ್ಲೇರರಂದಿದ್ದಾರೆ.

● ಜಪಾನಿನ ವಿರುದ್ಧ ಧಾಳಿಗಾಗಿ ರಶ್ಯದ ವಿಮಾನ ನಿಲ್ದಾಣಗಳು ಕೆಲವನ್ನು ಇಂಗ್ಲಾಂಡು ಅಮೇರಿಕಗಳು ಯಾಚಿಸಬಹುದೆಂದು ಊಹೆಯಿದೆ.

● ಕಾಂಗ್ರೆಸ್ ಚಳವಳದ ಸಂಬಂಧವಾಗಿ ಮಾರ್ಚಿ 15ರ ತನಕ ಭಾರತದಲ್ಲಿ ಬಂಧನಕ್ಕೊಳಗಾದವರು 34895 ಮಂದಿ. ಆ ಪೈಕಿ 11123 ಮಂದಿ ಸ್ಥಾನಬದ್ಧರು ಎಂದು ಪಾರ್ಲಿಮೆಂಟಿನಲ್ಲಿ ಮಿ. ಅಮೆರಿಯವರ ನಿರೂಪಣೆ. ಛಡೀ ಶಿಕ್ಷೆಗೊಳಗಾದವರ ಸಂಖ್ಯೆ ದೊರೆತಿಲ್ಲವಂತೆ.

● ಲೋಕದಲ್ಲೇ ಹತ್ತಿಯ ಅಭಾವವುಟಾಗದೆಯೆಂದೂ ಚಾಲ್ತಿವರುಷದಲ್ಲಿ ಸಾಮಾನ್ಯ ಅರ್ಧ ವರುಷದಲ್ಲಿದ್ದಷ್ಟು ಹತ್ತಿ ಕೂಡಾ ಇಲ್ಲವೆಂದೂ ಓರ್ವ ತಜ್ಞರಾದ ಮಿ. ಡಬ್ಲ್ಯು. ಎಲ್. ಕ್ಲೇಟನರಂದಿದ್ದಾರೆ.

● ನ್ಯೂಗಿನಿಯಾ ಕ್ಷೇತ್ರದಲ್ಲಿ ಪುನಃ ಹೋರಾಟವನ್ನು ಜಪಾನರಾರಂಭಿಸಿದ ವಾರ್ತೆಯಿದೆ.

● ಜಪಾನೀ ಧಾಳಿಯ ಭೀತಿಯು ಹಿಂದುಸ್ಥಾನಕ್ಕಿಲ್ಲವೆಂದು ದುಬಾರ್ನಿನಲ್ಲಿರುವ ಭಾರತೀಯ ವಿಮಾನಾಧಿಪತಿ ರವೀಂದಾರ್ ಸಿಂಗರ ಅಭಿಪ್ರಾಯ

● ಜರ್ಮನಿ-ಇಟೆಲಿ ಮೈತ್ರಿಯ ನಾಲ್ಕನೇ ವಾರ್ಷಿಕ ದಿನದಲ್ಲಿ ಹಿಟ್ಲರ್ ಮತ್ತು ಇಟೆಲಿ ರಾಜ, ಹಾಗೂ ಹಿಟ್ಲರ್ ಮುಸಲಿನಿಯವರು ಶಾಶ್ವತ ಮೈತ್ರಿ ಹಾಗೂ ವಿಜಯ ಭರವಸೆಯ ಸಂದೇಶಗಳನ್ನು ಕೊಟ್ಟು ಪಡೆದಿದ್ದಾರೆ.

● ಬಂಗಾಳ ಕೊಲ್ಲಿಯ ರಾಮ್ರೀದ್ವೀಪದ ಬಳಿ 6 ಜಪಾನೀ ಲಾಂಚುಗಳನ್ನು ಬ್ರಿಟಿಷ್ ವಿಮಾನಗಳು ನಾಶಮಾಡಿದುವಂತೆ.

● ಮಿ. ಫಿಲಿಪ್ಸರು ಜುಲಾಯಿಯಲ್ಲಿ ಪುನಃ ಹಿಂದುಸ್ಥಾನಕ್ಕೆ ಬರಲಿರುವರು. ಆ ಮೊದಲು ಲಂಡನಿಗೆ ಹೋಗಿ ಹಿಂದೀ ಸಮಸ್ಯೆಯ ಕುರಿತು ಸಂಭಾಷಿಸಲಿದ್ದಾರೆ.

● ರಶ್ಯಾ-ಪೋಲೆಂಡುಗಳ ಮನಸ್ತಾಪ ನಿವಾರಣಾಯತ್ನವು ಮಿ. ಈಡನ್ನರಿಂದ ಜಯಶೀಲವಾಗಿ ಸಾಗುತ್ತಿದೆಯಂತೆ.

● ಚೀನಾದಲ್ಲಿ ಯಾಂಗ್ಟ್ಸೇನದಿಯ ದಕ್ಷಿಣಪಡದಿಂದ ಜಪಾನರು ಮುಂದೊ[illegible]

● ಇಟೆಲಿಯಲ್ಲಿ ಹತ್ತುವರುಷಗಳಲ್ಲಿ ಪ್ರಜಾ ಪ್ರಭುತ್ವ ಸ್ಥಾಪನೆಯಾಗುವಂತೆ ಶರ್ತ ಪ್ರಕಾರ ಮುಂದೊತ್ತುವ ಶಾಂತಿ ಸೂಚನೆಯನ್ನು ಅಲ್ಲಿಯ 'ವಾಟಿಕಾನ್' ಕೊಟ್ಟಿರುವದೆಂದು ಸುದ್ದಿ.

● ಭಾರತದ ಪಂದು ಕಟ್ಟಿನ 'ಕೋಕ್ಸ್ ಬಝೂರ'ನ ಮೇಲೆ ಜಪಾನೀ ವಿಮಾನ ಧಾಳಿ ನಡೆಯಿತು. ಮಿತ್ರವಿಮಾನಗಳವುಗಳನ್ನೋಡಿಸಿದುವು.

● ರಾಷ್ಟ್ರೀಯಚೀನದ ರಾಜಧಾನಿಯಾದ ಚುಂಗ್‌ಕಿಂಗಿನ ಮೇಲೆ ಜಪಾನರ ಪ್ರಮುಖ ಧಾಳಿಯಾರಂಭವಾಗುವುದು ನಿಶ್ಚಯವೆಂದಾಗಿದೆ. ಸನ್ನಾಹ ನಡೆದಿದೆ.

● ತಾ. 22ರಲ್ಲಿ ಚಿತ್ತಗೋಂಗ್ ವಿಮಾನ ನಿಲ್ದಾಣದ ಮೇಲೆ 20 ಜಪಾನೀ ವಿಮಾನಗಳು ಧಾಳಿ ನಡೆಸಿದುವು. ಅರೆವಾಸಿಯಷ್ಟನ್ನು [illegible] ಅಥವಾ ಜಖಮ್‌ಗೊಳಿಸಲಾಯಿತು.

● ಇಟೆಲಿಯ ಮತ್ತು ಸಿಸಿಲಿಯ ಮೇಲೆ ಅತಿ ಒತ್ತಡದ ವಿಮಾನ ಧಾಳಿಗಳು ನಡೆಯುತ್ತಲೇ ಇವೆ.

ಚರ್ಚಿಲ್—ರುಸವೆಲ್ಟ್ ಸಮ್ಮೇಲನದ ಫಲಿತಾಂಶ.

ವಾಷಿಂಗ್ಟನ್ ಚರ್ಚೆ.

ಇಡೀ ಲೋಕದ ದೃಷ್ಟಿಯನ್ನೀಗ ವಾಷಿಂಗ್ಟನ್ ಆಕರ್ಷಿಸಿದೆ. ಅಲ್ಲಿ ಚರ್ಚಿಲ್ ರುಸವೆಲ್ಟರು ತಂತಮ್ಮ ಕಡೆಯ ಯುದ್ಧ ತಜ್ಞ ಮಂಡಲಿಯನ್ನು ಕೂಡಿಕೊಂಡು ನಡೆಸುತ್ತಿರುವ ಚರ್ಚೆಯು ದೀರ್ಘವಾಗುತ್ತಾ ಬರುತ್ತಿದೆ. ಇದರಿಂದಾಗಿ ಅತಿ ಪ್ರಾಮುಖ್ಯ ನಿರ್ಧಾರಗಳಾಗಿವೆಯೆಂದೂ, ಎರಡು ಪ್ರಬಲ ರಾಷ್ಟ್ರಗಳ ಮುಖಂಡರಿಬ್ಬರ ತಲೆಯೊಳಗೆ ಈಗ ಇಡೀ ಭೂಪಟವೇ ಸುತ್ತುತ್ತಿದ್ದು, ಪೂರ್ವ ಪಶ್ಚಿಮ ರಣ ವಿಭಾಗಗಳ ಕುರಿತು ಕೂಡಲೇ ಕಾರ್ಯಾಚರಣೆಯಲ್ಲಿ ಬರುವ ಸ್ಪಷ್ಟ ಸಿದ್ಧಾಂತಗಳಾಗಿವೆಯೆಂದೂ ತಿಳಿಯುತ್ತದೆ. ಈ ನಡುವೆ ಭಾರತ ಸಂಚಾರ ಮುಗಿಸಿ ಹೋಗಿರುವ ಮಿ. ಫಿಲಿಪ್ಸರು ಅಮೇರಿಕದ ಪ್ರಮುಖಾಧಿಕಾರಿಗಳೊಡನೆಯೂ, ಮಿ ಚರ್ಚಿಲ್ಲರೊಡನೆಯೂ ಸಂಭಾಷಿಸುತ್ತಿದ್ದಾರಲ್ಲದೆ ಅವರ ರಾಯಭಾರಿತ್ವವು ಇನ್ನೂ ಉಳಿದಿದೆ ಎಂಬ ಸುದ್ದಿಯೂ ಬಂದಿದೆ.

ಮಿ. ಚರ್ಚಿಲ್ಲರ ಭಾಷಣ.

ಅಮೇರಿಕದ ಸಮ್ಮಿಲಿತ ಪ್ರಜಾಪ್ರತಿನಿಧಿಗಳ ಮುಂದೆ ತಾ. 19ರಲ್ಲಿ ಚರ್ಚಿಲ್ಲರಿತ್ತ ಭಾಷಣದಲ್ಲಿ ಮಿತ್ರರ ಭಾವೀ ಧೋರಣೆಯ ನಕಾಶೆ ಮೂಡಿದೆ. ಯುದ್ಧ ಸ್ಥಿತಿಯೀಗ ತಾವೇ ಮೇಲ್ಗೈಯಾಗುವಂತಹ ಪರಿವರ್ತನೆ ಹೊಂದಿವೆ. ಜಪಾನರನ್ನು ಮರ್ದಿಸುವ ವಿಷಯದಲ್ಲಿ ಅಮೇರಿಕದವರಷ್ಟೇ ಇಂಗ್ಲಾಂಡಿಗೂ ಆತುರವಿದೆ. ಆದರೆ ಜಪಾನನ್ನು ಸೋಲಿಸಿದರೆ ಜರ್ಮನಿಯನ್ನು ಸೋಲಿಸಿದಂತಾಗದು; ಜರ್ಮನಿಯನ್ನು ಸೋಲಿಸಿದರೆ ಬಿದೊಂದು ವಿಧದ ಜಪಾನೀ ಪತನವೂ ಸಿದ್ಧಿಸುವದು. ಹಿಂದುಸ್ಥಾನದಲ್ಲಿರುವ ಅತಿ ಪ್ರಬಲ ಮಿತ್ರ ಸೇನೆಯು ಬರ್ಮಾದೊಳಗೆ ನುಗ್ಗಿ ಬರ್ಮಾ ರಸ್ತೆಯನ್ನು ತೆರೆಯುವ ಯೋಜನೆಯು ತಯಾರಿಸಲ್ಪಡುತ್ತಿದೆ. ಯು. ಬೋಟು ಹಾವಳಿಯೀಗ ಕಡಿಮೆಯಾಗಿದೆ-ಎಂದೇ ಮಿ ಚರ್ಚಿಲ್ಲರ ಭಾಷಣ ಟ್ಯುನಿಸಿಯಾ ಯುದ್ಧ ವಿಜಯದ ಕುರಿತು 'ಇಂಗ್ಲಾಂಡು ಅಮೇರಿಕಗಳು ಇಂತಹ ಮೈತ್ರಿಯನ್ನುಳಿಸಿಕೊಂಡರೆ ಯುದ್ಧದಲ್ಲಾಗಲೀ ಶಾಂತಿ ಕಾಲದ ಸಮಸ್ಯೆಗಳಲ್ಲಾಗಲೀ ನಮ್ಮಿಂದ ತೀರ್ಮಾನಿಸಲಾಗದ ಸಂಗತಿ ಯಾವುದೂ ಉಳಿಯಲಾರದು' ಎಂಬ ಚರ್ಚಿಲ್ಲರ ಮಾತಿನಲ್ಲಿ ಮಿಕ್ಕ ಮಿತ್ರ ರಾಷ್ಟ್ರಗಳನ್ನು ಗಣಿಸದ ದೋಷ ಕಂಡು ಬರುತ್ತದೆ. ಹಾಗೆಯೇ 'ಕ್ಷಿಪ್ರದಲ್ಲೇ ಸ್ಟ್ಯಾಲಿನರನ್ನೂ ಸಾಧ್ಯವಿದ್ದರೆ ಚಿಯಾಂಗ್ ಕೈಶೇಕರನ್ನೂ ಭೇಟಿಯಾಗುವೆ'ನೆಂದು ಬ್ರಿಟಿಷ್ ಪ್ರಧಾನಿಗಳು ಹಿಂದೆ ಹಾಕಿದುದನ್ನು ಕಂಡು ರಷ್ಯ ಚೀನಗಳು ಅಸಮಾಧಾನಗೊಳ್ಳುವುದರಲ್ಲಿ ಸೋಜಿಗವಿಲ್ಲ.

ಭಾರತ ಸಮಸ್ಯೆಯ ತೀರ್ಮಾನವಿಲ್ಲ

ವಾಷಿಂಗ್ಟನಿನಲ್ಲಿ ಜ. ವೇವೆಲ, ಫಿಲಿಪ್ಸ, ಪೆಲಿಫೇಕ್ಸರಂಥವರು ಸಂಭಾಷಣೆಯಲ್ಲಿ ಭಾಗವಹಿಸುತ್ತಿರುವದನ್ನು ಕಂಡು ಭಾರತದ ಬಿಕ್ಕಟ್ಟು ನಿವಾರಣೆಯ ಕುರಿತು ನಾನಾ ಊಹೆಕಟ್ಟಿಕೊಂಡವರು ಈಗ ನಿರಾಶರಾಗಬಹುದು. ಅಲ್ಲಿ ಬರ್ಮದ ಮೇಲೆ ದೊಡ್ಡ ಧಾಳಿನಡೆಸುವ ಕುರಿತು ಚರ್ಚೆ ನಡೆಯಿತೇ ಹೊರತು ರಾಜಕೀಯ ಸಮಸ್ಯೆಯು ಚರ್ಚಿಸಲ್ಪಡಲಿಲ್ಲವೆಂಬುದನ್ನು ಸುಲಭದಲ್ಲಿ ಗ್ರಹಿಸಬಹುದು. ಜಪಾನಿನ ಮೇಲಿನ ಧಾಳಿಯ ಯೋಜನೆ ತಯಾರಿಸಲ್ಪಟ್ಟಿದೆ ಎಂಬ ಆಶ್ವಾಸನೆ ದೊರೆತರೂ ಚೀನವು ವಾಷಿಂಗ್ಟನ್ ಮಾತುಕತೆಗಳಿಂದ ಏನೇನೂ ಸಮಾಧಾನಗೊಂಡಿಲ್ಲ. ಜಪಾನರ ರಾಜಧಾನಿ ಚುಂಗ್‌ಕಿಂಗಿನ ಮೇಲೇನೇ ಧಾಳಿನಡೆಯುತ್ತಿರುವಾಗ ಮಿತ್ರರ ಬರ್ಮಾಧಾಳಿ ಸಿದ್ಧತೆಯು 'ಪಟ್ಟಣ ಸೂರೆಯಾಗುವಾಗ ಸೆಟ್ಟಿ ಸಿಂಗಾರ'ವಾಗುತ್ತಿದ್ದಗಾದೆಯಂತಾಗಬಹುದು. ರಷ್ಯದಕೇವೆದೆಯುವಿಮಾನ ಸಿಲ್ಡಾಣಗಳನ್ನು ಚರ್ಚಿಲ್ ರುಸುವೆಲ್ಟರು ಯೋಚಿಸ ಬಹುದೆಂಬ ಸುದ್ದಿ ಇರುವದರಿಂದ ರಷ್ಯವು ಸಮಸ್ಯೆಯ ಬೀಳಬಲ್ಲಿಹುದು. ತಾಟಸ್ಥ್ಯಕರಾರನ್ನು ಮಾಡಿಕೊಂಡಿರುವ ಜಪಾನನ್ನು ಸೋವಿಯೆಟರು ಕೆಣಕುವದು ಅಸಂಭವ.

ದ್ವಿತೀಯರಂಗ ಯಾವಾಗ?

ಮಿ. ಚರ್ಚಿಲ್ಲರ ಭಾಷಣದ ಒಂದು ಆಶ್ಚರ್ಯಕರ ಅಭಾವವೆಂದರೆ ದ್ವಿತೀಯರಂಗ ನಿರ್ಮಾಣದ ಕುರಿತು ಸಾಕಷ್ಟು ವರ್ಣನೆಯಾಗಲೀ ಸೂಚನೆಯಾಗಲೀ ಇಲ್ಲದುದು. ಎರಡನೇ ರಂಗನಿರ್ಮಾಣಕ್ಕೆ ಇನ್ನೂ ಹೆಚ್ಚಿನ ಸಿದ್ಧತೆಯ ಆಗತ್ಯವಿದೆಯಾದ್ದರಿಂದ ಲೋಕ ನಿರೀಕ್ಷಿಸಿದಷ್ಟು ಅವಸರವಲ್ಲಿ ಇನ್ನಾದರೂ ಹೊಸರಣರಂಗದ ನಿರ್ಮಾಣ ಇಲ್ಲವೇನೋ! ಅಥವಾ ಉತ್ತರಾಫ್ರಿಕೆಯಲ್ಲಿ ಮಾಡಿದಂತೆ ಗುಪ್ತವಾಗಿ ಸಿದ್ಧತೆ ನಡೆಯುತ್ತಿದ್ದು ಅಕಸ್ಮಾತ್ ಏರಿ ಹೋಗುವ ತಂತ್ರವಿದಾಗಿರಲೂ ಬಹುದು. ವಾಷಿಂಗ್ಟನ್ ಮಾತುಕತೆಯ ಪರಿಣಾಮವಾಗಿ ರಷ್ಯದಲ್ಲಿ ಹೊರತು ಬೇರೆಲ್ಲಿಯೂ ಈ ತನಕ ಕಂಡುಬಾರದ ಅತಿ ದೊಡ್ಡ ಧಾಳಿ ನಡೆಯಬಹುದೆಂದೂ ಪ್ರಥಮ ಈ ಭೂಮಧ್ಯ ಸಮುದ್ರದ ಆಕ್ಸಿಸ್ ದ್ವೀಪಗಳ ಆಕ್ರಮಣ, ಹಾಗೂ ಜರ್ಮನಿ ಆಕ್ರಮಿತ ಯುರೋಪಿನ ಮೇಲೆಲ್ಲಾ ಆಕಾಶ ಫ-ಳಿ-ಜತೆಯಲ್ಲೇ ನಾರ್ವೆಯ ಮೇಲೆ ಅಭಿಯೋಗ ನಡೆಯ ಬಹುದೆಂದೂ ವಾಷಿಂಗ್ಟನಿನ ಯುದ್ಧ ತಜ್ಞರು ಅಂದಾಜು ಮಾಡುತ್ತಿದ್ದಾರೆ

ಯುದ್ಧಸ್ಥಿತಿ.

ಈ ವಾರದ ಯುದ್ಧಘಟನೆಗಳಲ್ಲಿ ಮಿತ್ರರು ಜರ್ಮನಿ, ಇಟಲಿ, ಮತ್ತು ಸಿಸಿಲಿ ಮೊದಲಾದ ದ್ವೀಪಗಳ ಮೇಲೆ ಅತಿ ಭೀಕರವಾಗಿ ನಡೆಸಿದ ಧಾಳಿಗೇನೇ ಪ್ರಾಮುಖ್ಯತೆ ದೊರೆಯುತ್ತದೆ. ರಷ್ಯದಲ್ಲಿ ಯುದ್ಧವಲ್ಲಿಯೂ ನಡೆಯುತ್ತಿಲ್ಲ ಕಲವು ಕಡೆಯ ಹೋರಾಟಗಳಲ್ಲಿ ಕೆಂಪು ಸೇನೆಯ ಕೈಯೇ ಮೇಲಾದಂತಿದೆ ಮಧ್ಯ ಡೋನೆಟ್ಜ್‌ನಲ್ಲಿ ಒಂದು ದೊಡ್ಡ ಸೇತುವೆಯ ಸ್ವಾಧೀನಕ್ಕಾಗಿ ನಾಜೀಗಳಾರಂಭಿಸಿದ ಪ್ರಬಲ ಧಾಳಿಯನ್ನು ರಷ್ಯನರು ನಿರರ್ಥಕಗೊಳಿಸಿರುವರು

ಡಾಕ್ಟರ್ ಕೊರಡ್ಕಲ್ ಫಾರ್ಮಸಿಯ ದಿವ್ಯೌಷಧಗಳು.

1. 'ಓಜಸ್ವಿನಿ'-'ಧಾತುವರ್ಧಕ' ನರಗಳ ನಿಶ್ತ್ರಾಣ ನಿರುತ್ಸಾಹ ನಿವಾರಕ.
2. 'ಭಗಿನೀಬಂಧು'- ಮುಟ್ಟುದೋಷ ಮುಂತಾದ ಗರ್ಭಕೋಶದ ಸಕಲ ಆಕ್ರಮ ನಿವಾರಕ,

೧೬ ದಿವಸದ ಗುಣದಾಯಕ ಸೇವನೆಯ ವೆಚ್ಚ ರೂ. ೩ ಮಾತ್ರ.

ದೊರೆಯುವಸ್ಥಳ—ಉಡುಪಿ ರಥಬೀದಿಯ ಡಾ। ಕೊರಡ್ಕಲ್ ಫಾರ್ಮಸಿ ಮತ್ತು ವಿಜಯಾ ಸ್ಟೋರ್ಸ್ ಉಡುಪಿ ದ. ಕ.

WANTED GRADUATES.

APPLY FOR TERMS

CANARA BANK LIMITED.

ESTD: 1906

ಅನಿಶ್ಚಿತ ದಿನಗಳಲ್ಲಿ
ಸುಭದ್ರ ಸಂಚಯ

ಇಂದಿನ ಯುದ್ಧ ದಿನಗಳಲ್ಲಿ ಎಲ್ಲವೂ ಅನಿಶ್ಚಿತ ಜನರಿಗೆ ತಮ್ಮ ಕಷ್ಟಾರ್ಜಿತ ಹಣವನ್ನು ಲಾಭದಾಯಕವಾಗಿ ಹೇಗೆ ವಿನಿಯೋಗಿಸುವುದೆಂಬುದೊಂದು ಸಮಸ್ಯೆಯಾಗಿದೆ. ವ್ಯಾಪಾರಕ್ಕೆ ಹಾಕೋಣವೆಂದರೆ ಸಾಮಾನುಗಳ ಬೆಲೆಯು ಕ್ಷಣ ಕ್ಷಣ ಬದಲಾಗುತ್ತಿವೆ. ಭೂಮಿಯ ಮೇಲೆ ಹಾಕೋಣವೆಂದರೆ ಕ್ರಯ ಇಮ್ಮಡಿ; ಉತ್ಪತ್ತಿ ಕಡಿಮೆ. ಅದೂ ಅನಿಶ್ಚಿತ ಹೀಗಿರುವಾಗ ಜನರು ಹೆಚ್ಚು ಲಾಭಾಂಶ ಹಂಚುವ ಬ್ಯಾಂಕಿಂಗ್ ಸಂಸ್ಥೆಗಳ ಪಾಲುಗಳಲ್ಲಿ ತಮ್ಮ ಹಣವನ್ನು ವಿನಿಯೋಗಿಸುವುದು ವಿಶೇಷ ಜಾಣತನವಿದೆ ಮನಗಾಣಿಸಿತ್ತಿದೆ. ಸುಭದ್ರ ಹಾಗೂ ಸುದೃಢ ಬ್ಯಾಂಕಿಂಗ್ ವ್ಯವಹಾರವನ್ನು ಮಾಡುತ್ತ ಕೆಲವು ವರ್ಷಗಳಿಂದ ಪಾಲುದಾರರಿಗೆ ನೇಕಡಾ 7/-ರಂತೆ ಲಾಭಾಂಶ ಹಂಚಿಕೊಂಡು ಬರುತ್ತಿರುವ ಪ್ರಗತಿಪರ ಬ್ಯಾಂಕಿಂಗ್ ಸಂಸ್ಥೆಯೆಂದರೆ ವಿಜಯಾ ಬ್ಯಾಂಕು ಇದರ ಪಾಲುಗಳಲ್ಲಿ ಹಣವಿನಿಯೋಗಿಸುವುದೆಂದರೆ ಅದೊಂದು ಸುಭದ್ರ ಸಂಚಯ. ಅದಕ್ಕೆ ಎರಡೆರಡು ಬಾರಿ ಕೊರಡಿಸಿದ ಪಾಲುಗಳ ಮಾರಾಟವೇ ಒಂದು ನಿದರ್ಶನ.

ವಿಜಯಾ ಬ್ಯಾಂಕಿನ ಕೆಲವೇ ಪಾಲುಗಳು ಮೊರೆಯುತ್ತವೆ ಪಾಲಿನ ಅರ್ಜಿಗಳನ್ನು ಪ್ರತಿ ಶಾಖೆಗಳಲ್ಲಿ ಸ್ವೀಕರಿಸಲಾಗುತ್ತದೆ.

ಬಿ. ಮಂಜಯ ಹೆಗ್ಡೆ, ಚೆಯರ್‌ಮ್ಯಾನ್,

ವಿಜಯಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

B. Sachidananda Hegde,
Organiser,
VIJAYA BANK LTD, UDIPI

ಕಾಸರಗೋಡು ದಕ್ಷಿಣ ಕನ್ನಡ ಜಿಲ್ಲಾ ರಾಮರಾಜ ಕ್ಷತ್ರಿಯರ ೬ನೆ ಪರಿಷತ್ತು:—ಕಾಸರಗೋಡು—ತಾ—೧೯೪೩ನೇ ಆದಿತ್ಯವಾರ ದಿನ ಕಾಸರಗೋಡಿನ ಅಷ್ಟತ್ತ ಬೈಲು ಬಾರ್ಡ್ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ಮದ್ರಾಸು ಸಂಸ್ಕೃತ ಸಂಘದ ಶ್ರೀ। ಲಕ್ಷ್ಮೀಶ ನಂದ ಸ್ವಾಮಿಜಿ ಅವರ ಅಧ್ಯಕ್ಷತೆಯಲ್ಲಿ ರಾಮರಾಜ ಕ್ಷತ್ರಿಯರ ೬ನೇ ಪರಿಷತ್ತು ಬಹು ವಿಜೃಂಭಣೆಯಿಂದ ಜರಗಿತು. ಜಿಲ್ಲೆಯ ಅನೇಕ ಭಾಗಗಳಿಂದ ಸ್ವಜಾತಿ ಬಾಂಧವರು ಬಂದು ಸೇರಿದ್ದರು. ಜಾತಿಯ ಏಳಿಗೆಯ ವಿಷಯ ಪರ್ಯಾಲೋಚಿಸಿ ಯೋಗ್ಯ ಠರಾವುಗಳನ್ನು ನಿರ್ಣಯಿಸಲಾಯಿತು. ಈ ವರ್ಷದ ಅಧ್ಯಕ್ಷರಾಗಿ ಶ್ರೀ। ಅತ್ತಾವರ ಶಿವರಾಮರಾಯರನ್ನು ಜಿಲ್ಲಾ ಸೇವಾ ಸಂಘದ ಮುಂದಿನ ಅಧ್ಯಕ್ಷರನ್ನಾಗಿಯೂ ಶ್ರೀ ಯುತ ಬೇಂದ್ರ ಬೈಲು ಶಿವರಾಮರಾಯರನ್ನು ಉಪಾಧ್ಯಕ್ಷರನ್ನಾಗಿಯೂ ಶ್ರೀ। ಪಿ. ಕೆ. ನಾರಾಯಣರಾಯರನ್ನು ಕಾರ್ಯದರ್ಶಿಯಾಗಿಯೂ ಶ್ರೀ। ಕೊರಕೋಡು ಸೋಮನಾಥಯ್ಯನವರನ್ನು ಕೋಶಾಧ್ಯಕ್ಷರನ್ನಾಗಿಯೂ ಆರಿಸಲಾಯಿತು. ಸಂಘದ ಮುಖ್ಯ ಕಚೇರಿಯನ್ನು ಕಾಸರಗೋಡಿಗೆ ಒಯ್ಯುವದೆಂದು ನಿರ್ಣಯಿಸಲಾಗಿದೆ. ಇನ್ನು ಅಲ್ಲಲ್ಲಿ ಉಪ ಸಂಘಗಳೂ ಅವುಗಳ ಕಾರ್ಯನಿರ್ವಾಹಕ ಮಂಡಲಿಯೂ ನಿರ್ಮಿಸಲ್ಪಡಬೇಕಾಗಿದೆ. ಸ್ವಜಾತಿ ಬಾಂಧವರೆಲ್ಲರೂ ಸಹಕರಿಸಿ ಸಂಘದ ಪ್ರತಿಷ್ಠೆ ವೃದ್ಧಿಯನ್ನು ಹೆಚ್ಚಿಸುವುದರಲ್ಲಿ ಭಾಗಿಗಳಾಗಬೇಕೆಂಬುದಾಗಿ ವಿನಂತಿ.

CHAMPAE'S
SNOW & CASTREX
AGENTS.
SADANANDA STORES UDIPI

ದಕ್ಷಿಣ ಕನ್ನಡ.

ಮಂಗಳೂರು.

ಹೊಸ ಜಿಲ್ಲಾ ಜಡ್ಜರು:— ಜೂನ್ ೧ನೇರಿಂದ ನಮ್ಮ ಜಿಲ್ಲೆಯ ಸೆಷನ್ ಜಡ್ಜರಾಗಿ ಶ್ರೀ. ಸಿ. ಲಕ್ಷ್ಮೀನಾರಾಯಣ ಚೌಧುರಿ ಇವರು ಅಧಿಕಾರವಹಿಸುವರು.

ಬಡವರಿಗೆ ಅಕ್ಕಿ:— ಕಂಟ್ರೋಲುದರಕ್ಕಿಂತ ಕಡಿಮೆ ದರದಲ್ಲಿ ಬಡವರಿಗೆ ಮನೆಯೊಂದಕ್ಕೆ ೧ ಮುಡಿ ಅಕ್ಕಿಯಂತೆ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ಕೊಟ್ಟಿರುವರು. ಇದೇ ದರದಲ್ಲಿ ಬಂಟ್ವಾಳ, ಮೂಡುಬಿದ್ರೆ, ಬೆಳ್ತಂಗಡಿ, ಉಪ್ಪಿನಂಗಡಿ ಮುಂತಾದ ಊರುಗಳಲ್ಲಿ ಸಹಕಾರಿ ಸ್ಟೋರುಗಳ ಮೂಲಕ ಅಕ್ಕಿ ಹಂಚುವ ಏರ್ಪಾಡುವಾಗಿದ್ದು ಸ್ತುತ್ಯ.

ಬುದ್ಧ ಜಯಂತಿ:—ತಾ. ೧೯ರಲ್ಲಿ ಸ್ಥಳೀಯ ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಬುದ್ಧ ಜಯಂತಿಯು ಆಚರಿಸಲ್ಪಟ್ಟಿತು. ಶ್ರೀ. ಸಂಜೀವರಾಯರು ಅಧ್ಯಕ್ಷತೆ ವಹಿಸಿದ್ದರು. ಅನೇಕ ಮಾನ್ಯರ ಭಾಷಣಗಳಾದುವು. ಸಭೆಯ ಪ್ರಾರಂಭದಲ್ಲಿಯೂ ಅಂತ್ಯದಲ್ಲಿಯೂ ಸಂಗೀತವಿತ್ತು.

ಮುಷ್ಕರ:—ತಾ. ೧೭ ರಿಂದ ನಗರದ ಜೆ. ಸಿ. ಸಿಕ್ವೇರ ಕಾರ್ಖಾನೆಯಲ್ಲಿ ಮುಷ್ಕರ. ತಮ್ಮ ನ್ಯಾಯ ಒಪ್ಪ ಬೇಡಿಕೆಗಳನ್ನು ಮಾಲಕರು ಮನ್ನಿಸಲಿಲ್ಲವೆಂದು ಮುಷ್ಕರ ಹೂಡಿರುವರು.

ಮುನ್ಸಿಪಲ್ ಸಭೆ:—ತಾ. ೧೭ರಲ್ಲಿ ಮುನ್ಸಿಪಲ್ ಸಭೆಯು ಪುತ್ತೂರು ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಏರಲ ಶಾಂತಾರಾಮ ದೀಪಸ್ತಂಭವನ್ನು ಹಂಪನ ಕಟ್ಟೆಯಿಂದ ಬದಲಾಯಿಸಲು ಸಾಧ್ಯವಿಲ್ಲವೆಂದೂ ನಗರದ ಗಡಿಯಲ್ಲಿರುವ ಕದ್ರಿ ರೋಡನ್ನು ಅಗಲಗೊಳಿಸ ಬೇಕೆಂದೂ ಆಯಿತು. ಇತರ ಕೆಲವು ವಿಷಯಗಳನ್ನು ಚರ್ಚಿಸಿದ ಮೇಲೆ ಸಭಾಂತ್ಯವಾಯಿತು.

ರೇಶನಿಂಗ್ ವಿಚಾರ:—ಒಂದು ಮನೆಯಲ್ಲಿ ಸರಾಸರಿ ಮಂದಿಗೆ ಹತ್ತು ರೂಪಾಯಿಗಿಂತ ಕಡಿಮೆ ಸಂಪಾದನೆಯಿದ್ದರೆ ಮಾತ್ರ, ಅಂತಹರಿಗೆ ಅಕ್ಕಿ ಮೊದಲಾದ ಜೀವನಾವಶ್ಯಕ ವಸ್ತುಗಳ ರೇಶನಿಂಗ್ ಬಗ್ಗೆ ಕಾರ್ಡುಗಳನ್ನು ಕೊಡಬೇಕೆಂಬ ವಿಷಯದಲ್ಲಿ ಆಲೋಚನೆ ನಡೆಯುತ್ತಿದೆ. ಅಂದರೆ, ಒಬ್ಬನ ಮನೆಯಲ್ಲಿ ಆರು ಮಂದಿಯಿದ್ದು, ಪೋಷಕನ ದುಡಿತ ತಿಂಗಳಿಗೆ ರೂ ೬೦ಕ್ಕಿಂತ ಕಡಿಮೆಯಿದ್ದರೆ, ಅಂತಹ ಮನೆಗೆ ರೇಶನಿಂಗ್ ಕಾರ್ಡ್ ಕೊಡಲಾಗುವುದು.

ಹವೆ:—ಮಳೆಯಾರಂಭವಾದಂತಿದೆ. ಎರಡು ಮೂರು ದಿನಗಳಿಂದ ಚೆನ್ನಾಗಿ ಮಳೆಯಾಗಿದೆ.

ಅಧ್ಯಕ್ಷಗಿರಿಗೆ ಉಮೇದ್ವಾರರು

ಡಾಕ್ಟರ ವಿಠ್ಠಲ ಶೆಟ್ಟರ ನಿಧನದಿಂದ ಖಾಲಿಬಿದ್ದ ಜಿಲ್ಲಾ ಬೋರ್ಡಿನ ಅಧ್ಯಕ್ಷ ಚುನಾವಣೆಗೆ ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರೂ ವಿ. ಮಾಣಿಕಬ್ಬನವರೂ ಉಮೇದ್ವಾರರಾಗಿರುವರೆಂದು ತಿಳಿದು ಬರುತ್ತದೆ. ತಾನು ತಿಳಿದ ಮಟ್ಟಿಗೆ ಇವರೀರ್ವರೂ ಕಾಂಗ್ರೆಸ್ ಟಿಕೇಟಿನಿಂದ ಜಿಲ್ಲಾ ಬೋರ್ಡು ಮೆಂಬರರಾದವರು. ಆದ್ದರಿಂದ ಅವರಲ್ಲಿ ಅಧಿಕೃತ ಕಾಂಗ್ರೆಸ್ ಉಮೇದ್ವಾರರಾರೆಂದು ತಿಳಿಯಲಪೇಕ್ಷಿಸುತ್ತೇನಾಗಿಯೂ ಜಿಲ್ಲಾ ಕಾಂಗ್ರೆಸ್ ಕಮಿಟಿಯಾಗಲೀ ಉಮೇದ್ವಾರರಾಗಲಿ ಯಾ ಇತರ ಆಸಕ್ತಿಯುಳ್ಳ ಮಾನ್ಯರಾಗಲೀ ಜಿಲ್ಲಾ ಬೋರ್ಡು ಸದಸ್ಯರಲ್ಲಿರುವ ಈ ಸಂದೇಹವನ್ನು ನಿವಾರಿಸುವರೆಂದು ನಂಬುವೆನೆಂದೂ ಜಿಲ್ಲಾ ಬೋರ್ಡು ಸದಸ್ಯರೊಬ್ಬರು ಬರೆಯುತ್ತಾರೆ.

ಉಡುಪಿ

ಟ್ಯುನಿಸಿಯಾ ದಿನಾಚರಣೆಯು ತಾ 21ರಲ್ಲಿ ನಡೆಯಿತು. ಆ ದಿನ ಬೆಳಗ್ಗೆ ಶಾಲಾ ಮಕ್ಕಳ ಮತ್ತು ಇತರರ ಮೆರವಣಿಗೆಯಾಗಿ ಮಧ್ಯಾಹ್ನ ತಾಲೂಕು ಕಚೇರಿಯಲ್ಲಿ ಬಡವರಿಗೆ ಅಕ್ಕಿ ಹಂಚಲಾಯಿತು. ಸಂಜೆ ಮುನಿಸಿಪಲ್ ಮೈನ್ ಶಾಲೆಯಲ್ಲಿ ಸಾರ್ವಜನಿಕ ಸಭೆಯು ವಿ. ಎ. ಎಸ್. ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಕಲ್ಕೂರರು ಸಂದರ್ಭೋಚಿತ ಭಾಷಣ ಮಾಡಿದರು.

ಭಾಷಣ:—ಮದ್ರಾಸು ಪ್ರೆಸಿಡೆನ್ಸಿ ಕಾಲೇಜಿನ ಪ್ರಧಾನ ಕನ್ನಡ ಪಂಡಿತರಾದ ಶ್ರೀ. ಟಿ. ಸೀತಾರಾಮಾಚಾರ್ಯರು 'ಶ್ರೀಮದ್ಭಗವದ್ಗೀತೆಯ ಲೋಕಪ್ರಿಯತೆ' ವಿಷಯ ವನ್ನೆತ್ತಿ ತಾ 22ರಲ್ಲಿ ಭೋಜನಶಾಲಾ ಮಾಳಿಗೆಯಲ್ಲಿ ಪರ್ಯಾಯ ಶ್ರೀ ಕೃಷ್ಣಾಪುರ ಸ್ವಾಮಿಗಳವರ ನೇತೃತ್ವದಲ್ಲಿ ಶ್ರೀ ಸೋದೆ ಸ್ವಾಮಿಗಳವರ ಉಪಸ್ಥಿತಿಯಲ್ಲಿ ಬೋಧಪ್ರದ ಭಾಷಣವಿತ್ತರು.

ನಿಷೇಧಾಜ್ಞೆ:—ತಾ 18—5—43ರಿಂದ ಒಂದು ತಿಂಗಳು ತನಕ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಭೆ ಮೆರವಣಿಗೆಗಳಿಗೆ ನಿಷೇಧ ವಿರುವುದಾಗಿ ಜಿಲ್ಲಾ ಕಲೆಕ್ಟರರ ಆಜ್ಞೆ ಹೊರಟಿರುವುದು. ಸಾಮಾಜಿಕ ಮತ್ತು ಧಾರ್ಮಿಕ ಮೆರವಣಿಗೆ, ಕೂಟಗಳಿಗೆ ಮಾತ್ರ ಈ ಆಜ್ಞೆಯು ಲಗಾವಾಗುವುದಿಲ್ಲ.

ತಾ 16—5—43ರಲ್ಲಿ ಸೇರಿದ ಉಡುಪಿ ತಾಲೂಕು ಎಡ್ವೈಸರಿ ಕಮಿಟಿಯ ಸಭೆಯಲ್ಲಿ ದವಸಧಾನ್ಯಗಳ ಬೆಲೆಯು ಈ ತರನಾಗಿ ನಿಶ್ಚಯಿಸಲ್ಪಟ್ಟಿರುತ್ತದೆ. ಮಸ್ಕತಿ ಅಕ್ಕಿ ಸೇರಿಗೆ 0-3-6 ಸಗ್ಗಿ 0--3-3 ಊರ ಬೆಳ್ತಿಗೆ 0-4-6; ಬೆಲ್ಲ 0-1-10 ಉಂಡೆ 0-2-1; ದೇಶೀ ಸಕ್ಕರೆ 0--3--8; ರಾಗಿ 0--3--8; ಉಪ್ಪು 0--1--1; ಗಾಟಿಮೆಣಸು 0--5--0; ಊರಿದ್ದು 0--4--7; ತೆಂಗಿನೆಣ್ಣೆ ಕುಪ್ಪಿಗೆ 0--2--6; ಎಳ್ಳೆಣ್ಣೆ 0--2-6; ಬೆಂಕಿಪೆಟ್ಟಿಗೆ (50ಕಡ್ಡಿ) 0--0--6; (60ಕಡ್ಡಿ) 0--0-9; ಗೋಧಿ ಸೇರಿಗೆ 0 6--0; ಬೊಂಬಾಯಿ ಗೋಧಿಹುಡಿ 0--9--0; ಉದ್ದು 0--5 -6; ಸಜ್ಜಿಗೆ 0-7 0 ಮೈದಾ 0-8-0; ಚಿಮಿಣಿಎಣ್ಣೆ ಬಾಟ್ಲಿ 1ಕ್ಕೆ (ಬಿಳಿ) 0-3 0; (ಕೆಂಪು) ಬಾಟ್ಲಿ 1ಕ್ಕೆ 0-2 8 ಹುರುಳಿ ಸೇರು ಒಂದರ 0-4-2.

ನಗರದ ವ್ಯವಹಾರ ಕ್ಷೇತ್ರದಲ್ಲಿ ಜನರು ತಮ್ಮ ದನಕರುಗಳನ್ನೂ ಆಡುಗಳನ್ನೂ ತಿರುಗಾಡಲು ಬಿಡುತ್ತಿರುವುದು ಪಬ್ಲಿಕ್ ಹೆಲ್ತ್ ಆಕ್ಟು ಮತ್ತು ವಾಹನ ಸಂಚಾರಗಳ ದೃಷ್ಟಿಯಿಂದ ಆಕ್ಷೇಪಕರವಾದ್ದರಿಂದ ಮುನಿಸಿಪಲ್ ಅಧಿಕಾರಿಗಳು ಅಡ್ಡಾಡಿ ದನಕರುಗಳೇ ಮೊದಲಾದುವನ್ನು ಹಿಡಿದು ದೊಡ್ಡಿಗೆ ಕೊಂಡೊಯ್ಯುತ್ತಿದ್ದಾರೆ.

ಅಕಾಲವೃಷ್ಟಿ:—ಈ ತಿಂಗಳ ಪ್ರಾರಂಭದಲ್ಲಿ ವಿಶೇಷ ಸೆಖೆ ಇದ್ದು ಕಳೆದ ವಾರ ಈ ವಾರದಲ್ಲಿ ಜಿಲ್ಲೆಯಲ್ಲೆಲ್ಲಾ ವಿಶೇಷ ಮಳೆ ಬಂದಿರುತ್ತದೆ. ಅಲ್ಲಲ್ಲಿ ನೆರೆಯಾಗಿದೆ ಯೆಂದೂ ತಿಳಿದು ಬರುತ್ತದೆ. ಹಲವು ಕಡೆ ಕಟ್ಟಡಗಳು ಕುಸಿದು ಬಿದ್ದಿವೆ. ಗದ್ದೆಗಳೆಲ್ಲಾ ಅಕಾಲದಲ್ಲಿ ನೀರಾಗಿ ನೇಜಿ ಹಾಳಾಗಿದೆ. ಇದರಿಂದ ಬರುವ ಪೈರಿಗೆ ತುಂಬ ತೊಂದರೆಯಾಗಬಹುದು. ತಾ 25ರಿಂದ ಸ್ವಲ್ಪ ಸ್ವಲ್ಪ ಬಿಸಿಲು ಕಾಯುತ್ತಿದೆ.

ಕೆಮ್ಮಣ್ಣು:—ಇಲ್ಲಿಯ ಹಾ ಎ.ಬಿ.ಲಿಯ ಹಳೆಯ ವಿದ್ಯಾರ್ಥಿ ಸಂಘದ ದ್ವಿತೀಯ ವಾರ್ಷಿಕೋತ್ಸವವು ತಾ 23ರಲ್ಲಿ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನೆರವೇರಿತು. ಪೂರ್ವಾಹ್ನ ಸಂಘದ ಮಹಾಸಭೆ, ಕಾರ್ಯಕಾರಿ ಮಂಡಳಿಯ ಚುನಾವಣೆ, ಉಪಹಾರಕೂಟ, ಇವು ನಡೆದುವು. ಸಾಯಂಕಾಲ ಅಧ್ಯಕ್ಷರನ್ನು ಸ್ವಾಗತಿಸಿ ಉತ್ಸವಾರಂಭವಾಯಿತು. ಕಾರ್ಯದರ್ಶಿ ಶ್ರೀ ವೆಂಕಟೇಶ ಪೈ ವಿದ್ವಾನ್ ಇವರಿಂದ ವರದಿವಾಚನ, ಶ್ರೀ ಟಿ. ಕೆ. ಶ್ರೀನಿವಾಸರಾಯರಿಂದ ಸ್ವಸ್ತಿವಾಚನ ಶ್ರೀ ಟಿ ಎಲ್ ಉಡುಪರಿಂದ ಸಭಿಕರಪರವಾದ ಭಾಷಣ, ಅಧ್ಯಕ್ಷರ ಭಾಷಣ ಮುಂತಾದ ಯಥೋಚಿತ ಕಾರ್ಯಕಲಾಪಗಳಾದ ಬಳಿಕ ಕೀರ್ತನ ಭೂಷಣ ಶ್ರೀ ಹಂಡೆ ಶ್ರೀಪಾದ ದಾಸರು ಸುಧಾಮ ಚರಿತ್ರೆಯನ್ನೆತ್ತಿ ಹರಿಕಥಾ ಕಾಲಕ್ಷೇಪ ಮಾಡಿದರು. ರಾತ್ರಿ ಪಾಂಡೇಶ್ವರ ಯಕ್ಷಗಾನ ಕೂಟದವರಿಂದ ಕೃಷ್ಣಸಂಧಾನ ಯಕ್ಷಗಾನವಾಯಿತು. ಕೊನೆಗೆ ಅಧ್ಯಕ್ಷರು ಯಕ್ಷಗಾನ ಸುಧಾರಣೆಯ ಕುರಿತು ಮಾತನಾಡಿದರು.

An Appeal to your Reason.

It is not the one who goes-it is those who are left behind who suffer. Why leave them to their fate? Why leave them to adjust their Whole lives to a reduced level because YOU lived "for the day?" Safeguard those who are near and dear to you-by insuring with a Company, which is "YOUR OWN".

INSURE that YOUR children may be equipped to take their rightful places in the world.

INSURE that YOUR wife shall not be destitute, by your loss, in a manner you never meant her to be.

Above all, make sure that in your old age you are adequately provided for.

REMEMBER

THERE IS INSURANCE FOR ALL EVENTUALITIES AND POLICIES ISSUED TO SUIT ALL POCKETS. INSURE TODAY WITH

THE INDO-UNION ASSURANCE Co. Ltd., MADRAS.

PLEASE ASK FOR DETAILS FROM:

M. Sunderram Shetty,
Branch Manager,
Behramji Mansion,
Phirozshah Metha Road,
Fort BOMBAY.

OR

K. S. Ramamurthi, M. A.,
General manager,
MADRAS.

OR

Our following organisers in South Kanara.

A. Karunakara Hegde,
Sudarshan Tile Works,
Bolar, MANGALORE.

2. **T. P. N, Nambiar,**
Main Road.
MULKI.

K. Jagannath Shetty,
Near Mission Hospital, UDIPI.

4. **K. Sanjiva Hegde,**
COONDAPOOR.

ಚೂರುಚೂರು

'ನಾವು ಭಾರತದ ಜವಾಬ್ದಾರಿಯನ್ನು ಬಿಟ್ಟು ಬಂದರೆ, ಅಲ್ಲಿಯೇಳುವ ಗೊಂದಲಗಳ ನೈತಿಕ ಹೊಣೆಗಾರಿಕೆ ನಮ್ಮ ಮೇಲೇನೇ ಬೀಳುತ್ತದೆ; ನಾವೆಂದರೆ ೪೦೦ ಮಿಲಿಯ ಜನರ ಟ್ರಸ್ಟಿಗಳು'—ಲಂಡನಿನ ಕನ್ಸರ್ವೇಟಿವ್ ಪಕ್ಷದ ಪರಿಷತ್ತಿನಲ್ಲಿ ಕೆಪ್ಟನ್ ಗೋಡ್‌ಫ್ರೆನಿ ಲೋಲ್ಸನ್ನರ ಭಾಷಣ.

ನಿಜ! ಭಾರತದಲ್ಲಿರುವಾಗ ಬ್ರಿಟಿಷರು ಮಾಡುವ ಗೊಂದಲಗಳ ಹೊಣೆಗಾರಿಕೆಯನ್ನೆಲ್ಲಾ ಅನ್ಯರ ಮೇಲೆ ಹಾಕಲಾಗುತ್ತದೆ!

O

ಜರ್ಮನಿಯ ಎರಡು ದೊಡ್ಡ ಅಣೆಕಟ್ಟುಗಳನ್ನೊಡೆದ ಬ್ರಿಟಿಷ್ ವಿಮಾನಗಳು ಸಾರ್ಡಿನಿಯಾ ಅಣೆಕಟ್ಟನ್ನೂ ಒಡೆದು ನೆರೆ ಹಾವಳಿಯೆಬ್ಬಿಸಿದ ರೋಮಾಂಚಕರ ವಾರ್ತೆ ಬಂದಿದೆ.

ಇಟಲಿ, ಜರ್ಮನಿಗಳಲ್ಲಿ ನೀರು ಹರಿಯಿಸಿ ಮುಗಿದೊಡನೆಯೇ, ಈ ವಿಮಾನಗಳನ್ನು ನಮ್ಮಲ್ಲಿಯ ಒಂದು ನಗರ ಸಭೆಗೊಂದರಂತೆ ಕಳುಹಿ ಕೊಡುವ ಉಪಕಾರವಾದೀತೇ?-ನೀರು ಕಾಣದೆ ನಗರಗಳು ಹಾಳಾಗಿವೆ!

O

ಭಾರತದಲ್ಲಿ ಛಡಿ ಶಿಕ್ಷೆಗೊಳಗಾದವರ ಸಂಖ್ಯೆಯೆಷ್ಟೆಂದು ಪ್ರಶ್ನಿಸಿ ಮಿ ಅಮೆರಿಯವರಿಂದ ಉತ್ತರ ದೊರೆಯದ ಮೇಲೆ "ಇಂತಹ ಶಿಕ್ಷೆಯ ಕಾನೂನನ್ನು ಇಂಗ್ಲಾಂಡಾದರೆ ಸಹಿಸಿಕೊಂಡಿರುತ್ತಿತ್ತೆ?"- ಎಂದು ಮಿ. ಸೋರೆನ್ಸನ್ನರ ಪ್ರಶ್ನೆ.

ಇದು ಮಿ. ಅಮೆರಿಯವರ ಸಹಿಸಿಕೊಂಡ ಛಡೀ ಹೊಡೆತವಲ್ಲವೆ?

O

ಹಿಂದೀಯ ನಾಲ್ಕನೇ ಸೇನೆಯ ಪ್ರಮುಖರನ್ನೆಲ್ಲಾ ಲಂಡನಿಗೆ ಆಮಂತ್ರಿಸಿ ಅವರನ್ನು ಯೋಗ್ಯ ರೀತಿಯಲ್ಲಿ ಗೌರವಿಸಬೇಕೆಂದು ಮಿ. ಅಮೆರಿಯವರನ್ನು ವಿನಂತಿಸಿಕೊಳ್ಳಲಾಗಿದೆ. ಈ ಕುರಿತು ತಾನು ಯುದ್ಧ ಮಂತ್ರಿಯೊಡನೆ ವಿಚಾರಿಸುವೆನೆಂದೂ ಆದರದು ಯುದ್ಧ ಪ್ರಯೋಗಗಳನ್ನು ಅವಲಂಬಿಸಿದೆಯೆಂದರೂ ಮಿ. ಅಮೆರಿಯವರ ಉತ್ತರ.

ಪ್ರಾಯಶಃ ಇಂಗ್ಲಾಂಡಿನ ಮೇಲೆ ಧಾಳಿಯ ಪ್ರಯೋಗ ನಡೆದರೆ ಹಿಂದೀಯ ನಾಲ್ಕನೇ ಸೇನೆಯನ್ನು ಅತ್ತ ಆಮಂತ್ರಿಸಲಾಗುವುದೆಂಬ ಅರ್ಥವೇನೋ!

O

ಬೇಕಾಗಿದ್ದಾರೆ.

ಇನ್ನಂಜೆ ಶ್ರೀ ವಿಷ್ಣುಮೂರ್ತಿ ಹೈಸ್ಕೂಲಿಗೆ ಬಿ.ಎ ಎಲ್. ಟಿ. ಯ ಒಬ್ಬ ಉಪಾಧ್ಯಾಯರೂ ಸೆಕೆಂಡರಿ ಗ್ರೇಡಿನ ಇಬ್ಬರು ಉಪಾಧ್ಯಾಯರೂ, ಒಬ್ಬ ಡ್ರಾಯಿಂಗ್ ಮಾಸ್ತರರೂ ಒಬ್ಬ ಡ್ರಿಲ್ ಮಾಸ್ತರರೂ ಒಬ್ಬ ಕನ್ನಡ ಪಂಡಿತರೂ ಬೇಕಾಗಿದ್ದಾರೆ. ಉಮೇದುವಾರರು ಯಾವತ್ತು ವಿವರಗಳಿಗೆ ಇದೇ ಮೇ ತಾ. ೨೪ರೊಳಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಕೊಳ್ಳತಕ್ಕದ್ದು.

"ಮ್ಯಾನೇಜರ್, ಇನ್ನಂಜೆ ಶ್ರೀ ವಿಷ್ಣುಮೂರ್ತಿ ಹಾಯರ್ ಎಲಿಮೆಂಟರಿ ಸ್ಕೂಲ್, ಶಾಸು ಪೋಸ್ಟು ಉಡುಪಿ ತಾಲೂಕು ದಕ್ಷಿಣ ಕನ್ನಡ ಜಿಲ್ಲಾ".

ಸಾಬಾಜಿ ಶ್ರೀನಿವಾಸಾಚಾರ್ಯ.

ಕರೆಸ್ಪಾಂಡೆಂಟ್

ಉಡುಪಿ, ತಾ- 10—5—'43.

"ಯುದ್ಧಾದಿಯಲ್ಲಿ ಕಂಡು ಬರುತ್ತಿದ್ದ ಸೋಲು ಮೋರೆ ಮತ್ತು ನಿರಾಶೆಯ ಮಾತು ಕತೆಗಳು ಈಗಿಲ್ಲ. ಈಗ ಎಲ್ಲರ ಹೃದಯದಲ್ಲಿಯೂ ಭರವಸೆ, ಮುಖದಲ್ಲಿ ನಗೆ ಕಂಡುಬರುತ್ತಿದೆ'—ಟ್ಯುನಿಸಿಯಾ ದಿನಾಚರಣೆಯ ಸಂದರ್ಭದಲ್ಲಿ ಮದ್ರಾಸ್ ಗವರ್ನರರ ಮಾತು.

ಗವರ್ನರರ ಕಣ್ಮುಂದೆ ಟ್ಯುನಿಸಿಯಾ ದಿನದ ಮಿಠಾಯಿ ತಿಂದ ಹುಡುಗರ ತಂಡವೇ ಇದ್ದಿರಬಹುದೆ?

O

-ಜಪಾನನ್ನು ಸೋಲಿಸಿದರೆ ಜರ್ಮನಿಯನ್ನು ಸೋಲಿಸಿದಂತಾಗದು; ಆದರೆ ಜರ್ಮನಿಯನ್ನು ಸೋಲಿಸಿದರೆ ಜಪಾನಿನ ಪತನ ಸಿದ್ಧಿಸುವದು'—ಅಮೇರಿಕದ ಪ್ರತಿನಿಧಿ ಸಭೆಯ ಮುಂದೆ ಚರ್ಚಿಲ್ಲರ ಭಾಷಣ.

ಹೀಗಿದ್ದ ವೇಳೆ ಜರ್ಮನಿಯನ್ನು ಸೋಲಿಸುವದನ್ನು ಕಣ್ಣು ಬಿಟ್ಟು ನೋಡುತ್ತಾ ಜಪಾನು ಅಳುತ್ತಾ ಕುಳಿತುಕೊಳ್ಳಬಹುದು!

O

ಸಾಮಾಗ್ರಿಗಳ ಅಭಾವದಿಂದಾಗಿ ಜರ್ಮನಿಯಲ್ಲಿ ಯು. ಬೋಟು ತಯಾರಿ ಕೆಲಸ ಹಿಂದೆ ಬಿದ್ದಿದೆ—ಎಂದು ಮಿತ್ರರಿಗೆ ವಾರ್ತೆ ಬಂದಿದೆಯಂತೆ.

ಇನ್ನು ಮುಂದೆ ಮಿತ್ರರ ಹಡಗಗಳೊಡೆದ ವಾರ್ತೆ ಬಾರದಿದ್ದರೆ ವಾರ್ತಾ ದೋಷವನ್ನು ದೂರಲಾರಿರಷ್ಟೆ?

—ವಿನೋದಿ.

ಸುದ್ದಿಯಿದೆ— ಸುಳ್ಳೇನೋ!

× ದಕ್ಷಿಣ ಕನ್ನಡದ ಸ್ಥಳೀಯ ಸಂಸ್ಥೆಗಳಲ್ಲಿ ರಾರಾಜಿಸುವವರೊಬ್ಬರು ಒಂದು ಧಾರ್ಮಿಕಾಡಳಿತ ಸಂಸ್ಥೆಯಸಂಬಂಧದ ಫೋರ್ಜರಿಆರೋಪದಲ್ಲಿ ಸೇರಿಕೊಂಡು ಈಗ ವಿಶೇಷ ಪೇಚಾಟದಲ್ಲಿಬಿದ್ದಿರುವರಂತೆ.

× ಜಿಲ್ಲಾ ಬೋರ್ಡು ಸದಸ್ಯತನಕ್ಕೆ ರಾಜೀನಾಮೆ ಕೊಟ್ಟಿದ್ದವರೊಬ್ಬರು ಈಗ ಅಧ್ಯಕ್ಷಸ್ಥಾನ ಖಾಲಿಬಿದ್ದುದನ್ನು ನೋಡಿ ತನ್ನ ಅಂದಿನ ತಪ್ಪಿಗಾಗಿ ಪಶ್ಚಾತ್ತಾಪಗೊಂಡು ಒಂದುದಿನ ಉಪವಾಸಮಾಡಿದರಂತೆ.

× ಸೈನಿಕರ ಮನೋರಂಜನೆಗಾಗಿ ಇರುವ ಕೇಳೀ ಗೃಹಗಳನ್ನಲಂಕರಿಸಲು, ಗಣಿಕೆಯನ್ನು ಯಾಚಿಸುವ ವಿನರಂತಿಗಳು ಸದ್ಯದಲ್ಲೇ ಹೊರಡಬಹುದಂತೆ.

× ಹಿಂದೂ ಸ್ತ್ರೀಯರಿಗೆ ಆಸ್ತಿಯಲ್ಲಿ ಸಮಪಾಲು ಕೊಡುವ ಮಸೂದೆ ಬಂದಂತೆಯೇ ಸ್ಥಳೀಯ ಸಂಸ್ಥೆಗಳ ಸ್ಥಾನಗಳಲ್ಲಿ ಸ್ತ್ರೀಯರಿಗೆ ಸಮ ಪಾಲಿರುವಂತೆ ತಿದ್ದುಪಡಿ ರಚಿಸುವಂತೆ ಸರಕಾರವನ್ನು ಕೇಳಿಕೊಳ್ಳುವ ವಿಜ್ಞಾಪನೆಯೊಂದನ್ನು ಕೆಲವು ಮಹಿಳೆಯರು ತಯಾರಿಸುತ್ತಿದ್ದಾರಂತೆ.

× ಉಡುಪಿಯ ಪ್ರಯಾಣಿಕರು ಬಸ್ಸು ಹತ್ತಬೇಕಾದರೆ ಚತುರ್ವಿಧೋಪಾಯಗಳಿಂದ ಏಜಂಟರನ್ನು ಒಲಿಸಿಕೊಂಡರೇನೇ ಸಾಧ್ಯವಂತೆ.

× ಉಡುಪಿ ಖಜಾನೆಯೆಂಬ ನಿಧಿಗೆ ಅಲ್ಲಿಯ ಕಾವಲುಗಾರನು ಘಟಸರ್ಪದಂತಿದ್ದು ಅವನನ್ನು ಮಂತ್ರತಂತ್ರಗಳಿಂದ ಒಲಿಸದ ವಿನಹಾ ಖಜಾನೆಯೊಡನೆ ವ್ಯವಹಾರ ಸುಲಭವಲ್ಲವಂತೆ.

× ಸಕ್ಕರೆ ಕೇಳುವ ವ್ಯಾಪಾರಿಗಳೇ ಮೊದಲಾದವರಿಗೆ 'ಸಹಾಯಮಾಡಿದರ ಸಕ್ಕರೆ ಹಂಚುವೆವು.' ಎಂದು ಅಧಿಕಾರಿಗಳು ಬಾಯಿ ಬಿಟ್ಟೇ ಹೇಳುತ್ತಾರಂತೆ.

The Passing of Dr. Vittal Shetty.

(By a Roman Catholic Admirer)

The sad and soul searing news of the sudden demise of Dr. K. Vittal Shetty has, naturally enough, cast a dark shadow over many hearths and homes, especially as the dreaded blow fell with tragic swiftness. A promising life, whose potentialities, possibilities and achievements are not easy to estimate, a masterful personality, which was an inspiration to many a youngman, a career of service, the spirit and splendour af which seem to be difficult to describe, a heart rich in sterling qualities, and a master head, whose unequalled energy has been a marvel to *multitudes of men, are all now stilled in untimely death.* The hero of a hundred fights and victories, the idol of masses, the matchless master, the benevolent administrator, the architect of several beneficient schemes, and the originator of not a few public institutions has gone, alas too soon, to his eternal reward. Calm, capable, cultured, courteous, courageous and so magnificent in his role as the President of the District Board, he lent all the energies of his heart and head in raising and placing our district on a pedestal of position, progress, popularity and prominence, despite the trials of the times and the differences and dissensions of democracy. His premature passing has created a void in the public life of the district which, to say the least may not be easy to fill efficiently.

As President of the District Board, he entered upon a bold policy of construction, consolidation and expansion. We have it on unquestionable authority that he raised the efficiency of the administration of the District Board to the superlative. He was always busy visiting the malaria ridden regions of the District, caring for the underdog, climbing excursions to the north to redress the grievances of the poor people even during the heavy monsoon months, and touring the ghat sections and forest parts opening new roads, bridges, schools, dispensaries etc. While he was the sheet anchor of the subordinates under him, he was ever forging newer stronger, worthier and happier ties of followship and friendship among the various communities of our District, in a masterly manner earning their ever enduring gratitude. It is not everyone that could bend the bow of Ulyses and wear the mantle of Elizah too, but Dr: Vittal Shetty could do both these with ease a· · grace.

If the District owes him far more than words could express, Mangalore's debt to him is equally great. As its Chairman he was in a large measure responsible for the improvements that have been effectedt here-improvements that strike the eye, please the mind and gladden the heart Whether as President, Chairman, member of Senate or simple citizen, sincere, selfless service was his motto the essence of his existance. He laboured unceasingly unto the last to better the low, languid lot of his fellowmen. Consequently his monument deserves to be decorated with the lovely laurels of gratitude and perfumed with the ever fresh fragrance of attachment, affection and friendship,

The world has a way of honouring its heroes, bowing before the mighty, applauding the clever, admiring the fortunate, adoring the great, envying the successful, deifying the elect but it loves only the stout-hearted stalwarts of Dr. Shetty's stamp. In life he served us well and worthily, in death should we not remember him as he deserves to be remembered?

In the fitness of things, and as a matter of duty also. it is hoped that the leaders of the various communities will come together and cooperate in raising a fitting memorial to our illustrious dead. Let us confer upon him the praise that grows not old, and leave him to the mercy of God whom he served by serving his fellowmen. We may be sure that his good and altristic acts will await his arrival at the gates of heaven. May he enter Paradise and enjoy its peace!

UDIPI }
19th May '43 }

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

ಮುಖ್ಯ ಕಾರ್ಯಾಲಯ:— ಕೋರ್ಟು ರಸ್ತೆ, ಉಡುಪಿ, ದಕ್ಷಿಣ ಕನ್ನಡ.

ಶಾಖೆಗಳು— ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಕಿನ್ನಿಗೋಳಿ.

ಮುಸುಂ ಠೇವಣಾತಿಗಳು ತಾ. 31-7-1943 ಅಥವಾ ಆ ತಾರೀಕಿನ ಮೊದಲು ಮ್ಯಾದೆಯಾಗುವುದಾದರೆ ಅಂಥಾ ಮ್ಯಾದೆಯ ವರೆಗೆ ಸಾಲಿಯಾನ ಶೇಕಡಾ 3ರ ವರೆ ಬಡ್ಡಿಯಲ್ಲಿ 3, 4, 5 ಅಥವಾ 6ತಿಂಗಳ ಮ್ಯಾದೆಯಿಂದ ಪ್ರತಿಯೊಂದು ಶಾಖೆಯಲ್ಲಿ ಅಂಗೀಕರಿಸಲ್ಪಡುತ್ತವೆ.

ಬೇಂಕಿನ ಪ್ರತಿಯೊಂದು ವಿಧದ ವಹಿವಾಟುಗಳು ನಡೆಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ಮುಖತಾ ಅಥವಾ ಪತ್ರದ್ವಾರಾ ಸಮೀಪದ ಶಾಖೆಯಲ್ಲಿ ದಯವಿಟ್ಟು ವಿಚಾರಿಸಿರಿ

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷಮುಂತಾದ ಜೇನು, ಪಕ್ಷವಾತ, ಮೂಲವು ನೂರ ಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ,

REGD.

ಮುಲಾಮು ಮದ್ದು ಸಹ ಪಟ್ಟಣಗಳಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತ.

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisseri.

ಇದರಿಂದ ಸಮಸ್ತ ಜನರಿಗೆ ತಿಳಿಯ ಪಡಿಸುವುದೇನೆಂದರೆ—

ಪರಸಿನಿ ಕಡವು ದೇವಸ್ಥಾನದಿಂದ ಈ ಮೂಲಕ ಮಾಡುವ ವಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುನ್ಹಿರಾಮನ್,
ಮೆನೇಜರ್.

ನವಯುಗದ ಹೊಸ ಚಂದಾದರ

ಕಾಗದದ ಅಭಾವ ಹಾಗೂ ಸರಕಾರದ ಹೊಸ ಆಜ್ಞೆ ಯಂತೆ ಇದೇ ಎಪ್ರಿಲ್ ತಾ. 1ರಿಂದ ನವಯುಗದ ಬಿಡಿ ಸಂಚಿಕೆಯ ಬೆಲೆಯನ್ನು 0-1-6ಗೆ ಏರಿಸಲಾಗಿದೆ. ಜಾಹೀರಾತಿನ ದರವನ್ನೂ ಹೆಚ್ಚಿಸಲಾಗುವುದು. ವಾರ್ಷಿಕ ಚಂದಾ ದರವನ್ನು ಈ ಕೆಳಗಿನಂತೆ ಗೊತ್ತು ಮಾಡಲಾಗಿದೆ. ಈಗಿದ್ದ ಚಂದಾದಾರರಿಗೆ ಮಾರ್ಚ ಅಂತ್ಯದ ವರೆಗೆ ಹೊದಲಿನಂತೆ ಚಂದಾ ದರ ಹಿಡಿದು ಉಳಿದ ಹಣದಲ್ಲಿ ಹೊಸ ದರದಂತೆ ಎಷ್ಟು ಸಮಯ ಕಳಿಸಬಹುದೋ ಅಷ್ಟು ಅವಧಿಯ ವರೆಗೆ ಪತ್ರಿಕೆ ಕಳಿಸಲಾಗುವುದು. ಚಂದಾ ಬಾಕಿ ಇರುವವರು ಮಾರ್ಚ ತನಕ ಮೊದಲಿನ ದರದಂತೆಯೂ ಆನಂತರ ಹೊಸ ದರದಂತೆಯೂ ಚಂದಾ ಹಣ ಕಳಿಸುವಂತೆ ವಿನಂತಿ

ಹೊಸ ಚಂದಾದರ

	ಸ್ಥಳೀಕರಿಗೆ	ಪರಸ್ಥಳೀಕರಿಗೆ ಅಂಚೆ ವೆಚ್ಚ ಸೇರಿ
1 ವರ್ಷಕ್ಕೆ ರೂ.	3-12-0	4-8-0
6 ತಿಂಗಳಿಗೆ ರೂ.	2-0-0	2-8-0

ಎಂದಿನಂತೆ ವಾಚಕರೂ ಜಾಹೀರಾತುದಾರರೂ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಮೆನೇಜರ್.

— ಮಕ್ಕಳನ್ನು ಹಡೆಯುವದು ಸಾಕು,—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ 1 ಗುಳಿಗೆ, ಮಧ್ಯಾಹ್ನಕ್ಕೆ 1 ಗುಳಿಗೆ, ಸಂಜೆಗೆ 1 ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲೆ ಬಿಡಬೇಕು. 7 ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಷ್ಟ ಚಾರ್ಜ ನಿರಾಳ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ.—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ:—ಕುಂಬರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

The Moolky Bank, Ltd.,

MOOLKY, S. K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager

ಯಂ. ಆರ್. ಪುಂಜ, ಪ್ರೆಸಿಡಂಟ್ ಮತ್ತು ಮೆನೇಜರ್.

ನವಜೀವಾತು ಎಂಬ **ಸೂತಿಕಾ ರಸಾಯನ** (ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿಷ್ಕರ್ಷಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಆ ಔನ್ಸಿನ 2 ಬಾಟ್ಲಿಗಳು ಹೆಚ್ಚು ಕಡಿಮೆ 10 ದಿವಸಗಳಿಗೆ ಬರುವವು, ಅಂದರೆ ಕೇವಲ 1 ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದಕ**

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸದೊರೆಯ ಬೇಕೋ?

ಸುಖನಿವಾಸಕ್ಕೆ ಬನ್ನಿ!

ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,

ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರವಾಸಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ. : : : : ಮಂಗಳೂರು.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ನಿಮಗೆ ಬೇಕೆಂದರೆ

ರಥಬೀದಿಯ

ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

EDITED, PRINTED & PUBLISHED BY ... AT THE NAVAYUGA PRESS, UDIPI, S. India.

Regd. No. M. 3618.

Ested.: 1921 ಸ್ಥಾಪನೆ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೩ ಸಂಚಿಕೆ ೩೭

FOUNDER Sri. A. B. Shetty, M. L. A.

Vol. 23 No. 37

NAVAYUGA— Kannada Weekly —UDIPI, S. I.

ಉಡುಪಿ ● 3-6-1943 ● ಮಂಗಳೂರು.

ಹೊಸಕೆರೆ ಚಿದಂಬರಯ್ಯನವ
ರಿಂದ ರಚಿತವಾದ ಗೀತೆಯ
ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು ೪೪೦ ಪುಟಗಳು,
ಬೆಲೆ (ಸುಂದರ ಪ್ರತಿ) ೦—೮—೦
(ಕೆಲಿಕೋ ಬೈಂಡ್) ೦-೧೨—೦
(ಲೆದರ್ ಬೈಂಡ್) ೧—೪—೦
ಪ್ರತಿಗಳು ಪ್ರಸಿದ್ಧ ವ್ಯಾಪಾರಿಗಳಲ್ಲಿ ಸಿಗುವುದು.
0-10—0 ಸ್ಟಾಂಪು ಕಳಿಸಿದ್ದಲ್ಲಿ ಒಂದು
ಪ್ರತಿಯನ್ನು ಬುಕ್‌ಪೋಸ್ಟ್
ಮಾಡಲಾಗುತ್ತೆ.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಶ್ರೀಮತಿ ಶಿವರಾಣಿ ದೇವಿಯವರಿಂದ
(ದಿವಂಗತ ಪ್ರೇಮಚಂದರ ಪತ್ನಿ)
ರಚಿತವಾದ ಹಿಂದೀ ಕತೆಗಳ ಕನ್ನಡ
ಭಾಷಾಂತರ

ನಾರೀ ಹೃದಯ

ನಾರೀ ಹೃದಯದ ವಾಸ್ತವಿಕ ಚಿತ್ರ
ವನ್ನು ಚಿತ್ರಿಸುವ ಉತ್ತಮ ಕತೆಗಳ
ಸಂಗ್ರಹ.

ಬೆಲೆ 0—14—0
ಟ ಖ. 0--2—0 ಪ್ರತ್ಯೇಕ.
ಒಂದು ರೂಪಾಯಿ ಸ್ಟಾಂಪು ಕಳಿಸಿದರೆ ಒಂದು
ಪ್ರತಿಯನ್ನು ಕಳಿಸಲಾಗುವುದು.

ಶಿರಿಯರ ಪ್ರಪಂಚ, ಉಡುಪಿ.
ಅಥವಾ ನವಭಾರತ ಬುಕ್
ಡಿಪೊ, ಉಡುಪಿ.

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

The Canara Mutual Assurance Co., Ltd.,
UDIPI (S. India).

ನೀವು ವರೆಗೆ ವಿಮೆಯನ್ನೇ ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಈಗಲೇ ವಿಮೆ ಇಳಿಸಿರಿ

ಏಕೆಂದರೆ:—

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸವಿಾಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ, ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಮುಖ ಏಜಂಟರು.
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ, ದ. ಕನ್ನಡ.
ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ: —
ಮಂಗಳೂರು, ಕಲ್ಲಿಕೋಟೆ, ಸೇಲಂ, ತಿರುವಾಂಕೂರು, ಬೆಂಗಳೂರು ನಗರ ಮತ್ತು ಬೊಂಬಾಯಿ.

THE BOMBAY LIFE ASSURANCE CO., LTD.

Sick or healthy, wounded or convalescent in a Prisoner's Camp or in the Line-

Our Men Need Your Help

SUBSCRIBE
to

H. E. The Governor's War Fund

earmarked
"RED CROSS"
or
"AMENITIES FOR TROOPS"
—as you choose, but—
SUBSCRIBE!

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಶೂಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆವರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೇಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.

ಜಿನ್ನರ ಧುರವೀಳ್ಯದ ಅಂಗೀಕಾರ-ಆದರೆ ಜಿನ್ನರೀಗ ಯುದ್ಧಾತದ್ಧಾ!

ಇತ್ತೀಚಿಗಿನ ಕೆಲವು ದಿನಗಳಲ್ಲಿ ಗಾಂಧೀ ನಾಮ ಸ್ಮರಣೆಯ ಸಂದರ್ಭವೇ ಹಿಂದೀ ಸರಕಾರಕ್ಕಿರಲಿಲ್ಲ--ಇಂಗ್ಲಾಂಡು ಅಮೇರಿಕಗಳಲ್ಲಿ ಕೇಳಿ ಬಂದಷ್ಟಾದರೂ ಗಾಂಧೀ ವರ್ಣನೆಯು ಭಾರತದಲ್ಲಿರಲಿಲ್ಲ. ಕಳೆದ ತಾ 26ರಲ್ಲಿ ಪುನಃ ಆ ಸಂದರ್ಭ ಒದಗಿತು; ಅಖಿಲ ಭಾರತವು ಪ್ರತೀಕ್ಷಾಪೂರ್ವಕ ಮಿ. ಜಿನ್ನರ ಮುಖ ನೋಡುವಂತಾಯಿತು!

ಸರಕಾರದ ಧಿಕ್ಕಾರ.

'ಗಾಂಧಿಯವರು ತನ್ನನ್ನು ಭೇಟಿಯಾಗುವಂತೆ ಬರೆದ ಸಣ್ಣ ಪತ್ರವೊಂದನ್ನು ಮಿ. ಜಿನ್ನರಿಗೊಪ್ಪಿಸಬೇಕೆಂಬ ವಿಜ್ಞಾಪನೆಯೊಂದು ಹಿಂದೀ ಸರಕಾರಕ್ಕೆ ತಲುಪಿದೆ. ಗಾಂಧಿಯವರೊಡನೆ ಪತ್ರ ವ್ಯವಹಾರ ಅಥವಾ ಭೇಟಿಗಳ ಕುರಿತು ಸರಕಾರದ ಸರ್ವಶ್ರುತ ಧೋರಣೆಗನುಸಾರವಾಗಿ ಈ ಪತ್ರವನ್ನು ಮುಟ್ಟಿಸಬಾರದೆಂದು ಸರಕಾರವು ನಿರ್ಧರಿಸಿ ಅಂತೆಯೇ ಗಾಂಧಿಯವರಿಗೂ ಜಿನ್ನರಿಗೂ ತಿಳಿಸಲಾಗಿದೆ"—ಎಂದು ಹಿಂದೀ ಸರಕಾರದ ಪ್ರಕಟಣೆಯನ್ನುತ್ತಿದೆ. ಭಾರತದ ಯುದ್ಧ ಯತ್ನಕ್ಕೆ ಭಂಗ ಒಡ್ಡಿದ ಗಾಂಧಿಯವರ ಮಹಾಪರಾಧವನ್ನು ಜ್ಞಾಪಿಸುತ್ತಾ ಆ ಪ್ರಕಟಣೆ ಸಾರುತ್ತಿದೆ: "ತಾನು ದೇಶದ ಸಾರ್ವಜನಿಕ ವ್ಯವಹಾರಗಳಲ್ಲಿ ಇನ್ನೊಮ್ಮೆ ಸುರಕ್ಷಿತವಾಗಿ ಪ್ರವೇಶಿಸಲು ಯೋಗ್ಯನೆಂಬುದಕ್ಕೆ ಸರಕಾರಕ್ಕೆ ಖಚಿತ ಮಾಡಿ ಕೊಡುವ ಜವಾಬ್ದಾರಿ ಗಾಂಧಿಯವರ ಮೇಲಿದೆ. ಹಾಗೆ ಮಾಡುವ ವರೆಗೆ, ಅವರು ಅನುಭವಿಸುವ ಅಭಾವಗಳೆಲ್ಲಾ ಅವರ ಆರಿಸುವಿಕೆಯೇ ಆಗಿದೆ."

ಮಿ. ಜಿನ್ನರ ಅಂದಿನ ಅಬ್ಬರ!

ಕಳೆದ ತಿಂಗಳಲ್ಲಿ ಡಿಲ್ಲಿಯಲ್ಲಿ ಸೇರಿದ್ದ ಮುಸ್ಲಿಂ ಲೀಗಿನ ವಾರ್ಷಿಕಾಧಿವೇಶನದ ಮಿ. ಜಿನ್ನರ ಅಧ್ಯಕ್ಷ ಭಾಷಣದಲ್ಲಿದ್ದ ಅಪ್ಪಣೆಯನ್ನೇ ಗಾಂಧಿಜೀಯವರು ಶಿರಸಾವಹಿಸಿ ಈ ಪತ್ರ ಬರೆದರೆಂಬುದಕ್ಕನುಮಾನವಿಲ್ಲ. ಜಿನ್ನರ ಪ್ರತಾಪಕ್ಕನುಕೂಲವಾದ ವಾತಾವರಣ-ಮುಸ್ಲಿಂ ಲೀಗಿನ ಅಭೂತಪೂರ್ವ ಜಯಶಾಲೀ ಅಧಿವೇಶನ--ಚಪ್ಪರಾಳಿ ಎಳ್ಳು, ಬಿದ್ದರೆ ಎಚ್ಚರಿಸಿದಂತಾಗುವಷ್ಟು ಮೌನ, ಈ ಸಂದರ್ಭದಲ್ಲಿ ಕ್ವಯದ್ ಅಜಮರು ಗಂಭೀರವಾಗಿ ಆಡಿದ ಮಾತುಗಳಿವು. "ಗಾಂಧಿಯವರು, ಪಾಕಿಸ್ತಾನದ ಆಧಾರದ ಮೇಲೆ ಮುಸ್ಲಿಂ ಲೀಗಿನೊಡನೆ ಒಪ್ಪಂದಕ್ಕೆ ಬರಲು ಈಗಲಾದರೂ ಸಮ್ಮತಿಸುತ್ತಾರಾದರೆ ಅದನ್ನು ನನಗಿಂತ ಹೆಚ್ಚು ಸ್ವಾಗತಿಸುವವರು ಇನ್ನೊಬ್ಬರಿರಲಾರರು. ಆ ದಿನವು ಹಿಂದುಗಳ ಹಾಗೂ ಮುಸಲ್ಮಾನರ ಉತ್ಸವ ದಿನವಾಗುವದೆಂದು ನಾನೆನ್ನುತ್ತೇನೆ. ಗಾಂಧಿಯವರು ಮನಸ್ಸು ಮಾಡಿದರೆ ಅವರು ನೆಟ್ಟಗೆ ನನಗೆ ಬರೆಯುದಂತೆ ಆತಂಕಿಸುವಂತಹದೇನಿದೆ? ಅವರು ವೈಸರಾಯರಿಗೆ ಪತ್ರಗಳನ್ನು ಬರೆಯುತ್ತಿದ್ದಾರೆ; ಸೀದಾ ನನಗೇಕೆ ಬರೆಯುವದಿಲ್ಲ? ಅವರನ್ನು ಹಾಗೆ ಮಾಡದಂತೆ ತಡೆಯುವವರು ಯಾರವರು? ಈ ದೇಶದಲ್ಲಿ ಸರಕಾರವೀಗ ಬಲಶಾಲಿಯಾಗಿಯೇ ಇರಬಹುದು-ನೀವೀ ಸರಕಾರವವಿರುದ್ಧವಾಗಿ ಏನನ್ನು ಬೇಕಾದರೂ ಹೇಳಬಹುದು-ನನಗೆ ಬರೆಯಲ್ಪಡುವ ಪತ್ರವನ್ನು ತಡೆಯುವ ಧೈರ್ಯವದಕ್ಕಿದೆಯೆಂದು ನಾನೊಂದೇ ಒಂದು ಕ್ಷಣವಾದರೂ ನಂಬಲಾರೆ. ಸರಕಾರದಿಂದ ಅಂತಹ ಕೃತ್ಯವು ನಡೆದಲ್ಲಿ ಅದು ಖಂಡಿತವಾಗಿಯೂ ಭೀಕರವಾಗುವದು. ಆದರೆ ಗಾಂಧಿಯವರ, ಕಾಂಗ್ರೆಸ್ ಅಥವಾ ಹಿಂದು ಧುರೀಣತ್ವದ ಧೋರಣೆ ಬದಲಾವಣೆಯಾದ ಯಾವ ಚಿಹ್ನೆಯೂ ನನಗೆ ಗೋಚರಿಸುವದಿಲ್ಲ".

ಮಿ. ಜಿನ್ನರ ಇಂದಿನ ಆಲಾಪ.

'ತಡೆಯುವರಾರಿದ್ದಾರೆ?' ಎಂದು ಜಿನ್ನರು ಕರೆದ ಧ್ವನಿ ಕುಂದುವಾಗಲೇ 'ನಾನಿದ್ದೇನೆ' ಎಂದು ಲೋರ್ಡ್ ಲಿನ್‌ಲಿತ್‌ಗೋರವರು ಉತ್ತರ ಕೊಟ್ಟಿದ್ದಾರೆ! ಜಿನ್ನರ ವಿಳಾಸಕ್ಕೆ ಬಂದ ಪತ್ರ-ಇನ್ನೂ ಹೇಳುವದಾದರೆ ಜಿನ್ನರೇ ಹೇಳಿ ಬರೆಯಿಸಿದ ಪತ್ರ-ಆದು ಹಿಂದೀ ಸರಕಾರದಿಂದ ತಡೆಗಟ್ಟಲ್ಪಟ್ಟಿದೆ! ಮಿ. ಜಿನ್ನರು 'ಕ್ಷಣಮಾತ್ರಕ್ಕೂ ನಂಬದ' ಆ ಧೈರ್ಯವು ಸರಕಾರಕ್ಕಿದೆ! ಇಂತಹ ಮುಖಭಂಗಿತ ಧುರೀಣರಿಂದ ನಾವು ಸಹಜವಾಗಿ ನಿರೀಕ್ಷಿಸಬೇಕಾದುದೇನು? ಕ್ವಯಾದ್ ಅಜಮರು ಮುಸ್ಲಿಂ ಲೀಗಿನ ಮೂಲಕ ಸರಕಾರದ ವರ್ತನೆಯ ವಿರುದ್ಧ ಚಳವಳ ಹೂಡಬಹುದು; ಭಾರತದ ಜಾತೀಯ ಐಕ್ಯತಾ ನಿವಾರಣೆಯ ಹೊಣೆಗಾರಿಕೆ ಸರಕಾರದ್ದೇ ಎಂಬುದನ್ನು ಲೋಕವಿಶ್ರುತಗೊಳಿಸಲು ಪ್ರಬಲ ಪ್ರಚಾರ ಕೈಕೊಳ್ಳಬಹುದು; ಕೊನೆಯ ಪಕ್ಷ ಲೋರ್ಡ್ ಲಿನ್‌ಲಿತ್‌ಗೋರವರನ್ನು ಬೈಯ್ಯುವ ನಾಲ್ಕು ಮಾತುಗಳಿಗಾಗಿ ತನ್ನ ಅನನ್ಯ ಶೈಲಿಯನ್ನಾದರೂ ಉಪಯೋಗಿಸಬಹುದು-ಮಾತಿನ ಚಲೆಯರಿತವರೆಲ್ಲಾ ನಿರೀಕ್ಷಿಸುವಂತಹದು ಇದೇ! ಆದರೆ ಈ ಸಂಬಂಧವಾದ ಜಿನ್ನರ ಹೇಳಿಕೆಯು ಪ್ರಪಂಚದ ನವೀನತೆಗಳಲ್ಲೊಂದಾಗಿ ಹೊರಬಿದ್ದಿದೆ. "ಸರಕಾರವೊಡನೆ ಘರ್ಷಣೆಗೆ ನಿಲ್ಲುವಂತೆ ಮುಸ್ಲಿಂಲೀಗಿಗೆ ಪೇಚಾಟವನ್ನು ತಂದೊಡ್ಡಿ,ಕೊನೆಗೆ ತನಗಿಚ್ಛೆ ತೋರಿದಂತೆ ವರ್ತಿಸಲಾಗುವ ಬಿಡುಗಡೆಯ ಏಕೋದ್ದೇಶದಿಂದಲೇ ಗಾಂಧಿಯವರೀ ಪತ್ರ ಬರೆದರೆಂದು ಅರ್ಥವಾಗುತ್ತದೆ. ನಿಜಕ್ಕೂ ಗಾಂಧಿಯವರ ಧೋರಣೆ ವ್ಯತ್ಯಾಸವಾಗಿಲ್ಲ. ನಾನು ಮುಸ್ಲಿಂ ಲೀಗ್ ಅಧಿವೇಶನದಲ್ಲಿ ಮಾಡಿದ ಸೂಚನೆಯನ್ನು ಒಪ್ಪಿಕೊಳ್ಳುವ ಯಥಾರ್ಥ ಇಚ್ಛೆಯಿಲ್ಲ. ಗಾಂಧಿಯವರನ್ನಾಗಲೀ ಇತರ ಹಿಂದೂ ಮುಖಂಡರನ್ನಾಗಲೀ ಭೇಟಿಯಾಗುವದರಲ್ಲಿ ನನ್ನ ಸಿದ್ಧತೆ ಹಾಗೂ ಸಂತೋಷವಿದೆಯಾದರೂ, ಬರಿದೇ ಭೇಟಿ ಯಾಚಿಸುವ ಆ ಪತ್ರವು, ನಾನು ನನ್ನ ಅಧ್ಯಕ್ಷ ಭಾಷಣದಲ್ಲಿ ನಮೂದಿಸಿದ ವರ್ಗದ್ದಲ್ಲ"-ಎಂದು ಮಿ. ಜಿನ್ನರ ಆಶ್ಚರ್ಯಕರ ಅಂಬೋಣ. ಬಿಕ್ಕಟ್ಟು ನಿವಾರಣೆಗಾಗಿ ಮುಸ್ಲಿಂ ಲೀಗು ಏನಾದರೂ ಪ್ರಯತ್ನ ಮಾಡಬೇಕೆಂದು ಕೆಲವು ಹಿಂದೀ ಮುಖಂಡರು ತನ್ನನ್ನು ಒತ್ತಾಯಿಸಿದರು. ಗಾಂಧಿಯವರ ಧೋರಣೆ ಬದಲಾಗಿಲ್ಲವೆಂದು ತಾನೆಂದರೂ, ಕೆಲವು ಜವಾಬ್ದಾರೀ ಹಿಂದೂ ಮುಖಂಡರು "ಗಾಂಧಿಯವರೀಗ ತನ್ನ ತಪ್ಪನ್ನರಿತಿದ್ದಾರೆ; ಪಾಕಿಸ್ತಾನ್ ಅಸ್ತಿವಾರದ ಮೇಲೆ ಮುಸ್ಲಿಂ ಲೀಗಿನೊಡನೆ ಒಪ್ಪಂದಕ್ಕೆ ಬರಲು ಆತುರರಿದ್ದಾರೆ. ಆದರೆ ಸರಕಾರವದಕ್ಕವಕಾಶವನ್ನು ಕೊಡುತ್ತಿಲ್ಲ" ಎಂದು ಹೇಳಿದುದರಿಂದಲೇ, ಗಾಂಧಿಯವರು ಆಗೋಸ್ತು ನಿರ್ಣಯವನ್ನು ಹಿಂದಗೆದು ಪಾಕಿಸ್ತಾನನ್ನು ಅಸ್ತಿವಾರವಾಗಿಟ್ಟು ಒಪ್ಪಂದಕ್ಕಾಗಿ ಪತ್ರ ಬರೆಯಬೇಕೆಂದು ಕೇಳಿಕೊಂಡೆ. ಅಂತಹ ಪತ್ರವನ್ನು ತಡೆಯುವ ಧೈರ್ಯ ಸರಕಾರಕ್ಕಿರಲಾರದೆಂದು ತಾನು ಈಗಲೂ ನಂಬುತ್ತೇನೆ, ಎಂದು ಜಿನ್ನರ ಮಾತು. ಮಿ. ಜಿನ್ನರು ಅಜ್ಜೀಯರೇ ಸರಿ! ಮಾನ ಬಿಟ್ಟರೂ ನಂಬಿಕೆ ಬಿಡಲಾರದವರ ವಿಶ್ವಾಸ ಭಂಗವಾಗಲು ಸಾಧ್ಯವಿದೆಯೇ?

[illegible]

ಸರಕಾರದ ಪತ್ರ ಪ್ರತಿಬಂಧವೂ ಮಿ. ಜಿನ್ನರ ಹೇಳಿಕೆಯೂ ಸರ್ವತ್ರ ಕಟು ವಿಮರ್ಶೆಗೊಳಗಾಗಿವೆ. ಪ್ರಮುಖ ಮುಸಲ್ಮಾನರೇ 'ನ್ಯಾಯವನ್ನು ಬಿಡಲೇ, ಜಿನ್ನರನ್ನು ಬಿಡಲೇ' ಎಂಬ ಸಮಸ್ಯೆಗೊಳಗಾಗಿ ಲೀಗ್ ಅಧ್ಯಕ್ಷರ ಧೋರಣೆಗೆ ಜಿಗುಪ್ಸೆ ಸೂಚಿಸಿದ್ದಾರೆ. ಪಂಜಾಬಿನ ಲೀಗು ಮುಖ್ಯಮಂತ್ರಿಗಳು ಕ್ರೋಧಗೊಂಡು ಎಲ್ಲಾ ಪ್ರಾಂತಿಕ ಲೀಗು ಮಂತ್ರಿಗಳೂ ಜಿನ್ನರಿಗೆ ತಮ್ಮ ರಾಜೀನಾಮೆಗಳನ್ನೊಪ್ಪಿಸಬೇಕೆಂದೂ ಜಿನ್ನರವನ್ನು ಆಯಾಯ ಪ್ರಾಂತಿಕ ಗವರ್ನರರುಗಳಿಗೊಪ್ಪಿಸುವ ಮೂಲಕ ಸರಕಾರದ ವರ್ತನೆಯ ನಿಷೇಧವಾಗಬೇಕೆಂದೂ ಸೂಚಿಸಿದ್ದಾರೆಂದು ವಾರ್ತೆ. ತನಗೆ ದೊರೆಯದ ಗಾಂಧಿಯವರ ಪತ್ರಕ್ಕೆ ಉತ್ತರ ಕೊಡುವ ಬದಲು, ರಾಷ್ಟ್ರೀಯ ಒಪ್ಪಂದಕ್ಕೆ ಸರಕಾರವು ಹಾಕಿದ ತಡೆಗೇನು ಮಾಡಬೇಕೆಂಬುದನ್ನು ನಿರ್ಧರಿಸುವ ಧುರೀಣ ಪರಿಷತ್ತೊಂದನ್ನು ಕರೆಯಲು ಮಿ. ಜಿನ್ನರು ನೆರವಾಗಬೇಕೆಂದು ರಾಜಾಜಿಯವರ ವಿನಂತಿಯಿದೆ. ಬ್ರಿಟಿಷ್ ಪತ್ರಿಕೆಗಳೂ ಸರಕಾರದ ಧೋರಣೆಯನ್ನು ಖಂಡಿಸುತ್ತಿವೆ.

WANTED GRADUATES.

APPLY FOR TERMS

CANARA BANK LIMITED.

ESTD: 1906.

ಅನಿಶ್ಚಿತ ದಿನಗಳಲ್ಲಿ ಸುಭದ್ರ ಸಂಚಯ

ಇಂದಿನ ಯುದ್ಧ ದಿನಗಳಲ್ಲಿ ಎಲ್ಲವೂ ಅನಿಶ್ಚಿತ. ಜನರಿಗೆ ತನ್ನ ಕಷ್ಟಾರ್ಜಿತ ಹಣವನ್ನು ಲಾಭದಾಯಕವಾಗಿ ಹೇಗೆ ವಿನಿಯೋಗಿಸುವುದೆಂಬದೊಂದು ಸಮಸ್ಯೆಯಾಗಿದೆ. ವ್ಯಾಪಾರಕ್ಕೆ ಹಾಕೋಣವೆಂದರೆ ಸಾಮಾನುಗಳ ಬೆಲೆಯು ಕ್ಷಣ ಕ್ಷಣ ಬದಲಾಗುತ್ತಿದೆ ಭೂಮಿಯ ಮೇಲೆ ಹಾಕೋಣವೆಂದರೆ ಕ್ರಯ ಇಮ್ಮಡಿ; ಉತ್ಪತ್ತಿ ಕಡಿಮೆ. ಅದೂ ಅನಿಶ್ಚಿತ. ಹೀಗಿರುವಾಗ ಜನರು ಹೆಚ್ಚು ಲಾಭಾಂಶ ಹಂಚುವ ಬ್ಯಾಂಕಿಂಗ್ ಸಂಸ್ಥೆಗಳ ಪಾಲುಗಳಲ್ಲಿ ತಮ್ಮ ಹಣವನ್ನು ವಿನಿಯೋಗಿಸುವುದು ವಿಶೇಷ ಜಾಣತನವಿದೆ ಪದಭೋಚಿತವಿದೆ. ಸುಭದ್ರ ಹಾಗೂ ಸುದೃಢ ಬ್ಯಾಂಕಿಂಗ್ ವ್ಯವಹಾರವನ್ನು ಮಾಡುತ್ತ, ಕೆಲವು ವರ್ಷಗಳಿಂದ ಪಾಲುದಾರರಿಗೆ ಸೇಕಡಾ 7/-ರಂತೆ ಲಾಭಾಂಶ ಹಂಚಿಕೊಂಡು ಬರುತ್ತಿರುವ ಪ್ರಗತಿಪರ ಬ್ಯಾಂಕಿಂಗ್ ಸಂಸ್ಥೆಯೆಂದರೆ **ವಿಜಯಾ ಬ್ಯಾಂಕು.** ಇದರ ಪಾಲುಗಳಲ್ಲಿ ಹಣವಿನಿಯೋಗಿಸುವುದೆಂದರೆ ಅದೊಂದು ಸುಭದ್ರ ಸಂಚಯ. ಅದಕ್ಕೆ ಎರಡೆರಡು ಬಾರಿ ಹೊರಡಿಸಿದ ಪಾಲುಗಳ ಮಾರಾಟವೇ ಒಂದು ನಿದರ್ಶನ.

ವಿಜಯಾ ಬ್ಯಾಂಕಿನ ಕೆಲವೇ ಪಾಲುಗಳು ದೊರೆಯುತ್ತವೆ ಪಾಲಿನ ಅರ್ಜಿಗಳನ್ನು ಪ್ರತಿ ಶಾಖೆಗಳಲ್ಲೂ ಸ್ವೀಕರಿಸೋಣಾಗುತ್ತದೆ.

ಬಿ. ಸಂಜಯ ಹೆಗ್ಡೆ, ಚೆಯರ್‌ಮ್ಯಾನ್,

ವಿಜಯಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

B. Sachidananda Hegde,
Organiser,
Vijaya Bank Ltd., Udipi.

Degrees: Books: Medicines
Free H. L. M. S. M. B. H. M. D, etc. Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs. 4 Insanity Cure Pills Rs. 10 Enclose 2 annas stamp:—
Principal Indian Homeopathi Institute & Society (Govt. Regd)
P.O. Datha [K]athiawar Dt India.)

Sidha-Kalpa Kavach (Regd.)
No. 3 Rs 2. No. 2 Rs. 5 No. 1 Rs. 7. Special Rs. 10, Extra Special Rs. 17 for ove marriage health, wealth. Ask any six questions with M. O. Re. 1/4 and get correct answers by returnpost Life reading Rs.2 No V.P.P.Send M.O, Free pamplets
Prof Dr. N. H Chhatbar.
P. O. Mahava. (Kathiawar India.)

The Canara Banking Corporation Limited.
(Incorporated in British India with limited Liability.)
ESTD: 1906.

A Branch of the Corporation has been opened at **COIMBATORE** on 29-3-1943.

ನವಯುಗ

ಉಡುಪಿ, ಗುರುವಾರ, ೩-೬-೧೯೪೩

ಸ್ವವಂಚನೆ.

ಮಿ. ಜಿನ್ನಾರವರ ಭೇಟಿಯಾಚಿಸಿ ಗಾಂಧಿಜೀ ಕಳುಹಿದ್ದ 'ಆ ಸಣ್ಣ ಕಾಗದ'ದಲ್ಲಿ ನಾಲ್ಕು ಪಂಕ್ತಿಗಳಿಗೆ ಮಿಕ್ಕಿ ಬರೆದಿರಲಾರದೆಂದು ಹಿಂದೀ ಸರಕಾರದ ಹೇಳಿಕೆಯಿಂದ ಊಹಿಸಲಾಗುತ್ತದೆ; ಆದರೆ ಅಷ್ಟರಲ್ಲೇ ಸರಕಾರದ ಮತ್ತು ಕ್ವಯಾದ್ ಆಝಾಮರ ಜಾತಕಗಳನ್ನು ಲೋಕವೋದುವಂಥಾದುದನ್ನು ಕಾಣುವಾಗ ನಗು ಬರುತ್ತಿದೆ. 'ಭಾರತೀಯರು ತಮ್ಮೊಳಗೊಂದು ಒಪ್ಪಂದ ಮಾಡಿಕೊಳ್ಳಲು ಸರ್ವವಿಧದಿಂದ ನೆರವಾಗುವದೇ ನಮ್ಮ ಧೋರಣೆ' ಎಂದು ಸರಕಾರವು ಹೇಳುತ್ತಾ ಬಂದಿದೆ--ಹೇಳುತ್ತಲೇ ಇದೆ--ಬಾಯಿ ಮುಚ್ಚಿಸುವ ಈ ಘಟನೆಯನ್ನು ಪ್ರಯತ್ನ ಪೂರ್ವಕ ಮರೆತು ಇನ್ನೂ ಹೇಳುತ್ತಿರಬಹುದು. "ಗಾಂಧಿಯವರು ನನಗೆ ಬರೆಯುವ ಪತ್ರವನ್ನು ತಡೆಯುವ ಧೈರ್ಯವು ಯಾವ ಸರಕಾರಕ್ಕಿದೆ"--ಎಂದು ಮಿ. ಜಿನ್ನರು ಘರ್ಜಿಸಿ ತಿಂಗಳು ಮಾತ್ರ ಕಳೆದಿದೆ ಇಷ್ಟರೊಳಗೇನೆ ಪತ್ರ ಬರೆಯುವ ಅಧಿಕ ಪ್ರಸಂಗವನ್ನು ಗಾಂಧಿಯವರು ಮಾಡಬಹುದೆಂದು ಪ್ರಾಯಶಃ ಸರಕಾರವಾಗಲೀ ಮಿ. ಜಿನ್ನರಾಗಲೀ ಊಹಿಸಿರಲಿಲ್ಲ. ಜಾತೀಯ ಐಕ್ಯ ಪ್ರಯತ್ನವು ಸರಕಾರಕ್ಕೆ ಬೇಕಿಲ್ಲವೆಂಬುದು ಗಾಂಧಿಯವರಿಗೆ ತಿಳಿದಿದ್ದ ವಿಷಯ; ಮಿ. ಜಿನ್ನರ ಮರ್ಕಟ ಹಿಡಿತವನ್ನು ಸಡಿಲಿಸುವ ಶಕ್ತಿಯು ತನ್ನ ಒಕ್ಕಣೆಗಿಲ್ಲವೆಂಬುದಂತೂ ಗಾಂಧಿಯವರ ಅನುಭವ ಸಿದ್ಧ ಸಂಗತಿ. ಅಂದಮೇಲೆ ಗಾಂಧಿಯವರು ಪತ್ರವನ್ನೇಕೆ ಬರೆಯಬಲ್ಲರು? ವಸ್ತುಸ್ಥಿತಿ ಹೀಗಿರುವಾಗ 'ರಾಷ್ಟ್ರೀಯ ಐಕ್ಯಕ್ಕೆ ಪ್ರಯತ್ನಿಸಲಿ' ಎಂದು ಎಷ್ಟೊಂದು ಕೂಗಿಕೊಂಡರೂ, ಅದು ಫಲಿಸುವ ಅಂಜಿಕೆಯಿಲ್ಲವಷ್ಟೆ-ಎಂಬ ಧೈರ್ಯ ಸರಕಾರಕ್ಕಿತ್ತು. ಈ ಕಣ್ಣು ಮುಂದಿನ ಕಾರಣಗಳನ್ನು ಅರ್ಥಮಾಡಿಕೊಳ್ಳುವಷ್ಟು ಜ್ಞಾನ ಜಿನ್ನರಲ್ಲಿಯೂ ಇದ್ದಿತು ಆದ್ದರಿಂದಲೇ 'ಐಕ್ಯ ಪ್ರಯತ್ನ ನಡೆಯಲಿ' ಎನ್ನುತ್ತಾ ಬಂತು ಸರಕಾರ; 'ಗಾಂಧಿಯವರು ನನಗೆ ಬರೆಯಲಿ' ಎಂದರು ಮಿ. ಜಿನ್ನ. ಆದರೆ ರಾಷ್ಟ್ರೀಯ ಐಕ್ಯತೆಯ ಕುರಿತು ಮಹಾತ್ಮರಲ್ಲಿರುವ ಆತುರವು ಸ್ವಪ್ರತಿಷ್ಠೆಗಿಂತ ದೊಡ್ಡದು; ಅವರು ತಡಮಾಡದೆ ಬರೆದರು- ತನ್ನ ವಿಳಾಸದ ಪತ್ರವನ್ನು ತಡೆಯುವ ಎದೆಗಾರರಿಲ್ಲ ಎಂಬ ಮಿ. ಜಿನ್ನರ ಆಶ್ವಾಸನೆಯನ್ನು ನಂಬಿಯೇ ಬರೆದರು. ಪತ್ರವಿಂದು ತಡೆಯಲ್ಪಟ್ಟಿದೆ. ಆಶ್ಚರ್ಯವೆಂದರೆ ಮಿ. ಜಿನ್ನರು 'ತಡೆವ ಎಡೆಗಾರಿಕೆಯಿದ್ದವರ ಈ ಭೀಕರ ಕೃತ್ಯ'ಕ್ಕೆ ಪ್ರಾಯಶ್ಚಿತ್ತಮಾಡುವ ಬದಲಿಗೆ, ತನ್ನ ಸೂಚನೆಯಂತೆ ಬಂದ ಪತ್ರದ ಒಕ್ಕಣೆಯನ್ನು ಟೀಕಿಸುವ ಅವಕಾಶ ದೊರಕಿಸಿಕೊಂಡಿದ್ದಾರೆ. 'ನಾನಪೇಕ್ಷಿಸಿದ್ದು ಇಂತಹ ಪತ್ರವನ್ನಲ್ಲ'. ಎನ್ನುವ ಮಿ. ಜಿನ್ನರು ಲೀಗ್ ಅಧಿವೇಶನದಲ್ಲೇ ಒಂದು ಠರಾವೋಲೆಯನ್ನು ತಯಾರಿಸಿ ಅದಕ್ಕೆ ಸಹಿಹಾಕುವ ಅಧಿಕಾರವನ್ನಷ್ಟೇ ಗಾಂಧಿಜೀಗೆ ಕೊಡಬಾರದಿತ್ತೆ? ಈಗ ಗಾಂಧೀಜೀ ಜಿನ್ನರಂದಂತೆ ನಡೆದಿದ್ದಾರೆ. ಈಗಿನ ಜಿನ್ನರು ಹೇಳುತ್ತಿರುವಂತೆ, ಅವರನ್ನು ಉಪಾಧ್ಯಾಯರನ್ನಾಗಿ ಅಂಗೀಕರಿಸಿ-'ಉಕ್ತ ಲೇಖನ' ಬರೆಯುವ ವಿದ್ಯಾರ್ಥಿಯಾಗಲಿಲ್ಲವಾದರೂ, ಆಗಿನ ಜಿನ್ನರು ಸೂಚಿಸಿದಂತೆ ಪತ್ರ ಬರೆಯುವ ಯಥಾರ್ಥ ಮಿತ್ರರಾಗಿದ್ದಾರೆ. ಸರಕಾರವು ಮಾತ್ರ ಜಿನ್ನರ ಊಹೆಗೆ ಮಿಕ್ಕಿದ ಉದ್ಧಟತನ ತೋರಿಸಿದೆ. ಆದರೂ ಜಿನ್ನರು, ಗಂಡನ ಮೇಲಿನ ಕ್ರೋಧವನ್ನು ಮಗುವಿನ ಮೇಲೆ ತೀರಿಸಿಕೊಳ್ಳುವ ಪತ್ನಿಯ ಪ್ರತಾಪ ತೋರಿಸುತ್ತಿರುವದನ್ನು ಕಂಡು, ಯಾರಾದರೂ ಕನಿಕರಗೊಳ್ಳಲೇಬೇಕು! ಇಂತಹ ಸ್ವವಂಚನೆ,ದೌರ್ಬಲ್ಯವಿರುವ ಧುರೀಣತ್ವವನ್ನು ಪಡೆದುದಕ್ಕಾಗಿ ಮುಸ್ಲಿಂ ಸಮಾಜವು ತಲೆಬಗ್ಗಿಸಬೇಕು. ತಾನು ಲೀಗ್ ಅಧಿವೇಶನದಲ್ಲಿ ಸೂಚಿಸಿದಂತಹ ಆ ಪತ್ರವು ಇದಲ್ಲ ಎಂದು ಜಿನ್ನರನ್ನುತ್ತಾರೆ; ಲೀಗ್ ಅಧಿವೇಶನದಲ್ಲಿದ್ದ ಆ ಜಿನ್ನರೇ ಇವರಲ್ಲವೆಂದು ನಮಗನ್ನಿಸುತ್ತದೆ!

'ಜಾತೀಯ ಐಕ್ಯ' ನೆವದ ತನ್ನ ಕಪಟ ವೇಷವನ್ನು ಈ ರೀತಿ ಅನಿವಾರ್ಯವಾಗಿ ಬಿಡಬೇಕಾಗಿ ಬಂದುದಕ್ಕಾಗಿ ಸರಕಾರನೇ ಪಶ್ಚಾತ್ತಾಪ ಪಡುವಂತಾಗಿದೆ ಹೊರತು ಸರಕಾರದ ಈ ಕೃತ್ಯಕ್ಕಾಗಿ ನಾವು ದುಃಖಿಸುವ ಅಂಶವಿಲ್ಲ. ಜಾತೀಯ ಐಕ್ಯದ ಕೀಲಿಕೈಯನ್ನಡಗಿಸಿಟ್ಟವರ ಪತ್ತೆಯೀಗ ಗಾಂಧಿಜೀಯಿಂದಾಗಿದೆ ಲೋಕದ ಕಣ್ಣಿಗಾಗುವ ಅಂಜನವು ಈಗ ಕೂಡಾ ಇರುವದು ಆ 'ಕೈದಿ'ಯ ಕೈಯಲ್ಲೇ!-ಎರಡೇ ಪಂಕ್ತಿಯ ಓಲೆಯಿಂದ ಇಬ್ಬರ ಜಾತಕ ಸ್ಫುಟಪಡಿಸಿದ ಗಾಂಧೀಜೀಯನ್ನು ಅಭಿನಂದಿಸುತ್ತೇನೆ.

ದುರ್ಬೀನು

ಜಿಂಕೆಯ ಬೆನ್ನು ಹಿಡಿಯಬಹುದು--ಜಿನ್ನರ ಬೆನ್ನು ಹಿಡಿಯುವದು ಪ್ರಯಾಸ.

oo oo oo

ಮನೆಯವರ ಆಮಂತ್ರಣವಿದ್ದೂ ಗಂಡ ಕಳುಹಲೊಪ್ಪದಿದ್ದರೆ ಮನೆಯವರನ್ನೇಕೆ ದೂರಬೇಕು? ಗಾಂಧಿಜೀಯಾಮಂತ್ರಿಸಿದರೂ ಸರಕಾರವಾತಂಕಿಸಿದರೆ ಜಿನ್ನರು ಗಾಂಧಿಯವರನ್ನೇಕೆ ದೂರಬೇಕು?

oo oo oo

ಬೇಟೆ ಹೊಡೆಯುವ ಬೇಡನು ಗುಂಡು ಹಾರಿಸುವ ಮೊದಲು ಚಪ್ಪಾಳೆ ಹೊಡೆಯಬಾರದು; ಇಟೆಲಿಯನ್ನಾಕ್ರಮಿಸಲಿರುವ ಚರ್ಚಿಲ್ಲರು, ಇಷ್ಟು ಬಲವಾದ ಎಚ್ಚರಿಕೆ ಕೊಡಬಾರದು

oo oo oo

ನೆರೆ ಮನೆಯು ಕನ್ನಡಿಯೊಡವರೆ ಕುರುಡನ ಕಣ್ಣಿಗೆ ಕನ್ನಡಕವಾಗದು; ಜರ್ಮನಿಯು ಅಡಕಟ್ಟುಗಳನ್ನೊಡೆದ ಸೇರಿಸಿಂದ ಬ್ರಿಟಿಷ ಸಾಮ್ರಾಜ್ಯಾಭಿಷೇಕ ನಡೆಯದು.

oo oo oo

ಪತಿ-ಪತ್ನಿ ಸಂಸಾರ ಹೂಡಿದೊಡನೆ ಸಂತಾನವಾಗಲಾರದು; ಚರ್ಚಿಲ್-ರೂಸವೆಲ್ಟ್ ಒಟ್ಟಾದ ಬೆನ್ನಲ್ಲೇ ದ್ವಿತೀಯ ರಂಗವಾಗಲಾರದು.

oo oo oo

ಮುಳುಗಿ ಸಾಯುವವನಿಗೆ ಕೋಲು ನೀಡಬೇಕು ಹೊರತು ಕೈಕೊಡಬಾರದೆಂದು ಜಾಣನಿಗೆ ಗೊತ್ತು; ಉಸಿರು ಕಟ್ಟಿದ ಚೀನಕ್ಕೆ ವಾಗ್ದಾನದ ಹೊರತು ಪ್ರಾಣದಾನಕ್ಕಿಳಿಯುವದರಲ್ಲಿರುವ ಅಪಾಯ ಮಿತ್ರರಿಗೆ ಗೊತ್ತು.

oo oo oo

ದೇವಳದಿದಿರು ದಸ್ತಗದ್ದ ಬಿಷ್ಪರೆ ನೆಲ ಹಿಡಿದನೆಂದರ್ಥವಲ್ಲ; ಸ್ವಾತಂತ್ರ್ಯಕ್ಕಾಗಿದ ಮನಿಸಲ್ಪಟ್ಟಿರದು ಪತನವಲ್ಲ.

oo oo oo

ತಲೆಯ ಮೇಲಿದ್ದ ಮುಕುಟಗಳೆಷ್ಟೋ ಉರುಳಿದುವಂತೆ-ತಲೆಗೇರಿದ ಮದವಿಳಿಯಲಾರದೆ?

oo oo oo

ಯುದ್ಧದಲ್ಲಿ ಈ ತನಕವೂ ತಡೆಗಟ್ಟಲಾಗದುದು ಸಬ್‌ಮೆರೀನ್ ಹಾವಳಿ; ವ್ಯವಹಾರ ಜಗತ್ತಿನಲ್ಲಿ ಪರೂ ಜಾಜೀಯರೆಂದರೆ ಸಬ್ ಮೆರೀನ್ ವರ್ಗದವರೇ.

oo oo oo

ಶಾಲು ಹೊದೆದ ಮಾತ್ರಕ್ಕೆ ಕಂಬಳಿಯನ್ನು ಹೊದೆಯಬೇಕೆಂದಿಲ್ಲ; ಟ್ಯುನಿಸಿಯಾ ಗೆದ್ದವರು ಯುರೋಪನ್ನು ಗೆಲ್ಲಬೇಕೆಂದಿಲ್ಲ.

ನೋಟೀಸು.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. No. 440/1942.

ದಿ. ಉಡ್ಪಿ ಮುನ್ಸಿಪಾಲಿಟಿಯ ಕಮಿಶನರ್, ಡಿ. ವಿಶ್ವನಾಥ ರೆಡ್ಡಿ } ವಾದಿ.

ಮತ್ತು

1. ಸೀತಾರಾಮ ಬಲ್ಲಾಳ. 2 ದಾಸ ಬಲ್ಲಾಳ. 3 ರಾಮಕೃಷ್ಣ ಕೆದ್ಲಾಯ. 4. ಪದ್ಮನಾಭ ಉಪಾಧ್ಯ. 5. ಶ್ರೀ ಸುಜ್ಞಾನೇಂದ್ರ ತೀರ್ಥ ಸ್ವಾಮಿರು. 6. ಲಕ್ಷ್ಮೀ ಅಮ್ಮ. 7. S. ಎನ್. ಮಾತಾಯಿಸ್. 8. ಆರೂರು ಸುಬ್ರಾಯ ಭಟ್ಟ. 9. ವೆಂಕಟ್ರಮಣ ಉಪಾಧ್ಯ ಯಾನೆ ಯು. ಕೆ. ಉಪಾಧ್ಯ.

—ಪ್ರತಿವಾದಿರು

ಇವರೊಳಗೆ.

ಮೇಲ್ಕಂಡ ವ್ಯಾಜ್ಯವು ಉಡ್ಪಿ ಮುನ್ಸಿಪಾಲಿಟಿಗೆ ಬರತಕ್ಕ ಟೇಕ್ಸಿನ ಆಮೇಜಿಗೆ ಮಾಡಿದ್ದಾಗಿದ್ದು ಸದ್ರಿ ವ್ಯಾಜ್ಯದಲ್ಲಿ ಸಹ್ಹಿಮಂದು 9ನೇ ಪ್ರತಿವಾದಿಗೆ ಆಗತಕ್ಕ ವ್ಯಾಜ್ಯದ ನೋಟೀಸು ತಾ 29-6-43 ಕ್ಕೆ ಮುಟ್ಟುತ್ತದೆ. ಸದ್ರಿ ಪ್ರತಿವಾದಿಯು ಉದಾಹರಣೆ ವಗೈರೆ ಇದ್ದ ಪಕ್ಷದಲ್ಲಿ ಆತನು ಮೇಲ್ಕಂಡ ದಿನ್ನ ಮೇಲ್ಕಂಡ ಕೋರ್ಟು ಮುಂದೆ ಬೆಳಿಗ್ಗೆ 10 ಘಂಟೆಗೆ ಹಾಜರಾಗಿ ಸ್ವತಹಾ ವ, ವಕೀಲರ ಮುಖಾಂತ್ರ ಜಾಹೀರು ಮಾಡಿಕೊಳ್ಳಬೇಕು. ಇಲ್ಲವಾದ್ರೆ ಆತನ ಗೈರುಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿಯೂ ಮೂಲ್ಕ ಪ್ರಕಟಿಸಲಾಗಿಯದೆ.

P. Padmanabha Rao.
B. A. B. L.
Vakil for Plaintiff

ಉಡ್ಪಿ.
ತಾ 29-5-43 }

ಡಾಕ್ಟರ್ ಕೊರಡ್ಕಲ್ ಫಾರ್ಮಸಿಯ ದಿವ್ಯೌಷಧಗಳು.

1. 'ಓಜಸ್ವಿನಿ'-'ಧಾತುವರ್ಧಕ' ನರಗಳ ನಿತ್ರಾಣ ನಿರುತ್ಸಾಹ ನಿವಾರಕ.
2. 'ಭಗಿನೀಬಂಧು'- ಮುಟ್ಟುದೋಷ ಮುಂತಾದ ಗರ್ಭಕೋಶದ ಸಕಲ ಅಕ್ರಮ ನಿವಾರಕ,

೧೬ ದಿವಸದ ಗುಣದಾಯಕ ಸೇವನೆಯ ವೆಚ್ಚ ರೂ. 3 ಮಾತ್ರ.

ದೊರೆಯುವಸ್ಥಳ—**ಉಡುಪಿ ರಥಬೀದಿಯ ಡಾ। ಕೊರಡ್ಕಲ್ ಫಾರ್ಮಸಿ ಮತ್ತು ವಿಜಯಾ ಸ್ಟೋರ್ಸ್ ಉಡುಪಿ ದ. ಕ.**

CHAMPAE'S
SNOW & CASTREX
AGENTS
SADANANDA STORES UDIPI

The Modern School of Commerce
(Est. 1930)
Church View, UDIPI, S. I.
(Classes commence from 14th June)
Offer coaching for all Commercial
DIPLOMAS & SUBJECTS
Such as D. Com (I. M. C.) Bombay, L. C. C. (London) C. A. I. I. B. and C. A. I. B, (London) besides SHORT-HAND & TYPEWRITING.
For prospectus enclose 1½ annas stamp.

ಅಮೇರಿಕಾಕ್ರಮಣ?

"1943ನೇ ಜೂನಿನಿಂದ ಒಕ್ಟೋಬರದೊಳಗೆ ಅಮೇರಿಕದ ಪಶ್ಚಿಮ ಕರಾವಳಿಯಲ್ಲಿ ಕಾಲೂರುವ ಹಂಚಿಕೆಯಲ್ಲಿ ಜಾಪಾನರಿದ್ದಾರೆಂದು ನನಗೆ ನಂಬಲರ್ಹವಾದ ವರದಿಗಳು ದೊರೆತಿವೆ. ಇದು ಹಗುರ ಧಾಳಿಯೂ ಅಲ್ಲ; ಹೊಡೆದೋಡುವ ಹವ್ಯಾಸವೂ ಅಲ್ಲ ಸ್ವತಃ ಅಮೇರಿಕದಲ್ಲಿ ದೃಢ ಹೆಜ್ಜೆಯೂರುವ ಯೋಜನೆಯೇ ಆಗಿದೆ" ಎಂದು ಕೋರಿಯಾದ ರಾಷ್ಟ್ರೀಯ ಯುದ್ಧಮುಖದ ವಾಷಿಂಗ್ಟನ್ ಪ್ರತಿನಿಧಿ ಹೇಳಿದ್ದಾನೆ. ಸೆಪ್ಟಂಬರದೊಳಗೆ ಚೀನದೊಡನೆ ಪ್ರತ್ಯೇಕ ಸಂಧಿಮಾಡಿಕೊಳ್ಳುವ ಯೋಚನೆಯೂ ಜಾಪಾನರಿಗಿದೆ.

● ತಾನು ಪಾತವೆ ಪರರನ್ನೂ ವಾತಲು ಬಿಡದಿರುವದು ಸರಕಾರದ ಧ್ಯೇಯ, ಗಾಂಧಿಯವರ ಪತ್ರವನ್ನು ಜಿನ್ನಾರಿಗೆ ಮುಟ್ಟಿಸುತ್ತಿದ್ದರೆ ಆಕಾಶ ಕಳಚಿ ಬೀಳುತ್ತಿರಲಿಲ್ಲ' ಎಂದು ಮುಸ್ಲಿಂ ಲೀಗಿನ ಮುಖಪತ್ರ 'ಡಾನ್' ಟೀಕಿಸಿದೆ.

● ಕೈಮಗ್ಗದ ಅರಿವೆಗಳ ಮೇಲೆ ಮದ್ರಾಸ್ ಸರಕಾರವು ಬೆಲೆ ನಿಯಂತ್ರಣ ಹಾಕಿದೆ.

● 'ಮೋಸ್ಕೋವು ಅನ್ಯ ದೇಶಗಳ ಒಳವ್ಯವಹಾರದಲ್ಲಿ ಕೈ ಹಾಕಿ, ಅವನ್ನು ಬೊಲ್ಶೆವಿಕ್ ಮಾಡುತ್ತಿದೆ ಎಂಬ ಸುಳ್ಳನ್ನಿದು ಅಂತ್ಯಗೊಳಿಸಿತು' ಎಂದು ಕಾಮಿಂಟರ್ನ್ ರದ್ದತಿಯ ಕುರಿತು ಸ್ಟಾಲಿನರಂದಿದ್ದಾರೆ.

● ಗಡಿನಾಡಿನಲ್ಲಿ ಮುಸ್ಲಿಂ ಲೀಗ್ ಮಂತ್ರಿಮಂಡಲ ಸ್ಥಾಪನೆಯಾಗಿದೆ ತಮ್ಮನ್ನು ದಸ್ತಗಿರಿ ಮಾಡದಿದ್ದರೆ ಈ ಮಂತ್ರಿ ಮಂಡಲವನ್ನು ಬಹಳ ದಿನ ಬಾಳಲು ಬಿಡಲಾರೆನೆಂದು ಅಲ್ಲಿಯ ಕಾಂಗ್ರೆಸ್ ಪ್ರಮುಖರಂದಿದ್ದಾರೆ.

● ಅಟ್ಟು ದ್ವೀಪದಲ್ಲಿ ಭೀಕರ ಹೋರಾಟವು ಕೊನೆಯ ಅಂಕಕ್ಕೆ ಮುಟ್ಟಿದೆ. ಇನ್ನು ಒಂದೆರಡು ದಿನಗಳಲ್ಲೇ ವಿಜಯ ಸಂಪಾದಿಸುವೆವೆಂದು ಅಮೇರಿಕಾನರ ವಿಶ್ವಾಸ

● ಸಿಸಿಲಿ, ಸಾರ್ಡಿನಿಯಾ ಮೊದಲಾದ ದ್ವೀಪಗಳ ಮೇಲೂ ಇಟಲಿಯ ಮೇಲೂ ಮಿತ್ರರ ಬಲವಾದ ವಿಮಾನ ಧಾಳಿ ನಡೆದಿದೆ

— ಸುದ್ದಿ ಸೂಚನೆ —

● ಜರ್ಮನಿಯ ಮೇಲಿನ ಮಿತ್ರರ ವಿಮಾನ ಧಾಳಿಗಳು ನಿಷ್ಪ್ರಯೋಜಕ ಹಾಗೂ ಅನಾಗರಿಕ ವರ್ತನೆಗಳೆಂದು ಸ್ಪೈನ್ ಪತ್ರಿಕೆಗಳು ಟೀಕಿಸಿವೆ.

● ಲಂಡನಿನಲ್ಲಿ ಭಾರತ ಸ್ವಾತಂತ್ರ್ಯ ಪ್ರದರ್ಶನಗಳಾಗುತ್ತಿವೆ. [ಅಂತಹ ಒಂದು ಮೆರವಣಿಗೆಯನ್ನು ಪೋಲಿಸರು ತಡೆದರು.

● ಈ ಮೊದಲು 55 ಬಾರಿ ಆಕಾಶ ಧಾಳಿಗೊಳಗಾಗಿದ್ದ ಜರ್ಮನಿಯ ಪ್ರಸಿದ್ಧ ಯುದ್ಧ ಕಾರ್ಖಾನೆಗಳಿರುವ ಎಸ್ಸಾನಿನ ಮೇಲೆ ಕಳೆದ ವಾರವೂ ಮಿತ್ರರ ಬಲವಾದ ಧಾಳಿ ನಡೆದಿದೆ.

● ಕಳೆದ ತಾ 28ರಲ್ಲಿ ವೀರ ಸಾವರ್ಕರರ 61ನೇ ಜನ್ಮ ದಿನವು ದೇಶದ ಹಲವು ಕಡೆಗಳಲ್ಲಿ ಆಚರಿಸಲ್ಪಟ್ಟಿದೆ.

● ನವದಿಲ್ಲಿಯ ಯುದ್ಧ ಖಾತೆಯ ಕಾರ್ಯಾಲಯಕ್ಕೆ ಬೆಂಕಿ ಬಿದ್ದು ಹಲವು ಪ್ರಾಮುಖ್ಯ ರೆಕಾರ್ಡು, ಉಪಕರಣಗಳಿದ್ದ ಪ್ರಕೋಷ್ಠಗಳು ಸುಟ್ಟು ಹೋದವು.

● ಎರಡು ವಾರಗಳ ಮಾತುಕತೆಗಳ ಪರಿಣಾಮವಾಗಿ, ಎಲ್ಲಾ ರಣರಂಗಗಳ ಭಾವೀ ಚಾಲನೆಯ ಕುರಿತು ಚರ್ಚಿಲ್-ರುಸವೆಲ್ಟರು ಸಂಪೂರ್ಣ ಸಮ್ಮತಿಯ ಯೋಜನೆ ತಯಾರಿಸಿದ್ದಾರೆಂದು ರುಸವೆಲ್ಟರ ಕಾರ್ಯದರ್ಶಿಯು ಪ್ರಕಟಿಸಿದ್ದಾರೆ.

● ಸೈಬೀರಿಯದ ವಿಮಾನ ನಿಲ್ದಾಣಗಳನ್ನು ಅಮೇರಿಕಾನರಿಗೆ ಉಪಯೋಗಿಸಲು ಬಿಟ್ಟರೆ ರಶ್ಯದ ಮೇಲೆ ಚಿರಸ್ಮರಣೀಯ ಧಾಳಿ ಮಾಡುವೆವೆಂದು ಜಾಪಾನರು ಬೆದರಿಕೆ ಹಾಕಿದ್ದಾರೆ.

● ಸದ್ಯದಲ್ಲೇ ಚರ್ಚಿಲ್, ರುಸವೆಲ್ಟ್, ಸ್ಟಾಲಿನ್, ಚಿಯಾಂಗರ ಸಮ್ಮೇಲನವು ನಡೆಯುವದೆಂದೂ ಪ್ರಾಯಶಃ ಮೋಸ್ಕೋವೇ ಕೂಟಸ್ಥಾನವಾಗುವದೆಂದೂ ತಿಳಿದುಬರುತ್ತದೆ.

○ ಜಾಪಾನರು ನ್ಯೂಗಿನಿಯಾದ ಬಳಿ ಬಹು ಸಂಖ್ಯೆಯ ವಿಮಾನಗಳನ್ನೂ 250000 ಸೈನಿಕರನ್ನೂ ಜಮಾಯಿಸಿದ್ದಾರೆ.

○ ಬೊಂಬಾಯಿಯಲ್ಲಿ ಸೇರಿದ ಕಮ್ಯೂನಿಸ್ಟ ಪಕ್ಷದ ಪ್ರಥಮ ಪರಿಷತ್ತಿನಲ್ಲಿ ರಾಷ್ಟ್ರೀಯ ಸರಕಾರದ ಸ್ಥಾಪನೆಯಾಗಬೇಕೆಂದೂ ಅದಕ್ಕಾಗಿ ದೇಶದಲ್ಲೆಲ್ಲಾ ಪ್ರಚಾರ ಕಾರ್ಯ ಕೈಕೊಳ್ಳಬೇಕೆಂದೂ ನಿರ್ಧಾರವಾಗಿದೆ.

ಹೊಸಧಾಳಿ?

ಜರ್ಮನರ ಅತಿ ಭೀಕರ ಧಾಳಿಯನ್ನಿದಿರಿಸಲು ಸಿದ್ಧರಿರಬೇಕೆಂದು 'ರೆಡ್‌ಸ್ಟಾರ್' ಮೊದಲಾದ ರಶ್ಯನ್ ಪತ್ರಿಕೆಗಳು ಎಚ್ಚರಿಸಿವೆ. ಈ ವಾರದಲ್ಲಿ ಅಲ್ಲಿಯ ಯುದ್ಧರಂಗದಲ್ಲಿ ಗಣನೀಯ ಬದಲಾವಣೆಯಿಲ್ಲ. ಆದರೆ ರಶ್ಯಾನರು ಬಲವಾದ ವಿಮಾನ ಪಡೆಗಳನ್ನು ಮುಂದೆಹಾಕಿ, ಎಲ್ಲಾ ಮುಂಭಾಗಗಳಲ್ಲೂ ಆಕಾಶ ಕಾಳಗಗಳು ನಡೆಯುತ್ತಿರುವುದರಿಂದ ರಶ್ಯಾನರ ನೂತನ ಧಾಳಿಯ ಮುಂಗುರುತಿದು ಎಂದು ಊಹಿಸಲಾಗಿದೆ. ಕಾಮಿಂಟರ್ನ್ ರದ್ದತಿ ಮತ್ತು ಸ್ಟಾಲಿನರ ಆಶ್ವಾಸನೆಯಿಂದ ಇಂಗ್ಲಾಂಡು, ಅಮೇರಿಕಾ, ಚೀನಾಗಳು ಪೂರ್ಣ ತೃಪ್ತಿಗೊಂಡು ಸಂಬಂಧವು ಬಹಳವಾಗಿ ಸುಧಾರಿಸಿದೆ.

○ ಡಿಗೋಲೆಯವರು ಆಲ್ಜೀರ್ಸಿಗೆ ಬಂದು ಜಿರಾಡರೊಡನೆ ಒಪ್ಪಂದದ ಮಾತುಕತೆಯಾರಂಭವಾಗಿದೆ.

ನೋಟೀಸು

ಮಂಗಳೂರು ಡಿ. ಮು. ಕೋರ್ಟಿನಲ್ಲಿ

ಕ್ರಿ. ಅಪ್ಲಿಕ್ಯಾಶನ್ ನಂಬ್ರ 8/194

ಕ್ರಿಮಿ. ನಂಬ್ರ 38/194

ಬಿ ಕಲ್ಯಾಣಿ ಬಾಯಿ, ವಕೀಲ ಬೋಳ ನಾಗೇಶರಾಯರ ಪತ್ನಿ, ಮಂಗಳೂರು ಡ್ಯಾಂಗರಿನಲ್ಲಿರುವಳು—ಅರ್ಜಿದಾರ, ವಾದಿಳು.

1 ಬರ್ನಾರ್ಡ್ ಸೋಜಾ ಬಾಯಿ, ಸಹೋದರ ವಿಧವೆ. 2 ಜೋಸೆಫ್ ಡಿ ಸೋಜಾ, ಬೆನ್ಜಮಿನ್ ಡಿ ಸೋಜರ ಮಗ—ಮಂಗಳೂರು ತಾಲ್ಲೂಕು ಪಡುಕೋಡಿ ಗ್ರಾಮದಲ್ಲಿರುವಂತವರು —1, 3ನೇ ರೆಸ್ಪಾಂಡೆಂಟು

ಸದ್ರಿ 1, 3ನೇ ರೆಸ್ಪಾಂಡೆಂಟ ಪ್ರತಿವಾದಿಗೆ

ನಿಮ್ಮ ಬಗ್ಗೆ ಡಿಕ್ರಿಯಲ್ಲಿ ಬಾಕಿ ಬರಲಿರುವ ಸ್ಥಿರಾಸ್ತಿಗಳನ್ನು ಯೆಲಂ ಮಾಡುವರೇ ಮೇಲ್ಕಂಡ ಅಪ್ಲಿಕ್ಯಾಶನಿಯಲ್ಲಿ ಹಾಜರುಪಡಿಸಿದ ಯೆಲಂ ಇಸ್ತಿಹಾರಿನ ಶರ್ತಗಳನ್ನು ಮತ್ತು ಆಸ್ತಿಗಳ ಬಾಜಾರು ಕ್ರಯವನ್ನು ನಿಶ್ಚಯಿಸುವರೇ ಮೇಲ್ಕಂಡ ಅಜಿಯು ತಾ. 10-6-1943ಕ್ಕೆ ಇಟ್ಟಿರುತ್ತದೆ. ...ದ್ದರಿಂದ ಮೇಲ್ಕಂಡ ಅಪ್ಲಿಕ್ಯಾಶನಿಯಲ್ಲಿ ಹಾಜರುಪಡಿಸಿದ ಯೆಲಂ ಇಸ್ತಿಹಾರಿನ ಶರ್ತ ಬಾಜಾರು ಕ್ರಯ ನಿಗ್ದಿಗೆ [illegible] ತಾ. 10-6-1943ಕ್ಕೆ ಹಗಲು ಗಂಟೆ 11 ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ವ್ಯವಹರಿಸಬೇಕಾದ್ದು, ಇದಕ್ಕೆ ತಪ್ಪಿದ್ರೆ ಕೋರ್ಟಿನವರಿಗೆ ಯುಕ್ತ ಕಾಣುವಂತೆ ತೀರ್ಮಾನಿಸಲಾಗುವದೆಂದು ಈ ನೋಟೀಸಿನ ಮೂಲಕ ತಿಳಿಸಲಾಗಿದೆ.

M. Janardan Malya,
Vakil for Petition[er]
Mangalore, 27-5-1943.

ಬಾಲ ಸಾಹಿತ್ಯ ಮಂಡಲ, ಲಿಮಿಟೆಡ್.

ವಿವಂಗಳ ಶ್ರೀ ಉಳ್ಳಾಲ ಮಂಗೇಶರಾವ್ ಬಿ. ಎ., ಎಲ್. ಟಿ. ಅವರಿಂದ ರಚಿತವಾದ ನಮ್ಮ "ಹೊಸಗನ್ನಡದ ೧ರಿಂದ ೫ರ ವರೆಗಿನ ರೀಡರು"ಗಳು ಇದೇ ಜೂನಿನ ಪ್ರಥಮ ವಾರದಲ್ಲೇ ಸಿದ್ಧವಾಗುವವು ಅವುಗಳಿಗೆ ಬೆಲೆ ಮತ್ತು ಅವುಗಳ ಮೇಲಿನ ಕಮಿಶನಿನ ದರಗಳು ಕಾಲಕ್ಕೆ ತಕ್ಕಂತೆ ಹೊಂದಿಸಲ್ಪಟ್ಟು ಆಗಲೇ ಪ್ರಕಟಗೊಳ್ಳುವುವು.

Bala Sahitya Mandal, Ltd.

ತಾ. 3—6—43ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಸಿಸ್ಟರ್ (ಸಹೋದರಿ)

ಚಿತ್ರ ಪ್ರಪಂಚದಲ್ಲೊಂದು ಅದ್ಭುತ ವ್ಯಕ್ತಿ

ಷೇಕ್ ಮುಕ್ತಾರ್, ಅಜಾನುಬಾಹು, ಅಸಾಧಾರಣ ಎತ್ತರ, ಇವನೊಂದಿಗೆ ನಳಿನಿ ಜಯಂತ್, ಹರೀಶ್, ಮೊದಲಾದವರು.

ಬರುವಚಿತ್ರ:—ವಾಡಿಯಾದ ವಿಜಯ ಕುಮಾರ್, ಗ್ರೇಟ್ ಇಂಡಿಯಾದ ಅಕೇಲಾ.

BHUVANENDRA PRODUCTS Ltd.,

Head Office and Factory:
Katapadi, S. Kanara

Depots:
1 Mahratha Galli, Hubli
2. 57 Big street, Triplicane Madras.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಯ ಫಾರ್ಮಸಿ; ಡಾ. ಕೆ ಕೇಶವಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ವಿಜಯಾ ಸ್ಟೋರ್ಸ್.

ದಕ್ಷಿಣ ಕನ್ನಡ.

ಮಂಗಳೂರು

ಜಿಲ್ಲಾ ಬೋರ್ಡಿನ —ವಿಶೇಷ ಸಭೆಯೊಂದು ಜೂನ್ ತಾ. ೧೧ನೇ ಶುಕ್ರವಾರ ಡಿ. ಬೋ. ಆಫೀಸಿನಲ್ಲಿ ಜರಗಲಿರುವುದು. ದಿ। ವಿಠ್ಠಲ ಸೆಟ್ಟರ ಮರಣದಿಂದ ಖಾಲಿ ಬಿದ್ದ ಜಿ. ಬೋ. ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಯು ಅಂದು ಜರಗಲಿದೆ.

ಮಂಗಳೂರು ಡಿ. ಕಲೆಕ್ಟರರಾಗಿದ್ದ ಶ್ರೀ ಜಾಗಪ್ಪನವರು ರಜೆಯ ಮೇಲಿರುವ ಪ್ರಯುಕ್ತ ಅವರ ಸ್ಥಾನಕ್ಕೆ ಶ್ರೀ।ಪಿ. ವಿ. ಮಾಧವರಾಯರನ್ನು ನೇಮಿಸಲಾಗಿದೆ.

ಶ್ರೀ। ಸಿ. ಕೆ. [illegible] ಮನೋನ್ ಬಿ. ಎ. ಬಿ. ಎಲ್., ಇವರು ದ. ಕ. ಜಿಲ್ಲಾ ಎಡಿಶನಲ್ ಸಬ್ ಜಡ್ಜರಾಗಿ ನಿಯಮಿಸಲ್ಪಟ್ಟಿದ್ದಾರೆ.

ಕಾರ್ಕಳದ ತಹಶೀಲ್ದಾರರಾದ ಮಿ। ಸೊಲವನ್ ಜೋಶ್ವ ಅವರು ಮಂಗಳೂರಿಗೆ ವರ್ಗಾಯಿಸಲ್ಪಟ್ಟು ಆಹಾರ ಸಾಮಗ್ರಿಗಳ ಸ್ಪೆಶ್ಯಲ್ ಅಸಿಸ್ಟೆಂಟರಾಗಿ ನೇಮಿಸಲ್ಪಟ್ಟಿರುವರು

ಇಲ್ಲಿಯ ಪೋಲೀಸ್ ಡಿ. ಸುಪರಿಂಟೆಂಡೆಂಟರಾಗಿ ಶ್ರೀ। ಶೃಂಗಾರವೇಲು ಅವರು ನೇಮಿಸಲ್ಪಟ್ಟಿದ್ದಾರೆ

ಉಡುಪಿ

ತಿದ್ದುಪಡಿ—ಕಳೆದ ಸಂಚಿಕೆಯಲ್ಲಿ ಶ್ರೀಕೃಷ್ಣಮಠದ ಭೋಜನ ಶಾಲೆಯ ಉಪ್ಪರಿಗೆಯಲ್ಲಿ ಶ್ರೀ।ಪಿ। ಸೀತಾರಾಮಾಚಾರ್ಯರ ಭಾಷಣವು ಶ್ರೀ।ಕೃಷ್ಣಾಪುರ ಸ್ವಾಮಿಗಳವರ ನೇತೃತ್ವದಲ್ಲಿ ಶ್ರೀ। ಸೋದೆ ಸ್ವಾಮಿಗಳವರ ಉದಾರಾಶ್ರಯದಲ್ಲಿ ನಡೆಯಿತೆಂಬುದನ್ನು ಶ್ರೀ।ಕೃಷ್ಣಾಪುರ ಸ್ವಾಮಿಗಳವರ ನೇತೃತ್ವದಲ್ಲಿ ಇತರ ಸ್ವಾಮಿಗಳವರ ಸನ್ನಿಧಿಯಲ್ಲಿ ಎಂದು ತಿದ್ದಿಕೊಳ್ಳಬೇಕಾಗಿದೆ. ಸಂ. ನ.

'ಮಿತ ಸಂತತಿ' (ಮಕ್ಕಳಾಗದಂತೆ ಔಷಧ) ಒಬ್ಬಳಿಗೆ ೬ತಿಂಗಳ ಸಂಪೂರ್ಣ ಚಿಕಿತ್ಸೆಗೆ ರೂ. 4-0-0 (ವಿ. ಪಿ. ಸೇರಿ 4-8-0) ಸೇವನಾ ಕ್ರಮ ಔಷಧಿಯೊಂದಿಗೆ,
ಸಿಗುವ ಸ್ಥಳ: ವಿಜಯಾ ಸ್ಟೋರ್ಸ್ ಉಡುಪಿ ಡಾ। V R. ಕೊರಡ್ಕಲ್, ಉಡುಪಿ, ಸಾ ಮತ್ತು ಕಂಪೆನಿ ಸಂಪಿಗೆಕಟ್ಟೆ, ಮಂಗಳೂರು, ಪ್ರೊಪ್ರೈಟರ್. ಕುಕ್ಕುಂದೂರು P.O.

ಈಗಿನ ಪರ್ಯಾಯ ಪೀಠಾರೂಢರಾದ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನತೀರ್ಥ ಶ್ರೀಪಾದಂಗಳವರು ತಾ. 27 5. 43ರಲ್ಲಿ ಬಡಬಗ್ಗರಿಗೆ ಹಂಚುವ ಬಗ್ಗೆ ಉಡುಪಿ ಫುಡ್ ರಿಲೀಫ್ ಫಂಡಿಗೆ 10 ಮುಡಿ ಅಕ್ಕಿ ದಾನ ಮಾಡಿರುವರಾಗಿ ತಿಳಿದು ಬರುತ್ತದೆ.

ಬ್ರಹ್ಮಾವರ-ಕುಮ್ರಗೋಡು ಬೋರ್ಡ್ ಎಲಿಮೆಂಟರಿ ಶಾಲೆಯ ಹೆತ್ತವರ ಸಂಘದ ವಾರ್ಷಿಕೋತ್ಸವವು ತಾ. 15-5 43ರಲ್ಲಿ ಶ್ರೀ। ಯ। ಕೃಷ್ಣಯ್ಯ ಶೆಟ್ಟಿ, ಎಡ್ವೊಕೇಟ್, ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಶಾಲಾ ಮಕ್ಕಳಿಂದ ಯಕ್ಷಗಾನ ಚೂಡಾಮಣಿ, ಸತ್ಯಹರಿಶ್ಚಂದ್ರ ನಟನೆ, ಇತರ ವಿನೋದಾವಳಿಗಳು ಅಭಿನಯಿಸಲ್ಪಟ್ಟವು.

ಬಾರಕೂರು:—ಬಾರಕೂರು ಹಾಜಿಕೊಡಿ ಎಲಿಮೆಂಟ್ರಿ ಶಾಲಾ ಮಕ್ಕಳ ಹೆತ್ತವರ ಕೂಟದ ಮಹಾ ಸಭೆಯು ತಾ. 29-5-4'3ರಲ್ಲಿ ಡಾಕ್ಟರ್ A S Hebbar (L. M. & s,)ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೇನೇಜರರಿಂದ ವರದಿ ವಾಚನವಾದ ಬಳಿಕ ಮಕ್ಕಳ ವಿವಿಧ ವಿನೋದಾವಳಿಗಳೂ, ಚಿಕ್ಕ ಕುದ್ರು ಶಾಲಾ ಮಕ್ಕಳ ಸರ್ಕಸ್ ಪ್ರದರ್ಶನವೂ ಜರಗಿದ ಬಳಿಕ ನೆರೆದ ಆಧ್ಯ ಮಹನೀಯರಲ್ಲಿ ಈ ಕೆಲವರು ಶಾಲಾ ಏಳಿಗೆಯ ಹಾಗೂ ಮಕ್ಕಳ ಚಟುವಟಿಕೆಗಳ ಕುರಿತು ಭಾಷಣವಿತ್ತರು. ಆ ಬಳಿಕ ಶಾಲಾ ಮಕ್ಕಳಿಂದ ರಾಜ್ಯತ್ಯಾಗ ಎಂಬ ಏಕಾಂಕ ನಾಟಕವು ಪ್ರದರ್ಶಿಸಲ್ಪಟ್ಟಿತು.

ಅಜ್ಜಡ —ಇಲ್ಲಿಯ ಬೋರ್ಡು ಹುಡುಗಿಯರ ಶಾಲೆಯಲ್ಲಿ ದಿ। ಕೆ. ವಿಠ್ಠಲ ಸೆಟ್ಟರ ನಿಧನಕ್ಕಾಗಿ ದುಃಖಸೂಚಕ ಸಭೆಯೊಂದು ಶ್ರೀ। ಕೆ. ಜನಾರ್ದನಾಚಾರ್ಯರ ಅಧ್ಯಕ್ಷತೆಯಲ್ಲಿ ಸೇರಿ, ಶ್ರೀ ಕೆ. ಸೀತಾರಾಮ ಘೋರಿಬಲ್ಲಾಳರೇ ಮೊದಲಾದವರು ದಿವಂಗತರ ಗುಣಕಥನಮಾಡಿ ಭಾಷಣವಿತ್ತ ಮೇಲೆ ದುಃಖಸೂಚಕ ಠರಾವಾಯಿತು

ಚೂರುಚೂರು

'ಹಿಂದೀ ಸರಕಾರದ ಪ್ರಕಟಣೆಯಲ್ಲಿ, ಕಾಂಗ್ರೆಸು ಜಪಾನೀ ಪಕ್ಷಪಾತಿಯೆಂಬ ಆರೋಪ ಬಂದಿಲ್ಲ' ಪಾರ್ಲಿಮೆಂಟಿನಲ್ಲಿ ಮಿ. ಸೋರೆನ್ಸನರ ಪ್ರಶ್ನೆಯೊಂದಕ್ಕೆ ಮಿ ಅಮೆರಿಯವರ ಉತ್ತರ

ಅದನ್ನೂ ಸೇರಿಸಿ ಹಿಂದೀ ಸರಕಾರವು ಇನ್ನೊಂದು ಪ್ರಬಂಧ ಬರೆಯುವದೆಂದು ನಾವು ನಿರೀಕ್ಷಿಸಬಹುದೆ?

O

'ನಾಸಿ ಯುದ್ಧ ಮುಖೇನ ವಿರೋಧಿಗಳ ಪತನವನ್ನು ಹಾರೈಸುತ್ತಿದ್ದೇನೆ ಹೊರತು ಒಳಗೊಂದಲದಿಂದ ವೈರಿಗಳು ಸೋಲುವ ನಿರೀಕ್ಷೆಯಿಲ್ಲ' ವಾಷಿಂಗ್ಟನಿನಲ್ಲಿ ಚರ್ಚಿಲ್ಲರ ಮಾತು.

ಹಾಗಾದರೆ 'ಇಟಲಿ ರಾಜರ ಕಿರೀಟವಲುಗುತ್ತಿದೆ' 'ನೋರ್ವೆಯೊಳಗೆ ಕ್ರಾಂತಿಯೆದ್ದಿದೆ-ಇತ್ಯಾದಿ ವಾರ್ತೆಗಳನ್ನು ಹರಡಿಸಿದವರು ಯುದ್ಧ ಗೆದ್ದಂತಾಗಲಿಲ್ಲವೆ?

O

'ಹಿಂದೀಯರೊಳಗಿನ ಒಪ್ಪಂದಕ್ಕೆ ಮಾನ್ಯತೆಯೀಯಲು ಬ್ರಿಟಿಷ್ ಸರಕಾರವು ಸದಾ ಸಂತೋಷಿಸುತ್ತದೆ-ಎಂಬ ವಾಗ್ದಾನದಿಂದ ಹಿಂಜರಿಯುವ ಪ್ರಸಾದವನ್ನು ಸರಕಾರವು ಮಾಡುತ್ತಿರಬಹುದೆ?"- ಗಾಂಧಿಜೀಯ ಪತ್ರವನ್ನು ಮಿ. ಜಿನ್ನಾರಿಗೊಪ್ಪಿಸಲು ನಿರಾಕರಿಸಿದ ಕುರಿತು ಲಂಡನಿನ 'ಟೈಮ್ಸ್' ಪತ್ರಿಕೆಯ ಪ್ರಶ್ನೆ.

ಈ ವಾಗ್ದಾನವೆಂದರೆ ಬರ್ಮಾ ರಣರಂಗವಲ್ಲವಾದ್ದರಿಂದ, ಹಿಂಜರಿದರೂ ಬ್ರಿಟಿಷ್ ಸಾಮ್ರಾಜ್ಯಕ್ಕೇನೂ ಬಾಧೆಯಿಲ್ಲ.

O

ರುಸವೆಲ್ಟರಿಂದ ಮೊಹರುನಿಶಿ ಗುಪ್ತ ಪತ್ರವನ್ನು ತಂದ ಮಿ. ಡೇವೀಸರ ಕೈಯಲ್ಲಿ ಸ್ಟಾಲಿನರೂ ಮೊಹರು ನಿಶಿ ಗುಪ್ತ ಪತ್ರವೊಂದನ್ನು ರುಸವೆಲ್ಟರಿಗೊಪ್ಪಿಸಿದ್ದಾರೆ.

ಇನ್ನವುಗಳು ಪ್ರಕಟಣೆಗೆ ದೊರೆತಾಗ ಈ ಪತ್ರ ವ್ಯವಹಾರಗಳಿಗೆ ನ್ಯಾಯವಾಗಿ ಇಡಲಿರುವ ಹೆಸರು-'ರುಸವೆಲ್ಟ್-ಸ್ಟಾಲಿನ್ ಪ್ರಣಯ ಪತ್ರಗಳು'.

O

'ಇಟಲಿಯ ಆಕ್ರಮಣವು ಜಯಶೀಲವಾಗಬಹುದೆಂಬ ಭೀತಿಯಿಂದ ಹಿಟ್ಲರನು ಅಲ್ಲಿಯ ಆಸ್ಪತ್ರೆಗಳಲ್ಲಿದ್ದ ಜಖಂಗೊಂಡ ಜರ್ಮನ್ ಯೋಧರನ್ನೆಲ್ಲಾ ಆಸ್ಟ್ರಿಯಕ್ಕೆ ಸಾಗಿಸಿದ್ದಾನೆ'— ಸ್ಟಾಕ್‌ಹೋಮಿನಿಂದ ವರದಿ.

ಭೇಷ್! ಹಿಟ್ಲರನು ಖಾಲಿ ಮಾಡಿದ ಆ ಸ್ಥಳಗಳನ್ನು ಬ್ರಿಟಿಷರಾಕ್ರಮಿಸಿಕೊಳ್ಳಲಿದ್ದಾರೆ!!

O

'ಗಾಂಧಿಯವರು ಬರೆದ ಪತ್ರವು ನಾನು ಯಾಚಿಸಿದಂತಹದಲ್ಲ; ನಾನು ಯಾಚಿಸಿದುದು ಪಾಕಿಸ್ತಾನವನ್ನಾಧರಿಸಿ ಗಾಂಧಿಯವರು ನನಗೆ ಬರೆಯಬೇಕೆಂದು ಅಂತಹ ಪತ್ರವನ್ನು ತಡೆಯುವ ಧೈರ್ಯ ಈಗ ಕೂಡಾ ಸರಕಾರಕ್ಕಿಲ್ಲ'- ತನ್ನ ವಿಳಾಸದ ಪತ್ರ ತನಗೆ ಬಾರದಿದ್ದುದನ್ನು ಕಂಡು ಜಿನ್ನರ ಮಾತು.

ಪ್ರಾಯಶಃ ಮುಂದಿನ ವೈಸರಾಯರಿಗೆ ಜಿನ್ನರ ವಿಳಾಸ ಮತ್ತು ವಿಚಾರವನ್ನರಿತು ಕಾಗದ ಬಟವಾಡೆ ಮಾಡುವ ತರಬೇತಿಯೀಗ ಲಂಡನಿನಲ್ಲಿ ದೊರೆಯುತ್ತಿರಬಹುದು!

ವಿನೋದ

An Appeal to your Reason.

It is not the one who goes it is those who are left behind who suffer. Why leave them to their fate? Why leave them to adjust their Whole lives to a reduced level because YOU lived "for the day?" Safeguard those who are near and dear to you by insuring with a Company, which is "YOUR OWN".

INSURE that YOUR children may be equipped to take their rightful places in the world

INSURE that YOUR wife shall not be destitute, by your loss, in a manner you never meant her to be

Above all, make sure that in your old age you are adequately provided for.

REMEMBER

THERE IS INSURANCE FOR ALL EVENTUALITIES AND POLICIES ISSUED TO SUIT ALL POCKETS. INSURE TODAY WITH

THE INDO-UNION ASSURANCE Co. Ltd., MADRAS.

PLEASE ASK FOR DETAILS FROM

M Sunderram Shetty,
Branch Manager,
Behramji Mansion,
Phirozshah Metha Road,
Fort BOMBAY.

OR

K S Ramamurthi, B. A.,
General manager,
MADRAS

OR

Our following organisers in South Kanara

1. **A. Karunakara Hegde,** Sudarshan Tile Works, Bolar, MANGALORE.
2. **T P. N. Nambiar,** Main Road, MULKI.
3. **K Jagannath Shetty,** Near Mission Hospital, UDIPI.
4. **K Sanjiva Hegde,** COONDAPOOR

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

ಮುಖ್ಯ ಕಾರ್ಯಾಲಯ:— ಕೋರ್ಟ್ ರಸ್ತೆ, ಉಡುಪಿ, ದಕ್ಷಿಣ ಕನ್ನಡ.

ಶಾಖೆಗಳು:— ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಕಿನ್ನಿಗೋಳಿ.

ಮುಸಂಕೇವಿನಾತಿಗಳು ತಾ. 31-7-1943 ಅಥವಾ ಈ ತಾರೀಕಿನ ಮೊದಲು ವ್ಯಾದೆಯಾಗುವುದಾದರೆ ಅಂಥಾ ವ್ಯಾದೆಯ ವರೆಗೆ ಸಾಲಿಯಾನ ಶೇಕಡಾ 3ರ ಸಲ ಬಡ್ಡಿಯಲ್ಲಿ 3, 1, 5 ಅಥವಾ 6 ತಿಂಗಳ ವ್ಯಾದೆಯಿಂದ ಪ್ರತಿಯೊಂದು ರೀತಿಯಲ್ಲಿ ಅಂಗೀಕರಿಸಲ್ಪಡುತ್ತವೆ.

ಬೇಂಕಿನ ಪ್ರತಿಯೊಂದು ವಿಧದ ವಹಿವಾಟುಗಳು ನಡೆಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ಮೊಖತಾ ಅಥವಾ ಪತ್ರದ್ವಾರಾ ಸಮೀಪದ ಶಾಖೆಯಲ್ಲಿ ದಯವಿಟ್ಟು ವಿಚಾರಿಸಿರಿ.

REGD.

ಅಮೃತಾಂಜನ ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬೇಗ ಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಹಳ್ಳನೋವು, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಎಲ್ಲಾ ಕಡೆ ಮಾರ್ಕೆಟು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತ.

D. M. Kunhi Raman, Manager,
Parassini Madappura Temple,
P. O Parassinikkatavu
(Via) Pappinisseri.

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ-

ಪರಸಿನಿ ಕಡವು **ದೇವಸ್ಥಾನದಿಂದ ಈ ಮೂಲಕ ಮಾಡುವ ವಿನ್ನಹ.**

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವುದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುಞ್ಞಿರಾಮನ್.
ಮೆನೇಜರ್.

ನವಯುಗದ ಹೊಸ ಚಂದಾದರ

ಕಾಗದದ ಅಭಾವ ಹಾಗೂ ಸರಕಾರದ ಹೊಸ ಆಜ್ಞೆಯಂತೆ ಇದೇ ಎಪ್ರಿಲ್ ತಾ. 1 ರಿಂದ ನವಯುಗದ ಬಿಡಿ ಸಂಚಿಕೆಯ ಬೆಲೆಯನ್ನು 0-1-6ಗೆ ಏರಿಸಲಾಗಿದೆ. ಜಾಹೀರಾತಿನ ದರವನ್ನೂ ಹೆಚ್ಚಿಸಲಾಗುವುದು. ವಾರ್ಷಿಕ ಚಂದಾ ದರವನ್ನು ಈ ಕೆಳಗಿನಂತೆ ಗೊತ್ತು ಮಾಡಲಾಗಿದೆ. ಈಗಿದ್ದ ಚಂದಾದಾರರಿಗೆ ಮಾರ್ಚ ಅಂತ್ಯದ ವರೆಗೆ ಮೊದಲಿನಂತೆ ಚಂದಾ ದರ ಹಿಡಿದು ಉಳಿದ ಹಣದಲ್ಲಿ ಹೊಸ ದರದಂತೆ ಎಷ್ಟು ಸಮಯ ಕಳಿಸಬಹುದೋ ಅಷ್ಟು ಅವಧಿಯ ವರೆಗೆ ಪತ್ರಿಕೆ ಕಳಿಸಲಾಗುವುದು. ಚಂದಾ ಬಾಕಿ ಇರುವವರು ಮಾರ್ಚ್ ತನಕ ಮೊದಲಿನ ದರದಂತೆಯೂ ಅನಂತರ ಹೊಸ ದರದಂತೆಯೂ ಚಂದಾ ಹಣ ಕಳಿಸುವಂತೆ ವಿನಂತಿ

ಹೊಸ ಚಂದಾದರ

	ಸ್ವದೇಶೀಕರಿಗೆ	ಪರಸ್ಥಳೀಕರಿಗೆ ಅಂಚೆ ವೆಚ್ಚ ಸೇರಿ
1 ವರ್ಷಕ್ಕೆ ರೂ	3-12-0	4-8-0
6 ತಿಂಗಳಿಗೆ ರೂ.	2-0-0	2-8-0

ಎಂದಿನಂತೆ ವಾಚಕರೂ ಜಾಹೀರಾತುದಾರರೂ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಮೆನೇಜರ್.

— ಮಕ್ಕಳನ್ನು ಹಡೆಯುವದು ಸಾಕು.—

ಅಶಕ್ತ ಸ್ತ್ರೀಯರಿಗೆ

ಬರ್ಥ ಕಂಟ್ರೋಲ

ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ:-ಪ್ರತಿದಿವಸ ಮುಂಜಾನೆ 1 ಗುಳಿಗೆ, ಮಧ್ಯಾಹ್ನಕ್ಕೆ 1 ಗುಳಿಗೆ, ಸಂಜೆಗೆ 1 ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಪರಪುರುಷಸಂಗ ಬಿಡಬೇಕು. 7 ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ನಿರಾಳ.

ಮಾಲಕರು:— ಬಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಯಲ್ಲಾಳ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:— ಕುಂಬಾರವಾಡಿ ಸ್ಟೋರ್ಸ, ದಾವಣಗೇರಿ:— ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾಸ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ, ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja,
President & Manager

ಯಂ. ಆರ್. ಪೂಂಜ,
ಪ್ರೆಸಿಡೆಂಟ್ ಮತ್ತು ಮೆನೇಜರ್.

ನವಜೀವಾಮೃತ ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರೀಕ್ಷಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ** ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

1 ಟಿನ್ನಿನ 3 ಬಾಟ್ಲಿಗಳು ಹೆಚ್ಚು ಕಡಿಮೆ 40 ದಿವಸಗಳಿಗೆ ಬರುವವು. ಅಂದರೆ ಕೇವಲ 4 ರೂಪಾಯಿಗಳಿಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದಕ**

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸದೊರೆಯ ಬೇಕೋ?

ಸುಖನಿವಾಸಕ್ಕೆ ಬನ್ನಿ!

ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ. : : : : ಮಂಗಳೂರು.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಸ್ಥಾಪನೆ

ಕ್ರೌನ ರಬ್ಬರ ಸ್ಟಾಂಪ್ ಕಂಪೆನಿ

1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K H. SHETTY AT THE NAVAYUGA PRESS. UDIPI, S. INDIA.

Regd. No. M. 3618. | Ested. 1921 ಸ್ಥಾಪನೆ.

NAVAYUGA
ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೩ | ಸಂಚಿಕೆ ೪೨

FOUNDER
Sri. A. B. Shetty, M. L. A.

Vol. 23 | No. 42

NAVAYUGA— Kannada Weekly —UDIPI, S. I.

ಉಡುಪಿ ● 8—7—1943 ● ಮಂಗಳೂರು.

ಹೊಸಕೆರೆ ಚಿದಂಬರಯ್ಯನವ
ರಿಂದ ರಚಿತವಾದ ಗೀತೆಯ
ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು ೩೪೦ ಪುಟಗಳು.
ಬೆಲೆ (ಸುಂದರ ಪ್ರತಿ) ೦—೮—೦
(ಕೆಲಿಕೋ ಬೈಂಡ್) ೦—೧೨—೦
(ಲೆದರ್ ಬೈಂಡ್) ೧—೪—೦
ಪ್ರತಿಗಳು ಪ್ರಸಿದ್ಧ ವ್ಯಾಪಾರಿಗಳಲ್ಲಿ ಸಿಗುವುದು.
0—10—0 ಸ್ಟಾಂಪು ಕಳಿಸಿದ್ದಲ್ಲಿ ಒಂದು
ಪ್ರತಿಯನ್ನು ಬುಕ್ ಪೋಸ್ಟು
ಮಾಡಲಾಗುತ್ತೆ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಶ್ರೀಮತಿ ಶಿವರಾಣಿ. ದೇವಿಯವರಿಂದ
(ದಿವಂಗತ ಪ್ರೇಮಚಂದರ ಪತ್ನಿ)
ರಚಿತವಾದ ಹಿಂದೀ ಕತೆಗಳ ಕನ್ನಡ
ಭಾಷಾಂತರ

ನಾರೀ ಹೃದಯ

ನಾರೀ ಹೃದಯದ ವಾಸ್ತವಿಕ ಚಿತ್ರ
ವನ್ನು ಚಿತ್ರಿಸುವ ಉತ್ತಮ ಕತೆಗಳ
ಸಂಗ್ರಹ.

ಬೆಲೆ 0—14—0
ಟ ಖ. 0—2—0 ಪ್ರತ್ಯೇಕ.
ಒಂದು ರೂಪಾಯಿ ಸ್ಟಾಂಪು ಕಳಿಸಿದರೆ ಒಂದು
ಪ್ರತಿಯನ್ನು ಕಳಿಸಲಾಗುವುದು.
ಕಿರಿಯಾರ ಪ್ರಪಂಚ, ಉಡುಪಿ.
ಅಥವಾ ನವಭಾರತ ಬುಕ್
ಡಿಪೊ, ಉಡುಪಿ.

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

The Canara Mutual Assurance Co., Ltd.,
UDIPI. (S. India).

ನೀವೀ ವರೆಗೆ ವಿಮೆಯನ್ನೇ ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಈಗಲೇ ವಿಮೆ ಇಳಿಸಿರಿ

ಏಕೆಂದರೆ:—

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸವಿಾಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ, ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದಪ್ರಮುಖ ಏಜಂಟರು.
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ, ದ. ಕನ್ನಡ.
ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ:—
ಮಂಗಳೂರು, ಕಲ್ಲಿಕೋಟೆ, ಸೇಲಂ, ತಿರುವಾಂಕೂರು, ಬೆಂಗಳೂರು ನಗರ ಮತ್ತು ಬೊಂಬಾಯಿ.

THE BOMBAY LIFE ASSURANCE CO., LTD.

ಬಂಟರ ಯುವಕ ಸಂಘ, ಮುಂಬಯಿ.

ಮುಂಬಾಯಿ ನಗರದಲ್ಲಿ ವಾಸಿಸುವ ಬಂಟ ತರುಣರಲ್ಲಿ ನೈತಿಕ, ಮಾನಸಿಕ, ಸಾಮಾಜಿಕ ಹಾಗೂ ಶಾರೀರಿಕ ಶಕ್ತಿಯನ್ನು ಹೆಚ್ಚಿಸಿ, ಪರಸ್ಪರ ಪ್ರೇಮ ಸೌಹಾರ್ದವನ್ನು ಅಭಿವೃದ್ಧಿಗೊಳಿಸಿ, ಸಹಕಾರ ಸಹಾನುಭೂತಿಯಿಂದ ತಮ್ಮ ಜಾತಿಯ ಮತ್ತು ಕನ್ನಡಿಗರ ಮೇಲ್ಮೆಯನ್ನು ಸಾಧಿಸುವ ಉಚ್ಚ ಉದ್ದೇಶದಿಂದ "ಬಂಟರ ಯುವಕ ಸಂಘ"ವು ಕಳೆದ ೧೯೪೧ರಲ್ಲಿ ಸ್ಥಾಪಿತವಾಯಿತು. ಈ ಧ್ಯೇಯವನ್ನು ಮುಂದಿಟ್ಟುಕೊಂಡು ಈ ಸಮಿತಿಯು ಕಳೆದ ಎರಡು ವರ್ಷಗಳಿಂದ ತನ್ನಿಂದ ಸಾಧ್ಯವಾದಷ್ಟು ಕಾರ್ಯ ಭಾರವನ್ನು ಹೊತ್ತುಕೊಂಡು ದುಡಿಯುತ್ತಾ ಬೆಳೆಯತೊಡಗಿ ಇದೀಗ ಮೂರನೆಯ ವರ್ಷಕ್ಕೆ ಕಾಲಿಟ್ಟಿರುವುದು. ಈ ವರ್ಷಾರಂಭದಿಂದ ಈ ಸಂಘವು ಒಂದು ವಾಚನಾಲಯ ಮತ್ತು ಪುಸ್ತಕ ಭಂಡಾರವನ್ನು ತೆರೆದು ನಡಿಸಿಕೊಂಡು ಬರುವುದು ಮಾತ್ರವಲ್ಲದೆ ಕನ್ನಡಿಗರಲ್ಲಿ ವಿದ್ಯಾ ಪ್ರಸಾರವಾಗುವಂತೆ ಮುಂಬಯಿಯ "ಕರ್ನಾಟಕ ಫ್ರೀ ನೈಟ್ ಹಾಯ್ ಸ್ಕೂಲಿ"ನ ಆಡಳಿತವನ್ನು ವಹಿಸಿಕೊಂಡು, ಇದೇ ತಾ. 9—6—43ರಿಂದ ನಡೆಸಿಕೊಂಡು ಬರುತ್ತಿರುವುದು. ಈ ಮಹತ್ತಾದ ಹೊಣೆಗಾರಿಕೆಯನ್ನು ಸುಸೂತ್ರವಾಗಿ ಉತ್ತಮ ರೀತಿಯಿಂದ ನಡೆಸಿಕೊಂಡು ಬರಬೇಕಾದರೆ ತುಂಬಾ ಹಣ ಬೇಕು ಎಂಬುದು ನಿರ್ವಿವಾದ. ಆದುದರಿಂದ ಸ್ವಜಾತಿ ಬಾಂಧವರು ಮತ್ತು ಇನ್ನಿತರ ಮಹನೀಯರು ಉದಾರತೆಯಿಂದ ತಮ್ಮ ಕೈಲಾದ ಸಹಾಯವನ್ನಿತ್ತು ನಮ್ಮ ಯುವಕವರ್ಗದ ಕಾರ್ಯಭಾಗವನ್ನು ಯಶಸ್ವಿಗೊಳಿಸಲು ನೆರವಾಗಬೇಕಾಗಿ ವಿನಂತಿ.

Karnataka Free Night High School,
Kumta Street,
Fort Bombay, 9-6-43.

ಎಮ್. ಶ್ರೀಧರ ಶೆಟ್ಟಿ (ಅಧ್ಯಕ್ಷ)
ಪಿ. ನಾರಾಯಣ ಶೆಟ್ಟಿ } ಗೌ. ಜತೆ ಕಾರ್ಯದರ್ಶಿಗಳು
ಎ. ಬಾಲಕೃಷ್ಣ ಶೆಟ್ಟಿ

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ....ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವಮು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಧ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ.—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೆಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

★ ದ್ವಿತೀಯರಂಗಕ್ಕಾಗಿ ದ್ವಿಭಾಷೆ! ★

'ಒಂದು ಸಾಕಾಗದು; ಇನ್ನೊಂದು ನಿರ್ಮಾಣವಾಗಲಿ'-ಎಂಬ ಎರಡು ವಿಧದ ಕೂಗನ್ನು ಕೇಳಿ ಕೇಳಿ ನಾವಿಂದು ಬೇಸತ್ತಿದ್ದೇವೆ. ಅವುಗಳಲ್ಲಿ ಯುರೋಪಿನಲ್ಲಿ ಪ್ರತ್ಯೇಕ ರಣರಂಗ ನಿರ್ಮಾಣವಾಗಬೇಕೆಂಬ ಕೂಗೊಂದು; ಹಿಂದುಸ್ಥಾನದಲ್ಲಿ ಪ್ರತ್ಯೇಕ ಪಾಕಿಸ್ತಾನವಾಗಬೇಕೆಂಬುದು ಮತ್ತೊಂದು. ಇವುಗಳ ಪೈಕಿ ಎರಡನೆಯದು ಕೈಗೂಡದ ದೆಸೆಯಿಂದ ಹಿಂದೂ ದೇಶವನ್ನು ಮತ್ತೊಂದು ದುರದೃಷ್ಟವು ಪೀಡಿಸದ ಸಮಾಧಾನವಿದೆ. ಮೊದಲನೆಯದು ಕೈಗೂಡದ ದೆಸೆಯಿಂದ ರಶ್ಯವು ಮಹಾ ದುರದೃಷ್ಟಕ್ಕೊಳಗಾಗಬಹುದೆಂಬ ಅಸಮಾಧಾನವಿದೆ. ಮಿ. ಜಿನ್ನರಂತಹ ಕೆಲವೇ ಜಾತೀಯ ವಾದಿಗಳಿಗೆ ಬೇಕಾಗಿರುವ ಪಾಕಿಸ್ತಾನದ ಮಾತಂತಿರಲಿ; ಇಡೀ ಪ್ರಪಂಚವೇ ಹಾರೈಸುತ್ತಿರುವ ಹಾಗೂ 'ಬರಲಿದೆ' ಎಂದಿದ್ದುದು 'ಬರುತ್ತಿದೆ' ಎಂಬಂತಾಗಿರುವ ದ್ವಿತೀಯ ರಂಗದ ಕುರಿತು ಇಲ್ಲಿ ಪ್ರಸ್ತಾಪಿಸೋಣ.

ಚರ್ಚಿಲ್ಲರ ಭಾಷಣ

ಕಳೆದ ತಾ. ೩೦ರಲ್ಲಿ ಲಂಡನಿನ ಗಿಲ್ಡ್ ಹಾಲಿನಲ್ಲಿ ಬ್ರಿಟಿಷ್ ಪ್ರಧಾನಿ ಮಿ. ಚರ್ಚಿಲ್ಲರು ಭಾಷಣವೀಯುತ್ತಾ "ಶರದೃತುವಿನ ಹನಿಯುದುರುವ ಮೊದಲೇ ಭೂಮಧ್ಯ ಸಮುದ್ರ ಮತ್ತು ಇತರ ಕಡೆಗಳಲ್ಲಿ ಭೀಕರ ಹೋರಾಟವಾರಂಭವಾಗುವದು. ನಾಜಿಗಳು ಫ್ಯಾಸಿಸ್ಟರು ಮತ್ತು ಜಪಾನಿಯರು ಶರ್ತವಿಲ್ಲದಾ ಶರಣು ಬರಬೇಕೆನ್ನುತ್ತೇನೆ. ಅವರ ಪ್ರತಿಭಟನಾಂತಃಕರಣವು ಸಂಪೂರ್ಣವಾಗಿ ಭೇದಿಸಲ್ಪಟ್ಟು ಅವರು ಇದ್ದಕ್ಕಿದ್ದಂತೆ ನಮ್ಮ ನ್ಯಾಯ ಮತ್ತು ಕನಿಕರಕ್ಕೊಳಗಾಗಿ ಬದುಕುವಂತಾಗಬೇಕು" ಎಂದು ಶಪಥಮಾಡಿದ್ದಾರೆ. ಮೇ ತಿಂಗಳೊಂದರಲ್ಲೇ ಅಟ್ಲಾಂಟಿಕಿನಲ್ಲಿ 30 ಕ್ಕೂ ಮಿಕ್ಕಿ ಯು. ಬೋಟುಗಳನ್ನು ನಾಶಮಾಡಿದ್ದೇವೆ ಜೂನ್ ತಿಂಗಳಲ್ಲಿ ಮಿತ್ರರಾಷ್ಟ್ರೀಯರ ಹೊಸ ಹಡಗ ತಯಾರಿಕೆಯು, ಆಗುವ ಹಡಗ ನಷ್ಟದ 7ರಿಂದ 10 ಪಾಲಷ್ಟು ಅಧಿಕವಾಗಿದೆ. ಮೇ ಮಧ್ಯದಿಂದ ಈ ತನಕ ಇಡೀ ಉತ್ತರ ಅಟ್ಲಾಂಟಿಕಿನಲ್ಲಿ ತಮ್ಮ ಒಂದೇ ಒಂದು ಹಡಗ ಮುಳುಗಿಲ್ಲ ಎಂದು ಮಿ ಚರ್ಚಿಲ್ಲರ ಹೆಗ್ಗಳಿಕೆ

ಹಿಂದುಸ್ಥಾನವು.

ಸಮಾಧಾನಗೊಂಡು ಬ್ರಿಟಿಷ್ ಸಾಮ್ರಾಜ್ಯದಲ್ಲಿಯೇ ಕ್ಷೇಮವಾಗಿರಬಲ್ಲುದೆಂದು ಬ್ರಿಟಿಷ್ ಮುಖ್ಯ ಮಂತ್ರಿಯ ನಂಬಿಕೆ. ಮಿಕ್ಕ ದೇಶಗಳಲ್ಲಿ ಒತ್ತಾಯದಿಂದಲೂ ಸೈನ್ಯಕ್ಕೆ ಸೇರಿಸಿಕೊಂಡಿರುವಾಗ ಹಿಂದುಸ್ಥಾನದಲ್ಲಿ ಸ್ವಯಂ ಪ್ರೇರಣೆಯಿಂದಲ್ಲದೆ ಒಬ್ಬನೇ ಒಬ್ಬನು ಸೇರಿಲ್ಲವೆಂದು ಚರ್ಚಿಲ್ಲರಂದಿದ್ದಾರೆ. ಹಿಂದೊಮ್ಮೆ ಒದಗಿದ್ದ ರೋಮಾಂಚಕಾರೀ ಗಂಡಾಂತರದಲ್ಲಿ ಬ್ರಿಟನು ಒಂದೇಯಾಗಿ ಎದುರಿಸಿ ನಿಂತರೀತಿ, ಸಾಮ್ರಾಜ್ಯ ರಾಷ್ಟ್ರಗಳ ಸಹಕಾರ, 'ಯಾರ ಶಕ್ತಿ ವೃದ್ಧಿಯಿಂದ ಬ್ರಿಟಿಷರು ಭೀತಿಗೊಳ್ಳುವದಿಲ್ಲವೋ, ಯಾರ ಪ್ರಾಮುಖ್ಯತೆಯಿಂದ ಬ್ರಿಟಿಷರಲ್ಲಿ ದ್ವೇಷ ಮೊಳೆಯುವದಿಲ್ಲವೋ ಆ ಅಮೇರಿಕಾನರ' ಸಹಕಾರ, ಜರ್ಮನಿಯ ಮೇಲೆ ಆಕಾಶ ಧಾಳಿಯಿಂದಾಗಿರುವ ಪ್ರಲಯ ಇತ್ಯಾದಿಗಳ ಪ್ರಸ್ತಾಪವು ಮಿ. ಚರ್ಚಿಲ್ಲರ ಭಾಷಣದಲ್ಲಿ ಬಂದಿದೆ.

ತಡವೇಕೆ?

ಅಂತೂ ದ್ವಿತೀಯ ರಂಗದ ಸಮರವೀಗಲೇ ಆರಂಭವಾಗುವದಿಲ್ಲ; ಆದರೆ ಸಂಭ್ರಮವಿನ್ನೂ ಮುಗಿದಿಲ್ಲ. ಮಿ. ಚರ್ಚಿಲ್ಲರ ಭಾಷಣದನ್ವಯ ಒಕ್ಟೋಬರಿನೊಳಗೆ ದ್ವಿತೀಯರಂಗ ನಿರ್ಮಾಣವಂತೂ ಖಂಡಿತ. ಈ ಬಾರಿಯ ಶರದೃತುವೇ ಮಿತ್ರರ ಶಸ್ತ್ರ ಋತುವಾಗುವದು. ಆ ಮೊದಲೇ ಪ್ರಾರಂಭಿಸಿರೆಂದು ಮಿಕ್ಕವರಿಗೆ ಹೇಳಲು ಬರುವದಿಲ್ಲ ಆದರೆ ಟ್ಯುನಿಸಿಯಾ ವಿಜಯ ಘೋಷದೊಂದಿಗೆ ಮಿತ್ರ ರಾಷ್ಟ್ರೀಯರು ಕೆಬ್ಬಿಸಿದ್ದ ದ್ವಿತೀಯರಂಗದ ಘರ್ಜನೆಯನ್ನು ಕೇಳಿದವರು ಇನ್ನು ನಾಲ್ಕು ತಿಂಗಳ ನಂತರ ಕೊಡುವ ಹೊಡೆತದ ಹೂಂಕಾರವಿದು ಎಂದು ಹೇಳುವಂತಿದೆಯೆ? ದ್ವಿತೀಯರಂಗಕ್ಕೆ ಕಾಲಿತ್ತಿಟ್ಟವರು ಮಾತಾಡುವ ಭಾಷೆಯೇ ಅದಾಗಿದ್ದಿತು. 'ವಿರೋಧಿಗಳು ಕಾಲಿಡುವ ದಿನ ಬಂದಿದೆ' ಎಂದು ಆಕ್ಸಿಸ್ ರಾಷ್ಟ್ರೀಯರೇ ಹೇಳಿದ್ದರು. ಟ್ಯುನಿಸಿಯಾ ಯುದ್ಧ ಸಾಗುತ್ತಿದ್ದಾಗ 'ಅಲ್ಲಿಯ ಕಾರ್ಯ ಮುಗಿದೊಡನೆ ದ್ವಿತೀಯರಂಗ ಪ್ರಾರಂಭಿಸುವೆವು' ಎಂದು ಅಧ್ಯಕ್ಷ ರೂಸವೆಲ್ಟರಂದಿದ್ದರು. ಹೀಗೆ ಟ್ಯುನಿಸಿಯಾದ ನಂತರ ದ್ವಿತೀಯರಂಗವನ್ನು ಎಲ್ಲರೂ ದಿನ ಲೆಕ್ಕದಲ್ಲಿ ಗಣಿಸುತ್ತಿದ್ದಾಗಲೇ ಚರ್ಚಿಲ್ಲರು ಋತು ಸಂಖ್ಯೆಯಲ್ಲಿ ಲೆಕ್ಕಿಸಲು ಹೇಳಿ ಕೊಟ್ಟಿದ್ದಾರೆ. ಇವೆಲ್ಲವುಗಳ ಮೇಲಿಂದ, ಮಿತ್ರರ ಅಬ್ಬರವು ಮುಂಜಾವನ್ನು ಕಂಡು ಕೂಗಿದ ಕೋಳಿಯ ಕೋ ಕೋದಂತಲ್ಲ; ಮಧ್ಯ ರಾತ್ರಿಯಲ್ಲೇ ಬೆಳದಿಂಗಳನ್ನು ಕಂಡು ಕೋ ಕೋ ಹಾಕಿದ ಹುಚ್ಚು ಕೋಳಿಯದಿದು ಎಂಬಂತೆ ಹಾಸ್ಯಾಸ್ಪದವಾಗಿ ಕಾಣುತ್ತದೆ. ಇದರ ಗುಟ್ಟೇನು? ಮಿತ್ರರಿಗಿನ್ನೂ ತಯಾರಿಬೇಕಾಗಿದೆ.

ರಶ್ಯದ ಆತುರ.

ಮಿತ್ರರು ಹೊರೆಯಿಳಿಸಬೇಕಾದರೆ ಇನ್ನೂ ಮೂರು ಬಾಗಿಲುದಾಟಿ ಬರಬೇಕಾದಷ್ಟು ದೂರದಲ್ಲಿದ್ದರೆ, ರಶ್ಯವು ನಾಜೀ ಸೇನೆಯ ಎಲ್ಲಾ ಹೊರೆಯನ್ನು ಈ ತನಕ ಹೊತ್ತು ನಿಂತಿದ್ದು 'ಇನ್ನು ನಿಮಿಷ ತಡವಾಗಬಾರದು' ಎಂಬಂತೆ ಭಾರದಿಂದ ಕೊರಳು ಮುರಿದುಕೊಂಡು ನಿಂತಿದೆ. ಆದ್ದರಿಂದಲೇ ತಮ್ಮ ಸಮರದ ದ್ವಿತೀಯ ವಾರ್ಷಿಕೋತ್ಸವ ದಿನದಲ್ಲಾದರೂ ಸ್ಟಾಲಿನರು ದ್ವಿತೀಯ ರಂಗಕ್ಕಾಗಿ ಒತ್ತಾಯಿಸಿದ್ದಾರೆ. ಇಂಗ್ಲಾಂಡು ಅಮೇರಿಕಗಳನ್ನು ಹುರಿದುಂಬಿಸಲು ಸಾಧ್ಯವಿರುವ ಎಲ್ಲಾ ಹಾದಿಯಿಂದಲೂ ರಶ್ಯ ಪ್ರಯತ್ನಿಸುತ್ತಿದೆ. ಇತ್ತೀಚೆಗಿನ ಒಂದು ಉಪಾಯವೆಂದರೆ ನಾಜೀ ಸೇನೆಯ ದುರ್ಬಲತೆಯನ್ನು ತಗ್ಗಿಸಿ, ಮಿತ್ರರಿಗೆ ಧೈರ್ಯ ಬರಿಸುವದು. 'ನಮ್ಮ ರಣರಂಗದಲ್ಲಿ 211 ಡಿವಿಜನ್ ನಾಜೀ ಸೇನೆಗಳಿವೆ. ಅವುಗಳಲ್ಲೇನೂ ಬೇರೆ ರಂಗಕ್ಕೆ ವರ್ಗಾಯಿಸಲ್ಪಟ್ಟಿಲ್ಲ. ಯುರೋಪಿನ ಇತರ ಕಡೆಗಳಲ್ಲಿ ಒಟ್ಟಿಗಿರುವ ಜರ್ಮನ್ ಸೇನೆ 91 ಡಿವಿಜನು ಮಾತ್ರ. ಇಟಲಿಯಲ್ಲೇನೂ ಇಲ್ಲ. ಫ್ರಾನ್ಸು, ಬೆಲ್ಜಿಯಮ್, ಹೊಲೆಂಡುಗಳಲ್ಲಿ ಒಟ್ಟಿಗಿರುವ ನಾಜೀ ಸೇನೆಯೆಂದರೆ 35 ಡಿವಿಜನು ಮಾತ್ರ. ಅವುಗಳ ಬಹು ಭಾಗವು ಮಿತವಾಗಿ ಹೋರಾಡುವಷ್ಟೇ ಶಕ್ತಿಯುಳ್ಳದ್ದು"—ಎಂದು ರಶ್ಯದ ಅಧಿಕಾರೀ ಪತ್ರಿಕೆ 'ಪ್ರಾವ್ಡ' ಅಂದಾಜು ಹೇಳಿದೆ. 'ಏತಕ್ಕಾಗಿ ಹೆದರಬೇಕು? ತಡ ಮಾಡುವರೆ ಕಾರಣವಿಲ್ಲ'-ಎಂದು ಹುರಿದುಂಬಿಸುವದೇ ಇದರ ಉದ್ದೇಶ. ಆದರೆ ಇಂತಹ ಪ್ರೇರಣೆಯಿಂದ ವಂಚಿಸಲ್ಪಡುವವರು ತಾವಲ್ಲ ಎಂಬಂತೆ ಬ್ರಿಟಿಷ್ ಪತ್ರಿಕೆಗಳೂ ಚಾತುರ್ಯ ಪ್ರದರ್ಶಿಸುತ್ತಿವೆ ರಶ್ಯನರ ಮಾತಿನಲ್ಲಿ ಅತಿಶಯೋಕ್ತಿಯಿದೆ. ಜರ್ಮನಿಯು 1,30,00,000 ಸೇನೆಯನ್ನು ಬೇಕಾದಾಗ ಸಂಗ್ರಹಿಸಬಲ್ಲುದು'-ಎಂದು 'ಸ್ಟೇಟ್ಸ್‌ಮೇನ್' ನಂತಹ ಪತ್ರಿಕೆಗಳು ಹೆದರಿಸುತ್ತಿವೆ. ಆಳುದ್ದ ನೀರಿನ ಮಡುವನ್ನು ರಶ್ಯವು ಮೊಣಕಾಲುದ್ದ ನೀರೆಂದು ತಾತ್ಸಾರಮಾಡಿ ತೋರಿಸುತ್ತದಾದರೆ, ಇಂಗ್ಲಾಂಡು ಅಮೇರಿಕಗಳು ಅದರಲ್ಲಿ ನೆಗಳೂ ಇರಬಹುದೆಂದು ಅಂದಾಜು ಕಟ್ಟಿ ಜಾಗರೂಕತೆ ವಹಿಸಿರುವುದು ಕಂಡು ಬರುತ್ತಿವೆ. ಆದ್ದರಿಂದಲೇ ಈ ವರೆಗೂ 'ದ್ವಿತೀಯರಂಗ'ವೆಂಬುದು ರಾಮನಾಮದಂತೆ ಪಠನೆಗೆ ಮಾತ್ರ!

ಹಿಟ್ಲರರ ಸಿದ್ಧತೆ

ಹಿಟ್ಲರರ ಮೌನ ಸಿದ್ಧತೆಯನ್ನವಲೋಕಿಸುವವರಿಗೆ 'ವಿರೋಧಿಗಳು ಹೆಜ್ಜೆ ಮುಂದಿಟ್ಟಾಗಲೇ ಬುದ್ಧಿ ಕಲಿಸಬಲ್ಲೆ'ನೆಂಬ ಧೈರ್ಯವವರಿಗಿರಬೇಕೆನ್ನಿಸುತ್ತದೆ. ತನ್ನ ಯು. ಬೋಟು ದಳಗಳ ಬಹು ಭಾಗವನ್ನು ಅವರು ತಮ್ಮ ನಿಲ್ದಾಣಗಳಿಗೆ ವಾಪಾಸು ಕರೆದು ವೈರಿಗಳ ಆಕ್ರಮಣ ಹಡಗಗಳನ್ನು ಬಲಿದಾನ ಪಡೆಯಲು ಸಜ್ಜಾಗಿ ನಿಲ್ಲಿಸಿದ್ದಾರೆಂದು ವಾರ್ತೆ. ಇಟಲಿಯ ಯು. ಬೋಟುಗಳೂ ಹಾಗೆಯೇ ಜಮೆಯಾಗಿವೆ. ಆಕ್ರಮಣದ ವಿರುದ್ಧ ಗೋಡೆ ಕಟ್ಟಲು ರಶ್ಯಾದಿಂದ ಕೆಲಸಗಾರ ದಳವು ಭೂಮಧ್ಯ ಸಮುದ್ರ ಕರಾವಳಿಗೆ ಬಂದು ಈಗಲ್ಲಿ ಅಭೇದ್ಯ ಕೋಟೆ ರಚಿಸಲ್ಪಟ್ಟಿದೆ. ಯುರೋಪಿನ ಧಾಳಿಯನ್ನದಿರಿಸಲು ಹಿಟ್ಲರರು 250 ಡಿವಿಜನು ಸೇನೆಗಳನ್ನು ಸಜ್ಜಾಗಿ ನಿಲ್ಲಿಸಿದ್ದಾರೆಂದು ವದಂತಿ. ಅಂತೂ ಜರ್ಮನಿಯು 'ಹಿಂದಿಲ್ಲ,......ಲ್ಲ' ಎಂಬಂತಹ ಅಪೂರ್ವ ತಯಾರಿಯನ್ನು ಮಾಡಿ ದ್ವಿತೀಯ ರಂಗವನ್ನು ನಿರೀಕ್ಷಿಸುತ್ತಾ ನಿಂತಿದೆ. ಮಿತ್ರ ರಾಷ್ಟ್ರೀಯರು ತಮ್ಮ ಸನ್ನಾಹಕ್ಕಾಗಿ ದೊರಕಿಸಿಕೊಂಡ ಅವಧಿಯು ಹಿಟ್ಲರರ ಪಾಲಿಗಿಲ್ಲವೆನ್ನುವಂತಿಲ್ಲ. ಈ ಅವಧಿಯಲ್ಲಿ ಅವರು ಮತ್ತಷ್ಟು ಬಲಗೊಳ್ಳುವದು ಖಂಡಿತ. ಮೇಲಾಗಿ ಆನ್ಕರ ಮೇಲೇರಿ ಹೋಗುವಾಗಲೇ ಲೋಕ ಭಯಂಕರನಾಗಿ ಕಂಡಿದ್ದ ಹಿಟ್ಲರರು ತನ್ನ ಮೈ ಮೇಲೆ ಬರುವಾಗ ಎಂತಹ ಉಗ್ರ ಪ್ರಯೋಗ ಕೈಕೊಳ್ಳುವರೆಂಬುದನ್ನೂಹಿಸುವದು ಕಷ್ಟ. ಆದ್ದರಿಂದಲೇ ಇಂಗ್ಲಾಂಡು ಅಮೇರಿಕಗಳಿಗೆ ಲೋಕ ಬೇಸರಗೊಳ್ಳುವಷ್ಟು ಮುಂಜಾಗ್ರತೆ. ಅಂತೂ ಕಾಲ ಬಂದಾಗ ದ್ವಿತೀಯ ರಣರಂಗವು ಚರಿತ್ರೆಯಲ್ಲೇ ಅದ್ವಿತೀಯವಾಗುವುದೆಂಬುದಕ್ಕನುಮಾನವಿಲ್ಲ.

ಪ್ರಕಟಣೆ.

ಕಾರ್ಕಳ ತಾಲ್ಲೂಕು ಕೌಡೂರು ಗ್ರಾಮದ ಕೆಳಬಾಳಬೆಟ್ಟು ಮೋನಪ್ಪ ಹೆಗ್ಡೇರ ಸೊಸೆ ಮೀನಾಕ್ಷಿ ಹೆಗ್ಗಡ್ತಿಯು ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದ್ರೆ ನಮ್ಮ [ಕುಟುಂಬದ ನನ್ನ ಮಾವ ಮೋನಪ್ಪ ಹೆಗ್ಡೇರು ಹಿರೇ ಮೆಂಬರನಾಗಿ ನಮ್ಮ ಬಾಬ್ತು ಕೌಡೂರು ಗ್ರಾಮದ ಪಟ್ಟಾ ನಂಬ್ರ 16ನೇ ಆಸ್ತಿಗಳ ಬಾಬ್ತು ಪಟ್ಟಾದಾರನಾಗಿ ಆಡಳ್ತೆ ನಡ್ಸಿ ಕೊಂಡಿದ್ದು ಈಗ ಸುಮಾರು 80ವರ್ಷ ಮೇಲಿನ ಪ್ರಾಯದವರಾಗಿ ವಯೋ ವೃದ್ಧರಾಗಿ ಬದ್ಧಿ ಭ್ರಾಂತರಾಗಿರುತ್ತಾರೆ. ಸದ್ರಿಯವರನ್ನು ಅವರ ಹೆಂಡತಿ ಮಕ್ಕಳು ನಮ್ಮ ದ್ವೇಶಿಕರ ದುರ್ಬೋಧನೆಗೆ ವಳಪಟ್ಟು ತಮ್ಮ ಸ್ವಾಧೀನ ಇಟ್ಟು ಕೊಂಡು ಬಾಲಿಗೇಣಿ ಪಕ್ಲುಗಳ ಗೇಣಿ ವಸೂಲಿ ಮಾಡಿದ ಬಗ್ಗೆ ಅವರಿಂದ ರಶೀದಿ ಕೊಡಿಸಿದೆ. ಅದರಿಂದ ಗೇಣಿಹಕ್ಕು ಟ್ರಾನ್ಸ್‌ಫರ್, ನೋಟು ವಗೈರೆ ಬರ್ಸಿಕೊಂಡು ಕುಟುಂಬ ದ್ರೋಹಮಾಡುವ ಅಭಿಪ್ರಾಯದಿಂದಿರುವದಾಗಿ ನನ್ನ ತಿಳುವಳಿಕೆಗೆ ಬಂದಿರುತ್ತದೆ ನಮ್ಮ ಆಸ್ತಿಗೆ ಈ ವರೇಗೆ ಏನೊಂದು ಸಾಲ ಇರುವುದಿಲ್ಲ, ಸಾಲ ಮಾಡಕಕ್ಕೆ ಅಗತ್ಯವೂ ಇಲ್ಲ. ಸದ್ರಿಯವರಿಂದ ಯಾವತರದ ಹಕ್ಕು ಟ್ರಾನ್ಸ್‌ಫರ್ ವಗೈರೆ ಮಾಡಿಕೊಂಡರೆ ನಮ್ಮ ಆಸ್ತಿಯಾಗಲೀ ನಾವಾಗಲೀ ಬಾಧ್ಯರಲ್ಲ, ಅಂಥಾ ಸಾಲಗಳು ಸಿಂಧುಗಳಕ ವುಗಳೂ ಅಲ್ಲ ಎಂತ ಈ ಮೂಲ್ಕ ಸರ್ವರಿಗೂ ತಿಳಿಸುತ್ತೇನೆ.

||| ಈ ಗೆರೆ ಮೀನಾಕ್ಷಿ ಹೆಗ್ಗಡ್ತಿ ರುಜು.

ತಾ5-7-43 ಕೆ. ಶಿವಣ್ಣ ಹೆಗ್ಡೆ ಸಾಕ್ಷಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ವಾರ ಪತ್ರಿಕೆ:

ಅಂತರಂಗ

ಶ್ರೀ. ಎ. ಎಸ್. ಪಿ. ಅಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್‌ಲಾ., ಎಫ್. ಆರ್. ಎಸ್. ಎಲ್. ಇವರ 'Funny Tales of Ind' ಎಂಬ ಇಂಗ್ಲಿಷ್ ಕಥಾವಳಿಯ ಅನುವಾದವು ಧಾರಾವಹಿಯಾಗಿ ಪ್ರಕಟವಾಗುತ್ತಿವೆ.

ಇದೀಗ ೧೧ನೇ ಸಂಪುಟವು ಆರಂಭವಾಗಿದೆ.

ಹೊಸತಾಗಿ ಚಂದಾದಾರರಾಗುವವರಿಗೆ ಸುಸಂಧರ್ಭ!

ವಾರ್ಷಿಕ ಚಂದಾ ರೂ.	4	8	0
6 ತಿಂಗಳಿಗೆ ರೂ.	2	4	0
ಬಿಡಿ ಸಂಚಿಕೆಗೆ	0	1	6

ಮಾದರಿ ಪ್ರತಿಗಳಿಗೂ ಜಾಹೀರಾತು ದರಗಳಿಗೂ ಬರೆಯಿರಿ.

Manager **'Antaranga'** Weekly, Udipi.

CHAMPAE'S SNOW & CASTREX

AGENTS SADANANDA STORES, UDIPI

The Canara Banking Corporation Limited.

(Incorporated in British India—Liability of Members limited.)

ESTD: 1906.

Head Office: **UDIPI**, S. Kanara.

Paid Up Capital as on 31-5-'43 Rs. 6,50,060/-

Reserves „ „ Rs. 3,84,788/-

DEPOSITS exceed Rs. 50 lakhs.

For your Banking requirements come to us and we will assist you. We undertake all kinds of Banking business.

ಉಡುಪಿ, ಗುರುವಾರ, ೮-೭-೧೯೪೩

ಚರ್ಚಿಲ್ಲರ ಹಿಂದುಸ್ಥಾನ

ಕಳೆದ ತಿಂಗಳಾಂತ್ಯದಲ್ಲಿ ಬ್ರಿಟಿಷ್ ಪ್ರಧಾನಿಗಳು ಲಂಡನಿನ ಗಿಲ್ಡ್‌ಹಾಲ್ ಭಾಷಣದಲ್ಲಿ ಹಾರೈಸಿದ ಹಿಂದುಸ್ಥಾನದ ಅದೃಷ್ಟವು, ಅವರೇ ಚಿತ್ರಿಸಿದ ಆ ಪ್ರತ್ಯೇಕ ಹಿಂದುಸ್ಥಾನಕ್ಕೆ ಮಾತ್ರ ಅನ್ವಯಿಸಬಲ್ಲುದು. 'ವಿಶಾಲ ಭಾರತವು ಸದ್ಯದಲ್ಲೇ ಬ್ರಿಟಿಷ್ ಕಾಮನ್‌ವೆಲ್ತಿನೊಳಗೆ ಪೂರ್ಣ ಸಮಾಧಾನ ಹೊಂದುವದೆಂದು ನಾವು ನಂಬುತ್ತೇವೆ'—ಮಿ. ಚರ್ಚಿಲ್ಲರು ಭಾರತದ ಹಣೆಗೆ ಕಟ್ಟಿದ ಅದೃಷ್ಟ ಲಿಪಿಯಿದು! 'ಬ್ರಿಟನ್, ಅಮೇರಿಕ, ಯುನೈಟೆಡ್ ಸ್ಟೇಟ್ಸ್, ರಷ್ಯಾ, ಫ್ರಾನ್ಸ್ ಅಥವಾ ನಮ್ಮ ವೈರಿಗಳ ಸೇನೆಗಳಲ್ಲಿ ಕೂಡಾ ಇರದ ಹಿಂದೀಯ ಸೈನಿಕರಲ್ಲಿ ಮಾತ್ರವಿರುವ ವೈಶಿಷ್ಟ್ಯವೆಂದರೆ ಅವರು ಸಂಪೂರ್ಣವಾಗಿ ಸ್ವಯಂ ಪ್ರೇರಣೆಯಿಂದ ಸೇರಿದವರು" —ಇದು ಮಿ. ಚರ್ಚಿಲ್ಲರು ಚಿತ್ರಿಸಿರುವ ಹಿಂದುಸ್ಥಾನ! ಭಾರತವನ್ನು ಸ್ವತಃ ಸಂದರ್ಶಿಸಿ ಇಲ್ಲಿಯ ಪರಿಸ್ಥಿಯನ್ನರಿತಿರುವ ಲೂಯಿ ಫಿಶರರಂತಹ ವಿದೇಶೀಯ ಪ್ರಾಜ್ಞರು ಈ ಮಾತನ್ನು ಕೇಳಿ ತಾವು ಕಂಡ ಹಿಂದುಸ್ಥಾನವಾವುದು--ಇದಾವುದು, ಎಂದು ಕೌತುಕಗೊಳ್ಳಬಹುದು. ಕ್ರಿಪ್ಸ್ ಸೂಚನೆಯಲ್ಲಿ, ಇಚ್ಛೆಯಿದ್ದರೆ ಬ್ರಿಟಿಷ್ ಸಾಮ್ರಾಜ್ಯದಿಂದ ಕಡಿದು ಹೋಗುವ ಹಕ್ಕನ್ನು ಹಿಂದುಸ್ಥಾನಕ್ಕೀಯಲಾಗಿತ್ತು. ಹಿಂದುಸ್ಥಾನವನ್ನು ಸಮಾಧಾನಗೊಳಿಸುವ ಧ್ಯೇಯದಿಂದ ಹೊರ ಬಿದ್ದಿದ್ದ ಕ್ರಿಪ್ಸ್ ಸೂಚನೆಯಲ್ಲಿ ಇದೊಂದು ಭಾಗವಿರಬೇಕಾದರೆ, ಭಾರತೀಯರಲ್ಲಿ ಆ ಬಯಕೆಯಿದೆ ಎಂಬುದು ಬ್ರಿಟಿಷರಿಗೆ ಮುಂದಟ್ಟಾಗಿರಬೇಕು. ಮಿ. ಚರ್ಚಿಲ್ಲರಾದರೂ ಭಾರತಕ್ಕೆ ಬ್ರಿಟನಿನ ಸಂಬಂಧ ಕಡಿದುಕೊಳ್ಳುವ ಹಕ್ಕಿಲ್ಲವೆಂದು ಆಜ್ಞಾಪಿಸಿಲ್ಲ; ಹಾಗೆ ಮಾಡಲಾರದೆಂದು ತಾವು ನಂಬುತ್ತೇವೆ ಎಂಬ ಆಶೆ ಪ್ರದರ್ಶಿಸಿದ್ದಾರೆ. ಆದರೆ ಹಿಂದುಸ್ಥಾನದವುಟ್ಟಿಗೆ ಬ್ರಿಟಿಷ್ ಅಧಿಕಾರಿಗಳ ಇಂದಿನ ಆಶೆಯೇ ಮುಂದಿನ ಆಜ್ಞೆ. ಇಂದಿನ ಯುದ್ಧಗತಿಯೊಂದನ್ನು ಬಿಟ್ಟರೆ ಮಿಕ್ಕ ವಿಷಯಗಳಲ್ಲಿ-- ಆದರಲ್ಲೂ, ಭಾರತದ ವುಟ್ಟಿಗೆ—ಅವರು ಕಟ್ಟಿಕೊಂಡ ಆಶೆಗಳನ್ನು ಬಿಟ್ಟು ಕೊಟ್ಟ ನಿದರ್ಶನಗಳಿಲ್ಲ. ಆದ್ದರಿಂದ ಹಿಂದುಸ್ಥಾನವನ್ನು ತಮ್ಮ ಸಾಮ್ರಾಜ್ಯದ ಗಡಿ ಬಿಟ್ಟು ಹೋಗದಂತೆ ಎಂದೆಂದಿಗೂ ಬಂಧಿಸಿಡುವ ಪ್ರಯತ್ನ ಬ್ರಿಟಿಷರದೆಂಬುದನ್ನು ತಿಳಿದಿರಬೇಕು. ಭಾರತವು ತನ್ನ ಸ್ವೇಚ್ಛೆಯಿಂದ ಸಾಮ್ರಾಜ್ಯ ಸಂಬಂಧವನ್ನಿಟ್ಟುಕೊಳ್ಳಬಹುದೆಂದು ಮಿ. ಚರ್ಚಿಲ್ಲರಂತವರ ಮನವಲ್ಲ. ಭಾರತವು ಹೀಗೆ ತೃಪ್ತಿ ಹೊಂದಬೇಕು ಎಂದು ತೀರ್ಮಾನಿಸುವವರು ಬ್ರಿಟಿಷರೇ. ಹಾಗೆ ಬ್ರಿಟಿಷರು ಸಮಾಧಾನ ಪಡಿಸಿದುದು ಹಿಂದುಸ್ಥಾನಕ್ಕೆ ಸಾಕಾಗದೆ ಹೋದರೆ ಅದಕ್ಕೆ ಪರಿಹಾರವಿಲ್ಲ; ಮತ್ತೂ ಉಳಿಯುವ ಅಸಮಾಧಾನವು ಬ್ರಿಟಿಷರ ದೃಷ್ಟಿಯಲ್ಲಿ ಅಸಮಾಧಾನವಲ್ಲ. ಹಾಗೆ ಸಾಮ್ರಾಜ್ಯ ಹೊಂದಬೇಕು —ಹೀಗೆ ಸಾಮ್ರಾಜ್ಯದೊಳಗಿರಬೇಕು ಎಂದು ತೀರ್ಮಾನಿಸುವ ತಮ್ಮ ಅಧಿಕಾರವನ್ನು ಬ್ರಿಟಿಷ್ ಸಾಮ್ರಾಜ್ಯವಾದಿಗಳು ಕೊನೆತನಕ ಬಿಟ್ಟುಕೊಡುವಂತಿಲ್ಲವೆಂಬುದೇ ಇಲ್ಲಿ ಗಮನಿಸಬೇಕಾದ ವಿಷಯ. ಯುದ್ಧಗತಿಯು ಮಿತ್ರರಿಗನುಕೂಲವಾಗಹತ್ತಿದ ಹೊತ್ತಿನಲ್ಲಿ ನಾನು ಬ್ರಿಟಿಷ್ ಸಾಮ್ರಾಜ್ಯವನ್ನು ಬರಖಾಸ್ತು ಪಡಿಸಲು ಬಂದವನಲ್ಲ' ಎಂಬ ಸ್ಪಷ್ಟ ವಾಣಿಯನ್ನು ಮಿ. ಚರ್ಚಿಲ್ಲರ ಬಾಯಿಯಿಂದ ಕೇಳಿದ್ದೆವು. ಯುದ್ಧವು ಆ ಹಾದಿಯಿಂದ ಮುಂದುವರಿದಂತೆ ಚರ್ಚಿಲ್ಲರ ಬುದ್ಧಿಯೂ ಇದೇ ಹಾದಿಯಿಂದ ಮುಂದೊತ್ತಿ ಇಂದು ಹಿಂದುಸ್ಥಾನವನ್ನು ಸಾಮ್ರಾಜ್ಯದೊಳಗಿಡುವ ಧ್ಯೇಯವನ್ನು ಬಯಕೆಯ ರೂಪದಿಂದ ಹೊರಡಿಸಿದೆ; ಮುಂದೆ ಇದನ್ನೇ ಆಜ್ಞಾರೂಪದಿಂದ ಕೇಳುವ ಕಾಲ ಬರಬಹುದು!

'ಹಿಂದೀ ಸೈನಿಕರೆಲ್ಲಾ ಸ್ವಯಂಸೇವಕರು' ಎಂಬ ಬ್ರಿಟಿಷ್ ಮುಖ್ಯ ಮಂತ್ರಿಗಳ ಹೆಗ್ಗಳಿಕೆಗೇನೆನ್ನಬೇಕೋ ತಿಳಿಯದು. ಓರ್ವನು ಸ್ವಯಂ ಪ್ರೇರಣೆಯಿಂದ ಯೋಧನಾಗುವದೆಂದರೆ ಸ್ವದೇಶದ ಮಾನ ರಕ್ಷಣೆಗಾಗಿ. ಮಾತೃಭೂ ಕುರಿತು ಚರ್ಚಿಲ್ ಉಲ್ಲೇಖಿತ ಹಿಂದೀ ಯೋಧರನ್ನು ಪ್ರಶ್ನಿಸಿ ಪರೀಕ್ಷಿಸಿದವರಿಗೆ ವಸ್ತುಸ್ಥಿತಿಯ ಅರಿವಾಗದಿರದು!

ದಿವಂಗತ ಎನ್. ಎಸ್. ಸುಬ್ಬರಾಯರು.

ಕನ್ನಡನಾಡಿನ ಹಿರಿಯ ಸೇವಕರಲ್ಲೊಬ್ಬರಾದ ರಾಜಕಾರ್ಯ ಪ್ರವೀಣ ಶ್ರೀ. ಎನ್. ಎಸ್. ಸುಬ್ಬರಾಯರು ಕಳೆದ ತಾ. 29ರಲ್ಲಿ ದಿವಂಗತರಾದರೆನ್ನಲು ವಿಷಾದಿಸುತ್ತೇವೆ. ರಾಯರು ಮೈಸೂರು ವಿಶ್ವವಿದ್ಯಾಲಯದ ಮಾಜೀ ಚಾನ್ಸಲರರು. ಅಲ್ಲಿಯ ಶಿಕ್ಷಣ ಖಾತೆಯ ಮುಖ್ಯಾಧಿಕಾರಿಯೂ ಆಗಿದ್ದರು. ಮೈಸೂರಿನ ಶಿಕ್ಷಣ ವಿಭಾಗದಲ್ಲಿ ರಾಯರ ಕನ್ನಡ ಪ್ರೇಮವು ಒಂದು ಪ್ರಮುಖ ನಾಡಿಯಾಗಿ ಸೇರಿಕೊಂಡಿದೆ. ಹೈಸ್ಕೂಲುಗಳಲ್ಲಿ ಕನ್ನಡವನ್ನು ಮಾಧ್ಯಮವಾಗಿ ಮಾಡಿದವರು ದಿವಂಗತ ರಾಯರೇ. ಸಾಯುವಾಗ ಅಲಹಾಬಾದ್ ವಿಶ್ವ ವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಅಧ್ಯಾಪಕರಾಗಿದ್ದರು. ಅವರು ಸಲ್ಲಿಸಿದ ಸೇವೆಯಿಂದ ಕನ್ನಡನಾಡು ಅವರಿಗೆ ಚಿರಋಣಿ. ೧೯೩೩ರಲ್ಲಿ ಮುಂಬಾಯಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷತೆ ವಹಿಸಿದ್ದರು. ರಾಯರಲ್ಲಿದ್ದಂತಹ ಅರ್ಥಶಾಸ್ತ್ರ ಪ್ರಾವೀಣ್ಯವು ಹಿಂದುಸ್ಥಾನದಲ್ಲಿ ಬಹುಮಂದಿಗಿಲ್ಲ. ಇಂತಹ ಸುಪುತ್ರನನ್ನು ಕಳಕೊಂಡ ಕನ್ನಡನಾಡು ದುರ್ದೈವಿ.

ದುರ್ಬೀನು

ಪರ್ವತರಾಯನ ಮಗಳು ಪಾರ್ವತಿ. ಪಾಪ ಬುದ್ಧಿಯ ಫಲ ಪತನ.

oo oo oo

ಮಳೆ ಬಿಸಿಲುಗಳಿದಿರು ಮಾಡುಇದ್ದ ಮನೆಬೇಕು; ನಿಂದೆ, ಅಪವಾದಗಳಿದಿರು ಮೌನಧಾರೀ ಮನುಷ್ಯಬೇಕು.

oo oo oo

ಮನುಷ್ಯ ನೆಗೆಯುತ್ತಾನಾದರೆ ಸುರಕ್ಷಿತ ಸ್ಥಳನೋಡಿ ನೆಗೆದಾನು; ಮಾಡು ಜರಿದು ಬೀಳುವಾಗ ಅತ್ತಿತ್ತ ನೋಡಿಕೊಳ್ಳಲಾರದು. ಜ್ಞಾನಿಗಳ ಧಾಳಿ ಮನುಷ್ಯನಂತೆ; ಅಜ್ಞಾನಿಗಳದು ಮಾಡಿನಂತೆ.

oo oo oo

ಬತ್ತಿ ಮುಂದೆ ಮಾಡಿದರೆ ದೀಪವುರಿಯುವದೆಂತೂ ಇದೆ; ಭಕ್ತಿ ಪ್ರದರ್ಶಿಸಿದರೂ ಕೋಪವೇರುವದಿದೆ.

oo oo oo

ಹಸಿದ ಕುದುರೆಯಿದಿರು ಗಡ್ಡದ ಸಾಹೇಬನು ಬಗ್ಗಿದರೆ ಹುಲ್ಲೆಂದು ಭಾವಿಸೀತು, ಅಧಿಕಾರಿಗಳಿದಿರು ಬಿಪತ್ತನ್ನು ತೋಡಿಕೊಂಡರೂ ಸುಳ್ಳೆಂದು ಭಾವಿಸಿಯಾರು

oo oo oo

ಭಗೀರಥನ ಬೆನ್ನು ಹಿಡಿದು ಭಾಗೀರಥಿಯೇ ಬಂದಿತ್ತು; ಮಿಕ್ಕವರದರಲ್ಲಿ ಜಲ ಕೇಳಿಯಾಡಬಹುದಷ್ಟೇ. ವಿಶ್ವಾಸಾರ್ಹರ ಕಡೆಗೆ ಹೃದಯ ಪ್ರವಾಹ ಹರಿಯುತ್ತದೆ; ಯಾಗಿಲ್ಲದವರು ಅದರಲ್ಲಿ ಈಜಾಡಿ ಕೆಡುತ್ತಾರೆ

oo oo oo

ಪತ್ತು ಜನರ ಕಂಬನಿಯುದುರಿದ ಮಾತ್ರಕ್ಕೆ ಊರೇ ಒದ್ದೆಯಾಗಲಾರದು. ಕೆಲವೇ ಮಂದಿಯ ತೋಷ ರೋಷಗಳಿಂದ ಎಲ್ಲದರ್ಕ್ಕೂ ಪರಿಣಾಮವಾಗದು.

oo oo oo

ಜನಿವಾರ ಸುತ್ತಿಕೊಳ್ಳಬಹುದು—ನೇಣು ಹಾಕಿಕೊಳ್ಳಬಾರದು. ವಿನಯಗಳನ್ನಿಟ್ಟುಕೊಳ್ಳಬಹುದು, ವಿರೋಧಿಗಳಿರಬಾರದು.

oo oo oo

ತೋಟದ ಮರ ಹತ್ತಿದರೆ ತೋಟಗಾರನ ಶಿರಕ್ಕೇರಿದಂತಲ್ಲ; ಮಡಿತದ ಫಲಕ್ಕಾಗಿ ಒದ್ದಾಡಿದರೆ ಯಜಮಾನನೊಡನೆ ದುಡುಕಿದಂತಲ್ಲ.

ಬಲ್ಲಿರಾ?

ಅಖಿಲ ಭಾರತದಲ್ಲಿ ಆಹಾರ ಧಾನ್ಯಗಳ ಒಟ್ಟು ವಾರ್ಷಿಕ ಉತ್ಪತ್ತಿಯು 55ಮಿಲಿಯ ಟನ್ನುಗಳು.

o

ಬ್ರಿಟಿಷ್ ಟಪ್ಪಾಲು ಕಟ್ಟೆಗಳಲ್ಲಿ ಈಗ ಇರುವ ಸ್ತ್ರೀ ಕೆಲಸಗಾರರು 117.000. ಇದು ಇಂಗ್ಲೆಂಡಿನ ಚರಿತ್ರೆಯಲ್ಲೇ ಅತಿ ಹೆಚ್ಚಿನ ಸಂಖ್ಯೆಯಾಗಿದ್ದು ಅವರಲ್ಲಿ 16 800. ಮಹಿಳೆಯರು ಟಪ್ಪಾಲು ಪೇದೆಯರು.

o

ಕಳೆದ ಎಪ್ರಿಲ್ ತಿಂಗಳಲ್ಲಿ ವೈಸರಾಯಿ ಯುದ್ಧ ನಿಧಿಗೆ ಜಮೆಯಾದ ರೂ. 9.11.500. ಈತನಕ (30-4-43) ಒಟ್ಟಿಗೆ ಜಮೆಯಾದ ಹಣ 8.40.34 500.

o

ಮಧ್ಯ ಪೂರ್ವದಲ್ಲಿರುವ ಮಿತ್ರ, ಸೇನೆಗಳಿಗೆ ಹಿಂದುಸ್ಥಾನವು 1500 ವಿಧದ ವೈದ್ಯಕೀಯ ಹಾಗೂ ಯುದ್ಧಕಣದ ಪೋಷಾಕುಗಳನ್ನು ಕಳುಹಿಸಿದೆ. ಸೋಲ್ಜರರ ಪ್ರಥಮ ಚಿಕಿತ್ಸೆಗಾಗುವ 2½ ಇಂಚು ಅಗಲದ 1..50.000 ಬೇಂಡೇಜುಗಳನ್ನು ಕಳುಹಿಸಿದೆ. ಇವುಗಳನ್ನೆಲ್ಲಾ ಸಾಲಾಗಿ ಇಟ್ಟರೆ 2000 ಮೈಲು ಉದ್ದಕ್ಕೂ ಮಿಕ್ಕಿ ಹರಡಬಹುದಂತೆ.

o

ಇಂಗ್ಲೆಂಡಿನ ದೊಡ್ಡ ಶಾಲೆಯೆಂದರೆ ಮೇಂಚಸ್ಟರಿನ ವ್ಯಾಕರಣಶಾಲೆ. ಇಲ್ಲಿ 1353 ವಿದ್ಯಾರ್ಥಿಗಳಿದ್ದಾರೆ. ಎರಡನೆಯದಾದ ಈಟೋನ್ ಶಾಲೆಯಲ್ಲಿ ಇದಕ್ಕಿಂತ 200 ಮಂದಿ ಕಡಿಮೆ.

o

ಹಿಂದುಸ್ಥಾನದಲ್ಲಿರುವ 10000ಕ್ಕೂ ಮಿಕ್ಕಿದ ಮೋಟಾರುಗಳು ಗ್ಯಾಸಿನಿಂದ ನಡೆಸಲ್ಪಡುತ್ತವೆ. ಇದರಿಂದಾಗಿ 16ಮಿಲಿಯ ಗೆಲನ್ ಪೆಟ್ರೋಲು ಸೈನ್ಯ ಕಾರ್ಯಗಳಿಗುಳಿತಾಯವಾಗಿದೆ.

ಉಡುಪಿ.

ನಿಧನ:–ಇವೇತಾ. 5ರಲ್ಲು ನಿವೃತ್ತ ಇಂಜಿನೀಯರಾಗಿದ್ದ ಶ್ರೀ. ಯು. ವೆಂಕಟರಾಯರು 80ನೇ ವಯಸ್ಸಿನಲ್ಲಿ ತಮ್ಮ ತೆಂಕಪೇಟೆ ಮನೆಯಲ್ಲಿ ನಿಧನ ಹೊಂದಿದರೆಂದು ತಿಳಿಸಲು ತುಂಬಾ ವಿಷಾದವೆನಿಸುತ್ತದೆ. ಶ್ರೀಯುತರು ಓವರ್ಶಿಯರರಾಗಿ ಸರಕಾರಿ ಉದ್ಯೋಗವನ್ನು ಸೇರಿ ಎಗ್ಜಿಕ್ಯೂಟಿವ್ ಎಂಜಿನಿಯರರಾಗಿ ಪೆನ್ಶನ್‌ದಾರರಾದವರು. ಸ್ಥಳೀಯ ಸಂಸ್ಕೃತ ಕಾಲೇಜಿನ ಕಾರ್ಯಕಾರೀ ಮಂಡಳಿಯ ಕಾರ್ಯದರ್ಶಿಯರಾಗಿಯೂ ಉಡುಪಿ ಸರ್ಕಲ್ ಟೆಂಪಲ್ ಕಮಿಟಿಯ ಅಧ್ಯಕ್ಷರಾಗಿಯೂ ಉಡುಪಿ ಕೋಆಪರೇಟಿವ್ ಟೌನ್ ಬೇಂಕಿನ ಅಧ್ಯಕ್ಷರಾಗಿಯೂ ಇದ್ದು ಸಾರ್ವಜನಿಕ ಸೇವೆಯನ್ನು ಮಾಡಿದ್ದರು. ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವುದಲ್ಲದೆ ಅವರ ಬಂಧುಬಳಗಕ್ಕೆ ಒದಗಿದ ಶೋಕದಲ್ಲಿ ಸಮಸಂತಾಪವನ್ನು ಸೂಚಿಸುವೆವು. ನಿಧನದ ದುಃಖಸೂಚನಾರ್ಥವಾಗಿ ಸಂಸ್ಕೃತ ಕಾಲೇಜ್ ಮತ್ತು ಉಡುಪಿ ಕೋಆಪರೇಟಿವ್ ಟೌನ್ ಬ್ಯಾಂಕಿಗೆ ರಜೆ ಕೊಡಲಾಗಿತ್ತು.

ನಿಷೇಧಾಜ್ಞೆ:–ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಅಧಿಕಾರಿಗಳ ಅಪ್ಪಣೆ ವಿನಾ ಅಕ್ಕಿ ಮತ್ತು ಭತ್ತವನ್ನು ಸಾಗಿಸಕೂಡದಾಗಿ ಉಡುಪಿ ತಹಸಿಲ್ದಾರರು ಮಹಾಜನರಿಗೆ ಡಂಗುರ ಮುಖೇನ ತಿಳಿಸಿದ್ದಾರೆ. ಇದಕ್ಕೆ ವಿರುದ್ಧವಾಗಿ ವರ್ತಿಸಿದವರಿಗೆ ಇಂಡಿಯಾ ಸಂರಕ್ಷಣಾ ಕಾನೂನನ್ನನ್ವಯಿಸಲಾಗುವುದು.

● ನ್ಯೂಗಿನಿಯ ಉತ್ತರ ಕರಾವಳಿಯ ಸಲಮಾಬೇ, ರೆಂಡೋವಾ, ನ್ಯೂಜಾರ್ಜಿಯಾ ದ್ವೀಪಗಳಲ್ಲಿ ಅಮೇರಿಕಾಸರಿಗೆದು ಜಪಾನರು ತೀವ್ರ ಪ್ರತಿಭಟನೆ ಕೊಡುತ್ತಿದ್ದಾರೆ ನ್ಯೂಜಾರ್ಜಿಯಾದಲ್ಲಿ ಅಮೇರಿಕಾನರು ಮುಂದೊತ್ತುತ್ತಿದ್ದಾರೆ ಶಾಂತ ಸಾಗರದ ಜಪಾನೀ ಕೇಂದ್ರಗಳ ಮೇಲೆ ಮಿತ್ರರ ತೀವ್ರ ವಿಮಾನದಾಳಿ ನಡೆದಿದೆ

● ಜರ್ಮನಿಯೊಡನೆ ಒಪ್ಪಂದ ಮಾಡಿಕೊಳ್ಳುವಂತೆ ಜಪಾನು ರಶ್ಯವನ್ನು ಒತ್ತಾಯಿಸುತ್ತಿದೆ ಎಂದು ಸುದ್ದಿ

● ಗೋರಿಂಗರು ಪ್ಯಾರಿಸು ವಿಶಾನದಿಂದ ... ತ ಒನತೆ ಪಂಸ್ಥಿತಿಯಲ್ಲಿಲ್ಲವೆಂದೂ ... ನ ಅವರ ಸ್ಥಾನಕ್ಕೆ ಫೀಲ್ಡ್ ಮಾರ್ಶಲ್ ಕೀಟೆಲರನ್ನು ಹಿಟ್ಲರರು ನೇಮಿಸಿದ್ದಾರೆಂದು ವಾರ್ತೆ

● ಗೋರಿಂಗರು ಇತರ ವಿಮಾನಾಧಿಪತಿಗಳೊಡನೆ ಮಿತ್ರರ ಆಕಾಶ ಧಾಳಿಯ ಕುರಿತು ಬರ್ಲಿನ್ನಿನಲ್ಲಿ ಗೂಢಾಲೋಚನೆ ನಡೆಸಿದರೆಂದು ಮತ್ತೊಂದು ವಾರ್ತೆ

● ರಷ್ಯ ಯುದ್ಧವು ಹಿಂದಿನಂತೆಯೇ ಮಂದಗತಿಯಿಂದ ಸಾಗಿದೆ ಉಲುಕಿಲುಕಿ

ಸುದ್ದಿ ಸೂಚನೆ

ಯ ಒಳ ರಶ್ಯನರು ಆರಂಭಿಸಿದ ಸಣ್ಣ ದಾಳಿಯ ಕುರಿತು ಹೆಚ್ಚಿನ ವಿಶೇಷ ವಾರ್ತೆಯಿಲ್ಲ

● ಮುಸಲಿನಿಯವರು ತನ್ನ ಹದಿನೈದು ವರುಷಗಳ ಮೊದಲಿನ ಉದರ ರೋಗಕ್ಕೆ ಪುನಃ ಒಳಗಾಗಿ ಕಠಿಣ ಕಾಹಿಲೆಯಲ್ಲಿದ್ದಾರಂತೆ

● ತನ್ನ ಏಕಮಾತ್ರ ಪುತ್ರಿಯೊಂದಿಗೆ ಜಿಬ್ರಾಲ್ಟರಿನಿಂದ ಹೊರಟಿದ್ದ ಪೋಲೆಂಡಿನ ಮುಖ್ಯ ಮಂತ್ರಿ ಜನರಲ್ ಸಿಕೋರ್ಸ್ಕಿಯವರ ವಿಮಾನ ಅಪಘಾತಗೊಂಡು ಇಬ್ಬರೂ ದುರ್ಮರಣಕ್ಕೊಳಗಾದರು

○ ರೋಮಿನ ಸುತ್ತು ವಲಯ ಮತ್ತು ಇತರ ಇಟಲಿ ನಗರಗಳ ಮೇಲೆ ಮಿತ್ರರು ವಿಮಾನ ಧಾಳಿನಡೆಸಿದ್ದಾರೆ.

● ಇದೇ ತಾ 7ರಿಂದ ಚೀನಾ ಯುದ್ಧವು 7ನೇ ವರ್ಷಕ್ಕೆ ಕಾಲಿಟ್ಟಿದೆ ಮೇಡಮ್ ಚಿಯಾಂಗರು ಅಮೇರಿಕದಿಂದ ಚೀನಕ್ಕೆ ಮರಳಿದ್ದಾರೆ

● ಮಿತ್ರರು ಭೂಮಧ್ಯ ಸಮುದ್ರದಲ್ಲಿ ನುಗ್ಗುವಂತೆ ನಡಿಸಿ ಪಶ್ಚಿಮದಿಂದ ಒಳನುಗ್ಗಬಹುದೆಂದೂ ಜುಲೈ 11ಕ್ಕೆ ಮಿತ್ರರ ಪ್ರಬಲ ಧಾಳಿಯಾರಂಭವಾಗಬಹುದೆಂದೂ ಜರ್ಮನರ ಊಹೆ ಇದೇ ಕಾಲದಲ್ಲಿ ರಶ್ಯವು ವಸಂತ ಆಕ್ರಮಣಾರಂಭಿಸಬಹುದೆಂದೂ ನಾಜಿಗಳನ್ನುತ್ತಾರೆ

● ಮಿತ್ರರ ಯಾವುದೇ ಆಕ್ರಮಣವನ್ನು ಎದುರಿಸಲು ಫೀಲ್ಡ್ ಮಾರ್ಶಲ್ ರೋಮೆಲರ ನಾಯಕತ್ವದಲ್ಲಿ ಜರ್ಮನರ ಹೊಸ ನಾಯಕ ಮಂಡಳಿ ರಚಿಸಲ್ಪಟ್ಟಿದೆ

● ಹಿಂದುಸ್ಥಾನದಲ್ಲಿ ಆಹಾರ ಸಾಮಗ್ರಿ ಬೇಕಾದಷ್ಟಿದೆ. ವಿತರಣೆಯ ವ್ಯವಸ್ಥೆ ಮಾತ್ರ ಸರಿಯಾಗಿಲ್ಲ ಆದರೆ ಇದಕ್ಕೆ ಜನರೇ ಹೊಣೆಗಾರರು ಹೊರತು ಸರಕಾರವಲ್ಲ' ಎಂದು ಕಾಮನ್ಸ್ ಸಭೆಯಲ್ಲಿ ಮಿ ಅಮೆರಿಯವರ ಉತ್ತರ

● ಡಿ ವೆಲೆರಾರವರು ಪುನಃ ಪ್ರಬಲ ಬಹುಮತದಿಂದ ಐಯರ್ಲೆಂಡಿನ ಮುಖ್ಯ ಮಂತ್ರಿಯಾಗಿ ಆರಿಸಲ್ಪಟ್ಟಿದ್ದಾರೆ.

● ಅಮೆರಿಕದ ಬಳಿಯ ಮಾರ್ಟಿನಿಕ ಎಂಬ ಫ್ರೆಂಚ್ ದ್ವೀಪವನ್ನು ರಕ್ತ ಪ್ರವಾಹ ತಪ್ಪಿಸಲಿಕ್ಕಾಗಿ ಅಲ್ಲಿಯ ಗವರ್ನರರು ಮಿತ್ರರ ವಶಕ್ಕೊಪ್ಪಿಸಲು ಒಪ್ಪಿದ್ದಾರೆಂದು ತಿಳಿದು ಬರುತ್ತದೆ

○ ಸಿಂಧ ಪ್ರಾಂತ್ಯದಲ್ಲಿ ಮೂರು ಜಿಲ್ಲೆಗಳಲ್ಲಿ ಮೂರೇ ತಿಂಗಳೊಳಗೆ 500 ಜನರಿಗೆ ಛಡೀ ಶಿಕ್ಷೆವಿಧಿಸಲಾಗಿದೆಯೇ ಎಂದು ಮಿ ಸಿಲ್ವರ್‌ಮನ್ ಹಾಕಿದ ಪ್ರಶ್ನೆಗೆ ಮಿ ಅಮೆರಿಯವರು ತನಗಾ ಸುದ್ದಿಯಿಲ್ಲವೆಂದಿದ್ದಾರೆ

○ ಅಖಿಲಭಾರತ ಮಹಿಳಾ ಪರಿಷತ್ತಿನ ಅಧ್ಯಕ್ಷೆ ಶ್ರೀಮತಿ ರಾಮೇಶ್ವರಿ ನೆಹರು ಗಳು ಭಾಷಣನಿಷೇಧಾಜ್ಞೆಯನ್ನು ಮುರಿದು ಬಂಧಿಸಲ್ಪಟ್ಟರು

○ ಯುದ್ಧವು ಬೇಗ ಮುಗಿಯುವಂತಿಲ್ಲ ಇನ್ನು ಮೂರು ನಾಲ್ಕು ವರುಷಗಳ ವರೆಗೆ ಮಿತ್ರರು ಭೀಕರ ಯುದ್ಧಮಾಡಬೇಕಾಗುವದು' ಎಂದು ಅಮೇರಿಕದ ನೌಕಾಮಂತ್ರಿ ಕರ್ನಲ್ ನೋಕ್ಸರ ಅಭಿಪ್ರಾಯ

○ ಕಳೆದ ವರುಷಕ್ಕಿಂತ ಮೂರು ಪಾಲು ದೊಡ್ಡದಾದ 71500 ಮಿಲಿಯ ಡೋಲರುಗಳ ಅಮೇರಿಕದ ಯುದ್ಧಬಿಲ್ಲಿಗೆ ಅಧ್ಯಕ್ಷ ರುಸವೆಲ್ಟರ ಸಹಿಬಿದ್ದು ಕಾನೂನಾಯಿತು

○ ಯುದ್ಧಾರಂಭದಿಂದ ಕಳೆದ ತಿಂಗಳಾಂತ್ಯದ ವರೆಗೆ 101 ಅಮೇರಿಕಾ ಯುದ್ಧ ಹಡಗುಗಳು ನಷ್ಟವಾಗಿವೆ ಎಂದು ಅಲ್ಲಿಯ ನೌಕಾ ಪ್ರಕಟಣೆಯಿದೆ

ಶ್ರೀ ಬಿ ಸಚ್ಚಿದಾನಂದ ಹೆಗ್ಡೆ
(ವಿಜಯಾ ಬೇಂಕಿನ ಉಡುಪಿ ಶಾಖೆಯ ಏಜಂಟ್)

ಇವರು ವಿಜಯಾ ಬ್ಯಾಂಕಿಗೆ 2 ಲಕ್ಷ ರೂಗಳ ಪಾಲು ಬಂಡವಾಳವನ್ನು ಇತ್ತೀಚಿಗೆ ಸಂಗ್ರಹಿಸಿ ಕೊಟ್ಟಿದ್ದಾರೆ ಶ್ರೀಯುತ ಹೆಗ್ಡೆಯವರ ಕಾರ್ಯದಕ್ಷತೆ, ಉತ್ಸಾಹ ಜನಪ್ರಿಯತೆಯ ನಿದರ್ಶನವಿದು ಅಂತೆಯೇ ಸ್ವಜಾತಿ ಬಂಧುಗಳಿಗೆ ಸಂಸ್ಥೆಯ ಮೇಲಿರುವ ವಿಶ್ವಾಸ, ಹೆಗ್ಡೆಯರ ಮೇಲಿರುವ ಗೌರವಗಳ ದ್ಯೋತಕವಿದು ಈ ಕಾರ್ಯಕ್ಕಾಗಿ ಅವರು ಜಿಲ್ಲೆ ಸುತ್ತಾಡಿದ್ದಾರೆ, ಮದ್ರಾಸು, ಬೊಂಬಾಯಿ ಮೊದಲಾದ ಹೊರ ಪ್ರಾಂತ್ಯಗಳಲ್ಲೂ ಸಂಚರಿಸಿದ್ದಾರೆ ಹೋದಲ್ಲೆಲ್ಲಾ ಇವರು ಪ್ರೋತ್ಸಾಹಿಸಲ್ಪಟ್ಟಿದ್ದಾರೆ ಈ ರೀತಿ ತನ್ನನ್ನು ಪ್ರೋತ್ಸಾಹಿಸಿದ ಎಲ್ಲಾ ಕಡೆಯ ಸ್ವಜಾತಿ ಬಾಂಧವರಿಗೂ ತಾನು ಹೃತ್ಪೂರ್ವಕ ಕೃತಜ್ಞತೆಯನ್ನರ್ಪಿಸುತ್ತೇನೆ- ಮುಂದಕ್ಕೂ ಇಂತಹ ಪ್ರೋತ್ಸಾಹವನ್ನು ನಿರೀಕ್ಷಿಸುತ್ತೇನೆ ಎಂದು ಶ್ರೀ. ಹೆಗ್ಡೆಯವರ ವಿಜ್ಞಾಪನೆಯಿದೆ

Sri Laxmi Venkatesh Temple, Puttur, Udipi, S K

NOTICE

Yesterday a meeting of some people connected with Sri Laxmi Venkatesh Temple Puttur was convened at the instance of five people (1) Sri Madhava raya Nayak (2) Sri Vaman Nayak (3) Sri Ganapathi Shet (4) Sri Padmanabha Shet (5) Sri Kogga alias Subraya Caunsa I attended the meeting and raised a point of order that it was not a constitutionally convened meeting This was disallowed and it was resolved to cancel my Trusteeship of the Temple

This is to bring to the notice of all persons concerned in the above Temple that the meeting convened is contrary to the constitution as published in Navayuga dated 5 6 1940 that there was absolutely no default on my part in carrying out any of the duties entrusted to me that the work turned out by me with a statement of accounts upto 31st May 1943 has been duly published by means of a printed report and that as such it is not open to anybody to cancel my Trusteeship Be it therefore noted that I continue as the Trustee of the Temple under the constitution and I am prepared to do all that is required of me to do for the Temple and if anybody interferes with my work and management as such Trustee he will do it at his risk

I want to bring to the notice of all persons concerned in the Temple that Sri Vasudeva Gaunsa has not fully carried out his part of the work entrusted to him and so I have been compelled to do the same by spending monies out of the collections made by me as seen in the report already published If Sri Vasudeva Gaunsa does not make good the amount immediately and fully carry out his part of the work under the constitution I shall be compelled to take steps against him for the same in accordance with the terms of the said constitution

Udipi Gopal Narayana Nayak, Trustee

Udipi
6th July '43

WANTED GRADUATES

APPLY FOR TERMS

CANARA BANK LIMITED.

ESTD. 1906

ತಾ 7—7—43ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಬ್ರಿಲ್ಲಿಯಂಟ್ ಪಿಕ್ಚರ್ಸ್‌ನವರ

ಮುನಿಸಿಪಾಲಿಟಿ.

ಬಾಬುರಾವ್ ಆಪ್ಟೆ. ಉಷಾಮಂತ್ರಿ, ವಿಮಲಾ ಸರ್‌ದೇಸಾಯಿ, ಮೊದಲಾದವರು

ನಿರೀಕ್ಷಿಸಿರಿ

ಅಪ್ಪಾಷರ್, ಜಂಗಲ್‌ಪ್ರಿನ್ಸೆಸ್, ಲಿಸ್ಬನ್ ತುರ್ಘೂಟ್ ಇತ್ಯಾದಿ.

NOTICE

ಉಡುಪಿ ಡಿ ಮುನ್ಸಿಫ್ ಕೋರ್ಟಿನಲ್ಲಿ

O P 43/43

ಚಿಮುಣಿ ಹೆಂಗಸು ತಂಗು ಹೆಂಗಸಿನ ಮಗಳು ಉಡುಪಿ ತಾಲ್ಲೂಕು ನಂಬ್ರ 76ನೇ ಬಡಗಬೆಟ್ಟು ಗ್ರಾಮ ಮೈಲೂರು ಅರ್ಜಿದಾರಳು

ಅರ್ಜಿದಾರಳ ತಂದೆ ಮೃತ ಬಾಬು ಪೂಜಾರಿಯ ಬಾಬ್ತು ಅರ್ಜಿಯಲ್ಲಿ ಕಾಣಿಸಿದ ದಿ ಪಂಗಾಳ ನಾಯಕ್ ಬೇಂಕ ಲಿಮಿಟೆಡ್ ಉಡುಪಿ ಇದರ F. D No 9/43 dated 15 1-43 for Rs 500 ನೇಗೆ ಡಿಪೋಜಿಟನಲ್ಲಿರುವ ಹಣವನ್ನು ಒಟ್ಟು ಮೇಲೆ ಸಕಾಲ ಮಾಡುವರೆ ಕುಟುಂಬದ ವಾರಸ್ದಾರಿಯಾದ ತನ್ನ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರಳು ಅರ್ಜಿಕೊಟ್ಟಿರುವುದರಿಂದ ಆ ಪ್ರಕಾರ ಸಕ್ಸೆಶನ್ ಸರ್ಟಿಫಿಕೇಟು ಕೊಡುವಲ್ಲಿ ಯಾರಿಗಾದರೂ ಆಕ್ಷೇಪ ಇದ್ದರೆ ಅವರು ತಾ 16-7-43ನೇ ದಿನ ಬೆಳಿಗ್ಗೆ 10 ಗಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ತಕರಾರು ಮಾಡಿಕೊಳ್ಳ ತಕ್ಕದ್ದೆಂಬ ಸಂಗತಿಯನ್ನು ಎಲ್ಲಾ ಸರ್ವರಿಗೂ ತಿಳಿಸಲಾಗುತ್ತದೆ

(By order of the court)

K. J Ballal
vakil for Petitioner
ಉಡುಪಿ
ತಾ. 5 7-43

ದಕ್ಷಿಣ ಕನ್ನಡ.

ಮಂಗಳೂರು

ಬೋರ್ಡಿನ ಹೊಸ ಉಪಾಧ್ಯಕ್ಷರ ಆಯ್ಕೆ:-ಜಿಲ್ಲಾ ಬೋರ್ಡಿನ ವಿಶೇಷ ಸಭೆಯೊಂದು ತಾ. ೩ರಂದು ಪೂರ್ವಾಹ್ನ ೧೧ ಗಂಟೆಗೆ ಹೊಸ ಅಧ್ಯಕ್ಷರಾದ ಶ್ರೀ| ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿ ಉಪಾಧ್ಯಕ್ಷರ ಆಯ್ಕೆಯಾಯಿತು. ಶ್ರೀ| ಮಹಾಲಿಂಗ ಸೆಟ್ಟಿ ಮತ್ತು ಜನಾಬ್ ಮೀರ್ ಹೈದರ್ ಸಾಹೇಬ್ ಬಹದ್ದೂರು ಅವರ ಹೆಸರುಗಳು ಸೂಚಿಸಲ್ಪಟ್ಟವು. ಗುಪ್ತ ಮತದಾನ ಪದ್ಧತಿಯಂತೆ ಓಟುಗಳು ಕೊಡಲ್ಪಟ್ಟವು. ಶ್ರೀ ಸೆಟ್ಟರಿಗೂ ಜ. ಸಾಹೇಬ್ ಬಹದ್ದೂರರಿಗೂ ಸಮಾನ ಎಂಟೆಂಟು ಮತಗಳು ದೊರಕಿದ್ದವು. ಚೀಟಿ ತೆಗೆದ ಮೇಲೆ ಶ್ರೀ| ಕೆ ಮಹಾಲಿಂಗ ಸೆಟ್ಟರು ಉಪಾಧ್ಯಕ್ಷರಾಗಿ ಆರಿಸಬಂದರು.

ಅನ್ನದ ಸಮಸ್ಯೆಯ ಕುರಿತು ವಿಚಾರ ವಿನಿಮಯ ಮಾಡುವುದಕ್ಕಾಗಿ ನಗರದ ಪ್ರಮುಖ ಗೃಹಸ್ಥರ ಸಭೆಯೊಂದು ತಾ. ೧೯ರಂದು ಸಂಜೆ, ಹಂಪನಕಟ್ಟೆಯಲ್ಲಿರುವ ಸುಧಾರಕ ಸಂಘದ ಕಟ್ಟಡದಲ್ಲಿ ಜರಗಿತು. ರಾ|ಬ| ಎನ್. ಎಸ್. ಸುವರ್ಣರು ಅಧ್ಯಕ್ಷತೆ ವಹಿಸಿದ್ದರು.

'ಆಹಾರ ಸಾಮಗ್ರಿಗಳ ಬೆಲೆ ಏರುತ್ತಿರುವುದರ ಫಲವಾಗಿ ಜನರು ಸಂಕಷ್ಟಕ್ಕೊಳಗಾಗಿದ್ದಾರೆ. ಬೆಲೆಯನ್ನು ತಗ್ಗಿಸಲು ಮತ್ತು ಅಕ್ಕಿಯನ್ನು ಬೇರೆ ಪ್ರದೇಶಗಳಿಂದಾದರೂ ತರಿಸಿ ಅಭಾವವನ್ನು ಹೋಗಲಾಡಿಸಲು ಯತ್ನಿಸುವುದು ಅತಿ ಅಗತ್ಯವಿದೆ. ಅದಕ್ಕಾಗಿ ವಿವಿಧ ಸಂಘಗಳನ್ನು ಪ್ರತಿನಿಧೀಕರಿಸುವ ಒಂದು ಸಮಿತಿಯನ್ನು ರಚಿಸುವುದು ಅವಶ್ಯವಿದೆ' ಎಂಬರ್ಥದ ನಿರ್ಣಯವನ್ನು ಶ್ರೀ| ಜೆರೋಮ್ ಸಾಲ್ಡಾನಾ (ಮಾಜಿ ಎಂ. ಎಲ್. ಸಿ.) ಅವರು ಮಂಡಿಸಿದರು. ಶ್ರೀ| ಗೋಪಾಲ ನಾಯಕರು ಅನುಮೋದಿಸಿದರು. ಈ ನಿರ್ಣಯವನ್ನನುಸರಿಸಿ 'ಮಂಗಳೂರು ಆಹಾರ ಸಂಕಷ್ಟ ನಿವಾರಣಾ ಸಮಿತಿ'ಯೆಂದು ರಚಿಸಲ್ಪಟ್ಟಿತು. ರಾ. ಬ. ಎನ್. ಎಸ್. ಸುವರ್ಣರು ಗೌರವ ಅಧ್ಯಕ್ಷರಾಗಿಯೂ ಶ್ರೀ. ಸಿ. ಎಲ್. ಲೋಬೋ ಇವರು ಗೌರವ ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು. ಶ್ರೀಯುತರು ಜೆರೋಮ್ ಸಾಲ್ಡಾನಾ, ಯು. ಕಣ್ಣಪ್ಪ, ಆರ್. ಆರ್. ತಲ್ಲೇರಿಕರ್, ಗೋಪಾಲ ನಾಯಕ್ ಮತ್ತು ಅಮ್ಮಣ್ಣ ಇವರು ಸಮಿತಿಯಲ್ಲಿರುವರು.

ಗೌಡಸಾರಸ್ವತ ಸಮಾಜದವರಿಗೆ ಅಕ್ಕಿಯ ಬಿಕ್ಕಟ್ಟಿನಿಂದ ಉಂಟಾಗಿರುವ ಕಷ್ಟವನ್ನು ವಿಚಾರಿಸುವ ಸಭೆಯೊಂದು ತಾ. ೨೭ರಂದು ಶ್ರೀ| ವೆಂಕಟ್ರಮಣ ದೇವಸ್ಥಾನದಲ್ಲಿ ಶ್ರೀ ಸುಕೃತೀಂದ್ರ ತೀರ್ಥ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಆ ಸಮಾಜದ ಬಡವರಿಗೆ ಅಕ್ಕಿ ಒದಗಿಸುವುದಕ್ಕಾಗಿ ನಿಧಿ ಸಂಗ್ರಹವಾಯಿತು.

ವಿದ್ಯಾರ್ಥಿವೇತನಕ್ಕಾಗಿ ವಾಗ್ದಾನ ಮಾಡಿದ್ದ ರೂ. ೧,೫೦೦ನ್ನು ಡಾ| ಪಣಂಬೂರು ಆನಂದರಾಯರು ದ. ಕ. ದ್ರಾವಿಡ ಬ್ರಾಹ್ಮಣ ಸಂಘಕ್ಕೆ ಕೊಟ್ಟಿರುವರು.

ಉಡುಪಿ.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್:-ಇವರು ಚಂದಾ ಹಾಕಲಿಕ್ಕೆ ಅಪೇಕ್ಷಿಸಿದ ರೂ. 50/ ರ 18000-4½% ಪ್ರಿಫರೆನ್ಸ್ ಪಾಲುಗಳ ಬಗ್ಗೆ, 18000ಕ್ಕಿಂತಲೂ ಮಿಕ್ಕಿ ಅರ್ಜಿಗಳು ಬಂದಿದ್ದರೂ, ಡಿಫೆನ್ಸ್ ಓಫ್ ಇಂಡಿಯಾದ ನಂಬ್ರ 94Aನೇ ರೂಲಿನ ನಿಮಿತ್ತ ಆ ಪಾಲುಗಳನ್ನು ಎಲೋಟ್ ಮಾಡಲು ಅಡ್ಡಿಯಾಗಿತ್ತು. ಸದ್ರಿ ಪಾಲುಗಳನ್ನು ಎಲೋಟ್ ಮಾಡುವರೆ ಈಗ ತಾನೇ ಇಂಡಿಯಾ ಸರಕಾರದ ಹುಕುಂ ಬಂದಿರುವುದಾಗಿಯೂ, ಕೂಡಲೇ ಆ ಪಾಲುಗಳನ್ನು ಎಲೋಟ್ ಸಹಾ ಮಾಡಿರುವರಾಗಿಯೂ ತಿಳಿಯುತ್ತೇವೆ. ಬಹಳ ಹೆಚ್ಚಿನ ಅರ್ಜಿಗಳು ಬಂದುದರಿಂದ ಕೆಲವರಿಗೆ ಅನಿವಾರ್ಯವಾಗಿ ಅಪೇಕ್ಷಿಸಿದ್ದಕ್ಕಿಂತಲೂ ಕಡಿಮೆಯಾಗಿ ಪಾಲುಗಳನ್ನು ಹಂಚಿ ಕೊಡಬೇಕಾಗಿ ಬಂತು ಎಂತಲೂ ತಿಳಿಯುತ್ತೇವೆ.

ಕೆನರಾ ಮ್ಯೂಚುವಲಿನಲ್ಲಿ ಶ್ರೀ ಆರೂರರವರಿಗೆ ಸತ್ಕಾರ:-ಸ್ಥಳೀಯ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿಯ ಡೈರೆಕ್ಟರು ಇತ್ತೀಚೆಗೆ ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿ ಆರಿಸಲ್ಪಟ್ಟ ಶ್ರೀ ಆರೂರು ಲಕ್ಷ್ಮೀನಾರಾಯಣರಿಗೆ ಕಳೆದ ತಾ. 25ರಲ್ಲಿ ಒಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಸಭಾಧ್ಯಕ್ಷತೆಯನ್ನು ವಿ. ಜಿ. ಸಿ. ರೇಗೊ ವಕೀಲ್, ಇವರು ವಹಿಸಿದ್ದರು. ಉಪಾಹಾರವಾದೊಡನೆ ಅಧ್ಯಕ್ಷರು ಮ್ಯೂಚುವಲಿನ ಕಾರ್ಯವನ್ನು ಕೊಂಡಾಡಿ ಶ್ರೀ| ಆರೂರರ ಯೋಗ್ಯತೆಯನ್ನು ಶ್ಲಾಘಿಸಿ ಪ್ರಸ್ತಾವನಾ ಭಾಷಣಮಾಡಿದರು. ಡೈರೆಕ್ಟರರ ಪರವಾಗಿ ಡಾ| ಟಿ. ಮಾಧವ ಪೈಗಳು ಸಂದರ್ಭೋಚಿತವಾಗಿ ಮಾತನಾಡಿದರು. ಶ್ರೀ| ಎಸ್. ಎಲ್. ಮರ್ಡಿಯರು ಬೋರ್ಡಿಗೆ ಕೆಲವು ಹಿತಸೂಚನೆಗಳುಳ್ಳ ಲೇಖವೊಂದನ್ನೋದಿದರು. ಶ್ರೀ| ಆರೂರರು ಎಲ್ಲರಿಗೂ ಸುದೀರ್ಘ ಸುಶ್ರಾವ್ಯ ಉತ್ತರವಿತ್ತರು. ಡಾ| ಕೆ. ಎಲ್. ಏತಾಳರ ಧನ್ಯವಾದಾರ್ಪಣೆಯಾಗಿ ಸಭಾಂತ್ಯವಾಯಿತು. ಈ ಸತ್ಕಾರಕೂಟಕ್ಕೆ ನಗರದ ಪ್ರಮುಖರನೇಕರು ಆಮಂತ್ರಿಸಲ್ಪಟ್ಟಿದ್ದರು.

ಉಡುಪಿ:-ಇಲ್ಲಿಗೆ ಸಮೀಪವಿರುವ ಗರಿಂಬಳ್ಳಿ ಅನಾದಿಯಿಂದಲೂ ಇದ್ದ ಶ್ರೀ ವಾಸುಕಿ ಸುಬ್ರಹ್ಮಣ್ಯ ದೇವರ ಗರ್ಭಗುಡಿಯಿಲ್ಲದೆ ಹಲವು ಮಹನೀಯರ ಪ್ರೋತ್ಸಾಹದಿಂದ ಇತ್ತೀಚೆಗೆ ಬೂದು ಗುಡಿಯನ್ನೂ ಒಂದು ಧರ್ಮ ಶಾಲೆಯನ್ನು ಕಟ್ಟಿಸಲಾಗಿದೆ. ಪರಂಪರೆಯಿಂದ ಶಾಶ್ವತವಾಗಿ ನಡೆಸಿಕೊಂಡು ಬಂದಿರುವ ಉತ್ಸವ, ಅನ್ನದಾನ, ಮಂಡಲಸೇವಾದಿ ಕಾರ್ಯಗಳು ಸುಬ್ರಹ್ಮಣ್ಯ ಷಷ್ಠಿ ದಿವಸ ಬಹು ಸಂಭ್ರಮದಿಂದ ನಡೆಯುತ್ತಿದೆ. ಆವಶ್ಯವಿರುವಲ್ಲಿ ಭಕ್ತಜನರ ನಾಗಮಂಡಲ, ಬಿಂಬ ಪ್ರತಿಷ್ಠೆ, ಸಂಸ್ಕಾರ, ಪ್ರಾಯಶ್ಚಿತ್ತ, ಸೇವಾದಿ ಕಾರ್ಯಗಳನ್ನು ನಡೆಸುವಂತೆ ಯೋಗ್ಯ ಏರ್ಪಾಡುಗಳನ್ನು ಮಾಡಲಾಗಿದೆ. ಪ್ರಕೃತ ಆ ಸ್ಥಳದಲ್ಲಿ ಒಂದು ಜಲಾಶಯ, ಗುಡಿಯ ಎದುರು ಒಂದು ಗೋಪುರ, ಮಾರ್ಗವನ್ನು ಮಾಡಬೇಕೆಂಬ ಆಲೋಚನೆ ಸಹಾ ಇದೆ. ಈ ಸತ್ಕಾರ್ಯಕ್ಕಾಗಿ ಮದ್ರಾಸ್ ಅತ್ತಿಕಟ್ಟೆ ಶ್ರೀ ವಾಸುಕಿ ಸುಬ್ರಹ್ಮಣ್ಯ ಆರಾಧಕ ಮತ್ತು ನಾಗಪಾತ್ರಿಗಳಾದ ಉಡುಪಿ ಅನಂತ ಸಾಮಗರು ದ್ರವ್ಯ ಸಹಾಯಕ್ಕಾಗಿ ಬರಲಿರುವರೆಂದು ತಿಳಿದುಬರುತ್ತದೆ. ಈ ಸತ್ಕಾರ್ಯಕ್ಕಾಗಿ ಸರ್ವರೂ ಸಹಾಯವನ್ನು ಕೊಡುವರಾಗಿ ನಿರೀಕ್ಷಿಸಲಾಗಿದೆ.

ಚೂರು-ಚೂರು

'ವಿಶಾಲ ಭಾರತವು ಸದ್ಯದಲ್ಲೇ ಪೂರ್ಣ ಸಮಾಧಾನ ಹೊಂದಿ ಬ್ರಿಟಿಷ್ ಕಾಮನ್‌ವೆಲ್ತಿನೊಳಗಿರುವದೆಂದು ನಾವು ನಂಬುತ್ತೇವೆ'—ಗಿಲ್ಡ್‌ಹಾಲ್ ಭಾಷಣದಲ್ಲಿ ಮಿ. ಚರ್ಚಿಲ್ಲರು.

ತಿಳಿದಿರಲಿ—ವಿಶಾಲ ಭಾರತಕ್ಕೀಗ ಬೇಕಾಗಿರುವದು 'ಪೂರ್ಣ ಸ್ವಾತಂತ್ರ್ಯ' ವಲ್ಲ—'ಪೂರ್ಣ ಸಮಾಧಾನ' ಮಾತ್ರ.

O

ಭಾವೀ ವೈಸರಾಯೀ ಜನರಲ್ ವೇವೆಲರಿಗೆ ಚಕ್ರವರ್ತಿಗಳು 'ಪಿಯರೇಜ್' ಪದವೀ ದಾನ ಮಾಡಿರುವದರಿಂದ ಅವರು ಇನ್ನು ಮುಂದೆ 'ಲೋರ್ಡ್ ವೇವೆಲ್'.

ತೋಮನಿಗೆ ಐಶ್ವರ್ಯ ಬಂದರೆ 'ಸೋಮರಾಜ್ ಅವರ್ಗಳ್' ಆದಂತೆ!

•

ಸಕ್ಕರೆ ಮತ್ತು ಸಕ್ಕರೆ ತಯಾರಿಕೆಗಳನ್ನು ನಿಯಂತ್ರಣಗೊಳಿಸುವ ಸರಕಾರೀ ಆಜ್ಞೆಯು ಇದೇ ತಾ. ೩ರ 'ಗಝೇಟಿನಲ್ಲಿ ಪ್ರಕಟಿಸಲ್ಪಟ್ಟು ಕೂಡಲೇ ಜ್ಯಾರಿಗೆ ಬಂದಿದೆ.

ಲೋರ್ಡ್ ವೇವೆಲರಂಥಹ ಸಿಹಿ ಮಾತಿನ ವೈಸರಾಯರು ಬರುತ್ತಾರೆಂದ ಮೇಲೆ ಸಕ್ಕರೆ ಯಾಕಾಗಿ?

O

ಜೂನ್ ತಿಂಗಳಲ್ಲಿ 149000 ಟನ್ನುಗಳಷ್ಟು ಮಿತ್ರ ರಾಷ್ಟ್ರೀಯ ವ್ಯಾಪಾರೀ ಹಡಗಗಳನ್ನು ಮುಳುಗಿಸಿರುವೆವೆಂದು ಜರ್ಮನರ ಪ್ರಕಟಣೆ. 'ತೀರಾ ಹಾಸ್ಯಾಸ್ಪದ' ಎಂದಿದಕ್ಕೆ ಮಿತ್ರ ರಾಷ್ಟ್ರೀಯರ ಖಂಡನೆ.

ಭೇಷ್!!

O

'ದಕ್ಷಿಣಾಫ್ರಿಕದ ಹಿಂದೀ ವಿರುದ್ಧ ಮಸೂದೆಗೆ ಹಿಂದೀ ಸರಕಾರವು ಪ್ರತೀಕಾರ ಮಾಡಬೇಕು'-ಕಲ್ಕತ್ತೆದ ಸಾರ್ವಜನಿಕ ಸಭೆಯ ಆಗ್ರಹದ ವಿನಂತಿ.

ಇನ್ನೇನು ಮಾಡಬೇಕು?ಅಲ್ಲಿಯ ಬಿಳಿ ಜನರು ಹಿಂದೀಯರನ್ನು ದೂರಕ್ಕಿಟ್ಟಂತೆಯೇ ದಕ್ಷಿಣಾಫ್ರಿಕ ಸರಕಾರವನ್ನು ಹಿಂದೀ ಸರಕಾರವು ಸಾವಿರಾರು ಮೈಲು ದೂರದಲ್ಲೇ ಇಟ್ಟಿದೆಯಲ್ಲ?

O

'ಮಾರ್ಚ ತಿಂಗಳಲ್ಲಿ ಪುನಃ 32 ಡಿವಿಜನು ಹೊಸ ಸೇನೆಗಳನ್ನು ಜರ್ಮನರು ಯುರೋಪಿನಿಂದ ರಶ್ಯದೊಳಗೆ ಹೊಗಿಸಿದ್ದಾರೆ'-ಮೋಸ್ಕೋ ಪತ್ರಿಕೆಯ ವಾರ್ತೆ.

ಇದನ್ನೇ ಹೀಗೆಂದರಾಯಿತು:—"ಯುರೋಪಿನಲ್ಲಿ ದ್ವಿತೀಯ ರಂಗ ಸ್ಥಾಪನೆಯಾಗುವದೆಂಬ ಭೀತಿಯಿಂದ 32 ಡಿವಿಜನ್ ನಾಜೀ ಸೇನೆಗಳು ಇಷ್ಟರಲ್ಲೇ ಪೂರ್ವ ರಣರಂಗಕ್ಕೋಡಿ ಹೋಗಿವೆ!"

O

'ನಾವು ದಾಟಿದ ಆ ಗಂಡಾಂತರದ ಕಾಲವನ್ನು ನೆನಸಿಕೊಂಡಾಗ ಮೈ ನಡುಗುತ್ತಿದೆ'—ಚರ್ಚಿಲ್ಲರ ಮಾತು.

ಹಾಗಾದರೆ ಮುಂದಿನ ದ್ವಿತೀಯ ರಂಗವನ್ನು ನೆನಸಿಕೊಳ್ಳಲಿ—ಮೈ ಬೆವರೀತು!

—ವಿನೋದಿ.

ಇನ್ನಂಜೆ:-ತಾ. 9-7-1943ನೇ ಶುಕ್ರವಾರ ಅಪರಾಹ್ನ ಘಂಟೆ 3-15ಕ್ಕೆ ಇನ್ನಂಜೆಯಲ್ಲಿ ತೆರೆಯಲಿರುವ ಬಂಟರಯಾನೆ ನಾಡವರ ವಿದ್ಯಾರ್ಥಿ ಭವನದ ಹೊಸಕಟ್ಟಡದ ಶಂಕುಸ್ಥಾಪನೆ ಸಮಾರಂಭವನ್ನು ಶ್ರೀ. ಎ. ಬಿ. ಸೆಟ್ಟಿ ಎಂ. ಎಲ್. ಎ. ಯವರ ನೆರವೇರಿಸಲಿಕ್ಕೆ ಒಪ್ಪಿಕೊಂಡಿರುವರು. ಸದ್ರಿ ಸಮಾರಂಭಕ್ಕೆ ಎಲ್ಲರಿಗೂ ಸ್ವಾಗತವಿದೆ ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ದೇವಡಿಗ ಸುಧಾರಕ ಸಂಘ ಮುಂಬಯಿ:—ಇದರ 18ನೇ ವಾರ್ಷಿಕ ಮಹೋತ್ಸವವು ತಾ. 20-6-43ರಲ್ಲಿ ಪಿರಲ್ ವಿ. ಉಳ್ಳಾಲ್, M. Sc., ಇವರ ಅಧ್ಯಕ್ಷತೆಯಲ್ಲಿ ಜರಗಿತು. ದೇವತಾ ಪ್ರಾರ್ಥನೆಯಾದ ಬಳಿಕ ಸಂಘದ ವರದಿಯನ್ನು ಓದಲಾಯಿತು. ನೆರೆದಿದ್ದ ಸಭಿಕರ ಪೈಕಿ ಹಲವರು ಸಮಾಜದ ಏಳಿಗೆಯ ಕುರಿತು ಭಾಷಣವಿತ್ತರು. ಅಧ್ಯಕ್ಷರ ಭಾಷಣ, ಗಾಯನ ಉಪಾಹಾರ, ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

Degrees: Books: Medicines

Free H. L. M. S. M, B. H. M, D, etc. Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp:—

Principal Indian Homeopathi Institute & Society (Govt. Regd)
P.O. MAHUVA .(Kathiawar Dt. India.)

Sidha-Kalpa Kavach (Regd.)

No. 3 Rs 2. No 2 Rs. 5 No. 1 Rs. 7. Special Rs. 10, Extra Special Rs. 17 for one marriage health, wealth. Ask any six questions with M. O. Re. 1/4 and get correct answers by returnpost Life reading Rs.10 No V.P.P.Send M.O,Free. pamplets.

Prof Dr. N. H Chhatbar,
P. O. MAHUVA (Kathiawar India.)

BHUVANENDRA PRODUCTS Ltd.,

Head Office and Factory: Katapadi, S. Kanara

Depots: Mahratha Galli, Hubli.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಯ್ಸ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ವಿಜಯಾ ಸ್ಟೋರ್ಸ್.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

ಮುಖ್ಯ ಕಾರ್ಯಾಲಯ:—**ಕೋರ್ಟು ರಸ್ತೆ, ಉಡುಪಿ.** ದಕ್ಷಿಣ ಕನ್ನಡ.

ಶಾಖೆಗಳು:— ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಕಿನ್ನಿಗೋಳಿ.

ಮುಸಂ ಠೇವಣಾತಿಗಳು ತಾ. 31-7-1943 ಅಥವಾ ಈ ತಾರೀಕಿನ ಮೊದಲು ಮ್ಯಾದೆಯಾಗುವುದಾದರೆ ಅಂಥಾ ಮ್ಯಾದೆಯ ವರೆಗೆ ಸಾಲಿಯಾನ ಶೇಕಡಾ 3ರ ಕಲೆ ಬಡ್ಡಿಯಲ್ಲಿ 3, 4, 5 ಅಥವಾ 6ತಿಂಗಳ ಮ್ಯಾದೆಯಿಂದ ಪ್ರತಿಯೊಂದು ಶಾಖೆಯಲ್ಲಿ ಅಂಗೀಕರಿಸಲ್ಪಡುತ್ತವೆ.

ಬೇಂಕಿನ ಪ್ರತಿಯೊಂದು ವಿಧದ ವಹಿವಾಟುಗಳು ನಡೆಸಲ್ಪಡುತ್ತವೆ.

ಹೆಚ್ಚಿನ ವಿವರತಿಗೆ ಮೊಖತಾ ಅಥವಾ ಪತ್ರದ್ವಾರಾ ಸಮೀಪದ ಶಾಖೆಯಲ್ಲಿ ದಯವಿಟ್ಟು ವಿಚಾರಿಸಿ

ಅಮೃತಾಂಜನ ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಬಾತು ಕೊಳ್ಳುವುದು, ಚೇಳು ವಿಷಮುಂತಾದ ಚೀನೆ, ಪಕ್ಷವಾತ, ಮೊಣಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ, ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

REGD.

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತ.

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisseri.

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ- ಪರಸಿನಿ ಕಡವು ದೇವಸ್ಥಾನದಿಂದ ಈ ಮೂಲಕ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುನ್ನಿರಾಮನ್,
ಮೆನೇಜರ್.

ಶ್ರೀ. ತಾರಾನಾಥ ಭೇಷಜಾಲಯ

ಶಾಸ್ತ್ರೀಯ ಮತ್ತು ಸಿದ್ಧೌಷಧಿಗಳ ಕಾರಾಗಾರ, ಚಿಕ್ಕಮಗಳೂರು.

ನಿರ್ದೇಶಕ:- ಡಾ. **M. L. Shetty,** ಪ್ರೇಮವಿದ್ಯಾಪೀಠದ ಗಾ. ಪ್ರಾಧ್ಯಾಪಕರು.

ಎಲ್ಲಾತರದ ಭಸ್ಮ, ಖಲ್ವರಸಾಯನ, ಆಸವಾರಿಷ್ಟ, ಘೃತ, ತೈಲಗಳಿಗಾಗಿ ಕೂಡಲೇ ಬರೆಯಿರಿ.

ಲಕ್ಷಗಟ್ಟಲೆ ರೋಗಿಗಳಲ್ಲಿ ಉಪಕಾರಿಯಾದ ಔಷಧಿ ಯೋಗಗಳು, ಗುರುಪರಂಪರೆಯ ಅನುಭವದಿಂದ ಬಂದ ನಿರ್ದುಷ್ಟ ಔಷಧೀಕರಣ ವಿಧಾನ.

ಡಾ| **P. M. Alva,**
ಮೆನೇಜರ್.

— ಮಕ್ಕಳನ್ನು ಹಡೆಯುವದು ಸಾಕು.—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೨ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟಿ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ, ಚಿಕ್ಕೋಡಿಯಲ್ಲಿ:—ಕುಂಟರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕಿರಾಣಿ ದುಕಾನಿ, ಕೆಪಿಸ್ಸ, ಹಾವೇರಿ, ಬ್ಯಾಡಿಗಿ.

ಬಾಲ ಸಾಹಿತ್ಯ ಮಂಡಲ, ಲಿಮಿಟೆಡ್.

ದಿವಂಗತ ಶ್ರೀ| ಉಳ್ಳಾಲ ಮಂಗೇಶರಾವ್ ಬಿ. ಎ., ಎಲ್. ಟಿ. ಅವರಿಂದ ರಚಿತವಾದ ನಮ್ಮ "ಹೊಸಗನ್ನಡದ ೧ರಿಂದ ೫ರ ವರೆಗಿನ ರೀಡರು"ಗಳು ಇದೇ ಜೂನಿನ ಪ್ರಥಮ ವಾರದಲ್ಲೇ ಸಿದ್ಧವಾಗುವುವು. ಅವುಗಳಿಗೆ ಬೆಲೆ ಮತ್ತು ಅವುಗಳ ಮೇಲಿನ ಕಮಿಷನಿನ ದರಗಳು ಕಾಲಕ್ಕೆ ತಕ್ಕಂತೆ ಹೊಂದಿಸಲ್ಪಟ್ಟು ಆಗಲೇ ಪ್ರಕಟಗೊಳ್ಳುವುವು.

Bala Sahitya Mandal, Ltd.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲರ ಸಹಕಾರ ಅಪೇಕ್ಷಿಸುವುದು

M. R. Punja, President & Manager

ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದಕ**

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸದೊರೆಯು ಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,

ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ. : : : : ಮಂಗಳೂರು:



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಸ್ಥಾಪನೆ **ಕ್ರೌನ ರಬ್ಬರ್ ಸ್ಟಾಂಪ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI. S. INDIA.

Regd. No. M. 3618.

Ested. 1921 ಸ್ಥಾಪಿತ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೩
ಸಂಚಿಕೆ ೪೩

FOUNDER
Sri. A. B. Shetty, M. L. A.

Vol. 23
No. 43

NAVAYUGA— Kannada Weekly —UDIPI, S. I.

ಉಡುಪಿ • 15—7—1943 • ಮಂಗಳೂರು.

ಹೊಸಕೆರೆ ಚಿದ...ರಯ್ಯನವ
ರಿಂದ ರಚಿತವಾದ ಗೀತೆಯ
ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು ೩೫೦ ಪುಟಗಳು,
ಬೆಲೆ (ಸುಂದರ ಪ್ರತಿ) ೦—೮—೦
(ಕೆಲಿಕೋ ಬೈಂಡ್) ೦-೧೨—೦
(ಲೆದರ್ ಬೈಂಡ್) ೧—೪—೦
ಪ್ರತಿಗಳು ಪ್ರಸಿದ್ಧ ವ್ಯಾಪಾರಿಗಳಲ್ಲಿ ಸಿಗುವುದು.
0—10—0 ಸ್ಟಾಂಪು ಕಳಿಸಿದ್ದಲ್ಲಿ ಒಂದು
ಪ್ರತಿಯನ್ನು ಬುಕ್ ಪೋಸ್ಟ್
ಮಾಡಲಾಗುತ್ತೆ.

**ನವಭಾರತ ಪುಸ್ತಕ ಭಂಡಾರ,
ಉಡುಪಿ.**

ಶ್ರೀಮತಿ ಶಿವರಾಣಿ ದೇವಿಯವರಿಂದ
(ದಿವಂಗತ ಪ್ರೇಮಚಂದರ ಪತ್ನಿ)
ರಚಿತವಾದ ಹಿಂದೀ ಕತೆಗಳ ಕನ್ನಡ
ಭಾಷಾಂತರ

ನಾರೀ ಹೃದಯ

ನಾರೀ ಹೃದಯದ ವಾಸ್ತವಿಕ ಚಿತ್ರ
ವನ್ನು ಚಿತ್ರಿಸುವ ಉತ್ತಮ ಕತೆಗಳ
ಸಂಗ್ರಹ.

ಬೆಲೆ 0—14—0
ಟ ಖ, 0—2—0 ಪ್ರತ್ಯೇಕ.
ಒಂದು ರೂಪಾಯಿ ಸ್ಟಾಂಪು ಕಳಿಸಿದರೆ ಒಂದು
ಪ್ರತಿಯನ್ನು ಕಳಿಸಲಾಗುವುದು.

**ಕಿರಿಯರ ಪ್ರಪಂಚ, ಉಡುಪಿ.
ಅಥವಾ ನವಭಾರತ ಬುಕ್
ಡಿಪ್ಪೊ, ಉಡುಪಿ.**

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

**The Canara Mutual Assurance Co., Ltd.,
UDIPI. (S. India).**

ಸಾವಿನ ವರೆಗೆ ವಿಮೆಯನ್ನೇ ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಈಗಲೇ ವಿಮೆ ಇಳಿಸಿರಿ

ಏಕೆಂದರೆ:—

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ, ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಮುಖ ಏಜಂಟರು.
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ, ದ. ಕನ್ನಡ.
ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ —
ಮಂಗಳೂರು, ಕಲ್ಲಿಕೋಟೆ, ಸೇಲಂ, ತಿರುವಾಂಕೂರು, ಬೆಂಗಳೂರು ನಗರ ಮತ್ತು ಬೊಂಬಾಯಿ.

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಳುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೆಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

WANTED GRADUATES.

APPLY FOR TERMS

CANARA BANK LIMITED.

ESTD: 1906

ಅಖಿಲ ಕರ್ನಾಟಕದ ಹೊಸ ಮಾದರಿಯ ವಾರ ಪತ್ರಿಕೆ:

ಅಂತರಂಗ

ಶ್ರೀ. ಎ. ಎಸ್. ಪಿ. ಅಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್‌ಲಾ., ಎಫ್. ಆರ್. ಎಸ್. ಎಲ್. ಇವರ 'Funny Tales of Ind' ಎಂಬ ಇಂಗ್ಲಿಷ್ ಕಥಾವಳಿಯ ಅನುವಾದವು ಧಾರಾವಾಹಿಯಾಗಿ ಪ್ರಕಟವಾಗುತ್ತಿದೆ.

ಇದೀಗ ೧೮ನೇ ಸಂಪುಟವು ಆರಂಭವಾಗಿದೆ.

ವಾರ್ಷಿಕ ಚಂದಾ ರೂ.	4	8	0
6 ತಿಂಗಳಿಗೆ ರೂ.	2	4	0
ಬಿಡಿ ಸಂಚಿಕೆಗೆ	0	1	6

Manager **'Antaranga'** Weekly, Udipi.

ಸಿಸಿಲಿಯಲ್ಲಿ ಮಿತ್ರ ಸೇನೆ ಕಾಲೂರಿತು!

'ಆಫ್ರಿಕಾ ಯುದ್ಧ ಮುಗಿಯಿತು: ಯುರೋಪು ಯುದ್ಧ ಪ್ರಾರಂಭಿಸಿತು'— ಮಿತ್ರರಾಷ್ಟ್ರೀಯರ ಸರ್ವ ಸೇನಾನಿ ಜನರಲ್ ಐಸೆನ್‌ಹೋವರರ ಮೇಲಿನ ರಣಘೋಷದೊಡನೆ ಮಿತ್ರರಾಷ್ಟ್ರೀಯ ಸೇನೆಗಳು ಇದೇ ತಾ. 10ರ ಮುಂಜಾನೆ ಜಗತ್ಪ್ರಸಿದ್ಧ ಸಿಸಿಲಿ ದ್ವೀಪದಲ್ಲಿ ಕಾಲೂರಿವೆ 'ನೆಲ ಜಲ ಜನ್ಯ ತುಮುಲೋಂದೋಲನಾಯಿತ ಧಾಳಿ ಪ್ರಾರಂಭಿಸುತ್ತೇವೆ' ಎಂದು ಮಿ. ಚರ್ಚಿಲ್‌ರು ವಾಷಿಂಗ್ಟನ್ ಸಂಭಾಷಣೆಯ ಬಳಿಕ ಆಶ್ವಾಸನೆಯಿತ್ತ ಕೃತ್ಯವೀಗ ಪ್ರಾರಂಭಿಸಿದೆ. ದ್ವಿತೀಯ ರಂಗವೆಂಬ ಮಹಡಿಯ ಪ್ರಥಮ ಮೆಟ್ಟಲಿಗೆ ಮಿತ್ರ ಸೇನೆ ಕಾಲಿಟ್ಟಿದೆ.

ಸಿಸಿಲಿಯ ಪ್ರಾಮುಖ್ಯತೆ.

ಸಿಸಿಲಿಗಿರುವ ಪ್ರಾಮುಖ್ಯತೆಯನ್ನು ವಿಶೇಷ ವರ್ಣಿಸಬೇಕೆಂದಿಲ್ಲ; ಅದು ಇಟಲಿಯ ಹೆಬ್ಬಾಗಿಲೆಂದಾಯಿತು. ಇಂದು ಸಿಸಿಲಿಯಲ್ಲಿ ಆಕ್ಸಿಸ್ ರಾಷ್ಟ್ರೀಯರು ಮಾಡಿಟ್ಟಿರುವ ಸನ್ನಾಹ, ಹಾಗೂ ಸಿಸಿಲಿ ಸ್ಥಳ ಪ್ರಾಮುಖ್ಯತೆಯ ಮೇಲಿಂದ 'ಸಿಸಿಲಿ ಗೆದ್ದವನು ಇಟಲಿ ಗೆದ್ದಾನು' ಎನ್ನಬಹುದು; ಸದ್ಯ ಸ್ಥಿತಿಯಲ್ಲಿ ಸಿಸಿಲಿಯಲ್ಲಿ ಕಾಲೂರುವದು ಇಟಲಿಯಲ್ಲಿ ಕಾಲೂರುವದಕ್ಕಿಂತಲೂ ಪ್ರಯಾಸದ ಕಾರ್ಯ. ತನ್ನ ಮನೆಯ ಮೊದಲ ಮೆಟ್ಟಿಲಾಗಿರುವ ಅಲ್ಲಿ ಮುಸಲಿನಿಯರು ಸರ್ವ ಸಿದ್ಧತೆ ಮಾಡಿಟ್ಟಿದ್ದಾರೆ. ಸಿಸಿಲಿಯ ಪೂರ್ವ ಕರಾವಳಿಯಲ್ಲಿ, ಇಟಲಿಯ ಅತ್ಯುಚ್ಚ ಸ್ವಾಭಾವಿಕ ನೌಕಾ ನಿಲ್ದಾಣಗಳಲ್ಲೊಂದೂ ಮುಖ್ಯ ಯುದ್ಧ ತಾಣ್ಯಗಳಲ್ಲೊಂದೂ ಆಗಿರುವ ಆಗಸ್ಟಾ ಇದೆ. ಆದರ ಈಶಾನ್ಯಗಡೆಯಲ್ಲಿ ಪೆನಿನ್ಸುಲಾದೊಡನೆ ರೈಲ್ವೇ ಜೋಡಣೆಯ ವಾಹಕಗಳಿರುವ ಮೆಸ್ಸಿನಾ ನಿಂತಿದೆ ಹೀಗೆ ಮುಸಲಿನಿಯ ಎದೆಗುಂಡಿಗೆಯಂತಿರುವ ಸಿಸಿಲಿಯ ಕರಾವಳಿಯು ಮಾಲ್ಟಾಕ್ಕೆ ಕೇವಲ 75 ಮೈಲು ದೂರ; ಟ್ಯುನಿಸಿಯಾದಿಂದ ಅದರ ಪಶ್ಚಿಮ ಮೂಲೆಗಿರುವ ದೂರ 150 ಮೈಲು.

ಕಠಿಣ ಹೋರಾಟನಾಗಲಿದೆ.

ಮಿತ್ರ ರಾಷ್ಟ್ರೀಯರು ಬಹು ಮುಂಜಾಗರೂಕತೆಯಿಂದ ಹಾಗೂ ಅತೀ ಸಾವಕಾಶವಾಗಿ ಇಡುತ್ತಿರುವ ಒಂದೊಂದೇ ಹೆಜ್ಜೆಯನ್ನು ಹಿಟ್ಲರ್ ಮುಸಲಿನಿಗಳು ಹುಲಿಯ ಹೆಜ್ಜೆಯನ್ನು ನಿರೀಕ್ಷಿಸುವ ಬಂಧಿತ ವನದಂತೆ ಭಯ ವಿಹ್ವಲರಾಗಿ ಕಾಣುತ್ತಿದ್ದಾರೆಂದು ಭಾವಿಸಬಾರದು. ಕಾಲ ಗರ್ಭದಲ್ಲೇನಿದೆಯೋ—ಆದರೆ ಈ ವರೆಗಿನ ಮಿತ್ರರ ಆಕ್ರಮಣ ಸಿದ್ಧತೆಯನ್ನು ಆಕ್ಸಿಸ್ ಸರ್ವಾಧಿಕಾರಿಗಳು, ತನ್ನ ಹತ್ತಿರದಲ್ಲೇ ಹಾರಾಡಹತ್ತಿದ ನೊಣವನ್ನು ಹೊಂಚುವ ಜೇಡನ ಕಣ್ಣಿನಿಂದಲೇ ನೋಡುತ್ತಿದ್ದಾರೆ. 'ಆಕ್ರಮಣವು ಮಿತ್ರರ ಕೈಯಲ್ಲಿರುವ ಕೊನೆಯ ಕಾರ್ಡು. ಅದನ್ನೊಂದು ಹುಸಿಗೊಳಿಸಿದರೆ ಮತ್ತೆ ವಿರೋಧಿಗಳ ಅವತಾರ ಮುಗಿದಂತೆಯೇ'— ಎಂದು ಮುಸಲಿನಿಯು ಮೊನ್ನೆ ತಾನೇ ತನ್ನ ಜನರನ್ನು ಹುರಿದುಂಬಿಸಿದುದು ಮರೆಯತಕ್ಕ ಸಂಗತಿಯಲ್ಲ. ಅಥಾತ್ ಫ್ರಾನ್ಸ್, ನೋರ್ವೆ, ಹೊಲ್ಲೆಂಡ', ಬೆಲ್ಜಿಯಮುಗಳಲ್ಲಿ ಮಿತ್ರರು ಹೂಡಿದ ಪ್ರತಿಭಟನೆಯ ಸಾಲಲ್ಲೇ ಈ ಆಕ್ರಮಣವನ್ನು ಆಕ್ಸಿಸ್ ರಾಷ್ಟ್ರೀಯರಿಟ್ಟಿದ್ದಾರೆ; ಆ ಸಾಲಿನಲ್ಲಿ ಇದು ಕೊನೆಯದೆಂಬ ಅಭಿಪ್ರಾಯದಲ್ಲಿದ್ದಾರೆ. ವಿರೋಧಿಯನ್ನು ಪ್ರತಿಭಟಿಸಿ ಹಿಮ್ಮೆಟ್ಟಿಸಿದರೆ ಅದರ ಫಲಿತಾಂಶವು ಆಕ್ರಮಿಸಿ ಗೆದ್ದಷ್ಟೇ ಎಂದು ಭಾವಿಸಿಕೊಂಡಿದ್ದಾರೆ. ಈ ಧೋರಣೆಗನುಸಾರವಾಗಿ ಯುರೋಪಿನಲ್ಲೆಲ್ಲಾ ಪ್ರಬಲ ಸಿದ್ಧತೆ ನಡೆದಿದೆಯೆಂಬುದನ್ನೂ ಸಿಸಿಲಿಯು ಸರ್ವ ಸನ್ನಾಹದೊಡನೆ ಅಭೇದ್ಯ ಕೋಟೆಯಾಗಿ ನಿಂತಿದೆಯೆಂಬುದನ್ನೂ ಮರೆಯಬಾರದು ಅಲ್ಲಿ 3 ಲಕ್ಷ ವಿರೋಧೀ ಸೇನೆಯಿದೆಯೆಂದು ಮಿತ್ರರ ಅಂದಾಜು; ಕಳೆದ ಕೆಲವು ದಿನಗಳಲ್ಲಿ ಸಿಸಿಲಿಗೆ ಅತಿ ಹೆಚ್ಚಿನ ಸೇನೆ, ಯಂತ್ರೋಪಕರಣಗಳು ಸಾಗಿದುವವೆಂಬುದನ್ನೂ ಮಿತ್ರರು ಬಲ್ಲರು. ಆದ್ದರಿಂದ ಅವರ, ಅತಿ ಭೀಕರ—ಅತ್ಯಂತ ಸಂದೇಹಾತ್ಮಕ ಪರಿಸ್ಥಿತಿಯನ್ನು ಈಗ ಇದಿರಿಸಿರುವರೆನ್ನಬಹುದು.

ಪ್ರಕೃತಿಜನ್ಯ ರಕ್ಷಣೆ.

ಸಿಸಿಲಿಯಲ್ಲಿ ಮಿತ್ರ ಸೇನೆಗಳು ಅಲ್ಲಿಯ ಬಲಶಾಲಿ ಫೇಸಿಸ್ಟ್ ಸೇನೆಯೊಡನೆ ಇಂಚು ಇಂಚಿಗೂ ಹೋರಾಡಬೇಕಾಗಿದೆ ಮಾತ್ರವಲ್ಲ ಅಲ್ಲಿಯ ಪ್ರತಿಗಾಮಿ ನೆಲದ ಇಂಚು ಇಂಚಿನೊಡನೆಯೂ ಹೋರಾಡಬೇಕಾಗಿದೆ! ಸಿಸಿಲಿಯ ಪಶ್ಚಿಮ ಕರಾವಳಿಯ ತುದಿ ಮೂಲೆ ನೋಡಿ ಮಿತ್ರ ಸೇನೆಯೀಗ ಕಾಲೂರಿದೆ; ರೋಮ್ ನಗರದಿಂದ ಈ ಸ್ಥಳಕ್ಕೆ 260 ಮೈಲು ದೂರ ಮಾತ್ರ. ವಿಶಾಲ ಗುಹೆಗೊಂದು ಕಿರಿ ದ್ವಾರವಿದ್ದಂತೆ ಸಿಸಿಲಿಯಲ್ಲಿ ವಿರೋಧಿಗಳಿಗೆ ತೆರವಾಗಿರುವ ಸ್ಥಳವೆಂದರೆ ಪಶ್ಚಿಮ ಕರಾವಳಿಯ ಇದೊಂದು ಬದಿ ಮಾತ್ರ. ಅದರ ಉತ್ತರಗಡೆಯಲ್ಲೆಲ್ಲಾ ಮುಸಲಿನಿಯ ಭೀತಾಳ ಸೇನೆಯೆಂಬಂತೆ ಪರ್ವತ ಶ್ರೇಣಿ; ಪೂರ್ವ ದಕ್ಷಿಣ ದಿಕ್ಕುಗಳು ಪರ್ವತಶ್ರೇಣಿಗಳನ್ನು ಹೊತ್ತು ನಿಂತಿರುವದಷ್ಟೇ ಅಲ್ಲ ದಕ್ಷಿಣ ಇಟಲಿಯ ನಿಲ್ದಾಣಗಳಿಂದ ಯಾವ ಮುಹೂರ್ತದಲ್ಲಾದರೂ ವಿಮಾನಗಳು ಹಾರಿಬಂದು ಪ್ರಳಯ ತಾಂಡವವಾಡಬಹುದಾದಷ್ಟು ಸಮೀಪದಲ್ಲಿಯೂ ಇವೆ. ಇನ್ನು ಒಳಗಡೆಯ ನೆಲ, ಹೊಳೆ, ಸಂದು ಕಟ್ಟುಗಳೆಲ್ಲಾ ರಕ್ಷಣಾ ಯುದ್ಧ ಕೊಡುವವರಿಗೆ ಅತ್ಯನುಕೂಲವಿವೆ. ಅಲ್ಲಿರುವ 3 ಲಕ್ಷ ಇಟಲಿ ಸೇನೆಯಿಂದ 6 ಲಕ್ಷದ ಕೆಲಸವನ್ನು ಸ್ಥಳ ಮಹಾತ್ಮೆಯು ಮಾಡಿಸಬಲ್ಲದು. ಟ್ಯುನಿಸಿಯಾ ಪತನದಿಂದ, ಆಕ್ರಮಣಾರಂಭದ ತನಕ ಮಿತ್ರ ವಿಮಾನಗಳು ಸಿಸಿಲಿಯಲ್ಲಿ ಮಾಡಿದ್ದ ಹಾವಳಿಯೇನೋ ಅದ್ಭುತವೇ, ಅಲ್ಲಿಯ ರಕ್ಷಣಾ ಯಂತ್ರವನ್ನು ಹಲವೆಡೆ ಜಖಂಪಡಿಸಿರುವಂತಹವೇ. ಆದರೆ ಇಷ್ಟರಿಂದಲೇ ಆಕ್ರಮಣಗಾರರಿಗೆ ಕ್ಷೇತ್ರಾನುಕೂಲತೆ ದೊರೆತಿದೆಯೆಂದಾಗಲೀ, ಫೇಸಿಸ್ಟ್ ಸೇನೆಗಳು ತಬ್ಬಿಬ್ಬಾಗಿವೆಯೆಂದಾಗಲೀ ಊಹಿಸಬಾರದು. ಇವೆಲ್ಲಾ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿ, ತಕ್ಕ ಸಿದ್ಧತೆ ಮಾಡಲಿಕ್ಕಾಗಿಯೇ ಸಮಯ ವ್ಯಯಿಸಿದ್ದ ಮಿತ್ರರ ಸೇನೆಯು ಸಿಸಿಲಿಗೊಗ್ಗುವ ಸಿಂಹಗಳಾಗಿಯೇ ನೆಗೆದಿದ್ದಾರೆಂಬುದೂ ಖಂಡಿತ. ಆದ್ದರಿಂದ ಸಿಸಿಲಿ ಯುದ್ಧವು ಕಠೋರವಾಗಬಹುದು; ಸಿಸಿಲಿ ಗೆದ್ದವರು ಯುದ್ಧ ಗೆಲ್ಲುತ್ತಾರೆಂದು ಪಂಥ ಕಟ್ಟಬಹುದು.

ರಶ್ಯದ ಯುದ್ಧ.

ಮಿತ್ರರ ಪಶ್ಚಿಮ ರಂಗದ ಬೆದರಿಕೆಯನ್ನು 'ತೋಳ ಬಂತೆಂಬ ಹುಸಿ ಬೊಬ್ಬೆ' ಎಂದು ಆಕ್ಸಿಸ್ ರಾಷ್ಟ್ರೀಯರು ಇದುವರೆಗೂ ಅಪಹಾಸ್ಯ ಮಾಡುತ್ತಿದ್ದರು. ಇಂಗ್ಲೆಂಡು-ಅಮೇರಿಕಗಳಿಗೆ ದ್ವಿತೀಯ ರಂಗವೊಂದೇ ಸರ್ವಸ್ವವಾಗಿರುವಾಗ ಹಿಟ್ಲರರಿಗೆ ಇನ್ನೂ ಹಾಗಾಗಿಲ್ಲವೆಂಬುದಕ್ಕೆ ರಶ್ಯದಲ್ಲಿ ಕಳೆದ ವಾರ ಆರಂಭಿಸಿರುವ ಪ್ರಬಲ ನವ ಧಾಳಿಯೇ ದೃಷ್ಟಾಂತ. ರಶ್ಯದ ಓರೆಲ್- ಕುರ್ಸ್ಕ್-ಬಯೆಲ್ಗೊರೋಡ್ ಲೈನಿನ 200 ಮೈಲು ವಿಸ್ತೀರ್ಣದ ಕ್ಷೇತ್ರದಲ್ಲಿ ಜನರಲ್. ವೋನ್‌ಕ್ಲುಗೆಯಾರಂಭಿಸಿದ ರೋಮಾಂಚಕಾರಿ ಧಾಳಿಯಲ್ಲಿ ಮಿತ್ರ ಪ್ರಕಟಣೆಯಂತೆ, ಜರ್ಮನರ ವಿಮಾನ ಟೇಂಕುಗಳ ನಷ್ಟವು ಸಾವಿರ ಸಂಖ್ಯೆಯಲ್ಲೇ ಇರಬಹುದು; ಅಥವಾ ಕೆಲವರ ಊಹನೆಯಂತೆ ಇದು ಭಕ್ಷಣಾ ಧಾಳಿಯಲ್ಲ. ಆ ಭಾಗದ ರಶ್ಯನ್ ಸೇನೆಯ ಮುಂದೋಟ ತಡೆಯುವ ರಕ್ಷಣಾ ಧಾಳಿಯೆಂಬುದು ನಿಜವಿರಲೂ ಬಹುದು. ಆದರೆ ಜರ್ಮನರ ಮುನ್ನಡೆ ನಿಂತಿಲ್ಲ; ರಶ್ಯನರಿಗಾದ ಹಾನಿಯ ವಿವರ ದೊರೆತಿಲ್ಲ. ಹಿಟ್ಲರರ ಶಕ್ತಿ ಹಿಂದಿಗಿಂತ ಕುಗ್ಗಿದೆ ಎಂಬ ಚಿಹ್ನೆ ಕೂಡಾ ಕಾಣುವದಿಲ್ಲ. ಅಗಾಧ ಹಾನಿಯನ್ನು ಸಹಿಸಿ ತೆರೆ ತೆರೆಯಾಗಿ ಎದ್ದು ಬರುವ ನಾಜೀ ವಿಮಾನಗಳು, ಗುಂಪು ಗುಂಪಾಗಿ ಧಾವಿಸುವ ಆ ಹುಲಿ ಟೇಂಕುಗಳು, ರಶ್ಯನರ ಭರವಸೆಯ ಕದ ಮುಚ್ಚಿಸದಿರಬಹುದು—ಆದರೆ ಹಿಟ್ಲರರು ತ್ರಾಣಗುಂದಿದ್ದಾರೆ ಎಂಬವರ ಬಾಯಿ ಮುಚ್ಚಿಸಿವೆ. ರಶ್ಯದಲ್ಲಿ ಧಾಳಿ, ಯುರೋಪಿನಲ್ಲಿ ಪ್ರತಿಭಟನೆ ಹೂಡಿ ಮಿತ್ರರನ್ನು ಹಣ್ಣುಗೆ ತರುವ ದೃಢ ನಿರ್ಧಾರ ಹಿಟ್ಲರರಲ್ಲಿರುವಂತೆ ಕಾಣುತ್ತಿದೆ ಮಿತ್ರರ ವಿಜಯ ಭರವಸೆಯೂ ಸದ್ಯಕ್ಕಷ್ಟೇ ಬಲವಿರುವದರಿಂದ ಮುಂದೆ ಸಮಬಲ ಜಟ್ಟಿಗಳ ಲೋಕ ಭೀಕರ ಹೋರಾಟವನ್ನು ಕಾಣಲಿದೆ.

ಪ್ರಕಟಣೆ.

ಡಾಕ್ಟರ್ ಫೆರ್ನಾಂಡಿಸರ ಸ್ಮಾರಕ ನಿಧಿ:—ಡಾಕ್ಟರ್ ಯಲ್. ಪಿ. ಫೆರ್ನಾಂಡಿಸರು ಕಂಕನಾಡಿ ಫಾದರ್ ಮುಲ್ಲರರ ಆಸ್ಪತ್ರೆಗೆ ಸೇರಿ 50 ವರ್ಷಗಳು ಕಳೆದುವು. ಅವರ ಈ ದೀರ್ಘಕಾಲದ ಧರ್ಮದ [illegible] ಹಾಗೂ ನಿಸ್ವಾರ್ಥ ಸೇವೆಯ ಸ್ಮಾರಕಾರ್ಥವಾಗಿ, ದಕ್ಷಿಣ ಕನ್ನಡ ಜಿಲ್ಲಾ ಕೆಥೋಲಿಕ್ ಸಂಘದವರು, ಕಂಕನಾಡಿ ಆಸ್ಪತ್ರೆಯಲ್ಲಿ ವಿಷಮ ಜ್ವರ ಇತ್ಯಾದಿ ಅಂಟು ರೋಗದಿಂದ ಪೀಡಿತರಾದ ಬಡ ರೋಗಿಗಳ ಚಿಕಿತ್ಸೆಗಾಗಿ ಒಂದು ಸ್ಮಾರಕ ವಾರ್ಡನ್ನು ಕಟ್ಟಿಸುವುದೆಂದು ನಿರ್ಣಯಿಸಿದವರು. ಈ ಕಟ್ಟಡದ ಅಂದಾಜು ಮೊತ್ತ ರೂಪಾಯಿ 6000 ಇದರ ಸಲುವಾಗಿ ರೂಪಾಯಿ 2,000 ಈ ವರೆಗೆ ವಸೂಲಾಗಿದೆ. ಮತ್ತು ಮಂಗಳೂರಿನ ಬಿಷಪರು ರೂ. 500ನ್ನು ದಯಪಾಲಿಸಿದವರು. ಡಾಕ್ಟರ್ ಫೆರ್ನಾಂಡಿಸರ 50 ವರ್ಷಗಳ ದೀರ್ಘ ಸೇವೆಯ ಕಾಲದಲ್ಲಿ ಯಾವ ವಿಧದಿಂದಾದರೂ ಪ್ರಯೋಜನ ಹೊಂದಿದ ಮಹಾ ಜನರು ಈ ಸ್ಮಾರಕದ ಸಲುವಾಗಿ ಉದಾರ ಹಸ್ತದಿಂದ ದಕ್ಷಿಣೆ [illegible] ಸಹಾಯ ಮಾಡಬೇಕಾಗಿ ವಿನಂತಿ. ನೂರು ರೂಪಾಯಿ ಮೇಲೆ ದಾನ ಕೊಟ್ಟವರ ಹೆಸರುಗಳು, ಅದೇ ಕಟ್ಟಡದ ಗೋಡೆಯಲ್ಲಿ ಕೆತ್ತಲ್ಪಡುವವು. ರೂಪಾಯಿ 500 ದಾನ ಮಾಡಿದವರ ಹೆಸರಲ್ಲಿ ರೋಗಿಗಳಿಗಾಗಿ ಒಂದು ಮಂಚವನ್ನು (ಬೆಡ್) ಪ್ರತ್ಯೇಕಿಸಲಾಗುವುದು. ಈ ಬಗ್ಗೆ ಮಹನೀಯರು [illegible] ಕೊಟ್ಟ ಧನ ಸಹಾಯವನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿ, ಅವರ ಹೆಸರುಗಳನ್ನು ಸಹಾಯಧನದ ವಿವರಗಳನ್ನು ಕೆಥೋಲಿಕ್ ಎಸೋಸಿಯೇಶನಿನ 'ಮಂಗಳೂರು' ಎಂಬ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ವಂತಿಗೆಯನ್ನು ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಕಳಿಸಿರಿ.

ಮಾ. ಕಣ್ಣಪ್ಪ. M. A. L. T
ನಿವೃತ್ತ ಡಿ. ಇ. ಒ. ಮತ್ತು ಗೌರವ
ಕಾರ್ಯದರ್ಶಿ,
ಮಂಗಳೂರು.

The Canara Industrial & Banking Syndicate Ltd.
UDIPI.
WANTED.

Candidates to undergo training in the Junior Banking Course of two years. The fee is Rs. 30/- a year to be paid in advance each year. After completion of the course the candidates will have to appear for the Associate Examination of the Academy of General Education. Successful candidates will be entertained by the Bank on a salary of Rs. 20—3/2—45.

Qualifications of the candidates: Fourth Form course: best students that have completed Form III or Standard VIII also will be selected. Age: Over 15 years.

Applications should reach the undersigned before 27-7-43.
For particulars apply to: --

UDIPI
6—7—1943.

B. S. Nayak,
Office manager.

Degrees: Books: Medicines

Free H. L. M. S. M. B. H. M. D. etc. Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp:—

Principal Indian Homeopathi Institute & Society (Govt. Regd)
P.O. MAHUVA .(Kathiawar Dt. India.)

Sidha-Kalpa Kavach (Regd.)

No. 3 Rs 2. No. 2 Rs. No. 1 Rs. 7. Special Rs. 10, Extra Special Rs. 17 for ove marriage health, wealth. Ask any six questions with M. O. Re. 1/4 and get correct answers by returnpost Life reading Rs.10 No V.P.P.SendM.O,Free. pamplets.

Prof Dr. N. H Chhatbar.
P. O. MAHUVA (Kathiawar India.)

CHAMPAE'S SNOW & CASTREX
AGENTS
SADANANDA STORES UDIPI

The Canara Banking Corporation Limited.

(Incorporated in British India—Liability of Members limited.)

ESTD: 1906.

Head Office: **UDIPI**, S. Kanara.

Paid Up Capital as on 31-5-'43 Rs. 6,50,060/-

Reserves „ „ Rs. 3,84,788/-

DEPOSITS exceed Rs. 50 lakhs.

For your Banking requirements come to us and we will assist you. We undertake all kinds of Banking business.

ಉಡುಪಿ, ಗುರುವಾರ, ೧೫-೭-೧೯೪೩.

ಮಿ. ಹಕ್ಕರ ಆರೋಪ

ಕಳೆದ ಆರು ವರ್ಷಗಳಲ್ಲಿ ಬಂಗಾಳದ ಪ್ರಧಾನರಾಗಿದ್ದು, ಗವರ್ನರರು ತಯಾರಿಸಿದ ರಾಜೀನಾಮೆಯ ಪತ್ರಕ್ಕೆ ಸಹಿಹಾಕಿ, ಅಧಿಕಾರ ಬಿಟ್ಟು ಇಂದೊಂದು ಪಕ್ಷ ಪ್ರಮುಖರಾಗಿ ಬಂಗಾಳ ಎಸೆಂಬ್ಲಿಯಲ್ಲಿರುವ ಮಿ. ಫಜಲುಲ್ ಹಕ್ಕರು, ಎಸೆಂಬ್ಲಿಯಲ್ಲಿ ವರ್ಣಿಸಿದ ಗವರ್ನರರ ವರ್ತನೆಯು ಸದ್ಯಸ್ಥಿತಿಯಲ್ಲಿ ಲೋಕವವಲೋಕಿಸಬೇಕಾದ ದಾಖಲೆಯೆನ್ನುತ್ತೇವೆ. ಸಿಂಧಿನಲ್ಲಿ ತನಗೊಗ್ಗದಬಿರುದು ತ್ಯಾಗ ಮಾಡಿದ್ದಕ್ಕಾಗಿ ಗತಿಸಿದ ಅಲ್ಲಾಭಕ್ಷರು ಪ್ರಧಾನಿ ಪಟ್ಟಬಿಡಬೇಕಾಗಿ ಬಂದಿತ್ತು. ಬಂಗಾಳ ಗವರ್ನರರಿಗೆ ಹಿತಕರವೆಂದು ತೋರುವ ವರ್ತನೆಯಿಲ್ಲದ ತಪ್ಪಿಗಾಗಿ ಮಿ. ಫಜಲುಲ್ ಹಕ್ಕರು ಅಧಿಕಾರದಿಂದುರುಳಿದರು. 'ಹಿಂದುಸ್ಥಾನದಲ್ಲಿ ಈಗಲೂ ಪ್ರಜಾಪ್ರಭುತ್ವವಿದೆ. ಪ್ರಾಂತ್ಯಗಳಲ್ಲಿ ಈಗಲೂ ಜನ ಪ್ರತಿನಿಧಿಗಳ ಆಡಳಿತೆಯೇ ಇದೆ'-ಎಂಬ ಬ್ರಿಟಿಷ್ [illegible]ವನ್ನು ಕೇಳಿದ ಕಿವಿಗಳು ಮಿ. ಹಕ್ಕರ ಹೇಳಿಕೆಯನ್ನೂ ಕೇಳಲೆನ್ನುತ್ತೇನೆ. ಸಂಪೂರ್ಣವಾಗಿ ಮಂತ್ರಿಗಳ ವಶಕ್ಕೆ ತೆಗೊಳಪಟ್ಟ ವಿಷಯಗಳಲ್ಲಿ ಕೂಡಾ ಬಂಗಾಳ ಗವರ್ನರ್ ಸರ್. ಜೋನ್ ಹರ್ಬರ್ಟರು ಮಂತ್ರಿಗಳೇ ಇಲ್ಲವೆಂಬಂತೆ ಮನಬಂದಂತೆ ವರ್ತಿಸಿರುವರು ಮಂತ್ರಿಗಳ ಉಪದೇಶವನ್ನು ತಿರಸ್ಕರಿಸಿರುವರು. ಮಿ. ಹಕ್ಕರು ಪ್ರಧಾನಿಯಾಗಿದ್ದಾಗ ಗವರ್ನರರಿಗೆ ಬೇಡವಾಗಿದ್ದ ಯಾವ ಕಾರ್ಯವೂ ನಡೆಯದಂತಾಗಿದ್ದಿತು; ಆದರೆ ಸರ್. ಹರ್ಬರ್ಟರಿಗೆ ಅಷ್ಟರಿಂದಲೇ ತೃಪ್ತಿ ದೊರೆಯಲಿಲ್ಲ. ವ್ಯಕ್ತಿಶಃ ಮಿ. ಹಕ್ಕರಲ್ಲಿ ಗವರ್ನರರಿಗೆ ಬೇಡವಾಗಿದ್ದ ದುರ್ಗುಣವೊಂದಿದ್ದಿತು—ನಿಯಮ ಬಾಹಿರವಾದುದನ್ನು ಮಾತಿನಿಂದಲಾದರೂ ಪ್ರತಿಭಟಿಸುವ ಹುರುಪು. ಅದಕ್ಕಾಗಿಯೇ ಗವರ್ನರರು ಅವರನ್ನು ಕರೆಯಿಸಿ, ಮೊದಲೇ ಟೈಪು ಮಾಡಿಸಿಟ್ಟಿದ್ದ ರಾಜೀನಾಮೆಯ ಪತ್ರಕ್ಕೆ ಸಹಿ ಹಾಕಿಸಿಕೊಂಡರು. ಆಗಲೂ ಮಿ. ಹಕ್ಕರಿಂದ ಸಾಧ್ಯವಾದುದೆಂದರೆ ಬಾಯಿಂದ ಪ್ರತಿಭಟಿಸುವುದು ಮಾತ್ರ! ಅರ್ಥಾತ್ ತಾನು ಸಹಿಹಾಕಿ ಕೊಡಲಿರುವ 'ಡಿಸ್‌ಮಿಸ್' ಆಜ್ಞೆಯ ಪತ್ರದ ಅವತಾರವನ್ನು ಬದಲಾಯಿಸಿ, ಗವರ್ನರರು ಮಿ. ಹಕ್ಕರಿಂದ ಸಹಿಹಾಕಿಸಿದ್ದರಿಂದ ಅದು 'ರಾಜೀನಾಮೆ' ನಾಮಕರಣ ಹೊಂದಿತು. ಕೆಲವೆಡೆ, ಆತ್ಮಹತ್ಯಾ ಆಜ್ಞೆ ಕೊಡುವ ಶಿಕ್ಷೆಯ ಕ್ರಮವಿದೆಯೆಂದು ಕೇಳುತ್ತೇವೆ. ಬಂಗಾಳ ಗವರ್ನರರು ಹಕ್ ಮಂತ್ರಿ ಮಂಡಲವನ್ನು ಆ ವಿಧಾನದಿಂದ ಶಿಕ್ಷಿಸಿದ್ದಾರೆ. ಹಿಂದುಸ್ಥಾನವೊಂದನ್ನು ಬಿಟ್ಟರೆ ಮಿಕ್ಕ ಯಾವದೇಶದಲ್ಲಿಯೂ ಜನತಾ ಜವಾಬ್ದಾರಿ ಮಂತ್ರಿಯೊಬ್ಬನಿಗೆ ಇಂತಹ ದುರ್ಗತಿಯೊದಗುವದು ಅಸಾಧ್ಯ. ಮಿ. ಹಕ್ಕರು ಬಂಗಾಳಾ ಎಸೆಂಬ್ಲಿಯಲ್ಲಿ ಮಾಡಿದ ಕಠಿಣ ಆರೋಪಗಳಿಗೆ ಈ ತನಕ ನಾವು ಗವರ್ನರರ ಉತ್ತರವನ್ನು ಕೇಳಿಲ್ಲ. ಮಾಜೀಪ್ರಧಾನರ ಆರೋಪಗಳು-ಅವರು ವರ್ಣಿಸಿದ ಆ ರೀತಿ-ಆ ಶೈಲಿ, ನಿರಪರಾಧಿಯ ಮಾತಂತಿರಲಿ, ಅಪರಾಧಿಗೆ ಕೂಡಾ ಅಸಹನೀಯವಾದುದೆಂದು ನಮಗನ್ನಿಸುತ್ತದೆ. 'ಗವರ್ನರರು ಉತ್ತರ ಕೊಡಲಿ' ಎಂದು ಮಿ. ಹಕ್ಕರ ಆಹ್ವಾನವೂ ಇದೆ. ಆದರೂ, ದಿನಗಳು ಕಳೆದವು- ಗವರ್ನರರ ಉತ್ತರವಿಲ್ಲವೇಕೋ ತಿಳಿಯದು. ಉತ್ತರಿಸದಿರಲಸಾಧ್ಯವಾದ ಆರೋಪಗಳಿವು. ಮೌನ ಧರಿಸಲಿಕ್ಕೆ ಯೋಗ್ಯವಾಗಲು ಅವೇನೂ ಪ್ರಧಾನ ಮಂತ್ರಿ ಫಜಲುಲ್ ಹಕ್ಕರು ಮಾಡಿಕೊಂಡ ವಿಜ್ಞಾಪನೆಗಳಲ್ಲ; ಬಲವಾದ ಕಾರಣಕೊಟ್ಟು 'ಇಂತಹಗವರ್ನರನು ತನ್ನ ಅಧಿಕಾರದಲ್ಲಿರಲು ಅಯೋಗ್ಯನು' ಎಂದು ಮಿ. ಹಕ್ಕರೆಂದಿದ್ದಾರೆ. ಅವರು ಮಾಡಿರುವ ಆರೋಪಗಳು ಸತ್ಯವಾಗಿದ್ದರೆ ಅಖಿಲ ಹಿಂದುಸ್ಥಾನ ಮಾತ್ರವಲ್ಲ ಪ್ರಪಂಚದ ನ್ಯಾಯವಾದಿಗಳೆಲ್ಲರೂ ಮಿ. ಹಕ್ಕರ ಸ್ವರದೊಡನೆ ಸ್ವರಕೂಡಿಸದೆ ನಿರ್ವಾಹವಿಲ್ಲ. ಆದರೆ ಬಂಗಾಳಾಗವರ್ನರರು ಜನಪ್ರತಿನಿಧಿಗಳಲ್ಲ, ರಾಜಪ್ರತಿನಿಧಿಗಳು. ಇಂತಹಆರೋಪಗಳ ಮುಂದೆ ಮೌನ ವ್ರತ ಧಾರಣೆ ಮಾಡಿ ಬದುಕುವ ಅವಕಾಶಅವರಿಗಿದೆಯೆಂಬುದು ನಿಜ. ಆದರೆ ರಾಜ್ಯಸೂತ್ರಗಳಿಗೇನೇ ವ್ಯತಿರಿಕ್ತವಾಗಿ ವರ್ತಿಸಿದವರೆಂಬ ಆರೋಪಬಿದ್ದ ಓರ್ವ ಪ್ರಮುಖಾಧಿಕಾರಿಯು ಮೌನವಾಗಿರಲು ಹೇಗೆ ಸಾಧ್ಯವೋ ನಮಗರಿಯದು. ಒಂದೊಮ್ಮೆಗೆ ಅವರು ಮೌನ ವ್ರತ ಧರಿಸಿದರೂ ಅವರಮೇಲಧಿಕಾರಿಗಳು ತಮ್ಮ ರಾಜ್ಯಸೂತ್ರಕ್ಕೇನೇ ತಟ್ಟಿದ ಕಳಂಕವನ್ನು ತೊಳೆದುಕೊಳ್ಳದಿರಲು ಸಾಧ್ಯವೆ? ಆದ್ದರಿಂದ ಈ ಸಂಬಂಧವಾಗಿ ಬಂಗಾಳಾ ಗವರ್ನರರ ಉತ್ತರ ಅಥವಾ ಇಂಡಿಯಾ ಆಫೀಸಿನವರ ಪ್ರತಿಕ್ರಿಯೆಯನ್ನು ಆತುರದಿಂದ ನಿರೀಕ್ಷಿಸುತ್ತೇವೆ

ದುರ್ಬೀನು

ಹಾಲ್ಗಡಲು ಮಥಿಸಿದಾಗ ಅಮೃತ ಹುಟ್ಟಿದಂತೆ; ಹಳ್ಳಕದಡಿದರೆ ಕೆಸರೇಳುತ್ತದೆ. ನಿರ್ಮಲ ಮನಸ್ಸಿನಿಂದ ಯೋಚಿಸಿದರೆ ಹಾಲ್ಗಡಲು ಮಥಿಸಿದಂತೆ; ಸಂಕುಚಿತ ಮನಸ್ಸಿನ ಯೋಚನೆ ಹಳ್ಳಕದಡಿದಂತೆ.

oo oo oo

ಗವನು ಧರಿಸಿದವಳಿಗೆ ಸೆರಗು ತಿದ್ದುವ ಕೆಲಸವಿಲ್ಲ. ಮೌನ ಧರಿಸಿದವನಿಗೆ ಮಾತು ತಿದ್ದುವ ಪ್ರಯಾಸವಿಲ್ಲ.

oo oo oo

ಇರುವೆಯ ಸಾಲು ಹರಿದರೂ ಗೆಲ್ಲು ತುಂಡಾಗದು; ಆನೆಯ ಸೊಂಡಿಲು ತಾಗಿದೊಡನೆ ಮುರಿದೀತು. ಲಘುಮಾತುಗಳ ನ್ನೆಷ್ಟೇ ಆಡಿದರೂ ಮನಸ್ಸಿಗೆ ಧಕ್ಕೆಯಿಲ್ಲ; ನಿಂದೆಯೊಂದೇ ಒಂದು ಸಾಕು

oo oo oo

ಹಣ್ಣು ಕೊಳೆತರೂ ಅದನ್ನು ಕಲ್ಲಪದ ರಾಶಿಗೊಗೆದು ಬಿಡಿ; ದೊಡ್ಡವರು ದುರ್ವರ್ತನೆ ತೋರಿಸಿದರೂ ಅವರನ್ನು 'ಬಚ್ಚಾಳ'ಗಳ ಸಾಲಿಗೆ ಸೇರಿಸಿ ಬಿಡಿ.

oo oo oo

ಕಾಲು ಬಲವಿದ್ದವನು ಕಣಿವೆಗೂ ಇಳಿದಾನು; ಪರ್ವತಕ್ಕೂ ಹತ್ತಿಯಾನು; ಕುಂಟನಿಂದ ಅಸಾಧ್ಯ. ಆತ್ಮ ಬಲವಿದ್ದವನು ಪತನ ಅಭಿವೃದ್ಧಿ, ಎರಡನ್ನೂ ಸಮಾನವಾಗಿ ಅನುಭವಿಸಬಲ್ಲ- ದುರ್ಬಲನಿಂದ ಅಸಾಧ್ಯ.

oo oo oo

ಸಿಪ್ಪೆ ಹಾಕಿದ ಮಾತ್ರಕ್ಕೆ ರತ್ನಾಸಕೇಸರ ತೂತು ಬೀಳಲಾರದು; ಬಿರುಸು ಮಾತು ಹೊರಟ ಮಾತ್ರಕ್ಕೆ ಹೃದಯ ಬಿರಿಯಿತೆಂಬ ಅರ್ಥವಲ್ಲ.

oo oo oo

ಸಿಪ್ಪೆಯಿರುವ ಸೀಯಾಳಕ್ಕೆ ಚೂರಿಹಾಕಿ ನೀರು ಬರಿಸಿದರೆ ಹಿಂಸೆಯಿಲ್ಲ. ಮರೆಯಲ್ಲಿರುವ ಮನಸ್ಸನ್ನು ಕೆಣಕಿ ಪ್ರತಿಫಲ ಪಡೆಯುವದು ತಪ್ಪಲ್ಲ.

oo oo oo

ಮೈಯಲ್ಲಿ ರೋಗವಿದ್ದರೆ ಡಾಕ್ಟರರಲ್ಲಿ ಗೋಡಬಹುದು; ಮೈಯಲ್ಲಿ ಕೊಳೆನಿಂತು ದಕ್ಕೂ ಡಾಕ್ಟರನನ್ನು ಸಂಧಿಸಬಹುದೆ? ಹೊಸ ಸಮಸ್ಯೆ ಇದಿರಾದರೆ ತಜ್ಞರ ಸಲಹೆ ಬೇಕಾದೀತು; ನಿತ್ಯವಹಿವಾಟುಗಳಿಗೂ ಅನ್ಯರ ಉಪದೇಶಬೇಕೆ?

oo oo oo

ಇಂದ್ರಜಾಲಿಕನು ತನ್ನನ್ನು ತಾನೇ ಕಡಿದು ತೋರಿಸಿ ದುಡ್ಡು ದುಗ್ಗಾಣಿ ಪಡೆಯುತ್ತಾನೆ. ವ್ಯವಹಾರ ತಂತ್ರಜ್ಞನು ಆತ್ಮಯಜ್ಞ ಮಾಡಿಕೊಳ್ಳುವವನಂತೆ ನಟಿಸಿ ಲಾಭ ಹೊಂದುತ್ತಾನೆ.

oo oo oo

ತುಟಿಯೊಡೆದರೂ ಕೆಂಪಾಗುತ್ತದೆ; ವೀಳ್ಯದೆಲೆ ಜಗಿದರೂ ಕೆಂಪಾಗುತ್ತದೆ; ಒತ್ತಾಯದಿಂದಲೂ ಒಲವಿನಿಂದಲೂ ಕೆಲಸವಾಗುತ್ತದೆ

oo oo oo

ಮಾತು ಕೇಳದೆ ತುಟಿ ಮಾತ್ರ ಅಲುಗುತ್ತಿದ್ದರೆ ಗೊಣಗುಟ್ಟುತ್ತಾನೆನ್ನಲೊ? ಮಂತ್ರ ಪಠನೆಯೆನ್ನಲೊ? ಅಭಿಪ್ರಾಯ ತಿಳಿಸದೆ ಆತುರ ಮಾತ್ರ ತೋರಿಸಿದರೆ ಪ್ರತಿಕೂಲವೆಂದು ಭಾವಿಸಲೆ? ಅನುಕೂಲವೆನ್ನಲೆ?

oo oo oo

ಆನೆ ತಲೆ ಕೊಟ್ಟು ದೂಡುತ್ತದೆ; ಎತ್ತು ಹೆಗಲು ಕೊಟ್ಟು ಎಳೆಯುತ್ತದೆ. ಜ್ಞಾನಿಯು ಮೆದುಳು ವ್ಯಯಿಸಿದುಡಿಯುತ್ತಾನೆ; ಸಾಧಕನು ಹೆಗಲುಕೊಟ್ಟು ಸಾಧಿಸುತ್ತಾನೆ.

In the Court of the District Munsif of Mangalore.

O, S. No. 140/1943.

Between

The united Basel Mission Church in India Trust Association.

—Plaintiff

and

Edwin Joseph son of Changuni mesthri carpenter. Fisher garden, Kudroli Mangalore, now reported at A. Block 1st Floor, Room No. 25, Sankli street, Byculla, Bombay 8.

—Deft.

Notice

The above Defendant is hereby informed that the above suit, which has been filed against him in the above court for recovery, of arrears of rent and possession of the plaint mentioned immovable property is posted to 26-7-1943 at 10-30 A. M. He may appear in person or by Vakil and contest the same. Otherwise he will be declared exparte.

M. Keshava Pai.

Mangalore, 10 7-1943. } Counsel for Plaintiff.

NOTICE.

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. P. No, 48/1943

1) ಕಮಲಮ್ಮ, 2ನೇ ಅರ್ಜಿದಾರನ ಹೆಂಡತಿ, 2) ಕುಶ್ಯಾಲು ವಿಠಲ ತಂತ್ರಿ. ನಾರಾಯಣ ತಂತ್ರಿಗಳ ಮಗ ಉಡ್ಪಿ ಕಸಬಾ ಸೋದೆ ಮಠದ ಪೋಗ

—ಅರ್ಜಿದಾರರು

ಈ ಮೂಲಕ ಸರ್ವರಿಗೂ ತಿಳಿಯಪಡಿಸುವು ದೇನೆಂದರೆ—

ಬೆಂಗಳೂರು ಸಿಟಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತಾ 6-3-43ರಲ್ಲಿ ಮೃತಪಟ್ಟ ಕೆ. ಯಸ್. ಟಿ. ವಿ. ತಂತ್ರಿಗಳಿಗೆ "The Oriental Government security Life Assurance Co., Ltd., ನಿಂದ Policy No. 787137ನೇ ಪೋಲಿಸಿ ಬಾಬ್ತು ಸಿಕ್ಕತಕ್ಕ ಬೋನಸ್ ಕೂಡಾ ಇನ್ಶುರೆನ್ಸ್ ರೂ. 1020-0 0ನ್ನು ವಸೂಲು ಪಡೆಯುವರೆ ಸದ್ರಿ ಮೃತನ ತಾಯಿ 1ನೇ ಅರ್ಜಿದಾರಳೇ ಹಕ್ಕುದಾರಳೆಂತಲೂ, ಸದ್ರಿ ಇನ್ಶುರೆನ್ಸನ್ನು ವಸೂಲು ಪಡೆಯುವರೆ ಅರ್ಜಿದಾರರ ಪೈಕಿ 1 ನೇ ಅರ್ಜಿದಾರಳ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿಯೂ ವಗೈರೆ ಸಂಗ್ತಿ ಕಾಣಿಸಿ ಅರ್ಜಿದಾರರು ದಾಖಲು ಮಾಡಿರುವ ನೋಟ್ಟಿಂದ ಅರ್ಜಿಯು. ತಾ 4-8-43ಕ್ಕೆ ವಿಚಾರಣೆಗಾಗಿಯದ. ಆಕ್ಷೇಪ ಹೇಳಲಿದ್ದವರು ಸದ್ರಿ ದಿವಸ ಬೆಳಗ್ಗೆ 11 ಘಂಟೆಗೆ ಈ ಕೋರ್ಟಿನ ಮುಂದೆ ಸ್ವತಹಾ ವ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

ಉಡ್ಪಿ ತಾ 10 7-43 } **P. V. Acharya** Vakil for Petitioners.

ನಿಜವಿರಬಹುದೆ?

ಗಾಂಧಿಜೀಯವರು ಈ ಬಾರಿ ವೈಸರಾಯರಿಗೆ ಬರೆದ ಪತ್ರದಲ್ಲಿ 1942ನೇ ಆಗೋಸ್ತು 8ರ ಕಾಂಗ್ರೆಸ್ ನಿರ್ಣಯವನ್ನು ನಿಶ್ಶರ್ತವಾಗಿ ಹಿಂದೆಗೆದು, ಬರುವ ಆಗೋಸ್ತು 8ರೊಳಗೆ ಒಂದು ಉತ್ತರ ದಯಪಾಲಿಸಲೇಬೇಕೆಂದು ವೈಸರಾಯರನ್ನು ಕೇಳಿಕೊಂಡಿರುವರೆಂದು ವಿಶ್ವಾಸಾರ್ಹ ವರದಿಗಳಿವೆ. ಪತ್ರದ ಪ್ರಾಮುಖ್ಯತೆಯನ್ನು ಮನಗಂಡ ವೈಸರಾಯರು ಇದನ್ನು ಬ್ರಿಟಿಷ್ ಮಂತ್ರಿಮಂಡಲಕ್ಕೆ ತಿಳಿಸಿ ಗಾಂಧಿಯವರಿಗೆ ಉತ್ತರ ಕೊಡಬೇಕಾದರೆ ಅಲ್ಲಿಂದ ಸೂಚನೆ ಬಂದುಕೊಳ್ಳಲಿ ಎಂದು ಕಾಯುತ್ತಿದ್ದಾರೆಂದು ತಿಳಿದುಬರುತ್ತದೆ.

● ಸಿಸಿಲಿಯಲ್ಲಿ ಕಾಲೂರಿದ ಮಿತ್ರ ಸೇನೆಗಳಿಗೆ ಅತಿ ಹೆಚ್ಚಿನ ಸೈನ್ಯೋಪಕರಣ ಸರಬರಾಯಿಗಳು ದೊರೆತುಅಲ್ಲಿಯ ಧಾಳಿಯು ಅತಿ ಭೀಕರ ಹೋರಾಟದೊಡನೆ ಸಾಗಿದೆ ಪೂರ್ವಗಡಿಯಲ್ಲಿ ಮಿತ್ರ ಸೇನೆ ಮುಂದೊತ್ತಿ ಪ್ರಾಮುಖ್ಯ ವಿಲ್ವಾಣವೊಂದನ್ನು ಸಂಪಾದಿಸಿವೆ.

● ದಕ್ಷಿಣ ಇಟಲಿಯ ಮೇಲೆ ಅಮೇರಿಕನ್ ವಿಮಾನಗಳು ತಾ. 12ರಲ್ಲಿ ಭೀಕರ ಧಾಳಿನಡಿಸಿದವು.

○ ರಶ್ಯದಲ್ಲಿ ಕರ್ಸ್ಕಿನ ಕಡೆಗೆ ನಾಜೀಸೇನೆಗಳು ಅತಿ ಭೀಕರ ಧಾಳಿ ನಡಿಸಿ, ಅಲ್ಲಿಯ ಹೋರಾಟವು ಅತ್ಯಂತ ಬಿರುಸಾಗಿ ಸಾಗುತ್ತಿದ್ದು ಪರಿಸ್ಥಿತಿಯು ವಿಷಮಾವಸ್ಥೆಗೆ ಮುಟ್ಟಿದೆ.

● ಫ್ರಾನ್ಸಿನಲ್ಲಿರುವ ವಿರೋಧಿ ವಿಮಾನ ವಿಲ್ದಾಣಗಳ ಮೇಲೆ ಆರ್. ಎ. ಎಫ್. ಆಕಾಶ ಧಾಳಿ ನಡೆಯಿತು.

— ಸುದ್ದಿ ಸೂಚನೆ —

○ ಅಮೇರಿಕ ಮತ್ತು ಇಂಗ್ಲಾಂಡುಗಳ ನಾಳಿಕೊಡೆ ಸೈನಿಕರೂ ಸಿಸಿಲಿಯಲ್ಲಿಳಿದಿದ್ದಾರೆಂದು ತಿಳಿದು ಬರುತ್ತದೆ.

○ ಬರ್ಮದ ಮೇಲೆ ಮಿತ್ರರ ವಿಮಾನ ಧಾಳಿ ನಡೆದು ಅಲ್ಲಿಯ ಮುಖ್ಯ ಸಂಕವಾದ ಮೀನ್ಸ್ ಸೇತುವೆಗೆ ಬಲವಾದ ಹೊಡೆತ ಬಿದ್ದಿದೆ.

○ ಜೂನ್ 30ಕ್ಕೆ ಅಂತ್ಯವಾದ ವರುಷದಲ್ಲಿ ಅಮೇರಿಕವು ಉಚ್ಚತರಗತಿಯ 64000 ವಿಮಾನಗಳನ್ನು ನಿರ್ಮಿಸಿದೆ.

● ಗಾಂಧಿಜೀಯವರು ಆಗೋಸ್ತು ನಿರ್ಣಯವನ್ನು ಹಿಂದೆಗೆಯುವ ಸೂಚನೆಯುಳ್ಳ ಪತ್ರವೊಂದನ್ನು ವೈಸರಾಯರಿಗೆ ಬರೆದಿರುವರೆಂದು ಕೆಲವೆಡೆ ಸುದ್ದಿ. ಆದರೆ ಸುದ್ದಿ ಖಾತೆಯ ಮೆಂಬರರಾದ ಸರ್. ಮಹಮ್ಮದ್ ಉಸ್ಮಾನರು ಇದನ್ನು ಅಲ್ಲಗಳೆದಿದ್ದಾರೆ.

● ನ್ಯೂಜಾರ್ಜಿಯಾದಿಂದ ಹೊರಟಿದ್ದ ಜಾಪಾನೀ ನೌಕಾ ಬಲದ ಮೇಲೆ ಮಿತ್ರರ ಧಾಳಿಮಾಡಿದರು.

○ ರಶ್ಯದಲ್ಲಿ ಈಗ ನಾಜಿಗಳು ಆರಂಭಿಸಿರುವ ಧಾಳಿಯ ಬಿಗಿತವು ಅತ್ಯಂತ ಬಲವಿದ್ದು ಹಲವು ವೇಳೆ ರಶ್ಯನರಿಗೆ ಹಸನೀಯವಾಗುವಂತಹ ಪರಿಸ್ಥಿತಿಯೊದಗಿದೆಯೆಂದೂ, ಈ ದೀರ್ಘ ಯುದ್ಧದಲ್ಲಿ ಇಂತಹ ಪ್ರಬಲ ಯಾಂತ್ರಿಕೋಪಕರಣ ಹೋರಾಟವು ನಡೆದಿಲ್ಲವೆಂದೂ ತಿಳಿದು ಬರುತ್ತದೆ.

● ಸಿಸಿಲಿಯಲ್ಲಿ ಕಾಲೂರಿದ ಮಿತ್ರ ಸೇನೆಗಳು ಸಂಕ ಸೇತುವೆಗಳ ಮೂಲಕ ದ್ವೀಪದೊಳಭಾಗಕ್ಕೆ ಸೇರಿ ಒಂದೆರಡು ದಿನಗಳಲ್ಲೇ 100 ಮೈಲು ಉದ್ದದ ಸ್ಥಳವನ್ನಾಕ್ರಮಿಸಿಕೊಂಡಿರುವವು.

○ ರಶ್ಯದಲ್ಲಿ ಈಗ ಹಿಟ್ಲರಾರಂಭಿಸಿರುವ ನೂತನ ಧಾಳಿಯಲ್ಲಿ ಅವರು ಪ್ರತಿ ಮೂರು ಯಾ ನಾಲ್ಕು ಮಿನಿಟಿಗೊಂದು ಟೇಂಕನ್ನು ಕಳಕೊಳ್ಳುತ್ತಿದ್ದಾರೆಂದೂ, ಇದು ಮೋಸ್ಕೊ ಧಾಳಿಯ 12 ಪಾಲಷ್ಟು ಅಧಿಕ ನಷ್ಟವೆಂದೂ ರಶ್ಯನರು ಅಂದಾಜು ಕಟ್ಟಿದ್ದಾರೆ.

● ಕಲ್ಕತ್ತದ, ಮುಸಲ್ಮಾನರ 'ಹಿಂದೂ ಮುಸ್ಲೀಮ್ ಐಕ್ಯ ಸಂಘ'ದ ಆರನೇ ವಾರ್ಷಿಕೋತ್ಸವಸಭೆಯು ತಾ. 11ರಲ್ಲಿ ನೇರಿ ಹಿಂದುಸ್ಥಾನವನ್ನು ವಿಭಾಗಿಸಬಾರದೆಂದೂ, ಪಾಕಿಸ್ಥಾನ ಪ್ರಚಾರವು ಹಾನಿಕರವೆಂದೂ ಮುಸ್ಲಿಂ ಮುಖಂಡರು ಘೋಷಿಸಿದ್ದಾರೆ.

○ ಸದ್ಯದಲ್ಲೇ ಹಿಂದುಸ್ಥಾನಕ್ಕೆ ಪುನಃ ಬರಲಿರುವ ಅಮೇರಿಕದ ಮಿ. ಫಿಲಿಪ್ಸರು ಮುಖ್ಯವಾಗಿ ಸೈನಿಕ ಕಾರ್ಯ ಸಂಬಂಧವಾಗಿಯೇ ಬರಲಿರುವರೆಂದು ತಿಳಿದು ಬರುತ್ತದೆ.

○ ನೈಋತ್ಯ ಶಾಂತ ಸಮುದ್ರದ ಕೆಲವು ಜಾಪಾನೀ ವಿಲ್ವಾಣಗಳ ಮೇಲೆ ಮಿತ್ರರ ಆಕಾಶ ಧಾಳಿ ನಡೆದು ಹಾವಳಿಯಾಗಿದೆ.

○ ಪೋಲೆಂಡಿನ ಮುಖ್ಯ ಮಂತ್ರಿ ಜನರಲ್ ಸಿಕೋರ್ಸ್ಕಿಯವರ ಮರಣ ಹೇತುವಾದ ವಿಮಾನ ಅಪಘಾತವು ಹೇಗಾಯಿತೆಂಬ ವಿವರವು ಪ್ರಕಟವಾಗಿಲ್ಲ. ಅವರ ಹೆಣವನ್ನೀಗ ಇಂಗ್ಲಾಂಡಿಗೆ ತರಲಾಗಿದೆ

● ಸಿಸಿಲಿ ಆಕ್ರಮಣವು ದ್ವಿತೀಯ ರಂಗಾರಂಭವಲ್ಲವೆಂದೂ ಮಿತ್ರರು ದಕ್ಷಿಣ ಯುರೋಪಿನ ಯಾವದಾದರೊಂದು ಕಡೆ ಇಳಿಯಬಹುದೆಂದೂ ನಾಜೀ ಪ್ರಚಾರಕರನ್ನುತ್ತಾರೆ.

○ ದಕ್ಷಿಣ ಹಿಂದುಸ್ಥಾನದ ಯಾವುದೋ ಒಂದು ಕಡೆಯಲ್ಲಿ ಆರ್. ಎ. ಎಫ್. ಶಾಖೆಯೊಂದನ್ನು ಸ್ಥಾಪಿಸಲಾಗಿದೆ.

● ಇಂಗ್ಲಾಂಡಿನಲ್ಲಿ ಸೋವಿಯೆಟ್ ರಾಯಭಾರಿಯಾಗಿದ್ದ ಎಮ್. ಮೈಸ್ಕಿಯವರು ಪರ್ಯಾಲೋಚನೆಗಾಗಿ ಮೋಸ್ಕೊವಿಗೆ ಬಂದಿದ್ದಾರೆ.

○ ಹಿಂದೀಯರ ವಿರುದ್ಧ 'ಪೆಗ್ಗಿಂಗ್ ಬಿಲ್'ನ್ನು ಮಂಜೂರುಮಾಡಿಕೊಂಡ ದಕ್ಷಿಣ ಆಫ್ರಿಕ ಸರಕಾರದ ಮೇಲೆ ಪ್ರತಿಕ್ರಿಯೆ ಹೂಡುವದನ್ನು ಪರ್ಯಾಲೋಚಿಸಲು ವೈಸರಾಯೀ ಕೌನ್ಸಿಲ್ ಮೆಂಬರರು ನವದಿಲ್ಲಿಯಲ್ಲಿ ಪರಿಷತ್ತು ಸೇರಿಸಿದ್ದಾರೆ.

● ಆಸ್ಟ್ರೇಲಿಯದ ಮಾಜೀ ಮಂತ್ರಿ ಮಿ. ಮೇಕೆನ್ಝಿಯವರು ಇಂಗ್ಲಾಂಡಿಗೆ ಆಸ್ಟ್ರೇಲಿಯವು ಎಂದೆಂದಿಗೂ ಋಣಿಯಾಗಿರಬೇಕೆಂದೂ, ಅಮೇರಿಕ ಆಸ್ಟ್ರೇಲಿಯಗಳ ತ್ಯಾಗವು ಬ್ರಿಟನಿನ ಸಹನೆಗೆ ಸರಿದೂಗಲಾರದೆಂದೂ ಶ್ಲಾಘಿಸಿದ್ದಾರೆ.

○ ಸಿಲೋನಿನಲ್ಲಿ, ಭಾರತ ಸರಕಾರದ ಪ್ರತಿನಿಧಿಯಾಗಿ ಶ್ರೀ ಎಮ್. ಎಸ್. ಅಣೆಯವರನ್ನು ಹಿಂದೀ ಸರಕಾರವು ನೇಮಿಸಿದೆ. ಸಿಲೋನ್ ಪತ್ರಿಕೆಗಳು ಇದಕ್ಕಾಗಿ ಸಮಾಧಾನ ಸೂಚಿಸಿವೆ.

● ಎಲ್ಲಾ ರಾಷ್ಟ್ರೀಯ ಶಕ್ತಿಗಳನ್ನು ಕೇಂದ್ರೀಕರಿಸಿಕೊಂಡು ಹೊಸ ಕಾರ್ಯಕ್ರಮ ಕೈಕೊಳ್ಳಬೇಕು. ಮುಂದಿನ ವರುಷ ಜಾಪಾನು ಮತ್ತು ಬ್ರಿಟಿಷರು ಹಿಂದುಸ್ಥಾನದಲ್ಲೇ ಹೋರಾಡಿಕೊಳ್ಳುವಂತಾಗಿ ಕಠಿಣಪರಿಸ್ಥಿತಿ ಏಳಬಹುದು ಎಂದು ಶ್ರೀ. ಕೆ. ಎಮ್. ಮುನ್ಶಿಯವರ ವಿನಂತಿಯಿದೆ.

○ ಇಡೀ ದೇಶಕ್ಕನ್ವಯಿಸುವ ಆಹಾರ ಧೋರಣೆಯನ್ನು ಕಳೆದ ವಾರ ನವದಿಲ್ಲಿಯಲ್ಲಿ ಸೇರಿದ ಆಹಾರ ಪರಿಷತ್ತು ನಿರ್ಧರಿಸಿ ಉಪಸಮಿತಿಗಳನ್ನು ರಚಿಸಿದೆ.

● ಮಂಚೂರಿಯದಲ್ಲಿ ಜಾಪಾನರು ತಮ್ಮ ಸೇನಾ ಸಂಗ್ರಹವನ್ನು ಬಲಗೊಳಿಸುತ್ತಿರುವುದರಿಂದ ರಶ್ಯದ ಮೇಲೆ ಬೀಳಬಹುದೆಂದೂ, ಸದ್ಯಕ್ಕೆ ರಶ್ಯವನ್ನು ಕೆಣಕುವ ಧೈರ್ಯವವರಿಗಿಲ್ಲವೆಂದೂ ವಿವಿಧ ರೀತಿಯ ಊಹಾಪೋಹೆಗಳೆದ್ದಿವೆ.

○ ಭಾವೀ ವೈಸರಾಯಿ ಲೋರ್ಡ್ ವೇವಲರಿಗೆ ಸಪ್ಲೈ ಡಿಪಾರ್ಟ್‌ಮೆಂಟಿನ ಕಾರ್ಯದರ್ಶಿಯಾಗಿದ್ದ ಮಿ. ಜೆಂಕಿನ್. ಐ. ಸಿ. ಯಸ್. ಇವರನ್ನು ಖಾಸಗೀ ಕಾರ್ಯದರ್ಶಿಯಾಗಿ ನೇಮಿಸಬಹುದೆಂದು ಊಹೆ.

○ ಕಳೆದವಾರ ಬೆಜವಾಡ ಗುಂಟಕಲ್ ಲೈನಿನ ರೈಲ್ವೇ ಅಪಘಾತಹೊಂದಿ 22 ಮಂದಿ ಮಡಿದು ಹಲವರು ಜಖಮಿಗೊಳಗಾಗಿದ್ದಾರೆ.

● ಜರ್ಮನಿ ಮತ್ತು ಜಾಪಾನುಗಳೊಳಗೆ ಹಲವು ಯುದ್ಧೋಪಕರಣಗಳ ಬದಲಾವಣೆಗಳು ನಡೆದಿವೆ. ಜರ್ಮನಿಯ ತಜ್ಞರು, ಜಾಪಾನಿಗೆ ಬಂದು ಅಲ್ಲಿಯ ವಿಮಾನ ರಚನೆಗಳಲ್ಲಿ ಸುಧಾರಣೆ ಮಾಡುತ್ತಿದ್ದಾರೆ.

The Vijaya Bank, Limited.

WANTED.

Applications are invited for the posts of Accountants to serve in any of the Offices of the Bank, so as to reach the Head Office, on or before 31-7-1943.

1. The Candidates should have studied **up to S. S. L. C.** or its equivalent. Preference will be given to those with higher qualifications or some practical Banking experience and know Type-writing and Jewel Appraising.

2. The selected candidates must be prepared to undergo a period of probation and furnish the necessary securities as per rules of the Bank.

Further particulars can be had from the Head Office of the Bank, at Mangalore.

Mangalore, 5—7—43

B. Mahabala Shetty,
Ag. Secretary.

ನಡಿಯುವ ಚಿತ್ರ

ಸಿಕಂದರ ಅಪ್ನಾಘರ್

ಚಂದ್ರಮೋಹನ್, ಶಾಂತಾ ಆಪ್ಟೆ, ವಿಠಲ್ ಕರ್ ದೇಸಾಯಿ, ಜಗದೀಶ್, ಗೋಪ್, ಜೀವನ್ ಮೊದಲಾದವರು.

ತಾ. 16—7—43ರಿಂದ ನವಯುಗ ಚಿತ್ರಪಟದವರ

ತುಜಾಬ್ (Ever Yours)

ಸ್ನೇಹಪ್ರಭಾ, ವತ್ಸಲಾ, ಕುಮ್ಟೇಕರ್, ಸಾಳ್ವಿ, ದಾಮುಝ್ಕ, ಮಾಲ್ವಣಕರ್, ಜೋಗ್, ಮೊದಲಾದವರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

In the Court of the District Munsiff of Mangalore.

O. S. No. 163/1943.

Between:-

N. R. Naik & N. P. Naik — Plaintiffs.

and

M. Vaikunta Kini and another — Defendants.

To

The 1st defendant- M. Vaikunta Kini adopted son of Devappa Kini.

The 2nd defendant-- Panduranga Kini adopted son of 1st defendant-

Bothreside at Maroli of Padavu Village, Mangalore Taluq.

Please take notice that the plaintiffs above named have filed the above suit for recovery of the amounts due in respect of dealings carried on by the defendant with the plaintiffs and that the same stands posted to 20-7-1943 for final disposal.

Mangalore, 13-7-1943. — **M. A. Talwar.** Vakil for plaintiffs.

ದಕ್ಷಿಣ ಕನ್ನಡ.

ಮಂಗಳೂರು

ನಗರ ಸಭೆ:—ಯ ಸಾಮಾನ್ಯ ಸಭೆಯೊಂದು ತಾ. ೫ರಂದು ಸಂಜೆ ಉಪಾಧ್ಯಕ್ಷರಾದ ಶ್ರೀ ಸಿ. ಯಲ್. ಲೋಬೋ ಅವರ ಅಧ್ಯಕ್ಷತೆಯಲ್ಲಿ ಜರಗಿತು. ನಗರದ ಮಲವೆಡೆಗಳಲ್ಲಿ ಇರಿಸಲಿಕ್ಕಾಗಿ ಬೆಲೆ ತೆಗೆದುಕೊಳ್ಳದೆ ರೇಡಿಯೋಗಳನ್ನು ಕೊಡುವುದಾಗಿ ಪ್ರಾಂತಿಕ ಸರಕಾರವು ಹೇಳಿದ ಮೇರೆಗೆ ೧೨ ರೇಡಿಯೋ ಸೆಟ್ಟುಗಳಿಗಾಗಿ ಬರೆಯುವುದೆಂದಾಯಿತು. ಹೆಲ್ತಾಫೀಸರರಾದ ಡಾ| ಸಿ ಬಾಲಕೃಷ್ಣ ಶೆಟ್ಟಿ ಅವರ ಸೇವೆಯನ್ನು ಪ್ರಶಂಸಿಸಿಕೊಂಡು ಶ್ರೀ| ಎಚ್ ಭೀಮರಾಯರು ತಂದ ನಿರ್ಣಯವು ಸ್ವೀಕರಿಸಲ್ಪಟ್ಟಿತು.

ಜಿಲ್ಲಾ ಪತ್ರಿಕೋದ್ಯೋಗಿಗಳ ಸಂಘದ ಕಾರ್ಯಕಾರಿ ಸಮಿತಿಯ ಸಭೆಯೊಂದು ಶ್ರೀ ಎಚ್. ಭೀಮರಾಯರ ಅಧ್ಯಕ್ಷತೆಯಲ್ಲಿ ತಾ. ೬ರಂದು ಜರಗಿ ಶ್ರೀ| ಎನ್. ಎಸ್. ಸುಬ್ಬರಾಯರ ನಿಧನದಲ್ಲಿ ಸಂತಾಪವನ್ನು ವ್ಯಕ್ತಪಡಿಸುವ ನಿರ್ಣಯವಾಯಿತು, ಸಭೆ-ಮೆರವಣಿಗೆಗಳ ಮೇಲೆ ಹೊರಿಸಿರುವ ಪ್ರತಿಬಂಧಕಾಜ್ಞೆಯನ್ನು ಹಿಂತೆಗೆಯಬೇಕೆಂದೂ ಅಕ್ಕಿಯ ಸೇಲ್ ನಿಯಂತ್ರಣವನ್ನು ತೊಲಗಿಸಿ, ಅದೇ ಬೆಲೆಗೆ ಅಕ್ಕಿ ಸಿಗುವಂತೆ ಮಾಡಬೇಕೆಂದೂ ಕಲೆಕ್ಟರರನ್ನು ಕೇಳಿ ಕೊಳ್ಳುವ ಎರಡು ಗೊತ್ತುವಳಿಗಳಾದುವು, ಸಂಘಕ್ಕೊಂದು ಆಫೀಸನ್ನು ತೆರೆಯಲು ಅವಶ್ಯವಿರುವ ಯತ್ನವನ್ನು ಮಾಡುವುದಕ್ಕಾಗಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಕಾರ್ಯದರ್ಶಿ ಇವರನ್ನೊಳಗೊಂಡ ಒಂದು ಸಮಿತಿ ರಚಿಸಲ್ಪಟ್ಟಿತು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 329/1939. R. I. A. No. 485/1943

ಲಕ್ಷ್ಮೀನಾರಾಯಣಯ್ಯ ಅರ್ಜಿದಾರ

ರಾಮಚಂದ್ರಯ್ಯ ಕೂಡಾ 7ಜನರು-ಎದುರು,

3ನೇ ಎದು-ಬಾಬಯ್ಯ ಕುಂಞ, ಎಲಮಲೆ ಅಂಮದೆ ಬ್ಯಾರಿಯ ಅಳಿಯ ನಲ್ಲೂರು ತಂಬ್ರಾಜೆ ಗ್ರಾಮ, 4ನೇ ಎದು ಗೋವಿಂದಯ್ಯ, ವಿಷ್ಣಯ್ಯನ ಮಗ, ಬಾಲಿ ಮೈಸೂರಲ್ಲಿ 5ನೆಯ ಎದು-ಅನಂದ ವಿಷ್ಣಯ್ಯನ ಮಗ, ದೇವಚಳ್ಳಗ್ರಾಮ 7ನೇ ಎದು- ವೆಂಕಮ್ಮ, ವಿಷ್ಣಯ್ಯನ ವಿಧವೆ, ದೇವಚಳ್ಳ ಗ್ರಾಮ-ಇವರಿಗೆ ತಿಳಿಸುವುದೇನೆಂದರೆ-ಅರ್ಜಿದಾರನು ತಾನು ಹಾಜರು ಪಡಿಸಿದ ಲಕ್ಕಪತ್ರಗಳನ್ನು ಮಂಜೂರು ಮಾಡಿ ರಿಸೀವರಿಕೆಯಿಂದ ಬಿಡುಗಡೆ ಮಾಡಬೇಕೆಂತಲೂ ಬೋಂಡನ್ನು ಕ್ಯಾನ್ಸಲ್ ಮಾಡಬೇಕೆಂತಲೂ ವಗೈರೆ ನಿವೃತ್ತಿ ಕೇಳಿ ಮಾಡಿದ ಮೇಲ್ಕಂಡ ಅರ್ಜಿಯು ತನ್ನಿಯು ಮೇಲೆ ಕಾಣಿಸಿದ ಕೋರ್ಟಿನಲ್ಲಿ ತಾ. 21-7-1943ಕ್ಕೆ ಇಟ್ಟಿರುವುದರಿಂದ ನೀವು ಆಕ್ಷೇಪಣೆ ಇದ್ದ ಪಕ್ಷದಲ್ಲಿ ಆ ದಿನ ಪೂರ್ವಾಹ್ನ 10 ಘಂಟೆಗೆ ಹಾಜರಾಗಿ ಉದಿಸಿ ಕೊಳ್ಳತಕ್ಕದೆಂದು ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸೋಣಾಗಿಯದೆ

ಪುತ್ತೂರು **N. V. Kolathaya**

9-7-43 Vakil for Petitioner.

ಕ್ಷೌರಿಕರ ಕೂಟ (ಬಾರ್ಬರ್ಸ್ ಎಸೋಸಿಯೇಶನ್) ಇದು ಸಭೆಯೊಂದು ಅಧ್ಯಕ್ಷರಾದ ಶ್ರೀ ಕೆ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿ ವಾರ್ಷಿಕೋತ್ಸವ ಸಮಿತಿ ಮತ್ತು ರಜಾದಿನವನ್ನು ನಿಶ್ಚೈಸುವ ಸಮಿತಿಗಳು ರಚಿಸಲ್ಪಟ್ಟುವು. ಶ್ರೀಯುತರು ಕೃಷ್ಣರಾವ್, ತಬುರಣ್ಣ, ರಾಮಪ್ಪ, ಬಿ ಕೆ. ಮಲ್ಯ ಪರಮೇಶ್ವರ, ತಿಮ್ಮಪ್ಪ, ಮತ್ತು ಪಂಡಿತರಾಮ ಇವರನ್ನೊಳಗೊಂಡ ಒಂದು ಶಿಷ್ಟಮಂಡಲವು ಕಲೆಕ್ಟರರನ್ನು ಕಂಡ, ಅಕ್ಕಿ ಮತ್ತು ಚಿಮಿಣಿ ಎಣ್ಣೆ ಸಿಗುವ ಏರ್ಪಾಡು ಮಾಡಿಸಲು ವಿನಂತಿಸಬೇಕೆಂದಾಯಿತು.

ಜಿಲ್ಲಾ ಮುನ್ಸೀಫರಾಗಿ ಇಲ್ಲಿಯ ವಕೀಲ್ ಜನಾಬ್ ಅಬ್ದುಲ್‌ರಹಿಂ ಅಹಮ್ಮದರು ಆರಿಸಲ್ಪಟ್ಟಿರುವರು

ನಿಧನ:— ಶ್ರೀ| ಸುಜೀರ್ ರಾಮಚಂದ್ರ ನಾಯಕರು [ವೇಲೂರು ಜೈಲಿನಲ್ಲಿ ಸ್ಥಾನಬದ್ಧ ಕೈದಿಯಾಗಿರುವ ಡಾ| ಯು. ಪಿ. ಮಲ್ಯರ ಮಾವಂದಿರು] ತಮ್ಮ ೭೬ನೆಯ ವಯಸ್ಸಿನಲ್ಲಿ ತಾ. ೫ರಂದು ನಿಧನ ಹೊಂದಿದರೆಂದು ತಿಳಿಸಲು ಬಲು ವಿಷಾದಿಸುತ್ತೇವೆ. ಆ ದಿನ ದುಃಖಸೂಚನಾರ್ಥ ಬಂದರದ ವ್ಯಾಪಾರಿಗಳು ಹಂತಾಳವನ್ನಾಚರಿಸಿದರು.

ಸಂತಾಪ ಸೂಚನೆ:— ಏಲ್ ವಿದ್ಯಾರ್ಥಿ ಸಂಘದ ಸ್ಥಾಪಕರಲ್ಲೊಬ್ಬರೂ ಈಗಿನ ಆಡಳಿತ ಮಂಡಳಿಯ ಸದಸ್ಯರೂ ಬೋಳಿಯರ ಸಹಕಾರ ಸಂಘದ ಅಧ್ಯಕ್ಷರೂ ಆಗಿದ್ದ ಶ್ರೀ| ಎ. ಜೋಗಪ್ಪನವರು ತಾ. ೫ರಂದು ರಾತ್ರೆ ತಮ್ಮ ೬೪ ವಯಸ್ಸಿನಲ್ಲಿ ಅಕಸ್ಮಾತ್ ದೈವಾಧೀನರಾದರು ದಿವಂಗತರ ನಿಧನದಲ್ಲಿ ಏಲ್ ವಿದ್ಯಾರ್ಥಿ ಸಂಘದವರು ಸಂತಾಪವನ್ನು ಸೂಚಿಸಿರುವರು.

ಉಡುಪಿ.

ಉಡುಪಿ ಶ್ರೀ ಪೇಜಾವರ ಮಠದವರಿಗೂ ಶ್ರೀ ಕಾಣಿಯೂರು ಮಠದವರಿಗೂ ಈಚೆಗೆ ತಾತ್ವಿಕ ವೈಷಮ್ಯದಿಂದ ಉಂಟಾಗಿದ್ದ ಮತಭೇದಗಳೆಲ್ಲ ದೂರಾಗಿದ್ದುದರ ಶುಭ ಸೂಚನಾರ್ಥವಾಗಿ ಶ್ರೀ ಪೇಜಾವರ ಮಠದ ಶ್ರೀ ಪಾದಂಗಳವರೂ, ಶ್ರೀ ನಾರಾಯಣಾಚಾರ್ಯರೂ ತಾ. 4-7-43ರಲ್ಲು ಶ್ರೀ ಕಾಣಿಯೂರು ಮಠದ ಇಬ್ಬರು ಶ್ರೀಗಳನ್ನು ಸಂಭ್ರಮದಿಂದ ಕರೆಯಿಸಿ ಶ್ರೀ ದೇವರಿಗೂ ಗುರುಗಳಿಗೂ ಸಂಭಾವಿಸಿದರು. ನೆರೆದ ಸಭೆಯಲ್ಲಿ ಶ್ರೀ ಪಂಡಿತ ವೆಂಕಟ್ರಾಮಾಚಾರ್,ಬಿ ಶ್ರೀನಿವಾಸಭಟ್ಟ, ಮೊದಲಾದವರು ಭಾಷಣವಿತ್ತರು. ಅಂದು ಮಧ್ಯಾಹ್ನ ಈ ಉಭಯ ಶ್ರೀಗಳಿಗೂ ಸುಮಾರು ಬ್ರಾಹ್ಮಣ ಸುವಾಸಿನಿಯರಿಗೂ ಶ್ರೀ ಪೇಜಾವರ ಮಠದಲ್ಲಿ ಔತಣವಿತ್ತು.

ಉಪಾಹಾರ:-ದಿವಂಗತ ಡಾ. ಮಾಧವಾಚಾರ್ಯರ ಪುತ್ರಿ, ಅಥವಾ ಮಠದ ಶ್ರೀ ಶ್ರೀ ವಿಭುದಮಾನ್ಯತೀರ್ಥ ಶ್ರೀಪಾದಂಗಳವರ ಸಹೋದರಿ ಶ್ರೀಮತಿ ಶಾರದಾ ದೇವಿಗೆ ಶ್ರೀ ಪೇಜಾವರ ಸುಂದರ ಭಟ್, ಕೋಅಪರೇಟಿವ್ ಇನ್ಸ್‌ಪೆಕ್ಟರ್ ಇವರ ಪುತ್ರ ಶ್ರೀ ಶ್ರೀಪತಿ ಭಟ್, ಬಿ ಎ. ಇವರೊಡನೆ ವಿವಾಹವಾದ ಸಂಬಂಧ ತಾ. 11-7-43ರಲ್ಲಿ ಶ್ರೀ ಆದಮಾರು ಮಠದಲ್ಲಿ ಸಂಭ್ರಮದ ಉಪಾಹಾರ ಕೂಟವೊಂದು ಜರಗಿತು. ಈ ಸಂದರ್ಭದಲ್ಲಿ ಶ್ರೀಗಳಾದ ಬಿ. ಎಲ್. ಆಚಾರ್, ಎ. ಸುಬ್ಬರಾವ್ ಇವರ ಸಂಗೀತ ಕಚೇರಿಯೂ ಇತ್ತು.

ಚೂರು-ಚೂರು

ಜನರಲ್ ಜಿರಾಡರು ವಾಷಿಂಗ್ಟನಿಗೆ ಹೋಗಿ 3 ಲಕ್ಷ ಫ್ರೆಂಚ್ ಸೇನೆಯನ್ನು ತಾವು ಸಶಸ್ತ್ರವಾಗಿ ಮಾಡುತ್ತೇವೆಂಬ ಆಶ್ವಾಸನೆಯನ್ನು ಅಧ್ಯಕ್ಷ ರುಸವೆಲ್ಟರಿಂದ ಪಡೆದು ಬಂದರು.

ಹಿಂದುಸ್ಥಾನದ ಏಳು ಕೋಟಿ ಮುಸಲ್ಮಾನರನ್ನೂ ಸಶಸ್ತ್ರರನ್ನಾಗಿ ಮಾಡುವಂತೆ ಕೇಳಿಕೊಳ್ಳಲು ಮಿ. ಜಿನ್ನರು ಟರ್ಕಿಗೆ ಹೋಗಿಬರುವುದುತ್ತಮ!

O

ಕಾಪು:— ತಾ. 8-3-43ರಲ್ಲು ಕಾಪು ಬೋರ್ಡು ಶಾಲೆಯಲ್ಲಿ ಶ್ರೀ ಕುಂಜೂರು ಮಹಾಲಿಂಗ ಸೆಟ್ಟಿ ಜಿಲ್ಲಾ ಬೋರ್ಡಿನ ವೈಸ್ ಪ್ರಸಿಡೆಂಟ್ ಆಗಿ ಆರಿಸಲ್ಪಟ್ಟ ಗೌರವಾರ್ಥವಾಗಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಉಡುಪಿ ತಾಲೂಕಿನ ತಹಸಿಲ್ದಾರರು ಜಿಲ್ಲಾ (War Propaganda officer)ರು ಚಿತ್ತೈಸಿದ್ದರು. ಸಭಿಕರಲ್ಲಿ ಹಲವರು ಶ್ರೀ ಕುಂಜೂರು ಮಹಾಲಿಂಗ ಸೆಟ್ಟರ ಗುಣಕಥನ ಮಾಡಿ ಅವರಿಗೆ ಶ್ರೇಯಸ್ಸನ್ನು ಬಯಸಿ ಭಾಷಣವಿತ್ತರು.

ಕಾಸರಗೋಡು:-ಬಾಯಾರ ಗ್ರಾಮದ ಕನಿಯಾಲ ಶಾರದಾ ಎಲಿಮೆಂಟರಿ ಶಾಲೆಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ಇದೇ ಜುಲೈ ತಾ. 3ರಲ್ಲಿ ಎಕ್ಸ್ಟ್ರಾ, ಸರ್ಕಲ್ ಇನ್ಸ್ಪೆಕ್ಟರ್. ಶ್ರೀ| ಕೆ. ಸುಬ್ರಾಯ ಭಟ್ಟರು ನೆರವೇರಿಸಲು ಅವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶಾಲಾಭಿವೃದ್ಧಿಯ ಕುರಿತು ಶ್ರೀ| ಕೂನಾಜೆ ಗೋಪಾಲ ಕೃಷ್ಣ ಭಟ್ಟರು ಕೆ. ಪಿ ರಾವ್. ಕೆ. ರಾಮ ಭಟ್ಟ ಮೊದಲಾದವರು ಮಾತಾಡಿದ ಮೇಲೆ ಅಧ್ಯಕ್ಷರ ಸುಂದರ ಭಾಷಣವಾಗಲು ಸಂಗೀತ, ಉಪಹಾರ ಮೊದಲಾದ ಸಮಯೋಚಿತ ಕಾರ್ಯಕ್ರಮದೊಂದಿಗೆ ಸಮಾರಂಭವು ಯಶಸ್ವಿಯಾಗಿ ಕೊನೆಗೊಂಡಿತು.

ಬ್ರಹ್ಮಾವರ:—ಸ್ಥಳೀಯ ಬಂಟರಯಾನೆ ನಾಡವರ ಸಮಾಜದ ನಾಯಕಾವರು ತಾ. 11-7-43ರಲ್ಲಿ ಶ್ರೀ ಹಾದಿ ಮನೆ ಮೋನಪ್ಪ ಶೆಟ್ಟಿ ಬಂದ ಶಾಲೆಯಲ್ಲಿ ಸಭೆಕೂಡಿ ಹಂಗಾರಕಟ್ಟೆ ಬಂದರದ ಪ್ರಸಿದ್ಧ ಸಾಹುಕಾರ್ ಶ್ರೀ ಹಾಂಗಾಳ ವಿಠ್ಠಲ ನಾಯ್ಕರು ಮುಪ್ಪಿನಲ್ಲಿ ತಾ. 8-7-43ರಲ್ಲಿ ಅಕಸ್ಮಾತ್ತಾಗಿ ಹೃದ್ರೋಗದಿಂದ ನಿಧನ ಹೊಂದಿದುದಕ್ಕಾಗಿ ದುಃಖಸೂಚನೆ ಮಾಡಿದರು. ಶ್ರೀಗಳಾದ ಕೊಳ್ಕೆಬೈಲು ಮಹಾಬಲ ಶೆಟ್ರು ಮತ್ತು ಪಂಡಾರಿ ದೊಡ್ಡ ಮನೆ ಹಿರಿಯಣ್ಣ ಶೆಟ್ರು ಮೃತರ ಗುಣ ಕಥನ ಮಾಡಿದರು.

ಕಾರ್ಕಳ:—ಬಡವರಿಗೆ ಸೇರಿಗೆ 0-4-0 ಯಂತೆ ದಿನಕ್ಕೆ ಎರಡು ಸೇರಿಗೆ ಮೀರದೆ ಅಕ್ಕಿ ಕೊಡಲು ಸಮಿತಿಯೊಂದು ರಚನೆಯಾಗಿ ತಕ್ಕ ಕಾರ್ಯಕ್ರಮಗಳು ಕೈ ಕೊಳ್ಳಲ್ಪಟ್ಟಿರುವುದು.

ಫರಂಗಿಪೇಟೆ:—ನಿಯಂತ್ರಿತ ದರದಲ್ಲಿ ತಮಗೆ ಅಕ್ಕಿ ಕೊಡಿಸಬೇಕೆಂದು ಜಿಲ್ಲಾ ಕಲೆಕ್ಟರರಿಗೆ ವಿನಂತಿ ಮಾಡಿಕೊಂಡಿರುವರು.

ರಶ್ಯದೊಡನೆ ಪ್ರತ್ಯೇಕ ಸಂಧಾನ ಮಾಡಿಕೊಂಡರೇನೇ ಅಪಜಯದಿಂದ ಪಾರಾಗಬಹುದೆಂದು ಜರ್ಮನಿಯ ಬಹು ಸಂಖ್ಯಾಕರ ಅಭಿಪ್ರಾಯವಿರುವದರಿಂದ, ಸಂಧಾನ ಸಾಧನೆಗಾಗಿಯೇ ಹಿಟ್ಲರರು ಈಗಿನ ನೂತನ ಧಾಳಿ ಪ್ರಾರಂಭಿಸಿದ್ದಾರೆ—ಲಂಡನಿನಿಂದ ವಾರ್ತೆ.

ಹಾಗಾದರೆ ಹಿಂದುಸ್ಥಾನದೊಡನೆ ಸಂಧಾನ ಮಾಡಿಕೊಂಡರೇನೇ ತಾವು ಅಪಜಯವನ್ನು ತಪ್ಪಿಸಬಹುದೆಂದು ಲಂಡನಿನಲ್ಲಿ ಬಹುಮಂದಿಯ ಅಭಿಪ್ರಾಯವಿರುವದರಿಂದ, ವೇವೆಲ್ ನೇಮಕದಂತಹ ಧಾಳಿಯು ಸಂಧಾನಕ್ಕಾಗಿಯೇ ನಡೆದಿರಲಾರದೆ?

O

'ಕಾರ್ಯಾಚರಣೆಯ ಮುಹೂರ್ತ ಬಂದೊಡನೆ ನಾವು ನಿಮಗೆ ತಿಳಿಸುತ್ತೇವೆ. ಆ ತನಕ ವೈರಿಯ ಅಪ ಪ್ರಚಾರಕ್ಕೆ ಕಿವಿಗೊಡದೆ ಶಾಂತರಾಗಿರಿ'-ಸಿಸಿಲಿ ಆಕ್ರಮಣದ ವೇಳೆ ಫ್ರೆಂಚರಿಗೆ ಜ. ಐಸೆನೋವರರ ಉಪದೇಶ.

ಇದೇನು ಹೊಸ ಮರ್ಜಿ? ಕಾರ್ಯಾಚರಣೆಗೆ ಒಂದು ವರ್ಷಕ್ಕೆ ಮೊದಲೇ ತಿಳಿಸುತ್ತಾ ಬರುವ ಕ್ರಮ ಈವರೆಗಿತ್ತಲ್ಲ?

O

ಜೂನಿನಲ್ಲಿ ಮಿತ್ರ ರಾಷ್ಟ್ರೀಯರಿಗಾದ ಹಡಗ ನಷ್ಟವು ಈ ಯುದ್ಧಾವಧಿಯಲ್ಲೇ ಅತೀ ಕಡಿಮೆ'-ಲಂಡನಿನ ಪ್ರಕಟಣೆ

ಹಡಗನಷ್ಟ ಕಡಿಮೆಯಾದುದು ಸಂತೋಷ-ಆದರೆ ದಯವಿಟ್ಟು ಹಡಗ ಸಂಚಾರವನ್ನು ಕಡಿಮೆ ಮಾಡದಿರಲಿ!

O

'ಒಂದೇ ಒಂದು ಹಡಗವನ್ನು ಕಳಕೊಳ್ಳದೆ ಮಿತ್ರ ಸೇನೆಗಳು ಸಿಸಿಲಿಯಲ್ಲಿ ಕಾಲೂರುವ ಕೆಲಸವನ್ನು ಪೂರ್ಣಗೊಳಿಸಿದುವು'-ಉತ್ತರಾಫ್ರಿಕದಿಂದ ಯುದ್ಧ ಪ್ರಕಟಣೆ.

ಮಿತ್ರ ರಾಷ್ಟ್ರೀಯರ ಹಡಗಗಳು ಹನುಮಂತನಂತಾದುವಲ್ಲಾ ಚಿರಂಜೀವಿಗಳು!

O

'ಅಮೇರಿಕಾ ಇಂಗ್ಲಾಂಡುಗಳ ಸೇನೆಗಳು ಫೇಸಿಸಮಿನ ವಿನಾಶಕ್ಕೆ ಮಾತ್ರ ಹೋರಾಡುತ್ತಿವೆ. ಪೋಪ್ ಗುರುಗಳ ಎಲ್ಲಾ ಅಧಿಕಾರಿಗಳನ್ನೂ ನಾವು ಮಾನ್ಯ ಮಾಡುತ್ತೇವೆ'-ಪೋಪರಿಗೆ ಅಧ್ಯಕ್ಷ ರುಸವೆಲ್ಟರ ಆಶ್ವಾಸನೆ.

ಯಾವ ದೇಶವನ್ನಾಕ್ರಮಿಸಿಕೊಂಡರೂ ಮಿತ್ರರು ದೇವಲೋಕವನ್ನಾಕ್ರಮಿಸಿ ಕೊಳ್ಳುವದಿಲ್ಲವೆಂಬುದು ಇದರಿಂದ ಸ್ಪಷ್ಟ

—ವಿನೋದಿ.

BHUVANENDRA PRODUCTS Ltd.,

Head Office and Factory: **Katapadi**, S. Kanara

Depots: Mahratha Galli, Hubli.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ವಿಜಯಾ ಸ್ಟೋರ್ಸ್

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

ಮುಖ್ಯ ಕಾರ್ಯಾಲಯ:—ಕೋರ್ಟು ರಸ್ತೆ, ಉಡುಪಿ. ದಕ್ಷಿಣ ಕನ್ನಡ.

ಶಾಖೆಗಳು:— ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಕಿನ್ನಿಗೋಳಿ.

ಮುಸುಂ ರೇವಣಾಶಿಗಳು ತಾ. 31–7–1943 ಅಥವಾ ಈ ತಾರೀಕಿನ ಮೊದಲು ವ್ಯಾದೆಯಾಗುವುನಾದರೆ ಅಂಥಾ ವ್ಯಾದೆಯ ವರೆಗೆ ಸಾಲಿಯಾನ ಶೇಕಡಾ 3ರ ಸಲೆ ಬಡ್ಡಿಯಲ್ಲಿ 3, 4, 5 ಅಥವಾ 6ತಿಂಗಳ ವ್ಯಾದೆಯಿಂದ ಪ್ರತಿಯೊಂದು ಶಾಖೆಯಲ್ಲಿ ಅಂಗೀಕರಿಸಲ್ಪಡುತ್ತವೆ.

ಬೇಂಕಿನ ಪ್ರತಿಯೊಂದು ವಿಧದ ವಹಿವಾಟುಗಳು ನಡೆಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ಮೊಖಾ ಅಥವಾ ಪತ್ರದ್ವಾರಾ ಸಮೀಪದ ಶಾಖೆಯಲ್ಲಿ ದಯವಿಟ್ಟು ವಿಚಾರಿಸಿರಿ

ಅಮೃತಾಂಜನ ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ ದಲ್ಲಿ ವೇದನೆಗಳಿಗೂ ಎದೆನೋವು, ಘಾಯಗಳು ಬಾತುಕೊಳ್ಳುವುದು, ಚೇಳು ವಿಷದಿಂದುಂಟಾದ ಬೇನೆ, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ,

REGD.

ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತ.

P. M. Kunhi Raman, Manager, Parassini Madappura Temple, P. O. Parassinikkatavu (Via) Pappinisserri.

ಇದರಿಂದ ಸಮಸ್ತ ಜನರಿಗೆ ತಿಳಿಯ ಪಡಿಸುವುದೇನೆಂದರೆ–

ಪರಸಿನಿ ಕಡವು ದೇವಸ್ಥಾನದಿಂದ ಈ ಮೂಲಕ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುನ್ನಿರಾಮನ್, ಮೇನೇಜರ್.

ಶ್ರೀ. ತಾರಾನಾಥ ಭೇಷಜಾಲಯ

ಶಾಸ್ತ್ರೀಯ ಮತ್ತು ಸಿದ್ಧೌಷಧಿಗಳ ಕಾರಾಗಾರ, ಚಿಕ್ಕಮಗಳೂರು.

ನಿರ್ದೇಶಕ:- ಡಾ. M. L. Shetty, ಪ್ರೇಮವಿದ್ಯಾಪೀಠದ ಗೌ. ಪ್ರಾಧ್ಯಾಪಕರು.

ಎಲ್ಲಾ ತರದ ಭಸ್ಮ, ಖಲ್ವೀ ರಸಾಯನ, ಆಸವಾರಿಷ್ಟ, ಘೃತ, ತೈಲಗಳಿಗಾಗಿ **ಕೂಡಲೇ ಬರೆಯಿರಿ.**

ಒಳ್ಳಗಟ್ಟಿರೆ ರೋಗಿಗಳಲ್ಲಿ ಫಲಕಾರಿಯಾದ ಔಷಧೀ ಯೋಗಗಳು. ಗುರುಪರಂಪರೆಯ ಅನುಭವದಿಂದ ಬಂದ ನಿರ್ದುಷ್ಟ ಔಷಧೀಕರಣ ವಿಧಾನ.

ಡಾ| P. M. Alva,
ಮೇನೇಜರ್.

ಬಾಲ ಸಾಹಿತ್ಯ ಮಂಡಲ, ಲಿಮಿಟೆಡ್.

ದಿವಂಗತ ಶ್ರೀ| ಉಳ್ಳಾಲ ಮಂಗೇಶರಾವ್ ಬಿ. ಎ., ಎಲ್. ಟಿ. ಅವರಿಂದ ರಚಿತವಾದ ನಮ್ಮ "ಹೊಸಗನ್ನಡದ ೧ರಿಂದ ೫ರ ವರೆಗಿನ ರೀಡರು"ಗಳು ಇದೇ ಜೂನಿನ ಪ್ರಥಮ ವಾರದಲ್ಲೇ ಸಿದ್ಧವಾಗುವವು. ಅವುಗಳಿಗೆ ಬೆಲೆ ಮತ್ತು ಅವುಗಳ ಮೇಲಿನ ಕಮಿಶನಿನ ದರಗಳು ಕಾಲಕ್ಕೆ ತಕ್ಕಂತೆ ಹೊಂದಿಸಲ್ಪಟ್ಟು ಅಗಲೇ ಪ್ರಕಟಗೊಳ್ಳುವವು.

Bala Sahitya Mandal, Ltd.

— ಮಕ್ಕಳನ್ನು ಹಡೆಯುವದು ಸಾಕು.—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. ೨—0—0 ಪೋಸ್ಟ ಚಾರ್ಜ ೧೨ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ:—ಕುಂಬರಮಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕವಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ **1929**ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager — **ಯಂ. ಆರ್. ಪೂಂಜ,** ಪ್ರೆಸಿಡೆಂಟ್ ಮತ್ತು ಮೆನೇಜರ್.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ಸಿಶೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೪ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದಕ**

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸದೊರೆಯ ಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ. : : : : ಮಂಗಳೂರು:



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ **ರಥಬೀದಿಯ**

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸ್ಟೆನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No.M. 3618.

Ested. 1921 ಸ್ಥಾಪಿತ.

ಹೊಸಕೆರೆ ಚಿದಂಬರಯ್ಯನವ
ರಿಂದ ರಚಿತವಾದ ಗೀತೆಯ
ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು 440 ಪುಟಗಳು.

ಬೆಲೆ (ಸುಂದರ ಪ್ರತಿ) ೦—೮—೦
(ಕೆಲಿಕೋ ಬೈಂಡ್) ೦-೧೨—೦
(ಲೆದರ್ ಬೈಂಡ್) ೧—೪—೦

ಪ್ರತಿಗಳು ಪ್ರಸಿದ್ಧ ವ್ಯಾಪಾರಿಗಳಲ್ಲಿ ಸಿಗುವುದು.
0—10—0 ಸ್ಟಾಂಪು ಕಳಿಸಿದ್ದಲ್ಲಿ ಒಂದು
ಪ್ರತಿಯನ್ನು ಬುಕ್‌ಪೋಸ್ಟು
ಮಾಡಲಾಗುತ್ತೆ.

**ನವಭಾರತ ಪುಸ್ತಕ ಭಂಡಾರ,
ಉಡುಪಿ.**

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೩
ಸಂಚಿಕೆ ೪೪

FOUNDER
Sri. A. B. Shetty, M. L. A.

Vol. 23
No. 44

NAVAYUGA— Kannada Weekly —UDIPI, S. I.

ಉಡುಪಿ • **22—7—1943** • ಮಂಗಳೂರು.

ಶ್ರೀಮತಿ ಶಿವರಾಣಿ ದೇವಿಯವರಿಂದ
(ದಿವಂಗತ ಪ್ರೇಮಚಂದರ ಪತ್ನಿ)
ರಚಿತವಾದ ಹಿಂದೀ ಕತೆಗಳ ಕನ್ನಡ
ಭಾಷಾಂತರ

ನಾರೀ ಹೃದಯ

ನಾರೀ ಹೃದಯದ ವಾಸ್ತವಿಕ ಚಿತ್ರ
ವನ್ನು ಚಿತ್ರಿಸುವ ಉತ್ತಮ ಕತೆಗಳ
ಸಂಗ್ರಹ.

ಬೆಲೆ 0—14—0
ಟ ಖ. 0—2—0 ಪ್ರತ್ಯೇಕ.

ಒಂದು ರೂಪಾಯಿ ಸ್ಟಾಂಪು ಕಳಿಸಿದರೆ ಒಂದು
ಪ್ರತಿಯನ್ನು ಕಳಿಸಲಾಗುವುದು.

**ಕಿರಿಯರ ಪ್ರಪಂಚ, ಉಡುಪಿ.
ಅಥವಾ ನವಭಾರತ ಬುಕ್
ಡಿಪ್ಪೊ, ಉಡುಪಿ.**

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

The Canara Mutual Assurance Co., Ltd.,

UDIPI. (S. India).

ನೀವೀ ವರೆಗೆ ವಿಮೆಯನ್ನೇ ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಈಗಲೇ ವಿಮೆ ಇಳಿಸಿರಿ

ಏಕೆಂದರೆ:—

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ, ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೆಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ.

ಕೊಪ್ಪಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಮುಖ ಏಜಂಟರು.

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ, ದ. ಕನ್ನಡ.

ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ —

ಮಂಗಳೂರು, ಕಲ್ಲಿಕೋಟೆ, ಸೇಲಂ, ತಿರುವಾಂಕೂರು, ಬೆಂಗಳೂರು ನಗರ ಮತ್ತು ಬೊಂಬಾಯಿ.

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೆಸ್

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

WANTED GRADUATES.

APPLY FOR TERMS

CANARA BANK LIMITED.

ESTD: 1906.

ಅಖಿಲ ಕರ್ನಾಟಕದ ಹೊಸ ಮಾದರಿಯ ವಾರ ಪತ್ರಿಕೆ:

ಅಂತರಂಗ

ಶ್ರೀ. ಎ. ಎಸ್. ಪಿ. ಅಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್‌ಲಾ., ಎಫ್. ಆರ್. ಎಸ್. ಎಲ್. ಇವರ 'Funny Tales of Ind' ಎಂಬ ಇಂಗ್ಲಿಷ್ ಕಥಾವಳಿಯ ಅನುವಾದವು ಧಾರಾವಾಹಿಯಾಗಿ ಪ್ರಕಟವಾಗುತ್ತಿದೆ.

ಇದೀಗ ೧೦ನೇ ಸಂಪುಟವು ಆರಂಭವಾಗಿದೆ.

ವಾರ್ಷಿಕ ಚಂದಾ ರೂ.	4	8	0
೬ ತಿಂಗಳಿಗೆ ರೂ.	2	4	0
ಬಿಡಿ ಸಂಚಿಕೆಗೆ	0	1	6

Manager **'Antaranga' Weekly, Udipi.**

ಗಾಂಧಿಜೀ ಏನಂತೆ?

ವೈಸರಾಯರಿಗೆ ಪತ್ರಬರೆದು ಗಾಂಧಿಜೀ ಅಗೋಸ್ತು ನಿರ್ಧಾರವನ್ನು ಹಿಂದೆಗೆದುದು ನಿಜವಾದರೆ ಅವರು ಶರಣು ಬಂದುದಲ್ಲ; ಸಾಧನೆ ಗಳಿಸುದು. ಮುಂದಿನ ರಣರಂಗ ದೇಶವಲ್ಲ; ಗಾಂಧಿಯವರ ದೇಹ. ಅವರು ಅಂದೋಲವನ್ನು ನಿಲ್ಲಿಸಿ, ಅನಶನ ಕೈಕೊಳ್ಳಲಿದ್ದಾರೆ; ದೇಶದ ದಾವಾನಲಕ್ಕೆ ನೀರು ಹೊಯ್ದು ಸ್ವತಃ ಜ್ವಾಲೆ ಹಬ್ಬಲಿದ್ದಾರೆ ಎಂಬುದನ್ನು ತಿಳಿದಿರಬೇಕು.

ಅಗೋಸ್ತು ೯. ಭಾರತೀಯ ಚರಿತ್ರೆಯಲ್ಲಿ ದಪ್ಪಕ್ಷರಗಳಿಂದ ಬರೆಯಲ್ಪಡಬೇಕಾದ ದಿನ; ಹಿಂದೀ ರಾಜಕೀಯ ವಾತಾವರಣದ ಕುರಿತು ಮಾತಾಡುವವರು ಉಚ್ಚರಿಸದಿರಲು ಅಸಾಧ್ಯವಾದ, ಅಮೆರಿ ಲಿನ್‌ಲಿತ್‌ಗೋರವರು ಪುತ್ರಶೋಕದಂತೆ ಜ್ಞಾಪಿಸಿಕೊಳ್ಳುತ್ತಿರುವ ದಿನ-ಸಮೀಪಿಸುತ್ತಿದೆ. ಕಳೆದ ವರುಷ ಈ ಹೊತ್ತಿನಲ್ಲಿ ಅಖಿಲ ಭಾರತವು ಆ ದಿನವನ್ನು ಅತುರೋದ್ವೇಗದಿಂದ ನಿರೀಕ್ಷಿಸುತ್ತಿತ್ತು-ಮಿತ್ರ ಸೇನ ದ್ವಿತೀಯ ರಂಗಾರಂಭದ ದಿನವನ್ನು ನೋಡುತ್ತಿರುವ ದೃಷ್ಟಿಯಲ್ಲಿ ಅಗೋಸ್ತು ೮ನ್ನು ನೋಡುತ್ತಿದ್ದಿತು. ಬೊಂಬಾಯಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸೇರಲಿದೆ. ಗಾಂಧಿಜೀಯವರ ನಾಯಕತ್ವದಲ್ಲಿ ಕಾಂಗ್ರೆಸು ಉಗ್ರ ಕಾರ್ಯಕ್ರಮ ಕೈಕೊಳ್ಳಲಿದೆ; ಅದೇನು, ಹೇಗೆ, ಎಂಬ ಆತುರದಿಂದ ದೇಶದ ಅಂತರಂಗವೇ ಅಲುಗಾಡುತ್ತಿತ್ತು. ಇಂದು ಪುನಃ ಅಗೋಸ್ತು ೮ ಬರುತ್ತಿದೆ. 1942ನೇ ಅಗೋಸ್ತು ೮ ಮತ್ತು 1943ನೇ ಅಗೋಸ್ತು ೮—ಇವೆರಡರ ನಡುವಿನ ಅವಧಿಯಲ್ಲಿ ಹಿಂದೂ ದೇಶವನುಭವಿಸಿದ ಸಂಕಷ್ಟಗಳೆಷ್ಟು! ಮಾಡಿದ ತ್ಯಾಗವೇನು! ಕಳೆದೆರಡು ಶತಮಾನಗಳಿಂದ ಭಾರತವೊಂದು ಭಾಗ್ಯಶಾಲಿ ರಾಷ್ಟ್ರವಾಗಿರಲಿಲ್ಲ; ಅದರೂ ಗತಿಸಿದ ಒಂದು ವರುಷವನ್ನು ಒಂದು ತಕ್ಕಡಿಗೆ, ಹಿಂದಿನ ಶತಮಾನವನ್ನೇ ಇನ್ನೊಂದು ತಕ್ಕಡಿಗಿಟ್ಟು ತೂಗಬಹುದೆಂಬಷ್ಟು ಕಳೆದ ವರ್ಷ ಹಿಂದುಸ್ಥಾನದ ಪಾಲಿಗೆ ಭೀಕರವಾಗಿತ್ತು. ರೋಮಾಂಚಕಾರೀ ಘಟನೆಗಳು, ರಕ್ತ ಕುದಿಸುವ ಸನ್ನಿವೇಶಗಳು, ಎದೆ ಕರಗಿಸುವ ದುರಂತಗಳು, ಇನ್ನೇನೇನನ್ನೋ ದೇಶವನುಭವಿಸಿದ್ದಿತು-ಸಾರ್ವತ್ರಿಕ ಗೊಂದಲ ಮತ್ತು ಸರಕಾರದ ದಬ್ಬಾಳಿಕೆಯಿಂದ!

ಈ ಬಾರಿಯೂ

ದೇಶವು ಮಹಾತ್ಮರ ಕಡೆಗೇನೇ ನೋಡುವಂತಾಗಿದೆ. 'ಅಗೋಸ್ತು ೮-ಗಾಂಧೀ ತಂಟೆಯ ದಿನ' ಎಂದು ಬ್ರಿಟಿಷ್ ತಾರೀಕುಪಟ್ಟಿಗಳಲ್ಲಿ ಬೀಳಬಹುದೆಂಬಷ್ಟು ಆ ದಿನಕ್ಕೂ ಗಾಂಧಿಜೀಗೂ ಗಂಟು ಬಿದ್ದಿದೆ. ಈಗ ಡೆಲ್ಲಿಯಲ್ಲೇನೊ ಒಂದು ವಿಧದ ಒಳಮಂಥನವೀಗ ನಡೆಯುತ್ತಿರುವಂತಿದೆ. ವೈಸರಾಯರು ತನ್ನ ಕಾರ್ಯಕಾರೀ ಸಮಿತಿಯನ್ನು ಸೇರಿಸಿ ದೀರ್ಘಾಲೋಚನೆಗೆ ತೊಡಗಿದ್ದಾರಂತೆ-- ಸದಸ್ಯರಾರೂ ಡೆಲ್ಲಿ ಬಿಟ್ಟು ಹೋಗಬಾರದೆಂಬ ಸೂಚನೆಯಿದೆಯಂತೆ.ತನ್ನ ಸದಸ್ಯರನ್ನು ಹತ್ತಿರ ಕುಳ್ಳಿರಿಸಿಕೊಂಡು. ಲೋರ್ಡ್ ಲಿನ್‌ಲಿತ್ ಗೋರವರು ಲಂಡನಿನ ಇಂಡಿಯಾ ಆಫೀಸಿನೊಡನೆ ಗೂಢಾಲೋಚನೆ ನಡೆಸುತ್ತಿದ್ದಾರಂತೆ. ಇದಕ್ಕೆಲ್ಲಾ ಕಾರಣ ಗಾಂಧಿಜೀಯ ಪತ್ರ. ಅವರು ವೈಸರಾಯರಿಗೊಂದು ಪತ್ರ ಬರೆದಿದ್ದಾರೆ. ಕಾಂಗ್ರೆಸಿನ ಅಗೋಸ್ತು ನಿರ್ಣಯವನ್ನು ನಿಶ್ಶರ್ತವಾಗಿ ಹಿಂದೆಗೆಯುತ್ತೇನೆಂದು ಅದರಲ್ಲಿ ಸೂಚಿಸಿದ್ದಾರೆ. ತನಗೆ ಅಗೋಸ್ತು ೮ರೊಳಗೆ ಉತ್ತರ ದಯಪಾಲಿಸಬೇಕೆಂದು ಕೇಳಿಕೊಂಡಿದ್ದಾರೆ. ಆದರೆ ಆ ಪತ್ರದಲ್ಲಿರುವ ಸಂಗತಿಗಳು ಅತಿ ಪ್ರಾಮುಖ್ಯವಾದುವು. ಲೋರ್ಡ್ ಲಿನ್ ಲಿತ್‌ಗೋರವರು ತನ್ನಿಚ್ಛೆಯ ಉತ್ತರ ಕೊಡುವಂತಿಲ್ಲ;ಲಂಡನಿನ ಅಭಿಪ್ರಾಯ ತಿಳಿದುಕೊಳ್ಳಬೇಕಾಗಿದೆ; ಆದ್ದರಿಂದ ತಡವಾಗಬಹುದು; ಅಂತೂ ಸದ್ಯದಲ್ಲೇ ಈ ಕುರಿತು ಸರಕಾರೀ ಪ್ರಕಟಣೆ ಹೊರಡುವ ಸಂಭವವಿದೆ; ರಾಜಕೀಯ ಕೈದಿಗಳೆಲ್ಲರ ಬಿಡುಗಡೆಯಾಗಲಿದೆ-ಎಂದೆಲ್ಲಾ ಸುದ್ದಿಗಳೆದ್ದಿವೆ. ಅಂತೂ ಅಗೋಸ್ತು ಪ್ರಾರಂಭದಲ್ಲಿ ಗಾಂಧಿಜೀ ದೇಹದಲ್ಲಿ ವಿದ್ಯುತ್ ಸಂಚಾರವಾಗುವ ಪದ್ಧತಿಯುಂಟೇನೋ ಎಂಬಂತೆ ಈ ಬಾರಿಯೂ ಆತುರಜನಕ ಸುದ್ದಿಗಳಿಗೆ ಬರಗಾಲವಿಲ್ಲ.

ನಿಜವಿರಬಹುದೆ?

'ಮಹಾತ್ಮರು ಅಗೋಸ್ತು ನಿರ್ಧಾರವನ್ನು ಹಿಂದೆಗೆದರು' ಎಂಬ ಸುದ್ದಿಯು ಸತ್ಯವೆನ್ನಿಸುತ್ತದಾದರೆ ಹಲವರು ವೇದನೆಗೊಳಗಾಗಬಹುದು. ಈ ಉಪಸಂಹಾರವನ್ನು ನೆನಸಿಕೊಳ್ಳುವಾಗ ಜಿನ್ನರನಗು, ಬ್ರಿಟಿಷರ ಅಪ್ರತ್ಯಕ್ಷನಿಂದೆ, ದೇಶಾಭಿಮಾನಿಗಳ ಸಂತಾಪ-ಇವಿಷ್ಟರ ಚಿತ್ರ ಕಣ್ಣ ಮುಂದೆ ಬರುತ್ತದೆ.ಗಾಂಧಿಯವರೆಂದಿಗೂ ಹಾಗೆ ಮಾಡಲಾರರೆಂಬ ವಿಶ್ವಾಸದಿಂದಿರುವವರು ಬಹುಜನ. ಕಾಂಗ್ರೆಸ್ ನಿರ್ಧಾರವನ್ನು ಬದಲಾಯಿಸುವ ಅಧಿಕಾರ ಗಾಂಧಿಯವರಿಗೇನೋ ಇದೆ; ಆದರೆ ಕಾಂಗ್ರೆಸ್ ಪ್ರತಿಷ್ಠೆಯು ಅವರ ಹಸ್ತಸ್ಪರ್ಶದಿಂದ ನಾಶವಾಗಲಾರದೆಂಬ ನಂಬುಗೆಯಿಂದಾಗಿಯೇ ಆ ಅಧಿಕಾರವವರಿಗೆ ಕೊಡಲ್ಪಟ್ಟಿದೆ. ಹೀಗಿರುವಾಗ ಹಲವರು ಪ್ರಾಣ, ರಕ್ತ ಕೊಟ್ಟು ಮುಂದೊತ್ತಲು ನೋಡಿದ ಆ ನಿರ್ಧಾರವನ್ನು ಗಾಂಧಿಜೀ ಹಿಂದೆಗೆದುಕೊಳ್ಳುವುದು ಅಕ್ಷಮ್ಯ ವಿಶ್ವಾಸ ದ್ರೋಹ ಎಂದೊಮ್ಮೆ ಯಾರಿಗಾದರೂ ಹೊಳೆಯಬಹುದು. ಆದರೆ ಸದ್ಯಸ್ಥಿತಿಯನ್ನು ಗಾಢವಾಗಿಯೋಚಿಸಬೇಕು; ಗಾಂಧಿಜೀಯವರ ಮನೋವೃತ್ತಿಯ ಯಥಾರ್ಥ ಪರಿಚಯವಿರಬೇಕು; ಆಕಾಶಗಾಮಿಗಳಾಗದೆ ಈ ರೀತಿ ಒಳನುಗ್ಗಿ ನೋಡುವವರಿಗೆ ಗಾಂಧಿಯವರು ಅಗೋಸ್ತು ನಿರ್ಧಾರವನ್ನು ಹಿಂದೆಗೆಯುವದು ಅಸಂಭವನೀಯವೂ ಅಲ್ಲ; ಅನ್ಯಾಯವೂ ಅಲ್ಲ, ಎಂದು ಹೊಳೆಯದಿರದು. ಸತ್ಯವಾದರೆ ಬ್ರಿಟಿಷರು ಡಂಕರ್ಕ್ ಪ್ರಕರಣದ ಕುರಿತು ಪೌರುಷವಾಡುವಷ್ಟೇ ಕಾಂಗ್ರೆಸಿಗರು ಈ ಬಾರಿಯ ಚಳವಳದ ಕುರಿತು ಆಡಲು ಸಾಧ್ಯ. ಇದು ನ್ಯಾಯಾನ್ಯಾಯದ ಮಾತಲ್ಲ-ಲಾಭನಷ್ಟದ ಮಾತು. ಅರ್ಥಾತ್ ಕಾಂಗ್ರೆಸ್ ಚಳವಳದ ಧ್ಯೇಯ ಸಿದ್ಧಿಸಿಲ್ಲ. ಸದ್ಯದಲ್ಲೇ ಸಿದ್ಧಿಸಬಹುದುಎಂದಾಶಿಸಲಾಗುವಷ್ಟು ಅದೀಗ ಜೀವಂತವಿಲ್ಲ. ಅದು ದಾವಾನಲವಾಗಿ ಎದ್ದಿತ್ತು;ಈಗ ಬೂದಿಗೆಂಡವಾಗಿ ನಿಂತಿದೆ ಎಂಬುದನ್ನೊಪ್ಪಿಕೊಳ್ಳದೆ ನಿರ್ವಾಹವಿಲ್ಲ. ಇಂತಹ ಹೋರಾಟದಿಂದ ಬ್ರಿಟಿಷರ ಅಪಾಯ ಕಡಿಮೆಯಾಗಿಲ್ಲ. ಖಡ್ಗ ಹಿರಿದು ಮುಂದೆ ಬಂದವನಿಗಿಂತ ಕತ್ತಿ ಹಿಡಿದು ಅಡಗಿ ಕುಳಿತವನು ಅಪಾಯಕಾರಿಯೆಂಬುದರಿಂದ ಸರಕಾರದ ಕಣ್ಣೆದಿರಿನ ಸಮಸ್ಯೆ ಇನ್ನಷ್ಟು ಭಯೋವಹವಾಗಿದೆಯೆಂಬುದು ನಿಜ. ಆದರೆ ಈ ಪರಿಸ್ಥಿತಿಯನ್ನು ಕಾಂಗ್ರೆಸು ಸ್ವೇಚ್ಛೆಯಿಂದ ಸಾಧಿಸಿದುದಲ್ಲ. ಸರಕಾರದ ಸಾಧನೆಯಿಂದಾಗಿಯೇ ಹೀಗಾಯಿತು. ಅರ್ಥಾತ್ ಸರಕಾರಕ್ಕೆ ಸುಖಕರವಲ್ಲದ—ಕಾಂಗ್ರೆಸು, ಅಥವಾ ಗಾಂಧಿಜೀ ಬಯಸದ ಮಾತ್ರವಲ್ಲ,ಅವರಿಗೆ ಬೇಡವಾದ ಪರಿಸ್ಥಿತಿ ಈಗ ನಿರ್ಮಾಣಗೊಂಡಿದೆ. ಅಂದಮೇಲೆ ಎರಡು ಪಕ್ಷಗಳೂ ಪುಸ್ಕೃತ ಸೋತಿವೆ. ಸರಕಾರಕ್ಕೆ ಇಂತಹ ಸೋಲೇ ಹಿತಕರವೆನ್ನಿಸಬಹುದು. ಬ್ರಿಟಿಷ್ ಸಾಮ್ರಾಜ್ಯ ಸ್ವಾರ್ಥವನ್ನು ಬಿಟ್ಟುಕೊಡದೆ ಇಂತಹ ಸೋಲಿನಿಂದ ಪಾರಾಗುವ ಬೇರೆ ಉಪಾಯವದಕ್ಕಿಲ್ಲ; ಮಾನ ಉಳಿಸಲಿಕ್ಕಾಗಿ ಮನೆ ಕಳಕೊಳ್ಳುವವರು ಬ್ರಿಟಿಷರಲ್ಲ. ಆದ್ದರಿಂದ ಅವರು ಇಂದಿನ ಪರಿಸ್ಥಿತಿಯನ್ನು ಸಹಿಸಿಕೊಂಡಾರು. ಆದರೆ ಗಾಂಧಿಜೀ ಅವರು ತಮ್ಮ ಸೋಲನ್ನು ಸಹಿಸಿಕೊಳ್ಳುವವರಲ್ಲ. ಅದನ್ನು ತಿದ್ದುವ ಅನುಕೂಲತೆ ಮತ್ತು ಆವಶ್ಯಕತೆ, ಎರಡೂ ಇರುವ ಮಹಾತ್ಮರು ಈ ಸಂದರ್ಭದಲ್ಲಿ ಅದಕ್ಕಣಿಯಾದರೆ ಆಶ್ಚರ್ಯವಿಲ್ಲ.

ಮುಂದೇನು?

ಆದ್ದರಿಂದ ನಮ್ಮ ಊಹಾ ಶಕ್ತಿಯನ್ನು ಈ ಹಾದಿಯಲ್ಲಿ ಕೊಂಡುಹೋಗಬಹುದು; ಹಿಂಸೆ ನಡೆಯಿತೆಂದು 1920ರ ಅಸಹಕಾರವನ್ನು ಹಿಂದೆಗೆದ ಗಾಂಧಿಜೀ-ಒಂದು ಶಪಥಕ್ಕಾಗಿ ಸಬರ್ಮತಿ ಆಶ್ರಮವನ್ನು ಸರಕಾರಕ್ಕೊಪ್ಪಿಸಿದ ಗಾಂಧಿಜೀ-ರಾಜಕೋಟೆಯ ಚಳವಳವನ್ನು ನಿಲ್ಲಿಸಿ ತಾನೇ ಆಮರಣಾಂತ ಉಪವಾಸ ಕುಳಿತ ಗಾಂಧಿಜೀ ಅವರಿಗೊಗ್ಗದ ಬಹು ಭಾಗವು ಇಂದಿನ ಚಳವಳದಲ್ಲಿ ಸೇರಿದುದರಿಂದಾಗಿ ಈ ಬಾರಿಯೂ ಕಾಂಗ್ರೆಸ್ ನಿರ್ಧಾರವನ್ನು ಬಿಟ್ಟುಕೊಡಬಹುದು. ಈಗ ಬಂಧಿಯಾಗಿರುವ ಅವರಿಗೆ ಅನ್ಯೋಪಾಯವಿಲ್ಲದ ದೆಸೆಯಿಂದ ಅವರದನ್ನು ವೈಸರಾಯರಿಗೆ, ಅಥವಾ ಬೇರೊಂದು ಸುದ್ದಿಯಿರುವಂತೆ ವೈಸರಾಯರಿಗೆ ಬರೆಯದೆ ಮಿ. ಅಮೆರಿಯವರಿಗೇನೇ ಬರೆದು ತಿಳಿಸಿರಬಹುದು.ಆದರೆ ಈ ಸೂಚನೆಯಿಂದೆದ್ದಿರುವ ಸಾಮಾನ್ಯ ಅಭಿಪ್ರಾಯ ಬೇರೆ-ಗಾಂಧಿಯವರ ನಿಜ ಮತ ಬೇರೆಯೇ ಆಗಿರಬೇಕೆಂಬುದನ್ನು ಮರೆಯಬಾರದು. 'ಅಗೋಸ್ತು ನಿರ್ಧಾರವನ್ನು ಹಿಂದೆಗೆಯಲಿ' ಎಂಬ ಬ್ರಿಟಿಷ್ ಅಧಿಕಾರಿಗಳ ಆಜ್ಞೆಗೆ 'ಅಪ್ಪಣೆಯಂತೆ ವರ್ತಿಸಲಾಗಿದೆ' ಎಂಬ ವಿಧೇಯತ್ವವಿದಲ್ಲ. ಕೈದಿಯಾದವನು ಪೋಲೀಸರ ಮೂಲಕವೇ ತನ್ನ ಮನೆಗೆ ಸೂಚನೆ ಕಳುಹಬೇಕಷ್ಟೆ? ಅಂತೆಯೇ ಕೈದಿ ಗಾಂಧಿಯು ವೈಸರಾಯರ ಮೂಲಕ ತನ್ನ ದೇಶೀಯರಿಗೆ ಮಾಡಿಕೊಂಡ ವಿನಂತಿಯಿದಾಗಿರಬೇಕು. ರಾಜಕೋಟೆಯ ಪ್ರಜಾಪರಿಷತ್ತಿನವರಿಗೆ 'ನಿಮ್ಮ ಚಳವಳವಿನ್ನು ಅಗತ್ಯವಿಲ್ಲ' ಎಂದಂತೆಯೇ ಈಗ ಅಖಿಲ ಹಿಂದುಸ್ಥಾನಕ್ಕವರು ಈ ಸೂಚನೆ ಕೊಟ್ಟಿರಬೇಕು. ಮುಂದೆ? ಎಲ್ಲಾ ಹೊಣೆಯನ್ನೂ ತಾನೊಬ್ಬನೇ ಹೊತ್ತು ತನ್ನ ಶಪಥದಂತೆ ಸ್ವಾತಂತ್ರ್ಯ ಸಾಧನೆಗಾಗಿ ಪ್ರಾಣವನ್ನು ಕೊಡುವ ಕಾಲವೀಗ ಬಂದಿದೆ ಎಂದು ಗಾಂಧಿಯವರಿಗೆ ಭಾಸವಾಗಿರಬೇಕು. ಆದ್ದರಿಂದ ಗಾಂಧಿಜೀಯ ಆಮರಣ ಉಪವಾಸವನ್ನು ಕಾಣಲು ದೇಶವು ತಯಾರಿರಬೇಕೇನೋ! ಇಂದಿನ ವಾರ್ತೆಗಳ ಗರ್ಭದೊಳಗೆ ಆತ್ಯಾತುರದಾಯೀ ಘಟನೆಯಡಗಿರುವಂತೆ ಭಾಸವಾಗುತ್ತಿದೆ ಹೊರತು, ಶಾಂತಿಯುಸಿರು ಬಿಡುವ ಕಾಲ ಬರುತ್ತಿರುವಂತೆ ಕಾಣುವದಿಲ್ಲ.

The Vijaya Bank, Limited

WANTED.

Applications are invited for the posts of Accountants to serve in any of the Offices of the Bank, so as to reach the Head Office, on or before 31-7-1943.

1. The Candidates should have studied **up to S. S. L. C.** or its equivalent. Preference will be given to those with higher qualifications or some practical Banking experience and know Type-writing and Jewel Appraising.

2. The selected candidates must be prepared to undergo a period of probation and furnish the necessary securities as per rules of the Bank.

Further particulars can be had from the Head Office of the Bank, at Mangalore.

Mangalore, 5—7—43

B. Mahabala Shetty,
Ag. Secretary.

CHAMPAE'S
SNOW & CASTREX
AGENTS
SADANANDA STORES UDIPI

The Canara Banking Corporation Limited.

(Incorporated in British India—Liability of Members limited.)

ESTD: 1906.

Head Office: **UDIPI**, S. Kanara.

Paid Up Capital as on 31-5-'43 Rs. 6,50,060/-

Reserves „ „ Rs. 3,84,788/-

DEPOSITS exceed Rs. 50 lakhs.

For your Banking requirements come to us and we will assist you. We undertake all kinds of Banking business.

ನವಯುಗ

ಉಡುಪಿ, ಗುರುವಾರ, ೨೨-೭-೧೯೪೩

ಮಿ. ಅಮೆರಿ ಮತ್ತು ಆಹಾರ

ಹಿಂದುಸ್ಥಾನದಿಂದ ಇಂಗ್ಲಾಂಡಿಗೆ ತೆರಳಿದ ವಿದ್ಯಾರ್ಥಿಗಳು ಭಾರತೀಯ ಸಂಸ್ಕೃತಿ ರೀತಿನೀತಿಗಳನ್ನು ಕಳಕೊಂಡು- ಪಾಶ್ಚಾತ್ಯರವನ್ನು ಪೂರ್ಣವಾಗಿ ಹೊಂದಿಸಿಕೊಳ್ಳಲಾರದೆ ಇತ್ತ ಕರಿಜನರೂ ಅಲ್ಲ, ಅತ್ತ ಬಿಳಿಯರೂ ಅಲ್ಲವೆಂಬಂತಹ ಗಬ್ಬಿಲಾವತಾರಿಗಳಾಗುವದು. ಸಾಮಾನ್ಯ. ಆದರೆ ಹಿಂದುಸ್ಥಾನದ ಪರಿಸ್ಥಿತಿಯ ವಾರ್ತೆಗಳೂ, ಇಂಗ್ಲಾಂಡಿಗೆಮುಟ್ಟಿ ವಿದ್ಯಾರ್ಥಿಗಳಂತೆಯೇ ಜಾತಿರೂಪು ಕೆಡಿಸಿಕೊಳ್ಳುತ್ತವೆಂಬುದು ನೋಜಿಗವೇ ಸರಿ. ಭಾರತ ಕಾರ್ಯದರ್ಶಿ ಮಿ. ಅಮೆರಿಯವರು ಕಾಮನ್ಸ್ ಸಭೆಯಲ್ಲಿ ವಿವರಿಸಿದ ಹಿಂದೀ ಆಹಾರ ಸಮಸ್ಯೆಯ ಕಾರಣಗಳಲ್ಲಿ ಅವರ ಅಜ್ಞಾನವಷ್ಟೇ ತುಂಬಿದೆ ಹೊರತು ಸತ್ಯವಡಗಿಲ್ಲ. ವೈಮಾನಿಕನ ಮುಂದಿರುವ ಸ್ಥಳನಕಾಶೆಯಷ್ಟೇ ಮಿ. ಅಮೆರಿಯವರ ಕಣ್ಮುಂದೆ ಭಾರತದ ಚಿತ್ರವಿದೆ ಹೊರತು ಇಲ್ಲಿಯ ಪರಿಸ್ಥಿತಿಯ ಪರಿಜ್ಞಾನವವರಿಗಿಲ್ಲವೆಂಬುದಕ್ಕೆ ಹಿಂದೀ ಸಮಸ್ಯೆಗಳ ಕುರಿತು ಪ್ರಶ್ನೆಗಳು ಬಂದಾಗಲೆಲ್ಲಾ ಅವರು ಕೊಡುತ್ತಿರುವ ಉತ್ತರಗಳೇ ದೃಷ್ಟಾಂತ. ಭಾರತದ ಆಹಾರ ಸಮಸ್ಯೆಗೆ ಮಿ. ಅಮೆರಿಯವರ ಅಭಿಪ್ರಾಯದಂತೆ ಚತುರ್ಮುಖಗಳಿವೆ. ಕೃಷಿಕರು ಆಹಾರ ಪದಾರ್ಥಗಳನ್ನು ಮಾರ್ಕೆಟಿಗೆ ಹಾಕದೆ ಸಾರ್ವತ್ರಿಕವಾಗಿ ದಾಸ್ತಾನಿಟ್ಟುಕೊಳ್ಳುವಿಕೆ-ಕುಟುಂಬಾದಾಯ ಹೆಚ್ಚಿದ ದೆಸೆಯಿಂದಾಗಿ ಪ್ರತಿಯೊಬ್ಬನಿಗೆ ಬೀಳುವ ಅಧಿಕವ್ಯಯ-ವ್ಯಯಿಸುವವರು ಮತ್ತು ಇತರರು ಸಂಗ್ರಹಿಸಿಟ್ಟುಕೊಳ್ಳುವಿಕೆ ಸಾಮಾನ್ಯ ಸ್ಥಿತಿಯಲ್ಲಿ ;ಅಧಿಕೋತ್ಪತ್ತಿಯಿದ್ದಲ್ಲಿಂದ ಕೊರತೆಯಿದ್ದಲ್ಲಿಗೆ ಸಾಗುತ್ತಿದ್ದ ರೀತಿಯೀಗ ಸಂಪೂರ್ಣ ನಿಂತು ಹೋಗಿರುವದು. ಅಥವಾ ತೀರಾ ಕಡಿಮೆಯಾಗಿರುವದು. ಮಿ. ಅಮೆರಿಯವರ ಮಾತಿನ ಮೇಗೆಗೆ ಭಾರತದ ಬರಗಾಲ ಬ್ರಹ್ಮನ ಚತುರ್ಮುಖಗಳೆಂದರೆ ಇವೇ. ಭಾರತ ಕಾರ್ಯದರ್ಶಿಯು ಇದೀಗ ಮೊದಲಬಾರಿ ಆಶ್ಚರ್ಯವನ್ನು ನಿರ್ಮಿಸಿರುವುದೇನೂ ಅಲ್ಲ. ಮಗುವಿನ ಅನಾರೋಗ್ಯಕ್ಕಾಗಿ ಕೇಳಲು ಬಂದವನಿಗೆ 'ನಿಮ್ಮ ಕರುವೊಂದು ಕಾಣೆಯಾಗಿದೆಯಲ್ಲಾ!' ಎಂದು ಬಲ್ಮೆ ಹೇಳುವ ಜೋಯಿಸನಂತೆ, ಹಿಂದುಸ್ಥಾನದ ಕುರಿತು ಪ್ರಶ್ನಿಸಲ್ಪಟ್ಟಾಗಲೆಲ್ಲಾ ಯದ್ವಾತದ್ವಾ ಉತ್ತರಿಸುವದು ಅಮೆರಿಯವರ ಹುಟ್ಟುಗುಣ. ಧಾನ್ಯಗಳನ್ನೆಲ್ಲಾ ಮಿ. ಅಮೆರಿಯವರು ಹೆಸರೆತ್ತಿದ ವರ್ಗದವರೇ ನೇ ಸಂಗ್ರಹಿಸಲುಸಾಧ್ಯವೆನ್ನೋಣ-ಜ್ಞಾನವನ್ನಾದರೂಮಿ ಅಮೆರಿಯವರು ಸಂಗ್ರಹಿಸಿಕೊಳ್ಳಬಾರದೆ?

'ಬೇಸಾಯಗಾರರು ಸಂಗ್ರಹಿಸಿಟ್ಟುಕೊಳ್ಳುತ್ತಾರೆ'-ಎಂಬ ಮಿ. ಅಮೆರಿಯವರ ಮೊದಲನೆಯ ಕಾರಣವು ಹಿಂದೀ ರೈತನನ್ನು ಹಂಗಿಸಿದಂತಿದೆ. ಸೈರಿಸಲ್ಲಿ ತೆನೆಯಿರುವಾಗಲೇ ಅದನ್ನುಂಡು ಮುಗಿಸುವ ರೈತರ ಸಂಖ್ಯೆ ಹೆಚ್ಚಿಗೆ-ಅರ್ಥಾತ್ ಸಾಮಾನ್ಯ ರೈತನು ಕಟಾವಾದೊಡನೆ ಹೊಲಿ ಬಡ್ಡಿ ಕೂಡಿಸಿ ಸಂದಾಯ ಮಾಡುವ ಪರ್ತದಿಂದ ಸಾಲತಂದು ನೊದಲ್ಲೇ ಉಣ್ಣಲು ಹತ್ತುತ್ತಾನೆ. ಇಂಥವನನ್ನು ಮಿ. ಅಮೆರಿಯವರು ಮೇಲಿನಂತೆ ಅಣಕಿಸಿದುದು ಅಕ್ಷಮ್ಯ ಅಪರಾಧ. ಕುಟುಂಬಾದಾಯ ಹೆಚ್ಚಿದುದರ ಪರಿಣಾಮವಾಗಿ ಆಹಾರ ಖರ್ಚು ಹೆಚ್ಚಿದೆ ಎಂಬ ಅವರ ಎರಡನೇ ವಾದವು ತೀರಾ ದುರ್ಬಲವಾದುದು. ಇಂತಹ ನೂರಾರು ಕಾರಣಗಳನ್ನು ಕೊಡಬಹುದು. 'ಜನರ ಅಜಾಗರೂಕತೆಯಿಂದ ಕಾಳುಗಳು ಕೈತಪ್ಪಿ ಚೆಲ್ಲಿ ಹಾಳಾಗುತ್ತಿವೆ' ಎಂದೂ ಮಿ. ಅಮೆರಿಯವರನ್ನಬಹುದಿತ್ತು! ಯಾಕೆಂದರೆ ಆದಾಯ ಹೆಚ್ಚಿದಂತೆ, ಪೌಷ್ಟಿಕಾಹಾರದ ಉಪಯೋಗವು ಹೆಚ್ಚಿ, ಧಾನ್ಯವ್ಯಯವು ಕಡಿಮೆಯಾಗುವದು ಸ್ವಾಭಾವಿಕ. ಹೇಗಿದ್ದರೂ ಇಂತಹ ಬದಲಾವಣೆಯು ವಿಶಾಲ ಭಾರತದ ವಿಲಿಯೊವಧಿ ಜನರ ಪೈಕಿ ಯುದ್ಧದೆಸೆಯಿಂದ ಪ್ರಯೋಜನ ಪಡೆವಕೆಲವುಸಾವಿರ ಮಂದಿಯಲ್ಲಿ ಮಾತ್ರ ಆಗಿರಬಹುದಾದುದರಿಂದ, ಮಿ. ಅಮೆರಿಯವರ ಬಾಯಿಂದ ಒಂದು ಕಾರಣವಾಗಿ ಹೊರಡುವಷ್ಟು ಗಣನೀಯ ಸಂಗತಿ ಇದಲ್ಲ. ಇನ್ನುಳಿದ ಮೂರನೆಯದಾದ ಸಂಗ್ರಹಿಸಿಡುವವರಿದ್ದಾರೆಂಬ ಆರೋಪ ಕೆಲಮಟ್ಟಿಗೆ ನಿಜವೇನೋ ಹೌದು. ಬಹುಮಟ್ಟಿಗೆ ಸರಕಾರವೇ ಹೊಣೆಯಾದ ಈ ದುರ್ವರ್ತನೆಯೊಂದರಿಂದಲೇ ದೇಶದಲ್ಲಿ ಇಂತಹ ಬರಗಾಲವೆದ್ದಿದೆ ಎಂದು ಭಾವಿಸುವದು ಮೂಢತನ. ಕೊನೆಯದಾಗಿ 'ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸುವ ಅನುಕೂಲತೆ ತಪ್ಪಿದೆ' ಎಂದು ಮಿ. ಅಮೆರಿಯವರು ಯಾರನ್ನು ದೂರುತ್ತಾರೋ ನಮಗರಿಯದು. ಹೀಗಾಗುದುದಕ್ಕೆ ಹೊಣೆಯಾರು? ಮೂಕ ಮಿಲಿಯ ಭಾರತೀಯರೇ ಅಥವಾ ಅಮೆರಿಯವರಾಳುತ್ತಿರುವ ಸರಕಾರವೆ?

ಸತ್ಯಸ್ಥಿತಿ ಯೆಂದರೆ ಈ ಸಮಸ್ಯಾ ನಿವಾರಣೆಯ ನಿಶ್ಚಿತ ಧೋರಣೆ ಹಿಂದೀ ಸರಕಾರದ ಮುಂದಿಲ್ಲ ಇಲ್ಲಿಯ ಅಧಿಕಾರಿಗಳಲ್ಲಿ ಕೂಡಾ ಈ ಮಟ್ಟಿಗೆ 'ಅಮೆರಿ ಅಜ್ಞಾನವೇ ತುಂಬಿದೆ. ಈ ಸಂಬಂಧವಾಗಿ ಇತ್ತೀಚೆಗೆ ಡಿಲ್ಲಿಯಲ್ಲಿ ಸೇರಿದಅಧಿಕಾರಿಗಳ ಪರಿಷತ್ತಾದರೂ ಕೂಡಲೇ ಪರಿಣಾಮವೀಯಬಲ್ಲ ಸುದೃಢ ಕಾರ್ಯಕ್ರಮ ಕೈಗೊಂಡುದು ಗೋಚರಿಸಹದಿಲ್ಲ. ಇಂತಹ ಚಂಚಲ ಮನೋವೃತ್ತಿಯಜತೆಗೆ ಚಾಣಕ್ಯ ತಂತ್ರವನ್ನೂ ಸರಕಾರವು ಪ್ರದರ್ಶಿಸುತ್ತಿದೆಎಂದು ದೂರುವವರು ಬಹು ಮಂದಿ. ಬರ್ಮಿಂಗ್ಹಾಮಿನಲ್ಲಿ ಸೇರಿದ ಭಾರತೀಯ ಕೆಲಸಗಾರ ಪರಿಷತ್ತಿನಲ್ಲಿ 'ಸೈನ್ಯಗಳಿಗಾಗಿ ಅಪಾರ ಆಹಾರ ಸಾಮಗ್ರಿಗಳನು. ಸಂಗ್ರಹಿಸಿಟ್ಟುದೇಕೆ?' ಎಂದು ಡಾ। ಗಂಗುಲಿಯವರ ನಿಷ್ಠುರವಾಗಿ ಪ್ರಶ್ನಿಸಿದ್ದಾರೆ. ಮಿ. ಅಮೆರಿಯವರಾಗಲೀ 'ಇತರ ಅಧಿಕಾರಿಗಳಾಗಲೀ, ಸಂಗ್ರಹಿಸಿಡುವವರನ್ನು ದೂರುವ ಮೊದಲು ತಾವುಳ ಸಾಲುಬಿಟ್ಟು ನಿಂತುಕೊಳ್ಳುವದು ಬೇಡವೆ?

ದುರ್ಬೀನು

ತೀರ್ಥ ಕುಡಿದರೆ ಪಾಪ ತೊಳೆಯುತ್ತದೆನ್ನುತ್ತಾರೆ; ಆದರೆ ಬಾಯಾರಿಕೆ ನಿವಾರಣೆಯಾಗುವದಿಲ್ಲ. ದೊಡ್ಡವರ ಸ್ನೇಹಾಚಾರವು ತೀರ್ಥಕ್ಕೆ ಸಮಾನ-ಘನತೆ ದೊರೆಯುತ್ತದಂತೆ, ಕಾರ್ಯಕ್ಕಾಗುವದಿಲ್ಲ.

೦೦ ೦೦ ೦೦

ಸಸಿ ಬೆಳೆಯಬೇಕಾದರೆ ಬುಡದ ಮಣ್ಣನ್ನು ಹಸನಾಗಿಸಬೇಕು; ಹೊರತು ಸಸಿಯನ್ನೇ ಹಿಡಿದೆತ್ತುವದಲ್ಲ; ಕೀರ್ತಿ ಬೆಳೆಯಬೇಕಾದರೂ ಸತ್ಕಾರ್ಯ ಮಾಡಬೇಕು, ಕೀರ್ತಿಯನ್ನೇ ಹಂಬಲಿಸಿದರಾಗದು.

೦೦ ೦೦ ೦೦

ಕಾಲಡಿಯ ವಸ್ತುವನ್ನಾದರೂ ಬಗ್ಗಿ ಹೆಕ್ಕಿದರೇನೇ ಕೈಗೆ ಬಂದೀತು; ಕೈ ಕೆಳಗಿನವನೊಡನಾದರೂ ವಿನಯದಿಂದ ವರ್ತಿಸಿದರೇನೇ ತನ್ನವನಾದಾನು.

೦೦ ೦೦ ೦೦

ಉಬ್ಬಸ ರೋಗಿಯನ್ನು ಕಂಡು ಓಡಿ ಬಂದವನೆಂದು ಭಾವಿಸುವಷ್ಟು ಗಾಬರಿ ಬೇಡ; ಸ್ವಸಂಕಷ್ಟದಿಂದ ಕುದಿಯುವವನನ್ನು ವಿರೋಧ ಸಾಧಕನೆಂದು ಭಾವಿಸುವಷ್ಟು ಆವಸರ ಬೇಡ.

೦೦ ೦೦ ೦೦

ಕ್ಷಯ ತಾಗಿದವನಿಗೂ ಬೊಜ್ಜು ಕರಗಿಸುವ ಪಥ್ಯವೆಂದರೇನು? ಪತನ ಹೊಂದಿದವನಿಗೆ ಮತ್ತೂ ಪರಾಭವವೆಂದರೇನು?

೦೦ ೦೦ ೦೦

ಪೆಟ್ಟಿಗೆಯ ಹಣ ತೆಗೆಯದೆ ಪೇಟೆಯ ವ್ಯಾಪಾರ ನಡೆಯದು; ಪ್ರೇಮ ಹೊರಗೆಡಹದೆ ಪ್ರಣಯ ವ್ಯಾಪಾರ ನಡೆಯದು.

೦೦ ೦೦ ೦೦

ತಲೆಗೇರಿದ ಕಿರೀಟವನ್ನಾದರೂ ತೆಗೆದಿಡುವದು ಸುಲಭ; ತಲೆಯಲ್ಲಿ ಹುಟ್ಟಿದ ಹುಣ್ಣನ್ನು ಗುಣಪಡಿಸುವದು ಪ್ರಯಾಸ. ಉತ್ತಮರನ್ನು ತಲೆಗೇರಿಸಿಕೊಂಡರೆ ಕೆಳಗುರುಳಿಸಬಹುದು; ಅಧಮರನ್ನು ತೊತ್ತು ಹಾಕುವದು ಅತಿ ಪ್ರಯಾಸ.

೦೦ ೦೦ ೦೦

ನಾಯಿಗೆ ಸಿಟ್ಟು ಬಂದಾಗ ಹಲ್ಲು ಬಿಡುತ್ತದೆ; ಸಂತೋಷವಾದಾಗ ಬಾಲ ವಾಡಿಸುತ್ತವೆ. ಅಧಮರಿಗೆಲ್ಲಾ ಹಾಗೇನೇ-ಸಿಟ್ಟು ಮುಂದೆ; ಸಂತೋಷ ಹಿಂದೆ.

೦೦ ೦೦ ೦೦

ಕುರಿಯ ರೋಮ ಕತ್ತರಿಸಲಾಗುತ್ತದೆ ಹೊರತು ಕರಿಯ ರೋಮ ಕತ್ತರಿಸಲು ಸಿಗುವದಿಲ್ಲ. ಅಧಮರ ಮಾತಿನಲ್ಲಿ ಖಂಡನೀಯ ಅಂಶಗಳಿವೆ ಹೊರತು ಉತ್ತಮರ ಮಾತಿನಲ್ಲಿಲ್ಲ.

ಬೇಕು

ಸೆಕೆಂಡರಿ ಗ್ರೇಡ್ ತರಬೇತಾದ, ಯಾ, ತರಬೇತಾಗದ, ಮತ್ತು ಹಾಯರ್ ಗ್ರೇಡ್ ತರಬೇತಾದ ಯಾ, ತರಬೇತಾಗದ ಉಪಾಧ್ಯಾಯ, ಉಪಾಧ್ಯಾಯಿನಿಯರು ಬೇಕಾಗಿದ್ದಾರೆ. ಈ ತಿಂಗಳ ಅಂತ್ಯದೊಳಗಾಗಿ ಅರ್ಜಿಗಳು ತಲಪಬೇಕು, ತರಬೇತಾದವರ ಅರ್ಜಿಗಳಿಗೆ ಪ್ರಥಮತಃ ಗಮನಿಸಲಾದೀತು.

ಕೆ. ನಾರಾಯಣ ರಾವ್.

ಮೆನೇಜರ್ ಶ್ರೀ ಮಗಾರ್ ಹಾಯರ್ ಎಲಿಮೆಂಟರಿ ಸ್ಕೂಲ್ ಕುಕ್ಕುಂದೂರು.

× ಕುಕ್ಕುಂದೂರು.

ಕಾರ್ಕಳ ದ. ಕ.

ನೋಟೀಸು.

ಪುತ್ತೂರು ಡಿ. ಮು ಕೋರ್ಟಿನಲ್ಲಿ.

R. E. P. 212/1934.

ಅರ್ಜಿದಾರ.-ಪೋಸರ ಮುಕುಂದ ಭಟ್ಟ.

ಯೆದ್ರಿರು:-1, ಬಲ್ಲಾಳ ಭಕ್ತವತ್ಸಲಭಟ್ಟ, ಮಹಾದೇವ ಭಟ್ರ ಮಗ

2. ಗೋವಿಂದಭಟ್ಟ 3. ಕೇಶವಾ 4, ಶ್ರೀಧರಾ 5, ವಾಮನಾ 6. ಶ್ರೀನಿವಾಸಾ. 1ನೆ ಯದ್ರಿ ಮಕ್ಕಳು 3ರಿಂದ 6ರ ವರೆಗಿನವರು ಪ್ರಾಯಸ್ಥರು ಗಾರ್ಡಿಯನತಂದೆ 1ನೆ ಯದ್ರಿ, 7. ಸತ್ಯಭಾಮೆಯಾನೆ ರುಕ್ಮಿಣಿ ದುರ್ಗದ ಅದಣಿಕೆ ವಿಟ್ಠಲ ಭಟ್ರ ಹೆಂಡತಿ.

ಎಲ್ಲೂರು ಪುತ್ತೂರು ತಾಲೂಕು ಕಲ್ಯಂಜೆ ಗ್ರಾಮಸ್ಥರು

2-7ನೆ ಯೆದ್ರಿಂಗೆ ಈ ಮೂಲಕ ತಿಳಿಸುವದೇನೆಂದ್ರೆ:-

ಅರ್ಜಿದಾರನು ವಾದಿಯಾಗಿ ನಿಮ್ಮ ಮೇಲೆ ಕಡಾ ಪುತ್ತೂರ ಡಿ. ಮುನ್ಸಿಫ ಕೋರ್ಟಿನ ಕ್ರಮ ನಂಬ್ರ 366/39ರಲ್ಲಿ ಪಡೆದ ಅದರನ ಡಿಕ್ರಿ ಪ್ರಕಾರ ಬಹಾ ಅಮೇಜನ ವ್ಸಲಿ ಬಗ್ಗೆ ನಾಡಿದ ಮೇಲ್ಕಂಡ ಅಮಲ್ಜಾರಿಯಲ್ಲಿ ದಾಕಲು ಮಾಡಿದ ಏಲಂ ಇಸ್ತಿಹಾರಿನ ಶರ್ತಗಳನ್ನು ನಿಶ್ಚಯಿಸುವರೆ ತಾ 28-7-1943ಕ್ಕೆ ಇಟ್ಟದ್ದರಿಂದ ನೀವು ಆ ದಿವ್ಸ ಹಗಲು ಗಂಟೆ 11ಕ್ಕೆ ಖುದ್ದಾಗಿಯಾಗ್ಲಿ ವಕೀಲರ ಮುಖಾಂತ್ರವಾಗ್ಲಿ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ಜಾಹೀರು ಮಾಡಿಕೊಳ್ಳದಿದ್ರೆ ನಿಮ್ಮನ್ನು ಶಿವಾಯ ಮಾಡಿ ಇಸ್ತಿಹಾರು ಶರ್ತಗಳನ್ನು ಮಂಜೂರು ಮಾಡಿ ಅಮಲ್ಜಾರಿಯನ್ನು ಮುಂದರಿಸಲಾಗುತ್ತದೆ.

Savoor Ananda Rao.

Vakil for Petitioner

ಪುತ್ತೂರು
ತಾ. 13-7-43

ಬೇಕು.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕಂಪೆನಿಯ ಕಾರ್ಕಳದ ಸೀನಿಯರ್ ಇನ್ಸ್‌ಪೆಕ್ಟರರ ಆಫೀಸಿನ ಬಗ್ಗೆ ಬೇರೆ ಬೇರೆ ಜಿಲ್ಲೆಗಳಲ್ಲಿ ಕೆಲಸ ಮಾಡಲು ನುರಿತ ತರುಣರು ಬೇಕಾಗಿದ್ದಾರೆ. ಯೋಗ್ಯ ಭದ್ರತೆಯ ಮೇಲೆ ತಿಂಗಳೊಂದರ ರೂ. 50 ಸಂಬಳ ಮತ್ತು ರುಪಾಯಿ 30 ಭತ್ತೆ ಕೊಡೋಣಾಗುವದು. ಉಮೇದ್ವಾರರು ಈ ಕೆಳಗಿನ ಎಡ್ರೆಸ್ಸಿಗೆ 1½ ಆಣೆ ಸ್ಟ್ಯಾಂಪಿನೊಂದಿಗೆ ಈ ತಿಂಗಳ ಅಂತ್ಯದೊಳಗಾಗಿ ಬರೆಕೊಳ್ಳುವುದು.

ದಿ ಸೀನಿಯರ್ ಇನ್ಸ್‌ಪೆಕ್ಟರ್, ದಿ. ನ್ಯೂ ಗಾರ್ಡಿಯನ್ ಆಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಕಾರ್ಕಳ, ದ ಕ.

ಸುದ್ದಿ ಸೂಚನೆ

○ ಸಿಸಿಲಿಯಲ್ಲಿ ಮಿತ್ರಸೇನೆಗಳು ರಭಸದಿಂದ ಮುನ್ನುಗ್ಗಿ ಗಣನೀಯ ಪ್ರದೇಶವನ್ನಾಕ್ರಮಿಸಿ ಕೊಂಡಿರುವವು ಸಿಸಿಲಿಯ 1/7 ನೇ ಭಾಗವು ಇಷ್ಟರಲ್ಲೇ ಮಿತ್ರರ ವಶವಾಯಿತಂತೆ

○ ಸಿಸಿಲಿಯ ಪ್ರಾಮುಖ್ಯ ಪಟ್ಟಣವಾದ ಕೆಟಾನಿಯಾದ ಕಡೆಗೆ ಬ್ರಿಟಿಷ್ ೮ನೇ ದಳವು ಭೀಂಕರ ಬಲ ಸಮೇತ ಮುಂದೊತ್ತಿ ಪಟ್ಟಣದ ಸೂರಂವಲಯದಲ್ಲೇ ಭೀಕರ ಕಾಳಗವಾಗುತ್ತಿವೆ. ಕೇಟಾನಿಯಾ ಪತನವು ಯಾವ ಕ್ಷಣಕ್ಕೂ ಸಿದ್ಧವೆಂದು ಖಚಿತವಾಗಿದೆ.

○ ಜನರಲ್ ಐಸೆನೋವರು ಸಿಸಿಲಿಯ ಮಿಲಿಟರಿ ಗವರ್ನರರಾಗಿ ಜನರಲ್ ಅಲೆಕ್ಸಾಂಡರರನ್ನು ನೇಮಿಸಿದ್ದಾರೆ. ಆದಕ್ಕಾಗಿ ಮಿತ್ರರು ಕೆಲವು ತಿಂಗಳ ಮೊದಲೇ ಆಫೀಸರರನ್ನು ತರಬೇತು ಮಾಡಿದ್ದರಂತೆ.

○ ಸಿಸಿಲಿಯಲ್ಲಿ ಬ್ರಿಟಿಷ್ ೮ನೇ ದಳಕ್ಕೆ ಇಟಲಿಯನರೇ ಸ್ವಾಗತ ಬಯಸಿದ್ದಾರೆಂದೂ ಪ್ರಾಮುಖ್ಯ ನೆಲೆಗಳಲ್ಲಿ ಮಿತ್ರರ ಕಡೆ ಸೈನಿಕರಿಳಿಯುತ್ತಿದ್ದಾರೆಂದೂ ತಿಳಿದು ಬರುತ್ತದೆ.

○ ಇಟೆಲಿಯು ಯುದ್ಧಮಾಡದೆ ಒಪ್ಪಂದಕ್ಕೆ ಬರುವುದು ವಾಸಿಯೆಂದು ಚರ್ಚಿಲ್ ರೂಸವೆಲ್ಟರ ವಿನಂತಿ. ಒಪ್ಪಂದ ಮಾಡಿಕೊಂಡರೂ ಇಟಲಿಗೆ ಶಾಂತಿದೊರೆಯದು ಎಂದು ರೋಮ್ ರೇಡಿಯೋ ಉತ್ತರ ಕೊಟ್ಟಿದೆ.

○ ಇದೇ ತಾ 19ರಲ್ಲಿ ರೋಮ್ ನಗರದ ಮೇಲೆಯೇ ಬೋಂಬು ಧಾಳಿ ನಡಿಸಲಾಯಿತೆಂದು ಅಧಿಕೃತ ಪ್ರಕಟಣೆಯಿದೆ.

○ ಸಿಸಿಲಿಯಲ್ಲಿರುವ ಜುಮ್ಲಾ ವಿರೋಧಿ ಸೇನೆ ೩ಲಕ್ಷ 25ಸಾವಿರ. ಆ ಪೈಕಿ 60 ಸಾವಿರ ಮಾತ್ರ ಜರ್ಮನರೆಂದೂ ಉಳಿದವರು ಇಟಲಿಯಾನರೆಂದೂ ಪ್ರಕಟವಾಗಿದೆ.

○ 30000ದ ವರೆಗಿನ ಇಟಲಿ ಸೈನಿಕರೂ ಕೆಲವು ಸೇನಾಪತಿಗಳೂ ಸಿಸಿಲಿ ಯುದ್ಧದಲ್ಲಿ ಸೆರೆ ಸಿಕ್ಕಿದ್ದಾರೆ.

○ ರಷ್ಯದಲ್ಲಿ, ಜರ್ಮನರ ಮುಖ್ಯ ನೆಲೆಯಾದ ಓರೆಲಿನ ಕಡೆಗೆ ಮೂರು ದಿಕ್ಕುಗಳಿಂದ ಕೆಂಪು ಸೇನೆ ಅತಿ ಪ್ರಬಲ ಧಾಳಿ ಹೂಡಿವೆ. ಇದರಿಂದಾಗಿ ಕುರ್ಸ್ಕ್ ವಿಭಾಗದ ಜರ್ಮನರ ಧಾಳಿಯ ಬಿಗುವು ತಪ್ಪಿದೆ.

○ ಓರೆಲ್ ವಿಭಾಗದಲ್ಲಿ ಕೆಲವು ದಿನಗಳ ಹಿಂದೆ ಗುಪ್ತ ಸಂಚಾರ ಮಾಡಿ ಬಂದಿದ್ದ ಮಾರ್ಷಲ್ ಸ್ಟ್ಯಾಲಿನರೇ ಈ ಧಾಳೀ ಯೋಜನೆಯ ನಿರ್ಮಾಪಕರಂತೆ.

○ ಓರೆಲಿಗೆ ತಾಗಿರುವ 500 ಚದರ ಮೈಲು ವಿಸ್ತೀರ್ಣವನ್ನು ಕೆಂಪು ಸೇನೆಯಾವರಿಸಿಕೊಂಡು, ಜರ್ಮನರ ಅತಿ ಪ್ರಬಲ ಧಾಳಿಯನ್ನಿದಿರಿಸುತ್ತಾ ನಿಧಾನವಾಗಿಯಾದರೂ ಮುಂದೊತ್ತುತ್ತಿದೆ.

○ ರಷ್ಯದ ಓರೆಲಿನಿಂದ ಕ್ಯುಬಾನ್ ಸಂಕೇತದ ವರೆಗಿನ ಕ್ಷೇತ್ರದಲ್ಲಿ, ಈ ಯುದ್ಧದಲ್ಲೇ ಅತಿ ದೊಡ್ಡದಾದ ಯಾಂತ್ರೀಕೋಪಕರಣ ಯುದ್ಧವೀಗ ನಡೆಯುತ್ತಿದೆ. ಹೋರಾಟದ ಅಸಹನೀಯ ಭೀಕರತೆಯನ್ನು ಜರ್ಮನರೇ ಒಪ್ಪಿಕೊಂಡಿರುವರು.

○ ಜಾಪಾನರು ಗ್ವಡಲ್ಕನಾಲಿನ ಮೇಲೆ ಆಕಾಶ ಧಾಳಿನಡಿಸಿದ್ದಾರೆ. ಶಾಂತ ಸಮುದ್ರದ ಮಿತ್ರ ವಿಮಾನಗಳು ಮುಂಡಾ, ಕೊಲೊಂಬಂಗರಾ ಮೊದಲಾದ ಜಾಪಾನಿ ಠಾಣ್ಯ, ನೌಕೆಗಳ ಮೇಲೆ ಧಾಳಿಮಾಡಿವೆ.

○ ಇಂಗ್ಲಾಂಡಿನ ಕರಾವಳಿಗಳ ಮೇಲೂ ಬರ್ಮದ ಮೇಲೂ ವಿಮಾನ ಧಾಳಿಗಳು ನಡೆದಿವೆ.

○ ಜೈಲಿನಿಂದ ಬಿಡುಗಡೆ ಹೊಂದಿದ ಕೆಲವು ಕಾಂಗ್ರೆಸ್ ಕೆಲಸಗಾರರು ಬೊಂಬಾಯಿಯಲ್ಲಿ ಪರ್ಯಾಲೋಚನೆ ನಡಿಸಿ ಗಾಂಧಿಜೀಯವರು ವರ್ಕಿಂಗ್ ಸಮಿತಿ ಮೆಂಬರರೊಡನೆ ಯೋಚಿಸಿಯೇ ಧೋರಣೆ ಬದಲಾಯಿಸಬೇಕಲ್ಲದೆ ಅನ್ಯಥಾ ಸಾಧ್ಯವಿಲ್ಲವೆಂಬ ಅಭಿಪ್ರಾಯ ಪ್ರಕಟಿಸಿರುವರು

○ ಶ್ರೀ. ಶ್ರೀವತ್ಸವ ಮೊದಲಾದವರು ಅ. ಭಾ. ಸಮಿತಿಯ ಸಭೆಕರೆದು ಕಾಂಗ್ರೆಸ್ ಧೋರಣೆ ಬದಲಾಯಿಸ ಬೇಕೆಂದು ಮಾಡಿರುವ ಸೂಚನೆಯನ್ನು ಶ್ರೀ ಕಮಲನಯನ ಬಜಾಜರು ಖಂಡಿಸಿ ವಿನಂತಿ ಹೊರಡಿಸಿರುವರು.

○ ಸದ್ಯದ ಬಿಕ್ಕಟ್ಟು, ಮತ್ತು ಅವಿಶ್ವಾಸ ನಿವಾರಣೆಗೆ ಕೇಂದ್ರ, ಹಾಗೂ ಎಲ್ಲಾ ಪ್ರಾಂತ್ಯಗಳಲ್ಲಿ ಲೀಗ್ ಮಂತ್ರಿಮಂಡಲಕ್ಕವಕಾಶ ಕೊಡುವದೇ ಉತ್ತಮೋಪಾಯವೆಂದು ಕೇಂದ್ರ ಎಸೆಂಬ್ಲಿ ಸದಸ್ಯ ಶ್ರೀ ಶ್ರೀಪ್ರಕಾಶರ ಸೂಚನೆ.

○ ಮೋಂಘೀರಿನಲ್ಲಿ ತನ್ನ ಹೆಂಡತಿಯನ್ನು ಕೊಲೆಮಾಡಿದ ಆರೋಪದಿಂದ ಸಬ್ ಡೆಪ್ಯುಟಿ ಮೇಜಿಸ್ಟ್ರೇಟ್ ಸುರೇಂದ್ರ ಮೋಹನ ಸಿಂಹರ ದಸ್ತಗಿರಿಯಾಗಿದೆ. ಅವರನ್ನು ಜಾಮೀನಿನಲ್ಲಿ ಬಿಡಲಿಕ್ಕೂ ಜಡ್ಜರು ನಿರಾಕರಿಸಿದ್ದಾರೆ.

○ ಮಧ್ಯ ಪ್ರಾಂತ್ಯದ ಮಾಜೀ ಕಾಂಗ್ರೆಸ್ ಮಂತ್ರಿ ಮಿ. ಶರೀಫರು ಕಾಂಗ್ರೆಸಿಗೆ ರಾಜೀನಾಮೆಯಿತ್ತಿದ್ದಾರೆ. 'ದೇಶದಲ್ಲಿ ಕಾಂಗ್ರೆಸ್ ಮತ್ತು ಸರಕಾರವೆರಡೇ ಪಕ್ಷಗಳಿವೆ' ಎಂಬ ಪಂಡಿತ ಜವಾಹಿರಲಾಲರ ಹೇಳಿಕೆಯಿಂದ ಮುಸಲ್ಮಾನರು ತೋರಿಸಿದ ಪ್ರತಿಕ್ರಿಯೆಯೇ ರಾಜೀನಾಮೆಕಾರಣ

ಉಡುಪಿ ನಗರಸಭೆ.

ಉಡುಪಿ ನಗರಸಭೆಯ ಸಾಮಾನ್ಯ ಮೀಟಿಂಗು ತಾ- 20ರಲ್ಲು ಚೆಯರಮೇನ್ ಶ್ರೀ ಎ- ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿ ಕೌನ್ಸಿಲಿನ 1942-'43ನೆ ವರುಷದ ಆಡಳಿತ ವರದಿ ಸ್ವೀಕರಿಸಲಾಯಿತು. ವರದಿ ಸ್ವೀಕರಿಸುವಾಗ್ಗೆ ಚೆಯರ್ಮೇನ್ ಕೌನ್ಸಿಲರ್ಸ್ ಮತ್ತು ಕಮಿಶನರೊಳಗಿರುವ ಮೈತ್ರಿಯ ಕುರಿತು ನಿರ್ಣಯವಾಯಿತು. ನಗರ ಸಭೆಯ ಕೂಲಿಗಳಿಗೆ ತಿಂಗಳೊಂದರ ರೂಪಾಯಿ ಒಂದರಂತೆ ಮತ್ತು ಕೆಲ ನೌಕರರಿಗೆ ರೂಪಾಯಿ ಎರಡರಂತೆ ಯುದ್ಧ ತುಟ್ಟಿಭತ್ತೆ ಜೂನ್ ತಿಂಗಳಿಂದ ಕೊಡಬೇಕೆಂದಾಯಿತು. ಈ ಬಗ್ಗೆ ಸಾಧಾರಣ ವರ್ಷಾವಧಿ ರೂಪಾಯಿ 930/= ಬೇಕಾಗುವುದು.

ನಗರ ಸಭೆಯ ಅಧ್ಯಕ್ಷರು ಜಿಲ್ಲಾ ಬೋರ್ಡಿನ ಪ್ರೆಸಿಡೆಂಟರಾಗಿಯೂ ಕೌನ್ಸಿಲ್ ಮೆಂಬರ್ ಶ್ರೀ ರಾಮಚಂದ್ರನವರು ಮದ್ರಾಸ್ ಸೆನೇಟ್ ಮೆಂಬರರಾಗಿಯೂ ಆರಿಸಲ್ಪಟ್ಟ ಗೌರವಾರ್ಥವಾಗಿ ಕೌನ್ಸಿಲ್ ಮೆಂಬರರಾದ ಶ್ರೀನಿವಾಸ ವಿಠಲ ಕಾಮತ್, ಶ್ರೀ ಮಂಜುನಾಥ ರಾವ್ ಮತ್ತು ಜನಾಬ್ ಯು. ಎಮ್, ಇಬ್ರಾಹಿಮ್ ಸಾಹೇಬರು ಒಂದು ಉಪಹಾರ ಕೂಟವನ್ನೇರ್ಪಡಿಸಿದರು. ಕಲ್ಮಾಡಿ ಸೇತುವೆಯನ್ನು ಬಲಪಡಿಸುವಿಕೆ, ಪುತ್ತಿಗೆ ಹೊಳೆಗೆ ಸಂಕ ಹಾಕುವಿಕೆ, ಟೌನ್ ಹಾಲಿನ ಆವಶ್ಯಕತೆ, ಛತ್ರದ ಏರ್ಪಾಡು ಇತ್ಯಾದಿಗಳ ಕುರಿತು ಚೆಯರ್ಮೇನರು ಉತ್ತರವೀಯುತ್ತಾ ತನ್ನಿಂದ ಕೈಲಾದಷ್ಟು ನಿಗಾ ಕೊಡುವೆನೆಂದೂ ಯಾತ್ರಾರ್ಥಿಗಳ ಬಗ್ಗೆ ಛತ್ರ ಕಟ್ಟಿಸುವುದು ಉಡುಪಿಯ ಎಂಟು ಮಠಾಧಿಪತಿಗಳ ಆದ್ಯ ಕರ್ತವ್ಯವೆಂದೂ ಸೂಚಿಸಿದರು.

In the Court of the District Munsif of Mangalore.

O. S. No. 214 of '43

Between:

Rosario D'costa— Plaintiff.

1. Xavies Marcel Misquith.
2. Rosario Bauthis Misquith alias Jauce

Defendants.

To the Defendants

Take notice that the above-named plaintiff has filed the above suit for recovery of the reliefs claimed in the plaint against you and the same is posted to 31-7-1943. If yoh fail to appear before this Court at 10 A. M. on the said date, personally or through a pleader the suit will be decided in your absense and you will be declared exparte.

N. Krishna Bhat.

Mangalore } Advocate for plaintiff.
14-7-1643. }

ಮಕ್ಕಳ

ಮಗ್ಗಿ ಪುಸ್ತಕ

ಬೆಲೆ 0 1 0

ಚಿಲ್ಲರೆಯಾಗಿಯೂ ರಖಂ ಆಗಿಯೂ ಸಿಗುತ್ತದೆ.

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ.

ನವಭಾರತ ಪುಸ್ತಕ ಭಂಡಾರ,

ರಿಜಿಸ್ಟರ್ಡ್ ಪಬ್ಲಿಷರ್ಸ್,

ಉಡುಪಿ.

ಬಾಲಚಂದ್ರ

ವಿದ್ಯಾ ವಿಷಯಕ ಪ್ರಮುಖ ಮಾಸಪತ್ರಿಕೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. **1—8—0** ಮಾತ್ರ

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಮೆನೇಜರ್, **ಬಾಲಚಂದ್ರ**

ಸಂತೆಕಟ್ಟೆ, ಉಡುಪಿ.

ತಾ. 22—7—43ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ವನರಾಜ ಪಿಕ್ಚರ್ಸ್‌ನವರ

ಸೋರ್ಡ್ ಮೇನ್ (Sword Man)

ಬಿ. ಬಿಲ್ಲಿಮೋರಿಯಾ, ಆಗಾ, ವತ್ಸಲಾ ಕುಮ್ಟೇಕರ್, ಗೋಪ್, ರಾಜಾರಾಣಿ, ಆಶಾಲತ ಮೊದಲಾದವರು

ಬರುವಚಿತ್ರ:- **ಭೂಲೋಕರಂಭಾ.**

NOTICE.

ದಕ್ಷಿಣ ಕನ್ನಡಾ ಮಂಗಳೂರು ಡಿಸ್ಟ್ರಿಕ್ಟು ಮುನ್ಸಿಫ್ ಕೋರ್ಟಿನಲ್ಲಿ.

S.C. 328/1936. R.E.P: 116/1943

ಶ್ಯಾಮರಾಯಾನೆ ಶಂಕರನಾರಾಯಣ ಭಟ್ಟ ಕೂಡಾ- ಅರ್ಜಿದಾರರು.

ಮತ್ತು

ಅಮ್ಮು ಮೂಲ್ಯ— ರೆಸ್ಪಾಂಡೆಂಟ್,

ಜಡ್ಜಮೆಂಟ ದೇಣೇದಾರನಾದ-

ಮಂಗಳೂರು ತಾಲ್ಲೂಕು ಅತ್ತಾವರ ಗ್ರಾಮದ ಬಾಬು ಗುಡ್ಡೆಯಲ್ಲಿರುವ ತೋಮು ಮೂಲ್ಯನ ಅಳಿಯ ಅಮ್ಮು ಮೂಲ್ಯ— ಇವರಿಗೆ.

ಮೇಲೆ ಹೇಳೋಣಾದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವರಾದ ಅರ್ಜಿದಾರರು ನಿಂಮ ಬಾಬ್ತು ಸ್ಥಿರಾಸ್ತಿಗಳ ಮೂಲ ಹಕ್ಕಿನ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾರೆ. ಆದುದರಿಂದ ವಿಕ್ರಯದ ಇಸ್ತಿಹಾರಿನ ತರತಮಗಳನ್ನು ನಿರ್ಣಯಿಸಲಿಕ್ಕೆ 1943ನೇ ಇಸವಿ ಅಗೋಸ್ತು ತಿಂಗಳು 6ನೇ ತಾರೀಕು ನಿಶ್ಚಯಿಸೋಣಾಗಿದೆಯೆಂತ ಇದರಿಂದ ತಿಳಿಸೋಣಾಗುತ್ತದೆ.

By order
K. Vyasa Rao.
Advocate for Petitioner.

ಮಂಗಳೂರು. }
17-7-1943 }

ದಕ್ಷಿಣ ಕನ್ನಡ.

ಮಂಗಳೂರು.

ಆಹಾರ ಸರಬರಾಯಿ ಪಿಚಾರ

ಮಂಗಳೂರು ಮುನ್ಸಿಪಾಲಿಟಿಯೊಳಗೆ ಆಹಾರ ಸಾಮಗ್ರಿಗಳು ಸರಿಯಾಗಿ ಸರಬರಾಯಿಯಾಗುವ ಹಾಗೆ ರೇಶನಿಂಗ್ ಹಾಗೂ ವ್ಯಕ್ತಿ ಪರಿಚಯವನ್ನು ಮಾಡಿಸಿಕೊಡುವ ಕಾರ್ಯಗಳನ್ನು ಹಂಚುವ ಕುರಿತು ಆಲೋಚಿಸಲಿಕ್ಕಾಗಿ ಸ್ಥಳೀಯ ಬೆಂಚ್ ಕೋರ್ಟ್ ಹಾಲಿನಲ್ಲಿ ಈಚೆಗೆ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಒಂದು ಸಭೆನಡೆದ ಹಾಗೂ ಆ ಸಭೆಯಲ್ಲಿ ಸ್ಥಳೀಯ ರೆವಿನ್ಯೂ ಡಿವಿಜನಲ್ ಆಫೀಸರ್, ಸಹಕಾರ ಸಂಘಗಳ ಡೆ|| ರಿಜಿಸ್ಟ್ರಾರ್, ಜಿಲ್ಲಾ ಕಮರ್ಶಿಯಲ್ ಟ್ಯಾಕ್ಸ್ ಆಫೀಸರ್, ತಹಶೀಲ್ದಾರ್, ಮುನ್ಸಿಪಾಲಿಟಿಯ ಕಮಿಶನರ್, ಮಿಸೆಸ್ ಲೂಸಿ ಸಿಕ್ವೇರ ಮೊದಲಾದವರು ಹಾಜರಿದ್ದ ಹಾಗೂ ತಿಳಿದು ಬಂದಿದೆ.

ನೇಮಕಗಳು.

ಕುಂದಾಪುರದ ತಹಶೀಲ್ದಾರರಾದ ಮಿ| ಜೆ. ಎಲ್. ಡಿ'ಸೋಜ ಅವರು ದ. ಕ. ಕಲೆಕ್ಟರರಿಗೆ ಆಹಾರ ಧಾನ್ಯ (ಫುಡ್‌ಗ್ರೈನ್) ಶಾಖೆಯ ಸಹಾಯಕರಾಗಿ ನೇಮಿಸಲ್ಪಟ್ಟಿರುವರೆಂದು ಸುದ್ದಿ.

ಜೋಗ್ ಜಲಪಾತದ ಸಂಬಂಧ ಈ ಜಿಲ್ಲೆಗೆ ಶ್ರೀ. ಜಿ. ಕೊಂಡಯ್ಯ ಬಿ. ಎ. ಅವರನ್ನು ಆರು ತಿಂಗಳಿಗೆ ಸ್ಪೆಶಲ್ ಡೆಪ್ಯುಟಿ ಕಲೆಕ್ಟರರನ್ನಾಗಿ ನೇಮಿಸಲಾಗಿದೆ.

ಇಲ್ಲಿಂದ ವರ್ಗವಾಗಿರುವ ಜಿಲ್ಲಾ ಕೃಷಿ ಶಾಖೆಯ ಆಫೀಸರ್ ಶ್ರೀ. ಯು. ವಿಠ್ಠಲರಾಯರ ಸ್ಥಾನಕ್ಕೆ ಕಾರ್ಕಳದ ಡೆಮೊನ್ ಸ್ಟ್ರೇಟರರಾದ ಶ್ರೀ ಜಿ. ಸಖಾರಾಮರಾಯರನ್ನು ನೇಮಿಸಲಾಗಿದೆ.

ಕುಂದಾಪುರದ ಸಬ್ ಕಲೆಕ್ಟರ್ ಶ್ರೀ.ಡಿ. ಆರ್. ಸಾತೇ ಐ. ಸಿ. ಎಸ್. ಅವರು ಮಳೆಗಾಲದ ೩ ತಿಂಗಳಲ್ಲಿ ಮಂಗಳೂರಲ್ಲಿ ವಸತಿ ಮಾಡಿರತ್ತಾರೆ

ಪರ್ಮಿಟ್ ಪದ್ಧತಿ ರದ್ದಾಯಿತು?

ರೈಲ್ವೆಗಳಲ್ಲಿ ಅಕ್ಕಿಯನ್ನೊಯ್ಯಲು ಪರ್ಮಿಟ್ ಪದ್ಧತಿ ಅವಶ್ಯವಿಲ್ಲವೆಂದು ದ. ಕ. ಜಿಲ್ಲಾ ಕಲೆಕ್ಟರರು ಅಪ್ಪಣೆ ಕೊಡಿಸಿದ್ದಾರೆಂದು ಸುದ್ದಿಯಿದೆ. ಈಗ ಅಕ್ಕಿಯ ಕ್ರಯವು ದಿನದಿಂದ ದಿನಕ್ಕೆ ಏರುತ್ತಾ ಹೋಗುತ್ತದೆ. ಮುಡಿ ಅಕ್ಕಿಗೆ ರೂ. ೧೬ಕ್ಕಿಂತಲೂ ಏರಿದೆ. ಅಕ್ಕಿ ಜಿಲ್ಲೆಯ ಹೊರಗೆ ಹೋಗಲು ನಿರ್ಬಂಧ ಇನ್ನೂ ಇದ್ದರೂ, ರೈಲ್ವೆಗಳ ಮೂಲಕ ಸಾಗಿಸುವರೆ ನಿರ್ಬಂಧ ಹೋಗಿದೆಯಂತೆ!

Degrees: Books: Medicines
Free H. L. M. S, M. B. H. M. D, etc. Free Homeo-Ayur. UnaniNaturco degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp:—
Principal Indian Homeopathi Institute & Society (Govt. Regd)
P.O. MAHUVA .(Kathiawar Dt. India.)

Sidha-Kalpa Kavach (Regd.)
No 3 Rs 2. No. 2 Rs. No. 1 Rs. 7. Special Rs. 10. Extra Special Rs. 17 for ove marriage health, wealth. Ask any six questions with M. O. Re. 1/4 and get correct answers by returnpost Life reading Rs.10 No V.P.P.SendM.O.Free. pamplets.
Prof Dr. N. H Chhatbar.
P. O. MAHUVA (Kathiawar India.)

ಅವಘಡ

ಕುದ್ರೋಳಿ ಬಳಿ ಬಿರುಗಾಳಿಯಿಂದ ಮರಬಿದ್ದು ಆ ಮರ ಒಂದು ವಿದ್ಯುಚ್ಛಕ್ತಿಯ ಕಂಬಕ್ಕೆ ತಗುಲಿ ಅದರ ಸರಿಗೆ ತುಂಡಾದ ಪರಿಣಾಮವಾಗಿ ಆ ಕಂಬದ ಅಡಿಯಲ್ಲಿದ್ದ ಇಬ್ಬರಿಗೆ ವಿದ್ಯುಚ್ಛಕ್ತಿಯ ಸ್ಪರ್ಶವಾಗಿ ಒಬ್ಬ ಸತ್ತು ಇನ್ನೊಬ್ಬನಸ್ಥಿತಿ ಕಠಿಣವಾಗಿದೆ.

ಪುತ್ತೂರಿನಲ್ಲಿ ಶಾಲೆಗಳ ಡೆಪ್ಯುಟಿ ಇನ್ಸ್‌ಪೆಕ್ಟರಾಗಿದ್ದು ರಜೆಯ ಮೇಲಿದ್ದ ಶ್ರೀ. ಬಿ. ಐ. ರಮಣ, ಬಿ. ಎ. ಎಲ್. ಟಿ ಯವರು ಈಗ ಎಂ. ಎ. ಪಾಸಾಗಿರುತ್ತಾರೆಂದು ತಿಳಿದುಬರುತ್ತದೆ. ರಜೆ ಮುಗಿದು ಇವರು ಮಂಗಳೂರು ರೇಂಜಿನ ಡೆಪ್ಯುಟಿ ಇನ್ಸ್‌ಪೆಕ್ಟರರಾಗಿ ನೇಮಕ ಪಟ್ಟಿರುವರು.

ಉಡುಪಿ.

ಕಳವು:—ಜಿಲ್ಲಾ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರು ಇಲ್ಲಿ ಮೊಕ್ಕಾಂ ಮಾಡಿ ಅವರ ಮೋಟಾರು ಕಾರನ್ನು ಹನುಮಾನ್ ಗೆಸ್ಟ್ ಹೌಸಿನ ಗೆರೇಜಿನಲ್ಲಿ ಇಟ್ಟಿದ್ದರೆಂದೂ, ರಾತ್ರಿ ಕಾರಿನ ಕೆಲವು ಸಾಮಾನುಗಳನ್ನು ಯಾರೋ ಕದ್ದಿರುವರೆಂದೂ ತಿಳಿದು ಬರುತ್ತದೆ. ಪೋಲಿಸ್ ವಿಚಾರಣೆಯಾಗಿ ಕಳವು ಮಾಡಿದವರು ಹಿಡಿಯಲ್ಪಟ್ಟಿರುವರೆಂದೂ ಕಳವಿನ ಸಾಮಾನೆಲ್ಲಾ ಸಿಕ್ಕಿರುವದೆಂದೂ, ಕದ್ದ ಇಬ್ಬರಿಗೆ ನಾಲ್ಕು ನಾಲ್ಕು ತಿಂಗಳ ಶಿಕ್ಷೆ ಆಗಿರುವುದೆಂದೂ ತಿಳಿದು ಬರುತ್ತದೆ

ಉಪಚುನಾವಣೆ ಉಡುಪಿ ನಗರ ಸಭೆಯಲ್ಲಿ ಶ್ರೀ. ಎ. ರಂಘುಶೆಟ್ಟಿ ಮತ್ತು ಶ್ರೀ ಸುಂದರ ಕಾಮತರ ರಾಜೀನಾಮೆಗಳಿಂದ ಖಾಲಿಬಿದ್ದ ಸ್ಥಾನಗಳಿಗಾಗಿ ಅಂಬ್ಲಪಾಡಿ ಮತ್ತು ಕುಂಜಿಬೆಟ್ಟು ವಾರ್ಡುಗಳಿಗೆ ಆಗೋಸ್ತು 21ರಲ್ಲಿ ಉಪಚುನಾವಣೆಗಳು ನಡೆಯಲಿವೆಯೆಂದೂ, ಜುಲಾಯಿ 27,28,29 ರಲ್ಲಿ ಉಮೇದ್ವಾರೀ ಪತ್ರಗಳನ್ನು ಸ್ವೀಕರಿಸಲಾಗುವದೆಂದೂ ತಿಳಿದು ಬರುತ್ತದೆ. ಅಂಬ್ಲಪಾಡಿ ವಾರ್ಡಿಗೆ ಶ್ರೀ. ಎ. ರಂಘುಸೆಟ್ಟರೇ ಪುನಃ ನಿಲ್ಲುವಂತೆ ಕೆಲವು ಮತದಾರರ ಒತ್ತಾಯವಿರುವದೆಂದು ಕೇಳುತ್ತೇವೆ. ಕುಂಜಿಬೆಟ್ಟು ವಾರ್ಡಿಗೆ ಶ್ರೀ. ಆರ್. ಆರ್. ಕುಂಜೂರರು ನಿಲ್ಲಬೇಕೆಂದು ಹಲವರ ಹಾರೈಕೆಯಿದೆ.

ನಿರ್ಬಂಧಕಾಜ್ಞೆ:—ಇದೇ ತಾ. 18ರಿಂದ ಜಿಲ್ಲೆಯಲ್ಲಿರುವ ನಿರ್ಬಂಧಕಾಜ್ಞೆಯನ್ನು ತಿರುಗಿ ಎರಡು ತಿಂಗಳವರೆಗೆ ಜಾರಿಯಲ್ಲಿರಿಸಲಾಗಿದೆ. ಸಾಮಾಜಿಕ ಮತ್ತು ಧಾರ್ಮಿಕ ಸಭೆ ಮೆರವಣಿಗೆಗಳಿಗೆ ಇದು ಲಗಾವಾಗುವುದಿಲ್ಲ.

ನೆರೆಹಾವಳಿ:—ಕಳೆದ ಒಂದೆರಡು ವಾರಗಳಿಂದ ಜಿಲ್ಲೆಯ ಹಲವು ಕಡೆಗಳಲ್ಲಿ ಗಾಳಿ, ತುಫಾನುಎದ್ದು ಕೆಟ್ಟಡ ಮರಮಟ್ಟುಗಳು ಬಿದ್ದಿವೆ. ಅನೇಕ ಕಡೆಗಳಲ್ಲಿ ವಿಶೇಷ ನೆರೆಬಂದಿದೆ ಎಂದು ತಿಳಿದು ಬರುತ್ತದೆ.

ಇನ್ನಂಜೆ:—ಇಲ್ಲಿ ಹೊಸತಾಗಿ ತೆರೆಯಲ್ಪಟ್ಟ ಹೈಸ್ಕೂಲಿನಲ್ಲಿ ಕಲಿಯುವ ಬಂಟರಯಾನೆ ನಾಡವರ ವಿದ್ಯಾರ್ಥಿಗಳಿಗಾಗಿ ಕಟ್ಟಿಸಲಿರುವ ವಿದ್ಯಾರ್ಥಿ ಭವನದ ಶಂಕು ಸ್ಥಾಪನಾ ಸಮಾರಂಭವು ತಾ. 9-7-43ರಲ್ಲಿ ವಿಜೃಂಭಣೆಯಿಂದ ಜರಗಿತು. ಶ್ರೀ. ಸೀತಾರಾಮ ಧೋರಬಲ್ಲಾಳರು ಸ್ವಾಗತ ಭಾಷಣ ಮಾಡಿ ಕೆಸರು ಕಲ್ಲನ್ನು ಹಾಕುವಂತೆ ಶ್ರೀ. ಎ. ಬಿ. ಶೆಟ್ಟರನ್ನು ಕೇಳಿಕೊಂಡರು. ಶ್ರೀ ಶೆಟ್ಟರು ವಿದ್ಯಾರ್ಥಿಭವನದ ಆವಶ್ಯಕತೆ ಮೊದಲಾದುವನ್ನು ವಿವರಿಸುತ್ತ ಕೆಸರು ಕಲ್ಲನ್ನು ಹಾಕಿದರು. ಶ್ರೀಗಳಾದ ಕೆ ಕಾರ್ಗಾಲು ಗಣಪಯ್ಯ ಶೆಟ್ಟಿ, ಶ್ರೀನಿವಾಸಮೂರ್ತಿ ಶ್ರೀನಿವಾಸಮೂರ್ತಿ ಮೊದಲಾದವರ ಭಾಷಣ, ಧನ್ಯವಾದಗಳೊಂದಿಗೆ ಸಮಾರಂಭವು ಅಂತ್ಯವಾಯಿತು.

ಕಟಪಾಡಿ:—ಸ್ಥಳೀಯ ಹಾಯರ್ ಎಲಿಮೆಂಟರಿ ಶಾಲೆಯ ಸಮೀಪದಲ್ಲಿ ಉಡುಪಿ ಮಂಗಳೂರು ರಸ್ತೆಯು (ಇಳಿಜಾರಿನಲ್ಲಿ) ತೀರಾ ಹಾಳಾಗಿದ್ದು ಪ್ರಯಾಣಕ್ಕೆ ಹೆಚ್ಚು ತೊಂದರೆಯಾಗುತ್ತಿದೆ. ಬಸ್ಸಿನ ಪ್ರಯಾಣಿಕರು ಇಳಿದು ಹೋಗಬೇಕಾಗುತ್ತದೆ, ಗಾಡಿಗಳ ಸಾಮಾನನ್ನು ಇಳಿಸಬೇಕಾಗುತ್ತದೆ. ಕೆಲವು ಗಾಡಿಗಳು ಬಿದ್ದಿವೆ ಎಂದೂ ತಿಳಿದು ಬರುತ್ತದೆ. ರಸ್ತೆ ಹಾಳಾಗಿ 15 ದಿನಕ್ಕೆ ಮಿಕ್ಕಿದರೂ ಇನ್ನೂ ಶಕ್ಕ ನಿಗಾ ಕೊಡಲಿಲ್ಲವೆಂದು ತಿಳಿದು ಬರುತ್ತದೆ. ಸಂಬಂಧ ಪಟ್ಟವರೂ ಇನ್ನಾದರೂ ಈ ಕುರಿತು ಗಮನಕೊಡುವರೋ ಎಂದೊಂದು ಚಾಕ್ಕಿ.

ಪಡುಬಿದ್ರಿ:—ತಾ. 10-7-43ರಲ್ಲಿ ಪಡುಬಿದ್ರಿ ಬೋರ್ಡು ಶಾಲೆಯಲ್ಲಿ ಶ್ರೀ| ಕೊಂಜೂರು ಮಹಾಲಿಂಗ ಶೆಟ್ರು ಜಿಲ್ಲಾ ಬೋರ್ಡಿನ ವೈಸ್ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟ ಗೌರವಾರ್ಥವಾಗಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಉಡುಪಿ ತಾಲೂಕಿನ ತಹಸಿಲ್ದಾರರೂ ಊರ ಮಹನೀಯರೂ ಶ್ರೀ ಶೆಟ್ಟರ ಗುಣಕಥನ ಮಾಡಿ ಅವರಿಗೆ ಶ್ರೇಯಸ್ಸನ್ನು ಬಯಸಿ ಭಾಷಣವಿತ್ತರು.

ಕಾರ್ಕಳ:—ಇಲ್ಲಿಯ ಜನಪ್ರೀತಿ ಮುಂದಾಳು ವಕೀಲ್ ಕೆ. ಸದಾಶಿವ ಭಟ್ಟರು ಇದೇ ತಾ 12ರಲ್ಲಿ ನಿಧನ ಹೊಂದಿರುವರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ.

ಚೂರು-ಚೂರು

ಪೋಲೆಂಡಿನ ಮುಖ್ಯ ಮಂತ್ರಿಯಾಗಿ ಲಂಡನಿನಲ್ಲಿ ಮಿ. ಕೊಲಾಜ್ಸಿಕರು ಮಂತ್ರಿ ಮಂಡಲ ಸ್ಥಾಪಿಸಿಕೊಂಡಿರುವರು. ದಿವಂಗತ ಸಿಕೋರ್ಸ್ಕಿಯವರ ಧೋರಣೆಯನ್ನೇ ಇವರೂ ಅನುಸರಿಸುವರಂತೆ.

ಅಂದರೆ, ಕಾಲ ಬಂದಾಗ ಇವರ ವಿಮಾನಕ್ಕೂ ಬೆಂಕಿ ಹಿಡಿಯಬಹುದೆ?

o

ನಿರಪರಾಧಿಗಳಾದ ನಾಲ್ವರು ಮಕ್ಕಳನ್ನು ಕಿಶನ್‌ಗಂಜ್ ರೈಲ್ವೇ ಸ್ಟೇಶನಿನ ಬಳಿ ಸಾಲಾಗಿ ನಿಲ್ಲಿಸಿ ಮೂವರನ್ನು ಗುಂಡು ಹೊಡೆದು ಕೊಂದ ನಾಲ್ವರು ಪೋಲೀಸರಿಗೆ ಡಿಲ್ಲಿಯ ಸೆಶನ್ಸ್ ಕೋರ್ಟಿನವರು ಮರಣದಂಡನೆ ವಿಧಿಸಿದ್ದಾರೆ.

ಹಿಂದೀ ಪೋಲಿಸರ ಕೃತ್ಯವನ್ನು ಬಹಳವಾಗಿ ಶ್ಲಾಘಿಸಿರುವ ಚರ್ಚಿಲ್, ಅಮೆರಿಯವರ ಕಣ್ಣಿಗೆ ಸೆಶನ್ಸ್ ಜಡ್ಜರು ಕಾಂಗ್ರೆಸಿಗರಾಗಿ ಕಾಣದಿದ್ದರೆ ಬಚಾವು!

o

ಅಮೇರಿಕದಿಂದ ಚುಂಕಿಂಗಿಗೆ ಹಾರುತ್ತಿದ್ದಾಗ ಮೇಡಮ್ ಚಿಯಾಂಗರ ವೈಮಾನಿಕನು ಪ್ರಮಾದವಶಾತ್ ಬರ್ಮದಲ್ಲಿ ವಿಮಾನವನ್ನಿಳಿಸಲಿದ್ದವನು ಥಕ್ಕನೆ ಎಚ್ಚರಗೊಂಡು ಹಿಂದೆ ಹಾರಿಸಿದ್ದರಿಂದ ಮೇಡಮ್ ಚಿಯಾಂಗರು ಜಪಾನರಿಗೆ ಸಿಗದಂತಾಯಿತು.

ಚೀನದ ಸಾರಥಿಗಳಿಗೆ ಕೂಡಾ ಜಪಾನರು ಮಿತ್ರರಂತೆ ಕಾಣುವ ಪ್ರಮಾದವೊದಗಿದರೂ ಹೀಗೇನೇ ತಪ್ಪಿ ಹೋಗಲಿ!

o

ಹಿಂದುಸ್ಥಾನದಲ್ಲಿ ಸೈನ್ಯಕ್ಕೆ ಸೇರಿದವರಲ್ಲಿ ಸೇಕಡಾ ೩೪ರ ಸರಿಯಲ್ಲಿ ಮುಸಲ್ಮಾನ್, 50ರಂತೆ ಹಿಂದು, 10ರಂತೆ ಸಿಕ್ಕರು, 6ರಂತೆ ಇತರ ಮತದವರು ಇದ್ದಾರೆ.

ಬಹು ಸಂಖ್ಯೆಯ ಮೆಂಬರರಿದ್ದುದಕ್ಕಾಗಿಯೇ ಕಾಂಗ್ರೆಸನ್ನು 'ಹಿಂದೂ ಕಾಂಗ್ರೆಸ್' ಎನ್ನುವ ಜಿನ್ನರು, ಈ ಸೇನೆಯನ್ನೂ 'ಹಿಂದೂ ಸೇನೆ' ಎನ್ನಬಹುದು!

o

ಬ್ರಿಟಿಷ್ ಸರಕಾರದಿಂದ 'ವೈಸರಾಯಿ' ಪಟ್ಟ ಪಡೆದ ಲೋರ್ಡ್ ವೇವೆಲರು ಸದ್ಯದಲ್ಲೇ ಹಿಂದುಸ್ಥಾನಕ್ಕೆ ಬರಲಿದ್ದಾರೆ; ಹಿಟ್ಲರ್-ಮುಸಲನಿಯರಿಂದ 'ಫ್ಯುರರ್ ಓಫ್ ಇಂಡಿಯಾ' ಪಟ್ಟ ದೊರೆತ ಸುಭಾಸ ಭೋಸರು ಸಿಂಗಾಪುರಕ್ಕೆ ಬಂದಾಗಿದೆ.

'ಹಿಂದುಸ್ಥಾನಕ್ಕೆ ಅಧಿಕಾರ ಅಮದಾಗಲಿ' ಎಂದು ಬೇಡುತ್ತಿರುವವರಿಗೆ ಇನ್ನಾದರೂ ಸಮಾಧಾನವಾಗದೆ?

o

ಮಂಗಳೂರಿನಲ್ಲಿ ಕಳೆದ ವಾರ ಪ್ರದರ್ಶಿಸಲ್ಪಡಬೇಕಾಗಿದ್ದ ರಶ್ಯನ್ ಚಲಚ್ಚಿತ್ರ 'ಪೀಟರ್ ದಿ ಫಸ್ಟ್'ಗೆ ಕಲೆಕ್ಟರರು ತಡೆ ಹಾಕಿ ಮುಂದಿನ ವಾರ ಪ್ರದರ್ಶಿಸುವಂತೆ ಮಾಡಿದರು.

ರಶ್ಯದಲ್ಲಿ ಹಿಟ್ಲರನ ವಸಂತ ಧಾಳಿ ತಿಂಗಳುಗಟ್ಲೆ, ಮಿತ್ರರ ದ್ವಿತೀಯರಂಗ ವರುಷಗಟ್ಲೆ ಹಿಂದೆ ಬಿದ್ದಿರುವಾಗ ರಶ್ಯದ ಚಿತ್ರವು ವಾರಗಟ್ಲೆ ಹಿಂದೆ ಬಿದ್ದುದಕ್ಕಾಗಿ ದೂರಲು ನ್ಯಾಯವಿಲ್ಲ. —ವಿನೋದಿ

ನೋಟೀಸು.

ದಿ. ನ್ಯೂ ಗಾರ್ಡಿಯನ್ ಆಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು ಇದರ ಸೀನಿಯರ್ ಇನ್ಸ್‌ಪೆಕ್ಟರರ ಆಫೀಸು ಹಂಗಾಮಿಯಾಗಿ ಕಳೆದ 2 ವರ್ಷಗಳಿಂದ ಉಡುಪಿಯಲ್ಲಿದ್ದುದ್ದನ್ನು ಇದರ ಖಾಯಂ ಸ್ಥಳವಾದ ಕಾರ್ಕಳಕ್ಕೇನೇ ತಿರುಗಿ ಒಯ್ಯಲಾಗಿದೆ. ಪಾಲಿಸಿದಾರರು ಕಂಪೆನಿಗೆ ಸಲ್ಲಿಸತಕ್ಕ ತಮ್ಮ ಪ್ರೀಮಿಯಂನ ಹಣವನ್ನು ಉಡುಪಿ ಕೆನರಾ ಬ್ಯಾಂಕಿನಲ್ಲಿ ಅಥವಾ ಕೆನರಾ ಕೋರ್ಪೋರೇಶನ್ ಬ್ಯಾಂಕಿನಲ್ಲಿಯಾಗಲೀ ಸಲ್ಲಿಸಬೇಕಾಗಿ ವಿನಂತಿ.

BHUVANENDRA PRODUCTS Ltd.,

Head Office and Factory: **Katapadi**, S. Kanara

Depots: Mahratha Galli, Hubli.

"BHUVANENDRA"
Danthadavan Choorna
Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.
"ಭುವನೇಂದ್ರ"
ದಂತಧಾವನ ಚೂರ್ಣ
ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ನ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ವಿಜಯಾ ಸ್ಟೋರ್ಸ್

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

ಮುಖ್ಯ ಕಾರ್ಯಾಲಯ:— ಕೋರ್ಟು ರಸ್ತೆ, ಉಡುಪಿ. ದಕ್ಷಿಣ ಕನ್ನಡ.

ಶಾಖೆಗಳು— ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಕನ್ನಿಗೋಳಿ.

ಮುಸುಂ ಠೇವಣಿಗಳು ತಾ. 31-7-1943 ಅಥವಾ ಈ ತಾರೀಕಿನ ಮೊದಲು ವ್ಯಾದೆಯಾಗುವ್ರನಾವದೆ ಅಂಥಾ ವ್ಯಾದೆಯ ವರೆಗೆ ನಾಲಿಯಾನ ಶೇಕಡಾ 3ರ ಸಲೆ ಬಡ್ಡಿಯಲ್ಲಿ 3, 4, 5 ಅಥವಾ 6ತಿಂಗಳ ವ್ಯಾದೆಯಿಂದ ಪ್ರತಿಯೊಂದು ವಾಯಿದೆಯಲ್ಲಿ ಅಂಗೀಕರಿಸಲ್ಪಡುತ್ತವೆ.

ಬೇಂಕಿನ ಪ್ರತಿಯೊಂದು ವಿಧದ ವಹಿವಾಟುಗಳು ನಡೆಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ನೇರಾಗಿ ಅಥವಾ ಪತ್ರದ್ವಾರಾ ಸಮೀಪದ ಶಾಖೆಯಲ್ಲಿ ದಯವಿಟ್ಟು ವಿಚಾರಿಸಿ

ಶ್ರೀ ತಾರಾನಾಥ ಭೇಷಜಾಲಯ

ಶಾಸ್ತ್ರೀಯ ಮತ್ತು ಸಿದ್ಧೌಷಧಿಗಳ ಕಾರಾಗಾರ, ಚಿಕ್ಕಮಂಗಳೂರು.

ನಿರ್ದೇಶಕ:- ಡಾ. M. L Shetty, ಪ್ರೇಮವಿದ್ಯಾಪೀಠದ ಗೌ. ಪ್ರಾಧ್ಯಾಪಕರು.

ಎಲ್ಲಾ ತರದ ಭಸ್ಮ, ಖಲ್ವೀ ರಸಾಯನ, ಆಸವಾರಿಷ್ಟ, ಘೃತ, ತೈಲಗಳಿಗಾಗಿ ಕೂಡಲೇ ಬರೆಯಿರಿ.

ಒಪ್ಪಗೊಟ್ಟಿತ ರೋಗಿಗಳಲ್ಲಿ ಫಲಕಾರಿಯಾದ ಔಷಧೀ ಯೋಗಗಳು. ಗುರುಪರಂಪರೆಯ ಅನುಭವದಿಂದ ಬಂದ ನಿರ್ದುಷ್ಟ ಔಷಧೀಕರಣ ವಿಧಾನ.

ಡಾ। P. M. Alva,
ಮೆನೇಜರ್.

ಬಾಲ ಸಾಹಿತ್ಯ ಮಂಡಲ, ಲಿಮಿಟೆಡ್.

ದಿವಂಗತ ಶ್ರೀ ಉಳ್ಳಾಲ ಮಂಗೇಶರಾಯ್ ಬಿ. ಎ., ಎಲ್. ಟಿ. ಅವರಿಂದ ರಚಿತವಾದ ನಮ್ಮ "ಹೊಸಗನ್ನಡದ ಒಂದರಿಂದ ಆರ ವರೆಗಿನ ರೀಡರು"ಗಳು ಇದೇ ಜೂನಿನ ಪ್ರಥಮ ವಾರದಲ್ಲೀ ಸಿದ್ಧವಾಗುವವು. ಅವುಗಳಿಗೆ ಬೆಲೆ ಮತ್ತು ಅವುಗಳ ಮೇಲಿನ ಕಮಿಶನಿನ ದರಗಳು ಕಾಲಕ್ಕೆ ತಕ್ಕಂತೆ ಹೊಂದಿಸಲ್ಪಟ್ಟು ಆಗಲೇ ಪ್ರಕಟಗೊಳ್ಳುವವು.

Bala Sahitya Mandal, Ltd.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲರ ಸಹಕಾರ ಅಪೇಕ್ಷಿಸುವುದು.

M. R. Punja, ಯಂ. ಆರ್. ಪೂಂಜ,
President & Manager ಪ್ರೆಸಿಡೆಂಟ್ ಮತ್ತು ಮೆನೇಜರ್.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸದೊರೆಯ ಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,
ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ. : : : : ಮಂಗಳೂರು:



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಅಮೃತಾಂಜನ ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಣಮೆ ನೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ,

REGD.

ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತಾ.

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisserri.

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ- ಪರಸಿನಿ ಕಡವು ದೇವಸ್ಥಾನದಿಂದ ಈ ಮೂಲಕ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುಣ್ಣಿರಾಮನ್,
ಮೆನೇಜರ್.

— ಮಕ್ಕಳನ್ನು ಹಡೆಯುವದು ಸಾಕು.—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ 1ಗುಳಿಗೆ, ಮಧ್ಯಾಹ್ನಕ್ಕೆ 1ಗುಳಿಗೆ, ಸಂಜೆಗೆ 1ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲೆ ಬಿಡಬೇಕು. 7 ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು 1ರೂಪಾಯಿ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:— ಕುಂಬರವಾಡಿ ಸ್ಟೋರ್ಸ. ದಾವಣಗೇರಿ:— ದಾವಣಗೇರಿ ಪ್ರೆಸ್. ಆರ್. ಎಲ್. ಕಪಾಲದಾನಿ, ಕೆಮಿಸ್ಟ್, ಹಾವೇರಿ, ಬ್ಯಾಡಗಿ.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

6 ಔನ್ಸಿನ 3 ಬುಟ್ಲಿಗಳು ಹೆಚ್ಚು ಕಡಿಮೆ 40ದಿವಸಗಳಿಗೆ ಬರುವವು. ಅಂದರೆ ಕೇವಲ 1ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. **ಶಾಸ್ತ್ರಿ**, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದಕ**

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE

Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI. S. INDIA.

Regd. No.M 3618 · Ested. 1921 ಸ್ಥಾಪನೆ

ಹೊಸಕೆರೆ ಚಿದಂಬರಯ್ಯನವರಿಂದ ರಚಿತವಾದ ಗೀತೆಯ ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು ೩೪೦ ಪುಟಗಳು.
ಬೆಲೆ (ಸುಂದರ ಪ್ರತಿ) ೦—೮—೦
(ಕೆಲಿಕೋ ಬೈಂಡ್) ೦-೧೨—೦
(ಲೆದರ್ ಬೈಂಡ್) ೧—೪—೦
ಪ್ರತಿಗಳು ಪ್ರಸಿದ್ಧ ವ್ಯಾಪಾರಿಗಳಲ್ಲಿ ಸಿಗುವುದು.
0-10-0 ಸ್ಟಾಂಪು ಕಳಿಸಿದ್ದಲ್ಲಿ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಲಾಗುತ್ತೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA
ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೩ · ಸಂಚಿಕೆ ೩೭

FOUNDER
Sri. A. B. Shetty, M. L. A.

Vol 23 · No 37

NAVAYUGA— Kannada Weekly —UDIPI, S I.

ಉಡುಪಿ • **3—6—1943** • ಮಂಗಳೂರು.

ಶ್ರೀಮತಿ ಶಿವರಾಣಿ ದೇವಿಯವರಿಂದ (ದಿವಂಗತ ಪ್ರೇಮಚಂದರ ಪತ್ನಿ) ರಚಿತವಾದ ಹಿಂದೀ ಕತೆಗಳ ಕನ್ನಡ ಭಾಷಾಂತರ

ನಾರೀ ಹೃದಯ

ನಾರೀ ಹೃದಯದ ವಾಸ್ತವಿಕ ಚಿತ್ರವನ್ನು ಚಿತ್ರಿಸುವ ಉತ್ತಮ ಕತೆಗಳ ಸಂಗ್ರಹ
ಬೆಲೆ 0—14—0
ಟ ಖ 0—2—0 ಪ್ರತ್ಯೇಕ.
ಒಂದು ರೂಪಾಯಿ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ಕೆರಿಯರ ಪ್ರಪಂಚ, ಉಡುಪಿ.
ಅಥವಾ ನವಭಾರತ ಬುಕ್ ಡಿಪ್ಪೊ, ಉಡುಪಿ.

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

The Canara Mutual Assurance Co., Ltd.,
UDIPI. (S India).

ನೀವೀ ವರೆಗೆ ವಿಮೆಯನ್ನೇ ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಲ್ಲವಾದರೆ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಈಗಲೇ ವಿಮೆ ಇಳಿಸಿರಿ

ಏಕೆಂದರೆ:—

1 ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸವಿಪಾಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2 ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅಸ್ಥಿರತವೆಂದಾದರೆ, ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4 ಮೃತ್ಯು ಮತ್ತು ಮುಪ್ಪು ಎಂಬುದು ಅನುಲ್ಲಂಘ್ಯವಾದೊಂದು ನಿಶ್ಚಿತ
5 ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ.

ಕೊಪ್ಪಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಮುಖ ಏಜಂಟರು,
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ, ದ. ಕನ್ನಡ.
ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ:—
ಮಂಗಳೂರು, ಕಲ್ಲಿಕೋಟೆ, ಸೇಲಂ, ತಿರುವಾಂಕೂರು, ಬೆಂಗಳೂರು ನಗರ ಮತ್ತು ಬೊಂಬಾಯಿ

THE BOMBAY LIFE ASSURANCE CO., LTD.

Sick or healthy, wounded or convalescent in a Prisoner's Camp or in the Line-

Our Men Need Your Help

SUBSCRIBE
to
H. E. The Governor's War Fund
earmarked
"RED CROSS"
or
"AMENITIES FOR TROOPS"
—as you choose, but—
SUBSCRIBE!

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರಗಿಂದ ಕೀವು ಬರುತ್ತಿದ್ದರೆ, ಘೋರತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, . ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉದ್ರುಚು ಆಗಿದ್ದರೆ, ಮೂಲವ್ಯಾದಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ.-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ.— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೇಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ,

ಮಾಲಕರ ವಿಳಾಸ. **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ

ಜಿನ್ನರ ಧುರವೀಳ್ಯದ ಅಂಗೀಕಾರ-ಆದರೆ ಜಿನ್ನರೀಗ ಯದ್ವಾತದ್ವಾ!

ಇತ್ತೀಚಿಗಿನ ಕೆಲವು ದಿನಗಳಲ್ಲಿ ಗಾಂಧೀ ನಾಮ ಸ್ಮರಣೆಯ ಸಂದರ್ಭವೇ ಹಿಂದೀ ಸರಕಾರಕ್ಕಿರಲಿಲ್ಲ-ಇಂಗ್ಲೆಂಡು ಅಮೇರಿಕಗಳಲ್ಲಿ ಕೇಳಿ ಬಂದಷ್ಟಾದರೂ ಗಾಂಧೀ ವರ್ಣನೆಯು ಭಾರತದಲ್ಲಿರಲಿಲ್ಲ. ಕಳೆದ ತಾ ೨೬ರಲ್ಲಿ ಪುನಃ ಆ ಸಂದರ್ಭ ಒದಗಿತು; ಅಖಿಲ ಭಾರತವು ಪ್ರತ್ಯಕ್ಷ ಸ್ವಾರ್ಥಿ ಮಿ. ಜಿನ್ನರ ಮುಖ ನೋಡುವಂತಾಯಿತು!

ಸರಕಾರದ ಧಿಕ್ಕಾರ.

"ಗಾಂಧಿಯವರು ತನ್ನನ್ನು ಭೇಟಿಯಾಗುವಂತೆ ಬರೆದ ಸಣ್ಣ ಪತ್ರವೊಂದನ್ನು ಮಿ. ಜಿನ್ನರಿಗೊಪ್ಪಿಸಬೇಕೆಂಬ ವಿಜ್ಞಾಪನೆಯೊಂದು ಹಿಂದೀ ಸರಕಾರಕ್ಕೆ ತಲುಪಿದೆ. ಗಾಂಧಿಯವರೊಡನೆ ಪತ್ರ ವ್ಯವಹಾರ ಅಥವಾ ಭೇಟಿಗಳ ಕುರಿತು ಸರಕಾರದ ಸರ್ವವಿದಿತ ಧೋರಣೆಗನುಸಾರವಾಗಿ ಈ ಪತ್ರವನ್ನು ಮುಟ್ಟಿಸಬಾರದೆಂದು ಸರಕಾರವು ನಿರ್ಧರಿಸಿ ಅಂತೆಯೇ ಗಾಂಧಿಯವರಿಗೂ ಜಿನ್ನರಿಗೂ ತಿಳಿಸಲಾಗಿದೆ"—ಎಂದು ಹಿಂದೀ ಸರಕಾರದ ಪ್ರಕಟಣೆಯನ್ನುತ್ತಿದೆ. ಭಾರತದ ಯುದ್ಧ ಯತ್ನಕ್ಕೆ ಭಂಗ ಒದಗಿಸಿದ ಗಾಂಧಿಯವರ ಮಹಾಪರಾಧವನ್ನು ಜ್ಞಾಪಿಸುತ್ತಾ ಆ ಪ್ರಕಟಣೆ ಸಾರುತ್ತಿದೆ: "ತಾನು ಸೇರಿದ ಸಾರ್ವಜನಿಕ ವ್ಯವಹಾರಗಳಲ್ಲಿ ಇನ್ನೊಮ್ಮೆ ಸುರಕ್ಷಿತವಾಗಿ ಪ್ರವೇಶಿಸಲು ಯೋಗ್ಯನೆಂಬುದಕ್ಕೆ ಸರಕಾರಕ್ಕೆ ಖಚಿತ ಮಾಡಿ ಕೊಡುವ ಜವಾಬ್ದಾರಿ ಗಾಂಧಿಯವರ ಮೇಲಿದೆ. ಹಾಗೆ ಮಾಡುವ ವರೆಗೆ, ಅವರು ಅನುಭವಿಸುವ ಅಭಾವಗಳೆಲ್ಲಾ ಅವರ ಆರಿಸುವಿಕೆಯೇ ಆಗಿದೆ."

ಮಿ. ಜಿನ್ನರ ಅಂದಿನ ಅಬ್ಬರ!

ಕಳೆದ ತಿಂಗಳಲ್ಲಿ ಡಿಲ್ಲಿಯಲ್ಲಿ ನೆರೆದಿದ್ದ ಮುಸ್ಲಿಂ ಲೀಗಿನ ವಾರ್ಷಿಕಾಧಿವೇಶನದ ಮಿ. ಜಿನ್ನರ ಅಧ್ಯಕ್ಷ ಭಾಷಣದಲ್ಲಿದ್ದ ಅಪ್ಪಣೆಯನ್ನೇ ಗಾಂಧೀಜಿಯವರು ಶಿರಸಾವಹಿಸಿ ಈ ಪತ್ರ ಬರೆದರೆಂಬುದನ್ನು ಮರೆಯಸಲ್ಲ. ಜಿನ್ನರ ಪ್ರತಾಪಕ್ಕನುಕೂಲವಾದ ವಾತಾವರಣ-ಮುಸ್ಲಿಂ ಲೀಗಿನ ಅಭೂತಪೂರ್ವ ಜಯಶಾಲೀ ಅಧಿವೇಶನ--ಚಪ್ಪರದಿಂದ ಎಳ್ಳು ಬಿದ್ದರೆ ಎಬ್ಬಿಸಿದಂತಾಗುವಷ್ಟು ಜನ, ಈ ಸಂದರ್ಭದಲ್ಲಿ ಕ್ವಯದ್ ಅಝಮರು ಗಂಭೀರವಾಗಿ ಆಡಿದ ಮಾತುಗಳಿವು. "ಗಾಂಧಿಯವರು, ಪಾಕಿಸ್ತಾನದ ಆಧಾರದ ಮೇಲೆ ಮುಸ್ಲಿಂ ಲೀಗಿನೊಡನೆ ಒಪ್ಪಂದಕ್ಕೆ ಬರಲು ಈಗಲೂ ಸದ್ಯ ಪ್ರಸ್ತುತಿಸುತ್ತಾರಾದರೆ ಅದನ್ನು ನನಗಿಂತ ಹೆಚ್ಚು ಸ್ವಾಗತಿಸುವವರು ಇನ್ನೊಬ್ಬರಿರಲಾರರು. ಆ ದಿನವು ಹಿಂದುಗಳ ಹಾಗೂ ಮುಸಲ್ಮಾನರ ಉತ್ಸವ ದಿನವಾಗುವದೆಂದು ನಾನೆನ್ನುತ್ತೇನೆ. ಗಾಂಧಿಯವರು ಮನಸ್ಸು ಮಾಡಿದರೆ ಅವರು ನೆಟ್ಟಗೆ ನನಗೆ ಬರೆಯದಂತೆ ಆತಂಕಿಸುವಂತಹದೇನಿದೆ? ಅವರು ವೈಸರಾಯರಿಗೆ ಪತ್ರಗಳನ್ನು ಬರೆಯುತ್ತಿದ್ದಾರೆ; ನೇರಾ ನನಗೇಕೆ ಬರೆಯುವದಿಲ್ಲ? ಅವರನ್ನು ಹಾಗೆ ಮಾಡದಂತೆ ತಡೆಯುವವರು ಯಾರವರು? ಈ ದೇಶದಲ್ಲಿ ಸರಕಾರವೀಗ ಬಲಶಾಲಿಯಾಗಿಯೇ ಇರಬಹುದು-ಹಿಂದೀ ಸರಕಾರದ ವಿರುದ್ಧವಾಗಿ ಏನನ್ನು ಬೇಕಾದರೂ ಹೇಳಬಹುದು-ನನಗೆ ಬರೆಯಲ್ಪಡುವ ಪತ್ರವನ್ನು ತಡೆಯುವ ಧೈರ್ಯವದಕ್ಕಿದೆಯೆಂದು ನಾನೊಂದೇ ಒಂದು ಕ್ಷಣವಾದರೂ ನಂಬಲಾರೆ. ಸರಕಾರದಿಂದ ಅಂತಹ ಕೃತ್ಯವು ನಡೆದಲ್ಲಿ ಅದು ಖಂಡಿತವಾಗಿಯೂ ಭೀಕರವಾಗುವದು. ಆದರೆ ಗಾಂಧಿಯವರ, ಕಾಂಗ್ರೆಸ್ ಅಥವಾ ಹಿಂದು ಧುರೀಣತ್ವದ ಧೋರಣೆ ಬದಲಾವಣೆಯಾದ ಯಾವ ಚಿಹ್ನೆಯೂ ನನಗೆ ಗೋಚರಿಸುವದಿಲ್ಲ".

ಮಿ. ಜಿನ್ನರ ಇಂದಿನ ಆಲಾಪ.

'ತಡೆಯುವವರಾರಿದ್ದಾರೆ?' ಎಂದು ಜಿನ್ನರು ಕರೆದ ಧ್ವನಿ ಕುಂದುವಾಗಲೇ 'ನಾನಿದ್ದೇನೆ' ಎಂದು ಲೋರ್ಡ್ ಲಿನ್‌ಲಿತ್‌ಗೋರವರು ಉತ್ತರ ಕೊಟ್ಟಿದ್ದಾರೆ! ಜಿನ್ನರ ವಿಳಾಸಕ್ಕೆ ಬಂದ ಪತ್ರ-ಇನ್ನೂ ಹೇಳುವದಾದರೆ ಜಿನ್ನರೇ ಹೇಳಿ ಬರೆಯಿಸಿದ ಪತ್ರ-ಅದು ಹಿಂದೀ ಸರಕಾರದಿಂದ ತಡೆಗಟ್ಟಲ್ಪಟ್ಟಿದೆ! ಮಿ. ಜಿನ್ನರು 'ಕ್ಷಣಮಾತ್ರಕ್ಕೂ ನಂಬದ' ಆ ಧೈರ್ಯವು ಸರಕಾರಕ್ಕಿದೆ! ಇಂತಹ ಮುಖಭಂಗಿತ ಧುರೀಣರಿಂದ ನಾವು ಸಹಜವಾಗಿ ನಿರೀಕ್ಷಿಸಬೇಕಾದುದೇನು? ಕ್ವಯದ್ ಅಝಮರು ಮುಸ್ಲಿಂ ಲೀಗಿನ ಮೂಲಕ ಸರಕಾರದ ವರ್ತನೆಯ ವಿರುದ್ಧ ಚಳವಳ ಹೂಡಬಹುದು; ಭಾರತದ ಜಾತೀಯ ಐಕ್ಯತಾ ನಿವಾರಣೆಯ ಹೊಣೆಗಾರಿಕೆ ಸರಕಾರದ್ದೇ ಎಂಬುದನ್ನು ಲೋಕವಿಶ್ರುತಗೊಳಿಸಲು ಪ್ರಬಲ ಪ್ರಚಾರ ಕೈಕೊಳ್ಳಬಹುದು; ಕೊನೆಯ ಪಕ್ಷ ಲೋರ್ಡ್ ಲಿನ್‌ಲಿತ್‌ಗೋರವರನ್ನು ಬೈಯ್ಯುವ ನಾಲ್ಕು ಮಾತುಗಳಿಗಾಗಿ ತನ್ನ ಅನನ್ಯ ಶೈಲಿಯನ್ನಾದರೂ ಉಪಯೋಗಿಸಬಹುದು-ಮಾತಿನ ಚಳಿಯಂತಹವರೆಲ್ಲಾ ನಿರೀಕ್ಷಿಸುವಂತಹದು ಇದೇ! ಆದರೆ ಈ ಸಂಬಂಧವಾದ ಜಿನ್ನರ ಹೇಳಿಕೆಯು ಪ್ರಪಂಚದ ನವೀನತೆಗಳಲ್ಲೊಂದಾಗಿ ಹೊರಬಿದ್ದಿದೆ. "ಸರಕಾರವೊಡನೆ ಘರ್ಷಣೆಗೆ ನಿಲ್ಲುವಂತೆ ಮುಸ್ಲಿಂ ಲೀಗಿಗೆ ಪೇಚಾಟವನ್ನು ತಂದೊಡ್ಡಿ, ಕೊನೆಗೆ ತನಗಿಚ್ಛೆ ತೋರಿದಂತೆ ವರ್ತಿಸಲಾಗುವ ಬಿಡುಗಡೆಯ ಏಕೋದ್ದೇಶದಿಂದಲೇ ಗಾಂಧಿಯವರೀ ಪತ್ರ ಬರೆದರೆಂದು ಅರ್ಥವಾಗುತ್ತದೆ. ನಿಜಕ್ಕೂ ಗಾಂಧಿಯವರ ಧೋರಣೆ ವ್ಯತ್ಯಾಸವಾಗಿಲ್ಲ. ನಾನು ಮುಸ್ಲಿಂ ಲೀಗ್ ಅಧಿವೇಶನದಲ್ಲಿ ಮಾಡಿದ ಸೂಚನೆಯನ್ನು ಒಪ್ಪಿಕೊಳ್ಳುವ ಯಥಾರ್ಥ ಇಚ್ಛೆಯಿಲ್ಲ. ಗಾಂಧಿಯವರನ್ನಾಗಲೀ ಇತರ ಹಿಂದೂ ಮುಖಂಡರನ್ನಾಗಲೀ ಭೇಟಿಯಾಗುವದರಲ್ಲಿ ನನ್ನ ಸಿದ್ಧತೆ ಹಾಗೂ ಸಂತೋಷವಿದೆಯಾದರೂ, ಬರಿದೇ ಭೇಟಿಯಾಚಿಸುವ ಆ ಪತ್ರವು, ನಾನು ನನ್ನ ಅಧ್ಯಕ್ಷ ಭಾಷಣದಲ್ಲಿ ನಮೂದಿಸಿದ ವರ್ಗದ್ದಲ್ಲ"-ಎಂದು ಮಿ. ಜಿನ್ನರ ಆಶ್ಚರ್ಯಕರ ಅಂಬೋಣ. ಬಿಕ್ಕಟ್ಟು ನಿವಾರಣೆಗಾಗಿ ಮುಸ್ಲಿಂ ಲೀಗು ಏನಾದರೂ ಪ್ರಯತ್ನ ಮಾಡಬೇಕೆಂದು ಕೆಲವು ಹಿಂದೀ ಮುಖಂಡರು ತನ್ನನ್ನು ಒತ್ತಾಯಿಸಿದರು. ಗಾಂಧಿಯವರ ಧೋರಣೆ ಬದಲಾಗಿಲ್ಲವೆಂದು ತಾನೆಂದರೂ, ಕೆಲವು ಜವಾಬ್ದಾರೀ ಹಿಂದೂ ಮುಖಂಡರು "ಗಾಂಧಿಯವರೀಗ ತನ್ನ ತಪ್ಪನ್ನರಿತಿದ್ದಾರೆ; ಪಾಕಿಸ್ತಾನ್ ಅಸ್ತಿವಾರದ ಮೇಲೆ ಮುಸ್ಲಿಂ ಲೀಗಿನೊಡನೆ ಒಪ್ಪಂದಕ್ಕೆ ಬರಲು ಆತುರರಿದ್ದಾರೆ. ಆದರೆ ಸರಕಾರವದಕ್ಕವಕಾಶವನ್ನು ಕೊಡುತ್ತಿಲ್ಲ" ಎಂದು ಹೇಳಿದುದರಿಂದಲೇ, ಗಾಂಧಿಯವರು ಅಗೋಸ್ತು ನಿರ್ಣಯವನ್ನು ಹಿಂದೆಗೆದು ಪಾಕಿಸ್ತಾನನ್ನು ಅಸ್ತಿವಾರವಾಗಿಟ್ಟು ಒಪ್ಪಂದಕ್ಕಾಗಿ ಪತ್ರ ಬರೆಯಬೇಕೆಂದು ಕೇಳಿಕೊಂಡೆ. ಅಂತಹ ಪತ್ರವನ್ನು ತಡೆಯುವ ಧೈರ್ಯ ಸರಕಾರಕ್ಕಿರಲಾರದೆಂದು ತಾನು ಈಗಲೂ ನಂಬುತ್ತೇನೆ, ಎಂದು ಜಿನ್ನರ ಮಾತು. ಮಿ. ಜಿನ್ನರು ಅಜೇಯರೇ ಸರಿ! ಮಾನ ಬಿಟ್ಟರೂ ನಂಬಿಕೆ ಬಿಡಲಾರದವರ ವಿಶ್ವಾಸ ಭಂಗವಾಗಲು ಸಾಧ್ಯವಿದೆಯೇ?

ಪ್ರತಿಕ್ರಿಯೆ.

ಸರಕಾರದ ಪತ್ರ ಪ್ರತಿಬಂಧವೂ ಮಿ. ಜಿನ್ನರ ಹೇಳಿಕೆಯೂ ಸರ್ವತ್ರ ಕಟು ವಿಮರ್ಶೆಗೊಳಗಾಗಿವೆ. ಪ್ರಮುಖ ಮುಸಲ್ಮಾನರೇ 'ನ್ಯಾಯವನ್ನು ಬಿಡಲೇ, ಜಿನ್ನರನ್ನು ಬಿಡಲೇ' ಎಂಬ ಸಮಸ್ಯೆಗೊಳಗಾಗಿ ಲೀಗ್ ಅಧ್ಯಕ್ಷರ ಧೋರಣೆಗೆ ಜಿಗುಪ್ಸೆ ಸೂಚಿಸಿದ್ದಾರೆ. ಪಂಜಾಬಿನ ಲೀಗು ಮುಖ್ಯಮಂತ್ರಿಗಳು ಕ್ರೋಧಗೊಂಡು ಎಲ್ಲಾ ಪ್ರಾಂತಿಕ ಲೀಗು ಮಂತ್ರಿಗಳೂ ಜಿನ್ನರಿಗೆ ತಮ್ಮ ರಾಜೀನಾಮೆಗಳನ್ನೊಪ್ಪಿಸಬೇಕೆಂದೂ ಜಿನ್ನರವನ್ನು ಆಯಾಯ ಪ್ರಾಂತಿಕ ಗವರ್ನರರುಗಳಿಗೊಪ್ಪಿಸುವ ಮೂಲಕ ಸರಕಾರದ ವರ್ತನೆಯ ನಿಷೇಧವಾಗಬೇಕೆಂದೂ ಸೂಚಿಸಿದ್ದಾರೆಂದು ವಾರ್ತೆ. ತನಗೆ ದೊರೆಯದ ಗಾಂಧಿಯವರ ಪತ್ರಕ್ಕೆ ಉತ್ತರ ಕೊಡುವ ಬದಲು, ರಾಷ್ಟ್ರೀಯ ಒಪ್ಪಂದಕ್ಕೆ ಸರಕಾರವು ಹಾಕಿದ ತಡೆಗೇನು ಮಾಡಬೇಕೆಂಬುದನ್ನು ನಿರ್ಧರಿಸುವ ಧುರೀಣ ಪರಿಷತ್ತೊಂದನ್ನು ಕರೆಯಲು ಮಿ. ಜಿನ್ನರು ತೆರವಾಗಬೇಕೆಂದು ರಾಜಾಜಿಯವರ ವಿನಂತಿಯಿದೆ. ಬ್ರಿಟಿಷ್ ಪತ್ರಿಕೆಗಳೂ ಸರಕಾರದ ಧೋರಣೆಯನ್ನು ಖಂಡಿಸುತ್ತಿವೆ.

WANTED GRADUATES.

APPLY FOR TERMS

CANARA BANK LIMITED.

ESTD: 1906.

ಅನಿಶ್ಚಿತ ದಿನಗಳಲ್ಲಿ ಸುಭದ್ರ ಸಂಚಯ

ಇಂದಿನ ಯುದ್ಧ ದಿನಗಳಲ್ಲಿ ಎಲ್ಲವೂ ಅನಿಶ್ಚಿತ. ಜನರಿಗೆ ತಮ್ಮ ಕಷ್ಟಾರ್ಜಿತ ಹಣವನ್ನು ಲಾಭದಾಯಕವಾಗಿ ಹೇಗೆ ವಿನಿಯೋಗಿಸುವುದೆಂಬುದೊಂದು ಸಮಸ್ಯೆಯಾಗಿದೆ. ವ್ಯಾಪಾರಕ್ಕೆ ಹಾಕೋಣವೆಂದರೆ ಸಾಮಾನುಗಳ ಬೆಲೆಯು ಕ್ಷಣ ಕ್ಷಣ ಬದಲಾಗುತ್ತಿದೆ. ಭೂಮಿಯ ಮೇಲೆ ಹಾಕೋಣವೆಂದರೆ ಕ್ರಯ ಇಮ್ಮಡಿ; ಉತ್ಪತ್ತಿ ಕಡಿಮೆ. ಅದೂ ಅನಿಶ್ಚಿತ. ಹೀಗಿರುವಾಗ ಜನರು ಹೆಚ್ಚು ಲಾಭಾಂಶ ಹಂಚುವ ಬ್ಯಾಂಕಿಂಗ್ ಸಂಸ್ಥೆಗಳ ಪಾಲುಗಳಲ್ಲಿ ತಮ್ಮ ಹಣವನ್ನು ವಿನಿಯೋಗಿಸುವುದು ವಿಶೇಷ ಜಾಣತನವಿದೆ ಸಮಯೋಚಿತವಿದೆ. ಸುಭದ್ರ ಹಾಗೂ ಸುದೃಢ ಬ್ಯಾಂಕಿಂಗ್ ವ್ಯವಹಾರವನ್ನು ಮಾಡುತ್ತ ಕೆಲವು ವರ್ಷಗಳಿಂದ ಪಾಲುದಾರರಿಗೆ ಸೇಕಡಾ 7/-ರಂತೆ ಲಾಭಾಂಶ ಹಂಚಿಕೊಂಡು ಬರುತ್ತಿರುವ ಪ್ರಗತಿಪರ ಬ್ಯಾಂಕಿಂಗ್ ಸಂಸ್ಥೆಯೆಂದರೆ ವಿಜಯಾ ಬ್ಯಾಂಕು. ಇದರ ಪಾಲುಗಳಲ್ಲಿ ಹಣವಿನಿಯೋಗಿಸುವುದೆಂದರೆ ಅದೊಂದು ಸುಭದ್ರ ಸಂಚಯ. ಅದಕ್ಕೆ ಎರಡೆರಡು ಬಾರಿ ಹೊರಡಿಸಿದ ಪಾಲುಗಳ ಮಾರಾಟವೇ ಒಂದು ನಿದರ್ಶನ.

ವಿಜಯಾ ಬ್ಯಾಂಕಿನ ಕೆಲವೇ ಪಾಲುಗಳು ದೊರೆಯುತ್ತವೆ. ಪಾಲಿನ ಅರ್ಜಿಗಳನ್ನು ಪ್ರತಿ ಶಾಖೆಗಳಲ್ಲೂ ಸ್ವೀಕರಿಸಲಾಗುತ್ತದೆ.

ಬಿ. ಮಂಜಯ ಹೆಗ್ಡೆ, ಚೆಯರ್‌ಮ್ಯಾನ್,

ವಿಜಯಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

B. Sachidananda Hegde,

Organiser,

Vijaya Bank Ltd., Udipi.

Degrees: Books: Medicines

Free H. L. M. S. M. B. H. M. D, etc. Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs. 4 Insanity Cure Pills Rs. 10 Enclose 2 annas stamp.—

Principal Indian Homeopathi Institute & Society (Govt. Regd)

P.O. Datha (Jithiasar Dt India.)

Sidha-Kalpa Kavach (Regd.)

No. 3 Rs. 2. No. 2 Rs. 5 No. 1 Rs. 7. Special Rs. 10, Extra Special Rs. 17 for ove marriage health, wealth. Ask any six questions with M. O. Re. 1/4 and get correct answers by returnpost Life reading Rs. 2 No V.P.P. Send M.O, Free pamplets.

Prof Dr. N. H Chhatbar,

P. O. Mabava. (Kathiawar India.)

The Canara Banking Corporation Limited.

(Incorporated in British India with limited Liability.)

ESTD: 1906.

A Branch of the Corporation has been opened at COIMBATORE on 29-3-1943.

ನವಯುಗ

ಉಡುಪಿ, ಗುರುವಾರ, ೩-೬-೧೯೪೩

ಸ್ವವಂಚನೆ.

ಮಿ. ಜಿನ್ನಾರವರ ಭೇಟಿಯಾಚಿಸಿ ಗಾಂಧಿಜೀ ಕಳುಹಿದ್ದ 'ಆ ಸಣ್ಣ ಕಾಗದ'ದಲ್ಲಿ ನಾಲ್ಕು ಪಂಗ್ತಿಗಳಿಗೆ ಮಿಕ್ಕಿ ಬರೆದಿರಲಾರದೆಂದು ಹಿಂದೀ ಸರಕಾರದ ಹೇಳಿಕೆಯಿಂದ ಊಹಿಸಲಾಗುತ್ತದೆ; ಆದರೆ ಅಷ್ಟರಲ್ಲೇ ಸರಕಾರದ ಮತ್ತು ಕ್ವೈಯಾದ್ ಆಝಾಮರ ಜಾತಕಗಳನ್ನು ಲೋಕವ್ನೋದುವಂಥಾದುದನ್ನು ಕಾಣುವಾಗ ನಗು ಬರುತ್ತಿದೆ. 'ಭಾರತೀಯರು ತಮ್ಮೊಳಗೊಂದು ಒಪ್ಪಂದ ಮಾಡಿಕೊಳ್ಳಲು ಸರ್ವವಿಧದಿಂದ ನೆರವಾಗುವದೇ ನಮ್ಮ ಧೋರಣೆ' ಎಂದು ಸರಕಾರವು ಹೇಳುತ್ತಾ ಬಂದಿದೆ--ಹೇಳುತ್ತಲೇ ಇದೆ--ಬಾಯಿ ಮುಚ್ಚಿಸುವ ಈ ಘಟನೆಯನ್ನು ಪ್ರಯತ್ನ ಪೂರ್ವಕ ಮರೆತು ಇನ್ನೂ ಹೇಳುತ್ತಿರಬಹುದು. "ಗಾಂಧಿಯವರು ನನಗೆ ಬರೆಯುವ ಪತ್ರವನ್ನು ತಡೆಯುವ ಧೈರ್ಯವು ಯಾವ ಸರಕಾರಕ್ಕಿದೆ?"-ಎಂದು ಮಿ. ಜಿನ್ನರು ಘರ್ಜಿಸಿ ತಿಂಗಳು ಮಾತ್ರ ಕಳೆದಿದೆ ಇಷ್ಟರೊಳಗೇನೆ ಪತ್ರ ಬರೆಯುವ ಅಧಿಕ ಪ್ರಸಂಗವನ್ನು ಗಾಂಧಿಯವರು ಮಾಡಬಹುದೆಂದು ಪ್ರಾಯಶಃ ಸರಕಾರವಾಗಲೀ ಮಿ. ಜಿನ್ನರಾಗಲೀ ಊಹಿಸಿರಲಿಲ್ಲ. ಜಾತೀಯ ಐಕ್ಯ ಪ್ರಯತ್ನವು ಸರಕಾರಕ್ಕೆ ಬೇಕಿಲ್ಲವೆಂಬುದು ಗಾಂಧಿಯವರಿಗೆ ತಿಳಿದಿದ್ದ ವಿಷಯ; ಮಿ. ಜಿನ್ನರ ಮರ್ಕಟ ಹಿಡಿತವನ್ನು ಸಡಿಲಿಸುವ ಶಕ್ತಿಯು ತನ್ನ ಒಕ್ಕಣೆಗಿಲ್ಲವೆಂಬುದಂತೂ ಗಾಂಧಿಯವರ ಅನುಭವ ಸಿದ್ಧ ಸಂಗತಿ. ಅಂದಮೇಲೆ ಗಾಂಧಿಯವರು ಪತ್ರವನ್ನೇಕೆ ಬರೆಯಬಲ್ಲರು? ವಸ್ತುಸ್ಥಿತಿ ಹೀಗಿರುವಾಗ 'ರಾಷ್ಟ್ರೀಯ ಐಕ್ಯಕ್ಕೆ ಪ್ರಯತ್ನಿಸಲಿ' ಎಂದು ಎಷ್ಟೊಂದು ಕೂಗಿಕೊಂಡರೂ, ಅದು ಫಲಿಸುವ ಅಂಜಿಕೆಯಿಲ್ಲವಷ್ಟೆ-ಎಂಬ ಧೈರ್ಯ ಸರಕಾರಕ್ಕಿತ್ತು. ಈ ಕಣ್ಣಾಮುಂದಿನ ಕಾರಣಗಳನ್ನು ಅರ್ಥಮಾಡಿಕೊಳ್ಳುವಷ್ಟು ಜ್ಞಾನ ಜಿನ್ನರಲ್ಲಿಯೂ ಇದ್ದಿತು. ಆದ್ದರಿಂದಲೇ 'ಐಕ್ಯ ಪ್ರಯತ್ನ ನಡೆಯಲಿ' ಎನ್ನುತ್ತಾ ಬಂತು ಸರಕಾರ; 'ಗಾಂಧಿಯವರು ನನಗೆ ಬರೆಯಲಿ' ಎಂದರು ಮಿ. ಜಿನ್ನ. ಆದರೆ ರಾಷ್ಟ್ರೀಯ ಐಕ್ಯತೆಯ ಕುರಿತು ಮಹಾತ್ಮರಲ್ಲಿರುವ ಆತುರವು ಸ್ವಪ್ರತಿಷ್ಠೆಗಿಂತ ದೊಡ್ಡದು; ಅವರು ತಡಮಾಡದೆ ಬರೆದರು- ತನ್ನ ವಿಶ್ವಾಸದ ಪತ್ರವನ್ನು ತಡೆಯುವ ಎದೆಗಾರರಿಲ್ಲ ಎಂಬ ಮಿ. ಜಿನ್ನರ ಆಶ್ವಾಸನೆಯನ್ನು ನಂಬಿಯೇ ಬರೆದರು. ಪತ್ರವಿಂದು ತಡೆಯಲ್ಪಟ್ಟಿದೆ. ಆಶ್ಚರ್ಯವೆಂದರೆ ಮಿ. ಜಿನ್ನರು 'ತಡೆವ ಎದೆಗಾರಿಕೆ'ಯಿದ್ದವರ ಈ ಹೇಕರ ಕೃತ್ಯ'ಕ್ಕೆ ಪ್ರಾಯಶ್ಚಿತ್ತ ಮಾಡುವ ಬದಲಿಗೆ, ತನ್ನ ಸೂಚನೆಯಂತೆ ಬಂದ ಪತ್ರದ ಒಕ್ಕಣೆಯನ್ನು ಟೀಕಿಸುವ ಅವಕಾಶ ದೊರಕಿಸಿಕೊಂಡಿದ್ದಾರೆ. 'ನಾನಪೇಕ್ಷಿಸಿದುದು ಇಂತಹ ಪತ್ರವನ್ನಲ್ಲ'. ಎನ್ನುವ ಮಿ. ಜಿನ್ನರು ಲೀಗ್ ಅಧಿವೇಶನದಲ್ಲೇ ಒಂದು ಕರಡೋಲೆಯನ್ನು ತಯಾರಿಸಿ ಅದಕ್ಕೆ ಸಹಿಹಾಕುವ ಅಧಿಕಾರವನ್ನಷ್ಟೇ ಗಾಂಧಿಜೀಗೆ ಕೊಡಬಾರದಿತ್ತೆ? ಈಗ ಗಾಂಧಿಜೀ ಜಿನ್ನರಂದಂತೆ ನಡೆದಿದ್ದಾರೆ. ಈಗಿನ ಜಿನ್ನರು ಹೇಳುತ್ತಿರುವಂತೆ, ಅವರನ್ನು ಉಪಾಧ್ಯಾಯರನ್ನಾಗಿ ಅಂಗೀಕರಿಸಿ-ಉಕ್ತ ಲೇಖನ' ಬರೆಯುವ ವಿದ್ಯಾರ್ಥಿಯಾಗಲಿಲ್ಲವಾದರೂ, ಆಗಿನ ಜಿನ್ನರು ಸೂಚಿಸಿದಂತೆ ಪತ್ರ ಬರೆಯುವ ಯಥಾರ್ಥ ಮಿತ್ರರಾಗಿದ್ದಾರೆ. ಸರಕಾರವು ಮಾತ್ರ ಜಿನ್ನರ ಊಹೆಗೆ ಮಿಕ್ಕಿದ ಉದ್ಧಟತನ ತೋರಿಸಿದೆ. ಆದರೂ ಜಿನ್ನರು, ಗಂಡನ ಮೇಲಿನ ಕ್ರೋಧವನ್ನು ಮಗುವಿನ ಮೇಲೆ ತೀರಿಸಿಕೊಳ್ಳುವ ಪತ್ನಿಯ ಪ್ರತಾಪ ತೋರಿಸುತ್ತಿರುದನ್ನು ಕಂಡು ಯಾರಾದರೂ ಕನಿಕರಗೊಳ್ಳಲೇಬೇಕು! ಇಂತಹ ಸ್ವವಂಚನೆ,ದೌರ್ಬಲ್ಯವಿರುವ ಧುರೀಣತ್ವವನ್ನು ಪಡೆದುದಕ್ಕಾಗಿ ಮುಸ್ಲಿಂ ಸಮಾಜವು ತಲೆಬಗ್ಗಿಸಬೇಕು. ತಾನು ಲೀಗ್ ಅಧಿವೇಶನದಲ್ಲಿ ಸೂಚಿಸಿದಂತಹ ಆ ಪತ್ರವು ಇವಲ್ಲ ಎಂದು ಜಿನ್ನರನ್ನುತ್ತಾರೆ; ಲೀಗ್ ಅಧಿವೇಶನಲ್ಲಿದ್ದ ಆ ಜಿನ್ನರೇ ಇವರಲ್ಲವೆಂದು ನಮಗನ್ನಿಸುತ್ತದೆ!

'ಜಾತೀಯ ಐಕ್ಯ' ನೆವದ ತನ್ನ ಕಪಟ ವೇಶವನ್ನು ಈ ರೀತಿ ಅನಿವಾರ್ಯವಾಗಿ ಬಿಡಬೇಕಾಗಿ ಬಂದುದಕ್ಕಾಗಿ ಸರಕಾರವೇ ಪಶ್ಚಾತ್ತಾಪ ಪಡುವಂತಾಗಿದೆ ಹೊರತು ಸರಕಾರದ ಈ ಕೃತ್ಯಕ್ಕಾಗಿ ನಾವು ದುಃಖಿಸುವ ಕಾರಣವಿಲ್ಲ. ಜಾತೀಯ ಐಕ್ಯದ ಕೀಲಿಕೈಯನ್ನಡಗಿಸಿಟ್ಟವರ ಪತ್ತೆಯೀಗ ಗಾಂಧಿಜೀಯಿಂದಾಗಿದೆ ಲೋಕದ ಕಣ್ಣಿಗಾಗುವ ಅಂಜನವು ಈಗ ಕೂಡಾ ಇರುವದು ಆ 'ಕೈದಿ'ಯ ಕೈಯಲ್ಲೇ!-ಎರಡೇ ಪಂಗ್ತಿಯ ಓಲೆಯಿಂದ ಇಬ್ಬರ ಜಾತಕ ಸ್ಪಷ್ಟಪಡಿಸಿದ ಗಾಂಧಿಜೀಯನ್ನು ಅಭಿನಂದಿಸುತ್ತೇವೆ-

---

ದುರ್ಬೀನು

ಜಿಂಕೆಯ ಬೆನ್ನು ಹಿಡಿಯಬಹುದು--ಜಿನ್ನರ ಬೆನ್ನು ಹಿಡಿಯುವದು ಪ್ರಯಾಸ.

oo oo oo

ಮನೆಯವರ ಆಮಂತ್ರಣವಿದ್ದೂ ಗಂಡ ಕಳುಹಲೊಪ್ಪದಿದ್ದರೆ ಮನೆಯವರನ್ನೇಕೆ ದೂರಬೇಕು? ಗಾಂಧಿಜೀಯಾಮಂತ್ರಿಸಿದರೂ ಸರಕಾರವಾತಂಕಿಸಿದರೆ ಜಿನ್ನರು ಗಾಂಧಿಯವರನ್ನೇಕೆ ದೂರಬೇಕು?

oo oo oo

ಬೇಟೆ ಹೊಡೆಯುವ ಬೇಡನು ಗುಂಡು ಹಾರಿಸುವ ಮೊದಲು ಚಪ್ಪಾಳೆ ಹೊಡೆಯಬಾರದು; ಇಟಲಿಯನ್ನಾಕ್ರಮಿಸಲಿರುವ ಚರ್ಚಿಲ್ಲರು, ಇಷ್ಟು ಬಲವಾದ ಎಚ್ಚರಿಕೆ ಕೊಡಬಾರದು.

oo oo oo

ನೆರೆ ಮನೆಯ ಕನ್ನಡಿಯೊಡದರೆ ಕುರುಡನ ಕಣ್ಣಿಗೆ ಕನ್ನಡಕವಾಗದು; ಜರ್ಮನಿಯ ಅಣೆಕಟ್ಟುಗಳನ್ನೊಡೆದ ನೀರಿನಿಂದ ಬ್ರಿಟಿಷ್ ಸಾಮ್ರಾಜ್ಯಾಭಿಷೇಕ ನಡೆಯದು.

oo oo oo

ಪತಿ-ಪತ್ನಿ ಸಂಸಾರ ಹೂಡಿದೊಡನೆ ಸಂತಾನವಾಗಲಾರದು; ಚರ್ಚಿಲ್-ರೂಸವೆಲ್ಟ್ ಒಟ್ಟಾದ ಬೆನ್ನಲ್ಲೇ ದ್ವಿತೀಯ ರಂಗವಾಗಲಾರದು.

oo oo oo

ಮುಳುಗಿ ಸಾಯುವವನಿಗೆ ಕೋಲು ನೀಡಬೇಕು ಹೊರತು ಕೈಕೊಡಬಾರದೆಂದು ಜಾಣನಿಗೆ ಗೊತ್ತು; ಉಸಿರು ಕಟ್ಟಿದ ಚೀನಕ್ಕೆ ವಾಗ್ದಾನದ ಹೊರತು ಪ್ರಾಣದಾನಕ್ಕಿಳಿಯುವದರಲ್ಲಿರುವ ಅಪಾಯ ಮಿತ್ರರಿಗೆ ಗೊತ್ತು.

oo oo oo

ದೇವಳದಿದಿರು ರಸ್ತೆಗಡ್ಡ ಬಿದ್ದರೆ ನಲಿ ಹಿಡಿದ ಸಂದರ್ಭವಲ್ಲ; ಸ್ವಾತಂತ್ರ್ಯಕ್ಕಾಗಿದ ಮನಿಸಲ್ಪಟ್ಟಿರದು ಪತನವಲ್ಲ.

oo oo oo

ತಲೆಯ ಮೇಲಿದ್ದ ತುಕುಟಗಳೆಷ್ಟೋ ಉರುಳಿದುವಂತೆ-ತಲೆಗೇರಿದ ಮದವಿಳಿಯಲಾರದೆ?

oo oo oo

ಯುದ್ಧದಲ್ಲಿ ಈ ತನಕವೂ ತಡೆಗಟ್ಟಲಾಗದುದು ಸಬ್‌ಮೆರೀನ್ ಹಾವಳಿ; ವ್ಯವಹಾರ ಜಗತ್ತಿನಲ್ಲಾದರೂ ಅಜೇಯರೆಂದರೆ ಸಬ್ ಮೆರೀನ್ ವರ್ಗದವರೇ.

oo oo oo

ಕಾಲು ಹೋದದ ಮಾತ್ರಕ್ಕೆ ಕಂಬಳಿಯನ್ನೂ ಹೊದೆಯಬೇಕೆಂದಿಲ್ಲ; ಟ್ಯುನಿಸಿಯಾ ಗೆದ್ದವರು ಯುರೋಪನ್ನೂ ಗೆಲ್ಲಬೇಕೆಂದಿಲ್ಲ.

ನೋಟೀಸು.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. No. 440/1942-

ದಿ. ಉಡ್ಪಿ ಮುನ್ಸಿಪಾಲಿಟಿಯ ಕಮಿಶನರ್, ಡಿ. ವಿಶ್ವನಾಥ ರೆಡ್ಡಿ } ವಾದಿ.

ಮತ್ತು

1. ಸೀತಾರಾಮ ಬಲ್ಲಾಳ- 2 ದಾಸ ಬಲ್ಲಾಳ- 3. ರಾಮಕೃಷ್ಣ ಕೆದ್ಲಾಯ. 4. ಪದ್ಮನಾಭ ಉಪಾಧ್ಯ- 5. ಶ್ರೀ ಸುಬ್ರಹ್ಮಣ್ಯ ತೀರ್ಥ ಸ್ವಾಮಿ. 6. ಲಕ್ಷ್ಮೀ ಅಮ್ಮ. 7. S. ಎನ್. ಮಥಾಯಿಸ್. 8. ಆರೂರು ಸುಬ್ರಾಯ ಭಟ್ಟ. 9. ವೆಂಕಟ್ರಮಣ ಉಪಾಧ್ಯ ಯಾನೆ ಯು. ಕೆ. ಉಪಾಧ್ಯ.

—ಪ್ರತಿವಾದಿರು

ಯಾವರೊಳಗೆ.

ಮೇಲ್ಕಂಡ ವ್ಯಾಜ್ಯವು ಉಡ್ಪಿ ಮುನ್ಸಿಪಾಲಿಟಿಗೆ ಬರತಕ್ಕ ಟೇಕ್ಸಿನ ಅಪೀಲಾಗಿ ಮಾಡಿದ್ದಾಗಿದ್ದು ಸದ್ರಿ ವ್ಯಾಜ್ಯದಲ್ಲಿ ಸದ್ರಿ ಮೇಂಟು 9ನೇ ಪ್ರತಿವಾದಿಗೆ ಆಗತಕ್ಕ ವ್ಯಾಜ್ಯದ ನೋಟೀಸು ತಾ 29-6-43 ಕ್ಕೆ ಇಟ್ಟಿರುತ್ತದೆ, ಸದ್ರಿ ಪ್ರತಿವಾದಿಯ ಉದಾಸರಣೆ ವಗೈರೆ ಇದ್ದ ಪಕ್ಷದಲ್ಲಿ ಆತನು ಮೇಲ್ಕಂಡ ದಿವ್ಸ ಮೇಲ್ಕಂಡ ಕೋರ್ಟಿನ ಮುಂದೆ ಬೆಳಿಗ್ಗೆ 10 ಘಂಟೆಗೆ ಹಾಜರಾಗಿ ಸ್ವತಹಾ ವ. ವಕೀಲರ ಮುಖಾಂತ್ರ ಜಾಹೀರು ಮಾಡಿಕೊಳ್ಳಬೇಕು. ಇಲ್ಲವಾದ್ರೆ ಆತನ ಗೈರಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಯಿದ ಮೂಲಕ ಪ್ರಕಟಿಸಲಾಗಿಯದೆ.

P. Padmanabha Rao.

B. A. B. L

Vakil for Plaintiff

ಉಡ್ಪಿ. }
ತಾ 29-5-43 }

ಡಾಕ್ಟರ್ ಕೊರಡ್ಕಲ್ ಫಾರ್ಮಸಿಯ ದಿವ್ಯೌಷಧಗಳು.

1. 'ಓಜಸ್ವಿನಿ'-'ಧಾತುವರ್ಧಕ' ನರಗಳ ಸಿತ್ರಾಣ ನಿರುತ್ಸಾಹ ನಿವಾರಕ.
2. 'ಭಗಿನೀಬಂಧು'- ಮುಟ್ಟುದೋಷ ಮುಂತಾದ ಗರ್ಭಕೋಶದ ಸಕಲ ಆಕ್ರಮ ನಿವಾರಕ,

೧೬ ದಿವಸದ ಗುಣದಾಯಕ ಸೇವನೆಯ ವೆಚ್ಚ ರೂ. 3 ಮಾತ್ರ.

ದೊರೆಯುವಸ್ಥಳ—**ಉಡುಪಿ ರಥಬೀದಿಯ ಡಾ। ಕೊರಡ್ಕಲ್ ಫಾರ್ಮಸಿ ಮತ್ತು ವಿಜಯಾ ಸ್ಟೋರ್ಸ್ ಉಡುಪಿ ದ. ಕ.**

CHAMPAE'S
SNOW & CASTREX
AGENTS
SADANANDA STORES UDIPI

The Modern School of Commerce

(Est. 1930)

Church View, UDIPI, S. I.

(Classes commence from 14th June)

Offer coaching for all Commercial DIPLOMAS & SUBJECTS

Such as D. Com (I. M. C.) Bombay, L. C. C. (London) C. A. I. I. B. and C. A. I. B. (London) besides SHORT-HAND & TYPEWRITING.

For prospectus enclose 1½ annas stamp.

ಅಮೇರಿಕಾಕ್ರಮಣ?

"1943ನೇ ಜೂನಿನಿಂದ ಒಕ್ಟೋಬರದೊಳಗೆ ಅಮೇರಿಕದ ಪಶ್ಚಿಮ ಕರಾವಳಿಯಲ್ಲಿ ಕಾಲೂರುವ ಹಂಚಿಕೆಯಲ್ಲಿ ಜಾಪಾನರಿದ್ದಾರೆಂದು ನನಗೆ ನಂಬಲರ್ಹವಾದ ವರದಿಗಳು ದೊರೆತಿವೆ. ಇದು ಹಗುರ ಧಾಳಿಯೂ ಅಲ್ಲ; ಜೊಡೆದೋಡುವ ಹವ್ಯಾಸವೂ ಅಲ್ಲ. ಸ್ವತಃ ಅಮೇರಿಕದಲ್ಲಿ ದೃಢ ಹೆಜ್ಜೆಯೂರುವ ಯೋಜನೆಯೇ ಆಗಿದೆ" ಎಂದು ಕೋರಿಯಾದ ರಾಷ್ಟ್ರೀಯ ಯುದ್ಧಮುಖದ ವಾಷಿಂಗ್ಟನ್ ಪ್ರತಿನಿಧಿ ಹೇಳಿದ್ದಾನೆ. ಸೆಪ್ಟಂಬರದೊಳಗೆ ಚೀನದೊಡನೆ ಪ್ರತ್ಯೇಕ ಸಂಧಿಮಾಡಿಕೊಳ್ಳುವ ಯೋಚನೆಯೂ ಜಾಪಾನರಿಗಿದೆ.

● ತಾನು ಮಾಡದ ಪಾಪವನ್ನೂ ಮಾಡಿತೆಲು ಬಿಡದಿರುವದು ಸರಕಾರದ ಧ್ಯೇಯ. ಗಾಂಧಿಯವರ ಪತ್ರವನ್ನು ಜಿನ್ನರಿಗೆ ಮುಟ್ಟಿಸುತ್ತಿದ್ದರೆ ಆಕಾಶ ಕಳಚಿ ಬೀಳುತ್ತಿರಲಿಲ್ಲ' ಎಂದು ಮುಸ್ಲಿಂ ಲೀಗಿನ ಮುಖಪತ್ರ 'ಡಾನ್' ಟೀಕಿಸಿದೆ

● ಕೈಮಗ್ಗದ ಅರಿವೆಗಳ ಮೇಲೆ ಮದ್ರಾಸ್ ಸರಕಾರವು ಬೆಲೆ ನಿಯಂತ್ರಣ ಹಾಕಿದೆ.

● 'ಮೋಸ್ಕೋವು ಅನ್ಯ ದೇಶಗಳ ಒಳವ್ಯವಹಾರದಲ್ಲಿ ಕೈ ಹಾಕಿ, ಅವನ್ನು ಬೊಲ್ಶೆವಿಸ್ ಮಾಡುತ್ತಿದೆ ಎಂಬ ಸುಳ್ಳನ್ನಿದು ಅಂತ್ಯಗೊಳಿಸಿತು' ಎಂದು ಕಾಮಿಂಟರ್ನ್ ರದ್ದತಿಯ ಕುರಿತು ಸ್ಟಾಲಿನರಂದಿದ್ದಾರೆ.

● ಗಡಿನಾಡಿನಲ್ಲಿ ಮುಸ್ಲಿಂ ಲೀಗ್ ಮಂತ್ರಿಮಂಡಲ ಸ್ಥಾಪನೆಯಾಗಿದೆ. ತಮ್ಮನ್ನು ದಸ್ತಗಿರಿ ಮಾಡದಿದ್ದರೆ ಈ ಮಂತ್ರಿಮಂಡಲವನ್ನು ಬಹಳ ದಿನ ಬಾಳಲು ಬಿಡಲಾರೆನೆಂದು ಅಲ್ಲಿಯ ಕಾಂಗ್ರೆಸ್ ಪ್ರಮುಖರಂದಿದ್ದಾರೆ.

● ಚೀನ ಪ್ರದೇಶದಲ್ಲಿ ಘೋರ ಹೋರಾಟವು ಕೊನೆಯ ಹಂತಕ್ಕೆ ಮುಟ್ಟಿದೆ. ಇನ್ನು ಒಂದೆರಡು ದಿನಗಳಲ್ಲೇ ವಿಜಯ ಸಂಪಾದಿಸುವೆವೆಂದು ಅಮೇರಿಕನರ ವಿಶ್ವಾಸ

● ಸಿಸಿಲಿ, ಸಾರ್ಡಿನಿಯಾ ಮೊದಲಾದ ದ್ವೀಪಗಳ ಮೇಲೂ ಇಟಲಿಯ ಮೇಲೂ ಮಿತ್ರರ ಬಲವಾದ ವಿಮಾನ ಧಾಳಿ ನಡೆದಿದೆ.

ಸುದ್ದಿ ಸೂಚನೆ

● ಜರ್ಮನಿಯ ಮೇಲಿನ ಮಿತ್ರರ ವಿಮಾನ ಧಾಳಿಗಳು ನಿಷ್ಪ್ರಯೋಜಕ ಹಾಗೂ ಅನಾಗರಿಕ ವರ್ತನೆಗಳೆಂದು ಸ್ಪೈನ್ ಪತ್ರಿಕೆಗಳು ಟೀಕಿಸಿವೆ.

● ಲಂಡನಿನಲ್ಲಿ ಭಾರತ ಸ್ವಾತಂತ್ರ್ಯ ಪ್ರದರ್ಶನಗಳಾಗುತ್ತಿವೆ. ಅಂತಹ ಒಂದು ಮೆರವಣಿಗೆಯನ್ನು ಪೋಲಿಸರು ತಡೆದರು.

● ಈ ಮೊದಲು 55 ಬಾರಿ ಆಕಾಶ ಧಾಳಿಗೊಳಗಾಗಿದ್ದ ಜರ್ಮನಿಯ ಪ್ರಸಿದ್ಧ ಯುದ್ಧ ಕಾರ್ಖಾನೆಗಳಿರುವ ಎಸ್ಸಾನಿನ ಮೇಲೆ ಕಳೆದ ವಾರವೂ ಮಿತ್ರರ ಬಲವಾದ ಧಾಳಿ ನಡೆದಿದೆ.

● ಕಳೆದ ತಾ 28ರಲ್ಲಿ ವೀರ ಸಾವರ್ಕರರ 61ನೇ ಜನ್ಮ ದಿನವು ದೇಶದ ಹಲವು ಕಡೆಗಳಲ್ಲಿ ಆಚರಿಸಲ್ಪಟ್ಟಿದೆ.

● ನವಶಿಲ್ಪಿಯ ಯುದ್ಧ ಖಾತೆಯ ಕಾರ್ಖಾನೆಯಕ್ಕೆ ಬೆಂಕಿ ಬಿದ್ದು ಹಲವು ಪ್ರಮುಖ್ಯ ರಿಕಾರ್ಡು, ಉಪಕರಣಗಳಿದ್ದ ಪೆಟ್ಟಿಗೆಗಳು ಸುಟ್ಟು ಹೋದವು.

● ಎರಡು ವಾರಗಳ ಮಾತುಕತೆಗಳ ಪರಿಣಾಮವಾಗಿ, ಎಲ್ಲಾ ರಣರಂಗಗಳ ಭಾವೀ ಚಾಲನೆಯ ಕುರಿತು ಚರ್ಚಿಲ್-ರುಸವೆಲ್ಟರು ಸಂಪೂರ್ಣ ಸಮ್ಮತಿಯ ಯೋಜನೆ ತಯಾರಿಸಿದ್ದಾರೆಂದು ರುಸವೆಲ್ಟರ ಕಾರ್ಯದರ್ಶಿಯು ಪ್ರಕಟಿಸಿದ್ದಾರೆ.

● ಸೈಬೇರಿಯದ ವಿಮಾನ ನಿಲ್ದಾಣಗಳನ್ನು ಅಮೇರಿಕಾನರಿಗೆ ಉಪಯೋಗಿಸಲು ಬಿಟ್ಟರೆ ರಶ್ಯದ ಮೇಲೆ ಚಿರಸ್ಮರಣೀಯ ಧಾಳಿ ಮಾಡುವೆವೆಂದು ಜಾಪಾನರು ಬೆದರಿಕೆ ಹಾಕಿದ್ದಾರೆ.

● ಸದ್ಯದಲ್ಲೇ ಚರ್ಚಿಲ್, ರುಸವೆಲ್ಟ್, ಸ್ಟಾಲಿನ್, ಚಿಯಾಂಗರ ಸಮ್ಮೇಲನವು ನಡೆಯುವದೆಂದೂ ಪ್ರಾಯಶಃ ಮೋಸ್ಕೋವೇ ಕೂಟಸ್ಥಾನವಾಗುವದೆಂದೂ ತಿಳಿದುಬರುತ್ತದೆ.

○ ಜಾಪಾನರು ನ್ಯೂಗಿನಿಯಾದ ಬಳಿ ಬಹು ಸಂಖ್ಯೆಯ ವಿಮಾನಗಳನ್ನೂ 250000 ಸೈನಿಕರನ್ನೂ ಜಮಾಯಿಸಿದ್ದಾರೆ.

○ ಬೊಂಬಾಯಿಯಲ್ಲಿ ಸೇರಿದ ಕಮ್ಯೂನಿಸ್ಟ ಪಕ್ಷದ ಪ್ರಥಮ ಪರಿಷತ್ತಿನಲ್ಲಿ ರಾಷ್ಟ್ರೀಯ ಸರಕಾರದ ಸ್ಥಾಪನೆಯಾಗಬೇಕೆಂದೂ ಅದಕ್ಕಾಗಿ ದೇಶದಲ್ಲೆಲ್ಲಾ ಪ್ರಚಾರ ಕಾರ್ಯ ಕೈಕೊಳ್ಳಬೇಕೆಂದೂ ನಿರ್ಧಾರವಾಗಿದೆ.

ಬಾಲ ಸಾಹಿತ್ಯ ಮಂಡಲ, ಲಿಮಿಟೆಡ್.

ದಿವಂಗತ ಶ್ರೀ ಉಳ್ಳಾಲ ಮಂಗೇಶರಾವ್ ಬಿ. ಎ., ಎಲ್. ಟಿ. ಅವರಿಂದ ರಚಿತವಾದ ನಮ್ಮ "ಹೊಸಗನ್ನಡದ ೧ರಿಂದ ೫ರ ವರೆಗಿನ ರೀಡರು"ಗಳು ಇದೇ ಜೂನಿನ ಪ್ರಥಮ ವಾರದಲ್ಲೇ ಸಿದ್ಧವಾಗುವವು. ಅವುಗಳಿಗೆ ಬೆಲೆ ಮತ್ತು ಅವುಗಳ ಮೇಲಿನ ಕಮಿಶನಿನ ದರಗಳು ಕಾಲಕ್ಕೆ ತಕ್ಕಂತೆ ಹೊಂದಿಸಲ್ಪಟ್ಟು ಆಗಲೇ ಪ್ರಕಟಗೊಳ್ಳುವವು.

Bala Sahitya Mandal, Ltd.

ತಾ. **3—6—43**ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಸಿಸ್ಟರ್ (ಸಹೋದರಿ)

ಚಿತ್ರ ಪ್ರಪಂಚದಲ್ಲೊಂದು ಅದ್ಭುತ ವ್ಯಾಘ್ರ

ಶೇಕ್ ಮುಕ್ತಾರ್, ಆಜಾನುಬಾಹು, ಅಸಾಧಾರಣ ಎತ್ತರ, ಇವನೊಂದಿಗೆ ನಳಿನಿ ಜಯಂತ್, ಹರೀಶ್, ಮೊದಲಾದವರು.

ಬರುವಚಿತ್ರ:— **ವಾಡಿಯಾದ ವಿಜಯ ಕುಮಾರ್, ಗ್ರೇಟ್ ಇಂಡಿಯಾದ ಅಕೇಲಾ.**

ಹೊಸಧಾಳಿ?

ಜರ್ಮನರ ಅತಿ ಭೀಕರ ಧಾಳಿಯನ್ನಿದಿರಿಸಲು ಸಿದ್ಧರಿರಬೇಕೆಂದು 'ರೆಡ್‌ಸ್ಟಾರ್' ಮೊದಲಾದ ರಶ್ಯನ್ ಪತ್ರಿಕೆಗಳು ಎಚ್ಚರಿಸಿವೆ. ಈ ವಾರದಲ್ಲಿ ಅಲ್ಲಿಯ ಯುದ್ಧರಂಗದಲ್ಲಿ ಗಣನೀಯ ಬದಲಾವಣೆಯಿಲ್ಲ. ಆದರೆ ರಶ್ಯಾದ ಬಲವಾದ ವಿಮಾನ ಪಡೆಗಳನ್ನು ಮುಂದೆಹಾಕಿ, ಎಲ್ಲಾ ಮುಂಭಾಗಗಳಲ್ಲೂ ಆಕಾಶ ಕಾಳಗಗಳು ನಡೆಯುತ್ತಿರುವುದರಿಂದ ರಶ್ಯಾನರ ನೂತನ ಧಾಳಿಯ ಮುಂಗುರುತಿದು ಎಂದು ಊಹಿಸಲಾಗಿದೆ. ಕಾಮಿಂಟರ್ನ್ ರದ್ದತಿ ಮತ್ತು ಸ್ಟಾಲಿನರ ಆಶ್ವಾಸನೆಯಿಂದ ಇಂಗ್ಲಾಂಡು, ಅಮೇರಿಕಾ, ಚೀನಾಗಳು ಪೂರ್ಣ ತೃಪ್ತಿಗೊಂಡು ಸಂಬಂಧವು ಬಹಳವಾಗಿ ಸುಧಾರಿಸಿದೆ.

○ ಬಿಗೋಲೆಯವರು ಅಲ್ಜೀರ್ಸಿಗೆ ಬಂದು ಜಿರಾಡರೊಡನೆ ಒಪ್ಪಂದದ ಮಾತುಕತೆಯಾರಂಭವಾಗಿದೆ.

ನೋಟೀಸು

ಮಂಗಳೂರು ಡಿ. ಮು. ಕೋರ್ಟಿನಲ್ಲಿ

ಕ್ರಮ ಅಪ್ಲಿಕ್ಯಾಶ ನಂಬ್ರ 8/1943

ಕ್ರ.ನ. ನಂಬ್ರ 38/1941

ಬಿ| ಕಲ್ಯಾಣಿ ಬಾ, ವಕೀಲ್ ಬೋಳ ನಾಗೇಶರಾಯರ ಪತ್ನಿ, ಮಂಗಳೂರು ಕ್ಯಾಪುರಿನಲ್ಲಿರುವವರು—ಅರ್ಜಿದಾರ, ವಾದಿಳು.

1 ಬರ್ಜಿತ್ ಸೋಜಾ ಬಾ, ಸಜೊಸ್ತ್ಯಾಂ ಡಿ| ಸೋಜರ ವಿಧವೆ. 2 ಜೋಸೆಫ್ ಡಿ ಸೋಜಾ, ಸಜೊಸ್ತ್ಯಾಂ ಡಿ| ಸೋಜರ ಮಗ—ಮಂಗಳೂರು ತಾಲ್ಲೂಕು ಪಡುಕೋಡಿ ಗ್ರಾಮದಲ್ಲಿರುವಂತವರು —1, 3ನೇ ರೆಸ್ಪಾಂಡೆಂಟ್ಸು.

ಸದ್ರಿ 1, 3ನೇ ರೆಸ್ಪಾಂಡೆಂಟ ಪ್ರತಿವಾದಿಗೆ

ನಿಮ್ಮ ಬಾಬ್ತು ಡಿಕ್ರಿಯಲ್ಲಿ ದವಾಬ್ದಾರಿಯಿರುವ ಸ್ಥಿರಾಸ್ತಿಗಳನ್ನು ಯೇಲಂ ಮಾಡುವರೇ ಮೇಲ್ಕಂಡ ಅಪ್ಲಿಕ್ಯಾಶಿಯಲ್ಲಿ ಹಾಜರುಪಡಿಸಿದ ಯೇಲಂ ಇಸ್ತಿಹಾರಿನ ಶರ್ತಗಳನ್ನು ಮತ್ತು ಆಸ್ತಿಗಳ ಬಾಜಾರ ಕ್ರಯವನ್ನು ನಿಶ್ಚಯಿಸುವರೇ ಮೇಲ್ಕಂಡ ಅರ್ಜಿಯು ತಾ. 10-6-1943ಕ್ಕೆ ಇಟ್ಟಿರುತ್ತದೆ. ಆದ್ದರಿಂದ ಮೇಲ್ಕಂಡ ಅಪ್ಲಿಕ್ಯಾಶಿಯಲ್ಲಿ ಹಾಜರುಪಡಿಸಿದ ಯೇಲಂ ಇಸ್ತಿಹಾರಿನ ಶರ್ತ ಬಾಜಾರ ಕ್ರಯ ವಗೈರೆಗೆ ನಿಮಗೇನಾದ್ರೂ ಆಕ್ಷೇಪಣೆ ಇದ್ದರೆ ತಾ. 10-6-1943ಕ್ಕೆ ಹಗಲು ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ವ್ಯವಹರಿಸತಕ್ಕದ್ದು. ಇದಕ್ಕೆ ತಪ್ಪಿದ್ರೆ ಕೋರ್ಟಿನವರಿಗೆ ಯುಕ್ತಕಾಣುವಂತೆ ತೀರ್ಮಾನಿಸಲಾಧೀತು ಯಂತ ಯಿದ ಮೂಲಕ ತಿಳಿಸೋಣಾಗಿಯದೆ.

M. Janardan Malya,
Vakil for Petitioner

Mangalore, 27-5-1943.

BHUVANENDRA PRODUCTS Ltd.,

Head Office and Factory:
Katapadi, S. Kanara

Depots:
1 Mahratha Galli, Hubli
2. 57 Big street, Triplicane Madras.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ ಫಾರ್ಮಸಿ; ಡಾ. ಕೆ ಶೇಷಗಿರಿ ಪೈ, L. I. M.; ಡಾ. ವೆಂಕಟ ರಾವ್, ಕೊರಡ.ಲ್: ವಿಜಯಾ ಹೊ..ಲ್

ದಕ್ಷಿಣ ಕನ್ನಡ.

ಮಂಗಳೂರು.

ಜಿಲ್ಲಾ ಬೋರ್ಡಿನ:—ವಿಶೇಷ ಸಭೆಯೊಂದು ಜೂನ್ ತಾ. ೧೧ನೇ ಶುಕ್ರವಾರ ಡಿ. ಬೋ. ಆಫೀಸಿನಲ್ಲಿ ಜರಗಲಿರುವುದು. ಡಾ| ಪಿ. ಎಲ್. ಶೆಟ್ಟರ ಮರಣದಿಂದ ಖಾಲಿ ಬಿದ್ದ ಜಿ. ಬೋ. ಅಧ್ಯಕ್ಷರ ಸ್ಥಾನಕ್ಕೆ ಚುನಾವಣೆಯು ಅಂದು ಜರಗಲಿದೆ.

ಮಂಗಳೂರು ಡಿ. ಕಲೆಕ್ಟರರಾಗಿದ್ದ ಶ್ರೀ. ಜೂಗಪ್ಪನವರು ರಜೆಯ ಮೇಲಿರುವ ಪ್ರಯುಕ್ತ ಅವರ ಸ್ಥಾನಕ್ಕೆ ಶ್ರೀ|ಪಿ. ವಿ. ಮಾಧವರಾಯರನ್ನು ನೇಮಿಸಲಾಗಿದೆ.

ಶ್ರೀ| ಸಿ. ಶಂಕರರಾವ್ ಮೆನೇಜನ್ ಬಿ. ಎ. ಬಿ. ಎಲ್. ಇವರು ದ. ಕ. ಜಿಲ್ಲಾ ಎಡಿಶನಲ್ ಸಬ್ ಜಡ್ಜರಾಗಿ ನಿಯಮಿಸಲ್ಪಟ್ಟಿದ್ದಾರೆ.

ಕಾರ್ಕಳದ ತಹಶೀಲ್ದಾರರಾದ ಮಿ| ಸೊಲೊಮನ್ ಜೇಕಬ್ ಅವರು ಮಂಗಳೂರಿಗೆ ವರ್ಗಾಯಿಸಲ್ಪಟ್ಟು ಆಹಾರ ಸಾಮಗ್ರಿಗಳ ಸ್ಟೆಟಿಸ್ಟಿಕಲ್ ಅಸಿಸ್ಟೆಂಟರಾಗಿ ನೇಮಿಸಲ್ಪಟ್ಟಿರುವರು.

ಇಲ್ಲಿಯ ಪೋಲೀಸ್ ಡಿ. ಸುಪರಿಂಟೆಂಡೆಂಟರಾಗಿ ಶ್ರೀ| ಶೃಂಗಾರವೇಲು ಅವರು ನೇಮಿಸಲ್ಪಟ್ಟಿದ್ದಾರೆ.

ಉಡುಪಿ.

ತಿದ್ದುಪಡಿ—ಕಳೆದ ಸಂಚಿಕೆಯಲ್ಲಿ ಶ್ರೀ ಕೃಷ್ಣಮಠದ ಭೋಜನ ಶಾಲೆಯ ಉಪ್ಪರಿಗೆಯಲ್ಲಿ ಶ್ರೀ|ಪಿ| ಸೀತಾರಾಮಾಚಾರ್ಯರ ಭಾಷಣವು ಶ್ರೀ|ಕೃಷ್ಣಾಪುರ ಸ್ವಾಮಿಗಳವರ ನೇತೃತ್ವದಲ್ಲಿ ಶ್ರೀ| ಸೋದೆ ಸ್ವಾಮಿಗಳವರ ಉದಾರಾಶ್ರಯದಲ್ಲಿ ನಡೆಯಿತೆಂಬುದನ್ನು ಶ್ರೀ|ಕೃಷ್ಣಾಪುರ ಸ್ವಾಮಿಗಳವರ ನೇತೃತ್ವದಲ್ಲಿ ಇತರ ಸ್ವಾಮಿಗಳವರ ಸನ್ನಿಧಿಯಲ್ಲಿ ಎಂದು ತಿದ್ದಿಕೊಳ್ಳಬೇಕಾಗಿದೆ. ಸಂ. ನ.

ಈಗಿನ ಪರ್ಯಾಯ ಪೀಠಾರೂಢರಾದ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರು ತಾ. 27-5-43ರಲ್ಲಿ ಬಡಬಗ್ಗರಿಗೆ ಹಂಚುವ ಬಗ್ಗೆ ಉಡುಪಿ ಫ್ರೀ ರಿಲೀಫ್ ಫಂಡಿಗೆ 10 ಮುಡಿ ಅಕ್ಕಿ ದಾನ ಮಾಡುವವರಾಗಿ ತಿಳಿದು ಬರುತ್ತದೆ.

ಬ್ರಹ್ಮಾವರ-ಕುಪ್ಪಗೋಡು ಬೋರ್ಡ್ ಎಲಿಮೆಂಟರಿ ಶಾಲೆಯ ಹತ್ತನೆ ಸಂಘದ ವಾರ್ಷಿಕೋತ್ಸವವು ತಾ. 15-5-43ರಲ್ಲಿ ಶ್ರೀ| ಯಮಕೃಷ್ಣಯ್ಯ ಶೆಟ್ಟಿ, ಎಡ್ವೊಕೇಟ್, ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಶಾಲಾ ಮಕ್ಕಳಿಂದ ಯಕ್ಷಗಾನ ಚೂಡಾಮಣಿ, ಸತ್ಯಹರಿಶ್ಚಂದ್ರ ಪಟನೃ ಇತರ ವಿನೋದಾವಳಿಗಳು ಅಭಿನಯಿಸಲ್ಪಟ್ಟವು.

ಬಾರಕೂರು:—ಬಾರಕೂರು ಹಾಳೆಕೋಡಿ ಎಲಿಮೆಂಟರಿ ಶಾಲಾ ಮಕ್ಕಳ ಹೆತ್ತವರ ಕೂಟದ ಮಹಾ ಸಭೆಯು ತಾ. 29-5-4'3ರಲ್ಲಿ ಡಾಕ್ಟರ್ A. S Hebbar (L. M. & S,) ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರರಿಂದ ವರದಿ ವಾಚನವಾದ ಬಳಿಕ ಮಕ್ಕಳ ವಿವಿಧ ವಿನೋದಾವಳಿಗಳೂ, ಬೆಸ್ಟ್ ಕುದ್ರು ಶಾಲಾ ಮಕ್ಕಳ ಸರ್ಕಸ್ ಪ್ರದರ್ಶನವೂ, ಜರಗಿದ ಬಳಿಕ ನೆರೆದ ಅಧ್ಯ ಮಹನೀಯರಲ್ಲಿ ಈ ಕೆಲವರು ಶಾಲಾ ಏಳಿಗೆಯು ಹಾಗೂ ಮಕ್ಕಳ ಚಟುವಟಿಕೆಗಳ ಕುರಿತು ಭಾಷಣವನ್ನಿತ್ತರು. ಆ ಬಳಿಕ ಶಾಲಾ ಮಕ್ಕಳಿಂದ ರಾಜ್ಯತ್ಯಾಗ ಎಂಬ ಏಕಾಂಕ ನಾಟಕವು ಪ್ರದರ್ಶಿಸಲ್ಪಟ್ಟಿತು.

ಅಜ್ಜರಡ:—ಇಲ್ಲಿಯ ಬೋರ್ಡ್ ಹುಡುಗಿಯರ ಶಾಲೆಯಲ್ಲಿ ಡಾ| ಕೆ. ವಿಠ್ಠಲ ಶೆಟ್ಟರ ನಿಧನಕ್ಕಾಗಿ ದುಃಖಸೂಚಕ ಸಭೆಯೊಂದು ಶ್ರೀ| ಕೆ. ಜನಾರ್ದನಾಚಾರ್ಯರ ಅಧ್ಯಕ್ಷತೆಯಲ್ಲಿ ಸೇರಿ, ಶ್ರೀ ಕೆ. ಸೀತಾರಾಮ ಧೋರಬೆಟ್ಟಿಗರೇ ಮೊದಲಾದವರು ದಿವಂಗತರ ಗುಣಕಥನವಾದ ಭಾಷಣವಿತ್ತ ಮೇಲೆ ದುಃಖಸೂಚಕ ರಂಜಾಯಿತು.

'ಮಿತ ಸಂತತಿ' (ಮಕ್ಕಳಾಗದಂತೆ ಔಷಧ)
ಒಬ್ಬಳಿಗೆ 3 ತಿಂಗಳ ಸಂಪೂರ್ಣ ಚಿಕಿತ್ಸೆಗೆ
ರೂ. 4—0—0 (ಟ. ಖ. ಸೇರಿ 4-8-0)
ಸೇವನಾ ಕ್ರಮ ಔಷಧಿಯೊಂದಿಗೆ.
ಸಿಗುವ ಸ್ಥಳ: ವಿಜಯಾ ಸ್ಟೋರ್ಸ್, ಉಡುಪಿ. ಡಾ| V. R. ಕೊಡಕ್ಕಲ್, ಉಡುಪಿ; ಪಾಪುಕ್ಕು ಕಂಪೆನಿ ಹಂಪನಕಟ್ಟೆ, ಮಂಗಳೂರು,
ಪ್ರೊಪ್ರೈಟರ್:- ಕುಕ್ಕುಂದೂರು. P.O.

ಚೂರುಚೂರು

'ಹಿಂದೀ ಸರಕಾರದ ಪ್ರಕಟಣೆಯಲ್ಲಿ, ಕಾಂಗ್ರೆಸು ಜಾಪಾನೀ ಪಕ್ಷಪಾತಿಯೆಂಬ ಆರೋಪ ಬಂದಿಲ್ಲ' ಪಾರ್ಲಿಮೆಂಟಿನಲ್ಲಿ ಮಿ. ಸೋರೆನ್ಸನರ ಪ್ರಶ್ನೆಯೊಂದಕ್ಕೆ ಮಿ. ಅಮೆರಿಯವರ ಉತ್ತರ.

ಅದನ್ನೂ ಸೇರಿಸಿ ಹಿಂದೀ ಸರಕಾರವು ಇನ್ನೊಂದು ಪ್ರಬಂಧ ಬರೆಯುವದೆಂದು ನಾವು ನಿರೀಕ್ಷಿಸಬಹುದೆ?

o

'ನಾನು ಯುದ್ಧ ಮುಗಿಯೆ ವಿರೋಧಿಗಳ ಪತನವನ್ನು ಹಾರೈಸುತ್ತಿದ್ದೇನೆ ಹೊರತು ಒಳಗೊಂದಲದಿಂದ ವೈರಿಗಳು ಸೋಲುವ ನಿರೀಕ್ಷೆಯಲ್ಲಿಲ್ಲ' ವಾಶಿಂಗ್ಟನಿನಲ್ಲಿ ಚರ್ಚಿಲ್ಲರ ಮಾತು.

ಹಾಗಾದರೆ 'ಇಟಲಿ ರಾಜರ ಕಿರೀಟವಲುಗುತ್ತಿದೆ' 'ನೋರ್ವೆಯೊಳಗೆ ಕ್ರಾಂತಿಯೆದ್ದಿದೆ'-ಇತ್ಯಾದಿ ವಾರ್ತೆಗಳನ್ನು ಹರಡಿಸಿದವರು ಯುದ್ಧ ಗೆದ್ದಂತಾಗಲಿಲ್ಲವೆ?

o

'ಹಿಂದೀಯರೊಳಗಿನ ಒಪ್ಪಂದಕ್ಕೆ ಮಾನ್ಯತೆಯೀಯಲು ಬ್ರಿಟಿಷ್ ಸರಕಾರವು ಸದಾ ಸಂತೋಷಿಸುತ್ತದೆ-ಎಂಬ ವಾಗ್ದಾನದಿಂದ ಹಿಂಜರಿಯುವ ಪ್ರಮಾದವನ್ನು ಸರಕಾರವು ಮಾಡುತ್ತಿರಬಹುದೆ?'—ಗಾಂಧಿಜೀಯ ಪತ್ರವನ್ನು ಮಿ. ಜಿನ್ನರಿಗೊಪ್ಪಿಸಲು ನಿರಾಕರಿಸಿದ ಕುರಿತು ಲಂಡನಿನ 'ಟೈಮ್ಸ್' ಪತ್ರಿಕೆಯ ಪ್ರಶ್ನೆ.

ಈ ವಾಗ್ದಾನವೆಂದರೆ ಬರ್ಮಾ ರಣರಂಗವಲ್ಲವಾದ್ದರಿಂದ, ಹಿಂಜರಿದರೂ ಬ್ರಿಟಿಷ್ ಸಾಮ್ರಾಜ್ಯಕ್ಕೇನೂ ಬಾಧೆಯಿಲ್ಲ.

o

ರೂಸವೆಲ್ಟರಿಂದ ಮೊಹರುಸಿತ ಗುಪ್ತ ಪತ್ರವನ್ನು ತಂದ ಮಿ. ಡೇವೀಸರ ಕೈಯಲ್ಲಿ ಸ್ಟಾಲಿನರೂ ಮೊಹರು ಸಿತ ಗುಪ್ತ ಪತ್ರವೊಂದನ್ನು ರೂಸವೆಲ್ಟರಿಗೊಪ್ಪಿಸಿದ್ದಾರೆ.

ಇನ್ನವುಗಳು ಪ್ರಕಟಣೆಗೆ ದೊರೆತಾಗ ಈ ಪತ್ರ ವ್ಯವಹಾರಗಳಿಗೆ ನ್ಯಾಯವಾಗಿ ಇಡಲಿರುವ ಹೆಸರು-'ರೂಸವೆಲ್ಟ್-ಸ್ಟಾಲಿನ್ ಪ್ರಣಯ ಪತ್ರಗಳು'.

o

'ಇಟಲಿಯ ಆಕ್ರಮಣವು ಜಯಶೀಲವಾಗಬಹುದೆಂಬ ಭೀತಿಯಿಂದ ಹಿಟ್ಲರನು ಅಲ್ಲಿಯ ಆಸ್ಪತ್ರೆಗಳಲ್ಲಿದ್ದ ಜಖಂಗೊಂಡ ಜರ್ಮನ್ ಯೋಧರನ್ನೆಲ್ಲಾ ಆಸ್ಟ್ರಿಯಕ್ಕೆ ಸಾಗಿಸಿದ್ದಾನೆ'— ಸ್ಟೋಕ್‌ಹೋಮಿನಿಂದ ವರದಿ.

ಭೇಷ್! ಹಿಟ್ಲರನು ಖಾಲಿ ಮಾಡಿದ ಆ ಸ್ಥಳಗಳನ್ನು ಬ್ರಿಟಿಷರಾಕ್ರಮಿಸಿಕೊಳ್ಳಲಿದ್ದಾರೆ!!

o

'ಗಾಂಧಿಯವರು ಬರೆದ ಪತ್ರವು ನಾನು ಯಾಚಿಸಿದಂತಹದಲ್ಲ; ನಾನು ಯಾಚಿಸಿದುದು ಪಾಕಿಸ್ತಾನವನ್ನಾಧರಿಸಿ ಗಾಂಧಿಯವರು ನನಗೆ ಬರೆಯಬೇಕೆಂದು. ಅಂತಹ ಪತ್ರವನ್ನು ತಡೆಯುವ ಧೈರ್ಯ ಈಗ ಕೂಡಾ ಸರಕಾರಕ್ಕಿಲ್ಲ'— ತನ್ನ ವಿಳಾಸದ ಪತ್ರ ತನಗೆ ಬಾರದಿದ್ದುದನ್ನು ಕಂಡು ಜಿನ್ನರ ಮಾತು.

ಪ್ರಾಯಶಃ ಮುಂದಿನ ವೈಸರಾಯರಿಗೆ ಜಿನ್ನರ ವಿಳಾಸ ಮತ್ತು ವಿಚಾರವನ್ನರಿತು ಕಾಗದ ಬಟವಾಡೆ ಮಾಡುವ ತರಬೇತಿ ಯೀಗ ಲಂಡನಿನಲ್ಲಿ ದೊರೆಯುತ್ತಿರಬಹುದು!

ವಿನೋದ

An Appeal to your Reason.

It is not the one who goes-it is those who are left behind who suffer. Why leave them to their fate? Why leave them to adjust their Whole lives to a reduced level because YOU lived "for the day?" Safeguard those who are near and dear to you by insuring with a Company, which is "YOUR OWN".

INSURE that YOUR children may be equipped to take their rightful places in the world.

INSURE that YOUR wife shall not be destitute, by your loss, in a manner you never meant her to be.

Above all, make sure that in your old age you are adequately provided for.

REMEMBER

THERE IS INSURANCE FOR ALL EVENTUALITIES AND POLICIES ISSUED TO SUIT ALL POCKETS. INSURE TODAY WITH

THE INDO-UNION ASSURANCE Co. Ltd., MADRAS.

PLEASE ASK FOR DETAILS FROM

M. Sunderram Shetty,
Branch Manager,
Behramji Mansion,
Phirozshah Metha Road,
Fort BOMBAY.

OR

K. S Ramamurthi, M. A.,
General manager,
MADRAS.

OR

Our following organisers in South Kanara.

1. **A. Karunakara Hegde,**
Sudarshan Tile Works,
Bolar, MANGALORE.

2. **T. P. N, Nambiar,**
Main Road,
MULKI.

3. **K Jagannath Shetty,**
Near Mission Hospital, UDIPI.

4. **K. Sanjiva Hegde,**
COONDAPOOR

The Pangal Nayak Bank Limited.
ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.
(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)
ಮುಖ್ಯ ಕಾರ್ಯಾಲಯ:— ಕೋರ್ಟು ರಸ್ತೆ, ಉಡುಪಿ, ದಕ್ಷಿಣ ಕನ್ನಡ.
ಶಾಖೆಗಳು:— ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಕಿನ್ನಿಗೋಳಿ.
ಮುಸುಂ ಠೇವಣಿಗಳು ತಾ. 31-7-1943 ಅಥವಾ ಈ ತಾರೀಕಿನ ಮೊದಲು ಮ್ಯಾದೆಯಾಗುವುದಾದರೆ ಅಂಥಾ ಮ್ಯಾದೆಯ ವರೆಗೆ ಸಾಲಿಯಾನ ಶೇಕಡಾ 3ರ ಬಡ್ಡಿಯಲ್ಲಿ 3, 4, 5 ಅಥವಾ 6 ತಿಂಗಳ ಮ್ಯಾದೆಯಿಂದ ಪ್ರತಿಯೊಂದು ರಾಶಿಯಲ್ಲಿ ಅಂಗೀಕರಿಸಲ್ಪಡುತ್ತವೆ.
ಬೇಂಕಿನ ಪ್ರತಿಯೊಂದು ವಿಧದ ವಹಿವಾಟುಗಳು ನಡೆಸಲ್ಪಡುತ್ತವೆ.
ಹೆಚ್ಚಿನ ಮಾಹಿತಿಗೆ ಮೌಖಿಕ ಅಥವಾ ಪತ್ರದ್ವಾರಾ ಸಮೀಪದ ಶಾಖೆಯಲ್ಲಿ ದಯವಿಟ್ಟು ವಿಚಾರಿಸಿರಿ

ಅಮೃತಾಂಜನ
ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, **ಹಲ್ಲು** ನೋವುಗಳಿ**ಗೂ** ಎದೆನೋವು, ಗಾಯಗಳು ಬಾವು ಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.
REGD.
ಹುಳಿ ಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಬೊಂಬಾಯಿ, ಮದ್ರಾಸು, ಕಲ್ಕತ್ತ.

P. M. Kunhi Raman, Manager,
Parassini Madappura Temple,
P. O Parassinikkatavu
(Via) Pappinisseri.
ಇದರಿಂದ **ಸಮಸ್ತ ಜನರಿಗೆ ತಿಳಿಯ ಪಡಿಸುವುದೇನೆಂದರೆ-**
ಪರಸಿನಿ ಕಡವು **ದೇವಸ್ಥಾನದಿಂದ ಈ ಮೂಲಕ ಮಾಡುವ ಬಿನ್ನಹ.**
ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.
ಪಿ. ಯಂ. ಕುನ್ಹಿರಾಮನ್,
ಮೆನೇಜರ್.

ನವಯುಗದ ಹೊಸ ಚಂದಾದರ

ಕಾಗದದ ಅಭಾವ ಹಾಗೂ ಸರಕಾರದ ಹೊಸ ಆಜ್ಞೆ ಯಂತೆ ಇದೇ ಎಪ್ರಿಲ್ ತಾ. 1ರಿಂದ ನವಯುಗದ ಬಿಡಿ ಸಂಚಿಕೆಯ ಬೆಲೆಯನ್ನು 0-1-6ಗೆ ಏರಿಸಲಾಗಿದೆ. ಜಾಹೀರಾತಿನ ದರವನ್ನು ಹೆಚ್ಚಿಸಲಾಗುವುದು. ವಾರ್ಷಿಕ ಚಂದಾ ದರವನ್ನು ಈ ಕೆಳಗಿನಂತೆ ಗೊತ್ತು ಮಾಡಲಾಗಿದೆ. ಈಗಿದ್ದ ಚಂದಾದಾರರಿಗೆ ಮಾರ್ಚಿ ಅಂತ್ಯದ ವರೆಗೆ ಮೊದಲಿನಂತೆ ಚಂದಾ ದರ ಹಿಡಿದು ಉಳಿದ ಹಣದಲ್ಲಿ ಹೊಸ ದರದಂತೆ ಎಷ್ಟು ಸಮಯ ಕಳಿಸಬಹುದೋ ಅಷ್ಟು ಅವಧಿಯ ವರೆಗೆ ಪತ್ರಿಕೆ ಕಳಿಸಲಾಗುವುದು. ಚಂದಾ ಬಾಕಿ ಇರುವವರು ಮಾರ್ಚ್ ತನಕ ಮೊದಲಿನ ದರದಂತೆಯೂ ಅನಂತರ ಹೊಸ ದರದಂತೆಯೂ ಚಂದಾ ಹಣ ಕಳಿಸುವಂತೆ ವಿನಂತಿ

ಹೊಸ ಚಂದಾದರ

	ಸ್ಥಳೀಕರಿಗೆ	ಪರಸ್ಥಳೀಕರಿಗೆ ಅಂಚೆ ವೆಚ್ಚ ಸೇರಿ
1 ವರ್ಷಕ್ಕೆ ರೂ	3-12-0	4-8-0
6 ತಿಂಗಳಿಗೆ ರೂ.	2-0-0	2-8-0

ಎಂದಿನಂತೆ ವಾಚಕರೂ ಜಾಹೀರಾತುದಾರರೂ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.
ಮೆನೇಜರ್.

— ಮಕ್ಕಳನ್ನು ಹಡೆಯುವದು ಸಾಕು.—
ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ
ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ 1 ಗುಳಿಗೆ, ಮಧ್ಯಾಹ್ನಕ್ಕೆ 1 ಗುಳಿಗೆ, ಸಂಜೆಗೆ 1 ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.
ಪಥ್ಯ:— ಹರದೇಶದಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಷ್ಟ ಚಾರ್ಜು ನಿರಾಳ.
ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.
ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.
ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕವಳದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

The Moolky Bank, Ltd.,
MOOLKY, S. K.
ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.
(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)
ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲರ ಸಹಕಾರ ಅಪೇಕ್ಷಿಸುವುದು.
M. R. Punja, President & Manager
ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ** ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.
೬ ಔನ್ಸಿನ ೨ ಬಾಟ್ಲಿಗಳು ಹೆಚ್ಚುಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ.ಕ.**

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸದೊರೆಯ ಬೇಕೋ?
ಸುಖನಿವಾಸಕ್ಕೆ ಬನ್ನಿ!
ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,
ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.
ಸುಖನಿವಾಸ
ಪ್ರವಾಸಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.
ಉಡುಪಿ. : : : : ಮಂಗಳೂರು.



ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಮಂಜೆ ನ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಸ್ಥಾಪನೆ **ಕ್ರೌನ ರಬ್ಬರ್ ಸ್ಟಾಂಪ್ ಕಂಪೆನಿ** 1926
18 ಬಲ್ಮಠ ರಸ್ತೆ, ಮಂಗಳೂರು.
ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.
Crown Rubber Stamp Co. 18 Balmat Road, MANGALORE.
Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No.M. 3618.

Ested. 1921 ಸ್ಥಾಪನೆ.

NAVAYUGA
ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೩
ಸಂಚಿಕೆ ೩೭

FOUNDER
Sri. A. B. Shetty, M. L. A.

Vol. 23
No. 37

NAVAYUGA— Kannada Weekly —UDIPI, S. I.

ಉಡುಪಿ • 10—6—1943 • ಮಂಗಳೂರು.

ಹೊಸಕೆರೆ ಚಿದಂಬರಯ್ಯನವ
ರಿಂದ ರಚಿತವಾದ ಗೀತೆಯ
ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು ೩೪೦ ಪುಟಗಳು.

ಬೆಲೆ (ಸುಂದರ ಪ್ರತಿ). ೦—೮—೦
(ಕೆಲಿಕೋ ಬೈಂಡ್) ೦—೧೨—೦
(ಲೆದರ್ ಬೈಂಡ್) ೧—೪—೦

ಪ್ರತಿಗಳು ಪ್ರಸಿದ್ಧ ವ್ಯಾಪಾರಿಗಳಲ್ಲಿ ಸಿಗುವುದು.
0-10—0 ಸ್ಟಾಂಪು ಕಳಿಸಿದ್ದಲ್ಲಿ ಒಂದು
ಪ್ರತಿಯನ್ನು ಬುಕ್‌ಪೋಸ್ಟ್
ಮಾಡಲಾಗುತ್ತೆ.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಶ್ರೀಮತಿ ಶಿವರಾಣಿ ದೇವಿಯವರಿಂದ
(ದಿವಂಗತ ಪ್ರೇಮಚಂದರ ಪತ್ನಿ)
ರಚಿತವಾದ ಹಿಂದೀ ಕತೆಗಳ ಕನ್ನಡ
ಭಾಷಾಂತರ

ನಾರೀ ಹೃದಯ

ನಾರೀ ಹೃದಯದ ವಾಸ್ತವಿಕ ಚಿತ್ರ
ವನ್ನು ಚಿತ್ರಿಸುವ ಉತ್ತಮ ಕತೆಗಳ
ಸಂಗ್ರಹ.

ಬೆಲೆ 0—14—0
ಟ ಖ. 0—2—0 ಪ್ರತ್ಯೇಕ.

ಒಂದು ರೂಪಾಯಿ ಸ್ಟಾಂಪು ಕಳಿಸಿದರೆ ಒಂದು
ಪ್ರತಿಯನ್ನು ಕಳಿಸಲಾಗುವುದು.

ಕರಿಯುರ ಪ್ರಪಂಚ, ಉಡುಪಿ.
ಅಥವಾ ನವಭಾರತ ಬುಕ್
ಡಿಪೋ, ಉಡುಪಿ.

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

The Canara Mutual Assurance Co., Ltd.,
UDIPI. (S. India).

ನೀವೀ ವರೆಗೆ ವಿಮೆಯನ್ನೇ ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಈ ಗ ಲೇ ವಿ ಮೆ ಇ ಳಿ ಸಿ ರಿ

ಏಕೆಂದರೆ:—

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸವಿಷಾದದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ಸಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ಯವಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ, ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಮುಖ ಏಜಂಟರು.
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ, ದ. ಕನ್ನಡ.

ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ:—

ಮಂಗಳೂರು, ಕಲ್ಲಿಕೋಟೆ, ಸೇಲಂ, ತಿರುವಾಂಕೂರು, ಬೆಂಗಳೂರು ನಗರ ಮತ್ತು ಬೊಂಬಾಯಿ.

THE BOMBAY LIFE ASSURANCE CO., LTD.

Sick or healthy, wounded or convalescent in a Prisoner's Camp or in the Line.

Our Men Need Your Help

SUBSCRIBE
to

H. E. The Governor's War Fund

earmarked
"RED CROSS"
or
"AMENITIES FOR TROOPS"
—as you choose, but—
SUBSCRIBE!

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೆಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

ಸಂಪುವೀರ ಜೋನ್ ಲುವಿಸ್.

“ಮುಷ್ಕರಗಾರರು ಅಖಿಲ ಅಮೇರಿಕದ ಅದೃಷ್ಟದೊಡನೆ ವ್ಯಾಕುಲವಾಡುತ್ತಿದ್ದಾರೆ; ವಿಜಯದೊಡನೆ ಹೋರಾಡಿ ಬಿಟ್ಟಿಸ ಲು ನಿಂತಿದ್ದಾರೆ’ ಎಂಬ ಮರುಕೋದ್ಗಾರವನ್ನು ಅಧ್ಯಕ್ಷ ರುಸವೆಲ್ಟರ ಬಾಯಿಯಿಂದ ಹೊರಡಿಸಿದ, ಅಮೇರಿಕದ ಕಲ್ಲಿದ್ದಲ ಮುಷ್ಕರವು ಸಂಪುವೀರ ಜೋನ್ ಎಲ್. ಲುವಿಸನ ಆಜ್ಞೆಯಂತೆ ಜೂನ್ ತಾ. ೭ರಲ್ಲಿ ಕೊನೆಗೊಂಡಿದೆ. ರುಸವೆಲ್ಟರು ಸಮಾಧಾನದ ನಿಟ್ಟುಸಿರು ಬಿಡುವಂತಾಯಿತು; ಮಿತ್ರ ಪಕ್ಷದ ಉದರ ಪಾಲೆಯೊಂದನ್ನು ಕಳಕೊಂಡಂತಾಯಿತು. ಅರ್ಧ ಮಿಲಿಯ ಕೆಲಸಗಾರರನ್ನು ಕೈಸನ್ನೆಯಿಂದಲೇ ಒಮ್ಮೆ ಹೊರಗೆ ಕರೆದು, ಮತ್ತೊಮ್ಮೆ ಒಳ ನುಗ್ಗಿಸುವ ಲೋಕ ಪ್ರಾಮುಖ್ಯ ಆಟವಾಡಿದ ಆ ಜೋನ್ ಲುವಿಸನಾರು?

ಬಾಲ್ಯದಲ್ಲಿ ಕೆಲಸಗಾರ.

೬೧ ವರುಷ ಪ್ರಾಯದ ಲುವಿಸನಿಗ ನೋಡುವವರಿಗೆ ಕಲ್ಲಿದ್ದಲ ಕಠಿಣ ಮೂರ್ತಿಯಂತೆ ತೋರುತ್ತಾನೆ. ಐರಿಶ್... ಚಾರ್ಲ್ಸ್ ಡಿಕೆನ್ಸ ಜೀವನಗಳು ಅಮೇರಿಕನರ ಕಣ್ಣುಗಳಿಗಾದರೂ ಆ ಪುಟ್ಟಿಗೆ ಲುವಿಸ್ ಅಮೇರಿಕನನಲ್ಲ. ಕಟ್ಟುನಿಟ್ಟಿನ, ದಂಗು ಸ್ವಭಾವದ ಶಿಲಾ ಮೂರ್ತಿಯಂತೆ ಕಾಣುತ್ತಾನೆ. ಇದೇನೂ ಮುಷ್ಕರದ ವೇಳೆ ಆತನು ತಾಳಿಕೊಂಡ ಗುಣವಲ್ಲ; ಮುಷ್ಕರವು ಲೂವಿಸನನ್ನು ಕಠಿಣಗೊಳಿಸಿದವೆನ್ನುವದಕ್ಕಿಂತಲೂ, ಲೂವಿಸನ ದೃಢ ಬುದ್ಧಿಯು ಮುಷ್ಕರಗಳನ್ನು ನಿರ್ಮಿಸಿತೆನ್ನುವುದೇ ಸತ್ಯ ಮಾತು. ಅದವನ ಹುಟ್ಟುಗುಣ. ಇವನು ಕಲ್ಲಿದ್ದಲ ಗನಿಯಲ್ಲೇ ಒಂದು ಭಾಗವನ್ನು ಕಳೆದವನ ಪುತ್ರ. ಈ ಯುದ್ಧಾರಂಭದ ಸ್ವಲ್ಪವೇ ಸಮಯಕ್ಕೆ ಮೊದಲು, ಲುವಿಸನ ತಾಯಿ ಈಗಲೂ ವೇಲ್ಸಿನಲ್ಲಿದ್ದಾಳೆ—ಇವನು ಮಾತೃಭೇಟಿ ಪಡೆದು ಬಂದಿದ್ದಾನೆ—ಎಂಬ ವಾರ್ತೆ ಬಂತು. ಲುವಿಸನ ಬಾಲ್ಯದ ಘಟನೆಗಳ ಪರಿಚಯ ಯಾರಿಗೂ ಇಲ್ಲ. ಅಮೇರಿಕದ ಕೆಲಸಗಾರ ಸಂಸ್ಥೆಯ ಅಧ್ಯಕ್ಷ ಗೋಂಪರ್ಸರು ಪತ್ತೆ ಹಚ್ಚುವ ತನಕ ‘ಲುವಿಸ್’ ಎಂಬುವನೊಂದು ಜನವೋ ಸರಕೋ ಎಂಬುದನ್ನು ಪತ್ತೆಹಚ್ಚುವವರಾರೂ ಇರಲಿಲ್ಲ! ಆಗ ಅವನು ... ಆಗಲೂ ... ನಿಶ್ಶಂಕೆ, ಕಾರ್ಯಪಟುತ್ವ ಎಲ್ಲಕ್ಕಿಂತ ಹೆಚ್ಚಾಗಿ ದುರ್ದಮ್ಯವಾದ ಉತ್ಸಾಹದಿಂದ ಮುನ್ನುಗ್ಗುವ ಸ್ವಭಾವ ... ಕಣ್ಣಿಗೆ ಸರಿ ಬಿದ್ದಿತು. ... ಅಮೇರಿಕದ ಕೆಲಸಗಾರರ ... ಯುವಕರಲ್ಲಿ ... ಕೊಡುವ ... ಗುರುಗಳಿಲ್ಲ ಅವನಿಗವನೇ ಗುರು. ಕೂಲಿಗಾರನಾಗಿದ್ದ ಆ ಅವಧಿಯಲ್ಲಿ ... ಪ್ರತಿಯೊಂದು

ಕ್ಷಣವನ್ನೂ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸಿಕೊಂಡ-ಬಹಳವಾಗಿ ಓದಿದ. ಪರಿಣಾಮವಾಗಿ ಅವನ ಇಂದಿನ ಇಂಗ್ಲಿಷ್ ಭಾಷಾಜ್ಞಾನವನ್ನು ಸ್ಪರ್ಧಿಸುವ ಎದೆಗಾರಿಕೆ ಹುಟ್ಟು ಪಂಡಿತರಿಗೆ ಕೂಡಾ ಇಲ್ಲ. ಈಗ ಅಖಿಲ ಅಮೇರಿಕದಲ್ಲಿ ಪರಿಣಾಮಕಾರೀ ಆಕಾಶವಾಣೀ ಭಾಷಣವೀಯಬಲ್ಲವರಲ್ಲಿ ಅಧ್ಯಕ್ಷ ರುಸವೆಲ್ಟರು ನಂ. ೧ ಆದರೆ ಮಿ. ಲೂವಿಸ್ ನಂ. ೨. ಲೂವಿಸನು ಘಂಟೆಗಳ ತನಕ ಬಾಯ್ದೆರೆದ ಪರಿಣಾಮವಾಗಿಯೇ ಅಮೇರಿಕದ ಗನಿಗಳು ತಿಂಗಳಾವಧಿ ಮುಚ್ಚಲ್ಪಟ್ಟವು!

ಎತ್ತಿದ ಕೈಗೆ ಧುರವೀಳ್ಯ!

ಅಮೇರಿಕದ ಲೇಬರ್ ಫೆಡರೇಶನಿನ (A. F. of L.) ಅಧ್ಯಕ್ಷ ಗೋಂಪರ್ಸರ ಧುರೀಣ ಸಹಜ ನಿರ್ಮಾತೃಸ್ವಭಾವ ದೃಷ್ಟಿಗೆ, ಕೆಲಸಗಾರ ಲುವಿಸನಲ್ಲಿರುವ ನಾಯಕ ಗುಣಗಳು ಗೋಚರವಾಗಿ ೧೯೦೮ರಲ್ಲಿ ದೇಶ ಸರ್ವತ್ರ ಅನನ್ಯ ಪ್ರತಿಷ್ಠೆಯಿರುವ ಆ ಕೆಲಸಗಾರರ ಸಂಘದಲ್ಲವನನ್ನು ಕೆಲಸಕ್ಕೆ ಹಚ್ಚಿದರು-ತಾರು ಕೊಳೆಯುತ್ತಿದ್ದ ಧ್ವಜವರನನ್ನೆತ್ತಿ ‘ಸ್ಟೇರಿಂಗ್’ ಹಿಡಿಸಿದರು! ಅಂದಿನಿಂದ ಲುವಿಸನ ಸಾರ್ವಜನಿಕ ಜೀವನಕ್ಕಾರಂಭ; ಅವನಲ್ಲಿ ಸುಪ್ತವಾಗಿದ್ದ ಸಂಘಟನಾ ಶಕ್ತಿಯೆದ್ದು ಕುಣಿಯಲು ಪ್ರಾರಂಭ. ಪೆನ್ಸಿಲ್ವೇನಿಯಾ ಗನಿಗಳು ಅಮೇರಿಕದಲ್ಲಿ ಮುಖ್ಯವಾದುವು. ಅಲ್ಲಿಯ ಕೆಲಸಗಾರರ ಮನಸ್ಸು ಲುವಿಸನ ವಾಗ್ವೈಖರಿ, ಚುರುಕು ಬುದ್ಧಿ, ಯಂತ್ರದಂತಹ ಶಕ್ತಿಗಳೊಡನೆ ಮಿಲನವಾಗಿ ಹೋಯಿತು; ಅವರ ಬೆಂಬಲವೇ ಲುವಿಸನ ಜಂಗೋಲಾಯಿತು. ೧೯೨೦ರಲ್ಲಿ ಅವನು ಅಮೇರಿಕದ ಸಂಯುಕ್ತ ಕೆಲಸಗಾರರ ಮುಖಂಡನಾದ. ೧೯೨೧ರಲ್ಲೇ ಅಮೇರಿಕದ ಲೇಬರ್ ಫೆಡರೇಶನಿನ ಅಧ್ಯಕ್ಷಗಿರಿಗೆ, ತನಗಾಶ್ರಯವಿತ್ತಿದ್ದ ಗೋಂಪರ್ಸರೊಡನೆಯೇ ಸ್ಪರ್ಧೆಗೆ ನಿಂತ. ಲುವಿಸನೇನೋ ೧೨ ಸಾವಿರ ವೋಟುಗಳು (ಅಲ್ಲಿಯ ವೋಟುಗಳ ಸಂಖ್ಯೆಯ ಮೇಲಿಂದ ಇದು ತೀರಾ ಸ್ವಲ್ಪ) ಕಡಿಮೆ ಬಿದ್ದು ಆ ಚುನಾವಣೆಯಲ್ಲಿ ಪರಾಜಿತನಾದ. ಮುಂದೆ ಸ್ವಲ್ಪಾವಧಿಯಲ್ಲೇ ಫೆಡರೇಶನಿನ ಉಪಾಧ್ಯಕ್ಷನಾಗಿ ಆರಿಸಲ್ಪಟ್ಟು ಅಖಿಲ ಅಮೇರಿಕದ ಗಣನೀಯ ವ್ಯಕ್ತಿಗಳಲ್ಲೊಬ್ಬನಾದ.

ವರ್ಚಸ್ಸು ವರ್ಧನೆ.

ಅಂತರ್ರಾಷ್ಟ್ರೀಯ ಪತ್ರಿಕೆಗಳ ತಲೆಬರಹದ ದೊಡ್ಡಕ್ಷರಗಳಲ್ಲಿ ಲುವಿಸನ ಹೆಸರು ಪ್ರಥಮತಃ ಕಾಣಿಸಿಕೊಂಡುದು ೧೯೩೫ರಲ್ಲಿ; ಲೇಬರ್ ಫೆಡರೇಶನಿನ ಉಪಾಧ್ಯಕ್ಷಗಿರಿಗೆ ತಾನು ರಾಜೀನಾಮೆ ಕೊಟ್ಟು ಇತರ ಏಳು ಮಂದಿ ಪ್ರಮುಖರನ್ನೂ ಹೊರಡಿಸಿ ಪ್ರತ್ಯೇಕ ಸಂಘವೊಂದನ್ನು ಲುವಿಸ್ ಸ್ಥಾಪಿಸಿಕೊಂಡಾಗ. ಆ ತನಕ ಅವನಲ್ಲಿ ‘ಅನುಯಾಯಿ’ಯನ್ನು ಕಾಣುತ್ತಿದ್ದ ಅಮೇರಿಕವು, ಅಂದಿನಿಂದ ‘ಅನುಪಮ’ನನ್ನು ಕಂಡಿತು. ಅಂದಿನಿಂದ, ಅಮೇರಿಕದ ಹೇಯಾಡಳಿತೆಯಲ್ಲಿ ಮೊದಲನೆಯದೆಂದು ಅಪಖ್ಯಾತಿಗೊಂಡ ಕಲ್ಲಿದ್ದಲ ಗನಿಗಳ ಕೆಲಸಗಾರರಿಗೆ, ಸಂಧಾನ, ಶತಪ್ರಯತ್ನ, ಸಂಪು ಮೊದಲಾದುವುಗಳ ಮೂಲಕ ಲೂವಿಸ್ ಸೌಕರ್ಯಗಳನ್ನು ಸಾಧಿಸಿಕೊಟ್ಟು ದೇಶವ್ಯಾಪೀ ವರ್ಚಸ್ಸನ್ನು ಗಳಿಸಿದ್ದಾನೆ. ಅವನ ಅದ್ಭುತ ಶಕ್ತಿಯ ಪ್ರದರ್ಶನವಾದುದು ಇದೀಗ ಎರಡನೇ ಬಾರಿ. ೧೯೩೭ರಲ್ಲೊಮ್ಮೆ ಅವನು ಸಾರ್ವತ್ರಿಕ ಮೋಟಾರು ಮುಷ್ಕರವನ್ನು ಹೂಡಿದ್ದ. ೧೪ ಮಿಲಿಯ ಪೌಂಡುಗಳನ್ನು ಪುಡಿಮಾಡಿ, ೧೩೪೦೦೦ ಜನರನ್ನು ನಿರುದ್ಯೋಗಿಗಳನ್ನಾಗಿ ಮಾಡಿ, ಕೋಪ, ‘ಟೀಯರ್ ಗ್ಯಾಸ್’ಗಳ ಹಲವು ಯುದ್ಧಗಳನ್ನೇ ನಿರ್ಮಿಸಿ ಕಟ್ಟಕಡೆಗ ವಿಜಯಪಡೆದ; ಪರಿಣಾಮವಾಗಿ ವರುಷಕ್ಕೆ ೫೦೦೦೦೦೦ ಪೌಂಡುಗಳಷ್ಟು ಕೆಲಸಗಾರರ ಸಂಬಳವೇರಿತು. ಅವನ ವರ್ಚಸ್ಸು ಇಡೀ ಅಮೇರಿಕದಲ್ಲಿ ಭಯ ಮಿಶ್ರಿತ ಗೌರವವಾಗಿ ಪರಿಣಮಿಸಿದುದನ್ನು ಕಂಡ ‘ಲಿಬರ್ಟಿ’ ಪತ್ರಿಕೆ ಪ್ರಶ್ನಿಸಿತು: “ಲುವಿಸ್ ಅಧ್ಯಕ್ಷನಾಗುವದೆಂದಿಗೆ-೧೯೪೦ರಲ್ಲೇ, ೪೪ರಲ್ಲೇ? ಜೋನ್ ಎಲ್. ಲುವಿಸನನ್ನು-ಯೋಧ ಗುಣದ ಕೂಲಿಗಾರ ಮುಖಂಡನನ್ನು-ಶ್ವೇತಭವನದಲ್ಲಿ ಕಾಣುವದೆಂದಿಗೆ?”

ಮಾತಿನ ಮಲ್ಲ

ಲೂವಿಸನೊಡನೆ ಖಾಸಗೀ ಸಂಭಾಷಣೆ ಮಾಡಿಬಂದವರು, ವಿಕ್ಟೋರಿಯಾ ರಾಣಿಯವರು ಗ್ಲೇಡ್‌ಸ್ಟನ್ನನ ಕುರಿತು ಆಡಿದಂತೆ “ನಾನೆಂದರೆ ಒಂದು ಸಾರ್ವಜನಿಕ ಸಭೆಯೆಂಬಂತೆ ಅವನು ನನ್ನನ್ನು ಸಂಬೋಧಿಸುತ್ತಾನೆ” ಎಂದು ಉದ್ಗರಿಸಲೇಬೇಕು. ಖಾಸಗೀ ಸಂಭಾಷಣೆಯಿರಲಿ, ಭೋಜನ ಸಮಂಭಾಗದ ಮೋಜೇ ಆಗಿರಲಿ. ಉದ್ಘೋಷವ್ಯಾಸದ ಹೊರತು ಬಿಡಿ ಮಾತಾಡಿ ಮುಗಿಸುವ ಅಭ್ಯಾಸ ಲುವಿಸನಿಗಿಲ್ಲ. ರುಸವೆಲ್ಟರ ಶ್ವೇತಭವನದ ಒತ್ತಿಗಿರುವ ಅವನ ಆಫೀಸಿಗೆ ಹೋದ ಸಂದರ್ಶಕರನ್ನು ಇದಿರುಗೊಳ್ಳುವವಳೆಂದರೆ ಲುವಿಸನ ಪುತ್ರಿ ಮತ್ತು ಕಾರ್ಯದರ್ಶಿಯಾಗಿರುವ ಕೆಥರಿನ್. ಆಕೆಯೆಂತಹ ಮಾಯಗಾತಿಯೆಂದರೆ ರುಸವೆಲ್ಟರ ವಿದೇಶ ಧೋರಣೆಯ ವಿರೋಧಿಯೆಂದು ಅಮೇರಿಕದಲ್ಲೆಲ್ಲಾ ಅವಳ ಕೀರ್ತಿ-ಲುವಿಸನಲ್ಲಿಯೂ ಅಮೇರಿಕದ ಯುದ್ಧ ಧೋರಣೆಯ ವಿರುದ್ಧ ಸ್ಫೂರ್ತಿಯನ್ನು ತುಂಬಿದವಳೇ ಈ ಕೆಥಲಿನ್. ಇಂದು ಸಂಪು ವೀರ ಲುವಿಸ್-ಕೂಲಿಗಾರ ಮುಖಂಡ ಲುವಿಸ್-ಮುಂದೆ ಇವನೇ ಅಧ್ಯಕ್ಷ ಲುವಿಸ್ ಎಂದು ನಿರೀಕ್ಷಿಸುವವರಿದ್ದಾರೆ. ಈ ನಿರೀಕ್ಷೆಗಾಧಾರವಿಲ್ಲವೆಂದಲ್ಲ. ಲೂವಿಸನು ಬರಿಯ ಘೋಷವೆಬ್ಬಿಸುವ ಕೆಲಸಗಾರ ಧುರೀಣನಷ್ಟೇ ಅಲ್ಲ. ಅವನದು ಕೂಲಿಗಾರರ ಸಭೆಯಲ್ಲಿ ಕಲಿತನ ತುಂಬುವ ಹಿಟ್ಲರ್‌ವಾಣಿ; ವಿದ್ಯಾವಂತರ ಸಭೆಯಲ್ಲಿ ತಲೆದೂಗಿಸುವ ಅಮೃತವಾಣಿ. ಅವನು ವರ್ಗ ಪಕ್ಷಪಾತಿಯಿರಬಹುದು—ಅವನ ಯೋಗ್ಯತೆಗೆ ಆ ಮಿತಿಯಿಲ್ಲ

WANTED GRADUATES.

APPLY FOR TERMS

CANARA BANK LIMITED.

ESTD: 1906.

The Vijaya Bank Ltd.,

NOTICE.

(Under Articles 27 & 28 of the Artiles of Association of the Bank)

The registered notices issued to the undermentioned partly paid-up Ordinary shareholders of the Bank, demanding payment of the calls in arrears in respect of the shares held by them as per particulars furnished below, having been returned undelivered, the said shares are liable to be forfeited on or after 30—6—1643 without any further notice unless all monies due thereunder are remitted to our Mangalore Office by the afore-said date by them or by persons claiming through them.

Name and address of Shareholder.	No. of Shares	Calls in arrears,	Interest up-to-date with Post-age,	Remarks
		Rs. As. Ps.	Rs. As. Ps.	
1. Sri. K. Nandiappa Shetty, C/o British India General Ins. Co., Ltd. 39-43 Churchgate Street, Bombay.	3	30—0—0	6—5—0	Further interest from 5-6-43 on the amount of arrears of call money at 6½%
2. Sri. S. Sheenappa Shetty, S/o Rukmaya Shetty, Radhakrishna Hindu Hotel, Thak Bunder Naka, Mount Road, Bombay No. 10	4	60—0—0	3—5—6	

Office of the Vijaya Bank, Ltd., MANGALORE, 5th June, 1943.

B. Mahabala Shetty,
Ag. Secretary.

Degrees: Books: Medicines
Free H. L. M. S. M. B. H. M. D. etc. Free Homeo-Ayur Unani Naturo degree by post also—Practitioner also get 3000 Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp.—
Principal Indian Homeopathi Institute & Society (Govt. Regd)
P.O. Datha (Kathiawar Dt. India.)

Sidha-Kalpa Kavach (Regd.)
No. 3 Rs 2. No 2 Rs. 5 No. 1 Rs. 7. Special Rs. 10, Extra Special Rs 17 for one marriage health, wealth. Ask any six questions with M. O. Re. 1/4 and get correct answers by returnpost Life reading Rs. 3 No V.P.P. Send M.O. Free pamplets
Prof Dr. N. H Chhathar.
P. O. Mahava, (Kathiawar India.)

The Canara Banking Corporation Limited.
(Incorporated in British India with limited Liability.)
ESTD: 1906.

A Branch of the Corporation has been opened at COIMBATORE on 29-3-1943.

ನವಯುಗ

ಉಡುಪಿ, ಗುರುವಾರ, ೧೦-೬-೧೯೪೩

ಪ್ರಚಾರ ಧೋರಣೆ.

ಯುದ್ಧಕಾಲದಲ್ಲಿ ವೈರಿ ರಾಷ್ಟ್ರೀಯರಿಂದಾಗುವ ಪ್ರಚಾರವನ್ನು ತಡೆಯಬೇಕಾದುದು ಮುಖ್ಯ; ಯುದ್ಧ ಸಾಲಗಳಂತೆಯೇ ಇಲ್ಲದ ಹೆಗ್ಗಳಿಕೆಯನ್ನು ಗಳಿಸಿಕೊಂಡಾದರೂ ಸ್ವಪ್ರಚಾರವನ್ನು ಬಲಗೊಳಿಸುವದು ಕೂಡಾ ಅಷ್ಟೇ ಅಗತ್ಯ. ಈ ವಿಭಾಗದಲ್ಲಿ ಹಿಂದೀ ಸರಕಾರವು ಕಾಂಗ್ರೆಸನ್ನು ಮಾತ್ರವಲ್ಲ—ಹಿಂದೂದೇಶವನ್ನೇ ವೈರಿ ರಾಷ್ಟ್ರವಾಗಿ ಗಣಿಸಿರುವಂತೆ ಭಾಸವಾಗುತ್ತಿದೆ. ಮಿ. ಲೂಯಿಸ್ ಫಿಶರರು ಅಮೇರಿಕದ ಗ್ರಂಥಕರ್ತರು; ಲೋಕಪ್ರಸಿದ್ಧ ಪತ್ರಿಕಾ ವ್ಯವಸಾಯಿಗಳು; ಸ್ವತಃ ಭಾರತಕ್ಕೆ ಬಂದು ಇಲ್ಲಿಯ ವಿದ್ಯಮಾನಗಳನ್ನು ಸೂಕ್ಷ್ಮದೃಷ್ಟಿಯಿಂದ ಕಂಡು ಹೋದವರು. ಹಿಂದೂದೇಶದ ರಾಜಕೀಯ ಸ್ಥಿತಿಗತಿಗಳ ಸಂಬಂಧವಾಗಿ ಅವರು ಬರೆದ ಲೇಖನಗಳಾಗಲೀ, ಕೊಟ್ಟ ಭಾಷಣಗಳಾಗಲೀ ಅನುಭವ ಪೂರ್ಣವಾಗಿದ್ದುವು ಹೊರತು ಅತಿರೇಕಕ್ಕೆ ಹೋಗಿರಲಿಲ್ಲ; ಹೋಗುವ ಕಾರಣವೂ ಇಲ್ಲ. ಈ ಜಗತ್ಪ್ರಸಿದ್ಧ ಬರೆಹಗಾರರನ್ನು ಭಾರತ ಸಂಚಾರಕ್ಕೆ, ಬರೆಹ ಭಾಷಣಗಳಿಗೂ ಪ್ರೇರೇಪಿಸಿದುದು ಸತ್ಯೋದ್ಯೋಗ ಹೊರತು ಯಾವುದಾದರೊಂದು ಪಕ್ಷದ ಪ್ರೇರಣೆಯಲ್ಲ. ಇಂಥವರ ಅಭಿಪ್ರಾಯಕ್ಕೆ ಬೆಲೆಕೊಡದೆ, ಎಂದೋ ಒಂದು ಕಾಲದಲ್ಲಿ ವೈಸರಾಯರಾಗಿದ್ದ ತಪ್ಪಿಗಾಗಿ, ಹಿಂದೂದೇಶದ ಕುರಿತು ಈಗ ಅಮೆರಿಕನರ ಕಿವಿಯೂದುತ್ತಿರುವ ಲೋರ್ಡ್ ಹೆಲಿಫೇಕ್ಸರ ತರಳ ಮಾತಿಗೇನೇ ಕಿವಿ ಕೊಡಬೇಕೇನು? ಹಿಂದೀ ಸರಕಾರದ ಅಭಿಮತ ಹಾಗಿರುವಂತಿದೆ. ಲೂಯಿ ಫಿಶರರ ಯಾವುದೇ ಭಾಷಣ ಲೇಖನಗಳನ್ನು ಇದ್ದಂತೆ ಅಥವಾ ಭಾಷಾಂತರಿಸಿ ಹಿಂದುಸ್ಥಾನದಲ್ಲಿ ಪುನಃಪ್ರಕಟನೆಗೊಳಿಸುವ ಮೊದಲು ಸರಕಾರದ ಪ್ರಮುಖ ಮುದ್ರಣೋಪದೇಶಕರ ಬರೆಹ ಸಹಿತ ಸಮ್ಮತಿ ಪಡಕೊಳ್ಳತಕ್ಕದ್ದೆಂದು ಭಾರತ ರಕ್ಷಣಾ ಶಾಸನದನ್ವಯ ಹಿಂದೀ ಸರಕಾರವು ಪ್ರತಿಬಂಧಿಸಿದೆ. ಫಿಶರರು ಭಾರತೀಯರಲ್ಲ; ಆದ್ದರಿಂದ ಭಾರತೀಯ ಪ್ರಮುಖರಿಗೆ ಕೊಟ್ಟ ಸಂಭಾವನೆಯನ್ನು ಅವರಿಗೂ ಕೊಡಬೋಣವೆಂದರೆ ಹಿಂದೀ ಸರಕಾರಕ್ಕೆಟುಕುವಂತಿಲ್ಲ. ಆದರೆ ಫಿಶರರ ಅಭಿಪ್ರಾಯಗಳು 'ಕಾಂಗ್ರೆಸ್ ಬಂಡಾಯಗಾರರ' ಅಭಿಪ್ರಾಯಗಳನ್ನೇ ಹೋಲುತ್ತಿವೆ; ಆದ್ದರಿಂದ ಅವರ ಭಾಷಣ ಲೇಖನಗಳಿಗೂ ಅಂತಹದೇ ಸಂಭಾವನೆ! ಫಿಶರರಂಥವರ ಅಭಿಪ್ರಾಯವು ಸರಕಾರ ಮತ್ತು ಹಿಂದೀ ಜನತೆಯ ಜಗಳದಲ್ಲಿ ಮೂರನೆಯವನ ತೀರ್ಮಾನ; ತಟಸ್ಥನೊಬ್ಬನ ನ್ಯಾಯಶೋಧನೆ. ಪಂಚಾಯತನೊಬ್ಬನ ತೀರ್ಮಾನವು ವಿರುದ್ಧ ಮಾತ್ರವಲ್ಲ, ಪ್ರತಿಬಂಧಾರ್ಹವೆಂದು ತೋರುವ ಒಂದು ಪಕ್ಷವು ಲೋಕದೆದಿರು ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾಗುತ್ತದೆ "ನೀವು ಲೋಕದೆದಿರು ಅಪರಾಧಿಯಾಗಿ ವಿಚಾರಿಸಲ್ಪಡಲಿರುವಿರೆಂಬುದನ್ನೂ, ಸಾಧ್ಯವಿದ್ದರೆ ಅದನ್ನು ಸಾಧಾರವಾಗಿ ಅಲ್ಲಗಳೆಯುವ ಜವಾಬ್ದಾರಿ ನಿಮ್ಮ ಮತ್ತು ನಿಮ್ಮ ಅನುಯಾಯಿಗಳ ಮೇಲಿರುವದೆಂಬುದನ್ನೂ ನೆನಪಿನಲ್ಲಿಡಿರಿ" ಎಂದು ಗಾಂಧೀಜಿಯನ್ನು ಮುಂಬರುವ ವಿಚಾರಣೆಗಾಗಿ ಈಗಲೇ 'ರಿಝರ್ವ್' ಮಾಡಿಡುವಷ್ಟು ನ್ಯಾಯತೀರ್ಮಾನಾಕಾಂಕ್ಷೆಯುಳ್ಳ ಲೋರ್ಡ್ ಲಿನ್‌ಲಿತ್ ಗೋರವರು, ಅಂತಹ ಸಂದರ್ಭ ತನಗೇನೇ ಒದಗಿದಾಗ ಈರೀತಿ ವೈತಪ್ಪಿಸಿಕೊಳ್ಳುತ್ತಿರುವದು ಹಾಸ್ಯಾಸ್ಪದವೇ ಸರಿ! "ಕೆಲವು ಭಾರತೀಯರಿಂದ ತಪ್ಪಿದ ಬಾಧೆಯು ಖಂಡನೀಯವೆಂಬುದು ನಿಜ. ಆದರೆ ಬ್ರಿಟಿಶ್ ಪತ್ರಿಕೆಗಳ ಕೆಲವು ಬೇಜವಾಬ್ದಾರೀ ಲೇಖಕರ ಬರೆಹಗಳು ನನ್ನಂತಹ ಮೃದು ಧೋರಣೆಯವರನ್ನು ಕೂಡಾ ರೇಗಿಸುತ್ತಿವೆ" ಎಂದು ಭಾರತ ಸೆಕ್ರೆಟರಿಗಳ ಉಪದೇಶಕರಾಗಿರುವ ಸರ್. ಎ. ರಾಮಸ್ವಾಮಿ ಮುದಲಿಯಾರರು ಲಂಡನಿನ 'ಈಸ್ಟ್ ಇಂಡಿಯಾ ಎಸೋಸಿಯೇಶನ್'ನ ಚರ್ಚೆಯೊಂದರಲ್ಲಿ ಮೊನ್ನೆ ತಾನೇ ಹೇಳಿದ್ದಾರೆ. ಸರ್. ಮುದಲಿಯಾರರಂಥವರಿಗೆ ಸಿಟ್ಟು ಬರಿಸುವ ಆ ಬ್ರಿಟಿಷ್ ಪ್ರಚಾರವೆಂತಹದಿರಬೇಕೆಂಬುದನ್ನು ವರ್ಣಿಸುವ ಅಗತ್ಯವಿಲ್ಲ. ಅಂತಹ ಪ್ರಚಾರ ನಡೆಯಲೇ ಬೇಕು—ಕಾಂಗ್ರೆಸಿಗರ ಕೂಗಿನ ಕಂಠವನ್ನು ಒತ್ತಿ ಹಿಡಿಯಲೇಬೇಕು—ಇವೆರಡು ಸಾಕಾಗದೆ ಲೂಯಿ ಫಿಶರರಂತಹ ಪಕ್ಷರಹಿತರ ಸಂಶಾಮರ್ಶೆಯನ್ನೂ ಪ್ರತಿಬಂಧಿಸಬೇಕು! ಈ ರೀತಿ ಕಗ್ಗತ್ತಲೆಯಲ್ಲಿ ಕೈಸನ್ನೆ ಮಾಡುತ್ತಿರುವ ಸರಕಾರವು ಆಪತ್ತೊಂದನ್ನಲ್ಲದೆ ಬೇರಾರನ್ನು ಕರೆಯುತ್ತಿರುವದೋ ನಮಗರಿಯದು!

CHAMPAE'S
SNOW & CASTREX
AGENTS
SADANANDA STORES UDIPI

ದುರ್ಬೀನು

ಮುತ್ತಿಟ್ಟ ಮಾತ್ರಕ್ಕೆ ಮೂಗುತಿಯಿಟ್ಟಂತಾಗದು; ಬೆಲೆ ನಿಯಂತ್ರಣ ಸಾರಿದ ಮಾತ್ರಕ್ಕೆ ಬೆಲೆ ತಗ್ಗಿಸಿದ ಪುಣ್ಯಬಾರದು.

ಮನೆ ಬಿಟ್ಟು ಹೊರಡುವವನು ಬಾಯಿ ಮಾತಿನಿಂದ ಜಾಗ್ರತೆ ಹೇಳಿದರೂ ಸಾಕು; ಮಸಣಕ್ಕೆ ಹೊರಡುವವನು 'ವಿಲ್‌ನಾಮೆ' ಬರೆದಿಟ್ಟೇ ಹೋಗಬೇಕು. ಶಾಂತಿಕಾಲದಲ್ಲಿ ಆಶ್ವಾಸನೆಗಳನ್ನು ನಂಬಬಹುದು; ಸಂಗ್ರಾಮಕಾಲದಲ್ಲಿ ಸ್ಪಷ್ಟ ತೀರ್ಮಾನವೇ ಬೇಕು.

ಬಿದ್ದ ಹೆಣ ಹುಗಿಯುವದು ಅಗತ್ಯ; ಇದ್ದ ಹಣ ಹುಗಿಯುವದು ಅನಗತ್ಯವಾದರೂ ಅತಿ ಜಾಗ್ರತೆ; ಇದ್ದ ಗುಣವನ್ನೂ ಹುಗಿದಿಡುವದು ಅನಗತ್ಯ ಮತ್ತು ಅನ್ಯಾಯ.

ಕೋಪೆ ಮರ ಫಲ ಬಿಡಲಾರದು; ಸಾಮ್ರಾಜ್ಯ ಸ್ವಾರ್ಥಿಗಳು ಸ್ವಾತಂತ್ರ್ಯ ಕೊಡಲಾರರು.

ಮರ್ಕಟನ ತಲೆಗೆ ಮಕುಟನೇರಿದರೆ ಮರ್ಜಿ ಬದಲಾದೀತೆಂದು ನಿರೀಕ್ಷಿಸಬೇಡಿ; ಸ್ವಾರ್ಥಿಗಳು ಯುದ್ಧ ಗೆದ್ದರೆ ಧೋರಣೆ ಬದಲಾದೀತೆಂದು ಭಾವಿಸಬೇಡಿ.

ಆರ್ನಿಮರು ನಾಜಿಗಳ ಕಮಾಂಡರ್—ಬ್ರಿಟಿಷರ ಕೈದಿ. ಅತಿ ಗರ್ವವು ಅಜ್ಞಾನಿಗಳ ಮುಂಧೋರಣೆ—ಸುಜ್ಞಾನಿಗಳು ಮುಚ್ಚಿಡುವ ಗುಣ.

ಸ್ಫೂರ್ತಿಯೇಳಬೇಕೆಂದು ವಿದ್ಯುತ್ಸಂಚಾರಕ್ಕೆ ಮೈ ಹಿಡಿಯಬಹುದೇ? ಸಮರೋತ್ಸಾಹವೇಳಬೇಕೆಂದು ಉನ್ಮಾದರವವೆಬ್ಬಿಸಬಹುದೆ?

ಮೆಟ್ಟಿಲು ಹತ್ತಿ ನಿಂತವನಿಗೆ ಸಿಂಹಾಸನವೇರಿದವನ ಠೀವಿಯಿರಬಾರದು; ಟ್ಯುನಿಸಿಯಾ ಗೆದ್ದ ಮಾತ್ರಕ್ಕೆ ಪ್ರಪಂಚವನ್ನೇ ಗೆದ್ದ ವಿಜಯೋತ್ಸಾಹ ತೋರಬಾರದು.

ಸಾಲ ಕೊಟ್ಟವನು ಕರೆಸಿ ಮಾತಾಡುತ್ತಾನೆ; ರುಸವೆಲ್ಟರು ಚರ್ಚಿಲ್ಲರನ್ನು ಕರೆಸಿ ಸಂಭಾಷಿಸುತ್ತಾರೆ

ಉಡುಪಿ.

ವರ್ಧಂತಿ ಸಮಾರಂಭ ಪರ್ಯಾಯ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀ ಪಾದಂಗಳವರು ತಮ್ಮ 24 ನೆ ವರ್ಷ ವರ್ಧಂತಿ ದಿನವನ್ನು ತಾ 3ರಲ್ಲು ಅತ್ಯಂತ ವಿಜೃಂಭಣೆಯಿಂದ ಆಚರಿಸಿದರು. ಅಂದು ಶ್ರೀ ಕೃಷ್ಣ ಸನ್ನಿಧಿಯ ಭೋಜನಶಾಲೆಯಲ್ಲಿಯೂ ಮಹಾಜೋಬಾರ ಶ್ರೀ ಮದನಂತೇಶ್ವರ ಸನ್ನಿಧಿಯಲ್ಲೂ ವಿಶೇಷ ರೀತಿಯ ಅನ್ನ ಸಂತರ್ಪಣೆ ನಡೆಯಿತು. ರಾತ್ರಿ ಶ್ರೀ ಕೃಷ್ಣನಿಗೆ ರಥೋತ್ಸವವೂ ಇತರ ಸ್ವಾಮಿಗಳವರಿಗೆ ಮಾಲಿಕಾ ಮಂಗಳಾರತಿ ಸತ್ಕಾರಗಳೂ ಜರಗಿದವು.

ಬಿಲ್ಡಿಂಗ್ ರೂಲ್ಸುಗಳ ಪರಿಜ್ಞಾನದ ಆವಶ್ಯಕತೆ:—ಕಳೆದ ತಾ. ೭ರಲ್ಲಿ ಉಡುಪಿ ಮುನಿಸಿಪಲ್ ಕೌನ್ಸಿಲಿನ ಸಭೆಯೊಂದು ಅದರ ಕಾರ್ಯಾಲಯದಲ್ಲಿ ನಗರ ಸಭಾಧ್ಯಕ್ಷ ಶ್ರೀ ಎ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಇಬ್ಬರು ಸದಸ್ಯರ ರಾಜೀನಾಮೆಯ ದೆಸೆಯಿಂದಾಗಿ ಖಾಲಿಬಿದ್ದ ಕೌನ್ಸಿಲಿನ ಉಪಸಮಿತಿಗಳಿಗೆ ಸದಸ್ಯರನ್ನು ಆರಿಸಲಾಯಿತು. ಮುನಿಸಿಪಲ್ ಹೆಂಗಸು ಬಾಲಿಕಾ ಪಾಠಶಾಲೆಯನ್ನು ಮುನಿಸಿಪಲ್ ಕಾರ್ಯಾಲಯಕ್ಕೆ ವರ್ಗಾಯಿಸಿ ಮುನಿಸಿಪಲ್ ಆಫೀಸನ್ನು ಇನ್ನೊಂದೆಡೆಗೆ ಒಯ್ಯುವುದೆಂದಾಯಿತು. ಮುನಿಸಿಪಲ್ ಪುಸ್ತಕ ಭಂಡಾರಕ್ಕೆ ಸರಕಾರದಿಂದ ನಾಲ್ಕುನೂರು ರೂಪಾಯಿಗಳ ಸಹಾಯ ದ್ರವ್ಯವು ಸಿಕ್ಕುವಂತೆ ಪ್ರಾರ್ಥಿಸುವ ನಿರ್ಣಯವಾಯಿತು. ಬಿಲ್ಡಿಂಗ್ ರೂಲ್ಸುಗಳ ಪರಿಜ್ಞಾನವಿಲ್ಲದೆ ಕಟ್ಟಡಗಳನ್ನು ಕಟ್ಟಿಸಿದವರ ಪಶ್ಚಾತ್ತಾಪ ಪೂರ್ವಕ ಕೌನ್ಸಿಲಿಗೆ ಮಾಡಿದ ಅಪೀಲು ಅರ್ಜಿಗಳನೇಕ ಡಿಸ್‌ಮಿಸ್ ಮಾಡಲಾದುವು. ನಗರ ವಾಸಿಗಳು ಬಿಲ್ಡಿಂಗ್ ರೂಲ್ಸುಗಳ ಅನುಭವವನ್ನು ಪಡೆಯದಿದ್ದುದೂ ಕೌನ್ಸಿಲು ಅಧಿಕಾರಿಗಳು ತೆರಿಗೆದಾರರಿಗೆ ಆ ವಿಷಯದಲ್ಲಿ ಸಾಕಷ್ಟು ಮುಂಜಾಗ್ರತೆಯನ್ನೀಯದಿದ್ದುದು ಎತ್ತಿ ಹೇಳತಕ್ಕದ್ದಾಗಿದೆ.

ಸ್ಟೇಂಡಾರ್ಡ್ ಬಟ್ಟೆ ಪೂರೈಕೆಯು. ಸಲುವಾಗಿ ಸಂಬಂಧಪಟ್ಟ ಸಹಕಾರಿ ಪ್ರಾಂತಿಕ ಅಧಿಕಾರಿಗಳು ಉಡುಪಿಗೆ ಬಂದಿದ್ದು ಸ್ಥಳೀಯ ನೇಕಾರರ ಉತ್ಪತ್ತಿ ಮತ್ತು ಮಾರಾಟದ ಸಹಕಾರಿ ಸಂಘದ ಡೈರೆಕ್ಟರರೊಡನೆ ಮಾತುಕತೆ ನಡೆಸಿ ಈಗ ಇದ್ದ ಕೈಮಗ್ಗಗಳ ಸಂಖ್ಯೆಯನ್ನು ಐವತ್ತಕ್ಕೇರಿಸಬೇಕಾಗಿ ಸೂಚಿಸಿ ಸ್ಟೇಂಡಾರ್ಡ್ ಬಟ್ಟೆಯ ಪೂರೈಕೆಗೆ ನೆರವಾಗಬೇಕಾಗಿ ಸೂಚಿಸಿದರು.

ಕಟಪಾಡಿ ೪-೬-೪೩

ಇದೇ ದಿನ ನಾಡವ ಸಮಾಜದವರು ಶ್ರೀ ಸೀತಾರಾಮ ಧೋರೆಬಲ್ಲಾಳರ ಅಧ್ಯಕ್ಷತೆಯಲ್ಲಿ ಸಭೆಮಾಡಿ ಇಲ್ಲಿಯ ಇನ್ನಂಜೆ ಹೈಸ್ಕೂಲ್ ಬಂಟವಿದ್ಯಾರ್ಥಿಗಳಿಗಾಗಿ ಒಂದು ವಿದ್ಯಾರ್ಥಿಭವನವನ್ನು ತೆರೆಯಬೇಕೆಂದು ನಿರ್ಧರಿಸಿದರು. ಶ್ರೀ ರಾಮು ಸೂರ್ಯಣ್ಣ ಶೆಟ್ಟರು ತಮ್ಮ ದಿವಂಗತ ಪುತ್ರ ಚಂದ್ರಶೇಖರನ ಸ್ಮರಣಾರ್ಥವಾಗಿ ರೂ. 1000 ಕೊಡುವುದಾಗಿ ವಾಗ್ದಾನ ಮಾಡಿದರು. ಕಟ್ಟಡದ ಭಾಗಕ್ಕಾಗಿ ಶ್ರೀ ಸೋದೆ ಶ್ರೀಗಳವರನ್ನು ಕೇಳಿಕೊಳ್ಳಬೇಕೆಂದಾಯಿತು. ಕಟ್ಟಡದ ಕೆಲಸ ಕಲ್ಲನ್ನು ಬೇಗನೆ ಹಾಕಬೇಕಾದುದರಿಂದ ಧನಸಂಗ್ರಹ ಮಾಡಿ ಕೆಲಸ ಪ್ರಾರಂಭಿಸಲು ಶ್ರೀ ಸೀತಾರಾಮ ಧೋರೆಬಲ್ಲಾಳರು ಅಧ್ಯಕ್ಷರಾಗಿರುವ ಒಂದು ಕಮಿಟಿಯನ್ನು ರಚಿಸಲಾ[illegible].

The Modern School of Commerce
(Estd. 1930)
Church View, UDIPI, S. I.

(Classes commence from 14th June)

Offer coaching for all Commercial
DIPLOMAS & SUBJECTS
Such as D. Com (I. M. C.) Bombay,
L. C. C. (London) C. A. I. I. B.
and C. A. I. B. (London) besides
SHORT-HAND & TYPEWRITING.

For prospectus enclose 1½ annas stamp.

ಆಫ್ರಿಕೆಗೆ ಕಾಯುತ್ತಿವೆ!

ಆಫ್ರಿಕದ 3000 ಮೈಲುದ್ದದ ಕರಾವಳಿಯಲ್ಲಿ ಮಿತ್ರ ಪಕ್ಷೀಯರ ಸೈನ್ಯ, ವಿಮಾನ, ಯುದ್ಧ ಹಡಗ, ಸಂಚಾರಕ ಹಾಗೂ ಧಾಳೀ ಜಲಯಾನಗಳು ವಿಶೇಷ ಸಂಖ್ಯೆಯಲ್ಲಿ ಜಮೆಯಾಗಿವೆ. ಬ್ರಿಟಿಷರ 1ನೇ, 8ನೇ, 9ನೇ, 10ನೇ ಸೇನೆಗಳು, ಅಮೇರಿಕಾನರ 5ನೇ ಸೇನೆ ಹೀಗೆ 5 ಪ್ರಬಲ ಸೇನೆಗಳಲ್ಲಿ ಜಮೆಯಾಗಿವೆ ಅಂತೂ ಕಡಿಮೆ ಎಂದರೆ ಒಂದು ಮಿಲಿಯ ಸೇನೆಯು ಈ ಭೂಮಧ್ಯ ಸಮುದ್ರ ಪ್ರದೇಶದಲ್ಲಿ ಜಮೆಯಾಗಿದ್ದು, ಬಹಿರಂಗವಾಗಿ ಸಾರಿಯೇ ಇಟಲಿಯನ್ನು ಆಕ್ರಮಿಸುವ ಧೈರ್ಯವೀಗ ಮಿತ್ರರಲ್ಲುಂಟಾಗಿದೆ. ವಿಮಾನ ಬಲದಲ್ಲೀಗ ಪೂರ್ತಿ ಮೇಲ್ಮೈಯವರಾಗಿರುವ ಮಿತ್ರ ಸೇನೆಗಳಿಂದ ಇಟಲಿಯ ಪತನ ನಿಶ್ಚಯವೆಂದೂ ಈ ಸೇನೆಗಳಿಗೆ ಆಜ್ಞೆ ದೊರೆಯುವದೊಂದೇ ಬಾಕಿಯೆಂದೂ ತಿಳಿದುಬರುತ್ತದೆ

ಸತ್ಯಮೂರ್ತಿಗಳ ನಿಧನದಿಂದ ಖಾಲಿ ಬಿದ್ದ ಕೇಂದ್ರ ಎಸೆಂಬ್ಲಿಯ ಸ್ಥಾನಕ್ಕೆ ಮದ್ರಾಸ್ ನಗರದಿಂದ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರಿ ಶ್ರೀ ರಂಗಯ್ಯ ನಾಯುಡುರವರಿಗೆ 4658 ಮತಗಳೂ ಜಸ್ಟೀಸ್ ಪ್ರತಿನಿಧಿ ಶ್ರೀ. ಸುಂದರರಾವ್ ನಾಯುಡುಗಳಿಗೆ 1508 ಮತಗಳೂ ದೊರೆತು ಕಾಂಗ್ರೆಸ್ ವಿಜಯಿಯಾಗಿದೆ.

ಬೇಕಾಗಿದ್ದಾರೆ.

ಪದುಬಿದ್ರೆ S. B. V P. ಅಡ್ವಾನ್ಸ್ಡ್ ಸಂಸ್ಕೃತ ಶಾಲೆಯಲ್ಲಿ ಈ ವರ್ಷ ಸೆಕೆಂಡರೀ ಅಧ್ಯಾಪಕರೊಬ್ಬರು ಬೇಕಾಗಿದ್ದಾರೆ. ಉಮೇದುವಾರರು ತಮ್ಮ ಯೋಗ್ಯತಾ ಪತ್ರಗಳ ನಕಲುಗಳೊಡನೆ ತಮ್ಮ ಪ್ರಾಯ, ಜಾತಿ, ಮತ್ತು ವಿಶೇಷಾನುಭವಗಳನ್ನು ನಮೂದಿಸಿ ಈ ಕೆಳಗಿನ ಅಡ್ರೆಸ್ಸಿಗೆ ತಾರೀಕು 30 6 1943ರೊಳಗೆ ಅರ್ಜಿಗಳನ್ನು ಬರೆಯಬೇಕು. ಸಂಬಳದ ವಿಚಾರ ಬಗ್ಗೆ ಬರೆದು ತಿಳಿಯಬಹುದು.

Correspondent
S B.V P Advanced Sanskrit School
Padubidri S K

Camp Padubidri
Date 8 6 1943

ಸುದ್ದಿ ಸೂಚನೆ

○ ಬೊಂಬಾಯಿಯಿಂದ ಕಲ್ಕತ್ತಕ್ಕೆ ಹೊರಟಿದ್ದ ಮೈಲ್ ಬಂಡಿಯು ತಾ 4 ರಲ್ಲಿ ಅಪಘಾತಕ್ಕೊಳಗಾಗಿ ಪ್ರಯಾಣಿಕರಲ್ಲಿ 75ಕ್ಕೆ ಮಿಕ್ಕಿ ಮಡಿದು 140ಕ್ಕೆ ಮಿಕ್ಕಿ ಜಖಂ ಗೊಂಡಿದ್ದಾರೆ.

○ ಆರ್ಜೆಂಟೈನಿನ ಅಧ್ಯಕ್ಷ ಕೇಸ್ಟಿಲೋ ಮತ್ತು ಅವರ ಮಂತ್ರಿ ಮಂಡಲವು ರಾಜೀನಾಮೆ ಕೊಟ್ಟು ಮಿತ್ರ ರಾಷ್ಟ್ರೀಯರ ಪಕ್ಷಪಾತಿ ಸರಕಾರವು ಸ್ಥಾಪನೆಗೊಂಡಿದೆ. ಆಕ್ಸಿಸ್ ಸಂಬಂಧವನ್ನು ಕಳೆಕೊಳ್ಳಬಹುದೆಂದೂ, ಒತ್ತು ರಾಜ್ಯವಾದ ಸ್ಪೈಯಿಫಿಕ ಮೇಲೂ ಇದರ ಪರಿಣಾಮವಾಗುವದೆಂದೂ ನಿರೀಕ್ಷಿಸಲಾಗಿದೆ.

○ ಬೊಂಬಾಯಿಯಲ್ಲಿ ಕಾಂಗ್ರೆಸೇತರ ಪಕ್ಷಗಳ ಮಂತ್ರಿ ಮಂಡಲ ಸ್ಥಾಪನೆಯ ಮಾತುಕಥೆ ನಡೆಯುತ್ತಿದೆ. ಬಿಹಾರಿನಲ್ಲಿಯೂ ಆ ಆಲೋಚನೆ ನಡೆದಿದ್ದು ಮುಸ್ಲಿಂ ಲೀಗಿನವರು ವಿಶೇಷ ಚಟುಪಟಿಕೆಯಲ್ಲಿದ್ದಾರೆ. ಸಂಯುಕ್ತ ಪ್ರಾಂತ್ಯದಲ್ಲೂ ಈ ಸುದ್ದಿಯೆದ್ದಿದೆ.

○ ಚೀನದ ಯಾಂಗ್ಸೀ ಕೊಳ್ಳದ ಕದನದಲ್ಲಿ ಚೀನೀಯರೇ ವಿಜಯ ಸಂಪಾದಿಸಿ ಇಟು ನಗರದಿಂದ ಜಪಾನರನ್ನು ಹೊರಗಟ್ಟಿರುವರು. ಚುಂಗುಕಿಂಗಿನ ಮೇಲೆ ಜಪಾನರ ವಿಮಾನ ಧಾಳಿಯಾಗಿದೆ.

○ ಮಿ ವಿಲಿಯಮ್ ಫಿಲಿಪ್ಸರು ಜುಲಾಯಿ ಆದಿಯಲ್ಲೇ ಪುನಃ ಹಿಂದುಸ್ಥಾನಕ್ಕೆ ಬಂದು ಈ ಬಾರಿ ಗಾಂಧೀ ನೆಹರುಗಳ ಭೇಟಿಪಡೆಯುವರೆಂದು ತಿಳಿದು ಬರುತ್ತದೆ.

○ ರಷ್ಯಾ ರಣರಂಗದಲ್ಲಿ ವಿಶೇಷ ಬದಲಾವಣೆಯಿಲ್ಲ. ಆದರೆ ಈಗ ಜರ್ಮನರು ಸಾವಿರ ಮೈಲುದ್ದದ ರಣರಂಗದಲ್ಲಿ ಪ್ರಬಲ ಟೇಂಕು ದಳಗಳನ್ನು ಸಂಗ್ರಹಿಸಿ ಧಾಳೀ ನೆಗೆತಕ್ಕನುವಾಗಿದ್ದಾರೆ.

○ ಒಂದೆಡೆಯಲ್ಲಿ ಜಾಪಾನೀ ವಿಮಾನ ನಿಲ್ದಾಣ ಮೊದಲಾದುವುಗಳ ಮೇಲೂ ಇನ್ನೊಂದೆಡೆಯಲ್ಲಿ ಭೂಮಧ್ಯ ಸಮುದ್ರದಲ್ಲೂ ಮಿತ್ರರ ವಿಮಾನ ಧಾಳಿಗಳು ನಡೆಯುತ್ತಲೇ ಇವೆ.

○ ಮಿತ್ರರ ವಿಮಾನ ಧಾಳಿಗಳಲ್ಲಿ ಅಸಾಧಾರಣ ಕಾಠಿಣ್ಯವಿತ್ತೆಂದೂ, ಇದಕ್ಕೆ ಪ್ರತೀಕಾರ ಮಾಡುವ ಕಾಲವಿದೆಯೆಂದೂ ತಮ್ಮ ಸಬ್‌ಮೇರೀನ್ ಧಾಳಿ ಇನ್ನಷ್ಟು ಬಲಗೊಂಡಿದ್ದು, ಮಿತ್ರರ ಆಕ್ರಮಣ ಘರ್ಜನೆಯು ಅಬ್ಬರ ಮಾತ್ರವೆಂದೂ ಗೋಬೆಲ್ಸ್ ಜರ್ಮನರಿಗೆ ಭಾಷಣವಿತ್ತಿದ್ದಾನೆ.

ಸ್ಪೆಶ್ಯಲ್ ಕೋರ್ಟುರದ್ದತಿ

ಸ್ಪೆಶ್ಯಲ್ ಕ್ರಿಮಿನಲ್ ಕೋರ್ಟುಗಳ ಓರ್ಡಿನೆನ್ಸು ಸಿಂಧುವಲ್ಲವೆಂದು ತೀರ್ಮಾನಿಸಿದ ಫೆಡರಲ್ ಕೋರ್ಟಿನ ತೀರ್ಮಾನಕ್ಕನುಸಾರವಾಗಿ ವೈಸರಾಯರು ಇದೇ ತಾ. 5ರಲ್ಲಿ ಹೊಸ ಓರ್ಡಿನೆನ್ಸೊಂದರ ಮೂಲಕ ಅದನ್ನು ರದ್ದು ಪಡಿಸಿರುವರು. ಹಳೇ ಓರ್ಡಿನೆನ್ಸಿನನ್ವಯ ವಿಧಿಸಲ್ಪಟ್ಟ ಶಿಕ್ಷೆಗಳನ್ನು ಕ್ರಿಮಿನಲ್ ಪ್ರೊಸಿಜರ್ ಕೋಡಿನನ್ವಯದ ಶಿಕ್ಷೆಗಳಂತೆಯೇ ಭಾವಿಸತಕ್ಕದ್ದೆಂದೂ ಆ ತೀರ್ಮಾನಗಳ ಮೇಲೆ ಅಪೀಲಿನ ಅಧಿಕಾರವಿದೆಯೆಂದೂ ಸಾರಲಾಗಿದೆ. ಈಗ ಅವುಗಳಲ್ಲಿರುವ ದಾವೆಗಳನ್ನೆಲ್ಲಾ ಕ್ರಮಬದ್ಧ ಕೋರ್ಟುಗಳಿಗೆ ವರ್ಗಾಯಿಸಲಾಗುವದು. ರಕ್ಷಣಾ ಕಾನೂನಿನ 26ನೇ ನಿಯಮಕ್ಕೆ [illegible]ವದಾಗಿ ಮಾಡಿದ ಹೊಸ ಓರ್ಡಿನೆನ್ಸು ಕೂಡಾ ಫೆಡರಲ್ ಕೋರ್ಟಿನ ಸ್ಪಷ್ಟ ತೀರ್ಮಾನಕ್ಕೊಳಗಾಗುವ ಸಂಭವವಿದೆ

ಬೇಕಾಗಿದ್ದಾರೆ

ಉಡುಪಿ ತಾಲೂಕು ಕುರುಕಾಲು ಗ್ರಾಮದ ಶ್ರೀ ಕಂಜಾರು ಗಿರಿಜಾ ಹಾಯರ್ ಎಲಿಮೆಂಟರಿ ಮತ್ತು ಕುರುಕಾಲು ಶ್ರೀ ಗಣಪತಿ ಲೋವರ್ ಎಲಿಮೆಂಟರಿ, ಈ ಎರಡು ಶಾಲೆಗಳಲ್ಲಿ ಕೆಲಸ ಮಾಡುವರೇ ಇಬ್ಬರು ಸೆಕೆಂಡ್ರಿಟ್ರೈನ್ಡ್, ಇಬ್ಬರು ಹಾಯರ್ ಟ್ರೈನ್ಡ್ ಉಪಾಧ್ಯಾಯರು ಯಾ ಉಪಾಧ್ಯಾಯಿನಿಯರು ಬೇಕಾಗಿದ್ದಾರೆ. ಸಂಬಳ ತಿಂಗಳು 1ರ ತುಟ್ಟಿಭತ್ತೆ ಕೂಡಾ ರೂಪಾಯಿ 24 ಮತ್ತು ರೂ 14 ಕೊಡಲಾಗುವುದು. ವಿಶೇಷ ಯೋಗ್ಯತೆಗಳೇನಾದರೂ ಇದ್ದರೆ ಹೆಚ್ಚಿನ ಸಂಬಳ ಕೂಡಾ ಕೊಡಲಾಗುವುದು. ಉಮೇದ್ವಾರಗಳು ಈ ಕೆಳಗಿನವರಿಗೆ ಒಡನೆ ಕೂಡಲೇ ಬರಹ ಮೂಲಕ ಇಲ್ಲವೇ ನೋಡಿ ಮಾತನಾಡುವುದು

ಕುರುಕಾಲು ಗಣಪಯ್ಯ ಸೆಟ್ಟಿ,
ಮೆನೇಜರ್,
ಶ್ರೀ ಕಂಜಾರು ಗಿರಿಜಾ ಹಾಯರ್ ಎಲಿಮೆಂಟರಿ ಶಾಲೆ, ಕುರುಕಾಲು ಶ್ರೀ ಗಣಪತಿ ಹಾಯರ್ ಎಲಿಮೆಂಟರಿ ಶಾಲೆ, ಕಟಪಾಡಿ ಪೋಸ್ಟ್, ದ. ಕ.

ಕುರುಕಾಲು,
1-6-43.

ಬಾಲ ಸಾಹಿತ್ಯ ಮಂಡಲ, ಲಿಮಿಟೆಡ್.

ದಿವಂಗತ ಶ್ರೀ| ಉಳ್ಳಾಲ ಮಂಗೇಶರಾವ್ ಬಿ. ಎ., ಎಲ್. ಟಿ. ಅವರಿಂದ ರಚಿತವಾದ ನಮ್ಮ "ಮೊದಲನೆಯ ೧ರಿಂದ ೫ರ ವರೆಗಿನ ರೀಡರು"ಗಳು ಇದೇ ಜೂನ ಪ್ರಥಮ ವಾರದಲ್ಲೇ ಸಿದ್ಧವಾಗುವವು. ಅವುಗಳಿಗೆ ಬೆಲೆ ಮತ್ತು ಅವುಗಳ ಮೇಲಿನ ಕಮಿಶನಿನ ದರಗಳು ಕಾಲಕ್ಕೆ ತಕ್ಕಂತೆ ಹೊಂದಿಸಲ್ಪಟ್ಟು ಆಗಲೇ ಪ್ರಕಟಗೊಳ್ಳುವವು.

Bala Sahitya Mandal, Ltd.

ಜಗತ್ಪ್ರಸಿದ್ಧ ಮಹಾಕವಿ ಚಾರ್ಲ್ಸ್ ಡಿಕನ್ಸ್‌ರ ಕಥಾವಸ್ತುವು ಚಿತ್ರವಾಗಿ ನಿರ್ಮಿಸಲ್ಪಟ್ಟಾಗ ಮಿಲಿಯಾಂತರ ಮಂದಿ ನೋಡಿ ಆನಂದಿಸಿದರು, ಈ ಚಿತ್ರ ಈಗ ಉಡುಪಿಗೆ ಬರುವುದು-

ಒಲಿವರ್ ಟ್ವಿಸ್ಟ್

ಡಿಕ್ಕಿ ಮೂರ್, ವಿಲಿಯಮ್ ಬೊಯ್ಡ್, ಬಾರ್ಬರಾ ಕೆಂಟ್

ತಾ. 10-6-43ರಿಂದ.

ಶ್ರೀ ರಾಮಕೃಷ್ಣ-ಥಿಯೇಟರ್ ಲಿಮಿಟೆಡ್, ಉಡುಪಿ.

ಬರುವಚಿತ್ರ:— ಅಕೇಲಾ ಮುಜಾರ್‌ಖಾನ್, ಬಿಬ್ಬ.

BHUVANENDRA PRODUCTS Ltd.,

Head Office and Factory:
Katapadi, S. Kanara

Depots:
1 Mahratha Galli, Hubli
2. 57 Big street, Triplicane Madras

"BHUVANENDRA"
Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಯ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಶೈ L. I. M.; ಡಾ. ವೆಂಕಟ ರಾವ್, ಕೊಳಕ್ಕಲ್; ವಿಜಯಾ ಸ್ಟೋರ್ಸ್.

ದಕ್ಷಿಣ ಕನ್ನಡ.

ತೇರ್ಗಡೆ:— ಹೋದ ತಿಂಗಳಿನಲ್ಲಿ ಜರಗಿದ ಐ. ಸಿ. ಎಸ್. ಪರೀಕ್ಷೆಯಲ್ಲಿ ಉತ್ತೀರ್ಣರಾದ ನಮ್ಮ ಜಿಲ್ಲೆಯ ಶ್ರೀ ಎಂ. ಕೆ. ವ್ಯಾಸಭಟ್ಟರು 'ಇಂಡಿಯನ್ ಎಕೌಂಟ್ಸ್ ಸರ್ವಿಸ್' ಪರೀಕ್ಷೆಯಲ್ಲಿಯೂ ತೇರ್ಗಡೆ ಹೊಂದಿರುವರು. ಈ ಪರೀಕ್ಷೆಯಲ್ಲಿ ತೇರ್ಗಡೆಯಾದ 50 ಮಂದಿಯಲ್ಲಿ ಶ್ರೀ ಭಟ್ಟರು ೧೯ನೆಯವರು.

ಮಂಜಿಗಳ ನಷ್ಟ:— ಈ ವರ್ಷ ಮಳೆಗಾಲವು ಅನಿರೀಕ್ಷಿತವಾಗಿ ೧೫-೨೦ ದಿನಗಳಿಗೆ ಮುಂಚಿತವಾಗಿಯೇ ಪ್ರಾರಂಭವಾದುದರಿಂದ ವ್ಯಾಪಾರ ವಸ್ತುವನ್ನು ನಿರೀಕ್ಷಿಸುತ್ತಿದ್ದ ಅನೇಕ ಮಂಜಿಗಳು ನಷ್ಟಕ್ಕೀಡಾಗಿರುವವು. ಕೆಲವೊಂದು ಮುಂಬಯಿಗಳ ಅಂತರದಲ್ಲಿ ಸುಮಾರು ೪೦ ಮಂಜಿಗಳು ನಷ್ಟವಾಗಿರಬಹುದೆಂದು ಊಹಿಸಲಾಗಿದೆ. ಇನ್ನು ಅನೇಕ ಮಂಜಿಗಳು ಸಮೀಪವಿದ್ದ ಬಂದರುಗಳನ್ನು ಸೇರಿ ಆಶ್ರಯ ಪಡೆದವು. ಕುಂದಾಪುರದಿಂದಲೂ ತಿಳಿದುಬರುತ್ತದೆ.

ದ. ಕ. ಜಿಲ್ಲಾ ಜಡ್ಜರು:— ದ. ಕನ್ನಡ ಜಿಲ್ಲಾ ಜಡ್ಜರಾದ ಪಿ. ಯು. ಬಿ. ಸಿ. ಲಿಂಕೋಯನ್ ಅವರು ಮಂಗಳೂರಿಗೆ ವರ್ಗಾಯಿಸಲ್ಪಟ್ಟಿದ್ದಾರೆ. ಶ್ರೀ ಚೌಡರಿಯವರ ನೇಮಕವನ್ನು ರದ್ದುಮಾಡಿದೆ. ಪಿ. ಅಬ್ಬಿ ಸಾಹೇಬರು ನಿವೃತ್ತರಾಗುವರು.

ಬಿರುದುಗಳು:— ಈ ಬಾರಿಯ ಸಾರ್ವಭೌಮರ ಜನ್ಮ ದಿನದ ಬಿರುದುಗಳ ಪಟ್ಟಿಯು ಈಗಾಗ ಪ್ರಕಟವಾಗಿದೆ. ನಮ್ಮ ಜಿಲ್ಲಾ ಜಡ್ಜರಾದ ಪಿ. ಅಬ್ಬಿ ಸಾಹೇಬರಿಗೆ 'ಖಾನ್ ಬಹದ್ದೂರ್', ಪಬ್ಲಿಕ್ ಪ್ರೋಸಿಕ್ಯೂಟರರಾದ ಶ್ರೀ ಎಂ. ಕೆ. ನಂಬಿಯಾರರಿಗೆ 'ರಾವ್ ಸಾಹೇಬ್' ಮತ್ತು ಮದ್ರಾಸ್ ಹೈಕೋರ್ಟು ಪಬ್ಲಿಕ್ ಪ್ರೊಸಿಕ್ಯೂಟರಾಗಿದ್ದ ಬಂಟ್ವಾಳ ಸೀತಾರಾಮ ರಾಯರಿಗೆ 'ರಾವ್ ಬಹದ್ದೂರ್' ಬಿರುದುಗಳು ದೊರೆತಿವೆ.

ಇದೇ ತಾ 11ನೇ ಗುರುವಾರ ನಡೆಯಲಿರುವ ಜಿಲ್ಲಾ ಬೋರ್ಡಿನ ಅಧ್ಯಕ್ಷ ಚುನಾವಣೆಗೆ ಕಾರ್ಕಳದ ಶಂಕರ್ ಶ್ರೀ ಮಹಬಲ ಅಡ್ಯಂತಾಯರೂ ಒಬ್ಬ ಉಮೇದ್ವಾರರಾಗಿರುವರೆಂದು ತಿಳಿದು ಬರುತ್ತದೆ.

ಹೆಗ್ಗ.— ಇಲ್ಲಿಯ ಬೋರ್ಡ್ ಎಲಿಮೆಂಟರಿ ಶಾಲಾ ಹಳೆ ಗಿರಿ ಹಿತ್ತಲ ಕೂಟವು ತಾ. 31-5-43ರಲ್ಲಿ ವಿವಿಧ ವಿನೋದಾವಳಿಗಳಿಂದ ಶ್ರೀಯುತ ಡೆಪ್ಯುಟಿ ಇನ್ಸ್‌ಪೆಕ್ಟರ್ ಸಂಜೀವ ಭಟ್ಟರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀಗಳಾದ ಎಸ್. ಭವಾನಿ ಶಂಕರ ಹೆಗ್ಡೆ, ಕೆ. ಆನಂದ ಹೆಗ್ಡೆ ಇವರ ಸುರಸವಾದ ಭಾಷಣಗಳಿದ್ದುವು. ಅಧ್ಯಕ್ಷರು ವಿದ್ಯಾಭಿವೃದ್ಧಿ ವಿದ್ಯೆಯ ಅವಶ್ಯಕತೆಯ ಕುರಿತು ಮನದಟ್ಟಾಗುವ ರೀತಿಯಲ್ಲಿ ಭಾಷಣವಿತ್ತರು. ಚಟುವಟಿಕೆಯಲ್ಲಿ ಭಾಗವಹಿಸಿದ ಮಕ್ಕಳಿಗೆ ಹಿತ್ತಲ ಸಂಘದ ಮೆಂಬರರು ಮತ್ತು ಶ್ರೀ ಭವಾನಿಶಂಕರ ಹೆಗ್ಡೆಯವರು ಉಚಿತವಾಗಿ ಶ್ರೀ ನರಸಿಂಹ ತಂತ್ರಿಗಳ ತಿಂಡಿ ತೀರ್ಥವೂ ಇದ್ದವು. ಮುಖ್ಯ ಉಪಾಧ್ಯಾಯ ಶ್ರೀ ಎಚ್. ವಿಠ್ಠಲ ಶೆಟ್ರ ಧನ್ಯವಾದದೊಂದಿಗೆ ಸಭೆಯು ಕೊನೆಗೊಂಡಿತು.

ಇನ್ನಂಜೆ.— ತಾ 4-6-43ರಲ್ಲಿ ಶ್ರೀ ವಿಷ್ಣುಮೂರ್ತಿ ಹಯವದನ ಸ್ವಾಮಿ ಹೈಸ್ಕೂಲಿನ ಉದ್ಘಾಟನ ಸಮಾರಂಭವು ಶ್ರೀ ಶ್ರೀ ಸೋದೆ ಪಾದಂಗಳವರ ಸನ್ನಿಧಿಯಲ್ಲಿ ಶ್ರೀ ಅರೂರು ಲಕ್ಷ್ಮೀನಾರಾಯಣರಾಯರಿಂದ ನೆರವೇರಿಸಲ್ಪಟ್ಟಿತು. ಶಾಲಾ ಮೇನೆಜರರಾದ ಶ್ರೀ ಶ್ರೀನಿವಾಸ ಮಿತ್ತಂತಾಯರು ಸ್ವಾಗತ ಭಾಷಣ ಮಾಡಿದರು. ಅಧ್ಯಕ್ಷರು ಹೈಸ್ಕೂಲಿನ ಸ್ಥಾಪನ ಮಹತ್ವವನ್ನು ಕೊಂಡಾಡಿ ಹಳ್ಳಿಯಲ್ಲಿ ನಮ್ಮ ಜಿಲ್ಲೆಯಲ್ಲಿ ಇದೇ ಪ್ರಥಮ ಹೈಸ್ಕೂಲೆಂದು ಹೇಳಿ ಜನರ ಪ್ರೋತ್ಸಾಹವನ್ನು ಕೋರಿ ಉದ್ಘಾಟನೆ ಮಾಡಿದರು. ಜಿಲ್ಲಾ ಬೋರ್ಡ್ ವಿದ್ಯಾಧಿಕಾರಿಗಳಾದ ಶ್ರೀ H. ರಾಮರಾಯರು ಶ್ರೀಪಾದರಾದ ಗುರುಕುಲದ ಆವರಣ ಮಾಡಿದರು. ಶ್ರೀ ಸೋದೆ ಶ್ರೀಗಳವರೂ ಶ್ರೀ ಫಲಿಮಾರು ಶ್ರೀಗಳವರೂ ವಿದ್ಯಾದಾನದ ಮಹತ್ವವನ್ನು ಕುರಿತು ಭಾಷಣಮಾಡಿ ಶಾಲೆಯನ್ನು ಹರಸಿದರು. ಈ ಶಾಲೆಯ ರಕ್ಷಣಾರ್ಥವಾಗಿ ಶ್ರೀ ಸೋದೆ ಶ್ರೀಗಳವರು 1000 ರೂ ಗಳನ್ನು ಕೊಟ್ಟಿರುವರು. ಕರೆಸ್ಪಾಂಡೆಂಟರಾದ ಶ್ರೀ ಸಗ್ರಿ ಶ್ರೀನಿವಾಸಾಚಾರ್ಯರು ಧನ್ಯವಾದಾರ್ಪಣೆ ಮಾಡಿದರು.

ಚೂರುಚೂರು

ಮಿ. ಚರ್ಚಿಲ್ಲರು ಅಮೇರಿಕದಿಂದ ಜಿಬ್ರಾಲ್ಟರಿಗೆ ಹಾರಿ, ಟ್ಯುನಿಸ್, ಆಲ್ಜೀರ್ಸ್‌ಗಳನ್ನು ಸಂದರ್ಶಿಸಿ, ಅಲ್ಲಿ ಮಿ. ಆಂತೋನಿ ಈಡನ್ನರನ್ನು ಕೂಡಿಕೊಂಡು, ಜಿರಾಡ್, ಡಿ ಗೋಲೆಯವರೊಡನೆ ಔತಣ ಮಾಡಿ ಇದೇ ತಾ. 5ರಲ್ಲಿ ಲಂಡನಿಗೆ ಮರಳಿದರು.

ಕಸಬ್ಲಾಂಕಾ ಪ್ರಯಾಣದ ನಂತರ ಸಿಸಿಲಿ ಬಿದ್ದಂತೆ ಈ ಸಂಚಾರದ ನಂತರವೂ ಮಿ ಚರ್ಚಿಲ್ಲರು ಹಾಸಿಗೆ ಹಿಡಿದರೆ ತಾವು ಗೆದ್ದಂತೆಯೇ ಎಂದು, ಹಿಟ್ಲರರೆಲ್ಲಿಗೂ ಹೊರಡದೆ ಕಾಯುತ್ತಿದ್ದಾರೆ.

o

ಲೋಕ ಪ್ರಸಿದ್ಧ ಲೇಖಕ ಲೂಯಿ ಫಿಶರರ ಭಾರತೀಯ ಸಂಬಂಧ ಭಾಷಣ ಲೇಖನಗಳನ್ನು ತಮ್ಮ ಅವಗಾಹನೆಗೆ ತಾರದೆ ಹಿಂದುಸ್ಥಾನದಲ್ಲೆಲ್ಲೂ ಪ್ರಕಟಿಸಬಾರದೆಂದು ಹಿಂದೀ ಸರಕಾರದ ಆಜ್ಞೆ.

ಡಾ| ಅಂಬೇಡ್ಕರ್, ಸರ್ ಖಾನ್ ನೂನರ ಹೊರತು ಮಿಕ್ಕವರ ಭಾಷಣ ಲೇಖನಗಳನ್ನೂ ಪ್ರಕಟಿಸಬಾರದೆಂಬ ಆಜ್ಞೆ ಮಾಡುವದು ಸುಲಭೋಪಾಯವಲ್ಲವೆ?

o

'ನಾನು ವಸ್ತುಸ್ಥಿತಿಯನ್ನು ಇನ್ನಷ್ಟು ಕೆಡಿಸಲಾರೆ; ಸುಳ್ಳರ್ಥ ಕೊಡುವ ಹಿಂದೂ ಪತ್ರಿಕೆಗಳ ಮಾದರಿಯನ್ನು ನಾನು ಅನುಸರಿಸಲಾರೆ'- ತನಗೆ ಬರೆದ ಗಾಂಧೀ ಪತ್ರ ನಿರಾಕರಣೆಯ ಕುರಿತು ಕರಾಚಿಯ ಪತ್ರಿಕಾ ಸಮ್ಮೇಲನದಲ್ಲಿ ಮಿ. ಜಿನ್ನರ ಮಾತು.

'ಜಿನ್ನಾ ಶಬ್ದಕೋಶ'ವೊಂದನ್ನು ತಯಾರಿಸಿ, ಎಲ್ಲಾ ಹಿಂದೂ ಪತ್ರಿಕೆಗಳಿಗೂ ಕಳುಹಿಕೊಡಬೇಕೆಂಬ ನಿರ್ಧಾರವು ಮುಂದಿನ ಮುಸ್ಲಿಂ ಲೀಗ್ ಕಾರ್ಯಕಾರೀ ಸಮಿತಿಯಲ್ಲಾಗುವದೆಂಬ ನಿರೀಕ್ಷೆಯಿದೆ.

o

ಫೆಡರಲ್ ಕೋರ್ಟಿನಿಂದ ಅಸಿಂಧುಗೊಳಿಸಲ್ಪಟ್ಟ ರಕ್ಷಣಾ ಕಾನೂನಿನ 26ನೇ ನಿಯಮಕ್ಕೆ ಜೀವದಾನ ಮಾಡಿದ ಗವರ್ನರ್ ಜನರಲರ ಹೊಸ ಓರ್ಡಿನೆನ್ಸ್ ಕೂಡಾ ಸಿಂಧುವಲ್ಲ ಎಂದು ಕಲ್ಕತ್ತಾ ಹೈಕೋರ್ಟು ತೀರ್ಮಾನಿಸಿದೆ.

ಲೋರ್ಡ್ ಲಿನ್ ಲಿತ್‌ಗೋರವರು ಸದ್ಯದಲ್ಲೇ ಈ ಹೊಸ ಓರ್ಡಿನೆನ್ಸನ್ನು ಸಿಂಧುಗೊಳಿಸುವ ಇನ್ನೊಂದು ಹೊಸಹೊಸ ಓರ್ಡಿನೆನ್ಸ್ ಹೊರಡಿಸಬಹುದೆಂಬ ಆಸೆಯಿದೆ.

o

'ವಿಮಾನ ಬಲದಲ್ಲೀಗ ಜರ್ಮನರಿಗಿಂತ ನಾವು ಮೇಲಾಗಿದ್ದೇವೆ'- ಮಿತ್ರರ ದೈನಿಕ ಘೋಷಣೆ.

ಆಘಾತ್ ಜರ್ಮನ್ ವಿಮಾನಗಳು ತಗ್ಗಿಗಿಳಿದು ಬೋಂಬು ಹಾಕುತ್ತಿರುವಾಗ ಮಿತ್ರ ವಿಮಾನಗಳು ಎತ್ತರದಿಂದಲೇ ಹೊಡೆಯುತ್ತಿವೆ.

o

'ನಾಗರಿಕರ ವಸ್ತ್ರದ ಬೆಲೆಯನ್ನೂ ರಕ್ಷಣಾ ಖಾತೆಯ ಸರಬರಾಯಿಯನ್ನೇ ತಗ್ಗಿಸುತ್ತೇವೆ. ಆದರೆ ಈ ನಿಯಂತ್ರಣವು ಪೂರ್ಣವಾಗುವಾಗ ಆರು ತಿಂಗಳು ಕಳೆದೀತು' ಹಿಂದೀ ಸರಕಾರದ ಕೈಗಾರಿಕಾ ಖಾತೆಯ ಕಾರ್ಯದರ್ಶಿ ಮಿ. ಹೈದರಿಯವರ ಆಶ್ವಾಸನೆ.

ಅಂದರೆ ಇನ್ನಾರು ತಿಂಗಳೊಳಗೆ ಎಲ್ಲಾ ನಾಗರಿಕರೂ ರಕ್ಷಣಾ ಸೈನಿಕರಾಗುವ ಆಸೆಯಿರಬಹುದೇ?

—ವಿನೋದಿ

The Rainy Day

It is but human nature to enjoy life and make merry when troubles there are none—while the sun shines. It is unanderstandable. But modern life has also its obligations and a wise man well knows that life has also its storms to face and he accordingly prepares for such eventualities.

He does this with an INDOUNION LIFE policy. He chooses one that exactly suits his needs. With this Policy he and his family can well face life's furies and misfortunes with a calm heart. INDOUNION stands guard over his dependents, especially at the height of the storm when he himself may no longer be there to protect them.

INDOUNION can give YOU, too, this peace of mind. Let us send you full particulars or our representative will gladly call. There is no obligation.

INDO-UNION ASSURANCE CO. LTD.,

INDOUNION BUILDINGS, G. T. MADRAS.

BRANCH OFFICE

For Bombay Presidency, Hyderabad (Deccan) & South Kanara.

BEHRAMJI MANSION, SIR PHIROZSHAH METHA ROAD, FORT, BOMBAY.

Bombay Branch Manager
M. Sunderram Shetty

General manager:
K. S Ramamurthi, M. A.

The Pangal Nayak Bank Limited.

ದಿ. ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

ಮುಖ್ಯ ಕಾರ್ಯಾಲಯ:—ಕೋರ್ಟು ರಸ್ತೆ, ಉಡುಪಿ. ದಕ್ಷಿಣ ಕನ್ನಡ.

ಶಾಖೆಗಳು:— ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಕಿನ್ನಿಗೋಳಿ.

ಮುಸಂ ಠೇವಣಾತಿಗಳು ತಾ. 31-7-1943 ಅಥವಾ ಈ ತಾರೀಕಿನ ಮೊದಲು ವ್ಯಾದೆಯಾಗುವುದಾದರೆ ಅಂಥಾ ವ್ಯಾದೆಯ ವರೆಗೆ ಸಾಲಿಯಾನ ಶೇಕಡಾ 3ರ ಸಟೆ ಬಡ್ಡಿಯಲ್ಲಿ 3, 4, 5 ಅಥವಾ 6 ತಿಂಗಳ ವ್ಯಾದೆಯಿಂದ ಪ್ರತಿಯೊಂದು ಶಾಖೆಯಲ್ಲಿ ಅಂಗೀಕರಿಸಲ್ಪಡುತ್ತವೆ.

ಬೇಂಕಿನ ಪ್ರತಿಯೊಂದು ವಿಧದ ವಹಿವಾಟುಗಳು ನಡೆಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ಮೊಖತಾ ಅಥವಾ ಪತ್ರದ್ವಾರಾ ಸಮೀಪದ ಶಾಖೆಯಲ್ಲಿ ದಯವಿಟ್ಟು ವಿಚಾರಿಸಿರಿ



ಅಮೃತಾಂಜನ ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಬಾತು ಕೊಳ್ಳುವುದು, ಜೇಳು ವಿಷವುಂಟಾದ ಜಾನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ,

REGD.

ಬುಳುಕಟ್ಟಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತ.

P. M. Kunhi Raman, Manager

Parassini Madappura Temple.

P. O. Parassinikkatavu

(Via) Pappinisserri.

ಇದರಿಂದ ಸಮಸ್ತ ಜನರಿಗೆ ತಿಳಿಯ ಪಡಿಸುವುದೇನೆಂದರೆ-

ಪರಸಿನಿ ಕಡವು ದೇವಸ್ಥಾನದಿಂದ ಈ ಮೂಲಕ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುಞ್ಞಿರಾಮನ್.

ಮೆನೇಜರ್.

ನವಯುಗದ ಹೊಸ ಚಂದಾದರ

ಕಾಗದದ ಅಭಾವ ಹಾಗೂ ಸರಕಾರದ ಹೊಸ ಆಜ್ಞೆಯಂತೆ ಇದೇ ಎಪ್ರಿಲ್ ತಾ. 1ರಿಂದ ನವಯುಗದ ಬಿಡಿ ಸಂಚಿಕೆಯ ಬೆಲೆಯನ್ನು 0-1-6ಗೆ ಏರಿಸಲಾಗಿದೆ. ಜಾಹೀರಾತಿನ ದರವನ್ನೂ ಹೆಚ್ಚಿಸಲಾಗುವುದು. ವಾರ್ಷಿಕ ಚಂದಾ ದರವನ್ನು ಈ ಕೆಳಗಿನಂತೆ ಗೊತ್ತು ಮಾಡಲಾಗಿದೆ. ಈಗಿದ್ದ ಚಂದಾದಾರರಿಗೆ ಮಾರ್ಚ ಅಂತ್ಯದ ವರೆಗೆ ಮೊದಲಿನಂತೆ ಚಂದಾ ದರ ಹಿಡಿದು ಉಳಿದ ಹಣದಲ್ಲಿ ಹೊಸ ದರದಂತೆ ಎಷ್ಟು ಸಮಯ ಕಳಿಸಬಹುದೋ ಅಷ್ಟು ಅವಧಿಯ ವರೆಗೆ ಪತ್ರಿಕೆ ಕಳಿಸಲಾಗುವುದು. ಚಂದಾ ಬಾಕಿ ಇರುವವರು ಮಾರ್ಚ ತನಕ ಮೊದಲಿನ ದರದಂತೆಯೂ ಆನಂತರ ಹೊಸ ದರದಂತೆಯೂ ಚಂದಾ ಹಣ ಕಳಿಸುವಂತೆ ವಿನಂತಿ

ಹೊಸ ಚಂದಾದರ

	ಸ್ಥಳೀಕರಿಗೆ	ಪರಸ್ಥಳೀಕರಿಗೆ ಅಂಚೆ ವೆಚ್ಚ ಸೇರಿ
1 ವರ್ಷಕ್ಕೆ ರೂ.	3-12-0	4-8-0
6 ತಿಂಗಳಿಗೆ ರೂ.	2-0-0	2-8-0

ಎಂದಿನಂತೆ ವಾಚಕರೂ ಜಾಹೀರಾತುದಾರರೂ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಮೆನೇಜರ್.

— ಮಕ್ಕಳನ್ನು ಹಡೆಯುವದು ಸಾಕು.—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಹಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ 1 ಗುಳಿಗೆ, ಮಧ್ಯಾಹ್ನಕ್ಕೆ 1 ಗುಳಿಗೆ, ಸಂಜೆಗೆ 1 ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಸಲ್ಲೆ ಬಿಡಬೇಕು. 7 ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು 7 ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಬೆಳಗಾವಿಯಲ್ಲಿ:—ಉಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ. ಬಿಲ್, ಎಲ್, ಕೆವಲದಾಸ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager

ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ರ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ಡಿಳ**

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸದೊರೆಯ ಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ. : : : : **ಮಂಗಳೂರು:**

ಸ್ಥಾಪನೆ **ಕ್ರೌನ ರಬ್ಬರ ಸ್ಟಾಂಪ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road. MANGALORE.

Approved firm by the Govt. Mysore.

Certified by the Agent of the Govt. of India in Ceylon.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಂಜಿ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI. S. INDIA.

Regd. No. M. 3618.

Ested. 1921 ಸ್ಥಾಪನೆ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೩
ಸಂಚಿಕೆ ೩೯

FOUNDER
Sri. A. B. Shetty, M. L. A.

Vol. 23
No. 39

NAVAYUGA— Kannada Weekly —UDIPI, S. I.

ಉಡುಪಿ ● 17—6—1943 ● ಮಂಗಳೂರು.

ಹೊಸಕೆರೆ ಚಿದಂಬರಯ್ಯನವ
ರಿಂದ ರಚಿತವಾದ ಗೀತೆಯ
ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು ೩೪೦ ಪುಟಗಳು,
ಬೆಲೆ (ಸುಂದರ ಪ್ರತಿ) ೦—೮—೦
(ಕೆಲಿಕೋ ಬೈಂಡ್) ೦-೧೨—೦
(ಲೆದರ್ ಬೈಂಡ್) ೧—೪—೦
ಪ್ರತಿಗಳು ಪ್ರಸಿದ್ಧ ವ್ಯಾಪಾರಿಗಳಲ್ಲಿ ಸಿಗುವುದು.
0-10-0 ಸ್ಟಾಂಪು ಕಳಿಸಿದ್ದಲ್ಲಿ ಒಂದು
ಪ್ರತಿಯನ್ನು ಬುಕ್‌ಪೋಸ್ಟ್
ಮಾಡಲಾಗುತ್ತೆ.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಶ್ರೀಮತಿ ಶಿವರಾಣಿ ದೇವೀ ಯವರಿಂದ
(ದಿವಂಗತ ಪ್ರೇಮಚಂದರ ಪತ್ನಿ)
ರಚಿತವಾದ ಹಿಂದೀ ಕತೆಗಳ ಕನ್ನಡ
ಭಾಷಾಂತರ

ನಾರೀ ಹೃದಯ

ನಾರೀ ಹೃದಯದ ವಾಸ್ತವಿಕ ಚಿತ್ರ
ವನ್ನು ಚಿತ್ರಿಸುವ ಉತ್ತಮ ಕತೆಗಳ
ಸಂಗ್ರಹ.

ಬೆಲೆ 0—14—0
ಟ ಖ. 0—2—0 ಪ್ರತ್ಯೇಕ.
ಒಂದು ರೂಪಾಯಿ ಸ್ಟಾಂಪು ಕಳಿಸಿದರೆ ಒಂದು
ಪ್ರತಿಯನ್ನು ಕಳಿಸಲಾಗುವುದು.

ಕಿರಿಯರ ಪ್ರಪಂಚ, ಉಡುಪಿ.
ಅಥವಾ ನವಭಾರತ ಬುಕ್
ಡಿಪೋ, ಉಡುಪಿ.

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

The Canara Mutual Assurance Co., Ltd.,
UDIPI. (S. India).

ನೀವೀ ವರೆಗೆ ವಿಮೆಯನ್ನೇ ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಈಗಲೇ ವಿಮೆ [illegible] ಳಿಸಿರಿ

ಏಕೆಂದರೆ:—

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಪರಿವಾರದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ, ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಮುಖ ಏಜಂಟರು.
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ, ದ. ಕನ್ನಡ.
ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ:—
ಮಂಗಳೂರು, ಕಲ್ಲಿಕೋಟೆ, ಸೇಲಂ, ತಿರುವಾಂಕೂರು, ಬೆಂಗಳೂರು
ನಗರ ಮತ್ತು ಬೊಂಬಾಯಿ.

THE BOMBAY LIFE ASSURANCE CO., LTD.

Sick or healthy, wounded or convalescent in a Prisoner's Camp or in the Line—

Our Men Need Your Help

SUBSCRIBE
to
H. E. The Governor's
War Fund
earmarked
"RED CROSS"
or
"AMENITIES FOR TROOPS"
—as you choose, but—
SUBSCRIBE!

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ...ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೇಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

ಮುಸಲನಿಯ ಮುಂದೆ ಬಂತು-ಬದುಕು ಸಾವಿನ ಪ್ರಶ್ನೆ!

ಪ್ರಪಂಚದ ಪ್ರಮುಖ ಯುದ್ಧಾಸಕ್ತ ರಾಷ್ಟ್ರಗಳ ಇದು ವರೆಗಿನ ಯುದ್ಧಗತಿಯನ್ನು ವ್ಯಂಗ್ಯವಾಗಿ ಚಿತ್ರಿಸುವದಾದರೆ ಹೀಗನ್ನಬಹುದು:-ಜರ್ಮನಿ-ಸಂಧ್ಯ ಸಥದ ಮಧ್ಯಭಾಗದಲ್ಲೇ ಕಲ್ಲೆಡವಿದ ಜೂಜಿನ ಕುದುರೆ; ರಶ್ಯಾ-ಯುದ್ಧೋಯ್ಯಾಲೆಯಲ್ಲಿ ಹಿಂದೊಮ್ಮೆ ಮುಂದೊಮ್ಮೆ ತೂಗುತ್ತಿರುವ ನಾಯಿಗಾಡಿ; ಜಪಾನ್-ರೇಜಸ್ಸಿಯಲ್ಲಿ ಘಂಟೆಗಳನತ್ತು ನ್ಯಲಂತೆ ಧಾವಿಸಿ ಈಗ ಗುಡ್ಡವೇರುತ್ತಿರುವ ಮೋಟಾರು ಕಾರು; ಇಂಗ್ಲಾಂಡು ಅಮೇರಿಕ-ಅಡಿಗೆ ಬಿದ್ದರೂ ಬಂಗಾರದ ಬೀಳುವ ಪ್ರತಿ ಘಟನೆ ಪಿಡಿತ ಮೊರೆತ ಚಿಷ್ಟಿ; ಚೀನಾ-ಬಿನಕೆಯುಡಿಯ ಕುಸ್ತಿಗೇ ಅಕ್ಕ; ಇಟಲಿ-ತಿನಿಮೋಡುತ್ತಿರುವ ಪರೋಣೆಗಾಡಿ!

ಇಟಲಿಯ ಘಾತುಕತನ

ನೋಲಿಸ ಬಿಡುಮಗಳ ಸೈಕೆ ಇಟಲಿಯ ಪಾಲಿಸದ ಅತ್ಯಂತ ಸಂಮುಜಸನಾದುದು. ಹಿಟ್ಲರು ಫ್ರಾನ್ಸನ್ನಾಕ್ರಮಿಸಿ, ಅಮೂಲ್ಯ ಚರಿತ್ರೆಯಿದ್ದ ಆ ರಾಷ್ಟ್ರದ ಆಯುಷ್ಯವು ಕೈ ಬಿರಕೆಣಿಕೆಯ ದಿನಗಳಲ್ಲಿ ಲೆಕ್ಕಿಸಲ್ಪಡುವ ಕಾಲ ಬಂತೆನ್ನುವಾಗ, ಆ ತನಕ ತಾಟಸ್ಥ್ಯ ವಹಿಸಿದ್ದ ಮುಸಲನಿ ಫ್ರಾನ್ಸನ್ನು ಬೆಂಗಡೆಯಿಂದ ತಿವಿಯಲು ಹೇಸಲಿಲ್ಲ. ಇಟಲಿಯ ಪ್ರಥಮ ಗುಂಡು ಹಾರಿದುದು ಮುಂದೊತ್ತುವ ವೈರಿಯ ಎದೆಗಲ್ಲ; ಮುಗ್ಗರಿಸಿ ಬೀಳುತ್ತಿದ್ದ ವೀರನ ಬೆನ್ನಿಗೆ! ಅದಾವ ಲಕ್ಷಣವೋ-ವೀರ ಚಾರಿತ್ರ್ಯವಿಧ್ವ ಇಟಲಿ ಸೇನೆಗೆ ಅಂದಿನಿಂದ ಪ್ರತಿಯೊಂದು ರಂಗದಲ್ಲೂ ಬೆಂಗೊಟ್ಟೋಡುವದೇ ಅದೃಷ್ಟವಾಯಿತು. ಗ್ರೀಸಿನಲ್ಲಿ ಪಲಾಯನ; ಇಜಿಪ್ಟಿನೊಳಗೆ ಕಾಲೂರಿ ಕಾಲು ಕಿತ್ತೋಡುವ ಹವ್ಯಾಸ; ಈಗಲಂತೂ ಟ್ಯುನಿಸಿಯಾ ಪತನದೊಡನೆ ಆದರ ಆಫ್ರಿಕಾ ಸಾಮ್ರಾಜ್ಯ ಸಂಪೂರ್ಣ ಇತಿ ಶ್ರೀ!

ಅಸ್ಥಿರ ಅದೃಷ್ಟ.

ಇಷ್ಟರಿಂದಲೇ ಪರಿಹಾರವಾಗದ ತನ್ನ ಸಾಹಸದ ಪೂರ್ಣ ಫಲವನ್ನು ಮುಸಲನಿಯು ಸ್ವಗೃಹದಲ್ಲೇ ಉಣ್ಣುವ ಕಾಲ ಬಂದಂತಿದೆ. ಟ್ಯುನಿಸಿಯಾ ಪತನವಾದೊಡನೆ ವಾಷಿಂಗ್ಟನಿಗೆ ಧಾವಿಸಿದ ಚರ್ಚಿಲ್ಲರು ರೂಸವೆಲ್ಟರೊಡನೆ ಇಟಲಿಯ ವಿಷದ ಹಲ್ಲುಗಳಂತಿರುವ ಫೇಸಿಸ್ಟ್ ಆಳ್ವಿಕೆಯನ್ನು ನಿರ್ನಾಮಗೊಳಿಸುವ ಯೋಜನೆ ತಯಾರಿಸಿ, ಅಮೇರಿಕದ ಸರ್ವ ಸೇನಾನಿ ಜನರಲ್ ಮಾರ್ಶಲರನ್ನು ಕೂಡಿಕೊಂಡು ಟ್ಯುನಿಸ್, ಅಲ್ಜೀರ್ಸ್‌ಗಳಲ್ಲಿರುವ ಮಿತ್ರ ಸೇನೆಗಳಿಗೆ ಇಟಲಿಯ ಎದೆಯನ್ನೇ ಗುರಿಯಾಗಿ ತೋರಿಸಿ ಬಂದಿದ್ದಾರೆ. ಮುಸಲನಿಯು ನೆಗೆದು ಬರುತ್ತಿರುವ ವ್ಯಾಘ್ರನಿದಿರಿನಲ್ಲಿದ್ದಾರೆ; ಇಟಲಿಯ ಅದೃಷ್ಟವು ದಾರದಲ್ಲಿ ತೂಗಾಡುತ್ತಿದೆ.

ಮಾತು ಕೃತಿಗಳಿಂದ ಎಚ್ಚರಿಕೆ.

ಟ್ಯುನಿಸಿಯಾ ಪರಾಭವದನಂತರ ಇಟಲಿಗೆ ಒಂದೇ ಒಂದು ಕ್ಷಣದ ವಿರಾಮವನ್ನು ಮಿತ್ರರು ಕೊಟ್ಟಿಲ್ಲ. ಇಟಲಿಯ ಮೇಲೂ, ಇಟಲಿಯ ಸಮುದ್ರ ಪಥದಲ್ಲಿರುವ ದ್ವೀಪಗಳ ಮೇಲೂ ಅವಿಶ್ರಾಂತ ಆಕಾಶ ಧಾಳಿ ನಡಿಸಿ, ಮುಂಬರುವ ಆಕ್ರಮಣ ಸೂಚನೆಯನ್ನು ಕೃತಿ ಮುಖೇನ ಮಿತ್ರ ರಾಷ್ಟ್ರೀಯರಿತ್ತಿದ್ದರು. 'ಮುಸಲನಿಯನ್ನು ಕಿತ್ತೊಗೆದು ಇಟಲಿಯಾನರು ಬದುಕಬಹುದು' ಎಂದು ಚರ್ಚಿಲ್ಲರು ವಾಷಿಂಗ್ಟನಿನ ಭಾಷಣದಲ್ಲಿ ಎಚ್ಚರಿಕೆಯನ್ನೂ ಕೊಟ್ಟಿದ್ದರು. ಟ್ಯುನಿಸಿಯಾ ಗೆದ್ದ ಮಿತ್ರರ ಸೇನೆ ಇಟಲಿಗಭಿಮುಖವಾಗಿ ಅಲ್ಲಿಯೇ ನಿಂತಿರುವದು ಮಾತ್ರವಲ್ಲ, ಇನ್ನಷ್ಟು ಬೆಳೆಯುತ್ತಿರುವುದನ್ನೂ ಕಂಡ ಮುಸಲನಿಯರು ಸರ್ವ ಸಿದ್ಧತೆನಾಡಿ ಇದಿರ್ಗೊಳ್ಳಲು ಅನುವಾದರು-ಅನ್ಯಥಾ ಹಾದಿಯಿಲ್ಲದ್ದರಿಂದ! ಮೊನ್ನೆ ತಾನೇ ರೋಮ್ ರೇಡಿಯೋ ಕರೆದಿದೆ: "ಅವರು ಬರಲಿ, ನಾವು ಸಿದ್ಧರಾಗಿದ್ದೇವೆ" ಆದರೆ ಈ ಸಿದ್ಧತೆ ಯಾವುದಕ್ಕೆಂದು ಯಾರುಬಲ್ಲ? ಟ್ಯುನಿಸಿಯಾದ ಒಂದೆಡೆಯ ರಣರಂಗದಿಂದ ಒಂದು ವಿನೋದಕರ ವಾರ್ತೆ ಬಂದಿತ್ತು. ಅಲ್ಲಿಯ ಇಟಲಿ ಸೇನಾ ಶಿಬಿರದ ಮುಂಭಾಗದಲ್ಲಿ 'ಇಟಲಿಯೋಧನನ್ನು ತಡೆಯುವವರಿಲ್ಲ' ಎಂದು ಬರೆದಿದ್ದ ಬೋರ್ಡು ತೂಗಾಡುತ್ತಿತ್ತು. ಅದನ್ನಾಕ್ರಮಿಸಿಕೊಂಡ ಬ್ರಿಟಿಷ್ ಸೇನೆಯು ಆ ಬೋರ್ಡನ್ನು ಕಿತ್ತೊಗೆಯಲಿಲ್ಲವಂತೆ. ಓರ್ವ ಸರಸವಿನೋದಿಯೋಧನು ಆ ಬೋರ್ಡಿನ ಪಂಕ್ತಿಯ ಕೊನೆಗೆ '....ಓಡಿಹೋಗದಂತೆ'-ಎಂಬುದನ್ನು ಸೇರಿಸಿ ಬರೆದು ಎಲ್ಲರಲ್ಲಿಯೂ ನಗೆಯನ್ನೆಬ್ಬಿಸಿದ. ಇಟಲಿಯಾನರ 'ನಾವು ಸಿದ್ಧರಿದ್ದೇವೆ' ಎಂಬ ಇದರ ವೀರವಾಕ್ಯವೂ ಹಾಗೇನೇ ಪೂರ್ತಿಗೊಳ್ಳಲಿದೆಯೋ ಎಂಬುದನ್ನು ನೋಡಲಿಕ್ಕಿದೆ!

ಪಾಂಟಿಲೇರಿಯಾ ಪತನ.

ಮಿತ್ರ ಸೇನೆಗಳೀಗ ಹೊಡೆತ ಮತ್ತು ಹಿಡಿತವೆರಡನ್ನೂ ಪ್ರಾರಂಭಿಸಿವೆ. ಭೂಮಧ್ಯ ಸಮುದ್ರದಲ್ಲಿ ಇಟಲಿಯೂರಿದ್ದ ಚತುಷ್ಪಾದಗಳೆಂಬಂತಿದ್ದ ಸಿಸಿಲಿ, ಸಾರ್ಡಿನಿಯಾ, ಕೋರ್ಸಿಕಾ, ಪಾಂಟೆಲೇರಿಯಾ ದ್ವೀಪಗಳ ಪೈಕಿ ಕೊನೆಯದನ್ನು ಇದೇ ತಾ. ೧೧ರಲ್ಲಿ ಆಂಗ್ಲೋ—ಅಮೇರಿಕಾನ ಸೇನೆಗಳಾಕ್ರಮಿಸಿಕೊಂಡಿವೆ. ಆಕಾಶ ಧಾಳಿಯಿಂದ ಪೂರ್ತಿ ನಿರ್ಜೀವವಾಗಿದ್ದ ಆ ದ್ವೀಪಕ್ಕೆ ವೃಥಾ ರಕ್ತಾಭಿಷೇಕ ಮಾಡಿಸದೆ ಬಿಟ್ಟುಕೊಡಿರೆಂಬ ಜನರಲ್ ಈಸೆನೋವರರ ವಿಜ್ಞಾಪನೆಯನ್ನು ಮೊದಲ ಬಾರಿಗೆ ಮನ್ನಿಸದ ಅಲ್ಲಿಯ ಇಟಲಿ ಸೇನಾನಿಯು ಮಿತ್ರರಿಟ್ಟ ಪ್ರಥಮ ಹೆಜ್ಜೆಗೇನೇ ಪ್ರಣಾಮ ಮಾಡಿದ್ದಾನೆ. ಪಾಂಟೆಲೇರಿಯವು 30 ಚದರ ಮೈಲು ವಿಸ್ತೀರ್ಣ, 10000 ಜನಸಂಖ್ಯೆಯಿದ್ದ ಸಣ್ಣ ದ್ವೀಪ. ಅಲ್ಲಿದ್ದುದು ಕೇವಲ 8000 ಇಟಲಿ ಸೇನೆ. ಆದರೆ ಅದು ಪ್ರಾಮುಖ್ಯ ನೌಕಾ ನಿಲ್ದಾಣವಾಗಿದ್ದು 'ಇಟಲಿಯ ಮಾಲ್ಟಾ' ಎಂದು ಹೆಸರು ಪಡೆದಿದ್ದಿತು. ಪಾಂಟಲೇರಿಯಾಕ್ಕೆ ಬಂದು ನಿಂತಾಗಲೇ ಮಿತ್ರ ಸೇನೆಗಳು, ಸಿಸಿಲಿಯಿಂದ 63 ಮೈಲು ದೂರಕ್ಕೆ, ಇಟಲಿಯಿಂದ 250 ಮೈಲು ದೂರಕ್ಕೆ ಬಂದಂತಾಯಿತು. ಮುಸಲನಿಗೀಗ ಹಿಟ್ಲರರಿಗಿಂತ ಚರ್ಚಿಲ್ ರೂಸವೆಲ್ಟರೇ ಸಮಾಪವರ್ತಿಗಳು!

ಅಧ್ಯಕ್ಷರ ಆಶ್ವಾಸನೆ.

"ಜರ್ಮನರನ್ನು ಓಡಿಸಿ, ಫೆಸಿಸ್ಟ್ ರಾಜ್ಯಭಾರವನ್ನು ಕಿತ್ತೊಗೆದ ಮೇಲೆ ಇಟಲಿಯಾನರು ತಮ್ಮಿಚ್ಛೆಯ [illegible] ಪದ್ಧತಿಯನ್ನು ನಿರ್ಮಿಸಿಕೊಳ್ಳಲು ಸ್ವತಂತ್ರರಿದ್ದಾರೆ. ಇಟಲಿಯು ರಾಷ್ಟ್ರೀಯತ್ವದ ಮರು ಸಂಪಾದನೆ ಹೊಂದಿ, ಯುರೋಪೆಂಬ ಕುಟುಂಬದ ಗೌರವಾರ್ಹ ಮೆಂಬರನಾಗಿರಬೇಕೆಂಬುದೇ ಮಿತ್ರ ರಾಷ್ಟ್ರೀಯರ ಬಯಕೆ ಮತ್ತು ಹಾರೈಕೆ. ಮುಸಲನಿಯು ತನ್ನ ಸ್ವಲಾಭಕ್ಕಾಗಿ ಸ್ವರಾಷ್ಟ್ರ ಶಕ್ತಿಯನ್ನು ಈ ಯುದ್ಧದಲ್ಲಿ ದುರುಪಯೋಗ ಪಡಿಸಿದ್ದಾನೆ. ಇಟಲಿಯ ಹೆಸರಿನಿಂದ ನಡೆಸಲ್ಪಡುವ ಯುದ್ಧವು ಫೇಸಿಸ್ಟ್ ಕ್ರೂರಿಗಳದೇ ಹೊರತು ಶಾಂತಿಪ್ರೇಮಿ ಇಟಲಿ ಜನತೆಯದಲ್ಲ" ಎಂದು ಅಧ್ಯಕ್ಷ ರೂಸವೆಲ್ಟರು ಬಲಗೈಯಿಂದ ಇಟಲಿ ಸೇನೆಗೆ ತಾಡನೆ ಕೊಡುತ್ತಿದ್ದಂತೆಯೇ ಎಡ ಗೈಯಿಂದ ಇಟಲಿ ಜನತೆಯ ಬೆನ್ನು ಸವರುತ್ತಿದ್ದಾರೆ. ಮುಸಲನಿಗೆ ಶನಿ ತಾಗಿರುವ ಈ ದುಷ್ಕಾಲದಲ್ಲಿ ಇಂತಹ ಪ್ರಚಾರಗಳು ಅಚಾನಕ್ಕಾಗಿ ಗೋಚರಿಸಲೂಬಹುದು.

ಇನ್ನು ಪರ್ಯಾಯ ಪ್ರಕಾರ ಸಿಸಿಲಿ, ಇಟಲಿಗಳ ಆಕ್ರಮಣ!

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ.

O. S. No. 278/1937

ಕ್ರಮ ಅಪ್ಲಿಕೇಶನ್ ಅರ್ಜಿ ನಂಬ್ರ 887/1942

Mrs [illegible]

—ಅಪ್ಲಿಕೇಶನ್ ಅರ್ಜಿದಾರರು.

[illegible]

[illegible]

Mangalore) K. R. Talcherkar.
9-6-43 } Counsel for Petitioner.

WANTED GRADUATES.

APPLY FOR TERMS

CANARA BANK LIMITED.

ESTD: 1906.

The Vijaya Bank Ltd.,

NOTICE.

(Under Articles 27 & 28 of the Artiles of Association of the Bank)

The registered notices issued to the undermentioned partly paid-up Ordinary shareholders of the Bank, demanding payment of the calls in arrears in respect of the shares held by them as per particulars furnished below, having been returned undelivered, the said shares are liable to be forfeited on or after 30—6—1643 without any further notice unless all monies due thereunder are remitted to our Mangalore Office by the afore-said date by them or by persons claiming through them.

Name and address of Shareholder.	No. of Shares	Calls in arrears.	Interest up-to-date with Post-age.	Remarks
		Rs. As. Ps.	Rs. As. Ps.	
1. Sri. K. Nandiappa Shetty, C/o British India General Ins. Co., Ltd., 35-43 Churchgate Street, Bombay.	2	30—0—0	6—5—0	Further interest from 6-6-43 on the amount of arrears of call money at 6¼%
2 Sri. S, Sheenappa Shetty, S/o Rukmaya Shetty, Radhakrishna Hindu Hotel, Thak Bunder Naka, Mount Road, Bombay No. 10	4	60—0—0	8—5—0	

Office of the Vijaya Bank, Ltd., MANGALORE, 5th June, 1943.

B. Mahabala Shetty,
Ag. Secretary.

The Canara Banking Corporation Limited.
(Incorporated in British India with limited Liability.)
ESTD: 1906.

A Branch of the Corporation has been opened at COIMBATORE on 29-3-1943.

ಉಡುಪಿ, ಗುರುವಾರ, ೧೭-೬-೧೯೪೩

ಅಕ್ಕಿಯ ಧಾರಣೆ

ಹೊಟ್ಟೆಯ ರೋದನವಿಂದು ದೇಶದ ಸರ್ವ ಕಡೆಗಳಿಂದ ಕೇಳಿಬರುತ್ತಿದೆ. ಚರಿತ್ರೆಯಲ್ಲೇ ಕಾಣಸಿಗದ ಸಾರ್ವತ್ರಿಕ ಬರಗಾಲಕ್ಕೆ ಬಲಿಬಿದ್ದು ಹಿಂದೀಯ ಜನಸಾಮಾನ್ಯರು ನರಳಾಡುತ್ತಿರುವ ಹೃದ್ರಾವಕ ದೃಶ್ಯವಿಂದು ಗೋಚರಿಸುತ್ತಿದೆ. ನಮ್ಮ ನೆರೆಯ ಜಿಲ್ಲೆಯಾದ ಮಲಬಾರಿನ ಜನರೀಗ ಧಾನ್ಯಪೂರ್ಣವ ಮನುಷ್ಯರಾಗಿ ಉಳಿದಿಲ್ಲ—ಬೇರು ಜಗಿಯುವ ಪ್ರಾಣಿಗಳಾಗಿ ಮಾರ್ಪಟ್ಟಿದ್ದಾರೆ ಎಂಬ ಶೋಚನೀಯ ವಾರ್ತೆ ಕೇಳುತ್ತೇವೆ. ಸಾಮಾನ್ಯ ಪರಿಸ್ಥಿತಿಯಿದ್ದಾಗ ಕೂಡ ದಕ್ಷಿಣ ಕನ್ನಡದ ಬಡವರು ವರುಷದ ಹನ್ನೆರಡರಲ್ಲೆರಡು ತಿಂಗಳುಗಳನ್ನು ಗೆಡ್ಡೆಗೆಣಸುಗಳಿಂದ ದೂಡುತ್ತಿದ್ದರೆಂಬುದು ಪರಿಚಯವಿದ್ದವರಿಗೆ ಗೊತ್ತಿದ್ದ ವಿಷಯ. ಈ ವರುಷ ಆ ಆಪದ್ಬಂಧುವಾದರೂ ಉಳಿದಿಲ್ಲ; ಬಡವರ ಪಾಲಿಗೆ ವರುಷದ ಕೆಲವು ತಿಂಗಳುಗಳ ಮಟ್ಟಿಗಿದ್ದ ಆಪತ್ತು ಈ ವರುಷ ಹನ್ನೆರಡು ತಿಂಗಳುಗಳಿಗೂ ವಿಸ್ತರಿಸಿದೆ; ಅಕ್ಕಿಯಂತೆಯೇ ಗೆಡ್ಡೆಗೆಣಸುಗಳ ಅಭಾವವೂ ಉಂಟಾಗಿದೆ. ಅಂದಮೇಲೆ ಮಲಬಾರನ್ನು ನೋಡಿ ಕನಿಕರಗೊಳ್ಳುವವರು ದಕ್ಷಿಣ ಕನ್ನಡವನ್ನು ಕಂಡು ಕಣ್ಣೀರನ್ನೇ ತೆಗೆಯಬೇಕು!

ಇಂತಹ ಪರಿಸ್ಥಿತಿಗೆ ಹೊಣೆಯಾರು?—'ದುಷ್ಕಾಲ', ಅಥವಾ ಪ್ರತೀಕಾರ ಮಾಡಲಿಚ್ಛಿಸುವದಾದರೆ 'ಜಾಪಾನರು'! ಬರ್ಮಾ ಪತನವಾಯಿತು, ಅಲ್ಲಿಂದ ಆಮದಾಗುತ್ತಿದ್ದ ಅಕ್ಕಿ ನಿಂತಿತು, ಉಪಾಯವಿಲ್ಲ-ಎಂದು ಮೊನ್ನೆ ಪುನಃ ಮಿ. ಅಮೆರಿಯವರೆಂದಿದ್ದಾರೆ. ಅಮೆರಿಯವರೆಯು ಭಾರತೀಯ ಬಡವರ ಹೊಟ್ಟೆಗಾಗುವ ತಿಂಡಿಯೆಂತೂ ಅಲ್ಲ—ಹೊಟ್ಟೆಗಿಲ್ಲದಿದ್ದರೂ ನೆಮ್ಮದಿಯಿಂದ ಸಾಯಬಹುದಾದ ಕಾರಣ ಕೂಡಾ ಅದರಲ್ಲಿಲ್ಲ! ಬರ್ಮದಿಂದ ಭಾರತಕ್ಕೆ ಅಕ್ಕಿಯ ಪೂರೈಕೆಯೂ ಆಗುತ್ತಿತ್ತು; ಬರ್ಮಾ ಮಲಯಗಳಿಂದ ಬ್ರಿಟಿಷರಿಗೆ ಪೆಟ್ರೋಲು, ರಬ್ಬರುಗಳೂ ದೊರಕುತ್ತಿದ್ದವು. ಆದರೆ ಬರ್ಮಾಪತನದಿಂದಾಗಿ ಭಾರತೀಯರು ಉಣ್ಣದಂತಾದುದು ಮಾತ್ರ ಕಾಣುತ್ತಿದೆ ಹೊರತು, ರಬ್ಬರ್, ಪೆಟ್ರೋಲುಗಳ ಅಭಾವದಿಂದಾಗಿ ಬ್ರಿಟಿಷ್ ಸೇನೆಗಳು ನಿದ್ರಾವಶವಾದುದೆಲ್ಲಿಯೂ ಗೋಚರಿಸುವದಿಲ್ಲ! ಅರ್ಥಾತ್ ಮನಸ್ಸಿದ್ದಲ್ಲಿ ಮಾರ್ಗವಿದೆ—ಸಾಧನೆಯಿದ್ದಲ್ಲಿ ಮಾತ್ರ ಸಾಫಲ್ಯವಿದೆ. ಆಹಾರ ಸಮಸ್ಯೆಯ ನಿವಾರಣೆಗಾಗಿ ತಾನು ಕೈಲಾದ ಪ್ರಯತ್ನವೆಲ್ಲವನ್ನೂ ಮಾಡಿದ್ದೇನೆ-ಮಾಡುತ್ತಿದ್ದೇನೆ-ಎಂದು ಸರಕಾರವು ಪ್ರಮಾಣಬದ್ಧವಾಗಿ ಹೇಳಬಲ್ಲುದೆ?

ದೃಷ್ಟಾಂತವಾಗಿ ದಕ್ಷಿಣ ಕನ್ನಡದ ಪರಿಸ್ಥಿತಿಯನ್ನೇ ತೋರಿಸಬಹುದು. ಕಳೆದ ಮಾರ್ಚಿಯಲ್ಲಿ ಅಕ್ಕಿಯ ಬೆಲೆ ಮುಡಿಗೆ ೧೧ರಷ್ಟೇರಿತು ಎಂದಾಗಲೇ ಅಧಿಕಾರಿಗಳು ಕಣ್ತೆರೆದು, ಬೆಲೆ ನಿಯಂತ್ರಣವನ್ನು ಜ್ಯಾರಿಗೆ ತಂದು ಜೀವಲಕ್ಷಣವನ್ನು ಪ್ರದರ್ಶಿಸಿದ್ದರು. ಅಧಿಕಾರಿಗಳೂ ಇದ್ದಾರೆ—ಬೆಲೆ ನಿಯಂತ್ರಣವೂ ಇದೆಯೆನ್ನುತ್ತಾರೆ—ಅಕ್ಕಿಯ ಬೆಲೆ ಮಾತ್ರ ಈಗ ರೂ. ೧೩ರ ವರೆಗೂ ಏರಿದೆ, ಏರುತ್ತಿದೆ! ಬೆಲೆಯೇರಿಸದಂತೆ ಸರಕಾರದ ಕಡೆಯಿಂದ ಬರುತ್ತಿದ್ದ ಎಚ್ಚರಿಕೆ, ಬೆದರಿಕೆಗಳನ್ನಾದರೂ ಇತ್ತೀಚಿನ ವರೆಗೆ ಕೇಳುತ್ತಿದ್ದೆವು. ಈಗೀಗ ಮೌನವಾತಾವರಣದಲ್ಲೇ ಧಾರಣೆಗಳು ಮೌಡಿಟ್ಟು ಏರುತ್ತಿವೆ. ಇದರ ಗುಟ್ಟೇನು? ಜನಸಾಮಾನ್ಯರ ಹಿತಾಕಾಂಕ್ಷೆಯ ಪ್ರಶ್ನೆಯೊಂದೇ ಈಗ ಸರಕಾರದ ಮುಂದಿರುವದಲ್ಲ. ಅದು ಮಾಡಿಟ್ಟ ಧಾರಣೆ ನಿರ್ಣಯವಿದೆ. ಅದಕನ್ನುಸಾರವಾಗಿ ಅಕ್ಕಿಯ ಬೆಲೆ ತಗ್ಗಲಿಲ್ಲ--ಅದು ಮಾಡಿಟ್ಟ ನಿಯಂತ್ರಣದ ಬೆಲೆ ತಗ್ಗಿದೆ! ಅಕ್ಕಿಯ ಧಾರಣೆಯೊಟ್ಟಿಗೆ ಸರಕಾರದ ಧೋರಣೆಯೂ ಪ್ರಶ್ನೆಗೊಳಗಾಗಿದೆ. ಇದು ಅಧಿಕಾರಿಗಳಿಗೆ ಸಹನೀಯವೆ? ಅಥವಾ ಲಾಭಾಕಾಂಕ್ಷಿಗಳು ತಮ್ಮ ಅಂತರ್ಗಾಮಿ ವಹಿವಾಟುಗಳ ಮೂಲಕ ಸರಕಾರೀ ನಿಯಂತ್ರಣವನ್ನು ಹುಸಿಗೊಳಿಸಿದರೆನ್ನೋಣವೆ? ಅಂತಹ ದುರ್ವ್ಯಾಪಾರಗಳನ್ನು ಕಂಡು ಮತ್ತು ನಿರೀಕ್ಷಿಸಿಯೇ ಪ್ರತಿಬಂಧಕಾಜ್ಞೆ ಜ್ಯಾರಿಗೆ ಬಂದುದು. ಅಂದಮೇಲೆ ದುರ್ವ್ಯಾಪಾರವನ್ನು ತಡೆಗಟ್ಟಲು ಮುಂದೆ ಬಂದ ಈ ನಿಯಂತ್ರಣಾಜ್ಞೆಯು ಈ ರೀತಿ ಸೋತು ತಲೆಮರೆಸಿಕೊಂಡ ಅಪಜಯಕ್ಕಾಗಿ ಅಧಿಕಾರಿಗಳು ನಾಚಬೇಕು. ಇಲ್ಲವೇ ಅದನ್ನು ಕಠಿಣವಾಗಿ ಮುಂದೊತ್ತಿ ಪರಿಸ್ಥಿತಿಯನ್ನು ಸುಧಾರಿಸಬೇಕು.

CHAMPAKA'S
SNOW & GASTREX
AGENTS
SADANANDA STORES UDIPI

ದುರ್ಬೀನು

ಏಕಕಾಲಕ್ಕೆ ಒಂದು ಕೆನ್ನೆಗೆ ಚುಂಬನ, ಮತ್ತೊಂದು ಕೆನ್ನೆಗೆ ತಾಡನ ಕೊಡುವವನು ಪ್ರೇಮಿಯೋ ವೈರಿಯೊ? ಒಂದೇ ಸಲ ಕಣ್ಣೀರು ಮತ್ತು ಕಪಟವಾಣಿ ಹೊರಡಿಸುವವನು ಕರುಣಿಯೋ ಕುಹಕಿಯೊ?

೦೦ ೦೦

ನೀರ ಹುಡುಗಿಯ ಗಡಿಗೆಗೆ ಕೈಕೊಟ್ಟ ಮಾತ್ರಕ್ಕೆ ನಡುವನ್ನಪ್ಪಿದ ಸುಖವಿಲ್ಲ. ಪಾಂಟೆಲೇರಿಯಾ ಹಿಡಿದುದರಲ್ಲಿ ಇಟೆಲಿಯನ್ನು ಹಿಡಿದ ಪರಾಕ್ರಮವಿಲ್ಲ.

೦೦ ೦೦

'ಶೋ' ಇದ್ದುದು 'ಶೋಕ'ವಾಗುವದೋ 'ಶೋಭಾನ'ವಾಗುವದೋ ನೋಡಲುಳಿದಿದೆ; ಈ ವರೆಗಿನ 'ವಿ'ಯು 'ವಿಕಾರ'ವನ್ನಿಸುವದೋ 'ವಿಜಯ'ವಾಗುವದೋ ನೋಡಿಕೊಳ್ಳಬೇಕು.

೦೦ ೦೦

ನೆರೆ ಬಿದ್ದವನು ಮಿಕ್ಕವರಂತ ಆಡ್ಡಾಡಲಾರ; ಸುರೆ ಕುಡಿದವನು ಮಿಕ್ಕವರಂತೆ ನಿಂತಲ್ಲಿ ನಿಲ್ಲಲಾರ. ದಮನಿಸಲ್ಪಟ್ಟವನೂ ದರ್ಪದ ಮುಲೇರಿದವನೂ ನಿಜ ಮನುಷ್ಯನಲ್ಲ.

೦೦ ೦೦

ಗಾಳಿ ಬೀಸಿದಂತಾಗಬಹುದು-ಬಿರುಗಾಳಿ ಬೀಸಿದರೂ ಆಗಬಹುದೆ? ವಿನಯವಾಣಿ ಆಲಿಸಬಹುದು — ಬಡಾಯಿಯನ್ನೂ ಕೇಳಲಾದೀತೆ?

೦೦ ೦೦

ಜ್ವಾಲಾಮುಖಿ ಪಿಡಿತಾರಹತ್ತಿದರೆ ಭೂಕಂಪಿಸುತ್ತದೆ; ಗುಡ್ಡದಲ್ಲಿ ಬೆಂಕಿ ಕಾಣಿಸಿಕೊಂಡರೆ ಭಯವಿಲ್ಲ. ಕಾಂಗ್ರೆಸಿಗರ ಸಿಟ್ಟಿಗೆ ಬೆಲೆಯಿದೆ, ಮಂದಗಾಮಿಗಳ ಕ್ರೋಧಕ್ಕಿಲ್ಲ.

ನೋಟೀಸು.
ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. 39/1943

1. ಶಾರದ ಯಾನೆ ಲಕ್ಷ್ಮೀದೇವಿ-ವಿಟ್ಠಲ್ ಮಾಧವ ಕಾಮತರ ವಿಧವೆ.

2. ಕೃಷ್ಣ ಯಾನೆ ಮಾಧವ ಕಾಮತ್ (ಮೈ) ವಿಟ್ಠಲ್ ಮಾಧವ ಕಾಮತರ ಮಗ-ಉಡುಪಿ ತಾಲೂಕು ಮೂಡು ತೋನ್ಸೆ ಗ್ರಾಮದ ಕಲ್ಯಾಣಪುರ.

ಅರ್ಜಿದಾರ್ರು.

ಸದ್ರಿ 1ನೇ ಅರ್ಜಿದಾರ್ಳ ಗಂಡ ಮತ್ತು 2ನೆ ಅರ್ಜಿದಾರನ ತಂದೆ ತಾರೀಕು 25-9-1942ಲ್ಲಿ ಮೃತಪಟ್ಟ ವಿಟ್ಠಲ್ ಮಾಧವ ಕಾಮತರು. ದಿ ಒರಿಯಂಟಲ್ ಗವರ್ನಮೆಂಟು ಸೆಕ್ಯೂರಿಟಿ ಲೈಫ್ ಯೆಸ್ಯೂರೆನ್ಸ ಕಂಪೆನಿಯಲ್ಲಿ ಪಡೆದ ನಂಬ್ರ 243252ನೇ ಪೋಲಿಸಿಯ ಬಾಬ್ತು ಸದ್ರಿ ಕಂಪೆನಿಯಿಂದ ಶಿಕ್ಕತಕ್ಕ ರುಪಾಯಿ 731-2-0ನ್ನು ಪಡೆಯುವರೆ ತಾವೇ ಹಕ್ಕುದಾರರೆಂತಲೂ ಆ ಬಗ್ಗೆ ಅರ್ಜಿಯಲ್ಲಿ ನಮೂನಿಸಿದಂತೆ ತಮ್ಮ ಹೆಸರಿಗೆ ಸಕ್ಸೇಶನ್ ಸರ್ಟಿಫಿಕೇಟ ಕೊಡಿಸಬೇಕಾಗಿ ಸಹಾ ಸದರಿ ಅರ್ಜಿದಾರ್ರು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 3-7-1943ಕ್ಕೆ ತನಿಖೆ ಬಗ್ಗೆ ಇಟ್ಟಿದೆ. ಯಾರಿಗಾದರೂ ಆಕ್ಷೇಪಿಸತಕ್ಕವರು-ಸದರಿ ತಾರೀಕಿನ ದಿವಸ ವೇಳೆ ಕಣ್ಸಿದ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ಸರ್ವರಿಗೆ ತಿಳಿಯಪಡಿಸಲಾಗಿದೆ.

M. Damodar Kamath,
Advocate for Petitioners
ಉಡುಪಿ, ತಾರೀಕು 10-6-1943.

ಉಡುಪಿ.

ಸ್ಥಳೀಯ ಕ್ರಿಶ್ಚಿಯನ್ ಹೈಸ್ಕೂಲಿನ ಡ್ರಿಲ್ ಮಾಸ್ಟರ್ ಮಿ| ಎಚ್| ಅಹಮ್ಮದರ ಮಗಳು ಮಿಸ್| ಫಾತಿಮಾರವರು ಈ ಬಾರಿಯ ಎಸ್|ಎಸ್|ಎಲ್| ಸಿ| ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಮುಸಲ್ಮಾನ ಹೆಣ್ಮಕ್ಕಳಲ್ಲಿ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಮಾಡಿ ಪಾಸಾದುದು ದ| ಕ| ಜಿಲ್ಲೆಯಲ್ಲಿ ಇದೇ ಪ್ರಥಮ ಸಲ.

ಯುನೈಟೆಡ್ ನೇಶನ್ಸ್ ಡೇ— ಸಲುವಾಗಿ ತಾ| 14ರಲ್ಲು ಮುನಿಸಿಪಲ್ ಮೈದಾನ್ ಶಾಲೆಯಲ್ಲಿ ಸಾರ್ವಜನಿಕ ಸಭೆಯೊಂದು ಡಿಸ್ಟ್ರಿಕ್ಟ್ ಮುನ್ಸೀಫ್ ಮಿ| ಡಿ| ನೊರೋನ್ಹಾರವರ ಅಧ್ಯಕ್ಷತೆಯಲ್ಲಿ ಜರಗಿತು. ಜನಾಬ್ ಎಮ್| ಬಿ| ಉಸ್ಮಾನ್ ಸಾಹೇಬ್ ಮೊದಲಾದವರ ಸಂದರ್ಭೋಚಿತ ಮಾತುಗಳಾದುವು. ತಹಶಿಲ್ದಾರ್ ಶ್ರೀ| ಕೆ| ಕೆ| ಕುಡ್ವರು ಧನ್ಯವಾದಗಳನ್ನರ್ಪಿಸಿದರು.

ಅಕ್ಕಿ ದರ—ವು ದಿನೇದಿನೇ ಜಾಸ್ತಿಯಾಗುತ್ತಲಿದೆ. ಕಂಟ್ರೋಲ್ ತೆಗೆದು ಹಾಕಲಾಗಿದೆ ಎಂದು ಪೇಟೆಯಲ್ಲೆಲ್ಲಾ ಸುದ್ದಿ. ಇದು ಎಷ್ಟರಮಟ್ಟಿಗೆ ನಿಜವೋ ಹೇಳಬರುವುದಿಲ್ಲ. ಬಡವರ ಗೋಳು ಹೇಳತೀರದು. ಅಧಿಕಾರಿಗಳು ಇತ್ತ ಗಮನವೀಯುವರೇ?

ಸಕ್ಕರೆ—ಸಹ ಬಡಬಗ್ಗರಿಗೆ ಸರಾಗವಾಗಿ ದೊರೆಯುವುದಿಲ್ಲವಾಗಿ ಸುದ್ದಿ.

ಶ್ರೀ| ಫಲಿಮಾರು ಮಠದ ಶ್ರೀರಘುಮಾನ್ಯ ತೀರ್ಥ ಶ್ರೀಪಾದಂಗಳವರು ಈಗ ತಾನೆ ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟ ಶ್ರೀ| ಅಗೂರು ಲಕ್ಷ್ಮೀನಾರಾಯಣರಾಯರಿಗೆ ಮಂತ್ರಾಕ್ಷತೆಯಿತ್ತು ಆಶೀರ್ವದಿಸಲು ತಾ| 15-6-43ರಲ್ಲಿ ಒಂದು ಉಪಾಹಾರ ಕೂಟವನ್ನೇರ್ಪಡಿಸಿದ್ದರು. ಊರಿನ ಅಧಿಕ ಮಹನೀಯರನೇಕರು ಆಮಂತ್ರಿತರಾಗಿದ್ದರು. ಉಪಾಹಾರವಾದ ಮೇಲೆ ಪಂಡಿತ ವೆಂಕಟರಾಮಾಚಾರ್ಯರು ಶ್ರೀ| ಅಗೂರರವರ ಗುಣ ಕಥನಮಾಡಿ ಅಭಿನಂದಿಸಿದರು. ಶ್ರೀ| ಅಗೂರರವರು ಜನಸೇವೆಯೇ ತನ್ನ ಧ್ಯೇಯವೆಂದು ಉತ್ತರವಿತ್ತರು. ಶ್ರೀ| ಸ್ವಾಮಿಗಳವರು ಮಂತ್ರಾಕ್ಷತೆ ಇತ್ತು ಆಶೀರ್ವದಿಸಿದರು.

Degrees: Books: Medicines
Free H. L. M. S.M, B. H. M, D, etc. Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs. 4, Insanity Cure Pills Rs. 10 Enclose 2 annas stamp:—
Principal Indian Homeopathi Institute & Society (Govt. Regd)
P.O Dutha (athiawar Dt India.)

Sidha-Kalpa Kavach (Regd.)
No. 3 Rs 2. No 2 Rs 5 No. 1 Rs. 7. Special Rs. 10, Extra Special Rs 17 for one marriage health, wealth. Ask any six questions with M. O. Re. 1/4 and get correct answers by returnpost Life reading Rs. 2 No V.P.P. Send M.O, Free pamplets
Prof Dr. N. H Chhatbar.
P. O Mahava, (Kathiawar India.)

ಶ್ರೀ ತಾರಾನಾಥ ಭೇಷಜಾಲಯ
ಶಾಸ್ತ್ರೀಯ ಮತ್ತು ಸಿದ್ಧೌಷಧಿಗಳ ಕಾರ್ಯಾಗಾರ, ಚಿಕ್ಕಮಗಳೂರು.
ನಿರ್ದೇಶಕ:- ಡಾ. M. L. Shetty, ಪ್ರೇಮವಿದ್ಯಾಪೀಠದ ಗೌ. ಪ್ರಾಧ್ಯಾಪಕರು.
ಎಲ್ಲಾತರದ ಭಸ್ಮ, ಖಲ್ವರಸಾಯನ, ಆಸವಾರಿಷ್ಟ, ಘೃತ, ತೈಲಗಳಿಗಾಗಿ ಕೂಡಲೇ ಬರೆಯಿರಿ.
ಬಿಟ್ಟುಗಟ್ಟಲೆ ರೋಗಿಗಳಲ್ಲಿ ಪ್ರಯೋಗಿಸಿದ ಔಷಧ ಯೋಗಗಳು. ಗುರುಪರಂಪರೆಯ ಅನುಭವದಿಂದ ಬಂದ ನಿರ್ಮಲ ಔಷಧೀಕರಣ ವಿಧಾನ
ಡಾ| P. M. Alva,
ಮೆನೇಜರ್.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

ಕ್ರ. ನಂಬ್ರ 69/1943

ವಾದಿ—ಅಮ್ಮತಾವತಿ

ಪ್ರತಿವಾದಿ—ರಾವತಮ್ಮ ಕೂಡಾ 13 ಜನರು. ಪುತ್ತೂರು ತಾಲ್ಲೂಕು ಕಾವೇರಿ ಗ್ರಾಮದ ಗುರುವಮ್ಮನ ಕೆರೆಮನೆಯಲ್ಲಿರುತ್ತಿದ್ದ ಶಾಂತಪ್ಪ ಮಗಳು 5ನೇ ಪ್ರತಿವಾದಿ ರಾವುಕ್ಕೆ 1 ಮತ್ತು ಮಂಗಳೂರು ತಾಲ್ಲೂಕು ಪಿಲಿಕುಳ ಗ್ರಾಮದಲ್ಲಿರುತ್ತಿದ್ದ ಶೇಖರ ಪಕ್ಷದ ಆತನ 11ನೇ ಪ್ರತಿವಾದಿ ಸೇವಂತಿಪಲ್ಯ 1 ಕೂಡಾ 2 ಜನರಿಗೆ ವಾದಿಕಡೆಯಿಂದ ತಿಳಿಯಪಡಿಸುವದೇನೆಂದರೆ-

ವಾದಿಯು ನಿಮ್ಮ ಮೂಲಗೇಣಿ ಹಕ್ಕಿನ ಸ್ಥಿರ ಆಸ್ತಿ ಪಾಲಾಗಬೇಕೆಂದು ಕೂಡಾ ಮೂಲಗೇಣಿ ಬಾಕಿಗೆ ವಗೈರೆ ನಿಮ್ಮ ಮೇಲೆ ಮಾಡಿದ ದಾವೆಯು ನಿಮಗೆ ಅನೇಕಸಾರ ಸಮನ್ಸು ಮಾಡಿದರೂ ನೀವು ಜಾರಿಗೆ ಸಿಕ್ಕದೆ ತಪ್ಪಿಸಿಕೊಳ್ಳುತ್ತೀರಿ. ಆ ಕಾರಣ ನೀವು ಈ ದಾವೆ ಉತ್ತರಕ್ಕಾಗಿ 1943ನೇ ಜೂನು ತಾ. 23ನೇ ದಿವಸ 11 ಗಂಟೆಗೆ ಈ ಅದಾಲತ್ ಕೋರ್ಟಿನಲ್ಲಿ ಬಂದು ಉತ್ತರ ಕೊಡತಕ್ಕದ್ದು. ಇದಕ್ಕೆ ತಪ್ಪಿದರೆ ನಿಮ್ಮ ಗೈರುಹಾಜರಿ ನ್ಯಾಯ ತೀರ್ಮಾನ ಮಾಡಲಾಗುವುದು.

K. Ganapathi Rao

ವಾದಿ ವಕೀಲ.

ತಾ. 8—6—1943.

ನೋಟೀಸು.

ಮಂಗ್ಳೂರು ಡಿ. ಮು. ಕೋರ್ಟಿನಲ್ಲಿ

O. S. No. 70/1943.

ಸಾಸ್ಕಲ್ ಎಕ್ಸೆಕ್ಯುಟಿಯಾನ್ ಪೀರೇರ—ವಾದಿ

ಎದ್ರಿರು

1. ತಿಮ್ಮ ಹೆಂಗ್ಸು 2 ಹೂವಮ್ಮ ಹೆಂಗ್ಸು — ಪ್ರತಿವಾದಿಯು

1ನೇ ಪ್ರತಿವಾದಿ ಮಂಗ್ಳೂರು ತಾಲ್ಲೂಕು ಪಿಜಾರ್ ಎಂಬಲ್ಲಿರುವ ಅಪ್ಪು ಹೆಂಗ್ಸಿನ ಮಗಳು ತಿಮ್ಮ ಹೆಂಗ್ಸಿಗೆ-

ನಿಮಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ.

ನೀವು ಕೂಡಾ 3 ಜನರು ಆಗಿನ ತಾ. 7-5-1927 ರಲ್ಲು ರೂ. 500-0-0ಕ್ಕೆ ರಿಜಿಸ್ತ್ರಿ ಮಾಡಿ ಪಾಸ್ಕಲ್ ಬೆಜ್ಜಲ ಆವರಿಗೆ ಬರಕೊಟ್ಟ ಆಧಾರ ದಸ್ತಾವೇಜಿನ ಬಾಕಿ ಅಸಲು ಬಡ್ಡಿ ಆವಗೈರೆ ವಸೂಲ ಮಾಡುವ ಹಕ್ಕನ್ನು ಸದ್ರಿ ಪಾಸ್ಕಲ್ ಬೆಜ್ಜಲ ಆವರು ತಾ. 7-5-30ರಲ್ಲಿ ಪ್ರತಿಫಲ ಪಡೆದು ವಾದಿಗೆ ರಿಜಿಸ್ತ್ರಿ ಮಾಡಿ ಟ್ರಾನ್ಸ್‌ಫರ್ ಮಾಡಿ ಕೊಟ್ಟಿರುತ್ತಾರೆ. ಸದ್ರಿ ಆಧಾರದ ಅಸಲು ಬಡ್ಡಿ ವಗೈರೆ ಹಣಗಳನ್ನು ವಸೂಲು ಮಾಡುವ ಬಗ್ಗೆ ನಿಮ್ಮ ಮೇಲೆ ಸದ್ರಿ ವಾದಿಯು ಮೇಲಿನ ಕೋರ್ಟಿನಲ್ಲಿ ದಾವಾ ದಾಖಲು ಮಾಡಿದ್ದು ಬಗ್ಗೆ ತಾ. 22-6-43ರಲ್ಲಿ ಇಟ್ಟಿರುತ್ತದೆ. ಸದ್ರಿ ದಿವಸ ನೀವು ಸ್ವತಃ ಯಾಗಲೀ ನ್ಯಾಯ ವಕೀಲರ ಮುಖಾಂತರವಾಗಲೀ ಹಾಜರಾಗಿ ನಿಮ್ಮ ಉತ್ತರವನ್ನು ದಾಖಲು ಮಾಡದಿದ್ದರೆ ಸದ್ರಿ ವ್ಯಾಜ್ಯವು ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲ್ಪಡುವುದೆಂದು ನಿಮಗೆ ತಿಳಿಸಲಾಗಿದೆ.

By order

John Gonsalves

Vakil for Paintiff

ಮಂಗಳೂರು, 11—6—43

ಸುದ್ದಿ ಸೂಚನೆ.

● ಪಾಂಟೆಲೇರಿಯಾ ಪತನದ ಮರುದಿನವೇ ಇನ್ನೊಂದು ಇಟೆಲಿಯ ನೌಕಾ ಮತ್ತು ವಿಮಾನ ನಿಲ್ದಾಣವಾದ ಕಿರಿದ್ವೀಪ ಲಾಂಪೆಡುಸಾವನ್ನು 21 ಘಂಟೆಗಳ ಸಮುದ್ರ ಆಕಾಶ ಧಾಳಿಯಿಂದ ಪುಡಿಗುಟ್ಟಿ ಮಿತ್ರರಾಷ್ಟ್ರೀಯರು ವಶಪಡಿಸಿಕೊಂಡಿದ್ದಾರೆ.

● ಲಾಂಪೆಡುಸಾ ಪತನದ ಮರುದಿನವೇ ಅದಕ್ಕೂ ಕಿರಿದಾದ ಲಿನೋಸಾ ದ್ವೀಪವು ಒಂದೇ ಒಂದು ಗುಂಡುಹಾರದೆ, ಮಿತ್ರರಾಷ್ಟ್ರೀಯರ ಸ್ವಾಧೀನಕ್ಕೆ ಬಂದಿದೆ. ಸಿಸಿಲಿಯ ಮೇಲೆ ಧಾಳಿಯಾರಂಭವಾಗಿದೆ.

● ಆಗ್ನೇಯ ಶಾಂತಸಮುದ್ರದಲ್ಲಿಯೂ ಬರ್ಮದಲ್ಲಿಯೂ ಜಪಾನಿ ನಿಲ್ದಾಣಗಳ ಮೇಲೆ ಮಿತ್ರರ ಆಕಾಶಧಾಳಿ ನಡೆದಿದೆ.

● ಚೀನದ ಯಾಂಗ್ಟ್ಸೆ ಹೊಳೆಬದಿಯ ಯುದ್ಧದಲ್ಲಿ ಚೀನೀಯರು ಮೇಲ್ಗೈಯ್ಯಾಗಿದ್ದಾರೆ- ಸಾಂಗ್ಟ್ಸೆಪಟ್ಟಣವು ಅವರ ವಶವಾಯಿತು.

● ಫ್ರಾನ್ಸಿನ ಮೇಲೆ ಮಿತ್ರರ ಅತಿ ಪ್ರಬಲ ಧಾಳಿಯಾರಂಭವಾಗಲಿದೆಯೆಂದು ಫ್ರೆಂಚರಿಗೆ ಮಿತ್ರರಾಷ್ಟ್ರೀಯರ ಆಕಾಶವಾಣಿ ಎಚ್ಚರಗಳು ಕೊಡಲ್ಪಟ್ಟಿವೆ

○ ಅಮೇರಿಕದ ಸೆನೆಟಿನಲ್ಲಿ ಮುಷ್ಕರ ನಿರೋಧ ಮಸೂದೆ ಮಂಜೂರಾಯಿತು.

○ ಭೂಮಧ್ಯ ಸಮುದ್ರದ ಬ್ರಿಟಿಷ್ ನೌಕಾಧಿಪತಿ ಎಡ್ಮಿರಲ್ ಕನ್ನಿಂಗಾಮರು ಅಂಕಾರಕ್ಕೆ ಹೋಗಿ ಟರ್ಕಿ ಅಧಿಕಾರಿಗಳೊಡನೆ ಸಂಭಾಷಿಸುತ್ತಿದ್ದಾರೆ

● ಚೀನಾದೂತನೆ ಚುಂಕಿಂಗ್ ಹಾಗೂ ರಶ್ಯದ ಸಂಬಂಧ ಕಡಿಯುವಂತೆ ಜಾಪಾನರು ಸಮ್ಮದಲ್ಲೇ ಮಂಗೋಲಿಯಾದೊಳಗ ನ ಗ್ಗುಪ ನಿರೀಕ್ಷ್ಯಯಿದೆ.

○ ರಶ್ಯಾ ರಣರಂಗದಲ್ಲಿ ಗಣನೀಯ ಘಟನೆಯೇನೂ ಸಂಭವಿಸಿಲ್ಲ ರೋಸ್ತೋವಿನ ಪಶ್ಚಿಮ ಗಡಿಯಲ್ಲಿ ಸೋವಿಯೇಟ್ ರಕ್ಷಣಾ ಶಕ್ತಿ ಪರೀಕ್ಷಿಸಲು ಜರ್ಮನರು ಮಾಡಿದ ಸಶಕ್ತಧಾಳಿಯು ನಿಷ್ಫಲವಾಗಿ ನಾಜಿಗಳು ಹಿಮ್ಮೆಟ್ಟಬೇಕಾಯಿತು ರಶ್ಯಾನರ ಆಕಾಶಧಾಳಿ ಬಲಗೊಂಡಿದೆ.

● ಇದೇ ವಾರಗಳಲ್ಲಿ ಜಪಾನಿನಲ್ಲಿ ಎರಡು ಬಾರಿ ಭೂಕಂಪವಾಯಿತು.

○ ಎಲ್ಲಾ ಮಿತ್ರರಾಷ್ಟ್ರಗಳಲ್ಲಿಯೂ ಇದೇ ತಾರೀಖುಗಳಲ್ಲಿ 'ಮಿತ್ರರಾಷ್ಟ್ರೀಯದಿನ' ಆಚರಿಸಲ್ಪಟ್ಟಿದೆ.

○ ಮಿ ಜಿನ್ನರು ಸಿಂಧಿಗೆ ಹೋಗಿ ಗವರ್ನರರೊಡನೆ ಸಂಭಾಷಿಸಿ ಸಿಂಧ್ ಪ್ರಾಂತಿಕ ಮುಸ್ಲಿಂ ಲೀಗಿನ ಸಭೆಯಲ್ಲಿ ಭಾಗವಹಿಸಿದ್ದಾರೆ.

○ ಒಮ್ಮೆ ಬಿಡುಗಡೆ ಹೊಂದಿ ಸರಕಾರೀ ಶರ್ತಗಳಿಗೊಪ್ಪದೆ ಪುನಃ ಬಂಧಿಸಲ್ಪಟ್ಟ ಶ್ರೀಮತಿ ವಿಜಯಲಕ್ಷ್ಮೀಪಂಡಿತರೀಗ ನಿಶ್ಶರ್ತ ಬಿಡುಗಡೆ ಹೊಂದಿದ್ದಾರೆ.

NOTIFICATION

Under sub rule (2) of rule 4 of part I of the rules for the conduct of elections of presidents and vice presidents of local boards, **Sri A. Laxminarayana Rao, B. A., B. L.**, is declared duly elected as president of the South Kanara District Board.

W. G. Jeffreys

President of the Meeting.

South Kanara Dt. Board office,
Mangalore, 11-6-1943.

ಬೇಕಾಗಿದ್ದಾರೆ.

ನಮ್ಮ ಪಡುಬಿದ್ರೆ S. B. V. P. ಅಡ್ವಾನ್ಸ್‌ಡ್ ಸಂಸ್ಕೃತ ಶಾಲೆಯಲ್ಲಿ ಈ ವರ್ಷ ಸೆಕೆಂಡರೀ ಅಧ್ಯಾಪಕರೊಬ್ಬರು ಬೇಕಾಗಿದ್ದಾರೆ. ಉಮೇದುವಾರರು ತಮ್ಮ ಯೋಗ್ಯತಾ ಪತ್ರಗಳ ನಕಲುಗಳೊಡನೆ ತಮ್ಮ ಪ್ರಾಯ, ಜಾತಿ ಮತ್ತು ವಿಶೇಷಾನುಭವಗಳನ್ನು ನಮೂದಿಸಿ ಈ ಕೆಳಗಣ ಅಡ್ರೆಸ್ಸಿಗೆ ತಾರೀಕು 30-6-1943ರೊಳಗೆ ಅರ್ಜಿಗಳನ್ನು ಬರಕೊಳ್ಳುವದು. ವಿಶೇಷ ಮಾಹಿತಿಯ ಬಗ್ಗೆ ಬರೆದು ತಿಳಿಯಬಹುದು.

Correspondent

S. B. V. P. Advanced Sanskrit School

Padubidri S. K.

Camp Padubidri
Date 8-6-1943

ನೋಟೀಸು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. I. A. 398/1943 O. S. 25/41

ಯಾಕುಬು ಬ್ಯಾರಿ ಸಹ — ಅರ್ಜಿದಾರರು.

ಸುಬ್ರಾಯ ಭಟ್ಟ ಸಹಾ — ಎದ್ರಿರು

ಎದ್ರಿರು—5 ಬೀಪಾತುಮ್ಮ, ಮೊಯಿದುಕುಂಞಿ ಬ್ಯಾರಿಗಳ ವಿಧವೆ-ಕಾಸ್ರಗೋಡು ತಾಲ್ಲೂಕು ಬಾಯಾರು ಗ್ರಾಮ. 8 ನಾರಾಯಣ ಭಟ್ಟ, ವಿಷ್ಣುಭಟ್ಟ ಮಗ ಪುತ್ತೂರು ತಾಲ್ಲೂಕು ಮಾಣಿಲಗ್ರಾಮ.

ಇವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ಮೇಲ್ಕಂಡ O. S. 25/41ನೇ ವ್ಯಾಜ್ಯದ ಡಿಕ್ರಿ ವಿಧಿ ಮೇರೆಗೆ ದಾವಾ ಆಸ್ತಿ ಏಲಂ ವಗೈರೆ ಕುರಿತು ಫೈನಲ ಡಿಕ್ರಿ ಕೊಡಬೇಕೆಂತ ಅರ್ಜಿದಾರರು ಕೊಟ್ಟ ಮೇಲ್ಕಂಡ R. I. A. 398/43ನೇ ಅರ್ಜಿ ತಾ. 18-6-43ಕ್ಕೆ ತನಿಖೆಗೆ ಇಟ್ಟಿರವದ್ರಿಂದ, ಆ ಕುರಿತು ನಿಮಗೇನಾದರೂ ಆಕ್ಷೇಪ ಇದ್ರೆ ಸದ್ರಿ ಪ್ಯಾರೆ ದಿನ ಪೂರ್ವಾಹ್ನ ಗಂಟೆ 10ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಹೇಳತಕ್ಕದ್ದು. ತಪ್ಪಿದ್ರೆ ನಿಮ್ಮನ್ನು ಏಕಪಕ್ಷ ಮಾಡಿ ತೀರ್ಮಾನಿಸಲಾಗುವದೆಂತ ತಿಳಿದಿರಲಿ.

By Order of the Court

M. Sadashiva Rao

Pleader for Pititioner

Puttur 5-6-43

ಬಾಲ ಸಾಹಿತ್ಯ ಮಂಡಲ, ಲಿಮಿಟೆಡ್.

ದಿವಂಗತ ಶ್ರೀ। ಉಳ್ಳಾಲ ಮಂಗೇಶರಾಯ್ ಬಿ. ಎ., ಎಲ್. ಟಿ. ಅವರಿಂದ ರಚಿತವಾದ ನಮ್ಮ "ಹೊಸಗನ್ನಡದ ೧ರಿಂದ ೫ರ ವರೆಗಿನ ರೀಡರು"ಗಳು ಇದೇ ಜೂನಿನ ಪ್ರಥಮ ವಾರದಲ್ಲೇ ಸಿದ್ಧವಾಗುವವು. ಅವುಗಳಿಗೆ ಬೆಲೆ ಮತ್ತು ಅವುಗಳ ಮೇಲಿನ ಕಮಿಶನಿನ ದರಗಳು ಕಾಲಕ್ಕೆ ತಕ್ಕಂತೆ ಹೊಂದಿಸಲ್ಪಟ್ಟು ಆಗಲೇ ಪ್ರಕಟಗೊಳ್ಳುವವು.

Bala Sahitya Mandal, Ltd.

ಅದೃಷ್ಟಕ್ಕೂ ಒಂದು ಅವಧಿಯಿದೆ ಅದು ಬಂದಾಗ ಅಂತಕನು ಬಂದು ಎದುರು ನಿಂತರೂ ಅಸಾಧ್ಯ. ನಮ್ಮ ನಿಮ್ಮೆಲ್ಲರ ಅದೃಷ್ಟ ಪರೀಕ್ಷೆಗೆ ಅದ್ಭುತ ಚಿತ್ರವನ್ನೇ ನೋಡಬೇಕು.

ಥೋಕರ್ (ರಣಜಿತ್)

ಕುಮಾರ್, ಮಾಧುರಿ, ಚಾರ್ಲಿ, ಕಲ್ಯಾಣಿ ಮೊದಲಾದವರು.

ತಾ **17—6—43**ರಿಂದ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಬರುವ ಚಿತ್ರಗಳು:—ವಿಜಯ ಕುಮಾರ್ (ವಾಡಿಯಾ) ರಾಯಲ್ **ಸಾಹೇಬ್ (ಜನಕ್) ಷಾಜಾದಿ (ಮೋಹನ್)**

ಮುನ್ಸಿಪಾಲಿಟಿ (ನವಯುಗ)

BHUVANENDRA PRODUCTS Ltd.,

Head Office and Factory: Katapadi, S. Kanara

Depots: 1 Mahratha Galli, Hubli

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolams. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಯ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ವಿಜಯಾ ಸ್ಟೋರ್ಸ್

ದಕ್ಷಿಣ ಕನ್ನಡ

ಮುಸ್ಲಿಂ ಮಹಿಳಾ ಹೈಸ್ಕೂಲ್

ಮುಸ್ಲಿಂ ಬಾಲಿಕೆಯರಿಗಾಗಿ, ಮಂಗಳೂರು ರಥಬೀದಿಯ ಮು|| ಹಾ|| ಎ|| ಶಾಲೆಯ ಮಂದಿರದಲ್ಲಿ ಈ ವರ್ಷ ಒಂದು ಗವರ್ನಮೆಂಟ್ ಸೆಕೆಂಡರಿ ಶಾಲೆ ತೆರೆಯಲ್ಪಟ್ಟಿತು. ಆಗ ಅಲ್ಲಿ ವಿದ್ಯಾಭಿಮಾನಿಗಳ ಸಭೆ ಯು. ಚೇರ್‌ಮನ್ ಶ್ರೀ ಪಿ. ಅಬ್ದುಲ್ ಹುಸೆನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಈ ಶಾಲೆಗಾಗಿ ಒಂದು ವಿದ್ಯಾರ್ಥಿನಿ ಭವನ ಅಗತ್ಯವೆಂದೂ, ಅಲ್ಲಿ ವಾಸಿಸತಕ್ಕ ವಿದ್ಯಾರ್ಥಿನಿಯರಿಗಾಗಿ ವಿದ್ಯಾರ್ಥಿನಿ ವೇತನಗಳು ಏರ್ಪಡಬೇಕೆಂದೂ, ಶಾಲೆಗೊಂದು ಕಟ್ಟಡಬೇಕೆಂದೂ, ರಥಬೀದಿಯಲ್ಲಿರುವ ಡಿ.ಇ.ಓ. ಆಫೀಸನ್ನು ಅದಕ್ಕಾಗಿ ಕೊಟ್ಟರಾಗಬಹುದೆಂದೂ, ಈ ಶಾಲೆಯನ್ನು ಬರುವ ವರ್ಷ ಹೈಸ್ಕೂಲಿನ ತರಗತಿಗೇರಿಸಿ IV ಫಾರ್ಮನ್ನು ತೆರೆಯಬೇಕೆಂದೂ ನಿರ್ಣಯಗಳಾದವು. ಶ್ರೀ. ಯು. ಹಮ್ಮಬ್ಬರು ವಂದನಾರ್ಪಣೆ ಮಾಡಿದರು.

ಮಂಗಳೂರು ರಥಬೀದಿಯ ಮುನಿಸಿಪಲ್ ಹ್ಯಾಯರ್ ಎಲಿಮೆಂಟರಿ ಶಾಲೆಯ ಮಂದಿರದಲ್ಲಿ ಈ ಹೊಸ ಶಾಲೆಯು ಕಳೆದ ಸೋಮವಾರ ಸಂಜೆ ತೆರೆಯಲ್ಪಟ್ಟಿದೆ. ಜಿಲ್ಲಾ ಕಲೆಕ್ಟರರ ಪತ್ನಿ ಬೇಗಂ ಕರಿಮುಲ್ಲರಿಂದ ಇದರ ಪ್ರಾರಂಭೋತ್ಸವ ನೆರವೇರಿಸಲ್ಪಟ್ಟಿತು. ಮಿಸ - ಸಿ. ಡಿ. ಸೋಜಾ ಇಂಸ್ಪೆಕ್ಟ್ರೆಸ್, ಬೇಗಂ ಟಿ. ಅಸಫ್ ಅಲಿ ಬೇಗ್ ಸಾಹೇಬ್, ಶ್ರೀಗಳಾದ ಯು. ಹಮ್ಮಬ್ಬ ಸಾಹೇಬ್, ಎಂ. ಅಬ್ದುಲ್ ರಹೀಂ ಸಾಹೇಬ್, ಎಂ. ಕರಿಮುಲ್ಲಾ (ಜಿಲ್ಲಾ ಕಲೆಕ್ಟರ್) ಅಬ್ದುಲ್ ಅಜೀಜ್ ಸಾಹೇಬ್ ಮೊದಲಾದವರ ಭಾಷಣಗಳಾದ್ದವು. ಮುಖ್ಯೋಪಾಧ್ಯಾಯಿನಿ ಮಿಸ್ ಇ. ಬ್ರಿಟೋ ವಂದನಾರ್ಪಣೆ ಮಾಡಿದರು.

ನೇಣಿನೊಡನೆ ಶವ:—ಸ್ಥಳೀಯ ವೆಬ್ ಸ್ಟರ್ ಮಾರ್ಕೆಟಿನ ಬಳಿಯ ಫಲಿಕ್ಸ್ ಪೈ ಬಜಾರಿನಲ್ಲಿ ಕಳೆದ ಗುರುವಾರ ಒಬ್ಬ ವ್ಯಕ್ತಿಯ ಶವ ನೇಣಿನೊಡನೆ ಇದ್ದುದು ಕಂಡು ಬಂದು ಆ ಸಂಬಂಧವಾದ ಪೋಲಿಸ್ ತನಿಖೆಯೂ ನಡೆದಿದೆ. ಮೃತನು ಪಿಟ್ಟ ನಡಿ ಪ್ರಾಯದವನು; ಅವನೊಬ್ಬ ಮೋಚಿ ಎಂದು ಹೇಳಲಾಗಿದೆ.

ಅಧ್ಯಕ್ಷರ ಚುನಾವಣೆಯಲ್ಲಿ ಶ್ರೀ ಅಡೂರರವರು ಗೆದ್ದರು:—ದ. ಕ. ಜಿಲ್ಲಾ ಬೋರ್ಡಿನ ಹಿಂದಿನ ಅಧ್ಯಕ್ಷರಾದ ಡಾ. ಕೆ. ವಿಠ್ಠಲಸೆಟ್ಟರ ನಿಧನದಿಂದ ಬರಿದಾಗಿದ್ದ ಆ ಸ್ಥಾನಕ್ಕಾಗಿ ಅದರ ಕಾರ್ಯಾಲಯದಲ್ಲಿ ತಾ. 11ನೇ ಬೆಳಿಗ್ಗೆ ಚುನಾವಣೆ ನಡೆದು, ಉಮೇದುವಾರರಾಗಿದ್ದ ಶ್ರೀ ಅಡೂರು ಲಕ್ಷ್ಮೀನಾರಾಯಣ ರಾವ್, ಬೋರ್ಡಿನ ವೈಸ್ ಪ್ರೆಸಿಡೆಂಟ್, ಮತ್ತು ಡಾ|| ಅದ್ಯಂತಾಯ, ಇವರಲ್ಲಿ ಶ್ರೀ. ಅಡೂರರವರು ವಿಜಯಿಗಳಾದರು.

ನಗರ ಸಭೆ—

ಯ ಅಧಿವೇಶನವು ತಾ. ೭ರಂದು ಚೇರ್‌ಮೇನ್ ಅಬ್ದುಲ್ ಹುಸೆನ್ ಸಾಹೇಬರ ಅಧ್ಯಕ್ಷತೆಯಿಂದ ಜರಗಿ, ಹಿಂದಿನ ಚೇರ್‌ಮೇನರಾಗಿದ್ದ ಡಾ| ವಿಟ್ಠಲ ಸೆಟ್ಟ್ರ ನಿಧನದ ಬಗ್ಗೆ ಸಂತಾಪ ಸೂಚನೆಯ ಠರಾವು ಮಾಡಿ ಕೆಲ ನಿಮಿಷ ಸಭಾಕಾರ್ಯ ಮುಂದುವರಿಸಲಾಯಿತು. ಮುನ್ಸಿಪಲ್ ಗಡಿ ವಿಸ್ತರಣೆಯಾದ್ದರಿಂದ, ಮುನ್ಸಿಪಾಲಿಟಿ ಕೆಲಸ ಹೆಚ್ಚಿದ್ದು ಹೆಚ್ಚಿಗೆ ಸಿಬಂಧಿ ಬೇಕೆಂದು ತೀರ್ಮಾನವಾಯಿತು. ಲಾಟನುಗಳ ಬಗ್ಗೆ ರೂ ೨೪೫—೦—೦ ಸೇಂಕ್ಶನ್ ಆಯಿತು. ಕಮಿಶನರರ ವರದಿಯಲ್ಲಿ ಮುನ್ಸಿಪಾಲಿಟಿಗೆ ವರ್ಷಕ್ಕೆ ರೂ. ೧ ಲಕ್ಷ ೪೫ ಸಾವಿರ ಆದಾಯವಿದೆಯೆಂದೂ ತಿಳಿಸಲಾಗಿದೆ. ಮುನ್ಸಿಪಲ್ ಲಾರಿಯನ್ನು ಫಯರ್ ಸರ್ವಿಸ್ ವಶಕೊಡಬೇಕಾದರೆ ಸರಕಾರವು ಪ್ರತಿಫಲ ಕೊಡಬೇಕೆಂದಾಯಿತು. ಮುನ್ಸಿಪಾಲಿಟಿ ಆಕ್ಟ್ ಸಮಸ್ಯೆ ವಿಚಾರವಾಗಿ ಒಂದು ನಿರ್ಣಯ ಮಂಡಿಸಲಿದ್ದು, ಕಲೆಕ್ಟರರು ಅಕ್ಟ್ ವಿಚಾರದ ಸಮಸ್ಯೆ ಪರಿಹರಿಸುವ ಭರವಸೆ ತನಗಿತ್ತುದರಿಂದ ಅಧ್ಯಕ್ಷರು ಆ ನಿರ್ಣಯ ಮಂಡಿಸುವುದಿಲ್ಲವೆಂದರು. ಟ್ಯುನಿಸಿಯಾ ಜಯದಿಂದ ಆದ ಸಂತೋಷವನ್ನು ಕೌನ್ಸಿಲು ಒಪ್ಪಿಕೊಂಡಿತು. ಮುನ್ಸಿಪಾಲಿಟಿಯ ಕೆಲಸಗಾರರಿಗೆ ತುಟ್ಟಿಭತ್ತೆ ಕೊಡಬೇಕೆಂದಾಯಿತು.

ಚೂರು-ಚೂರು

'ಜರ್ಮನರನ್ನೋಡಿಸಿದ ಮೇಲೆ ಇಟಲಿಯೊನರು ಸ್ವೇಚ್ಛೆಯ ಸರಕಾರವನ್ನು ನಿರ್ಮಿಸಿಕೊಳ್ಳಬಹುದು'—ರುಸವೆಲ್ಟರ ಆಶ್ವಾಸನೆ.

ಪುನಃ ಮುಸಲನಿಯನ್ನೇ ಕರೆಯುವ ಇಚ್ಛೆ ಮಾಡಿದರೂ ಸೈಯ್ಯೇನು?

O

'ಫ್ರಾನ್ಸಿನಲ್ಲಿಯೂ ಮಿತ್ರರ ಗಾಳಿ ಕೊಡೆಯುವರಿಳಿಯಬಹುದು'-ವಿಚಿ ಸರಕಾರದ ಎಚ್ಚರಿಕೆ.

ಮಳೆಗಾಲದ ಮಟ್ಟಿಗಾದರೂ ಕೆಲವು ಕೊಡೆಗಳು ಭಾರತಕ್ಕಿಳಿಯಬಾರದೆ?

O

ಫ್ರೆಂಚ್ ಸೈನ್ಯದಲ್ಲಿರುವ ವಿಚಿ ಪಕ್ಷಪಾತಿ ಅಧಿಕಾರಿಗಳನ್ನೆಲ್ಲಾ ತೆಗೆದು ಹಾಕಬೇಕೆಂಬ ಜನರಲ್ ಡಿ. ಗೋಲೆಯವರ ಒತ್ತಾಯದ ದೆಸೆಯಿಂದ ಪುನಃ ಗೋಲಿ—ಜಿರಾಡ್ ಜಗಳವೆದ್ದಿದೆ.

ಬ್ರಿಟನ್ ವಿದೇಶ ಮಂತ್ರಿ ಈಡನ್ನರು ನಿರುದ್ಯೋಗಿಯಾಗದಂತಾಯಿತು.

O

ಆಹಾರ ಧಾನ್ಯಗಳ ಅಭಾವದಿಂದ ಮಲಬಾರಿನ 9 ತಾಲೂಕುಗಳಲ್ಲಿಯೂ ಕಣಗಲ ಬೇರು ಮತ್ತು ಇತರ ಬೇರುಗಳನ್ನು ಅಗಿದು ತಿನ್ನಲಾರಂಭಿಸಿದ್ದಾರೆ.

ಸರಕಾರದ 'ಅಧಿಕಾಹಾರ ಬೆಳೆಸಿರಿ' ಪ್ರಚಾರಕಂನ್ನು 'ಬೇರು ಬಿಡಿರಿ' ಚಳವಳಿಕ್ಕಾರಂಭಿಸಬೇಕೆಂದು ವಿನಂತಿ.

O

'ಹಿಟ್ಲರನನ್ನು ಸದ್ಯದಲ್ಲೇ ನಾಜಿಗಳು ಕೊಲೆಮಾಡಲಿದ್ದಾರೆ.'—ಜರ್ಮನ್ ಜೋಯಿಸ್ ಎವಿಂಡ್ ಉದ್ವಿಗನ ಭವಿಷ್ಯದ್ವಾಣಿ.

ಆದರೆ, ಇನ್ನು ಯಾವುದನ್ನೇ ಆದರೂ ತಾವೇ ಮುಂದಾಗಿ ಅಕ್ರಮಿಸಬೇಕಲ್ಲದೆ ನಾಜಿಗಳಿಗೆ ತೆರವು ಕೊಡಬಾರದೆಂದು ಮಿತ್ರರಾಷ್ಟ್ರೀಯರೀಗ ಶಪಥಹಾಕಿದ್ದಾರೆ.

O

ಚಿತ್ತೂರು ಮೊದಲಾದ ಜಿಲ್ಲೆಗಳಿಂದ ಹುಣಸೇ ಹುಳಿ ಮತ್ತು ಹುಣಸೆಮರಗಳ ರಫ್ತನ್ನು ಸ್ಥಳೀಯ ಅಧಿಕಾರಿಗಳು ಪ್ರತಿಬಂಧಿಸಿದ್ದಾರೆ.

ಆದರೂ ಕೊಳೆತು ಹುಳಿನಾರುವ ವಾತಾವರಣಕ್ಕೆ ತಡೆಯಿಲ್ಲ!

O

'ಅಕ್ಕಿಯ ಬೆಲೆನಿಯಂತ್ರಣವನ್ನು ಜ್ಯಾರಿಗೆ ತಂದ ಅಧಿಕಾರಿಗಳು ಈಗ ಬೆಲೆಯು ಹನುಮಂತನ ಬಾಲವಂತೆ ಬೆಳೆಯುತ್ತಿರುವಾಗ ಏನು ಮಾಡುತ್ತಿದ್ದಾರೆ?'-ದಕ್ಷಿಣ ಕನ್ನಡದಲ್ಲಿ ಎಲ್ಲರ ಪ್ರಶ್ನೆ

ಮತ್ತೇನು ಮಾಡಿಯಾರು?—ಧಾರಣೆ ನಿಯಂತ್ರಣ ಬಿದ್ದು ಹೋಗಿ ಧಾರಣೆ ನಿಯಂತ್ರಣ ಎದ್ದು ಬಂದುದನ್ನು ಸುಖವಾಗಿ ಕಾಣುತ್ತಿದ್ದಾರೆ.

—ವಿನೋದಿ.

WANTED.

A Secondary Grade Trained teacher on reasonable pay to join immediately.

Apply to the Manager,

Aided Higher Ele. School,

Kemmannu. South Kanara.

The Rainy Day

It is but human nature to enjoy life and make merry when troubles there are none–while the sun shines. It is ununderstandable. But modern life has also its obligations and a wise man well knows that life has also its storms to face and he accordingly prepares for such eventualities.

He does this with an INDOUNION LIFE policy. He chooses one that exactly suits his needs. With this Policy he and his family can well face life's furies and misfortunes with a calm heart. INDOUNION stands guard over his dependents, especially at the height of the storm when he himself may no longer be there to protect them.

INDOUNION can give YOU, too, this peace of mind. Let us send you full particulars or our representative will gladly call. There is no obligation.

INDO-UNION ASSURANCE CO. LTD.

INDOUNION BUILDINGS, G. T. MADRAS.

BRANCH OFFICE:

For Bombay Presidency, Hyderabad (Deccan) & *South Kanara.*

BEHRAMJI MANSION, SIR PHIROZSHAH METHA ROAD, FORT, BOMBAY.

Bombay Branch Manager:
M. Sunderram Shetty

General manager:
K. S. Ramamurthi, M. A.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

ಮುಖ್ಯ ಕಾರ್ಯಾಲಯ:—ಕೋರ್ಟ್ ರಸ್ತೆ, ಉಡುಪಿ. ದಕ್ಷಿಣ ಕನ್ನಡ.

ಶಾಖೆಗಳು:— ಉಡುಪಿ, ಮಂಗಳೂರು, ಕಟಪಾಡಿ, ಕಾಂಞಾಂಗಾಡ್ ಮತ್ತು ಕಣ್ಣನೂರು.

[illegible] ತಾ. 31-7-1943 [illegible]

[illegible]

[illegible] ಪ್ರತಿಯೊಂದು [illegible]

[illegible]

ಬೇಂಕಿನ ಪ್ರತಿಯೊಂದು ವಿಧದ ವಹಿವಾಟುಗಳು ನಡೆಸಲ್ಪಡುತ್ತವೆ.

[illegible] ದಯವಿಟ್ಟು [illegible]

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಕಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊದಲು ಮಾಡಿದ ಎಲ್ಲಾ ರೋಗಗಳಿಗೂ ಸಿದ್ಧೌಷಧ,

REGD.

ಕುಳುಕಡಿ ಮದ್ದು ಸಹ ದೊರೆಯುತ್ತದೆ.

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತಾ.

P. M. Kunhi Raman, Manager, Parassini Madappura Temple. P. O. Parassinikkatavu (Via) Pappinisserri.

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ-

ಪರಸಿನಿ ಕಡವು ದೇವಸ್ಥಾನದಿಂದ ಈ ಮೂಲಕ ಕೂಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂವು ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುಞ್ಞಿರಾಮನ್,
ಮೆನೇಜರ್.

ನವಯುಗದ ಹೊಸ ಚಂದಾದರ

[illegible] ಯಂತೆ ಇದೇ ಎಪ್ರಿಲ್ ತಾ. 1ರಿಂದ [illegible] 0-1 [illegible] ಏರಿಸಲಾಗಿದೆ. [illegible] ವಾರ್ಷಿಕ ಚಂದಾ ದರವನ್ನು ಈ ಕೆಳಗಿನಂತೆ ಗೊತ್ತು ಮಾಡಲಾಗಿದೆ. ಈಗಿದ್ದ ಚಂದಾದಾರರಿಗೆ ಮಾರ್ಚ ಅಂತ್ಯದ ವರೆಗೆ ಮೊದಲಿನಂತೆ [illegible] ಉಳಿದ ಹಣದಲ್ಲಿ ಹೊಸ ದರದಂತೆ ಎಷ್ಟು [illegible] ಅವಧಿಯ ವರೆಗೆ ಪತ್ರಿಕೆ ಕಳಿಸಲಾಗುವುದು. [illegible] ಇರುವವರು ಮಾರ್ಚ್ ತನಕ ಮೊದಲಿನ ದರದಂತೆಯೂ [illegible] ಹೊಸ ದರದಂತೆಯೂ ಚಂದಾ ಹಣ ಕಳಿಸುವಂತೆ ವಿನಂತಿ.

ಹೊಸ ಚಂದಾದರ

	ಸ್ಥಳೀಕರಿಗೆ	ಪರಸ್ಥಳೀಕರಿಗೆ ಅಂಚೆ ವೆಚ್ಚ ಸೇರಿ
1 ವರ್ಷಕ್ಕೆ ರೂ.	3-12-0	1-8-0
6 ತಿಂಗಳಿಗೆ ರೂ.	2-0-0	2-8-0

[illegible] ವಾಚಕರೂ ಜಾಹೀರಾತುದಾರರೂ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಮೆನೇಜರ್.

— ಮಕ್ಕಳನ್ನು ಹಡೆಯುವದು ಸಾಕು.—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ 1 ಗುಳಿಗೆ, ಮಧ್ಯಾಹ್ನಕ್ಕೆ 1 ಗುಳಿಗೆ, ಸಂಜೆಗೆ 1 ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಸಲ್ಲಿ ಬಿಡಬೇಕು. 7 ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಷ್ಟ ಚಾರ್ಜು ನಿರಾಳ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಬೆಟಗೇರಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಕುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕರಿಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲರ ಸಹಕಾರ ಅಪೇಕ್ಷಿಸುವುದು.

M. R. Punja, President & Manager

ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

[illegible] ಬಾಟ್ಲಿಗಳು ಹೆಚ್ಚು ಕಡಿಮೆ [illegible] ಬರುವವು, ಅಂದರೆ ಕೇವಲ [illegible] ಒಂದು ಬಾಣಂತಿತನಕ್ಕೆ ಸಾಕಾಗುವವು, ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದಕ**

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸದೊರೆಯು ಬೇಕೋ?

ಸುಖನಿವಾಸಕ್ಕೆ ಬನ್ನಿ!

[illegible] ಭೋಜನ, ಬಿಸಿಬಿಸಿ ತಿಂಡಿ, ಸ್ನಾನ,

[illegible] ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರವಾಸಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ. : : : : ಮಂಗಳೂರು.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಿಯೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಸ್ಥಾಪನೆ **ಕ್ರೌನ ರಬ್ಬರ್ ಸ್ಟಾಂಪ ಕಂಪನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸ್ಟೆನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618.

Ested. 1921 ಸ್ಥಾಪಿತ.

ಹೊಸಕೆರೆ ಚಿದಂಬರಯ್ಯನವ
ರಿಂದ ರಚಿತವಾದ ಗೀತೆಯ
ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು ೨೪೦ ಪುಟಗಳು,
ಬೆಲೆ (ಸುಂದರ ಪ್ರತಿ) ೦—೬—೦
(ಕೆಲಿಕೋ ಬೈಂಡ್) ೦-೧೨—೦
(ಲೆದರ್ ಬೈಂಡ್) ೧—೪—೦
ಪ್ರತಿಗಳು ಪ್ರಸಿದ್ಧ ವ್ಯಾಪಾರಿಗಳಲ್ಲಿ ಸಿಗುವದು.
0-10—0 ಸ್ಟಾಂಪು ಕಳಿಸಿದ್ದಲ್ಲಿ ಒಂದು
ಪ್ರತಿಯನ್ನು ಬುಕ್ ಪೋಸ್ಟ್
ಮಾಡಲಾಗುತ್ತೆ.
**ನವಭಾರತ ಪುಸ್ತಕ ಭಂಡಾರ,
ಉಡುಪಿ.**

NAVAYUGA ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೩
ಸಂಚಿಕೆ ೪೦

FOUNDER
Sri. A. B. Shetty, M. L. A.

Vol. 23
No. 40

NAVAYUGA— Kannada Weekly —UDIPI, S. I.

ಉಡುಪಿ • **24—6—1943** • ಮಂಗಳೂರು.

ಶ್ರೀಮತಿ ಶಿವರಾಣಿ ದೇವಿಯವರಿಂದ
(ದಿವಂಗತ ಪ್ರೇಮಚಂದರ ಪತ್ನಿ)
ರಚಿತವಾದ ಹಿಂದೀ ಕತೆಗಳ ಕನ್ನಡ
ಭಾಷಾಂತರ

ನಾರೀ ಹೃದಯ

ನಾರೀ ಹೃದಯದ ವಾಸ್ತವಿಕ ಚಿತ್ರ
ವನ್ನು ಚಿತ್ರಿಸುವ ಉತ್ತಮ ಕತೆಗಳ
ಸಂಗ್ರಹ.
ಬೆಲೆ 0—14—0
ಟ ಖ. 0--2—0 ಪ್ರತ್ಯೇಕ.
ಒಂದು ರೂಪಾಯಿ ಸ್ಟಾಂಪು ಕಳಿಸಿದರೆ ಒಂದು
ಪ್ರತಿಯನ್ನು ಕಳಿಸಲಾಗುವುದು.
**ಶಿರಿಯುರ ಪ್ರಪಂಚ, ಉಡುಪಿ.
ಅಥವಾ ನವಭಾರತ ಬುಕ್
ಡಿಪೋ, ಉಡುಪಿ.**

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

The Canara Mutual Assurance Co., Ltd.,
UDIPI (S India).

ನೀವೀ ವರೆಗೆ ವಿಮೆಯನ್ನೇ ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಈಗಲೇ ವಿಮೆ ಇಳಿಸಿರಿ

ಏಕೆಂದರೆ:—

1 ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸವಿನಾಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.

2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.

3. ಆರೋಗ್ಯವು ಅನಿಶ್ಚಿತವೆಂದಾದರೆ, ಮೃತ್ಯುವು ಯಾರನ್ನೂ ಬಿಡುವಂತಿಲ್ಲ.

4. ಮೃತ್ಯು ಮತ್ತು ಮುಪ್ಪು ಎಂಬುದು ಅನುಕೂಲ್ಯವಾದೊಂದು ನಿಶ್ಚಿತ.

5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಆದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ,

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತರಾದ ದಕ್ಷಿಣ ಹಿಂದುಸ್ಥಾನದ ಪ್ರಮುಖ ಏಜಂಟರು.
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ, ದ. ಕನ್ನಡ.
ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ: —
ಮಂಗಳೂರು, ಕಲ್ಲಿಕೋಟೆ, ಸೇಲಂ, ತಿರುವಾಂಕೂರು, ಬೆಂಗಳೂರು ನಗರ ಮತ್ತು ಬೊಂಬಾಯಿ.

THE BOMBAY LIFE ASSURANCE CO., LTD.

Sick or healthy, wounded or convalescent in a Prisoner's Camp or in the Line-

Our Men Need Your Help

SUBSCRIBE
to
H. E. The Governor's War Fund

earmarked
"RED CROSS"
or
"AMENITIES FOR TROOPS"
--as you choose, but--
SUBSCRIBE!

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ..ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಜೇನಗಳಿಗೆ ಈ ನಮ್ಮ ಔಷಧವು ಇರುವದು ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ.— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೆಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಿಕರ ವಿಳಾಸ. **ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

ಮುಂದಿನ ವೈಸರೋಯಿ—ಸರ್. ಆರ್ಚಿಬಾಲ್ಡ್ ವೇವೆಲ್!

ಜನರಲ್ ಆಘ್‌ಲೆಕ್ ಕಮಾಂಡರ್-ಇನ್-ಚೀಫ್.

ಈ ತನಕ ಭಾರತದ ಕಮಾಂಡರ್-ಇನ್-ಚೀಫ್ ಆಗಿದ್ದ ಫೀಲ್ಡ್ ಮಾರ್ಶಲ್ ಸರ್. ಆರ್ಚಿಬಾಲ್ಡ್ ವೇವೆಲರು ಲೋರ್ಡ್ ಲಿನ್ ಲಿತ್ ಗೋರ ಬದಲಿಗೆ ವೈಸರಾಯರಾಗಿ ನೇಮಕ ಹೊಂದಿದ್ದಾರೆ ಭಾರತದ ಸರ್ವ ಸೇನಾನಿಯಾಗಿ ಸರ್. ಕ್ಲಾಡೀ ಆಘ್‌ಲೆಕರ ನೇಮಕವಾಗಿದೆ.

ಅಧಿಕೃತ ಪ್ರಕಟಣೆ.

ಇದೇ ತಾ 18ರಲ್ಲಿ ಲಂಡನಿನ ಡೌನಿಂಗ್ ಸ್ಟ್ರೀಟ್. 10. ಇಲ್ಲಿಂದ ಹೊರಟ ಸರಕಾರೀ ಜಾಹೀರು ನಾಮೆಯಿದು:- "ಬರುವ ಆಕ್ಟೋಬರಿನಲ್ಲಿ ನಿವೃತ್ತಿ ಹೊಂದಲಿರುವ ಬಹುಮಾನ್ಯರಪಟ್ಟ ಮಾರ್ಕ್ವೆಸ್ ಓಫ್ ಲಿನ್‌ಲಿತ್‌ಗೋ ಪಿ, ಸಿ., ಕೆಟಿ., ಜಿ ಎಮ್. ಎಸ್. ಐ., ಜಿ. ಎಮ್. ಐ. ಇ., ಒ. ಬಿ. ಇ., ಡಿ. ಎಲ್., ಟಿ. ಡಿ., ಇವರ ಸ್ಥಾನಕ್ಕೆ ಫೀಲ್ಡ್ ಮಾರ್ಶಲ್ ಸರ್. ಆರ್ಚಿಬಾಲ್ಡ್ ಪರ್ಸಿವಲ್ ವೇವೆಲ್. ಜಿ. ಸಿ. ಬಿ., ಸಿ. ಎಮ್. ಜಿ., ಎಮ್. ಸಿ., ಎ. ಡಿ. ಸಿ., ಇವರ ನೇಮಕವನ್ನು ಚಕ್ರವರ್ತಿಗಳು ಆನಂದ ಪೂರ್ವಕ ಮಂಜೂರು ಮಾಡುತ್ತಾರೆ. ಅಂತೆಯೇ ಭಾರತೀಯ ಸಂಸ್ಥಾನಗಳೊಡನೆ ಬ್ರಿಟಿಷ್ ಪ್ರಭುತ್ವಕ್ಕಿರುವ ಸಂಬಂಧಗಳನ್ನು ಸಾಗಿಸುವ ರಾಜಪ್ರತಿನಿಧಿಯಾಗಿಯೂ ಲೋರ್ಡ್ ಲಿನ್ ಲಿತ್ ಗೋರವರ ಸ್ಥಾನದಲ್ಲಿ ಸರ್. ಆರ್ಚಿಬಾಲ್ಡ್ ವೇವೆಲರನ್ನು ಹಿಸ್ ಮೆಜೆಸ್ಟಿಯವರು ಮಂಜೂರು ಮಾಡುತ್ತಾರೆ. ಹಾಗೇನೇ ಫೀಲ್ಡ್‌ಮಾರ್ಶಲ್ ವೇವೆಲರ ಬದಲಿಗೆ ಜನರಲ್ ಸರ್. ಕ್ಲಾಡೆ ಜೋನ್ ಐರೆ ಆಘ್‌ಲೆಕ್ ಜಿ. ಸಿ. ಐ. ಇ. ಸಿ. ಬಿ., ಸಿ. ಎಸ್. ಐ. ಡಿ. ಎಸ್. ಒ., ಒ. ಬಿ. ಇ., ಎ. ಡಿ. ಸಿ. ಇವರನ್ನು ಹಿಂದುಸ್ಥಾನದ ಕಮಾಂಡರ್-ಇನ್-ಚೀಫ್ ಆಗಿಯೂ ಗವರ್ನರ್ ಜನರಲರ ಎಕ್ಸಿಕ್ಯೂಟಿವ್ ಕೌನ್ಸಿಲ್ ಮೆಂಬರರಾಗಿಯೂ ನೇಮಿಸಲು ಅರಸರಿಗೆ ಸಂತೋಷವಾಗುತ್ತದೆ. ಈಗ ಸಂಯುಕ್ತ ರಾಜ್ಯದಲ್ಲಿರುವ ಜನರಲ್ ವೇವೆಲರು ಭಾರತದ ಸರ್ವ ಸೇನಾಪತಿತ್ವದಿಂದ ಈಗಲೇ ಬಿಡುಗಡೆ ಹೊಂದುವರು. ಮತ್ತು ಕಾರ್ಯಭಾರವನ್ನು ಹಿಂದುಸ್ಥಾನಕ್ಕೆ ಮರಳಿದ ಮೇಲೆ ವೈಸರಾಯ ಹುದ್ದೆಗೇರುವರು. ಆ ದಿನದಿಂದ ಜನರಲ್ ಆಘ್‌ಲೆಕರು ಕೂಡಲೇ ಕಮಾಂಡರ್-ಇನ್-ಚೀಫ್ ಆಗುವರು. ಜಪಾನಿನ ವಿರುದ್ಧ ಯುದ್ಧದ ಹೊಣೆಯು ಭಾರತದ ಸರ್ವಸೇನಾನಿಯ ಮೇಲಿದ್ದುದನ್ನು ಬದಲಾಯಿಸಿ, ಆ ಉದ್ದೇಶಕ್ಕಾಗಿ ಪ್ರತ್ಯೇಕ ಪೂರ್ವ ಏಶ್ಯಾ ಸೇನಾಪತ್ಯವನ್ನು ರಚಿಸುವ ಯೋಜನೆಯಿದೆ. ಈ ಕುರಿತು ಸಧ್ಯದಲ್ಲೇ ಪ್ರತ್ಯೇಕ ಹೇಳಿಕೆಯನ್ನು ಹೊರಡಿಸಲಾಗುವುದು".

ಭಾರತೀಯರಿಗೆ ಬಲಾನಾದಫಕ್ಕೆ!

'ಏಳು ದಿನ ತಗಲಾಗ ಚೀಳು ಹೊರ ಬಂತು!' ಎಂಬಂತೆ ಕಳೆದ ಆರು ತಿಂಗಳುಗಳಲ್ಲಿ ಚರ್ಚಿಲ್ಲರು ತನ್ನ ಹಿಡಿಮುಷ್ಟಿಯಂತಹ ಮಮತೆಯನ್ನು ಪ್ರಕಟಿಸಿಯೂ ಕೊನೆಗೆ ಭಾರತಕ್ಕೆ ಕೊಟ್ಟದು ಸರ್. ವೇವೆಲರನ್ನು! ಸೇನಾ ಯಂತ್ರದ ಕೀಲಿಯಿಂದ ಸ್ನೇ ತಿರುಗಿಸಿ ಅನುಭವಪಡೆದ ಒಬ್ಬ ಯೋಧನನ್ನು! ಮಿ. ಚರ್ಚಿಲ್ಲರು ಬರಿಯ ಚಿಂತನೆಯಿಂದಲೇ ವ್ಯಯಿಸಿದ ಈ ದೀರ್ಘಾವಧಿಯನ್ನು, ಸರ್. ವೇವೆಲರಿಗೆ ರಾಜಕೀಯ ಶಿಕ್ಷಣಕೊಡಲು ವಿನಿಯೋಗಿಸುತ್ತಿದ್ದರೆ ಉಪಕಾರವಿತ್ತೇನೋ! ಬರ್ನಾರ್ಡ್ ಶಾರ ಗಡ್ಡದ ನೆರಳಲ್ಲಿ ಕೊನೆಯ ಪಕ್ಷ ಆರು ತಿಂಗಳಾದರೂ ಕುಳಿತು ರಾಜನೀತಿ ಶಿಕ್ಷಣಹೊಂದದೆ, ಸರ್. ವೇವೆಲರು ವೈಸರಾಯಿ ಗದ್ದುಗೆಯೇರಿರುವುದು ಅವಸರವಾಯಿತು.—ಪಹರೆಗಾರ ಪಲ್ಲಂಗ ಹತ್ತಿದಂತಾಯಿತು.! ಸ್ಪಷ್ಟವಾಗಿ ಹೇಳುವದಾದರೆ ಚರಿತ್ರೆಯಲ್ಲೇ ಇದೀಗ ಮೊದಲಬಾರಿ ಭಾರತವು ಮಿ. ಚರ್ಚಿಲ್ಲರಿಂದ ಸೈನಿಕಾಡಳಿತೆಗೊಳಗಾಗಿದೆ.

ಮುಖ್ಯ ಕಾರಣಗಳು

ಯೋಧನಾಗಿ ಹುಟ್ಟಿ ಯೋಧನಾಗಿಯೇ ಬೆಳೆದವನು, ಅತ್ಯುಚ್ಚ ನಾಗರಿಕ ಲಕ್ಷಣವಿರಬೇಕಾದ ವೈಸರಾಯ ಹುದ್ದೆಗೆ ಹತ್ತುವಾಗ, ಇಂತಹ ವಿಲಕ್ಷಣ ಜಂತುವನ್ನು ಹೊರುವ ದೇಶದ ನಿಸ್ಸಹಾಯಕತೆಯು ಕಣ್ಣಮುಂದೆ ಬರುತ್ತದೆ. 'ಹೊವು ಹೊರುವವ-ಹಾವನ್ನು ಹೊತ್ತುಕೊಳ್ಳಲಿ' ಎಂಬಂತೆ ಬ್ರಿಟಿಷ್ ಸರಕಾರವು ನಾಗರಿಕಾಧಿಕಾರಿಯ ಬದಲಿಗೆ ಸೈನಿಕಾಧಿಕಾರಿಯನ್ನು ಭಾರತದ ಮೇಲೆ ಹೊರಿಸಿದೆ. ಇದಕ್ಕೆ ಮೊದಲನೇ ಕಾರಣ:- ಹಿಂದುಸ್ಥಾನದ ಜನಾಭಿಪ್ರಾಯವನ್ನು ಪೂರ್ತಿ ನಿರ್ನಾಮ ಮಾಡುವ ಬಯಕೆ. ಎರಡನೆಯ ಕಾರಣ ಭಾರತವನ್ನು ಏಶ್ಯಾ ಕಡೆಯ ಮುಖ್ಯ ಯುದ್ಧ ರಂಗವಾಗಿ ಮಾರ್ಪಡಿಸುವದು. ಮೂರನೆಯದಾಗಿ ಇಂದಿನ ಪರಿಸ್ಥಿತಿಯಲ್ಲಿ ಭಾರತದ ವೈಸರಾಯಿಯಾಗಿ ಹೋಗುವ ಪ್ರಥಮ ದರ್ಜೆಯ ನಾಗರಿಕನಾರೂ ಚರ್ಚಿಲ್ಲರಿಗೆ ದೊರೆಯದಿದ್ದುದು. ಒಟ್ಟಿನ ಮೇಲೆ 'ಭಾರತವು ಬ್ರಿಟನಿಗಾಗಿ' ಎಂಬ ನಾಣ್ಣುಡಿಯನ್ನು ಚರ್ಚಿಲ್ಲರು ತನ್ನೀ ಕೃತ್ಯದ ಮೂಲಕ ಸಾರ್ಥಕಗೊಳಿಸಿದ್ದಾರೆ.

ವೇವೆಲ್ ವ್ಯಕ್ತಿತ್ವ-

ಗಿಡ್ಡ, ತೆಳು, ಮತ್ತು ಕಂದು ಬಣ್ಣದ ಮೂರ್ತಿ ಸರ್. ವೇವೆಲರು ಫೀಲ್ಡ್ ಮಾರ್ಶಲ್ ಪೋಷಾಕಿನಲ್ಲಿಲ್ಲದಾಗ ಅವರನ್ನು ಕಂಡವರುಇವನೊಬ್ಬ 'ವೇಷಧಾರಿ ದೊರೆ'ಯೆಂದಾರು! ಎಂತಹ ಸಂದರ್ಭದಲ್ಲೂ ಗಲಿಬಿಲಿಗೊಳ್ಳದ ದೃಢಬುದ್ಧಿಯ ವೇವೆಲರು ೧೯೧೬ರಲ್ಲಿ ಒಂದು ಕಣ್ಣು ಕಳಕೊಂಡ ಒಕ್ಕಣ್ಣ ಮೂರ್ತಿ. ಅವರು ಗೊಂದಲಕ್ಕೊಳಗಾಗುವದೆಂದರೆ ತನ್ನ ನಿಜಕಣ್ಣಿನಿಂದ ಕನ್ನಡಕ ತೆಗೆದು ಶುದ್ಧ ಮಾಡಿ, ಅವಸರದಿಂದೆಲ್ಲಿಯಾದರೂ ಕೃತಕ ಕಣ್ಣಿಗಿಟ್ಟಾಗ ಮಾತ್ರ! ಕ್ರಿಪ್ಸ್ ಸಂಧಾನದ ವೇಳೆ ಸರ್. ಕ್ರಿಪ್ಸರ ಸೂಚನೆಯಂತೆ ಮೌಲಾನಾ ಆಜಾದ್ ಮತ್ತು ಪಂಡಿತ ನೆಹರುಗಳು ಸರ್. ವೇವೆಲರೊಡನೆ ದೀರ್ಘ ಸಂಭಾಷಣೆ ನಡೆಸಿದ್ದರು.-"ಆಶ್ಚರ್ಯವೆಂದರೆ ನಾವು ಸೈನ್ಯ ಕಾರ್ಯ ಸಂಬಂಧವಾಗಿ ಮಾತಾಡಲು ಹೋಗಿದ್ದರೂ ಸರ್. ವೇವೆಲರು ಉದ್ದೇಶ ಪೂರ್ವಕ ರಾಜಕೀಯ ವಿಷಯಗಳನ್ನು ಚರ್ಚಿಸಿ ಮುಗಿಸಿ ಬಿಟ್ಟರು. ನಾವು ರಾಜಕೀಯ ತಜ್ಞನೊಡನೆ ಸಂಭಾಷಿಸುತ್ತಿದ್ದೇವೆಂದು ಭಾಸವಾಯಿತು ಹೊರತು ಸೇನಾನಿಯೊಡನಿದ್ದಂತೆ ತೋರಲಿಲ್ಲ—" ಎಂದು ಈ ಕುರಿತು ಮೌ ಆಜಾದರಂದಿದ್ದರು. ಶಿಸ್ತು, ಆಜ್ಞಾ ಪಾಲನೆಯ ಹೊರತು, ವಿಮರ್ಶೆ ವಿಚಾರಗಳಿಗೆ ಬೆಲೆ ಕೊಡದ ಏಕದೃಷ್ಟಿ ವೇವೆಲರದು. "ರಾಜನೀತಿಜ್ಞನು ಬುದ್ಧಿಯನ್ನು ತೆರೆದಿಡಬೇಕು- ವಿಮರ್ಶೆಗಳನ್ನು ಅವಲೋಕಿಸುವವನಿರಬೇಕು. ಆದರೆ ಸೋಲ್ಜರನು ಯಾವ ಪ್ರಶ್ನೆಗೂ ಅಧೀನನಲ್ಲ. ಶಿಸ್ತಿನಿಂದ ನಿಶ್ಚಿತ ನಿಯಮಗಳನ್ನು ಕಣ್ಣು ಮುಚ್ಚಿ ಪಾಲಿಸಲು ಅವನು ಬದ್ಧನು"-ಎಂದು ತನ್ನ ಕೇಂಬ್ರಿಜ್ ಭಾಷಣದಲ್ಲಿ ನಾಗರಿಕರೂ ಸೈನಿಕರೂ ಮೂಲತಃ ಭಿನ್ನರೆಂದು ಸರ್. ವೇವೆಲರೇ ಸ್ಪಷ್ಟಪಡಿಸಿದ್ದರು. ಇಂತಹ ಸೋಲ್ಜರನೇ ಮುಂದಿನ ವೈಸರಾಯಿ! ಭಾರತದ ಳಂಮೇಲಿಯ ಮುಂದಿಯೂ ಸೈನಿಕರಾಗಿ ಮತಾಂತರಹೊಂದುವುದು ಸುಲಭ—ಸರ್. ವೇವೆಲರನ್ನು ನಾಗರಿಕನನ್ನಾಗಿ ಮಾರ್ಪಡಿಸುವದುಅಸಾಧ್ಯ! ಆದ್ದರಿಂದಲೇ ಹಿಂದುಸ್ಥಾನದಎಲ್ಲಾ ಧುರೀಣರೂ ಪತ್ರಿಕೆಗಳೂ ವೇವೆಲರ ನೇಮಕವನ್ನು ಕಠಿಣವಾಗಿ ಟೀಕಿಸುತ್ತಿವೆ.

ಸರ್. ಆಘ್‌ಲೆಕ್.

ಈ ಹೊಸ ಸೇನಾನಿ ಸರ್. ವೇವೆಲರ ಮೊದಲು ಹಿಂದುಸ್ಥಾನ ಹಾಗೂ ಮಧ್ಯಪೂರ್ವದ ಬ್ರಿಟಿಷ್ ಸೇನಾನಿಯಾಗಿದ್ದು ಜನಪ್ರೀತಿಯನ್ನು ಗಳಿಸಿದವರು. ಹಿಂದುಸ್ಥಾನದ ಸೇನೆಯ ಯಾಂತ್ರೀಕರಣಕ್ಕೆ ಬಹುತೇಕವಾಗಿ ಇವರೇ ಹೊಣೆಗಾರರು. 'ಆಘ್' ಹೆಸರಿನ ಮೇಲೆ ಸೈನಿಕರಿಗೆಲ್ಲಾ ವಿಶ್ವಾಸವಿದೆ. ಭಾರತೀಯರ ಮನಸ್ಸು ಕೆಡಿಸಿದವರಲ್ಲ. ಆದ್ದರಿಂದಲೇ ವೈಸರಾಯ ನೇಮಕಕ್ಕಾಗಿ ಜಿಗುಪ್ಸೆ ಸೂಚಿಸುತ್ತಿರುವ ಹಿಂದೀ ಮುಖಂಡರು ಕೂಡಾ ಸೇನಾನಿ ನೇಮಕವನ್ನು ಒಪ್ಪಿಕೊಳ್ಳುತ್ತಿದ್ದಾರೆ.

ಆದರೆ ಸರ್. ವೇವೆಲರ ನೇಮಕದೊಡನೆ ಒಕ್ಕಣ್ಣಿನವನ ರಾಜ್ಯ ಸ್ಥಾಪನೆಯಾಯಿತು—ಬದುಕಲಾಶಿಸುವವರು ರಾಜಕೀಯ ಕಣ್ಣೊಂದನ್ನು ಮುಚ್ಚಿಕೊಳ್ಳಬೇಕೇನೊ!

WANTED GRADUATES.

APPLY FOR TERMS

CANARA BANK LIMITED.

ESTD: 1906.

ಬಂಟರ ಯುವಕ ಸಂಘ, ಮುಂಬಯಿ.

ಮುಂಬಾಯಿ ನಗರದಲ್ಲಿ ವಾಸಿಸುವ ಬಂಟ ತರುಣರಲ್ಲಿ ನೈತಿಕ, ಮಾನಸಿಕ, ಸಾಮಾಜಿಕ ಹಾಗೂ ಶಾರೀರಿಕ ಶಕ್ತಿಯನ್ನು ಹೆಚ್ಚಿಸಿ, ಪರಸ್ಪರ ಪ್ರೇಮ ಸೌಹಾರ್ದವನ್ನು ಅಭಿವೃದ್ಧಿಗೊಳಿಸಿ, ಸಹಕಾರ ಸಹಾನುಭೂತಿಯಿಂದ ತಮ್ಮ ಜಾತಿಯ ಮತ್ತು ಕನ್ನಡಿಗರ ಮೇಲ್ಮೆಯನ್ನು ಸಾಧಿಸುವ ಉಚ್ಚ ಉದ್ದೇಶದಿಂದ "ಬಂಟರ ಯುವಕ ಸಂಘ"ವು ಕಳೆದ ೧೯೪೦ರಲ್ಲಿ ಸ್ಥಾಪಿತವಾಯಿತು ಈ ಧ್ಯೇಯವನ್ನು ಮುಂದಿಟ್ಟುಕೊಂಡು ಈ ಸಮಿತಿಯು ಕಳೆದ ಎರಡು ವರ್ಷಗಳಿಂದ ತನ್ನಿಂದ ಸಾಧ್ಯವಾದಷ್ಟು ಕಾರ್ಯಭಾರವನ್ನು ಹೊತ್ತುಕೊಂಡು ದುಡಿಯುತ್ತಾ ಬೆಳೆಯತೊಡಗಿ ಇದೀಗ ಮೂರನೆಯ ವರ್ಷಕ್ಕೆ ಕಾಲಿಟ್ಟಿರುವುದು. ಈ ವರ್ಷಾರಂಭದಿಂದ ಈ ಸಂಘವು ಒಂದು ವಾಚನಾಲಯ ಮತ್ತು ಪುಸ್ತಕ ಭಂಡಾರವನ್ನು ತೆರೆದು ನಡಿಸಿಕೊಂಡು ಬರುವುದು ಮಾತ್ರವಲ್ಲದೆ ಕನ್ನಡಿಗರಲ್ಲಿ ವಿದ್ಯಾ ಪ್ರಸಾರವಾಗುವಂತೆ ಮುಂಬಯಿಯ "ಕರ್ನಾಟಕ ಫ್ರೀ ನೈಟ್ ಹಾಯ್ ಸ್ಕೂಲಿ"ನ ಆಡಳಿತವನ್ನು ವಹಿಸಿಕೊಂಡು, ಇದೇ ತಾ. 9—6—43ರಿಂದ ನಡೆಸಿಕೊಂಡು ಬರುತ್ತಿರುವುದು ಈ ಮಹತ್ತಾದ ಹೊಣೆಗಾರಿಕೆಯನ್ನು ಸುಸೂತ್ರವಾಗಿ ಉತ್ತಮ ರೀತಿಯಿಂದ ನಡೆಸಿಕೊಂಡು ಬರಬೇಕಾದರೆ ತುಂಬಾ ಹಣ ಬೇಕು ಎಂಬುದು ನಿರ್ವಿವಾದ. ಆದುದರಿಂದ ಸ್ವಜಾತಿ ಬಾಂಧವರು ಮತ್ತು ಇನ್ನಿತರ ಮಹನೀಯರು ಉದಾರತೆಯಿಂದ ತಮ್ಮ ಕೈಲಾದ ಸಹಾಯವನ್ನಿತ್ತು ನಮ್ಮ ಯುವಕವರ್ಗದ ಕಾರ್ಯಭಾಗವನ್ನು ಯಶಸ್ವಿಗೊಳಿಸಲು ನೆರವಾಗಬೇಕಾಗಿ ವಿನಂತಿ.

Karnataka Free Night High School, Kumta Street, Fort Bombay, 9 6-43.	ಎಮ್. ಶ್ರೀಧರ ಶೆಟ್ಟಿ	(ಅಧ್ಯಕ್ಷ)
	ಪಿ. ನಾರಾಯಣ ಶೆಟ್ಟಿ	ಗೌ. ಜತೆ ಕಾರ್ಯದರ್ಶಿಗಳು
	ಎ. ಬಾಲಕೃಷ್ಣ ಶೆಟ್ಟಿ	

The Canara Banking Corporation Limited.

(Incorporated in British India—Liability of Members limited.)

ESTD: 1906.

Head Office: **UDIPI**, S. Kanara.

Paid Up Capital as on 31-5-'43 Rs. 6,50,060/-

Reserves „ „ Rs. 3,84,788/-

DEPOSITS exceed Rs. 50 lakhs.

For your Banking requirements come to us and we will assist you. We undertake all kinds of Banking business.

ನವಯುಗ

ಉಡುಪಿ, ಗುರುವಾರ, ೨೪-೬-೧೯೪೩

ಉದರಾಗ್ನಿಯೊಡನೆ ಆಟ ಸಲ್ಲದು!

ದಕ್ಷಿಣ ಕನ್ನಡದಲ್ಲೀಗ ಅಕ್ಕಿಯ ಧಾರಣೆಯು ದಿನಕ್ಕೆರಡು ಮೆಟ್ಟಲಿನಂತೆ ಏರುತ್ತಿದೆ. ಬಡವನ ಬಾಳುವೆಯನ್ನಸಾಧ್ಯಗೊಳಿಸಿದ ಪರಿಸ್ಥಿತಿ ನಿರ್ಮಾಣಗೊಂಡು ಮಾಸಗಳು ಸಂದುವು. ಇದರಿಂದ ಲಾಭ ಹೊಂದಿದ ವರ್ಗದವರಿಗೆ ಅಸಹನೀಯವಾಗುವ ಗೊಂದಲವೇಳುವ ಚಿಹ್ನೆಗಳೂ ಈಗೀಗ ಗೋಚರಿಸಹತ್ತಿವೆ. ಅಧಿಕಾರಿಗಳು ಹಾಗೂ ಅಕ್ಕೀ ವ್ಯಾಪಾರಿಗಳು ಕಣ್ತೆರೆವಾಗ ತಡವಾಯಿತು ಎನ್ನುವ ಕಾಲ ಬರುವದೊಂದೇ ಸದ್ಯಕ್ಕೆ ಬಾಕಿ. ಆದ್ದರಿಂದ ಪುನಃ ಆ ಕುರಿತು ಪ್ರಸ್ತಾಪಿಸಿ ಬಿಡದೆ ಎಚ್ಚರಿಕೆಯನ್ನೇ ಕೊಡುವ ಅಗತ್ಯಬಿದ್ದಿದೆ.

ಅಕ್ಕಿಯೇ ದೊರೆಯುವದಿಲ್ಲ; ದೊರೆವೆಡೆಯಿಂದ ಪಡೆಯುವೆವೆಂದರೆ ದಿನವಿಡೀ ದುಡಿದುದು ಒಪ್ಪೊತ್ತಿನೂಟಕ್ಕೆ ಸಾಕಾಗುವಂತಿಲ್ಲ! ಇಂತಹ ಪರಿಸ್ಥಿತಿಯಲ್ಲಿ 'ನಾವು ಬದುಕಬೇಕೋ ಬೇಡವೋ?' ಎಂದು ಸರಕಾರವನ್ನು ಪ್ರಶ್ನಿಸುವ ಅಧಿಕಾರ ಬಡವರಿಗಿದೆ. ಅದನ್ನುತ್ತರಿಸಲು ಅಧಿಕಾರಿಗಳು ಬಾಧ್ಯರಿದ್ದಾರೆ. ಆ ಹೊಣೆಗಾರಿಕೆ ತಮ್ಮ ಮೇಲಿದೆ ಎಂಬುದರಿಂದಲೇ ಜಿಲ್ಲಾಧಿಕಾರಿಗಳು ಅಕ್ಕಿಯ ಬೆಲೆ ನಿಯಂತ್ರಣವನ್ನು ಜ್ಯಾರಿಗೆ ತಂದಿದ್ದರು. ಆ ನಿಯಂತ್ರಣಕ್ಕೆ ತಾಗಿದ ದುರದೃಷ್ಟವನ್ನೇ ಜಿಲ್ಲೆಯಿಂದು ಅನುಭವಿಸುತ್ತಿದೆಯಾದ್ದರಿಂದ 'ಬೆಲೆ ನಿರ್ಬಂಧವಿನ್ನೂ ಇದೆ' ಎಂದು ದಯವಿಟ್ಟು ಯಾರೂ ಹೇಳಬಾರದು! ಅಂತೆಯೇ 'ಹೀಗಾಗಲು ಬಿಟ್ಟಿರೇಕೆ?' ಎಂದು ಇಡೀ ಜಿಲ್ಲೆಯು ಕಾತರಪೂರ್ವಕ ಕೇಳುತ್ತಿರುವ ಪ್ರಶ್ನೆಯನ್ನು ಉತ್ತರಿಸದಿರಲೂ ಬಾರದು. ನಿಯಂತ್ರಣದ ಹೆಸರಿನಿಂದ ಅಧಿಕಾರಿಗಳು ವರ್ಗದಾರರ ಹುಟ್ಟುವಳಿಯ ಜಾತಕವನ್ನೇ ತೆಗೆದಿದ್ದರು; ಒಕ್ಕಲು ಬೇಸಾಯದ ಕಪ್ಪವು ಅದರಲ್ಲೇ ಅಡಕವಾಗಿ ಸರಕಾರದ ಹಸ್ತಗತವಾಗಿದ್ದಿತು. ರೈತರ ಅಕ್ಕೀ ಮಾರಾಟದ ಕಾಲ ಬಂತೆನ್ನುವಾಗಲೇ ಸರಕಾರದ ಧಾರಣೆ ನಿಯಂತ್ರಣವೂ ಮುಂದೆ ಬಂದಿತ್ತು. ಸರಕಾರೀ ಶಾಸನದ ಮೇಲೆ ಅಧಿಕಾರಿಗಳಿಗಿರದ ವಿಶ್ವಾಸ ರೈತರಿಗಿದ್ದುದರಿಂದ ನಿಯಂತ್ರಣಕ್ಕೆ ಇಂದು ಒದಗಿರುವ ಭವಿಷ್ಯವನ್ನು ಅವರು ಅಂದು ನಿರೀಕ್ಷಿಸಿರಲಿಲ್ಲ. ನಿಯಂತ್ರಣಕ್ಕೆ ನಿರಂತರಾಯುಷ್ಯವೆಂಬ ನಂಬಿಕೆಯಿಂದ ರೈತರ ಅಕ್ಕಿಯು ಮಾರಾಟಗಾರರ ವಶಕ್ಕೆ ಬಂತೆನ್ನುವಾಗಲೇ ನಿಯಂತ್ರಣವು ಇದ್ದಕ್ಕಿದ್ದಂತೆ ಅಂತರ್ಧಾನ! ನಾವು ವರ್ಗದಾರರ ಸ್ವಹಿತವನ್ನಲಕ್ಷಿಸಿ ಅಕ್ಕಿಯ ಧಾರಣೆ ನಿಯಂತ್ರಣಕ್ಕೆ ಸುಸ್ವಾಗತವನ್ನಿತ್ತವರು. ಆದರೆ ನಮ್ಮ ಸ್ವಾಗತವು ಅಲ್ಪಾಯುಷ್ಯದ ಈ ನಿಯಂತ್ರಣಕ್ಕಲ್ಲ; ಆಹಾರಧಾನ್ಯವನ್ನು ಬೇಸಾಯಗಾರರ ಕೈಯಿಂದ ತಪ್ಪಿಸಿ, ವಿಕ್ರಯಗಾರರ ಕೈಗೆ ಕೊಟ್ಟು ತಲೆಮರೆಸಿಕೊಳ್ಳುವ ಈ ಪಕ್ಷಪಾತೀ ನಿಯಮಕ್ಕಲ್ಲ. ಬಡವರಿಗೆ ಯೋಗ್ಯದರದಲ್ಲಿ ಅಕ್ಕಿ ವಿತರಣೆಯಾಗಿ, ಉದರದಾವಾನಲವೇಳದಂತೆ ನೋಡುವ ಧ್ಯೇಯ ಈ ನಿಯಂತ್ರಣದಲ್ಲಿದೆ-ಮುಂದಿನ ಬೆಳೆಕಟಾವಿನ ವರೆಗಾದರೂ ಇದಕ್ಕಾಯುಷ್ಯವಿದೆ- ಎಂದು ಎಲ್ಲರಂತೆ ನಾವೂ ನಿರೀಕ್ಷಿಸಿದ್ದೆವು. ಅದಿಂದು ಸುಳ್ಳಾಗಿದೆ. ಮಧ್ಯೆ ಗುರಿ, ಅರ್ಧಾಯುಷ್ಯದ ಈ ನಿಯಂತ್ರಣದಿಂದಾಗಿ ವಿಕ್ರಯಗಾರರು ಲಾಭ ಹೊಂದುತ್ತಿರುವ ಪರಿಸ್ಥಿತಿಯೀಗ ನಿಂತಿದೆ.

ಇದರ ಪರಿಣಾಮವನ್ನೂಹಿಸುವದರಲ್ಲಿ ಯಾರೂ ತಪ್ಪಿ ಬೀಳದಿರಲಿ! ಅಕ್ಕಿಯ ಧಾರಣೆಯನ್ನೇರಿಸುತ್ತಿರುವವರು—ತಡೆಯುವ ಭಾಧಕೆ ಮತ್ತು ಸಾಧ್ಯತೆಯಿದ್ದೂ ಏರಲು ಬಿಡುವವರು-ಬಡವರ ಉದರಾಗ್ನಿಯೊಡನೆ ಆಟವಾಡುತ್ತಿದ್ದಾರೆ. ಈ ಕುರಿತು ನಾನಾ ಊಹೆ ಮೋಹೆಗಳು, ಅಭಿಪ್ರಾಯ ಅಂದಾಜುಗಳು ಹುಟ್ಟಿಕೊಂಡು ಇಂತಹ ಪ್ರಲಯದಾಟದ ಪ್ರತೀಕಾರಕ್ಕೆ ಪ್ರೇರಣೆ ಕೊಡುತ್ತಿವೆ ಎಂಬುದನ್ನು ಯಾರೂ ಅಲಕ್ಷಿಸಬಾರದೆಂಬ ಸ್ಪಷ್ಟ ಎಚ್ಚರಿಕೆಯನ್ನೀಯದಿದ್ದರೆ, ಪರಿಸ್ಥಿತಿಯ ವಿಷಮತೆಯನ್ನಲಕ್ಷಿಸಿದ ಅಪರಾಧವಾಗಬಹುದು. "ಇದಾವುದೆಂಬುದು ಇನ್ನೂ ಸ್ಪಷ್ಟವಾಗದ ಕಾರಣಕ್ಕಾಗಿ ಅಧಿಕಾರಿಗಳು ತಮ್ಮ ನಿಯಂತ್ರಣ ನಿಯಮವನ್ನು ತಾವೇ ಈ ರೀತಿ ಕಡೆಗಣಿಸಬೇಕಾಗಿ ಬಂದಿರುವಾಗ, ಹೊಟ್ಟೆಯುರಿ ಸಹಿಸಲಾರದ ದುಃಸ್ಥಿತಿಯಲ್ಲೂ ಜನಸಾಮಾನ್ಯರು ನಿಯಮ ನಿರ್ಬಂಧಗಳ ಮೇರೆ ಮೀರಲಾರರೆಂದು ನಂಬಲಾದೀತೆ? ಆದ್ದರಿಂದ ಈಗಲೇ ಅಕ್ಕಿಯ ಬೆಲೆ ತಗ್ಗಿಸಿ ... ಸಾರ್ವತ್ರಿಕ ರೋದನದೊಡನೆ ಮತ್ತೊಮ್ಮೆ ನಾವು ಸ್ವರಗೂಡಿಸುತ್ತೇವೆ ಸಹನೆಯು ಗಡಿ ಮುಟ್ಟಿರುವುದನ್ನು ನೋಡಿಕೊಳ್ಳಿರೆನ್ನುತ್ತೇವೆ.

ದುರ್ಬೀನು

ಕೈಕಾಲುಕಟ್ಟು ಹಾಕುವವನಿಗೆ ಕಾಲೊತ್ತುವ ಕೆಲಸ ಕೊಟ್ಟರಾದೀತೆ? ನಾಗರಿಕ ಆಡಳಿತೆಯಿಂದ ಜಿಗುಪ್ಸೆಗೊಂಡವರು ಸೈನಿಕಾಡಳಿತೆಗೊಪ್ಪುವರೆ?

oo oo oo

ಕಡಿಮೀಸೆಯಿಟ್ಟವರೆಲ್ಲಾ ಹಿಟ್ಲರರಲ್ಲ; ಕುಡಿನೋಟ ಬೀರುವವರೆಲ್ಲಾ ಮೋಹಿನಿಯರಲ್ಲ.

oo oo oo

ಗುಂಡುತಾಗಿದ ಜಿಂಕೆಯ ಬೆನ್ನನ್ನು ಊರ ನಾಯಿಯೂ ಹಿಡಿದೀತು; ರಶ್ಯಾಯುದ್ಧದಲ್ಲಿ ದಣಿದ ಹಿಟ್ಲರನನ್ನು ಬ್ರಿಟನರೂ ಬೆಂಬತ್ತಿಯಾರು.

oo oo oo

ಯಜಮಾನನಿಗಂಜುವವರು ಜವಾನನಿಗಾದರೂ ಬೈಯ್ಯಬೇಕು; ಹಿಟ್ಲರನಿಗಂಜುವವರು ಮುಸಲನಿಗಾದರೂ ಬೆದರಿಕೆ ಹಾಕಬೇಕು.

oo oo oo

ಕಾಡು ಹೊಕ್ಕವನು ಬೆಳೆದ ಮರಗಳಿಗಿಂತ ಹೆಚ್ಚಾಗಿ ಗಿಡ್ಡ ಪೊದರುಗಳಿಗಂಜಬೇಕು; ಯುದ್ಧಕ್ಕಿಳಿದವರು ಹಿಟ್ಲರರಿಗಿಂತ ಹೆಚ್ಚಾಗಿ ಕುಳ್ಳ ಜಪಾನರಿಗಂಜಬೇಕು.

oo oo oo

ನಡು ಬಿಸಿಲು ಬಡಿದು ಸರೋವರಕ್ಕಿಳಿದ ಕೋಣನಿಗೆ ಅದೇ ಅಮೃತವಾಗಿ ಕಂಡೀತು; ನಡು ಪ್ರಾಯದಲ್ಲಿ ಸಂಸಾರಕ್ಕಿಳಿದ ಜಾಣನಿಗೂ ಹಾಗಾದೀತು.

oo oo oo

ಕೆಸರು ತಾಗಿದ ಕರವಸ್ತ್ರ ಮುಖವೊರಸಲಿಕ್ಕಾಗದು; ವಸ್ತ್ರ ಕೊಳಕಾಗಿರುವವನು ಶಾಸ್ತ್ರ ಹೇಳಿದರಾಗದು.

oo oo oo

ಸತ್ತ ಹುಲಿಯ ತಲೆ ಮೆಟ್ಟಬಹುದು; ಸಜೀವೀ ಬೆಕ್ಕಿನ ಬಾಲ ಮೆಟ್ಟಲಿಕ್ಕೂ ಕೂಡದು. ಪರತಂತ್ರ ವಿಶಾಲ ಭಾರತಕ್ಕೇನೂ ಮಾಡಬಹುದು; ಸ್ವತಂತ್ರ ಪುಟ್ಟ ಆಯರ್ಲೆಂಡಿನ ಸುದ್ದಿಗೆ ಹೋಗಕೂಡದು.

oo oo oo

ಕಾರು ಹತ್ತಿಸಿಕೊಳ್ಳದವಳನ್ನು ತೊಡೆಗೇರಿಸಿಕೊಳ್ಳುವಂತಿದೆಯೆ? ಸಂಬಂಧವೇ ತ್ಯಾಜ್ಯವೆಂದು ತೋರುವವನೊಡನೆ ಸಾಮರಸ್ಯಸಾಧ್ಯವೆ?

oo oo oo

ಬೋಂಬು ಬೀಳುವ ಮೊದಲೇ ಎ. ಆರ್. ಪಿ. ರಚಿಸಿಕೊಳ್ಳಬೇಕು; ಬೊಬ್ಬೆ ಬೀಳುವ ಮೊದಲೇ ಕಷ್ಟ ನಿವಾರಣೆಯ ಏರ್ಪಾಡಾಗಬೇಕು.

oo oo oo

ಕಾವಲ ನಾಯಿಗೆ ತಿಂಡಿ ಕೊಟ್ಟು ಕಳ್ಳರೊಳನುಗ್ಗಬಹುದು; ಕಾವಲು ನಡೆಸುವವರಿಗೆ ಲಂಚ ಕೊಟ್ಟು ಕಳ್ಳ ವ್ಯಾಪಾರ ನಡೆಯಬಹುದು.

oo oo oo

ವಿಷಮ ಜ್ವರವೇರಿದವನು ಸಿಕ್ಕಾಬಟ್ಟೆ ಮಾತಾಡಿಯಾನು; ವಿಷಮ ಸ್ಥಿತಿಯೊದಗಿದವನು ಸಿಕ್ಕ ಸಿಕ್ಕವರನ್ನು ಮಾತಾಡಿಸಿಯಾನು.

ಬಲ್ಲಿರಾ?

\+ ಪ್ರಕೃತ ಹಿಂದುಸ್ಥಾನದ ಸೇನೆಯ ಸಂಖ್ಯೆ 1,500,000ಕ್ಕೆ ಮಿಕ್ಕಿದೆ.

\+ ಲಂಡನಿನ ಎಚ್. ಎಮ್. ಸ್ಟೇಶನರಿ ಆಫೀಸಿನವರು ಪ್ರಕಟಿಸಿದ ಪುಸ್ತಕಗಳಲ್ಲಿ ಅತಿ ಹೆಚ್ಚಿಗೆ ಮಾರಾಟವಾದ ಪುಸ್ತಕವೆಂದರೆ 'ಬ್ರಿಟನಿನ ಹೋರಾಟ', ಅದರ 4¼ ಮಿಲಿಯ ಪ್ರತಿಗಳು ಖರ್ಚಾಗಿವೆ. ಬೆವರಿಜ್ ವಾದಿಯು ಪ್ರಕಟವಾದ ದಿನದಲ್ಲೇ 70 ಸಾವಿರ ಪ್ರತಿಗಳು ಖರ್ಚಾದುವು.

\+ 'ಬ್ರಿಟಿಷ್ ಎಂಪಯರ್ ಮೆಡಲ್' ಬಹುಮಾನವನ್ನು ಪಡೆದವರಲ್ಲಿ ಪೂರ್ವ ಇಂಗ್ಲಾಂಡಿನ ಜೋನ್ ಗ್ರಿಸ್ ಎಂಬ 15 ವರುಷದ ಹುಡುಗನೇ ಅತ್ಯಂತ ಕಿರಿಯ.

\+ ಇಂಗ್ಲಾಂಡಿನಲ್ಲೀಗ ಬೇಸಾಯವಾಗುತ್ತಿರುವ ಭೂಮಿ 800000 ಎಕ್ರೆಗಳು. ಈ ವರುಷ 1000000 ಎಕ್ರೆಯಾಗುತ್ತದೆ.

\+ ಇಂಗ್ಲಾಂಡು ಮತ್ತು ವೇಲ್ಸಿನಲ್ಲಿ ಬೋಂಬಿನಿಂದ ಕುಸಿದು ಬಿದ್ದ ಮನೆಗಳ ಸಂಖ್ಯೆ 2,750,000ಕ್ಕೂ ಮಿಕ್ಕಿದೆ. ಐದರಲ್ಲೊಂದಕ್ಕೂ ಮಿಕ್ಕಿ ಮನೆಗಳು ಹಾಳಾದಂತಾಯಿತು. ಆ ಪೈಕಿ 2000,000ವನ್ನು ಪುನಃ ದುರಸ್ತಿ ಮಾಡಲಾಗಿದೆ.

ಇವರಿನ್ನೂ ಕಾಂಗ್ರೆಸ್ ಮೆಂಬರರೆ?

ಮಂಗಳೂರಿನ ಒಂದು ಪತ್ರಿಕೆಯು ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷರ ಚುನಾವಣೆಯ ವಾರ್ತೆ ಪ್ರಕಟಿಸುತ್ತಾ 'ಈ ಚುನಾವಣೆಯ ಚೋದ್ಯವೆಂದರೆ ಇಬ್ಬರು ಮೆಂಬರರೂ ಕಾಂಗ್ರೆಸ್ ಪರವಾಗಿ ಆರಿಸಿಬಂದ ಮೆಂಬರರೇ, ಇವರೊಳಗೆ ಚುನಾವಣೆಯು ಕಾದಾಟ್ಟ ಕಾಂಗ್ರೆಸ್ಸೇತರ ಮೆಂಬರರು ಮುಂದೆ ಬಾರದೆ ಕಾಂಗ್ರೆಸ್ ಮಂದಿಯೇ ಆರಿಸಿ ಬಂದುದೆಂದು ಸಮಾಧಾನ. ಇನ್ನು ಮುಂದೆ ನಡೆಯಲಿರುವ 'ಸೆನೆಟ್' ಚುನಾವಣೆಯಲ್ಲಾದರೂ ಕಾಂಗ್ರೆಸ್ ಸದಸ್ಯರೇ ಆರಿಸಿ ಬರುವಂತಾಗಲಿ' ಎಂದು ಸಮಾಧಾನ ಮತ್ತು ಬಯಕೆಯನ್ನು ಪ್ರದರ್ಶಿಸಿದೆ. ಆ ಪತ್ರಿಕೆಯು ಮಂದೀ ... ಗಳಲ್ಲಿ ಎರಡಭಿಪ್ರಾಯವನ್ನು ಪ್ರಕಟಿಸಿದುದು ಚೋದ್ಯವೇ ಸರಿ. ಇಬ್ಬರು ಕಾಂಗ್ರೆಸ್ ಮೆಂಬರರ ಕಾದಾಟಕ್ಕಾಗಿ ಚೋದ್ಯಗೊಳ್ಳುವ ಪತ್ರಿಕೆಗೆ ಹಾಗಾದುದರಲ್ಲಿ ಸಮಾಧಾನವಿದೆ ಮಾತ್ರವಲ್ಲ, ಮುಂದಕ್ಕೂ ಹಾಗಾಗಲೆಂಬ ಬಯಕೆಯೂ ಇದೆ. ಕಾಂಗ್ರೆಸ್ ಪರವಾಗಿ ಆರಿಸಿಬಂದ ಇಬ್ಬರು ಮೆಂಬರರು ಸ್ಪರ್ಧಿಸಿಕೊಂಡರೆಂದ ಮೇಲೆ ಈಗ ಜಿಲ್ಲಾ ಬೋರ್ಡಿನಲ್ಲಿ ಕಾಂಗ್ರೆಸ್ ಪಕ್ಷವಾಗಲೀ ಕಾಂಗ್ರೆಸ್ ಮೆಂಬರರಾಗಲೀ ಇಲ್ಲವೆಂಬುದು ಸ್ಪಷ್ಟವಾಗಿದೆ. ಕಾಂಗ್ರೆಸ್ ಸೂಚನೆಗಳಂತೆ, ತಮ್ಮ ಸ್ಥಾನಗಳಿಗೆ ರಾಜೀನಾಮೆ ಯಿತ್ತ ಸದಸ್ಯರೇ ಕಾಂಗ್ರೆಸ್ ಮೆಂಬರರೋ, ಅದನ್ನಲಕ್ಷಿಸಿ ಕೇವಲ ಸ್ಥಾನ ಬಿಡಲಾರದವರು ಕಾಂಗ್ರೆಸಿಗರೋ ಎಂಬುದು ಮೊದಲನೇ ಪ್ರಶ್ನೆ. ಈ ಪ್ರಶ್ನೆಯನ್ನುತ್ತರಿಸಲು ಇನ್ನು ಯಾವ ಸಂದೇಹವುಳಿದಿಲ್ಲ. ಯಾಕೆಂದರೆ ಕಾಂಗ್ರೆಸ್ ಟಿಕೇಟಿನಿಂದ ಆರಿಸಿ ಬಂದ ಇಬ್ಬರು ಮೆಂಬರರೇ ಒಂದು ಸ್ಥಾನಕ್ಕಾಗಿ ಹೋರಾಡಿಕೊಂಡು 'ತಾವು ಕಾಂಗ್ರೆಸಿಗರಲ್ಲ' ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಆದರೂ ಅಂಥವರನ್ನು ಇನ್ನೂ ಕಾಂಗ್ರೆಸಿಗರೆಂದು ಕರೆಯುವದೂ ಪ್ರೋತ್ಸಾಹಿಸುವದೂ ಅಪರಾಧವಲ್ಲವೆ? ಸಾರ್ವಜನಿಕರಿಗೆ ಸರಿಯಾದ ಮಾರ್ಗ ತೋರಿಸಬೇಕಾದ ಪತ್ರಿಕೆಗಳು, 'ಕಾಂಗ್ರೆಸ್'ನ್ನು ಅಸ್ತ ಬುದ್ಧಿ ಹಿಡಿದವರ ಬೆನ್ನಿಗೆ ಕಾಗಿಸಿ, ಅದರ ಹೆಸರೆತ್ತಿ ಕೆಡಿಸುವದು ಕೆಣೆಗಲಿ ಎಂದು ಹಾರೈಸಿ ಬಿಡುವದು ನ್ಯಾಯವೇ?-ಎಂಬರ್ಥದ ಬಾಕ್ಯ ... ರಾಜೀನಾಮೆಯಿತ್ತ ಜಿಲ್ಲಾ ಬೋರ್ಡ ಸದಸ್ಯರೊಬ್ಬರಿಂದ ಬಂದಿದೆ.

—— ಸುದ್ದಿ ಸೂಚನೆ ——

● ರಶ್ಯದಲ್ಲಿ ಓರೆಲ್ ಸುತ್ತು ವಲಯದ ಮತ್ತು ಇತರರಂಗಗಳ ಹೋರಾಟವನ್ನು ಬಿಟ್ಟರೆ ಮುಖ್ಯ ಗಣನೀಯ ಘಟನೆ ನಡೆದಿಲ್ಲ. ಇತ್ತಂಡದವರ ವಿಮಾನ ಧಾಳಿಗಳು ಬಲಗೊಂಡಿವೆ.

● ಎರಡು ವರುಷಗಳ ಯುದ್ಧದಲ್ಲಿ ರಷ್ಯವು ಚರಿತ್ರೆಯಲ್ಲೇ ಗೋಚರಿಸದ ಶೌರ್ಯ ಧೈರ್ಯ ಮತ್ತು ಶಕ್ತಿಯಂತಹ ನಿರ್ವಾಹ ಪ್ರದರ್ಶಿಸಿದೆ–ಎಂದು ರಶ್ಯ ಯುದ್ಧದ ದ್ವಿತೀಯ ವಾರ್ಷಿಕ ದಿನದಲ್ಲಿ ಅಮೇರಿಕದ ಕ. ನೋಕ್ಸರು ಶ್ಲಾಘಿಸಿದ್ದಾರೆ.

● ಆಕ್ರಮಣ ಭೀತಿಯಿಂದ ದಕ್ಷಿಣ ಇಟಲಿಯಲ್ಲಿ ಸೈನಿಕಾಡಳಿತೆಯಾರಂಭವಾಗಿದೆ. ಎಂಟು ಪ್ರಾಂತ್ಯಗಳಲ್ಲಿ ಮಾರ್ಶಲ್ ಲಾ ಜ್ಯಾರಿಗೆ ಬಂದಿದೆ

● ಜುಲಾಯ್ ೧ರಿಂದ, ೧೮ರಿಂದ ೩೬ರೊಳಗಿನ ಎಲ್ಲಾ ಗಂಡಸರೂ ೧೮ ರಿಂದ ೪೫ರ ವರೆಗಿನ ಎಲ್ಲಾ ಹೆಂಗಸರೂ ಯುದ್ಧ ಕಾರ್ಯಕ್ಕೆ ಸೇರತಕ್ಕದ್ದೆಂದು ಇಟಲಿಯಲ್ಲಿ ಆಜ್ಞೆಯಾಗಿದೆ.

● ನೇಪಲ್ಸ್ ಮತ್ತು ಸಿಸಿಲಿಯ ಮುಖ್ಯ ನಗರಗಳಿಂದ ಇಟಲಿಯಾನರು ನಾಗರಿಕರನ್ನು ಖಾಲಿಮಾಡಿಸಲಿದ್ದಾರೆ.

● ಯಾಂಗ್ಟ್ಸೆ ನದೀತಟ ಹಾಗೂ ಪಶ್ಚಿಮ ಯುನಾನ್ ಪ್ರಾಂತ್ಯಗಳ ಹೋರಾಟದಲ್ಲಿ ಚೀನೀಯರು ಜಪಾನರಿಗೆ ಗಣನೀಯ ಅಪಜಯವನ್ನೊಡ್ಡಿದ್ದಾರೆ.

● ಭಾವೀ ವೈಸರಾಯಿ ಸರ್. ವೇವೆಲರು ಇದೇ ತಾ ೨೧ರಲ್ಲಿ ಲಂಡನಿನ ಇಂಡಿಯಾ ಆಫೀಸಿನಲ್ಲಿ ಕೆಲಸಕ್ಕೆ ಹಾಜರಾಗಿದ್ದಾರೆ.

● ಗ್ರೀಸಿನ ಮೆಕೆಡೋನಿಯಾದಲ್ಲಿ ಇಟಲಿ ಮತ್ತು ಗ್ರೀಕರೊಳಗೆ ಹೋರಾಟವಾಗಿ ಇಟಲಿಯಾನರ ೫೦ ಅಧಿಕಾರಿಗಳು ಮತ್ತು ೮೦೦ ಸೋಲ್ಜರರು ಸೆರೆಬಿದ್ದರೆಂದು ವಾರ್ತೆ.

○ ಸಂಧಾನ ಯಾಚನೆಗಾಗಿ ಇಟಲಿಯ ರಾಜ ಪುತ್ರ ಹಂಬರ್ಟೋ ಮತ್ತು ಮಾರ್ಶಲ್ ಬೊಡೊಗ್ಲಿಯೋ ಸದ್ಯ ಅಲ್ಜೀರ್ಸಿಗೆ ಬಂದಿದ್ದಾರೆಂಬ ವಾರ್ತೆ ಸುಳ್ಳೆಂದು ಪ್ರಕಟವಾಗಿದೆ.

○ ರಶ್ಯ–ಜರ್ಮನಿಗಳೊಳಗೆ ರಾಜೀ ಸಂಧಾನ ನಡೆದು ಮುರಿದು ಹೋಯಿತೆಂಬ ಸ್ವೀಡಿಶ್ ಪೇಪರ್ ಪತ್ರಿಕಾ ವಾರ್ತೆಯನ್ನು 'ಗೋಬೆಲ್ಸನ ಧಾಳಿ' ಎಂದು ಲಂಡನಿನಲ್ಲಿ ಪರಿಹಾಸ್ಯ ಮಾಡಲಾಗಿದೆ.

○ ಡಾರ್ವಿನ್ ಒಂದರ ಮೇಲೆ ಜಪಾನರು ಅತಿ ಪ್ರಬಲ ವಿಮಾನ ಧಾಳಿ ನಡಿಸಿದರು. 22 ಜಪಾನೀ ವಿಮಾನಗಳು ಮುರಿದು ಬಿದ್ದುವು.

○ ಮುನ್ಶಿ, ಕುಂಜ್ರು, ಸಿ. ಎನ್. ಸಪ್ರು, ಮೊದಲಾದ ಹಿಂದೀ ಧುರೀಣರೂ, ರಾಷ್ಟ್ರೀಯ ಪತ್ರಿಕೆಗಳೂ ವೈಸರಾಯಗಿರಿಗೆ ಸರ್. ವೇವೆಲರ ನೇಮಕವಾದುದನ್ನು ಖಂಡಿಸಿದ್ದಾರೆ.

○ ಸರ್. ಆಫ್‌ಲೆಕರು ಇದೇ ತಾ. 19ರಲ್ಲಿ ಭಾರತದ ಸರ್ವ ಸೇನಾನಿ ಹುದ್ದೆ ವಹಿಸಿಕೊಂಡಿದ್ದಾರೆ. ಅಂದಿನಿಂದ ಅವರು ವೈಸರಾಯಿ ಎಗ್ಜಿಕ್ಯೂಟಿವ್ ಕೌನ್ಸಿಲ್ ಸದಸ್ಯರೂ ಆಗುತ್ತಾರೆ.

○ ಅಮೇರಿಕದ ಕಲ್ಲಿದ್ದಲ ಗಣಿಯ 5,00000 ಕೆಲಸಗಾರರು ಇದೇ ತಾ. 20 ರಿಂದ ಪುನಃ ಮುಷ್ಕರವಾರಂಭಿಸಿದ್ದಾರೆ.

○ ಯುದ್ಧಾರಂಭದಿಂದ ಈ ತನಕ ಅಮೇರಿಕಕ್ಕಾದ ಜುಮ್ಲಾ ಸೈನಿಕ ನಷ್ಟ 89508 ಎಂದು ವಾಷಿಂಗ್ಟನಿನ ಪ್ರಕಟಣೆ.

○ ಜಪಾನರಿಗೆ ಎಲ್ಲೆಲ್ಲಿಯೂ ರಕ್ಷಣಾ ಯುದ್ಧ ಕೊಡಬೇಕಾಗಿದೆಯೆಂದೂ, ಅವರ ಪ್ರಥಮ ವಿಜಯಗಳಿಂದೇನೂ ಲಾಭವಿಲ್ಲೆಂದೂ ರಶ್ಯದ ಚರಿತ್ರ ಲೇಖಕ ಎಂ. ಇ. ಯುಕೋವರ ಅಭಿಪ್ರಾಯ.

○ 'ಕಾಂಗ್ರೆಸಿನೊಡನೆ ಸಂಧಾನ ಪ್ರಯತ್ನ ಕೈಗೊಳ್ಳಿರಿ' ಎಂದು ಹೊಸ ವೈಸರಾಯರಿಗೆ 'ಟೆಲಿಗ್ರಾಫ್' ಮೊದಲಾದ ವಿಲೇಕೀ ಇಂಗ್ಲಿಷ್ ಪತ್ರಿಕೆಗಳು ಸೂಚನೆ ಕೊಟ್ಟಿವೆ.

○ ಹತ್ತಿಯ ವಸ್ತ್ರ ಮತ್ತು ನೂಲಿನ ತಯಾರಿ, ಮಾರಾಟ, ಮತ್ತು ಧಾರಣೆಯ ನಿಯಂತ್ರಣವನ್ನು ಹಿಂದೀ ಸರಕಾರವು ಜ್ಯಾರಿಗೆ ತಂದಿದೆ.

○ ಜರ್ಮನಿಯ ಪರಾಭವದ ನಂತರ ಜಪಾನು ಬೇಗನೇ ಪತನ ಹೊಂದುವದೆಂದು ಆಸ್ಟ್ರೇಲಿಯದ ಮಂತ್ರಿ ಡಾ| ಎ. ವ್ಹಟ್ಟರ ಭವಿಷ್ಯ. ಈಗ ಆಸ್ಟ್ರೇಲಿಯಾಕ್ರಮಣದ ಭೀತಿಯಿಲ್ಲವೆಂದು ಅವರಂದಿದ್ದಾರೆ.

○ ಬ್ರಿಟಿಷ್ ಚಕ್ರವರ್ತಿಗಳು ಉತ್ತರಾಫ್ರಿಕೆ ಜಿಬ್ರಾಲ್ಟರ್, ಮೊದಲಾದುವುಗಳನ್ನು ಸಂದರ್ಶಿಸಿ ಅಭೂತಪೂರ್ವ ಸ್ವಾಗತ ಪಡೆದಿದ್ದಾರೆ.

● ಜರ್ಮನಿಯ ಯುದ್ಧೋಪಕರಣ ತಯಾರಿಕೆಯ ಬೊಂಬುಧಾಳಿಯಿಂದಾಗಿ ಶೇಕಡ ೧೦ರಷ್ಟು ಹಾಳಾಗಿದೆಯೆಂದು ಮಿತ್ರರ ಊಹೆ.

○ ಟರ್ಕಿ-ಸಿರಿಯಾದ ಗಡಿಯನ್ನು ಸೈನಿಕೋದ್ದೇಶಕ್ಕಾಗಿ ಬ್ರಿಟಿಷರು ಕೆಲ ದಿನ ಸಂಪೂರ್ಣ ಮುಚ್ಚಿ ಈಗ ಪುನಃ ತೆರೆದಿದ್ದಾರೆ.

○ ಲಂಡನಿನಲ್ಲಿ ಜರಗಿದ ಲೇಬರ್ ಪಕ್ಷೀಯ ಪರಿಷತ್ತಿನಲ್ಲಿ, ವಸಾಹತು ಮತ್ತು ಭಾರತ ಪ್ರಶ್ನೆ ಹಾಗೂ ಮಿಶ್ರ ಆಡಳಿತೆಯ ಕುರಿತು ಸರಕಾರೀ ಧೋರಣೆಗನುಗುಣವಾದ ನಿರ್ಧಾರಗಳು ಆಗಿವೆ.

ಇದು ಸುಳ್ಳಲ್ಲ!

ಸ್ವೀಡನಿನ ವಾರ್ತಾ ಪತ್ರಿಕೆ 'ಅಲ್ಲೆಹಾಂಡಾ' ಒಂದು ಗಮನಾರ್ಹ ವಾರ್ತೆ ಪ್ರಕಟಿಸಿ ಲೋಕವನ್ನೇ ಯೋಚನೆಗೀಡು ಮಾಡಿದೆ. ಈ ವಾರ್ತೆಗಾಗಿ ಅದೊಂದು ವಿಶೇಷ ಸಂಚಿಕೆಯನ್ನೇ ಹೊರಡಿಸಿದ್ದಿತು. 'ರಶ್ಯಾ—ಜರ್ಮನಿಗಳೊಳಗೆ ಸಂಧಾನದ ಮಾತುಕತೆ ನಡೆಯಿತು. ಇದು ನಡೆದುದು ಸ್ಟೋಕ್ ಹೋಮಿನ ಒಂದು ಹೊಟೆಲಿನಲ್ಲಿ, ರಶ್ಯಾದ ಕಡೆಯಿಂದ, ಸ್ವೀಡನಿನಲ್ಲಿ ಸೋವಿಯೆಟ್ ರಾಯಭಾರಿಯಾಗಿರುವ ಮೇಡಮ್ ಅಲೆಕ್ಸಾಂಡ್ರಾ ಕೊಲೊಂಟಿಯವರೂ, ಜರ್ಮನಿಯ ಕಡೆಯಿಂದ ನಾಜೀ ಪ್ರಮುಖಾಧಿಕಾರಿಗಳೂ ಹಾಜರಿದ್ದು ಚರ್ಚಿಸಿಕೊಂಡರು. ಆದರೆ ಕೊನೆಗೆ ಈ ಮಾತುಕತೆ ಮುರಿದು ಹೋಯಿತು'—ಎಂಬುದೇ ಆ ವಾರ್ತೆ. ಬಾಲ್ಟಿಕ್ ರಾಜ್ಯಗಳನ್ನೂ ಇಡೀ ಪೋಲೆಂಡನ್ನೂ ಜರ್ಮನರಿಗೆ ಬಿಟ್ಟು ಕೊಡಲು ರಶ್ಯನರೊಪ್ಪಿದರಂತೆ. ಆದರೆ ಜರ್ಮನರು ಉಕ್ರೈನನ್ನೂ ಯಾಚಿಸಿದ್ದರಿಂದ ಸಂಧಾನ ಪ್ರಯತ್ನವಲ್ಲಿಗೇ ನಿಂತಿತಂತೆ. 'ಜರ್ಮನರಿಗೆ ಆಹಾರ ಮತ್ತು ಕಚ್ಚಾಮಾಲುಗಳ ಅಭಾವವಿದೆ ಯೆಂಬುದಕ್ಕೆ ಈ ಬೇಡಿಕೆಯೇ ದೃಷ್ಟಾಂತ—ಎಂದು ರಶ್ಯಾನರು ನಾಜೀ ಸೂಚನೆಗೆ ಅರ್ಥಕಟ್ಟಿದನರಂತೆ. ಇಷ್ಟೆಲ್ಲಾ ಸುದ್ದಿಯನ್ನು ಪ್ರಕಟಿಸಿ, ಅಲ್ಲೆಹಾಂಡಾ' ಹೇಳಿತು. "ಇನ್ನು ಕೆಲವೇ ಘಂಟೆಗಳೊಳಗೆ ಈ ವಾರ್ತೆಯನ್ನು ಇತ್ತಂಡದವರೂ ಅಲ್ಲಗಳೆಯುವರೆಂಬುದೇನೋ ಖಂಡಿತ!"

ಹಾಗೆಯೇ ಆಯಿತು. 'ಇದೊಂದು ಹೇಯ ಹಾಗೂ ವಿಲಕ್ಷಣ ಜರ್ಮನ್ ಪಟಾಲಸೃತಿ' ಎಂದು ಮೇಡಮ್ ಕೊಲೆಂಟೋ ಹೇಳಿದ್ದಾರೆ ಶುದ್ಧ ಸುಳ್ಳುವಾರ್ತೆ ಎಂದು ನಾಜಿಗಳೂ ಛೀಮಾರಿ ಹಾಕಿದ್ದಾರೆ.

ಆದರೆ ಲಂಡನಿನವರಿಗೆ ಇದಕ್ಕೆ ಅಸ್ತಿವಾರವೇ ಇಲ್ಲವೆನ್ನುವ ಧೈರ್ಯವಿಲ್ಲ. ಇದು ಗೋಬೆಲ್ಸನ ಹೊಸಧಾಳಿ. ಆದರೆ ಗೋಬೆಲ್ಸ್ ಪ್ರಚಾರದಲ್ಲಿ ಅಲ್ಪ ಪರಿಮಾಣದ ಸತ್ಯವೊಂದು ಮೂಲೆಯಲ್ಲಿ ಅಡಗಿರುವ ಸಂಪ್ರದಾಯ. ಆದ್ದರಿಂದ ಇಂದಿನ ಯುದ್ಧಗತಿಯಿಂದ ಕಂಗೆಟ್ಟ ಜರ್ಮನರು ಗುಪ್ತನಿಂದ ಮಧ್ಯಸ್ಥಗಾರರ ಮೂಲಕ ರಶ್ಯಾನರಿಗೆ ಶಾಂತಿ ಸೂಚನೆಯನ್ನು ಕೊಟ್ಟಿರಬಹುದು. ಆದರೆ ಈಗ ಯುದ್ಧವು ಮಿತ್ರರಿಗೆ ಸಂಪೂರ್ಣ ಅನುಕೂಲವಾಗಿರುವಾಗ ರಶ್ಯಾನರು ಬಾಲ್ಟಿಕ್ ಪೂರ್ವ ಪೋಲೆಂಡನ್ನು ಬಿಟ್ಟು ಕೊಡಲೊಪ್ಪಿದ್ದರೆಂದು ಸುಳ್ಳು. ನೀವು ಯುದ್ಧವನ್ನು ನಿಲ್ಲಿಸಿದರೆ ಬಾಲ್ಟಿಕ್ ಮತ್ತು ಪೂರ್ವ ಪೋಲೆಂಡನ್ನು ನಿಮಗೇನೋ ಕೊಟ್ಟು ಬಿಡುವೆವೆಂಬುದು ಜರ್ಮನರೇ ಹೇಳಿರಬೇಕು. ರಶ್ಯಾನರು 'ಇದಕ್ಕೊಪ್ಪದೆ ಸಂಭಾಷಣೆ ಮುಗಿದಿರಬೇಕು. ಮಿತ್ರ ರಾಷ್ಟ್ರೀಯರೊಳಗೆ ಪರಸ್ಪರ ಸಂದೇಹವನ್ನು ನಿರ್ಮಿಸುವದಕ್ಕಾಗಿಯೇ ಗೋಬೆಲ್ಸನು ಹೀಗೆಲ್ಲಾ ಬಣ್ಣ ಬಳಿದು ಸಾರಬೇಕು. ಅಲ್ಲೆಹಾಂಡಾ'ವು ನಾಜೀ ಪಕ್ಷಪಾತಿ ಪತ್ರಿಕೆ–ಎಂದು ಲಂಡನಿನವರು ಅಂದಾಜು ಕಟ್ಟಿದ್ದಾರೆ.

ತಾ. **24—6—43**ರಿಂದ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಅಮರ ಪಿಕ್ಚರ್ಸ್‌ನವರ

ಖಿಲೋನಾ.

ಸ್ನೇಹಪ್ರಭಾ, ಜಯರಾಜ್, ಸುರೇಶ್, ಕನ್ಹಯ್ಯಾಲಾ ಮೊದಲಾದವರು

ಅನಂತರ:—

ಶಾಜಾದಿ, ಮುನ್ಸಿಪಾಲಿಟಿ, ಲಕ್ಷ್ಮಿ, ಕಿಲೌನಾ, ಇತ್ಯಾದಿ,

ಪ್ರೇಮ ವಿದ್ಯಾಪೀಠ-ತುಂಗಭದ್ರ

ದಿವಂಗತ ಪಂಡಿತ ತಾರಾನಾಥರಿಂದ ಸ್ಥಾಪಿಸಲ್ಪಟ್ಟ ಸುಪ್ರಸಿದ್ಧ "ಪ್ರೇಮವಿದ್ಯಾಪೀಠ"ದ ವಿದ್ಯಾಲಯವು ಎಂದಿನಂತೆ ಜುಲೈ 15ನೇ ತಾರೀಕಿನಿಂದ ಪ್ರಾರಂಭವಾಗುವುದು ವಿದ್ಯಾಪೀಠದಲ್ಲಿನ ಶಿಕ್ಷಣ ಕಾರ್ಯ ಪಂಡಿತರ ಮುಖ್ಯ ಶಿಷ್ಯರಾದ ವೈದ್ಯಗುರು, ಡಾ| ವೆಂಕಟೇಶ್; ವೈದ್ಯಗುರು, ಡಾ| ಸ್ವಾಮಿರಾಯಾಚಾರ್ಯ; ವೈದ್ಯಗುರು, ಡಾ| ಜಿ. ಕೃಷ್ಣಮೂರ್ತಿ B. A. M. P. M. S. (ಆಯುರ್ವೇದ ಮಹೋಪಾಧ್ಯಾಯ) ವೈದ್ಯಗುರು, ಡಾ| R. K. ವಾಲ್ವೇಕರ್ B. Sc. F. P. M. S. ಮತ್ತು ವೈದ್ಯಗುರು, ಡಾ| ಸುಮತೀಬಾಯಿ ತಾರಾನಾಥ B. A. B. T. F. P. M. S. ಮಹೋಪಾಧ್ಯಾಯ ಮೊದಲಾದವರು ಕೈಗೊಂಡು ಪಂಡಿತಜೀ ಯವರ ಧ್ಯೇಯವನ್ನು ಮುಂದುವರಿಲಿಸದ್ದಾರೆ.

ವಿದ್ಯಾಪೀಠದ ತರಗತಿಗಳಲ್ಲಿ ಸೇರಲಿಚ್ಛಿಸುವವರು ಜುಲೈ 15ನೇ ತಾರೀಖಿನೊಳಗೆ ಪ್ರವೇಶ ಪತ್ರಿಕೆಯೊಡನೆ ಮೂರು ರೂಪಾಯಿಗಳನ್ನು ಕಳುಹಿಸಿ ತಮ್ಮ ಹೆಸರನ್ನು ರಿಜಿಸ್ಟರು ಮಾಡಿಸಬೇಕು. ಹಾಸ್ಟೆಲ್, ಪಾಠಕ್ರಮ ಇತ್ಯಾದಿ ಹೆಚ್ಚಿನ ವಿವರಗಳಿಗೆ ಮೂರು ಆಣೆ ಸ್ಟಾಂಪುಕಳುಹಿಸಿ ಪ್ರಾಸ್ಪೆಕ್ಟಸ್ ತರಿಸಿಕೊಳ್ಳಬಹುದು.

Vaidyaguru Dr. Venkatesh
Offg. Principal

Degrees. Books. Medicines
Free H. L. M. S. M. B. H. M. D. etc.
Free HomoeoAyur UaaniNature Degree
by post also—Practitioner also get your
Homeo Materiamedica, Rs 5 Homeo
Practice book Rs 4 Insanity Cure Pills
Rs. 10 Enclose 2 annas stamp.—
Principal Indian Homeopathi
Institute & Society (Govt. Regd)
P. O. Datha (Kathiawar Dt. India.)

Sidha-Kalpa Kavach (Regd)
No. 3 Rs 2. No. 2 Rs " No. 1 Rs. 7.
Special Rs. 10, Extra Special Rs 17 for
ove marriage health, wealth. Ask any
six questions with M. O Re. 1/4 and
get correct answers by returnpost Life
-reading Rs. 2 No V.P.P. Send M.O, Free.
pamplets
Prof Dr. N. H Chhatbar.
P. O. Mahava. (Kathiawar India.)

CHAMPAE'S
SNOW & CASTREX
AGENTS
SADANANDA STORES UDIPI

ದಕ್ಷಿಣ ಕನ್ನಡ.

ಮಂಗಳೂರು.

ಸ್ಥಳೀಯ ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರ ಚುನಾವಣೆಯು ತಾ. 3-7-43ನೇ ಶನಿವಾರ ಘ. 10-30ಕ್ಕೆ ಜರಗಿಸಲ್ಪಡುವದು.

ಧಾರ್ಮಿಕ ವಿದ್ಯಾಭ್ಯಾಸ—ಈ ಕುರಿತು, ಶ್ರೀ, ಬಿ. ಸಂಜೀವ ರಾಯರು ಸ್ಥಳೀಯ ಬಿಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಪ್ರತಿ ಆದಿತ್ಯವಾರ ಸಂಜೆಗೆ ಭಾಷಣಮಾಡುತ್ತಾರೆ.

ಸಾಹಿತ್ಯ ಸಂಘ— ಬಿಸೆಂಟ್ ಬಾಲಿಕಾ ಪಾಠಶಾಲೆಯ ಕಿರಿಯ ಸಾಹಿತ್ಯ ಸಂಘದ ಉದ್ಘಾಟನೆಯನ್ನು ಶ್ರೀಮತಿ ಕೆ. ಕಲ್ಯಾಣಿ ಶೆಟ್ಟಿಯವರು ನೆರವೇರಿಸಿದರು. ಕುಮಾರಿ ದೇವಯಾನಿ ಕೃತಜ್ಞತೆ ಹೇಳಿದರು.

ಚಲಚಿತ್ರ ವಿಮರ್ಶಕ ಸಂಘ—ಈ ಹೆಸರಿನ ಸಂಸ್ಥೆಯೊಂದು, ಮಂಗಳೂರಲ್ಲಿ ಸ್ಥಾಪಿತವಾಗುವುದಾಗಿ ನಿಶ್ಚಯವಾಗಿದೆ; ಪತ್ರಿಕೋದ್ಯೋಗಿಗಳೂ ಚಲಚಿತ್ರ ಪ್ರೇಮಿಗಳೂ ಸೇರಿ ಈ ಸಂಘ ಸ್ಥಾಪಿಸುತ್ತಾರೆ ಈ ಸಂಘದ ಸದಸ್ಯರು ಪ್ರತಿ ಆದಿತ್ಯವಾರ ಸೇರಿ ಚಲಚ್ಚಿತ್ರಕ್ಕೆ ಸಂಬಂಧಿಸಿದ ವಿಚಾರ ವಿನಿಮಯ ಮಾಡುವರು. ಈ ಸಂಘದ ಉದ್ಘಾಟನಾ ಸಮಾರಂಭವು ಬೇಗನೇ ಜರಗಲಿದೆ.

ನೇಮಕ—ಈಗ ಚಿತ್ತೂರಿನ ಎಡ್ಯುಕೇಶನಲ್ ಆಫೀಸರಾಗಿರುವ ಮಿ. ಕೆ. ಐ. ವರ್ಗೀಸರು ಗವರ್ನ್ಮೆಂಟ್ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಕ ಹೊಂದಿರುವರು.

ಜಿಲ್ಲಾ ಪತ್ರಿಕೋದ್ಯೋಗಿಗಳ ಸಭೆ—ಮೊಂದು ತಾ. ೧೬ರಲ್ಲಿ ಸಂಜೆ ಡಿ. ಸಿ. ಎಂ. ಕಟ್ಟಡದಲ್ಲಿ ಜರಗಿ ಡಾ| ವಿಟ್ಠಲ ಶೆಟ್ಟರ ನಿಧನದ ಕುರಿತು ಸಂತಾಪ ಸೂಚಕ ನಿರ್ಣಯ ಕೈಕೊಂಡಿತು. ಹೊಸ ವರ್ಷದ ಕಾರ್ಯಕಾರಿ ಸಮಿತಿಯ ಚುನಾವಣೆಯೂ ನಡೆದಿದೆ.

ಅಕ್ಕಿಯ ಪರಿಸ್ಥಿತಿ—ಯು ವಿಷಮತೆ ಶಿಖರಕ್ಕೇರಿದೆ ಎನ್ನಬಹುದು. ಕಂಟ್ರೋಲ್ ದರದಲ್ಲಿ ಅಕ್ಕಿ ದೊರೆಯಬೇಕೆಂದು ಎಲ್ಲರೂ ಕೇಳುತ್ತಿದ್ದರೂ ಅಕ್ಕಿ ಮಾತ್ರ ಸೇರಿಗೆ ಆರಾಣೆಯ ಕಮ್ಮಿ ದೊರೆಯುವುದಿಲ್ಲ. ಇಂದಿನ ಪರಿಸ್ಥಿತಿ ನೋಡಿದರೆ ಅಕ್ಕಿಯ ಕ್ರಯ ಇನ್ನೂ ಏರಬಹುದೆಂದು ತೋರುತ್ತದೆ.

ಉಡುಪಿ

ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಿಗೆ ಮಾನಪತ್ರ:—ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಾದ ಶ್ರೀ. ಎ. ಲಕ್ಷ್ಮೀ ನಾರಾಯಣ ರಾಯರಿಗೆ ತಾ. 20ನೆ ಆದಿತ್ಯವಾರ ... ಶ್ರೀ ಕೃಷ್ಣ ಮಠದ ಭೋಜನ ಶಾಲಾ ಮಹಡಿಯಲ್ಲಿ ಉಡುಪಿಯ ಎಂಟು ಮಠಾಧಿಪತಿಗಳ ಕಡೆಯಿಂದ ಮಾನಪತ್ರವೊಂದು ಅರ್ಪಿಸಲಾಯಿತು. ಈ ಸಂತೋಷ ಕೂಟಕ್ಕೆ ಊರ ಮಹನೀಯರನೇಕರು ಆಮಂತ್ರಿತರಾಗಿದ್ದರು. ಜಿಲ್ಲಾ ಕಲೆಕ್ಟರ್ ಮಿ| ಎಂ. ಕರಿಮತುಲ್ಲರೂ ಆಗಮಿಸಿದ್ದರು. ಶ್ರೀ| ಕೊರಡ್ಕಲ್ ಶ್ರೀನಿವಾಸರಾಯರೂ ಪಂಡಿತ ವೆಂಕಟ್ರಮಣಾಚಾರ್ಯರೂ ಸಂದರ್ಭೋಚಿತ ಮಾತುಗಳನ್ನಾಡಿದರು. ಪರ್ಯಾಯ ಪೀಠಾರೂಢ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀ ಪಾದಂಗಳವರು ಆಮಂತ್ರಿತರೆಲ್ಲರಿಗೂ ಟೀಪಾರ್ಟಿಯನ್ನಿತ್ತು ಗಂಧ ಪುಷ್ಪಾದ್ಯುಪಚಾರಗಳಿಂದ ಮನ್ನಿಸಿದರು.

ಶೀರೂರು ಮಠದಲ್ಲಿ ಸತ್ಕಾರ—ಶ್ರೀ ಶೀರೂರು ಮಠದ ಶ್ರೀ. ಲಕ್ಷ್ಮೀಂದ್ರ ತೀರ್ಥ ಶ್ರೀ ಪಾದಂಗಳವರು ತಾ. 20ರಲ್ಲಿ ಬೆಳಗ್ಗೆ ಶ್ರೀ| ಎ. ಲಕ್ಷ್ಮೀ ನಾರಾಯಣ ರಾಯರನ್ನು ತಮ್ಮ ಮಠಕ್ಕೆ ಆಹ್ವಾನಿಸಿ ಊರ ಸದ್ಗೃಹಸ್ಥರನೇಕರ ಸಮಕ್ಷಮ ಟೀಪಾರ್ಟಿಯನ್ನಿತ್ತು ಶ್ರೀ ರಾಯರನ್ನು ಗೌರವಿಸಿದರು. ಬೋರ್ಡ್ ಪ್ರೆಸಿಡೆಂಟರಿಗೆ ಅಂದು ರಾತ್ರಿ ಬೋರ್ಡ್ ಹೈಸ್ಕೂಲಿನಲ್ಲಿ ಅಲ್ಲಿಯ ಉಪಾಧ್ಯಾಯರು ಡಿನ್ನರ್‌ಪಾರ್ಟಿಯನ್ನಿತ್ತರು.

'ಸೈಕಲ್ ಸರ್ವಿಸ್'— ಉಡುಪಿಯ ಕೆಲವು ವ್ಯಾಪಾರಿಗಳು ಸೇರಿ, ಉಡುಪಿ ಕುಂದಾಪುರ ವರೆಗೆ 'ಸೈಕಲ ಸರ್ವಿಸ್' ಪ್ರಾರಂಭಿಸಿರುವರೆಂದು ತಿಳಿದುಬರುತ್ತದೆ

ಮೂಲ್ಕಿ—"ಶ್ರೀ ಜೀವನ ಸಂಗೀತ ಮಿತ್ರ ಮಂಡಳ" ಇವರು ಸದ್ಯದಲ್ಲೇ ತಮ್ಮ "ರಾಜಾ-ಹರಿಶ್ಚಂದ್ರ" ಎಂಬ ನಾಟಕವನ್ನು ಅಭಿನಯಿಸಲಿರುವರು. ಸಕಲರೂ ಪ್ರೋತ್ಸಾಹಿಸಬೇಕಾಗಿ ಸಂಘದ ವ್ಯವಸ್ಥಾಪಕರ ವಿನಂತಿ.

ಕುಕ್ಕುಂದೂರು—ತಾ. 17-6-43ರಲ್ಲಿ ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲೆಯ ನೂಲುವ ಮತ್ತು ನೇಯುವ ಶಾಖೆಯ ಉದ್ಘಾಟನದ ಶಂಕು ಸ್ಥಾಪನೆಯನ್ನು ಕಾರ್ಕಳ ರೇಂಜಿನ ಡೆಪ್ಯುಟಿ ಇನ್ಸ್‌ಪೆಕ್ಟರವರಾದ ಮಾನ್ಯ ಉಗ್ರಾಣ ಕೃಷ್ಣ ರಾವ್ ಬಿ. ಎ. ಯಲ್. ಟಿ. ಯವರು ನೆರವೇರಿಸಿದರು.

ಹೆಬ್ರಿ—ಸ್ಥಳೀಯ ಬೋ- ಹಾ- ಎ- ಶಾಲೆಯ ಹಳೇ ವಿದ್ಯಾರ್ಥಿ ಸಂಘವು ನವೀನವಾಗಿ ಸ್ಥಾಪಿಸಲ್ಪಟ್ಟು, ಶಾಲಾಭಿವೃದ್ಧಿಯ ಬಗ್ಗೆ ವಿವಿಧ ವಿನೋದಾವಳಿಗಳ ಕಾರ್ಯಕ್ರಮವನ್ನಿಟ್ಟುಕೊಂಡಿರುವುದಲ್ಲದೆ, ಕಳೆದ ತಾ- 15-6-43ರಲ್ಲಿ "ಸದಾಚಾರಿಣಿ ಸುಧಾ" ಎಂಬ ನಾಟಕವನ್ನು ಮನೋರಂಜಕವಾಗಿ ಅಭಿನಯಿಸಿರುವರು. ಮತ್ತು ... ಗಳಿಗೆ ಪುಸ್ತಕ, ಸ್ಲೇಟು, ಉಡುಪುಗಳನ್ನು ಒದಗಿಸುವ ಏರ್ಪಾಡು ಸಹಾ ಮಾಡಿರುವುದು ಸ್ತುತ್ಯಕರವಾಗಿದೆ-

ಪುತ್ತೂರು.

ತೀರ್ಮಾನ-ಕಳೆದ ೮ ವರ್ಷಗಳಿಂದ ತೀರ್ಮಾನವಾಗದೆ ಕೋರ್ಟುಗಳಲ್ಲಿ ಕೊಳೆಯುತ್ತಿದ್ದ ಒಂದು ವ್ಯಾಜ್ಯದ ತೀರ್ಮಾನವನ್ನು ಶ್ರೀ| ಮೊಳಹಳ್ಳಿ ಶಿವ ರಾಯರು ಇಕ್ಕಡೆಯವರಿಗೂ ಸಮಾಧಾನವಾಗುವಂತೆ ಕೊಟ್ಟದ್ದು ಸ್ತುತ್ಯ.

WANTED

A Secondary or higher grade trained teacher, on salary of Rs 85% of the assighned ...
Quarters free

Apply to the particulars
To
Manager,
Aided Higher Ele. School,
GULVADI, Post Kandlur S K.

ಚೂರು-ಚೂರು

'ಸ್ಟೋಕ್‌ಹೋಮಿನಲ್ಲಿ ರಶ್ಯಾ-ಜರ್ಮನಿಗಳೊಳಗೆ ಸಂಧಾನದ ಮಾತುಕತೆ ನಡೆದು ಮುರಿದು ಹೋಯಿತು'-ಸ್ವೀಡಿಶ್ ಪತ್ರಿಕೆ 'ಅಲ್ಲೆಹಾಂಡಾ'ದ ವಾರ್ತೆ.

ಚೀನಾ-ಜಪಾನ್ ಸಂಧಾನ ಪರಿಷತ್ತು ನಡೆದು ಮುಗಿದ ಆತುರದಾಯೀ ವಾರ್ತೆ ಪ್ರಕಟಿಸುವ ಮಹಾಭಾಗ್ಯವು ಕರ್ನಾಟಕದ ಯಾವುದಾದರೊಂದು ಪತ್ರಿಕೆಗೊದಗಬಾರದೇಕೆ?

O

'ಮಹಾ ಪ್ರಯಾಸದಿಂದ ನಾವು ಪೂರ್ತಿ ಐದುವರುಷ ಹೋರಾಡಿದೆವು. ಎಷ್ಟೆಂದರೂ ನಾವು ಮನುಷ್ಯರು. ವಿಶೇಷ ಸಹಾಯ ದೊರೆಯದಿದ್ದರೆ ಇನ್ನು ತಡೆದು ನಿಲ್ಲುವದು ನಮಗಸಾಧ್ಯವಾಗುವದು'—ಚೀನದ ಮೇಡಮ್ ಚಿಯಾಂಗರ ಮಾತು.

'ಕಾಲ ಹೋದಂತೆ ಜಪಾನರು ದುರ್ಬಲರಾಗುತ್ತಿದ್ದಾರೆ, ಎಂಬ ಇಂಗ್ಲಂಡು ಅಮೇರಿಕಗಳ ಆಶ್ವಾಸನೆಯಿರುವಾಗಲೂ ಮೇಡಮರು ಹೀಗೆಂದುದಾಗಲಿಲ್ಲ.

O

'ರಶ್ಯ, ಇಂಗ್ಲಾಂಡು ಮತ್ತು ಜರ್ಮನಿಯೊಡನೆ ನಮಗಿರುವ ಮನ-ಪೂರ್ವಕವಾದ ಮೈತ್ರಿಯಿಂದ ನಾವು ಸುಖೀಮಿಗಳು'-ಟರ್ಕಿ ಮುಖ್ಯಮಂತ್ರಿ ಎಮ್. ಸರಜೋಗ್ಲುರವರ ಮಾತು.

ಹಿಂದುಸ್ಥಾನಕ್ಕೆ ಅನ್ಯರಾಷ್ಟ್ರಗಳೊಡನೆ ಮೈತ್ರಿಯೋ ದ್ವೇಷವೋ ಎಂದು ಗೊತ್ತಿಲ್ಲದ ದೆಸೆಯಿಂದ ನಾವೂ ಸುಕ್ಷೇಮಿಗಳೇ.

O

'ಮಿ. ಚರ್ಚಿಲ್ಲರು ಭಾರತೀಯ ಭಾವನೆಗಳಿಗೆ ಎಂದೆಂದಿಗೂ ಪ್ರತೀಕೂಲರೇ—ಸಾರ್ವಜನಿಕಾಭಿಪ್ರಾಯವನ್ನು ಎಂದೆಂದಿಗೂ ಅವಮಾನಿಸುವರೇ ಎಂಬುದಕ್ಕೆ ಇದು ಮತ್ತೊಂದು ದೃಷ್ಟಾಂತ'- ಸರ್. ವೇವೆಲರ ನೇಮಕದ ಕುರಿತು 'ಹಿಂದೂ' ಪತ್ರಿಕೆಯ ಅಭಿಪ್ರಾಯ.

ಈ ರೀತಿ 400 ಮಿಲಿಯ ಜನರನ್ನು ಪೂರ್ತಿ ಗೆದ್ದುದಕ್ಕಾಗಿ ಸದ್ಯದಲ್ಲೇ 'ಇಂಡಿಯಾ ಡೇ' ಆಚರಿಸಲ್ಪಡುವದೆಂದು ನಿರೀಕ್ಷಿಸುತ್ತೇವೆ.

O

'ರಶ್ಯದಲ್ಲಿ ಕೂಡಲೇ ಪ್ರಬಲ ಧಾಳಿಯಾರಂಭಿಸದಿದ್ದರೆ ಜರ್ಮನರಲ್ಲಿ ಮಾನಸಿಕ ದೌರ್ಬಲ್ಯವೇಳಬಹುದೆಂಬ ಭೀತಿಯಿಂದ ಹಿಟ್ಲರನು ಅನಿವಾರ್ಯವಾಗಿ ಧಾಳಿ ಹೂಡಬಹುದು'— ಅಮೇರಿಕ ತಜ್ಞರ ಊಹೆ.

ಅರ್ಥಾತ್ ಜರ್ಮನರ ಹೊಸ ಧಾಳಿಗೂ ಮಿತ್ರರ ದ್ವಿತೀಯರಂಗದ ಕಾರಣವೇ ಕಾರಣವಾಗಬಹುದು.

O

ಹಿಟ್ಲರ್-ಮುಸಲಿನಿ ಭೇಟಿ ಪ್ರಸಿದ್ಧಿಯ ಬ್ರೆನ್ನರ್ ಕಣಿವೆಯನ್ನು ನಾಜಿಗಳು ಮುಚ್ಚಿದರು.

ಇನ್ನು ಮುಂದೆ ಅವರಿಬ್ಬರೂ ಮಿತ್ರರಾಷ್ಟ್ರಗಳಲ್ಲೇ ಒಟ್ಟಾಗುವ ಯೋಚನೆ ಮಾಡಿರಬಹುದೆ?

—ವಿನೋದಿ.

ಬಿಲ್ಲವರ ಎಸೋಸಿಯೇಶನ್, ಮುಂಬಯಿ.

ವಿದ್ಯಾರ್ಥಿ ವೇತನ—ಇದು ಬಿಲ್ಲವ ಜಾತಿಯ ಬಡ ವಿದ್ಯಾರ್ಥಿಗಳಿಗೆ ಮಾತ್ರ ಈ ಮೇಲಿನ ಸಂಸ್ಥೆಯಿಂದ ವೇತನವನ್ನು ಅಪೇಕ್ಷಿಸುವ ಬಿಲ್ಲವ ಬಡ ವಿದ್ಯಾರ್ಥಿಗಳು ಬರುವ ತಾ. 15-7-43ರ ಒಳಗೆ. ಈ ಕೆಳಗೆ ನಮೂದಿಸಿದ ಪ್ರಶ್ನೆಗಳಿಗೆ ಉತ್ತರ ಸಮೇತ ಈ ಕೆಳಗಿನ ವಿಳಾಸಕ್ಕೆ ಬರೆಕೊಂಡಲ್ಲಿ, ವೇತನವನ್ನು ಪಡೆಯಲು ಅರ್ಹರೆಂದು ಕಂಡು ಬಂದವರಿಗೆ ವೇತನವನ್ನು ಕೊಡಲಾಗುವುದು. ಕಾಲೇಜು ವಿದ್ಯಾಭ್ಯಾಸಕ್ಕೆ ವೇತನವನ್ನು ಕೊಡಲಾಗುವುದಿಲ್ಲ.

(1) ವಿದ್ಯಾರ್ಥಿಯ ಸಂಪೂರ್ಣ ಹೆಸರು. (2) ತಂದೆ ಯಾ ರಕ್ಷಕನ ಹೆಸರು ಮತ್ತು ವಿಳಾಸ. (3) ಇತರ ಸಂಬಂಧಿಕರ ಹೆಸರು, ವಿಳಾಸ ಮತ್ತು ವೃತ್ತಿ. (4) ಕಲಿಯುತ್ತಿರುವ ದರ್ಜೆ ಮತ್ತು ಶಾಲೆಯ ಹೆಸರು. (5) ಕಳೆದ ಪರೀಕ್ಷೆಯ ಮಾರ್ಕು ಪಟ್ಟಿ- (6) ಶಾಲಾ ನಂಬರ. (7) ವಿದ್ಯಾರ್ಥಿಯ ಗುಣ ನಡತೆಯ ವಿಷಯ ಶಾಲಾ ಮುಖ್ಯೋಪಾಧ್ಯಾಯರ ಶಿಫಾರಸು ಪತ್ರ (8) ವೇತನವನ್ನು ಪಡೆಯಲು ಅರ್ಹನೆಂಬುದರ ಕುರಿತು ಊರಿನ ಮೆಜಿಸ್ಟ್ರೇಟರ, ಪ್ರಸಿದ್ಧ ವಕೀಲರ ಯಾ ಗ್ರಾಮದ ಪಟೇಲರ ಪತ್ರ- ಎಸೋಸಿಯೇಶನಿಂದ ಗತವರ್ಷ ವಿದ್ಯಾರ್ಥಿ ವೇತನ ಪಡೆದ ವಿದ್ಯಾರ್ಥಿಗಳು, ಈ ವರ್ಷ ಸಹ ವಿದ್ಯಾರ್ಥಿ ವೇತನ ಪಡೆಯಲಿಚ್ಛಿಸುವದಾದರೆ ತಾ, 15-7-43ರ ಒಳಗೆ ಅರ್ಜಿ ಕಳುಹಿಸತಕ್ಕದ್ದು-

ವಿಳಾಸ:— ಮಾನಾರ್ಥ ಜನರಲ್ ಕಾರ್ಯದರ್ಶಿ, ಬಿಲ್ಲವರ ಎಸೋಸಿಯೇಶನ್, 17, ರಘುನಾಥ್ ದಾದಾಜಿ ರಸ್ತೆ, ೩ನೇ ಮಾಳಿಗೆ, ಕೋಟೆ, ಮುಂಬಯಿ,

BHUVANENDRA PRODUCTS Ltd.,

Head Office and Factory: Katapadi, S. Kanara

Depots: Mahratha Galli, Hubli.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಕೆ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ವಿಜಯಾ ಸ್ಟೋರ್ಸ್

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು)

ಮುಖ್ಯ ಕಾರ್ಯಾಲಯ:— ಕೋರ್ಟ್ ರಸ್ತೆ, ಉಡುಪಿ. ದಕ್ಷಿಣ ಕನ್ನಡ

ಶಾಖೆಗಳು— ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಕಿನ್ನಿಗೋಳಿ

ಮುದ್ದತ್ತು ಠೇವಣಾತಿಗಳು ತಾ. 31-7-1943 ಅಥವಾ ಈ ತಾರೀಕಿನ ಮೊದಲು ಮ್ಯಾದೆಯಾಗುವುದಾದರೆ ಅಂಥಾ ಮ್ಯಾದೆಯ ವರೆಗೆ ಸಾಲಿಯಾನ ಶೇಕಡಾ 3ರ ದರದ ಬಡ್ಡಿಯಲ್ಲಿ 3, 4, 5 ಅಥವಾ 6 ತಿಂಗಳ ಮ್ಯಾದೆಯಿಂದ ಪ್ರತಿಯೊಂದು ರೀತಿಯಲ್ಲಿ ಅಂಗೀಕರಿಸಲ್ಪಡುತ್ತವೆ

ಬೇಂಕಿನ ಪ್ರತಿಯೊಂದು ವಿಧದ ವಹಿವಾಟುಗಳು ನಡೆಸಲ್ಪಡುತ್ತವೆ.

ಹೆಚ್ಚಿನ ವಿವರಗಳಿಗೆ ಮೊಕ್ತೇಸರ ಅಥವಾ ಶಾಖೆಗಳ ಸಮೀಪದ ಶಾಖೆಯಲ್ಲಿ ದಯವಿಟ್ಟು ವಿಚಾರಿಸಿರಿ

REGD.

ಅಮೃತಾಂಜನ ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತ.

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisserri.

ಇದರಿಂದ ಸಮಸ್ತ ಜನರಿಗೆ ತಿಳಿಯ ಪಡಿಸುವುದೇನೆಂದರೆ-

ಪರಸಿನಿ ಕಡವು ದೇವಸ್ಥಾನದಿಂದ ಈ ಮೂಲಕ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂವು ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುನ್ಹಿರಾಮನ್,
ಮೆನೇಜರ್.

ಶ್ರೀ ತಾರಾನಾಥ ಭೇಷಜಾಲಯ

ಶಾಸ್ತ್ರೀಯ ಮತ್ತು ಸಿದ್ಧೌಷಧಿಗಳ ಕಾರಾಗಾರ, ಚಿಕ್ಕಮಗಳೂರು

ನಿರ್ದೇಶಕ:- ಡಾ. M. L Shetty, ಶ್ರೀಮದ್ವಿದ್ಯಾಪೀಠದ ಗೌ. ಪ್ರಾಧ್ಯಾಪಕರು.

ಎಲ್ಲಾ ತರದ ಭಸ್ಮ, ಖಲ್ವರಸಾಯನ, ಆಸವಾರಿಷ್ಟ, ಘೃತ, ತೈಲಗಳಿಗಾಗಿ ಕೂಡಲೇ ಬರೆಯಿರಿ.

ಲಕ್ಷಗಟ್ಟಲೆ ರೋಗಿಗಳಲ್ಲಿ ಉಪಕಾರಿಯಾದ ಔಷಧಿ ಯೋಗಗಳು, ಗುರುಪರಂಪರೆಯ ಅನುಭವದಿಂದ ಬಂದ ನಿರ್ದುಷ್ಟ ಔಷಧೀಕರಣ ವಿಧಾನ.

ಡಾ| P. M. Alva,
ಮೆನೇಜರ್.

ಬಾಲ ಸಾಹಿತ್ಯ ಮಂಡಲ, ಲಿಮಿಟೆಡ್.

ದಿವಂಗತ ಶ್ರೀ| ಉಳ್ಳಾಲ ಮಂಗೇಶರಾವ್ ಬಿ. ಎ., ಎಲ್. ಟಿ. ಅವರಿಂದ ರಚಿತವಾದ ನಮ್ಮ "ಹೊಸಗನ್ನಡದ ೧ರಿಂದ ೫ರ ವರೆಗಿನ ರೀಡರು"ಗಳು ಇದೇ ಜೂನಿನ ಪ್ರಥಮ ವಾರದಲ್ಲೇ ಸಿದ್ಧವಾಗುವವು. ಅವುಗಳಿಗೆ ಬೆಲೆ ಮತ್ತು ಅವುಗಳ ಮೇಲಿನ ಕಮಿಶನಿನ ದರಗಳು ಕಾಲಕ್ಕೆ ತಕ್ಕಂತೆ ಹೊಂದಿಸಲ್ಪಟ್ಟು ಆಗಲೇ ಪ್ರಕಟಗೊಳ್ಳುವುವು

Bala Sahitya Mandal, Ltd.

The Moolky Bank, Ltd.,

MOOLKY, S. K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja,
President & Manager

ಯಂ. ಆರ್. ಪೂಂಜ,
ಪ್ರೆಸಿಡೆಂಟ್ ಮತ್ತು ಮೆನೇಜರ್

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸದೊರೆಯ ಬೇಕೋ?

ಸುಖನಿವಾಸಕ್ಕೆ ಬನ್ನಿ!

ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ. : : : ಮಂಗಳೂರು.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

— ಮಕ್ಕಳನ್ನು ಹಡೆಯುವದು ಸಾಕು.—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ. ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲೆ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೨ಆಣೆ

ಮಾಲಕರು.— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ— ಕುಂಬಾರವಾಡಿ ಸ್ಟೋರ್ಸ ದಾವಣಗೇರಿ:— ದಾವಣಗೇರಿ ಪ್ರೆಸ್ಸ. ಆರ್. ಎಲ್. ಕವಳದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳಿಗೆ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದಕ**

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE

Approved firm by the Govt. Mysore.
Certified by the Agent of the Govt of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI. S. INDIA.

Regd. No. M. 3618.

Ested. 1921 ಸ್ಥಾಪನೆ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೩
ಸಂಚಿಕೆ ೪೧

FOUNDER
Sri. A. B. Shetty, M. L. A.

Vol. 23
No. 41

NAVAYUGA— Kannada Weekly —UDIPI, S. I.

ಉಡುಪಿ • 1—7—1943 • ಮಂಗಳೂರು.

ಹೊಸಕೆರೆ ಚಿದಂಬರಯ್ಯನವ
ರಿಂದ ರಚಿತವಾದ ಗೀತೆಯ
ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು ೬೦೦ ಪುಟಗಳು.
ಬೆಲೆ (ಸುಂದರ ಪ್ರತಿ) ೦—೯—೦
(ಕೆಲಿಕೋ ಬೈಂಡ್) ೦-೧೨—೦
(ಲೆದರ್ ಬೈಂಡ್) ೧—೪—೦
ಪ್ರತಿಗಳು ಪ್ರಸಿದ್ಧ ವ್ಯಾಪಾರಿಗಳಲ್ಲಿ ಸಿಗುವುದು.
0-10—0 ಸ್ಟಾಂಪು ಕಳಿಸಿದ್ದಲ್ಲಿ ಒಂದು
ಪ್ರತಿಯನ್ನು ಬುಕ್ ಪೋಸ್ಟ್
ಮಾಡಲಾಗುತ್ತೆ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಶ್ರೀಮತಿ ಶಿವರಾಣಿ ದೇವಿಯವರಿಂದ
(ದಿವಂಗತ ಪ್ರೇಮಚಂದ್ರರ ಪತ್ನಿ)
ರಚಿತವಾದ ಹಿಂದೀ ಕತೆಗಳ ಕನ್ನಡ
ಭಾಷಾಂತರ

ನಾರೀ ಹೃದಯ

ನಾರೀ ಹೃದಯದ ವಾಸ್ತವಿಕ ಚಿತ್ರ
ವನ್ನು ಚಿತ್ರಿಸುವ ಉತ್ತಮ ಕತೆಗಳ
ಸಂಗ್ರಹ.
ಬೆಲೆ 0—14—0
ಟ ಖ. 0--2—0 ಪ್ರತ್ಯೇಕ.
ಒಂದು ರೂಪಾಯಿ ಸ್ಟಾಂಪು ಕಳಿಸಿದರೆ ಒಂದು
ಪ್ರತಿಯನ್ನು ಕಳಿಸಲಾಗುವುದು.
ಕಿರಿಯರ ಪ್ರಪಂಚ, ಉಡುಪಿ.
ಅಥವಾ ನವಭಾರತ ಬುಕ್
ಡಿಪೋ, ಉಡುಪಿ.

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

The Canara Mutual Assurance Co., Ltd.,
UDIPI (S. India).

ನೀವೀ ವರೆಗೆ ವಿಮೆಯನ್ನೇ ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಈಗಲೇ ವಿಮೆ ಇಳಿಸಿರಿ

ಏಕೆಂದರೆ;—

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅಸ್ಥಿರ ಎನಂದಾದರೆ, ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅನೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ,
ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ.

ಕೊಬ್ಬಿಕಾರ್ ಬ್ರದರ್ಸ್ ಲಿಮಿಟೆಡ್

ಅಧಿಕೃತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಮುಖ ಏಜಂಟರು.
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ, ದ. ಕನ್ನಡ.
ಅಥವಾ ಅದು ಈ ಕೆಳಗಿನ ಯಾವದಾದರೂ ಶಾಖೆಯಲ್ಲಿ ವಿಚಾರಿಸಿರಿ —
ಮಂಗಳೂರು, ಕಲ್ಲಿಕೋಟೆ, ಸೇಲಂ, ತಿರುವಾಂಕೂರು, ಬೆಂಗಳೂರು ನಗರ ಮತ್ತು ಬೊಂಬಾಯಿ.

THE BOMBAY LIFE ASSURANCE CO., LTD.

ಬಂಟರ ಯುವಕ ಸಂಘ, ಮುಂಬಯಿ.

ಮುಂಬಾಯಿ ನಗರದಲ್ಲಿ ವಾಸಿಸುವ ಬಂಟ ತರುಣರಲ್ಲಿ ನೈತಿಕ, ಮಾನಸಿಕ, ಸಾಮಾಜಿಕ ಹಾಗೂ ಶಾರೀರಿಕ ಶಕ್ತಿಯನ್ನು ಹೆಚ್ಚಿಸಿ, ಪರಸ್ಪರ ಪ್ರೇಮ ಸೌಹಾರ್ದವನ್ನು ಅಭಿವೃದ್ಧಿಗೊಳಿಸಿ, ಸಹಕಾರ ಸಹಾನುಭೂತಿಯಿಂದ ತಮ್ಮ ಜಾತಿಯ ಮತ್ತು ಕನ್ನಡಿಗರ ಮೇಲ್ಮೆಯನ್ನು ಸಾಧಿಸುವ ಉಚ್ಚ ಉದ್ದೇಶದಿಂದ "ಬಂಟರ ಯುವಕ ಸಂಘ"ವು ಕಳೆದ ೧೯೪೦ರಲ್ಲಿ ಸ್ಥಾಪಿತವಾಯಿತು. ಈ ಧ್ಯೇಯವನ್ನು ಮುಂದಿಟ್ಟುಕೊಂಡು ಈ ಸಮಿತಿಯು ಕಳೆದ ಎರಡು ವರ್ಷಗಳಿಂದ ತನ್ನಿಂದ ಸಾಧ್ಯವಾದಷ್ಟು ಕಾರ್ಯ ಭಾರವನ್ನು ಹೊತ್ತುಕೊಂಡು ದುಡಿಯುತ್ತಾ ಬೆಳೆಯತೊಡಗಿ ಇದೀಗ ಮೂರನೆಯ ವರ್ಷಕ್ಕೆ ಕಾಲಿಟ್ಟಿರುವುದು. ಈ ವರ್ಷಾರಂಭದಿಂದ ಈ ಸಂಘವು ಒಂದು ವಾಚನಾಲಯ ಮತ್ತು ಪುಸ್ತಕ ಭಂಡಾರವನ್ನು ತೆರೆದು ನಡಿಸಿಕೊಂಡು ಬರುವುದು ಮಾತ್ರವಲ್ಲದೆ ಕನ್ನಡಿಗರಲ್ಲಿ ವಿದ್ಯಾ ಪ್ರಸಾರವಾಗುವಂತೆ ಮುಂಬಯಿಯ "ಕರ್ನಾಟಕ ಫ್ರೀ ನೈಟ್ ಹಾಯ್ ಸ್ಕೂಲಿ"ನ ಆಡಳಿತವನ್ನು ವಹಿಸಿಕೊಂಡು, ಇದೇ ತಾ. 9—6—43ರಿಂದ ನಡೆಸಿಕೊಂಡು ಬರುತ್ತಿರುವುದು. ಈ ಮಹತ್ತಾದ ಹೊಣೆಗಾರಿಕೆಯನ್ನು ಸುಸೂತ್ರವಾಗಿ ಉತ್ತಮ ರೀತಿಯಿಂದ ನಡೆಸಿಕೊಂಡು ಬರಬೇಕಾದರೆ ತುಂಬಾ ಹಣ ಬೇಕು ಎಂಬುದು ನಿರ್ವಿವಾದ. ಆದುದರಿಂದ ಸ್ವಜಾತಿ ಬಾಂಧವರು ಮತ್ತು ಇನ್ನಿತರ ಮಹನೀಯರು ಉದಾರತೆಯಿಂದ ತಮ್ಮ ಕೈಲಾದ ಸಹಾಯವನ್ನಿತ್ತು ನಮ್ಮೀ ಯುವಕವರ್ಗದ ಕಾರ್ಯಭಾಗವನ್ನು ಯಶಸ್ವಿಗೊಳಿಸಲು ನೆರವಾಗಬೇಕಾಗಿ ವಿನಂತಿ.

Karnataka Free Night High School,
Kumta Street,
Fort Bombay, 9-6-43.

ಎಮ್. ಶ್ರೀಧರ ಶೆಟ್ಟಿ (ಅಧ್ಯಕ್ಷ)
ಪಿ. ನಾರಾಯಣ ಶೆಟ್ಟಿ
ಎ. ಬಾಲಕೃಷ್ಣ ಶೆಟ್ಟಿ
(ಗೌ. ಜತೆ ಕಾರ್ಯದರ್ಶಿಗಳು)

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಬುಡುಬು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೇಸ್.

ಮಾಲಕರ ವಿಳಾಸಕ್ಕೆ ಪತ್ರ ವ್ಯವಹಾರ ಮಾಡಬೇಕೆಂಬ ವಿನಂತಿ.

ಮಾಲಕರ ವಿಳಾಸ: ರೇವಣಸಿದ್ದಪ್ಪ ದಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.

ಚಾಟಿಗಿಂತ ಚಾಡಿ ಬಲ!

ಕಳೆದ ಕೆಲವು ದಿನಗಳಿಂದ ಬಹು ವಿಧ —ಎಲ್ಲ ವಿಧದ—'ಸಂಧಾನ ಸುದ್ದಿ'ಗಳನ್ನು ಪ್ರಪಂಚವು ಕೇಳಿಯಾಗಿದೆ. ಯುದ್ಧಾರಂಭದಿಂದ ಇದುವರೆಗೆ ನಾವು ಕೇಳುತ್ತಾ ಬಂದ ಇಂತಹ ಸುದ್ದಿಗಳಿಗೀಗ, ವಿನೋದಕ್ಕಾಗಿ 'ನೊಸಳೆ ಬಂತು' ಎಂದು ಹಲವು ಬಾರಿ ಸುಳ್ಳಾಡಿದ ಅಗಸನ ರೋದನದ ಸ್ಥಾನ ದೊರೆತಿದೆಯೆನ್ನಬೇಕು. ಇನ್ನು, ಯಾವನಾದರೂ ಜಗದೋದ್ಧಾರಿಯು ನಿಜವಾಗಿ ಸಂಧಾನ ಯತ್ನ ಕೈಕೊಂಡರೂ ಅವನನ್ನು ನಂಬಲಾರದಷ್ಟು ಅವಿಶ್ವಾಸವೀಗ ಬೇರೂರಿ ನಿಂತಿದೆ.

ಅಂತರಂಗ—ಬಹಿರಂಗ

'ತಿರುಳು ಮುಳುಗಿತು—ಹೊಟ್ಟು ತೇಲಿತು' ಎಂಬ ಗಾದೆಯು ಈ ಸಂಧಾನ ಸುದ್ದಿಗಳಿಗೆ ಸರಿಯಾಗಿ ಅನ್ವಯಿಸುತ್ತದೆ. ಪ್ರಯತ್ನವಿದ್ದುದೆಲ್ಲಾ ಪರದೆಯೊಳಗೆ—ಪ್ರದರ್ಶನ ಮಾತ್ರವಿದ್ದುದು ಎಲ್ಲರೆದುರಿಗೆ! ರಶ್ಯಾ ಯುದ್ಧದ ಮೊದಲು ಹೆರ್ ಹೆಸ್ಸರು ಇಂಗ್ಲಂಡಿಗೆ ಬಂದಿಳಿದುದು ನಿಜವಾಗಿಯೂ ಸಂಧಾನ ಸಾಧನೆಗಾಗಿ. ಬ್ರಿಟಿಷರದನ್ನು ತಿಳಿದಿರಬೇಕು— ಹೆರ್. ಹೆಸ್ಸರದನ್ನು ತಾನು ಬಂದ ಕರ್ತವ್ಯವಾಗಿ ತಿಳಿಸಿರಬೇಕು. ಆದರೆ ಅದೇನೆಂಬುದು ಈ ವರೆಗೂ ಪ್ರಕಟವಾಗಿಲ್ಲ. ಇದರ ಬದಲಾಗಿ, 'ಟರ್ಕಿಯು ಮಧ್ಯಸ್ತಿಕೆ ವಹಿಸಲಿದೆ' 'ಫ್ರಾಂಕೋ ರಾಜಿ ಯತ್ನಕ್ಕಾಗಿ ಆಲ್ಜೀರ್ಸಿಗೆ ಬಂದಿದ್ದಾನೆ'—ಇತ್ಯಾದಿ ಆಧಾರರಹಿತ ಸುದ್ದಿಗಳು ಹುಟ್ಟಿ ಹರಡುತ್ತಿನೆ—ಯಾರ ಉಪಕಾರಕ್ಕಾಗಿಯೋ!

ರಶ್ಯಾ—ಜರ್ಮನಿ.

ಸ್ವೀಡನಿನ ಒಂದು ಹೊಟೆಲಿನಲ್ಲಿ ರಶ್ಯಾ ಜರ್ಮನಿ ಪ್ರತಿನಿಧಿಗಳೊಳಗೆ ನಡೆದು ಮುಗಿಯಿತೆಂದು ಇತ್ತೀಚೆಗೆ ಹೊರ ಬಿದ್ದ ಸಂಧಾನ ಸುದ್ದಿಯು ಮಿತ್ರ ರಾಷ್ಟ್ರೀಯರ ಉದ್ವೇಗ ತಂತುವನ್ನಲುಗಿಸಿದುದು ನಿಜ. ಈ ಸುದ್ದಿಗೆ ಆಸ್ತಿವಾರವೇ ಇಲ್ಲವೆನ್ನುವವರು ರಶ್ಯಾ—ಜರ್ಮನಿಗಳವರು ಮಾತ್ರ. ಲಂಡನಿನ ಹೇಳಿಕೆಯಲ್ಲಿ ಸಂದೇಹ ಮಿಶ್ರವಾಗಿದ್ದು, 'ಈ ಸುದ್ದಿಯು ಬೀಜವಿಲ್ಲದೆ ಮೊಳೆತಿಲ್ಲ. ಜರ್ಮನರು ಸೋತು ಸುಣ್ಣವಾಗಿ ಸಂಧಾನ ಯಾಚಿಸಿರಬೇಕು'—ಎಂಬರ್ಥವಿದೆ ಜರ್ಮನರು ದಣಿದಿರುವದು ನಿಜ; ರಶ್ಯಾನರು ಕಂಗೆಟ್ಟಿರುವದೂ ಅಷ್ಟೇ ಸತ್ಯ. ಸಂಧಿ ಪ್ರಸ್ತಾಪನೇ ನಡೆಯುತ್ತಿಲ್ಲವೆಂದು ನಂಬಲು ಸಾಧ್ಯವಿಲ್ಲವಾದರೂ ನಿಜ ಅಂದ ಮೇಲೆ ಯುದ್ಧ ಗತಿಯು ಇಷ್ಟೇ ಮಂದವಾಗಿ ಸಾಗಿದರೆ, ಅಥವಾ ರಶ್ಯಾನರ ಭಾರ ಇಳಿಯಬೇಕಾದಷ್ಟು ಮುಂದಾದರೂ ಇಳಿಯದಿದ್ದರೆ, ಇನ್ನೊಮ್ಮೆ ಸಂಧಾನ ವಹಿವಾಟು ನಡೆಯಲೂಬಹುದು. ಅದು ನಿರರ್ಥಕವಾಗಲಿ, ಸಾರ್ಥಕವಾಗಲಿ— ಅದರ ಪ್ರಸ್ತಾಪಕ್ಕೇನೇ ಅವಕಾಶವಿಲ್ಲವೆಂಬ ಮಾತು ಸುಳ್ಳಾಗಿದೆ. 'ಒಬ್ಬರನ್ನೊಬ್ಬರು ಬಿಟ್ಟು ಪ್ರತ್ಯೇಕ ಸಂಧಾನವಿಲ್ಲ' ಎಂಬ ಕರಾರು ರಶ್ಯಾ ಇಂಗ್ಲಂಡುಗಳಿರುವಾಗ ಇಂತಹ ಅನುಕೂಲತೆಗೆ ಭಂಗ ಬಂದಿಲ್ಲವೆಂಬುದೊಂದು ಕೌತುಕವಲ್ಲವೆ?

ಚೀನಾ—ಜಪಾನು.

'ಪುರುಷ ಸಿಂಹ' ಎಂದು ಕರೆಯಬಹುದಾದ ವೀರರಿಂದು ಹಲವರಿದ್ದಾರೆ; 'ಸಿಂಹಿಣಿ' ಎಂದು ಮೇಡಮ್ ಚಿಯಾಂಗರನ್ನು ಕರೆದಾದ ಮೇಲೆ 'ಇನ್ನಾರನ್ನು ಕರೆಯಲಿ' ಎಂದು ತುಸು ಹೊತ್ತು ತಡೆಯುವಷ್ಟು ಸದೃಕ್ಷಭಾವವಿದೆ. ಅಂತಹ ಅದ್ವಿತೀಯ ವೀರನಾರೀ ಚಿಯಾಂಗ್ ಸತಿಯು ಇತ್ತೀಚಿಗಿನ ಉದ್ಗಾರವಿದು: "ನಾವು ಕಳೆದ ಆರು ವರುಷಗಳಲ್ಲಿ ಅಮಾನುಷ ಸಂಕಷ್ಟಗಳನ್ನನುಭವಿಸಿದ್ದೇವೆ. ಎಷ್ಟೆಂದರೂ ನಾವು ಮನುಷ್ಯರು. ನಮ್ಮ ಕಷ್ಟ ಕಡಿಮೆಯಾಗುವ ಭರವಸೆ ದೊರೆಯದೆ ನಮಗೆ ಹೀಗೇನೇ ಮುಂದೊತ್ತಲು ಸಾಧ್ಯವಾಗುವದೆಂಬ ಧೈರ್ಯವಿಲ್ಲ. ಜಾಪಾನರ ಪ್ರಚಾರದಷ್ಟು ಅಪಾಯಕರವಾದುದು ಮತ್ತೊಂದಿಲ್ಲ. ಅವರು ಚೀನದ ತಮ್ಮ ಕೈಗೊಂಬೆ ಸರಕಾರಕ್ಕೆ ಸರ್ವಾನುಕೂಲತೆಯನ್ನೊದಗಿಸಿ ಕೊಟ್ಟದ್ದಾರೆ—ಜನ ಮನವನ್ನಾಕರ್ಷಿಸಿದ್ದಾರೆ. ಹೋಂಗ್‌ಕೋಂಗಿನಲ್ಲಿ ಬಿಳಿ ಜನರನ್ನು ನಿರ್ದಯವಾಗಿ ಪೀಡಿಸಿದ ಜಾಪಾನರು ಚೀನೀಯರನ್ನು ಸೌಹಾರ್ದತೆಯಿಂದ ಕಂಡಿದ್ದಾರೆ. ತಾವು ಪಾಶ್ಚಿಮಾತ್ಯರ ದಬ್ಬಾಳಿಕೆಯಿಂದ ಪೌರ್ವಾತ್ಯರನ್ನು ವಿಮೋಚನೆಗೊಳಿಸಲು ಬಂದವರು ಎಂಬುದರ ಪ್ರದರ್ಶನಕ್ಕಾಗಿಯೇ ಈ ಆಟ. ಇಂತಹ ಪ್ರಚಾರ ನಾಟುತ್ತದೆ' ಈ ಮಾತುಗಳಲ್ಲಿ ಇಂಗ್ಲಂಡು ಅಮೇರಿಕಗಳಿಗೆ ಎಚ್ಚರಿಕೆಯಿದೆ; ಯುದ್ಧ ಬಡಾಯಿಯನ್ನು ಬದಿಗಿಟ್ಟು ನಿಜ ಸ್ಥಿತಿಯನ್ನು ಚಿತ್ರಿಸಿದ ಯಥಾರ್ಥತೆಯಿದೆ. ವಿಶ್ವಾಸವಿದ್ದವರು ಕೈಪಿಡಿಯಾಗಿ ಮಾಡಿಕೊಳ್ಳಬಹುದಾದ 'ಚೀನೀ ಗ್ರಂಥ'ವೇ ಇದೆನ್ನಬಹುದು ಆದರೆ ಚೀನದ ಮಿತ್ರ ರಾಷ್ಟ್ರೀಯರಿಗೆ—ತಮ್ಮ ಅಪರಾಧವೇ ತಮ್ಮನ್ನು ತಿನ್ನುತ್ತಿರುವ ಸಂದೇಹ ವಾದಿಗಳಿಗೆ- ಇಂತಹ ಕಹಿವಸ್ತು ಮತ್ತೊಂದಿರಲಾರದು. ಆದ್ದರಿಂದಲೇ ಚೀನಾ—ಜಾಪಾನ್ ಸಂಧಾನದ ಸುದ್ದಿಗಳೂ ಹರಡಿಕೊಂಡಿವೆ. 'ಕಳೆದ ಆರು ವರುಷಗಳಿಂದ ಎಷ್ಟೋ ಸಂಧಾನ ಸೂಚನೆಗಳೆದ್ದಿದ್ದುವು; ಎಲ್ಲವನ್ನೂ ಚೀನವಲ್ಲಗಳೆದಿದ್ದಿತು. ಇನ್ನು ಮುಂದಾದರೂ ಹಾಗೇನೇ. ಈ ಕುರಿತು ನಮ್ಮ ಮೇಲೆ ಮಿತ್ರರು ಭರವಸೆಯಿಡಬಹುದು' ಎಂದು ಚೀನದ ಸುದ್ದಿ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ ಆದರೆ ಮಿತ್ರರ ಸಂದೇಹ ಬಿಟ್ಟು ಹೋದೀತೆ? ತಾವು ಚೀನವನ್ನು ಸಾಯಬಿಡದಷ್ಟು ಸಹಾಯವನ್ನು ಮಾಡುತ್ತಿಲ್ಲ; ತಮ್ಮ ಹೆಸರು ಹೇಳಿ ಸಾಯುವದಕ್ಕೇನೇ ಚೀನವು ಸಿದ್ಧವಿರುವದೆಂದು ನಂಬುವದು ಹೇಗೆ—ವಿರೋಧಿಯನ್ನಾಶ್ರಯಿಸಿಯಾದರೂ ಬದುಕೋಣವೆಂಬ ಬಯಕೆ ಮೂಡಲಾರದೆನ್ನುವದು ಹೇಗೆ? ಎಂದು ಮಿತ್ರ ರಾಷ್ಟ್ರೀಯರಿಗೆ ಸಂದೇಹ; ಸ್ವಾಭಾವಿಕ ತಾನೆ!

ಇಟೆಲಿಯಿಂದ—

ಮುಸಲಿನಿಯೊಬ್ಬನನ್ನು ಬಿಟ್ಟರೆ, ಮಿಕ್ಕ ಎಲ್ಲಾ ಧುರೀಣರೂ ಸಂಧಾನ ಯಾಚನೆಗಾಗಿ ಹೊರ ಬಿದ್ದಾಗಿದೆ ಎಂದು ತಿಳಿಸುವ ವಾರ್ತೆಗಳಂತೂ ಇಷ್ಟರಲ್ಲೇ ಹೊರಬಿದ್ದಾಗಿದೆ! ರಾಜಪುತ್ರ ಲುಂಬಾರ್ಟೊ, ಮಾರ್ಶಲ್ ಬೋಡೋಗ್ಲಿಯೋ ಸಂಧಾನ ಯಾಚನೆಗಾಗಿ ಆಲ್ಜೀರ್ಸಿಗೆ ಬಂದಿದ್ದರು ಎಂದೊಮ್ಮೆ ವಾರ್ತೆ ಬಂತು ಮತ್ತೊಮ್ಮೆ ಮುಸಲಿನಿ ಅಳಿಯ ಕೌಂಟ್ ಸಿಯಾನೊ ಮತ್ತು ಹಿಂದೆ ಲಂಡನಿನಲ್ಲಿ ಇಟೆಲಿ ರಾಯಭಾರಿಯಾಗಿದ್ದ ಕೌಂಟ್ ಡಿನೊ ಗ್ರಾಂಡಿಯವರನ್ನು ಇಟೆಲಿ ಸರಕಾರವು ಮಿತ್ರ ರಾಷ್ಟ್ರೀಯರೊಡನೆ ಸಂಧಾನ ಯಾಚಿಸಲು ಬೀಳ್ಕೊಟ್ಟಿದೆ ಎಂಬ ಸುದ್ದಿ ಹುಟ್ಟಿತು. ಅರ್ಥಾತ್ ಬಿಸಿ ತಾಗಿದೊಡನೆ ಬಿಲದಿಂದ ಹೊರಬೀಳುವಂತೆ, ಮಿತ್ರರ ಕೆಲವು ಬೋಂಬು ಬಿದ್ದೊಡನೆ ಇಟೆಲಿ ಪ್ರಮುಖರು ಸಂಧಾನಕ್ಕೆ ಹೊಂಟುಬಂದ ಚಿತ್ರ ಕಣ್ಣ ಮುಂದೆ ಬರುತ್ತದೆ. ಅಮೇರಿಕದ ಸ್ಟೇಟ್ ಸೆಕ್ರೆಟರಿ ಮಿ. ಕೋರ್ಡೆಲ್ ಹಲ್ಲರು 'ನಮಗಾವುದೂ ಗೊತ್ತಿಲ್ಲ' ಎಂದು ಇಂತಹ ಸುದ್ದಿಗಳನ್ನೆಲ್ಲಾ ಅಲ್ಲಗಳೆದಿದ್ದಾರೆ. ಎಲ್ಲವೂ ಸುಳ್ಳೇ ಆಗಿರಬಹುದು—ಆದರೆ ಈ ಸುಳ್ಳು ಸುದ್ದಿಗಳು ವಿಲಕ್ಷಣ ಮಾನಸಿಕಾಂದೋಲನವನ್ನುಂಟುಮಾಡಿವೆ ಎಂಬುದೂ ಸುಳ್ಳೆ?

ಉದ್ದೇಶವೇನು?

ಸಂಧಾನ ವಾರ್ತೆಗಳನ್ನು ಹುಟ್ಟಿಸುವವರಲ್ಲಿ, ವಿರೋಧೀ ತಂಡ ಮತ್ತು ಜನತೆಯಲ್ಲಿ ಗೊಂದಲ, ಸಂದೇಹಗಳನ್ನು ನಿರ್ಮಿಸಿ ಮಾನಸಿಕ ದೌರ್ಬಲ್ಯವನ್ನುಂಟುಮಾಡುವ ಗುರಿಯಿದೆಯೆಂಬುದು ಖಂಡಿತ. ಇಂತಹ ಚಾಡೀ ಹೋರಾಟದಲ್ಲಿಯಾದರೂ ಗೋಬೆಲ್ಸನು ಹೊಂದಿದ ವಿಜಯವನ್ನು ಮಿತ್ರರಾಷ್ಟ್ರೀಯ ಪ್ರಚಾರಕರಿಂದ ಪಡೆಯಲಾಗಲಿಲ್ಲ. ರಶ್ಯಾ-ಪೋಲೆಂಡುಗಳೊಳಗೆ ಮನಸ್ತಾಪವನ್ನು ತಂದೊಡ್ಡಲು ಅವನು ಸಮರ್ಥನಾದ. ಸ್ಟೋಕ್ ಹೋಮ್ ಮಾತುಕತೆಗೆ ಬಣ್ಣ ಹಚ್ಚಿ, ರಶ್ಯಾ ಮತ್ತು ಮಿತ್ರರೊಳಗೆ ಆಂತರಿಕ ಅವಿಶ್ವಾಸದ ಬೀಜವನ್ನು ಅವ ಬಿತ್ತಿದ. ಚೀನಾ—ಜಾಪಾನು ಮಾತುಕತೆಗಳ ನಿರ್ಮಾಪಕರು ಜಾಪಾನರಿರಬಹುದು—ಅಥವಾ ಚೀನೀಯ ಪರಿಸ್ಥಿತಿಯೇ ಮೂಲಕಾರಣವಾಗಿರಬಹುದು. ಇಟೆಲಿಯ ಮೇಲೆ ಸಂಧಾನಾರೋಪ ಹೊರಿಸುವದರಲ್ಲಿ ಮಿತ್ರರ ಕೈವಾಡವಿರಬೇಕೆಂದು ನಂಬಬಹುದು. ಅಂತೂ ವಾರ್ತಾರಂಗದಲ್ಲೂ ಧಾಳಿ, ಪ್ರತಿಧಾಳಿಗಳು ನಡೆದಿವೆ; ಇದನ್ನು 'ಇತ್ತಂಡದವರೂ ಒಂದುಗೂಡಿ ಅಜ್ಞಾನೀ ಜನಸಮೂಹದ ಮೇಲೆ ನಡೆಸುತ್ತಿರುವ ಅನೃತಾಕ್ರಮಣ' ಎಂದು ಕರೆಯುವದು ಇನ್ನಷ್ಟು ಸಮಂಜಸ! ಅಬ್ಬರ, ಆಡಂಬರ, ಅನೃತ-ಇವು ಮೂರಿಲ್ಲದಿರುತ್ತಿದ್ದರೆ ಇಂದಿನ ಹೋರಾಟವು ಇಷ್ಟೊಂದು ಭೀಕರವಾಗಿ ಕಾಣುತ್ತಿರಲಿಲ್ಲ!

WANTED
for
S R.S. HOME, Mangalore

A Bunt clerk knowing accounts. Salary between Rs. 20/- and Rs. 30/- with free board and lodging A higher salary than the minimum will be given according to qualification ex-perience.

Applications with testimonials to reach the undersigned before 10-7-1943.

(Sd.) **K. T. Alva,**
Superintendent.

ಪ್ರೇಮ ವಿದ್ಯಾಪೀಠ—ತುಂಗಭದ್ರ.

ದಿವಂಗತ ಪಂಡಿತ ತಾರಾನಾಥರಿಂದ ಸ್ಥಾಪಿಸಲ್ಪಟ್ಟ ಸುಪ್ರಸಿದ್ಧ "ಪ್ರೇಮವಿದ್ಯಾಪೀಠ"ದ ವಿದ್ಯಾಲಯವು ಎಂದಿನಂತೆ ಜುಲೈ 15ನೇ ತಾರೀಕಿನಿಂದ ಪ್ರಾರಂಭವಾಗುವುದು ವಿದ್ಯಾಪೀಠದಲ್ಲಿನ ಶಿಕ್ಷಣ ಕಾರ್ಯವನ್ನು ಪಂಡಿತರ ಮುಖ್ಯ ಶಿಷ್ಯರಾದ ವೈದ್ಯಗುರು, ಡಾ। ವೆಂಕಟೇಶ್; ವೈದ್ಯಗುರು, ಡಾ। ಸ್ವಾಮಿರಾಯಾಚಾರ್ಯ; ವೈದ್ಯಗುರು, ಡಾ। ಜಿ. ಕೃಷ್ಣಮೂರ್ತಿ B. A. M. P. M. S. (ಆಯುರ್ವೇದ ಮಹೋಪಾಧ್ಯಾಯ) ವೈದ್ಯಗುರು, ಡಾ। R. K. ಪಾಲ್ಯೇಕರ್ B. Sc. F. P. M. S. ಮತ್ತು ವೈದ್ಯಗುರು, ಡಾ। ಸುಮತೀಬಾಯಿ ತಾರಾನಾಥ B. A. B. T. F. P. M. S. ಮಹೋಪಾಧ್ಯಾಯ ಮೊದಲಾದವರು ಕೈಗೊಂಡು ಪಂಡಿತಜೀಯವರ ಧ್ಯೇಯವನ್ನು ಮುಂದುವರಿಸಲಿದ್ದಾರೆ.

ವಿದ್ಯಾಪೀಠದ ತರಗತಿಗಳಲ್ಲಿ ಸೇರಲಿಚ್ಛಿಸುವವರು ಜುಲೈ 15ನೇ ತಾರೀಖಿನೊಳಗೆ ಪ್ರವೇಶ ಪತ್ರಿಕೆಯೊಡನೆ ಮೂರು ರೂಪಾಯಿಗಳನ್ನು ಕಳುಹಿಸಿ ತಮ್ಮ ಹೆಸರನ್ನು ರಿಜಿಸ್ಟರು ಮಾಡಿಸಬೇಕು. ಹಾಸ್ಟೆಲ್, ಪಾಠಕ್ರಮ ಇತ್ಯಾದಿ ಹೆಚ್ಚಿನ ವಿವರಗಳಿಗೆ ಮೂರು ಆಣೆ ಸ್ಟಾಂಪು ಕಳುಹಿಸಿ ಪ್ರಾಸ್ಪೆಕ್ಟಸ್ ತರಿಸಿಕೊಳ್ಳಬಹುದು.

Vaidyaguru Dr. Venkatesh
Offg. Principal

Degrees: Books: Medicines

Free H. L. M. S. M. B. H. M. D. etc. Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp—

Principal Indian Homeopathi Institute & Society (Govt. Regd)
P.O MAHUVA -(Kathiawar Dt. India.)

Sidha-Kalpa Kavach (Regd.)

No. 3 Rs 2. No. 2 Rs. ... No. 1 Rs. 7. Special Rs. 10, Extra Special Rs. 17 for ove marriage health, wealth. Ask any six questions with M. O Re. 1/4 and get correct answers by returnpost Life reading Rs.10 No V.P.P.Send M.O.Free. pamplets

Prof Dr. N. R Chhatbar.
P. O. MAHUVA (Kathiawar India.)

CHAMPAE'S
SNOW & CASTREX

The Canara Banking Corporation Limited.

(Incorporated in British India—Liability of Members limited.)

ESTD: 1906.

Head Office: **UDIPI**, S. Kanara.

Paid Up Capital as on 31-5-'43 Rs. 6,50,060/-

Reserves „ „ Rs. 3,84,788/-

DEPOSITS exceed Rs. 50 lakhs.

For your Banking requirements come to us and we will assist you. We undertake all kinds of Banking business.

ಉಡುಪಿ, ಗುರುವಾರ, ೧-೭-೧೯೪೩

ಹೊಸ ವೈಸರಾಯರು.

ಭಾರತದ ವಿಪತ್ತುಗಳು ಹಳೇ ವೈಸರಾಯರ ಬಗ್ಗೇಜಿನಲ್ಲಿ ಸೇರಿ ಅವರೊಡನೆ ಹೋಗುವಂಥವುಗಳೆಂದಾಗಲೀ, ಹಿಂದೀ ಸ್ವಾತಂತ್ರ್ಯವು ಹೊಸ ವೈಸರಾಯಿಗಳ ಗಂಟುಮೂಟೆಯಲ್ಲಿ ಸೇರಿ ಬರುವಂತಹದೆಂದಾಗಲೀ ಹಿಂದೀಯರು ನಿರೀಕ್ಷಿಸಿಲ್ಲ. ಒಂದೊಮ್ಮೆಗೆ ಸರ್. ವೇವೆಲರ ಬದಲಿಗೆ, ಹಿಂದೀಯ ಪ್ರಶ್ನೆಯ ಕುರಿತು ವಿಶೇಷಾತುರ ಪ್ರದರ್ಶಿಸುತ್ತಿರುವ ಮಿ. ಸೋರೆನ್ಸನರೇ ಮುಂದಿನ ವೈಸರಾಯಿಯೆಂದು ಡೌನಿಂಗ್ ಸ್ಟ್ರೀಟಿನ ಪ್ರಕಟಣೆ ಹೊರಡುತ್ತಿದ್ದರೂ ಸ್ವಾತಂತ್ರ್ಯೋತ್ಸವಾಚರಣೆಗಾಗಿ ಇಲ್ಲಿಯ ಬೀದಿಗಳೇನೂ ಅಲಂಕರಿಸಲ್ಪಡುತ್ತಿದ್ದಿಲ್ಲ! ಅಪ್ರಾಗತಿಕ ಧೋರಣೆ, ಸಾಮ್ರಾಜ್ಯ ಸ್ವಾರ್ಥಪೂರಿತವಾದ ಬ್ರಿಟಿಷ್ ರಾಜ್ಯಭಾರ ಕ್ರಮವೆಂಬುದು, ಅದಕ್ಕೆ ಕೈಯಿಕ್ಕಿದವರು ತಮ್ಮಿಚ್ಛೆ ಬಂದತ್ತ ಜಗ್ಗಲಾಗುವ ಸೂತ್ರವೇನೂ ಅಲ್ಲ—ಅದನ್ನೇ ಅಘಲ... ನಿಲ್ಲ... ಶಿಲಾಸ್ತಂಭ! ಅಂದ ಮೇಲೆ ವೈಸರಾಯಿಯಾಗಿ ಬರುವ ವ್ಯಕ್ತಿ ಯಾ, ದೇವತೆ, ಇವರಿಬ್ಬರೊಳಗೆ ಭಾರತೀಯನ ದೃಷ್ಟಿಯಲ್ಲಿ ವ್ಯತ್ಯಾಸ ಕಾಣದು. ಆದರೆ ವೈಸರಾಯಿಯು, ಭಾರತದಲ್ಲಿ ಸಾಮ್ರಾಜ್ಯ ಚಾಲನೆಯ ಪ್ರಮುಖೋಪಕರಣವಾಗಿರುವದರಿಂದ, ಉಪಕರಣದ ಗುಣದೋಷಗಳೂ ಆದೊಂದು ಮಿತಿಯೊಳಗೆ ಉಪಕಾರ—ಉಪದ್ರವನ್ನೀಯಬಲ್ಲವೆಂಬುದರಿಂದಲೇ ಈ ನೇಮಕಕ್ಕೊಂದಿಷ್ಟು ಪ್ರಾಮುಖ್ಯತೆಯಿದೆ. 'ಭಾರತವನ್ನು ಸ್ವಸರಕಾರದ ಕಡೆಗೊಯ್ಯುವ ಕುರಿತು ಚಕ್ರವರ್ತಿ ಸರಕಾರವು ಮಾಡಿರುವ ಪ್ರತಿಜ್ಞೆಗನುಸಾರವಾದ ನಿಶ್ಚಿತ ಧೋರಣೆಯಲ್ಲಿ ಈ ಹೊಸ ನೇಮಕದಿಂದಾಗಿ ಯಾವ ಬದಲಾವಣೆಯೂ ಆಗಲಾರದೆಂದು ನಾನು ಹೇಳಬೇಕಾದ ಅಗತ್ಯವಿಲ್ಲ'-ಎಂದು ಕಾಮನ್ಸ್ ಸಭೆಯಲ್ಲಿ ಮಿ. ಅಮೆರಿಯವರಂದಿದ್ದಾರೆ. 'ಬದಲಾವಣೆಯಿಲ್ಲ' ಎಂಬ ಅಮೆರಿಯವರ ಮಾತನ್ನು ಲೋರ್ಡ್ ಲಿನ್‌ಲಿತ್ ಗೋವರ ಅವಧಿಯಲ್ಲಿ ಕೇಳಿದಾಗಲೆಲ್ಲಾ ನಾವು ನಿರಾಶೆಗೊಳ್ಳುತ್ತಿದ್ದೆವು; ಸರ್. ವೇವೆಲರ ಬದಲಿಗೆ ಯಾವನಾದರೊಬ್ಬ ಮೇಲ್ದರ್ಜೆಯ ನಾಗರಿಕನ ನೇಮಕವಾಗಿ ಅಂಥವನನ್ನು ಹರಸಿ ಬೀಳ್ಕೊಳ್ಳುವ ಸಂದರ್ಭದಲ್ಲಿ ಮಿ. ಅಮೆರಿಯವರೀ ಮಂತ್ರೋಚ್ಚಾರ ಮಾಡುತ್ತಿದ್ದರೂ ನಾವು ಖೇದಗೊಳ್ಳುತ್ತಿದ್ದೆವು. ಆದರೆ ಸರ್. ವೇವೆಲರು ಬಂದುದರಿಂದ ಧೋರಣೆ ಬದಲಾಗುವದಿಲ್ಲ-ಎಂದ ಮಿ. ಅಮೆರಿಯವರ ಮಾತು ನಮಗೊಂದು ಆಶ್ವಾಸನೆಯಾಗಿ ಕಾಣುತ್ತಿದೆ; ಸಮಾಧಾನ ಕೊಟ್ಟಿದೆ. ವ್ಯತ್ಯಾಸವಿಷ್ಟೆ: ಉಚ್ಚ ರಾಜನೀತಿಜ್ಞನೊಬ್ಬನು ವೈಸರಾಯಿಗಿರಿಗೇರುವಾಗ, ಮಿತ್ರರಾಷ್ಟ್ರೀಯರ ದುರ್ಬಲಾಂಗವಾಗಿರುವ ಭಾರತೀಯ ಕ್ಕಟ್ಟು ನಿವಾರಣೆಯ ಬದಲಾದಣೆಯಾಗಬಹುದೆಂಬ ಸುಖಮಯ ಭವಿಷ್ಯವನ್ನು ನಿರೀಕ್ಷಿಸುವದು ಸ್ವಾಭಾವಿಕ. ಅಂತೆಯೇ ಜನರಲ್ ವೇವೆಲರಂತಹ ಸೇನಾಪತಿ ಬರುವಾಗ ಭಾರತವು ರಣಕಣವಾಗಲಿದೆ ಎಂಬ ಭೀತಿಮೂಡುವದೂ ಸ್ವಾಭಾವಿಕ. ನಾಗರಿಕ ಬದಲಾವಣೆ ಬೇಕು; ಸೈನಿಕ ಬದಲಾವಣೆಬೇಡ. ಹಾಗಾಗುತ್ತಿದ್ದರೆ 'ಬದಲಾವಣೆಯಿಲ್ಲ' ಎಂಬ ಅಮೆರಿವಾಣಿ ನಮಗೆ ಕರ್ಣಕಠೋರವಾಗುತ್ತಿತ್ತು—ಹೀಗಾದುದರಿಂದ ಅದೇ ಈಗ ಕರ್ಣಾಮೃತವಾಗಿದೆ!

ಭಾವೀ ವೈಸರಾಯಿಯನ್ನು ತೂಕಕ್ಕಿಟ್ಟು 'ಸೈನಿಕ' ಎಂದು ಹಗುರವಾಗಿ ಕಾಣುವದರಲ್ಲಿ ಅವರನ್ನು ತಾತ್ಸಾರ ಮಾಡುವ ಅಪರಾಧವಿಲ್ಲ; ಬದಲಿಗೆ ತನ್ನ ಸಾಮ್ರಾಜ್ಯ ತಕ್ಕಡಿಯಲ್ಲಿ ತೂಗಿ 'ಇದರ ಮೇಲೇನನ್ನೂ ಹೇರಬಹುದು' ಎಂದು ಹಿಂದೂ ದೇಶವನ್ನು ತಾತ್ಸಾರ ಮಾಡಿದ ಅಪರಾಧ ಮಿ. ಚರ್ಚಿಲ್ಲರದು. ಭಾರತದಲ್ಲೇ ಬಹುಕಾಲವಿದ್ದು, ವೈಸರಾಯೀ ಕೌನ್ಸಿಲ್ ಸದಸ್ಯರಾಗಿದ್ದು, ಸರ್. ವೇವೆಲರು ಪಡೆದಿರುವ ಭಾರತ ರಾಜಕೀಯಾನುಭವಗಳ ವರ್ಣನೆಯನ್ನು ಬ್ರಿಟಿಷ್ ಮುತ್ಸದ್ದಿಗಳ ಬಾಯಿಯಿಂದ ಕೇಳುತ್ತಿದ್ದೇವೆ. ಸರ್. ವೇವಲರಲ್ಲಿ ರಾಜಕೀಯೊನುಭವವಿದೆ; ಉದಾರ ಹೃದಯವಿದೆ, ಒಪ್ಪುತ್ತೇವೆ. ಮಿ. ಚರ್ಚಿಲ್ಲರಿಗೆ ಸೇನಾಜ್ಞಾನವಿಲ್ಲ ಮೆಸೊಪೊಟೋಮಿಯಾ ಮೊದಲಾದ ಯುದ್ಧರಂಗಗಳನ್ನು, ಇಂಗ್ಲಾಂಡಿನ ಎಲ್ಲಾ ಪ್ರಮುಖ ಯುದ್ಧಾಲಯಗಳನ್ನು ಸಂದರ್ಶಿಸಿ ಅವರು ಯೋಧಾನುಭವ ಹೊಂದಿದ್ದಾರೆ. ಈ ಜ್ಞಾನ ಬಲದಿಂದ ಮಿ ಚರ್ಚಿಲ್ಲರು ಮುಂದಿನ ದ್ವಿತೀಯ ರಂಗದ ಸೇನಾನಿಯಾಗಿ ಹೊರಟರೆ ಬ್ರಿಟನ ಒಪ್ಪುವರೆ? ಮಿತ್ರರ ಸಂಯುಕ್ತ ಸೇನೆಗೋರ್ವ ಅಧಿನಾಯಕನಗತ್ಯವೆಂದು ಸೇನಾ ಶಿಬಿರಗಳಲ್ಲೇ ಹುಡುಕಾಟ ನಡೆದಿದೆ ಯಾಕೆ? ಅರ್ಥಾತ್ ನಾಗರಿಕ-

ದುರ್ಬೀನು

ಸಿಡುಬು ಹಬ್ಬಿದಲ್ಲಿರಬೇಕಾದರೆ ದಾಕು ಹಾಕಿಸಿಕೊಳ್ಳಬೇಕು; ವಿಮರ್ಶಾ ಪೀಡಿತ ವಿಚಾರಿಗಳೊಡನಿರಬೇಕಾದರೆ ನಿಮ್ಮನ್ನು ನೀವೇ ವಿಮರ್ಶಿಸಿಕೊಳ್ಳಬೇಕು.

ಂಂ ಂಂ

ಮಗುವಿಗೆ ಕಹಿಯೌಷಧ ಕೊಡಬೇಕೇ–ಮೊದಲು ನೀವೇ ಅದನ್ನೊಂದು ಗುಟುಕು ಕುಡಿದು ತೋರಿಸಿ; ವಿವೇಕಿಗಳನ್ನು ವಿಮರ್ಶಿಸಲಿಳಿಯುವಿರಾ-ಪ್ರಥಮತಃ ಸ್ವಖಂಡನೆ ಮಾಡಿಕೊಳ್ಳಿ.

ಂಂ ಂಂ

ಚರ್ಚಿಲ್ಲರು ವಿಮಾನ ಬಲದಿಂದ ವಾಶಿಂಗ್ಟನಿಗೆ ಹಾರಿದರು; ಹನುಮ ದೇಹ ಬಲದಿಂದಲೇ ಲಂಕೆಗೆ ಹಾರಿದ್ದ. ಧನಬಲವಿದ್ದವರಂತೆಯೇ ಮನೋಬಲವಿದ್ದವರೂ ಹಾರಾಡಿಯಾರು!

ಂಂ ಂಂ

ಮರದಿಂದಿಳಿದವನಿಗೆ ನೆಲವಾಶ್ರಯವಾಗುತ್ತದೆ–ಗೆಲ್ಲು ಮುರಿದು ಬಿದ್ದವನನ್ನು ನೆಲವೇ ಜಖಂ ಪಡಿಸುತ್ತದೆ. ಆಸ್ಥಿರಾಧಾರವನ್ನು—ಬಿಟ್ಟು ಹಿಂಜರಿಯುವವನಿಗೆ ಬಿಡುವಿದೆ; ಕೆಟ್ಟು ಹಿಂಜರಿಯುವವನಿಗೆ ಕೇಡಿದೆ.

ಂಂ ಂಂ

ಕಾಡಿನಲ್ಲಿರುವ ಹುಲಿಯನ್ನೋಡಿಸಲು ಊರವರೊಟ್ಟಾದಾರು; ಮಾಡಿನಲ್ಲಿರುವ ಇಲಿಯನ್ನೋಡಿಸಲಿಕ್ಕೂ ಆಪದು ಬಂದಾರೆ? ಹುಲಿಯಂತಹ ವೀರನಿಗೆ ವಿಪತ್ತಿದೆ–ಇಲಿಯಂಥವನಿಗಿಲ್ಲ

ಂಂ ಂಂ

ಸಿರಿಯಿದ್ದಲ್ಲಿ ತುಂಟರ ಬಲ ಸೇರಿದರೆ, ಸಿರಿಯದಲ್ಲಿ ಎಂಟನೇ ದಳ ಜಮೆಯಾದಂತೆ–ದಾಳಿ ಖಂಡಿತ!

ಂಂ ಂಂ

ಗೆಜ್ಜೆ ಕಟ್ಟಿದರೆ ಕಾಲು ಕೂಡಾ 'ಗಿಝಿಲ್' ಸದ್ದು ಮಾಡುತ್ತದಂತೆ-ಅಹಂಭಾವ ಹುಟ್ಟಿದ ಅಧಮನು ಅಬ್ಬರಿಸಲಾರನೆ?

ಂಂ ಂಂ

ಸೈನಿಕಭೇದವರಿಯುವ ಅಧಿಕಾರವೂ, ಕಪ್ಪುಬಿಳಿ ಭೇದದಂತೆಯೇ ಸ್ವತಂತ್ರ ಇಂಗ್ಲಾಂಡಿಗೆ ಮಾತ್ರವಿದೆ; ಪರತಂತ್ರ ಭಾರತಕ್ಕಿಲ್ಲ! 'ನಾನು ಭಾರತದ ಯಥಾರ್ಥ ಮಿತ್ರ; ಅದರ ಭಾವನೆಯೊಡನೆ ಪೂರ್ಣ ಸಹಾನುಭೂತಿಯುಳ್ಳವ. ಎಂದಿಗೂ ಸೈನಿಕಾಡಳಿತೆ ಸ್ಥಾಪಿಸಲಾರೆ. ಹಿಂದಿನ ನಾಗ್ಪೂರಗಳಿಂದ ಹೆಜ್ಜೆ ಹಿಂದಿಡಲಾರೆ'–ಎಂದು ಸರ್. ವೇವೆಲರು ದೀನವಾಣಿಯಾಡಿದ್ದಾರೆ ಇದೀಗ ಕನಿಕರದಾಯೀ ವಿಷಯ. ಭಾವೀ ವೈಸರಾಯಿಗೆ, ತನ್ನ ಪೂರ್ವಿಕರಂತೆ ಬ್ರಿಟಿಷ್ ಧೋರಣೆಯೊಂದನ್ನೇ ಸಮರ್ಥಿಸುವ ಕೆಲಸವಲ್ಲ; ತನ್ನನ್ನು ತಾನೇ ಸಮರ್ಥಿಸಿಕೊಳ್ಳುವ ವಿಶೇಷ ಕಾರ್ಯವೂ ಬಿದ್ದಿದೆ! ಹಿಂದೀಯರ ಮೇಲೂ, ತಮ್ಮ ನಿತ್ಯಾಪತ್ತುಗಳೊಡನೆ ಪದ್ಧತಿವಿರುದ್ಧವಾದ ಹೊಸ ವಿರತ್ತೊಂದೂ ಬಿದ್ದಿದೆ–ವಿಜಾತೀಯ ವ್ಯಕ್ತಿತ್ವದ ಹೊರೆ! ಭಾರತೀಯ ಭಾವನೆಯನ್ನ ಲಕ್ಷ್ಯಿಸುವ ಬ್ರಿಟಿಷ್ ಧೋರಣೆಯು ಮಿ. ಚರ್ಚಿಲ್ಲರಿಂದ ಈ ರೀತಿ ಗತಿ ಮಟ್ಟಿರುವಾಗ–ತಮ್ಮನ್ನು ತಾವಾಧರಿಸಿಕೊಳ್ಳುವ ಬುದ್ಧಿಯು ಭಾರತೀಯರಲ್ಲಿ ದೃಢಗೊಳ್ಳುವದು ಮಾತ್ರ ಇನ್ನೂ ಬಾಕಿ ಬಿದ್ದಿದೆ!

ತಾಯಿ ಸತ್ತರೆ ಅಳದವರು ಅತ್ತೆ ಸತ್ತರೆ ಅಳುವದಿದೆ; ಭಾರತದ ಪಾರತಂತ್ರ್ಯಕ್ಕೆ ನೋಯದವರು ಪರಕೀಯರ ಪರಾಭವಕ್ಕೆ ನೋಯುತ್ತಾರೆ.

ಂಂ ಂಂ

ಕುರಿಯ ಕಂಠಕ್ಕೆ ಹಾರಬಿದ್ದರೆ ಅದನ್ನು ಬಲಿಕೊಡುವ ಸನ್ನಾಹ ನಡೆದಿದೆ ಎಂದು ತಿಳಿಯಬೇಕು; ಭಾರತೀಯರ ಶ್ಲಾಘನೆ ಕೇಳಿ ಬಂದರೂ ಹಾಗೇನೇ.

ಂಂ ಂಂ

ಜರ್ಮನಿ ಮತ್ತು ರಶ್ಯಾ ಇವೆರಡರ ಸಂಬಂಧವೂ ಇರುವ ದೇಶ ಟರ್ಕಿ; ಮೋಸ ಮತ್ತು ಮೋಹ ಇವೆರಡು ಗುಣವೂ ಇರುವ ಮನುಷ್ಯ ಠಕ್ಕ.

ಂಂ ಂಂ

ಜರ್ಮನರ ಬೋಂಬನ್ನು ತಡಕೊಂಡುದರಿಂದ ಲಂಡನಿನವರಿಗೆ ಕೀರ್ತಿ–ಭಾರತೀಯರ ಬೊಬ್ಬೆಯನ್ನು ಸಹಿಸಿಕೊಂಡು ಅಚಲರಿದ್ದುದರಿಂದ ಅಪಕೀರ್ತಿ. ಕಾಡುವವರಿದಿರು ಕಠಿಣವಿರಬೇಕು ಹೊರತು ಬೇಡುವವರೊಡನೆಲ್ಲ.

ಂಂ ಂಂ

ಸತ್ಕೀರ್ತಿಯೊಂದು ಗುಡ್ಡ. ಅದನ್ನು ಏರುವವರಲ್ಲಿರುವ ಪ್ರಯಾಸ ಇಳಿಯುವಾಗ ಇಲ್ಲ.

ಂಂ ಂಂ ಂಂ

ಆಕಾಶದ ಸೂರ್ಯನು ಪ್ರತಿ ಬಿಂಬಿಸುವದು ತಿಳಿನೀರ ಕೊಳದಲ್ಲಿ ಮಾತ್ರ. ಸ್ವರ್ಗೀಯಾನಂದ ತೋರುವದು ನಿರ್ಮಲ ಮನಸ್ಸಿನಲ್ಲಿ ಮಾತ್ರ.

ಬಂಟರ ಯುವಕ ಸಂಘ ಮುಂಬಯಿ

ಹಲವು ಉತ್ಸಾಹೀ ಹಾಗೂ ವಿದ್ಯಾವಂತ ತರುಣರಿಂದ, ಸಮಾಜದೇಳಿಗೆಯ ಉಚ್ಚ ಧ್ಯೇಯ ಸಾಧನೆಗಾಗಿ ೧೯೪೦ರಲ್ಲಿ ಸ್ಥಾಪಿಸಲ್ಪಟ್ಟ ಈ ಸಂಘವು ಈ ವರ್ಷದಿಂದ ಒಂದು ವಾಚನಾಲಯವನ್ನೂ ಒಂದು ಪುಸ್ತಕ ಭಂಡಾರವನ್ನೂ ನಡೆಸಿಕೊಂಡು ಬರುತ್ತಿರುವುದು ಅಭಿನಂದನೀಯವಾಗಿದೆ. ಇತ್ತೀಚೆಗೆ ಅಂದರೆ ತಾ. ೯-೬-೪೩ರಿಂದ ಈ ಸಂಘವು ಕರ್ನಾಟಕ ಫ್ರೀನೈಟ್ ಹೈಸ್ಕೂಲಿನ ಆಡಳಿತವನ್ನು ವಹಿಸಿಕೊಂಡಿರುವುದು ಶ್ಲಾಘನೀಯವಿದೆ. ಕರ್ನಾಟಕ ಫ್ರೀನೈಟ್ ಹೈಸ್ಕೂಲೆಂದರೆ ಮುಂಬಯಿಯಲ್ಲಿ ಕನ್ನಡಿಗರ ಉಪಯೋಗಾರ್ಥವಾಗಿ ಸ್ಥಾಪನೆಯಾದ ವಿದ್ಯಾಸಂಸ್ಥೆಗಳಲ್ಲಿ ಅತಿ ಜನಪ್ರಿಯವಾದುದು, ಹಾಗೂ ಹಿರಿದಾದುದು. ಮುಂಬಯಿಯಂತಹ ಮಹಾನಗರದಲ್ಲಿ ಕನ್ನಡಿಗರಲ್ಲಿ ಧರ್ಮಾರ್ಥವಿದ್ಯಾ ಪ್ರಚಾರಮಾಡುವ ಸಲುವಾಗಿ ಬಂಟರ ಯುವಕ ಸಂಘವು ಈ ಶಾಲೆಯನ್ನು ನಡೆಸುವ ಜವಾಬ್ದಾರಿಗೆ ಹೆಗಲೊಡ್ಡಿದೆ. ವಿದ್ಯಾಸಂಸ್ಥೆಗಳನ್ನು ನಡೆಸುವುದು ಸಾಮಾನ್ಯ ಕೆಲಸವಲ್ಲ. ಅದಕ್ಕೆ ಜನಧನ ಬೆಂಬಲವು ಬೇಕು. ಸಂಘವು ಧನಸಂಗ್ರಹಕ್ಕಾಗಿ ಈಗಾಗಲೇ ಕಾರ್ಯಕ್ರಮವನ್ನು ಕೈಕೊಂಡಿರುವುದು. ಈ ಕುರಿತಾಗಿ ವಿನಂತಿಯೊಂದನ್ನು ನಾವು ಇನ್ನೊಂದೆಡೆ ಪ್ರಕಟಿಸಿದ್ದೇವೆ. ಯುವಕ ಸಂಘವು ಕೈಕೊಂಡಿರುವ ಈ ಘನಕಾರ್ಯಕ್ಕೆ ಕನ್ನಡಿಗರು ಉದಾರಹಸ್ತದಿಂದ ಸಹಾಯಮಾಡುವರೆಂದು ನಂಬುತ್ತೇವೆ.

● ಜರ್ಮನಿಯ ಯುದ್ಧಕಾರ್ಯಾಲಯಗಳ ಮೇಲೂ, ಇಟೆಲಿ ಕೇಂದ್ರಗಳ ಮೇಲೂ ಮಿತ್ರರ ಪ್ರಬಲ ಆಕಾಶ ಧಾಳಿಗಳು ನಡೆಯುತ್ತಲೇ ಇವೆ.

● 'ನಮಗೆ ವಿಜಯ ನಿಶ್ಚಯ. ಆದರೆ ಕೂಡಲೇ ಪೂರ್ವ ಮತ್ತು ಪಶ್ಚಿಮಗಡೆಯಿಂದ ಧಾಳಿಯಾರಂಭವಾದರೇನೇ ಜರ್ಮನಿಯ ಅಪಜಯ ಸಾಧ್ಯ'-ಎಂದು ಸ್ಟಾಲಿನರು ರುಸವೆಲ್ಟರ ಅಭಿನಂದನೆಗೆ ಪ್ರತ್ಯುತ್ತರ ಕಳುಹಿಸಿರುವರು.

● 'ಮಿತ್ರರಾಷ್ಟ್ರೀಯರು ರಶ್ಯಕ್ಕೆ ಸದಾ ಋಣಿಗಳಾಗಿದ್ದಾರೆ' ಎಂದು ಜೇಮ್ಸ್ ಫೋರ್ಡಿನ ಬಿಷೋಪರು ರಶ್ಯವನ್ನು ಎಲ್ಲಾ ಧರ್ಮಗುರುಗಳ ಪರವಾಗಿ ಅಭಿನಂದಿಸಿದ್ದಾರೆ.

○ ರಶ್ಯದಲ್ಲಿ ಯುದ್ಧವಿನ್ನೂ ತೀವ್ರತೆ ಹೊಂದಿಲ್ಲ. ಡೋನೆಟ್ಸ್ ಕ್ಷೇತ್ರದಲ್ಲಿ ನಾಜೀ ಸೇನಾಸಂಗ್ರಹದ ವಾರ್ತೆಯಿದೆ. ಓರೆಲಿನ ಮೇಲೆ ರಶ್ಯನರು ವಿಮಾನ ಧಾಳಿ ನಡೆಸಿದ್ದಾರೆ.

○ ಜೂನ್ ೩೦ಕ್ಕಂತ್ಯವಾಗುವ ವಾರದಲ್ಲಿ ೨೧೧ ಜರ್ಮನಿ ವಿಮಾನಗಳನ್ನು ನಾಶಪಡಿಸಿ ಇನ್ನೆಷ್ಟೋ ಜಖಂಗೊಳಿಸಿರುವೆವೆಂದೂ ತಮಗೆ ೭೪ ವಿಮಾನ ನಷ್ಟವಾಗಿದೆಯೆಂದೂ ರಶ್ಯನರ ಪ್ರಕಟಣೆ.

—— ಸುದ್ದಿ ಸೂಚನೆ ——

○ ರಶ್ಯಾ-ಪೋಲಿಶ್ ಸಂಬಂಧವನ್ನು ಸುಧಾರಿಸಲು ಅಧ್ಯಕ್ಷ ರುಸವೆಲ್ಟರು ಪೋಲೆಂಡಿನ ಮುಖ್ಯಮಂತ್ರಿ ಜನರಲ್ ಸಿಕೋರ್ಸ್ಕಿಯವರಿಗೆ ಗುಪ್ತಪತ್ರ ಬರೆದಿದ್ದಾರೆ.

○ 'ರಶ್ಯವಿಲ್ಲದೆ ನಿಜವಾದ ಯುದ್ಧ ವಿಜಯವೂ ಇಲ್ಲ. ರಶ್ಯವನ್ನು ಬಿಟ್ಟು ನಿಜವಾದ ಶಾಂತಿಸ್ಥಾಪನೆಯೂ ಇಲ್ಲ'-ಎಂದು ರಶ್ಯದಲ್ಲಿ ಅಮೇರಿಕನ್ ರಾಯಭಾರಿಯಾಗಿದ್ದ ಮಿ. ಜೋಸೆಫ್ ಡೇವೀಸರು ಅಮೆರಿಕಾನರಿಗೆಚ್ಚರಿಕೆಯಿತ್ತಿದ್ದಾರೆ.

● ಅಮೇರಿಕದ ಸಂಘವಿರೋಧ ಮಸೂದೆಗೆ ಸಹಿ ಹಾಕಲು ನಿರಾಕರಣೆ ಸೂಚಿಸಿದ ಅಧ್ಯಕ್ಷ ರುಸವೆಲ್ಟರ ಸೂಚನೆಯನ್ನು ಅಮೇರಿಕದ ಕಾಂಗ್ರೆಸು ಪುನಾ ಮಂಜೂರು ಮಾಡಿಕೊಂಡುದರಿಂದ ಅಧ್ಯಕ್ಷ ರುಸವೆಲ್ಟರು ಕೂಲಿಗಾರ ಸಂಘಗಳ ಪ್ರಶಂಸೆ ಪಡೆದಿದ್ದಾರೆ.

● ಕೇವಲ ರಬ್ಬರಿನಿಂದ ಹಡಗಗಳನ್ನು ತಯಾರಿಸುವ ಯೋಜನೆಯಲ್ಲಿ ಜಾಪಾನರೀಗ ಯಶಸ್ವಿಯಾಗಿದ್ದಾರೆ. ಸದ್ಯದಲ್ಲೇ ಜಾಪಾನರ ರಬ್ಬರ್ ಹಡಗಗಳು ಬಹುಸಂಖ್ಯೆಯಲ್ಲಿ ಹೊರಬೀಳುವುವು.

○ ಎಲ್ಲಾ ಹಿಂದೀ ಸಂಸ್ಥೆಗಳನ್ನೊಳಗೊಂಡ ದಕ್ಷಿಣಾಫ್ರಿಕ ಕಾಂಗ್ರೆಸು, ನಾಗರಿಕ ರಕ್ಷಣಾ ಠರಾವೊಂದನ್ನು ಅಲ್ಲಿಯ 'ಪೆಗ್ಗಿಂಗ್ ಬಿಲ್'ಗೆ ವಿರೋಧವಾಗಿ ತಯಾರಿಸಿರುವದು. ಇದು ಮಾನ್ಯವಾಗದಿದ್ದರೆ, ಭಾರತ, ಅಮೇರಿಕಾ, ಇಂಗ್ಲಾಂಡುಗಳಲ್ಲಿ ಸಂಚರಿಸಿ ಜನಮತವೊಲಿಸುವ ಡೆಪ್ಯುಟೇಶನ್ ಹೊರಡಲಿದೆ.

● ಜಾಪಾನಿನ ಮೇಲೆ ಅಮೇರಿಕಾನರ ಆಕಾಶ ಧಾಳಿ ಬಲಗೊಳ್ಳಬಹುದೆಂಬ ಭೀತಿಯಿಂದ ಅಲ್ಲೆಲ್ಲಾ ಬಲವಾದ ಧಾಳಿ ನಿರೋಧಕ ಹಂಚಿಕೆ ಕೈಕೊಳ್ಳಲಾಗಿದೆ.

● ಉತ್ತರಾಫ್ರಿಕೆಯ ಜನರಲ್ ಜಿರಾಡರು ಯುದ್ಧ ಕಾರ್ಯಾಲೋಚನೆಗಾಗಿ ಅಮೇರಿಕಕ್ಕೆ ಹೋಗಲಿದ್ದಾರೆ.

○ ಜಿರಾಡ್–ಗೋಲೆ ಜಗಳವು ಮಿತ್ರರಾಷ್ಟ್ರೀಯರ ಮಧ್ಯಸ್ಥಿಕೆಯಿಂದ ಈಗ ಇತ್ತಂಡದವರಿಗೂ ಸಮಾಧಾನಕರವಾಗಿ ತೀರ್ಮಾನಗೊಂಡಿದೆ.

● ಭಾರತದ ಸೈನಿಕರಿಗೆ ಸಂದೇಶವೀಯುತ್ತಾ ಭಾವೀ ವೈಸರಾಯಿ ಸರ್ ವೇವೆಲರು ಹಿಂದುಸ್ಥಾನವೀಗ ಅತ್ಯಂತ ಬಲಶಾಲಿಯಾಗಿದೆ' ಎಂದಿದ್ದಾರೆ.

○ ಭೂಮಧ್ಯ ಸಮುದ್ರ, ಉತ್ತರಾಫ್ರಿಕ ಮತ್ತು ಸಮೀಪ ಪೂರ್ವದ ಮಿತ್ರರಾಷ್ಟ್ರೀಯ ಧಾಳಿ ಸಿದ್ಧತೆಯ ಕೊನೆಯ ಅಂಶವೂ ಮುಗಿದಿದೆಯೆಂದೂ ದಕ್ಷಿಣ ಯುರೋಪಿನ ಧಾಳಿಯಾರಂಭವಾಗುವದೊಂದೇ ಬಾಕಿಯೆಂದೂ ರೋಮ್ ಪತ್ರಿಕೆಗಳು ಸಾರುತ್ತಿವೆ.

○ ಮಿತ್ರಸೇನೆಗಳಿಳಿದಾಗ ಅವುಗಳಿಗೆ ಸಹಾಯ ಮಾಡಲು ಫ್ರೆಂಚ್ ಸ್ವಾತಂತ್ರ್ಯ ಗುಪ್ತ ಚಳವಳಗಾರರ ಸಂಘವು ಯೋಜನೆ ತಯಾರಿಸಿದೆ.

ಹಿಂದೀ ಸರಕಾರದ ಸಪ್ಲೈ ಡಿಪಾರ್ಟ್‌ಮೆಂಟಿನ ಅಸಿಸ್ಟಾಂಟ್ ಡೈರೆಕ್ಟರ್ ಶ್ರೀ. ಲಂಬೋದರ ಝುಟ್ಷಿಯವರು ಲೋಹ ವ್ಯಾಪಾರಿಯೊಬ್ಬನಿಂದ ೧೫ ಸಾವಿರ ರೂ. ಲಂಚ ಪಡೆದುದನ್ನು ಉಪಾಯದಿಂದ ಪತ್ತೆ ಹಚ್ಚಿ ಖಟ್ಲೆ ಹಾಕಲಾಗಿದೆ.

○ 'ತನ್ನ ಸ್ವಂತ ನೆಲದಂತೆಯೇ ದಕ್ಷಿಣ ಯುರೋಪಿನ ಯಾವ ವಿಭಾಗದಲ್ಲಾದರೂ ಇಟೆಲಿಯು ಧಾಳಿಯನ್ನಿದಿರಿಸಲು ಸಿದ್ಧವಿದೆ. ರೋಮ್ ನಗರ ಕೂಡಾ ವಿಮಾನ ಧಾಳಿಗನುವಾಗಿ ನಿಂತಿದೆ' ಎಂದು ಇಟೆಲಿ ಪತ್ರಿಕೆಗಳು ಘರ್ಜಿಸುತ್ತಿವೆ.

○ ಲಂಡನ್ ಮತ್ತು ಬೊಂಬಾಯಿಗಳ ನಡುವೆ 'ಫೋಟೋ-ಟೆಲಿಗ್ರಾಫ್ ಸರ್ವಿಸ್' ಹಿಂದೀ ಚರಿತ್ರೆಯಲ್ಲೇ ಇದೀಗ ಮೊದಲ ಬಾರಿ ಈ ವಾರದಲ್ಲಿ ತೆರೆಯಲ್ಪಡಲಿದೆ. ಇದರಿಂದ ಕೂಡಲೇ ಯುದ್ಧ ಚಿತ್ರಗಳನ್ನು ಪಡೆಯಲನುಕೂಲ.

○ ಮುಸಲನಿಯವರು ಇಟೆಲಿಯ ಗುಪ್ತಸ್ಥಳವೊಂದರಲ್ಲಿ ಕಠಿಣ ಕಾಹಿಲೆಯಿಂದ ಹಾಸಿಗೆ ಹಿಡಿದಿರುವರೆಂದೂ ಗೊಂದಲ ಭೀತಿಯಿಂದ ಫೇಸಿಸ್ಟರೀ ವಾರ್ತೆಯನ್ನು ಅಡಗಿಸಿಟ್ಟಿರುವರೆಂದೂ ಹಂಗೇರಿಯಿಂದ ಸುದ್ದಿ.

● ಐಯರ್ಲೆಂಡಿನಲ್ಲಿ ನಡೆದ ಹೊಸ ಚುನಾವಣೆಯಿಂದ ಡಿ ವೆಲರಾ ಪಕ್ಷದ ಸಂಖ್ಯೆಯು ಮೊದಲಿಗಿಂತ ತಗ್ಗಿದೆ.

○ ಸ್ಪೈನಿನಲ್ಲಿ ಬ್ರಿಟಿಷ ರಾಯಭಾರಿಯಾಗಿರುವ ತನ್ನನ್ನು ಸ್ಥಾನಚ್ಯುತಿಗೊಳಿಸಲು ನಾಜಿಗಳು ಸಾಧ್ಯವಿದ್ದುದನ್ನೆಲ್ಲಾ ಮಾಡಿದ್ದಾರೆಂದು ಸರ್. ಸಾಮುವೇಲ್ ಹೋರರಂದಿದ್ದಾರೆ.

○ ಆಸ್ಟ್ರಿಯಾದಲ್ಲಿ ಯುದ್ಧಕಾರ್ಖಾನೆಗಳನ್ನು ಸ್ಥಾಪಿಸಲು ಹಿಟ್ಲರರು ಒಂದು ಮಿಲಿಯ ಕೈದಿಗಳನ್ನು ಕೆಲಸಕ್ಕಾಗಿ ಸಾಗಿಸುತ್ತಿದ್ದಾರಂತೆ.

● ಆಹಾರಾಭಾವವು ಅಸಹನೀಯವಾದ ವಾರ್ತೆ ದೇಶದ ಸರ್ವ ಪ್ರಾಂತ್ಯಗಳಿಂದಲೂ ಕೇಳಿಬರುತ್ತಿದೆ. ಆಹಾರ ಧಾನ್ಯಗಳನ್ನು ಭಾರತಕ್ಕಾಮದುಮಾಡಿಕೊಳ್ಳಬೇಕೆಂದು ಶ್ರೀ. ಎನ್. ಆರ್. ಸರ್ಕಾರರ ವಿನಂತಿಯಿದೆ.

NOTICE

In the Court of the District Judge of S. Kanara.

O. P. No. 38 of 43.

N. M. Adyanthaya, Liquidator - The Canara Forests and Farms Ltd., Udipi. —Petitioner

and

Alex Peter Fernandes & others. —Respondents

To

1 Alex Peter Fernandes, 2 Peter Sequeira, 3 Santappa Laxmana Pal, 4 Mathew Aloyisius Sequeira, 5 Joseph D'Souza, 6 Andrew Finian Sequeira, 7 Madhava Keshava Kamath, 8 Arita Louis, 9 F. X. Monteiro, 10 Peter B. D' Silva, 11 Fredrick D'Noronha, 12 Leo D. Alemeida, 13 Leo P. D'Souza, 14 Anthony Bonaveatur D'Lema, 15 Lawrence Remald Rebello, 16 Bonaventure D'Souza, 17 Alphons Karasta, 18 Anthony Louis, 19 Mark Rodrigues, 20 Simon Peter Rodrigues, 22 Albert John Baptist D'Souza, 23 John Fernandes, 27 J. M. Louis, 28 Vincent Minezes, 29 Thomas D Souza, 30 Albert D'Souza 31 James Francis Dias, 32 Victor Peter Fernandes.

All are residing in Bombay Town.

Sirs,

Please take notice that the abovenamed petitioner has filed the above petition under Sections 156, 167, 203, 215 and 216 of the Indian Companies Act praying that for reasons set out in the petition, the court may be pleased to pass against the abovenamed Respondents, pay orders or contribution orders for the amounts shown in the schedule to the petition and that the 27th day of July 1943 has been fixed for hearing of the said petition. You may appear either in person or by pleader on the said date before the abovementioned Court and file your objections if any, failing which, the petition will be heard and decided in your absence.

K. S. HEGDE,
B. A., (Hons) B. L.
Advocate for Petr.

Mangalore 26—6—1943

ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O. P. No. 44/1943.

1. ಮೋಣಿ ಹೆಂಗ್ಸು. ಕಾಳಮ್ಮನ ಮಗಳು- ಮಂಗಳೂರು ತಾಲ್ಲೂಕು ಬಪ್ಪನಾಡ ಗ್ರಾಮದಲ್ಲಿರುವವಳು — ಅರ್ಜಿದಾರಳು

2—1) ಕೋರವಳು ಅರ್ಜಿದಾರಳ ಮಗಳು 2) ಕೀಷಿ, ಮೃತ ಪುಲ್ಲ ಮೆಂಡನನ ವಿಧವೆ. 3) ದುಗ್ಗಮ್ಮ- 4) ವಾಸು. 5) ಶಂಕರ- ಪುಲ್ಲ ಮೆಂಡನನ ಪ್ರಾಪ್ತರ ಮಕ್ಕಳು, ಗಾರ್ಡಿಯನ ತಾಯಿ 2ನೇ ಎದ್ರಿಳು- ಮಂಗಳೂರು ತಾಲ್ಲೂಕು ಬಪ್ಪನಾಡ ಗ್ರಾಮದಲ್ಲಿರುವವರು — ಎದ್ರಿರು-

ಅರ್ಜಿದಾರಳ ಮಗ 1ನೇ ಯದ್ರಿಳ ಸಹೋದರ, 2ನೇ ಯದ್ರಿಳ ಗಂಡ, 3- 5-ನೇ ಎದ್ರಿರ ತಂದೆ ಮೃತ ಪುಲ್ಲ ಮೆಂಡನ್ ಯೆಂಬವನು The Asian Life Assurance, Co. Ltd, Bombay. ಯೆಂಬ ಕಂಪೆನಿಯಲ್ಲಿ ರೂಪಾ 1000ಕ್ಕೆ Policy No. 12177ನೆಗೆ ಮಾಡಿದ ಇನ್ಶ್ಯೂರೆನ್ಸಿನ ಬಾಬ್ತು ಬರತಕ್ಕ ಹಣವನ್ನು ವಸೂಲು ಮಾಡುವರೆ ಆತನ ಹೆಸರಿಗೆ ವಂಶಾವಳಿ ಸಕ್ಸೆಶನ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರಳು ಬರಕೊಂಡ ಸದ್ರಿ ಅರ್ಜಿಯು ತಾರೀಕು 6-7-1943ಕ್ಕೆ ತನಿಖೆಗೆ ಇಟ್ಟಿರುವದ್ರಿಂದ ಅದರ ಕುರಿತು ಆಕ್ಷೇಪ ಇದ್ದವರು ಸದ್ರಿ ದಿನ ಹಗಲು ಹತ್ತು 10ಘಂಟೆಗೆ ವಕೀಲ್ಮಂಡ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದ್ದಲ್ಲಿ ಸದ್ರಿ ಅರ್ಜಿಯು ಏಕಪಕ್ಷ ತನ್ನಯಿಂದ ತೀರ್ಮಾನ ಮಾಡಲಾದೀತು-

P. Ramachandra Rao.
Pleader for Petitioner

ಕಾರ್ಕಳ.
ತಾರೀಕು 17-6-1943

WANTED GRADUATES.

APPLY FOR TERMS

CANARA BANK LIMITED.

ESTD: 1906.

ತಾ. 1—7—43ರಿಂದ

ಆಧುನಿಕ ಚಿತ್ರಗಳಲ್ಲಿ ಅತಿ ಶ್ರೇಷ್ಠವಾದ, ಜನಕದವರ

ರಾಯ್ ಸಾಹೇಬ್

ಕೌಸಲ್ಯ, ಜಗದೀಶ್, ತ್ರಿಲೋಕ್, ರತ್ನಪ್ರಭಾ, ಗೋಪ್ ಮೊದಲಾದವರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ಬರುವ ಚಿತ್ರಗಳು: ಅಪ್ನಾಘರ್; ಲಕ್ಷ್ಮಿ, ಜಂಗಲ್ ಪ್ರಿನ್ಸೆಸ್, ಸುವರ್ಣ ಮಂದಿರ.

ದಕ್ಷಿಣ ಕನ್ನಡ.

ಮಂಗಳೂರು

ಅಕ್ಕಿಯ ಸಂಕಷ್ಟದ ಕುರಿತಾಗಿ ನಗರಸಭೆಯ ಉಪಾಧ್ಯಕ್ಷರಾದ ಶ್ರೀ| ಕ್ಯಾಪ್ಟನ್ ಲೋಬೋ ಅವರು ಮದ್ರಾಸಿನ ಗವರ್ನರರಿಗೂ ಇತರ ಕೆಲ ಅಧಿಕಾರಿಗಳಿಗೂ ಒಂದು ದೀರ್ಘ ಮನವಿಯನ್ನು ಕಳಹಿಸಿರುವರು. ಅಕ್ಕಿಯ ಅಭಾವವು ಆರಂಭವಾದಂದಿನಿಂದ ಮೊದಲ್ಗೊಂಡು ಪರಿಸ್ಥಿತಿಯು ದಿನ ಹೋದಂತೆ ಹೇಗೆ ವಿಷಮಿಸುತ್ತ ಬಂತೆಂಬುದು ಈ ಮನವಿಯಲ್ಲಿ ವಿವರಿಸಲ್ಪಟ್ಟಿದೆ. ನಿಯಂತ್ರಣವು ಆರಂಭಿಸಲ್ಪಟ್ಟಿತಾದರೂ ಅದು ಯಶಸ್ವಿಯಾಗಲಿಲ್ಲವೆಂದೂ ದೊಡ್ಡ ವ್ಯಾಪಾರಿಗಳ ಮತ್ತು ಜಮೀನ್ದಾರರ ವಿಶ್ವಾಸವನ್ನು ಸರಕಾರವು ಕಳೆದುಕೊಂಡಿತೆಂದೂ ಈಗ ಜನರಿಗುಂಟಾಗಿರುವ ಸಂಕಷ್ಟಗಳು ಅಸ್ವಲ್ಪವಲ್ಲವೆಂದೂ ಶ್ರೀ| ಲೋಬೋ ಅವರು ಮನವಿಯಲ್ಲಿ ಸ್ಪಷ್ಟಪಡಿಸಿದ್ದಾರೆ. 'ಯುದ್ಧಕ್ಕೆ ಮುಂಚಿತವಾಗಿ ಒರಿಸ್ಸಾ-ಮೈಸೂರುಗಳಿಂದ ೧೦ ಲಕ್ಷ ಮುಡಿಗಳಿಗೆ ಮಿಕ್ಕದಷ್ಟು ಅಕ್ಕಿ ಈ ಜಿಲ್ಲೆಗೆ ಬರುತ್ತಿತ್ತು. ಅದಷ್ಟನ್ನು ಬಿಟ್ಟರೆ ಜಿಲ್ಲೆಯಲ್ಲಿ ಅಕ್ಕಿಗೆ ಬರಗಾಲವಿಲ್ಲ. ಅಡಗಿಸಿಡುವುದು, ಲಾಭಕೋರತನ, ಕಳ್ಳ ಸಂತೆಗೊಯ್ಯುವುದು, ಇವುಗಳಿಂದಾಗಿ ಜನರು ಉಪವಾಸ ಬೀಳಬೇಕಾಗಿದೆ. ತಾವು ಮಾರ್ಚಿಯಲ್ಲಿ ಈ ಜಿಲ್ಲೆಯನ್ನು ಸಂದರ್ಶಿಸಿದಾಗ ಅಕ್ಕಿಯ ಸ್ಥಿತಿ ಹೇಗಿತ್ತೋ ಈಗ ಅದು ಅದಕ್ಕಿಂತಲೂ ಕಠಿಣವಾಗಿದೆ. ಮಳೆಗಾಲವು ಕಾಲಿಟ್ಟಿದೆ. ಜನರ ಅವಸ್ಥೆ ಏನಾಗುವುದೆಂದು ತಿಳಿದಿಲ್ಲ. ಈಗ ಬಂದೊದಗಿರುವ ಗಂಡಾಂತರದಿಂದ ಜಿಲ್ಲೆಯ ಜನರನ್ನು ರಕ್ಷಿಸುವ ಭಾರವು ತಮ್ಮ ಮೇಲೆಯೇ ಬಿದ್ದಿದೆ' ಎಂದೂ ಭಿನ್ನವತ್ತಳೆಯು ಹೇಳಿಕೊಳ್ಳುತ್ತದೆ.

ಜಿಲ್ಲಾ ಬೋರ್ಡಿನ ವಿಶೇಷ ಸಭೆಯೊಂದು ಜುಲೈ ತಾ. ೩ರಂದು ಪೂರ್ವಾಹ್ನ ೧೦|| ಘಂಟೆಗೆ ಜರಗಿ ಹೊಸ ಉಪಾಧ್ಯಕ್ಷರ ಚುನಾವಣೆಯಾಗಲಿದೆ.

ಜಿಲ್ಲಾ ಪೀರಿಯಾಡಿಕಲ್ ಪರಿಷತ್ತು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿದಾಗ, ಜಾನುವಾರುಗಳನ್ನು ಹೊರ ಕಳುಹುವ ವಿಚಾರದಲ್ಲಿ ಹೇರಿಸಿರುವ ನಿರ್ಬಂಧವನ್ನು ಹಿಂತೆಗೆಯಬೇಕೆಂದು ಮೈಸೂರು ಸರಕಾರವನ್ನು ಕೇಳಿಕೊಳ್ಳುವ ನಿರ್ಧಾರವಾಯಿತು. ರೈತರು ಹೆಚ್ಚು ಹೆಚ್ಚಾಗಿ ಕೃಷಿಮಾಡುವಂತೆ ಪ್ರೋತ್ಸಾಹಿಸಲು ಬಂಜರು ಪ್ರದೇಶಗಳನ್ನು ಹತ್ತು ವರ್ಷಗಳ ಗೇಣಿಗೆ ಕೊಡುವುದೆಂದಾಯಿತು. 'ಹೆಚ್ಚು ಆಹಾರ ಬೆಳೆಸಿರಿ' ಚಳವಳವನ್ನು ಬಲಪಡಿಸುವುದಕ್ಕಾಗಿ ಒಂದು ಸಮಿತಿಯು ರಚಿಸಲ್ಪಟ್ಟಿತು.

ಬಡವರ ಬಂಧು ಅನಾಥಾಶ್ರಯದಲ್ಲಿ ೨೫ ಮಂದಿ ಅನಾಥ ಮಕ್ಕಳಿಗೆ ಪ್ರವೇಶಕೊಟ್ಟು ಸ್ವಾವಲಂಬಿಗಳಾಗಿ ಮಾಡಲಾಗುತ್ತದೆ ಎಂದು ಸಂಚಾಲಕರು ತಿಳಿಸುತ್ತಾರೆ.

೧೩೮ ಮಂದಿ ರಾಜಕೀಯ ಕೈದಿಗಳು ಈ ಜಿಲ್ಲೆಯಲ್ಲಿ ಈ ತನಕ ಬಂಧಿಸಲ್ಪಟ್ಟಿರುವರು. ಅವರಲ್ಲಿ ನೂರು ೯೦ ಮಂದಿಯು ಬಿಡುಗಡೆಯಾಗಿದೆ.

ಜಿಲ್ಲಾ ದ್ರಾವಿಡ ಬ್ರಾಹ್ಮಣ ಸಂಘಕ್ಕೆ ಡಾ| ಪಿ. ಆನಂದರಾಯರು ವಿದ್ಯಾರ್ಥಿ ವೇತನ ನಿಧಿಗಾಗಿ ರೂ. ೧,೫೦೦ನ್ನು ಕೊಟ್ಟಿರುತ್ತಾರೆ.

ಅನಧಿಕೃತ ಬೆಲ್ಲಸಾಗಿಸೋಣದ ನಿಷೇಧ-ಜಿಲ್ಲಾ ಕಲೆಕ್ಟರರ ಪ್ರಕಟಣೆ

ಮಂಗಳೂರು ಉತ್ತರಕ್ಕೆ ಶಿರೂರು ನಂಬ್ರ 22ನೆ ಕರಾವಳಿ ಮಾರ್ಗ, ನಾಗೋಡಿ ಘಾಟರಸ್ತೆ, ನಾಗೋಡಿ ಚಿನ್ನಟ್ಟಿ ನಾಖಾ ರಸ್ತೆಗಳು, ಕಂಡ್ಲೂರು ಹೊಸಂಗಡಿ ಮಾರ್ಗ, ಕಾರ್ಕಳ ಆಗುಂಬೆ ರಸ್ತೆ, ಮಣಿಮುಂಜರಾಬಾದರಸ್ತೆ, ಮಂಗಳೂರು ಚಾರ್ಮಾಡಿ ರಸ್ತೆ, ಬಿಸ್ಲಿಘಾಟಿ ರಸ್ತೆ, ಮಂಗಳೂರು ಮಡಿಕೇರಿ ಮಾರ್ಗ ಈ ರಾಜರಸ್ತೆಗಳಲ್ಲಿ ಅನಧಿಕೃತ ಬೆಲ್ಲವನ್ನು ಗಾಡಿ ಬಂಡಿ ಮೊದಲಾದ ವಾಹನಗಳಲ್ಲಿ ಪರಜಿಲ್ಲೆಗೆ ಸಾಗಿಸುವುದನ್ನು ನಿಷೇಧಿಸಲಾಗಿದೆಯೆಂದೂ ಈ ರಸ್ತೆಗಳ ವ್ಯವಹಾರ ಕ್ಷೇತ್ರದ ಪೋಲಿಸ್, ಅಬ್ಕಾರಿ ಪೋಲಿಸ್ ಮತ್ತು ಗ್ರಾಮದ ಉದ್ಯೋಗಸ್ಥರಿಗೆ ವಾಹನಗಳನ್ನು ತನಿಖೆ ಮಾಡುವ ಅಧಿಕಾರವನ್ನು ಕೊಡಲಾಗಿದೆಯೆಂದೂ ಮಹಾ ಜನರ ಅವಗಾಹನೆ ಬಗ್ಗೆ ಜಿಲ್ಲಾ ಕಲೆಕ್ಟರರ ಪ್ರಕಟಣೆ ಹೊರಟಿದೆ.

ಉಡುಪಿ.

ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಿಗೆ ಮಾನಪತ್ರ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಾದ ಶ್ರೀ| ಆರೂರು ಲಕ್ಷ್ಮೀನಾರಾಯಣರಾಯರಿಗೆ ಉಡುಪಿಯ ಪಟ್ಟಣಿಗರ ಪರವಾದ ಮಾನ ಪತ್ರವೊಂದನ್ನು ಶ್ರೀ| ಪಿ. ನಾರಾಯಣ ಪ್ರಭುಗಳು ತಾ 27ರಲ್ಲ ಸಂಜೆ ಶ್ರೀ|ರಾಮಕೃಷ್ಣ ಧಿಯೇಟರಿನಲ್ಲಿ ಅರ್ಪಿಸಿದರು. ಈ ಸಮಾರಂಭದ ಅಧ್ಯಕ್ಷತೆಯನ್ನು ವಕೀಲ್ ಶ್ರೀ| ಎಮ್. ವಿಠಲ ಕಾಮತರು ವಹಿಸಿದ್ದರು. ಶ್ರೀ| ಮಾಧವರಾಯ ಸೆಟ್ಟಿ ಬಿ. ಎ. ಎಲ್. ಟಿ ಯವರು ಶ್ರೀರಾಯರ ನಾಯಕತ್ವವನ್ನು ಕೊಂಡಾಡಿ ಭಾಷಣ ವಿತ್ತರು. ಶ್ರೀ ರಾಯರ ಸಹಾನುಭೂತಿ ಪರ ಉತ್ತರ ಅಧ್ಯಕ್ಷರ ವಿಮರ್ಶಾತ್ಮಕ ಭಾಷಣವಾಗಿ ಶ್ರೀ| ಜನಾರ್ದನ ಅಳ್ವೆಯವರ ಧನ್ಯವಾದಾರ್ಪಣೆಯೊಂದಿಗೆ ಸಮಾರಂಭವು ಕೊನೆಗೊಂಡಿತು. ಡಾಕ್ಟರ್ ಕೆ. ಎಲ್. ಐತಾಳರು ಶ್ರೀ ರಾಯರನ್ನು ಗೌರವಿಸುವ ಸಲುವಾಗಿ ಟೀಪಾರ್ಟಿ ಸತ್ಕಾರ ಕೂಟವನ್ನೇರ್ಪಡಿಸಿದ್ದರು.

ಸಕ್ಕರೆ, ಚಿಮಣಿ ಎಣ್ಣೆ, ಅಕ್ಕಿ ಇವುಗಳ ಬಗ್ಗೆ ರೇಶನ್ ಕಾರ್ಡುಗಳು ಅಧಿಕಾರಿಗಳಿಂದ ಕೊಡಲಾರಂಭವಾಗಿಯವೆ. ಮಹಾ ಜನರು ಮುಖ್ಯತ ಬಡವರು ಸಂಬಂಧಪಟ್ಟ ಅಧಿಕಾರಿಗಳಿಗೆ ಅರ್ಜಿಗಳನ್ನು ಕೂಡಲೇ ಮಾಡಬೇಕಾಗಿದೆ

ಮೂಲ್ಕಿ ಯೂನಿಯನ್ ಕ್ಲಬ್ಬಿನ ೨೫ನೆಯ ವರ್ಷಂತ್ಯುತ್ಸವವು ದಿವಂಗತ ಬೋಳ ಶಾಮರಾಯರ ಜನ್ಮದಿನೋತ್ಸವವೂ ತಾ. ೧೬ರಂದು ಸಂಜೆ ಶ್ರೀ| ಎಂ. ಎಸ್. ಮಾಧವರಾಯರ ಅಧ್ಯಕ್ಷತೆಯಲ್ಲಿ ಜರಗಿದುವು. ಕ್ಲಬ್ಬಿನ ಉಪಾಧ್ಯಕ್ಷರಾದ ಶ್ರೀ| ಎಂ. ಆರ್. ಮಂಜರು ಹೂಮಾಲೆ ತೊಡಿಸಿ ಅಧ್ಯಕ್ಷರನ್ನು ಸ್ವಾಗತಿಸಿದರು. ಶ್ರೀ| ಬೋಜರಾಯರು ವಾರ್ಷಿಕ ವರದಿಯನ್ನೊಪ್ಪಿಸಿದರು. ಹೊಸ ಆಡಳಿತ ಸಮಿತಿಯ ಆಯ್ಕೆಯು ಅದೇ ದಿನ ನಡೆಯಿತು.

ಚೂರು-ಚೂರು

'ವೇವೆಲರು ಪ್ರಥಮತಃ ಗಾಂಧಿಯವರನ್ನು ಭೇಟಿಮಾಡಿ ಭಾರತ ಸಮಸ್ಯೆಯನ್ನು ಬಿಡಿಸಬೇಕು'—ಭಾವೀ ವೈಸರಾಯರಿಗೆ ಲಂಡನಿನ 'ನ್ಯೂ ಸ್ಟೇಟ್ಸ್‌ಮನ್' ಪತ್ರಿಕೆಯ ಸೂಚನೆ.

ಮುನ್ಸೂಚನೆ! ಕಾಲಿಟ್ಟವರೇ ಕಾರಾಗೃಹ ಹೊಗಬೇಕೆಂದರೆ!

o

'ಗಾಂಧಿಯವರು ಪುನಃ ವೈಸರಾಯರೊಡನೆ ಪತ್ರವ್ಯವಹಾರ ನಡೆಸುತ್ತಿದ್ದಾರೆ, ಅವರು ಮತ್ತೊಮ್ಮೆ ಉಪವಾಸ ಮಾಡಬಹುದು'—'ಹಿತವಾದ' ಪತ್ರಿಕೆಯನ್ನುತ್ತಿದೆ.

ಮಾಡಲಿ! ಗಾಂಧಿಯವರು ಉಪವಾಸ ಮಾಡಿದರೆ ಸರಕಾರಕ್ಕೆ ಉಪಹಾಸ ಮಾಡಲಿಕ್ಕೂ ಗೊತ್ತಿದೆ.

o

'ಸ್ಪೈಯಿನಿನಲ್ಲಿ ರಾಜಸತ್ತೆಯನ್ನು ಜ್ಯಾರಿಗೆ ತರುವ ಪ್ರಯತ್ನ ನಡೆದಿದೆ. ಆದರೆ ಮಾಜೀ ರಾಜ ಪುತ್ರ ಡೋನ್ ಜುವಾನರು ಕಿರೀಟ ಧಾರಣೆಗೊಪ್ಪಲಿಲ್ಲ'—ವಾರ್ತೆ.

ಶ್ಲಾಘನೀಯ! ಸ್ಪೈನಿಗೀಗ ಬೇಕಾದುದು ಮೌನಧಾರಣೆ ಹೊರತು ಮಕುಟ ಧಾರಣೆಯಲ್ಲ.

o

'ತಮ್ಮ ಚಿಕಾಗೊ ಅಥವಾ ಸಾನ್ ಫ್ರಾನ್ಸಿಸ್ಕೋದಲ್ಲಿ ನಮ್ಮ ಪಟ್ಟಣಗಳಲ್ಲಿರುವಂತಹ ಸಂಸ್ಕೃತಿ ಸೂಚಕ ವೈಭವಗಳನ್ನು ನಿರ್ಮಿಸಲು ಸಾಧ್ಯವಿಲ್ಲವೆಂಬುದರಿಂದ ಅಮೇರಿಕಾನರು ಅವುಗಳನ್ನು ಬೋಂಬುಗಳಿಂದ ನಾಶಮಾಡುವ ಹೇಯ ಅಪರಾಧ ಮಾಡುತ್ತಿದ್ದಾರೆ" ಗೋಬೆಲ್ಸನ ದೂರು.

ಜರ್ಮನಿಯಲ್ಲಿರುವಂತಹ ಸಂಸ್ಕೃತಿ ಅಮೇರಿಕಾನರಿಗಿಲ್ಲ; ಆದರೆ ಜರ್ಮನರ ಬೋಂಬುಗಳಂತಹವು ಅಮೇರಿಕಾನರಲ್ಲಿಯೂ ಇವೆ!

o

ಕಾರ್ಕಳ.—ಇಷ್ಟಿಯ ಪಂಡಿತ್ ನಾರಾಯಣರಾಯರ ಶ್ರೀ ದುರ್ಗಾಪ್ರಸಾದ ವೈದ್ಯಶಾಲೆಯು ವಕೀಲ್ ಸೀತಾರಾಮಾಚಾರ್ಯರ ಆಫೀಸಿನ ಬಳಿ ತೇಗ್ಗಾರ ರಸ್ತೆಯ ಪಕ್ಕಕ್ಕೆ ವ್ಯಯ್ಯಲ್ಪಟ್ಟಿದೆ.

'ಚೀನದಲ್ಲೀಗ ಒಬ್ಬ ಜಾಪಾನನಿಗೆ ಮೂವರಂತೆ ಚೀನೀ ಸೈನಿಕರಿದ್ದಾರಾದರೂ ಆಧುನಿಕ ಯುದ್ಧೋಪಕರಣಗಳಿಲ್ಲದೆ ಹೊಡೆಯುವದಕ್ಕೂ ತಡೆಯುವದಕ್ಕೂ ಅವರಿಂದಾಗುವದಿಲ್ಲ'- ಸ್ಥಿತಿ ವಿಮರ್ಶಕರ ನಿವೇದನೆ.

ಆಧುನಿಕ ಯುದ್ಧೋಪಕರಣಗಳ ಪೈಕಿ ಅತಿ ಪ್ರಮುಖ್ಯವಾದ 'ಶ್ಲಾಘನಾಸ್ತ್ರ' ವನ್ನು ಮಿತ್ರರು ಇಷ್ಟೊಂದು ಸರಬರಾಯಿ ಮಾಡಿದುದೂ ಸಾಲದಾಗಲಿಲ್ಲವೆ?

o

'ಹಿಂದೀಯರಲ್ಲಾರೂ ವೈಸರಾಯೀಗಿರಿಗೆ ದೊರೆಯಲಿಲ್ಲವೆ?'- ಕಾಮನ್ಸ್ ಸಭೆಯಲ್ಲಿ ಮಿ ಸೋರೆನ್ಸನರ ಪ್ರಶ್ನೆ. ಅಮೆರಿಯವರ ಉತ್ತರವಿಲ್ಲ.

ಮಿ. ಜಿನ್ನರೊಬ್ಬರಿದ್ದರು- ಆದರೆ ಅವರನ್ನು 'ಬೈಗಳ ಸೇನಾನಿ' ಕೆಲಸದಿಂದ ಬಿಡಿಸಲಾಗಲಿಲ್ಲ-ಅಮೆರಿಯವರ ಪರವಾಗಿ ನಮ್ಮ ಉತ್ತರ.

●

ಕೋರ್ಟು ಅಪಮಾನದ ಆರೋಪ ಬಿದ್ದು 'ಹಿಂದುಸ್ಥಾನ್ ಟೈಮ್ಸ್' ಪತ್ರಿಕೆಗಾಗಿದ್ದ ಜುಲ್ಮಾನೆಯನ್ನು ಪ್ರಿವ್ಹಿ ಕೌನ್ಸಿಲು ರದ್ದು ಪಡಿಸಿ 'ಕೋರ್ಟು ಅಪಮಾನಗಿಲ್ಲ' ಎಂದು ತೀರ್ಮಾನಿಸಿದೆ.

ಈ ತೀರ್ಮಾನದಿಂದ ಕೂಡಾ ಜುಲ್ಮಾನೆ ವಿಧಿಸಿದ ಕೋರ್ಟಿಗಪಮಾನವಾಗಿಲ್ಲ ಎಂದು ಒತ್ತಿ ಹೇಳಬೇಕಾಗಿದೆ.

o

'ಹಿಟ್ಲರು ಈಗೆಲ್ಲಿ?'—ಒಂದು ಅಂಗ್ಲ ಪತ್ರಿಕೆಯ ಪ್ರಶ್ನೆ.

ಚರ್ಚಿಲ್ಲರ ಹೃದಯದಲ್ಲಿ!

—ವಿನೋದಿ

WANTED

A Secondary Grade T. T C. holder for the Modern Higher Ele. School, Udipi, S- K.

Apply to-

The Manager,
Modern Higher Ele. School
UDIPI, South Kanara

BHUVANENDRA PRODUCTS Ltd.,

Head Office and Factory: **Katapadi,** S. Kanara

Depots: Mahratha Galli, Hubli.

"BHUVANENDRA"

Danthadavan Choorna

Economical in use Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ನ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸವುದು.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ವಿಜಯಾ ಸ್ಟೋರ್ಸ್

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

ಮುಖ್ಯ ಕಾರ್ಯಾಲಯ:—ಕೋರ್ಟು ರಸ್ತೆ, ಉಡುಪಿ. ದಕ್ಷಿಣ ಕನ್ನಡ.

ಶಾಖೆಗಳು— ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಕನ್ನಿಗೋಳಿ.

ಮುದ್ದತ್ತು ಠೇವಣಿಗಳು ತಾ. 31-7-1943 ಅಥವಾ ಈ ತಾರೀಕಿನ ಮೊದಲು ವಾಯಿದೆಯಾಗುವುದಾದರೆ ಅಂಥಾ ವಾಯಿದೆಯ ವರೆಗೆ ಸಾಲಿಯಾನ ಶೇಕಡಾ 3ರ ಸಳ ಬಡ್ಡಿಯಲ್ಲಿ 3, 1, 5 ಅಥವಾ 6 ತಿಂಗಳ ವಾಯಿದೆಯಿಂದ ಪ್ರತಿಯೊಂದು ರಾಶಿಯಲ್ಲಿ ಅಂಗೀಕರಿಸಲ್ಪಡುತ್ತವೆ.

ಬೇಂಕಿನ ಪ್ರತಿಯೊಂದು ವಿಧದ ವಹಿವಾಟುಗಳು ನಡೆಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ಮುಖತಾ ಅಥವಾ ಪತ್ರದ್ವಾರಾ ಸಮೀಪದ ಶಾಖೆಯಲ್ಲಿ ದಯವಿಟ್ಟು ವಿಚಾರಿಸಿರಿ

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ,

REGD.

ಕುಳುಕಡ್ಡಿ ಮುದ್ದು ಸಹ ಸವ್ವತ್ರ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತ.

P. M. Kunhi Raman, Manager, Parassini Madappura Temple, P. O. Parassinikkatavu (Via) Pappinisseri.

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ—

ಪರಸಿನಿ ಕಡವು ದೇವಸ್ಥಾನದಿಂದ ಈ ಮೂಲಕ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುಂಞಿರಾಮನ್.
ಮೆನೇಜರ್.

ಶ್ರೀ. ತಾರಾನಾಥ ಭೇಷಜಾಲಯ

ಶಾಸ್ತ್ರೀಯ ಮತ್ತು ಸಿದ್ಧೌಷಧಿಗಳ ಕಾರಾಗಾರ, ಚಿಕ್ಕಮಗಳೂರು.

ನಿರ್ದೇಶಕ:- ಡಾ. **M. L. Shetty,** ಪ್ರೇಮವಿದ್ಯಾಪೀಠದ ಗಾ. ಪ್ರಾಧ್ಯಾಪಕರು.

ಎಲ್ಲಾ ತರದ ಭಸ್ಮ, ಖಲ್ವರಸಾಯನ, ಆಸವಾರಿಷ್ಟ, ಘೃತ, ತೈಲಗಳಿಗಾಗಿ ಕೂಡಲೇ ಬರೆಯಿರಿ.

ಲಕ್ಷಗಟ್ಟಲೆ ರೋಗಿಗಳಲ್ಲಿ ಫಲಕಾರಿಯಾದ ಔಷಧ ಯೋಗಗಳು, ಗುರುಪರಂಪರೆಯ ಅನುಭವದಿಂದ ಬಂದ ನಿರ್ದುಷ್ಟ ಔಷಧೀಕರಣ ವಿಧಾನ.

ಡಾ| **P. M. Alva,**
ಮೆನೇಜರ್.

ಬಾಲ ಸಾಹಿತ್ಯ ಮಂಡಲ, ಲಿಮಿಟೆಡ್.

ದಿವಂಗತ ಶ್ರೀ| ಉಳ್ಳಾಲ ಮಂಗೇಶರಾವ್ ಬಿ. ಎ., ಎಲ್. ಟಿ. ಅವರಿಂದ ರಚಿತವಾದ ನಮ್ಮ "ಹೊಸಗನ್ನಡದ ೧ರಿಂದ ೫ರ ವರೆಗಿನ ರೀಡರು"ಗಳು ಇದೇ ಜೂನಿನ ಪ್ರಥಮ ವಾರದಲ್ಲೇ ಸಿದ್ಧವಾಗುವವು, ಅವುಗಳಿಗೆ ಬೆಲೆ ಮತ್ತು ಅವುಗಳ ಮೇಲಿನ ಕಮಿಷನಿನ ದರಗಳು ಕಾಲಕ್ಕೆ ತಕ್ಕಂತೆ ಹೊಂದಿಸಲ್ಪಟ್ಟು ಆಗಲೇ ಪ್ರಕಟಗೊಳ್ಳುವುವು

Bala Sahitya Mandal, Ltd.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲರ ಸಹಕಾರ ಅಪೇಕ್ಷಿಸುವುದು.

M. R. Punja,
President & Manager

ಯಂ. ಆರ್. ಪೂಂಜ,
ಪ್ರೆಸಿಡೆಂಟ್ ಮತ್ತು ಮೆನೇಜರ್.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸದೊರೆಯ ಬೇಕೋ?

ಸುಖನಿವಾಸಕ್ಕೆ ಬನ್ನಿ!

ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,

ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರವಾಸಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ. : : : : ಮಂಗಳೂರು.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

—ಮಕ್ಕಳನ್ನು ಹಡೆಯುವದು ಸಾಕು.—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಹಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯ:—ಪರವೀಸಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಷ್ಟ ಚಾರ್ಜು ೧೨ಆಣೆ.

ಮಾಲಕರು—ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ—ಕುಂಬಾರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ. ಆರ್. ಎಲ್. ಕವಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ನವಜೀವಾತು ಎಂಬ ಸೂತಿಕಾರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು, ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದಕ**

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt, Mysore.
Certified by the Agent of the Govt of India in Ceylon.

... PUBLISHED BY ... SHETTY AT THE NAVAYUGA PRESS, UDIPI, S. INDIA.

Regd. No. M. 3618.

Ested. 1921 ಸ್ಥಾಪನೆ.

ಹೊಸಕೆರೆ ಚಿದಂಬರಯ್ಯನವ
ರಿಂದ ರಚಿತವಾದ ಗೀತೆಯ
ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು ೪೫೦ ಪುಟಗಳು.
ಬೆಲೆ (ಸಾಂವರ ಪ್ರತಿ) ೦—೮—೦
(ಕೆಲಿಕೋ ಬೈಂಡ್) ೦-೧೨—೦
(ಲೆದರ್ ಬೈಂಡ್) ೧—೪—೦
ಪ್ರತಿಗಳು ಪ್ರಸಿದ್ಧ ವ್ಯಾಪಾರಿಗಳಲ್ಲಿ ಸಿಗುವುದು.
0—10—0 ಸ್ಟಾಂಪು ಕಳಿಸಿದ್ದಲ್ಲಿ ಒಂದು
ಪ್ರತಿಯನ್ನು ಬುಕ್ ಪೋಸ್ಟ್
ಮಾಡಲಾಗುತ್ತೆ.
**ನವಭಾರತ ಪುಸ್ತಕ ಭಂಡಾರ,
ಉಡುಪಿ.**

NAVAYUGA ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೩ ಸಂಚಿಕೆ ೪೫ | FOUNDER Sri. A. B. Shetty, M. L. A. | Vol. 23 No. 45

NAVAYUGA— Kannada Weekly —UDIPI, S. I.

ಉಡುಪಿ ● **29—7—1943** ● ಮಂಗಳೂರು.

ಶ್ರೀಮತಿ ಶಿವರಾಣಿ ದೇವಿಯವರಿಂದ
(ದಿವಂಗತ ಪ್ರೇಮಚಂದರ ಪತ್ನಿ)
ರಚಿತವಾದ ಹಿಂದೀ ಕತೆಗಳ ಕನ್ನಡ
ಭಾಷಾಂತರ

ನಾರೀ ಹೃದಯ

ನಾರೀ ಹೃದಯದ ವಾಸ್ತವಿಕ ಚಿತ್ರ
ವನ್ನು ಚಿತ್ರಿಸುವ ಉತ್ತಮ ಕತೆಗಳ
ಸಂಗ್ರಹ.
ಬೆಲೆ 0—14—0
ಟ. ಖ. 0—2—0 ಪ್ರತ್ಯೇಕ.
ಒಂದು ರೂಪಾಯಿ ಸ್ಟಾಂಪು ಕಳಿಸಿದರೆ ಒಂದು
ಪ್ರತಿಯನ್ನು ಕಳಿಸಲಾಗುವದು.
**ಕಿರಿಯರ ಪ್ರಪಂಚ, ಉಡುಪಿ.
ಅಥವಾ ನವಭಾರತ ಬುಕ್
ಡಿಪೋ, ಉಡುಪಿ.**

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

**The Canara Mutual Assurance Co., Ltd.,
UDIPI. (S India).**

ನೀವೀ ವರೆಗೆ ವಿಮೆಯನ್ನೇ ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.
ಈಗಲೇ ವಿಮೆ ಇಳಿಸಿರಿ

ಏಕೆಂದರೆ:—

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ, ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಮುಖ ಏಜಂಟರು.
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ, ದ. ಕನ್ನಡ.
ಅಥವಾ ಅವರ ಈ ಕೆಳಗಿನ ಯಾವದಾದರೂ ಶಾಖೆಯಲ್ಲಿ ವಿಚಾರಿಸಿರಿ:—
ಮಂಗಳೂರು, ಕಲ್ಲಿಕೋಟೆ, ಸೇಲಂ, ತಿರುವಾಂಕೂರು, ಬೆಂಗಳೂರು ನಗರ ಮತ್ತು ಬೊಂಬಾಯಿ.

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
—ಔಷಧ—
೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಮುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೆಸಿಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೇಸ್.

ಮಾಲೀಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲೀಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.

WANTED GRADUATES.

APPLY FOR TERMS

CANARA BANK LIMITED.

ESTD: 1906.

ಅಖಿಲ ಕರ್ನಾಟಕದ ಹೊಸ ಮಾದರಿಯ ವಾರ ಪತ್ರಿಕೆ:

ಅಂತರಂಗ

ಶ್ರೀ. ಎ. ಎಸ್. ಪಿ. ಅಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್‌ಲಾ., ಎಫ್. ಆರ್. ಎಸ್. ಎಲ್. ಇವರ 'Funny Tales of Ind' ಎಂಬ ಇಂಗ್ಲಿಷ್ ಕಥಾವಳಿಯ ಅನುವಾದವು ಧಾರಾವಹಿಯಾಗಿ ಪ್ರಕಟವಾಗುತ್ತಿದೆ.

ಇದೀಗ ೧೧ನೇ ಸಂಪುಟವು ಆರಂಭವಾಗಿದೆ.

ವಾರ್ಷಿಕ ಚಂದಾ ರೂ.	4	8	0
೬ ತಿಂಗಳಿಗೆ ರೂ.	2	4	0
ಬಿಡಿ ಸಂಚಿಕೆಗೆ	0	1	6

Manager **'Antaranga'** Weekly, Udipi.

ರೋಮಿನ ಮೇಲೆ ಬೋಂಬು!

ಬೋಂಬಿಗೆ ಧಾರ್ಮಿಕ ಕ್ಷೇತ್ರ—ಪಾರ್ಮಿಕ ಕೇಂದ್ರನೆಂಬ ಭೇದವಿಲ್ಲ. ರೋಮಿನ ಮೇಲೂ ಅದು ಬಿತ್ತು. ಹಾಕುವವರು ಹೆದರಿ ಹೆದರಿ ಹಾಕಿದರೂ ಹಾಹಾಕಾರವೆದ್ದಿದೆ! ಕಾರಣ? ಧಾರ್ಮಿಕ ಕ್ಷೇತ್ರಕ್ಕೆ ಪೆಟ್ಟುಬಿತ್ತು, ದೇವರು ಮುನಿದಾನು, ಎಂಬ ಭಯ. ಆದರೆ ಇವೇ ಬೋಂಬಿನುರಿ ಮಿಲಿಯಾವಧಿ ಬಡವರ ಹೊಟ್ಟೆಯಲ್ಲಿ ಧಗಧಗಿಸುತ್ತಿರುವಾಗ 'ಅಯ್ಯೋ' ಎನ್ನುವವರಾರಿದ್ದಾರೆ?

ಕೆಥೋಲಿಕ್ ಜಗತ್ತಿನ ಧಾರ್ಮಿಕ ಕೇಂದ್ರ-ಅಖಿಲ ಪ್ರಪಂಚದ ಧಾರ್ಮಿಕ ವಿಭಾಗವೊಂದರ ಅತಿ ಪವಿತ್ರನೆಲೆ-ರೋಮ್ ನಗರದ ಮೇಲೆ ಇದೇ ತಾ. 19ರಲ್ಲಿ ಮಿತ್ರವಿಮಾನಗಳು ಆವರಲ್ಲೂ ಅಮೇರಿಕನ್ ವಿಮಾನಗಳು ಎರಡೂವರೆ ಘಂಟೆ ಧಾಳಿಮಾಡಿ ಬಂದವು. ಈ ಘಟನೆಯ ಮಿಲಿಟರಿ ಪ್ರಾಮುಖ್ಯತೆ ಪಡೆಯುವ ಬದಲಿಗೆ ಧಾರ್ಮಿಕ ಪ್ರತಿಕ್ರಿಯೆ ಎಬ್ಬಿಸಿವೆ; ಮುಸಲ್ಮಿಯರಿಗೆ ತಲೆನೋಲೆಯುಬ್ಬಿಸುವ ಬದಲಿಗೆ ಕೆಥೋಲಿಕ್ ಪ್ರಪಂಚಕ್ಕೇನೇ ವೇದನಾತ್ಮಕವಾಗಿ ಪರಿಣಮಿಸಿವೆ. ಅಲ್ಲಿಯ ವಿಮಾನ ಕಾರ್ಖಾನೆಗಳನ್ನು-ರೈಲ್ವೇ ಲೈನುಗಳನ್ನು ಮಾತ್ರವೇ ಆ ಬೋಂಬುಗಳು ಸುಟ್ಟವಲ್ಲ; ಜಗತ್ತಿನಲ್ಲೆಲ್ಲಾ ಹರಡಿರುವ ಒಂದು ಧಾರ್ಮಿಕ ಪಂಗಡದವರ ಹೃದಯಗಳಿಗೂ ಪೆಟ್ಟಾಗಿದೆಯೇನೋ ಎಂಬಂತೆ ಅವ್ಯಕ್ತ ವೇದನೆಯೊಂದು ಗೋಚರಿಸುತ್ತಿದೆ.

ಪೋಪ್ ಗುರುಗಳ ಸಂತಾಪ.

ಈ ಸಂಬಂಧವಾಗಿ ಕೆಥೋಲಿಕರ ಜಗದ್ಗುರು ಪೋಪರು ರೋಮಿನ ವಿಕಾರ್—ಜನರಲರಿಗೆ ಬರೆದ ಈ ಕೆಳಗಿನ ಪತ್ರವು ಕೆಥೋಲಿಕ್ ಹೃದಯಕ್ಕೇನೇ ಬರೆಯಲ್ಪಟ್ಟ ವೇದನೆಯನ್ನೀಯಬಹುದು. "ಈ ಘನ ಪಟ್ಟಣದ ಆರ್ಚ್ ಬಿಷೋಪರಾಗಿ, ನಮ್ಮ ಅತಿ ಪ್ರೀತಿಯ ರೋಮ್ ನಗರವನ್ನು ಪ್ರಲಯ ಹಾಗೂ ಆಕಾಶಧಾಳಿಯ ಯಮಯಾತನೆಯಿಂದ ದೂರವಿರಿಸುವಂತೆ ನಾವು ನಮ್ಮಿಂದ ಸಾಧ್ಯವಿದ್ದುದನ್ನೆಲ್ಲಾ ಮಾಡಿದೆವು. ರೋಮಿನ ಮಧ್ಯ ಸ್ಥಳದಲ್ಲಿ -ಆದ್ದರಿಂದ ಆಕಾಶ ಧಾಳಿಯ ಅಪಾಯಕ್ಕೆದಿರಾಗಿ-ಸ್ವತಂತ್ರ ತಟಸ್ಥ ಸಂಸ್ಥಾನವಾದ ವ್ಯಾಟಿಕಾನ್ ನಗರವಿದೆ. ಅದರ ಗರ್ಭದಲ್ಲೇ ಇಡೀ ಕೆಥೋಲಿಕ್ ಪ್ರಪಂಚಕ್ಕೆ ಪವಿತ್ರವಾದ ಅತ್ಯಮೂಲ್ಯ ಭಂಡಾರಗಳಿವೆ. ನಾವು ಹಲವು ಬಾರಿ ಈ ಸಂಗತಿಗಳನ್ನೆಲ್ಲಾ ಸ್ಪಷ್ಟ ಪಡಿಸಿದ್ದೆವು. ಹಾಗೂ ಕ್ರೈಸ್ತನಾಗರೀಕತೆಯ ಹೆಸರಿನಿಂದ ರೋಮ್ ನಗರದ ಸುರಕ್ಷಿತತೆಗಾಗಿ ಕೇಳಿಕೊಂಡಿದ್ದೆವು. ನಾವು ಹೊಂದಿರುವ ಧಾರ್ಮಿಕಾಧಿಕಾರ, ಹಾಗೂ ರಾಷ್ಟ್ರೀಯತ್ವ ಅಥವಾ ಧರ್ಮಿಕತ್ವದ ಭೇದವಿಲ್ಲದೆ ಎಲ್ಲರ ಕಡೆಗೂ ನಾವು ತೋರಿಸಿರುವ ನಿಷ್ಪಕ್ಷಪಾತತೆಯಿಂದಾಗಿ ಯುದ್ಧ ಪ್ರವೃತ್ತರಾದ ಇತ್ತಂಡದವರೂ ರೋಮ್ ರಕ್ಷಣೆಯ ನಮ್ಮ ಹೇಳಿಕೆಯನ್ನು ಮನ್ನಿಸುವರೆಂದು ನಾವು ಆಶಿಸುವಂತಾಗಿದ್ದಿತು. ಹಾ! ನಮ್ಮ ಆಶೆಯಿಂದು ಮಣ್ಣುಗೂಡಿತು. ರೋಮನರ ಬಲುದೊಡ್ಡ ಬಂಧಾಗಾರವಾದ 'ಸಾನ್ ಲೋರೆನ್ಸೋ'ದ ಹೆಚ್ಚಿನ ಭಾಗವು ಧ್ವಂಸಗೊಳಿಸಲ್ಪಟ್ಟಿತು. ಸಾಧ್ಯವಿದ್ದ ಮುಂಜಾಗ್ರತೆಯನ್ನೆಲ್ಲಾ ವಹಿಸಿದರೂ ಕೂಡಾ ರೋಮಿನ ಪವಿತ್ರ ನೆಲದ ಘನಕಟ್ಟಡಗಳ ನಾಶವನ್ನು ತಪ್ಪಿಸುವದು ಬಹುಶೀಕವಾಗಿ ಅಸಾಧ್ಯವೆಂಬ ವೇದನಾತ್ಮಕ ಅನುಭವವು ಮತ್ತೊಮ್ಮೆ ನಮಗಾಗುವಂತಾಯಿತು"

ಜಗತ್ತಿನ ಪ್ರತಿಕ್ರಿಯೆ.

ಪೋಪ್ ಗುರುಕ್ಷೇತ್ರವಿರುವ ರೋಮ್ ನಗರದತ್ತ ಮುಖಮಾಡಿ ತಲೆ, ಎದೆ ಮುಟ್ಟಿಕೊಳ್ಳುವ ಕೆಥೋಲಿಕರು ಸರ್ವದೇಶಗಳಲ್ಲಿದ್ದಾರೆ ಅಂತಹ ಪವಿತ್ರ ವ್ಯಾಟಿಕಾನ್ ನಗರಕ್ಕೆ ಅಗ್ನಿ ಸ್ಪರ್ಶವೆಂಬ ಊಹನೆಯೂ ಅಸಹನೀಯವಾಗುವವರು ಎಷ್ಟೋ ಮಂದಿ ಇರಬಹುದು. ರೋಮ್ ಧಾಳಿಯ ಕುರಿತು ಲಂಡನಿನ ಕಥೋಲಿಕ್ ಧಾರ್ಮಿಕಾಧಿಕಾರಿಗಳ ಅಭಿಪ್ರಾಯವೇನೆಂಬುದು ಈ ತನಕ ಪ್ರಕಟವಾಗಿಲ್ಲ; ಅಲ್ಲಿಯ ಕೆಥೋಲಿಕ್ ಹೆರಾಲ್ಡ್ ಪತ್ರಿಕೆಯ ಸಂಪಾದಕರು ಮಿಲಿಟರಿ ದೃಷ್ಟಿಯಿಂದ ರೋಮ್ ಧಾಳಿಯ ನ್ಯಾಯವನ್ನೊಪ್ಪುತ್ತಾರಾದರೂ ಇದರಿಂದೇಳುವ ಧಾರ್ಮಿಕ ನೋವು, ವಿರೋಧಿಗಳಿಗೆ ಪ್ರಚಾರಾನುಕೂಲತೆಯೊಡನೆ ಯುದ್ಧಲಾಭವನ್ನು ತುಲನೆಮಾಡಿ 'ಇದು ಮೂರ್ಖಧೋರಣೆ' ಎಂದು ಟೀಕಿಸಿದ್ದಾರೆ. ಪೋಪ್ ಗುರುಗಳ ವ್ಯಸನದೊಡನೆ ಇಡೀ ಪ್ರಪಂಚದ ಕೆಥೋಲಿಕರು ಸಹಭಾಗಿಗಳಾಗುವದು ಸ್ವಾಭಾವಿಕ. ಇದನ್ನು ಮಿತ್ರ ರಾಷ್ಟ್ರೀಯರು ಮೊದಲೇ ಬಲ್ಲರು. ಆದುದರಿಂದಲೇ ಅವರು ರೋಮ್ ಧಾಳಿಯಲ್ಲಿ, ಕಣ್ಣಿಗೆ ಶಸ್ತ್ರಕ್ರಿಯೆ ನಡಿಸುವ ಡಾಕ್ಟರನ ಮುಂಜಾಗ್ರತೆಯನ್ನೇ ವಹಿಸಿದ್ದರು ಪ್ರತಿಯೊಬ್ಬ ವೈಮಾನಿಕನ ವಶದಲ್ಲಿ ಪೋಪ್ ಕ್ಷೇತ್ರವನ್ನು ಸ್ಪಷ್ಟವಾಗಿ ಗುರುತುಮಾಡಿ 'ಎಂದಿಗೂ ಇದಿಷ್ಟು ಸ್ಥಳಕ್ಕೆ ಹಾನಿಮಾಡತಕ್ಕದಲ್ಲ' ಎಂಬ ಸೂಚನೆಯೊಡನೆ ರೋಮ್ ನಗರದ ನಕಾಶೆಯನ್ನು ಕೊಡಲಾಗಿತ್ತು. ಬೋಂಬು ಬೀಳುವ ಮೊದಲು ನಗರದ ಮೇಲೆಲ್ಲಾ ಮುಂದಿನ ಅನಾಹುತದ ಸೂಚನೆ ಕೊಡುವ ಕರಪತ್ರಗಳನ್ನು ಹಾಕಲಾಗಿತ್ತು. ಆದರೇನು? ಮಿತ್ರರು ಪೋಪ್ ನಗರದ ಪಾವಿತ್ರ್ಯವನ್ನೊಪ್ಪಿಕೊಂಡರೂ ಅವರ ಹೃದಯ ರಹಿತಬೋಂಬುಗಳದಕ್ಕೊಪ್ಪಿಗೆ ಕೊಡಲಿಲ್ಲ.' ಮುಸಲನಿಯು ಹಿಟ್ಲರರೊಡನೆ ಗುಪ್ತ ಸಂಭಾಷಣೆಗಾಗಿ ಇಟೆಲಿಯ ಇನ್ನೊಂದು ನಗರಕ್ಕೆ ಹೋಗಿದ್ದ; ಅವನು ಹಿಂತಿರುಗಿ ರೋಮ್ ಪ್ರವೇಶಿಸುವ ಮೊದಲೇ ಬೋಂಬುಗಳು ರೋಮ್ ನಗರವನ್ನು-ಪವಿತ್ರ ಪೋಪ್ ಗುರುಕ್ಷೇತ್ರವನ್ನು ಕೂಡಾ ಪ್ರವೇಶಿಸಿದ್ದುವು. ಗೋಬೆಲ್ಸನಿಗೆ ಇದರಿಂದಪ್ರಚಾರಾನುಕೂಲತೆ ದೊರೆತಿದೆ. ಪೋಪರು ಇಂಗ್ಲಾಂಡು ಅಮೇರಿಕಗಳಿಗೆ ನಿಷೇಧ ಸೂಚಿಸಿದ್ದಾರೆಂದು ಜರ್ಮನ್ ರೇಡಿಯೋ ಹೇಳಿದೆ.

ರುಸುವೆಲ್ಟರ ಹೇಳಿಕೆ.

"ರೋಮನ್ನು 'ಬಯಲು ನಗರ (open city) ವಾಗಿ ಮಾಡಿಸುವಂತೆ ನಾವು—ಮಿತ್ರರ—ಒಂದು ವರ್ಷಕ್ಕೂ ಮಿಕ್ಕಿ ಪ್ರಯತ್ನಿಸಿದೆವು. ಆದರೆ ಜರ್ಮನರು ಮತ್ತು ಇಟೆಲಿಯನರು ರೋಮಿನ ವಿನಾಯತಿಯನ್ನು ಪ್ರತಿಬಂಧಿಸಿದರು. ಅದನ್ನಿನ್ನಾದರೂ 'ಬಹಿರಂಗನಗರ' ವೆಂದು ಜಾಹೀರು ಮಾಡಬಹುದು. ನಮ್ಮ ಉದ್ದೇಶ ಸಿಸಿಲಿಯಲ್ಲಿರುವ ಮಿತ್ರ ಸೇನೆಗಳ ಪ್ರಾಣರಕ್ಷಣೆಯೊಂದೆ; ಅದು ಪ್ರತೀಕಾರವಲ್ಲ.-ಯುದ್ಧಾವಶ್ಯಕತೆ"-ಎಂದು ವಿಮರ್ಶಕರಿಗೆಲ್ಲಾ ಅಧ್ಯಕ್ಷ ರುಸುವೆಲ್ಟರ ಉತ್ತರ. "ಜರ್ಮನರು ಇಟೆಲಿಯನರ ಸಹಕಾರದಿಂದ 4000ಕ್ಕೂ ಮಿಕ್ಕಿ ಬ್ರಿಟಿಷ್ ಇಗರ್ಜಿಗಳನ್ನು ಧ್ವಂಸ ಮಾಡಿದ್ದಾರೆ. 'ಫೇಸಿಸ್ಟ್ ರಾಜ್ಯಭಾರವನ್ನು ಕಿತ್ತೊಗೆಯಿರಿ. ಇಲ್ಲವೇ ಪರಿಣಾಮವನ್ನನುಭವಿಸಿರಿ'-ಎಂದು ನಾನು ಇಟೆಲಿಯನ್ನರಿಗೆ ಮೊದಲೇ ಎಚ್ಚರಿಕೊಟ್ಟಿಲ್ಲವೇ? ರೋಮ್ ನಗರವು ಯುದ್ಧಸಾಮಗ್ರಿಗಳುತ್ಪತ್ತಿ, ಸೈನ್ಯಾಯುಧಗಳ ಸರಬರಾಯಿಯ ಕೇಂದ್ರವಾಗಿತ್ತು. ನಮ್ಮ ಮುಂದೆ ತೀರಾ ಭಿನ್ನ ಹಾಗೂ ಸ್ಪಷ್ಟವಾದ ಎರಡು ಸಮಸ್ಯೆಗಳಿದ್ದುವು-ಒಂದು ಇಡೀ ರಾಷ್ಟ್ರರಕ್ಷಣೆಯ ಸಮಸ್ಯೆ; ಮತ್ತೊಂದು ಮಿಲಿಟರಿ ಉದ್ದೇಶಕ್ಕಾಗಿ ಪವಿತ್ರ ನಗರವೊಂದರ ಮೇಲೆ ಧಾಳಿಮಾಡುವ ಪ್ರಶ್ನೆ"-ಎಂದು ಅಮೇರಿಕಾಧ್ಯಕ್ಷರು ನಿಶ್ಶಂಕೆಯಿಂದ ಆಡಿದ್ದಾರೆ. ಅರ್ಥಾತ್ ಪೋಪ್ ಗುರುಗಳ ಸಂತಾಪದಿಂದಾಗಿ ಮಿತ್ರ ರಾಷ್ಟ್ರಾಧಿಕಾರಿಗಳು ಗಾಬರಿಗೊಂಡಿಲ್ಲ; 'ನಾವು ತಪ್ಪಿಬಿದ್ದೆವೆ?' ಎಂಬ ವಿಚಾರಕ್ಕೊಳಗಾಗಿಲ್ಲ. ಇನ್ನೂ ಮೇಲಿಂದ ಮೇಲೆ ರೋಮ್ ಧಾಳಿ ನಡೆಯಬಹುದು. ಇಂಗ್ಲಾಂಡಿನ ಚರ್ಚುಗಳನ್ನು ವಿಕಟಾನಂದ ಪೂರ್ವಕ ಹಿಟ್ಲರ್ ಧ್ವಂಸಗೊಳಿಸಿದ್ದ—ಮಿತ್ರರಿಗಾ ಅಧಿಕಾರವಿಲ್ಲವೇನು?

ಶುಚಿ!! **ಸೆಂಟ್ರಲ್ ಕೆಫೆ** ರುಚಿ!!

ಶ್ರೀನಿವಾಸ ಬಿಲ್ಡಿಂಗ್ಸ್, ಹೆಡ್ ಪೋಸ್ಟಾಫೀಸ್ ಸರ್ಕಲ್, ಶಿವಮೊಗ್ಗ.
ಪ್ರಯಾಣೀಕರಿಗೆ ಉಳಿದುಕೊಳ್ಳಲು ಸ್ಥಳಾನುಕೂಲ ಏರ್ಪಡಿಸಿರುತ್ತೆ.
ಸಕಾಲದಲ್ಲಿ ಉತ್ತಮಪಾಟ ಊಟ, ಕಾಫಿ ಮತ್ತು ಹಸನಾದ ತುಪ್ಪದಲ್ಲಿ ತಯಾರಿಸಿದ ತಿಂಡಿ ದೊರೆಯುತ್ತೆ.
ಈ ಸ್ಥಳವು ರೈಲ್ವೆಸ್ಟೇಷನ್, ಬಸ್‌ಸ್ಟ್ಯಾಂಡ್, ಕೋರ್ಟುಗಳಿಗೆ ಮಧ್ಯ ಸ್ಥಳದಲ್ಲಿದೆ.

ಎಸ್. ರಾಮದಾಸ್, ಪ್ರೊಪ್ರೈಟರ್.

The Vijaya Bank, Limited

WANTED.

Applications are invited for the posts of Accountants to serve in any of the Offices of the Bank, so as to reach the Head Office, on or before 31-7-1943.

1. The Candidates should have studied **up to S. S. L. C.** or its equivalent. Preference will be given to those with higher qualifications or some practical Banking experience and know Type-writing and Jewel Appraising.

2. The selected candidates must be prepared to undergo a period of probation and furnish the necessary securities as per rules of the Bank.

Further particulars can be had from the Head Office of the Bank, at Mangalore.

Mangalore, 5—7—43

B. Mahabala Shetty,
Ag. Secretary.

Notice.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

R. I. A. 413/1943.
(In O. S. 331/1942)

[illegible] — ಅರ್ಜಿದಾರರು.
[illegible] — ಎದುರು.

[illegible] (P. O. Uppinangadi) [illegible]

3-8-1943ಕ್ಕೆ [illegible]

K. Venkataramana Gowda

Puttur. 20-7-43. Advocate for Peter.

CHAMPAE'S
SNOW & CASTREX
AGENTS
SADANANDA STORES-UDIPI

The Canara Banking Corporation Limited.

(Incorporated in British India—Liability of Members limited.)

ESTD: 1906.

Head Office: **UDIPI**, S. Kanara.

Paid Up Capital as on 31-5-'43 Rs. 6,50,060/-

Reserves „ „ Rs. 3,84,788/-

DEPOSITS exceed Rs. 50 lakhs.

For your Banking requirements come to us and we will assist you. We undertake all kinds of Banking business.

ಉಡುಪಿ, ಗುರುವಾರ, ೨೯-೭-೧೯೪೩

ಮುಸಲಿನಿಯ ಪತನ.

ಇಟಲಿಯ ಸರ್ವಾಧಿಕಾರಿ ಮುಸಲನಿಯರು ಅಧಿಕಾರ ತ್ಯಾಗಮಾಡಿದರು; ಅವರ ಸ್ಥಾನಕ್ಕೆ ಮಾರ್ಶಲ್ ಬೊಡೋಗ್ಲಿಯೋ ಬಂದರು ಎಂಬ ವಾರ್ತೆ ಮಿಂಚು ಸುಳಿದಂತೆ ಈಗ ತಾನೇ ಬಂದಿದೆ. ಕಾರಣವನ್ನು ಊಹಿಸಬೇಕಲ್ಲದೆ ಕೇಳಿ ತಿಳಿಯಲಾಗಲಿಲ್ಲ. ಚರಿತ್ರಾರ್ಹ ಘಟನೆಯೊಂದು ನಡೆದು ಹೋಯಿತು; ಈ ಯುದ್ಧದ ಮಹಾದ್ಭುತಗಳಲ್ಲೊಂದು ಸಾಧಿಸಲ್ಪಟ್ಟಿತು. ಮಿತ್ರರು ನಾಶಮಾಡಿದ ವಿರೋಧೀ ಯುದ್ಧ ಕಾರ್ಖಾನೆಗಳ ಪೈಕಿ ಮುಸಲನಿಯ ದಂಡ ಧ್ವಂಸವು ಎಲ್ಲಕ್ಕಿಂತ ದೊಡ್ಡದು. ಫ್ರಾನ್ಸ್ ಪತನವಾದಾಗ ಹಿಟ್ಲರನು ಪಟ್ಟಿಪ್ಪೇ ಹಿಗ್ಗಳಿಕೆಯನ್ನು ಇಂದು ಚರ್ಚಿಲ್ ರುಸುವೆಲ್ಟರನುಭವಿಸಿದರೆ ಲೋಕ ದೂರುವಂತಿಲ್ಲ.

ಮುಸಲನಿಯ ಮಹತ್ವಾಕಾಂಕ್ಷೆಯೇ ಫೇಸಿಸ್ಟ್ ತತ್ವದ ಉಗಮಸ್ಥಾನ; ಮುಸಲನಿಯೇ ಫೇಸಿಸ್ಟ್ ಪಂಥದ ಗುರು. ಇಂಥವನ ಶಾಸನ್ಯಾಸವು ಅಕ್ಷರಾಷ್ಟ್ರಗಳ ದೌರ್ಬಲ್ಯದ ದ್ಯೋತಕ— ಅವುಗಳ ಭಾವೀ ಭವಣೆಯ ದುಶ್ಶಕುನ. ಹಿಟ್ಲರರ ಪೈಶಾಚ್ಯತೆಯ ಚಕ್ರನಿಂದು ಕಣ್ಣ ಮುಂದೆ ಬರುತ್ತಿದೆ. ಬಲಗೈ ಮುರಿದುಕೊಂಡ ಭಟನಾಗಿ ಯುದ್ಧ ರಥವೇಳವಲ್ಲಿಯೇ ಜತೆತಪ್ಪಿ ಹೋದ ಒಂಟಿಯೆತ್ತಾಗಿ ಹಿಟ್ಲರರನ್ನಿನ್ನು ಬ್ರಿಟಿಷ್ ವ್ಯಂಗ್ಯ ಚಿತ್ರಕಾರರು ಚಿತ್ರಿಸಿದರೆ ತಪ್ಪಾಗದು! 'ಫೇಸಿಸ್ಟ್ ಅಧಿಕಾರವನ್ನು ಕಿತ್ತೊಗೆಯಿರಿ. ಆ ಮೇಲೆ ನಿಮಗೆ ಶಾಂತಿ ದಾನಮಾಡುವೆವು.'—ಎಂದು ಇಟಲಿ ಜನತೆಗೆ ಚರ್ಚಿಲ್ ರುಸವೆಲ್ಟರು ವಾಗ್ದಾನವಿತ್ತಿದ್ದರು. ಅವರ ಶರ್ತವಿಂದಾದರೂ ಅಂಗೀಕರಿಸಲ್ಪಟ್ಟಿಲ್ಲ. ಫೇಸಿಸ್ಟ್ ಅಧಿಕಾರ ತೊಲಗಿಲ್ಲ— ಅಧಿಕಾರಿ ಬಿಟ್ಟು ಹೋಗಿದ್ದಾನೆ. ಇನ್ನೂ ಕೆಲಕಾಲ ಇಟಲಿಯಲ್ಲಿ ಫೇಸಿಸ್ಟ್ ರಾಜ್ಯಭಾರ ನಡೆಯಬಹುದು. ಫೇಸಿಸ್ಟ್ ಚರಿತ್ರಲೇಖಕರು ಪೂರ್ಣವಿರಾಮಕೊಟ್ಟು ಲೇಖನಿ ಕೆಳಗಿಡುವಂತಹ ಸಮಾಪ್ತಿ ಇದಲ್ಲವೇನೋ! ಆದರೆ ಮುಂದಿನದು ಇಟಲಿಯ ಫೇಸಿಸ್ಟ್ ರಾಜ್ಯಭಾರದ ಕಬಂಧೋಪಾಖ್ಯಾನ-ರುಂಡವುದರಿಂದ ಮೇಲಿನ ಮುಂಡದ ಕ್ಷಣಿಕ ಹಾರಾಟ!' ಮಿತ್ರರ ಹೊಡೆತ ಹುಸಿಯಾಗುವ ಕಾಲವೆಂದೋ ಕಳೆದು, ಅದರ ಬಿಸಿಯು ದೂರ ದೂರಕ್ಕೆ ನಾಟುವ ಸುಕಾಲ ಬಂದಿದೆ ಎಂಬುದರ ಕುಗ್ಗುರುತಿದು. ಬುಡಹಿಡಿದಲುಗಿಸಿ ತುದಿಯ ಹಣ್ಣನ್ನು ದುರಿಸುವ ವಿದ್ಯೆ ಮಿತ್ರಸೇನೆಗಳಿಗೂ ಗೊತ್ತು ಎಂಬುದಿಂದಿಗೆ ಖಚಿತವಾಯಿತು.

ಸಿಸಿಲಿ ಆಕ್ರಮಣದ ಕೆಲವೇ ಕಾಲಕ್ಕೆ ಮೊದಲು 'ವಿರೋಧಿಗಳು ಕಾಲೂರಿದಾಗಲೇ ಬುದ್ಧಿ ಕಲಿಸಿ ಕಳುಹಿಸುವೆವು' ಎಂಬ ಮುಸಲನಿಯ ಗಂಭೀರ ಘರ್ಜನೆಯನ್ನು ಕೇಳಿದ್ದೆವು. ಮೊನ್ನೆತಾನೇ ಇಟಲಿ ನಗರವೊಂದರಲ್ಲಿ ಹಿಟ್ಲರರೊಡನೆ ಗೂಢಾಲೋಚನೆ ನಡಿಸಿದ ಮುಸಲನಿವಾರ್ತೆ ಕೇಳಿದೆವು. ಇವುಗಳ ಬೆನ್ನಲ್ಲೇ ಆಕಸ್ಮಿಕವಾಗಿ ಕೇಳಿ ಬಂದುದು ಮುಸಲನಿಯ ಕೈಯಿಂದ ಅಧಿಕಾರ ದಂಡ ಜಾರಿಬಿದ್ದ ಸದ್ದು! ಇದರ ಗುಟ್ಟೇನಿರಬಹುದು? ಇಟಲಿಯ ಹೆಬ್ಬಾಗಿಲಲ್ಲೇ ಕಟ್ಟಿಸಿಲ್ಲಿಸಿದ ಅಭೇದ್ಯ ಕೋಟೆ ಎಂದು ಹೆಸರಾದ ಸಿಸಿಲಿಯ ಮುಕ್ಕಾಲಂಶವು ಆಕ್ರಮಣ ನಡೆದ ಹದಿನೈದೇ ದಿನಗಳೊಳಗೆ ಕೈಬಿಟ್ಟಿತು. ಅಲ್ಲಿಯ ಪ್ರತಿಭಟನೆಯ ದೌರ್ಬಲ್ಯವನ್ನು ಕಂಡು ಮಿತ್ರ ಸೇನೆಗಳೇ ಆಶ್ಚರ್ಯ ಪಡುವಂತಾಯಿತು. ಪ್ರಾಯಶಃ ಸಿಸಿಲಿ ಮತ್ತು ಇಟಲಿಯ ರಕ್ಷಣೆಗಾಗಿ ಮುಸಲನಿಯರು ಹಿಟ್ಲರರಿಂದ ಹೆಚ್ಚಿನ ಸೇನೆ, ಆಯುಧ,ಮುಖ್ಯವಾಗಿ ವಿಮಾನಗಳ ಸಹಾಯವನ್ನು ಯಾಚಿಸಿರಬೇಕು. ರಷ್ಯಾ ರಣರಂಗದ ಬಿಗುವಿನಿಂದಾಗಿ ಹಿಟ್ಲರರು ಆ ಸಹಾಯ ಕಳುಹಿಸಲು ಅಸಮರ್ಥರಾಗಿರಬೇಕು. ಈ ಅಸಮರ್ಥತೆಯ ಜತೆಯಲ್ಲಿ ಅವರು ಅಸಡ್ಡೆಯನ್ನೂ ಪ್ರದರ್ಶಿಸಿರಬೇಕು. ಕಾರಣ: ಇಟಲಿ ನುಗ್ಗಿದವರು ಅಲ್ಲಿಂದ ಜರ್ಮನಿ ನುಗ್ಗುವರೆಂಬ ಭಯವಿಲ್ಲ. ಅಂದಮೇಲೆ ತಾನು ರಷ್ಯದಲ್ಲಿ ಶಕ್ತಿಕ್ಷಯ ಹೊಂದಿದಂತೆ; ಮಿತ್ರರು ಇಟಲಿಯಲ್ಲಿ ಕೆಲವು ತಿಂಗಳು ಸವೆದು ಬಡವಾದರೇನೇ ಮುಂದಿನ ಹೋರಾಟಕ್ಕನುಕೂಲ ಎಂಬ ಭಾವನೆ ಹಿಟ್ಲರರದಾಗಿರಬೇಕು. "ಸಿಸಿಲಿಯ ನಂತರ ಇಟಲಿಯಾಕ್ರಮಿಸುವದೆಂದರೆ ಜರ್ಮನ್ ಸೈಕನಾಂಡಿಗನುಕೂಲವಾಗುವಂತೆ ಯುದ್ಧ ನಡೆಸುವದೆಂದೇ ಅರ್ಥ" ಎಂದು ಬ್ರಿಟಿಷ್ ವಿಮಾನ ದಳದ ಇನ್ಸ್‌ಪೆಕ್ಟರ್ ಜನರಲ್ ಸರ್. ಫಿಲಿಪ್ ಜೋಬರ್ಟರೇ ಅಂದಿದ್ದಾರೆ. ತನ್ನ ಪಾಡನ್ನು ವಿವರಿಸಿ, ಸಹಾಯ ಯಾಚಿಸಲು ಹಿಟ್ಲರರನ್ನು ತರಿಸಿ ಸಂಧಾನಿಸಿದ ಮುಸಲನಿಯರು ಮೇಲಿನ ಕಾರಣಗಳಿಂದಾಗಿ ಹಿಟ್ಲರರಿಂದ ಪೂರ್ತಿ ನಿರಾಶೆಗೊಂಡಿರಬೇಕು. ಇಂತಹ ಪರಿಸ್ಥಿಯಲ್ಲಿ ಇಟಲಿಯ ಪತನ ನಿಶ್ಚಯವೆಂದು ಭಾವಿಸಿದ ಮುಸಲನಿಯರು ಆ ಮೊದಲೇ ಕೈತೊಳೆದುಕೊಂಡು ದೂರವಾಗಿರಬೇಕು. ಅಥವಾ ಹಿಟ್ಲರ್-ಮುಸಲನಿಯರು ಒಮ್ಮತದಿಂದಲೇ ಈ ನಿರ್ಧಾರಕ್ಕೆ ಬಂದು, ಭಾವೀ ವಿಜಯಕ್ಕಾಗಿ ಇಟಲಿಯ ಬಲಿದಾನವನ್ನು ನಿರ್ಧರಿಸಿ, ಮಿತ್ರ ಸೇನೆಗಳನ್ನು ಆವಷ್ಟು ಹಣ್ಣು ಮಾಡುವ ಏಕೋದ್ದೇಶದಿಂದ ಮಾರ್ಶಲ್ ಬೊಡೊಗ್ಲಿಯೋರವರನ್ನು ಪಟ್ಟಕ್ಕೇರಿಸಿರಬೇಕು.

ಹೇಗಿದ್ದರೂ ಇದು ಸೋಲಿನಿದಿಂದ ರೋಧ. ಈ ಚರಿತ್ರಾರ್ಹ ವಿಜಯ ಪಡೆದ ಮಿತ್ರರನ್ನು ಅಭಿನಂದಿಸುತ್ತೇವೆ.

ದುರ್ಬೀನು

ಕೊಳೆತಾಗಿದವನನ್ನು ನೋಡಿ ತಿಳಿಯಬಹುದು; ಸೂತಕ ತಾಗಿದವನನ್ನು ವಿಚಾರಿಸಿ ತಿಳಿಯಬೇಕು. ಹಣದರಿದ್ರನೆಂಬುದನ್ನು ಕಂಡೊಡನೆ ತಿಳಿಯುವಿರಿ; ಗುಣದರಿದ್ರನೆಂಬುದನ್ನು ಪರಿಚಯದಿಂದ ಅರಿಯಬೇಕು.

oo oo oo

ಹಾಲಿಗೆ ನೀರು ಬೆರತ ಮಾತ್ರಕ್ಕೆ ಬಣ್ಣ ಬದಲಾಗುವದಿಲ್ಲ; ಆದರೆ ತೆಳುವಾಗುತ್ತದೆ. ಅಲ್ಪರ ಸಂಗದಿಂದ ಆನುಕೂಲತೆಕೆಡದಿರಬಹುದು; ಆದರೆ ಲಘುತ್ವ ಬರುತ್ತದೆ.

oo oo oo

ಕೆಸರಾದ ನೆಲದಲ್ಲಿ ಪಂಥ ಕಟ್ಟಿ ಓಡಿದವ ಬಿದ್ದಾನು; ಹೆಸರಾದವನ ಸಮ್ಮುಖದಲ್ಲಿ ಪಂಥಪಾಡಿದವ ಬಿದ್ದಾನು.

oo oo oo

ಮಣ್ಣು ಹಿಡಿದ ಲೋಹವನ್ನು ತಿಕ್ಕಿದರಾಯಿತು; ಮಣ್ಣೊಳಗಡಗಿರುವ ಲೋಹವನ್ನು ಅಗೆದು ಶುದ್ಧಗೊಳಿಸಬೇಕು. ಅಧಮರಿಗಾಶ್ರಯವಿತ್ತವನನ್ನು ಸುಲಭದಲ್ಲಿ ಶುದ್ಧಿಗೊಳಿಸಬಹುದು; ಅಧಮರ ಆಶ್ರಯದಲ್ಲಿರುವವನ ಅಭ್ಯುದಯ ಕಷ್ಟ.

oo oo oo

ಸಾಬೂನು ತಿಕ್ಕಿದರೆ ಕೊಳೆಯೆದ್ದೀತು. ಚರ್ಮವೇಳಲಾರದು. ಚತುರೋಕ್ತಿಯಿಂದ ಚರ್ಚಿಸಿದರೆ ಅಜ್ಞಾನ ತೊಲಗೀತು- ಮನನೋಯಲಾರದು.

oo oo oo

ಬೆನ್ನಿಗೆ ತಪ್ಪಿದರೆ ಮಗು ಘಾಲಗುತ್ತದೆ; ಕೆನ್ನಗೆ ತಟ್ಟಿದರೆ ಮದೋನ್ಮತ್ತ ಮಹಾನವಾಗುತ್ತಾನೆ.

oo oo oo

ಬಾಯಿ ನಾರುವವನಿಗೆ ಗುಟ್ಟು ಬೇಡ; ಭಯವಿರುವವನಿಗೆ ಸಿಟ್ಟು ಬೇಡ.

oo oo oo

ಕೂದಲು ಬಾಚಿದ್ದರೆ ಮದುಮಗನಾಜೋಕಿರಬೇಕೆಂದಿಲ್ಲ; ಮಾತು ಸಿಹಿಯಿದ್ದರೆ ಮನಸ್ಸೂ ಸಿಹಿಯಿರಬೇಕೆಂದಿಲ್ಲ.

oo oo oo

ಹಲ್ಲು ನೋಯುತ್ತಾದಾದರೆ ತಲೆ ತಾನಾಗಿ ಸಿಡಿಯುತ್ತದೆ; ಆದರೆ ತಲೆ ಸಿಡಿಯುವಾಗಲೆಲ್ಲಾ ಹಲ್ಲು ನೋಯುವದಿಲ್ಲ. ಅಧಮನ ಆಪತ್ತನ್ನಾದರೂ ಉತ್ತಮನಾದವನು ತನ್ನದೆಂದೇ ಭಾವಿಸುತ್ತಾನೆ. ಆದರೆ ಉತ್ತಮನು ಆಪತ್ತಿಗೊಳಗಾದಾಗ ಅಧಮನು ಸಹಭಾಗಿಯಾಗಲಾರ.

oo oo oo

ನಡೆಯುವದು ಸಹಜ; ನರ್ತನ ವಿಶೇಷ. ಆಡುವದು ಸಹಜ; ಹಾಡುವದು ವಿಶೇಷ.

ಬಲ್ಲಿರಾ?

ಈಜಿಪ್ತಿನಲ್ಲಿರುವ ಅನಾರೋಗ್ಯದ ಹಾಗೂ ಘಾಯಗೊಂಡ ಸೈನಿಕರಿಗೆ ಭಾರತದಿಂದ ಮಾಸಿಕವಾಗಿ ಸಾಮಾನು ರವಾನೆಗಳಾಗುತ್ತಿವೆ. ಇತ್ತೀಚಿಗೆ ಒಂದುಬಾರಿ 50000 ಬೀಡಿಗಳನ್ನು ಕಳುಹಲಾಗಿತ್ತು.

o

ಈ ಯುದ್ಧದ ಮೊದಲನೇ ಮೂರು ವರುಷದಲ್ಲಿ ಬ್ರಿಟಿಷ್ ಸಾಮ್ರಾಜ್ಯದೊಳಗಿನವರಿಗಾದ ಜುಮ್ಲಾ ಜನ ಹಾನಿ 514,993. ಆ ಪೈಕಿ ಸತ್ತವರು 92089 ಕಾಣೆಯಾದವರು 226,719. ಘಾಯಗೊಂಡವರು 8೮,294. ಯುದ್ಧ ಕೈದಿಗಳಾದವರು 107,891.

o

ಜಾಪಾನು ಯುದ್ಧಕ್ಕಿಳಿದಂದಿನಿಂದ, ಜಾಪಾನೀ ಧಾಳಿಯಿಂದ ಹಿಂದುಸ್ಥಾನದಲ್ಲಾದ ಒಟ್ಟು ನಾಗರಿಕ ಜನಹಾನಿ 1694. ಸತ್ತವರು 816; ಘಾಯಗೊಂಡವರು 878.

o

1942ನೇ ಅಂತ್ಯದವರೆಗೆ ಜಾಪಾನಿನಲ್ಲಿ ಯುದ್ಧಕೈದಿಗಳಾಗಿರುವವರಿಗೆ ಮತ್ತು ಜಾಪಾನೀ ಆಕ್ರಮಿತ ಸ್ಥಳಗಳಲ್ಲಿರುವವರಿಗೆ ಒಟ್ಟಿಗೆ 238600 ಪತ್ರಗಳನ್ನು ಕಳುಹಿಕೊಡಲಾಗಿದೆ.

o

ಬ್ರಿಟನಿನ ಪೋಸ್ಟಾಫೀಸಿನಲ್ಲಿ ಹಣ ಡಿಪೋಸಿಟ್ ಇಟ್ಟವರ ಸಂಖ್ಯೆಯೀಗ 16.500.000. ಅವರಿಟ್ಟಿರುವ ಹಣ 1.000 000.000 ಪೌಂಡುಗಳು. ಇದರಿಂದ ಪ್ರತಿ ಮೂವರಲ್ಲೊಬ್ಬನಿಗೆ ಪೋಸ್ಟಾಫೀಸ್ ಡಿಪೋಸಿಟ್ ಇದ್ದಂತಾಯಿತು.

o

ಇಂಗ್ಲಾಂಡಿನ ಎರಡನೇ ಅತಿದೊಡ್ಡ ಪಟ್ಟಣವಾದ ಬರ್ಮಿಂಗ್ಹಾಮಿನ ಪುನರ್ರಚನೆ ಮತ್ತು ದುರಸ್ತಿಗಾಗಿ 94.250.000 ಪೌಂಡುಗಳು ಬೇಕಾಗಬಹುದೆಂದು ಅಲ್ಲಿಯ ನಗರ ಸಭೆಯವರು ಅಂದಾಜು ಕಟ್ಟಿದ್ದಾರೆ.

o

ಯುದ್ಧ ಕಾರ್ಖಾನೆಗಳಿಗೆ ಕೆಲಸಗಾರರನ್ನು ಸಾಗಿಸುವದಕ್ಕಾಗಿ ಇಂಗ್ಲಾಂಡಿನಲ್ಲೀಗ ವಾರಂಪ್ರತಿ 7000 ಹೆಚ್ಚಿಗೆ ರೈಲ್ವೇ ಟ್ರೈನುಗಳೋಡುತ್ತವೆ. ರೈಲ್ವೆಯ ವಿವಿಧ ವಿಭಾಗಗಳ ಕೆಲಸಗಳಿಗೆ ಪುರುಷರ ಸ್ಥಾನಗಳಲ್ಲಿ 85000 ಸ್ತ್ರೀ ಕೆಲಸಗಾರರು ಬಂದಿದ್ದಾರೆ.

ನಾಟಕ ಪ್ರದರ್ಶನ- ಕಟಪಾಡಿಯ ಬ್ರಹ್ಮ ಶ್ರೀ ಗುರು ನಾರಾಯಣ ಸ್ವಾಮಿ ಸೇವಾ ಸಮಿತಿಯವರು ಕಟ್ಟಿಸುತ್ತಿರುವ ದೇವಸ್ಥಾನದ ಸಹಾಯಾರ್ಥವಾಗಿ, ಶ್ರೀ ಕೆ. ರಂಗನವರ ಕಾರ್ಯದರ್ಶಿತ್ವದಲ್ಲಿ ಉದ್ಯಾವರದ ಕೆಲವು ಉತ್ಸಾಹೀ ತರುಣರು ಇದೇ 25ರಲ್ಲಿ ಉದ್ಯಾವರ ಕೆಥೋಲಿಕ್ ಶಾಲೆಯಲ್ಲೂ ತಾ. 27ರಲ್ಲಿ ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲೂ 'ಸತ್ಯ ಹರಿಶ್ಚಂದ್ರ' ನಾಟಕವನ್ನು ಅಭಿನಯಿಸಿದರು. ಜನಪ್ರೋತ್ಸಾಹವು ತೃಪ್ತಿಕರವಿತ್ತು.

ತಿದ್ದುಪಡಿ:

ಕಳೆದ ಸಂಚಿಕೆಯಲ್ಲಿ ೩ನೇ ಪುಟದಲ್ಲಿ ಪ್ರಕಟವಾದ ಶ್ರೀ ಸಪ್ಪು ಆನಂದ ರಾಯರ ಪುತ್ತೂರು ಡಿ. ಮು. ಕೋರ್ಟಿನ ನೋಟೀಸಿನಲ್ಲಿ ನಂಬ್ರ R. E. P. 212/1934 ಎಂದು ತಪ್ಪಾಗಿ ಪ್ರಕಟವಾಗಿದೆ. ಅದನ್ನು R. E. P. 212/1943 ಎಂದು ಸರಿಪಡಿಸಿ ಓದಬೇಕಾಗಿದೆ.

ಸಂ. ನ.

ಇಟೆಲೀ ಸ್ಫೋಟ!

ಹಲ್ಲಿಲ್ಲದ ಹಾವು-ಅಧಿಕಾರ ರಹಿತ ಮುಸಲನಿ.

ಇದೇ ತಾ 25ರಲ್ಲಿ ಸೀನರ್ ಮುಸಲನಿಯ ರಾಜೀನಾಮೆಯನ್ನಂಗೀಕರಿಸಿ, ಅವರ ಸ್ಥಾನದಲ್ಲಿ ಮಾರ್ಶಲ್ ಬೊಡೋಗ್ಲಿಯೋರವರನ್ನು ಪ್ರಮುಖಾಧಿಕಾರಿ ಮುಖ್ಯ ಮಂತ್ರಿ ಹಾಗೂ ಸ್ಟೇಟ್ ಸೆಕ್ರಿಟರಿಯಾಗಿ ನೇಮಿಸಿ, ಇಟಲಿ ರಾಜಾ ವಿಕ್ಟರ್ ಇಮಾನ್ಯುವೇಲರು, 'ಇಟಲಿಯೊನರೆಲ್ಲರೂ ಮಾತೃಭೂಮಿಯ ಪವಿತ್ರ ನೆಲದ ರಕ್ಷಣೆಗೊಟ್ಟುಗಬೇಕೆಂದೂ, ಕರ್ತವ್ಯ ಶೂನ್ಯತೆ ಚಾಂಚಲ್ಯ ಘೋರಣೆಯೆಂದಿಗೂ ಕ್ಷಮಿಸಲ್ಪಡಲಾರದೆಂದೂ ರಾಜಾಜ್ಞೆ ಹೊರಡಿಸಿರುವರು ಮಾರ್ಶಲ್ ಬೊಡೋಗ್ಲಿಯೋರವರು ತನ್ನ ಜ್ಯಾಹೀರುನಾಮೆಯಲ್ಲಿ ಯುದ್ಧ ಮುಂದುವರಿಯುವದು. ಆಕ್ರಮಿತ ಪ್ರಾಂತ್ಯಗಳ, ಪತನಹೊಂದಿದ ಪಟ್ಟಣಗಳ ಇಟಲಿಯು ತನ್ನ ಮಾತಿನಲ್ಲಿ ವಿಶ್ವಾಸ, ತನ್ನ ಪೂರ್ವ ಪದ್ಧತಿಯಲ್ಲಿ ಹೆಗ್ಗಳಿಕೆಯನ್ನುಳಿಸಿಕೊಂಡಿದೆ ರಾಜರಿಗ ನಪ್ಪಕರಾಗಿ ಎಲ್ಲರೂ ಒಟ್ಟುಗಬೇಕು ನನ್ನ ಅಧಿಕಾರವು ನಿರ್ವಕ್ತಿಣ್ಯವಾಗಿ ಜ್ಯಾರಿಗೆ ಒರುವದು ಸಾರ್ವಜನಿಕ ವ್ಯವಸ್ಥೆಗೆ ಭಂಗ, ನಿಸ್ಸ್ಥಿತಿಗಾತಂಕವನ್ನೊಡ್ಡುವವರು ನಿರ್ದಯೆಯಿಂದ ದಮನಿಸಲ್ಪಡುವರು'–ಎಂದು ಎಚ್ಚರಿಸಿರುವರು ಇಟಲಿಯ ಎಲ್ಲಾ ಸಾರ್ವಜನಿಕ ಕೇಂದ್ರಗಳು ಸೇನೆ ಯಾಧೀನದಲ್ಲಿವೆ ಕರ್ಫ್ಯೂ ಆಜ್ಞೆ ಜ್ಯಾರಿಗೆ ಬಂದಿದೆ ಮುಸಲನಿ ಹಾಗೂ ಇತರ ಫೇಸಿಸ್ಟ ಪ್ರಮುಖರು ಮತ್ತು ಇದೀ ಮಂತ್ರಿ ಮಂಡಲವು ಗೃಹಸೆರೈದಿಗಳಾಗಿ ಬಂಧೋಬಸ್ತಿನಲ್ಲಿರಿಸಲ್ಪಟ್ಟಿದ್ದಾರೆಂದೂ ಅವರಿಗೊದಗಬಹುದಾದ ಅಪಾಯ ನಿರೀಕ್ಷಣೆಯಿಂದ ಸೈನಿಕರ ಪಲಿಸೊಡನೆ ರೋಮ್ ನಗರದಿಂದ ಗುಪ್ತ ಸ್ಥಳವೊಂದಕ್ಕೆ ಸ್ಥಳಾಂತರಿಸಲ್ಪಟ್ಟಿದ್ದಾರೆಂದೂ ತಿಳಿಯಬರುತ್ತದೆ. ಇಟಲಿಯ ಹಲವು ಕಡೆಗಳಲ್ಲಿ ಫೇಸಿಸ್ಟ ಆಕೆ ಸಮಾಪ್ತಿಯ ಪ್ರದರ್ಶನಗಳು ನಡೆದಿವೆ ಇಟಲಿಯಿಂದ ಬಲು ದೊಡ್ಡ ತ್ಯಾಗವನ್ನಪೇಕ್ಷಿಸಿದ ಹಿಟ್ಲರರ ಸೂಚನೆಯನ್ನು ಮುಸಲನಿಯರು ತನ್ನ ಯುದ್ಧ', ವಿಮಾನ ಹಾಗೂ ನೌಕಾ ಉಪ ಕಾರ್ಯದರ್ಶಿಗಳಿಗೆ ತಿಳಿಸಿದಾಗ, ಅವರು ಮಂತ್ರಿಮಂಡಲದೊಡನೆ ಪರ್ಯಾಲೋಚಿಸದೆ ತಾವಾ ಹೊಣೆಯನ್ನು ಹೊರಲಾರೆವೆಂದು ನಿರಾಕರಿಸಿದರಂತೂ 'ಮಂತ್ರಿಮಂಡಲವು ಸಭೆ ಸೇರಿ ಗಾಢಾಲೋಚನೆ ನಡಿಸಿ, ಅರಸರ ತೀರ್ಮಾನಕ್ಕದನ್ನೊಪ್ಪಿಸಿತೆಂದೂ, ರಾಜಾ ಇಮಾನ್ಯುವೇಲರು ಆ ಶರ್ತಗಳನ್ನೆಲ್ಲಾ ನಿರಾಕರಿಸಿಬಿಟ್ಟುದೇ ಈ ಚರಿತ್ರಾರ್ಹ ಅವಘಡಕ್ಕೆ ಕಾರಣವೆಂದೂ ತಿಳಿದು ಬರುತ್ತದೆ ಇಟಲಿಯ ಫೇಸಿಸ್ಟ ರಾಜ್ಯಭಾರವು ಮುಗಿದಂತೆಯೇ ಇನ್ನು ಕೆಲವೇ ದಿನಗಳೊಳಗೆ ಅದು ಯುದ್ಧದಿಂದ ದೂರಗಾಗುವ ಸಂಭವವಿದೆ, ಎಂಬ ನಿರೀಕ್ಷೆಯಿದ್ದಿದೆ. ಮುಸಲನಿಯ ಪತನದಿಂದ ಅಮೇರಿಕ ಇಂಗ್ಲಂಡುಗಳು ಹರ್ಷೋನ್ಮತ್ತಗೊಂಡಿವೆ. ಇಟಲಿ, ಜರ್ಮನಿ ರೇಡಿಯೋಗಳು ಮುಸಲನಿಯ ಅನಾರೋಗ್ಯವೇ ರಾಜೀನಾಮೆಗೆ ಕಾರಣವೆಂದು ಸಾರಿವೆ ಹಿಟ್ಲರರೊಡನೆ ಸಂಭಾಷಿಸುವ ಮೊದಲು ಮುಸಲನಿಯರು ಕಠಿಣ ಮೆದುಳು ವೇದನೆಯನ್ನನುಭವಿಸುತ್ತಲಿದ್ದರೆಂದೂ, ಘಂಟೆಗಳ ಕಾಲ ಅಪಸ್ಮಾರ ಬಡಿದು, ಹುಚ್ಚುನಗು ನಗುತ್ತಿದ್ದರೆಂದೂ ಸುದ್ದಿ. 'ಜರ್ಮನಿಯ ಅಡಿಯಾಳಲ್ಪಡಪಂತೆ ನೋಡುವದಕ್ಕಾಗಿಯೇ ಇಟಲಿ ಯುದ್ಧಕ್ಕಿಳಿದುದು'–ಎಂದು ಅವರು ಆಗಾಗ ಹೇಳುತ್ತಿದ್ದರಂತೆ. ನೂತನಾಧಿಕಾರಿ ಮಾರ್ಶಲ್ ಬೊಡೊಗ್ಲಿಯೋರವರು 73 ವರುಷದ ವಯೋವೃದ್ಧರು. ಅಬಿಸೀನಿಯಾ ಸಮರದ ಪ್ರತಾಪಿ; ನಿಷ್ಠಾವಂತ ರಾಜ ಭಕ್ತ; ಹಲವು ರಣರಂಗ, ವಿವಿಧ ಧಿಕಾರಗಳ ಅನುಭವವುಳ್ಳವರು. ಆದಿಯಿಂದಲೂ ಮುಸಲನಿ ಧೋರಣೆಯನ್ನು ವಿರೋಧಿಸುತ್ತಾ ಬಂದವರು ಇಟಲಿ ಸೇನೆಯ ವಿಶ್ವಾಸ ಪಾತ್ರರು. ರೋಮಿನಲ್ಲಿರುವ ಜರ್ಮನ್ ರಾಯಭಾರಿ ಮತ್ತು ಮಾರ್ಶಲ್ ಕೆಸ್ಸಲ್‌ರಿಂಗರು ಬೊಡೋಗ್ಲಿಯೋರವರೊಡನೆ ಇಟಲಿ-ಜರ್ಮನಿ ಸಂಬಂಧದ ಮಾತುಕತೆಯಾರಂಭಿಸಿದ್ದಾರೆ.

ಸುದ್ದಿ ಸೂಚನೆ.

○ ರಶ್ಯದಲ್ಲಿ ಓರೆಲಿನ ಕಡೆಗೆ ತ್ರಿಮುಖ ಧಾಳಿಯಾರಂಭಿಸಿರುವ ಕೆಂಪು ಸೇನೆಯು ಅಲ್ಲಿಯ ಪ್ರತಿಯೊಂದು ಕಟ್ಟಡವನ್ನೂ ಕೋಟೆಯಾಗಿ ಮಾರ್ಪಡಿಸಿರುವ ಜರ್ಮನರ ತೀವ್ರ ಪ್ರತಿಭಟನೆಗೊಳಗಾಗಿದ್ದಾರೆ.

○ ಜುಲಾಯಿ 7ರಲ್ಲಿ ಕುರ್ಸ್ಕ ಕಡೆಗೆ ಆರಂಭಿಸಿದ್ದ ಜರ್ಮನರ ವಸಂತ ಧಾಳಿಯು ತಾ 23ರ ವರೆಗೆ ಭೀಕರ ಹೋರಾಟವಾಗಿ ನಡೆದು ರಶ್ಯನರೀಗ ಅದನ್ನು ಪೂರ್ತಿ ಹುಸಿಗೊಳಿಸಿ, ಮೊದಲಿನ ಸ್ಥಾನಗಳನ್ನೆಲ್ಲಾ ಪುನರಾಧೀನ ಪಡಿಸಿಕೊಂಡಿರುವರು.

○ ಈ ಜುಲಾಯಿ ಧಾಳಿಯಲ್ಲಿ ಜರ್ಮನರು 70 ಸಾವಿರ ಜನರು. 2900ಟೇಂಕುಗಳು, 1079 ವಿವಿಧ ರೀತಿಯ ಗನ್ನುಗಳು, 1392 ವಿಮಾನಗಳು ಮತ್ತು 5000ಲೋರಿಗಳನ್ನು ಕಳಕೊಂಡಿರುವರು.

○ ಸಿಸಿಲಿಯ ಹೆಚ್ಚಿನ ಭಾಗವೀಗ ಮಿತ್ರ ಸೇನೆಯ ವಶಕ್ಕೆ ಬಂದಿದೆ. ರಾಜಧಾನಿ, ಪಾಲರ್ನೋ, ಮಾರ್ಸಲಾ, ತ್ರಾಪಾನಿ, ಮೊದಲಾದ ಪ್ರಾಮುಖ್ಯ ನಗರಗಳು ಕೈವಶವಾಗಿವೆ. ಒಂದೂವರೆ ಲಕ್ಷದಷ್ಟು ವಿರೋಧಿಗಳು ಸೆರೆ ಸಿಕ್ಕಿದ್ದಾರೆ.

○ ಸಿಸಿಲಿಯ ಈಶಾನ್ಯ ಮೂಲೆಯೊಂದರಲ್ಲೇ ಆಕ್ಸಿಸ್ ಸೇನೆಗಳು ಅತಿ ಪ್ರಬಲ ಪ್ರತಿಭಟನೆ ಕೊಡುತ್ತಿದ್ದು ಅಲ್ಲಿ ರಕ್ತ ದೋಕುಳಿನಡೆದಿದೆ.

○ ಜನರಲ್ ಟೋಜೋರವರು ತನ್ನ ಮಂತ್ರಿ ಮಂಡಲ ಹಾಗೂ ಇತರ ಪ್ರಮುಖಾಧಿಕಾರಿಗಳ ಸಭೆ ಕರೆದು ಯುದ್ಧವರದಿಯೊಪ್ಪಿಸಿ ಪರ್ಯಾಲೋಚನೆ ನಡೆಸಿದ್ದಾರೆ.

ಮಿ. ಜಿನ್ನರಿಗೆ ಮುಸಲ್ಮಾನನಿಂದ ತಿವಿತ.

ಬೊಂಬಾಯಿಯಲ್ಲಿ ಮಿ. ಜಿನ್ನರನ್ನು ಮುಸ್ಲಿಮನೊಬ್ಬನು ಚೂರಿಯಿಂದ ತಿವಿದು ಘಾಯಗೊಳಿಸಿದ್ದಾನೆ ತಾ. 26 ದೇ ಸಂಜೆ ಅನಾಮಧೇಯ ಮುಸ್ಲಿಮನೊಬ್ಬನು ಜಿನ್ನರ ಮನೆಗೆ ಬಂದು ಭೇಟಿಯಾಚಿಸಿದಾಗ, ಅವರ ಕಾರ್ಯದರ್ಶಿಯು ಮೊದಲೇ ನಿಶ್ಚಯಿಸಿಕೊಳ್ಳಲಿಲ್ಲವೆಂದು ಆಕ್ಷೇಪವೆತ್ತಿದ ಆಗ ಬಂದ ಮನುಷ್ಯ ಗಲಭೆಯೆಬ್ಬಿಸಿದನಂತೆ. ಸಂಗತಿಯೇನೆಂದು ವಿಚಾರಿಸಲು ಮಿ ಜಿನ್ನರು ಹೊರ ಬಂದಾಗ ಆಗಂತುಕನು ಚೂರಿಯತ್ತಿ ಅವರ ಕುತ್ತಿಗೆ ತಿವಿಯುವುದರಲ್ಲಿದ್ದ. ಆದರೆ ಜಿನ್ನರವನ ಕೈಯನ್ನು ಬಿಗಿಹಿಡಿದು ಕುತ್ತಿಗೆಯುಳಿಸಿಕೊಂಡರು. ಆದರೂ ಅವರ ಕೈ ಮತ್ತು ಗಡ್ಡಕ್ಕೆ ಸಣ್ಣ ಘಾಯಗಳಾಗಿವೆ. ಕೂಡಲೇ ಪೋಲಿಸರಿಗೆ ಕರೆ ಹೋಗಿ ಆ ಚೂರಿವೀರ ಮುಸಲ್ಮಾನನ ದಸ್ತಗಿರಿಯಾಗಿದೆ. "ಆ ತಿವಿತವು ಭೀಕರ ಹಾಗೂ ಸುವ್ಯವಸ್ಥಿತ ಹಂಚಿಕೆಯದಾಗಿದ್ದರೂ ದೇವರ ದಯೆಯಿಂದ ನನಗೆ ವಿಶೇಷ ಜಖಮಾಗಲಿಲ್ಲ. ನಾನೀಗಲೇ ಈ ಕುರಿತು ಏನನ್ನೂ ಹೇಳಲಾರೆ. ಮುಸಲ್ಮಾನರೆಲ್ಲಾ ಶಾಂತರಾಗಿರಬೇಕೆಂದು ನನ್ನ ವಿನಂತಿ. ಹೀಗೆ ವಿಚಿತ್ರವಾಗಿ ಪಾರು ಮಾಡಿದುದಕ್ಕಾಗಿ ಸರ್ವ ಶಕ್ತನನ್ನು ಅಭಿನಂದಿಸೋಣ. ನನ್ನ ಮೇಲೆ ಈ ಬುದ್ಧಿ ಶೂನ್ಯ ಧಾಳಿ ನಡಿಸಿದವನು ಓರ್ವ ಮುಸಲ್ಮಾನನೆಂದು ತಿಳಿದು ನಾನು ವ್ಯಸನ ಪಡುತ್ತೇನೆ"–ಎಂದು ಜಿನ್ನರಂದಿದ್ದಾರೆ.

ಮಕ್ಕಳ

ಮಗ್ಗಿ ಪುಸ್ತಕ

ಬೆಲೆ 0 1 0

ಚಿಲ್ಲರೆಯಾಗಿಯೂ ರಖಂ ಆಗಿಯೂ ಸಿಗುತ್ತದೆ.
ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ.

ನವಭಾರತ ಪುಸ್ತಕ ಭಂಡಾರ,
ರಜಿಸ್ಟರ್ಡ್ ಪಬ್ಲಿಶರ್ಸ್,
ಉಡುಪಿ.

ಬಾಲಚಂದ್ರ

ವಿದ್ಯಾ ವಿಷಯಕ ಪ್ರಮುಖ ಮಾಸಪತ್ರಿಕೆ
ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.
ವಾರ್ಷಿಕ ಚಂದಾ ರೂ. 1—8—0 ಮಾತ್ರ
ಹೆಚ್ಚಿನ ವಿಚಾರಕ್ಕೆ ಬರೆಯಿರಿ
ಮೆನೇಜರ್, ಬಾಲಚಂದ್ರ
ಸಂತೆಕಟ್ಟೆ, ಉಡುಪಿ.

ತಾ. 30—7—43ರಿಂದ
ಶಿಕೋರರವರ ಅತ್ಯುತ್ತಮ ಸಾಮಾಜಿಕಚಿತ್ರ

ಲಕ್ಷ್ಮಿ

ಬಿಬ್ಬು, ಮಾಯಾಬೆನರ್ಜಿ, ಕುಮಾರ್, ಜೀವನ್,
ಮೊದಲಾದವರು.
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.
ಬರುವುದು:- ಖಾನ್‌ದಾನ್, ಗೋಲಿಬಾರ್,

Degrees Books Medicines
Free H L M S M, B H M, D, etc
Free Homeo Ayur UnaniNaturo degree by post also—Practitioner also get soon Homeo Materiamedica, Rs. 5 Homeo Practice book Rs 4 Insanity Cure Pills Rs. 10 Enclose 2 annas stamp—
Principal Indian Homeopathi Institute & Society (Govt Regd)
P O MAHUVA (Kathiawar Di India)

Sidha-Kalpa Kavach (Regd)
No 3 Rs 2, No 2 Rs ... No 1 Rs 7 Special Rs. 10, Extra Special Rs 17 for love marriage health, wealth Ask any six questions with M O Re. 1/4 and get correct answers by returnpost Life reading Rs 10 No V P.P SendM.O,Free pamplets
Prof Dr N. H Chhatbar,
P. O. MAHUVA (Kathiawar India)

ದಕ್ಷಿಣ ಕನ್ನಡ.

ಮಂಗಳೂರು.

ಹಿಂದೀ ಪ್ರಚಾರ ಮಂಡಲವೊಂದು ನಗರದಲ್ಲಿ ಸ್ಥಾಪಿಸಲ್ಪಟ್ಟಿದೆ. ಫಾ| ಎಫ್. ಜಿ. ಎಂ. ಪಿಂಟೋ, ಬಿ. ಎ., ಎಲ್. ಟಿ. ಅವರು ಮಂಡಲದ ತಾತ್ಕಾಲಿಕ ಕಾರ್ಯಕಾರಿ ಸಮಿತಿಯ ಗೌರವ ಅಧ್ಯಕ್ಷರಾಗಿಯೂ ಕೋಶಾಧಿಕಾರಿಯಾಗಿಯೂ, ಶ್ರೀ| ಕೆ. ಕೃಷ್ಣ ರಾವ್, ಅವರು ಉಪಾಧ್ಯಕ್ಷರಾಗಿಯೂ, ಶ್ರೀ| ಬಿ. ಶ್ರೀನಿವಾಸ ರಾಯರು ಕಾರ್ಯದರ್ಶಿಯಾಗಿಯೂ ಇರುವರು. ಶ್ರೀಯುತರು ಬಿ. ಅನಂತ ಶೈ, ಜೋಸೆಫ್ ಸಾಲ್ಡಾನ್ ಮತ್ತು ದೇವಪ್ಪ ಆಳ್ವ ಇವರು ಸಮಿತಿಯ ಸದಸ್ಯರು.

ನಗರ ಸಭೆಯು ತಾ. ೧೯ರಂದು ಜ| ಶಾಸೇನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿ ಎಂ. ರಾಮಕೃಷ್ಣ ರಾವ್ ಎಂಡೋಮೆಂಟ್ ನಿಧಿಯಿಂದ ರೂ. ೧೨೫ನ್ನು ಬಿಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠ ಶಾಲೆಗೆ ಕೊಡಿಸಲು ನಿರ್ಧರಿಸಿತು. ಎ. ಆರ್. ಪಿ. ಶಿಕ್ಷಣ ಪಡೆಯಲು ಮದ್ರಾಸಿಗೆ ಹೋಗಲು ಕಮಿಶನರಿಗೆ ಸಭೆಯು ಸಮ್ಮತಿ ಕೊಟ್ಟಿತು. ಪುಸ್ತಕ ಭಂಡಾರಗಳಿಗೆ ಸಹಾಯ ದ್ರವ್ಯ ಕೊಡಬೇಕೆಂದು ಮಹಿಳಾ ಸಭೆ, ಲೇಡಿಸ್ ಕ್ಲಬ್, ಭಗಿನಿ ಸಮಾಜಗಳು ಕೇಳಿದ್ದವು. ಇವುಗಳಿಗೆ ಗ್ರಾಂಟು ಕೊಡಲು ಸರಕಾರಕ್ಕೆ ಶಿಫಾರಸು ಮಾಡಬೇಕೆಂದು ಸಭೆಯು ನಿರ್ಧರಿಸಿತು.

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಪರಿಷತ್ತನ್ನು ಈ ವರ್ಷ ಡಿಸೆಂಬರದೊಳಗೆ ಅಥವಾ ಮುಂದಿನ ವರ್ಷ ಜನವರಿಯ ಆದಿಭಾಗದಲ್ಲಿ ಜರಗಿಸಬೇಕೆಂದು ಜಿಲ್ಲಾ ಪತ್ರಿಕೋದ್ಯೋಗಿ ಸಂಘದ ಕಾರ್ಯಕಾರಿ ಸಮಿತಿಯು ತಾ. ೨೦ರಂದು ಸಂಜೆ ಸೇರಿದ ಸಭೆಯಲ್ಲಿ ನಿರ್ಧರಿಸಿತು. ಸಂಘಕ್ಕಾಗಿ ಹೊಸತೊಂದು ಆಫೀಸನ್ನು ತೆರೆಯುವುದರ ಕುರಿತು ಪರ್ಯಾಲೋಚಿಸಲು ರಚಿಸಲ್ಪಟ್ಟಿದ್ದ ಸಮಿತಿ ತನ್ನ ವರದಿಯನ್ನೊಪ್ಪಿಸಿತು. ಸಮಿತಿಯ ಸಲಹೆಗಳು ಸ್ವೀಕರಿಸಲ್ಪಟ್ಟವು. ಸಂಘದ ಹೊಸ ಕಟ್ಟಡದ ಉದ್ಘಾಟನೆಯನ್ನು ಆಗಸ್ಟ್ ತಾ. ೧೫ರಂದು ಜರಗಿಸಬೇಕೆಂದಾಯಿತು.

ಶ್ರೀ. ಲೋಬೋ ಅವರ ತಂತಿ— 'ಜೂನ್ ತಾ. ೭ರಂದು ನಾನು ವಿನಂತಿ ಮಾಡಿಕೊಂಡಿದ್ದೆ. ತಾ. ೨೯ರಂದು ತಂತಿಯನ್ನು ಕಳುಹಿದ್ದೆ... ಈಗ ಪರಿಸ್ಥಿತಿಯು ಭೀಕರವಿದೆ. ಎರಡನೇ ತರಗತಿಯ ಅಕ್ಕಿಗೂ ಮುಡಿಗೆ ೧೭ ರೂಪಾಯಿ. ಜನರು ಸಂಕಷ್ಟದಲ್ಲಿದ್ದಾರೆ. ಉಷ್ಣ ಹೊರಕಡೆ ಮತ್ತಿತರ ರೋಗಗಳು ಹಬ್ಬುತ್ತಿವೆ, ಕೊಲೆರಾ ರೋಗ ಆರಂಭವಾಗಿದೆಯೋ ಎಂಬ ಭೀತಿಯೂ ಇದೆ. ಅಧಿಕಾರಿಗಳು ಕೈ ಕಟ್ಟಿ ಕುಳಿತಿದ್ದಾರೆ. ತಮ್ಮ ಅಸಹಾಯತೆಯನ್ನು ವ್ಯಕ್ತಗೊಳಿಸುತ್ತಿದ್ದಾರೆ. ಇನ್ನು ಮಾಲಗ [illegible] ವೆಂದು ವ್ಯಾಪಾರಿಗಳು ಹೆದರಿಸುತ್ತಿದ್ದಾರೆ. ದಯವಿಟ್ಟು ಏನನ್ನಾದರೂ ಮಾಡಿರಿ' ಎಂದು ನಗರ ಸಭೆಯ ಉಪಾಧ್ಯಕ್ಷ ಮಿ| ಲೋಬೋ ಅವರು ಗವರ್ನರರಿಗೂ ಮತ್ತಿತರ ಪ್ರಾಂತಿಕ ಅಧಿಕಾರಿಗಳಿಗೂ ತಂತಿ ಬಿಟ್ಟಿರುವರು.

ಆಹಾರ ಪರಿಸ್ಥಿತಿಯನ್ನು ಸುಧಾರಿಸಲು ನಗರಸಭೆಯು ಯತ್ನಿಸಬೇಕೆಂದೂ, ಮಂಗಳೂರಿನ ವಿದ್ಯಾರ್ಥಿ ಮತ್ತು ಪ್ರಕಾಶ ಸಂಘಗಳೂ ಮಜೂರ ಸಂಘಗಳೂ ಕಮ್ಯೂನಿಸ್ಟ್ ಪಾರ್ಟಿಯವರೂ ಕಳುಹುವ ಶಿಷ್ಟಮಂಡಲವನ್ನು ಕಾಣಲು ಸಮ್ಮತಿಸಬೇಕೆಂದೂ—ಶಿಷ್ಟ ಮಂಡಲದವರು ನಗರ ಸಭಾಧ್ಯಕ್ಷರಿಗೆ ಪತ್ರಬರೆದಿದ್ದರು. ಅಧ್ಯಕ್ಷರು ಶಿಷ್ಟ ಮಂಡಲದ ಪರವಾಗಿ ಶ್ರೀ| ಶಾಂತಾರಾಮ ಪೈ ಅವರನ್ನು ಕರೆದು ನಗರ ಸಭೆಯು ಈ ಕುರಿತು ಏನನ್ನು ಮಾಡುವುದಕ್ಕೂ ಶಕ್ತವಿಲ್ಲವಾದರೂ ತಾವು ವೈಯಕ್ತಿಕವಾಗಿ ಶಕ್ಯವಾದುದನ್ನೆಲ್ಲಾ ಮಾಡುವುದಾಗಿ ಭರವಸೆ ಕೊಟ್ಟರು.

ಆಷಾಢ ಶುಕ್ಲ ಪೂರ್ಣಿಮಾ:— ಬಿಸೆಂಟ್ ರಾಷ್ಟ್ರೀಯ ಹುಡುಗಿಯರ ಹೈಸ್ಕೂಲಿನಲ್ಲಿ ಶ್ರೀ| ಎಸ್. ಮುಕುಂದ ರಾಯರ ಅಧ್ಯಕ್ಷತೆಯಲ್ಲಿ ಆಷಾಢ ಶುಕ್ಲ ಪೂರ್ಣಿಮೆಯು [ಬುದ್ಧನು ಅರಮನೆಯನ್ನು ಬಿಟ್ಟು ಕಾಡು ಸೇರಿದ ದಿನ] ಆಚರಿಸಲ್ಪಟ್ಟಿತು. ಶಾಲೆಯ ಕನ್ನಡ ಪಂಡಿತರಾದ ಶ್ರೀ| ಪಿ. ಕೆ. ನಾರಾಯಣ ಅವರು ಬುದ್ಧನ ಜೀವನದ ಕುರಿತು ಮಾತನಾಡಿದರು. ವಿದ್ಯಾರ್ಥಿನಿಯರಿಂದ "ಬುದ್ಧನ ಬಾಲ್ಯ" ಎಂಬ ದೃಶ್ಯವೂ, "ಆಷಾಢ ಪೂರ್ಣಿಮಾ" ಎಂಬ ಪ್ರತಿಮಾ ದೃಶ್ಯವೂ ಅಭಿನಯಿಸಲ್ಪಟ್ಟವು. ಬುದ್ಧನ ವಿಚಾರ ಲಾವಣಿಯೂ ಹಾಡಲ್ಪಟ್ಟಿತು. ಸಭಾಂತ್ಯದಲ್ಲಿ "ಬುದ್ಧ ಜಯಗೀತ"ದೊಡನೆ ಕಾರ್ಯಕ್ರಮವು ಕೊನೆಗೊಂಡಿತು. ಬಂದ ಸಭಿಕರಿಗೂ ಅಧ್ಯಕ್ಷರಿಗೂ ಶ್ರೀ| ಎಚ್. ಎಸ್. ಉಡುಪರು ವಂದನೆಗಳನ್ನರ್ಪಿಸಿದರು.

ಕರ್ನಾಟಕ ಥಿಯೇಟರ್ಸ್— ಇದರ ಸಭೆಯೊಂದು ತಾ. ೧೫ರಂದು ಸಂಜೆ ಜರಗಿ ಹೊಸ ವರ್ಷದ ಕಾರ್ಯಕ್ರಮಗಳು ನಿಶ್ಚಯಿಸಲ್ಪಟ್ಟವು. ಸಾಹಿತ್ಯ ಸುಧಾರಕ ಸಂಗೀತ ನಾಟಕ ಸಭೆಯನ್ನು ಕರ್ನಾಟಕ ಥಿಯೇಟರ್ಸಿಗೆ ಸೇರಿಸುವ ಗೊತ್ತುವಳಿಯಾಯಿತು. ಥಿಯೇಟರ್ಸ್ ಇದರ ಉದ್ಘಾಟನೆಯು ಬರುವ ತಿಂಗಳಲ್ಲಿ ಜರಗಲಿದ್ದು, ಆ ಸಮಯದಲ್ಲಿ ಒಂದು ನಾಟಕವೂ ಅಭಿನಯಿಸಲ್ಪಡುವುದು.

ಜಿಲ್ಲಾ ಬಿಲ್ಲವ ಯೂನಿಯನಿನ ಆಶ್ರಯದಲ್ಲಿರುವ ಶ್ರೀ| ವೆಂಕಟೇಶ ಶಿವ ಭಕ್ತಿ ಯೋಗ ಸಂಘದಿಂದ ಈ ವರ್ಷ ೧೧ ಮಂದಿ ವಿದ್ಯಾರ್ಥಿಗಳಿಗೆ ವೇತನ ಕೊಡಲು ರೂ. ೪೧೨||ಯನ್ನು ಮಂಜೂರು ಮಾಡಿರುವರು.

ಉಡುಪಿ.

ಶ್ರೀ ಪುತ್ತಿಗೆ ಸ್ವಾಮಿಗಳವರ ಪರ್ಯಾಯ ಮಹೋತ್ಸವದ ಪೂರ್ವ ಸಿದ್ಧತೆಗಳಲ್ಲೊಂದಾದ ಕಾಷ್ಠಂಭ ನಿರ್ಮಾಣದ (ಕಟ್ಟಿಗೆ ಸಂಗ್ರಹ) ಕೆಲಸವು ಈಗ ತಾನೆ ಆರಂಭವಾಗಿಯದೆ.

ಇತ್ತೀಚೆಗೆ ಎಲ್ಲಿ ನೋಡಿದರಲ್ಲಿ ಹಳದಿ ಬಣ್ಣದ ರೇಷನಿಂಗ್ ಕಾರ್ಡುಗಳ ಚಲಾವಣೆ ಸೀಮೆ ಎಣ್ಣೆ ಮತ್ತು ಸಕ್ಕರೆ ಸಲುವಾಗಿ. ಅಕ್ಕಿ ರೇಷನಿಂಗಿನ ಬಿಳಿ ಕಾರ್ಡುಗಳೂ ಈಗ ತಾನೆ ಹೊರ ಬಿದ್ದಿವೆ. ಚಿಮಣಿ ಎಣ್ಣೆ ಕಾರ್ಡುಗಳಲ್ಲಿ ತಿಂಗಳೊಂದರ, ಹಪ್ತೆ ಒಂದರ. ಹದಿನೈದು ದಿವಸಗಳಿಗೊವೆ, ಒಂದು ಬಾರಿಯಂತೆ ರೇಷನಿಂಗ್ ಆಫೀಸರರ ದೃಷ್ಟಿಕೋನದ ರೇಷನಿಂಗ್ ತಾರತಮ್ಯವಿದೆ. ಹಳ್ಳಿಗಾಡಿನ ಪ್ರವಾಸಿಕರಿಗೆ ಸಿಗುವ ಕಾಲು ಯಾ ಅರ್ಧ ಬಾಟ್ಲಿ ಎಣ್ಣೆಗೆ ಒಂದು ಗ್ರಾಮದವರು ಇನ್ನೊಂದು ಗ್ರಾಮದಂಗಡಿಗೆ ಹೋಗಬೇಕಾಗಿದೆ. ಆಯಾಯ ಗ್ರಾಮದಲ್ಲೇ ಸಿಕ್ಕುವಂತೆ ಏರ್ಪಾಡು ಮಾಡಿದರೆ ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಹೋಗಿ ಬರುವ ಸಮಯವನ್ನು ಏನಾದರೂ ಸಂಪಾದನೆಯ ದಾರಿ ಹಿಡಿಯಲು ಅನುಕೂಲವಾಗುವುದಷ್ಟೆ. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನವೀಯುವರೆಂದು ನಿರೀಕ್ಷಿಸಲೆ? ಎಂದೊಬ್ಬ ಬಾತ್ಮಿದಾರರು ಬರೆಯುತ್ತಾರೆ.

ಪಟ್ಟಣದಲ್ಲಿ ವಿಷಮ ಜ್ವರ, ಉಷ್ಣ ಬೇಧಿ ಮೊದಲಾದ ಕಾಯಿಲೆಗಳು ತಲೆದೋರಿವೆ. ಪುರ ಜನರು ಜಾಗರೂಕರಾಗಿರುವುದು ಲೇಸು.

ಪುತ್ತೂರು.

ಸಭೆ— ಕಳೆದ ತಾ. ೨೧ರಂದು ಸ್ಥಳೀಯ ರೆ. ಡಿ. ಆಫೀಸರರಾದ ಶ್ರೀ| ಸ್ವಾಮಿಕಣ್ಣು ಪಿಳ್ಳೆ ಇವರು ಇಲ್ಲಿಯ ವರ್ಗದಾರ ಮತ್ತು ವ್ಯಾಪಾರಸ್ಥರನ್ನು ತಮ್ಮ ಆಫೀಸಿಗೆ ಬರಮಾಡಿಸಿ, ಸರಕಾರಿ ನೌಕರರಿಗೆ ಕಂಟ್ರೋಲ್ ದರದಲ್ಲಿ ಅಕ್ಕಿ ಮಾರಾಟ ಮಾಡಬೇಕಾಗಿ ತಿಳಿಸಿರುತ್ತಾರೆ.

ಅಕ್ಕಿಯ ಸುಲಿಗೆ—ಕಳೆದ ವಾರ ಉಪ್ಪಿನಂಗಡಿಯಿಂದ ಸುಮಾರು ೫-೬ ಮೈಲು ದೂರದಲ್ಲಿ ಎರಡು ಮೂರು ಕಡೆ ಒಕ್ಕಲುಗಳ ಮನೆಯಲ್ಲಿ ವರ್ಗದಾರರು ದಾಸ್ತಾನು ಇರಿಸಿದ್ದ ಸುಮಾರು ಅರುವತ್ತು ಮುಡಿಗಳ ಅಂದಾಜು ಅಕ್ಕಿಯನ್ನು ಹಗಲು ಹೊತ್ತಿನಲ್ಲಿ ಕೆಲವರು ಸೇರಿ ಸುಲಿಗೆ ಮಾಡಿರುತ್ತಾರಾಗಿ ವರ್ತಮಾನವಿದೆ.

ಅಜೆಕಾರು—ಸ್ಥಳೀಯ ಸಹಕಾರ ಸಂಘದಲ್ಲಿ ಆಹಾರ ಸಾಮಗ್ರಿಗಳ ವಿಭಾಗವನ್ನು ನಡೆಸುವರ ಲೈಸನ್ಸನ್ನು ಮಾನ್ಯ ಸರಕಾರದವರು ಕೊಡಿಸಿದುದು ತುಂಬ ಪ್ರಾಶಂಸನೀಯವು. ಈ ಹೊಸ ಏರ್ಪಾಡಿನಿಂದ ಬಡವರಿಗೆ ಅಕ್ಕಿ ಸೇರಿಗೆ 0-3-1ರಂತೆ ದೊರಕುವಂತಾದುದು ಭಾಗ್ಯೋದಯವೇ ಸರಿ! ಇದರ ಯಶಸ್ಸಿಗೆ ಶ್ರಮಪಟ್ಟ ಅಧಿಕಾರಿಗಳು ಅಭಿನಂದನೀಯರು.

ಇಲ್ಲಿಯ ಪೋಸ್ಟ್‌ಮ್ಯಾನನ್ನು ವರ್ಗಾಯಿಸಿ, ಒಂದು ತಿಂಗಳಾದರೂ, ಹೊಸ ನೇಮಕ ಇನ್ನೂ ಆಗದೆ, ಹಳ್ಳಿಗರು ಕಷ್ಟದಲ್ಲಿರುವರು. ಈ ಕೊರತೆಯನ್ನು ಸಂಬಂಧ ಪಟ್ಟ ಅಧಿಕಾರಿಗಳು ಶೀಘ್ರದಲ್ಲೇ ನಿವಾರಿಸಬೇಕಾಗಿ ಒಂದು ಬಾತ್ಮಿ.

ಚೂರು-ಚೂರು

'ಅವನು ನವೀನ ಆಸ್ಯಾರಚನೆಯಲ್ಲಿ ಸನ್ ಯೆಟ್ ಸೆನರಿಗೆ ಸಮಾನ'-ಗಾಂಧಿಜೀಯ ಕುರಿತು ಡಾ| ವಿಲಿಯಮ್ ಪೆಟೋನರ ಲೇಖನ.

ಬ್ರಿಟಿಷ್ ಅಧಿಕಾರಿಗಳ ದೃಷ್ಟಿಯಲ್ಲಿ 'ಅವನು ಜನರಲ್ ಟೋಜೋರಿಗೆ ಸಮಾನ'!

○

'ಸಿಂಗಾಪುರ ಪತನದ ವೇಳೆ ಬ್ರಿಟಿಷರು ಮುಳುಗಿಸಿ ಬಂದಿದ್ದ ಅಲ್ಲಿಯ ಲೋಕಪ್ರಸಿದ್ಧ ಹಡಗ ನಿಲ್ದಾಣ 'ಕಿಂಗ್ ಜೋರ್ಜ್ ಡಾಕ್'ನ್ನು ಜಪಾನರೀಗ ಮೇಲೆತ್ತಿದ್ದಾರೆ.

'ಬ್ರಿಟಿಷರಿಂದ ಪತನಗೊಂಡವರನ್ನು ಉದ್ಧರಿಸುವೆವು'-ಎಂಬ ತಮ್ಮ ಮಾತನ್ನು ಸತ್ಯವನ್ನಿಸುವದಕ್ಕಾಗಿ?

○

ಜನರಲ್ ಡಿ ಗೋಲೆಯವರ ಕುರಿತು ಪ್ರಧಾನಿ ಚರ್ಚಿಲ್ಲರ ಅಭಿಪ್ರಾಯವೆಂದು ಅಮೇರಿಕದ ಪತ್ರಿಕೆಗಳು ಹಲವು ಸ್ವಾರಸ್ಯದ ವಾರ್ತೆಗಳನ್ನು ಪ್ರಕಟಿಸಿವೆ. ಆದರೆ ಇಂಗ್ಲಾಂಡಿನಲ್ಲಿ ಈ ಕುರಿತು ಚರ್ಚಿಸಲು ಪಾರ್ಲಿಮೆಂಟಿನ ಗುಪ್ತಾಧಿವೇಶನವೇ ಸೇರಬೇಕೆಂದು ಮಿ. ಚರ್ಚಿಲ್ಲರಂದಿದ್ದಾರೆ.

ಗಾಂಧೀ–ಲಿನ್‌ಲಿತ್‌ಗೋ ಪತ್ರವ್ಯವಹಾರಗಳನ್ನು ಇಂಗ್ಲಾಂಡಿನಲ್ಲಿ ಪ್ರಕಟಿಸಿ ತಮ್ಮಲ್ಲಿ ಪ್ರಕಟಣೆಗೆ ಕೊಡದಿದ್ದುದಕ್ಕಾಗಿ ನೊಂದುಕೊಂಡಿದ್ದ ಅಮೇರಿಕನರಿಗೆ ಈಗಲಾದರೂ ಸಮಾಧಾನವಾಯಿತೇ?

○

ಹಿಟ್ಲರ್–ಮುಸಲಿನಿಗಳು ಇಟೆಲಿಯೊರೊಂದರಲ್ಲಿ ಐದನೇ ಬಾರಿ ಒಟ್ಟಾಗಿ ಆಕ್ರಮಣ ನಡೆದರೆ ಇಟೆಲಿ ಸರಕಾರವನ್ನು ವಿಯೆನ್ನಾ ಅಥವಾ ಮ್ಯೂನಿಚಿಗೆ ಕೊಂಡುಹೋಗಬೇಕೆಂದು ನಿರ್ಧರಿಸಿದರಂತೆ.

ನೋರ್ವೆ ಪೋಲೆಂಡುಗಳಂತೆ ಲಂಡನಿಗೇನೇ ಒಯ್ಯುವ ಯೋಚನೆ ಸದ್ಯಕ್ಕಿಲ್ಲ!

○

ಆಗೋಸ್ತು ೮ರೊಳಗೆ ಎಲ್ಲಾ ರಾಜಕೀಯ ಕೈದಿಗಳನ್ನೂ ಬಿಟ್ಟುಬಿಡುವ ಕುರಿತು ಬಂಗಾಳಾ ಸರಕಾರವು ಪರ್ಯಾಲೋಚಿಸುತ್ತಿದೆ.

ಸುಭಾಸಚಂದ್ರ ಬೋಸರು ಬಂಗಾಳಿಗಳೆಂಬುದನ್ನು ಮರೆಯದಿರಲಿ!

○

'ನಾನು ಧೋರಣೆಯ ಕುರಿತು ಚರ್ಚಿಸಲಾರೆ'—ಭಾರತದ ಕುರಿತು ಭಾವೀ ಧೋರಣೆಯೇನೆಂದು ಹಿಂದೀ ಪತ್ರಿಕೋದ್ಯಮಿಯಿಂದ ಪ್ರಶ್ನಿಸಲ್ಪಟ್ಟಾಗ ಲೋರ್ಡ್ ವೇವೆಲರ ಉತ್ತರ.

ಹಾಗಾದರೆ ? ಮುಂದಿನ ಧೋರಣೆ—ಮೌನ!

○

'ನಮ್ಮ 600 ಡಿವಿಜನುಗಳು ರಷ್ಯದಲ್ಲೀಗ ಮೃತ್ಯು ಹೋರಾಟದಲ್ಲಿ ನಿರತವಾಗಿವೆ'—ಜರ್ಮನಿಯ ಮಿಲಿಟರಿ ವಾತುಗಾರನ ಹೇಳಿಕೆ.

ಇರಲಿ—600 ಡಿವಿಜನ್ ಇದ್ದ ಮೇಲೆ 6 ವರುಷವಾದರೂ!

—ವಿನೋದಿ

BHUVANENDRA PRODUCTS Ltd.,

Head Office and Factory: Katapadi, S. Kanara

Depots: Mahratha Galli, Hubli.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ. ಆರ್. ಎಸ್. ಶೆಟ್ಟಿ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮೆಸಿ; ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ವಿಜಯಾ ಸ್ಟೋರ್ಸ್

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

ಮುಖ್ಯ ಕಾರ್ಯಾಲಯ:— ಕೋರ್ಟು ರಸ್ತೆ, ಉಡುಪಿ, ದಕ್ಷಿಣ ಕನ್ನಡ.

ಶಾಖೆಗಳು:— ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಕಿನ್ನಿಗೋಳಿ.

ಮುಸುಂ ಠೇವಣಾತಿಗಳು ತಾ. 31-7-1948 ಅಥವಾ ಈ ತಾರೀಕಿನ ಮೊದಲು ವ್ಯಾದೆಯಾಗುವುದಾದರೆ ಅಂಥಾ ವ್ಯಾದೆಯ ವರೆಗೆ ಸಾಲಿಯಾನ ಶೇಕಡಾ ೨ರ ಸಲ ಬಡ್ಡಿಯಲ್ಲಿ 3, 4, 5 ಅಥವಾ 6 ತಿಂಗಳ ವ್ಯಾದೆಯಿಂದ ಪ್ರತಿಯೊಂದು ಠೇವಣಿಯನ್ನೂ ಅಂಗೀಕರಿಸಲ್ಪಡುತ್ತವೆ.

ಬೇಂಕಿನ ಪ್ರತಿಯೊಂದು ವಿಧದ ವಹಿವಾಟುಗಳು ನಡೆಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ಮೊಕ್ತಾ ಅಥವಾ ಪತ್ರದ್ವಾರಾ ಸಮೀಪದ ಶಾಖೆಯಲ್ಲಿ ದಯವಿಟ್ಟು ವಿಚಾರಿಸಿರಿ

ಶ್ರೀ ತಾರಾನಾಥ ಭೇಷಜಾಲಯ

ಶಾಸ್ತ್ರೀಯ ಮತ್ತು ಸಿದ್ಧೌಷಧಿಗಳ ಕಾರಾಗಾರ, ಚಿಕ್ಕಮಗಳೂರು.

ನಿರ್ದೇಶಕ:- ಡಾ. M. L. Shetty, ಪ್ರೇಮವಿದ್ಯಾಪೀಠದ ಗೌ. ಪ್ರಾಧ್ಯಾಪಕರು.

ಎಲ್ಲಾ ತರದ ಭಸ್ಮ, ಖನಿಜ ರಸಾಯನ, ಆಸವಾರಿಷ್ಟ, ಘೃತ, ತೈಲಗಳಿಗಾಗಿ ಕೂಡಲೇ ಬರೆಯಿರಿ.

ಬಹುಕಾಲದ ರೋಗಗಳಲ್ಲಿ ಫಲಕಾರಿಯಾದ ಔಷಧೀ ಯೋಗಗಳು, ಗುರುಪರಂಪರೆಯ ಅನುಭವದಿಂದ ಬಂದ ನಿರ್ದುಷ್ಟ ಔಷಧೀಕರಣ ವಿಧಾನ.

ಡಾ| P. M. Alva,
ಮೆನೇಜರ್.

ಬಾಲ ಸಾಹಿತ್ಯ ಮಂಡಲ, ಲಿಮಿಟೆಡ್.

ದಿವಂಗತ ಶ್ರೀ| ಉಳ್ಳಾಲ ಮಂಗೇಶರಾವ್ ಬಿ. ಎ., ಎಲ್. ಟಿ. ಅವರಿಂದ ರಚಿತವಾದ ನಮ್ಮ "ಹೊಸಗನ್ನಡದ ಗದ್ಯದ ಕರ ವರೆಗಿನ ರೀಡರು"ಗಳು ಇದೇ ಜೂನಿನ ಪ್ರಥಮ ವಾರದಲ್ಲೇ ಸಿದ್ಧವಾಗುವವು. ಅವುಗಳಿಗೆ ಬೆಲೆ ಮತ್ತು ಅವುಗಳ ಮೇಲಿನ ಕಮಿಷನಿನ ದರಗಳು ಕಾಲಕ್ಕೆ ತಕ್ಕಂತೆ ಹೊಂದಿಸಲ್ಪಟ್ಟು ಆಗಲೇ ಪ್ರಕಟಗೊಳ್ಳುವುವು.

Bala Sahitya Mandal, Ltd.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ **1929**ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲರ ಸಹಕಾರ ಅಪೇಕ್ಷಿಸುವುದು.

M. R. Punja, President & Manager — ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸದೊರೆಯ ಬೇಕೋ?

ಸುಖನಿವಾಸಕ್ಕೆ ಬನ್ನಿ!

ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,
ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ. : : : : ಮಂಗಳೂರು:



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

REGD.

ಅಮೃತಾಂಜನ ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗ, ಭುಜ, ಎಲ್ಲು ವೇದನೆಗಳು, ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ, ಯುಳುಕಡ್ಡಿ ಮದ್ದು ಸಹ ಸರ್ವತ್ರ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತ.

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisserti.

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ-
ಪರಸಿನಿ ಕಡವು ದೇವಸ್ಥಾನದಿಂದ ಈ ಮೂಲಕ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುನ್ಹಿರಾಮನ್.
ಮೆನೇಜರ್.

— ಮಕ್ಕಳನ್ನು ಹಡೆಯುವದು ಸಾಕು.—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

, ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯ:— ಪರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ನಿರಾಳೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರದಲ್ಲಿ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಕುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕವ.ಲದಾನ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದಕ**

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI. S. INDIA.

Regd. No.M. 3618.

Ested. 1921 ಸ್ಥಾಪನೆ.

ಹೊಸಕೆರೆ ಚಿದಂಬರಯ್ಯನವ
ರಿಂದ ರಚಿತವಾದ ಗೀತೆಯ
ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು 440 ಪುಟಗಳು,
ಬೆಲೆ (ಸುಂದರ ಪ್ರತಿ) ೦—೮—೦
(ಕೆಲಿಕೋ ಬೈಂಡ್) ೦-೧೨—೦
(ಲೆದರ್ ಬೈಂಡ್) ೧—೪—೦
ಪ್ರತಿಗಳು ಪ್ರಸಿದ್ಧ ವ್ಯಾಪಾರಿಗಳಲ್ಲಿ ಸಿಗುವುದು.
0—10—0 ಸ್ಟಾಂಪು ಕಳಿಸಿದ್ದಲ್ಲಿ ಒಂದು
ಪ್ರತಿಯನ್ನು ಬುಕ್‌ಪೋಸ್ಟ್
ಮಾಡಲಾಗುತ್ತ.
**ನವಭಾರತ ಪುಸ್ತಕ ಭಂಡಾರ,
ಉಡುಪಿ.**

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೩
ಸಂಚಿಕೆ ೪೬

FOUNDER
Sri. A. B. Shetty, M. L. A.

Vol. 23
No. 46

NAVAYUGA— Kannada Weekly —UDIPI, S. I.

ಉಡುಪಿ • **5—8—1943** • ಮಂಗಳೂರು.

ಶ್ರೀಮತಿ ಶಿವರಾಣಿ ದೇವಿಯವರಿಂದ
(ದಿವಂಗತ ಪ್ರೇಮಚಂದರ ಪತ್ನಿ)
ರಚಿತವಾದ ಹಿಂದೀ ಕತೆಗಳ ಕನ್ನಡ
ಭಾಷಾಂತರ

ನಾರೀ ಹೃದಯ

ನಾರೀ ಹೃದಯದ ವಾಸ್ತವಿಕ ಚಿತ್ರ
ವನ್ನು ಚಿತ್ರಿಸುವ ಉತ್ತಮ ಕತೆಗಳ
ಸಂಗ್ರಹ.
ಬೆಲೆ 0—14—0
ಟ ಖ. 0—2—0 ಪ್ರತ್ಯೇಕ.
ಒಂದು ರೂಪಾಯಿ ಸ್ಟಾಂಪು ಕಳಿಸಿದರೆ ಒಂದು
ಪ್ರತಿಯನ್ನು ಕಳಿಸಲಾಗುವುದು.
**ಕಿರಿಯರ ಪ್ರಪಂಚ, ಉಡುಪಿ.
ಅಥವಾ ನವಭಾರತ ಬುಕ್
ಡಿಪ್ಪೊ, ಉಡುಪಿ.**

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

The Canara Mutual Assurance Co., Ltd.,
UDIPI. (S. India).

ನೀವೀ ವರೆಗೆ ವಿಮೆಯನ್ನೇ ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಈಗಲೇ ವಿಮೆ ಇಳಿಸಿರಿ

ಏಕೆಂದರೆ:—

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸವಿಪಾಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ, ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದಪ್ರಮುಖ ಏಜಂಟರು.
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ, ದ. ಕನ್ನಡ.
ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿ: —
**ಮಂಗಳೂರು, ಕಲ್ಲಿಕೋಟೆ, ಸೇಲಂ, ತಿರುವಾಂಕೂರು, ಬೆಂಗಳೂರು
ನಗರ ಮತ್ತು ಬೊಂಬಾಯಿ.**

THE BOMBAY LIFE ASSURANCE CO., LTD.

...ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ನೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಆರೂ. **ಪೋಸ್ಟ ಖರ್ಚ ೮ ಆಣೆ.**

ಏಜೆಂಟರು: ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೆಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

WANTED GRADUATES.

APPLY FOR TERMS

CANARA BANK LIMITED.

ESTD: 1906.

ಅಖಿಲ ಕರ್ನಾಟಕದ ಹೊಸ ಮಾದರಿಯ ವಾರ ಪತ್ರಿಕೆ:

ಅಂತರಂಗ

ಶ್ರೀ. ಎ. ಎಸ್. ಪಿ. ಅಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್‌ಲಾ., ಎಫ್. ಆರ್. ಎಸ್. ಎಲ್. ಇವರ 'Funny Tales of Ind' ಎಂಬ ಇಂಗ್ಲಿಷ್ ಕಥಾವಳಿಯ ಅನುವಾದವು ಧಾರಾವಹಿಯಾಗಿ ಪ್ರಕಟವಾಗುತ್ತಿದೆ.

ಇದೀಗ ೮ನೇ ಸಂಪುಟವು ಆರಂಭವಾಗಿದೆ.

ವಾರ್ಷಿಕ ಚಂದಾ ರೂ.	4	8	0
6 ತಿಂಗಳಿಗೆ ರೂ.	2	4	0
ಬಿಡಿ ಸಂಚಿಕೆಗೆ	0	1	6

Manager **'Antaranga'** Weekly, Udipi.

★ ಇಟೆಲಿಯ ತ್ರಿಶಂಕು ಸ್ಥಾನ! ★

ಮುಸಲನಿ ಪತನವಾಗಿ-ಜಗತ್ತಿನ ಕುಗ್ರಹವೊಂದು ಅಂತರ್ಧಾನವಾಗಿ-ವಾರ ಕಳೆದರೂ ಇಟೆಲಿಯ ಧೋರಣೆಯಾವುದೆಂಬುದು ಇನ್ನೂ ಖಚಿತವಾಗಿಲ್ಲ. ಇಟಲಿ ಕಟ್ಟಡಗಳಲ್ಲಿ, ಇಟೆಲಿಯನರ ಎದೆ ಭುಜಗಳಲ್ಲಿದ್ದ ಫೇಸಿಸ್ಟ್ ಚಿಹ್ನೆಗಳೇನೋ ಮಾಯವಾದುವು; ಆದರೆ ಅವರ ಹೃದಯದೊಳಗಿನ ಫೇಸಿಸ್ಟ್ ಭಾವನೆ ತೊಲಗಿದ ನಿದರ್ಶನವಿನ್ನೂ ದೊರೆತಿಲ್ಲ. ಮುಸಲನಿಯ ಬದಲಿಗೆ ಬೊಡೊಗ್ಲಿಯೋ ಬಂದ; ಯುದ್ಧದ ಬದಲಿಗೆ ಶಾಂತಿ ಬಂದಿಲ್ಲ. ಮುಸಲನಿ ತನ್ನ ಕೈಯ ಅಧಿಕಾರದಂಡ ಕೆಳಗಿರಿಸಿದ; ಆದರೆ ಇಟೆಲಿಯೆತ್ತಿದ ಕೋವಿಯನ್ನಿನ್ನೂ ತಗ್ಗಿಸಿಲ್ಲ.

ಬೊಡೊಗ್ಲಿಯೋ ಬಂದನೇಕೆ?

ಉತ್ತರ ಇಟೆಲಿಯ ಒಂದು ಲೈನಿನಲ್ಲಿ ರಕ್ಷಣಾ ಯುದ್ಧ ಹೂಡಬೇಕು-ಮಿಕ್ಕ ಭಾಗವನ್ನು ಸಮಯಾನುಕೂಲತೆಗಾಗಿ ಕಡೆಗಣಿಸಬೇಕು-ಎಂಬ ಹಿಟ್ಲರ್ ಮುಸಲನಿ ನಿರ್ಧಾರಕ್ಕೆ ಇಟೆಲಿಯ ರಾಜರೊಪ್ಪದ್ದರಿಂದಲೇ ಮುಸಲನಿ ರಾಜೀನಾಮೆಕೊಡಬೇಕಾಯಿತೆಂದ ವಾರ್ತೆ. ಇದು ನಿಜವಾಗಿದ್ದರೆ ಯುದ್ಧ ನಡೆಯಬೇಕೋ ಬೇಡವೋ ಎಂಬ ಪ್ರಶ್ನೆಯಲ್ಲಿ ಹುಟ್ಟಿಲ್ಲ; ಯುದ್ಧವನ್ನು ಹಾಗೆ ನಡೆಸಬೇಕೋ ಹೀಗೆಯೋ ಎಂಬ ಕಾರ್ಯನೀತಿಯ ಭಿನ್ನಾಭಿಪ್ರಾಯವಷ್ಟೇ ತಲೆದೋರಿತು. 'ಮುಸಲನಿಯು ದೇಶದ ಸರ್ವಶಕ್ತಿಯನ್ನು ಯುದ್ಧಕಾರ್ಯದಲ್ಲಿ ಉಪಯೋಗಿಸಲು ಅಸಮರ್ಥನಾದ'-ಎಂದು ಈಗಿನ ರೋಮ್ ಸರಕಾರದ ಸಾರಿರುವಂತಿದೆ. ಅಂದ ಮೇಲೆ ಮಿತ್ರರಿಗೆ ಮುಸಲನಿಗಿಂತ ಬೊಡೊಗ್ಲಿಯೋ ಭಯಂಕರನಾಗಬಹುದು. ಸರ್ವಾಧಿಕಾರಿ ಬೊಡೊಗ್ಲಿಯೋನ ಬಾಯಿಯಿಂದ ಹೊರಬಿದ್ದ ಸರ್ವಪ್ರಥಮ ಮಾತೆಂದರೆ 'ಯುದ್ಧ ಮುಂದುವರಿಯುವದು; ಇಟೆಲಿಯು ಕೊಟ್ಟ ಮಾತನ್ನು ಪಾಲಿಸುವದು' ಯುದ್ಧವು ಮುಂದುವರಿಯದಂತೆ, ಇಟೆಲಿ ತನ್ನ ಮಾತನ್ನು ಪಾಲಿಸಿಕೊಡದಂತೆ ಮಿತ್ರರಾಷ್ಟ್ರೀಯ ಸೇನೆಗಳು ಸಾಧಿಸಬಹುದು; ಆದರೆ ಬೊಡೊಗ್ಲಿಯೋ ಈ ಸಾಧನೆಗಾಗಿ ಬಂದವನಲ್ಲ ಎಂಬುದು ಸ್ಪಷ್ಟ. ಮುಸಲನಿಯಿಂದಾಗದುದು ಬೊಡೊಗ್ಲಿಯೋನಿಂದಾಗುವದು—ಎಂದೇ ಈ ಬದಲಾವಣೆ. ಆದರೆ ಹಾಗೆ ಸಾಧಿಸಲ್ಪಡದೇ ಹೋದರೆ ಪ್ರಾಯಶಃ ಸಂಗ್ರಾಮವೇ ಕೊನೆಗಾಣಿಸಲು ಸಂಧಾನವಿತ್ತು [illegible]

ಮುಸಲನಿಯೆಲ್ಲಿ?

ಬರ್ಲಿನಿಗೋಡಿ ಹೋಗಲು ಪ್ರಯತ್ನಿಸಿ ಬಂಧಿತನಾದ- ಸ್ಪೈನಿಗೆ ಹಾರಿದ್ದಾನೆ- ರೋಮಿನ ಬಳಿಯ ತನ್ನ ಹಳ್ಳಿ ಮನೆಯಲ್ಲಿ ಬಲವಾದ ಪಹರೆಯಲ್ಲಿದ್ದಾನೆ- ಬೊಡೊಗ್ಲಿಯೋನೊಡನೆ ವ್ಯವಹಾರ ಸಂಬಂಧವಿಟ್ಟುಕೊಂಡಿದ್ದಾನೆ- ಎಂದೆಲ್ಲಾ ಮುಸಲನಿಯೀಗ ಸರ್ವಾಂತರ್ಯಾಮಿಯಾಗಿದ್ದಾನೆ. ಇನ್ನೊಂದು ವಾರ್ತೆಯಂತೆ ಮುಸಲನಿ ರಾಜೀನಾಮೆಯನ್ನೇ ಕೊಟ್ಟಿಲ್ಲ. ಫೇಸಿಸ್ಟ ಗ್ರೇಂಡ್ ಕೌನ್ಸಿಲಿನ ನಿರ್ಧಾರವಾದ ಮೇಲೂ, ರಾಜರಿಗೆ ರಾಜೀನಾಮೆಯೊಪ್ಪಿಸುವ ಬದಲಿಗೆ ಕೈತರ ಘೇತುಕೂಟಕ್ಕಾಗಿ ಬಹುಮಾನ ಹಂಚುವ ಸಮಾರಂಭದಲ್ಲಿ ಮುಸಲನಿ ತೊಡಗಿದ್ದನಂತೆ. ಆದರೆ ರಾಜರು ಕೂಡಲೇ ಅವನನ್ನು ಬಂಧಮಾಡಿಸಿ ವಿಚಾರಿಸಿದರು. ಆ ಮೇಲೆ ಸೈನಿಕಾಧಿಕಾರಿಗಳು ಅವನನ್ನು ಹಸ್ತಗತ ಮಾಡಿ ಎಂಬ್ಯುಲೆನ್ಸೊಂದರಲ್ಲಿ ಬಲಾತ್ಕಾರದಿಂದ ತುರುಕಿಸಿ ಅಜ್ಞಾತ ಸ್ಥಳವೊಂದಕ್ಕೊಯ್ದರು, ಹೀಗೆ ಹಲವು ವಿಧದ ವಿಲಕ್ಷಣ ವಾರ್ತೆಗಳಿವೆ. ಆದರೆ ಮುಸಲನಿಗೆ ಅಧಿಕಾರಭಂಗಹೊರತು ಮಾನಭಂಗವಾಗಿಲ್ಲವೆಂಬುದು ಸ್ಪಷ್ಟ. ಇಟೆಲಿಯ ಮಿಲಾನ್ ಮೊದಲಾದ ಕಡೆಗಳಲ್ಲಿ ಫೇಸಿಸ್ಟರು ಹುಚ್ಚುನಾಯಿಗಳಂತೆ ಬೇಟೆಯಾಡಲ್ಪಡುತ್ತಿದ್ದಾರೆ. ಹಲವು ಕಡೆಗಳಲ್ಲಿ ಆತುರೋದ್ವೇಗ, ಗಲಭೆ, ಫೇಸಿಸ್ಟ್ ವಿರೋಧ ಪ್ರದರ್ಶನಗಳಾಗಿವೆ. ಆದರೆ ಫೇಸಿಸ್ಟರಿಗಿಂತಲೂ ಹೆಚ್ಚಾಗಿ ಫೇಸಿಸ್ಟ್ ವಿರೋಧಿಗಳನ್ನು ಈಗಿನ ಸರಕಾರವು ಹತೋಟಿಯಲ್ಲಿಟ್ಟಿದೆ; ಫೇಸಿಸ್ಟ್ ಖಂಡನೆಗೆ ಕೂಡಾ ಬಹಿಷ್ಕಾರ ಹಾಕಿದೆ; ಫೇಸಿಸ್ಟರೆಲ್ಲಾ ಸೈನ್ಯಾಂತರ್ಗತ ಹೊಂದಿ ಯುದ್ಧಕಾರ್ಯ ಪ್ರವೃತ್ತರಾಗಿದ್ದಾರೆ. ರಾಜರ ದಾಯಾದಿ ಪಂಗ್ತಿಗೆ ಸೇರಿಸುವ ಇಟೆಲಿಯ ಅತಿದೊಡ್ಡ ಬಿರುದು ಇನ್ನೂ ಮುಸಲನಿಗಿದೆ. ಜುಲಾಯಿ ತಾ. 29, ಮುಸಲನಿಯ 60ನೇ ಜನ್ಮದಿನ-ಹಿಟ್ಲರರಿಂದ ಮುಸಲನಿಗೆ ಜನ್ಮದಿನದ ಉಡುಗೊರೆ ಕೂಡಾ ಬಂದಿದೆ. ಇವೆಲ್ಲಾ ಫೇಸಿಸ್ಟ್ ಪಕ್ಷಕ್ಕೆ ಅಥವಾ ಫೇಸಿಸ್ಟ್ ಪ್ರಮುಖನಿಗಾದ ಶಿಕ್ಷೆಗಳೆ? ರಾಷ್ಟ್ರದ್ರೋಹಿಯೊಬ್ಬನನ್ನು ಯಾವರಾಷ್ಟ್ರವಾದರೂ ಇಷ್ಟೊಂದು ಮೃದುವಾಗಿ ಶಿಕ್ಷಿಸಿದ ನಿದರ್ಶನವಿದೆಯೆ? ಫ್ರಾನ್ಸನ್ನು ಯುದ್ಧಕ್ಕಿಳಿಸಿದ ದಲಾದಿಯೂರರ ದುರದೃಷ್ಟದೊಡನೆ ಮುಸಲನಿಯ ವಿರಾಮವನ್ನು ಹೋಲಿಸಬಹುದೆ? ಅರ್ಥಾತ್ ಇಟೆಲಿಯು ಮುಸಲನಿಯನ್ನು ಕಂಠ ಹಿಡಿದು ದಬ್ಬಿಲ್ಲ-ಕೈಕೊಟ್ಟು ದೂರ ಕುಳ್ಳಿರಿಸಿದೆ!

★

ಮಿತ್ರರ ಶರ್ತ.

ಮುಸಲನಿಯ ಪತನವನ್ನನುಸರಿಸಿ, ಮುಖ್ಯ ಮಂತ್ರಿ, ಚರ್ಚಿಲ್ಲರು, ಅಧ್ಯಕ್ಷ ರುಸವೆಲ್ಟರಿತ್ತ ಭಾಷಣಗಳಲ್ಲಿ 'ಯುದ್ಧವು ಯಥಾವಿಧಿಸಾಗುವದು' ಎಂದಿದ್ದಾರೆ. ಮುಸಲನಿ ಕೊಳೆಯನ್ನು ತೊಳೆದುಕೊಂಡೊಡನೆ ಇಟೆಲಿ ನಿರ್ಮಲವಾಗಲಿಲ್ಲ. ಅಲ್ಲಿ ಜರ್ಮನ್ ಸೇನೆಗಳಿವೆ; ಅವುಗಳನ್ನು ಹೊರಗೆ ಹಾಕಬೇಕು;ಇಲ್ಲವೇ ಬಂಧಿಸಿಡಬೇಕು; ಇಟೆಲಿಗೆ 'ಶರಣು'ಎನ್ನುವದೊಂದೇ ಅಧಿಕಾರವಿದೆ, ಶರ್ತ ಹಾಕುವ ಅಧಿಕಾರವಿಲ್ಲ. ಹಾಗೆ ಶರಣು ಬಂದ ಮೇಲೂ ಜರ್ಮನಿಯ ಮೇಲೆ ಯುದ್ಧ ನಡೆಸಲನುಕೂಲವಾಗುವಂತೆ ಯುದ್ಧಾವಧಿಯ ವರೆಗೆ ಮಿತ್ರ ಸೇನೆಗಳು ಇಟೆಲಿಯನ್ನು ಆಕ್ರಮಿಸಿಕೊಳ್ಳಬೇಕಾಗುವದು; ಇನ್ನು ಯಾವಕಾಲಕ್ಕಾದರೂ ಇಟೆಲಿಯು ಕಳಕೊಂಡ ವಸಾಹತುಗಳನ್ನು ಮರಳಿ ಪಡೆಯುವ ಆಸೆಯಿಲ್ಲ—ಇವು ಮಿತ್ರರ ಶರ್ತಗಳು. 'ಜರ್ಮನ್ ಸೇನೆಗಾವ ಸಹಾಯವನ್ನೂ ಕೊಡಬೇಡಿರಿ. ನಮ್ಮ ಯುದ್ಧ ಕೈದಿಗಳನ್ನು ಬಿಟ್ಟಲ್ಲಿ ನಿಮ್ಮ ಯುದ್ಧ ಕೈದಿಗಳನ್ನು ನಾವು ಬಿಡುವೆವು; ನಿಮ್ಮನ್ನು ಉದ್ಧರಿಸುವೆವು'—ಎಂಬ ಮಿತ್ರ ಸೇನಾನಿ ಜನರಲ್ ಈಸೇನೋವರರ ಶರ್ತಗಳಲ್ಲಿ, ನಯವಿನಯವಿದ್ದಂತಿದ್ದರೂ ಅಮೇರಿಕದಿಂದ ಮಿ. ಕೋರ್ಡೆಲ್ ಹಲ್ಲರೂ, ಇಂಗ್ಲಾಂಡಿನಿಂದ ಮಿ. ಈಡೆನರೂ 'ಅದೂ ಇದು ಒಂದೇ' ಎಂಬ ಶ್ರುತಿಹಿಡಿದು ಇಟೆಲಿಯು ನಿಶ್ಶರ್ತ ಶರಣು ಬರಬೇಕೆಂಬುದೇ ತಮ್ಮ ಸರಕಾರದ ಮತ್ತು ಈಸೇನೋವರರ ಕರೆ ಎಂದು ಸ್ಪಷ್ಟಪಡಿಸಿದ್ದಾರೆ. ಇಟೆಲಿಯ ಹೊಸವಿದೇಶ ಮಂತ್ರಿಗಳು ದೀರ್ಘ ಹೋರಾಟದ ಅಸಾಧ್ಯತೆಯನ್ನು ತಿಳಿಸಿ ಸಂಧಾನಯತ್ನ ಮಾಡುವಂತೆ ಟರ್ಕಿಯೊಡನೆ ಕೇಳಿ ಕೊಂಡಿದ್ದಾರೆ. ಪೋಪರು ಸಂಧಾನ ಪ್ರಯತ್ನದಲ್ಲಿದ್ದಾರೆ-ಇಟೆಲಿ ಜನತೆಯು ಸಂಧಾನಾಶೆಯಲ್ಲಿದೆ—ಬೊಡೊಗ್ಲಿಯೋ ಸರಕಾರವು ಸಂಧಿ ಶರ್ತಗಳ ಪರ್ಯಾಲೋಚನೆಯಲ್ಲಿದೆ—ಎಂಬ ಒಂಡೆಡೆಯ ಸುದ್ದಿ ಇಟೆಲಿಯನ್ನು ಮಿತ್ರರ ಕಡೆಗೆಳೆಯುತ್ತಿದೆ. 'ರಾಷ್ಟ್ರೀಯ ಶಕ್ತಿಯನ್ನೆಲ್ಲಾ ಯುದ್ಧಕಾರ್ಯದಲ್ಲಿ ಕೇಂದ್ರೀಕರಿಸಲು ಮುಸಲನಿ ಅಸಮರ್ಥನಾದುದರಿಂದಲೇ ಅವನನ್ನು ತೆಗೆಯಲಾಯಿತು'-ಎಂಬ ರೋಮ್ ರೇಡಿಯೋದ ವಾದ; 'ಧೋರಣೆಯಲ್ಲಾವ ವ್ಯತ್ಯಾಸವೂ ಇಲ್ಲ'-ಎಂಬ ಹೊಸಮಂತ್ರಿಮಂಡಲದ ನಿರ್ಧಾರ; 'ನಮ್ಮ ಧೋರಣೆ ಹಿಂದಿನದೇ; ಸಂಧಾನ ಸುದ್ದಿಗಳೆಲ್ಲಾ ಪೂರ್ತಿ ನಿರಾಧಾರವಾದವುಗಳು'-ಎಂದು ಜಾಪಾನ್ ಮತ್ತು ಫ್ರಾನ್ಸಿಗೆ ಬೊಡೊಗ್ಲಿಯೋ ಸರಕಾರದತ್ತ ಆಶ್ವಾಸನೆ,-ಇವೆಲ್ಲಾ ಇಟೆಲಿಯನ್ನು ಜರ್ಮನಿಯ ಸಾಲಲ್ಲೇ ನಿಲ್ಲಿಸಿವೆ. ಕಳೆದ 30ನೇ ರಾತ್ರಿ 1-30ಕ್ಕೆ ಮೆಂಬರರನ್ನು ಹಾಸಿಗೆಯಿಂದೆಬ್ಬಿಸಿ, ಮಿ. ಚರ್ಚಿಲ್ಲರು ಯುದ್ಧಮಂಡಲದ ಸಭೆಕರೆದುದನ್ನು ಕಂಡು ಇಟೆಲಿಯಿಂದ ಸಂಧಾನ ಸೂಚನೆ ಬಂದಿರಬೇಕೆಂಬ ಆಸೆಯೊಮ್ಮೆ ಎದ್ದರೂ ಈ ತನಕ ಅಂತಹದೇನೂ ನಡೆದಿಲ್ಲವಂತೆ.

ಜರ್ಮನರು ಮಲಗಿಲ್ಲ!

ಮೇಲಾಗಿ ಮುಸಲನಿ ಪತನವಾದೊಡನೆ ಮಿತ್ರರ ಕಡೆಯಿಂದ ಇಟೆಲಿ ನುಗ್ಗಿದುದು ಸಂಧಾನ ಶರ್ತವೊಂದೆ-ಆದರೆ ಜರ್ಮನರ ಅಸಂಖ್ಯಾತ ಸೇನೆಗಳೇ ನುಗ್ಗಿವೆ. ಇಡೀ ಉತ್ತರ ಇಟೆಲಿ ಮತ್ತು ಇಸ್ಟ್ರಿಯನ್ ಪೆನಿನ್ಸುಲವು ನಾಜೀ ಸೇನೆಯ ಹತೋಟಿಯಲ್ಲಿವೆ. ಸಬ್‌ಮೇರಿನ್ ರಾಣ್ಯವಾದ ಫ್ಯೂಮ್ ಬಂದರವು ಜರ್ಮನರ ಕೈಯಲ್ಲಿದೆ. ಅರ್ಥಾತ್ ಉತ್ತರ ಇಟೆಲಿ ವಿಭಾಗದಲ್ಲಿ ರಕ್ಷಣಾಲೈನನ್ನು ಕಟ್ಟಿ ನಿಲ್ಲುವ ಹಿಟ್ಲರರ ಸೂಚನೆಯನ್ನು ಶಿರಸಾವಹಿಸಿದ ಮುಸಲನಿಯೊಟ್ಟಿಗೆ ಆ ಯುದ್ಧಯೋಜನೆಯೂ ಬಿದ್ದು ಹೋಗದಂತೆ ಹಿಟ್ಲರರು ಫ್ಲಾರೆನ್ಸೀಯ ಮುಂಜಾಗ್ರತೆ ವಹಿಸಿದ್ದಾರೆ. ಪ್ರಕೃತ ಬೊಡೊಗ್ಲಿಯೋ ಹಿಟ್ಲರರೂ ಕಂಕುಳಡಿಯಿಂದ ಮಾತಾಡುತ್ತಿದ್ದಾನೆ. ಬೊಡೊಗ್ಲಿಯೋ ಅಪಸ್ವರ ಹೊರಡಿಸುತ್ತಾನಾದರೆ ಹಿಟ್ಲರರಲ್ಲಿಯೇ ಅದುಮಿ ಹಿಡಿಯುವದು ಖಂಡಿತ. ಅಂದಮೇಲೆ, ಮಿತ್ರರೊಡನೆ ಸಂಧಾನೇಚ್ಛೆಯಿಂದಾಗಿಯೇ ಇಟೆಲಿಯಲ್ಲಿ ಅಧಿಕಾರ ಬದಲಾವಣೆಯಾಯಿತೆಂದು ಭಾವಿಸಿಕೊಂಡರೂ ಸದ್ಯಸ್ಥಿತಿಯಲ್ಲಿ ಅದು ಸಾಧ್ಯವೇ ಎಂಬ ಪ್ರಶ್ನೆಯಿದೆ. ಮಿತ್ರರೊಡನೆ ಸಂಧಾನ ಮಾಡಿಕೊಂಡು ಹಿಟ್ಲರರೊಡನೆ ಸಂಗ್ರಾಮವೆ? ಅಂತೂ ಮುಸಲನಿ ಪತನವು ಇಟೆಲಿಯ ಪಾಲಿಗೆ ಒಂದು ಅವಘಡಮಾತ್ರ-ಅದೃಷ್ಟ ಬದಲಾವಣೆಯಲ್ಲ.

ದಿ ವಿಜಯಾ ಬೇಂಕ್, ಲಿಮಿಟೆಡ್.

ಹೆಡ್ ಆಫೀಸು:— **ಮಂಗಳೂರು.**

ಶಾಖೆಗಳು:-

ಮಂಗಳೂರು, ಸಿಟಿ-ಮಂಗಳೂರು,
ಉಡುಪಿ, ಕಾರ್ಕಳ, ಕುಂದಾಪುರ,
ಕಾಪು, ಬ್ರಹ್ಮಾವರ.

ಸದ್ಯವೇ ಕಾಸರಗೋಡಿನಲ್ಲೊಂದು ಶಾಖೆಯು ತೆರೆಯಲ್ಪಡುವುದು.

ಪ್ರತಿ ಶಾಖೆಗಳಲ್ಲೂ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳು ಕೈಗೊಳ್ಳಲ್ಪಡುತ್ತವೆ.

THE VIJAYA BANK LIMITED, MANGALORE.

ರುಚಿ!! ಸೆಂಟ್ರಲ್ ಕೆಫೆ ರುಚಿ!!

ಶ್ರೀನಿವಾಸ ಬಿಲ್ಡಿಂಗ್ಸ್, ಹೆಡ್ ಪೋಸ್ಟಾಫೀಸ್ ಸರ್ಕಲ್, ಶಿವಮೊಗ್ಗ.
ಪ್ರಯಾಣಿಕರಿಗೆ ಉಳಿದುಕೊಳ್ಳಲು ಸ್ಥಳಾನುಕೂಲ ಏರ್ಪಡಿಸಿರುತ್ತೆ.
ಸಕಾಲದಲ್ಲಿ ಉತ್ತಮವಾದ ಊಟ, ಕಾಫಿ ಮತ್ತು ಹಸನಾದ ತುಪ್ಪದಲ್ಲಿ ತಯಾರಿಸಿದ ತಿಂಡಿ ದೊರೆಯುತ್ತೆ.

ಈ ಸ್ಥಳವು ರೈಲ್ವೆಸ್ಟೇಷನ್, ಬಸ್ ಸ್ಟ್ಯಾಂಡ್, ಕೋರ್ಟುಗಳಿಗೆ ಮಧ್ಯ ಸ್ಥಳದಲ್ಲಿದೆ.

ಎಸ್. ರಾಮದಾಸ್, ಪ್ರೊಪ್ರೈಟರ್.

ದಕ್ಷಿಣ ಕನ್ನಡ.

ಮಂಗಳೂರು.

ಜಿಲ್ಲೆಯ 'ಪೀಪ್‌ಲ್ಸ್ ಥಿಯೇಟರ್':

ಜನತಾ ರಂಗಭೂಮಿ ಚಳವಳದಲ್ಲಿ ಆಸಕ್ತಿ ಇರುವವರ ಸಭೆಯೊಂದು ತಾ. ೨೭ರಂದು ಸಂಜೆ ಶ್ರೀ| ರಂ. ರಾ. ತಲ್ಲೇರಿಕರರ ಅಧ್ಯಕ್ಷತೆಯಲ್ಲಿ ಜರಗಿತು. ಈ ಹೊಸ ನಾಟಕ ಕೂಟದ ಉದ್ದೇಶಗಳು ವಿವರಿಸಲ್ಪಟ್ಟ ಮೇಲೆ ಭಾರತೀಯ ಜನತಾ ರಂಗಭೂಮಿಯ ಮಂಗಳೂರು ಸಮಿತಿಯೊಂದು ರಚಿಸಲ್ಪಟ್ಟಿತು. ಶ್ರೀ| ರಂ. ರಾ. ತಲ್ಲೇರಿಕರರು ಸಮಿತಿಯ ಅಧ್ಯಕ್ಷರಾಗಿಯೂ ಶ್ರೀ| ಕುಳುಕುಂದ ಶಿ. ರಾ. ಅವರು ಕಾರ್ಯದರ್ಶಿಯೂಗಿಯೂ ಇರುವರು. ಬಿಜಾಪುರ ಮತ್ತು ಬಳ್ಳಾರಿಗಳ ಕ್ಷಾಮ ಪೀಡಿತರಿಗೆ ನೆರವಾಗುವುದಕ್ಕಾಗಿ ತನ್ನ ಮೊದಲನೆಯ ನಾಟಕವನ್ನು ಸಮಿತಿಯು ಅಭಿನಯಿಸುವುದು.

ಪಡ್ಡೆದೇಶಿ ಗೌ. ಸಾ. ಬ್ರಾಹ್ಮಣರ ಸಂಘ: ಮಂಗಳೂರು, ಇದರ ಉಪಾಧ್ಯಕ್ಷರಾದ ಶ್ರೀ| ಎನ್. ಎಮ್. ಪಿ. ಕಾಮತರು ದ. ಭಾರತದ ಪ್ರವಾಸವನ್ನು ಕಳೆದ ವಾರ ಕೈಕೊಂಡರು. ಹಾಗೆ ಹೊರಡುವುದಕ್ಕೆ ಮುಂಚಿತವಾಗಿ ಅಮ್ಮೆಂಬಳ ಶ್ರೀನಿವಾಸಪೈ, ಎಂ. ಶಿವರಾವ್ ಇವರ ಶುಭಾಶಂಸೆಯನ್ನು ಶ್ರೀ| ಕಾಮತರು ಪಡೆದಿದ್ದರು. ಜಿಲ್ಲೆಯ ಸಾರಸ್ವತ ಮತ್ತು ಗೌ. ಸಾ. ಬ್ರಾಹ್ಮಣ ಸಮಾಜದ ಮುಖಂಡರು ಶ್ರೀ| ಕಾಮತರಿಗೆ ಭೇಟಿ ಇತ್ತಿದ್ದು, ಹಲವರು ವಂತಿಗೆಗಳನ್ನು ಕೊಟ್ಟಿದ್ದರು. ಪಡ್ಡೆಕಾರ್ ಗೌ. ಸಾ ಬ್ರಾ ಸಂಘವನ್ನು ಸಂಬಂಧಪಟ್ಟ ಇತರ ಸಂಘಗಳೊಡನೆ ಕೂಡಿಸಲಿಕ್ಕೂ ನಿಧಿ ಸಂಗ್ರಹಿಸುವುದೂ ಶ್ರೀ ಕಾಮತರ ಪ್ರವಾಸದ ಉದ್ದೇಶವಾಗಿದೆ.

ನೇಮಕಗಳು: ಸ್ಟೇಶನರಿ ಸಬ್ ಮ್ಯಾಜಿಸ್ಟ್ರೇಟರುಗಳಾಗಿ ಶ್ರೀ| ಕೆ. ಹಸನ್‌ಸಾಹೇಬರು ಕಾರ್ಕಳದಲ್ಲಿ ಶ್ರೀ| ಪಿ ಸದಾನಂದಪೈ ಅವರು ಮಂಗಳೂರಿನಲ್ಲೂ ಶ್ರೀ| ಪಿ. ಸೀತಾರಾಮಶೆಟ್ಟಿ ಅವರು ಕುಂದಾಪುರದಲ್ಲೂ ನೇಮಕಹೊಂದಿರುವರು. ಹುಜೂರು ಕಚೇರಿಯ ಹೆಡ್ ಕ್ಲಾರ್ಕರಾಗಿ ಶ್ರೀ| ನರಸಿಂಹ ಅವರೂ, ಬಂಟ್ವಾಳದ ಡೆ. ತಹಸಿಲ್ದಾರರಾಗಿ ಶ್ರೀ| ಕೆ. ವೆಂಕಪ್ಪ ಅವರೂ ಜಿಲ್ಲಾ ಕೃಷಿ ಇಲಾಖಾಧಿಕಾರಿಯಾಗಿ ಶ್ರೀ| ರಾಘವನ್ ಅವರೂ ನೇಮಕ ಪಟ್ಟಿರುವರು.

ಜಿಲ್ಲಾ ಡಿ. ಎಸ್. ಪಿ. ಮಿ ಬೆಡ್ಫರ್ಡ್ ಅವರು ಆಗೋಸ್ತು ಮೂರನೆಯ ವಾರದ ಮೊದಲ್ಗೊಂಡು ೧||| ತಿಂಗಳ ರಜೆಯ ಮೇಲೆ ತೆರಳುವರು.

ದ. ಕ. ಜಿಲ್ಲಾ ಬೋರ್ಡಿನ ಸಭೆಯೊಂದು ಇದೇ ತಾ 14ನೇ ಶನಿವಾರ ಪೂರ್ವಾಹ್ನ 10-55 ಗಂಟೆಗೆ ಬೋರ್ಡಿನ ಕಾರ್ಯಾಲಯದಲ್ಲಿ ಜರಗಲಿರುವುದು. ಅಂದೇ [illegible] ಸಾಮಾನ್ಯ ಸಭೆಯೂ ಜರಗುವುದು. ವಿಶೇಷ ಸಭೆಯಲ್ಲಿ ಬೋರ್ಡಿನ ವರ್ಕ್ಸ್ ಎಂಡ್ ಕಮ್ಯೂನಿಕೇಶನ್ಸ್ ಸ್ಟೇಂಡಿಂಗ್ ಕಮಿಟಿಗೆ ಓರ್ವ ಸದಸ್ಯರ ಚುನಾವಣೆಯೂ ಜರಗಲಿರುವುದು, ಸಾಮಾನ್ಯ ಸಭೆಯಲ್ಲಿ ಬೋರ್ಡಿನ 1942-43ನೆ ವರುಷದ ಆಡಳಿತ ವರದಿ ಪರಿಶೀಲಿಸಲಾಗುವುದು.

ಚೂರು-ಚೂರು

'ಹಿಂದೀ ಸರಕಾರದ ಗೃಹ ಖಾತೆ ಮತ್ತು ಗಾಂಧಿಯವರೊಳಗೆ ಆಗಾಗ ಪತ್ರ ವ್ಯವಹಾರಗಳೇನೋ ನಡೆದಿವೆ. ಆದರೆ ಅವುಗಳ ಸಂಖ್ಯೆಯನ್ನಾಗಲೀ ಅವುಗಳೊಳಗಿದ್ದ ವಿಷಯವನ್ನಾಗಲೀ ತಿಳಿಸಲು ನಾನು ತಯಾರಿಲ್ಲ'—ಕಾಮನ್ಸ್ ಸಭೆಯಲ್ಲಿ ಮಿ. ಅಮೆರಿ.

ಸಂಖ್ಯೆ ಎಷ್ಟೇ ಇರಲಿ, ಸಂಗತಿ ಹೇಗೂ ಇರಲಿ, ಬಣ್ಣವಾವುದಿತ್ತು—ಕೆಂಪು ಕಾಗದವಲ್ಲವಷ್ಟೆ?

O

'ಗಾಂಧೀ ಬಂಧನಕ್ಕೆ ಕಾರಣವಾದ ಪರಿಸ್ಥಿತಿಯು ಮೇಲಿಂದ, ಹಿಂದುಸ್ಥಾನ ಅಥವಾ ಈ ದೇಶದಲ್ಲಿ ತನ್ನ ಅಭಿಪ್ರಾಯವನ್ನು ಹೊರಗೆಡಹುವ ಸಂದರ್ಭವನ್ನೇ ಗಾಂಧಿಯವರಿಗೆ ಕೊಡಕೂಡದೆಂದು ಹಿಂದೀ ಸರಕಾರದ ನಿರ್ಧಾರವಿದೆ'— ಮಿ. ಅಮೆರಿ.

ಅರ್ಥಾತ್ ಬಂಧಿಸಿಟ್ಟಲ್ಲಿಯೇ ಬಾಯಿ ಹೊಲಿದೂ ಹಾಕಲಾಗಿದೆ!

O

ಪ್ರಾಣಾಪಾಯದಿಂದ ಪಾರಾದುದಕ್ಕಾಗಿ ಮಿ. ಜಿನ್ನರನ್ನು ಅಭಿನಂದಿಸುವ ನಿರ್ಣಯವು ಕೇಂದ್ರ ಎಸೆಂಬ್ಲಿಯ ಮುಂದೆ ಬಂದು ತೀವ್ರ ಚರ್ಚೆಯ ಬಳಿಕ ಪಾಸಾಯಿತು.

ಜತೆಯಲ್ಲೇ ಜಿನ್ನರ ಕಂಠಕ್ಕೆ ನಾಟಲೊಪ್ಪದ ಆ ಚೂರಿಯನ್ನೂ ಅಭಿನಂದಿಸಬಾರದಿತ್ತೆ?

O

'ನಮ್ಮ ಧೋರಣೆಯಲ್ಲಿ ವ್ಯತ್ಯಾಸವಿಲ್ಲ' -ಇಟೆಲಿಯ ಹೊಸ ಸರಕಾರದ ನಿರ್ಧಾರ

ವ್ಯತ್ಯಾಸವೆಂದರೆ ಚಿಹ್ನೆಗಳಲ್ಲಿ ಮಾತ್ರ—ಮೊದಲಿದ್ದ ಫೇಸಿಸ್ಟ್ ಚಿಹ್ನೆಯ ಬದಲಿಗೆ ಈಗ ರಾಷ್ಟ್ರೀಯ ಚಿಹ್ನೆ.

O

'ಪಾರ್ಲಿಮೆಂಟ್ ಸದಸ್ಯರಾದ ಕೇಪ್ಟನ್ ಕನ್ನಿಂಗ್ಹಾಮ್ ಮತ್ತು ಕಮಾಂಡರ್ ಲೋಕರ್ ಲೇಂಪ್ಸನರು ಕಾಮನ್ಸ್ ಸಭೆಯಲ್ಲೇ ಗುದ್ದಾಡಿಕೊಂಡರು'.

ಇದು ಅಸಾಮಾನ್ಯ ಸಾಹಸವಾದ್ದರಿಂದ ಅವರಿಗೆ ಮೇಲ್ದರ್ಜೆಯ 'ಯುದ್ಧ ಬಿರುದು' ದೊರೆಯಬಹುದೆಂದು ನಿರೀಕ್ಷಿಸುತ್ತೇವೆ.

O

'ಮುಸಲಿನಿ ಸ್ಪೈನಿಗೋಡಿದ್ದಾನೆ' 'ಮುಸಲಿನಿ ರೋಮಿನ ಬಳಿ ಸ್ಥಾನಬದ್ಧನಾಗಿದ್ದು ಬೊಡೊಗ್ಲಿಯೋನೊಡನೆ ವ್ಯವಹಾರ ನಡೆಸುತ್ತಿದ್ದಾನೆ' 'ಮುಸಲಿನಿ ಬರ್ಲಿನಿಗೋಡಲು ಪ್ರಯತ್ನಿಸಿ ಬಂಧಿಸಲ್ಪಟ್ಟಿದ್ದಾನೆ'—ಏನೇನೋ ವಾರ್ತೆಗಳು.

ಅಂತೂ ಮುಸಲಿನಿ ಇದ್ದಾನೆ; ಅವನ ಕೈಕಾಲುಗಳೂ ಇವೆ!

O

'ದಕ್ಷಿಣಾಫ್ರಿಕದ ಚುನಾವಣೆಯಲ್ಲಿ ಜನರಲ್ ಸ್ಮಟ್ಸರೇ ಬಹುಮತ ಪಡೆದು ವಿಜಯಿಯಾಗಿದ್ದಾರೆ.

'ನಾವು ಖಂಡಿತವಾಗಿಯೂ ಯುದ್ಧ ಗೆಲ್ಲುವೆವು'—ಎನ್ನುತ್ತಿದ್ದ ಜ. ಸ್ಮಟ್ಸರ ಮಾತು ಈ ಮಟ್ಟಿಗೆ ನಿಜವಾಯಿತು.

—ವಿನೋದಿ.

ಉಡುಪಿ.

ಕಳೆದ ದಶಂಬರ ತಿಂಗಳಲ್ಲಿ ಸ್ವಲ್ಪೇ ದಿನಗಳ ಕಾಯಿಲೆಯಿಂದ ಅಕಾಲ ನಿಧನ ಹೊಂದಿದ ಉಡುಪಿಯ ಸಾಹುಕಾರರೊಳಗೆ ಹೆಸರುಗೊಂಡ ಶ್ರೀ. ಪಿ. ಎ. ಪೈಗಳ ಸ್ಮಾರಕವಾಗಿ ಮಹಾಜನರು ಏರ್ಪಡಿಸಿದ ನಿಧಿಗೆ ಒಟ್ಟು ರೂ 11871-8-10 ಜಮೆಯಾಗಿದೆ. ಸ್ಮಾರಕ ಕಮಿಟಿಯವರು ಸದ್ರಿ ಫಂಡನ್ನು ತಮ್ಮ ಸಲಹೆಗಳೊಡನೆ ಐವೇಜನ್ನು ಮಣಿಪಾಲ ಹಿಂದು ಒರ್ಫನೇಜಿಗೆ ವಹಿಸಿಕೊಟ್ಟು ಅದು ಶಾಶ್ವತವಾಗಿ ನಡೆದು ಬರುವಂತೆ ಮಾಡಿರುತ್ತಾರೆ. ಹಿಂದೂ ಒರ್ಫನೇಜಿಗೆ ಒಪ್ಪಿಸಲಾಗಿರಿಸಿದ ಹಣದ ಹೊರತು, ಉಳಿದ ಹಣಗಳ ಉತ್ಪತ್ತಿಯಿಂದ ವರ್ಷಾವಧಿ ತಲಾ ಒಂದರ ರೂ. 30/-ರ ಐದು ವಿದ್ಯಾರ್ಥಿ ವೇತನಗಳು ಕೊಡಲ್ಪಟ್ಟಿವೆ. ಉಡುಪಿ ಬೋರ್ಡ್ ಹೈಸ್ಕೂಲ್ ಕ್ರಿಶ್ಚನ್ ಹೈಸ್ಕೂಲ್, ಮತ್ತು ಸೆಂಟ್ ಸಿಸಿಲಿಯಾ ಗರ್ಲ್ಸ್ ಹೈಸ್ಕೂಲ್ ಇವುಗಳಲ್ಲಿ IVನೇ ಫಾರ್ಮಿನ ಒಬ್ಬೊಬ್ಬರಂತೆ ಮೂರು ವಿದ್ಯಾರ್ಥಿಗಳಿಗೂ, ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್‌ನ ಇನ್ಶೂರೆನ್ಸ್ ಮತ್ತು ಬೇಂಕಿಂಗ್ ಕ್ಲಾಸುಗಳ ಒಬ್ಬೊಬ್ಬರಂತೆ ಎರಡು ವೇತನಗಳನ್ನೂ ಕೊಡಲಾಗಿದೆ. ಸದ್ರಿ ಸ್ಮಾರಕ ಫಂಡಿಗೆ ಧನಸಹಾಯ ಮಾಡಿರುವ ಮಹನೀಯರಿಗೂ, ಸಂಸ್ಥೆಗಳಿಗೂ ಧನ್ಯವಾದಗಳನ್ನು ಅರ್ಪಿಸುವುದರೊಡನೆ, ಇನ್ನು ಮುಂದಕ್ಕೆ ಸದ್ರಿ ಫಂಡಿಗೆ ಸಹಾಯ ನೀಯುವವರು "ಹಿಂದೂ ಒರ್ಫನೇಜ್, ಮಣಿಪಾಲ" ಇವರಿಗೆ ಕಳುಹಿಸಿ ಕೊಡಬೇಕಾಗಿಯೂ ಸಮಿತಿಯ ಅಧ್ಯಕ್ಷರು ತಿಳಿಸುತ್ತಾರೆ.

ಕುಂದಾಪುರ:—ತಾ. 20-7-43ರಲ್ಲಿ ಸೇರಿದ ಕುಂದಾಪುರ ತಾಲೂಕು ಆಹಾರ ಸಾಮಗ್ರಿಗಳ ಧಾರಣೆ ಏರ್ಪಾಡಿನ ಕಮಿಟಿ ಸಭೆಯಲ್ಲಿ ಬೆಳ್ತಿಗೆ ಅಕ್ಕಿ ಸೇರು 1ರ 0-6-0; ಕುಚ್ಚಿಗೆ ಮುಸ್ಕತಿ ಸೇರು 1ರ 0-5 4; ಕುಚ್ಚಿಗೆ ತೊಳಸಲು ಸೇರು 1ರ 0-4-9; ಯಿಂದ 0-5-0ರ ತನಕ ಧಾರಣೆ ನಿರ್ಧರಿಸಿರುತ್ತಾರೆ

NOTICE

In accordance with the resolution of the General Body Meeting of the Udipi Co-operative Agricultural & Industrial Society Ltd. Kallianpur held on 30th July 1943, the Society's factory Situated at Nayampalli will be sold as a going concern with all its plant, Machinery, equipment stock of oil etc., buildings and grounds. The factory has a 16 H. P. crude oil engine with two rice-hullers No. 7, two oil-mills and one sugar-can crusher in good working condition with pans for boiling paddy and cane juice and all the necessary accessories and equipment. As authorised by the general body, I hereby invite tenders for the purchase of the factory with its machinery, accessories equipment, furniture, stock, buildings and grounds. Sealed tenders with a tender deposit of Rs. 1000/- (Rs. one thousand) should be deposited with the secretary of the South canara Central Co-operative Bank Ltd., Kodiyalbail Mangalore during office hours, the last date and hour for such tenders being 15th August 1943, 5, P.M. No tender for less than Rs. 17500/- will be considered. The terms and conditions of sale are deposited with the Secretary of the aforesaid Bank and will be available for perusal by intending purchasers The title deeds are with the Manager who will allow the property with the machinery equipments etc, to be inspected by intending purchasers.

Sd. **M. Shiva Rao.**
President,
The South Canara Central Co-operative Bank Ltd., Kodialbail,
Mangalore.

Mangalore.
2nd August 1943

BHUVANENDRA PRODUCTS Ltd.,

Head Office and Factory:
Katapadi, S. Kanara

Depots:
1 Mahratha Galli, Hubli.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮೆಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ವಿಜಯಾ ಸ್ಟೋರ್ಸ್

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿದ್ದು.)

ಮುಖ್ಯ ಕಾರ್ಯಾಲಯ:— ಕೋರ್ಟ್ ರಸ್ತೆ, ಉಡುಪಿ. ದಕ್ಷಿಣ ಕನ್ನಡ.

ಶಾಖೆಗಳು — ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಕಿನ್ನಿಗೋಳಿ.

ಮುಸುಂ ಠೇವಣಿಗಳು ತಾ. 31-7-1943 ಅಥವಾ ಈ ತಾರೀಕಿನ ಮೊದಲು ವ್ಯವಹಾರಗುವ್ವಾದರೆ ಅಂಥಾ ಠೇವಣಿ ವರೆಗೆ ಸಾಲಿಯಾನ ಶೇಕಡಾ 3ರ ಸಲೆ ಬಡ್ಡಿಯಲ್ಲಿ 3, 4, 5 ಅಥವಾ 6 ತಿಂಗಳ ಮ್ಯಾದೆಯಿಂದ ಪ್ರತಿಯೊಂದು ವಾಯಿದೆಯಲ್ಲಿ ಅಂಗೀಕರಿಸಲ್ಪಡುತ್ತವೆ.

ಬೇಂಕಿನ ಪ್ರತಿಯೊಂದು ವಿಧದ ವಹಿವಾಟುಗಳು ನಡೆಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ನೋಟೀಸು ಅಥವಾ ಹತ್ತಿರದ ಶಾಖೆಯಲ್ಲಿ ದಯವಿಟ್ಟು ವಿಚಾರಿಸಿರಿ

ಅಮೃತಾಂಜನ ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡಿಚು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ,

REGD.

ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತಾ.

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisserri.

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ—

ಪರಸಿನಿ ಕಡವು ದೇವಸ್ಥಾನದಿಂದ ಈ ಮೂಲಕ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುನ್ಹಿರಾಮನ್,
ಮೆನೇಜರ್.

ಶ್ರೀ ತಾರಾನಾಥ ಭೇಷಜಾಲಯ

ಶಾಸ್ತ್ರೀಯ ಮತ್ತು ಸಿದ್ಧೌಷಧಿಗಳ ಕಾರಾಗಾರ, ಚಿಕ್ಕಮಗಳೂರು.

ನಿರ್ದೇಶಕ:- ಡಾ. M. L. Shetty, ಪ್ರೇಮವಿದ್ಯಾಪೀಠದ ಗೌ. ಪ್ರಾಧ್ಯಾಪಕರು.

ಎಲ್ಲಾ ತರದ ಭಸ್ಮ, ಖಲ್ವೀ ರಸಾಯನ, ಆಸವಾರಿಷ್ಟ, ಘೃತ, ತೈಲಗಳಿಗಾಗಿ ಕೂಡಲೇ ಬರೆಯಿರಿ.

ಬಿಕ್ಕಟ್ಟಿನ ರೋಗಗಳಲ್ಲಿ ಫಲಕಾರಿಯಾದ ಔಷಧೀ ಯೋಗಗಳು. ಗುರುಪರಂಪರೆಯ ಅನುಭವದಿಂದ ಬಂದ ನಿರ್ದುಷ್ಟ ಔಷಧೀಕರಣ ವಿಧಾನ.

ಡಾ। P. M. Alva,
ಮೆನೇಜರ್.

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ 1 ಗುಳಿಗೆ, ಮಧ್ಯಾಹ್ನಕ್ಕೆ 1 ಗುಳಿಗೆ, ಸಂಜೆಗೆ 1 ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರನೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜ ನಿರಾಳ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಕುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕವಾಲದಾರ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ಬಾಲಸಾಹಿತ್ಯ ಮಂಡಲ, ಲಿಮಿಟೆಡ್.

ದಿವಂಗತ ಶ್ರೀ ಉಳ್ಳಾಲ ಮಂಗೇಶರಾವ್ ಬಿ. ಎ., ಎಲ್. ಟಿ. ಅವರಿಂದ ರಚಿತವಾದ "ಹೊಸಗನ್ನಡದ ಗರಿಂದ ೫ರ ವರೆಗಿನ ರೀಡರು"ಗಳು ಇದೇ ಜೂನಿನ ಪ್ರಥಮ ವಾರದಲ್ಲೇ ಸಿದ್ಧವಾಗುವವು. ಅವುಗಳಿಗೆ ಬೆಲೆ ಮತ್ತು ಅವುಗಳ ಮೇಲಿನ ಕಮಿಶನಿನ ದರಗಳು ಕಾಲಕ್ಕೆ ತಕ್ಕಂತೆ ಹೊಂದಿಸಲ್ಪಟ್ಟು ಆಗಲೇ ಪ್ರಕಟಗೊಳ್ಳುವವು.

Bala Sahitya Mandal, Ltd.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲರ ಸಹಕಾರ ಅಪೇಕ್ಷಿಸುವುದು.

M. R. Punja, President & Manager — ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿಶ್ಚೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೭ ಟಿನ್ನಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೮ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದಕ**

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸದೊರೆಯ ಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,

ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ. : : : : ಮಂಗಳೂರು:



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳವೆ.

ಸ್ಥಾಪನೆ **ಕ್ರೌನ ರಬ್ಬರ ಸ್ಟಾಂಪ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸ್ಟೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE

Approved firm by the Govt. Mysore.
Certified by the Agent of the Govt. of India in Ceylon.

...PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618.

Ested. 1921 ಸ್ಥಾಪನೆ.

NAVAYUGA ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೩ ಸಂಚಿಕೆ ೪೭

FOUNDER
Sri. A. B. Shetty, M. L. A.

Vol. 23 No. 47

NAVAYUGA— Kannada Weekly —UDIPI, S. I.

ಉಡುಪಿ ● 12—8—1943 ● ಮಂಗಳೂರು.

ಹೊಸಕೆರೆ ಚಿದಂಬರಯ್ಯನವ
ರಿಂದ ರಚಿತವಾದ ಗೀತೆಯ
ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು ೨40 ಪುಟಗಳು.
ಬೆಲೆ (ಸುಂದರ ಪ್ರತಿ) ೦—೮—೦
(ಕೆಲಿಕೋ ಬೈಂಡ್) ೦-೧೨—೦
(ಲೆದರ್ ಬೈಂಡ್)೧—೪—೦
ಪ್ರತಿಗಳು ಪ್ರಸಿದ್ಧ ವ್ಯಾಪಾರಿಗಳಲ್ಲಿ ಸಿಗುವುದು.
0—10—0 ಸ್ಟಾಂಪು ಕಳಿಸಿದ್ದಲ್ಲಿ ಒಂದು
ಪ್ರತಿಯನ್ನು ಬುಕ್‌ಪೋಸ್ಟ್
ಮಾಡಲಾಗುತ್ತೆ.

**ನವಭಾರತ ಪುಸ್ತಕ ಭಂಡಾರ,
ಉಡುಪಿ.**

ಶ್ರೀಮತಿ ಶಿವರಾಣಿ ದೇವಿಯವರಿಂದ
(ದಿವಂಗತ ಪ್ರೇಮಚಂದರ ಪತ್ನಿ)
ರಚಿತವಾದ ಹಿಂದೀ ಕತೆಗಳ ಕನ್ನಡ
ಭಾಷಾಂತರ

ನಾರೀ ಹೃದಯ

ನಾರೀ ಹೃದಯದ ವಾಸ್ತವಿಕ ಚಿತ್ರ
ವನ್ನು ಚಿತ್ರಿಸುವ ಉತ್ತಮ ಕತೆಗಳ
ಸಂಗ್ರಹ.

ಬೆಲೆ 0—14—0
ಟ ಖ. 0—2—0 ಪ್ರತ್ಯೇಕ.
ಒಂದು ರೂಪಾಯಿ ಸ್ಟ್ಯಾಂಪು ಕಳಿಸಿದರೆ ಒಂದು
ಪ್ರತಿಯನ್ನು ಕಳಿಸಲಾಗುವುದು.

**ಕಿರಿಯರ ಪ್ರಪಂಚ, ಉಡುಪಿ.
ಅಥವಾ ನವಭಾರತ ಬುಕ್
ಡಿಪೊ, ಉಡುಪಿ.**

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

**The Canara Mutual Assurance Co., Ltd.,
UDIPI. (S. India).**

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು
ನೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸಮೀಪದವರ ಮತ್ತು
ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇವರಲ್ಲೊಂದು ಪೊಲಿಸಿಯನ್ನು ಪಡೆಯಿರಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯವಿಟ್ಟು ವಿಚಾರಿಸಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಮುಖ ಏಜಂಟರು:-
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ (ದ. ಕನ್ನಡ)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್,
ಕಲ್ಲಿಕೋಟೆ, ಮಂಗಳೂರು ಮತ್ತು ತ್ರಿವಾಂಕೂರು.

THE BOMBAY LIFE ASSURANCE CO., LTD.

...ರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೇಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.

Again - - -

TEN LACS IN TEN MINUTES.

Our share-lists opened on 5th August and soon closed by oversubscription. Ten Lacs in Ten Minutes a second time; but this time it is perhaps not such a great achievement in view of the changed economic conditions. Yet considering that shares of the face value of Rs. 50 were issued at Rs. 90 that they were sold without any publicity and without the help of brokers and that they were only sold over the counter to shareholders and customers the Canara Bank is justifiably proud of this achievement. when these shares are fully paid up according to the terms of the Prospectus the Capital structure of the Canara Bank will be as follows:—

Capital.	
ordinary	Rs. 15,00,000.
5% Cum. Pref.	Rs. 14,00,000.
Reserves.	Rs. 11,70,000.
Total	Rs. 40,70,000.

We thank all our friends and patrons whose unstinted support and sympathy made this success possible and assure them that we shall try in all possible ways to continue to deserve their good will.

CANARA BANK LIMITED.
Estd: 1906.

ಹಿಟ್ಲರರನ್ನು ಹಿಡಿದಿರಿಸಿದ ಸ್ಟಾಲಿನ್

ರಷ್ಯ-ಫಿನ್ಲೆಂಡಿನ ಯುದ್ಧದಿಂದ ನಷ್ಟವೇ ಹೆಚ್ಚಾಯಿತು-ಎಂದು [illegible] ಮಾರ್ಶಲ್ ಗೋರಿಂಗನಿಂದ ಸಂತಾಪ [illegible] ಹೊರಡಿಸಿದ ಮಾರ್ಶಲ್ ಸ್ಟಾಲಿನರ ಸಂಚನಾಬುದ್ಧಿಯನ್ನು ಪ್ರಪಂಚವೇ ಇಂದು ಶ್ಲಾಘಿಸಬೇಕು. ಜರ್ಮನಿ-ರಷ್ಯಗಳು ಮೈತ್ರಿ ಕರಾರು ಮಾಡಿಕೊಂಡು ದೂರದೂರ ನಿಂತಿದ್ದ ಕಾಲವದು. ರಷ್ಯ ಸೇನೆ ಪುಟ್ಟ ಫಿನ್ಲೆಂಡಿನ ಮೇಲೆ ದಾಳಿ ನಡೆಸಿದ್ದಿತು. ಫಿನ್ನರು-ಪುಟ್ಟ ಯೋಧರು-ಪ್ರದರ್ಶಿಸಿದ ಧೈರ್ಯಸ್ಥೈರ್ಯಗಳು ಪ್ರಪಂಚದ ಕಣ್ಣಿಗೆ ಅದ್ಭುತವಾಗಿ ಕಂಡಿದ್ದವು. ಆ ಯುದ್ಧದ ಪ್ರಥಮ ಭಾಗದಲ್ಲಿ ಗ್ರೀಸಿನಲ್ಲಿ ಒದ್ದಾಡಿದ ಇಟಲಿ ಸೇನೆಯ ದುರವಸ್ಥೆಯನ್ನೇ ಕೆಂಪು ಸೇನೆಯೂ ಅನುಭವಿಸುವಂತಾಯಿತು. ಪ್ರಬಲ ರಷ್ಯದ ಹೊಡೆತಗಳು ಅರ್ಧಮರ್ಧವಾಗಿ [illegible] ಫಿನ್ನರ ಆವೇಶವನ್ನು ಕೆರಳಿಸುತ್ತಿದ್ದವು; ಅವರು ಸ್ಫೂರ್ತಿಗೆ ಪುಟ ಕೊಡುತ್ತಿದ್ದವು. ಹೊರತು ಅವರನ್ನು ನಾಶ ಮಾಡುತ್ತಿರುವಂತೆ ಕಂಡು ಬರಲಿಲ್ಲ. [illegible] ಫಿನ್ಲೆಂಡು ಕೋಟೆ-[illegible] ಕೋವಿಯಿದಿರ ಕೋಲು, [illegible] ಸಿಳ್ಳು—ಎಂದು [illegible]. ಆದರೆ ಆದುದೇನು? [illegible] ಒದಲು ಮುಗ್ಗ [illegible] ಲೆಕ್ಕದಲ್ಲಿ [illegible] ಹೋಗುವ ಬದಲಿಗೆ ಇಂ [illegible] ದ್ದಾರೆ. [illegible] ಎಂದು ಲೋಕ ಪ್ರಶ್ನಿಸಿತು. ನಾಜಿಗಳು [illegible]. ಆ [illegible] ರಷ್ಯ [illegible].

ಅದೊಂದು ನಟನೆ!

ಕೆಂಪು ಸೇನೆಯ [illegible] ಫಿನ್ಲೆಂಡಿನಲ್ಲಿ ರಷ್ಯನ್ ಶಕ್ತಿಯ ಪ್ರದರ್ಶನವಾಗಲಿಲ್ಲ. ಸ್ಟಾಲಿನರಿಗೆ ಬೇಕಾಗಿರಲಿಲ್ಲ; ಹಿಟ್ಲರರಿಗೆ ಬೇಕಾಗಿತ್ತು. ಆದ್ದರಿಂದ [illegible] ಹಳೆಯ [illegible] ಗಳೊಂದಿಗೆ, ಹಳೇ ಕವಾಯತಿನ ಸೇನೆಯನ್ನು ಸ್ಟಾಲಿನರು ಫಿನ್ಲೆಂಡು ಕ್ಷೇತ್ರಕ್ಕಟ್ಟಿದರು; ಕೇವಲ ಯನ್ನು ಬಚ್ಚಿಟ್ಟು ಕೋಲಾಟಕ್ಕಿಳಿದರು! ಹಿಟ್ಲರರಾಗ ಬೆರಳು ಕಚ್ಚಿಕೊಂಡಿರಬೇಕು! ಇಷ್ಟು ದುರ್ಬಲ ರಷ್ಯದೊಡನೆ ಮೈತ್ರಿ ಕರಾರು ಮಾಡಿಕೊಳ್ಳುವ ಅಗತ್ಯವಿತ್ತೆ?—ಎಂದು ರಿಬ್ಬೆಂಟ್ರಾಪರನ್ನು ಪ್ರಶ್ನಿಸಿರಬೇಕು.

[illegible] ಮೇಲೆ ರಷ್ಯದ ಮೇಲೆ ನುಗ್ಗುವಾಗಲಾದರೂ, ಗೊತ್ತು ಪತ್ತುಗಳೊಡನ ತಯಾರಿಯ, ಆಧುನಿಕ ವಿಜ್ಞಾನಿಯ ಸಿದ್ಧತೆಯೊಡನೆ ಹಿಟ್ಲರರು ಕಾಲೆತ್ತಿರಬೇಕು! ಆದರೆ ಅಲ್ಲಿ ನಾಜೀ ಸೇನೆ ಪ್ರತ್ಯೇಕ ರಷ್ಯವನ್ನೇ ಕಂಡಿತು; ಫಿನ್ಲೆಂಡಿನಲ್ಲಿ ಕೋಲಾಟದಿಂದಲೇ ಸಮಯ ತೆಗೆದ ಕೆಂಪು ಸೇನೆ ರಷ್ಯದಲ್ಲಿ ಕೋಲಾಹಲವನ್ನೆಬ್ಬಿಸಿತು. ಅಲ್ಲಿ ಸೇನೆ ಫಿನ್ನಿಶರಿದಿರಲ್ಲಿ 'ಛೀ' ಕೇಳಿದವರು ಅಜೇಯ ನಾಜೀ ಸೇನೆಯಿದಿರು ನಿಂತು 'ಭೇಷ್' ಪಡೆದಿದ್ದಾರೆ. ಇಂದು ಹಿಟ್ಲರರ ಪಾಲಿಗೆ ಹಗ್ಗವೆಂದು ಭಾವಿಸಿದುದು ಹಾವಾಯಿತು—ಛಾಯೆಯೆಂದು ನೆನಸಿದುದು ಮಾಯೆಯಾಯಿತು— ನೆರಳೆಂದು ಭಾವಿಸಿದುದೇ ನೆಗಳಾಯಿತು! ನಾಜಿಗಳಿಗೆ ಮಂಕುಬೂದಿ ಚೆಲ್ಲುವದಕ್ಕಾಗಿಯೇ ಫಿನ್ಲೆಂಡಿನಲ್ಲಿ ಸ್ಟಾಲಿನರು ದಣಿದು ದಣಿದು ಗೆದ್ದುದು! ಮಂತಿಗೇ ಕೇಳುವವ ಬಾಗಿಲಿಗೆ ಬಂದಿದ್ದಾನೆಂದು ತಿಳಿದೊಡನೆ, ಒಂದಾಣೆಗಾಗಿ ಮನೆಯಾಳಿನೊಡನ ರಂಪಾಟ ಹೂಡುವ ಕುಯುಕ್ತಿ ಸ್ಟಾಲಿನರಿಗೆ ಮಾತ್ರ ಗೊತ್ತು! ಇದರ ಪರಿಣಾಮವಾಗಿಯೇ ನಾಜಿಗಳು ರಷ್ಯಾನರ ಶಕ್ತಿಯನ್ನು ಅಳತೆ ಕೆಡಿಸಿ ನೋಡುವಂತಾಯಿತು. 'ಕೆಲವೇ ತಿಂಗಳ ಕಾರ್ಯ'ವೆಂಬ ಅಂದಾಜು ಕಟ್ಟಿ ಹಿಟ್ಲರರು ನಾಜೀ ಸೇನೆಗೆ ಕೈಬೀಸಿದ್ದರು. ರಷ್ಯದಲ್ಲಿ ಸಂಪಾದಿಸಿದ ಎರಡು ವರುಷಗಳ ಅನುಭವದಿಂದಾಗಿ 'ನಾವು ಫಿನ್ಲೆಂಡಿನಿಂದ ಕಲಿತ ಪಾಠ ತಪ್ಪು' ಎಂದು ಸೇನಾನಿ ಗೋರಿಂಗರೇ ಒಪ್ಪಿಕೊಳ್ಳುವಂತಾಯಿತು. ಇನ್ನೇನು? ಆ ತಪ್ಪೇ ಹಿಟ್ಲರರ ಪಾಲಿಗೆ ಮುಪ್ಪು!

ಸ್ಟಾಲಿನ್ ವ್ಯಕ್ತಿತ್ವ

ಇದೀಗ ಕಾಮ್ರೇಡ್ ಸ್ಟಾಲಿನರ ವೈಶಿಷ್ಟ್ಯ! ರಷ್ಯನ್ ಯಾಂತ್ರಿಕೋಪಕರಣ ರಚನೆಗಾಗಿ ನಾಜೀ ತಜ್ಞರು ರಷ್ಯಕ್ಕೆ ಹೋದುದಿದೆ; ಬ್ರಿಟಿಷ್ ಸಮರ ವಿಜ್ಞಾನಿಗಳು ರಷ್ಯದ ಸೇನಾ ಪರೀಕ್ಷೆ ನಡೆಸಿ ಬಂದುದಿದೆ. ಆದರೆ ಎಲ್ಲರೂ ನಿಧಿಯಿದ್ದ ನೆಲದ ಉದ್ದಗಲವನ್ನಷ್ಟೇ ಗೊತ್ತುಮಾಡಿಕೊಂಡು ಬಂದಿದ್ದರು. ಕೆಂಪು ಸೇನೆಯ ಪರಿಮಾಣವೇನು? ರಷ್ಯಾನರ ಉತ್ಪಾದಕ ಸಾಮರ್ಥ್ಯವೆಂತಹುದು? ಅವರ ಹೋರಾಟ ಶಕ್ತಿಯೆಷ್ಟು? ಎಂಬ ನಿಜ ಅಳತೆ ಯಾರಿಗೂ ದೊರೆತಿಲ್ಲ. ರಶ್ಯಾಕ್ರಮಣ ನಡೆಯುವ ವರೆಗೆ-ನಡೆದು ತಿಂಗಳಾಗುವ ವರೆಗೆ-ಕೆಂಪು ಸೇನೆಯೆಂದರೆ ಹೆಡೆಯೆತ್ತುವ ವರ್ಗವೋ, ಹೆರಳು ಹಾಕುವ ವರ್ಗವೋ ಎಂಬ ಗುಟ್ಟು ಶತ್ರುಮಿತ್ರ ಭೇದವಿಲ್ಲದೆ ಯಾರಿಗೂ ತಿಳಿಯದು. ಆದ್ದರಿಂದಲೇ 'ಹಿಟ್ಲರರು ರಶ್ಯಾ ನುಗ್ಗಿದರು' ಎಂಬ ಬದಲಿಗೆ 'ರಶ್ಯಾ ನುಂಗಿದರು' ಎಂದೇ ಊಹಿಸಿಕೊಂಡವರು ಬಹುಮಂದಿ. ಆ ಚರಿತ್ರಾರ್ಹ ಸನ್ನಿವೇಶದಲ್ಲಿ ತನ್ನ ದೇಶೀಯರನ್ನು ಯುದ್ಧಸಿದ್ಧತೆಗಾಗಿ ಬಿನ್ನವಿಸಿಕೊಳ್ಳುವಾಗ ಸರ್ವಾಧಿಕಾರಿ ಸ್ಟಾಲಿನರ ಕಂಪಿತಸ್ವರದಿಂದ ಹೊರ ಬಂದ ಏಕಮಾತ್ರ ಗಂಡು ಮಾತೆಂದರೆ 'ನಾಜೀ ಸೇನೆಯು ಅಜೇಯವೇನೂ ಅಲ್ಲ'-ಎಂಬುದೆ. ನಾಜಿಗಳನ್ನು ಕಠಿಣ ಶಬ್ದಗಳಿಂದ ಬೈಯುವದರಲ್ಲಿ ಗತಿಸಿದ ಚೆಂಬರ್ಲೀನರಾದರೂ ಹಿಂದಿರಲಿಲ್ಲ. ಮಿ. ಚರ್ಚಿಲ್ಲರು ಎಲ್ಲರಿಗಿಂತ ಮುಂದಿದ್ದಾರೆ. ಆದರೆ ನಾಜೀ ಸೇನೆಯ 'ಹಣೇ ಬರಹ' ಬರೆದ ಕೈ, ಅವರ ಭವಿಷ್ಯವನ್ನುಚ್ಚರಿಸಿದ ಬಾಯಿ ಸ್ಟಾಲಿನರದೇ! 'ನಾಜೀ ಸೇನೆಯು ಅಜೇಯವಲ್ಲ' ಎಂದು ಕಾ. ಸ್ಟಾಲಿನರು ಎರಡೂವರೆ ವರುಷಗಳಿಗೆ ಮೊದಲು ಪ್ರಥಮ ಬಾರಿ ಉಚ್ಚರಿಸಿದ್ದರು—ಇಂದದನ್ನು ಇಡೀ ಪ್ರಪಂಚವುಚ್ಚರಿಸುತ್ತಿದೆ. ಇಂದು ಉತ್ತರಾಫ್ರಿಕ, ಸಿಸಿಲಿಯಲ್ಲಿ ಆಂಗ್ಲೋ-ಅಮೆರಿಕಾನ ಸೇನೆಗಳು ವಿಜಯ ಪಡೆದಿವೆ. ಆದರೆ ಈ ವಿಜಯವು ಸಂಕಟದಡಿಯಲ್ಲಿನ ಪಾತ್ರ. ಜರ್ಮನ್ ಸೇನಾ ಪ್ರವಾಹದ ದೊಡ್ಡ ನೆರೆಗೇನೇ ಅಣೆಕಟ್ಟಾಗಿ ಕೆಂಪು ಸೇನೆ ತಡೆದು ನಿಲ್ಲಿಸಿರುವಾಗ ಮುಗ್ಗುಲ ದ್ವಾರದಿಂದ ಹರಿಯುವ ತೆರೆಯಲ್ಲಷ್ಟೇ ಮಿತ್ರ ಸೇನೆಗಳು ಕೇಳಿಯಾಡುತ್ತಿವೆ. ಇಂದು ಹಿಟ್ಲರರು ಪಶ್ಚಾತ್ತಾಪ ಪೂರ್ವಕ ಜಪ್ಪಿಸಿಕೊಳ್ಳುವ ಪ್ರಮಾದವೊಂದಿದ್ದರೆ, ಅದು ಮುಸಲನಿಯ ಪತನವಲ್ಲ-ಇಂಗ್ಲೆಂಡಿನ ಮೇಲಿನ ಧಾಳಿಯಲ್ಲ- ಉತ್ತರಾಫ್ರಿಕದ ಪರಾಜಯವಲ್ಲ-- ರಶ್ಯಾಕ್ರಮಣವೊಂದೆ! ಸ್ಟಾಲಿನರೊಬ್ಬರಲ್ಲದೆ ಬೇರಾರೂ ಹಿಟ್ಲರರ ಪೈಯಿಂದ ಬೆವರು ಬರಿಸಿಲ್ಲ!

ಇಂದಿನ ಯುದ್ಧಸ್ಥಿತಿ.

ಎರಡು ವಸಂತ ಧಾಳಿಗಳ ಹಿಟ್ಲರ್ ಸೇನಾ ಸಮುದ್ರವನ್ನು ಕೆಂಪುಸೇನೆ ಅಗ್ರ ಪ್ರತ್ಯಾಪಾನಮಾಡಿ ನಿಂತಿದೆ. ಮೋಸ್ಕೋ ಧಾಳಿ, ಲೆನಿನ್‌ಗ್ರಾಡ್ ಮುತ್ತಿಗೆ, ಸ್ಟಾಲಿನ್‌ಗ್ರಾಡ್ ಆಕ್ರಮಣವೆಂಬ ತ್ರಿಮುಖಿ ಮೃತ್ಯುವನ್ನು ಹಿಮ್ಮೆಟ್ಟಿಸಿ ನಿಂತಿದೆ. ಇದೀಗ ಮೂರನೇ ವಸಂತ ಛಳಿಗಾಲದಿಂದ ನಿರೀಕ್ಷಿಸಲ್ಪಟ್ಟದ್ದ ಹಿಟ್ಲರರ ಮೂರನೇ ವಸಂತಧಾಳಿಯಿನ್ನೂ ಆರಂಭವಾಗಿಲ್ಲ. ರಶ್ಯನ್ ನೆಲದ ಪ್ರತಿಯೊಂದು ಇಂಚೂ ಪ್ರತಿಯೊಂದು ಮಿಂಚಾಗಿ-ಅಲ್ಲಿಯ ದಶದಿಕ್ಕುಗಳೂ ದಮನಾತೀತ ಕೋಟೆಗಳಾಗಿ-ಪ್ರತಿಯೊಬ್ಬ ರಶಿಯನ್ ಯೋಧನೂ ಉಕ್ಕಿನ ಮೂರ್ತಿಯಾಗಿ—ಈಗ ಹಿಟ್ಲರರ ಕಣ್ಣಿಗೆ ಕಾಣುತ್ತಿರಬಹುದು! ಅವರು ರಶ್ಯದಲ್ಲೀಗ [illegible] ಮುಂದಿಟ್ಟಿಲ್ಲ; ಹಿಂದಿಡಬಾರದೆಂಬ ಶಪಥವನ್ನು ರಕ್ಷಿಸುವದೇ ಪ್ರಾಣಾಪದಿ ಪ್ರಶ್ನೆಯಾಗಿ ಪರಿಣಮಿಸಿದೆ. ಓರೆಲ್ ವಿಭಾಗದಲ್ಲಿ ಸ್ಟಾಲಿನರ ನಿರ್ದೇಶಕತ್ವದಲ್ಲಿ ಕೆಂಪು ಸೇನೆಯೀಗ ನೂತನ ಧಾಳಿಯಾರಂಭಿಸಿ ಓರೆಲ್ ಮತ್ತು ಬೈಲ್ಗೋರೋಡನ್ನೂ ಸ್ವಾಧೀನ ಪಡಿಸಿಕೊಂಡು ಕಾರ್ಕೋವನ್ನಾಹುತಿಗೊಳ್ಳಲು ಧಾವಿಸುತ್ತಿದೆ. ಓರೆಲ್-ಜರ್ಮನರ ಅಭೇದ್ಯ ಕೋಟೆ, ರಶ್ಯದಲ್ಲಿ ಅವರು ತಮ್ಮದನ್ನಾಗಿ ಮಾಡಿಕೊಂಡಿದ್ದ ಅತಿ ಪ್ರಬಲ ಕೇಂದ್ರ, ರಶ್ಯಾನರ ಹಸ್ತಗತವಾಗಬೇಕಾದರೆ, ಆ ಹಸ್ತದ ಅದೃಷ್ಟರೇಖೆಯೆಷ್ಟೂ ಸ್ಪಷ್ಟವಿರಬೇಕು! ನಾಜೀ ಸೇನೆಯ ಮುಖ್ಯ ಭಾಗವೆಲ್ಲಾ ರಶ್ಯದಲ್ಲಿ ಹರಾಜಿಗೆ ಬಿದ್ದಿರುವಾಗ ಉಳಿದ ಅಲ್ಪಾಂಶಕ್ಕೆ ಮಿತ್ರರು ಬೆಲೆಕಟ್ಟದರಾಯಿತು. ಇದೀಗ ಹಿಟ್ಲರರ ದುಸ್ಥಿತಿ! ಹೀಗೆ ಹೊಣೆಯ ಮುಕ್ಕಾಲಂಶವನ್ನು ಹೊತ್ತು ನಿಂತಿರುವ ರಶ್ಯವನ್ನು-ಕೆಂಪು ಸೇನೆಯನ್ನು- ಸ್ಟಾಲಿನರನ್ನು ಪ್ರಪಂಚವಭಿನಂದಿಸಬೇಕು. ಆಪದ್ಬಂಧುವೆಂದು ಸಮತಾವಾದಿ ಸ್ಟಾಲಿನರನ್ನು ಕರೆಯಬೇಕು. ಮುಂದಿನ ಸ್ವಾತಂತ್ರ್ಯಕಾಶದಲ್ಲಿ ಕೆಂಪು ಧ್ವಜವು ಎತ್ತರದಲ್ಲಿ ಹಾರಾಡಬೇಕು.

THE VIJAYA BANK, LIMITED.

Beg to announce that a Branch of the Bank will be opened at KASARAGOD shortly.

ರುಚಿ!! **ಸೆಂಟ್ರಲ್ ಕೆಫೆ** ರುಚಿ!!

ಶ್ರೀನಿವಾಸ ಬಿಲ್ಡಿಂಗ್ಸ್, ಹೆಡ್ ಪೋಸ್ಟಾಫೀಸ್ ಸರ್ಕಲ್, ಶಿವಮೊಗ್ಗ.

ಪ್ರಯಾಣಿಕರಿಗೆ ಉಳಿದುಕೊಳ್ಳಲು ಸ್ಥಳಾನುಕೂಲ ಎಲ್ಲ ಒದಗುತ್ತೆ.
ಸಕಾಲದಲ್ಲಿ ಉತ್ತಮವಾದ ಊಟ, ಕಾಫಿ ಮತ್ತು ಹಸನಾದ ತುಪ್ಪದಲ್ಲಿ
ತಯಾರಿಸಿದ ತಿಂಡಿ ದೊರೆಯುತ್ತೆ.

ಈ ಸ್ಥಳವು ರೈಲ್ವೆಸ್ಟೇಷನ್, ಬಸ್‌ಸ್ಟ್ಯಾಂಡ್, ಕೋರ್ಟುಗಳಿಗೆ ಮಧ್ಯ ಸ್ಥಳದಲ್ಲಿದೆ.

ಎಸ್. ರಾಮದಾಸ್, ಪ್ರೊಪ್ರೈಟರ್.

The Canara Banking Corporation Limited.

(Incorporated in British India with limited Liability)

ESTD: 1906.

Head Office: **UDIPI**, S. Kanara.

(Branches & Agencies in all principal cities of India)

Authorised capital	Rs. 25.00.000/-
Issued & Subscribed	Rs. 16.00.000/-
Paid up capital	Rs. 10.06.000/-
Reserves	Rs. 3.85.000/-

Advances are made against approved securities and bills purchased or collected at most favourable rates. For further particulars please apply to the nearest Branch

ಉಡುಪಿ, ಗುರುವಾರ, ೧೨-೮-೧೯೪೩

ದುಃಖಾಧ್ಯಾಯ.

ಇದೇ ಆಗೋಸ್ತು ತಾ. 9ಕ್ಕೆ ಗಾಂಧಿಜೀ ಮೊದಲಾದ ಪ್ರಮುಖರ ದಸ್ತಗಿರಿಯಾಗಿ--ದೇಶವು ಅರಾಜಕತೆ, ಅತ್ಯಾಚಾರ, ಅಸಹಾಯಕ ಸ್ಥಿತಿಗೀಡಾಗಿ-ವರುಷ ಕಳೆಯಿತು. ದೇಶವನ್ನು ಕವಿದ ಕಗ್ಗತ್ತಲೆಗೆ ಹನ್ನೆರಡು ಮಾಸಗಳ ಅವಧಿ ಮುಗಿಯಿತು. ಈ ಪ್ರಲಯ ಪ್ರಕರಣದ ನಾಯಕರಾರು-ದಾವಾಗ್ನಿ ಹತ್ತಿಸಿದ ದಗಾಖೋರರಾರು-ಎಂಬ ಶೋಧನೆ ಬೇಕಾಗಿಲ್ಲ 'ಈ ದುರಂತ ಬೇಕಾದವರಾರು?' ಎಂಬ ಆಹ್ವಾನಕ್ಕೆ ಯಾರೂ ಓ ಕೊಳ್ಳುವಂತಿಲ್ಲವೆಂಬುದಂತೂ ಖಂಡಿತ. ಅಂದ ಮೇಲೆ ಈ ಬಿಕ್ಕಟ್ಟು ಇನ್ನೂ ಯಾರಿಗಾಗಿ ಬಾಳಬೇಕು? ಇಂದಿನ ಅವಿಶ್ವಾಸಮಯ, ಅನಾಹುತಕಾರೀ ವಾತಾವರಣವು ಪ್ರಲಯಗರ್ಭಿಣಿಯೆಂಬ ಚಿನ್ಹೆಯು ಸ್ಪಷ್ಟವಾಗಿ ಗೋಚರಿಸುತ್ತಿರುವಾಗ ಇದಕ್ಕೂ ಬಾಳುವ-ಭವಿಷ್ಯಕ್ಕೂ ಸ್ವಾಗತವೆಂ [illegible] ನಿಷ್ಕ್ರಿಯಯುಗಾಂಕವು ಮುಗಿಯಬೇಕು-ದುಃಖಾಧ್ಯಾಯವು ಕೊನೆಗೊಳ್ಳಬೇಕು- ಅಗ್ನಿಪ್ರಕರಣದ ಅಂತ್ಯವಾಗಬೇಕು ಎಂದು ಹಾರೈಸದವರಿಲ್ಲ. ಈ ಅಂತ್ಯಕ್ರಿಯೆ ಯಾರಿಂದಾಗಬೇಕೆಂಬುದೇ ಉತ್ತರಿಸಲುಳಿದಿರುವ ಪ್ರಶ್ನೆ. ಗಾಂಧಿ ಮತ್ತು ಕಾಂಗ್ರೆಸಿನ ಮೇಲೆಯೇ ಗೊಂದಲ ನಿರ್ಮಾಣದ ಹೊಣೆಯಿದೆ; ಅವರದನ್ನು ಕ್ಷಮಯಾಚನೆಯೊಡನೆ ಉಪಸಂಹರಿಸಿಕೊಂಡರಾಯಿತು ಎಂದು ಸರಕಾರವನ್ನುತ್ತಿದೆ. ಆ ಜವಾಬ್ದಾರಿ ತನ್ನದೆಂದೊಪ್ಪಿಕೊಳ್ಳದ ಗಾಂಧಿಜೀ ಮತ್ತು ಕಾಂಗ್ರೆಸ್ ಪ್ರಮುಖರು ಇಂದು ಬಂಧಿಗಳಾಗಿದ್ದಾರೆ. ಹೊಣೆಗಾರಿಕೆಯು ವಾದಗ್ರಸ್ತ ವಿಷಯವಾಗಿ ಉಳಿದಿದೆ. ಇಂತಹ ಸಂದರ್ಭದಲ್ಲಿ ವಿಚಾರಣೆಯ ಮೂಲಕವೇ ವಾದವು ತೀರ್ಮಾನ ಹೊಂದಬೇಕು. [illegible] ಈ ಹೊಣೆ ಯಾದರೂ ಸರಕಾರದ್ದೆಂಬ ಕುರಿತು ಭಿನ್ನಾಭಿಪ್ರಾಯವಿಲ್ಲ. ಕಾಂಗ್ರೆಸಿಗರು ಬಿಲ್ಲಗಳೆದುದಕ್ಕೆಲ್ಲಾ ಅಸ್ತಿತ್ವವನ್ನು ಕೊಡಲು ಸರಕಾರವು ಕಟಿಬದ್ಧವಿದೆ. ತನ್ನ ಮೇಲಿನ ಆರೋಪವನ್ನು ಅಲ್ಲಗಳೆದ ಗಾಂಧಿಜೀಯ ಮಟ್ಟಿಗೆ ಸರಕಾರವೀ ಸಂಪ್ರದಾಯವನ್ನೇಕೆ ಬಿಡಬೇಕು? 'ಗಾಂಧಿಯವರು ತನ್ನ ತಪ್ಪನ್ನು ತಿದ್ದಿಕೊಳ್ಳದೆ ಅವರ ಅಭಿಪ್ರಾಯ ಪ್ರಕಟಣೆಗವಕಾಶವಿಲ್ಲ. ಅವರಿಗೆ ನಾಗರಿಕ ಜೀವದಾನವಿಲ್ಲ' ಎಂಬ ಅಧಿಕಾರಿಗಳ ಮಾತಿನಲ್ಲಿ ಒಂಭತ್ತು ಪಾಲನ್ನು ಅಹಂಭಾವವಿರುವಾಗ ಒಂದಂಶದಷ್ಟಾದರೂ ಅರ್ಥವಿದೆ. ಆದರೆ 'ಕ್ಷಮೆ ಬೇಡ' ಎನ್ನುವ ಮೊದಲು 'ಈ ಅಪರಾಧಕ್ಕಾಗಿ' ಎಂದೊಂದು ತಪ್ಪನ್ನು ಸ್ಪಷ್ಟಪಡಿಸಿ ತೋರಿಸುವದು ಬೇಡವೆ? ಇಂದು ದೇಶವಿದೇಶಗಳ ವಿಚಾರವಂತರು ಸರಕಾರವನ್ನು ಕೇಳುತ್ತಿರುವದಾದರೂ 'ಆರೋಪಿಗಳನ್ನು ವಿಚಾರಣೆಗೊಳಪಡಿಸಿ ಅಪರಾಧವನ್ನು ಖಚಿತ ಪಡಿಸಿರಿ' ಎಂದೆ ಅಧಿಕಾರಿಗಳು ಅದಕ್ಕೊಪ್ಪುವದಿಲ್ಲವೇಕೆ? ವಿಚಾರಣೆಗೊಳಪಡಿಸಿದ ಮಾತ್ರಕ್ಕೆ ಕಾಂಗ್ರೆಸಿಗರಿಗೆ ವಿಚಾರ ಸ್ವಾತಂತ್ರ್ಯವಿತ್ತ ಅಪರಾಧವಾಗುವದಿಲ್ಲ. 'ಅಪರಾಧದ ವಿಚಾರಣೆ ಯಾಗಬೇಕಾದರೂ ಅಪರಾಧಿ ಕ್ಷಮೆ ಕೇಳಿಕೊಳ್ಳಬೇಕು' ಎಂಬ ವಿಲಕ್ಷಣ ವಾದವನ್ನು ಮುಂದೊಡ್ಡುವಷ್ಟು ವಿ. ಆ ಮೆರಿಯವರು ಹುಚ್ಚರಲ್ಲ. ಈ ರೀತಿ ಆರೋಪಗಳ ವಿಚಾರಣೆಯಿಲ್ಲವೇಕೆ?'-ಎಂಬ ಪ್ರಶ್ನೆಗೆ ಸರಕಾರದ ಉತ್ತರವೂ ಇಲ್ಲ; ವಿಚಾರಣೆ ನಡೆಸದಿರಲು ಅನ್ಯಥಾ ಕಾರಣವೂ ಇಲ್ಲವೆಂದಾದ ಮೇಲೆ ಗಲಭೆಯ ಹೊಣೆಗಾರರನ್ನು ಪತ್ತೆಹಚ್ಚಲು ಉಳಿದಿದೆಯೇನು?

ಸರಕಾರವು ತನ್ನ ಮರ್ದನ ಶಕ್ತಿಯ ಮಹಾವಿಜಯವನ್ನು ಕಂಡಿರಬಹುದು-ಆಂದೋಲನವನ್ನು ಅಂಕೆಗೆ ತಂದ ಆನಂದವದಕ್ಕಿರಬಹುದು. ಆದರೆ ಶಾಂತಿಸ್ಥಾಪನೆಯು ತಮಗೆ ಬೇಕಾಗಿಲ್ಲವೆನ್ನುವ ಬ್ರಿಟಿಷರವನಿಲ್ಲ- ಹಿಂದುಸ್ಥಾನದಲ್ಲಿ ಶಾಂತಿ ಸ್ಥಾಪಿಸಿದೆವೆನ್ನುವ ಅಧಿಕಾರಿಯಿಲ್ಲ; ದಾವಾಗ್ನಿಯಾಗಿ ಎದ್ದಗೊಂದಲವನ್ನು ಬೂದಿಗೆಂಡವಾಗಿ ಮಾರ್ಪಡಿಸುವದು ವಿಜಯವಲ್ಲ. ಇದು ಪ್ರತಿಯೊಂದು ಆಂದೋಲನದ ಸಹಜ ಪರಿವರ್ತನ ಸುಗಮ ಸಂಬಂಧ ಬಯಸುವವರು ಆತ್ಮಸ್ಪೈಯ ಮೂರ್ಜೋತ್ಪಾಟನೆ ಮಾಡಿಯೇ ಸಮಾಧಾನಗೊಂಡಾರು ಹೊರತು ಅದರ ಸ್ಥಿತ್ಯಂತರಗಳಿಂದ ತೃಪ್ತಿ ಹೊಂದಲಾರರು. ಬ್ರಿಟಿಷ್ ಸರಕಾರಕ್ಕೂ ಅಂತಹ ಮಹತ್ವಾಕಾಂಕ್ಷೆಯಿದ್ದರೆ, ವರುಷಾಯುಷ್ಯ ಕಳೆದ ಹಿಂದೀಯ ಗೊಂದಲವನ್ನು ಇನ್ನಾದರೂ ಸಹಜ ಕ್ರಿಯೆಯೊಡನೆ ಅಂತ್ಯಗೊಳಿಸಲಿ-ಹೊಸ ಪ್ರಕರಣವಾರಂಭಿಸಲಿ-ಎಂದು ಹಾರೈಸುತ್ತೇನೆ. ಇಂದಿನ ವಾತಾವರಣಕ್ಕೆ ಇನ್ನೂ ಆಯುಷ್ಯ ದಾನ ಮಾಡುವವರು ನ್ಯಾಯ ಸ್ವಾತಂತ್ರ್ಯದ ಮುಗಿಸಿ ಸಮಾಧಿ ಕಟ್ಟುತ್ತಿದ್ದಾರೆ- ಎನ್ನುತ್ತೇನೆ.

ದುರ್ಬೀನು

ಹುಲ್ಲು ಕೊಯ್ಯುವ ಕತ್ತಿಯಿಂದ ಮೀಸೆ ಬೋಳಿಸಲಾಗುವದಿಲ್ಲ; ಪುಂಡರನ್ನು ಖಂಡಿಸಿದ ವಿಧಾನದಿಂದಲೇ ಪುಡಾರಿಗಳನ್ನೂ ಖಂಡಿಸಲಾಗುವದಿಲ್ಲ.

oo oo oo

ಹಾರವನ್ನು ಧರಿಸಿಕೊಂಡರಾಯಿತು; ಆಹಾರವನ್ನು ಜಗಿದು ಜೀರ್ಣಿಸಬೇಕು. ವಿನಂತಿಯನ್ನು ಅಂಗೀಕರಿಸಿದರಾಯಿತು; ವಿಮರ್ಶೆಯನ್ನು ವಿಚಾರಿಸಿ ದಕ್ಕಿಸಿಕೊಳ್ಳಬೇಕು.

oo oo oo

ವಿಷವನ್ನೂ ವಿವಂಚಕನನ್ನೂ ತಲೆಗೇರಲು ಬಿಡಬಾರದು.

oo oo oo

ಸೈಕಲನ್ನು ತುಳಿದೋಡಿಸಬೇಕು; ಕಾರನ್ನಾದರೆ ಕುಳಿತೋಡಿಸಿದರಾಯಿತು. ಅಜ್ಞಾನಿಗಳನ್ನಾಳುವವ ಸೈಕಲ್ ಸವಾರ; ಮತಿವಂತರ ಮುಂದಾಳು ಕಾರುಡ್ರೈವರ್.

oo oo oo

ಮನೆ ಬಾವಿಗೂ ಮನೆಯವಳ ಬಾಯಿಗೂ ಬಲವಾದ ಕಟ್ಟೆಯಿರದಿದ್ದರೆ ಅಪಾಯವಿದೆ.

oo oo oo

ಉಗುರು 'ಬೆಯನೆಟ್' ಅಲ್ಲ; ಉದ್ಧಟತನ ಧೀರತನವಲ್ಲ.

oo oo oo

ಮಾಡಿನ ಕೀಲು ತಪ್ಪಿದರೆ ಹೊಂಗೋಡಿದರಾಯಿತು! ಮನುಷ್ಯನ ಕೀಲೇ ತಪ್ಪಿದರೆ ಚಿಕಿತ್ಸೆಬೇಕು ಸರ್ಜಿ ಹಾಳಾದರೆ ಮತ್ತೊಂದೆಡೆ ಸೇರಿದರಾಯಿತು. ಮನಸ್ಸೇ ಹಾಳಾದರೆ ಶಮನಬೇಕು.

oo oo oo

ಸೀರಿರುವಲ್ಲೆಲ್ಲಾ ಬುಗ್ಗೆ ಇರುವದಿಲ್ಲ. ಸೀತಿಸಾರುವವರೆಲ್ಲಾ ನೀತಿವಂತರೇ ಅಲ್ಲ.

oo oo oo

ಕರುವನ್ನು ಮರಕ್ಕೆ ಬಿಗಿದರೆ ಕರುನಿಂತುಬಿಡುತ್ತದೆ; ಆನೆಯಿಂದ ಮರಹಿಡಿಸಿದರೆ ಆನೆ ಮುರಿದೆಳೆಯುತ್ತದೆ. ದುರ್ಬಲನು ಸಂಕಷ್ಟದಲ್ಲಿ ಸಿಕ್ಕಿಕೊಳ್ಳುತ್ತಾನೆ; ಸಬಲನು ಆಸಿಕ್ಕನ್ನೇ ಬಿಡಿಸಿಕೊಳ್ಳುತ್ತಾನೆ.

oo oo oo

ತಲೆಯಲ್ಲಿ ನಿಲ್ಲುವದಕ್ಕೂ ತರಳೆಹೇಳುವುದಕ್ಕೂ ಅಭ್ಯಾಸಬೇಕು; ಕಾಲಲ್ಲಿ ನಿಲ್ಲುವದೂ ಕಂಡುದನ್ನು ಹೇಳುವದೂ ಸ್ವಾಭಾವಿಕ.

oo oo oo

ವಿದ್ಯುದ್ದೀಪ ಮಿಂಚಿದಮಾತ್ರಕ್ಕೆ ನಕ್ಷತ್ರ ಮರ್ಣಾಗದು; ವಿದೂಷಕರೆದ್ದ ಮಾತ್ರಕ್ಕೆ ವಿಕ್ರಮಿಗಳೋಡರು.

oo oo oo

ತಲೆಸಿಡಿತಕ್ಕೆ ಚಿಕಿತ್ಸೆಬೇಕು; ಕೂದಲು ನಿಗುರಿ ನಿಂತುದಕ್ಕೂ ಬೇಕೇನು? ಚಿಂತೆ ಬಡಿದರೆ ಶಮನಬೇಕು; ಆಲಸ್ಯ ಹಿಡಿದರೂ ಬೇಕೇನು?

CHAMPAE'S
SNOW & CASTREX
AGENTS
SADANANDA STORES UDIPI

ಉಡುಪಿ.

ತಾ. 8ರಲ್ಲಿ ದಿವಂಗತ ಪಿ. ಎ. ಪೈಗಳ ತೈಲಚಿತ್ರ ಅನಾವರಣ ಉತ್ಸವವು ಕೆನರಾ ಮ್ಯೂಚುವಲ್ ಎಶ್ಶೂರೆನ್ಸ್ ಕಂಪೆನಿಯ ಕಾರ್ಯಾಲಯದಲ್ಲಿ ಹೊನ್ನಾವರದ ವಕೀಲ್ ಶ್ರೀ ಲಕ್ಷ್ಮಣ ಹನುಮಂತ ಪ್ರಭುಗಳಿಂದ ನಡೆಯಿತೆಂದು ತಿಳಿದುಬರುತ್ತದೆ.

GOVERNMENT OF MADRAS.

Notice regarding application for a license under Section 26 of the Indian Companies Act, 1913.

Notice is hereby given that in pursuance of the 26th Section of the Indian Companies Act, 1913, application has been made to the Government of Madras for a license directing an association, about to be formed under the name of the Udipi Taluk Merchants Association to be registered with Limited Liability but without the addition of the word Limited to its name.

The main objects for which the Association is proposed to be established are to promote and protect the trade, commerce and manufactures of India and in particular of Udipi Taluk, to study the general commercial interests of India or any part thereof and the interests of persons engaged therein.

The other objects of the Association are set out in extenso in the Memorandum of Association, a copy of which may be inspected at the office of the Udipi Taluk Merchants Association, Udipi, South Kanara.

Notice is hereby given that any person, company or corporation objecting to this application may bring such objection before the Government of madras on or before the 30th September 1943 by a letter addressed to the Secretary to the Government of Madras, Development Department.

Dated this sixth day of August 1943.

T. Sivasankar.
Addl. Secretary to Govt.
Development Department.

ನೋಟೀಸು.

ಮಂಗಳೂರು ತಾಲೂಕು ಮುಳ್ಳಕ್ಕ ಗ್ರಾಮದಲ್ಲಿರುವ ಗಂಗಯ್ಯ ಶೆಟ್ಟಿ ಅಳಿಯ ಕೃಷ್ಣ ಶೆಟ್ಟಿಯು ಈ ಮೂಲಕ ಸಮ್ಮಂಧಪಟ್ಟ ಸಮಸ್ತ ಜನರಿಗೂ ತಿಳಿಸುವದೇನೆಂದ್ರೆ-- ನನ್ನ ಅಣ್ಣ ಚೆಂದು ಶೆಟ್ಟಿಯು ಈಗ ಕೆಲವು ದಿವಸಗಳಿಂದ ಕಾಹಿಲೆಯಲ್ಲಿದ್ದ ಸಮಯ ನೋಡಿ, ಸುಮಾರು 10 ದಿವಸಗಳ ಹಿಂದೆ ಬಹಳ ನಿಶ್ಶಕ್ತರಾಗಿದ್ದು ಬುದ್ಧಿ ಸ್ವಾತಂತ್ರ್ಯವಿಲ್ಲದ ಸಮಯ ಸದ್ರಿ ಚೆಂದು ಶೆಟ್ಟಿಯು ಮಗ ರಾಜು ಶೆಟ್ಟಿಯು ನಮ್ಮ ಕುಟುಂಬದ ಅಹಿತಚಿಂತನೆಯಿಂದ ನಮ್ಮ ದ್ವೇಷಿಕರ ದುಷ್ಪ್ರೇರಣೆಗೆ ಸೇರಿ ಅಕ್ರಮ ಲಾಭ ಪಡೆಯಬೇಕೆಂಬ ಇರಾದೆಯಿಂದ ಕೆಲವು ಖಾಲಿ ಕಾಗದಗಳಿಗೆ ಚೆಂದು ಶೆಟ್ಟಿಯ ಹೆಬ್ಬೆಟ್ಟು ಮುದ್ರೆ ತೆಗೆದುಕೊಂಡು ಹೋಗಿರುವದಾಗಿ ತಿಳಿದುಬರುತ್ತದೆ ಸದ್ರಿ ಚೆಂದು ಶೆಟ್ಟಿಯು ನಮ್ಮ ಕುಟುಂಬದ ಯಜಮಾನನು ಅಲ್ಲ. ಆತನಿಗೆ ಸಾಲ ಮಾಡುವ ಗರಜು ಇಲ್ಲ. ಸದ್ರಿ ಚೆಂದು ಶೆಟ್ಟಿಯು ನಮ್ಮ ಕುಟುಂಬದ ಯಜಮಾನನಲ್ಲವೆಂದು ಈ ಮೊದಲು ಅ.ಸ. K. R. 365/49ನೇ ವ್ಯವಹಾರ ಮತ್ತು ಅದರ ಮೇಲಾದ ಅಪೀಲಿನಲ್ಲಿ ಕೋರ್ಟು ಹುಕುಂ ಆಗಿರುತ್ತದೆ. ಅಲ್ಲದೆ ಸದ್ರಿಯವನ ಮೇಲೆ ಮತ್ತು ನಮ್ಮ ಕುಟುಂಬದ ಮೇಲೆ ಯೇನಾದರೂ ಬನಾವಟಿ ದಿಕಾರ್ು ಮಾಡಿ ಅದರ ಕಾಗದ ಬಂದಿದ್ದರೆ ನಮ್ಮ ಮೇಲೆ ಮತ್ತು ನಮ್ಮ ಕುಟುಂಬದ ಮೇಲೆ ಬಾಧಕವಾಗುವದಿಲ್ಲ. ಸಿಂಧುವಾದದ್ದು ಅಲ್ಲ ಎಂದು ಸಮಸ್ತರೂ ಈ ಮೂಲಕ ತಿಳಿಯಬೇಕು,

ಮುಳ್ಳಕ್ಕ
31-7-43. } ಕೃಷ್ಣ ಶೆಟ್ಟಿ, ರುಜು.

—ಆಗೋಸ್ತು ಸ್ಮರಣೆ.—

ಗಾಂಧಿಜೀ ಬಂಧನದ ವಾರ್ಷಿಕದಿನವಾದ ಆಗೋಸ್ತು 9ರಲ್ಲಿ ದೇಶಸರ್ವತ್ರ ದಸ್ತಗಿರಿ, ಗಲಭೆಗಳು ನಡೆದಿವೆ. ಹಲವಡೆ 144ನೇ ಸೆಕ್ಷನ್ ಜ್ಯಾರಿಗೆ ಬಂದಿದೆ. ಬೊಂಬಾಯಿ, ಪೂನಾ, ಸೂರತ್, ಅಹಮ್ಮದಾಬಾದ್ ಮೊದಲಾದ ಹೆಚ್ಚಿನ ಪಟ್ಟಣಗಳಲ್ಲಿ ಹರತಾಳ ಆಚರಿಸಲ್ಪಟ್ಟಿದೆ. ಬೊಂಬಾಯಿಯಲ್ಲಿ 300ಕ್ಕೆ ಮಿಕ್ಕಿ ದಸ್ತಗಿರಿಗಳಾಗಿವೆಯೆಂದೂ, ಪೂನದಲ್ಲಿ ಕೇರಳ, ಮದ್ರಾಸ್, ಬಂಗಾಳ, ಅಸ್ಸಾಮ್, ಪಂಜಾಬ್, ಬೆಳ್ಗಾಂವ್, ಮೊದಲಾದ ಕಡೆಗಳ ಸ್ವಯಂಸೇವಕರು ಜತೆಯಾಗಿ ಪ್ರದರ್ಶನ ಸಿದ್ಧತೆಯಲ್ಲಿದ್ದರೆಂದೂ ಅವರಲ್ಲಿ 100ಕ್ಕೆ ಮಿಕ್ಕಿ ದಸ್ತಗಿರಿಯಾಗಿರುವರೆಂದೂ ತಿಳಿದುಬರುತ್ತದೆ. ದೇಶದ ಸಣ್ಣದೊಡ್ಡ ಊರುಗಳಲ್ಲೆಲ್ಲಾ ಹರತಾಳ, ಪ್ರದರ್ಶನ, ವಿದ್ಯಾರ್ಥಿಗಳ ಚಟುವಟಿಕೆ, ದಸ್ತಗಿರಿ, ನಿರ್ಬಂಧಾಜ್ಞೆಗಳ ವಾರ್ತೆ ಬಂದಿದೆ. ಎಸೆಂಬ್ಲಿ, ಕೌನ್ಸಿಲ್ ಓಫ್ ಸ್ಟೇಟ್, ಪಾರ್ಲಿಮೆಂಟುಗಳ ಪ್ರಶ್ನೋತ್ತರಗಳಿಂದ ಈ ವರೆಗೆ ಚಳವಳದ ಸಂಬಂಧವಾಗಿ ಒಂದೂವರೆ ಲಕ್ಷಕ್ಕೆ ಮಿಕ್ಕಿ ಬಂಧಿತರಾಗಿರುವರೆಂದೂ, ಗಾಂಧಿಯವರ ಅಭಿಪ್ರಾಯ ಪ್ರಕಟಣೆಗೆ ಅವಕಾಶವನ್ನೇ ಕೊಡುವಂತಿಲ್ಲವೆಂದೂ ತಿಳಿದು ಬರುತ್ತದೆ.

○ ಸಿಸಿಲಿ ಯುದ್ಧವೀಗ ಕೊನೆಯ ಅಂಕದಲ್ಲಿದೆ. ಉತ್ತರ ತುದಿಯಲ್ಲಿ ಅಮೇರಿಕನ್ ಸೇನೆಯು ಮುಂದೊತ್ತುತ್ತಿರುವಾಗ ಮಧ್ಯರಣರಂಗದಲ್ಲಿ ಬ್ರಿಟಿಷ್ 8ನೇ ಸೇನೆಯು ಗಣನೀಯ ವಿಜಯ ಪಡೆದು, ಪ್ರಮುಖ್ಯ ಸ್ಥಳವನ್ನಾಕ್ರಮಿಸಿಕೊಂಡು ಮುಂದೊತ್ತಿದೆ. ಪೂರ್ವ ಕರಾವಳಿಯಲ್ಲಿ ಮಿತ್ರರು ನೌಕಾ ಧಾಳಿ ನಡೆಸುತ್ತಿದ್ದಾರೆ.

○ ಎಟ್ನಾ ಪರ್ವತದ ಸರಹದ್ದಿನಲ್ಲಿ ವಿರೋಧಿಗಳು ನಿರ್ಮಿಸಿದ ಬಲವಾದ ರಕ್ಷಣಾ ಲೈನನ್ನು ಬ್ರಿಟಿಷರು ಭೇದಿಸಿರುವರು. ಅಲ್ಲಿಯ ವ್ಯವಹಾರ ಕೇಂದ್ರವಾದ ಅಡ್ರಾನೋ ನಗರವು ಬ್ರಿಟಿಷರ ವಶವಾಗಿದೆ.

○ ಸಿಸಿಲಿಯಲ್ಲಿ ಹಿಮ್ಮೆಟ್ಟಿ ಇಟಲಿ ನುಗ್ಗುವ ಕಡಲ್ಗಾಲುವೆಯಲ್ಲಿ ವಿರೋಧೀ ಸೇನೆಗಳನ್ನು ತಡೆಯಲು ಮಿತ್ರರ ನೌಕೆಗಳು ಸಿದ್ಧವಾಗಿವೆ.

○ ಬೊಡೊಗ್ಲಿಯೋ ಚಾಳಿಸುತ್ತಿರುವ ಸರಿಂದಾಗಿ ಇಟಲಿಯ ಮೇಲೆ ಪುನಃ ಬಲವಾದ ಆಕಾಶ ಧಾಳಿಗಾರಂಭಿಸಿದ್ದಾರೆ. ಇಟಲಿಯ ಒಟ್ಟು 3ನೇ ಔದ್ಯೋಗಿಕ ಕಾರ್ಖಾನೆಗಳಿರುವ ಮಿಲಾನ್, ಟುರಿನ್ ಮತ್ತು ಜಿನೋವಾ ಪಟ್ಟಣಗಳ ಮೇಲೆ ತೀವ್ರ ಬೋಂಬು ಧಾಳಿ ನಡೆಯಿತು. ಗಣನೀಯ ಹಾನಿಯಾಗಿದೆಯೆಂದು ಇಟಲಿಯಾನರೊಪ್ಪಿದ್ದಾರೆ.

○ ರಶ್ಯನರು ಉಕ್ರೈನಿನೊಳಗೆ ನುಗ್ಗಿ ಹೋಗುತ್ತಿದ್ದಾರೆ. ಕಾರ್ಖೋವಿಗೆ 35 ಮೈಲು ದೂರದ ಬೊಗೋಡುಖೋವ್ ನಗರವನ್ನು ವಶ ಪಡಿಸಿಕೊಂಡು ಕಾರ್ಖೋವ್ ಕಡೆಗೆ ಅವರ ಧಾಳಿ ಸಾಗಿದೆ

○ ರಶ್ಯನರು ನೂತನ ಪ್ರಬಲ ಧಾಳಿ ನಡೆಸುವ ಯೋಜನೆ ತಯಾರಿಸಿಟ್ಟಿದ್ದಾರೆಂದೂ ನೀಪರ್ ಹೊಳೇ ಬದಿಯಲ್ಲಿ ಮತ್ತೊಂದು ಮುಖದಲ್ಲಿ ಪ್ರಬಲಾಕ್ರಮಣ ನಡೆಯುವ ಸಿದ್ಧತೆಯಾಗಿದೆಯೆಂದೂ ತಿಳಿದು ಬರುತ್ತದೆ.

○ ಜರ್ಮನಿಯೊಳಗೆ ತೀವ್ರ ಮನೋದೌರ್ಬಲ್ಯ, ಗೊಂದಲಗಳುಂಟಾಗಿವೆಯಂತೆ. ಹಿಟ್ಲರರ ಬದಲಿಗೆ ಪೂರ್ಣ ಸೈನಾಧಿಕಾರ ಸ್ಥಾಪಿಸುವ ಹಂಚಿಕೆ ನಡೆದಿದೆಯೆಂದೂ, ಗೋರಿಂಗ್, ಕೀಟೆಲ್, ಡೊಯೆನಿಜರ ಸಮಿತಿಯು ಅಧಿಕಾರಕ್ಕೆ ಬಂದು ರಕ್ಷಣಾ ಯುದ್ಧವನ್ನಷ್ಟೇ ನಡಿಸಬಹುದೆಂದೂ ಸುದ್ದಿ ಹಬ್ಬಿದೆ.

○ ಫಿನ್ಲೆಂಡನ್ನು ಯುದ್ಧದಿಂದ ಹೊರಗಿರಿಸುವ ಕುರಿತು ಫಿನ್ನಿಶ್ ಅಧಿಕಾರಿಗಳ ಸಮ್ಮೇಲನವೊಂದು ಗಾಢಾಲೋಚನೆ ನಡೆಸಿದೆ.

○ ಮುಸಲನಿಯಂತಹ ಯುದ್ಧ ಕೇಡಿಗಳಿಗೆ ತಟಸ್ಥ ರಾಷ್ಟ್ರಗಳು ಆಶ್ರಯ ಕೊಡಬಾರದೆಂಬ ಅಧ್ಯಕ್ಷ ರೂಸವೆಲ್ಟರ ಸೂಚನೆಯು ಸ್ವಾತಂತ್ರ್ಯಕ್ಕೆ ಧಕ್ಕೆಯೆಂದು ಟರ್ಕಿ, ಸ್ವೀಡನ್ ಮೊದಲಾದ ರಾಷ್ಟ್ರಗಳು ತೀವ್ರ ಭಿನ್ನಾಭಿಪ್ರಾಯ ಪ್ರಕಟಿಸಿವೆ.

○ ಸ್ವೀಡನ್ ಗಡಿಯಲ್ಲಿ ಜರ್ಮನರ ಸೈನ್ಯ ಸರಕುಗಳನ್ನು ಒಯ್ಯಬಹುದೆಂದಿದ್ದ ಸಂಚಾರೊಪ್ಪಂದವನ್ನು ಸ್ವೀಡನ್ ಸರಕಾರವು ರದ್ದುಪಡಿಸಿರುವುದರಿಂದ ಜರ್ಮನರಿಗೆ ಅತ್ಯಂತ ಅಸಾನುಕೂಲತೆಯುಂಟಾಗಿದೆ.

● ಚೀನದ 4ನೇ ಮತ್ತು 8ನೇ ಕಮ್ಯುನಿಸ್ಟ್ ಸೇನೆಗಳ ನಾಶಕ್ಕಾಗಿ ಚಂಗ್‌ಕಿಂಗ್ ಸರಕಾರವು ಪ್ರಬಲ ಸೇನೆಗಳನ್ನು ಕಳುಹಿಸಿರುವದನ್ನು ನಿಷೇಧಿಸಿ, ಚೀನದಲ್ಲಿ ಒಳಗೊಂದಲವೇಳಬಹುದೆಂದು ರಶ್ಯದ ಪತ್ರಿಕೆಯೊಂದು ಚಿಯಾಂಗ್ ಕೈಶೇಕರನ್ನು ಎಚ್ಚರಿಸಿದೆ.

● ಇದೇ ತಿಂಗಳಲ್ಲಿ ಲೋರ್ಡ್ ಲಿನ್‌ಲಿತ್‌ಗೋರವರು ಸಪತ್ನೀಕರಾಗಿ ದಕ್ಷಿಣ ಹಿಂದುಸ್ಥಾನಕ್ಕೆ ಬರಲಿದ್ದಾರೆ.

○ ಮುಂದಿನ ಶಾಂತಿ ಪರಿಷತ್ತಿನಲ್ಲಿ ಗಾಂಧಿಜೀಯವರೊಬ್ಬರೇ ಹಿಂದುಸ್ಥಾನದ ಪರವಾಗಿ ಮಾತಾಡಬಲ್ಲರೆಂದು ಮಾನ್ಯ ಶ್ರೀನಿವಾಸ ಶಾಸ್ತ್ರಿಗಳಂದಿದ್ದಾರೆ.

● ಅಜಮೀರ್-ಮೆರ್ವಾರಾಕ್ಷೇತ್ರದ ಸುಮಾರು 400ಚದರ ಮೈಲಲ್ಲಿ ಆಕಸ್ಮಿಕ ನೆರೆಬಂದು 5ಸಾವಿರಕ್ಕೆ ಮಿಕ್ಕಿ ಮಡಿದಿದ್ದಾರೆಂದು ತಿಳಿದುಬರುತ್ತದೆ.

● ನೈಋತ್ಯ ಶಾಂತ ಸಮುದ್ರದ ಮುಖ್ಯ ಜಾಪಾನೀ ನೆಲೆಯಾದ ಮುಂಡಾ ದ್ವೀಪವು ಅಮೆರಿಕಾನರ ವಶವಾಯಿತೆಂದೂ ಅಲ್ಲಿದ್ದ ಜಪಾನೀ ಸೇನೆಯನ್ನು ನಾಶಮಾಡಲಾಯಿತೆಂದೂ ಮಿತ್ರರವಾರ್ತೆ.

○ ಇಡೀ ಇಟಲಿಯನ್ನು 'ಅಪಾಯಕರ ಪ್ರದೇಶ'ವಾಗಿ ಇಟಲಿಯ ಅರಸರು ಜ್ಯಾಹೀರುಮಾಡಿ ಇದೇ ತಾ. 9ರಿಂದ ಅದು ಜ್ಯಾರಿಯಲ್ಲಿರುವದು

—ಬಂಗಾಳದ ಬರಗಾಲ—

ಬಂಗಾಳದಲ್ಲಿ ಆಹಾರಾಭಾವದಿಂದ 1770ರ ಬರಗಾಲದಂತಹ ದುಸ್ಥಿತಿಯುಂಟಾಗಿದೆ. ಜನರು ದನದ ಮಾಂಸಗಳನ್ನು ತಿನ್ನುತ್ತಿರುವರೆಂದೂ ಹೆಂಡತಿ ಮಕ್ಕಳನ್ನು ಮಾರುತ್ತಿರುವರೆಂದೂ ವಾರ್ತೆ. ಹತ್ತಿರದ ಊರುಗಳಿಂದ ಕಲ್ಕತ್ತೆಗೆ ಹಸಿವು ಪೀಡಿತರ ತಂಡ ತಂಡಗಳೇ ಬರುತ್ತಿವೆ. ಡಾ| ಶ್ಯಾಮ ಪ್ರಸಾದ ಮುಖರ್ಜಿಯವರು ಹಿಂದೀ ಸರಕಾರದಿಂದ ಆಹಾರ ಪೂರೈಕೆ ಪಡೆಯಬೇಕೆಂದು ಬಂಗಾಳಾ ಎಸೆಂಬ್ಲಿಯಲ್ಲಿ ವಾದಿಸುತ್ತಿದ್ದಾಗ ಯುರೋಪಿಯನ್ ತಂಡದವರು ಕೂಗಿದರು: "ನೀವು ನಿಮ್ಮ ಪ್ರೀತಿಯ ಟೋಜೋನನ್ನೇಕೆ ಸಂಧಿಸಬಾರದು?" ಈ ಸಂಜು ಮಾತಿಗೆ ಡಾ| ಮುಖರ್ಜಿಯವರ ಸ್ಪಷ್ಟ ಉತ್ತರ: "ಅವನು ಜನರಲ್ ಟೋಜೋ ನಮ್ಮ ಪ್ರೇಮಿಯೆನ್ನುತ್ತಾನೆ. ನಮ್ಮ ಪ್ರಿಯತಮರಾರೆಂಬುದನ್ನು ಚರಿತ್ರೆಯಿಂದಲೇ ತಿಳಿಯಲುಳಿದಿದೆ. ಭಾರತಕ್ಕೆ ಬ್ರಿಟಿಷರೊಡನಿರುವ 170 ವರುಷಗಳ ಸಂಬಂಧದ ನಂತರವೂ ಬಂಗಾಳವೀರೀತಿ ಬರಗಾಲ ಪೀಡಿತ ಹಸಿವಿನಿಂದ ಬಳಲುತ್ತಿರುವಾಗ ನೀವಂತೂ ಖಂಡಿತವಾಗಿಯೂ ನಮ್ಮ ಪ್ರಿಯತಮರಲ್ಲ. ಇಷ್ಟನ್ನು ನಾನು ಹೇಳಬಲ್ಲೆ".

ದ. ಕ. ಜಿಲ್ಲಾ ಬೋರ್ಡಿನ ಸ್ಥಾನಗಳಿಗೆ ನಡೆಯಲಿರುವ ಉಪಚುನಾವಣೆಗಳಲ್ಲಿ ಕಾಂಗ್ರೆಸು ಸ್ಪರ್ಧಿಸಬೇಕೋ ಎಂಬ ಕುರಿತು ವಿಚಾರಿಸಲು ಮಂಗಳೂರಲ್ಲಿ ಸೇರಿದ ಸಭೆಯ ಅಧ್ಯಕ್ಷರಾದ ಎಡ್ವೊಕೇಟ್ ಶ್ರೀ. ಬಿ ವೈಕುಂಠ ಬಾಳಿಗರಿಗೆ ರಾಜೀನಾಮೆಯಿತ್ತ ಓರ್ವ ಸದಸ್ಯ ಶ್ರೀ. ಬಾಳ್ಕಟ್ಟ ಕೃಷ್ಣಯ್ಯ ಹೆಗ್ಡೆಯವರು ಬರೆದ ಇಂಗ್ಲಿಷ್ ಪತ್ರದ ಅನುವಾದ.

ತಾ| 10-8-1943.

ಅಯ್ಯಾ,

ದ. ಕ. ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಸ್ಪರ್ಧಿಸಬೇಕೆಂಬ ಅಭಿಪ್ರಾಯದ ನಿಷೇಧಾರ್ಥವಾಗಿ ನಾನು ಈ ದಿನವೇ ಒಂದು ತಂತಿ ರವಾನಿಸಿದ್ದೇನೆ. ಚುನಾವಣೆಗಳಲ್ಲಿ ಸ್ಪರ್ಧಿಸುವ ಕುರಿತು ನನ್ನ ಪ್ರಬಲ ವಿರೋಧವನ್ನು ಮತ್ತೊಮ್ಮೆ ವ್ಯಕ್ತಪಡಿಸುತ್ತೇನೆ. ನಾವೆಲ್ಲರೂ ದ. ಕ. ಕಾಂಗ್ರೆಸಿನ ಆಜ್ಞೆಯಂತೆ ಜಿಲ್ಲಾ ಬೋರ್ಡಿನ ಸ್ಥಾನಗಳಿಗೆ ರಾಜೀನಾಮೆ ಕೊಟ್ಟಿದ್ದೆವು. ಸದ್ಯಸ್ಥಿತಿಯಲ್ಲಿ, ಆದರಲ್ಲೂ ನಮ್ಮ ಪ್ರೀತಿಯ ಮುಖಂಡರು ಇನ್ನೂ ಜೈಲಲ್ಲಿದ್ದು ಸರಕಾರವು ಅವರ ಬಿಡುಗಡೆಯ ಸಂಬಂಧದಲ್ಲಿ ಕಠಿಣ ಧೋರಣೆವಹಿಸಿರುವ ಇಂದಿನ ವಾತಾವರಣದಲ್ಲಿ, ಚುನಾವಣೆಗಿಳಿದರೆ ನಮ್ಮ ಹಾಗೂ ಕಾಂಗ್ರೆಸಿನ ಹೆಸರಿಗೆ ಕಳಂಕ ತರುವೆವೆಂದು ನನ್ನಭಾವನೆ. ನ್ಯಾಯಬದ್ಧ ಅಧಿಕಾರಿಗಳ ಒಪ್ಪಿಗೆಯಿಂದ ನಡೆದ ಕೇಂದ್ರ ಎಸೆಂಬ್ಲಿ ಮತ್ತು ಇತರ ಸಂಸ್ಥೆಗಳ ಚುನಾವಣೆಗಳೊಡನೆ, ನಾವು ನಮ್ಮನ್ನೂ ಹೋಲಿಸಿಕೊಳ್ಳಲಾಗುವದಿಲ್ಲ. ಆದ್ದರಿಂದ ಕಾಂಗ್ರೆಸ್ ಟಿಕೇಟಿನಿಂದ ಯಾರೂ ಚುನಾವಣೆಗೆ ನಿಲ್ಲದಂತೆ ನೀವು ಪ್ರಯತ್ನಿಸುವಿರೆಂದೂ ಆ ಮೂಲಕ ನಮಗೆಲ್ಲಾ ಅತಿಪ್ರಿಯ ಹಾಗೂ ಪವಿತ್ರವಾದ ಕಾಂಗ್ರೆಸಿನ ಹೆಸರು ಮತ್ತು ಮಾನವನ್ನುಳಿಸುವಿರೆಂದೂ ನನ್ನ ಆಶೆ ಮತ್ತು ವಿನಂತಿಯಿದೆ.

B. Krishnaya Hegde.

ಅಖಿಲ ಕರ್ನಾಟಕದ ಹೊಸ ಮಾದರಿಯ ವಾರ ಪತ್ರಿಕೆ:

ಅಂತರಂಗ

ಶ್ರೀ. ಎ. ಎಸ್. ಪಿ. ಅಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್‌ಲಾ., ಎಫ್. ಆರ್. ಎಸ್. ಎಲ್. ಇವರ 'Funny Tales of Ind' ಎಂಬ ಇಂಗ್ಲಿಷ್ ಕಥಾವಳಿಯ ಅನುವಾದವು ಧಾರಾವಾಹಿಯಾಗಿ ಪ್ರಕಟವಾಗುತ್ತಿದೆ.

ಇದೀಗ ೧೮ನೇ ಸಂಪುಟವು ಆರಂಭವಾಗಿದೆ.

ವಾರ್ಷಿಕ ಚಂದಾ ರೂ.	4	8	0
6 ತಿಂಗಳಿಗೆ ರೂ.	2	4	0
ಬಿಡಿ ಸಂಚಿಕೆಗೆ	0	1	6

Manager **'Antaranga'** Weekly, Udipi.

ಪುರಾಣದ ಪುಣ್ಯ ಕಥೆ- ಸರಸವಾದ ನೃತ್ಯ ಸಂಗೀತಗಳಿಂದ ಶೋಭಿಸುವ

ಪ್ರತಿಭಾ ಚಿತ್ರ-

ಪಾರ್ವತಿ ಕಲ್ಯಾಣ

ಶಾಂತ ಕುಮಾರಿ, ಲಕ್ಷ್ಮೀ ದೇವಿ, ಶ್ರೀನಿವಾಸ್ ರಾವ್ ಮೊದಲಾದವರು.

ತಾ. **10—8—43**ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಬರುವ ಚಿತ್ರ:- ಸಿಕೋರದವರ 'ಸೋಹನ್'.

Degrees: Books: Medicines

Free H. L. M. S. M. B. H. M, D, etc. Free Homeo-Ayur- UnaniNaturco degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp:—

Principal Indian Homeopathi Institute & Society (Govt. Regd)

P.O. MAHUVA (Kathiawar Dt. India.)

Sidha-Kalpa Kavach (Regd.)

No. 3 Rs 2. No. 2 Rs. ⁵ No. 1 Rs. 7. Special Rs. 10, Extra Special Rs. 17 for ove marriage health, wealth. Ask any six questions with M. O. Re. 1|4 and get correct answers by returnpost Life reading Rs.10 No V.P.P.Send M.O.Free. pamplets.

Prof Dr. N. H Chhatbar.

P. O. MAHUVA (Kathiawar India.)

ದಕ್ಷಿಣ ಕನ್ನಡ.

ಮಂಗಳೂರು.

ಪ್ರಕಟಣೆ.

ಜನತೆಯ ಜೀವನಕ್ಕೆ ಅತ್ಯಾವಶ್ಯಕವಾದ ಅಕ್ಕಿಯನ್ನು ಒದಗಿಸುವ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಅಕ್ಕಿಯ 'ಮಿಲ್ಲು'ಗಳಲ್ಲಿ ಭತ್ತವನ್ನು ಉಪಯೋಗಿಸುವ ರೀತಿಯನ್ನು ವ್ಯವಸ್ಥೆಗೊಳಿಸುವುದು ಆವಶ್ಯವಿರುವುದರಿಂದ–

ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರ್, ಎಂ. ಕರಮತುಲ್ಲ, ಐ. ಸಿ. ಎಸ್., ಆದ ನಾನು ಡಿಫೆನ್ಸ್ ಒಫ್ ಇಂಡಿಯಾ ರೂಲ್ಸುಗಳ ಪೈಕಿ 81 (2) (a) ನೇ ರೂಲಿನ ಪ್ರಕಾರ ಈ ಕೆಳಗಣ ಹುಕುಮನ್ನು ವಿಧಿಸಿರುತ್ತೇನೆ:—

1. ತಾರೀಕು 1-9-43ರಲ್ಲಿ ಯಾ ಅದರ ನಂತರ ಯಾವತ್ತೂ ಮಿಲ್ಲಿನ ಮಾಲಿಕನು ಮತ್ತು ವ್ಯಾಪಾರಿಯು ಡಬ್ಬಲ್ ಅಥವಾ ಎರಡು ಪಾಲೀಶ್ ಯಾನೆ ಒಪ್ಪದ ಅಕ್ಕಿಯನ್ನು ದಾಸ್ತಾನು ಮಾಡಕೂಡದು. ಮತ್ತು ಮಾರಾಟ ಮಾಡಬಾರದು.

2. ಅಂಥಹ ಮಿಲ್ಲಿನ ಮಾಲಿಕನು ಅಥವಾ ವ್ಯಾಪಾರಿಯು ಸದರೀ ಆಜ್ಞೆಯನ್ನು ಉಲ್ಲಂಘಿಸಿದರೆ ಆತನ ಮೇಲೆ ಬೇರೆ ದಾವೆ ಮಾಡುವುದರ ವಿನಾ ಆತನ ಲೈಸನ್ಸು ರದ್ದು ಪಡಿಸಲಾದೀತು, ಅಥವಾ ಅಮಾನತ ಪಡಿಸಲಾದೀತು.

3. ಅಧಿಕಾರ ಹೊಂದಿದ ಯಾವತ್ತೂ ಉದ್ಯೋಗಸ್ಥನು ಡಬ್ಬಲ್ ಅಥವಾ ಎರಡು ಪಾಲೀಶ್ ಯಾನೆ ಒಪ್ಪದ ಅಕ್ಕಿ ದಾಸ್ತಾನು ವ ಮಾರಾಟ ಮಾಡುತ್ತಾರೆ ಎಂದು ತೋರುವ ವಠಾರವನ್ನು ಹೊಕ್ಕು ಶೋಧನೆ ನಡೆಸಬಹುದು.

4. ಈ ಹುಕುಂ ಇಡೀ ದಕ್ಷಿಣ ಕನ್ನಡ ಜಿಲ್ಲೆಗೆ ಲಾಗುವಾಗುತ್ತದೆ.

(ಸಹಿ) ಎಂ. ಕರಮತುಲ್ಲ, ಕಲೆಕ್ಟರ್.
ದಕ್ಷಿಣ ಕನ್ನಡ ಕಲೆಕ್ಟರರ ಕಚೇರಿ,
ಮಂಗಳೂರು, 28-7-1943.

'ರೇಶನಿಂಗ್' ವಿಚಾರ:—ಒಂದು ಸಭೆಯು ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲೆಯ ಕೆಲವು ಮಾನ್ಯಗೃಹಸ್ಥರು ಆಮಂತ್ರಿತರಾಗಿದ್ದರು. ಜಿಲ್ಲೆಯಲ್ಲಿ 'ರೇಶನಿಂಗ್' ಪ್ರಾರಂಭಿಸುವ ವಿಚಾರವಾಗಿ ಕೆಲವು ಚರ್ಚೆಗಳ ಬಳಿಕ ರೇಶನಿಂಗ್ ಪ್ರಯೋಗಿಸಲು ಒಪ್ಪಿಗೆಯಾಯಿತು. ಜಿಲ್ಲೆ ಹಾಗೂ ತಾಲೂಕು ಕೇಂದ್ರಗಳಲ್ಲಿ ರೇಶನಿಂಗ್ ಪ್ರಾರಂಭಿಸುವುದಾಗಿ ಒಂದು ನಿರ್ಣಯವಾಯಿತು. ಒಂದು ಮನೆಯಲ್ಲಿ ಸರಾಸರಿ ತಲೆಯೊಂದರ ಮೂರು ರೂಪಾಯಿ ಮತ್ತು ಅದರ ಕಡಿಮೆ ಸಂಪಾದನೆಯುಳ್ಳವರ ಸಂಖ್ಯೆ ತೆಗೆದು ಅವರಿಗೆ ಕಾರ್ಡುಗಳನ್ನು ಕೊಟ್ಟು, ಅಂಥವರಿಗೆ ಕಡಿಮೆ ದರದಲ್ಲಿ ಅಕ್ಕಿ ಒದಗಿಸುವುದು ಈಗಿನ ವ್ಯವಸ್ಥೆಯೆಂದು ತಿಳಿಯುತ್ತದೆ.

ಮಂಗಳೂರು, ತಾ| 2

ಅಖಿಲ ಪತ್ರಿಕೋದ್ಯೋಗಿ ಸಂಘದ ಹೊಸ ಆಫೀಸಿನ ಉದ್ಘಾಟನೆಯನ್ನು ನಿನ್ನೆ ಸಂಜೆ ಮಾಡುತ್ತಾ, ಶ್ರೀ| ಎಂ| ಎಸ್| ಮಾಧವರಾಯರು, ಪತ್ರಿಕೆಗಳೂ ಪತ್ರಿಕೋದ್ಯೋಗಿಗಳೂ ಸಾಧಿಸಬೇಕಾದ ಉದ್ದೇಶಗಳ ಕುರಿತು ಮಾತನಾಡಿದರು.

"ಹಿಂದಿನಿಂದಲೂ ಪತ್ರಿಕೆಯು ಒಂದು ಪ್ರಧಾನಶಕ್ತಿಯೇ ಆಗಿದ್ದಿತು. ಆದರೆ ಆ ಪತ್ರಿಕೆಯಲ್ಲಿ ಬರೆಯುವವರು ಬೆಳಕಿಗೆ ಬರುತ್ತಿರಲಿಲ್ಲ. ಈ ಸಂಪ್ರದಾಯವನ್ನು ಮುರಿದವರು ಡಾ| ಆನಿಬೆಸೆಂಟರು. ಉತ್ತರ ಭಾರತದಲ್ಲಿ ಪತ್ರಿಕಾ ವ್ಯವಸಾಯಿಗಳಾಗಿ ಘೋಷ್ ಸಹೋದರರು ಮುದ್ರಾಲಯಗಳಿಂದ ಹೊರ ಬರುವ ಪದ್ಧತಿಯನ್ನಿಟ್ಟಿದ್ದರಾದರೂ ಅವರ ದೃಷ್ಟಿ ಮತಧರ್ಮಗಳ ಅಭ್ಯಾಸದತ್ತ ಹರಿಯಿತು. ಪತ್ರಿಕೋದ್ಯೋಗಿಗಳಲ್ಲೂ ವ್ಯಕ್ತಿತ್ವವಿದೆ ಎಂದು ಜನಂತರ ತೋರಿಸಿಕೊಟ್ಟವರು ಬಾಬು ಸುರೇಂದ್ರನಾಥ ಬ್ಯಾನರ್ಜಿ ಅವರು ಡಾ| ಬೆಸೆಂಟ್, ಹಾರ್ನಿಮಾನ್-ಇವರು ಪತ್ರಿಕೆಗಳ ಹಕ್ಕುಗಳಿಗಾಗಿ ಹೋರಾಡಿದವರಲ್ಲಿ ಮೊದಲಿಗರು, ಆದರೆ ಅವರ ಯತ್ನಗಳು ಹೆಚ್ಚು ಫಲದಾಯಕವಾಗಲಿಲ್ಲ. ಇತ್ತೀಚೆಗೆ ಅಖಿಲ ಭಾರತ ಪತ್ರಿಕಾ ಸಂಪಾದಕ ಪರಿಷತ್ತು ತುಂಬ ಪ್ರಯೋಜನಕಾರಿಯಾದ ಕೆಲಸಗಳನ್ನು ಮಾಡುತ್ತಿದೆ" ಎಂದು ಶ್ರೀ. ಮಾಧವರಾಯರು ಹೇಳಿದರು.

ಪತ್ರಿಕೆಗಳ ಸ್ವಾತಂತ್ರ್ಯದ ಕುರಿತು ಮಾತನಾಡುತ್ತ ಹೀಗೆ ಮುಂದುವರಿಸಿದರು: ಯುದ್ಧವಿದೆಯೆಂಬ ಒಂದೇ ಕಾರಣದಿಂದ ಪತ್ರಿಕೆಗಳ ಸ್ವಾತಂತ್ರ್ಯಕ್ಕೆ ಯಾವ ರೀತಿಯ ಧಕ್ಕೆಯೂ ತಗಲಬಾರದು ಎಂದು ಲಂಡನಿನ ಪ್ರೊ| ಲಾಸ್ಕಿಯವರು ಹೇಳುತ್ತಾರೆ. ಯುದ್ಧದ ಈ ಸಮಯದಲ್ಲಿ ಭಾರತದ ಪತ್ರಿಕೆಗಳ ಸ್ವಾತಂತ್ರ್ಯಕ್ಕೂ ಧಕ್ಕೆ ಬಂದಿದೆ. ಭಾರತದ ಪತ್ರಿಕೆಗಳವರೆಲ್ಲ ಒಂದಾಗಿ ಹೋರಾಡಬೇಕಾದ ಕಾಲವಿದು. ಈ ಐಕ್ಯತೆ ಯುದ್ಧಾನಂತರವೂ ಇರಬೇಕಾಗುವುದು. ವ್ಯಾಪಾರಿಗಳಂತೆ ಪತ್ರಿಕೋದ್ಯೋಗಿಗಳೂ ಪತ್ರಿಕೆಗಳೂ ಕಟ್ಟುಮುತ್ತಾ ಹೋದರೆ, ನಮ್ಮ ದೇಶದಲ್ಲಿ ಪತ್ರಿಕೋದ್ಯಮಕ್ಕೆ ಪ್ರಗತಿಯೇ ಇಲ್ಲದಾಗುವುದು."

'ನಮ್ಮ ಪತ್ರಿಕೆಗಳು ಏಕೆ ವೃದ್ಧಿ ಹೊಂದುವುದಿಲ್ಲ?' ಎಂಬ ಪ್ರಶ್ನೆಯನ್ನುತ್ತರಿಸುತ್ತಾ, "ವ್ಯಕ್ತಿಗಳನ್ನು ಇಲ್ಲವೆ ಸರಕಾರವನ್ನು ಟೀಕಿಸುವುದು ಮಾತ್ರ ಪತ್ರಿಕೆಗಳ ಉದ್ದೇಶವಿರಬಾರದು. ಜನಸಾಮಾನ್ಯರ ವಿಚಾರ ಶಕ್ತಿಯನ್ನು ವಿಕಾಸಗೊಳಿಸುವ ಯೋಚನಾ ಶಕ್ತಿಯನ್ನು ಹುಟ್ಟಿಸುವ ಉನ್ನತ ಧ್ಯೇಯಗಳನ್ನು ಅವು ಇಟ್ಟುಕೊಂಡಿರಬೇಕು. ನಾವು ಉಪಯೋಗಿಸುವ ಭಾಷೆ ಸರಳವಿದ್ದು, ಪ್ರತಿಯೊಬ್ಬ ಓದುಗನಿಗೂ ಅರ್ಥವಾಗುವಂತಿರಬೇಕು. ಈ ಜಿಲ್ಲೆಯಲ್ಲಂತೂ ನಮ್ಮ ಜನರಿಗೆ ಸಂಬಂಧಿಸಿದ ವಿಷಯಗಳಿಗೆ ಪತ್ರಿಕೆಗಳು ಗಮನಕೊಡುವುದೇ ಇಲ್ಲ. ಜಿಲ್ಲೆಯ ಇತರ ಪ್ರದೇಶಗಳಲ್ಲಿ ಬಾತ್ಮಿದಾರರನ್ನು ನೇಮಿಸುವ ಪದ್ಧತಿಯೂ ಇಲ್ಲ....ಈ ಅವ್ಯವಸ್ಥೆ ಹೋಗಬೇಕು. ಪತ್ರಿಕೋದ್ಯೋಗಿ ಸಂಘದ ಈ ಆಫೀಸು ಜಿಲ್ಲೆಯ ಎಲ್ಲಾ ಪತ್ರಿಕೋದ್ಯೋಗಿಗಳ ಚಟುವಟಿಕೆಯ ಕೇಂದ್ರ ಕಾರ್ಯಕ್ಷೇತ್ರವಾಗಬೇಕು" ಎಂದು ಶ್ರೀ| ಮಾಧವರಾಯರು ಆಶಿಸಿದರು.

ಆರಂಭದಲ್ಲಿ ಲಘುಫಲಾಹಾರವಾದ ಮೇಲೆ ಸಂಘದ ಅಧ್ಯಕ್ಷ ಶ್ರೀ| ಹು. ಭೀಮರಾಯರು ನೆರೆದಿದ್ದ ಪತ್ರಿಕೋದ್ಯೋಗಿಗಳನ್ನೂ ಸಮಾರಂಭದ ಅಧ್ಯಕ್ಷರಾದ ಶ್ರೀ| ಎ. ಬಿ. ಶೆಟ್ಟಿಯವರನ್ನೂ ಉದ್ಘಾಟಕರನ್ನೂ ಸ್ವಾಗತಿಸಿದರು.

"ಸಾರ್ವಜನಿಕ ಸ್ವಾತಂತ್ರ್ಯವನ್ನು ಪತ್ರಿಕೆಗಳು ಕಾಪಾಡಬೇಕು"

ಶ್ರೀ| ಎ. ಬಿ. ಶೆಟ್ಟರು ತಮ್ಮ ಭಾಷಣವನ್ನೀಯುತ್ತಾ, ಇಂದು ಪತ್ರಿಕೆಗಳಿಗೂ ಪತ್ರಿಕೋದ್ಯೋಗಿಗಳಿಗೂ ಬಂದೊದಗಿರುವ ಸಂಕಷ್ಟಗಳನ್ನು ವಿವರಿಸಿದರು. "ಸಾರ್ವಜನಿಕ ಹಕ್ಕು ಸ್ವಾತಂತ್ರ್ಯಗಳನ್ನು ರಕ್ಷಿಸುವವರು ಪತ್ರಿಕೆಗಳವರು. ಇದನ್ನು ಸದಾ ನಾವು ನೆನಪಿನಲ್ಲಿಡಬೇಕಾಗಿದೆ. ನಮಗೆ ಸಂಬಂಧಿಸಿದ ವಿಷಯಗಳೂ ಹಲವಾರು ಇವೆ. ಅವುಗಳನ್ನು ಚರ್ಚಿಸಿ ಪರಿಹಾರೋಪಾಯಗಳನ್ನು ಕಂಡುಹಿಡಿಯಲು ಪತ್ರಿಕೋದ್ಯೋಗಿಗಳ ಸಂಘಟನೆ ಅವಶ್ಯ" ಎಂದು ಶ್ರೀ| ಶೆಟ್ಟರು ಹೇಳಿ, ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಪರಿಷತ್ತನ್ನು ಜರಗಿಸಲು ಸಂಘವು ಮಾಡಿರುವ ನಿರ್ಧಾರವು ಕೈಗೂಡಲೆಂದೂ ಸಂಘದ ವಾಚನಾಲಯ ಮತ್ತು ಪುಸ್ತಕ ಭಂಡಾರಗಳು ಪತ್ರಿಕೋದ್ಯೋಗಿಗಳ ಉಪಯೋಗಕ್ಕೆ ಬೀಳಲೆಂದೂ ಹಾರೈಸಿದರು.

ಸಂಘದ ಕಾರ್ಯದರ್ಶಿ ಶ್ರೀ| ಕುಳುಕುಂದ ಶಿ. ಉ. ಅವರು ಕೃತಜ್ಞತೆಗಳನ್ನರ್ಪಿಸಿದರು.

ಉಡುಪಿ.

ತಾ 7-8-43ನೇ ದಿವಸ ಸಾಯಂಕಾಲ ಉಡುಪಿ ತಾಲೂಕು ಕಚೇರಿಯಲ್ಲಿ ಉಡುಪಿ ಸ್ಟೇಶನ್ ಪರಹದ್ದಿನ ಪಟೇಲರ, ವಿಜಿಲೆನ್ಸ್ ಕಮಿಟಿ ಮೆಂಬರರ ಒಂದು ಸಭೆಸೇರಿತು. ಉಡುಪಿ ಸಬ್ ಮೆಜಿಸ್ಟ್ರೇಟರು ಅಧ್ಯಕ್ಷರಾಗಿದ್ದರು. ಜಿಲ್ಲಾ ಸುಪರಿಂಟೆಂಡೆಂಟ್‌ರವರು ಪಟೇಲರ ಕರ್ತವ್ಯ ಮತ್ತು ರಿಕ್ರುಟ್‌ಮೆಂಟ್ ವಿಷಯವಾಗಿ ಸರಸವಾದ ಭಾಷಣವನ್ನು ಕೊಟ್ಟರು. ಕೊನೆಯಲ್ಲಿ ಕಾಫಿಫಲಾಹಾರಗಳು ಹಂಚಲ್ಪಟ್ಟವು.

ಉದ್ಯಾವರ:– ಉದ್ಯಾವರ ಸಾಹುಕಾರ್ ಯು. ಸಸಿಯ ಮರಕಾಲರವರು ಇಲ್ಲಿಯ ಬಿಲ್ಲವ ಮಹಾಜನ ಸಂಘದ ಭಜನಾ ಮಂದಿರದ ಪರವಾಗಿ ಒಂದು ಕಟ್ಟೋಣವನ್ನು ಕಟ್ಟಿಸುವ ಬಗ್ಗೆ ತಾ. 29-7-4-1943ರಲ್ಲಿ ಉದ್ಯಾವರ ಬೋಳಾರ ಗುಡ್ಡೆ ಎಂಬಲ್ಲಿ ಒಂದು ಸ್ಥಳವನ್ನು ಬಿಲ್ಲವ ಸಂಘಕ್ಕೆ ಧರ್ಮ ಸಾಧನ ಮಾಡಿಕೊಟ್ಟಿರುತ್ತಾರೆ. ಈ ಬಗ್ಗೆ ಬಿಲ್ಲವ ಸಂಘವು ಅವರ ಉಪಕಾರ ಸ್ಮರಣೆ ಮಾಡುತ್ತದೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಹಿರ್ಗಾಳ– ಈ ಕೇಂದ್ರದ ಅಕ್ಕಿ ಭತ್ತ ಲೈಸನ್ಸುದಾರರ ಸಭೆಯು ತಾ. 2-8-43ರಲ್ಲಿ ಜರಗಿ ತಾ, 5-8-43ರಿಂದ 12-8-43ರ ವರೆಗೆ ಶ್ರೀ ಹಿರಿಯಣ್ಣ ಹೆಗ್ಡೆ, ಶ್ರೀ ಬಿ. ಬಿ. ಶಂಕರ ಹೆಗ್ಡೆ, ಬಂಡ್ಸಾಲೆ ಹಿರ್ಗಾಳ ಇವರೂ ತಾ. 13-8-43ರಿಂದ 15-8-43ರ ವರೆಗೆ ಶ್ರೀ. ಬಿ. ಭುಜಂಗ ಹೆಗ್ಡೆ ಯವರೂ, ತಾ, 16-8-43ರಿಂದ 20-8-43ರ ವರೆಗೆ ಪುತ್ತು ಯಾನೆ ಅನಂತ ನಾಯ್ಕರೂ ತಾ, 21-8-43ರಿಂದ ತಾ. 27-8-43ರವರೆಗೆ ಶ್ರೀ ಇ. ಸಂಜೀವ ಹೆಗ್ಡೆಯೂ, ಮತ್ತು ತಾ. 28-8-43ರಿಂದ 2-9-43ರ ವರೆಗೆ ಶ್ರೀ ತನ್ಯ ಸೆಟ್ಟರೂ ಬಡ ಕೂಲಿಗಾರರಿಗೆ ಸೇರು ೧ಕ್ಕೆ 0-4-0ಯಂತೆ ಅಕ್ಕಿ ಮಾರಾಟ ಮಾಡುವವರಾಗಿ ನಿರ್ಣಯಿಸಲ್ಪಟ್ಟಿತು.

ಪುತ್ತೂರು.

ಅಕ್ಕಿ ವ್ಯವಸ್ಥೆ—ಬಡವರಿಗೆ ಕಡಿಮೆ ಕ್ರಯದಲ್ಲಿ ಸಹಕಾರೀ ಸಂಘಗಳ ಮುಖಾಂತರ ಅಕ್ಕಿ ಸಿಗುವಂತೆ ಶ್ರೀ| ಮೊಳಹಳ್ಳಿ ಶಿವರಾಯರು ಒಂದು ಯೋಜನೆ ಮಾಡಿದ್ದು ಕೆಲಸ ನಡೆಯುತ್ತದಾಗಿ ತಿಳಿಯುತ್ತೇವೆ. ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆ ಮೊದಲಾದ ಜಮೀನ್ದಾರರೂ ಈ ಯೋಜನೆಯಲ್ಲಿ ಸಹಕಾರ ಕೊಡುತ್ತಿರುವುದು ಸ್ತುತ್ಯ.

ಚೂರು-ಚೂರು

'ಬಂಗಾಳದಲ್ಲಿ ಆಹಾರಾಭಾವದಿಂದಾಗಿ ಹೆಂಡಿರು ಮಕ್ಕಳನ್ನು ಮಾರಹತ್ತಿದ್ದಾರೆ'- ಶೋಚನೀಯ ವಾರ್ತೆ

'ಬದನೇ ಕಾಯಿ ಬೆಳೆಸಿರಿ' ಚಳವಳದ ಬದಲಿಗೆ ಸರಕಾರವಿನ್ನು 'ಬಹಳ ಮಕ್ಕಳನ್ನು ಹುಟ್ಟಿಸಿರಿ'—ಬೋಧನೆಗಾರಂಭಿಸುವದು ಉತ್ತಮ.

O

ಸ್ವೀಡನಿನ 'ಅಲ್ಲೆಹಾಂಡಾ' ಪತ್ರಿಕೆ ಪ್ರಕಟಿಸಿದೆ:– 'ಹಿಟ್ಲರರು ಕಠಿಣ ಕಾಹಿಲೆ ಬಿದ್ದಿದ್ದಾರೆ; ಎಲ್ಲವನ್ನೂ ಬಹಳ ಗುಟ್ಟಿನಲ್ಲಿಡಲಾಗಿದೆ; ನಿರಾಶಾಜನ್ಯ ಮನೋರೋಗ'.

'ಹವಾಬದಲಾವಣೆಗಾಗಿ ಇಂಗ್ಲಾಂಡಿಗಿಳಿಯಬೇಕು'—ಎಂಬ ಸೂಚನೆಯನ್ನು ಹಿಟ್ಲರನ ಡಾಕ್ಟರ್ ಕೊಟ್ಟರೇನು ಗತಿ?

O

'ಗಾಂಧೀ ಅಭಿಪ್ರಾಯಕ್ಕೆ ನಿರ್ಬಂಧ ಹಾಕಿದ್ದರಿಂದ ಅದನ್ನು ತಿಳಿಯಲಾಗದೆ ನಮ್ಮನ್ನೂ ದಿಗ್ಬಂಧನ ಗೊಳಿಸಿಟ್ಟಂತಾಗಿದೆ'-ಗಾರ್ಡಿಯನ್ ಪತ್ರಿಕೆಯ ಟೀಕೆ.

'ಹಿಂದುಸ್ಥಾನದ ಗಲಭೆಯಿಂದಾಗಿ ದಿಗ್ಭ್ರಾಂತಿತರಾದವರೆಷ್ಟು?'—ಎಂಬ ಪ್ರಶ್ನೆಗೆ ಇನ್ನೊಂದು ಬಾರಿ ಉತ್ತರ ಕೊಡುವಾಗ ಮಿ. ಅಮೆರಿಯವರು ಇವರನ್ನೂ ಕೂಡಿಸಿ ಹೇಳಬಹುದು.

O

'ದಕ್ಷಿಣಾಫ್ರಿಕದ ಹಿಂದೀ ವಿರುದ್ಧ ಪೆಗ್ಗಿಂಗ್ ಮಸೂದೆಯ ವಿರುದ್ಧವಾಗಿ ಬ್ರಿಟಿಷ್ ಸರಕಾರವು ಕಿರಿಬೆರಳನ್ನು ಕೂಡಾ ಎತ್ತಲಿಲ್ಲ'—ಕೌನ್ಸಿಲ್ ಒಫ್ ಸ್ಟೇಟಿನಲ್ಲಿ ಶ್ರೀ ಕಾಳಿಕರರ ಟೀಕೆ.

ಇದು ಸುಳ್ಳು— ಈ ಯುದ್ಧದಿಂದಾಗಿ ಬ್ರಿಟಿಷ್ ಸರಕಾರದ ರೋಮರೋಮಗಳೂ ಎದ್ದು ನಿಂತಿವೆ–ಕಿರಿಬೆರಳು ಸುಮ್ಮಗಿದೆಯೇನು?

O

'ಫೊರ್ಮೋಸಾ ಮತ್ತು ಮಂಚೂರಿಯವನ್ನು ಯುದ್ಧಾನಂತರ ಚೀನಕ್ಕೊಪ್ಪಿಸಬೇಕು. ಬೇರಾವ ಸ್ಥಳಾಭಿಲಾಷೆಯೂ ನಮಗಿಲ್ಲ'—ಚೀನದ ವಿದೇಶ ಮಂತ್ರಿ ಡಾ| ಸೂಂಗರ ಬೇಡಿಕೆ.

ಜನರಲ್ ಟೋಜೋನನ್ನು ಹಿಡಿದೊಪ್ಪಿಸಿದರೆ ಸಾಲದೆ?

—ವಿನೋದಿ

BHUVANENDRA PRODUCTS Ltd.,

Head Office and Factory: **Katapadi**, S. Kanara

Depots: 1 Mahratha Galli, Hubli

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಯ್ಸ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ವಿಜಯಾ ಸ್ಟೋರ್ಸ್

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟಿಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

ಮುಖ್ಯ ಕಾರ್ಯಾಲಯ:—ಕೋರ್ಟು ರಸ್ತೆ, ಉಡುಪಿ. ದಕ್ಷಿಣ ಕನ್ನಡ.

ಶಾಖೆಗಳು:— ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಕಿನ್ನಿಗೋಳಿ.

ಮುಸುಂ ಠೇವಣಾತಿಗಳು ತಾ. 31-7-1943 ಅಥವಾ ಈ ತಾರೀಕಿನ ಮೊದಲು ವ್ಯಾದೆಯಾಗುವುದಾದರೆ ಅಂಥಾ ವ್ಯಾದೆಯ ವರೆಗೆ ಸಾಲಿಯಾನ ಶೇಕಡಾ 3ರ ಸಲೆ ಬಡ್ಡಿಯಲ್ಲಿ 3, 4, 5 ಅಥವಾ 6ತಿಂಗಳ ವ್ಯಾದೆಯಿಂದ ಪ್ರತಿಯೊಂದು ಶಾಖೆಯಲ್ಲಿ ಅಂಗೀಕರಿಸಲ್ಪಡುತ್ತವೆ.

ಬೇಂಕಿನ ಪ್ರತಿಯೊಂದು ವಿಧದ ವಹಿವಾಟುಗಳು ನಡೆಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ಮೊಖತಾ ಅಥವಾ ಪತ್ರದ್ವಾರಾ ಸಮೀಪದ ಶಾಖೆಯಲ್ಲಿ ದಯವಿಟ್ಟು ವಿಚಾರಿಸಿರಿ

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವುದು, ಚೇಳು ವಿಷಮುಂತಾದ ಚೇನೆ, ಪಕ್ಷವಾತ, ಮೊಡವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ,

REGD.

ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತಾ.

ಬಾಲಚಂದ್ರ

ವಿದ್ಯಾ ವಿಷಯಕ ಪ್ರಮುಖ ಮಾಸ ಪತ್ರಿಕೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1-8-0 ಮಾತ್ರ

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಮೆನೇಜರ್, ಬಾಲಚಂದ್ರ

ಸಂತೆಕಟ್ಟೆ, ಉಡುಪಿ.

ಶ್ರೀ. ತಾರಾನಾಥ ಭೇಷಜಾಲಯ

ಶಾಸ್ತ್ರೀಯ ಮತ್ತು ಸಿದ್ಧೌಷಧಿಗಳ ಕಾರಾಗಾರ, ಚಿಕ್ಕಮಗಳೂರು.

ನಿರ್ದೇಶಕ:- ಡಾ. M. L. Shetty, ಪ್ರೇಮವಿದ್ಯಾಪೀಠದ ಗೌ. ಪ್ರಾಧ್ಯಾಪಕರು.

ಎಲ್ಲಾ ತರದ ಭಸ್ಮ, ಖಲ್ವೀ ರಸಾಯನ, ಆಸವಾರಿಷ್ಟ, ಘೃತ, ತೈಲಗಳಿಗಾಗಿ ಕೂಡಲೇ ಬರೆಯಿರಿ.

ಲಕ್ಷಗಟ್ಟಲೆ ರೋಗಿಗಳಲ್ಲಿ ಫಲಕಾರಿಯಾದ ಔಷಧೀ ಯೋಗಗಳು. ಗುರುಪರಂಪರೆಯ ಅನುಭವದಿಂದ ಬಂದ ನಿರ್ದುಷ್ಟ ಔಷಧೀಕರಣ ವಿಧಾನ.

ಡಾ| P. M. Alva,

ಮೆನೇಜರ್.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೨ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಕುಂಬಾರಮಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಶಿವಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ಬಾಲ ಸಾಹಿತ್ಯ ಮಂಡಲ, ಲಿಮಿಟೆಡ್.

ದಿವಂಗತ ಶ್ರೀ| ಉಳ್ಳಾಲ ಮಂಗೇಶರಾವ್ ಬಿ. ಏ., ಎಲ್. ಟಿ, ಅವರಿಂದ ರಚಿತವಾದ ನಮ್ಮ "ಹೊಸಗನ್ನಡದ ೧ರಿಂದ ೫ರ ವರೆಗಿನ ರೀಡರು"ಗಳು ಇದೇ ಜೂನಿನ ಪ್ರಥಮ ವಾರದಲ್ಲೇ ಸಿದ್ಧವಾಗುವವು. ಅವುಗಳಿಗೆ ಬೆಲೆ ಮತ್ತು ಅವುಗಳ ಮೇಲಿನ ಕಮೀಶನಿನ ದರಗಳು ಕಾಲಕ್ಕೆ ತಕ್ಕಂತೆ ಹೊಂದಿಸಲ್ಪಟ್ಟು ಆಗಲೇ ಪ್ರಕಟಗೊಳ್ಳುವುವು.

Bala Sahitya Mandal, Ltd.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲರ ಸಹಕಾರ ಅಪೇಕ್ಷಿಸುವುದು.

M. R. Punja, President & Manager — ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೬ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನರ. 5 **ಕೊಡಿಯಾಲಬೈಲು, ದ.ಕ.**

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸದೊರೆಯ ಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ. : : : : ಮಂಗಳೂರು:



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ **ರಥಬೀದಿಯ**

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ ಕಂಪನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmit Road, **MANGALORE.**

Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI. S. INDIA.

Regd. No. M. 3618.

Estd. 1921 ಸ್ಥಾಪನೆ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೩ ಸಂಚಿಕೆ ೪೮

FOUNDER Sri. A. B. Shetty, M. L. A.

Vol. 23 No. 48

NAVAYUGA— Kannada Weekly —UDIPI, S. I.

ಉಡುಪಿ • 19-8-1943 • ಮಂಗಳೂರು.

ಹೊಸಕೆರೆ ಚಿದಂಬರಯ್ಯನವ
ರಿಂದ ರಚಿತವಾದ ಗೀತೆಯ
ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು 440 ಪುಟಗಳು.

ಬೆಲೆ (ಸುಂದರ ಪ್ರತಿ) ೦—೮—೦
(ಕೆಲಿಕೋ ಬೈಂಡ್) ೦-೧೨—೦
(ಲೆದರ್ ಬೈಂಡ್) ೧—೪—೦

ಪ್ರತಿಗಳು ಪ್ರಸಿದ್ಧ ವ್ಯಾಪಾರಿಗಳಲ್ಲಿ ಸಿಗುವುದು.
0-10—0 ಸ್ಟಾಂಪು ಕಳಿಸಿದ್ದಲ್ಲಿ ಒಂದು ಪ್ರತಿಯನ್ನು ಬುಕ್‌ಪೋಸ್ಟು ಮಾಡಲಾಗುತ್ತೆ.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಶ್ರೀಮತಿ ಶಿವರಾಣಿ ದೇವಿಯವರಿಂದ
(ದಿವಂಗತ ಪ್ರೇಮಚಂದರ ಪತ್ನಿ)
ರಚಿತವಾದ ಹಿಂದೀ ಕತೆಗಳ ಕನ್ನಡ
ಭಾಷಾಂತರ

ನಾರೀ ಹೃದಯ

ನಾರೀ ಹೃದಯದ ವಾಸ್ತವಿಕ ಚಿತ್ರವನ್ನು ಚಿತ್ರಿಸುವ ಉತ್ತಮ ಕತೆಗಳ ಸಂಗ್ರಹ.

ಬೆಲೆ 0—14—0
ಟ. ಖ. 0--2—0 ಪ್ರತ್ಯೇಕ.

ಒಂದು ರೂಪಾಯಿ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ಕಿರಿಯರ ಪ್ರಪಂಚ, ಉಡುಪಿ.
ಅಥವಾ ನವಭಾರತ ಬುಕ್ ಡಿಪೊ, ಉಡುಪಿ.

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

The Canara Mutual Assurance Co., Ltd.,
UDIPI (S India).

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು
ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸವಿಾಪದವರ ಮತ್ತು
ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಶೂರೆನ್ಸ್ ಕಂಪೆನಿ ಲಿ.

ಇವರಲ್ಲೊಂದು ಪೊಲಿಸಿಯನ್ನು ಪಡೆಯಿರಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು:-
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ (ದ. ಕನ್ನಡ)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್,
ಕಲ್ಲಿಕೋಟೆ, ಮಂಗಳೂರು ಮತ್ತು ತ್ರಿವಾಂಕೂರು.

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೆಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

Again - - -

TEN LACS IN TEN MINUTES.

Our share-lists opened on 5th August and soon closed by oversubscription. Ten Lacs in Ten Minutes a second time: but this time it is perhaps not such a great achievement in view of the changed economic conditions. Yet considering that shares of the face value of Rs. 50 were issued at Rs 90 that they were sold without any publicity and without the help of brokers and that they were only sold over the counter to shareholders and customers the Canara Bank is justifiably proud of this achievement when these shares are fully paid up according to the terms of the Prospectus the Capital structure of the Canara Bank will be as follows:—

Capital.	
ordinary	Rs. 15,00,000.
5% Cum. Pref.	Rs. 14,00,000.
Reserves	Rs 11,70,000.
Total	Rs. 40,70,000.

We thank all our friends and patrons whose unstinted support and sympathy made this success possible and assure them that we shall try in all possible ways to continue to deserve their good will.

CANARA BANK LIMITED.
Estd. 1906.

ಚರ್ಚಿಲ್—ರುಸವೆಲ್ಟ

ಒಟ್ಟಾದುದರ ಗುಟ್ಟೇನು?

ಸಿಸಿಲಿಯಲ್ಲಿ ಹಾರಿದ ಪ್ರಥಮ ಗುಂಡಿನ ನಂತರ ಚರಿತ್ರಾರ್ಹ ಘಟನಾಸ್ಫೋಟಗಳು ನಡೆಯುತ್ತ ಬಂದಿವೆ-ಇನ್ನು ಯುದ್ಧಾಂತ್ಯದ ವರೆಗೂ ಒಂದರ ಬಳಿಕೊಂದು ಮಹಾಮಹಾ ಘಟನೆಗಳು ಸಂಭವಿಸುತ್ತಾ ಹೋಗಬಹುದು. ಸಿಸಿಲಿಯಾಕ್ರಮಣ--ಹಿಟ್ಲರ್ ಮುಸಲನಿ ಭೇಟಿ-ರೋಮಿನ ಮೇಲೆ ಬಾಂಬು-ಮುಸಲನಿ ಮಕುಟ ಭಂಗ-ಬಡೊಗ್ಲಿಯೋ ಪ್ರಕಟನ-ರಶ್ಯನ್ ಧಾಳಿ-ಚರ್ಚಿಲ್ ರುಸವೆಲ್ಟ ಸಮ್ಮೇಲನ, ಇವೆಲ್ಲಾ ಕೇವಲ ಮೂರು ವಾರಗಳೊಳಗೆ ಮುನ್ನಡೆಯಿಸಿದ ಮೆಟ್ಟಲುಗಳು. ಮುಂದೇನು? ಮುಂದೇನೆಂಬುದರ ಅವಸರದ ನಿರ್ಧಾರ ಮಾತ್ರ ಪ್ರಸ್ತುತ ಕಾರ್ಯಾಚರಣೆಗಾಗಿಯೇ ಚರ್ಚಿಲ್ ರುಸವೆಲ್ಟರು ಆರನೇ ಬಾರಿ ಒಟ್ಟಾಗಿದ್ದಾರೆ. ಈ ಮೊದಲು ಅಟ್ಲಾಂಟಿಕ್, ವಾಷಿಂಗ್ಟನ್, ಕಾಸಾಬ್ಲಾಂಕಾಗಳು ಪಡೆದ ಸ್ಥಳ ಮಹಾತ್ಮೆಯನ್ನು ಈ ಬಾರಿ ಕೆನಡಾದ ಕ್ವಿಬೆಕ್ ಪಡೆದಿದೆ. ಕ್ವಿಬೆಕ್ಕಿನಿಂದ ಏನು ಹೊರಡುವದೋ?

ಚರ್ಚಿಲ್-ರುಸವೆಲ್ಟರು

ಭೇಟಿಯಾಗಿ ತಿಂಗಳು ಕಳೆಯುವದರೊಳಗೆ ಪುನಃ ಒಟ್ಟಾಗಿದ್ದಾರೆ. ಅಧ್ಯಕ್ಷ ರುಸವೆಲ್ಟರು ಮೀನು ಹಿಡಿಯುವ ವಿನೋದಕ್ಕಾಗಿ ಕೆನಡಾದಲ್ಲಿ ಒಂದೆರಡು ವಾರ ಕಳೆದು ಮರಳಿದರು ಎಂಬ ವಾರ್ತೆಯ ಬೆನ್ನಲ್ಲೇ ಪ್ರಧಾನಿ ಚರ್ಚಿಲ್ಲರು ಕೆನಡಾಕ್ಕೆ ಬಂದರು ಎಂಬ ವಾರ್ತೆ ಬಂತು. ಮೀನು ಹಿಡಿಯುವುದಕ್ಕಲ್ಲ-ವಿರೋಧಿಗೆ ಬಲೆ ಬೀಸುವುದಕ್ಕಾಗಿ: ವಿಹರಿಸುವದಕ್ಕಲ್ಲ-ವಿಚಾರಿಸುವದಕ್ಕಾಗಿ. ಪ್ರಧಾನ ಸಚಿವರೊಂದಿಗೆ ಬ್ರಿಟಿಶ ಯುದ್ಧ ಪ್ರಮುಖರಿದ್ದಾರೆ; ಕ್ವಿಬೆಕಿಗೆ ಬಂದೊಡನೆಯೇ ಕೆನಡಾದ ಪ್ರಧಾನಿ ಮೆಕೆಂಜೀ ಕಿಂಗ್ ಮತ್ತು ಅಲ್ಲಿಯ ಯುದ್ಧ ಪ್ರಮುಖ ಸಮಿತಿಯೊಂದಿಗೆ ವಿಚಾರವಿನಿಮಯ ನಡೆಸಿದರು. ಅಲ್ಲಿಂದ ಅಮೇರಿಕಕ್ಕೆ ಹೋಗಿ ಅಧ್ಯಕ್ಷ ರುಸವೆಲ್ಟರ ಭೇಟಿ ಪಡೆದರು. ಚರ್ಚಿಲ್ಲರ ಸಂದರ್ಶನವಾದೊಡನೆ ಅಧ್ಯಕ್ಷರು ಅಮೇರಿಕದ ಯುದ್ಧ ತಜ್ಞ ಮಂಡಲಿಯನ್ನು ಕ್ವಿಬೆಕ್ ಸಮ್ಮೇಲನಕ್ಕೆ ಕಳುಹಿದರು; ಬೆನ್ನಲ್ಲೇ ಚರ್ಚಿಲ್ ರುಸವೆಲ್ಟರೂ ಕ್ವಿಬೆಕ್ಕಿಗೆ ಹೊರಟರು. ಈ ನಡುವೆ ಅಮೇರಿಕ ಮತ್ತು ಇಂಗ್ಲಾಂಡಿನ ರಾಯಭಾರಿಗಳು ಮಾಸ್ಕೋದಲ್ಲಿ ಸ್ಟಾಲಿನರ ಭೇಟಿ ಪಡೆದಿದ್ದಾರೆ. ರಶ್ಯಾ ಯುದ್ಧದ ಇಂದಿನ ಸಂಧಿಗ್ಧ ಕಾಲದಲ್ಲಿ ಸರ್ವಸೇನಾಧಿಪನಾಗಿರುವ ತಾನು ರಶ್ಯವನ್ನು ಬಿಟ್ಟು ಹೋಗಬಾರದೆಂದು ಮಾರ್ಶಲ್ ಸ್ಟಾಲಿನರು ವಿಷಾದ ವ್ಯಕ್ತಪಡಿಸಿದ್ದಾರೆ. ಬ್ರಿಟಿಷ ವಿದೇಶ ಮಂತ್ರಿ ಮಿ. ಈಡೆನರು ಮಾಸ್ಕೋವಿಗೆ ಹೋಗುವ ಮೊದಲು ಚರ್ಚಿಲ್—ರುಸವೆಲ್ಟ್ ಪರಿಷತ್ತಿನಲ್ಲಿ ಭಾಗವಹಿಸಬಹುದು. ತದನಂತರದಲ್ಲಿ ವಾಶಿಂಗ್ಟನಿಗೆ ಹೋಗಿ ಅಧ್ಯಕ್ಷ ರುಸವೆಲ್ಟರ ಅಭಿಪ್ರಾಯ ತಿಳಿದು ಸೀದಾ ಮಾಸ್ಕೋವಿಗೆ ಧಾವಿಸಬಹುದು-ಎಂಬ ವಾರ್ತೆಯೂ ಇದೆ. ಅಂದರೆ ಕ್ವಿಬೆಕ್ ಪರಿಷತ್ತು ಚರ್ಚಿಲ್ ರುಸವೆಲ್ಟರುಗಳ ದ್ವಿಮುಖ ಧುರಂಧರನನ್ನು ಸಲಿದೆ ಹೊರತು, ಚರ್ಚಿಲ್, ರುಸವೆಲ್ಟ್, ಸ್ಟಾಲಿನ್, ಚಿಯಾಂಗರಿರುವ ಚತುರ್ಮುಖ ಬ್ರಹ್ಮನೆನಿಸುವಂತಿಲ್ಲ. 'ಇದು ಆಂಗ್ಲೋ—ಅಮೇರಿಕನ್ ಸಂಭಾಷಣೆ ಮಾತ್ರ' ಎಂದು ಅಧ್ಯಕ್ಷ ರುಸವೆಲ್ಟರೇ ಸ್ಪಷ್ಟಪಡಿಸಿದ್ದಾರೆ.

ಗುಟ್ಟೇನು?

ಚರ್ಚಿಲ್ ರುಸವೆಲ್ಟರ ಈ ಮೊದಲ ಭೇಟಿಗಳಿಗೆ-ಹಿಟ್ಲರ್ ಮುಸಲನಿಯರ ಹಿಂದಿನ ಭೇಟಿಗಳಿಗೆ-ಲೋಕ ಪ್ರಾಮುಖ್ಯತೆಯೆಷ್ಟೇ ಇತ್ತು. ಆದರೆ ಕ್ವಿಬೆಕ್ ಸಮ್ಮೇಲನಕ್ಕೆ ಅತಿ ನೆಟ್ಟಿನ ಮಹತ್ವವನ್ನೀಯಬೇಕು: ಅವರ ನಿರ್ಧಾರವನ್ನು ಆತುರದಿಂದ ನಿರೀಕ್ಷಿಸಬೇಕು. ಚರ್ಚಿಲ್-ರುಸವೆಲ್ಟರ ಭೇಟಿಯಾಗಿ ತಿಂಗಳು ಮಾತ್ರ ಕಳೆದಿತ್ತು. ಅವರಿಬ್ಬರ ಪರಸ್ಪರ ಮಾಸಿಕ ಮುಖಾವಲೋಕನವು ಯುದ್ಧಕಾರ್ಯಾವಶ್ಯಕತೆಗಳಲ್ಲೊಂದೆಂದು ಗಣಿಸಲ್ಪಟ್ಟಿಲ್ಲ. ಅವರ ಹಿಂದಿನ ಮತ್ತು ಇಂದಿನ ಭೇಟಿಯ ಮಧ್ಯಾವಧಿಯಲ್ಲಿ ಸಿಸಿಲಿ ಹೋರಾಟ, ಮುಸಲನಿಯ ಪತನದ ಹೊರತು ಬೇರಾವ ಗಣನೀಯ ಮಾರ್ಪಾಟವೂ ಆಗಿಲ್ಲ. 'ಒಂದು ದ್ವೀಪಾಕ್ರಮಣಕ್ಕೊಂದು ಬಾರಿ' ಎರಡು ರಾಷ್ಟ್ರಗಳ ಪ್ರಮುಖರೊಟ್ಟಾಗಲೇಬೇಕೆಂಬ ವಿಧಿಯೂ ಇಲ್ಲ. ಮೂವತ್ತು ದಿನಕ್ಕೊಮ್ಮೆ ಮುಖಾವಲೋಕನವನ್ನು ಪರಿಗ್ರಹಿಸುವಿನಹ ನಡೆಸಲಾಗುವ ಅನುಕೂಲ ವಾತಾವರಣವೂ ಈಗಿನದಲ್ಲ. ಮುಸಲನಿ ಹೋದರೂ ಸಮಯ ಮುಸಲನಿಯಂತಿರುವ ಬಡೊಗ್ಲಿಯೋನಿಂದಾಗಿ ಇಟಲಿಯ ಕಡೆಗಿದ್ದ ತಮ್ಮ ಘೋರಣೆಯ ಪುನರಾಲೋಚನೆ ನಡೆಸುವ ಸಂದರ್ಭ ಕೂಡಾ ಈಗ ಬಂದಿಲ್ಲ. ರೋಮಿನ ಮೇಲೆ ಮನ್ನೊಮ್ಮೆ ಮತ್ತಷ್ಟು ಬಲವಾಗಿ ಬಿದ್ದ ಬಾಂಬುಗಳ ಘರ್ಜನೆಯೇ ಇಟಲಿಯ ಕಿವಿಯಲ್ಲಿ ಚರ್ಚಿಲ್ ರುಸವೆಲ್ಟರು ಏಕಕಂಠದಿಂದ ಊದಿದ ನಾದವೆನ್ನಬಹುದು. ಅದಕ್ಕಾಗಿ ಈ ಪ್ರಮುಖರು ಇಷ್ಟೊಂದು ಅವಸರದಿಂದ ಪುನಃ ಒಟ್ಟಾದುದಲ್ಲ. ಅಂದ ಮೇಲೆ ಈ ಪರಿಷತ್ತಿನ ಹಿನ್ನೆಲೆಯಾವುದು?

ನಾಜೀ ದೌರ್ಬಲ್ಯ ಕಂಡಿತೆ?

ಒಂದು ವಿಷಯವಂತೂ ಸ್ಪಷ್ಟ. ಒಂದು ತಿಂಗಳ ಮೊದಲು ಒಟ್ಟಾದಾಗ ಚರ್ಚಿಲ್-ರುಸವೆಲ್ಟರಿಗೆ ಗೋಚರಿಸದಿದ್ದ ಒಂದು ಹೊಸ ಬೆಳಕು—ಸ್ಥಿತಿ ಪರಿವರ್ತನೆ-ಈ ಬಾರಿ ಕಂಡುಬಂದಿರಬೇಕು. ಹಿಂದಿನ ಬಾರಿ ಮಾಡಿದ ನಿರ್ಧಾರವನ್ನು ಬದಲಾಯಿಸುವ ಅಥವಾ ಅದರ ಮಂದಗತಿಯ ಬದಲಿಗೆ ಮಹೋಗ್ರತೆಯನ್ನು ತುಂಬಿಸುವ ಸಂದರ್ಭವೀಗ ಬಂದಿರಬೇಕು. ಕ್ವಿಬೆಕಿಗೆ ಹಾರಬೇಕಾದರೆ, ಈ ಮೊದಲು -ಒಂದೇ ಒಂದು ಮಾಸದ ಮೊದಲು-ಕಲ್ಪನೆಗೂ ಸಿಲುಕದಂತಹ, ಹಿಟ್ಲರರು ಕುಗ್ಗಿ ಕುಳಿತ ದುರ್ಬಲ ದೃಶ್ಯವು ಚರ್ಚಿಲ್ಲರ ಗೃಧ್ರದೃಷ್ಟಿಗೆ ಬಿದ್ದಿರಬೇಕು. ಅರ್ಥಾತ್ ಹಿಟ್ಲರರೀಗ ಸಾರಥಿ ಬಿಟ್ಟು ಹೋಗಿ, ರಥ ಕೆಟ್ಟು ಹೋಗಿ ತಳಮಳಿಸುತ್ತಿರುವ ಕರ್ಣನಾಗಿ, ಇಂದಿನ ಭಾರತದ ಕೃಷ್ಣ ಚರ್ಚಿಲ್ಲರಿಗೆ ಗೋಚರಿಸಿ, 'ಈ ಸಂದರ್ಭದಲ್ಲೇ ಅಸ್ತ್ರ ತೊಡೋಣ' ಎಂದು ರುಸವೆಲ್ಟ್ ಪಾರ್ಥನನ್ನು ಪ್ರೇರೇಪಿಸಲು ಅವರು ಹೋದುದಾಗಿರಬೇಕು. ಹಿಟ್ಲರರಿಗಂತಹ ಪರಿಸ್ಥಿತಿಯೊದಗಿದುದೆಲ್ಲಿ? ಎಲ್ಲೆಲ್ಲಿಯೂ! ಮುಖ್ಯವಾಗಿ ರಶ್ಯದಲ್ಲಿ. ಹಿಟ್ಲರರ ವಸಂತ ಧಾಳಿಯಂತೂ ಇಲ್ಲ. ಈಗ ಅದರ ಊಹನೆಗೆ ಕೂಡಾ ಅವಕಾಶವಿಲ್ಲ. ಕುರ್ಸ್ಕಿನಲ್ಲೊಮ್ಮೆ ಜರ್ಮನ್ ಧಾಳಿಯನ್ನು ಹಿಮ್ಮೆಟ್ಟಿಸಿದ ಕೆಂಪು ಸೇನೆ ಆ ಮೇಲೆ ಹಿಂದೆ ನೋಡಿಲ್ಲ. ಹಿಟ್ಲರರ ಸುಭದ್ರ ಕೋಟೆ ಓರೆಲನ್ನು ಬಗಲಿಗೆ ಹಾಕಿಕೊಂಡ ಕೆಂಪು ಸೇನೆ ಪಶ್ಚಿಮಾಭಿಮುಖವಾಗಿ ನೀಪರನ್ನಾಕ್ರಮಿಸಿಕೊಳ್ಳಲಣಿಯಾಗಿದೆ. ದಕ್ಷಿಣಾಭಿಮುಖವಾಗಿ ಉಕ್ರೈನಿನ ಉದ್ಯಮ ಕೇಂದ್ರದ ಕಡೆಗೆ ರಶ್ಯನರ ಧಾಳಿಯಾರಂಭವಾಗಿ ಖಾರ್ಕೋವ್ ಪತನದ ದಿನ ಅಮಾವಾಸ್ಯೆಯಂತೆ ಸಮೀಪಿಸುತ್ತಿದೆ. ಡೊನೆಜ್ ಕ್ಷೇತ್ರದಲ್ಲಿ ರಶ್ಯನರ ರಣಭೇರಿ ಪುನಃ ಬಾರಿಸಹತ್ತಿದೆ. ಸ್ಮೊಲೆಂಸ್ಕಿನ ಪುನರಾಧೀನತೆಗಾಗಿ ಮಾಸ್ಕೋದ ಬಳಿ ವ್ಯಾಸ್ಮಾದ ದಕ್ಷಿಣ ಭಾಗದಲ್ಲಿ ಕೆಂಪು ಸೇನೆ ಕೆಚ್ಚೆದೆಯಿಂದ ಮುಂದೊತ್ತಿದೆ. ಇವೆಲ್ಲಾ ಧಾಳಿಗಳೆಂದರೆ ಏಕ ಜೆಡೆಯ ವಿವಿಧ ಎಸಳುಗಳೆಂಬುದನ್ನೂ, ಅವು ವಿಜಯಗೊಂಡಾಗಿ ಮಾಸ್ಕೋ-ಖಾರ್ಕೋವ್ ಲೈನಾಗಿ ರೂಪುಗೊಳ್ಳುವವೆಂಬುದನ್ನೂ ಮರೆಯಬಾರದು. ಆಗ ಪೂರ್ಣಾನುಕೂಲ ಪರಿಸ್ಥಿತಿಯಲ್ಲಿ ರಶ್ಯನರು ಅಜೇಯ ಧಾಳಿಯನ್ನಾರಂಭಿಸಬಹುದು; ರಶ್ಯದ ಕೊನೆಯ ಸರಹದ್ದು ಅಥವಾ ಬರ್ಲಿನ್ ನಗರವೇ ಅದರ ಗುರಿಯಾಗಬಹುದು. ಕೆಂಪು ಸೇನೆಯ ಈ ನವಧಾಳಿ ಯೋಜನೆಯ ಗರ್ಭಪಾತಮಾಡುವ ಸಾಹಸ ಹಿಟ್ಲರರಲ್ಲೀಗ ಗೋಚರಿಸುತ್ತಿಲ್ಲ. ನಾಜಿಗಳ ಸನ್ನಿಧಾನದಲ್ಲೇ ಅವರ ಸಮಾಧಿ ಸನ್ನಾಹವಾಗುತ್ತಿದೆ! ಅದನ್ನು ತಡೆಗಟ್ಟದ ಹಿಟ್ಲರರು ದುರ್ಬಲರಾಗಿಲ್ಲವೆ? ಅತ್ತ, ಸಿಸಿಲಿಯನ್ನು ಖಾಲೀಮಾಡಿ ಇಟಲಿಗೆ ಸುರಕ್ಷಿತವಾಗಿ ಓಡುವದೆ ಜರ್ಮನರ ಸದ್ಯದ ಸಾಹಸವೆಂಬ ವಾರ್ತೆ ಬಂದಿದೆ. ಸಾಲದುದಕ್ಕೆ ಇಟಲಿಯಲ್ಲೂ ಅರ್ಧ ಬಿಟ್ಟರ್ಧದಲ್ಲಿ ರಕ್ಷಣಾವ್ಯೂಹ ರಚಿಸುವ ನಾಜೀ ವ್ಯವಸ್ಥೆ; ಯುರೋಪಿನಲ್ಲೂ ಪ್ರತಿಕೂಲ ಸ್ಥಳವನ್ನು ಮರೆತು ಅನುಕೂಲ ಕ್ಷೇತ್ರದಲ್ಲಿ ಪ್ರತಿಭಟನೆ ಕೊಡುವ ಜರ್ಮನ್ ಹಂಚಿಕೆ-ಇವೆಲ್ಲಾ ವಾರ್ತೆಗಳು ನಿಜವಾಗಿದ್ದರೆ, ಸಿಡಿಲಿನಂತಿದ್ದ ಹಿಟ್ಲರರ ಅಬ್ಬರವೀಗ 'ಸಿಳ್ಳಿ'ನಷ್ಟು ಕುಗ್ಗಿದೆ ಎಂಬುದು ಖಂಡಿತ. ಮೇಲಾಗಿ ಜರ್ಮನಿಯಲ್ಲಿ ಆಂತರಿಕ ಅತೃಪ್ತಿಯೆದ್ದ ನವೀನ ವಾರ್ತೆಗಳೇನೇನೋ ಹುಟ್ಟಿವೆ. ಈ ಸುವರ್ಣಸಂಧಿಯನ್ನು ಕಳಕೊಳ್ಳುವವರು ಚರ್ಚಿಲ್ ರುಸವೆಲ್ಟರೆ? ಅವರು ಒಟ್ಟಾದರು!

ಮುಂದೇನು?

ಅಂದ ಮೇಲೆ ಈ ಬಾರಿಯ ಬದಲಾವಣೆಯೇನು? ಮಿತ್ರರು ಟ್ಯುನಿಸಿಯಾಗೆದ್ದು, ಸಿಸಿಲಿ ಆಕ್ರಮಿಸಿದರೂ, ರಶ್ಯನರ ದ್ವಿತೀಯ ರಂಗದ ಬೇಡಿಕೆ ನಿಂತಿಲ್ಲ; ಇನ್ನು ಇಟಲಿ ನುಗ್ಗಿದರೂ ಅದು ನಿಲ್ಲುವಂತಿಲ್ಲ. ರಶ್ಯನರು ದ್ವಿತೀಯ ರಂಗವೆನ್ನುವದು, ತಾವು ತಯಾರಿಸಿಕೊಟ್ಟ 'ಕಾಲಿವೆಯೋಜನೆ'ಯನ್ನು ಮಾತ್ರ. ಬ್ರಿಟಿಷ್ ಕಾಲಿವೆಯನ್ನು ದಾಟಿ ನೇರಾಗಿ ಪಶ್ಚಿಮ ಯುರೋಪಿಗೆ ನುಗ್ಗಬೇಕು; ಕಡಿಮೆಯೆಂದರೆ ರಶ್ಯದಲ್ಲಿರುವ 60 ಡಿವಿಜನ್ ನಾಜೀ ಸೇನೆಯನ್ನಾದರೂ ಹಿಟ್ಲರರು ಹಿಂದೆಗೆಯುವಂತಾಗಬೇಕು. ಇಷ್ಟರವರೆಗಿನ ಮಿತ್ರರ ಧಾಳಿಗಳು ರಶ್ಯದಿಂದ ಓರ್ವ ನಾಜೀ ಸೋಲ್ಜರನನ್ನಾದರೂ ಹಿಂದೆಕರೆಸಿಲ್ಲ. ಕಳೆದ ಬಾರಿ ಒಟ್ಟಾದಾಗ ರಶ್ಯನರ ದ್ವಿತೀಯರಂಗಯೋಜನೆಯನ್ನಂಗೀಕರಿಸುವ ಧೈರ್ಯ ಚರ್ಚಿಲ್-ರುಸುವೆಲ್ಟರಲ್ಲಿಲ್ಲದಿರಬೇಕು—ಈ ಬಾರಿ ಆ ಧೈರ್ಯ ಬಂದಿರಬೇಕು. ಕಳೆದೆರಡು ವರುಷಗಳಿಂದ ತರಬೇತಾಗಿ ಸಜ್ಜಾಗಿರುವ ಕೆನಡಾದ ಸೇನೆಯನ್ನು ಈ ಬಾರಿ ರಂಗಕ್ಕಿಳಿಸುವ ಇಚ್ಛೆಯಿಂದಲೇ ಚರ್ಚಿಲ್—ರುಸುವೆಲ್ಟರು ಕೆನಡಾದ ಕ್ವಿಬೆಕನ್ನೇ ಯೋಜನಾ ಪೀಠವಾಗಿ ಅಂಗೀಕರಿಸಿರಬೇಕು 'ರಶ್ಯದ ಮಾತು ಬೇಡ; ಇದು ಇಂಗ್ಲಾಂಡು ಅಮೇರಿಕಗಳ ಮಾತುಕತೆ' ಎಂದು ಅಧ್ಯಕ್ಷ ರುಸುವೆಲ್ಟರು ನಿಷ್ಠುರವಾಗಿ ನುಡಿದುದೂ 'ರಶ್ಯಕ್ಕುಪಕಾರವಾಗುವ ಕಾರ್ಯವಿದು' ಎಂಬ ನೈತಿಕ ಧೈರ್ಯದಿಂದಲೇ! ರಶ್ಯದ ಧಾಳಿ ಮತ್ತು ತಮ್ಮ ನಿಜವಾದ ದ್ವಿತೀಯ ರಂಗಗಳು ಹಿಟ್ಲರನನ್ನು ಸ್ಪುವ ಎರಡು ಯಮಬಾಹುಗಳಂತೆ ಪರಸ್ಪರ ಹೊಂದಿಕೆಯಲ್ಲಿರಬೇಕೆಂಬುದಕ್ಕಾಗಿಯೇ ಈ ಪರಿಷತ್ಪೂರ್ವದಲ್ಲಿ ಆಂಗ್ಲೋ ಅಮೇರಿಕನ್ ರಾಯಭಾರಿಗಳು ಸ್ಟಾಲಿನ್ ಮೊಲೊಟೋವರನ್ನು ಭೇಟಿಯಾಗಿ ಪರ್ಯಾಲೋಚನೆ ನಡೆಸಿದುದು. ಈ ಪರಿಷತ್ತು ನಡೆದು ಮುಗಿವ ಹೊತ್ತಿನಲ್ಲಿ ಮಿ. ಅಂತೋನಿ ಈಡೆನರೂ ಅತ್ತಬಂದು ಅದರ ನಿರ್ಧಾರವನ್ನು ಹೊತ್ತುಕೊಂಡು ಮಾಸ್ಕೋವಿಗೆ ಹೋಗಲಿರುವದೂ ಇಷ್ಟಕ್ಕೇನೇ! ಅರ್ಥಾತ್ ಚೋರಕನಿಗೆ ಹೊಡೆದು ಯಜಮಾನನಿಗೆ ನೋವುಂಟುಮಾಡಿದರೆ ಸಾಲದು-ಇಟಲಿಗೆ ನುಗ್ಗಿ ಹಿಟ್ಲರರ ಮುಖಭಂಗಮಾಡಿ ತೃಪ್ತರಾಗಬಾರದು. ಪ್ರತ್ಯಕ್ಷ ಹಿಟ್ಲರನ ಮೇಲೇನೇ ಏರಿಹೋಗಬೇಕು; ಎಂಬುವನ್ನು ಯೋಚಿಸುವದಕ್ಕಾಗಿಯೇ ಕ್ವಿಬೆಕ್ ಸಮ್ಮೇಲನ ನೆರೆದಿರಬೇಕು. ಅಂತೆಯೇ ಜಪಾನೀ ವಿರುದ್ಧ ಕಾರ್ಯ ಕ್ರಮವೂ ಕೈಕೊಳ್ಳಲ್ಪಡುವದು ಸ್ವಾಭಾವಿಕ. ಆದರೆ ಅದು ನಾಳೆಯ 'ದ್ವಿತೀಯರಂಗ'?

ಶುಚಿ!! **ಸೆಂಟ್ರಲ್ ಕೆಫೆ** ರುಚಿ!!

ಶ್ರೀನಿವಾಸ ಬಿಲ್ಡಿಂಗ್ಸ್, ಹೆಡ್ ಪೋಸ್ಟಾಫೀಸ್ ಸರ್ಕಲ್, ಶಿವಮೊಗ್ಗ.
ಪ್ರಯಾಣೀಕರಿಗೆ ಉಳಿದುಕೊಳ್ಳಲು ಸ್ಥಳಾನುಕೂಲ ಏರ್ಪಡಿಸಿರುತ್ತೆ ಸಕಾಲದಲ್ಲಿ ಉತ್ತಮವಾದ ಊಟ, ಕಾಫಿ ಮತ್ತು ಹಸನಾದ ತುಪ್ಪದಲ್ಲಿ ತಯಾರಿಸಿದ ತಿಂಡಿ ದೊರೆಯುತ್ತೆ.

ಈ ಸ್ಥಳವು ರೈಲ್ವೆಸ್ಟೇಷನ್, ಬಸ್ ಸ್ಟ್ಯಾಂಡ್, ಕೋರ್ಟುಗಳಿಗೆ ಮಧ್ಯ ಸ್ಥಳದಲ್ಲಿದೆ.

ಎಸ್. ರಾಮದಾಸ್, ಪ್ರೊಪ್ರೈಟರ್.

The Canara Banking Corporation Limited.

(Incorporated in British India with limited Liability)

ESTD: 1906.

Head Office: UDIPI, S. Kanara.

(Branches & Agencies in all principal cities of India)

Authorised capital	Rs. 25.00.000/-
Issued & Subscribed	Rs. 16.00.000/-
Paid up capital	Rs 10.06 000/-
Reserves	Rs. 3.85.000/-

Advances are made against approved securities and bills purchased or collected at most favourable rates. For further particulars please apply to the nearest Branch

ಉಡುಪಿ, ಗುರುವಾರ, ೧೯-೮-೧೯೪೩

ದ ಕ. ರೈತರಿಗೊಂದು ಸಂಘ ಬೇಡವೆ?

ಇಂದಿನ ಕೆಡುಗಾಲದಲ್ಲಿ ಸ್ವಾಭಾವಿಕವಾಗಿ ಆಹಾರ ಧಾನ್ಯಗಳ ಪ್ರಶ್ನೆಯು ಪ್ರಾಮುಖ್ಯತೆ ಪಡೆದಿದೆ. ಆಹಾರ ಸಮಸ್ಯೆಯನ್ನು ನಿವಾರಿಸುವ ಪ್ರಯತ್ನ-ಅಥವಾ ಅಂತಹದೊಂದು ನಟನೆಯನ್ನಾದರೂ ಪ್ರದರ್ಶಿಸುವ ಯತ್ನ-ನಡೆದಿದೆ. ಆದರೆ ಆಹಾರ ಧಾನ್ಯಗಳ ನಿರ್ಮಾಪಕನಾದ ರೈತನಿಗೆ ದೊರೆಯಬೇಕಾದ ಪ್ರಾಮುಖ್ಯತೆ-ಕೇವಲ ಉಪಚಾರಕ್ಕಾಗಿಯಾದರೂ-ದೊರೆತಿಲ್ಲ. ದಕ್ಷಿಣ ಕನ್ನಡದ ರೈತವರ್ಗವಂತೂ ವ್ಯವಹಾರ ಜಗತ್ತಿನಲ್ಲಿ ಅಸ್ಪರ್ಶವರ್ಗವಾಗಿ, ಸರಕಾರ ಅಥವಾ ಮಿಕ್ಕ ವರ್ಗಗಳವರ ದೃಷ್ಟಿಗೆ ನಿಲುಕದಷ್ಟು ಹಿಂದೆಬಿದ್ದಿದೆ ದಕ್ಷಿಣ ಕನ್ನಡದ ಆಹಾರವೇ ಅಕ್ಕಿ ಇಲ್ಲಿಯ ರೈತರನ್ನು ಬಿಟ್ಟರೆ, ಮಿಕ್ಕ ಯಾವ ವರ್ಗಕ್ಕಾದರೂ ಅದರ ಕಾಳಿನ ಸಂಬಂಧವಷ್ಟೇ ಹೊರತು ಸ್ಥೈರ್ಯ ಪರಿಚಯವಿಲ್ಲ. ಆದರೆ ತನ್ನ ಬೆವರಫಲಕ್ಕೆ ಬೆಲೆಕಟ್ಟುವ ಅಧಿಕಾರ ಮಾತ್ರ ರೈತನದಾಗಿಲ್ಲ. ಅರ್ಥಾತ್ ಬಿತ್ತಿದಂದಿನಿಂದ ತನಿ ಹೊರಡಿಸುವ ವರೆಗಿನ ಎಲ್ಲಾ ಪರಿಶ್ರಮವೂ ರೈತನದಾದರೆ, ಆ ನೇಲೆ ದವಸಧಾನ್ಯಗಳಿಗೆ ಬೆಲೆನಿರ್ಣಯಿಸುವ ಅಧಿಕಾರವು ಸಂಪೂರ್ಣವಾಗಿ ಲಾಭಾಪೇಕ್ಷಿಗಳದು. ದ. ಕ. ದಲ್ಲಿ ನಿಯಂತ್ರಣದ ಹೆಸರಿನಿಂದ ಆ ಅಧಿಕಾರವನ್ನು ತನ್ನ ಹಸ್ತಗತ ಮಾಡಿಕೊಳ್ಳಬಯಸಿದ ಸರಕಾರದ ಪ್ರಯತ್ನವು ವಿಫಲವಾಗಲು-ಅಥವಾ ಉದ್ದೇಶಪೂರ್ವಕ ಅಡ್ಡಹಾದಿ ಹಿಡಿಯಲು ಈ ಮಧ್ಯಮವರ್ಗವೇ ಕಾರಣ ಇವೆಲ್ಲಾ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ತುಲನಾತ್ಮಕವಾಗಿ ಯೋಚಿಸಿದರೆ, ರೈತನ ಪಾಲಿಗೆ ಅವನ ದುಡಿಮೆಯ ಕೂಲಿಯಾದರೂ ಪೂರ್ತಿಯಾಗಿ ಸಿಗುತ್ತಿಲ್ಲವೆಂಬುದು ಸ್ಪಷ್ಟ. ಇತರ ಎಲ್ಲಾ ಸಾಮಗ್ರಿಗಳ ವ್ಯಾಪಾರದಂತೆ ದವಸ ಧಾನ್ಯಗಳ ಮಟ್ಟಿಗೂ ಇರುವ ಲಾಭಾಂಶವು ಅತಂತ ಮಿಡಯ ಲಿನ್ನರ ಪಾಲಿಗೆ ಹೋಗುತ್ತಿದೆ. ಬೇಸಾಯಗಾರನ ಬೆವರಿನಿಂದ ಅಭಿಷೇಕ ಪಡೆಯುತ್ತಿರುವ ವ್ಯಾಪಾರಿಗಳು ಮತ್ತು ದೊಡ್ಡ ಜಮೀನ್ದಾರರನ್ನೇ ನಾವು 'ಲಾಭ ಹೊಂದುವವರು' ಎಂದಿಲ್ಲಿ ವರ್ಗೀಕರಿಸಿ ಉಲ್ಲೇಖಿಸಿದ್ದೇನೆ. ದ. ಕ.ದಲ್ಲಿ ಅಕ್ಕಿಯು ರೈತನದಾಗಿರುವ ವರೆಗೆ ಅದರ ಬೆಲೆಗೆ ಸರಕಾರದ ನಿಯಂತ್ರಣವಿತ್ತು; ಸರಕಾರದ ನಿಯಂತ್ರಣ ಬರುವ ಮೊದಲು ಸದ್ಧತಿಯಂತೆ ವ್ಯಾಪಾರೀ ನಿರ್ಮಿತ ನಿರ್ಬಂಧವಿತ್ತು. ಅಂತೂ ಬಡವನ ಸೊತ್ತಿನ ಬೆಲೆಗೂ ಒಡತನ ಬಂದಿತ್ತು. ಆದರೆ ಅದೇ ಧಾನ್ಯವು 'ಜಮೀನ್ದಾರರ ಅಕ್ಕಿ' ವ್ಯಾಪಾರಿಗಳ ಅಕ್ಕಿ'ಯಾಗಿ ಮೇಲ್ದರ್ಜೆಗೇರಿದೊಡನೆ ಬೆಲೆಯೂ ಮಿತಿಮೀರಿ ಏರಿದೆ! ಇದು ರೈತರಿಗಾದ ಅನ್ಯಾಯ; ನ್ಯಾಯಕ್ಕೆ ಬಿದ್ದ ಧಕ್ಕೆ! ಅಡ್ಡಹಾದಿಯ ಅತ್ಯಾಚಾರ! ಅಸಹನೀಯ ವಿದ್ಯಮಾನ! ಆದರೆ ಇದಕ್ಕಾಗಿ ಖಂಡನೀಯರಾರು-ಎಂಬ ಪ್ರಶ್ನೆಯಿದೆ. ಲಾಭಹೊಂದುವ ವರ್ಗವೇ? ಅವರು ದೂರು ಕೇಳುತ್ತಿದ್ದಂತೆಯೇ ಮುಂದಡಿಯಿಡುತ್ತಿದ್ದಾರೆ. 'ಮನುಷ್ಯವರ್ಗಕ್ಕಿರಬೇಕಾದ ಸ್ವಾಭಾವಿಕ ಸ್ವಾರ್ಥವಿದು' ಎಂಬ ಸಮಾಧಾನವವರಿಗಿದೆ. ಸಾಧ್ಯವಿದ್ದಲ್ಲಿ ಸ್ವಾರ್ಥ ಸಾಧಿಸುವ ಬುದ್ಧಿ ಮನುಷ್ಯ ಸಹಜವಾದುದೆಂಬುದು ನಿಜ. ಅಂದಮೇಲೆ ಅದನ್ನು ಸಾಧ್ಯಗೊಳಿಸಿ ಕೊಟ್ಟ ಅಪರಾಧ ರೈತರದೇ! ವ್ಯಾಪಾರಿಗಳಲ್ಲಿ ಪರಸ್ಪರ ಸಂಬಂಧವಿದೆ. ಅವರು ಸಂಘಟಿತರಾಗಿದ್ದಾರೆ ಅಕ್ಕಿಯ ಬೆಲೆ ನಿಯಂತ್ರಣವನ್ನು ನಿರರ್ಥಕಗೊಳಿಸುವ ದರವಲ್ಲಿ ಆ ಸಂಘಟನಾ ಶಕ್ತಿ ಕೆಲಸಮಾಡಿದೆ. ಆದರೆ ದಕ್ಷಿಣ ಕನ್ನಡದ 'ರೈತನ ಅಭಿಪ್ರಾಯ' ಎಂದು ಆಯ್ದುಕೊಳ್ಳಲಾಗುವಂತಹದು ಎಲ್ಲಿ, ಏನಿದೆ? ತಮಗಾಗುವ ಅನ್ಯಾಯಕ್ಕಾಗಿ ಬೇರೆ ಬೇರೆಯಾಗಿ ನರಳುವ ರೈತರು ಜಿಲ್ಲೆಯಲ್ಲೆಲ್ಲಾ ಇದ್ದಾರೆ ಹೊರತು ಅದನ್ನು ಏಕಕಂಠದಿಂದ ಎಡೆ ತೋರಿಸುವ ಅವರದೊಂದು ಸಂಘವೆಲ್ಲಿದೆ? ಸುಲಿಗೆಗೆ ತೆರವಾಗಿ ರೈತರ ಶಕ್ತಿ ಹರಿಹಂಚಾಗಿ ಬಿದ್ದಿರಬೇಕು-- ಸುಲಿಗೆಗಾರರು ಮಾತ್ರ ನಿರ್ಮಾಣಗೊಳ್ಳಬಾರದೆಂದು ಅಪೇಕ್ಷಿಸುವದಕ್ಕೂ ಅರ್ಥವಿಲ್ಲ; ರೈತರ ವಿಚಾರವನ್ನು ಮುಂದಿಡುವ ಪ್ರತಿನಿಧಿ ಸಂಸ್ಥೆಯೇ ಇಲ್ಲದಿರುವಾಗ ವಿಚಾರಿಸುವವರಿಲ್ಲವೆಂದು ದೂರುವದಕ್ಕೂ ನ್ಯಾಯವಿಲ್ಲ. ಆದ್ದರಿಂದ ತಮ್ಮ ಆಪತ್ತಿಗೆ ತಾವೇ ಹೊಣೆಯೆಂಬ ಪಾಠವನ್ನಾದರೂ ರೈತರೀ ಕಷ್ಟಕಾಲದಿಂದ ಕಲಿತು ಸಂಘಟಿತರಾಗಬೇಕು; ಇದೊಂದು ಲಾಭವನ್ನಾದರೂ ಅವರೀ ಬಾರಿ ಹೊಂದಬೇಕು. 'ರೈತನೇ ರಾಷ್ಟ್ರದ ಜೀವಾಳ' ಎಂಬ ತತ್ವವನ್ನರಿತ ದೇಶಾಭಿಮಾನಿಗಳಿಗೆ ದಕ್ಷಿಣ ಕನ್ನಡದಲ್ಲಿ ಬರಗಾಲವಿಲ್ಲ. ಅಂಥವರು ರೈತರ ಸಂಘ ಸ್ಥಾಪಿಸಿ ಸಂಘಟನೆಗೊಳಿಸುವ ಸಾಹಸಕ್ಕೆಳಿಯಬೇಕು ಇದು ಅತಿ ಪ್ರಯಾಸದ ಕಾರ್ಯ-ಆದರೆ ಅತ್ಯಗತ್ಯದ ಹಾಗೂ ಅತ್ಯಂತ ಪರಿಣಾಮಕಾರೀ ಮಹತ್ಕಾರ್ಯ; ಸತ್ಕಾರ್ಯ. ರೈತರು ಹಾಗೂ ದೇಶಾಭಿಮಾನಿಗಳು ಇದಕ್ಕಣಿಯಾಗಲಾರರೆ?

ದುರ್ಬೀನು

ಹೂವಿಗೆ ದಿನಾಯುಷ್ಯ; ಹಾವಿಗೆ ಸಾವಿರ ವರುಷಾಯುಷ್ಯ ಹುರುಪು ಹೂವಿನಂತೆ; ಹುಚ್ಚುತನ ಹಾವಿನಂತೆ.

oo oo oo

ಧನಪ್ಪಳಿಯಬೇಕಾದರೆ ಚಿರತೆಯನ್ನೋಡಿಸಬೇಕು; ಗುಣವುಳಿಯಬೇಕಾದರೆ ಚಿಂತೆಯನ್ನೋಡಿಸಬೇಕು.

oo oo oo

ಪತಿಯೇ ಬೇಡವೆಂಬ ವ್ರತದಲ್ಲಿರುವವಳು 'ಪತಿವ್ರತೆ'ಯಲ್ಲ; ದೂರು ಕೇಳಲಂಜಿ ದೂರಸರಿಯುವವನು 'ಧುರೀಣ'ನಲ್ಲ.

oo oo oo

ಸೂರ್ಯನಿಗೆ ಗ್ರಹಣತಾಗಿದರೆ ಪ್ರಪಂಚಕ್ಕೆ ನೆರಳು; ವಿನೇದೀಪಕ್ಕೆ 'ಬ್ಲೇಕ್‌ಔಟ್'ಆದರೆ ಅಂಗಳಕ್ಕೆ ಮಾತ್ರ ನೆರಳು. ದೇಶ ಪ್ರಮುಖರ ಬಂಧನಕ್ಕೂ ಮನೆಯೊಡೆಯನು ಮರೆಯಾಗುವುದಕ್ಕೂ ಇಷ್ಟೇ ವ್ಯತ್ಯಾಸ.

oo oo oo

ವಿಮರ್ಶಕನ ವಿರೋಧ ಕ್ಷೌರಿಕನು ಜುಟ್ಟು ಹಿಡಿದಂತೆ; ಸುಧಾರಕನ ಖಂಡನೆ ಮಡಿವಾಳನ ಮರ್ದನದಂತೆ

oo oo oo

ಹಾವು ಕಡಿತಕ್ಕೆ ಔಷಧವಿದೆ; ತಗಣೇ ಕಡಿತಕ್ಕಿಲ್ಲ. ಪ್ರತ್ಯಕ್ಷ ವಿರೋಧಕ್ಕೆ ಶಮನವಿದೆ; ಕಿರುಕುಳಕಿಲ್ಲ.

oo oo oo

ಧಾನ್ಯಬೆಂದರೇನೇ ಆಹಾರವಾಗುತ್ತದೆ ಬುದ್ಧಿ ಪಕ್ವವಾದರೇನೇ ಆಧಾರವಾಗುತ್ತದೆ.

oo oo oo

ಧೂಳು ಮತ್ತು ದೂಷಣೆಯನ್ನು ಬಂದಷ್ಟು ಝಾಡಿಸಿಬಿಡಬೇಕು ಹೊರತು ಜಮಾಯಿಸಿಕೊಳ್ಳುವದಿಲ್ಲ.

oo oo oo

ಮನೇ ಬಿಡುವವನು 'ಮದುವೆ ಮುಗಿದು ಕೊಳ್ಳಲಿ' ಎಂದು ತಡೆದಾನು, ಮರಣ ಹೊಂದುವವನು ಹಾಗಲ್ಲ. ಪರಿವರ್ತನೆ ಹೊಂದುವವನು ಪರಿಸ್ಥಿತಿನೋಡಿಕೊಂಡಾನು-ಪತನ ಹೊಂದುವನು ಹಾಗಲ್ಲ.

oo oo oo

ಕೈ ಬಿಗಿಯಲ್ಪಟ್ಟವನಲ್ಲಿ ಖಡ್ಗವಿದ್ದರೂ ಗಾಬರಿಯಿಲ್ಲ; ಕೈ ಸಾಗಿದವನಲ್ಲಿ ಕಠಿಮಾನಸ್ಸಿದ್ದರೂ ಭಯವಿಲ್ಲ

oo oo oo

ಬೆನ್ನು ಹಿಡಿದು ಬರುವ ಭಿಕ್ಷುಕನಿಗಿಂತ ಮುಖದಿದಿರು ಬರುವ ಸಾಲಕೊಟ್ಟವನಾಗಬಹುದು; ಬೆಂಗಡೆಯಲ್ಲಿ ದೂರುವವನಿಗಿಂತ ಮುಂಗಡೆಯಿಂದ ದೂಡುವವನಾಗಬಹುದು.

oo oo oo

ನೇದವನೇ ಉಡುವದಲ್ಲ; ಗೇದವನೇ ಉಣ್ಣುವದಲ್ಲ.

oo oo oo

ಕಾಲುಜಾರಿದವ ಕೈಯನ್ನೂರುತ್ತಾನೆ; ಕಲಿತನ ಜಾರಿದವ ಕೈಯ್ಯೊಡ್ಡುತ್ತಾನೆ.

oo oo oo

ನಡೆದವ ಮತ್ತೊಬ್ಬರು ನೇರುವ ಹೊತ್ತಿಗೆ ಪಾಲಿಗಿದವ ಪಂಚದಲ್ಲೇ; ಪ್ರಯತ್ನ ಫಲಕೊಡುವ ಹೊತ್ತಿಗೆ ನಿಧಾನಿ ನಿಂತಲ್ಲೇ.

NOTICE

In the Court of the District Munsiff of Mangalore. South Canara Sub-Court.

S. C. No 9/1940

R. E. P. No. 184/1943

Between

Pandit Shiva Rao —Petitioner.

And

Pallekal Moidin Kunhi Beary —Respondent.

Notice to Respondent, Pallekal Moidin Kunhi Beary, son of Ahmad Beary, labour-contractor residing in Badaji Village of Kasaragod Taluk,

Please take notice that 25—8—1943 has been fixed for hearing your objections if any, to the draft Sale-proclamation of the immoveable property attached in the above R. E. P If you do not appear in person or by pleader on that day and oppose the terms of the said proclamation, they will be settled in your absence

By order.

M Vasudeva Rao

Vakil for Petitioner

Mangalore, 11-8 1943

NOTICE

In the Court of the District Munsiff of Mangalore.

R. E. P No. 35 of 1943

Between

Hassanabba —Petitioner

and

U. K, Moammi Kunhi Beary —Respondent

To the Respondent U, K. Moammi kunhi Beary, son of Hassane Beary residing in Ullal Kasba village, Mangalore Taluk

Please take notice, that the above-named Petitioner-decree holder has applied for the sale of the immoveable properties fully described in the draft sale proclamation and the same is posted to the 23rd day of August 1943 for settling the terms of the proclamation of sale. If you do not appear on that day at 10 30 A. M, either in person or through a competent vakil it will be decided in your absence.

U Hammabda B. A., B. L.

Advocate for Petitioner

Mangalore, 10-8-1943

NOTICE.

In the Court of the District Munsiff of Mangalore

R. E. P. No. 616/1942.

O. S. No. 401/1941.

Between

The Province of Madras—Petitioner.

and

Poovakke and others—Respondents

To

3rd Respondent Muthakke 4th Respondent Doomappa Shetty, 5th Respondent Yamuna, Children of Manaku Hengsu, residing in Kuruda of Vorkadi Village, Kasaragod Taluq.

Please take notice that the above petition filed by the Petitioner against you for the recovery of Court fees due in the above suit will come up for hearing on 20—8—1943 If you fail to appear on that day before the above Court the petition will be decided exparte,

(By order of the Court)

Mangalore, 14—8—1943 **M. K Nambyar,** Government Pleader

ಸುದ್ದಿ ಸೂಚನೆ.

○ ಸಿಸಿಲಿಯಲ್ಲಿ ಕೊನೆಯಬಾರಿ ಕುದಿಯ ಅನುಕೂಲಸ್ಥಳದಲ್ಲಿ ಸುದೃಢ ಪ್ರತಿಭಟನೆ ಕೊಟ್ಟು ಮಿತ್ರರ ಗತಿಯನ್ನು ಮುಂದಗೊಳಿಸಿದ ಆಕ್ಸಿಸ್ ಸೇನೆಯೀಗ ಪೂರ್ಣ ಸೋತು ಸಿಸಿಲಿ ಖಾಲಿಮಾಡುತ್ತಿವೆ.

○ ಸಿಸಿಲಿಯಲ್ಲಿದ್ದ ಸೇನೆಗಳನ್ನೆಲ್ಲಾ ಇಟಲಿಗೆ ಹಿಂದೆಗೆದುಕೊಳ್ಳಲು ಜರ್ಮನರು 80 ಹಡಗಗಳನ್ನು ಉಪಯೋಗಿಸಿದ್ದಾರೆಂದೂ ಮೆಸ್ಸಿನಾದ ಕಡೆಗೆ ಎಲ್ಲಾ ದಿಕ್ಕುಗಳಿಂದಲೂ ಮಿತ್ರ ಸೇನೆಗಳು ಅವರ ಮೇಲೆ ಏರಿಹೋಗುತ್ತಿವೆಯೆಂದೂ ವಾರ್ತೆ.

○ ಸಿಸಿಲಿಯನ್ನು ಬರಿದು ಮಾಡಿ ಹಿಂದೆ

ಜಾಪಾನ್

ರಾಯಭಾರಿಯು ಮೋಸ್ಕೋ ಮತ್ತು ಬರ್ಲಿನುಗಳಿಗೆ ಹೊರಟಿದ್ದಾನೆಂದು ವಾರ್ತೆ. ರಶ್ಯಾ-ಜರ್ಮನಿಗಳೊಳಗೆ ಸಂಧಿ ಹೂಡುವ ಪ್ರಯತ್ನವಿದು; ಅದಕ್ಕೊಪ್ಪದಿದ್ದರೆ ರಶ್ಯದ ಮೇಲೆ ತಾನೂ ಧಾಳಿಯಿಡುವೆನೆಂದು ಜಾಪಾನು ಬೆದರಿಕೆ ಹಾಕಲಿದೆ ಎಂಬ ಊಹೆಯುದ್ಭವಿಸಿದೆ.

ಗೆಯಲ್ಪಡುವ ವಿರೋಧೀ ಸೇನೆಗಳ ಮೇಲೂ, ಅವುಗಳಿಳಿಯುವ ಇಟಲಿ ಕರಾವಳಿಯ ಮೇಲೂ ಮಿತ್ರರ ಬಲವಾದ ವಿಮಾನ ಧಾಳಿನಡೆದಿದೆ. ಮುಖ್ಯ ಸೇನೆಯನ್ನು ಸುರಕ್ಷಿತವಾಗಿ ಹಿಂದೆಗೆಯಲಾಗಿದೆಯಂತೆ, ಜರ್ಮನರ ಚಿಲ್ಲರೆ ಸೇನೆಗಳ ನಾಮಕಾವಸ್ತೆ ಪ್ರತಿಭಟನೆ ಮಾತ್ರ ಈಗ ಉಳಿದಿದೆ.

○ ಬೊಡೊಗ್ಲಿಯೋ ಸರಕಾರವು ಇಟಲಿ ರಕ್ಷಣೆಯ ಪೂರ್ಣಾಧಿಕಾರವನ್ನು ಹಿಟ್ಲರರಿಗೊಪ್ಪಿಸಿದೆಯೆಂದೂ, ಬೊಡೋಗ್ಲಿಯೋ ಇವರೀಗ ಹಿಟ್ಲರರ ಪ್ರತಿನಿಧಿಮಾತ್ರವಾಗಿ ಉಳಿದಿರುವರೆಂದೂ ಸುದ್ದಿ.

○ ರೋಮನ್ನು ಬಹಿರಂಗ ನಗರವಾಗಿ ಇಟಲಿ ಸರಕಾರವು ಸಾರಿದೆ. ಆದರೆ ಆ ಸಂಬಂಧದ ಎಲ್ಲಾ ಶರ್ತಗಳು ಪೂರೈಸಲ್ಪಡದೆ ಮಿತ್ರರದನ್ನು ಒಪ್ಪುವಂತಿಲ್ಲ.

○ ಇಟಲಿಯಲ್ಲಿದ್ದ ಮಿತ್ರರ ಯುದ್ಧಕೈದಿಗಳನ್ನೆಲ್ಲಾ ಜರ್ಮನಿಗೆ ಸಾಗಿಸುತ್ತಿರುವರಂತೆ. ಇದರ ಹೊಣೆಯೆಲ್ಲಾ ಇಟಲಿಯದೆಂದು ಮಿತ್ರರು ಎಚ್ಚರಿಸಿದ್ದಾರೆ.

○ ರಶ್ಯದಲ್ಲಿ 350 ಮೈಲು ವಿಸ್ತೀರ್ಣದಲ್ಲಿ ಕೆಂಪುಸೇನೆಯಾರಂಭಿಸಿರುವ ನೂತನ ಧಾಳಿಯು ನಾಜೀ ಹೃದಯ ಭೇದಕವಾಗಿ ನಡೆಯುತ್ತಿದೆ ಒಂದೆಡೆ ಖಾರ್ಕೋವಿನ ಹೊರವಲಯಕ್ಕೆ ರಶ್ಯಾನರು ಬಂದಿದ್ದಾರೆ. ಸ್ಮೊಲೆಂಸ್ಕ್ ಧಾಳಿಯಾರಂಭವಾಗಿದೆ.

○ ರಶ್ಯಾ ಯುದ್ಧಗತಿಯಿಂದ ಜರ್ಮನ್ ಜನತೆ ಗಾಬರಿಗೀಡಾಗಿದೆಯಂತೆ. ನಾಜೀ ಪ್ರಚಾರಯಂತ್ರವು ಜನತಾ ಸ್ಫೂರ್ತಿಗಾಗಿ 1918ರ ಪುನರಾವರ್ತನೆಯಾಗಬಾರದೆಂದು ಹೆದರಿಸುತ್ತಿದೆ.

○ ಜಪಾನರ ವಶವಿರುವ ಅಂಡಮಾನ್ ದ್ವೀಪದ ಮೇಲೆ ಅಮೇರಿಕನ್ ವಿಮಾನಗಳು ಧಾಳಿನಡಿಸಿದವು. ಇಟಲಿಯ ಮಿಲಾನ್ ಮೊದಲಾದ ನಗರಗಳ ಮೇಲೆ ಬಾರಿಬಾರಿಗೂ ಧಾಳಿನಡೆದಿದೆ.

○ ಜರ್ಮನಿಯ ಬರ್ಲಿನ್ ಮೊದಲಾದ ನಗರಗಳು ಬಲವಾದ ಆಕಾಶ ಪ್ರಹರಕ್ಕೊಳಗಾಗಿವೆ. ಒಂದೆರಡು ವರುಷಗಳಿಂದ ನಡೆಯುದಿದ್ದ ಪ್ರಬಲ ಬೊಂಬು ಧಾಳಿಯು ಕಳೆದವಾರ ಇಂಗ್ಲಾಂಡಿನ ಕರಾವಳಿಯ ಮೇಲೂ ನಡೆಯಿತೆಂದು ವಾರ್ತೆ.

○ ಚರ್ಚಿಲ್ ರುಸುವೆಲ್ಟರ ಕ್ವಿಬೆಕ್ ಪರಿಷತ್ತು ಜಯಶೀಲವಾಗಿ ಸಾಗಿದೆ. ಅದೀಗ ಕೊನೆಯ ಅಂಕದಲ್ಲಿದೆ.

○ ಮಿ. ಈಡೆನ್ನರು ಈ ಪರಿಷತ್ತಿಗೆ ಹೋಗುವದು ನಿಶ್ಚಯವೆಂದೂ ಮಿ. ಚರ್ಚಿಲ್ಲರು ಅಲ್ಲಿಂದ ಮೋಸ್ಕೋವಿಗೆ ಹೋಗಲಿರುವರೆಂದೂ ಸುದ್ದಿ.

○ ಚರ್ಚಿಲ್-ರುಸುವೆಲ್ಟ್ ಪರಿಷತ್ತಿಗೆ ತಮಗಾಮಂತ್ರಣವಿಲ್ಲವೆಂದೂ, ತಾವೂ ಅದರಲ್ಲಿ ಹಾಜರಾಗಬೇಕೆಂಬ ಉದ್ದೇಶವೇ ಪರಿಷತ್ತಿನದಲ್ಲವೆಂದೂ ಆದ್ದರಿಂದ ಆ ಕುರಿತು ಹಬ್ಬಿರುವ ವಾರ್ತೆಗಳೆಲ್ಲಾ ತಪ್ಪೆಂದೂ ರಶ್ಯನ್ ಪ್ರಕಟಣೆ ಹೊರಟಿದೆ. ಇದರಿಂದ ಊಹಾ ಸೋಹೆಗಳೆದ್ದಿವೆ.

○ ಕ್ವಿಬೆಕ್ ಪರಿಷತ್ತಿನಲ್ಲಿ ಹಿಂದುಸ್ಥಾನದ ಸಮಸ್ಯೆಯೂ ಚರ್ಚಿಸಲ್ಪಡಲಿದೆಯಂತೆ.

ನೋಟೀಸು.

ವೆರ್ಕಾಡು ಶ್ರೀ ಅನಂತಪದ್ಮನಾಭ ದೇವಸ್ಥಾನದ ಪಟ್ಟು ಈ ಕೆಳಗೆ ಕಾಣಿಸಿದ ದಾಖಲೆಗ್ರಿರ ಮರ ಕಸ್ಬಾ ನಂ. ೧ ಗ್ರಾಮದಲ್ಲಿ ಸದ್ರಿ ಮರಗಳು ಇರುವ ಜಾಗೆಯಲ್ಲಿ ತಾ. 29-8-43ನೇ ಆದಿತ್ಯವಾರ ಪೂರ್ವಾಹ್ನ ಗಂಟೆ 9ಕ್ಕೆ ಬಹಿರಂಗವಾಗಿ ಹರಾಜುಮಾಡಲಾಗುವದು. ಖಾಯಿಸ ಉಳ್ಳವರು ಆ ತಾರೀಖಿಗೆ ಹಾಜರಾಗಿ ಏಲಂನಲ್ಲಿ ಭಾಗವಹಿಸಬಹುದು.

ಏಲಂಗೆ ನಿಲ್ಲುವವರು ರೂಪಾಯಿ 250/-ನ್ನು ಮುಂಚಿತವಾಗಿಯೇ ಡಿಪೋಜಿಟು ಮಾಡಬೇಕು. ಏಲಂನಲ್ಲಿ ಗೆದ್ದ ಸಂಗತಿಯಲ್ಲಿ ಮರಗಳ ಖರೀದಿ ಕ್ರಯದ ¼ ಅಂಶವನ್ನು ಕೂಡಲೆ ತೆರಬೇಕು. ಮಿಕ್ಕ ಅಂಶವನ್ನು 15ದಿವಸಗಳ ಒಳಗೆ ತೆರಬೇಕು. ಬದ್ಧರಾಗಿರತಕ್ಕದ್ದು. ತಪ್ಪಿದರೆ ಅಂಥಾ ಅಸಾಮಿಯ ಜವಾಬ್ದಾರಿ ಮೇಲೆ ಮರಗಳನ್ನು ಪುನಃ ಹರಾಜು ಮಾಡಲಾಗುವುದು. ಏಲಮಿನಲ್ಲಿ ಹುಟ್ಟಿಬಂದ ಏನೇನು ನಷ್ಟವಾದರೂ ಸಂಗತಿಯವರ್ಗಳಿ ಸೇರಿಯಾದ ಕಾರಣದಿಂದಲಾದರೂ ಏಲಂ ಖಾಯಂ ಮಾಡದೆ ಇರಲಿಕ್ಕೆ ಭಂಡಾರಕ್ಕೆ ಸಂಪೂರ್ಣ ಸ್ವತಂತ್ರ ಇಟ್ಟುಕೊಂಡದೆ.

ಈ ಹರಾಜು ಬಾಬಿನಲ್ಲಿ ಮದ್ರಾಸು ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಬೋರ್ಡಿನವರ ಹುಕುಂ ಪಡಕೊಂಡದೆ, ಸದ್ರಿ ಬೋರ್ಡಿನ Confirmation ಗೆ ಒಳಪಟ್ಟು ಏಲಂ ಖಾಯಂ ಮಾಡಲಾಗುವುದು. ಈ ಬಗ್ಗೆ ಬೋರ್ಡಿನ ಹುಕುಮನ್ನು ಆದಷ್ಟು ಬೇಗನೇ ಪಡೆಯುವ ಏರ್ಪಾಡು ಮಾಡುತ್ತದೆ.

ಹರಾಜುಮಾಡುವ ಮರಗಳನ್ನು ನೋಡುವ ಬಗ್ಗೆ ವ. ಹೆಚ್ಚಿನ ವಿವರಗಳಿಗೆ ದೇವಸ್ಥಾನದ ಆಫೀಸಿನಲ್ಲಿ ವಿಚಾರಿಸಬಹುದು.

ಮರಗಳ ತಪ್ಸೀಲು.

ಉಡುಪಿ ತಾಲ್ಲೂಕು ಪೆರ್ಡೂರುಗ್ರಾಮದ ಬಾಬ್ತು.—

Iನೇ ಲೋಟ ಸ-ಸ. ನಂ. 167ರಲ್ಲು ದೂಪದ ಮರಗಳು 39 ಹಿರಿಹೊನ್ನೆಮರ 7, ಹೆಬ್ಬಲಸಿನ ಮರ 4, ಬೀಜಾಟೆಮರ 1, ಮಾವಿನ ಮರ 2, ಹುವನ್ನು ಮರಗಳು 53.

II ನೇ ಲೋಟ-ಸ. ನಂ 483/1ರಲ್ಲು ದೂಪದ ಮರಗಳು 39, ಹಿರಿಹೊನ್ನೆಮರ 1, ಹಿಂತಿಮರ 1. ಒಟ್ಟು ಮರಗಳು 41

ಲೋಟ I ರ ಶ್ಲ II ರ ಒಟ್ಟು 94.

P. N. Madhava Rao.
Executive officer

ಶ್ರೀ ಪೆರ್ಡೂರು ದೇವಸ್ಥಾನ.
ತಾ. 13—8—1943.

Degrees: Books: Medicines
Free H. L. M, S.M. B. H. M, D, etc. Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp:—
Principal Indian Homeopathi Institute & Society (Govt. Regd)
P.O. MAHUVA (Kathiawar Dt. India.)

Sidha-Kalpa Kavach (Regd.)
No 3 Rs 2. No 2 Rs [illegible] No. 1 Rs. 7. Special Rs. 10 Extra Special Rs 17 for one marriage health, wealth. Ask any six questions with M O Re. 1/4 and get correct answers by returnpost Life reading Rs.10 No V.P.P.Send M.O, Free. pamphlets
Prof Dr. N. H Chhatbar,
P. O MAHUVA (Kathiawar India.)

THE VIJAYA BANK, LIMITED.

Beg to announce that a Branch of the Bank will be opened at KASARAGOD shortly.

ತಾ. 19—8—43ರಿಂದ
ಎ. ಆರ್. ಕರ್ದಾರರ ದಿಗ್ದರ್ಶಕತೆಯ ದಿವ್ಯಚಿತ್ರ.

ಸ್ವಾಮಿ. (ಸಿಕೊರ್)

ಜೈರಾಜ್, ಸಿತಾರ, ಜೀವನ್, ಯಾಕೂಬ್
ಮೊದಲಾದವರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಬರುವಚಿತ್ರ-ಜಮಿನಿಯವರ 'ಇಲ್ಲಾಲು'
ಕಾಂಚನಮಾಲ.

ಪ್ರಕಟಣೆ

ಹಾಲಿ ಉತ್ತರ ಕನ್ನಡ ಜಿಲ್ಲಾ ಕಾರ್ವಾರ್ ತಾಲೂಕು ಚಿತ್ತಾಕುಲ ಗ್ರಾಮದ ಸದಾಶಿವ ಗಡದಲ್ಲಿರುವ, ಪಾಸ್ಕಲ್ ಪೆರ್ನಾಂಡರ ಮಗ ತೋಮಸ್ ಪೆರ್ನಾಂಡ 1 ಮತ್ತು ಈತನ ತಮ್ಮ ಉಡುಪಿಯಾದರ ಗ್ರಾಮದ ದಮಾಸ್ಕಸ್ ಕೌಂಪೌಂಡಿನಲ್ಲಿರುವ ಅಂತೋಣಿ ಎಲಿಯಾಸ್ ಪೆರ್ನಾಂಡ 1 ಕೂಡಾ 2 ಜನರು ಈ ಮೂಲಕ ಯಾವತ್ತು ಜನರಿಗೆ ತಿಳಿಯಪಡಿಸುವುದೇನೆಂದ್ರೆ -

ನಮ್ಮ ಅಜ್ಜ ಯೀಗ ಮೃತಪಟ್ಟಿರುವ, ಶಂಕರನಡಿಯೂರು ಪಟೇಲ್ ಕಾಮಿಲ್ ಜುವಾಂವ್ಸಾರು ಸದ್ರಿಯ ಪರ ಪೇಲಿನಲ್ಲಿ, ನಮ್ಮ ತಾಯಿ ವ ನಮಗೆ ಕೂಡಾ ಕೊಟ್ಟಿರುವ ಆಸ್ತಿಯು ಈಗ, ಸದ್ರಿ ನಮ್ಮ ತಾಯಿ ಅಪ್ಪಿಲ್ ಬಾರ್ಟ್‌ವ್ಸಾರ ಸ್ವಾಧೀನದಲ್ಲಿರುತ್ತದೆ. ಸದ್ರಿಯವರು ಈಗ ಸುಮಾರು 70 ವರ್ಷ ಪ್ರಾಯದವರಾಗಿದ್ದು ಬೇರೆಯವರ ದುರ್ಭೋಧನೆಗೆ ಒಳಪಟ್ಟು ಸದ್ರಿ ಆಸ್ತಿಯನ್ನು ಇತರರಿಗೆ ಟ್ರಾನ್ಸ್‌ಫರ್ ಮಾಡುವ ಇರಾದೆಯಲ್ಲಿರುತ್ತಾರಾಗಿ ನಾವು ತಿಳಿಯುತ್ತೇವೆ. ಸದ್ರಿ ಆಸ್ತಿಯು ಸದ್ರಿ ನಮ್ಮ ತಾಯಿಯಿಟ್ಟರ ಹಕ್ಕಿನದಾಗ್ಗಿ ಇದೆ. ಸದ್ರಿಯವರಿಗೆ ಅದನ್ನು ಪರಾಧೀನ ಕೂಡಾ ಮಾಡುವರ ಹಕ್ಕಿರುವದಿಲ್ಲ. ಯಾರಾದರೂ ಸದ್ರಿಯವರಿಗೆ ದುರ್ಭೋಧನೆ ಕೊಟ್ಟು ಸದ್ರಿ ಆಸ್ತಿಯನ್ನು ಪರಾಧೀನ ಮಾಡಿಕೊಂಡಲ್ಲಿ, ಅಂಥಾ ಪರಾಧೀನದಿಂದ ಅವರಿಗೇನೂ ಪ್ರಯೋಜನ ಸಿಕ್ಕಲಾರದೆಂಬ ಸಂಗತಿಯನ್ನು ಈ ಮೂಲಕ ಜಾಹೀರ ಪಡಿಸೋಣಾಗಿದೆ.

(ದಸ್ಕತು) 1 **ತೋಮಸ್ ಪೆರ್ನಾಂದ,**
2 **ಅಂತೋಣಿ ಎಲಿಯಾಸ್ ಪೆರ್ನಾಂದ.**

ಉಡುಪಿ, 17-8-43

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

R. E. P. 266/43.

ನಾರಾಯಣ ಭಟ್ಟ — ಅರ್ಜಿದಾರ,
ಕೃಷ್ಣ ಆಚಾರ್ಯ ಕೂಡಾ - ಯೆದ್ರಿರು.

(1) ಕೃಷ್ಣ ಆಚಾರ್ಯ-ಅನಂತ ಆಚಾರ್ಯರ ಮಗ- (2) ಲಕ್ಷ್ಮೀ ಅಮ್ಮ--ಕೃಷ್ಣ ಆಚಾರ್ಯರ ಹೆಂಡ್ತಿ.

ಇಬ್ಬರೂ ಮಂಗಳೂರು ತಾಲ್ಲೂಕು ಬೋಳೂರು ಗ್ರಾಮ-. ಇವರೀಗೆ-

ಅರ್ಜಿದಾರನು ದಾಖಲು ಮಾಡಿದ ಮೇಲೆ ಬರುವ ಅಮ್ಲುಜಾರಿಯಲ್ಲಿ ಯಸ್ತಿಹಾರಿನ ಶರತಗಳನ್ನು ನಿಶ್ಚಯಿಸುವದಕ್ಕೆ ತಾ. 27-8-43ಕ್ಕೆ ಯಿಟ್ಟಿರುವದರಿಂದ ಆ ದಿವಸ ಬೆಳಗ್ಗೆ 10 ಘಂಟೆಗೆ ನೀವು ಸ್ವತಃ ಹಾ ವಕೀಲರ ಮುಖಾಂತ್ರ ಹಾಜರಾಗಿ ಉಜರ ಹರಿಸದಿದ್ದರೆ ನಿಮ್ಮ ಗೈರ ಹಾಜ್ರಿಯಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸುವರು.

(By order of Court)

B. Mangesha Rao.

ಪುತ್ತೂರು, 3-8-43 } Pleader for Petitioner,

"ಮಚ್ಚು ಕಟ್ಟಿಸುವವರಿಗೆ ಸುಸಂಧಿ"

ದೊಡ್ಡ ಮಚ್ಚುಗಳಿಗಾಗುವ ಅತೀ ಉದ್ದವಾದ ಸಿರಿಹೊನ್ನೆಯ ಕೂವೆಮರಗಳು ಸಿಗುತ್ತವೆ. ಅಗತ್ಯವಿದ್ದವರು 'ದಿ ಕಲ್ಯಾಣಪುರ ಸೋಮಿಲ್ ಮಾಲಕರೊಡನೆಯಾಗಲೀ ಅಥವಾ ಈ ಕೆಳಗಿನವರೊಡನೆ ಆಗಲೀ ವಿಚಾರಿಸಿರಿ.

ಡಾ| ಕೆ. ನಾರಾಯಣರಾವ್,
ಶ್ರೀದ ಸ್ಟೋರ್ ಟಿಂಬರ್ ಸಪ್ಲೈಂಗ್ ಕೋಆಪರೇಟಿವ್
ಪೋಸ್ಟು ಕಾರ್ಕಳ, ದ. ಕ.

CHAMPAE'S
SNOW & CASTREX

ದಕ್ಷಿಣ ಕನ್ನಡ.

ಮಂಗಳೂರು.

ಆಗಸ್ಟ್ ತಾ. ೯ರಂದು ನಗರದಲ್ಲಿ ಪೋಲೀಸರು ಸುತ್ತಾಡುತ್ತಿದ್ದು ಬಲವಾದ ಕಾವಲಿಟ್ಟಿದ್ದರು, ಕೆಲ ಅಂಗಡಿಗಳು ಮುಚ್ಚಲ್ಪಟ್ಟಿದ್ದವು.

ಗಣಪತಿ ಹ್ಯಾಸ್ಕೂಲಿನ ಎಸ್. ಎಸ್. ಎಲ್. ಸಿ. ತರಗತಿಯ ವಿದ್ಯಾರ್ಥಿ ಶ್ರೀ| ಕೆ. ವೆಂಕಟರಾವ್ ಇವರು ದೇ. ರ. ಶಾಸನದನ್ವಯ ಬಂಧಿಸಲ್ಪಟ್ಟಿರುವರು.

ಕಟ್ಟಾಕ್ಕೆ ಸಂಬಂಧಿಸಿ ಜುಗಾರಾಟವಾಡುತ್ತಿದ್ದರೆಂಬ ಕಾರಣದಿಂದ ಹತ್ತಿಪ್ಪತ್ತು ಮಂದಿ ತಾ. ೭ರಂದು ರಾತ್ರಿ ಬಂಧಿಸಲ್ಪಟ್ಟರು. ಜಾಮೀನಿನ ಮೇಲೆ ಅವರ ಬಿಡುಗಡೆಯಾಗಿದೆ.

ರಥ ಬೀದಿಯ ನ್ಯೂಸ್ ಏಜೆಂಟರಾದ ಶ್ರೀ| ವೆಂಕಟೇಶ ಪೈ ಅವರು ತಾ 9ನೇ ರಾತ್ರೆ ಕೈದು ಮಾಡಲ್ಪಟ್ಟರು, ಅವರೀಗ ಜಾಮೀನಿನ ಮೇಲೆ ಬಿಡಲ್ಪಟ್ಟಿದ್ದಾರೆ.

ಸತ್ಕಾರ ಕೂಟ:— ಪೂನಾದ ಪ್ರಸಿದ್ಧ ನೃತ್ಯ ಕಲಾವಿದರಾದ ಶ್ರೀ| ರಂಗ ವಿಟ್ಠಲರನ್ನು ಸತ್ಕರಿಸುವುದಕ್ಕಾಗಿ ತಾ. ೧೨ರಂದು ಸಂಜೆ ಕೆನರಾ ಚಲಚ್ಚಿತ್ರ ವಿಮರ್ಶಕರ ಕೂಟದ ಸಭೆಯೊಂದು ಜಿಲ್ಲಾ 'ಪತ್ರಿಕೋದ್ಯೋಗಿ ಸಂಘದ ಕಟ್ಟಡದಲ್ಲಿ ಜರಗಿತು. ಕೂಟದ ಕಾರ್ಯದರ್ಶಿ ಶ್ರೀ| ಎಂ. ವೆಂಕಟೇಶ ಪ್ರಭು ಅವರು ಅತಿಥಿಯ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟರು. ಶ್ರೀ| ವಿಟ್ಠಲರು ಭಾರತೀಯ ನೃತ್ಯ ಕಲೆಯ ಕುರಿತು ಮಾತನಾಡಿ ಚಲಚ್ಚಿತ್ರ ವಿಮರ್ಶಕರು ಪ್ರಗತಿಶೀಲರಾಗಿ ನಿರ್ಭೀತಿಯ ಟೀಕೆಗಳನ್ನು ಕೊಡಬೇಕೆಂದರು. ಶ್ರೀ| ಕೇಳ್ಕುಂದ ತಿ ರಾ. ಅವರು ಅಧ್ಯಕ್ಷತೆ ವಹಿಸಿದ್ದರು.

ಸೈಂಟ್ ಎಲೋಶಿಯಸ್—ಕಾಲೇಜಿನ ಸಂಸ್ಕೃತ ಸಭೆಯ ಉದ್ಘಾಟನಾ ಸಮಾರಂಭವು ತಾ| ೭ರಂದು ಸಂಸ್ಕೃತ ಅಧ್ಯಾಪಕರಾದ ಶ್ರೀ| ಮಂಜುನಾಥ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ| ನಿಡ್ಲೋಡಿ ಅನಂತ ಉಪಾಧ್ಯಾಯರು ವೇದೋಕ್ತವಾದ ಭಕ್ತಿಯ ಕುರಿತು ಭಾಷಣವಿತ್ತರು.

ವರ್ಗಾವರ್ಗಿ— ಜಿಲ್ಲಾ ಲೇಬರ್ ಆಫೀಸರ್ ಶ್ರೀ| ಎಸ್. ಯು. ಪರಶುರಾಮ ನಾಯರವರು ಮದ್ರಾಸ್ ನಗರದ 'ಆಹಾರ ಧಾನ್ಯ' ಆಫೀಸಿಗೆ ವರ್ಗಾಯಿಸಲ್ಪಟ್ಟಿರುವರು. ಕಾಸರಗೋಡು ತಾಲೂಕಿನ ಹೆಡ್ ಅಕೌಂಟಾಂಟರು ಇನ್ನು ಮುಂದಿನ ಜಿಲ್ಲಾ ಲೇಬರ್ ಆಫೀಸರರು. ದಿ| ಬಿ. ಸುಬ್ಬರಾಯ ಬಾಳಿಗರು ಪುನಃ ಇಲ್ಲಿಯ ಮ್ಯುನಿಸಿಪಲ ಹೆಲ್ತಾಫೀಸರರಾಗಿ ಸೇವೆ ಕೈಕೊಂಡಿದ್ದಾರೆ.

ಈಗಿನ ಡಿ. ಎಸ್. ಪಿ. ಮಿ| ಚಿಡ್ವಿಕರರು ರಜೆಯಲ್ಲಿ ಹೋದಾಗ ಅವರ ಬದಲು, ಈಗ ಮಧುರಾದಲ್ಲಿ ಡಿ. ಎಸ್. ಪಿ. ಯಾಗಿರುವ ಮಿ| ಆರ್. ಆರ್. ಬಿ. [illegible]ಟರು, ಈ ಜಿಲ್ಲೆಯ ತಾತ್ಕಾಲಿಕ ಡಿ. ಎಸ್. ಪಿ. ಯಾಗುವರು.

ಕಳ್ಳಾಪೇಟೆಯಿಂದ ಅಕ್ಕಿ ರಫ್ತು ನಡೆಯದಂತೆ ಜಾಗ್ರತೆ ವಹಿಸಿ, ಗಡಿಗಳಲ್ಲಿರುವ ಮಾರ್ಗಗಳಲ್ಲಿ ಚಲಿಸುವ ಯಾವತ್ತೂ ವಾಹನಗಳನ್ನು ನಿಲ್ಲಿಸಿ ಪರಿಶೋಧಿಸಿ, ಅವುಗಳಲ್ಲಿರಬಹುದಾದ ಭತ್ತ ಅಥವಾ ಅಕ್ಕಿಗೆ ನ್ಯಾಯವಾದ ಪರ್ಮಿಟು ಇದೆಯೋ ಏನೆಂದು ನೋಡಿ ತನಿಖೆ ಮಾಡಲು, ಜಿಲ್ಲಾ ಕಲೆಕ್ಟರರು ಕಂದಾಯ ಖಾತೆ, ವ್ಯಾಪಾರ ತೆರಿಗೆ ಇಲಾಖೆ ಮತ್ತು ಪೋಲೀಸು ಖಾತೆಯ ಕೆಲ ಅಧಿಕಾರಿಗಳಿಗೆ ಅವಶ್ಯವಿರುವ ಅಧಿಕಾರವಿತ್ತಿರುವರು.

ಉಡುಪಿ.

ಪತ್ರಿಕೋದ್ಯೋಗಿಗಳ ಸಂಘ— ಉಡುಪಿ ಪತ್ರಿಕೋದ್ಯೋಗಿಗಳ ಸಭೆಯೊಂದು 'ನವಯುಗ' ಕಚೇರಿಯ ಮಾಳಿಗೆಯಲ್ಲಿ ತಾ ೮ನೇ ಸಂಜೆ ಜರಗಿತು. ಉಡುಪಿಯ ಪತ್ರಿಕೋದ್ಯೋಗಿಗಳ ಸಂಘವು ಪುನರ್ಘಟಿಸಲ್ಪಟ್ಟಿತು. ಜಿಲ್ಲೆಯ ಬೇರೆ ಪ್ರದೇಶಗಳ ಪತ್ರಿಕೋದ್ಯೋಗಿಗಳು ಸಂಘಟಿತರಾಗಿ, ಒಮ್ಮತವಾಗಿ ಕೆಲಸ ಮಾಡುವುದರ ಕುರಿತು ಮಂಗಳೂರಿಂದ ಇಲ್ಲಿಗೆ ಬಂದಿದ್ದ ಜಿಲ್ಲಾ ಪತ್ರಿಕೋದ್ಯೋಗಿ ಸಂಘದ ಉಪಾಧ್ಯಕ್ಷರಾದ ಶ್ರೀ| ಕಯ್ಯಾರ ಕಿಂಞಣ್ಣ ರೈ ಅವರು ಮಾತನಾಡಿದರು. ಈ ವರ್ಷ ಅಖಿಲ ಕರ್ಣಾಟಕ ಪತ್ರಿಕೋದ್ಯೋಗಿ ಪರಿಷತ್ತನ್ನು ಮಂಗಳೂರಿಗೆ ಕರೆಯಬೇಕೆಂದು ಜಿಲ್ಲಾ ಸಂಘವು ಮಾಡಿರುವ ನಿರ್ಧಾರವನ್ನು ಶ್ರೀಯುತರು ವಿವರಿಸಿ, ಆ ಸಂದರ್ಭದಲ್ಲಿ ಜಿಲ್ಲೆಯ ಪತ್ರಿಕೋದ್ಯೋಗಿಗಳೆಲ್ಲ ನೀಡಬೇಕಾಗಬಹುದಾದ ಸಹಕಾರವನ್ನು ಸ್ಪಷ್ಟಪಡಿಸಿದರು. ಸಭಾಂತ್ಯದಲ್ಲಿ ಶ್ರೀ| ಯು. ಎಸ್. ಭಟ್ ಅವರು ಧನ್ಯವಾದಗಳನ್ನರ್ಪಿಸಿದರು.

ಅಂತರ್ಜಾತೀಯ ವಿವಾಹ:— ತಾ. ೭ರಂದು ಆರ್ಯಸಮಾಜದ ಪಂಡಿತ ಮಂಜುನಾಥ ಶೆಣೈಯವರ ಪೌರೋಹಿತ್ಯದಲ್ಲಿ ಗುಂಡಿಬೈಲಲ್ಲಿ ಗೌ. ಸಾ ಸಮಾಜದ ಬಾಲ ವಿಧವೆ ಶ್ರೀಮತಿ ಅಪ್ಪಿ ಬಾಯಿಗೂ ರಾಮಕ್ಷತ್ರಿಯ ಜಾತಿಯ ಶ್ರೀ| ಬಿ. ವೆಂಕಟ್ರಮಣಯ್ಯನವರಿಗೂ ಆರ್ಯಧರ್ಮ ರೀತ್ಯಾ ವಿವಾಹೋತ್ಸವ ನಡೆಯಿತು. ಸುತ್ಯಸ ಧಾರಣೆ!

ಚಂದ್ರಗ್ರಹಣ:—ನಿಮಿತ್ತ ತಾ. 15ರಲ್ಲು ಶ್ರೀಕೃಷ್ಣ ಸನ್ನಿಧಿಯಲ್ಲಿ ಪರ್ಯಾಯ ಪೀಠಾರೂಢರಾದ ಶ್ರೀ ಕೃಷ್ಣಾಪುರ ಮಠದ ಶ್ರೀವಿದ್ಯಾರತ್ನ ತೀರ್ಥ ಶ್ರೀಪಾದಂಗಳವರು ಪರ್ವಕಾಲದಲ್ಲಿ ವಿಶೇಷ ದಾನದಕ್ಷಿಣಾದಿಗಳನ್ನಿತ್ತರು.

ಶ್ರೀಕೃಷ್ಣ ಜಯಂತ್ಯುತ್ಸವವು ಶ್ರೀ ಕೃಷ್ಣಮಠದಲ್ಲಿ ತಾ 22ನೇ ಆದಿತ್ಯವಾರ ದಿನ ಪರ್ಯಾಯ ಶ್ರೀ ಕೃಷ್ಣಾಪುರ ಸ್ವಾಮಿಗಳವರ ನೇತೃತ್ವದಲ್ಲಿ ಧಾರ್ಮಿಕ ಶುಭಸಂಪ್ರದಾಯಗಳನುಸಾರವಾಗಿ ಜರಗಲಿದೆ ವುದು, ಮರುದಿನ ಮೊಸರು ಕುಡಿಕೆ ದೃಶ್ಯಾವಳಿಗಳು ಪ್ರೇಕ್ಷಣೀಯವಾಗಿ ಮಹಾವೈಭವದಿಂದ ಜರಗುವುವು.

ಬೀಡಿ ಕೆಲಸಗಾರರ ಸಂಘ:—ಉಡುಪಿ ಬೀಡಿಕೆಲಸಗಾರರ ಸಭೆಯೊಂದು ತಾ 15ರಲ್ಲಿ ಜರಗಿ ಸಂಘಸ್ಥಾಪನೆಯಾಯಿತು.

ಭಡ್ತೀವರ್ಗ:—ಉಡುಪಿ ಸಬ್ ಮೆಜಿಸ್ಟ್ರೇಟರಾಗಿದ್ದ ಶ್ರೀ. ಪಿ. ಎಸ್. ತಿಮ್ಮಪ್ಪ ಸೆಟ್ಟರು ಕುಂದಾಪುರ ತಹಶಿಲ್ದಾರರಾಗಿ ಸೇವೆ ಕೈಕೊಂಡಿರುವರು.

ಆತ್ರಾಡಿ:—ಆತ್ರಾಡಿ ಗ್ರಾಮದ ಭಾಗ ಶ್ರೀ. ಕೆ ವೆಂಕಪ್ಪಶೆಟ್ರ ಮನೆಯಲ್ಲಿ ತಾ. 22ನೆ ಆದಿತ್ಯವಾರ ಹಿರಿಯಬೈಲ್ಹ ಶ್ರೀಮತಿ ಅಕ್ಕಯ್ಯಾನೆ ಪೀರಮ್ಮ ಹೆಗ್ಗಡ್ತಿಯವರು ಬಡಬಗ್ಗರಿಗೆ ತಲಾ ಒಂದರ್ಧ ಸೇರಿನಂತೆ ಅಕ್ಕಿ ಧರ್ಮಾರ್ಥ ದಾನವೀಯುವರು, ಸುತ್ಯಕಾರ್ಯವಿದು.

ಎಮರ್ಜೆಳು.—ಇಲ್ಲಿಯ ಬೋರ್ಡ ಹಾಯರ್ ಎಲಿಮೆಂಟರಿ ಶಾಲೆಯನ್ನು ಮಾನ್ಯ ಜಿಲ್ಲಾ ಬೋರ್ಡ ಪ್ರೆಸಿಡೆಂಟರಾದ ಶ್ರೀ. ಎ ಲಕ್ಷ್ಮೀನಾರಾಯಣ ರಾವ್ ಬಿ. ಎ. ಬಿ. ಎಲ್ ರವರು ತಾ. 11 3-1943ಕ್ಕೆ ಆಕಸ್ಮಾತ್ತಾಗಿ ಸಂದರ್ಶಿಸಿ, ಈ ಶಾಲೆಯು ಬಹಳ ಒಳ್ಳೇ ಸ್ಥಿತಿಗೆ ಬಂದಿರುವುದೆಂತಲೂ ಇಲ್ಲಿಗೆ ಇನ್ನಿಬ್ಬರು ಹೆಚ್ಚಿಗೆ ಉಪಾಧ್ಯಾಯರು ಅಗತ್ಯವೆಂತಲೂ ಅಭಿಪ್ರಾಯ ಪಟ್ಟಿರುತ್ತಾರೆ.

ಶಿರ್ವ:—ಇನ್ನಂಜೆಯಲ್ಲಿ ಹೊಸತಾಗಿ ಕಟ್ಟುತ್ತಿರುವ ಬಂಟರ ಯಾನೆ ನಾಡವರ ವಿದ್ಯಾರ್ಥಿ ಭವನದ ಕಟ್ಟೋಣದ ಸಹಾಯಾರ್ಥವಾಗಿ ತಾ. 21-8-43ನೇ ಶನಿವಾರ ಅಪರಾಹ್ನ ಘಂಟೆ 3ಕ್ಕೆ ಶಿರ್ವ ಹಿಂದೂ ಶಾಲೆಯಲ್ಲಿ ಸಮೀಪದ ಗ್ರಾಮಗಳ, ಸ್ವಜಾತಿ ಗೃಹಸ್ಥರ ಸಭೆಯು ಜರಗಲಿರುವುದು. ಸದ್ರಿ ಸಭೆಗೆ ಸ್ವಜಾತಿ ಬಂಧುಗಳು ದಯಮಾಡಿ ಬರಬೇಕಾಗಿ ಕಟ್ಟೋಣದ ಕಮಿಟಿಯ ಕಾರ್ಯದರ್ಶಿಯ ವಿನಂತಿ ಇದೆ.

ಕಾಸರಗೋಡು.

ಆಫೀಸು ಝಡ್ತಿ—ಮುಳಿಯಾರು ಗ್ರಾಮ ಕಮ್ಯೂನಿಸ್ಟ್ ಆಫೀಸನ್ನು ತಾ. ೫ರಂದು ಹದಿನೈದು ಮಂದಿ ರಿಸರ್ವ ಪೋಲೀಸರು ಹೊಕ್ಕು ಝಡ್ತಿಸಿದರು. ಕೆಂಪು ಬಾವುಟವನ್ನೂ ಆಫೀಸಿನ ರಿಕಾರ್ಡು ಫೈಲುಗಳನ್ನೂ ಪೋಲೀಸರು ಕೊಂಡೊಯ್ದಿರುವರು.

ಬಂಧನಗಳು— ತಾ. ೮ರಂದು ರಾತ್ರೆ ನೀಲೇಶ್ವರದ ಶ್ರೀ| ಮಾಧವನ್ ಕುಂಞಂಬು ನಾಯರ್, ಹೊಸದುರ್ಗದ ಶ್ರೀ| ಪಿ ವಿ ಕೇಶವನ್, ಕಾಸರಗೋಡಿನ ಶ್ರೀಯುತರು ಅಚ್ಚು ಮತ್ತು ಕೆಪಂಬಳಿತ್ತಾಯ ಅವರು ಬಂಧಿಸಲ್ಪಟ್ಟರು. ಅವರೀಗ ಹೊಸದುರ್ಗ ಮತ್ತು ಕಾಸರಗೋಡು ಪೋಲೀಸ್ ಸ್ಟೇಶನುಗಳಲ್ಲಿ ರಿಮಾಂಡಿನಲ್ಲಿರುವರು.

ಕೆನರಾ ಬೇಂಕ್ ಲಿಮಿಟೆಡ್

ಇವರು ಹೊಸತಾಗಿ ಹೊರಡಿಸಿದ ಓರ್ಡಿನರಿ ಶೇರುಗಳು ಯಶಸ್ವಿಯಾಗಿವೆಯೆಂದು ತಿಳಿದುಬರುತ್ತದೆ. ಫೇಸ್ ವೇಲ್ಯು ರೂ 50ರ 18 ಸಾವಿರ ಶೇರುಗಳು ಪ್ರತಿ ಶೇರಿಗೆ ರೂ. 90ರ ಬೆಲೆಯಲ್ಲಿ ಹೊರಡಿಸಲಾಗಿದ್ದು ಅದ್ಯಾವತ್ತೂ ಇವುಗಳೆಲ್ಲಾ ಮಾರಾಟವಾಗಿವೆಯೆಂದು ತಿಳಿಯುತ್ತದೆ, ಪ್ರತಿಯೊಂದು ಶೇರಿಗೆ ರೂ. 40ರ ಪ್ರೀಮಿಯಮ್ ಬೇಂಕಿನ ರಿಸರ್ವ್‌ಸ್‌ಗೆ ತೆಗೆದುಕೊಳ್ಳಲಾಗುವುದು. ಇದರ ಫಲವಾಗಿ ಬೇಂಕಿನ ರಿಸರ್ವ್‌ಸ್ ರೂ. 7 2 ಲಕ್ಷದಷ್ಟು ಹೆಚ್ಚುವುದು. ಶೇರುಗಳು ಹೆಚ್ಚು ಕ್ರಯದಲ್ಲಿ ಹೊರಡಿಸಲ್ಪಟ್ಟಿದ್ದರೂ ಬಹು ಬೇಗನೇ ಮಾರಾಟವಾದದ್ದು ಪ್ರಶಂಸನೀಯ. ಹಲವು ಗಿರಾಕಿಗಳೂ ಸ್ನೇಹಿತರೂ ನಿರೀಕ್ಷಿಸಿದಷ್ಟು ಶೇರು ಪಡೆಯಲು ಆಶಿಸಿದ್ದರು. ಪ್ರಾಸ್ಪೆಕ್ಟಸ್‌ನ ಶರತ್ತಿನಂತೆ ಈ ಶೇರುಗಳು ಕಂತು ಪ್ರಕಾರ ಕೊಡಲಾಗುವುದು, ಇದು ಸಂಪೂರ್ಣವಾದರೆ ಕೆನರಾ ಬೇಂಕಿನ ಮೂಲಧನ ಮತ್ತು ರಿಸರ್ವ್‌ಸ್ 40 ಲಕ್ಷಕ್ಕೇರುವುದು. ಇದು ಬೇಂಕಿನ ಭದ್ರತೆಗೆ ಬುನಾದಿ ಬೇಕಾದಷ್ಟು ಬಲಗೊಂಡಿವೆಯೆಂದು ಕೇಳಿ ಇದರ ಹಿತಚಿಂತಕರೂ, ಗಿರಾಕಿಗಳೂ ನೆಲೆಯದೂ ಸಂತೋಷಪಡಬೇಕಾಗಿದೆ. ಕೆನರಾ ಬೇಂಕು ಜಿಲ್ಲೆಯ ಪ್ರಮುಖ ಬೇಂಕುಗಳಲ್ಲಿ ಒಂದಾಗಿದೆ, ಕೆಲವು ವರ್ಷಗಳ ಹಿಂದೆ 3 ಲಕ್ಷವಿದ್ದ ಇದರ ಮೂಲಧನ ಮತ್ತು ರಿಸರ್ವ್‌ಸ್ ಈಗ ಇದು ಮಟ್ಟಕ್ಕೆ ಏರಿದ್ದು ವಿಶೇಷ ಪ್ರಶಂಸನೀಯವಾಗಿದೆ.

ಚೂರು-ಚೂರು

'ಲೆಫೋರ್ನ್'ನಿಂದ ಇಟಾಲಿಯನ್ ಸಬ್ ಮೆರೀನೊಂದರಲ್ಲಿ ಹೊರಟಿದ್ದ ಮುಸಲಿನಿಯು ಮಿತ್ರರ ಬೋಂಬು ಧಾಳಿಗೆ ಸಿಕ್ಕಿ ಮುಳುಗಿ ಸತ್ತು ಹೋದ'—ನ್ಯೂಯೋರ್ಕ್ ಪೋಸ್ಟಿ'ನ ವರದಿ

'ರಕ್ತ ಕುಡಿದು ಬಾಳಿದವನು ನೀರು ಕುಡಿದು ಸತ್ತಾನು'—ನೂತನ ಗಾದೆ.

O

'ರೋಮಿನ ಮೇಲೆ ಈ ಬಾರಿಯ ಬೋಂಬು ಧಾಳಿ ಪ್ರಾರಂಭವಾಗಿ ಮುಗಿಯುವ ವರೆಗೂ ಪೋಪ್ ಗುರುಗಳು ಪ್ರಾರ್ಥಿಸುತ್ತಾ ಕುಳಿತಿದ್ದರು'—ಇಟಲಿಯ ವಾರ್ತೆ.

ದೇವರನ್ನೋ-ಮಿತ್ರರನ್ನೋ?

O

ಢಿಲ್ಲಿಯ 'ಹಿಂದುಸ್ಥಾನ್ ಟೈಮ್ಸ್' ಪತ್ರಿಕೆಯು ತಾ. 9ನೇ ತಾರೀಕಿನ ಸಂಚಿಕೆಯು ಮುದ್ರಣವಾದ ಮೇಲೆ ಅದರ ಪ್ರಕಟಣೆಯನ್ನು 'ಚೀಫ್ ಕಮಿಶನರು' ತಡೆದು ಎಲ್ಲವನ್ನೂ ಓದಿನೋಡಿದ ಮೇಲೆ ಅರ್ಧಘಂಟೆಯ. ನಂತರ ಪ್ರಕಟಿಸಲು ಬಿಟ್ಟರು.

ಅನ್ಯರ ಪತ್ರಿಕೆಗಳನ್ನೋದಿಕೊಂಡು ತಡಮಾಡಿ ಮುಟ್ಟಿಸುವ 'ಬಿಟ್ಟೀ ವಾಚಕ'ರಿಗೆಲ್ಲಾ ಇನ್ನು ಮುಂದೆ 'ಚೀಫ್ ಕಮಿಶನರ್' ಬಿರುದು ಕೊಡಿ!

O

'ಸತ್ಯಾರ್ಥ ಪ್ರಕಾಶ' ಗ್ರಂಥದ 14ನೇ ಅಧ್ಯಾಯದಲ್ಲಿ ಮುಸ್ಲೀಮರ ಧಾರ್ಮಿಕ ಭಾವನೆಯನ್ನು ನೋಯಿಸುವ ಅಂಶಗಳಿರುವದರಿಂದ ಅದನ್ನು ಹಿಂದೀ ಸರಕಾರವು ನಿಷೇಧಿಸತಕ್ಕದ್ದೆಂದು, ಜಿನ್ನರ ಪ್ರಾಣಾಪಾಯ ನಿವಾರಣೆಯಾದುದಕ್ಕಾಗಿ ಇದೇ ತಾ. 13ರಲ್ಲಿ ಧನ್ಯವಾದ ಸಮರ್ಪಿಸಲು ದೇಶದಲ್ಲೆಲ್ಲಾ ನೆರೆದ ಮುಸ್ಲಿಂ ಲೀಗ್ ಸಭೆಗಳ ನಿರ್ಧಾರ.

ಮಿ. ಜಿನ್ನರ ಮೈಗೆ ಬರೆಯಳೆದ ಚೂರಿಯ ಚಿತ್ರವು 'ಸತ್ಯಾರ್ಥ ಪ್ರಕಾಶ'ದಲ್ಲಿ ಬಂದಿರಬಹುದೆ?

O

'ಚರ್ಚಿಲ್-ರೂಸವೆಲ್ಟ್ ಪರಿಷತ್ತಿಗೆ ಹಾಜರಾಗಲು ತನಗಸಾಧ್ಯವಾದುದಕ್ಕಾಗಿ ಸ್ಟಾಲಿನರು ಆಂಗ್ಲೋ ಅಮೇರಿಕನ್ ರಾಯಭಾರಿಗಳೊಡನೆ ಪಶ್ಚಾತ್ತಾಪ ವ್ಯಕ್ತಮಾಡಿದರು'-ವಾರ್ತೆ.

ಹಾಗಾದರೆ 'ಆ ಪರಿಷತ್ತಿನಲ್ಲಿ ಚರ್ಚಿಲ್ ರೂಸವೆಲ್ಟರೂ ಸ್ಟಾಲಿನರ ಪಶ್ಚಾತ್ತಾಪವೂ ಹಾಜರಿದ್ದು ಒಮ್ಮತದ ನಿರ್ಧಾರವಾಯಿತು'-ಎಂದೇ ಪ್ರಕಟವಾಗಲಿ!

—ವಿನೋದಿ

BHUVANENDRA PRODUCTS Ltd.,

Head Office and Factory: **Katapadi**, S. Kanara

Depots: 1 Mahratha Galli, Hubli

"BHUVANENDRA"

Danthadavan Choorna

Economical in use. Cheapest in value.
Genuine in quality and choiced by all.
Antiseptic, astringent, aromatic. Usfeul in Pyorrhoea, Alveolaris. Removes tartar.
Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ವಿಜಯಾ ಸ್ಟೋರ್ಸ್

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.)

ಮುಖ್ಯ ಕಾರ್ಯಾಲಯ:— ಕೋರ್ಟು ರಸ್ತೆ, ಉಡುಪಿ. ದಕ್ಷಿಣ ಕನ್ನಡ.

ಶಾಖೆಗಳು:— ಉಡುಪಿ, ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಕಿನ್ನಿಗೋಳಿ.

ಮುಸಂ ಠೇವಣಾತಿಗಳು ತಾ. 31-7-1943 ಅಥವಾ ಈ ತಾರೀಕಿನ ಮೊದಲು ಮ್ಯಾದೆಯಾಗುವುದಾದರೆ ಅಂಥಾ ಮ್ಯಾದೆಯ ವರೆಗೆ ಸಾಲಿಯಾನ ಶೇಕಡಾ 3ರ ಸಲೆ ಬಡ್ಡಿಯಲ್ಲಿ 3, 4, 5 ಅಥವಾ 6 ತಿಂಗಳ ಮ್ಯಾದೆಯಿಂದ ಪ್ರತಿಯೊಂದು ರಾಶಿಯಲ್ಲಿ ಅಂಗೀಕರಿಸಲ್ಪಡುತ್ತವೆ.

ಬೇಂಕಿನ ಪ್ರತಿಯೊಂದು ವಿಧದ ವಹಿವಾಟುಗಳು ನಡೆಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ಖುದ್ದಾ ಅಥವಾ ಪತ್ರದ್ವಾರಾ ಸಮೀಪದ ಶಾಖೆಯಲ್ಲಿ ದಯವಿಟ್ಟು ವಿಚಾರಿಸಿರಿ

REGD.

ಅಮೃತಾಂಜನ ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಬಾತು ಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ, ಹುಳುಕಡ್ಡಿ ಮದ್ದು ಸಹ ಸರ್ವತ್ರ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತಾ.

ಬಾಲಚಂದ್ರ

ವಿದ್ಯಾ ವಿಷಯಕ ಪ್ರಮುಖ ಮಾಸ ಪತ್ರಿಕೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. 1-8-0 ಮಾತ್ರ

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಮೆನೇಜರ್, **ಬಾಲಚಂದ್ರ**

ಸಂತೆಕಟ್ಟೆ, ಉಡುಪಿ.

ಶ್ರೀ. ತಾರಾನಾಥ ಭೇಷಜಾಲಯ

ಶಾಸ್ತ್ರೀಯ ಮತ್ತು ಸಿದ್ಧೌಷಧಿಗಳ ಕಾರಾಗಾರ, ಚಿಕ್ಕಮಗಳೂರು.

ನಿರ್ದೇಶಕ:- ಡಾ. M. L. Shetty, ಪ್ರೇಮವಿದ್ಯಾಪೀಠದ ಗೌ. ಪ್ರಾಧ್ಯಾಪಕರು.

ಎಲ್ಲಾ ತರದ ಭಸ್ಮ, ಜಲ್ಮೀ ರಸಾಯನ, ಆಸವಾರಿಷ್ಟ, ಘೃತ, ತೈಲಗಳಿಗಾಗಿ ಕೂಡಲೇ ಬರೆಯಿರಿ.

ಒಕ್ಕಗಟ್ಟಲೆ ರೋಗಿಗಳಲ್ಲಿ ಫಲಕಾರಿಯಾದ ಔಷಧೀ ಯೋಗಗಳು. ಗುರುಪರಂಪರೆಯ ಅನುಭವದಿಂದ ಬಂದ ನಿರ್ದುಷ್ಟ ಔಷಧೀಕರಣ ವಿಧಾನ.

ಡಾ| **P. M. Alva,**

ಮೆನೇಜರ್.

ಬಾಲ ಸಾಹಿತ್ಯ ಮಂಡಲ, ಲಿಮಿಟೆಡ್.

ದಿವಂಗತ ಶ್ರೀ| ಉಳ್ಳಾಲ ಮಂಗೇಶರಾವ್ ಬಿ. ಎ., ಎಲ್. ಟಿ. ಅವರಿಂದ ರಚಿತವಾದ ನಮ್ಮ "ಹೊಸಗನ್ನಡದ ೧ರಿಂದ ೫ರ ವರೆಗಿನ ರೀಡರು"ಗಳು ಇದೇ ಜೂನಿನ ಪ್ರಥಮ ವಾರದಲ್ಲೇ ಸಿದ್ಧವಾಗುವವು. ಅವುಗಳಿಗೆ ಬೆಲೆ ಮತ್ತು ಅವುಗಳ ಮೇಲಿನ ಕಮಿಶನಿನ ದರಗಳು ಕಾಲಕ್ಕೆ ತಕ್ಕಂತೆ ಹೊಂದಿಸಲ್ಪಟ್ಟು ಆಗಲೇ ಪ್ರಕಟಗೊಳ್ಳುವುವು.

Bala Sahitya Mandal, Ltd.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager

ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮನೇಜರ್.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸದೊರೆಯ ಬೇಕೋ?

ಸುಖನಿವಾಸಕ್ಕೆ ಬನ್ನಿ!

ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ. : : : : ಮಂಗಳೂರು.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

— ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಷ್ಟ ಚಾರ್ಜು ೧೨ ಆಣೆ.

ಮಾಲಕರು:— **ಹಾಲಪ್ಪಾ ಫಕೀರಪ್ಪಾ ದಾವಣಗೇರಿ**

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ. ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ. ಆರ್. ಎಲ್. ಕಮಲದಾಸ, ಕೆಮಿಸ್ಟ್, ಹಾವೇರಿ, ಬ್ಯಾಡಗಿ.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹ ಸ್ಥಿತಿಯನ್ನು ನಿಶ್ಚೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 ಕೊಡಿಯಾಲಬೈಲು, ದಕ

ಸ್ಥಾಪನೆ [illegible] 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618.

Ested. 1921 ಸ್ಥಾಪನೆ.

ಹೊಸಕೆರೆ ಚಿದಂಬರಯ್ಯನವ
ರಿಂದ ರಚಿತವಾದ ಗೀತೆಯ
ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು 440 ಪುಟಗಳು,
ಬೆಲೆ (ಸುಂದರ ಪ್ರತಿ) ೦—೮—೦
(ಕೆಲಿಕೋ ಬೈಂಡ್) ೦-೧೨—೦
(ಲೆದರ್ ಬೈಂಡ್) ೧—೪—೦
ಪ್ರತಿಗಳು ಪ್ರಸಿದ್ಧ ವ್ಯಾಪಾರಿಗಳಲ್ಲಿ ಸಿಗುವುದು.
0—10—0 ಸ್ಟಾಂಪು ಕಳಿಸಿದ್ದಲ್ಲಿ ಒಂದು
ಪ್ರತಿಯನ್ನು ಬುಕ್‌ಪೋಸ್ಟ್
ಮಾಡಲಾಗುತ್ತೆ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

NAVAYUGA
ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೩
ಸಂಚಿಕೆ ೪೯

FOUNDER
Sri. A. B. Shetty, M. L. A.

Vol. 23
No. 49

NAVAYUGA— Kannada Weekly —UDIPI, S. I.

ಉಡುಪಿ • 26—8—1943 • ಮಂಗಳೂರು.

ಶ್ರೀಮತಿ ಶಿವರಾಣಿ ದೇವಿಯವರಿಂದ
(ದಿವಂಗತ ಪ್ರೇಮಚಂದರ ಪತ್ನಿ)
ರಚಿತವಾದ ಹಿಂದೀ ಕತೆಗಳ ಕನ್ನಡ
ಭಾಷಾಂತರ

ನಾರೀ ಹೃದಯ

ನಾರೀ ಹೃದಯದ ವಾಸ್ತವಿಕ ಚಿತ್ರ
ವನ್ನು ಚಿತ್ರಿಸುವ ಉತ್ತಮ ಕತೆಗಳ
ಸಂಗ್ರಹ.

ಬೆಲೆ 0—14—0
ಟ. ಖ. 0—2—0 ಪ್ರತ್ಯೇಕ.
ಒಂದು ರೂಪಾಯಿ ಸ್ಟಾಂಪು ಕಳಿಸಿದರೆ ಒಂದು
ಪ್ರತಿಯನ್ನು ಕಳಿಸಲಾಗುವದು.
ಕಿರಿಯರ ಪ್ರಪಂಚ, ಉಡುಪಿ.
ಅಥವಾ ನವಭಾರತ ಬುಕ್
ಡಿಪೊ, ಉಡುಪಿ.

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

The Canara Mutual Assurance Co., Ltd.,
UDIPI (S. India).

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು
ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸವಿಾಪದವರ ಮತ್ತು
ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇಗರಲ್ಲೊಂದು ಪೋಲಿಸಿಯನ್ನು ಪಡೆಯಿರಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು:-
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ (ದ. ಕನ್ನಡ)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್,
ಕಲ್ಲಿಕೋಟೆ, ಮಂಗಳೂರು ಮತ್ತು ತ್ರಿವಾಂಕೂರು.

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಚ್ಚು ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೇಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

Again - - - -

TEN LACS IN TEN MINUTES.

Our share-lists opened on 5th August and soon closed by oversubscription. Ten Lacs in Ten Minutes a second time; but this time it is perhaps not such a great achievement in view of the changed economic conditions. Yet considering that shares of the face value of Rs. 50 were issued at Rs. 90 that they were sold without any publicity and without the help of brokers and that they were only sold over the counter to shareholders and customers the Canara Bank is justifiably proud of this achievement. when these shares are fully paid up according to the terms of the Prospectus the Capital structure of the Canara Bank will be as follows:—

Capital.	
ordinary	Rs. 15,00,000.
5% Cum. Pref.	Rs. 14,00,000.
Reserves.	Rs. 11,70,000.
Total	Rs. 40,70,000.

We thank all our friends and patrons whose unstinted support and sympathy made this success possible and assure them that we shall try in all possible ways to continue to deserve their good will.

CANARA BANK LIMITED.
Estd. 1906.

ಈ ಹದಿನಾಲ್ಕು ಮಂದಿ

ವೈಸರಾಯಿ ಎಗ್ಜಿಕ್ಯೂಟಿವ್ ಕಮಿಟಿ ಸದಸ್ಯರು. ಡಾ| ಖರೆ, ಡಾ| ಅಂಬೇಡ್ಕರ್, ಇವರಿಬ್ಬರನ್ನು ಬಿಟ್ಟರೆ ಮಿಕ್ಕವರೆಲ್ಲಾ 'ಸರ್'ಗಳು! ಈ ಹದಿನಾಲ್ಕರಲ್ಲಿ ಹತ್ತು ಮಂದಿ ಹಿಂದೀಯರು; ಆದರೆ ಅವರೊಳಗೆ ತೊಗಲು ವ್ಯತ್ಯಾಸ ಹೊರತು ಹೃದಯ ವ್ಯತ್ಯಾಸವಿಲ್ಲ ಹಿಂದೀ ಸದಸ್ಯರಲ್ಲಿ ಯಾವನೊಬ್ಬನನ್ನೂ ಆರಿಸಿ ಕೊಟ್ಟ ಅಥವಾ ಆಧರಿಸಿ ನಿಂತ ಪಕ್ಷವಿಲ್ಲ. ವೈಸರಾಯಿ ರಥಕ್ಕೆ 14 ಅಶ್ವಗಳಾಗಿ ಇವರನ್ನಿಟ್ಟುಕೊಳ್ಳಲಾಗಿದೆ. ದೇಶವಿವರನ್ನು ಎಷ್ಟೊಂದು ಅಗಣ್ಯ ಮಾಡಿದೆಯೆಂದರೆ 'ಕೆಸರಿಗೆ ಬಿದ್ದ ತಿಂಡಿ ಸಿಹಿಯಿದ್ದರೇನು, ಕಹಿಯಿದ್ದರೇನು' ಎಂದು ಅವರೊಳಗಿನ ಕಚ್ಚಾಟವನ್ನು ಕೂಡಾ ಕಡೆಗಣಿಸಿದೆ! ಇಂಥವರು ದೇಶ ಪ್ರತಿನಿಧಿಗಳಂತೆ-ಆ ದೇಶವಾವುದೊ?

ಜನರಲ್ ಸರ್. ಕ್ಲಾಡ್ ಜೋನ್ ಐರ್ ಆಕಿನ್ಲೆಕ್, ಜಿ. ಸಿ. ಬಿ., ಜಿ. ಸಿ. ಐ. ಇ., ಸಿ. ಎಸ್. ಐ., ಡಿ. ಎಸ್. ಒ., ಒ. ಬಿ. ಇ., ಎ. ಡಿ. ಸಿ., ಕಮಾಂಡರ್-ಇನ್-ಚೀಫ್ (ಯುದ್ಧಖಾತೆ).

ಸಹೃದಯಿಯಂತೆ ತೋರಿಸಿಕೊಳ್ಳುತ್ತಾರೆ, ಸಿಹಿ ಮಾತಾಡುತ್ತಾರೆ. ಸೈನಿಕರಿಗೂ ಅಚ್ಚುಮೆಚ್ಚಿನವರಂತೆ. ಆದರೆ ಸಂಪೂರ್ಣವಾಗಿ ಯುದ್ಧಕಾರ್ಯಕ್ಕೇನೇ ಕಟ್ಟುಬಿದ್ದವರು ಅಂಗಳ ಗುಡಿಸಲು ಬಂದವರು ಅಡಿಗೇ ಮಾಡಲಾರರು-ಸೇನಾನಿ ಆಕಿನ್ಲೆಕರು ಭಾರತದ ಬಿಕ್ಕಟ್ಟು ಬಿಡಿಸಲು ನೆರವಾಗಲಾರರು ಎಗ್ಜಿಕ್ಯೂಟಿವ್ ಸಭೆಯಲ್ಲಿ ವೈಸರಾಯರು ಕಿವಿಗೊಡುವದು ಇವರ ಮಾತಿಗೇನೇ. ಯಾಕೆಂದರೆ ಅವರಿಗೆ ತಿಳಿಯದ ಸೇನಾ ವಿಷಯಗಳು ಇವರಿಗೆ ತಿಳಿದಿವೆ. ಆಕಿನ್ಲೆಕರು ಇಂಗ್ಲಂಡಿನ ಪಾಲಿಗೆ-ನಮಗಲ್ಲ.

ಸರ್ ರೆಜಿನಾಲ್ಡ್ ಮೇಕ್ಸ್‌ವೆಲ್, ಕೆ. ಸಿ. ಎಸ್. ಐ., ಸಿ. ಐ. ಇ., (ಗೃಹಖಾತೆ).

ಬ್ರಿಟಿಷ್ ಕುಂಟುಬುದ್ಧಿಯೇ ಅವತಾರವೆತ್ತಿ ನಿಂತಿರುವ ಮನುಷ್ಯ. ಬೇಕಾದರೆ 'ಗಾಂಧೀ ಜೋಯಿಸ'ನನ್ನು, 'ಗಲಭೆಗೆ ಕಾಂಗ್ರೆಸ್ ಹೊಣೆ'ಯೆಂಬ ಗಾಂಧೀ ಜಾತಕವೆಂದು ಹೆಸರಾದ ಪುಸ್ತಕ ಪ್ರಕಟಿಸಿದ್ದಾರೆ. ಪ್ರಜಾಪ್ರತಿನಿಧಿ ಮೆಂಬರರು ಎಸೆಂಬ್ಲಿಯಲ್ಲಿ ಇವರನ್ನು ಕೆಣಕಿ ಕೆಣಕಿ ಎಬ್ಬಿಸುತ್ತಾರಾದರೂ ಇವರೊಂದಿಂಚು ಕದಲುವದಿಲ್ಲ. ವೈಸರಾಯರು ಗೆರೆಯೆಳೆದು ಕೊಟ್ಟಂತೆ ಇವರು ಚಿತ್ರ ಬಿಡಿಸುತ್ತಾರೆ; ಅವರ ಕೈಸನ್ನೆಯಂತೆ ಇವರ ಕೈಚಳಕ. ಬ್ರಿಟಿಷರಿಗಾಗಿ ಇದ್ದಾರೆ ಹೊರತು ಭಾರತೀಯರಿಗಾಗಿಯಲ್ಲ.

ಸರ್. ಜೆರೆಮಿ ರೈಸ್‌ಮೋನ್, ಕೆ. ಸಿ. ಎಸ್. ಐ., ಸಿ. ಐ. ಇ., (ಅರ್ಥಖಾತೆ).

ಮಹಾ ಕುತಂತ್ರಿ. ಹಿಂದುಸ್ಥಾನದ ದುಷ್ಟ ಮತ್ತು ದೂಷಣೆಯ ಹೊರತು ಬೇರಾವುದರ ಸಂಪರ್ಕವೂ ಇಲ್ಲದ ಮನುಷ್ಯ. ಎಸೆಂಬ್ಲಿಯಲ್ಲಿ ಪ್ರಜಾಪಕ್ಷದ ಸದಸ್ಯರು ಜೈದರೆ ಇವರು ನಗುತ್ತಾರೆ. ಹಿಂದೀ ಸರಕಾರದ ಆರ್ಥಿಕ ಆಟದ ಗುಟ್ಟೇ ತಿಳಿಯುವದಿಲ್ಲ; ಕಾರಣ ಜೆರೆಮಿಯವರ ಜಾದುಗಾರಿಕೆ. ನಾಣ್ಯವನ್ನು ಕಲ್ಲು, ಕಲ್ಲನ್ನು ನಾಣ್ಯವಾಗಿ ಮಾಡಿ ತೋರಿಸಬಲ್ಲರು. ಹೊಸ ತೆರಿಗೆ, ಸುಂಕ ಕೊಡುವಾಗಲೆಲ್ಲಾ 'ಜೆರೆಮಿ ಸನ್ಯಾಸಿಯಾದ' ಎನ್ನಬೇಕು! ಈ ಪಟ್ಟಿಗೆ ವೈಸರಾಯರು ಇವರ ಅನುಭವಕ್ಕೇನೇ ಪಟ್ಟಕಟ್ಟಿದ್ದಾರೆ. ಬ್ರಿಟಿಷ್ ಆರ್ಥಿಕ ಧೋರಣೆಯ ಬಾವುಟವನ್ನು ಹಿಡಿದು ನಿಂತಿರುವವರು.

ದಿವಾನ್ ಬಹದೂರ್ ಸರ್. ಎ. ರಾಮಸ್ವಾಮಿ ಮುದಲಿಯಾರ್, ಕೆ. ಸಿ. ಎಸ್. ಐ., (ಸಪ್ಲೈ ಖಾತೆ).

ಲಂಡನಿನಲ್ಲಿ ಯುದ್ಧಮಂಡಲದ ಸದಸ್ಯರಾಗಿದ್ದವರು. ಮೊದಲು ಜಸ್ಟೀಸ್ ಪಕ್ಷದ ಪ್ರಮುಖರು. ಕಾಂಗ್ರೆಸ್ ದ್ವೇಷದ ಮಟ್ಟಿಗೆ ಯಾವನೊಬ್ಬ ಯುರೋಪಿಯನನನ್ನಾದರೂ ಹಿಂದಿಕ್ಕಬಲ್ಲರು. ಮಹಾ ಚತುರ, ಒಳ್ಳೇ ವಾಗ್ಮಿ. ಆದರೆ ಭಾರತೀಯರ ಪಾಲಿಗೆ ಥಟಾಯಿತರು ಕೆತ್ತಿಕೊಂಡು ಉಪಯೋಗಿಸಹತ್ತಿದ ಕತ್ತಿಯಂತಾಗಿದ್ದಾರೆ; ಕೊಡಲೀ ಕಾವಿನಂತಿದ್ದಾರೆ 'ನೀವು ಯಾರ ಪ್ರತಿನಿಧಿ?' ಎಂದು ಕೇಳಿದರೆ ಸರ್. ಮುದಲಿಯಾರರು ಆಕಾಶ ನೋಡಬೇಕಾದೀತು-ಜಸ್ಟೀಸ್ ಪಕ್ಷದ ಹಿಂದಿನ ಪ್ರಮುಖ ದಿವಂಗತ ಪನಗಲ್ ರಾಜರ ಕಡೆಗೆ!

ಸರ್. ಸುಲ್ತಾನ್ ಅಹಮ್ಮದ್, ಡಿ. ಎಲ್., ಬಾರ್. ಎಟ್. ಲಾ., (ಸುದ್ದಿಖಾತೆ).

ಈ ಹುದ್ದೆಗೆ ಇತ್ತೀಚೆಗೆ ನೇಮಿಸಲ್ಪಟ್ಟವರು. ಪತ್ರಿಕೆಗಳನ್ನು ಮೆಚ್ಚಿಸಿ ಬಾಳಬೇಕೆಂಬ ಬಯಕೆ ಬಹಳ. ಜನಪ್ರಿಯತೆ ಗಳಿಸಬೇಕೆಂಬ ಹುಚ್ಚು; ಸ್ಥಾನಕ್ಕೆ ತಕ್ಕಂತೆ ವರ್ತಿಸುವ ಶಪಥ-ಹೀಗೆ ಸದ್ಯಕ್ಕೆ 'ಮಂಚ ಬಿಡಬಾರದು: ಮಗು ಅಳಬಾರದು' ಎಂಬ ಧೋರಣೆ ವಹಿಸಿದ್ದಾರೆ. ಅವರೀ ಪ್ರಯತ್ನದಲ್ಲಿ ಗೆಲ್ಲುವಂತಿಲ್ಲ. ಮಂಚಕ್ಕೂ ಮಗುವಿಗೂ ಬಹಳ ದೂರ-ಅಧಿಕಾರಕ್ಕೂ ಜನತೆಗೂ ಅಜಗಜಾಂತರ! ಸರ್. ಸುಲ್ತಾನರನ್ನು ವೈಸರಾಯರೆಳೆದುಕೊಂಡರು; ಅವರೊಟ್ಟಿಗೆ ಅತ್ತ ಚಲಿಸುವ, ಬೆನ್ನಿಗೆ ಬಿದ್ದ ಪಕ್ಷವೆಂಬುದಿಲ್ಲ.

ಮಾಲಿಕ್ ಸರ್. ಫಿರೋಜ್‌ಖಾನ್ ನೂನ್, ಕೆ. ಸಿ. ಎಸ್. ಐ., ಕೆ. ಸಿ. ಐ. ಇ., (ರಕ್ಷಣಾಖಾತೆ).

ಬೈಗಳ ಬ್ರಹ್ಮ. ಕಾಂಗ್ರೆಸಿಗರನ್ನು ಬೈಯ್ಯುವದರಲ್ಲಿ ಶಬ್ದಕೋಶಕ್ಕೆ ನೂತನ ಶಬ್ದಗಳನ್ನು ಸೇರಿಸಿದ್ದಾರೆ, ಇವರ ಜತೆಯಾಗಬಲ್ಲವರು ಡಾ| ಅಂಬೇಡ್ಕರರೊಬ್ಬರೆ ಖಾನ್ ನೂನ್-ಅಂಬೇಡ್ಕರರೆಂದರೆ ಹಿಂದೀ ಸರಕಾರದ ನಗಾರಿ ತಂಬಟೆಗಳು. ಈ 'ಸಾಹೇಬರ ಬಾಯಿಯ ಉಪಯೋಗವನ್ನಲ್ಲದೆ ಮೆದುಳಿನ ಪ್ರಯೋಜನವನ್ನು ವೈಸರಾಯರು ಪಡೆಯುವಂತಿಲ್ಲ-ಅದು ಅಂತಹ ಉಪಯೋಗಕ್ಕೆ ಬೀಳುವಷ್ಟಿಲ್ಲ ಬರ್ಮದ ಜಾಪಾನೀ ರಣಭೇರಿ ನವದೆಹಲಿಯ ಸರಕಾರೀ ಗೃಹಗಳಲ್ಲಿ ಪ್ರತಿಧ್ವನಿಸುತ್ತವಾದರೆ ಈ ಸಾಹೇಬರ ಆರ್ಭಟೆ ಹಿಂದೀಯರ ಹೃದಯಗಳಲ್ಲಿ ಮಾರ್ದನಿಗೊಡುತ್ತಿದೆ.

ಸರ್. ಎಡ್ವರ್ಡ್ ಬೆಂಥಾಲ್, (ಯುದ್ಧ ವಸ್ತು ಸಂಚಾರ ಖಾತೆ)

ಇವರು ಹೇಗೂ ಖಾಸಗೀ ಕಾರಿನ ಡ್ರೈವರನಂತೆ. ರೈಲ್ವೇ ಪ್ರಯಾಣದಲ್ಲಿ ಮಿಲಿಟರಿ ಅಧಿಕಾರಿಗಳಿಂದ ನಾಗರೀಕರಿಗಾದ ಅನ್ಯಾಯಗಳ ಕುರಿತು ಕೇಂದ್ರ ಎಸೆಂಬ್ಲಿಯಲ್ಲಿ ಪ್ರಶ್ನೆ ಬಂದಾಗ ಒಂದಕ್ಕೊಂಭತ್ತು ಮಾತಾಡಿ ತಪ್ಪಿಸಿಕೊಳ್ಳುತ್ತಾರೆ. ಇವರ ಪಾಲಿಗೆ ಯುದ್ಧ ಚಲಾವಣೆಯೇ ಬುದ್ಧಿ ಚಲಾವಣೆ. ಒಂದು ವರ್ಗದ ಸೇನಾನಿ ಹೊರತು ಜನತಾ ಸೇವಕನಲ್ಲವೇ ಅಲ್ಲ.

ಖಾನ್ ಬಹದ್ದೂರ್ ಸರ್. ಮಹಮ್ಮದ್ ಉಸ್ಮಾನ್, ಕೆ. ಸಿ. ಐ. ಇ., (ಟಪ್ಪಾಲು ಮತ್ತು ಆಕಾಶ ಖಾತೆ).

ಮನುಷ್ಯನೇನೋ ಘನವಂತ. ಯುದ್ಧ ಟೀಂಕಿನಂತಲ್ಲ, ಉತ್ಸವ ತೇರಿನಂತಿರುವವರು. ಆದರ ಪಾಪ, ಗಂಭೀರವಾಗಿ ಸರಕಾರೀ ಧೋರಣೆಯ ಬೆನ್ನಲ್ಲಿ ಹೆಜ್ಜೆಯಿಡಲು ಮಾತ್ರ ಗೊತ್ತು; ರಾಷ್ಟ್ರೀಯ ಭಾವನೆಯನ್ನನುಕರಿಸಲು ಕಲಿತಿಲ್ಲ. ಇದ್ದಾರೆ-ಪೋಸ್ಟು ಇಲಾಖೆಯ ಎಲ್ಲಕ್ಕಿಂತ ದೊಡ್ಡ 'ಸೀಲ್' ಆಗಿ!

ಡಾ| ಬಿ. ಆರ್. ಅಂಬೇಡ್ಕರ್, (ಲೇಬರ್ ಖಾತೆ).

ಇವರ ಹೆಸರು ಹಿಂದೀಯರಿಗೆಲ್ಲಾ ಗೊತ್ತು ಮುಖ್ಯ ಹೆಗ್ಗುಣಗಳೆಂದರೆ:- ಸಿಕ್ಕಿದ್ದನ್ನೋದುವದು, ಸಿಕ್ಕಾಬಟ್ಟೆ ಊದುವದು! ಗಾಂಧಿಜೀ ಮತ್ತು ಕಾಂಗ್ರೆಸನ್ನು ಬೈಯ್ಯುವದೆಂದರೆ ಏದಡಿಯ ಅಂಬೇಡ್ಕರ್ ಏವತ್ತಡಿ ಏರುತ್ತಾರೆ=ಸರಕಾರವನ್ನು ಖಂಡಿಸುವ ಸಂದರ್ಭ ಕಣ್ಣಮುಂದೆ ಬಂದಾಗ ಏವೇ ಇಂಚಿನಷ್ಟು ಮುದುಡಿಕೊಳ್ಳುತ್ತಾರೆ. ಮಹಾ ವಿದ್ವಾಂಸ; ಆದರೆ ಹದ್ದುಮೀರಿ ಹಾರಾಡುವ ಸ್ವಭಾವ ತಾನು ದಲಿತವರ್ಗದ ಪ್ರತಿನಿಧಿಯೆಂದು ಇವರು ತೋರ್ಪಡಿಸಿಕೊಳ್ಳುವದಿದೆ, ಆದರೆ ಅಂಬೇಡ್ಕರರ ಅನುಯಾಯಿಗಳನ್ನು ಕಾಣಬೇಕಾದವರು ಇಂಗ್ಲಂಡಿಗೆ ಹೋಗಬೇಕು; ಇಲ್ಲಿಲ್ಲ

ಸರ್. ಜೆ. ಪಿ. ಶ್ರೀವಸ್ತವ, ಕೆ. ಬಿ. ಇ., (ನಾಗರಿಕ ರಕ್ಷಣಾಖಾತೆ).

ಕಲ್ಕತ್ತದಲ್ಲಿ ಬೋಂಬು ಬಿದ್ದಾಗ ಕಂಡು ಬಂದರು-'ಸತ್ತವರು ಸಾಯಲಿಲ್ಲ. ಓಡಿದವರು ಓಡಲಿಲ್ಲ' ಎಂದು ಏನೇನೋ ವರದಿಕೊಟ್ಟರು; ಹೇಗಾದರೂ ನಾಗರಿಕರನ್ನು ರಕ್ಷಿಸಬೇಕಲ್ಲವೆ! ಆಗ ಸ್ವಲ್ಪ ಒದ್ದಾಡಿದ್ದಾರೆಂಬುದು ನಿಜ. ಜಾಪಾನರ ಉದಾರತೆಯಿಂದಾಗಿ ಇವರ ಚಟುವಟಿಕೆಗಳನ್ನು ಮತ್ತೂ ಕಾಣುವ ಸಂದರ್ಭ ಬಂದಿಲ್ಲ; ಬಂದರೆ ಬ್ರಿಟಿಷರು ಮೆಚ್ಚುವಷ್ಟು ದುಡಿದಾರು! ಈಗ ಆಹಾರ ಖಾತೆಯೂ ಇವರ ಪಾಲಿಗೆ ಬಂದಿದೆ. ಏನು ಬಂದರೂ ರಾಷ್ಟ್ರೀಯಭಾವನೆ ಬರುವಂತಿಲ್ಲ.

ಸರ್. ಜೋಗೇಂದ್ರ ಸಿಂಘ್, (ವಿದ್ಯೆ, ಆರೋಗ್ಯ ಮತ್ತು ಭೂಖಾತೆ)

ಗಡ್ಡವೊಂದೇನೋ ಇದೆ-ಸ್ವಾಭಿಮಾನ, ಧೈರ್ಯ, ಸ್ಥೈರ್ಯ ಮೊದಲಾದ ಇತರ ಸಿಖ್ ವೈಶಿಷ್ಟ್ಯಗಳು ಕಂಡುಬರುವದಿಲ್ಲ. ಸಿಖ್ಖರು ಇವರನ್ನು ಕಂಡು 'ನೀರಿದ್ದಲ್ಲಿ ಕೆಸರಿದೆ' ಎನ್ನುತ್ತಾರೇನೊ! ಹಾಗೆಂದು ಪಾಕಿಸ್ತಾನವನ್ನು ಖಂಡಿಸುತ್ತಾರೆ. ಪಂಜರದ ಶುಕವನ್ನು ಮಾತಾಡಿಸಲು ಹಾರುವ ಗಿಣಿಗಳು ಬರುವದಿಲ್ಲ-ಇವರು ತಮ್ಮ ಪ್ರತಿನಿಧಿಗಳೆಂದು ಸಿಕ್ಖರನ್ನುವುದಿಲ್ಲ.

ಸರ್. 'ಮಹಮ್ಮದ ಅಜೀಜುಲ್ ಹಕ್, ಸಿ. ಐ. ಇ., ಡಿ. ಲಿಟ್, (ವ್ಯಾಪಾರ, ಆಹಾರ, ಉದ್ಯೋಗ, ಮತ್ತು ನಾಗರಿಕ ಸಪ್ಲೈ ಖಾತೆ)

ಶಾಪಗ್ರಸ್ತ ಮನುಷ್ಯ! ಇಂದು ದೇಶದಲ್ಲೆಲ್ಲಾ ತುತ್ತಿನ ತುತೂರಿ ಕೇಳಿಸುತ್ತಿರುವಾಗ, ಆಹಾರಸ್ಥಿತಿಯ ಸರಿಯಾದ ಅಂಕೆಸಂಖ್ಯೆ ಕೂಡಾ ಈ ಸದಸ್ಯನೊಡನಿಲ್ಲ. ಆದಕ್ಕಾಗಿ ಪ್ರಯತ್ನಿಸುವಷ್ಟು ಪರಿಶ್ರಮ ವಹಿಸುವವರೂ ಅಲ್ಲ. ಎಗ್ಜಿಕ್ಯೂಟಿವ್ ಸದಸ್ಯ ಮಾಲೆಯಲ್ಲಿ ಪೋಣಿಸಲ್ಪಟ್ಟರು-ನೇತಾಡುತ್ತಿದ್ದಾರೆ. ಇವರ ಹಿಂಬಾಲಕರ ಮಾತಂತಿರಲಿ-ಕೆಲಮಂದಿ ದೊಡ್ಡ ಮನುಷ್ಯರ ಹೊರತು ಸಾಮಾನ್ಯ ಹಿಂದೀಯರಿಗೆ ಇವರ ಪರಿಚಯ ಕೂಡಾ ಈ ಮೊದಲಿರಲಿಲ್ಲ. ಈಗ ಆಹಾರಖಾತೆಯು ಇವರ ಕೈಯಿಂದ ಶ್ರೀವಸ್ತವರ ಕೈಗೆ ಬಂದಿದೆ. ಯಾವುದನ್ನು ಬಿಟ್ಟು ಕೊಟ್ಟರೂ ಸ್ಥಾನ ಬಿಡುವವರಲ್ಲ.

ಡಾ| ಎನ್. ಬಿ. ಖರೆ(ವಸಾಹತುಖಾತೆ)

ಇತ್ತೀಚೆಗೆ ಸದಸ್ಯರಾದವರು. ಹಿಂದೊಮ್ಮೆ ಕಾಂಗ್ರೆಸ್ ಮಂತ್ರಿಯಾಗಿದ್ದು ಶಿಸ್ತುಭಂಗಮಾಡಿ 'ಖರೆಪ್ರಕರಣ' ನಿರ್ಮಿಸಿದವರು. ದೇಶಾಭಿಮಾನವಿದೆ, ಆದರೆ ಅದಕ್ಕೂ ಮುಂಗಡೆಯಲ್ಲಿ 'ದ್ವೇಷಾಭಿಮಾನ' ವಿದೆ-ತನ್ನ 'ತನ'ವನ್ನು ಭೂಷಣವಾಗಿಯಲ್ಲ-ಕಂಡಕ್ಕೊಂದು ಕೊರಡಾಗಿ ಕಟ್ಟಿಕೊಂಡ ಮನುಷ್ಯ. ಅತಿರೇಕವಾದಿ; ಅಕ್ಷಮ್ಯ ಹಠವಾದಿ ಹಿಂದೊಮ್ಮೆ ಕೈಯಲ್ಲೊಂದು ಪ್ರಾಂತ್ಯದ ರಾಜ್ಯಭಾರ ಸೂತ್ರ ಹಿಡಿದವರು-ಈಗೊಂದು ಮೂಗುದಾಣಕ್ಕೆ ಮುಖವೊಡ್ಡಿದ್ದಾರೆ. ಆಗ ರಾಷ್ಟ್ರೀಯ ಕರೆ ಕೇಳಿದ್ದ-ಖರೆ-ಈಗ ವೈಸರಾಯರ ಕರೆ ಕೇಳಿ ಓಡಿದ್ದಾರೆ.

ಸರ್. ಅಶೋಕ್ ಕುಮಾರ್ ರೋಯಿ, (ಕಾನೂನುಖಾತೆ).

ಸತ್ಯಕ್ಕೂ ವೈಸರಾಯರಿಗಿವರ ಪರಿಚಯವಿದ್ದಷ್ಟು ಭಾರತೀಯರಿಗಿಲ್ಲ. ಪ್ರಾಯಶಃ ಇದು ವರೆಗೆ ಅವರ ಜೀವಮಾನದ ಮಹಾ ಸಂಪಾದನೆಗಳು ಮೂರೇ-ಸಂಪತ್ತು, ಸರ್ ಪದವಿ ಮತ್ತು ಈ ಸದಸ್ಯತನ! ಯುರೋಪಿನಿಂದ ಓರ್ವನನ್ನು ತರುವ ಬದಲಿಗೆ ಭಾರತದಿಂದಲೇ ತಮಗಾಗುವವನನ್ನು ಹೆಕ್ಕೋಣವೆಂದು ವೈಸರಾಯರಿಗೆ ತೋರಿತು-ಹೆಕ್ಕಿದರು; ಅಷ್ಟೆ.

ರುಚಿ!! **ಸೆಂಟ್ರಲ್ ಕೆಫೆ** ರುಚಿ!!

ಶ್ರೀನಿವಾಸ ಬಿಲ್ಡಿಂಗ್ಸ್, ಹೆಡ್ ಪೋಸ್ಟಾಫೀಸ್ ಸರ್ಕಲ್, ಶಿವಮೊಗ್ಗ.

ಪ್ರಯಾಣಿಕರಿಗೆ ಉಳಿದುಕೊಳ್ಳಲು ಸ್ಥಳಾನುಕೂಲ ಏರ್ಪಡಿಸಿರುತ್ತೆ.
ಸಕಾಲದಲ್ಲಿ ಉತ್ತಮವಾದ ಊಟ, ಕಾಫಿ ಮತ್ತು ಹಸನಾದ ತುಪ್ಪದಲ್ಲಿ ತಯಾರಿಸಿದ ತಿಂಡಿ ದೊರೆಯುತ್ತೆ.

ಈ ಸ್ಥಳವು ರೈಲ್ವೆಸ್ಟೇಷನ್, ಬಸ್‌ಸ್ಟ್ಯಾಂಡ್, ಕೋರ್ಟುಗಳಿಗೆ ಮಧ್ಯ ಸ್ಥಳದಲ್ಲಿದೆ.

ಎಸ್. ರಾಮದಾಸ್, ಪ್ರೊಪ್ರೈಟರ್.

The Canara Banking Corporation Limited.

(Incorporated in British India with limited Liability)

ESTD: 1906.

Head Office: UDIPI, S. Kanara.

(Branches & Agencies in all principal cities of India)

Authorised capital	Rs. 25.00.000/-
Issued & Subscribed	Rs. 16.00.000/-
Paid up capital	Rs. 10.06.000/-
Reserves	Rs. 3.85.000/-

Advances are made against approved securities and bills purchased or collected at most favourable rates. For further particulars please apply to the nearest Branch.

ಉಡುಪಿ, ಗುರುವಾರ, ೨೬-೮-೧೯೪೩

ಆಪತ್ತಿನ ಅರಿವಿದೆಯೆ?

ಕ್ವಿಬೆಕಿನಲ್ಲಿ ಚರ್ಚಿಲ್-ರುಸವೆಲ್ಟರು ಮುಖ್ಯವಾಗಿ ಯುದ್ಧಗತಿಯ ಕಡೆಗೆ ಲಕ್ಷ್ಯವೀಯುವದು ಸ್ವಾಭಾವಿಕ. ಆದರೆ ಅಲ್ಲಿ ಯುದ್ಧಾನಂತರದ ವ್ಯವಸ್ಥೆಯು ಕಡೆಗಣಿಸಲ್ಪಟ್ಟಿಲ್ಲವೆಂಬುದಕ್ಕೆ ಬ್ರಿಟಿಸಿನ ಮಿ.ಆಂತೋನಿ ಈಡೆನ್, ಅಮೇರಿಕದ ಮಿ. ಕೋರ್ಡೆಲ್ ಹಲ್ಲರು ಕ್ವಿಬೇಕ್ ತೀರ್ಮಾನದೊಡನೆ ರಶ್ಯಕ್ಕೆ ತೆರಳಲು ಸನ್ನದ್ಧರಾಗಿರುವದೇ ದೃಷ್ಟಾಂತ. ಫ್ರೆಂಚ್ ರಾಷ್ಟ್ರೀಯ ಸಮಿತಿಗೆ ಮನ್ನಣೆಯೂ ಅದೇ ಪರಿಷತ್ತಿನಲ್ಲಿ ದೊರೆತಿದೆ. ಮುಂದಿನ ಜರ್ಮನಿ ಹೇಗಿರಬೇಕೆಂಬುದರ ಕುರಿತು ಕ್ವಿಬೆಕಿನಲ್ಲಿ ವಿಚಾರ ವಿನಿಮಯ ನಡೆದಿದೆಯೆಂದೂ, ಈ ಕುರಿತು ರಶ್ಯಾ ಮತ್ತು ಮಿತ್ರ ರಾಷ್ಟ್ರಗಳೊಳಗೆ ಭಿನ್ನಾಭಿಪ್ರಾಯವಿದೆಯೆಂದೂ ವಾರ್ತೆ ಬಂದಿದೆ. ಕ್ವಿಬೆಕ್ ಸಮ್ಮೇಲನಕ್ಕೊಂದು ನಿರ್ಬಂಧವಿಲ್ಲ; ಸೈನಿಕರಿಗಾಗುವ ನಕಾಶೆಯನ್ನಷ್ಟೇ ತಯಾರಿಸಿಕೊಟ್ಟು ಅದು ಚೆದರ ಬೇಕೆಂದಿಲ್ಲ; ಮುಂದಿನ ಜಾಗತಿಕ ವ್ಯವಸ್ಥೆಯ ಕುರಿತೂ ಅಲ್ಲಿ ವಿಚಾರ ನಡೆಯಬಹುದು ಎಂಬುದು ಸ್ಪಷ್ಟ. ಹಿಂದೂ ದೇಶದ ಸಮಸ್ಯೆಯೂ ಚರ್ಚಿಸಲ್ಪಟ್ಟಿರಬಹುದೆ? ಲೂಯಿಫಿಶರ್, ಪರ್ಲ್‌ಬಕ್ಕರಂತಹ ವರ್ಚಸ್ಸುಳ್ಳ ಅಮೇರಿಕದ ಬರೆಹಗಾರರು ಈ ಕುರಿತು ಅಧ್ಯಕ್ಷ ರುಸವೆಲ್ಟರಲ್ಲಿ ಆಗ್ರಹದ ವಿನಂತಿ ಮಾಡಿಕೊಂಡಿದ್ದಾರೆ. ಅಲ್ಲಿಯ ಸಿಖ್ಖರು ಶಿಷ್ಟಮಂಡಲವೊಂದನ್ನೊಯ್ಯಲಿದ್ದಾರೆ. ಇವೆಲ್ಲಾ ಕ್ವಿಬೆಕ್ ಮುಖಂಡರ ಮನವೊಲಿಸುವ ಪ್ರಯತ್ನಗಳು. ಚರ್ಚಿಲ್-ರುಸವೆಲ್ಟರಲ್ಲಿ ಕರಗುವ ಹೃದಯವಿಲ್ಲವೆಂಬುದು ಈ ಮೊದಲೇ ಖಚಿತವಾಗಿದೆ ವಿಜ್ಞಾಪನೆಗಳ ಕಾಲವೀಗ ಕಳೆದಿದೆ. ಆದರೆ ಮಿತ್ರರಾಷ್ಟ್ರೀಯ ಪ್ರಮುಖರ 'ಆದ್ಯ ಕರ್ತವ್ಯಗಳ ಪಟ್ಟಿಯಲ್ಲಿ ಹಿಂದುಸ್ಥಾನದ ಪ್ರಶ್ನೆಯಿದ್ದೇ ಇದೆ ಜಪಾನಿಗೆ ಕೂಡಾ ವಿಶ್ರಾಂತಿ ಕೊಡಬಾರದು; ಆ ಕಡೆಯ ಯುದ್ಧವನ್ನು ಮುಂದುವರಿಸಿಡ ಬಾರದು ಎಂಬುದೂ ಕ್ವಿಬೆಕ್ ಆಂದೋಲನದ ಒಂದು ಅಂಗ. 'ಭಾರತವಿಲ್ಲಿ ನಿಲ್ಲಬೇಕು-ಜಪಾನಿಗೆ ಹೊಡೆಯಬೇಕು'-ಇದೇ ಮಿತ್ರಪ್ರಮುಖರ ಆಖ್ಯಾನಾದ. ಆದರೆ ವಿರೋಧಿಗೆ ಬಿಸಿತಾಗಿಸುವವರು ನಿಲ್ಲುವ ನೆಲವೇ ಸುಡುತ್ತಿರಬಾರದು; ಮಿತ್ರರು ತಮ್ಮ ನಿಲ್ದಾಣವಾದ ಹಿಂದೂದೇಶವನ್ನು ಹೀಗೆ ಕಾವೇರಿಸಿ ನಿಲ್ಲಬಾರದು. ತಾವದನ್ನು ಥಂಡಾ ಗೊಳಿಸಿದ್ದೇವೆ; ಈಗ ಅಲ್ಲಿಯ ಯುದ್ಧಚಾಲಕರ ಅನುಕೂಲತೆಯನ್ನಷ್ಟೇ ಗಮನಿಸಲುಳಿದಿದೆ ಹೊರತು ಅಂತರಿಕ ಅಶಾಂತಿ ಎಂದೋ ಅಂತರ್ಧಾನವಾಗಿದೆ; ಅದರ ಅಂಶವೇನಾದರೂ ಇನ್ನೂ ಉಳಿದಿದೆ ಯಾವರೆ ಅದು ಅಲ್ಲಿಯುವರ ಸಂಕಟವಾಗಿಯೇ ಇದೆ ಹೊರತು ತಮಗೆ ಕಂಟಕವಾಗುವಷ್ಟಿಲ್ಲ ಎಂದು ಕ್ವಿಬೆಕಿನಲ್ಲಿ ಮಿ. ಚರ್ಚಿಲ್ಲರು ಭರವಸೆಯಿಂದಾಡ ಬಹುದು. ಮಿ. ಚರ್ಚಿಲ್ಲರ ಭರವಸೆಗಿಂತ ಭಿನ್ನವಾಗಿ ಭವಿಷ್ಯವು ರೂಪುಗೊಂಡ ದೃಷ್ಟಾಂತಗಳಿವೆ. ಇದೇ ನೀತಿಗೆ ಕಟ್ಟುಬಿದ್ದಲ್ಲಿ ಹಿಂದುಸ್ಥಾನದಲ್ಲಂತೂ ಅನಿರೀಕ್ಷಿತ ಭೀಕರ ಭವಿಷ್ಯವು ಬ್ರಿಟಿಷರನ್ನು ಕಾದಿದೆ ಎಂಬುದು ಖಂಡಿತ. ಮಿ. ಚರ್ಚಿಲ್ಲರು ಹಿಂದುಸ್ಥಾನದ ಅಶಾಂತಿಯನ್ನು ಅಡಗಿಸಿಲ್ಲ. ಅತೃಪ್ತಿಯನ್ನು ಅಭಿವೃದ್ಧಿಗೊಳಿಸಿದ್ದಾರೆ ಆದರೆ ಅದರ ಪ್ರದರ್ಶನದ ಪಥಗಳನ್ನೆಲ್ಲಾ ಜಯಶೀಲವಾಗಿ ತಡೆಗಟ್ಟಿದ್ದಾರೆ-ಇಷ್ಟಸ್ಸೊಪ್ಪಿಕೊಳ್ಳುತ್ತೇವೆ. ಬ್ರಿಟಿಷರ ಮಾತಿನಲ್ಲೇ ಹೇಳುವದಾದರೆ ರೋಗಕ್ಕೆ ಚಿಕಿತ್ಸೆಯಾಗಿದೆ ನಿಜ. ರೋಗದ ಮೂಲೋತ್ಪಾಟನೆಯಾಗಿದೆಯೆ? ಸದ್ಯಕ್ಕೆ ಶಮನವಾಗಿದೆ ಎಂಬ ತೃಪ್ತಿಯೊಂದೇ ಸಾಕೆ? ಈ ತೃಪ್ತಿ ಬಾಳಬೇಕಾದರೆ ಸದ್ಯದ ವಾತಾವರಣವೇ ಚಿರಂಜೀವಿಯಾಗಬೇಕು. ಆದರೆ ಹಾಗಾಗಲು ಮಿತ್ರರೇ ಬಿಡಲಾರರು; ಅವರು ಹಿಂದುಸ್ಥಾನದಿಂದಲೇ ಜಪಾನರನ್ನು ಕೆಣಕಲಿದ್ದಾರೆ. ಅಂತಹ ಸಂದರ್ಭಬರುವಾಗ— ರೋಗಕೆರಳುವ ಹವೆಬೀಸುವಾಗ-ತಮ್ಮ ಔಷಧ, ಯಾ ಶಸ್ತ್ರಕ್ರಿಯೆ ಪರಿಣಾಮಕಾರಿಯು ಬಲ್ಲುದೆಂದು ಬ್ರಿಟಿಷ್ ವೈದ್ಯರಿಗೆ ಭರವಸೆಯಿದೆಯೆ? ಅನುಭವಕ್ಕೆ ಬೆಲೆಯಿದ್ದ ಯಾವನೆ ಈ ಧೈರ್ಯವಿರಕೂಡದು! ಭಾರತೀಯರೊಳಗಿನ ಬಿಕ್ಕಟ್ಟು ಭಾರತೀಯರದೇ ಆಗಿರಲಿ-ಈ ಭಾವೀ ವಿಪತ್ತು ತಮ್ಮ ಪಾಲಿಗೆಂಬುದನ್ನಾದರೂ ಮಿತ್ರ ಪ್ರಮುಖರು ಮರೆಯದಿರಲಿ. ಜರ್ಮನಿಯ ಭಾವೀ ಒಳ ವ್ಯವಸ್ಥೆಗಾಗಿ ಕ್ವಿಬೆಕಿನಲ್ಲಿ ಮಿದುಳು ವ್ಯಯವಾಗುತ್ತಿದೆಯಂತೆ! ಈ ಪರೋಪಕಾರಕ್ಕೆ ಮುಂಚಿತವಾಗಿ ಭಾರತದಲ್ಲಿ ತಮ್ಮ ಭವಿಷ್ಯವನ್ನೇ ಭದ್ರಗೊಳಿಸಿಕೊಳ್ಳುವ ಸ್ವಕಾರ್ಯ ಸಾಧಿಸಿಕೊಳ್ಳಲಿ; ಭಾರತೀಯರನ್ನು ತೃಪ್ತಿಪಡಿಸಲಿ, ಎಂದು ಈ ಸಂದರ್ಭದಲ್ಲಿ ಮತ್ತೊಮ್ಮೆ ಎಚ್ಚರಿಸಬೇಕಾಗಿದೆ

ದುರ್ಬೀನು

ಆತ್ಮಹತ್ಯೆ ಮಾಡಿಕೊಳ್ಳುವವನಾದರೂ ಅತ್ತಿತ್ತ ನೋಡಿಕೊಳ್ಳುತ್ತಾನೆ; ಪ್ರಸನ್ನೊಬ್ಬನ ಕಾರ್ಯವೇ ಆದರೂ ಹಿಂದು ಮುಂದು ನೋಡಿಕೊಳ್ಳಬೇಕು.

oo oo oo

ಅಮಲೇರಿದರೂ ತಲೆತಿರುಗುತ್ತದೆ; ಬಿಸಿಲು ಬಡಿದರೂ ತಲೆತಿರುಗುತ್ತದೆ. ತನ್ನ ತಪ್ಪು-ಅನ್ಯರ ತಪ್ಪೀರು ಎರಡೂ ವ್ಯಥೆಗೀಡುಮಾಡಬಲ್ಲವು.

oo oo oo

ಮನೆ ನಿರ್ಮಲವಿದ್ದರೆ ಅತಿಥಿ ಪ್ರಸನ್ನನಾಗುತ್ತಾನೆ; ಮನಸ್ಸು ನಿರ್ಮಲವಿದ್ದರೆ ಆತ್ಮ ಪ್ರಸನ್ನವಾಗುತ್ತದೆ.

oo oo oo

ಸುಂಕದವನೊಡನೆ ಸುಳ್ಳು ಹೇಳಿ ಫಲವಿಲ್ಲ; ಬಿಂಕದವನೊಡನೆ ಬಿಚ್ಚು ಮಾತಾಡಿ ಫಲವಿಲ್ಲ.

oo oo oo

ಕತ್ತಲೆಯಿದ್ದಷ್ಟು ಕಾಲ ದಿವಾಳೀ ದೀಪವಿರಲಾರದು; ಸಂದರ್ಭಾನುಸಾರದ ಸದುಪದೇಶ ಅಜ್ಞಾನ ನಿವಾರಿಸಲಾರದು.

oo oo oo

ಕಲ್ಲನ್ನು ತಲೆಯ ಮೇಲೆ ಹೊತ್ತುಕೊಂಡರೂ ಕಲ್ಲೆಡವಿದಷ್ಟು ನೋವಿಲ್ಲ; ಅಧಮರ ಘರ್ಷಣೆಗಿಂತ ಆರಾಧನೆ ಸುಖಕರ.

oo oo oo

ನಾಚುವವಳಿಗೆ ನಾಚಿಕೆ? ರಂಕಿಸುವವನಿಗೆ ಶೌರ್ಯವೇಕೆ?

oo oo oo

ಸಾಹೇಬನೊಡನೆ ಸಂಚಾರಕ್ಕೆ ಹೊರಡುವದು ನಾಯಿ ಹೊರತು ಆನೆಯಲ್ಲ. ದೊಡ್ಡ ಮನುಷ್ಯರ ಬೆನ್ನು ಹಿಡಿಯುವವರು ಅಲ್ಪರೇ ಹೊರತು ಅನುಪಮರಲ್ಲ.

oo oo oo

ಮನುಷ್ಯನಿಗೆ ಹಾದಿ ಬಿಟ್ಟುಕೊಡದಿರಬಹುದು; ಮುದುಕನ್ನು ಕೊಡದಿರಲಾದೀತೆ? ಸುಜ್ಞಾನಿಯೊಡನೆ ತೆರವು ಕೊಡದೆ ನಾದಿಸ ಬಹುದು; ಅಜ್ಞಾನಿಯೊಡನೆಯೂ ಹಾಗಾದೀತೆ?

oo oo oo

ನರ್ತನ ಮತ್ತು ವರ್ತನೆ-ವಕ್ರವಿದ್ದರಾಗದು.

Degrees: Books: Medicines

Free B. L. M. S. M. B. H. M. D, etc. Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp:—

Principal Indian Homeopathi Institute & Society (Govt. Regd)
P.O. MAHUVA (Kathiawar Dt. India.)

Sidha-Kalpa Kavach (Regd.)
No. 3 Rs. 2. No. 2 Rs. " No. 1 Rs. 7. Special Rs. 10, Extra Special Rs. 17 for ove marriage health, wealth. Ask any six questions with M. O. Re. 1/- and get correct answers by returnpost Life reading Rs.10 No V.P.P.SendM.O.Free. pamplets

Prof Dr. N. H Chhatbar.
P. O. MAHUVA (Kathiawar India.)

CHAMPAE'S
SNOW & CASTREX
AGENTS.
SADANANDA STORES UDIPI

ಉಡುಪಿ

ಹಿರಿಯಡ್ಕ, ಕಟಪಾಡಿ ಮತ್ತು ಮೂಡಬಿದ್ರಿ ಸರ್ಕಲುಗಳ ಜಿಲ್ಲಾಬೋರ್ಡು ಉಪಚುನಾವಣೆಯು ತಾ. 18-10-43ಕ್ಕೆ ನಡೆಯಲಿರುವುದೆಂದೂ ತಾ. 15-9-43ಕ್ಕೆ ನೊಮಿನೇಶನ್ ಪತ್ರಗಳನ್ನು ಸ್ವೀಕರಿಸಲಾಗುವುದೆಂದೂ ಜಿಲ್ಲಾ ಪಂಚಾಯತ ಆಫೀಸರರು ತಿಳಿಸುತ್ತಾರೆ.

ಇನ್ನಂಜೆ ಬಂಟರಯಾನೆ ವಿದ್ಯಾರ್ಥಿ ಭವನದ ಕಟ್ಟಡದ ಬಗ್ಗೆ ಸಂಗ್ರಹವಾದ ಧನಸಹಾಯ.

ಶ್ರೀ ಉಳಿಯಾರಗೋಳಿ ಸೂರ್ಯಣ್ಣ ಸೆಟ್ರು ರೂ. 1000 ಶ್ರೀ ಕಟಪಾಡಿ ಶೀತಾರಾಮ ಶೋರೆಬಲ್ಲಾಳರು ರೂ. 80. ಶ್ರೀ ಕುರುಕಾಲು ಗಣಪಯ್ಯ ಸೆಟ್ರು ರೂ. 25. ಶ್ರೀ ಇನ್ನಲೋಕು ಸೆಟ್ರು ರೂ. 17 ಶ್ರೀ ಎ. ಶಾಮರಾವ್ H. M ಹೈಸ್ಕೂಲ್ ರೂ. 16. ಶ್ರೀ ಇನ್ನಂಜೆ ನಾರಾಯಣ ಆಚಾರ್ಯರು ರೂ. 15. ಶ್ರೀ ಇನ್ನಂಜೆ ಪಟೇಲ್ ದೇಜಪ್ಪ ಸೆಟ್ರು ರೂ. 15, ಶ್ರೀ ಮಡುಂಬು ಲೋಕು ಸೆಟ್ರು ರೂ. 15 ಶ್ರೀ ಮಡುಂಬು ದೇಜಪ್ಪ ಸೆಟ್ರು ರೂ. 15 ಶ್ರೀ ಪೊದನಾಲೆ ದೇಜಪ್ಪ ಸೆಟ್ರು ರೂ. 15. ಶ್ರೀ ಇನ್ನಂಜೆ ಹಿರಿಯಣ್ಣ ಸೆಟ್ರು ರೂ. 10. ಶ್ರೀ ಕಟಪಾಡಿ ನಾರಾಯಣ ಸೆಟ್ರು. ರೂ 10 ಶ್ರೀ ಕಟಪಾಡಿ ಆಣ್ಣಯ್ಯ ಸೆಟ್ರು ರೂ. 10, ಶ್ರೀ ಕನ್ಯಾನ ಶಾಮ ಸೆಟ್ರು ರೂ. 10. ಶ್ರೀ ಮಡುಂಬು ಶೀನ ಸೆಟ್ರು ರೂ. 10. ಶ್ರೀ ಇನ್ನಂಜೆ ರಾಮ ಸೆಟ್ರು ರೂ 10. ಶ್ರೀ ಇನ್ನಂಜೆ ಕೃಷ್ಣಯ್ಯ ಸೆಟ್ರು ರೂ. 8. ಶ್ರೀ ಟಿ. ರಾಮರಾಯ ಸೆಟ್ರು ರೂ. 5. ಶ್ರೀ ಇನ್ನಂಜೆ ಶ್ರೀನಿವಾಸ ಶಾನುಭಾಗರು ರೂ. 5 ಶ್ರೀ ಪಾಂಗಾಳ ನಾರಾಯಣ ಸೆಟ್ರು ರೂ. 5. ಶ್ರೀ ಮೂಡಬೆಟ್ಟು ದೇಜಪ್ಪ ಸೆಟ್ರು ರೂ 5. ಶ್ರೀ ಪಾಂಗಾಳ ಗುಂಡು ಸೆಟ್ರು ರೂ 5. ಶ್ರೀ ಎರ್ಮಾಳು ಕನ್ಯನ ಸೂರು ಸೆಟ್ರು ರೂ. 5. ಶ್ರೀ ಪಾದೂರು ಕೆ. ವೆಂಕ್ಕಯ್ಯ ಸೆಟ್ರು ರೂ. 4 ಶ್ರೀ ಕುರುಕಾಲು ಮೇಸ್ತ್ರಿ ಚೆನ್ನ ಸೆಟ್ರು ರೂ. 2. ಶ್ರೀ ಕಟಪಾಡಿ ಸಂಜೀವ ಸೆಟ್ರು ರೂ 2. ಶ್ರೀ ಕಟಪಾಡಿ ವಿಟ್ಠಲ ಸೆಟ್ರು ರೂ 2 ಶ್ರೀ ಕುರುಕಾಲು ಅನಂತರಾಮ ಭಟ್ರು ರೂ. 2. ಶ್ರೀ ಬೆಳಿಯಾರ ಸುಬ್ಬು ಸೆಟ್ರು ರೂ. 2. ಶ್ರೀ ಉಂಡಾರು ನಾರಾಯಣ ಭಟ್ರು ರೂ. 1. ಶ್ರೀ ಯೇಣಗುಡ್ಡೆ ಶ್ರೀನಿವಾಸ ಭಟ್ರು ರೂ. 1. ಶ್ರೀ ಪಾಂಗಾಳ ಜಾಣು ಸೆಟ್ರು ರೂ 1. ಜುಮ್ಲಾ ರೂ.1328 ಈ ಪೈಕಿ ವಸೂಲಾದ ರೂಪಾಯಿ- 59

NOTICE.

In the Court of the District Munsiff of Mangalore.

R. E. P. No. 212 of 1943.

Between
Hanumantha Kamath — Petitioner.
and
B. Srinivasa. —Respondent.

To Respondent B. Srinivasa son of Thimmappa residing in Bolar Mangalore Town.

Whereas in the above named suit petitioner the decree-holder has applied for the sale of immoveable property, you are hereby informed that the 7th day of September 1943 has been fixed for settling the terms of proclamation of sale

(By order of Court),

Mangalore, 23rd August '43. U M Mallya. Vakil for Petitioner

ಸುದ್ದಿ ಸೂಚನೆ

○ ಕ್ವಿಬೆಕ್ ಪರಿಷತ್ತು ಮುಗಿಯುತ್ತ ಬಂದಿದೆ. ಕೊನೆಯ ನಿರ್ಧಾರದ ಪ್ರಕಟನೆ ಹೊರಟಿಲ್ಲ ಮಿ. ಈಡೆನರೂ ಮಿ ಹಲ್ಲರೂ ಆದರಲ್ಲಿ ಭಾಗವಹಿಸಿದ್ದರು.

○ ರಶ್ಯನರು ತ್ರಿರಾಷ್ಟ್ರ ಪರಿಷತ್ತಿನ ಆಸೆ ಪ್ರಕಟಿಸಿರುವುದರಿಂದ ಕ್ವಿಬೆಕ್ ಪರಿಷತ್ತಿನಿಂದ ಅವರು ತೃಪ್ತಿಗೊಂಡಿಲ್ಲವೆಂಬ ಊಹೆಯಿದೆ.

● ರಶ್ಯಾದಲ್ಲಿ ಜರ್ಮನರು ಕಾರ್ಕೊವನ್ನು ಖಾಲಿಮಾಡಿ ಹಿಂದೆ ಸರಿದಿದ್ದಾರೆ. ಇದು ರಶ್ಯನರಿಗಾದ ಗಣನೀಯ ವಿಜಯ.

○ ಅಮೇರಿಕದಲ್ಲಿ ರಶ್ಯನ್ ರಾಯಭಾರಿಯಾಗಿದ್ದ ಎಮ್ ಲಿಟ್ವಿನೋಫರನ್ನು ಹಿಂದೆ ಕರೆಸಿಕೊಳ್ಳಲಾಗಿದೆ.

○ ಇಟಲಿಯ ಮೇಲೆಲ್ಲಾ ಅತಿ ಪ್ರಬಲ ಧಾಳಿಯಾರಂಭಿಸಿದ್ದಾರೆ.

○ ಸಿಸಿಲಿಯನ್ನು ಕೈವಶಮಾಡಿದಲ್ಲೇ ಆಕ್ಸಿಸ್ ಸೇನೆಗಳು ಖಾಲಿಮಾಡಿದ್ದರಿಂದ, ಯುದ್ಧದ ಒಂದಂಶವು ಜಯಶೀಲವಾಗಿ ಮುಗಿದಿದೆ. ಸಿಸಿಲಿಯಲ್ಲಿ ಮಿತ್ರರ ಎರಡು ಪಾಲಷ್ಟು ವೈರಿಗಳಿಗೆ ಸೇನೋಪಕರಣಗಳ ಹಾನಿಯಾಗಿತ್ತು.

○ ಸ್ಪೈನಿನ ಫ್ರಾಂಕೋ ಮತ್ತು ಬ್ರಿಟನ್ ರಾಯಭಾರಿ ಸರ್. ಸಾಮುವೇಲ್ ಹೋರರು ದೀರ್ಘ ಮಾತುಕತೆ ನಡೆಸಿದರು. ಮಿತ್ರರು ಸಹಾಯ ಕೊಟ್ಟಲ್ಲಿ ಆಕ್ಸಿಸ್ ಸಂಬಂಧವನ್ನು ಕಡಿದುಕೊಳ್ಳಲು ಫ್ರಾಂಕೋ ತಯಾರಿರುವಂತಿದೆ.

● ಜಾಪಾನರ ಕಿಸ್ಕಾ ದ್ವೀಪವನ್ನು ಅಮೇರಿಕ ಮತ್ತು ಕೆನಡಾ ಸೇನೆಗಳು ಆಕ್ರಮಿಸಿ ಕೊಂಡಿವೆ; ಜಾಪಾನರು ಪ್ರತಿಭಟನೆ ಕೊಡದೆ ಪರಾರಿಯಾಗಿದ್ದಾರೆ.

○ ಜರ್ಮನಿಯ ಗುಪ್ತಾಸ್ತ್ರಗಳ ಜನಕ [illegible] ಆಕಸ್ಮಿಕ ಮರಣ ಹೊಂದಿದ್ದಾನೆ ವಿಚಾರಣೆ ನಡೆದಿದೆ.

○ ಜರ್ಮನಿಯಲ್ಲಿ ನಿರಾಶೆ, ಗೊಂದಲವೆದ್ದ [illegible] ವಾರ್ತೆಗಳು ಬರುತ್ತಿವೆ.

○ ಬೊಡೋಗ್ಲಿಯೋ ಶರಣಾಗುವ ನಿರ್ಧಾರ ಮಾಡಿದ್ದಾನೆಂದೂ ಆದರದು ಪ್ರಕಟವಾಗಿಲ್ಲವೆಂದೂ ವಾರ್ತೆ

● ಈ ತಿಂಗಳಾಂತ್ಯದಿಂದ ಮದ್ರಾಸ್ ನಗರದಲ್ಲಿ ಅಕ್ಕಿ ರೇಶನಿಂಗ್ ಪ್ರಾರಂಭವಾಗಿದೆ. ಪ್ರಾಂತ್ಯದ ಇತರ ಮುಖ್ಯ ನಗರಗಳಲ್ಲೂ ಇದು ಪ್ರಾರಂಭವಾಗುವದು

● ಬಂಗಾಳದಲ್ಲಿ ಹೊಟ್ಟೆಗಿಲ್ಲದೆ ಸಾಯುವವರ ಸಂಖ್ಯೆ ದಿನದಿನಕ್ಕೆ ಬೆಳೆಯುತ್ತಿದೆ;

○ ಆಸ್ಟ್ರೇಲಿಯದಲ್ಲಿ ಈ ಬಾರಿಯ ಚುನಾವಣೆಯಲ್ಲಿ ಸರಕಾರೀ ಪಕ್ಷವಾದ ಲೇಬರ್ ಪಕ್ಷವೇ ಮೂರರಲ್ಲೆರಡು ಪಾಲಷ್ಟು ಬಹುಮತ ಸಂಪಾದಿಸಿದೆ.

○ ವೈಸರಾಯರು ಮದ್ರಾಸ್, ಬೆಂಗಳೂರುಗಳಲ್ಲಿ ಸಂಚರಿಸಿ ಈಗ ಕೊಚ್ಚಿಗೆ ಹೋಗಿದ್ದಾರೆ.

○ ಶ್ರೀಮತಿ ಕಮಲಾದೇವಿಯವರು ಅನಾರೋಗ್ಯದ ನಿಮಿತ್ತ ಒಂದು ತಿಂಗಳ ಎ.ಟ್ಟಿಗೆ ಜಾಮೀನಿನ ಮೇಲೆ ಬಿಡಲ್ಪಟ್ಟು ಬೊಂಬಾಯಿಗೆ ಹೋಗಿದ್ದಾರೆ.

○ ಆಗಾಖಾನ ಅರಮನೆಯಲ್ಲಿ ಕಾಂಗ್ರೆಸ್ ವರ್ಕಿಂಗ್ ಸಮಿತಿ ಸದಸ್ಯರನ್ನು ಒಟ್ಟುಗೂಡಿಸಲಾಯಿತೆಂದೂ ಗಾಂಧಿಯವರು ತನ್ನ ನಿರ್ಧಾರವನ್ನು ಹಿಂದೆಗೆದುಕೊಳ್ಳಲೊಪ್ಪಲಿಲ್ಲವೆಂದೂ ವಾರ್ತೆ ಪ್ರಕಟವಾಗಿತ್ತು. ಅದೀಗ ಸುಳ್ಳೆಂದು ತಿಳಿದು ಬಂದಿದೆ

○ ಕಾಂಗ್ರೆಸು ಪುನಃ ಅಧಿಕಾರಕ್ಕೆ ಬರಬೇಕೆಂದು ಶ್ರೀ ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳ ಅಭಿಪ್ರಾಯ.

○ ದಕ್ಷಿಣ ಆಫ್ರಿಕದ ಹಿಂದೀ ವಿರುದ್ಧ ಮಸೂದೆಗೆ ಪ್ರತೀಕಾರ ಮಾಡಬೇಕೆಂದು ನಿರ್ಧರಿಸಿದ ಹಿಂದೀ ಸರಕಾರದ ಧೋರಣೆಯ ಕುರಿತು ದಕ್ಷಿಣಾಫ್ರಿಕದ ಬಿಳಿಯರು ಬೆದರಿಕೆ ಹಾಕಿದ್ದಾರೆ.

○ ಕಲ್ಕತ್ತೆಯಲ್ಲಿ ಆಹಾರವಿಲ್ಲದೆ ರಸ್ತೆಯಲ್ಲಿ ಬಿದ್ದ ಹೆಣಗಳ ಸಂಖ್ಯೆ ಐದೇ ದಿನಗಳಲ್ಲಿ 120.

○ ಫಿನ್ಲೇಂಡು ರಶ್ಯದೊಡನೆ ಪ್ರತ್ಯೇಕ ಸಂಧಾನಮಾಡಿಕೊಳ್ಳುವ ಆತುರದಿಂದಿದೆಯಂತೆ.

○ ಭಾರತೀಯ ಗಡಿನಾಡಿನ ಎಸೆಂಬ್ಲಿಯ ಬಜೆಟ್ ಅಧಿವೇಶನ ನಡೆಯಿತು. ನಿರ್ಬಂಧದಲ್ಲಿರುವ ತಮ್ಮ ಪಕ್ಷದ 10 ಮಂದಿ ಸದಸ್ಯರನ್ನು ಎಸೆಂಬ್ಲಿಯಲ್ಲಿ ಹಾಜರಿರುವಂತೆ ತಾತ್ಕಾಲಿಕ ಬಿಡುಗಡೆ ಮಾಡಬೇಕೆಂದು ಖಾನ್ ಸಾಹೇಬರು ಗವರ್ನರರನ್ನು ಕೇಳಿ ನಿರಾಶೆಗೊಂಡುದರಿಂದ ಕಾಂಗ್ರೆಸ್ ಪಕ್ಷೀಯರು ಅಧಿವೇಶನಕ್ಕೆ ಹಾಜರಾಗಲಿಲ್ಲ.

○ ಹೊಲ್ಲೇಂಡಿನಲ್ಲಿರುವ ಜರ್ಮನ್ ವಿಮಾನ ನಿಲ್ದಾಣಗಳು, ಫ್ರಾನ್ಸ್, ಜರ್ಮನಿ, ಇಟಲಿ ಮೊದಲಾದ ನಾಜೀ ಕೇಂದ್ರ ನೆಲೆಗಳು ಮತ್ತು ಬರ್ಲಿನದ ಮೇಲೆ ಬಲವಾದ ಆಕಾಶ ಧಾಳಿ ನಡೆಸಲಾಗಿದೆ.

○ ವಸ್ತ್ರ ಮತ್ತು ನೂಲಿನ ಧಾರಣೆ ನಿಯಂತ್ರಿಸಿ ಹಿಂದೀ ಸರಕಾರವೊಂದು ಪ್ರಕಟಣೆ ಹೊರಡಿಸಿದೆ.

● ಹಿಂದೀ ಸಮಸ್ಯೆಯನ್ನು ಕೂಡಲೇ ಬಿಡಿಸತಕ್ಕದ್ದೆಂದು ಕೇಳಿಕೊಳ್ಳುವ ಸಭೆಗಳು ಲಂಡನಿನಲ್ಲಿ ನಡೆಯುತ್ತಿವೆ.

ಮೂಲ್ಕಿ ಸ್ಕೀಮು ಶ್ರೀ ಎಮ್. ಆರ್. ಪೂಂಜರ ನೇತೃತ್ವದಲ್ಲಿ ಸ್ಥಾಪಿತವಾದ ಕಮಿಟಿಯು ಕಡಿಮೆ ಬೆಲೆಯಲ್ಲಿ ಅಕ್ಕಿ ಮಾರಾಟದ ಯೋಜನೆಯನ್ನಿರಿಸಿ ರೇಶನಿಂಗ್ ಅಕ್ಕಿ ನಿಶ್ಚಯಿಸಿರುವ ಧಾರಣೆಯಲ್ಲಿಯೂ ಇತರ ಅಕ್ಕಿ ಸೇರು 1ರ ಮಾರ್ಕೆಟು ಧಾರಣೆಗೆ 0-0-4 ಕಡಿಮೆಯಲ್ಲಿಯೂ ತಾ 1-8-43ರಿಂದ ಮಾರಲ್ಪಡುತ್ತಿದೆ 15 ಗ್ರಾಮಗಳಲ್ಲಿ, ಇದ. 1180 ರೇಶನ್ ಕಾರ್ಡು ಕೊಡಲ್ಪಟ್ಟಿವೆ. ಇದು ಮೂಲ್ಕಿ ಕೋಓಪರೇಟಿವ್ ಸ್ಟೋರ್ಸಿನ 3 ಶಾಖೆಗಳ ಮೂಲಕ ನಡೆಯುತ್ತಿದೆ ದಿವಸ ಒಂದರ ಸುಮಾರು 17 ಮುಡಿ ರೇಶನಿಂಗ್, 33 ಮುಡಿ ಇತರ ಅಕ್ಕಿ ಕಾರ್ಡು ಪಡೆದವರಿಗೆ ಬೇಕಾಗುವದು. ಈಗ 12, 14 ಮುಡಿಯಂತೆ ದಿನಂಪ್ರತಿ ಖರ್ಚಾಗುತ್ತಿದೆ ಇದು ಬೇಗನೆ ಕಾರ್ಡು ಪ್ರಕಾರದ ಸಂಖ್ಯೆಗೆ ಏರಲಿದೆ. ಬೆಳೆ ಕೊಯಿದ ವರೆಗೆ ತಾ 15-10-43ರ ತನಕ ಇದನ್ನು ನಡೆಯಿಸಬೇಕೆಂದು ಕಮಿಟಿಯು ಆತುರವಿದೆ. ಬೇಕಾದ ರೇಶನಿಂಗ್ ಅಕ್ಕಿಯನ್ನು ಕೊಡುವುದು ಜಿಲ್ಲಾ ಅಧಿಕಾರಿ ವ ಆದನ್ನು ಕೊಡಲ್ಪಡುವ ಮಂಗಳೂರು ಹೋಲ್‌ಸೇಲ್ ಸ್ಟೋರಿಗೆ ಸೇರಿದೆ. ಮೂಲ್ಕಿ ವ ಅಸ್ಸಾಮಿನಲ್ಲಿ 2000ಕ್ಕೆ ಮೇಲ್ಪಟ್ಟು ಅಕ್ಕಿ ರೇಶನಿಂಗ್ ಆಗಿಯದೆ ಸ್ಟೋರ್ಸಿನ ನಿರ್ಣಯ ಪ್ರಕಾರ 1000 ಮುಡಿ ಸ್ಥಳೀಕ ಪ್ರಯೋಜನಕ್ಕೆ ಬಿಟ್ಟುಕೊಡಬೇಕಾಗಿಯದೆ. ಇದು ಪೂರ್ಣವಾಗಿ ಸಿಕ್ಕಿದರೆ ಸ್ಕೀಮು ಪ್ರಕಾರ ತಾರೀಕು 15-10-43ರ ತನಕ ಅಕ್ಕಿ ಕೊಡಬಹುದು. ಅದನ್ನು ಅಧಿಕಾರಿಗಳೂ ಮಂಗಳೂರು ಸ್ಟೋರ್ಸಿನವರೂ ಕೊಡುವರೆಂಬ ಭರವಸ ಇದೆ. ಈ ಕೆಳಗಿನ ಸಹಾಯ ಕೊಟ್ಟವರಿಗೆ ಕಮಿಟಿಯ ವಂದನೆಗಳು ಅನ್ಯ:- ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯರು 100-0-0 ಶ್ರೀ ಎ. ತಿಮ್ಮಪ್ಪ ಪೂಂಜರು 100-0-0, ಶ್ರೀ ಲೆಫ್ಟಿನೆಂಟ್ ಎಂ. ರಮೇಶ ಪೂಂಜರ ಪೂಂಜರ ಹೆಸರಿನಲ್ಲಿ ಶ್ರೀ ಎಮ್. ಆರ್ ಪೂಂಜರು 100-0-0, ಶ್ರೀ ಮೂಲ್ಕಿ ಕೋಓಪರೇಟಿವ್ ಸ್ಟೋರ್ಸ್ (ಕಂಟ್ರಿಬ್ಯೂಶನ್ ಫಂಡಿನಿಂದ) 90-0-0, ಶ್ರೀ ಎಕ್ಸೆಮ್‌ಶನ್ ರೈಮಂಡ್ ಅರಂಜ 50-0-0, ಶ್ರೀ ಬಿಲ್ಲವ ಸಮಾಜ 30-0-0 ಪಡುಪಣಂಬೂರು ಸಹಕಾರ ಸೊಸೈಟಿ 26-0-0 ಶ್ರೀ ಡಾಕ್ಟರ್ ಮಂಜುನಾಥ ರೈ ಮದ್ರಾಸು 25-4-0, ಶ್ರೀ ಕಾರ್ನಾಡು ಇಗರ್ಜಿ ವಿಕಾರ್ (ಪ್ರಥಮ ಕಂತು) 25-0-0 ಶ್ರೀ ಕಿನ್ನಿಗೋಳಿ ಸಾಹುಕಾರ್ ಶ್ಯಾಮಣ್ಣ ಶೆಟ್ಟಿ 10-0-0, ಹಳೆಯಂಗಡಿ ಸಹಕಾರ ಸೊಸೈಟಿ (ಪ್ರಥಮ ಕಂತು) 5-0-0, ಜುಮ್ಲಾ ರೂ 561-4-0, ಇನ್ನು ಶ್ರೀ ಎಂ ಕೆ. ಬಸಪ್ಪನವರಿಂದ ರೂ 50-0-0 ಶ್ರೀ ಪದ್ಮನಾಭ ಭಟ್ಟರಿಂದ ರೂ 5-0-0ರ ವಾಗ್ದಾನವಿದೆ ರೂ 1500-0-0ಕ್ಕೆ ಮೇಲ್ಪಟ್ಟು ಧನ ಸಂಗ್ರಹವು ಬೇಕಾದುದರಿಂದ ಉದಾರಿಗಳೂ ವ ಸಂಸ್ಥೆಗಳು ಬೇಗನೆ ಯುಕ್ತ ಸಹಾಯವನ್ನು ಕೊಡುವರಾಗಿ ನಂಬುತ್ತೇವೆ ಎಂದು ಕಮಿಟಿಯ ಕಾರ್ಯದರ್ಶಿ ಶ್ರೀ. ಎಮ್. ಆರ್. ಪೂಂಜರ ವಿನಂತಿಯಿದೆ.

The Canara Industrial & Banking Syndicate, Ltd.,

Head Office. UDIPI.

Interim Dividend for the half year ending 30-6-'43.

The Directors have authorised me to announce that an interim dividend of 10% and bonus of 10% per annum free of Income-tax on the Ordinary Shares of the Syndicate and an interim dividend of 10% per annum on Deferred Shares, free of income-tax have been declared payable to Share-holders on the books of the Company as at 31st August, 1943.

The transfer Books of the Company will be closed from 28th August, 1943 to 5th September, 1943, both days inclusive.

Claims on behalf of holders of shares on blank transfers will not be entertained.

By order of the Board,
T. M. A. Pai,
CHAIRMAN

Udipi.
20th August, '43.

THE VIJAYA BANK, LIMITED.

Beg to announce that a Branch of the Bank will be opened at KASARAGOD shortly.

26—8—43ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ನಟವರ್ಗದಲ್ಲೊಂದು ನವೀನತೆಯ

ಝುಂಕಾರ್ (ಸಿಲ್ವರ್ ಫಿಲ್ಮ್)

ಚಂದ್ರಮೋಹನ್, ಗೋಪ್, ಪ್ರಮಿಳಾ, ಅಜೂರಿ, ಕುಮಾರ್ ಮೊದಲಾದವರು.

ಬರುವ ಚಿತ್ರ: ಸುಪರ್‌ಸವರ ಕನ್ಯಾದಾನ್.

WANTED

A S. S. L. C. trained teacher for St. Sebastians H. E. School, Bendur.

Apply to:—

The Manager,
Through the Deputy I. Schools
Mangalore Range,
Father M. Pinto,
Correspondent.

ದಕ್ಷಿಣ ಕನ್ನಡ.

ಮಂಗಳೂರು.

ಅಭ್ಯಾಸ ಗೋಷ್ಠಿ—ಮಿತ್ರ ಮಂಡಳಿಯ ಆಶ್ರಯದಲ್ಲಿ ಪ್ರತಿ ರವಿವಾರ ಸಂಜೆ ಸಾಹಿತ್ಯ ಅಭ್ಯಾಸಗೋಷ್ಠಿ ಕಾರ್ಯಕ್ರಮವನ್ನೇರ್ಪಡಿಸಿದ್ದು ಅದರ ಪ್ರಾರಂಭದ ಅಭ್ಯಾಸಗೋಷ್ಠಿಯು ೧೫ರಂದು ಥಿಯಾಸಾಫಿಕಲ್ ಲಾಜನಲ್ಲಿ ಶ್ರೀ. ಮುಳಿಯ ತಿಮ್ಮಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. 'ಪಾ.ವ.ನ' ವಿರಚಿತ 'ಮುಂದೆಮುರಲಿ' ಎಂಬ ಕವನ ಪುಸ್ತಕದ ವಿಮರ್ಶೆ ನಡೆಯಿತು.

ನಗರಸಭೆ—ನಗರ ಸಭೆಯ ಸಾಮಾನ್ಯ ಸಭೆಯೊಂದು ತಾ. ೧೭ರಂದು ಸಂಜೆ ಜನಾಬ್ ಹುಸೇನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಸಮಾರಂಭದಲ್ಲಿ ಈಗಿನ ಹೆಲ್ತ್ ಆಫೀಸರರಾದ ಶ್ರೀ| ಬಿ. ಸ.ಬ್ರಾಯ ಬಾಳಿಗರು ನಗರದಲ್ಲಿ ಕೊಲೆರಾ ರೋಗದ ಚಿಹ್ನೆಗಳು ಕಂಡುಬಂದುದನ್ನು ತಿಳಿಸಿ ಸಹಾಯ ಯಾಚಿಸಿದರು. ಕೇಂದ್ರ ಮೈದಾನದಲ್ಲಿ 'ಹಾಕಿ' ಆಡಲು ಅನುಕೂಲ ಸ್ಥಳದ ಏರ್ಪಾಡಿಗೆ ರೂ. ೭೦೦ನ್ನು ಕೊಡುವ ನಿರ್ಧಾರವಾಯಿತು. ತನ್ನ ಒಂದು ಅನಾಥಾಶ್ರಮಕ್ಕಾಗಿ ಧನ ಸಹಾಯ ಕೊಡಬೇಕೆಂದು ಹಿಂದೂ ಸೇವಾ ಸಂಘವು ಮಾಡಿಕೊಂಡಿದ್ದ ವಿನಂತಿಯನ್ನು ಸಭೆಯು ಪರಿಶೀಲಿಸಿ, 'ಮುಂದಿನ ವರ್ಷದ ಬಜೆಟಿನಲ್ಲಿ ಆ ಕುರಿತು ವ್ಯವಸ್ಥೆ ಮಾಡಲಾಗುವುದು' ಎಂದು ತಿಳಿಸಲು ನಿಶ್ಚೈಸಿತು.

ಕೊಲೆರಾಕ್ಕೆ ಬಲಿ— ಮಂಗಳೂರಲ್ಲಿ ಕೊಲೆರಾ ಆರಂಭವಾಗಿದೆ. ಕಳೆದ ವಾರ ನಗರದಲ್ಲಿ ಕೊಲೆರಾ ರೋಗಕ್ಕೆ ತುತ್ತಾದವರ ಸಂಖ್ಯೆ ೧೫ನ್ನು ಮೀರಿದೆ.

ಕ್ರಯದ ನಿರ್ಣಯ— ತಾ. ೧೬ರಂದು ಕೆನರಾ ಚೇಂಬರ್ ಆಫ್ ಕಾಮರ್ಸ್ ಕಟ್ಟಡದಲ್ಲಿ ಶ್ರೀ ನಾಗಪ್ಪ ನಾಯಕರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ ನಗರದ ಕೆಲ ಪ್ರಧಾನ ಅಕ್ಕಿ ವ್ಯಾಪಾರಿಗಳು, ತಾವು ಕೊಂಡುಕೊಳ್ಳುವ ಮತ್ತು ಮಾರುವ ಅಕ್ಕಿಯ ಬೆಲೆಗೆ ತಾವೇ ಒಂದು ಮಿತಿಯನ್ನು ಕಲ್ಪಿಸಿರುವರು. ಒಂದನೆ ತರಗತಿಯ ಗುಡ್ಡೆ, ಸುಗ್ಗಿ, ರಾಶಿ ಅಕ್ಕಿಯನ್ನು ಕೊಂಡುಕೊಳ್ಳುವ ಕ್ರಯ ಮುಡಿಗೆ ರೂ. ೧೪; ಮೇಲಿನ ತರಗತಿಯಲ್ಲದ ಸ್ಥಳೀಯ ಅಕ್ಕಿ ರೂ. ೧೩||; ಬುಲ್ಲಿನ ಎಲ್ಲಾ ರೀತಿಯ ಅಕ್ಕಿ ರೂ. ೧೩|| ಸಿಂಗಲ್ ಪಾಲಿಶ್ಡ್ ಅಕ್ಕಿ ರೂ. ೧೪||; ಮಾರಾಟ ಮಾಡುವ ಕ್ರಯ ಪ್ರತಿಯೊಂದರಲ್ಲೂ ನಾಲ್ಕಾಣೆ ಹೆಚ್ಚು.

ವಿದ್ಯಾರ್ಥಿಗಳ ಸಭೆಯೊಂದು ತಾ. ೧೮ರಂದು ಸಂಜೆ ಶ್ರೀ| ರಘುನಾಥಯ್ಯ ಸ್ಮಾರಕ ಭವನದಲ್ಲಿ ಜರಗಿತು. ಕಳೆದ ವರ್ಷ ಮಂಗಳೂರು ವಿದ್ಯಾರ್ಥಿ ಸಂಘವನ್ನು ಬಿಟ್ಟು ಬೇರೆಯಾಗಿಯೇ ಯೂನಿಯನ್ ಸ್ಥಾಪಿಸಿದವರ ಸಭೆಯಿದು. ವಿ. ಥಾಮಸ್ ಕುಂಞಾರು ಅಧ್ಯಕ್ಷತೆ ವಹಿಸಿದ್ದರು. ಶ್ರೀ| ಸುಬ್ಬಯ್ಯ ಶೆಟ್ಟರು ವಾರ್ಷಿಕ ಲೆಕ್ಕಪತ್ರಗಳನ್ನೊಪ್ಪಿಸಿದರು. ಹೊಸ ವರ್ಷದ ಕಾರ್ಯಕಾರಿ ಸಮಿತಿಯ ಆಯ್ಕೆಯು 'ಕಾರ್ಡು ಸೂಚನೆ'ಯ ಮೂಲಕ ನಡೆಯಿತು.

ಗುರುದೇವರ ಸ್ಮರಣೆ— ತಾ. ೧೫ರಂದು ಟಾಗೋರ್ ದಿನವು ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಆಚರಿಸಲ್ಪಟ್ಟಿತು. ಶ್ರೀ ಬೆನಗಲ್ ಸಂಜೀವ ರಾಯರು ಗುರುದೇವರ ಜೀವನದ ಕುರಿತು ಭಾಷಣವಿತ್ತರು. ಶ್ರೀ| ಪಿ ಕೆ. ನಾರಾಯಣ ಅವರು ಗುರುದೇವರ ಕುರಿತು ವಾಚನಮಾಡಿದರು.

ಜಿಲ್ಲಾ ಕಲೆಕ್ಟರರ ಪ್ರಕಟಣೆ

ದ. ಕ. ಜಿಲ್ಲೆಯಿಂದ ಮೀನನ್ನು ಬೆಲ್ಲಿಯ ಜೊತೆಗೆ ಯಾವ ಕಡೆಗೂ ರಫ್ತು ಮಾಡುವುದನ್ನು ನಿಷೇಧಿಸಲಾಗಿಯದೆ. ಈ ಕಾನೂನನ್ನು ಉಲ್ಲಂಘಿಸುವವರಿಗೆ ಡಿಫೆನ್ಸ್ ಒಫ್ ಇಂಡಿಯಾ ಕಾನೂನು ಅನ್ವಯಿಸಲಾಗುವುದು. ಕಳ್ಳಾಟಿಕೆಯಿಂದ ಕೊಂಡುಹೋಗುವದನ್ನು ಪರಿಶೀಲಿಸುವರೆ ಫಿಶರೀ ರೆವಿನ್ಯೂ ಇನ್ಸ್‌ಪೆಕ್ಟರ್ ಮತ್ತು ಅವರ ಮೇಲಿನ ತರಗತಿಯ ರೆವಿನ್ಯೂ ಇಲಾಖಾ ಅಧಿಕಾರಿಗೂ, ಕಮರ್ಶಿಯಲ್ ಟೇಕ್ಸ್ ಆಫೀಸರರಿಗೂ, ಸಬ್ ಇನ್ಸ್‌ಪೆಕ್ಟರರಿಗೂ ಅವರ ಮೇಲಧಿಕಾರಿಗಳಿಗೂ ಅಬಕಾರಿ ಇಲಾಖಾ ಆಫೀಸರರಿಗೂ ಸಂಬಂಧಪಟ್ಟ ಗ್ರಾಮ ಉದ್ಯೋಗಸ್ಥರಿಗೂ ಅಧಿಕಾರವೀಯಲಾಗಿದೆ. ವಾಹನಗಳನ್ನು ನಿಲ್ಲಿಸಿ ತನ್ಕಿ ಮಾಡುವ ಮಾರ್ಗಗಳು ಈ ಕೆಳಗಿನಂತಿವೆ: ಶೀರೂರು ನಾಗೋಡಿ ಘಾಟಿ ರಸ್ತೆ, ನಾಗೋಡಿ ಟಿನ್ನಟ್ಟಿ ಕುಮಿಗಳು, ಕುಂದಾಪುರು ಹೊಸಂಗಡಿ ರಸ್ತೆ, ಕಾರ್ಕಳ ಆಗುಂಬೆ ರಸ್ತೆ, ಮಂಗಳೂರು ಚಾರ್ಮಾಡಿ ರಸ್ತೆ, ಬಿಸ್ಲೆ ಘಾಟಿ ರಸ್ತೆ, ಮಂಗಳೂರು ಮಡಿಕೇರಿ ರಸ್ತೆ, ಕಾಸರಗೋಡು ಪದ್ಯನೂರು ಕರಾವಳಿ ರಸ್ತೆ.

ಉಡುಪಿ.

ಅಖಿಲ ಕರ್ನಾಟಕ ಕಿರಿಯರ ಸಮ್ಮೇಳನವನ್ನು ಜರಗಿಸುವ ಕುರಿತು ಶ್ರೀ. ಕ. ಶಂಕರನಾರಾಯಣ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿ ವಾಚನಾಲಯದಲ್ಲಿ ಸಭೆಯೊಂದು ತಾ. 21ರಲ್ಲಿ ಸೇರಿಯಿತು. ಸಮ್ಮೇಳನದ ಆವಶ್ಯಕತೆಯ ಕುರಿತು ಶ್ರೀ. ಯು. ವ್ಯಾಸರಾವ್ ಶ್ರೀ. ಎಸ್. ಎಲ್. ನಾರಾಯಣಭಟ್. ಯನ್. ಶ್ರೀನಿವಾಸಭಟ್ ಮೊದಲಾದವರು ಭಾಷಣವಿತ್ತರು. ಅನಂತರ ಕಾರ್ಯಕಾರಿ ಸಮಿತಿಯ ಆಯ್ಕೆ ನಡೆಯಿತು. ಶ್ರೀ. ಎಸ್. ಎಲ್. ನಾರಾಯಣ ಭಟ್ಟರು ಅಧ್ಯಕ್ಷರಾಗಿಯೂ ಶ್ರೀ ಯು. ವ್ಯಾಸರಾಯರು ಕಾರ್ಯದರ್ಶಿಗಳಾಗಿಯೂ ಶ್ರೀ ಕೊಡವೂರು ಶಂಕರನಾರಾಯಣ ಉಪಾಧ್ಯಾಯರು ಕೋಶಾಧಿಕಾರಿಗಳಾಗಿಯೂ ನೇಮಕ ಹೊಂದಿದರು. ಸಭೆಯ ಅತಿಥಿಗಳಾಗಿ ಬಂದಿದ್ದ ಶ್ರೀ ಪಾಂಡುರಂಗ ಪೈಗಳು ಮತ್ತು ಅಧ್ಯಕ್ಷರ ಭಾಷಣ, ಧನ್ಯವಾದಗಳಾಗಿ ಸಭಾಂತ್ಯವಾಯಿತು. ಸಮ್ಮೇಳನದ ಕುರಿತು ವಿಚಾರ ವಿನಿಮಯ ನಡೆಸುವವರು ಶ್ರೀ ಯು. ವ್ಯಾಸರಾವ್ ಸೊಂದೆ ಮಾಳವರಸ್ತೆ, ಉಡುಪಿ– ಈ ವಿಳಾಸಕ್ಕೆ ಬರೆಯಬಹುದು.

ನಗರಸಭೆ:—ತಾ. 19ರಲ್ಲು ಜರಗಿದ ಉಡುಪಿ ನಗರ ಸಭೆಯಲ್ಲಿ ಶ್ರೀ. ಕಲ್ಯಾಣ್ ಎಂಬವರು ರಾಜಭಕ್ತಿ ಪ್ರಮಾಣವನ್ನು ಮಾಡಿದರು. ಈ ತಿಂಗಳಿಂದ ಹಣ ರವಾನೆ ಪೇದೆಗೆ ತಿಂಗಳೊಂದರ ರೂಪಾಯಿ 2/–ರಂತೆ ಅಧಿಕ ವೇತನ ಕೊಡಬೇಕಾಗಿ ನಿರ್ಧಾರವಾಯಿತು. ಲೈಬ್ರೆರಿ ಪುಸ್ತಕಗಳ ಬಗ್ಗೆ ರೂಪಾಯಿ 500/–ಮಂಜೂರಾಯಿತು. ವಿದ್ಯುದ್ದೀಪಗಳ ಉರಿಸುವಿಕೆಯ ಸಮಯವನ್ನು ಕಡಿಮೆ ಮಾಡಿದಾಗಲೂ ಲೈಟಿಂಗ್ ಕರಾರು ಶರ್ತಗಳ ಪ್ರಕಾರ ರೂಪಾಯಿ 251-11-3 ತಮಗೆ ಕೊಡಬೇಕಾಗಿದೆಯೆಂದು ಬರೆದ ಉಡುಪಿ ಇಲೆಕ್ಟ್ರಿಕ್ ಕಂಪೆನಿಯ ಪತ್ರದ ತೀರ್ಮಾನವೀಯುವರೆ ಮಧ್ಯಸ್ಥರೊಬ್ಬರನ್ನು ನೇಮಿಸಿ ಅವರ ಹೇಳಿಕೆಯಂತೆ ಕೌನ್ಸಿಲು ವರ್ತಿಸಬೇಕೆಂದಾಯಿತು. ಕೌನ್ಸಿಲು ಹಾಲು ಕಟ್ಟಡದ ಬಗ್ಗೆ ಡಾ| ಯು. ರಾಮರಾಯರ ಹಾಗೂ ಮಿಶಿದಿ ತಸಕದ ಸ್ಥಳವನ್ನು ಕ್ರಯಕ್ಕೆ ಪಡೆಯಬೇಕೆಂದಾಯಿತು. ಸ್ಥಳಾಕ್ರಮಣ ಮತ್ತು ಲೈಸೆನ್ಸುಫೀಸು ಬಾಬ್ತು ರೂಪಾಯಿ 529-2-0ಕಡೆ ಕಾರು ಗ್ರಾಮದ ಹರಿಜನ ಹೆಂಗಸು ಅಂಗರೆಯಿಂದ ಬರತಕ್ಕಂತಾದ್ದನ್ನು ಲೆಖ್ಖದಿಂದ ವಜಾ ಬರೆಯುವರೆ ಅಪ್ಪಣೆ ದೊರೆಯಿತು. ರಥಬೀದಿ ಕುಂಜಿಬೆಟ್ಟು ಮತ್ತು ಬಸ್ ಸ್ಟೇಂಡಿನಲ್ಲಿ ರೇಡಿಯೋಗಳನ್ನಿಡುವರೆ ಮೂರು ರೇಡಿಯೊ ಸೆಟ್ಟುಗಳನ್ನು ಈ ನಗರಸಭೆಗೆ ದಯಪಾಲಿಸುವಂತೆ ಸರಕಾರವನ್ನು ಪ್ರಾರ್ಥಿಸಲಾಯಿತು.

ಉಪಚುನಾವಣೆ:—ಕುಂಜಿಬೆಟ್ಟು ವಾರ್ಡಿನ ಉಪಚುನಾವಣೆಯಲ್ಲಿ ಶ್ರೀ ಕೇಶವ ಕಾಮತ್ ಯಮ್. ಅವರು ಬಹುಮತದಿಂದ ವಿಜಯಶಾಲಿಗಳಾಗಿರುವರು.

ಕುಕ್ಕುಂದೂರು:—ಇಲ್ಲಿಯ ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ನಡಿಯುತ್ತಿರುವ ನೂಲುವ ಮತ್ತು ನೇಯಿಗೆ ವೃತ್ತಿಯ ಸಹಾಯಾರ್ಥವಾಗಿ ಬೊಂಬಾಯಿಯಲ್ಲಿರುವ ಪ್ರಸಿದ್ಧ ವ್ಯಾಪಾರಿಗಳಾದ ಶ್ರೀಯುತ ಕುಡ್ಪಿ ಭುಜಂಗರಾಯರು ರೂ. 100-0-0ರ ಧರ್ಮ ಸಹಾಯವಿತ್ತಿರುವರು. ಮತ್ತು ಸದ್ರಿಶಾಲೆಯಲ್ಲಿ ನೇಯಿಗೆ ವೃತ್ತಿಯನ್ನು ಕಲಿಯುತ್ತಿರುವ ಮೂರು ಮಂದಿ ಬಡಜನರಿಗೆ ಧರ್ಮಾರ್ಥ ವಿದ್ಯಾರ್ಥಿವೇತನವನ್ನೂ ದಯಪಾಲಿಸಿರುವರು. ಶ್ರೀಯುತರು ಮಾಡಿದ ಉದಾರದಾನವನ್ನು ಸದ್ರಿ ಶಾಲಾ ಮೇನೇಜರ ಕೆ ನಾರಾಯಣರಾಯರು ಸ್ವೀಕರಿಸಿ ಕೃತಜ್ಞತೆಯನ್ನು ಸಮರ್ಪಿಸುತ್ತಾರೆ.

"ಮದ್ರಾಸ್ ಶ್ರೀ ರಾಘುವೇಂದ್ರ ಸ್ವಾಮಿಗಳ ಆರಾಧನೆ—ಶ್ರೀ ಸುಬ್ರಹ್ಮಣ್ಯ ಸಂಸ್ಥಾನಾಧೀಶ್ವರ ಶ್ರೀ ವಿಶ್ವಜ್ಞತೀರ್ಥ ಶ್ರೀಗಳವರು ಏಕಾಂಬರೇಶ್ವರ ಅಗ್ರಹಾರದಲ್ಲಿ ಚಾತುರ್ಮಾಸ್ಯ ದೀಕ್ಷೆಗೆ ಕುಳಿತಿದ್ದು ಮೊನ್ನೆ ತಾ ೧೭ಕ್ಕೆ ಶ್ರೀ ರಾಘವೇಂದ್ರ ಗುರುಗಳ ಆರಾಧನೆಯನ್ನು ಬಹು ವಿಜೃಂಭಣೆಯಿಂದ ನೆರವೇರಿಸಿದರು. ಸಂಜೆ ಜ್ಞಾನ ಸಾಗರರಾಯರ ಮುರಲೀಸೇವೆಯು ಶ್ರಾವ್ಯವಾಗಿತ್ತು. ಆ ದಿನದ ಸೇವೆಯು ಮೈಸೂರ್ ಕೇಫೆಯ ಮಾಲೀಕರಾದ ಶ್ರೀಮಾನ್ ಕೆ. ಗೋಪಾಲರಾಯರಿಂದ ತಮ್ಮ ದಿವಂಗತ ತಂದೆ ಗೋವಿಂದರಾಯರವರ ಪ್ರೀತ್ಯರ್ಥವಾಗಿ ನೆರವೇರಿಸಲಾಯಿತು. ಮರುದಿನ ತಾ ೧೮ಕ್ಕೆ ಉತ್ತರಾರಾಧನೆಯ ಸೇವೆಯು ಶ್ರೀ. ಕೃಷ್ಣಸ್ವಾಮಿರಾವ್ ಇಂಜಿನಿಯರಿಂಗ್ ಕಂಟ್ರಾಕ್ಟರ್ ವೃದ್ಧಾಚಲಂರವರ ಲೆಕ್ಕದಿಂದ ಅತಿ ವಿಜೃಂಭಣೆಯಿಂದ ನಡೆಯಿಸಲಾಯಿತು. ಶ್ರೀಗಳವರು ಎಲ್ಲರಿಗೂ ಫಲ ಮಂತ್ರಾಕ್ಷತೆಗಳನ್ನಿತ್ತು ಆಶೀರ್ವದಿಸಿದರು.

ಬೊಂಬಾಯಿ

ವರ್ಧಂತ್ಯುತ್ಸವ—ಮುಂಬಯಿ ಮೊಗವೀರ ವ್ಯವಸ್ಥಾಪಕ ಮಂಡಳಿಯ ನಾಲ್ವತ್ತನೆ ವರ್ಧಂತ್ಯುತ್ಸವವೂ ಮೊಗವೀರ ಫ್ರೀ ನೈಟ್ ಹೈಸ್ಕೂಲಿನ ಪಾರಿತೋಷಕ ಹಂಚೋಣ ಸಮಾರಂಭವೂ ತಾ. 23ರಲ್ಲು ಸರ್ ಕವಾಸ್ಜಿ ಜಹಾಂಗೀರ ಸಾರ್ವಜನಿಕ ಸಭಾ ಸದನದಲ್ಲಿ ಡಾಕ್ಟರ್ ಯಸ್ ಯಸ್. ರಾವ್, ಯಂ. ಡಿ. ಅವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂಬಂಧ ವಿವಿಧ ಕಾರ್ಯಕ್ರಮಗಳಿದ್ದುವು.

ರಪ
ವೇ
ಖಂಡಿ
ಲನಿ ಪ
ಜರ್ಮನಿಯ
ಎಮಿಲ್ ಉ

ಮುಂದಿನ
ಟ್ಲರ್ ಜೋಯಿಸ
ಜೋಯಿಸರಿಗೆ ಆ
ದರೆ ಭವಿಷ್ಯ ಹಾಳಾ

O

'ಇಂದಿನ ಸರಕಾರವು ರೊಳಗಿನ ಭಿನ್ನತೆಯರಿಯು ಕೊಂಡಿರುವದನ್ನು ಕಂಡು ನನಗೆ ವಾಗುತ್ತಿದೆ'-ಗಾಂಧೀ ಪತ್ರಗಳಿಗೆ ಷ್ಕಾರ ಹಾಕಿದ್ದಕ್ಕಾಗಿ ಸರ್. ಸಪ್ರೂ. ಟೀಕೆ.

ಸರ್ವಸಮಾನತಾ ಬುದ್ಧಿಯ ದೂಷಣೆಯು ಪಂಚ ಮಹಾ ಪಾತಕಗಳಲ್ಲೊಂದೆಂಬುದನ್ನು ಸಪ್ರುಗಳು ತಿಳಿದಿರಲಿ!

O

'ಬ್ರಿಟನ್, ರಶ್ಯ, ಅಮೇರಿಕಗಳ ತ್ರಿರಾಷ್ಟ್ರ ಪರಿಷತ್ತು ನೆರೆಯುವದು ಆಗತ್ಯ'–ಮೋಸ್ಕೋ ಪತ್ರಿಕೆಗಳ ಅಭಿಪ್ರಾಯ.

ಅಂತೆಯೇ ಬ್ರಹ್ಮ, ವಿಷ್ಣು, ಮಹೇಶ್ವರರ ತ್ರಿಮೂರ್ತಿ ಪರಿಷತ್ತು ನೆರೆದು ಭೂಭಾರ ತಗ್ಗಿಸುವ ಯೋಚನೆ ಮಾಡುವದು ಅತ್ಯಗತ್ಯ.

O

ಬ್ರಿಟಿಷ್ ಸರಕಾರವು ಹಿಂದುಸ್ಥಾನದಲ್ಲಿ ದಾಸ್ತಾನಿಟ್ಟಿದ್ದ ಭಂಗಾರದ ಪೈಕಿ 30 ಸಾವಿರ ಪೆನ್ನುಗಳಷ್ಟನ್ನು ಕಳೆದ ವಾರದ ಮೂರೇ ದಿನಗಳಲ್ಲಿ ಇಲ್ಲಿಯ ಮಾರ್ಕೇಟುಗಳಲ್ಲಿ ಮಾರಾಟ ಮಾಡಿದೆ.

ಪತ್ನಿಯ ಭಂಗಾರವನ್ನೆಲ್ಲಾ ಬರಿದು ಮಾಡಿದ ಗಂಡನಿನ್ನು ಸರಕಾರಕ್ಕೆ ಸಮಾನ!

O

'ಮುಂದಿನ ಜರ್ಮನಿ ಹೇಗಿರಬೇಕೆಂಬ ಚರ್ಚೆಯೇ ಕ್ವಿಬೆಕ್ ಪರಿಷತ್ತಿನಲ್ಲಿ ಪ್ರಾಮುಖ್ಯತೆ ಪಡೆದಿದೆ'—ವಾರ್ತೆ.

'ಮುಂದಿನ ಜರ್ಮನಿ ಹಿಂದಿನ ಇಂಗ್ಲಾಂಡು ಇದ್ದಂತೆ ಇರಬೇಕು'–ಎಂದು ತೀರ್ಮಾನಿಸಿದರಾಯಿತು!

—ವಿನೋದಿ

BHUVANENDRA PRODUCTS Ltd.,

Head Office and Factory: Katapadi, S. Kanara

Depots: Mahratha Galli. Hubli.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತದಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಬಿ. ಆಚಾರ್ಸ್ ಫಾರ್ಮೆಸಿ; ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ವಿಜಯಾ ಸ್ಟೋರ್ಸ್

ಸುದ್ದಿ ಸೂಚನೆ.

○ ಕ್ವಿಬೆಕ್ ಪರಿಷತ್ತು ಮುಗಿಯುತ್ತ
ಬಂದಿದೆ ಕೊನೆಯನಿರ್ಧಾರದ ಪ್ರಕಟ
ರೋಜ಼್‌ವೆಲ್ಟ್ ಮಿ. ಈಡನರೂ ಮಿ ಹಲ್ಲ
ಅದರಲ್ಲಿ ಭಾಗವಹಿಸಿದ್ದರು
○ ರಶ್ಯಾನರು ತ್ರಿರಾಷ್ಟ್ರ ಪರಿಷತ್
ಪ್ರಕಟಿಸಿರುವುದರಿಂದ ಕ್ವಿಬೆಕ್
ನಿಂದ ಅವರು ತೃಪ್ತಿಗೊ
ಊಹಿಯಿದೆ
● ರಶ್ಯಾದಲ್ಲಿ ಜರ್ಮನ
ನ್ನು ಖಾಲಿಮಾಡಿ ಹಿಂದೆ
ಮ ರಶ್ಯನರಿಗಾದ
○ ಅಮೇರಿಕ
ಯಾಗಿದ್ದ ಎ
ಹಿಂದೆ ಕರೆ
○ ಇಟ
ಫ್ಲಾರ್ವೇಕ್ಷಕ:-

ak Bank Limited.

ಕ್ ಬೇಂಕ್ ಲಿಮಿಟೆಡ್.

ಯಲ್ಲಿ ಸ್ಥಾಪಿಸಲ್ಪಟ್ಟದ್ದು.)

ಕಾರ್ಟರ್ ರಸ್ತೆ, ಉಡುಪಿ. ದಕ್ಷಿಣ ಕನ್ನಡ.

ಮಂಗಳೂರು, ಕಟಪಾಡಿ, ಕಾಂಞಂಗಾಡ್ ಮತ್ತು ಕಿನ್ನಿಗೋಳಿ.

31-7-1943 ಅಥವಾ ಈ ತಾರೀಕಿನ ಮೊದಲು ಅಂಥಾ ಪ್ಯಾದೆಯ ವರೆಗೆ ಸಾಲಿಯಾನ ಶೇಕಡಾ 3ರ 4, 5 ಅಥವಾ 6ತಿಂಗಳ ಪ್ಯಾದೆಯಿಂದ ಪ್ರತಿಯೊಂದು ಶಾಖೆಯಲ್ಲಿ ಅಂಗೀಕರಿಸಲ್ಪಡುತ್ತವೆ.

ಎಲ್ಲಾ ಬಗೆಯ ನಿಥದ ವಹಿವಾಟುಗಳು ನಡೆಸಲ್ಪಡುತ್ತವೆ.

ಮುಖತಾ ಅಥವಾ ಪತ್ರದ್ವಾರಾ ಸಮೀಪದ ಶಾಖೆಯಲ್ಲಿ ದಯವಿಟ್ಟು ವಿಚಾರಿಸಿರಿ

REGD.

ಅಮೃತಾಂಜನ
ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ,
ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಬೊಂಬಾಯಿ, ಮದ್ರಾಸು, ಕಲ್ಕತ್ತ.

ಬಾಲಚಂದ್ರ

ವಿದ್ಯಾ ವಿಷಯಕ ಪ್ರಮುಖ ಮಾಸ ಪತ್ರಿಕೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯೂಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1-8-0 ಮಾತ್ರ.

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಮೆನೇಜರ್, **ಬಾಲಚಂದ್ರ**
ಸಂತೆಕಟ್ಟೆ, ಉಡುಪಿ.

ತಾರಾನಾಥ ಭೇಷಜಾಲಯ

ಆಯುರ್ವೇದೀಯ ಮತ್ತು ಸಿದ್ಧೌಷಧಿಗಳ ಕಾರಾಗಾರ, ಚಿಕ್ಕಮಂಗಳೂರು.

ಡಾ. M. L. Shetty, ಪ್ರೇಮವಿದ್ಯಾಪೀಠದ ಗೌ. ಪ್ರಾಧ್ಯಾಪಕರು.

ಎಲ್ಲಾತರದ ಭಸ್ಮ, ಖಲ್ವೀ ರಸಾಯನ, ಆಸವಾರಿಷ್ಟ, ಘೃತ, ತೈಲಗಳಿಗಾಗಿ ಕೂಡಲೇ ಬರೆಯಿರಿ.

ಲಕ್ಷಗಟ್ಟಲೆ ರೋಗಿಗಳಲ್ಲಿ ಫಲಕಾರಿಯಾದ ಔಷಧೀ ಯೋಗಗಳು. ಗುರುಪರಂಪರೆಯ ಅನುಭವದಿಂದ ಬಂದ ನಿರ್ದುಷ್ಟ ಔಷಧೀಕರಣ ವಿಧಾನ.

ಡಾ| P. M. Alva,
ಮೆನೇಜರ್.

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ **ಖಂಡಿತವಾಗಿ** ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು **ತಕ್ಕೊಳ್ಳ** ಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ **ಕಿಮ್ಮತ್ತು** ರೂಪಾಯಿ. 5—0—0 ಪೋಷ್ಟ ಚಾರ್ಜ ೧೦ಆಣೆ.

ಮಾಲಕರು:—**ಹಾಲಪ್ಪಾ ಫಕೀರಪ್ಪಾ ದಾವಣಗೇರಿ**

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ. ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ. ಆರ್. ಎಲ್. ಶಿವಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ಬಾಲ ಸಾಹಿತ್ಯ ಮಂಡಲ, ಲಿಮಿಟೆಡ್.

ದಿವಂಗತ ಶ್ರೀ| ಉಳ್ಳಾಲ ಮಂಗೇಶರಾವ್ ಬಿ. ಎ., ಎಲ್. ಟಿ, ಅವರಿಂದ ರಚಿತವಾದ ನಮ್ಮ "ಹೊಸಗನ್ನಡದ ೧ರಿಂದ ೫ರ ವರೆಗಿನ ರೀಡರು"ಗಳು ಇದೇ ಜೂನಿನ ಪ್ರಥಮ ವಾರದಲ್ಲೇ ಸಿದ್ಧವಾಗುವವು. ಅವುಗಳಿಗೆ ಬೆಲೆ ಮತ್ತು ಅವುಗಳ ಮೇಲಿನ ಕಮಿಶನಿನ ದರಗಳು ಕಾಲಕ್ಕೆ ತಕ್ಕಂತೆ ಹೊಂದಿಸಲ್ಪಟ್ಟು ಆಗಲೇ ಪ್ರಕಟಗೊಳ್ಳುವುವು.

Bala Sahitya Mandal, Ltd.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager

ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ನೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲುಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದಕ**

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,
ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ. : : : : ಮಂಗಳೂರು.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಂಜಿ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಸ್ಥಾಪನೆ ಕ್ರೌನ ರಬ್ಬರ್ ಸ್ಟಾಂಪ್ ಕಂಪೆನಿ 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI S. INDIA.

Regd. No. M. 3618.

ಇಪ್ಪತ್ತನಾಲ್ಕನೆಯ ವರ್ಷ.

Estd. 1921 ಸ್ಥಾಪನೆ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪ ಸಂಚಿಕೆ ೧

-FOUNDER — Sri. A. B. Shetty

Vol. 24 No. 1

NAVAYUGA— Kannada Weekly —UDIPI, S. I.

ಉಡುಪಿ • 2—9—1943 • ಮಂಗಳೂರು.

ಹೊಸಕೆರೆ ಚಿದಂಬರಯ್ಯನವ
ರಿಂದ ರಚಿತವಾದ ಗೀತೆಯ
ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು 440 ಪುಟಗಳು.

ಪ್ರತಿ ಮನೆಯಲ್ಲೂ ಇರಬೇಕಾದ
ಪವಿತ್ರ ಗ್ರಂಥ.

ಬೆಲೆ (ಸುಂದರ ಪ್ರತಿ) ೧—೮—೦

ಹತ್ತಾಣೆ ಸ್ಟಾಂಪು ಕಳಿಸಿದ್ದಲ್ಲಿ ೧ ಪ್ರತಿಯನ್ನು
ಬುಕ್‌ಪೋಸ್ಟ್ ಮಾಡಲಾಗುತ್ತೆ.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಅಖಿಲ ಕರ್ನಾಟಕದ
ಹೊಸಮಾದರಿಯ ವಾರಪತ್ರಿಕೆ

ಅಂತರಂಗ

ಜನ್ಮತಾಳಿದ ಸ್ವಲ್ಪ ಸಮಯದಲ್ಲೇ
ವಿಶಾಲ ಪ್ರಚಾರ ಮತ್ತು ಪ್ರಶಸ್ತಿ
ಪಡೆದ ಸಚಿತ್ರ ವಾರಪತ್ರಿಕೆ.

ಪ್ರಸಿದ್ಧ ಜ್ಯೋತಿಷಿಗಳೊಬ್ಬರಿಂದ
ವಾರಭವಿಷ್ಯವೂ ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ	ರೂ. ೪-೮-೦
6 ತಿಂಗಳಿಗೆ	ರೂ. ೨-೪-೦
ಬಿಡಿ ಪ್ರತಿಗೆ	ರೂ. ೦-೧-೬

ಮಾದರಿಗೆ ಬರೆಯಿರಿ:
ಮೆನೇಜರ್, ಅಂತರಂಗ, ಉಡುಪಿ.

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

The Canara Mutual Assurance Co., Ltd.,
UDIPI (S. India).

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು
ಮೌಲಿಕವಾದುದು.

ಜಾಗರೂಕರಾಗಿರಿ! ನಿಮ್ಮ ಮತ್ತು ಸಮೀಪದವರ ಮತ್ತು
ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇವರಲ್ಲೊಂದು ಪೊಲಿಸಿಯನ್ನು ಪಡೆಯಿರಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಟ್ಟಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು:-

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ (ದ. ಕನ್ನಡ)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್,
ಕಲ್ಲಿಕೋಟೆ, ಮಂಗಳೂರು ಮತ್ತು ತ್ರಿವಾಂಕೂರು.

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೬ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ-**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೇಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ.**

ಆಯುರ್ವೇದ ಔಷಧಾಲಯ ಗದಗ.

Again - - -

TEN LACS IN TEN MINUTES.

Our share-lists opened on 5th August and soon closed by oversubscription. Ten Lacs in Ten Minutes a second time; but this time it is perhaps not such a great achievement in view of the changed economic conditions. Yet considering that shares of the face value of Rs. 50 were issued at Rs. 90 that they were sold without any publicity and without the help of brokers and that they were only sold over the counter to shareholders and customers the Canara Bank is justifiably proud of this achievement. when these shares are fully paid up according to the terms of the Prospectus the Capital structure of the Canara Bank will be as follows:—

Capital.	
ordinary	Rs. 15,00,000.
5% Cum. Pref.	Rs. 14,00,000.
Reserves.	Rs. 11,70,000.
Total	Rs. 40,70,000.

We thank all our friends and patrons whose unstinted support and sympathy made this success possible and assure them that we shall try in all possible ways to continue to deserve their good will.

CANARA BANK LIMITED.
Estd. 1906.

★ ಕ್ವಿಬೆಕ್ ಪರಿಷತ್ತು ★

ನಿರೀಕ್ಷಿಸಿದುದೇನು? ನಿರ್ಧರಿಸಿದುದೆಷ್ಟು?

ಕ್ವಿಬೆಕ್ ಸಮ್ಮೇಳನ ಮುಗಿಯಿತು ಆಗೋಸ್ತು 17ರಿಂದ 24ರ ತನಕ ಅವಿಶ್ರಾಂತವಾಗಿ ಜರಗಿದ ಆ ಚರಿತ್ರಾರ್ಹ ಪರಿಷತ್ತು—ಇಡೀ ಪ್ರಪಂಚದ ದೃಷ್ಟಿಯನ್ನಾಕರ್ಷಿಸಿದ ಕೂಟ-ಚದರಿತು.

ಚರ್ಚಿಲ್ ರುಸವೆಲ್ಟ್ ಘೋಷಣೆ.

"ಕಳೆದ ಮೇ ಅಂತ್ಯದಲ್ಲಿ ನಡೆದ ಚರ್ಚಿಲ್ ರುಝುವೆಲ್ಟ್ ಸಂಭಾಷಣೆಯ ಬಳಿಕ ಸಂಭವಿಸಿದ ಹಲವು ಸುಖದಾಯೀ ಘಟನೆಗಳನ್ನು ಮುಂದಿಟ್ಟುಕೊಂಡು ಭೂಖಂಡದ ಎಲ್ಲಾ ಯುದ್ಧ ಕ್ಷೇತ್ರಗಳ ಪರ್ಯಾಲೋಚನೆ ನಡೆಸಲಾಯಿತು.

"ಭೂಖಂಡದ ಹಲವು ಕಡೆಗಳಲ್ಲಿ ನಾವೆ, ಸೈನ್ಯ, ವಿಮಾನಗಳು ಕೈಕೊಳ್ಳತಕ್ಕ ಕಾರ್ಯಗಳ ಆವಶ್ಯಕ ನಿರ್ಧಾರಗಳಾದುವು-ಮುಂದೆ ಇನ್ನಷ್ಟು ಅಲ್ಪಾವಧಿಗಳೊಳಗೇನೇ ಇಂತಹ ಪರಿಷತ್ತುಗಳನ್ನು ಕೂಡಿಸಬೇಕಾಗಬಹುದು.

"ನಿರ್ಧಾರಗಳನ್ನು ಬಹಿರಂಗಪಡಿಸುವದರಿಂದ ಯುದ್ಧ ಪ್ರವೃತ್ತ ಸೇನೆಗಳಿಗೆ ಸಹಾಯವಾಗುವಂತಿಲ್ಲ. ಅವನ್ನೆಲ್ಲಾ ಕಾರ್ಯರೂಪದಲ್ಲೇ ಕಾಣಬೇಕಾಗಿದೆ. ಅಂತೂ ಸೇನಾಪ್ರಮುಖರ ಸಂಭಾಷಣೆಗಳ ಬಹುಭಾಗವು ಜಪಾನೀ ವಿರುದ್ಧ ಯುದ್ಧ ಮತ್ತು ಚೀನಿಯರಿಗೆ ಬೇಕಾದ ಸಹಾಯ ನೀಡುವ ಕುರಿತೇ ಕಳೆಯಿತೆನ್ನಬಹುದಾಗಿದೆ—ಚಿಯಾಂಗ್ ಕೈಶೇಕರ ಪ್ರತಿನಿಧಿಯಾಗಿ ಡಾ| ಟಿ. ವಿ. ಸೂಂಗರು ಭಾಗವಹಿಸಿದ್ದರು.

"ಸೇನಾ ಕಾರ್ಯಾಂತರ್ಗತವಾಗಿರುವ, ಅಥವಾ ಹಾಗೆ ಮುಂದಕ್ಕೇಳಬಹುದಾದ ರಾಜಕೀಯ ಸಮಸ್ಯೆಗಳ ಕುರಿತೂ ನಿರ್ಧಾರವಾಯಿತು.

"ಸೋವಿಯೆಟ್ ರಶ್ಯದೊಡನೆ ವ್ಯವಸ್ಥೆ ಮಾಡಿಕೊಂಡು ನಡೆಯುವ ತ್ರೈರಾಷ್ಟ್ರ ಪರಿಷತ್ತಿಗೆ ಜತೆಯಾಗಿ ಇನ್ನೊಂದು ಆಂಗ್ಲೋ-ಅಮೆರಿಕಾ ಪರಿಷತ್ತನ್ನು ಈ ವರುಷಾಂತ್ಯದೊಳಗೆ ನಡೆಸಬೇಕೆಂದು ನಿರ್ಧಾರವಾಯಿತು.

"ಫ್ರೆಂಚ್ ಸ್ವಾತಂತ್ರ್ಯ ಸಮಿತಿಯ ಸಂಬಂಧದ ಕುರಿತು ಪರ್ಯಾಲೋಚನೆಯೂ ನಡೆಯಿತು".

ತೋರುವಿಕೆಗೆ ಪರ್ವತ ಪ್ರಸವ!

'ಕ್ವಿಬೆಕ್ ನಿರ್ಧಾರಗಳನ್ನು ಕಾರ್ಯರೂಪದಲ್ಲೇ ಕಾಣಬೇಕು' ಎಂಬೊಂದು ಪಂಗ್ತಿ ಮೇಲಿನ ಚರ್ಚಿಲ್-ರುಸವೆಲ್ಟ್ ಘೋಷಣೆಯಲ್ಲಿಲ್ಲದಿರುತ್ತಿದ್ದರೆ ಅದು ಸತ್ಯಕ್ಕೆ 'ಕ್ವಿಬೆಕ್ ವಿನೋದ ಗೋಷ್ಠಿ' ಎಂಬ ಹೆಸರು ಪಡೆಯುತ್ತಿದ್ದಿತು. ಅಲ್ಲಿಯ ಮುಖ್ಯ ನಿರ್ಧಾರಗಳು ಯುದ್ಧ ಸಂಬಂಧವುಳ್ಳವುಗಳು. ಆದ್ದರಿಂದ ಅವುಗಳನ್ನು ಬಹಿರಂಗ ಪಡಿಸದಿರುವದು ಸ್ವಾಭಾವಿಕ. ಅಂದಮೇಲೆ ಇದೊಂದು ಪ್ರಕಟಣೆಯೇಕೆ? ಹೊಸಾರ್ಥವೇನೂ ಇಲ್ಲದ ಈ ಶಬ್ದ ಜೋಡಣೆಗಳೇಕೆ? ಈ ಘೋಷಣೆಯಲ್ಲಿ ಕ್ವಿಬೆಕ್ ಪರಿಷತ್ತಿನ ಘನತೆಗೆ ಹೊಂದಿಕೆಯಾಗುವಂತಹ ಬಿಗುವು ಗೋಚರಿಸುವದಿಲ್ಲ. ರಶ್ಯವು ಜುಲಾಯಿಯಲ್ಲಿ ಕ್ವಿಬೆಕನ್ನು ನೋಡುತ್ತಿದ್ದ ದೃಷ್ಟಿಯಲ್ಲಿಯೇ ಆಗೋಸ್ತು 17ರ ನಂತರವೂ ಅತ್ತ ನೋಡಿದೆ. ಆ ಕಡೆ ಅವಕ್ಕೆ ಶೂನ್ಯ ದಿಗಂತವೇ ಕಾಣುತ್ತಿದೆ. ಚೀನವು ಸಂಪ್ರದಾಯಬದ್ಧ ಕೃತಜ್ಞತೆಯನ್ನಷ್ಟೇ ಸೂಚಿಸಿ ತನ್ನ ಅದೃಷ್ಟ ಬದಲಾವಣೆಯ ಚಿಹ್ನೆಯಿಲ್ಲ; ಹಿಟ್ಲರನನ್ನು ಸೋಲಿಸಿ, ಜಪಾನಿನ ಮೇಲೆ ಮಹಾ ಯುದ್ಧ ಪ್ರಾರಂಭವಾಗುವಂತಿಲ್ಲವೆಂಬುದು ಕ್ವಿಬೆಕಿನಿಂದ ಮತ್ತಷ್ಟು ಸ್ಪಷ್ಟವಾಯಿತೆಂಬ ಅಭಿಪ್ರಾಯ ಸೂಚಿಸಿದೆ. ಮಿತ್ರರ ವರದಿಯಂತೆ ಕ್ವಿಬೆಕ್ ಸಮ್ಮೇಳನವು ಹಿಟ್ಲರರನ್ನು ಗಾಬರಿಗೀಡು ಮಾಡಿದ್ದುದು ನಿಜವಾದರೆ ಅಭಯ ನಿವಾರಣೆಗಿನ್ನು ಗೋಬೆಲ್ಸ್ ಹೊರಡಬೇಕೆಂದಿಲ್ಲ ಕ್ವಿಬೆಕ್ ಧುರೀಣರೇ ಅವನನ್ನು ಸಂತೈಸಿದ್ದಾರೆ. 'ಹಿಟ್ಲರನು ಪ್ರಥಮ ವೈರಿ'ಯಾಗಿ ಮಿತ್ರರ ಕಣ್ಣಿಗೆ ಮುಂಭಾಗದಲ್ಲೋರ್ವನೇ ಈ ತನಕ ಕಾಣುತ್ತಿದ್ದ, ಇನ್ನು ಮುಂದೆ ಟೋಜೋನನ್ನೂ ಹಿಟ್ಲರನ ಸಾಲಲ್ಲೇ ನಿಲ್ಲಿಸಲಾಗಿದೆ. 'ಯುರೋಪ್ ರಂಗ' 'ಏಸ್ಯಾ ರಂಗ'ವೆಂಬ ಎರಡು ಮುದ್ದೆಗಳನ್ನು ಕ್ವಿಬೆಕಿನಲ್ಲಿ ಕರಗಿಸಿ 'ಲೋಕ ಯುದ್ಧ' ಎಂಬ ಒಂದೇ ಗುಳಿಗೆಯಾಗಿ ಮಾಡಿ ಮಿತ್ರ ಪ್ರಮುಖರೀಗ ಜಗಿಯುತ್ತಿದ್ದಾರೆ. ಕ್ವಿಬೆಕ್ ನಿರ್ಧಾರದಿಂದ ವಿಶೇಷ ಆತುರಕ್ಕೀಡಾಗಬೇಕಾದುದು ಜಪಾನೇನೋ! ಆದರೆ ಸರ್ತಿಪ್ರಕಾರ ನಾಳೆ ತಾನೊಬ್ಬನೇ ಮಿತ್ರ ಸೇನೆಗಳನ್ನೆದುರಿಸುವ ಬದಲಿಗೆ, ಹರಿಹಂಚಾದ ವೈರಿ ಸೇನೆ ಇಂದೇ ಇದಿರಾಗುವದು ವಾಸಿ ಎಂದು ಜಪಾನಿಗೂ ತೋರಬಹುದು. ಒಂದೆಡೆ ಹಿಟ್ಲರನಿದ್ದಾನೆಂಬ ಧೈರ್ಯದಿಂದಲೇ ಜಪಾನು ಯುದ್ಧಕ್ಕಿಳಿದುದು ತಾನೆ? ಹಿಂದುಸ್ಥಾನದಂತಹ ರಾಷ್ಟ್ರಗಳೂ ತಿಳಿಯುವಂತಹದಿರಬೇಕೆಂಬುದ್ದೇಶವೇ ಆ ಘೋಷಣೆಯಲ್ಲಿಲ್ಲ. ಮಿತ್ರ ರಾಷ್ಟ್ರಗಳ ಜನಾಭಿಪ್ರಾಯದಲ್ಲೇ, ಪ್ರಕಟಿತ ಕ್ವಿಬೆಕ್ ನಿರ್ಧಾರವು 'ಅಧಮಾರ್ಧ'ವಾಗಿದೆ. ಅಂತೂ ಕ್ವಿಬೆಕಿನ ಮಟ್ಟಿಗೆ 'ಹೊರಟ ಸಂಭ್ರಮದಷ್ಟು ಹೆಜ್ಜೆಯ ಠೀವಿಯಿಲ್ಲ' ಎಂಬುದೊಂದು ಖಂಡಿತ.

ತಿರುಳು ತುಂಬಿರಬಹುದೆ?

ಬಯಲಾಸೆಯೂ ಸಲ್ಲದು; "ಕ್ವಿಬೆಕ್ ನಿರ್ಧಾರವು ಅಂತಹ ದುರ್ಬುದ್ಧಿ ಹುಟ್ಟಿಸುವ ಅನ್ಯಾಯ ಮಾಡಿಲ್ಲ. ನಿರಾಶಾವಾದವೂ ಸಲ್ಲದು; ಕ್ವಿಬೆಕ್ ಪರಿಷತ್ತಿನಿಂದ ಎದೆಗೆಡದಂತಾಗಿದೆಯೆ? ಆಗಿದೆ-ಆ ಕುರಿತು ಸಾಕಷ್ಟು ಜಾಗರೂಕತೆಯನ್ನು ಚರ್ಚಿಲ್ ರುಸವೆಲ್ಟರು ವಹಿಸಿದ್ದಾರೆ. "ಕ್ವಿಬೆಕ್ ಗುಪ್ತ ನಿರ್ಧಾರಗಳನ್ನು ಜರ್ಮನಿ, ಇಟೀ ಮತ್ತು ಜಪಾನುಗಳೊಳಗೆ ತಕ್ಕ ಸಮಯದಲ್ಲಿ ರವಾನಿಸಲಿದ್ದೇವೆ—ನಮ್ಮ ವಿರೋಧಿಗಳ ತಿರುವು ಮುರುವು ಬುದ್ಧಿಗರ್ಥವಾಗಬಲ್ಲ ಏಕಮಾತ್ರ ಭಾಷೆಯಲ್ಲೇ ತಿಳಿಸಲಿದ್ದೇವೆ"--ಎಂಬ ಅಧ್ಯಕ್ಷ ರುಸವೆಲ್ಟರ ರಣಗರ್ಜನೆಯಲ್ಲೇ ಸ್ಟಾಲಿನ್ ಬೇಡಿಕೆಯ ದ್ವಿತೀಯ ರಂಗ ನಿರ್ಮಾಣ, ಇಟಲಿಯ ಪತನ, ಬರ್ಮಾಕ್ರಮಣಗಳ ಗುಂಡು ಹಾರಾಟದ ಸದ್ದನ್ನೂ ಆಲಿಸಬಹುದು. ಮುಂದಿನ ತ್ರಿರಾಷ್ಟ್ರ ಪರಿಷತ್ತಿನ ಸೂಚನೆಯಿಂದ ರಶ್ಯ-ಇಂಗ್ಲಂಡು, ಅಮೇರಿಕಗಳು ಒಮ್ಮತ್ಯಯಾಗುವ ಚಿತ್ರವನ್ನೂ ಕಿಸಿಕೊಳ್ಳಬಹುದು. 'ಯುದ್ಧ ಕಾರ್ಯಗಳಿಗೆ ಹೊಂದಿಕೆಯಾಗಿರುವ ಹಾಗೂ ಆಗಲಿರುವ ರಾಜಕೀಯ ಸಮಸ್ಯೆಗಳ ತೀರ್ಮಾನವೂ ಆಯಿತು' ಎಂಬ ಆಶ್ವಾಸನೆಯನ್ನೇ ಭಾರತದ ಸಮಸ್ಯಾ ನಿವಾರಣೆಯನ್ನು ತಿಳಿಸುವ ಆಕಾಶವಾಣಿಯೆಂದು ಅರ್ಥಮಾಡಿಕೊಳ್ಳಬಹುದು. ಇವಿಷ್ಟು ನಿಜವಾದರೆ ಕ್ವಿಬೆಕ್ ಪರಿಷತ್ತು ನಿರರ್ಥಕವಾಗಿಲ್ಲ!

ಒಂದು ವೈಶಿಷ್ಟ್ಯ.

ಕಸಬ್ಲಾಂಕಾ, ವಾಷಿಂಗ್ಟನ್ ಸಮ್ಮೇಳನಗಳು 'ಹಿಟ್ಲರನಾದ ಮೇಲೆ ಟೋಜೋ' ಎಂದು ಯುದ್ಧವನ್ನು ವಿಭಾಗಿಸಿದ್ದರೆ, ಕ್ವಿಬೆಕ್ 'ಹಿಟ್ಲರನೊಂದಿಗೆ ಟೋಜೋ' ಎಂದದನ್ನು ಬದಲಾಯಿಸಿದೆ. ಇದು ರುಸವೆಲ್ಟ್ ವಿಜಯ! ಜಪಾನ್ ಯುದ್ಧವನ್ನು ಮುಂದುವರಿಸಿಟ್ಟುದಕ್ಕಾಗಿ ಅದರ ನಿಕಟ ಸಂಬಂಧವುಳ್ಳ ಅಮೇರಿಕದಲ್ಲಿ ತೀವ್ರ ಅತೃಪ್ತಿಯೆದ್ದಿತ್ತು. ಅದರ ನಿವಾರಣೆಯ ಮುಖ್ಯೋದ್ದೇಶದಿಂದಲೇ ಕ್ವಿಬೆಕ್ ಪರಿಷತ್ತು ನೆರೆಯಿತು; ರಶ್ಯದ ಬಹಿರಂಗ ಬೇಡಿಕೆಯ ಸ್ವೀಕಾರಕ್ಕಿಂತಲೂ ಅಮೇರಿಕದ ಅಂತರಂಗ ಯಾತನಾ ನಿವಾರಣೆಗಾಗಿ ಅದು ಕೂಡಿತು. ಇನ್ನು ಮುಂದೆ ಜರ್ಮನಿ ಜಪಾನುಗಳೊಳಗೆ ತರಗತಿ ಭೇದವಿಲ್ಲ; ಸರ್ತಿ ಪ್ರಕಾರ ಪಶ್ಚಿಮಾರ್ಧ ಪೂರ್ವಾರ್ಧಗಳ ದುರಸ್ತಿ ನಡೆಯದೆ ಎಲ್ಲಾ ಕಡೆಯ ರಿಪೇರಿ ಕಾರ್ಯವನ್ನೂ ಏಕ ಬಾರಿ ಕೈಕೊಳ್ಳಲಾಗುತ್ತದೆ. ಜಪಾನಿನೊಡನೆ ವ್ಯವಹಾರ ಸಂಬಂಧವಿರುವ ರಶ್ಯವನ್ನು ಪರಿಷತ್ತಿಗೆ ಕರೆಯದಿದ್ದುದು ಇದಕ್ಕಾಗಿಯೇ ಎಂದು ಕಾರಣ ಕೊಡಲಾಗಿದೆ. ಪೂರ್ವ ಏಸ್ಯಾ ರಣರಂಗದ ಪ್ರಮುಖ ಸೇನಾನಿಯಾಗಿ ಚಕ್ರವರ್ತಿಗಳ ದಾಯಾದಿ ಲೋರ್ಡ್ ಮೌಂಟ್ ಬೇಟನರು ನೇಮಕ ಹೊಂದಿದ್ದಾರೆ. 43ರ ಜವ್ವನಿಗ-ಪ್ರತಿಮುಖಧಾಳೀ ವಿಚಕ್ಷಣ- ಜಲ, ನೆಲ, ಆಕಾಶ ಯುದ್ಧ ತಜ್ಞ—ಲೋರ್ಡ್ ಲುಯಿಸ್ ಮೌಂಟ್ ಬೇಟನರು ವಾಷಿಂಗ್ಟನಿನಲ್ಲಿ ಅಮೇರಿಕನ್ ಯುದ್ಧ ಪ್ರಮುಖರೊಡನೆ ಪರ್ಯಾಲೋಚನೆ ನಡೆಸಿದ್ದಾರೆ. ಇನ್ನು ಚುಂಗಿಕಿಂಗಿಗೆ ಧಾವಿಸಿ ಚಿಯಾಂಗ್ ಕೈಶೇಕರೊಡನೆ ಚರ್ಚಿಸಲಿದ್ದಾರೆ. ಹಿಂದುಸ್ಥಾನ ಮತ್ತು ಸಿಲೋನಿನಿಂದ ಜಪಾನರ ಮೇಲೆ ಧಾಳಿ ನಡಿಸುವ ಹೊಣೆಗಾರಿಕೆ ಅವರದು. ಸದ್ಯದಲ್ಲೇ ಬರ್ಮಾ ಧಾಳಿಯಾರಂಭವಾಗುವದನ್ನು ನಿರೀಕ್ಷಿಸಬೇಕು. ಅತ್ತ ಇಟಲಿಯಲ್ಲಿ--ಇತ್ತ ಬರ್ಮದಲ್ಲಿ—ಈ ವರೆಗೆ ಬೊಂಬುಗಳೆಳೆಯುತ್ತಿದ್ದ ಸ್ಥಳಗಳಿಗೆ ಸದ್ಯದಲ್ಲೇ ಮಿತ್ರರ ಸೋಲ್ಜರರಿಳಿಯಲಿದ್ದಾರೆ. ಈ ಸಂದರ್ಭದಲ್ಲಾದರೂ ಹಿಂದೀ ಸಮಸ್ಯೆಯ ಪರಿಹಾರವಾದೀತೆ? ಅಥವಾ ಭಾರತವು ನಿಲ್ದಾಣವಾಗುವಾಗಲೂ ಭಾರತೀಯರು ನಿತ್ರಾಣವಾಗಿಯೇ ಇರಬೇಕೆ?

THE

Southern India Apex Bank Ltd.

(Incorporated in British India Liability of Share-holders Limited)

NOTICE.

NOTICE is hereby given that the First Ordinary General Meeting of the Bank will be held at the Registered Office of the Bank, Kalsank, Udipi, on Sunday th 19th day of September, 1943 at 11 A. M. to transact the following business:—

1 To receive, consider and adopt the audited Balance Sheet and Profit & Loss Account for the first working period ended 30th June, 1943, together with the Auditor's Report and the first Annual Report of the Directors.

2. To declare a dividend.

3. To elect four Directors retiring under Article 81 and three Directors retiring under Article 89 of the Articles of Association; the retiring Directors are eligible for re-election.

4. To appoint an Auditor for the year 1943-1944 and to fix his remuneration. (Last year's Auditor Mr. M. S. Krishna Rao is eligible for re-election.)

5. To transact any other business which may be brought before the Meeting with the permission of the Chairman.

It is requested that you will be good enough to attend the Meeting. If, however, you find it inconvenient to attend the Meeting in person, you may appoint a shareholder of the Bank as your proxy. The instrument of proxy shall be duly signed over revenue stamps of the value of 2 annas and attested and shall reach the Registered Office of the Bank by 11 A. M of the 16th September, 1943.

(The Register of Members and Transfer Books of the Bank will remain closed from Saturday the 4th September, 1943 to Saturday the 2nd October, 1943, both days inclusive.)

(By order)

Kalsank, Udipi,
16th. August, 1943.

Sd/- H. K. Pai,
General Manager.

The Canara Banking Corporation Limited.
(Incorporated in British India with limited Liability)
ESTD: 1906.
Head Office: **UDIPI**, S. Kanara.
(Branches & Agencies in all principal cities of India)

Authorised capital	Rs. 25.00.000/-
Issued & Subscribed	Rs. 16.00.000/-
Paid up capital	Rs. 10.06.000/-
Reserves	Rs. 3.85.000/-

Advances are made against approved securities and bills purchased or collected at most favourable rates. For further particulars please apply to the nearest Branch.

ನವಯುಗ

ಉಡುಪಿ, ಗುರುವಾರ, ೬-೯-೧೯೪೫

'ಅಧಿಕಾಹಾರೋತ್ಪತ್ತಿ' ಚಳವಳ.

ನಮ್ಮ ಸರಕಾರದ 'ಅಧಿಕಾಹಾರ ಬೆಳೆಸಿರಿ' (Grow More Food) ಚಳವಳದ ಕರ್ಣಾನಂದಕರ ಘೋಷಗಳನ್ನು ಕೇಳದ ಪಟ್ಟಣಿಗರಿರಲಾರರು. ಆದರ ಬದನೆಕಾಯಿ ಬೆಳೆಯಿಸಿ, ಜಾವಾಸರನ್ನೋಡಿಸಿ' ಮುಂತಾದ ಘೋಷಣೆಗಳಿಂದಾಗಿ, ತರಕಾರಿ ಜಗಿಯುವವರನ್ನು ಕಾಣುವಾಗ ಬೊಂಬು ನುಂಗುವವರನ್ನು ಕಂಡಂತಹ ಕೌತುಕವನ್ನೋ ವಿನೋದವನ್ನೋ ಪಡಬಹುದಾಗಿದ್ದಿತು. ಆದರೆ 'ಅಧಿಕಾಹಾರ ಬೆಳೆಸಿರಿ' ಚಳವಳವು ಈ ಕಠಿಣ ಕಾಲದಲ್ಲಿ ವಿನೋದ ನಿರ್ಮಾಣಕ್ಕಾಗಿಯೇ ಜನ್ಮ ತಾಳಿದ್ದಿತೆಂದು ಪ್ರಥಮತಃ ಊಹಿಸಿದವರಿಲ್ಲ; ಈಗ ಅದರ ಪರಿಣಾಮವನ್ನು ಕಂಡ ಮೇಲೆ ಹಾಗೆಂದೇ ಭಾವಿಸಬೇಕಾಗುತ್ತದೆ. ಬಂಗಾಳದಲ್ಲಿ ಆಹಾರವಿಲ್ಲದೆ ಸತ್ತ ಜನರಷ್ಟು ಹೊಸ ಸಸಿಗಳನ್ನಾದರೂ ಈ ಚಳವಳವು ನಿರ್ಮಿಸಿರಬಹುದೇ?—ಎಂದು ಸಂದೇಹಪಡುವವರನ್ನು ಹುಚ್ಚರೆನ್ನಲಾಗದಷ್ಟು ಅದು ಅಪಜಯಗೊಂಡಿದೆ. ಆಹಾರ ಧಾನ್ಯಗಳನ್ನು ಅಧಿಕಾಧಿಕ ಬೆಳೆಸಬೇಕು ಎಂಬ, ಯೋಜನೆಯು ಹೊಟ್ಟೆಗಿಲ್ಲದೆ ಸಾಯುವವರ ತಲೆಯಲ್ಲಿ ಹುಟ್ಟಿದ ಯೋಗ್ಯವಂತಹದಲ್ಲ. 'ಸೈನ್ಯಕ್ಕೆ ಸೇರಿರಿ' ಎಂದು ಬೋಧಿಸುವಂತೆ 'ಆಹಾರ ಬೆಳೆಸಿರಿ' ಎಂಬ ಉಪದೇಶ ಮಾತ್ರಕ್ಕಾಗಿ ಯಾರ ಪೇಚಾಟವೂ ಬೇಕಾಗಿಲ್ಲ. ಈ ಅಧಿಕಾಹಾರ ಬೆಳೆಸುವ ಯೋಚನೆಯು ಅಧಿಕಾರಿಗಳ ಮೆದುಳಿನಲ್ಲಿ ಹುಟ್ಟುವ ಮೊದಲೇ ಹಿಂದೀ ರೈತನ ಹಸಿದ ಹೊಟ್ಟೆಯಿಂದೆದ್ದಿದೆ! ಆದರೆ ಅಧಿಕಾಧಿಕ ಬೆಳೆಸುವ ಅನುಕೂಲತೆ ಮಾತ್ರ ಬೆಳೆಸುವವರಿಗಿಲ್ಲ; ಸರಕಾರದ ಕರ್ತವ್ಯವೆಂದರೆ ಅದನ್ನೊದಗಿಸಿಕೊಟ್ಟು ಪೋಷಿಸುವದು— ಘೋಷಿಸುವದಲ್ಲ! ಆದರೆ ಕೇವಲ ಉಪದೇಶದ ಹೊರತು, ಅಧಿಕಾಹಾರ ಬೆಳವಣಿಗೆಯ ಅನುಕೂಲತೆಗಳನ್ನು ಸರಕಾರವು ಒದಗಿಸಿದುದಿದೆಯೆ? ಕೇಂದ್ರ ಸರಕಾರವು ಒಂದೂವರೆ ಕೋಟಿಗೂ ಚಿಲ್ಲರ ಕಡಿಮೆಯ ಮೊತ್ತವನ್ನು ಇದಕ್ಕಾಗಿ ಮಂಜೂರು ಮಾಡಿ, ಭಿಕ್ಷೆ ಹಾಕಿ ಬಿಟ್ಟುಕೊಟ್ಟಂತೆ ಈ ಚಳವಳದ ಸಂಬಂಧವನ್ನೇ ಕಡಿದುಕೊಂಡು ಕುಳಿತಿದೆ. ಪ್ರಾಂತಿಕ ಸರಕಾರಗಳ ಕೆಲಮಂದಿ ಪ್ರಮುಖಾಧಿಕಾರಿಗಳಿಗೆ, ಇದು ಜನತಾ ಚಳವಳವೋ, ಸರಕಾರೀ ಕಾರ್ಯಕ್ರಮವೋ ಎಂಬಷ್ಟು ಕೂಡಾ ಪರಿಚಯವಿಲ್ಲ. ಸರಕಾರಗಳು ಈ ಮುಖ್ಯ ಕಾರ್ಯವನ್ನು ಇನ್ನೂ ಅಲಕ್ಷ್ಯ ಮಾಡಿವೆ. ದೃಷ್ಟಾಂತಕ್ಕಾಗಿ, ಮದ್ರಾಸ್ ಸರಕಾರದ ಈ ಬಾರಿಯ ಬಜೆಟ್ ಪ್ರಕಟಣೆಯಲ್ಲಿ, ಅಧಿಕಾಹಾರೋತ್ಪತ್ತಿ ಚಳವಳದ ಕಾರ್ಯಕ್ರಮ ವರ್ಣನೆಯು ಕೇವಲ ಆರೇ ಪಂಕ್ತಿಗಳಲ್ಲಿತ್ತು! ಈ ಮಂತ್ರ ಪ್ರಸಾದಗಳ ಮಹಾತ್ಮೆಯಿಂದಲೇ 400 ಮಿಲಿಯ ಜನರನ್ನುಣ್ಣಿಸುವಷ್ಟು ಆಹಾರ ಧಾನ್ಯಗಳು ಮೊಳೆತು ಬೆಳೆಯುತ್ತಾದರೆ ಅದೊಂದು ಐಂದ್ರಜಾಲವೇ ಸರಿ!

ಹಿಂದುಸ್ಥಾನದ ಪರಿಸ್ಥಿತಿಯನ್ನು ಇಂಗ್ಲಾಂಡಿನೊಡನೆ ತುಲನೆ ಮಾಡೋಣ. ಯುದ್ಧಾನಂತರ ಬ್ರಿಟನಿನ ವ್ಯವಸಾಯೋತ್ಪತ್ತಿಯು ಸೇಕಡಾ 70ರಷ್ಟು ಹೆಚ್ಚಿದೆ. 400 ಮಿಲಿಯ ಜನರಿಗಾಗಿ ಹಿಂದೀ ಸರಕಾರವು ಪೂರ್ತಿ 2ಕೋಟಿ ಹಣವನ್ನೂ ಈ ಬಗ್ಗೆ ಮಂಜೂರು ಮಾಡದಿರುವಾಗ, ಇಂಗ್ಲಾಂಡಿನ 40 ಮಿಲಿಯ ಜನರಿಗಾಗಿ ಅಲ್ಲಿಯ ಸರ್ಕಾರವು 202 ಕೋಟಿಯನ್ನು ವ್ಯಯಿಸಿದೆ! ಇಂಗ್ಲಾಂಡಿನ ಸರಕಾರವು ಎಲ್ಲ [illegible]-ಘಟಿತ ಜನತಾ ಸಂಸ್ಥೆಗಳ ಮೂಲಕ ಈ ಕಾರ್ಯವನ್ನು ಪರಿಣಾಮಕಾರಿಯಾಗಿ ಮುಂದೊತ್ತುತ್ತಿರುವಾಗ, ನಮ್ಮ ಸರಕಾರಗಳು ತಮ್ಮ ಕೆಲವು ಜಾಹೀರಾತು ಮತ್ತು ನೌಕರರನ್ನು ಮಾತ್ರ ಇದಕ್ಕಾಗಿ ಬಿಟ್ಟು ತೃಪ್ತಿ ಹೊಂದಿವೆ. ಅಂತೂ, ಮೂಕ ಮಿಲಿಯ ಮಂದಿ ಉಪವಾಸ ಬೀಳುವ ದಿನಗಳಲ್ಲಿ ಸ್ಮರಣೆ ಮಾಡಲಾಗುವಂತಹ ದಿವ್ಯ ನಾಮವಾಗಿ ಸರಕಾರದಿಂದ 'ಆಹಾರೋತ್ಪತ್ತಿ ಚಳವಳ' ದೊರೆತಿದೆ—ಹಸಿವು ನಿವಾರಣೆಗಾಗಿ ಅದರ ಉಪಯೋಗವಾಗಿಲ್ಲ! ಸರಕಾರದ ಪ್ರತಿಯೊಂದು ಘೋಷಣೆಯಲ್ಲಿಯೂ ವಂಚನೆ, ಪ್ರದರ್ಶನಗಳೇ ತಿರುಳಾಗಿ ಸೇರಿಕೊಂಡಿರುವದು ನಮ್ಮ ದುರ್ದೈವ! ಆಹಾರ ಸಂಬಂಧದ ಕಾರ್ಯ ವಿಭಾಗಗಳಾವುವೂ ಇದಕ್ಕಪವಾದವಾಗಿಲ್ಲ. ಅಧಿಕಾಹಾರೋತ್ಪತ್ತಿ ಚಳವಳವಂತೂ [illegible] ಉದ್ದೇಶವಾಗಿ ವಿನೋದ ಕಾಲಕ್ಷೇಪವಾಗಿ ಪರಿಣಮಿಸಿದೆ. ದೇಶವು ಹಸಿವು ಪೀಡೆಯನುಭವಿಸುತ್ತಿರುವಾಗ ಆಹಾರದ ಹೆಸರು ಹೇಳಿ ಈ ರೀತಿ ಆಣಕಿಸಬಹುದೆ?

ದುರ್ಬೀನು

ಕಡಲೆ ಕಡಿಯಬೇಕು ಹಲ್ಲಿನಿಂದ; ಕಲ್ಲು ಕಡಿಯಬೇಕು ಹಾರೆಯಿಂದ. ಸಜ್ಜನ-ದುರ್ಜನ ಭೇದವರಿತು ಭಿನ್ನ ಸಂಭಾವನೆಯೇ ಬೇಕು

oo oo oo

ನರಳುವದೊಂದು ಚಿಕಿತ್ಸೆಯಲ್ಲ-ಆದರೂ ನರಳದಿರಲು ರೋಗಿಯಿಂದಾಗದು. ಪಿಸುಗುಟ್ಟುವದೊಂದು ವ್ಯವಹಾರವಲ್ಲ--ಆದರೂ ಪಿಸುಗುಟ್ಟದಿರಲು ಪಿಸುಣನಿಂದಾಗದು.

oo oo oo

ಮನೆ ಮಾಡಿ ಕುಳಿತರೆ ಅತಿಥಿಗಳು ಮಾತ್ರ ಬಂದಾರು; ಧರ್ಮಶಾಲೆ ಕಟ್ಟಿಸಿ ಹಾಕಿದರೆ ಭಿಕ್ಷುಕರೂ ನುಗ್ಗುತ್ತಾರೆ. ವ್ಯವಹಾರ ಬುದ್ಧಿಗೆ ಇತಿ-ಮಿತಿಯಲ್ಲೇ ಸಂಬಂಧ; ಉದಾರಬುದ್ಧಿಗೆ ಎಲ್ಲವೂ ತಾಗುತ್ತದೆ.

oo oo oo

ಭೋಜನ ಶಾಲೆಯ ಅಡಿಗೆ ಹೇಗಿದ್ದರೂ ಜನಬಂದಾರು; ಹೋಟೆಲಿನ ಊಟ ಹಾಳಾಗಬಾರದು. ಉಪಕಾರದಲ್ಲಾದರೂ ತಪ್ಪ ಬಹುದು; ಉದ್ಯೋಗದಲ್ಲಿ ತಪ್ಪಿಬೀಳಬಾರದು.

oo oo oo

ಗೋಡೆ ಜರಿದು ಬಿದ್ದು ಅಂಗಳವೇರುವದು ಬೇಡ; ತಲೆತಗ್ಗಿ ಹೊಟ್ಟೆ ತುಂಬುವದು ಬೇಡ.

oo oo oo

ಕಾನೂನಿದ್ದಂತೆಯೇ ಕಳ್ಳಾಟಿಕೆಯಿದೆ; ನಿಯಮವಿದ್ದಂತೆಯೇ ನಿಂದ್ಯವಿಷಯಗಳಿವೆ.

oo oo oo

ಮೊಗಸಿದ ನೇಸರನನ್ನು ಹಿಂದೆಗೆಯುವಾಗ ಹೊಕ್ಕ ಸ್ಥಳವನ್ನು ಕೆತ್ತು ತರಲಾಗುವದಿಲ್ಲ; ಸೆಟ್ಟ ಮನಸ್ಸನ್ನು ಹಿಂಪೆಗೆಯುವಾಗ, ಬಯಸಿದ ವಸ್ತುವೂ ಜತೆಯಲ್ಲಿ ಬರುವದಿಲ್ಲ.

oo oo oo

ಕೋತಿ ನೆಗೆದರೆ ಭೂಮಿಯದುರದು; ತರಳೇ ಮಾತಿನಿಂದ ವಸ್ತುಸ್ಥಿತಿ ಬದಲಾಗದು.

oo oo oo

ತಾಳಕ್ಕೆ ಜತೆಯಾಗಬೇಕು ತಾಳ ಹೊರತು ತಂಬಟೆಯಲ್ಲ; ಹೃದಯಮೊಡನೆ ಮಿಲನವಾಗಬೇಕು ಹೃದಯ ಹೊರತು ಕಾಯಿದೆ ಕಟ್ಟಳೆಗಳಲ್ಲ.

oo oo oo

ಒಂದೇ ಹಸಿಯಿಂದ ಒದ್ದೆ ಯಾದೆನೆಂದು ಭಾವಿಸಬಾರದು; ಅಲ್ಪ ಘಟನೆಯಿಂದ ಅತಿಯಾಗಿ ನೊಂದುಕೊಳ್ಳಬಾರದು.

ಚಂದಾದಾರರಲ್ಲಿ ವಿನಂತಿ.

ಇದೇ ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ ನವಯುಗದ ೨೬ನೇ ವರ್ಷವು ಕೊನೆಗೊಂಡು ಇದೇ ಸೆಪ್ಟಂಬರ ತಿಂಗಳಿಂದ ೨೭ನೇ ಹೊಸ ವರ್ಷಾರಂಭವಾಗಿರುವುದು ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ನಮ್ಮ ಚಂದಾದಾರರು ತಮ್ಮ ಚಂದಾ ಹಣವನ್ನು ದಯಮಾಡಿ ಕೂಡಲೇ ಕಳುಹಿಸಿ ಕೊಡುವಂತೆ ಅಪೇಕ್ಷಿಸಲಾಗುತ್ತದೆ.

ಮೆನೇಜರ್.

ಅತ್ಯಾಶ್ಚರ್ಯಕರ
ಗುಣಕಾರಿ!
ಗಿಡಮೂಲಿಕೆಗಳ ವನಸ್ಪತಿ ಔಷಧ
(ಗುಣಕಾರಿಯಲ್ಲವೆಂದು ರುಜುಪಡಿಸುವವರಿಗೆ ರೂ. ೧೦೦ ಇನಾಂ.)

ನರೆತ ಕೂದಲು
ಮಾರ್ಕೆಟುಗಳಲ್ಲಿ ದೊರೆಯುವ ರಂಗುಗಳನ್ನು ಉಪಯೋಗಿಸಬೇಡಿರಿ. ಆಯುರ್ವೇದ ರೀತ್ಯಾ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ ತೈಲವನ್ನೇ ಉಪಯೋಗಿಸಿರಿ. ಆಗ ತಾನೆ ತಿಳಿಯುವುದು. ನರೆತ ಬಿಳಿ ಕೂದಲು ಕಪ್ಪಾಗುವುದು. ಮಾತ್ರವಲ್ಲದೆ ದೃಷ್ಟಿದೋಷ, ತಲೆನೋವು ಸಹ ಮಾಯವಾಗುವುದು. ಕೆಲವೇ ಕೂದಲು ನರೆತರೆ ಎರಡು ರೂಪಾಯಿ ಬೆಲೆಯ ಒಂದು ಸೀಸೆ ಸಾಕಾಗುವುದು. ಮೂರೂವರೆ ರೂಪಾಯಿ ಕ್ರಯದ ಒಂದು ಸೀಸೆ ತೈಲದಿಂದ ಹೆಚ್ಚಿಗೆ ನರೆತ ಕೂದಲುಗಳು ಕಪ್ಪಾಗುವುವು. ಎಲ್ಲಾ ಕೂದಲುಗಳು ನರೆತಲ್ಲಿ ಅವೆಲ್ಲ ಕಪ್ಪಾಗಲು ಐದು ರೂಪಾಯಿ ಬೆಲೆಯ ಒಂದು ಸೀಸೆ ಎಣ್ಣೆ ಸಾಕಾಗುವುದು. ಗುಣಕಾರಿಯಲ್ಲವೆಂದು ರುಜುವಡಿಸಿದರೆ ಡಬ್ಬಲ್ ಕ್ರಯ ವಾಪಾಸು.

ಬಿಳಿ ಕುಷ್ಠ ಮತ್ತು ತೊನ್ನು
ಪಂಡಿತರಿಂದಲೂ ಹಕೀಮರೀ ಮೊದಲಾದವರಿಂದಲೂ ಗುಣಪಡಿಸಲಸಾಧ್ಯವಾದ ಬಿಳಿ ಕುಷ್ಠ ಮತ್ತು ತೊನ್ನು ಭಯಂಕರ ವ್ಯಾಧಿಯು ಹದಿನೈದು ದಿನಗಳ ವರೆಗೆ ನಮ್ಮ ಔಷಧಿಯನ್ನು ಲೇಪನ ಮಾಡಿದ್ದಲ್ಲಿ ಗುಣ ಹೊಂದುವುದು. ಹದಿನೈದು ದಿನಗಳ ಮದ್ದಿಗೆ ರೂಪಾಯಿ 2-8-0.

ಸಂತಾನ ನಿರೋಧ
ಬರ್ಥ ಕಂಟ್ರೋಲಿಗೆ ಹೇಳಿದ ಔಷಧವಿದು. ತಿಂಗಳಲ್ಲಿ ಎರಡು ಮೂರು ದಿವಸಗಳ ತನಕ ಸೇವಿಸತಕ್ಕದ್ದು. ಒಂದು ವರ್ಷಕ್ಕೆ ಬೇಕಾಗುವ ಔಷಧಿ ಬೆಲೆ ರೂಪಾಯಿ 2/- ಜೀವಮಾನದಲ್ಲೆ ಸಂತತಿಯಾಗಬಾರದೆಂದಿದ್ದರೆ ಅದಕ್ಕೂ ಬೇರೊಂದು ಔಷಧವಿದೆ. ಅದರ ಬೆಲೆಯು ಸಹಾ ರೂಪಾಯಿ 3/- ಇದರ ಸೇವನೆಯಿಂದ ಆರೋಗ್ಯಕ್ಕೆ ಹಾನಿಯೇನೂ ಇಲ್ಲ.

ಸಹನಶಕ್ತಿ ಮಾತ್ರೆ
ಸಂಜೆ ಹೊತ್ತಿಗೆ ಒಂದು ಮಾತ್ರೆಯನ್ನು ಸೇವಿಸಿದರೆ ಅದರ ಆನಂದವನ್ನು ಹೇಳತೀರದು. ಕಳೆದುಹೋದ ಮಾನುಷತ್ವವು ಪುನಹ ಪ್ರಾಪ್ತಿಯಾಗಿ ಶರೀರದಲ್ಲಿ ಹೊಸ ಹುರುಪು ಶಕ್ತಿ ವೃದ್ಧಿಯಾಗುವುದು. ಒಮ್ಮೆ ಉಪಯೋಗಿಸಿದ್ದಲ್ಲಿ ಎಂದೆಂದಿಗೂ ಬಿಡಲಾರಿರಿ. 16 ಮಾತ್ರೆಗಳ ಒಂದು ಸೀಸೆಗೆ ರೂಪಾಯಿ 1/- ಬೆಲೆ.

ಕಿವುಡುತನ
ಕಿವಿ ಕೇಳದಿರುವುದು, ಕಿವಿ ಸೋರುವುದು ಇತ್ಯಾದಿ ಸರ್ವ ಕಿವಿ ದೋಷಗಳಿಗೆ ದಿವ್ಯೌಷಧ. ಬೆಲೆ ರೂಪಾಯಿ 2/-

ಗೊನೋರಿಯಾ ಗುಣಕಾರಿ
ಗೊನೋರಿಯಾ ವ್ಯಾಧಿಗೆ ಸಂಬಂಧಿಸಿದ ಮೂತ್ರದೇ ಉರಿ— ಈ ಔಷಧ ಸೇವನೆಯಿಂದ ಸರ್ವವೂ ಮಾಯವಾಗಿ ದೇಹವೆಲ್ಲ ಉಲ್ಲಾಸವುಂಟಾಗುವುದು. ಬೆಲೆ ರೂ. 2/-
(ಪತ್ರವ್ಯವಹಾರ ಇಂಗ್ಲಿಷಿನಲ್ಲೇ ಮಾಡತಕ್ಕದ್ದು)
ಕೂಡಲೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—
Vaidraj Akhil Kishore Ram,
No.37, P.O. Katrisarai (Gaya)

ಸುದ್ದಿ ಸೂಚನೆ.

○ ಜರ್ಮನರು ಕೊಟ್ಟ ಅಲ್ಟಿಮೇಟಮನ್ನು ಡೆನ್ಮಾರ್ಕ್ ಸರಕಾರವು ತಿರಸ್ಕರಿಸಿ ರಾಜೀನಾಮೆಯಿತ್ತಿದೆ. ಅಲ್ಲಿಯ ರಾಜಾ ಕ್ರಿಶ್ಚಿಯನರು ನಾಜೀ ಬಂದಿಗಳಾದರೆಂಬ ವಾರ್ತೆಯಿದೆ

○ ಈಗ ಡೆನ್ಮಾರ್ಕನ್ನು ನಾಜೀ ಸೇನೆಯು ಸಂಪೂರ್ಣವಾಗಿ ಆಕ್ರಮಿಸಿಕೊಂಡು ಅಲ್ಲಿ ಮಾರ್ಶೆಲ್ ಲೋ ಜ್ಯಾರಿಯಲ್ಲಿದೆ

○ ನಾಜಿಗಳ ಕೈಗೆ ಬೀಳದಂತೆ ಡೆನ್ಮಾರ್ಕಿನ ಹಲವು ಯುದ್ಧ ಹಡಗುಗಳು ಆತ್ಮಹತ್ಯೆ ಮಾಡಿಕೊಂಡವು. ಕೆಲವು ಸ್ವೀಡನಿಗೆ ಓಡಿಹೋಗಿವೆ.

○ ಸ್ವೀಡನ್ ಸರಕಾರವೂ ಜರ್ಮನರ ವಿರುದ್ಧ ಧೋರಣೆ ವಹಿಸಿ ನಾಜಿಗಳಿಗೆ ವಿಶೇಷ ರಿಯಾಯತಿಯನ್ನು ಮನ್ನಾ ಮಾಡಿಸಿದೆ. ಜರ್ಮನಿಯನ್ನು ಆರೋಪಿಸುತ್ತಿರುವ ಸ್ವೀಡನಿನ 'ಅಸ್ವಾಭಾವಿಕ ನಡತೆಗಾಗಿ ಜರ್ಮನರು ಬೆದರಿಕೆ ಹಾಕಿದ್ದಾರೆ

○ ಹಿಟ್ಲರ್ ಪಕ್ಷಪಾತಿಯಾಗಿದ್ದ ಬಲ್ಗೇರಿಯಾದ ರಾಜರು ಹಿಟ್ಲರರೊಡನೆ ಸಂಭಾಷಿಸಿ ಸೋಫಿಯಾಕ್ಕೆ ಮರಳಿದೊಡನೆ ಗುಂಡಿಗೆ ಬಲಿಯಾಗಿ ಕೆಲ ದಿನ ನರಳಿ ಸತ್ತರೆಂದು ಮಿತ್ರರ ವಾರ್ತೆ. ಅವರು ಹೃದಯ ಸ್ತಂಭನದಿಂದ ಸತ್ತರೆಂದು ಬಲ್ಗೇರಿಯದ ಸುದ್ದಿ.

● ಬೋರಿಸ್ ಪುತ್ರನು ಈಗ ಬಲ್ಗೇರಿಯದ ಅರಸರಾಗಿ ಪಟ್ಟವೇರಿದಾನೆ. ಹಿಂದಿನ ಧೋರಣೆಯನ್ನೇ ಮುಂದೊತ್ತಲಾಗುವದೆಂದು ಬಲ್ಗೇರಿಯಾ ಸರಕಾರವು ಸಾರಿದೆ.

○ ರಶ್ಯದಲ್ಲಿ ಕಾರ್ಖೋವಿನ ಒಳಗಡೆ ಕೆಂಪು ಸೇನೆಗಳು ಕಸ್ತೂರೀ ಧಾಳಿಯನ್ನು ನೀಪರ್ ಕಡೆಗೆ ಅತಿ ಪ್ರಬಲವಾಗಿ ಹೂಡಿವೆ. ನಾಜೀ ಸೇನೆಗಳು ಒಂದೊಂದೇ ನಗರವನ್ನು ಖಾಲಿ ಮಾಡಿ ಹಿಂಜರಿಯುತ್ತಿವೆ.

○ ಸ್ಮೋಲೆಂಸ್ಕಿನ ಉತ್ತರಗಡೆಯಿಂದ ಕೆಂಪು ಸೇನೆಯು ಹೊಸ ಧಾಳಿ ಹೂಡಿದೆ. ರಶ್ಯದ ಎಲ್ಲಾ ರಣರಂಗಗಳಲ್ಲೂ ನಾಜಿಗಳೀಗ ರಕ್ಷಣಾ ಯುದ್ಧ ಕೊಡುವ ದುಸ್ಥಿತಿಗಿಳಿದಿದ್ದಾರೆ

○ ತಮಗೆ ಕೊನೆಯ ವಿಜಯದ ದೃಢ ವಿಶ್ವಾಸವಿದೆಯೆಂದೂ ಆದರೆ ಯುರೋಪಿನಲ್ಲಿ ದ್ವಿತೀಯರಂಗಾರಂಭವಾಗುವದು ಅತ್ಯಗತ್ಯವೆಂದೂ ಪುನಃ ರಶ್ಯನ್ ಪ್ರಕರಣೆಗಳೆನ್ನುತ್ತಿವೆ.

○ ಇದೇ ತಾ ೩೧ರ ರಲ್ಲಿ ಕ್ವಿಬೆಕ್ ತೀರ್ಮಾನ ಯುದ್ಧಗತಿಯ ಕುರಿತು ಮಿ ಚರ್ಚಿಲ್ಲರು ಅಶಾದಾಯಿ ಆಕಾಶವಾಣೀ ಭಾಷಣವಿತ್ತರು.

○ ಒರ್ಮಕ್ಕೆ ಜಪಾನರು ಸ್ವಾತಂತ್ರ್ಯ ವಿತ್ತಿದ್ದಾರೆ. ಅಲ್ಲಿಯ ಸರಕಾರವು ಕೂಡಲೇ ಮಿತ್ರರಾಷ್ಟ್ರೀಯರ ಮೇಲೆ ಯುದ್ಧ ಸಾರಿದೆ.

○ ಜರ್ಮನಿ, ಇಟಲಿಗಳ ಮುಖ್ಯ ನೆಲೆಗಳ ಮೇಲೂ ಬರ್ಮದ ರಾಜ್ಯಗಳ ಮೇಲೂ ಮಿತ್ರರು ಸರ್ವ ಬಲದ ಆಕಾಶ ಧಾಳಿನಡೆಸುತ್ತಿದ್ದಾರೆ. ಹೇಂಬರ್ಗ್ ಮೊದಲಾದ ಜರ್ಮನ್ ನಗರಗಳಲ್ಲಿ ಖಾಲಿಮಾಡುವ ಗದ್ದಲವೆದ್ದಿದೆ ಎಂಬ ವಾರ್ತೆ ಬಂದಿದೆ

○ ಜಪಾನಿನ ಮಾಜಿ ಮುಖ್ಯ ಮಂತ್ರಿಗಳು ಮೊದಲಾದ ಧುರೀಣರು ಸರಕಾರದ ಪ್ರಮುಖಾಧಿಕಾರಿಗಳೊಡನೆ ಪರಿಷತ್ತಿನಲ್ಲಿ ಕೂಡಿ ಯುದ್ಧಸ್ಥಿತಿಯ ಪರ್ಯಾಲೋಚನೆ ನಡೆಸಿದ್ದಾರೆ.

○ ಅಮೇರಿಕದ ಉಪಕಾರ್ಯದರ್ಶಿಯಾಗಿದ್ದ ಮಿ. ಸಮ್ನರ್ ವೆಲ್ಸರು ರಾಜೀನಾಮೆಯಿತ್ತಿದ್ದಾರೆ.

○ ಬಂಗಾಳದಲ್ಲಿ ಆಹಾರ ಅಭಾವದಿಂದ ಸಾಯುವವರ ಸಂಖ್ಯೆ ದಿನದಿಂದ ದಿನಕೆ ಬೆಳೆಯುತ್ತಿದೆ ಕಳೆದ ವಾರದ ತನಕ ದಿನ ಮರಣಗಳ ಸಂಖ್ಯೆ 200ವರೆಗೇರಿದೆ.

○ ಮದ್ರಾಸಿನ ಹರಿಜನ ಮುಖಂಡರಾದ ದಿವಾನ್ ಬಹದೂರು ಎಮ್ ಸಿ. ರಾಜಾ ಎಂ ಎಲ್. ಎ ರವರು ದಿವಂಗತರಾದರು ಡಾ। ಅಂಬೇಡ್ಕರ್, ಸರ್ ಸಿ ಪಿ. ಶ್ರೀ ಮುತ್ತುರಂಗ ಮುದಲಿಯಾರ್ ಮೊದಲಾದ ಪ್ರಮುಖರು ದುಃಖಸೂಚಿಸಿದ್ದಾರೆ. ದಿವಂಗತರು ಅಖಿಲಭಾರತದ ಕೆಲವೇ ಮಂದಿ ಹರಿಜನ ಮುಖಂಡರಲ್ಲೊಬ್ಬರು

○ ಶ್ರೀ. ಮುನ್ಷಿ, ಶ್ರೀ ಶ್ರೀವಸ್ತವ ಮೊದಲಾದ ಕಾಂಗ್ರೆಸ್ ಪ್ರಮುಖರು ಸದ್ಯದ ರಾಜಕೀಯ ಪರಿಸ್ಥಿತಿಯ ಕುರಿತು ರಾಜಾಜಿಯೊಡನೆ ಸಂಭಾಷಿಸಲು ಮದ್ರಾಸಿಗೆ ಬರಲಿದ್ದಾರೆ.

○ ವೈಸರಾಯರು ದಕ್ಷಿಣ ಭಾರತದ ಪ್ರವಾಸ ಮುಗಿಸಿಕೊಂಡು, ಪೂನಾ ಬೊಂಬಾಯಿ ಮಾರ್ಗವಾಗಿ ಹಿಂದೆರಳಿದ್ದಾರೆ.

○ ಮಿ ಈಡೆನ್ ಮತ್ತು ಮಾಜೀ ರಶ್ಯನ್ ರಾಯಭಾರಿ ಎಮ್. ಮೈಸ್ಕಿಯವರು ಲಂಡನಿಗೆ ಮರಳಿದ್ದಾರೆ. ತ್ರಿರಾಷ್ಟ್ರ ಪರಿಷತ್ತಿನ ವ್ಯವಸ್ಥೆಯ ಪ್ರಯತ್ನಕ್ಕಾಗಿಯೆಂದು ವಾರ್ತೆ

○ ಮುಸಲಿನಿಯುಳಿಯ ಮತ್ತು ಇಟಲಿಯ ಹಿಂದಿನ ವಿದೇಶ ಮಂತ್ರಿ ಕೌಂಟ್ ಸಿಯಾನೋ ಬಂಧನದಿಂದ ತಪ್ಪಿಸಿಕೊಂಡು ಕಾಣೆಯಾಗಿರುವನೆಂದು ಸುದ್ದಿ.

● ಇಟಲಿಯ ಕೌಂಟ್ ಗ್ರೇಂಡಿ ಮತ್ತು ಬ್ರಿಟಿಷ್ ಸರಕಾರದ ಪ್ರತಿನಿಧಿಗಳೊಳಗೆ ಲಿಸ್ಬನಿನಲ್ಲಿ ಗುಪ್ತವಾಗಿ ಸಂಧಾನ ಮಾತುಕತೆ ನಡೆಯುತ್ತಿದೆ ಎಂದು ತಿಳಿದು ಬರುತ್ತದೆ

● ರಾಜಾಜಿಯವರ ಅಪೇಕ್ಷೆಯಂತೆ ಸರ್ ಕ್ರಿಪ್ಸರು ಹಿಂದುಸ್ಥಾನಕ್ಕೆ ಬರುವದು ಅಸಂಭವವೆಂದೂ ಆಚಾರ್ಯರೇ ಕೂಡಲೇ ಇಂಗ್ಲಾಂಡಿಗೆ ಹಾರಬೇಕೆಂದೂ ಲಂಡನ್ ಪತ್ರಿಕೆಯೊಂದು ಆಮಂತ್ರಿಸಿದೆ

○ ಬರ್ಲಿನ್ ಮತ್ತು ಟೋಕಿಯೋಗಳಲ್ಲಿ ನಮ್ಮ ಸೇನಾ ಸವಾರಿ ನಡೆಯುವ ತನಕ ನಮಗೆ ಬಿಡುವಿಲ್ಲ ಆದರೆ ಸಿಲೋನಿನ ಅಪಾಯ ನಿವಾರಣೆಯಾಯಿತೆಂದು ಯಾರೂ ತೃಪ್ತಿ ಹೊಂದಬಾರದು, ಎಂದು ಸಿಲೋನಿನ ಸರ್ವ ಸೇನಾನಿ ಎಡ್ಮಿರಲ್ ಲೇಟನರ ಮಾತು.

○ ನಿರ್ಬಂಧದಲ್ಲಿರುವ ಖಾನ್ ಅಬ್ದುಲ್ ಗಫರ್‌ಖಾನರ ಆರೋಗ್ಯವು ಕೆಟ್ಟಿದೆ. ಈ ಕುರಿತು ಗಡಿನಾಡು ಎಸೆಂಬ್ಲಿಯಲ್ಲಿ ಪ್ರಶ್ನೆ ಬಂದಾಗ ಮಂತ್ರಿಗಳು ಹಾರಿಕೆಯ ಉತ್ತರ ಕೊಟ್ಟಿದ್ದಾರೆ.

ಹಿಂದೀ ಸ್ವಾತಂತ್ರ್ಯ

ಸ್ವತಂತ್ರ ಭಾರತಕ್ಕೆ ಅಂತರ್ರಾಷ್ಟ್ರೀಯ ಮಂಜೂರಾತಿಯೀಯುವ ಲಂಡನಿನ ಸಮಿತಿಯು, ಜೋರ್ಜ್ ಬರ್ನಾರ್ಡ್ ಷಾರವರನ್ನು ಸೇರಿಸಿಕೊಳ್ಳಲಿತ್ತ ಆಮಂತ್ರಣವನ್ನು ಷಾ ತಿರಸ್ಕರಿಸಿದ್ದಾರೆ. 'ಪಾನಿದಕ್ಕೆ ಬೆಂಬಲ ಕೊಡಲಾರೆ. ಎರಡು ರಾಷ್ಟ್ರಗಳೊಳಗೆ ಸ್ವಾತಂತ್ರ್ಯವಸಾಧ್ಯ. ಸ್ನೇಹಪೂರ್ಣ ಸಹಕಾರದಿಂದ ಒಂದು ಇನ್ನೊಂದನ್ನಾಧರಿಸಿಕೊಂಡಿದ್ದರೇನೇ ಶಾಂತಿ ಸಾಧ್ಯ. ಹಾಗಿಲ್ಲದಿದ್ದರೆ ಅವು ಒಂದನ್ನೊಂದು ನಾಶಮಾಡಿಕೊಳ್ಳುವವು ಅಷ್ಟೇ ಅಲ್ಲ; ಹಿಂದುಸ್ಥಾನದ ಉದ್ಯೋಗವು ನನ್ನ ಖಾಸಗಿಯದಲ್ಲ. ಹಿಂದೀ ಸ್ವಾತಂತ್ರ್ಯವು ಹಿಂದೀಯರಿಂದಲೇ ಸಂಪಾದಿಸಲ್ಪಡಬೇಕು"– ಎಂದು ಷಾರ ಉತ್ತರ. ಬ್ರಿಟಿಷ್ ಸುದ್ದಿ ಮಂತ್ರಿಗಳಾದ ಮಿ. ಬ್ರೆಂಡಾನ್ ಬ್ರೇಕನ್ ಇವರು "ಭಾರತೀಯ ರಾಜಕೀಯ ಪ್ರಶ್ನೆಯನ್ನು ಯುದ್ಧಾವಧಿಯ ವರೆಗೆ ಥಂಡಾಗೊಳಿಸಿಡಲಾಗಿದೆ"– ಎಂದಿದ್ದಾರೆ ರಾಜಾಜಿಯವರು ರಾಷ್ಟ್ರಗಳು ಒಂದನ್ನೊಂದು ಆಧರಿಸಿಕೊಂಡಿರಬೇಕೆನ್ನುವ ಷಾ 'ಹಿಂದೀ ಸ್ವಾತಂತ್ರ್ಯವು ಹಿಂದೀಯರಿಂದಲೇ ಸಾಧಿಸಲ್ಪಡಬೇಕು' ಎಂದ ಅಸಂಬದ್ಧವನ್ನು ಎತ್ತಿ ತೋರಿಸಿ 'ಹಿಂದೀ ರಾಜಕೀಯ ಪ್ರಶ್ನೆಯನ್ನು ಥಂಡಾಗೊಳಿಸಿಟ್ಟುದಲ್ಲ–ಯುದ್ಧದ ಮುಖ್ಯೋದ್ದೇಶವೊಂದನ್ನೇ ಥಂಡಾಗೊಳಿಸಿದುದು' ಎಂದು ಬ್ರೇಕನಿಗೆ ಉತ್ತರವಿತ್ತಿದ್ದಾರೆ.

ನೋಟೀಸು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S- 155/1943

ವಾದಿ ರಾಮಣ್ಣಶೆಟ್ಟಿ

ಪ್ರತಿವಾದಿ 1 ರತ್ನಾವತಿ.ಗಣಪಯ್ಯನ ವಿಧವೆ ಮಂಗಳೂರಲ್ಲಿರುವ ಶಂಕರಾನಂದ ಮಹಿಳಾಶ್ರಮ, ಕಲ್ಲಿ 2. ರಾಧಮ್ಮ

ಸದ್ರಿ ವಾದಿಯು 1ನೇ ಪ್ರತಿವಾದಿಯ ಗಂಡ ಮೃತ ಗಣಪಯ್ಯನವರಿಗೆ ಏನೊಂದೂ ಪ್ರತಿಫಲ ಪಡಿಯದೆ ತಾರೀಕು 5-1-1937ರಲ್ಲು ಒಂದು ತೋರಿಕೆ ಮಟ್ಟಿನ ಕ್ರಯದಸ್ತಾವೇಜು ಬರಕೊಟ್ಟಿದ್ದಾನೆ. ಸದ್ರಿ ಕ್ರಯದಸ್ತಾವೇಜಿನ ಆಧಾರದ ಮೇಲೆ ಎಂದಿಗೂ ಪ್ರತಿವಾದಿಗಾಗಲೀ ಅವಳ ಕಡೆಯವರಿಗಾಗಲೀ ಯಾವ ತರದ ಎಷ್ಟನ್ನಾದರೂ ಹಕ್ಕು ಸದ್ರಿ ಕ್ರಯ ದಸ್ತಾವೇಜಿನಲ್ಲಿ ಕಾಣಿಸಿದ ವಾದಿಯ ಬಾಬ್ತು ಆಸ್ತಿಗಳ ಮೇಲಿರುವುದಿಲ್ಲ. ಆ ಕುರಿತು ವಾದಿಯು ಸದ್ರಿ ಕ್ರಯ ದಸ್ತಾವೇಜಿನ ರದ್ದಿನ ಬಗ್ಗೆ ಮತ್ತು ಮಂದನೇ ಪ್ರತಿವಾದಿಗಳಾಗಲೀ ಅವರ ಕಡೆಯವರಾಗಲೀ ಬಲತ್ಕಾರದಿಂದ ಸ್ವಾಧೀನತೆ ಪಡಿಯದಹಾಗೆ ಶಾಶ್ವತ ಇಂಜಂಕ್ಷನ್ ಬಗ್ಗೆ ಸಹಾ ವೆಲ್ಯುವೇಶನ್ ದಾವೆದಾಖಲು ಮಾಡಿರುತ್ತಾನೆ. ಆ ಕುರಿತು ಏನಾದರೂ ಆಕ್ಷೇಪ ವಗೈರೆಯಿದ್ದರೆ ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 18-9-1943ನೇ ದಿವಸ ಹಗಲು ಹನ್ನೊಂದು ಗಂಟೆಗೆ ಸ್ವತಃ ಹಾಜರಾಗಿಯಾ ವಕೀಲರ ಮುಖಾಂತರ ಹಾಜರುಮಾಡಿಕೊಳ್ಳತಕ್ಕದ್ದು. ಇಲ್ಲವಾದ್ರೆ ಎಕ್ಸಪಾರ್ಟಿಯಿಂದ ಕೋರ್ಟಿನವರು ತೀರ್ಮಾನ ಪಡಿಸುತ್ತಾರೆಂಬ ಸಂಗ್ತಿಯನ್ನು ಸದ್ರಿ ಮಂದನೇ ಪ್ರತಿವಾದಿಗೆ ಈ ಮೂಲಕ ತಿಳಿಸಲಾಗುತ್ತದೆ.

(By order of the court.)

K. Raghunath Shenai

ವಾದಿಯ ವಕೀಲರು.,

ಮೊಕ್ಕಾಂ ಕುಂದಾಪುರ,
ತಾರೀಕು 25-8-1942.

ಶುಚಿ!! **ಸೆಂಟ್ರಲ್ ಕೆಫೆ** ರುಚಿ!!

ಶ್ರೀನಿವಾಸ ಬಿಲ್ಡಿಂಗ್ಸ್, ಹೆಡ್ ಪೋಸ್ಟಾಫೀಸ್ ಸರ್ಕಲ್, ಶಿವಮೊಗ್ಗ.
ಪ್ರಯಾಣಿಕರಿಗೆ ಉಳಿದುಕೊಳ್ಳಲು ಸ್ಥಳಾನುಕೂಲ ಏರ್ಪಡಿಸಿರುತ್ತೆ.
ಸಕಾಲದಲ್ಲಿ ಉತ್ತಮವಾದ ಊಟ, ಕಾಫಿ ಮತ್ತು ಹಸನಾದ ತುಪ್ಪದಲ್ಲಿ ತಯಾರಿಸಿದ ತಿಂಡಿ ದೊರೆಯುತ್ತೆ.
ಈ ಸ್ಥಳವು ರೈಲ್ವೆಸ್ಟೇಷನ್, ಬಸ್‌ಸ್ಟ್ಯಾಂಡ್, ಕೋರ್ಟುಗಳಿಗೆ ಮಧ್ಯ ಸ್ಥಳದಲ್ಲಿದೆ
ಎಸ್. ರಾಮದಾಸ್, ಪ್ರೊಪ್ರೈಟರ್.



ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಾಂಜಿ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

2—9—43ರಿಂದ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ರೇಣುಕಾದೇವಿ & ಅಶೋಕ ಕುಮಾರ್ ನಟಿಸಿರುವ
ಬಾಂಬೆಟಾಕಿಸ್
ನಯಾಸಂಸಾರ್
ನಡೆಯುವ ಚಿತ್ರ–
ಪರಮೌಂಟ್‌ನವರ
ಗೋಲಿಬಾರ್.
ಬರುವುದು:—**ಕನ್ಯಾದಾನ್, ವಿಜಯ್, ಸತ್ಯಭಾಮ, ಕೃಷ್ಣಸುಧಾಮ ಇತ್ಯಾದಿ**

CHAMPAE'S
SNOW & CASTREX
AGENTS
SATANANDA STORES UDUPI

ದಕ್ಷಿಣ ಕನ್ನಡ

ಮಂಗಳೂರು.

ಜಿಲ್ಲಾ ಬೋರ್ಡು ಚುನಾವಣೆ.

ಮಂಗಳೂರು ಫಿರ್ಕದ ಒಂದು ಜನರಲ್ ಸೀಟಿಗೆ ಶ್ರೀ ಎಸ್. ನರಸಪ್ಪಯ್ಯ, ವಕೀಲ್ ಅವರೂ ಶ್ರೀ ಕಾಂತಣ್ಣ ಯಾನೆ ಕೃಷ್ಣ ಸೆಟ್ಟಿ ಅವರೂ ಹೀಗೆ ಅವರಿಬ್ಬರು ಉಮೇದುವಾರರಾಗಿರುತ್ತಾರೆ. ರಿಸರ್ವ್ ಸೀಟಿಗೆ ಮಿ. ಕ್ರಿಶಾನ್ ಲೋಬೋ ಅವರು ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿಸಲ್ಪಟ್ಟಿದ್ದಾರೆ. ಮೂಲ್ಕಿ ಫಿರ್ಕಾಕ್ಕೆ ಶ್ರೀ ಬೋಳ ವಾಸುದೇವರಾವ್ ಅವರು ಪ್ರತಿ ಸ್ಪರ್ಧಿಗಳಿಲ್ಲದೆ ಆರಿಸಲ್ಪಟ್ಟಿದ್ದಾರೆ. ಪಾಣೆಮಂಗಳೂರು ಫಿರ್ಕಾ ಜ|| ಸೀಟ್ ಗಳಿಗೆ ಶ್ರೀ. ಕಾಂತಣ್ಣ ಸೆಟ್ಟಿ, ಕೆ. ಮತ್ತು ಕೃಷ್ಣ ಪೈ ಕೆ. ಇವರಿಬ್ಬರು ಉಮೇದುವಾರರಾಗಿರುತ್ತಾರೆ.

ಮಂಗಳೂರಲ್ಲಿ ಸ್ಟೇಂಡಾರ್ಡ್ ಬಟ್ಟೆ

ಮಂಗಳೂರಿಗೆ ಅಗ್ಗದ ಬಟ್ಟೆಗಳು ಬಂದಿವೆ. ಹಂಪನಕಟ್ಟೆ, ಮಣ್ಣಗುಡ್ಡೆ, ತದ್ರಿ ಮೊದಲಾದ ಕಡೆ ಇರುವ ಸಹಕಾರೀ ಸಂಘಗಳಿಗೂ, ಇನ್ನು ಕೆಲವು ಮಂದಿಗೂ ಈ ಬಟ್ಟೆಗಳ ವ್ಯಾಪಾರಕ್ಕಾಗಿ "ಲೈಸೆನ್ಸ್" ಕೊಡಲಾಗಿದೆ. ಈ ತಿಂಗಳ ಅಂತ್ಯದೊಳಗೆ ಇಲ್ಲಿಗೆ ಸುಮಾರು ೬೩ ಸಾವಿರ ಗಜಗಳಷ್ಟು ಈ ಜಾತಿಯ ಬಟ್ಟೆ ಬರಬಹುದೆಂದು ನಿರೀಕ್ಷಿಸಲಾಗಿದೆ. ಈ ಬಟ್ಟೆ ವ್ಯಾಪಾರವಿಲ್ಲಿ ಬೇಗನೇ ಆರಂಭವಾಗಲಿದೆ. ಈ ಬಟ್ಟೆಗಳಲ್ಲಿ ಶರ್ಟಿಂಗ್, ಸೀರೆಗಳ, ಧೋತಿಗಳೆಂಬ ಮೂರು ವರ್ಗಗಳಿವೆ. ಈ ಬಟ್ಟೆಗಳನ್ನು ಲೈಸೆನ್ಸ್ ಪಡೆದ ಯಾವಾತನೂ ಸರಕಾರ ನಿರ್ಧರಿಸಿದ ಬೆಲೆಗಿಂತ ಹೆಚ್ಚಿಗೆಯಾಗಿ ಮಾರಕೂಡದು. ಶರ್ಟಿಂಗ್ ಬಟ್ಟೆಯಲ್ಲಿ ಅಗಲಕ್ಕೆ ತಕ್ಕಂತೆ ಗಜವೊಂದಕ್ಕೆ ೦-೧೦-೫ ಪೈಯಿಂದ ೦ ೪-೧೧ಪೈ ವರೆಗೆ ಸುಮಾರು ೧೦ ನಮೂನೆಗಳೂ, ಧೋತಿಗಳಲ್ಲಿ ೧೧/೨ ಗಜಗಳ ಅಳತೆಯ ರೂ. ೨-೧೫-೬, ರೂ ೨-೧೪-೦ರ ಎರಡು ನಮೂನೆಗಳೂ, ೭ ಗಜಗಳ ಸೀರೆಗಳಲ್ಲಿ ರೂ. ೩-೧೨-೦ ರೂ ೩-೧೨-೬ರ ಎರಡು ನಮೂನೆಗಳೂ ಸಾರ್ವಜನಿಕ ಉಪಯೋಗಕ್ಕೆ ಚಿಲ್ಲರೆ ವ್ಯಾಪಾರಕ್ಕೆ ದೊರೆಯಲಿವೆ.

ಮಂಗಳೂರಲ್ಲಿ ಕೊಲೆರಾ

50 ಜನರಲ್ಲಿ 19 ಮಂದಿ ಸತ್ತರು.

ಕಳೆದ ತಾ ೨೭ರ ವರೆಗಿನ ವರದಿಯಂತೆ ಮಂಗಳೂರಲ್ಲಿ ಒಟ್ಟು ೫೦ ಜನರಿಗೆ ಕೊಲೆರಾ ರೋಗತಾಗಿ, ಅವರಲ್ಲಿ ೧೯ ಜನರು ಸತ್ತರು. ರೋಗಪ್ರಾರಂಭವಾದಂದಿನಿಂದ ಇದು ವರೆಗೆ ಒಂದೇ ತರದಲ್ಲಿದೆ. ದಿನವೊಂದರ ಒಂದೆರಡು ಮರಣಗಳು ಆಗುತ್ತಲೇ ಇವೆ. ಕೊಲೆರಾ ಮಂಗಳೂರಿಗೆ ಹೇಗೆ ಬಂತೆಂಬುದನ್ನು ಹೇಳಲಾಗುವದಿಲ್ಲ. ಏಕೆಂದರೆ ಮೊದಲು ಯಾರಿಗೆ ಕೊಲೆರಾ ತಾಗಿತ್ತೆಂದು ಇದು ವರೆಗೆ ತಿಳಿದಿಲ್ಲ. ಆದರೂ ಇದು ಮಲಬಾರಿನಿಂದಲೇ ಬಂದಿರಬೇಕೆಂದು ಊಹಿಸಬಹುದು. ಮುನ್ಸಿಪಲ್ ಹೆಲ್ತ್ ಆಫೀಸರ್ ಡಾ| ಬಂಗೇರರು ತನ್ನ ಸಿಬಂದಿ ಸಹಿತ ನಗರದಲ್ಲಿ ಒಂದೇ ಸಮನೆ ಕೊಲೆರಾ ಪ್ರತಿಬಂಧಕ ಕಾರ್ಯ ನಡೆಸುತ್ತಿದ್ದಾರೆ. ತಾ ೨೭ರ ವರೆಗೆ ಸುಮಾರು ೨೪ ಸಾವಿರ ಮಂದಿಗೆ ಪ್ರತಿಬಂಧಕ ಇಂಜೆಕ್ಷನ್ ಚುಚ್ಚಲಾಗಿದೆ. ಖಾಸಗಿ ಡಾಕ್ಟರರೂ ಈ ಕಾರ್ಯದಲ್ಲಿ ಸಹಕರಿಸುತ್ತಾರೆ. ಡಾ| ಗಳಾದ ಗಿರಿಧರರಾವ್, ಎಂ. ಟಿ. ಕಾಮತ್, ಪಿ ಪಿ. ಕಾಮತ್, ಕೆ. ಜ. ಎಂ. ಭಂಡಾರಿ. ಕೆ. ಬಿ. ಶೆಟ್ಟಿ, ಎಂ ಎಸ್. ಪ್ರಭು, ಯು ಎನ್. ನಾಯಕ್ ಉಪೇಂದ್ರ ಪೈ, ಬಿ ಎಂ ಬಾಳಿಗಾ ಮೊದಲಾದವರು ವಿಶೇಷ ಸಹಕರಿಸಿದ್ದಾರೆ. ಹೆಚ್ಚಾಗಿ ಮಂಗಳೂರಲ್ಲಿ ಕೊಲೆರಾ ಆದದ್ದು ಹಾಗೂ ಮರಣ ಹೊಂದಿದ್ದು, ಬೋಳೂರು ಬೊಕ್ಕಪಟ್ಣ, ಕುದ್ರೋಳಿ ಕಡೆಯಲ್ಲಿ, ಜಪ್ಪಿನಲ್ಲಿ, ಸೂಟರ್ ಪೇಟೆ ಈ ಕಡೆಗಳಲ್ಲಿ. ರೋಗವು ಇಡೀ ನಗರದಲ್ಲಿ ಎಲ್ಲಾ ಕಡೆಗಳಲ್ಲಿ ಅಲ್ಲಲ್ಲಿ ಹರಡಿದೆ.

ಮಹಿಳೆಯ ಸಾಹಸ

ಕಳೆದ ಗುರುವಾರ ಕದ್ರಿಯ ಗುಪ್ಪೆ(ಮಾರ್ ಎಂಬಲ್ಲಿ ೧|| ವರ್ಷದ ಒಂದು ಮಗು ಅಕಸ್ಮಾತ್ ಒಂದು ಬಾವಿಗೆ ಬೀಳಲು ನಾಗಮ್ಮ ಎಂಬ ೨೫ ವರ್ಷದಾಕೆ ಓಡಿ ಬಂದು ಬಾವಿಗೆ ಹಾರಿ ಮಗುವನ್ನೆತ್ತಿ ಬದುಕಿಸಿದಳು.

ಉಡುಪಿ.

ಉಡುಪಿ ತಾಲೂಕು ವರ್ಗದಾರ ಸಂಘವು ಮದ್ರಾಸ್ ರೆವಿನ್ಯೂ ಬೋರ್ಡಿಗೆ ಮನವಿಯೊಂದನ್ನೊಪ್ಪಿಸಿ, ಸದ್ಯದ ಯುದ್ಧಾವಧಿಯವರೆಗೆ ಎಲ್ಲಾ ಸರಕಾರೀ ಭೂಮಿಗಳ ಶಾಶ್ವತ ಉಪ... ಅನುಮತಿ ಪಡಿಸಿರುವ ಬೋರ್ಡಿನ ಹುಕುಮನ್ನು ಪುನರಾಲೋಚಿಸಬೇಕೆಂದೂ, ಕುಮ್ಕಿ ಸ್ಥಳಗಳನ್ನು ಹಿಂದಿನಂತೆಯೇ ಅದರ ಮರಗಳ ಮೇಲಿನ ಪ್ರಭುತ್ವವನ್ನೂ ಅನುಭೋಗಿಸಲು ಬಿಡಬೇಕೆಂದೂ ಪ್ರಾರ್ಥಿಸಿಕೊಂಡಿದೆ. ಮನವಿಯ ಪರ್ಯಾಲೋಚನೆ ನಡೆಸುವ ವರೆಗೆ ಕುಮ್ಕಿ ಭೂಮಿಯ ಮರಗಳ ಮಾರಾಟವನ್ನು ನಿಲ್ಲಿಸುವ ಆಜ್ಞೆ ಕೊಡಬೇಕು. ಇಲ್ಲವಾದರೆ ಮರಗಳು ನಾಶವಾಗಿ ಕುಮ್ಕಿ ಸ್ಥಳಗಳು ಬಂಜರು ಬೀಳುವವು ಅಥವಾ ನಿಷ್ಪ್ರಯೋಜಕವಾಗುವವು ಎಂದೂ ಆ ಮನವಿಯಲ್ಲಿ ಪ್ರಾರ್ಥಿಸಲಾಗಿದೆ. ಸಮೀಪದ ವರ್ಗದಾರರು ಸಂಬಂಧಪಟ್ಟ ಸರಕಾರೀ ಸ್ಥಳಗಳಿಂದ ಹುಲ್ಲು, ತರಗೆಲೆ, ಕಟ್ಟಿಗೆ ಮತ್ತು ಕಟ್ಟೋಣಕ್ಕಾಗುವ ಸಾಹಿತ್ಯಗಳನ್ನು ಪಡೆಯಲಾಗುವಂತ ಕುಮ್ಕಿ ಹಕ್ಕಿನ ವಿಶೇಷ ರಿಯಾಯತಿಯು ಬಹು ಪುರಾತನ ಕಾಲದಿಂದ ಕೊಡಲ್ಪಟ್ಟಿದ್ದಾಗಿರುತ್ತದೆ. ಈ ಯುದ್ಧದ ಸಾಮಾನು ಸೋಲ್ಜರರುಗಳಿಗೆ ಬೇಕಾಗುವ ಸಾಗೂ ಮರಗಳ ಮಾರಾಟದಿಂದ ಸರಕಾರಕ್ಕೆ ಸಹಾಯವಾಗುವದೆಂಬ ಕಾರಣಗಳನ್ನು ಬಿಟ್ಟರೆ ಬೇರಾವ ಕಾರಣವೂ ಈ ಅವಸರಕ್ಕಿಲ್ಲವಾದ್ದರಿಂದ, ಎಲ್ಲಾ ಕುಮ್ಕಿ ಸ್ಥಳಗಳ ಉಪಭೋಗದ ಹಕ್ಕನ್ನು ಅನಾದಿಯಿಂದ ವರ್ಗದಾರರು ತಮ್ಮ ಕುಮ್ಕಿ ಸ್ಥಳಗಳು ಮತ್ತು ತಾವೇ ಬೆಳೆಸಿದ ಅಲ್ಲಿಯ ಮರಗಳ ಉಪಯೋಗವನ್ನು ಪಡೆಯದಂತೆ ಮಾಡುವದು ನಿಜವಾಗಿಯೂ ಅನ್ಯಾಯ ಮತ್ತು ಅಯೋಗ್ಯವೆಂದು ಈ ಸಂಘವು ನಿವೇದಿಸಿಕೊಂಡಿದೆ.

ಉಡುಪಿ ಹರಿಜನ ಭವನ—ಇಲ್ಲಿ ಕೃಷ್ಣಾಷ್ಟಮಿಯು ಕೀರ್ತನೆ, ಮಳ್ಳಿ ಶ್ರೀ. ವಿ. ವೆಂಕಟ್ರಾವ್ ಬಿ. ಎ ಎಲ್. ಟಿ., ಇವರ ಅಧ್ಯಕ್ಷತೆಯಲ್ಲಿ ಸಭೆ, ಶ್ರೀ ಯ. ಯಾನ್. ಕಾಮತ್ ಮೊದಲಾದವರ ಭಾಷಣಗಳೊಂದಿಗೆ ಸಂಭ್ರಮದಿಂದ ಜರಗಿತು.

ಮಳೆ— ಸುಮಾರು ಒಂದು ತಿಂಗಳಿಂದ ಇಲ್ಲಿ ಮಳೆ ಬೀಳದೆ ಚೆನ್ನಾಗಿ ಬಿಸಿಲು ಕಾಯುತ್ತಿತ್ತು. ಈಗ 2–3 ದಿನಗಳಿಂದ ಸ್ವಲ್ಪ ಸ್ವಲ್ಪ ಮಳೆಯಾಗುತ್ತಿದೆ. ಪೈರು ತೆನೆ ಬಿಡುವ ಕಾಲಕ್ಕೆ ಮಳೆ ಬಾರದೆ ಹೋದುದರಿಂದ ಪೈರಿಗೆ ತಕ್ಕಷ್ಟು ಹಾನಿಯಾಗಿ ಬೆಳೆ ನಿರಾಶಾಜನಕವಾಗಿದೆ.

ಉತ್ತಮ ವರ್ಗದ ವಾಚುಗಳು



ಪರ ದೇಶಗಳಿಂದ ವಾಚುಗಳನ್ನು ತರಿಸುವುದು ನಿಲ್ಲಿಸಲ್ಪಟ್ಟಾಗ್ಯೂ, ಸರಿಯಾದ ಸಮಯ ಸೂಚಿಸುವ ಗಡಿಯಾರಗಳನ್ನು ಅತ್ಯಲ್ಪ ಬೆಲೆಯಲ್ಲಿ ನಾವು ಒದಗಿಸಿಕೊಡುವೆವು. ಐದು ವರುಷ ಗ್ಯಾರಂಟಿಯುಳ್ಳ ಕ್ರೋಮಿಯಮ್ ಕೇಸಿನ ರಿಸ್ಟ್ ವಾಚಿಗೆ ರೂಪಾಯಿ 16-8 0. ಗೋಲ್ಡನ್ ವಾಚಿಗೆ ರೂಪಾಯಿ 18-8-0. ಲೇಡಿ ವಾಚಿಗೆ ರೂಪಾಯಿ 20/- ರೋಲ್ಡ್ ಗೋಲ್ಡಿನದಕ್ಕೆ ರೂಪಾಯಿ 25/- ಉದ್ದ ಚೌಕದ್ದಕ್ಕೆ ರೂಪಾಯಿ 30/- ಕಾಲ್ಯುಮ್ಯವೆಲುಗಳುಳ್ಳದ್ದಕ್ಕೆ ರೂಪಾಯಿ 35/ ... ಗೋಲ್ಡ್ ಹತ್ತು ವರುಷ ಗ್ಯಾರಂಟಿಯಿರತಕ್ಕದ್ದಕ್ಕೆ ರೂಪಾಯಿ 38/- ಟಪ್ಪಾಲು ಖರ್ಚು ಪ್ರತ್ಯೇಕ. ಎರಡು ವಾಚುಗಳನ್ನು ಒಮ್ಮೆಗೆ ತರಿಸುವವರಿಗೆ ಟಪ್ಪಾಲು ಖರ್ಚು ಮಾಫಿ ಆರ್ಡರನ್ನು ಇಂಗ್ಲಿಷಿನಲ್ಲೇ ಕೊಡಿರಿ. ಫೌಂಟನ್ ಪೆನ್ ಒಂದು ಇನಾಮು.

CALCUTTA CLOCK CO. (SEC 624)
Post Box.No.12203 Calcutta

ಚೂರು-ಚೂರು

'ಪಶ್ಚಿಮ ಯುರೋಪಿನಲ್ಲಿ ಪ್ರಥಮತಃ ಕಾಲೂರುವ ಮಿತ್ರ ರಾಷ್ಟ್ರೀಯ ಸೈನಿಕನೇ ನಮ್ಮ ನಿಜವಾದ ಮಿತ್ರ ಮತ್ತು ರಾಯಭಾರಿ'-ರಶ್ಯಾನರ ಮಾತು.

ಅಲ್ಲಿಯ ಪ್ರಥಮ ಹೆಜ್ಜೆ ತನ್ನದಾಗಬೇಕು-ನನ್ನದಾಗಬೇಕೆಂದು ಚರ್ಚಿಲ್ ರುಸವೆಲ್ಟರೇ ಸ್ಪರ್ಧಿಸುತ್ತಾ ಹೊರಡಬಹುದು!

○

'ಕ್ವಿಬೇಕ್ ಪರಿಷತ್ತಿನ ಗುಪ್ತವಾರ್ತೆಯನ್ನು ನಾವು ಜರ್ಮನಿ, ಇಟಲಿ, ಮತ್ತು ಜಪಾನಿಗೆ ಅವುಗಳಿಗರ್ಥವಾಗುವ ಭಾಷೆಯಲ್ಲೇ ತಿಳಿಸಲಿದ್ದೇವೆ'-ಕೆನಡಾ ಪಾರ್ಲಿಮೆಂಟಿನಲ್ಲಿ ರುಸವೆಲ್ಟರ ಭಾಷಣ.

ನಮ್ಮ ಹಿರಿಯ ಸಾಹಿತಿಗಳೂ ಅಧ್ಯಕ್ಷ ರುಸುವೆಲ್ಟರ ಮಾದರಿಯನ್ನನುಸರಿಸಿ, ಅನ್ಯರಿಗರ್ಥವಾಗುವ ಭಾಷೆಯಲ್ಲೇ ಮಾತಾಡಲು ಕಲಿಯಲಿ

●

'ಯುದ್ಧವು ತಕ್ಷೀರುಗಾರ ಧಕಾಯಿತರಿಂದ ನಮ್ಮ ಮೇಲೆ ಜುಲುಮೆಯಿಂದ ಹೇರಲ್ಪಟ್ಟಿತು'–ರುಸವೆಲ್ಟ್.

ಈ ಒತ್ತಾಯದ ಹೊರೆಯನ್ನು ಶಿರಸಾ ವಹಿಸಿಕೊಳ್ಳುವಷ್ಟು ಪ್ರೆ. ರುಸವೆಲ್ಟರು ಸಾಧುಪ್ರಾಣಿಯಾದುದು ಆಶ್ಚರ್ಯ!

○

'ಮೋಸ್ಕೋದಲ್ಲಿ ತ್ರಿರಾಷ್ಟ್ರ ಪರಿಷತ್ತು ನೆರೆಯಿಸುವ ಪರ್ಯಾಲೋಚನೆ ನಡೆದಿದೆ' ಲಂಡನ್ ವಾರ್ತೆ

ಅದು ಕೂಡಿಬಂದರೆ, ಆ ಮೇಲೆ ತ್ರಿಲೋಕ ಪರಿಷತ್ತು ನೆರೆಯುವದು ಅಸಂಭವವೇನೂ ಅಲ್ಲ.

○

'ಮುಸಲನಿ ಜೀವಂತನಾಗಿ ಇದ್ದಾನೆ'-ಸಾಧಾರ ವಾರ್ತೆ.

ಹಾಗಾದರೆ ಬ್ರಿಟಿಷ್ ವಿಮಾನಗಳು ಸಮುದ್ರದಲ್ಲಿ ಬೋಂಬು ಹಾಕಿ ಮುಳುಗಿಸಿದುದು ಮುಸಲನಿಯನ್ನಲ್ಲ–ಮೊಸಳೆಯನ್ನು!

○

'ಬಂಗಾಳದಲ್ಲಿ ಆಹಾರವಿಲ್ಲದೆ ಸಾಯುತ್ತಿರುವವರಿಗೆ ಪ್ರಾಣದಾನ ಮಾಡಿರಿ'–ಚರ್ಚಿಲ್-ರುಸವೆಲ್ಟರಿಗೆ ಕಲ್ಕತ್ತದ ಮೇಯರರ ತಂತಿ.

'ಎಲ್ಲರೂ ಸೈನ್ಯಕ್ಕೆ ಸೇರಲಿ'– ಎಂಬ ಉತ್ತರ ಬರುತ್ತದೇನೊ!

○

'ನಾನು ಕೊಟ್ಟ ಹಿತಬೋಧೆಯನ್ನೆಲ್ಲಾ ಕಡೆಗಣಿಸಿ, ಈ ದುಸ್ಥಿತಿಯನ್ನು ನಿನಗೆ ನೀನೇ ತಂದುಕೊಂಡೆ'- ಕೊನೆಯ ಭೇಟಿಯಲ್ಲಿ ಹೀಗೆಂದು ಹಿಟ್ಲರ್ ಮುಸಲನಿಯನ್ನು ಜರೆದಾಡಿದನೆಂಬ ಗುಟ್ಟು ಹೊರಬಿದ್ದಿದೆ.

ಮುಸಲನಿಗೆ ಆ ದುಸ್ಥಿತಿಯನ್ನು ತಂದೊಡ್ಡಿದವರು ಮಿತ್ರ ರಾಷ್ಟ್ರೀಯರೆಂಬುದನ್ನು ಇನ್ನೂ ಒಪ್ಪದ ಹಿಟ್ಲರನನ್ನು ಎಷ್ಟಕ್ಕೂ ಬಿಡಬಾರದು!

—ವಿನೋದಿ.

Degrees Books Medicines
Free H. L. M S M, B H, M, D, etc Free Homeo-Ayur- Unani Naturo degree by post also—Practitioner also get soon Homeo Materiamedica, Rs. 5 Homeo Practice book Rs 4, Insanity Cure Pills Rs 10 Enclose 2 annas stamp —
Principal Indian Homeopathi Institute & Society (Govt Regd)
P O MAHUVA (Kathiawar Dt India)

Sidha-Kalpa Kavach (Regd.)
No. 3 Rs 2 No 2 Rs 5 No. 1 Rs. 7, Special Rs. 10, Extra Special Rs. 17 for one marriage health, wealth. Ask any six questions with M. O. Re. 1/4 and get correct answers by returnpost Life reading Rs 10 No V.P.P. Send M.O. Free. samples
Prof Dr N H Chhatbar,
P. O. MAHUVA (Kathiawar India)

BHUVANENDRA PRODUCTS Ltd.,

Head Office and Factory: Katapadi, S. Kanara

Depots: Mahratha Galli, Hubli.

"BHUVANENDRA"
Danthadavan Choorna
Economical in use. Cheapest in value
Genuine in quality and choiced by all.
Antiseptic, astringent, aromatic. Useful in
Pyorrhoea, Alveolaris. Removes tartar.
Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ.
"ಭುವನೇಂದ್ರ"
ದಂತಧಾವನ ಚೂರ್ಣ
ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ
ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು
ಮುಂತಾದ ದೋಷಗಳನ್ನು ನಿವಾರಿಸುವುದು.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ- ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ;
ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟರಾವ್, ಕೊರಡ್ಕಲ್; ವಿಜಯಾ ಸ್ಟೋರ್ಸ್

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in 1920)

Registered Office. Court Road UDIPI South Canara District.

Business Offices Udipi, Mangalore, Katapadi, Kanhangad and Kinnigoli, South Canara.

Authorised and Issued Capital Rs. 2 00 000/-

Subscribed and Paid up Capital Rs 2,00,000/-

Reserve Funds: Rs 1,74,600/-

Short term bills are discounted for approved parties. Loans and advances are made and overdrafts granted on fairly easy terms

Deposits are accepted at favourable rates of interest More than twenty-three years' reliable banking Service stands to our credit

For further particulars please call at or apply to the nearest office

Dated 27-8-1943.

ಶ್ರೀ ತಾರಾನಾಥ ಭೇಷಜಾಲಯ

ಶಾಸ್ತ್ರೀಯ ಮತ್ತು ಸಿದ್ಧೌಷಧಿಗಳ ಕಾರಾಗಾರ, ಚಿಕ್ಕಮಂಗಳೂರು.

ನಿರ್ದೇಶಕ:- ಡಾ. M L Shetty, ಶ್ರೀಮವಿದ್ಯಾಪೀಠದ ಗೌ. ಪ್ರಾಧ್ಯಾಪಕರು

ಎಲ್ಲಾ ತರದ ಭಸ್ಮ, ಖಲ್ವೀ ರಸಾಯನ, ಆಸವಾರಿಷ್ಟ, ಘೃತ, ತೈಲಗಳಿಗಾಗಿ ಕೂಡಲೇ ಬರೆಯಿರಿ.

ಲಕ್ಷಗಟ್ಟಲೆ ರೋಗಿಗಳಲ್ಲಿ ಫಲಕಾರಿಯಾದ ಔಷಧೀ ಯೋಗಗಳು, ಗುರುಪರಂಪರೆಯ ಅನುಭವದಿಂದ ಬಂದ ನಿರ್ದುಷ್ಟ ಔಷಧೀಕರಣ ವಿಧಾನ

ಡಾ। P. M Alva,
ಮೆನೇಜರ್.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲರ ಸಹಕಾರ ಅಪೇಕ್ಷಿಸುವುದು.

M. R. Punja, President & Manager — ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ. : : : : ಮಂಗಳೂರು.

THE VIJAYA BANK, LIMITED.

Beg to announce that a Branch of the Bank will be opened at KASARAGOD, shortly.

ಅಮೃತಾಂಜನ ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಸ್ನಾಯುಗಳು ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD.

ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತಾ.

ವಿದ್ಯಾ ವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. **1-8-0** ಮಾತ್ರ

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಮೆನೇಜರ್, **ಬಾಲಚಂದ್ರ**

ಸಂತೆಕಟ್ಟೆ, ಉಡುಪಿ.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಹಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರನೀಪಲ್ಲೆ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು, ರೂಪಾಯಿ 5—0—0 ಪೋಸ್ಟ ಚಾರ್ಜ ೧೨ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ—ಹುಂಬರವಾಡಿ ಸ್ಟೋರ್ಸ. ದಾವಣಗೇರಿ—ದಾವಣಗೇರಿ ಪ್ರೆಸ್ಸ. ಆರ್ ಎಲ್. ಶಿವಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ನವಜೀವಾತು ಎಂಬ ಸೂತಿಕಾರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅನೋಘವಾದ** ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದಕ**

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS UDIPI S INDIA.

Regd. No. M. 3618.

ಇಪ್ಪತ್ತನಾಲ್ಕನೆಯ ವರ್ಷ.

Estd. 19[illegible] ಸ್ಥಾಪಿತ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪ ಸಂಚಿಕೆ ೨

FOUNDER Sri. A. B. Shetty.

Vol. 24 No. 2

NAVAYUGA— Kannada Weekly —UDIPI, S. I.

ಉಡುಪಿ ● 9—9—1943 ● ಮಂಗಳೂರು.

ಹೊಸಕೆರೆ ಚಿದಂಬರಯ್ಯನವ ರಿಂದ ರಚಿತವಾದ ಗೀತೆಯ ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು 440 ಪುಟಗಳು,

ಪ್ರತಿ ಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ.

ಬೆಲೆ (ಸುಂದರ ಪ್ರತಿ) ೦—೮—೦

ಹತ್ತಾಣೆ ಸ್ಟಾಂಪು ಕಳಿಸಿದ್ದಲ್ಲಿ ೧ ಪ್ರತಿಯನ್ನು ಬುಕ್‌ಪೋಸ್ಟ್ ಮಾಡಲಾಗುತ್ತೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಖಿಲ ಕರ್ನಾಟಕದ ಹೊಸಮಾದರಿಯ ವಾರಪತ್ರಿಕೆ

ಅಂತರಂಗ

ಜನ್ಮತಾಳಿದ ಸ್ವಲ್ಪ ಸಮಯದಲ್ಲೇ ವಿಶಾಲ ಪ್ರಚಾರ ಮತ್ತು ಪ್ರಶಸ್ತಿ ಪಡೆದ ಸಚಿತ್ರ ವಾರಪತ್ರಿಕೆ.

ಪ್ರಸಿದ್ಧ ಜ್ಯೋತಿಷಿಗಳೊಬ್ಬರಿಂದ ವಾರಭವಿಷ್ಯವೂ ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ	ರೂ. ೪-೮-೦
6 ತಿಂಗಳಿಗೆ	ರೂ. ೨-೪-೦
ಬಿಡಿ ಪ್ರತಿಗೆ	ರೂ. ೦-೧-೬

ಮಾದರಿಗೆ ಬರೆಯಿರಿ: ಮನೇಜರ್, ಅಂತರಂಗ, ಉಡುಪಿ.

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

The Canara Mutual Assurance Co., Ltd.,

UDIPI (S. India).

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ಸಾರ್ವತ್ರಿಕವಾದುದು.

ಜಾಗರೂಕರಾಗಿರಿ! ನಿಮ್ಮ ಮತ್ತು ಸಮೀಪದವರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇದರಲ್ಲೊಂದು ಪೊಲಿಸಿಯನ್ನು ಪಡೆಯಿರಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಪ್ಪೀಕರ್ ಬ್ರದರ್ಸ್, ಲಿಮಿಟೆಡ್

ಸೆಂಟ್ರಲ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು.-

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ (ದ. ಕನ್ನಡ)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್, ಕಲ್ಲಿಕೋಟೆ, ಮಂಗಳೂರು ಮತ್ತು ತ್ರಿವಾಂಕೂರು.

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ. ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. **ಪೋಸ್ಟ್ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೇಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ** ದಾವಣಗೇರಿ.

ಆಯುರ್ವೇದ ಔಷಧಾಲಯ ಗದಗ.

Again - - - -

TEN LACS IN TEN MINUTES.

Our share-lists opened on 5th August and soon closed by oversubscription. Ten Lacs in Ten Minutes a second time; but this time it is perhaps not such a great achievement in view of the changed economic conditions. Yet considering that shares of the face value of Rs. 50 were issued at Rs. 90 that they were sold without any publicity and without the help of brokers and that they were only sold over the counter to shareholders and customers the Canara Bank is justifiably proud of this achievement. when these shares are fully paid up according to the terms of the Prospectus the Capital structure of the Canara Bank will be as follows:—

Capital.	
ordinary	Rs. 15,00,000.
5% Cum. Pref.	Rs. 14,00,000.
Reserves.	Rs. 11,70,000.
Total	Rs. 40,70,000.

We thank all our friends and patrons whose unstinted support and sympathy made this success possible and assure them that we shall try in all possible ways to continue to deserve their good will.

CANARA BANK LIMITED.

Estd. 1906.

ಮಿತ್ರ ಸೇನೆ ಇಟಲಿ ನುಗ್ಗಿತು!

ಯುದ್ಧದ ಚಾತುರ್ವಾರ್ಷಿಕೋತ್ಸವ ದಿನ—ಇದೇ ತಾ. 3ರಲ್ಲಿ-ಮಿತ್ರ ದಂಡುಗಳು ಪ್ರತ್ಯಕ್ಷ ಇಟಲಿಗೇನೇ ನುಗ್ಗಿವೆ, ಉತ್ತರಾಫ್ರಿಕದಿಂದ ಸಿಸಿಲಿಗೆ ನೆಗೆದ ರಣಕಾಳಿ ಅಲ್ಲಿಂದೀಗ ಇಟಲಿಗೆ ಧುಮುಕಿದ್ದಾಳೆ; ಅರ್ಧ ಹತವಾಗಿದ್ದ ಫ್ರಾನ್ಸಿನ ಬೆನ್ನ ಮೇಲೆ ತಿವಿದ ಪಾಪದ ಫಲವನ್ನು, ಜೀವನ್ಮೃತಾವಸ್ಥೆಯಲ್ಲಿದ್ದಂತೆಯೇ ಅಂತಿಮ ಹೊಡೆತ ತಿನ್ನುವ ಮೂಲಕ ಇಟಲಿಯೀಗ ಅನುಭವಿಸುತ್ತಿದೆ! 'ನನ್ನ ಎಂಟು ಮಿಲಿಯ ಥಳಥಳಿಸುವ ಬೊಯನೆಟುಗಳು' ಎಂದು ಯುದ್ಧಾರಂಭದ ಮೊದಲು ಮುಸಲಿನಿ ಜಂಭವಾಡಿದ್ದ ಇಟಲೀ ಸೇನೆಯ ಅಳಿದುಳಿದ ಅವಶೇಷವನ್ನು-ಮೊನೆ ಮುರಿದ ಬೊಯೊನೆಟುಗಳನ್ನು—ಪುಡಿಗುಟ್ಟಲು ಮಿತ್ರ ಸೇನೆಯೀಗ ಧಾವಿಸಿದೆ.

ಆಕ್ರಮಣಾರಂಭ.

ಸೆಪ್ಟೆಂಬರ್ ತಾ. 3-ಮಹಾ ಯುದ್ಧಕ್ಕೆ ನಾಲ್ಕು ಸಂವತ್ಸರ ತುಂಬಿ ಐದನೇ ವರುಷಕ್ಕದು ಕಾಲಿಡುವ ಮಹಾ ದಿನ—ಕಳೆದ ಯುದ್ಧವು ಮುಗಿದ ಅವಧಿಯ ಮಹಾ ಸಂಧಿಕಾಲ — ಅದು ಅಕ್ಸಿಸ್ ರಾಷ್ಟ್ರಗಳಲ್ಲೊಂದನ್ನಾಕ್ರಮಿಸುವ ಸುಮುಹೂರ್ತವನ್ನೂ ತುಂಬಿಕೊಂಡೇ ಬಂತು. ಅಧ್ಯಕ್ಷ ರೂಸವೆಲ್ಟರಿಂದ ಈಗ ತಾನೇ ಮೇಜರ್ ಜನರಲ್ ಶಾಶ್ವತ ಹುದ್ದೆ ಮತ್ತು ಬಹುಮಾನ ಪದಕ ಪಡೆದ ಆಧುನಿಕ ಜಮದಗ್ನಿ ಜನರಲ್ ಐಸೆನ್ಹೋವರರು ತನ್ನ ಸೇನೆಗೆ ಕೈ ಬೀಸಿದರು; ಚರಿತ್ರೆಯಲ್ಲಿ ಇದೀಗ ಮೊದಲ ಬಾರಿ ಆಂಗ್ಲೋ—ಅಮೇರಿಕಾನ ಸೇನೆಗಳ ಜತೆ ಹೆಜ್ಜೆಗಳ ಗುರುತು ಇಟಲಿ ಕರಾವಳಿಯಲ್ಲಿ ಮೂಡಿತು. "ನಮ್ಮದು ಉತ್ತಮ ಯೋಜನೆ, ಮತ್ತು ಈ ಮೊದಲೆಂದೂ ಇರದಷ್ಟು ದೊಡ್ಡ ಪರಿಮಾಣದ ವಿಮಾನ ಬೆಂಬಲ ನಮಗೀ ಬಾರಿ ಇದೆ. ಈ ಹೋರಾಟಕ್ಕೆ ಒಂದೇ ಒಂದು ಅಂತ್ಯ ಮಾತ್ರವಿರಲು ಸಾಧ್ಯ--ಪೂರ್ಣ ವಿಜಯಕ್ಕೆ ಹೊಂದಿಕೆಯಾಗುವ ಮತ್ತೊಂದು ವಿಜಯ. ಇಟಲಿಯನ್ನು ಯುದ್ಧದಿಂದ ಹೊರದಬ್ಬಿಬಿಡುವಾ'--ಎಂಬ ಸಂದೇಶದೊಡನೆ ಸೇನಾನಿ ಮಾಂಟ್ಗೊಮೆರಿಯವರು ತನ್ನ ಎಂಟನೇ ಸೇನೆಯನ್ನು ಬೀಳ್ಕೊಟ್ಟರು. ಆ ಮೊದಲೇ ಪ್ರಬಲ ಧಾಳಿ ನಡಿಸಿ ಸೇನೆಯಿಳಿಯುವ ಸ್ಥಳಗಳನ್ನು ತೆರವು ಮಾಡಿದ ಸಾಹಸ ಮಿತ್ರ ವಿಮಾನಗಳದು. ಅಂತೆಯೇ ನಾವೆಗಳ ಹಾಗೂ ಸಿಸಿಲಿ ಕರಾವಳಿಯ ಗನ್ನುಗಳ ಹೊಡೆತದಿಂದ ಇಟಲಿ ಕರಾವಳಿಯ ಗನ್ನು ಪೀಠಗಳು ಕೂಡಾ ಹಾರಿಹೋಗಿದ್ದುವೆಂದು ಮಿತ್ರರ ವರ್ಣನೆಯಿದೆ. ಮೆಸ್ಸಿನಾ ಜಲಸಂಧಿಯನ್ನು ಮೃತ್ಯುಮಳೆಗರೆಯುತ್ತಾ ದಾಟಿ, ಇಟಲಿಯ ಹಿಂಗುಪ್ಪವೆಂದು ಹೆಸರಾದ ದಕ್ಷಿಣ ಕೊನೆಯ ಮೂಲೆಯಾದ ರೆಗ್ಗಿಯೋವನ್ನು ಪ್ರಥಮತಃ ತುಳಿದ ಎಂಟನೇ ಸೇನೆಯು ಅಲ್ಲಿಂದ ಸಾನ್ ಜಿಯೋವನ್ನಿಗೆ ಹಲವು ಸಂಕ ಶಿರಗಳನ್ನು ರಚಿಸಿ ಆಕ್ರಮಿಸಿಕೊಂಡಿತು. ರೆಗ್ಗಿಯೋದಲ್ಲಿ ಕವಲೊಡೆದ ಒಂದು ಸೇನಾ ವಿಭಾಗವು ಉತ್ತರಾಭಿಮುಖವಾಗಿ ಸಿಲ್ಲಾದ ಕಡೆಗೂ ಮತ್ತೊಂದು ಪೂರ್ವಾಭಿಮುಖವಾಗಿಯೂ ಪ್ರಬಲ ಟ್ಯಾಂಕು ದಳ ಬೆಂಬಲದೊಡನೆ ಮುಂದೊತ್ತಿವೆ. ಇಷ್ಟರೊಳಗೆ ಇನ್ನೂ ಕೆಲವು ಕಡೆಗಳಲ್ಲಿ ಮಿತ್ರಸೇನೆಗಳಿಳಿದು ಮುಂದೊತ್ತುತ್ತಿರುವ ವಾರ್ತೆ ಬಂದಿದೆ. ಅಲ್ಲಲ್ಲಿ ನಿಲ್ದಾಣಗಳೂ ಮಿತ್ರ ಸೇನೆಗಳಿಗೆ ದೊರೆತಿವೆ. ಇಟಲಿಯಾನರು ಪ್ರಬಲ ಪ್ರತಿಭಟನೆ ಕೊಡುತ್ತಿದ್ದಾರೆ; ಯುದ್ಧವು ಅತಿ ಭೀಕರವಾಗಿ ನಡೆಯುತ್ತಿದೆ. 'ವೈರಿಯ ಆಕ್ರಮಣವೀಗ ಅತ್ಯಂತ ರಭಸದಲ್ಲಿದೆ, ವೈರಿಯು ಇಟಲಿಯ ಮೂಲ ನೆಲದಲ್ಲೇ ಹೆಜ್ಜೆಯೂರಿ, ತಾನು ಉಪಕರಣಗಳಲ್ಲಿ ಮೇಲ್ಮೆಯಾಗಿರುವ ಸಂದರ್ಭದ ಪೂರ್ಣೋಪಯೋಗ ಪಡೆಯುತ್ತಿದ್ದಾನೆ'-ಎಂದು ಇಟಲಿ ರೇಡಿಯೋ ಸಾರಿದೆ.

ಮಿತ್ರರೀ ಮೇಲ್ಮೆ!

ಇಟಲಿ ನುಗ್ಗುವ ಮಿತ್ರರ ಪ್ರಥಮ ಪ್ರಯತ್ನವು ನಿರಾತಂಕವಾಗಿ, ಅತ್ಯಂತ ಯಶಸ್ವಿಯಾಗಿದೆ. ಇಷ್ಟರಲ್ಲೇ 'ಅಸಹನೀಯ' 'ಅತಿ ಕಠಿಣ' ಎಂಬ ಅಪಸ್ವರಗಳು ಇಟಲಿಯ ಪ್ರತಿಭಟನೋದ್ಗಾರಗಳಲ್ಲಿ ಕಂಡುಬರುತ್ತಿವೆ. ಮಿತ್ರ ಸೇನೆಗಳು ಈ ಬಾರಿ ಅತಿ ಜಾಗರೂಕತೆಯ ಬದಲಿಗೆ ಹಗ್ಗಳಿಕೆ, ಹೆಮ್ಮೆಯಿಂದಲೇ ಹೊಡೆತವೀಯುತ್ತಿರುವಂತಿದೆ. ತಾ. 3ರ ಆಕ್ರಮಣದ ವೇಳೆ ಇಟಲಿಯ ಆಕಾಶ ವಿರೋಧವು ಏನೇನೂ ಇರಲಿಲ್ಲ. 'ಸಮುದ್ರ ಮತ್ತು ಆಕಾಶವು ಪೂರ್ತಿಯಾಗಿ ನಮ್ಮದೇ ಆಗಿತ್ತು; ಗತ ದುರ್ದಿನಗಳೀಗ ಪೂರ್ಣ ಬದಲಾಗಿವೆ'- ಆಕ್ರಮಣದ ಪ್ರತ್ಯಕ್ಷದರ್ಶಿ ಮಿತ್ರ ವೈಮಾನಿಕನೊಬ್ಬನ ಹೇಳಿಕೆಯಿದು. 'ನಿಮ್ಮ ಹಿರಿಯರು ಗ್ಯಾರಿಬಾಲ್ಡಿಯನ್ನು ಸ್ವಾಗತಿಸಿದ ರೀತಿಯಲ್ಲೇ ಮಿತ್ರ ಸೇನೆಗಳನ್ನು ಸ್ವಾತಂತ್ರ್ಯದಾತರೆಂದು ಸ್ವಾಗತಿಸಿರಿ" ಎಂದು ಅಮೇರಿಕದ ಆಕಾಶವಾಣಿಯು ಇಟಲಿ ಜನತೆಗೆ ವಿಶೇಷ ವಿನಂತಿಯೊಂದನ್ನು ಮಾಡಿಕೊಂಡಿದೆ. ಈ ರೀತಿ ಇಟಲಿಯಾನರ ಶಕ್ತಿ ಕ್ಷಯ, ಮನ ಸೂರೆಯ ಪ್ರಯತ್ನಗಳೊಡನೆ ಅವರನ್ನು ದಂಗುಗೊಳಿಸಿ ಹೃದಯ ಕುಗ್ಗಿಸುವ ಆಶ್ಚರ್ಯವನ್ನೂ ಜ. ಐಸೆನ್ಹೋವರರು ಪ್ರಥಮ ಹೆಜ್ಜೆಯೊಡನೆಯೇ ಪ್ರದರ್ಶಿಸಿದ್ದಾರೆ. ಒಳಗಡೆಯ ಸೈನ್ಯ ಚಲಾವಣೆಯ ಸಂಕ ತಯಾರಿಗಾಗಿ ಆಕಾಶಗಾಮಿ ಸೇನೆಗಳನ್ನಿಳಿಸಿ ಕೌತುಕವನ್ನುಂಟು ಮಾಡಿದ್ದಾರೆ. ಯುದ್ಧ ಕಾಲದಲ್ಲಿ ಇಟಲಿಗೆ ಸೈನ್ಯ ಸಾಮಾಗ್ರಿಗಳ ಅಧಿಕಾಂಶದ ಆಮದು ಬ್ರೆನ್ನರ್ ಕಣಿವೆಯ ಮೂಲಕ ನೇ. ಶೇಕಡಾ 95ರಷ್ಟು ಎಣ್ಣೆ, ಸೇ. 80 ರಷ್ಟು ಕಲ್ಲಿದ್ದಲು, ಉಕ್ಕು ಮೊದಲಾದ ಇತರ ಉಪಯುಕ್ತ ಸಾಮಾಗ್ರಿಗಳು ಆ ಹಾದಿಯಿಂದಲೇ ಇಟಲಿಗೆ ಬರಬೇಕು. ಅಲ್ಲಿಯ ರೈಲ್ವೇಗಳ ಮೇಲೆ ಮಿತ್ರ ವಿಮಾನಗಳು ನಡಿಸಿದ ಅತಿ ಭೀಕರ ಧಾಳಿಗಳಿಂದ, ಈಗ ಉಪಕರಣಗಳ ಬದಲಿಗೆ ಹೊಗೆ ಮಾತ್ರ ಆ ದಿಕ್ಕಿನಿಂದ ಬರುವಂತಾಗಿದೆ ಇಟಲಿಯ ಹೆಸರಾಂತ ಹಡಗ ಬಲಕ್ಕೆ ಇತ್ತೀಚೆಗೆ ಪಲಾಯನವೇ ಪಾಂಡಿತ್ಯ—ಅಜ್ಞಾತವಾಸವೇ ಸುಖವೆಂಬಂತಹ ದುರದೃಷ್ಟವೊದಗಿದೆ. 1941ನೇ ಮಾರ್ಚಿ 18ರ ಚಾತ್ರ್ಯಾರ್ಹ ಮಟಪಾನ್ ಕಡಲ್ಗಲಹದಲ್ಲಿ ಜೀವನ್ಮೃತ ಹೊಡೆತಕ್ಕೆ ಬಲಿಯಾದ ಇಟಲಿ ನೌಕಾದಳವು, ಅಲ್ಲಿಯ ಮುಖ್ಯ ನೌಕಾ ನಿಲ್ದಾಣಗಳಾದ ಟಾರೆಂಟೋ ಮತ್ತು ನೇಪಲ್ಸ್‌ಗಳಿಗೆ, ಆಕಾಶ ಧಾಳಿಯ ಪಥ ತೆರೆಯೊಡನೆ ಸ್ಪೆಸ್ಸಿಯಾಕ್ಕೆ ಹೋಗಿ ತಂಗಿದ್ದಿತು. ಮಿತ್ರ ವಿಮಾನಗಳು ಅಲ್ಲಿವರೆಗೂ ಹುಡುಕಿಕೊಂಡು ಬಂದುದರಿಂದ ಅವೆಲ್ಲ ಪಕ್ಕದ ಮಡ್ಡಲಿನಾ ಬಂದರದಲ್ಲೀಗ ತಂಗಿವೆ ಎಂಬ ವಾರ್ತೆಯಿದೆ.

ಮುಂದೇನು?

ಇಂತಹ ದುಸ್ಥಿತಿಯಲ್ಲೂ ಬೊಡೊಗ್ಲಿಯೋ ಮೌನವೇಕೆ? ಅವನೀವರೆಗೂ ಸಂಧಾನ ಯಾಚನೆ ಮಾಡದಿರುವುದು ಸೋಜಿಗವೇ ಸರಿ; ಇನ್ನು ತಡ ಮಾಡಲಾರ; ಮಿತ್ರ ಸೇನೆಗಳು ಮತ್ತೊಂದು ನಾಲ್ಕು ಹೆಜ್ಜೆ ಮುಂದಿಡುವಾಗ ಬೊಡೊಗ್ಲಿಯೋ ಶರಣಾರ್ಥಿ ಬೊಗಸೆಯೊಡ್ಡುತ್ತಾ ಎರಡು ಹೆಜ್ಜೆ ಮುಂದೆ ಬರಲಿದ್ದಾನೆ,ಎಂದು ನಿರೀಕ್ಷಿಸುವವರಿದ್ದಾರೆ. ಹಾಗಾಗಲಾರದು ಒಂದೂವೇಳೆ-ಆದರೂ ಒಂದು ನಿಲ್ದಾಣ ದೊರೆತುದಕ್ಕಿಂತ ಹೆಚ್ಚಿನ ಪ್ರಯೋಜನವು ಬೊಡೊಗ್ಲಿಯೋ ದೊರೆತುದರಿಂದಾಗದು ಇಟಲಿಯ ಮುಖ್ಯ ಮಂತ್ರಿಯು ಈಗ ಹೋರಾಟದ ಸೂತ್ರ ಧಾರಿಯಾಗಿಲ್ಲ; ಹಿಟ್ಲರನ ಕೈಯಲ್ಲಿರುವ ಆ ಸೂತ್ರದೊಂದು ಎಳೆಯಾಗಿ ಮಾತ್ರ ಇದ್ದಾನೆ ಸಂಧಾನವೋ ಸಂಗ್ರಾಮವೋ ಎಂಬುದನ್ನೀಗ ಆತ ನಿರ್ಧರಿಸಲಾರ. 'ಬೊಡೊಗ್ಲಿಯೋನ ಮಾತಿಲ್ಲವೇಕೆ?'-ಎನ್ನುವವರು, ಅವನ ದುಸ್ಥಿತಿಯನ್ನು ಮರೆತಿದ್ದಾರೆ. ಮಿತ್ರರ ಧಾಳಿ, ಆಕ್ರಮಣ, ಬೆದರಿಕೆಗಳಲ್ಲಾ ಬೊಡೊಗ್ಲಿಯೋ ಸರಕಾರದ ಮಟ್ಟಿಗೆ ಸ್ಮೃತಿ ತಪ್ಪಿದವನನ್ನು ಕಲ್ಲೆಸೆದು ಎಬ್ಬಿಸುವ ಪ್ರಯತ್ನದಂತೆಯೇ ಸರಿ. ಇಟಲಿಯಲ್ಲಿ ಬ್ರಿಟಿಷ್, ಕೆನಡಾ ಅಮೇರಿಕದ ಸೇನೆಗಳು ಇದಿರಿಸಲಿರುವದು ಜರ್ಮನ್ ಸೇನೆಯನ್ನೇ. 'ಜರ್ಮನರಲ್ಲಿ ತಮ್ಮ ಯುರೋಪು ಕೋಟೆಯನ್ನು ರಕ್ಷಿಸಿ ಕೊಳ್ಳುವಷ್ಟೇ ಅಲ್ಲ—ಪ್ರತಿಧಾಳಿಗಳನ್ನು ಹೂಡುವಂತಹ ಸಾಮರ್ಥ್ಯವಿನ್ನೂ ಉಳಿದಿವೆ.ಅದು 1944ರ ವರೆಗೂ ಇದ್ದೇ ಇದೆ'—ಎಂದು ಆಂಗ್ಲೋ ಅಮೇರಿಕನ್ ಯುದ್ಧತಜ್ಞರು ವಾಷಿಂಗ್ಟನಿನಲ್ಲಿ ನಡೆಸಿದ ಪರ್ಯಾಲೋಚನೆಯಲ್ಲಿ ಸ್ಪಷ್ಟವಾಗಿದೆ. ಮುಸಲನಿ ಪತನವಾದಂದಿನಿಂದ ಇಟಲಿಯ ರಕ್ಷಣಾವ್ಯವಸ್ಥೆಯಲ್ಲಿ ಹಿಟ್ಲರೊಂದೇ ಒಂದು ಮಿನಿಟನ್ನೂ ವ್ಯರ್ಥಗೊಳಿಸಿಲ್ಲ. ಹಿಟ್ಲರರೀಗ ಇಟಲಿಯ ನೆಲವನ್ನಲ್ಲದೆ, ಅಲ್ಲಿಯ ಜನರನ್ನಾಗಲೀ ಸರಕಾರವನ್ನಾಗಲೀ ನಂಬಿಕೊಂಡಿಲ್ಲ. ಉತ್ತರಾರ್ಧ ಇಟಲಿಯು ನಾಜೀ ಸೇನೆಯ ಸುಭದ್ರ ಹಿಡಿತ, ಅಜೇಯ ರಕ್ಷಣಾ ಲೈನುಗಳಿಂದ ಜರ್ಮನಿಯಾಗಿಯೇ ಮಾರ್ಪಟ್ಟಿದೆ. ವೈರಿ ಸೇನೆ ಆಸ್ಟ್ರಿಯಾ ನುಗ್ಗದಂತೆ-ಇಡೀ ಯುರೋಪಿನ ರಕ್ಷಣಾ ಕೋಟೆಯ ಒಂದಂಗವಾಗಿ-ಉತ್ತರ ಇಟಲಿಯ ರಕ್ಷಣಾ ಲೈನಿನ ಕದಕ್ಕೆ ಮೃತ್ಯು ಮುದ್ರೆಯೊತ್ತಿ ಹಿಟ್ಲರರು ನಿಂತಿದ್ದಾರೆ. ಆದರೆ ಮಿತ್ರಸೇನೆಗಳು ದಕ್ಷಿಣ ಇಟಲಿಯನ್ನಾಕ್ರಮಿಸಿಕೊಂಡರೆ, ತನ್ನ ಕಾರ್ಯ ಕಠಿಣವಾಗುವದೆಂಬುದನ್ನು ಅವರು ಬಲ್ಲರು. ಕಳೆದ ಮಹಾಯುದ್ಧದಲ್ಲಿ ಬ್ರೆನ್ನರ್ ಕಾಲುವೆಯ ಕಾವಲಿಗಾಗಿಯೇ 30 ಡಿವಿಜನ್ ನಾಜೀ ಮತ್ತು ಆಸ್ಟ್ರಿಯಾ ಸೇನೆಗಳು ಸರ್ಪಗಾವಲು ನಡೆಸಬೇಕಾಗಿದ್ದಿತು. ಆಕಾಶ ಪ್ರಾಮುಖ್ಯತೆಯು ಈ ಯುದ್ಧದಲ್ಲಂತೂ ಆ ರಕ್ಷಣಾ ಕಾರ್ಯವು ದಶಪಾಲು ಪ್ರಯಾಸದ್ದಿದೆ. ಆದ್ದರಿಂದ ದಕ್ಷಿಣ ಇಟಲಿಯಲ್ಲೂ ಮಿತ್ರಸೇನೆಗಳನ್ನು ಸಾಧ್ಯವಿದ್ದಷ್ಟು ಹಣ್ಣು ಮಾಡುವ ಯುದ್ಧ ನಡೆದಿದೆ. ಇಂಚು ಇಂಚಿಗೂ ರುಧಿರೋಕುಳಿಯಾಗುತ್ತಿದೆ ಮೇಲಾಗಿ ಇದೊಂದೇ ಮಿತ್ರರ ಧಾಳಿಯ ಗುರಿಯಲ್ಲದು. ತಮ್ಮ ಲಕ್ಷ್ಯವನ್ನಡ್ಡ ಹಾದಿ ಹಿಡಿಸಿ, ಬಾಲ್ಕನಿನಲ್ಲಿಯೋ, ಫ್ರಾನ್ಸಿನೊಳಗೋ ಆಕ್ರಮಣ ನಡಿಸುವ ಕುಯುಕ್ತಿಯಿದು ಎಂಬ ಮುಂಜಾಗ್ರತೆಯೂ ನಾಜೀ ಪ್ರಮುಖರಿಗಿದೆ ಆದ್ದರಿಂದ ಸರ್ವಕಡೆಯ ಸ್ವಾಗತಕ್ಕೂ ಹಿಟ್ಲರರು ತಯಾರಾಗಿಯೇ ನಿಂತಿದ್ದಾರೆ. ನರ್ತನಕ್ಕಿಳಿದ ರಣಕಾಳಿ ರಂಗದ ಎಲ್ಲಾ ಕಡೆಗಳಲ್ಲೂ ಚೆಲ್ಲಾಟವಾಡಬಹುದು. ಯುದ್ಧ ಬೆಳೆಯಿತು, ಎಂದಿಷ್ಟೇ ಪ್ರಕೃತ ಹೇಳಬಹುದಾಗಿದೆ.

ಶುಚಿ!! **ಸೆಂಟ್ರಲ್ ಕೆಫೆ** ರುಚಿ!!

ಶ್ರೀನಿವಾಸ ಬಿಲ್ಡಿಂಗ್ಸ್, ಹೆಡ್ ಪೋಸ್ಟಾಫೀಸ್ ಸರ್ಕಲ್, ಶಿವಮೊಗ್ಗ.
ಪ್ರಯಾಣಿಕರಿಗೆ ಉಳಿದುಕೊಳ್ಳಲು ಸ್ಥಳಾನುಕೂಲ ಏರ್ಪಡಿಸಿರುತ್ತೆ.
ಸಕಾಲದಲ್ಲಿ ಉತ್ತಮವಾದ ಊಟ, ಕಾಫಿ ಮತ್ತು ಹಸನಾದ ತುಪ್ಪದಲ್ಲಿ ತಯಾರಿಸಿದ ತಿಂಡಿ ದೊರೆಯುತ್ತೆ.

ಈ ಸ್ಥಳವು ರೈಲ್ವೆಸ್ಟೇಷನ್, ಬಸ್‌ಸ್ಟ್ಯಾಂಡ್, ಕೋರ್ಟುಗಳಿಗೆ ಮಧ್ಯ ಸ್ಥಳದಲ್ಲಿದೆ.

ಎಸ್. ರಾಮದಾಸ್, ಪ್ರೊಪ್ರೈಟರ್.



ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಾಂಜಿ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

Degrees: Books: Medicines
Free H. L. M. S. M. B. H. M. D. etc. Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp:—
Principal Indian Homeopathi Institute & Society (Govt. Regd)
P.O. MAHUVA (Kathiawar Dt. India.)

Sidha-Kalpa Kavach (Regd.)
No. 3 Rs 2. No. 2 Rs. No. 1 Rs. 7. Special Rs. 10, Extra Special Rs. 17 for ove marriage health, wealth. Ask any six questions with M. O. Re. 1/- and get correct answers by returnpost Life reading Rs.10 No V.P.P. Send M.O. Free damplets.
Prof Dr. N. H Chhatbar.
P. O. MAHUVA (Kathiawar India.)

The Canara Banking Corporation Limited.
(Incorporated in British India with limited Liability)
ESTD: 1906.
Head Office: **UDIPI**, S. Kanara.
(Branches & Agencies in all principal cities of India)

Authorised capital	Rs. 25,00,000/-
Issued & Subscribed	Rs. 16,00,000/-
Paid up capital	Rs 10 06 000/-
Reserves	Rs. 3,85,000/-

Advances are made against approved securities and bills purchased or collected at most favourable rates. For further particulars please apply to the nearest Branch.

ಉಡುಪಿ, ಗುರುವಾರ, ೯-೯-೧೯೪೩

ಲೋಕ ಮಹಾಯುದ್ಧ

ಈಗ ನಡೆಯುತ್ತಿರುವದು ದ್ವಿತೀಯ ಲೋಕ ಮಹಾಯುದ್ಧದ ಐದನೇ ವರುಷ; ಸೆಪ್ಟೆಂಬರ ತಾ. 3ಕ್ಕೆ ಅದರ ಚತುರ್ವರ್ಷಾಂತ್ಯವಾಗಿದೆ. 1914ರ ಮಹಾಯುದ್ಧಕ್ಕಿಂತ, ಇಂದಿನ ಹೋರಾಟವು ಪಡೆದು ಬಂದಿರುವ ವಿಶೇಷಾನುಕೂಲತೆಗಳಲ್ಲಿ ಆಯುಷ್ಯವೂ ಒಂದು. ಅದು ನಾಲ್ಕೇ ವರುಷಗಳಲ್ಲಿಂತ್ಯವಾಗಿದ್ದರೆ, ಇದಿನ್ನೂ ವೃದ್ಧಿಗೂಡಿ ಬೆಳೆಯುವುದರಲ್ಲಿದೆ-ಪೋಲೆಂಡಿನ ಆಕ್ರಮಣದ ಅನಾವರಣದೊಡನೆ ಪ್ರಾರಂಭವಾದುದು, ಇಟಲಿಯಾಕ್ರಮಣದೊಂದಿಗೆ ಐದನೇ ಅಂಕವಾರಂಭಿಸಿದೆ ತಾವು ಊಹಿಸಿರುವ ದೌರ್ಬಲ್ಯವು ನಾಜಿಗಳಲ್ಲಿರುವದು ನಿಜವಾದರೆ, ತಮ್ಮ ಯೋಜನೆಗಳೆಲ್ಲಾ ಗೆರೆ ಗುರುತುಗಳ ಬದಲಾವಣೆ ಕೂಡಾ ಇಲ್ಲದೆ ಜ್ಯಾರಿಯಲ್ಲಿ ಬಂದರೆ, ಈ ಯುದ್ಧವು 1945ರಲ್ಲಿ ಅಂತ್ಯಗೊಳ್ಳಬಹುದೆಂದು ಮಿತ್ರರಾಷ್ಟ್ರೀಯ ಯುದ್ಧತಜ್ಞರಲ್ಲಿ ಅಗ್ರಗಣ್ಯ ಅವಧಿ ಜನ್ಮಲಂಗಿರು ಅಂದಾಜು. ಇದಕ್ಕಿಂತ ಗಿಡ್ಡಾವಧಿಯಲ್ಲಿ ಯುದ್ಧ ಮುಗಿಸುವೆನೆಂಬ ಆಶ್ವಾಸನೆ ಕೊಡುವ ಸ್ಥಿತಿಯಲ್ಲೀಗ ಹಿಟ್ಲರರೂ ಇಲ್ಲ, 1941ರ ಹಿಟ್ಲರ್ ಇಂದಿಲ್ಲ. ಹಲವು ಬಯಲಾಸೆಗಳನ್ನೇ ಸೂತ್ರವಾಗಿ ವಹಿಸಿ ಯುದ್ಧಾವಧಿಯನ್ನು ಸಾಧ್ಯವಿದ್ದಷ್ಟು ಸಮೀಪಕ್ಕೆಳೆದುಕೊಂಡರೂ, ಅದು 1945ಕ್ಕಿಂತ ಮುಂದೆ ಬರುವಂತಿಲ್ಲ! ಆನಂತರದ ಮಾತು ಹೇಗಿದ್ದರೂ ಇನ್ನು ಎರಡು ವರುಷವಂತೂ ಯುದ್ಧ ಬಾಳಿಯೇ ತೀರಬೇಕು! ಅದನ್ನು ಬದುಕಿಸುವ ಸನ್ನಾಹವನ್ನು ಹೋರಾಟದಲ್ಲಿರುವ ಇಕ್ಕಡೆಯವರೂ ಮಾಡಿದ್ದಾರೆ-ಮಾಡುತ್ತಿದ್ದಾರೆ. ಆದರೆ ಲೋಕ ಬದುಕಬಲ್ಲುದೆ? ಅದನ್ನೂ ಬದುಕಿಸುವ ಪ್ರಯತ್ನ ನಡೆದಿಹೆಯೆ? 'ಯುದ್ಧಕ್ಕಿಂತ ಶಾಂತಿ ಮೇಲು; ಯಾಕೆಂದರೆ ಶಾಂತಿ ಕಾಲದಲ್ಲಿ ಮಗನು ತಂದೆಯನ್ನು ಹೂಳುತ್ತಾನೆ. ಆದರೆ ಯುದ್ಧ ಕಾಲದಲ್ಲಿ ತಂದೆ ಮಗನನ್ನು ಹೂಳುತ್ತಾನೆ' ಎಂದು ಫ್ರಾನ್ಸಿಸ್ ಬೇಕನನ ಅರ್ಥಗರ್ಭಿತ ಮಾತು. ಆದರೆ ಇಂತಹ ಕಣ್ಣಾಡಿಗಳು ಹೃದಯವು ಹೃದಯವಾಗಿಯೇ ಇದ್ದಲ್ಲಿ ಅದನ್ನು ಸ್ಪರ್ಶಿಸಬಲ್ಲವು-ಹೃದಯವು ಯುದ್ಧ ಯಂತ್ರವಾಗಿ ಮಾರ್ಪಟ್ಟಲ್ಲಿಯೂ ಕೀಲಿ ಕೈಯ್ಯಾಗಿ ಸೇರಲಾರವು! ನಾಲ್ಕು ವರುಷಗಳ ಹೋರಾಟದಿಂದ ಈ ತನಕ ಇಕ್ಕಡೆಯವರ ಪೈಕಿ ಯಾರೂ ಒಬ್ಬರನ್ನೊಬ್ಬರು ಪೂರ್ತಿಯಾಗಿ ಸೋಲಿಸಿಲ್ಲ; ಆದರೆ ಲೋಕದ ಜನಸಾಮಾನ್ಯರನ್ನು ಸಂಪೂರ್ಣವಾಗಿ ಸೋಲಿಸಿದ್ದಾರೆ! ಯುದ್ಧ ಕೈದಿಯಾಗಿ ದೊರೆತ ವೈರಿ ಯೋಧನನ್ನಾದರೂ ಉಪವಾಸ ಹಾಕಿ ಕೊಲ್ಲುವ ಶಿಕ್ಷೆಯು ಈ ತನಕ ಯಾವ ಪಾಳಯದಲ್ಲೂ ಜ್ಯಾರಿಯಲ್ಲಿಲ್ಲ; ಆದರೆ ಈ ಯುದ್ಧದ ಪರಿಣಾಮವಾಗಿ ಬಂಗಾಳದವರಂತೆ ಆಹಾರವಿಲ್ಲದೆ ಕೊರಗಿ ಕರಗಿ ಸಾಯುವ ಶಿಕ್ಷೆಗೆ ಜನಸಾಮಾನ್ಯರು ಗುರಿಯಾಗಿದ್ದಾರೆ! ಇಂದಿನ ಆಹಾರಾಭಾವ, ಜೀವನ ಸಂಕಷ್ಟಗಳು ಶಾಂತಿ ಕಾಲದಲ್ಲಿ ಪ್ರಕೃತಿ ಪ್ರಕೋಪದಿಂದ ತಲೆಯೆತ್ತುತ್ತಿದ್ದರೆ, ಪ್ರಪಂಚದ ಸರ್ವ ಶಕ್ತಿಯು ಅದರ ನಿವಾರಣೆಗಾಗಿ ಕೇಂದ್ರೀಕರಿಸಲ್ಪಡುತ್ತಿದ್ದಿತು- ಆಸ್ತಿಕ ಪ್ರಪಂಚವೇ 'ದೇವ'ನನ್ನು ರಪಿಸುತ್ತಿದ್ದುದು. ಆದರೆ ಇಂದಿನ ರಣಕಾಳಿಗೆ ಆ ತಾಪ ಸ್ಪರ್ಶ ಕೂಡಾ ಇಲ್ಲ; ಆಪಳ ಆರಾಧನೆಗಾಗಿ ಮಾನವ ಯಜ್ಞವು ಅತಿ ನಿಷ್ಠೆಯಿಂದ ನಡೆಯುತ್ತಿದೆ; ಅದು ಇನ್ನೂ ಕೆಲ ಕಾಲ ನಡೆಯಬೇಕಾಗಿದೆ! ಇಂತಹ ನರಕಯಾತನೆಯನ್ನು ಸಹಿಸಿಕೊಳ್ಳುವ ಶಕ್ತಿಯಾಗಿ ಪ್ರಪಂಚದ ರಾಷ್ಟ್ರಗಳ ಜನತೆಗಾವುದು ದೊರತಿದೆ. ಎಂಬ ವಿಸ್ಮಯವೊಂದಿದೆ. ಹೆಚ್ಚಿನ ರಾಷ್ಟ್ರಗಳವರಿಗೆ ಸ್ವಾಭಿಮಾನ ಮತ್ತು ಭಾವೀ ಸುಖದ ಸ್ವಪ್ನವೇ ಆಶಕ್ತಿಯಾಗಿವೆ. ರಶ್ಯಾ, ಇಂಗ್ಲೆಂಡು, ಅಮೇರಿಕ, ಚೀನಾ, ಜಾಪಾನ್, ಇಟಲಿ, ಮೊದಲಾದ ರಾಷ್ಟ್ರಗಳ ಜನಸಾಮಾನ್ಯರಿಗೆ ದೇಶಾಭಿಮಾನಕಕ್ಕಾಗಿ ಅನುಭವಿಸುವ ಯಾತನೆಯಲ್ಲೂ ಅಭಿಮಾನತೋರಬಹುದು. ಆದರೆ ಹಿಂದೀಯರಿಗೆ? ಯುದ್ಧಜನ್ಯ ಸಂಕಷ್ಟಗಳ ಪರಮಾವಧಿಯನ್ನು ಭಾರತೀಯರು ಅನುಭವಿಸುತ್ತಿದ್ದಾರೆ. ನಾಜೀ ಆಕ್ರಮಿತ ರಾಷ್ಟ್ರಗಳವರ ಅಸಹನೀಯ ಸಂಕಷ್ಟದ ವರದಿಗಳು ವರ್ಣನೆಗಳು ಬ್ರಿಟಿಷ್ ಪ್ರಚಾರಕರ ಬಾಯಿಯಿಂದ ಬರುತ್ತಿವೆ-ಅವರೆ ಅಲ್ಲಿಯಾದರೂ ಆಹಾರವಿಲ್ಲದೆ ಸತ್ತವರ ಅಂಕೆ ಸಂಖ್ಯೆಗಳು ಈ ಯಾದಿಯಲ್ಲಿ ಕಾಣುವದಿಲ್ಲ. ಅಂತಹ ಮರಣಗಳು ಹಿಂದುಸ್ಥಾನದಲ್ಲಿ "ಗತ್ರ' ಹೀಗಿರುವಾಗಲಾದರೂ-ಯುದ್ಧದ ಈ ಕಠೋರ ಪರಿಣಾಮವನ್ನನುಭವಿಸುತ್ತಿರುವಾಗಲಾದರೂ ಭಾರತೀಯರೂ ಅನ್ಯರಂತೆ ಕಟ್ಟಿಕೊಳ್ಳಲಾಗುವ ಆಸೆಯೊಂದಿದೆಯೆ? 'ಯುದ್ಧದ ಪ್ರತಿಫಲವೆಂದು ಬ್ರಿಟಿಷ್ ಸಾಮ್ರಾಜ್ಯವು ಹೊಸತಾಗಿ ಏನನ್ನಾದರೂ ಪಡೆಯುವಂತೆಯೂ ಇಲ್ಲ; ಇದ್ದುದರಲ್ಲಿ ಕಷ್ಟನ್ನಾದರೂ ಬಿಡುವಂತೆಯೂ ಇಲ್ಲ'— ಎಂದ, ಕ್ವಿಬೆಕಿನಲ್ಲಿ ನಿರ್ಧರಿಸಲ್ಪಟ್ಟಿತಂತೆ. ಹಿಂದುಸ್ಥಾನವು ಹಳೇ ಸಾಮ್ರಾಜ್ಯದ ಪಟ್ಟಿಯಲ್ಲಿದೆ ಹೊರತು ಹೊಸ ಸಂಪುದನೆಯ ಯಾದಿಗೆ ಸೇರುವಂತಿಲ್ಲ. ಅಂದಮೇಲೆ ಭಾರತೀಯರು, ತಮ್ಮ ಇಂದಿನ ದುರದೃಷ್ಟವನ್ನು ಶಾಶ್ವತಗೊಳಿಸುವದಕ್ಕಾಗಿಯೇ ಈ ನರಕಯಾತನೆಯನ್ನು ಸಹಿಸುತ್ತಿರಬೇಕು ಎಂಬುದು ಸುಸ್ಪಷ್ಟ. ಆದ್ದರಿಂದಲೇ ಈ ಯುದ್ಧವು ಹಿಂದುಸ್ಥಾನದ ಪಾಲಿಗೆ ಕಗ್ಗತ್ತಲೆ-ಕಂಟಕ-ಮೃತ್ಯುಛಾಯೆ ಹೊರತು ಬೇರೇನೂ ಅಲ್ಲ!

ದುರ್ಬೀನು

ತಲೇ ಕೂದಲು ಸಿಕ್ಕುಗಟ್ಟಿ ನಿಲ್ಲುವದಕ್ಕಿಂತ ಜಡೆಯಾಗಿ ನೇತಾಡುವದು ಚಂದ. ಒಂದೇ ಕಡೆಯಿರುವವರಲ್ಲಿ ತಿಕ್ಕಾಟದ ಹೆಗ್ಗಳಿಕೆಗಿಂತ ಸಹಕಾರದ ವಿನಯವಿರುವದು ಚಂದ.

೦೦ ೦೦ ೦೦

ಮತ್ಸರಿಯಾಗುವದಕ್ಕಿಂತ ಮರುಳನಾಗುವದು ವಾಸಿ ಮರುಳ ಅನವಶ್ಯಕ ನಗುತ್ತಾನೆ; ಮತ್ಸರಿ ಅನವಶ್ಯಕ ಅಳುತ್ತಾನೆ.

೦೦ ೦೦ ೦೦

ಎಣ್ಣೆಯಲ್ಲಿರುವ ಬತ್ತಿ ಒಂದೇ ಬಾರಿ ಉರಿದು ಹೋಗುವದಿಲ್ಲ; ವಿಚಾರಜನ್ಯ ಸ್ಫೂರ್ತಿಯೂ ಕ್ಷಣಿಕಾವೇಶವಾಗಿ ಆರುವದಿಲ್ಲ.

೦೦ ೦೦ ೦೦

ಭೂತಾಲಯದ ಖಡ್ಗ ಝಳಪಿಸುವದಕ್ಕೆ ಮಾತ್ರ-ತಿನಿಯುವದಕ್ಕಲ್ಲ. ಭೂತಕಾಲದ ಸಂಪತ್ತು ಹೆಗ್ಗಳಿಕೆ ಪಡಲು ಮಾತ್ರ-ಉಪಯೋಗಕ್ಕಿಲ್ಲ.

೦೦ ೦೦ ೦೦

ಪಿತ್ತವೇರಿದವನ ತಲೆಗೆ ತಣ್ಣೀರು ಹೊಯ್ಯಬಹುದು— ಜ್ವರವೇರಿದಾಗಲೂ ಹೊಯ್ದರಾಗದು ಆಡಂಭಾವಿಯನ್ನು ಆಣಿಸುವದೇ ಮದ್ದು; ಆಸಕ್ತಿಗೊಳಗಾದವನಿಗೂ ಹಾಗಲ್ಲ.

೦೦ ೦೦ ೦೦

ಕಾಗೆ ಕೂಗಿದುದಾದರೂ ಕೇಳಿಸುತ್ತದೆ —ಕರುಳು ಕೂಗಿದುದು ಕೇಳಿಸುವದಿಲ್ಲ ಮದಾಂಧರಿಗಾದರೂ ಮನ್ನಣೆಯಿದೆ-ಮನಸ್ಸಾಕ್ಷಿಯನ್ನು ಮನ್ನಿಸುವವರು ಕಡಿಮೆ.

೦೦ ೦೦ ೦೦

ಒಲೆಯ ಬೆಂಕಿಯನ್ನು ನೋಡಲು ಬರುವವರಿಲ್ಲ; ಮಾಡಿಗೇನೇ ಬೆಂಕಿ ಹತ್ತಿದರೆ ಊರು ಒಟ್ಟಾದೀತು. ಸಹಜ ಕಾರ್ಯಮಗ್ನನನ್ನು ಒಲೈಸುವವರಿಲ್ಲ; ಅತಿರೇಕವಾದಿಯನ್ನಾದರೆ ಸುತ್ತುಗಟ್ಟುತ್ತಾರೆ.

೦೦ ೦೦ ೦೦

ದೇಹವನ್ನೆಲ್ಲಾ ಮುಚ್ಚಿಕೊಂಡರೂ ಮುಖ ಮುಚ್ಚಿಕೊಳ್ಳಬಾರದು. ಮಾತು ವರ್ತನೆಯನ್ನು ಬಚ್ಚಿಟ್ಟರೂ ಮನಸ್ಸನ್ನು ಮಂಕಾಗಿಸಬಾರದು.

೦೦ ೦೦ ೦೦

ಜೀವದಲ್ಲಿರುವವನಿಗೆ ಚಿಕಿತ್ಸೆ; ಶವವಾದವನಿಗೆ ಚಿತೆ ಹುರುಪಿದ್ದವನಿಗೆ ಪ್ರೋತ್ಸಾಹ, ಮಂಕನಿಗೆ ಮರ್ದನ.

೦೦ ೦೦ ೦೦

ಕೆಚ್ಚಲು ಜಗ್ಗಿದರೆ ಹಾಲುಬಂದೀತು. ಕೊಂಬು ಹಿಡಿದೆಳೆದರೆ ಹಲ್ಲು ಉದುರೀತು ಸದ್ಭಾವವನ್ನು ಹುಟ್ಟಿಸಿ ಸತ್ಫಲ-ಸುಬುದ್ಧಿಯನ್ನು ಪ್ರೇರಿಸಿ ದುಷ್ಪರಿಣಾಮ.

೦೦ ೦೦ ೦೦

ಉದರಶೂಲೆಯವನನ್ನು ಉರುಡಾಡಿ ಕೆಡಹಬೇಕೆಂದಿಲ್ಲ; ಆತ್ಮವಂಚಕನನ್ನು ಅನ್ಯರು ವಂಚಿಸಬೇಕೆಂದಿಲ್ಲ.

ಅತ್ಯಾಶ್ಚರ್ಯಕರ
ಗುಣಕಾರಿ!
ಗಿಡಮೂಲಿಕೆಗಳ ವನಸ್ಪತಿ ಔಷಧ
(ಗುಣಕಾರಿಯಲ್ಲವೆಂದು ರುಜುಪಡಿಸುವವರಿಗೆ ರೂ. ೧೦೦ ಇನಾಂ.)

ನರೆತ ಕೂದಲು
ಮಾರ್ಕೆಟುಗಳಲ್ಲಿ ದೊರೆಯುವ ರಂಗುಗಳನ್ನು ಉಪಯೋಗಿಸಬೇಡಿರಿ. ಆಯುರ್ವೇದ ರೀತ್ಯಾ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ ತೈಲವನ್ನೇ ಉಪಯೋಗಿಸಿರಿ. ಆಗ ತಾನೆ ತಿಳಿಯುವುದು, ನರೆತ ಬಿಳಿ ಕೂದಲು ಕಪ್ಪಾಗುವುದು. ಮಾತ್ರವಲ್ಲದೆ ದೃಷ್ಟಿದೋಷ, ತಲೆನೋವು ಸಹ ಮಾಯವಾಗುವುದು. ಕೆಲವೇ ಕೂದಲು ನರೆತರೆ ಎರಡು ರೂಪಾಯಿ ಬೆಲೆಯ ಒಂದು ಸೀಸೆ ಸಾಕಾಗುವುದು. ಮೂರೂವರೆ ರೂಪಾಯಿ ಕ್ರಯದ ಒಂದು ಸೀಸೆ ತೈಲದಿಂದ ಹೆಚ್ಚಿಗೆ ನರೆತ ಕೂದಲುಗಳು ಕಪ್ಪಾಗುವುವು ಎಲ್ಲಾ ಕೂದಲುಗಳು ನರೆತಲ್ಲಿ ಅವೆಲ್ಲ ಕಪ್ಪಾಗಲು ಐದು ರೂಪಾಯಿ ಬೆಲೆಯ ಒಂದು ಸೀಸೆ ಎಣ್ಣೆ ಸಾಕಾಗುವುದು. ಗುಣಕಾರಿಯಲ್ಲವೆಂದು ರುಜುಪಡಿಸಿದರೆ ಡಬ್ಬಲ್ ಕ್ರಯ ವಾಪಾಸು.

ಬಿಳಿ ಕುಷ್ಠ ಮತ್ತು ತೊನ್ನು
ಪಂಡಿತರಿಂದಲೂ ಹಕೀಮರೇ ಮೊದಲಾದವರಿಂದಲೂ ಗುಣಪಡಿಸಲಸಾಧ್ಯವಾದ ಬಿಳಿ ಕುಷ್ಠ ಮತ್ತು ತೊನ್ನು ಭಯಂಕರ ವ್ಯಾಧಿಯು ಹದಿನೈದು ದಿನಗಳ ವರೆಗೆ ನಮ್ಮ ಔಷಧಿಯನ್ನು ಲೇಪನ ಮಾಡಿದ್ದಲ್ಲಿ ಗುಣ ಹೊಂದುವುದು. ಹದಿನೈದು ದಿನಗಳ ಮದ್ದಿಗೆ ರೂಪಾಯಿ 2-8-0.

ಸಂತಾನ ನಿರೋಧ
ಬರ್ಥ್ ಕಂಟ್ರೋಲಿಗೆ ಹೇಳಿದ ಔಷಧವಿದು. ತಿಂಗಳಲ್ಲಿ ಎರಡು ಮೂರು ದಿವಸಗಳ ತನಕ ಸೇವಿಸತಕ್ಕದ್ದು. ಒಂದು ವರ್ಷಕ್ಕೆ ಬೇಕಾಗುವ ಔಷಧಿ ಬೆಲೆ ರೂಪಾಯಿ 2/- ಜೀವಮಾನದಲ್ಲೆ ಸಂತತಿಯಾಗಬಾರದೆಂದಿದ್ದರೆ ಅದಕ್ಕೂ ಬೇರೊಂದು ಔಷಧವಿದೆ. ಅದರ ಬೆಲೆಯು ಸಹಾ ರೂಪಾಯಿ 2/- ಇದರ ಸೇವನೆಯಿಂದ ಆರೋಗ್ಯಕ್ಕೆ ಹಾನಿಯೇನೂ ಇಲ್ಲ

ಸಹನಶಕ್ತಿ ಮಾತ್ರೆ
ಸಂಜೆ ಹೊತ್ತಿಗೆ ಒಂದು ಮಾತ್ರೆಯನ್ನು ಸೇವಿಸಿದರೆ ಅದರ ಆನಂದವನ್ನು ಹೇಳತೀರದು. ಕಳೆದುಹೋದ ಮಾನುಷತ್ವವು ಪುನಹ ಪ್ರಾಪ್ತಿಯಾಗಿ ಶರೀರದಲ್ಲಿ ಹೊಸ ಹುರುಪು ಶಕ್ತಿ ವೃದ್ಧಿಯಾಗುವುದು ಒಮ್ಮೆ ಉಪಯೋಗಿಸಿದ್ದಲ್ಲಿ ಎಂದೆಂದಿಗೂ ಬಿಡಲಾರಿರಿ 16 ಮಾತ್ರೆಗಳ ಒಂದು ಸೀಸೆಗೆ ರೂಪಾಯಿ 1/- ಬೆಲೆ

ಕಿವುಡುತನ
ಕಿವಿ ಕೇಳದಿರುವುದು, ಕಿವಿ ಸೋರುವುದು ಇತ್ಯಾದಿ ಸರ್ವ ಕಿವಿ ದೋಷಗಳಿಗೆ ದಿವ್ಯೌಷಧ. ಬೆಲೆ ರೂಪಾಯಿ 2/-

ಗೊನೋರಿಯಾ ಗುಣಕಾರಿ
ಗೊನೋರಿಯಾ'ವ್ಯಾಧಿಗೆ ಸಂಬಂಧಿಸಿದ ಯಾವುದೇ ಇರಲಿ—ಈ ಔಷಧ ಸೇವನೆಯಿಂದ ಸರ್ವವೂ ಮಾಯವಾಗಿ ದೇಹದಲ್ಲಿ ಉಲ್ಲಾಸವುಂಟಾಗುವುದು. ಬೆಲೆ ರೂ.2/-
(ಪತ್ರವ್ಯವಹಾರ ಇಂಗ್ಲಿಷಿನಲ್ಲೇ ಮಾಡತಕ್ಕದು)
ಕೂಡಲೇ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —
Vaidraj Akhil Kishore Ram,
No. 37, P.O Katrisarai (Gaya)

—ಯುದ್ಧಾಂತ್ಯವೆಂದಿಗೆ?—

'..ರ್ಮನರ ಶಕ್ತಿಯಿನ್ನೂ ಅಗಾಧವಾಗಿದೆ. ಬೋಂಬುಧಾಳಿಗಳಿಂದ ಅವರ ಯುದ್ಧೋತ್ಪತ್ತಿ ಕಾರ್ಖಾನೆಗಳು ಸೇಕಡಾ 10ರಷ್ಟು ಧ್ವಂಸವಾದುವೆಂದು ಭಾವಿಸಿಕೊಂಡರೂ ಇನ್ನೂ ಅವರ ಸಾಮರ್ಥ್ಯ ಬ್ರಹ್ಮಾಂಡದ್ದಿದ್ದೆ. ಅವರ 3 ಮಿಲಿಯ ಸೈನ್ಯ ನಾಶವಾಯಿತೆಂದು ಲೆಕ್ಕಹಾಕಿದರೂ ಇನ್ನೂ 10ಮಿಲಿಯ ಉಳಿದಿದೆ ಯುದ್ಧವು 1946ರೊಳಗೆ ಮುಗಿಯುವಂತಿಲ್ಲ" ಅಮೇರಿಕದ-ಲೀಸ್ ಲೆಂಡ್ ಕಾರ್ಯಕರ್ತ ಮಿ. ಹೆರ್ರಿ ಹೋಪ್‌ಕಿನ್ಸರ ಮಾತು. "ಶಕ್ತಿ ತುಲನೆಮಾಡುವದಾದರೆ ಇನ್ನೂ ದೀರ್ಘಾವಧಿಯ ತನಕ ಸಹಿಸಿಕೊಳ್ಳುವ ಸಾಮರ್ಥ್ಯ ನಮ್ಮ ವೈರಿಯಲ್ಲಿದೆ. ಆದರೆ ಅಲ್ಲಿಯ ಜನತೆಯ ಮನೋದೌರ್ಬಲ್ಯದ ಸದುಪಯೋಗ ಮಾಡಿಕೊಂಡು ಇದೇ ದಶಂಬರದೊಳಗೆ ಯುದ್ಧ ಮುಗಿಸುವದುತ್ತಮ" ಸುಪ್ರಸಿದ್ಧ ಯುದ್ಧತಜ್ಞ ಕೇಪ್ಟನ್ ಲಿಡ್ಡೆಲ್ ಹಾರ್ಟ್‌ರ ಅಭಿಪ್ರಾಯ. ಮಿ. ಎಮಿಲ್ ಲುಡ್ವಿಗರಂತಹ ಅತ್ಯಾಶಾವಾದಿಗಳ ಅಭಿಪ್ರಾಯದಂತೆ ಈ ಛಳಿಗಾಲದೊಳಗೆ ಜರ್ಮನಿಯ ಪತನ ನಿಶ್ಚಯ. ಜರ್ಮನಿ ಸೋತ ಮೇಲೆ ಜಾಪಾನು ದೀರ್ಘಕಾಲ ಹೋರಾಡುವಂತಿಲ್ಲವೆಂದು ಎಲ್ಲಾ ಯುರೋಪಿಯನ್ ವಾರ್ತಾವಾಹಕರ ಅಭಿಪ್ರಾಯ. ಆದರೆ ವಾಷಿಂಗ್ಟನಿನಲ್ಲಿ ಜರ್ಮನಿ ಮುಗಿದ ಮೇಲೂ ಜಾಪಾನನ್ನು ಮುಗಿಸಲು ಮತ್ತೆ ಎರಡು ವರುಷಬೇಕಾಗಬಹುದೆಂಬ ಊಹೆಯಿದೆ

○ ಇಟಲಿಯಲ್ಲಿ ಎಂಟನೇ ಸೇನೆಯು ಪ್ರಗತಿಸಾಗಿದೆ. ಒಂದೊಂದೇ ಸ್ಥಳಗಳು ಸರ್ತಿ ಪ್ರಕಾರ ಈ ತನಕ ಬ್ರಿಟಿಷ್, ಅಮೇರಿಕಾ, ಕೆನಡಾದ ಸೇನೆಗಳ ವಶವಾಗುತ್ತಾ ಬಂದಿವೆ.

○ ಮಿತ್ರಸೇನೆಗಳು ಬೇರೆ ಬೇರೆ ಕಡೆಗಳಲ್ಲಿ

ಸುದ್ದಿ ಸೂಚನೆ.

ಇಟಲಿಯಲ್ಲಿಳಿದಿನೆಯೆಂದೂ ಅವುಗಳಿಗೆಲ್ಲಾ ಹೆಚ್ಚಿನ ಸೈನ್ಯೋಪಕರಣ ಸರಬರಾಯಿ ನಿರಾತಂಕವಾಗಿ ದೊರೆಯುತ್ತಿದೆಯೆಂದೂ ತಿಳಿದುಬರುತ್ತದೆ.

○ವಿರೋಧೀ ಸೇನೆಯ ಹಿಂಭಾಗಗಳಿಗೆ ಗಾಳೀ ಕೊಡೆ ಸೈನಿಕರನ್ನಿಳಿಸಲು ಮಿತ್ರಸೇನಾನಿಗಳಿಗೆ ಸಾಧ್ಯವಾಗಿದೆ. ಉತ್ತರ ಇಟಲಿಯ ಪೋವಾಲೆಯಿಂದ ನಾಜೀ ಸೇನೆಗಳೂ ದಕ್ಷಿಣಕ್ಕೆ ನುಗ್ಗುತ್ತಿವೆಯಂತೆ.

○ಕೇಂದ್ರ ಸ್ಥಳಗಳ ಮೇಲೆಲ್ಲಾ ಮಿತ್ರರು ವಿಮಾನ ಧಾಳಿ ನಡೆಸಿದ್ದಾರೆ. ಬ್ರೆನ್ನರ್ ಕಣಿವೆಯ ರೈಲ್ವೇ ಹಾದಿಗಳನ್ನು ಸದ್ಯಕ್ಕೆ ನಿಲ್ಲಿಸಲಾಗಿದೆ ಹಲವು ಇಟಲಿಯಾನರು ಸೆರೆ ಸಿಕ್ಕಿದ್ದಾರೆ

○ರಶ್ಯದಲ್ಲಿ ಕೆಂಪು ಸೇನೆಯು 600 ಮೈಲು ವಿಸ್ತೀರ್ಣದ ರಂಗದಲ್ಲಾರಂಭಿಸಿರುವ ವಸಂತ ಧಾಳಿಯು ಅತಿ ರಭಸದಲ್ಲಿದೆ. ಗೊಲೋರ್ಲೊವ್‌ಕಾ, ನಿಕಿಟೋವ್ಕಾ ಮೊದಲಾದ ಪ್ರಾಮುಖ್ಯ ಸ್ಥಳಗಳು ರಶ್ಯನರ ವಶವಾಗಿವೆ.

●ನಾಜಿಗಳ ಪರಿಸ್ಥಿತಿಯು ಚಿಂತಾಜನಕವಾಗಿದೆಯೆಂದೂ ರಶ್ಯದಲ್ಲಿ ಅವರ ಅತಿ ಹೆಚ್ಚಿನ ಯುದ್ಧೋಪಕರಣಗಳ ನಾಶದೊಂದಿಗೆ ದಿನಕ್ಕೆ ಕಡಿಮೆಯೆಂದರೆ ಸರಾಸರಿ 10 ಸಾವಿರ ನಾಜೀ ಯೋಧರು ಹತರಾಗುತ್ತಿರುವರೆಂದೂ ತಿಳಿದುಬರುತ್ತದೆ.

○ಉಕ್ರೈನಿನೊಳಗೆ ಕೆಂಪು ಸೇನೆ ಸಿಡಿಲಿನಂತೆರಗಿದೆ. ಅಲ್ಲಿಯ ಪ್ರಾಮುಖ್ಯ ನಗರ ಕೊನೋಟೋಪ್ ಇಂದು ನಾಳೆಯೊಳಗೆ ರಶ್ಯನರ ಹಸ್ತಗತವಾಗುವ ಲಕ್ಷಣಗಳಿವೆ ಸ್ಟಾಲಿನೋವಿನ ಕಡೆಗೆ ನುಗ್ಗಿರುವ ಕೆಂಪು ಸೇನೆ ನಗರದ ಹೊರವಲಯವನ್ನು ಸಮೀಪಿಸಿದೆ.

○ಎಲ್ಲಾ ರಂಗಗಳಲ್ಲೂ ವಿಜೇಯ ಧಾಳಿಯನ್ನಾರಂಭಿಸಿರುವ ರಶ್ಯನ್ ಸೇನೆಯ ಮೃತ್ಯು ಹೊಡೆತವನ್ನು ತಪ್ಪಿಸಿಕೊಳ್ಳಲು ನಾಜೀ ಸೇನೆಗಳು ಕಾರ್ಪೆಥಿಯನ್ ಪರ್ವತ ಸಂದು ತನಕ ಹಿಂದೆ ಸರಿಯಬಹುದೆಂದ ಊಹೆ. ಈ ಬಾರಿಯ ಟೆಗಾನ್ ರಾಗ್, ಡೋನೆಜ್ ರಂಗಗಳಲ್ಲಿ ಜರ್ಮನರಿಗಾದ ಹಾನಿಯು ಅತಿ ಭಯಂಕರವಾದದ್ದು.

○ ಮಿತ್ರ ಸೇನೆಗಳು ಬೇರೆ ಬೇರೆ ಕಡೆಗಳಲ್ಲಿ ಆಕ್ರಮಣಾರಂಭಿಸುವ ಲಕ್ಷಣಗಳು ಕ್ಷಣಕ್ಷಣಕ್ಕೆ ಹೆಚ್ಚು ಹೆಚ್ಚಾಗಿ ಸ್ಪಷ್ಟವಾಗುತ್ತಿವೆ. ಫ್ರಾನ್ಸ್ ಮತ್ತು ಗ್ರೀಸಿನೊಳಗೆ ನುಗ್ಗುವ ಸಂಭವವಧಿಕವಾಗಿದೆ.

○ಇಟಲಿಯಲ್ಲಿ ಮೊನ್ನೆ ತನಕ ಮಿತ್ರಸೇನೆ ಸುಮಾರು 50 ಮೈಲು ಮುಂದೊತ್ತಿದೆ.

○ ಮಿ. ಚರ್ಚಿಲ್ಲರು ಕ್ವಿಬೆಕಿನಿಂದ ಆಕಾಶವಾಣಿ ಭಾಷಣ ಮತ್ತು ಸೀದಾ ವಾಷಿಂಗ್ಟನಿಗೆ ಹೋಗಿ ಅಧ್ಯಕ್ಷ ರೂಸುವೆಲ್ಟರು ಹಾಗೂ ಯುದ್ಧ ನಿಪುಣರೊಡನೆ ಚರ್ಚೆ ನಡೆಸುತ್ತಿದ್ದಾರೆ.

●ಉತ್ತರ ಉಕ್ರೈನಿನಲ್ಲಿ ರಶ್ಯನರು ತಮ್ಮ ಧಾಳಿಯನ್ನು ವ್ಯವಸ್ಥಿತ ಹಾಗೂ ದೊಡ್ಡ ಪರಿಣಾಮದಲ್ಲಿ ಬೆಳೆಸಿದ್ದಾರೆ ಆರ್ಟೆಮೋವ್‌ಸ್ಕ್ ಮೊದಲಾದ ಸ್ಥಳಗಳು ಅವರ ವಶವಾಗಿವೆ. ಡೊನೆಟ್ಜ್ ಕ್ಷೇತ್ರದಲ್ಲಿಯೂ ನಾಜಿಗಳು ಹಿಂದೆ ಬೀಳುತ್ತಿದ್ದಾರೆ.

○ಉಕ್ರೈನಿನಲ್ಲಿ ಜರ್ಮನರ ಪ್ರತಿಭಟನೆಯ ತೀವ್ರತೆಯೂ ಬೆಳೆಯುತ್ತಿದೆ ಎಂದು ತಿಳಿದುಬರುತ್ತದೆ.

○ನ್ಯೂಗಿನಿಯಾ ಉತ್ತರ ಕರಾವಳಿಯ ಹುವೊನ್ ಕೊಂದರದಲ್ಲಿ ಮಿತ್ರರು ನೂತನಾಕ್ರಮಣವಾರಂಭಿಸಿ ಅಲ್ಲಿಯ ಜಾಪಾನೀ ಸೇನೆಗಳನ್ನೆಲ್ಲಾ ಸುತ್ತುಗಟ್ಟಿದ್ದಾರೆ.

○ಆ ವಲಯದ ದ್ವೀಪಗಳ ಮೇಲೆಲ್ಲಾ ಧಾಳಿ ನಡೆಸಿದ್ದಾರೆ. ಆಕಸ್ಮಿಕ ಹುವೋನ್ ಆಕ್ರಮಣವನ್ನು ಜಾಪಾನರು ನಿರೀಕ್ಷಿಸದಿದ್ದುದರಿಂದ ಅಲ್ಲಿ ಪ್ರತಿಭಟನೆ ಬಲವಾಗಿರಲಿಲ್ಲ. ಅಲ್ಲಿಯ ವೈರಿ ಸೇನೆಗಳನ್ನು ಸುತ್ತುಗಟ್ಟಿ ಧ್ವಂಸಮಾಡಿ ಮಿತ್ರರು ವಿಜಯ ಸಂಪಾದಿಸಿದ್ದಾರೆ.

○ಪೂರ್ವ ಏಸ್ಯಾದ ಸೇನಾನಿ ಲೋರ್ಡ್ ಮೌಂಟ್ ಬೇಟನರು ಸದ್ಯದಲ್ಲೇ ಚುಂಗ್‌ಕಿಂಗಿಗೆ ಹೋದಾಗ, ಚಿಯಾಂಗ್ ಕೈಶೇಕರೊಡನೆ ದೀರ್ಘಾಲೋಚನೆ ನಡೆಸಲಿದ್ದಾರೆಂದೂ ಜಾಪಾನೀ ವಿರುದ್ಧ ಶಾಶ್ವತ ಯೋಜನೆಯು ಅಲ್ಲಿ ತಯಾರಾಗುವದೆಂದೂ ನಿರೀಕ್ಷೆಯಿದೆ.

○ಲಂಡನಿನಲ್ಲಿರುವ ಫ್ರೆಂಚ್ ರಾಷ್ಟ್ರೀಯ ಸಮಿತಿಯು ಸಂದರ್ಭ ದೊರೆತೊಡನೆ ಮಾರ್ಶೆಲ್ ಪಿಟೇನ್ ಮತ್ತು ಅವರ ಮಂತ್ರಿಗಳನ್ನೆಲ್ಲಾ ವಿಚಾರಣೆಗಾಗಿ ಮಿತ್ರರಿಗೆ ಹಿಡಿಕೊಡಿಸಬೇಕೆಂದು ನಿರ್ಧರಿಸಿದೆ.

○ಬ್ರಿಟಿಷ್ ಜನತೆಗೆ ಹಿಂದುಸ್ಥಾನದ ವಿಷಯವಾಗಿ ತೀರಾ ಅಜ್ಞಾನವಿದೆಯೆಂದು ಶ್ರೀ ಚಿನ್ನಾದುರಾಯಿಯವರು ಲಂಡನಿನ ತನ್ನ ಆಕಾಶವಾಣಿ ಭಾಷಣದಲ್ಲಿಂದಿದ್ದಾರೆ.

○ಹಿಂದೀ ಸ್ವಾತಂತ್ರ್ಯಭಾವಕ್ಕೆ ಹಿಂದೀಯರೊಳಗಿನ ಬಿಕ್ಕಟ್ಟೇ ಕಾರಣವೆಂದು ಬ್ರಿಟನಿನ ಉಪಪ್ರಧಾನಿ ಮಿ. ಆಟ್ಲೀಯವರೂ ಆರೋಪಿಸಿದ್ದಾರೆ.

●ಬಂಗಾಳದ ಆಹಾರ ಸಂಕಷ್ಟ ನಿವಾರಣೆಯಿಂದ ಅಲ್ಲಿಯ ಮಂತ್ರಿಗಳು ತೀರಾ ತಲ್ಲಣಗೊಂಡು ರಕ್ಷಣಾ ಸಂಸ್ಥೆಗಳ ಸ್ಥಾಪನೆ ಮತ್ತು ಸಹಾಯಕ್ಕಾಗಿ ವಿನಂತಿ ಮಾಡಿಕೊಂಡಿದ್ದಾರೆ. ಈ ಸಂಬಂಧವಾಗಿ ಲೇಡಿ ಲಿನ್‌ಲಿತ್‌ಗೋರವರೂ ಆಕಾಶವಾಣಿ ಭಾಷಣವೊಂದನ್ನಿತ್ತರು.

ಚಂದಾದಾರರಲ್ಲಿ ವಿನಂತಿ.

ಇದೇ ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ ನವಯುಗದ ೨೩ನೇ ವರ್ಷ ಕೊನೆಗೊಂಡು ಇದೇ ಸೆಪ್ಟಂಬರವು ತಿಂಗಳಿಂದ ೨೪ನೇ ಹೊಸ ವರ್ಷಾರಂಭವಾಗಿರುವುದು ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ನಮ್ಮ ಚಂದಾದಾರರು ತಮ್ಮ ಚಂದಾ ಹಣವನ್ನು ದಯಮಾಡಿ ಕೂಡಲೇ ಕಳುಹಿಸಿಕೊಡುವಂತೆ ಅಪೇಕ್ಷಿಸಲಾಗುತ್ತದೆ.

ಮೆನೇಜರ್.

ಪುತ್ತೂರು.

ಪುತ್ತೂರು ಸಮೀಪ ಬಲ್ನಾಡು ಎಂಬಲ್ಲಿ ಒಂದು ಗುಡ್ಡವನ್ನು ಕಡಿದು ತೋಡು ಬಿಡಿಸುವಾಗ ಗುಡ್ಡದ ಒಂದು ಭಾಗ ಜರಿದು ೮ ಜನರಿಗೆ ಜಖಂ ಆಗಿ ಇಬ್ಬರು ಮಣ್ಣಿನಡಿಯಲ್ಲಿ ಸಿಕ್ಕಿ ಮರಣಹೊಂದಿರುವರಾಗಿ ತಿಳಿದುಬರುತ್ತದೆ.

ತಾ. ೩೧ರಂದು ೧೦ಜೆ ಪುತ್ತೂರಿನ ಸಮೀಪ ಬೊಳ್ವಾರಿಂಬಲ್ಲಿ ಶಂಕರ ಪಟ್ಟೆಲ್ ಬಸ್ಸು ಅಪಘಾತಕ್ಕೆ ತುತ್ತಾಗಿ ಮೋಟರಿನಲ್ಲಿದ್ದ ೧೨ ಮಂದಿಗೆ ಜಖಂ ಆಗಿದೆ. ಅವರಲ್ಲಿ ನಾಲ್ವರಿಗೆ ಪೆಟ್ಟು ಜೋರಾಗಿದ್ದು ಕೂಡಲೆ ಆಸ್ಪತ್ರೆಗೆ ಸಾಗಿಸಲಾಗಿದೆ. ಬಸ್ಸಿನ ಕಂಡೆಕ್ಟರನ ಕಾಲಿನ ಕೀಲು ಮುರಿದಿದೆಯೆಂದೂ ತಿಳಿಯುತ್ತದೆ

ಕುಂಬಳೆ.

ಜಿಲ್ಲಾ ಬೋರ್ಡಿನ ಕಾಂಗ್ರೆಸ್ ಸದಸ್ಯರು ರಾಜಿನಾಮೆಕೊಟ್ಟ ಸ್ಥಳಕ್ಕೆ ಕಾಸರಗೋಡು ಸರ್ಕಲ್ ನಿಂದ ಡಾ। ಕೆ. ಪಿ. ರಘುನೇಂದ್ರರಾಯರೂ, ಕುಂಬಳೆ ಸರ್ಕಲ್‌ನಿಂದ ಶ್ರೀ ಬಂಬ್ರಾಣ ಕರಿಯಪ್ಪ ಭಂಡಾರಿಗಳೂ, ಹೊಸದುರ್ಗ ಸರ್ಕಲಿನ ಹರಿಜನ ಸ್ಥಾನಕ್ಕೆ ಶ್ರೀ ಪುಕರನವರೂ ಸ್ಪರ್ಧೆಯಿಲ್ಲದೆ ಚುನಾಯಿತರಾಗಿರವರು. ಮಂಜೇಶ್ವರ ಹೊಸದುರ್ಗ ಸರ್ಕಲ್ ಜನರಲ್ ಸೀಟಿಗೆ ಸ್ಪರ್ಧೆಗಳಿವೆ.

ಸಿ. ಪಿ. ಸಿ. ಕಂಪನಿಯ ಮೆನೇಜಿಂಗ್ ಡೈರೆಕ್ಟರರಾದ ಶ್ರೀ ವಿ. ಎಸ್ ಕುಡ್ವರು ಬರೆದ 'ಮೋಟರು ಯಂತ್ರ ವಿಜ್ಞಾನ' ಎಂಬ ಗ್ರಂಥಕ್ಕೆ ದ್ರಾವಿಡ ಭಾಷೆಗಳಲ್ಲಿ ಆಧುನಿಕ ವೈಜ್ಞಾನಿಕ ವಿಷಯಗಳಲ್ಲಿ ಪುಸ್ತಕ ಪ್ರಕಟಿಸುವ ಬಗ್ಗೆ ಪ್ರೋತ್ಸಾಹವಾಗಿ ಮದ್ರಾಸು ಯುನಿವರ್ಸಿಟಿಯವರು ಕೊಡುವ ಪಾರಿತೋಷಿಕ ರೂ. 750ನ್ನು ಕೊಟ್ಟಿರುತ್ತಾರೆಂಬುದು ಸಂತೋಷದ ಸುದ್ದಿ

ಉತ್ತಮ ವರ್ಗದ ವಾಚುಗಳು

ಪರದೇಶಗಳಿಂದ ವಾಚುಗಳನ್ನು ತರಿಸುವುದು ನಿಲ್ಲಿಸಲ್ಪಟ್ಟಿದ್ದಾಗ್ಯೂ, ಸರಿಯಾದ ಸಮಯ ಸೂಚಿಸುವ ಗಡಿಯಾರಗಳನ್ನು ಅತ್ಯಲ್ಪ ಬೆಲೆಯಲ್ಲಿ ನಾವು ಒದಗಿಸಿಕೊಡುವೆವು. ಐದು ವರುಷ ಗ್ಯಾರಂಟಿಯುಳ್ಳ ಕ್ರೋಮಿಯಮ್ ಕೇಸಿನ ರಿಸ್ಟ್ ವಾಚಿಗೆ ರೂಪಾ 16-8-0. ಗೋಲ್ಡನ್ ವಾಚಿಗೆ ರೂಪಾ 18-8-0. ಲೇಡಿ ವಾಚಿಗೆ ರೂಪಾ 20/- ರೋಲ್ಡ್‌ಗೋಲ್ಡಿನದಕ್ಕೆ ರೂಪಾ 25/- ಉದ್ದ ಚೌಕದ್ದಕ್ಕೆ ರೂಪಾ 30/- ನಾಲ್ಕು ಜ್ಯುವೆಲುಗಳುಳ್ಳದ್ದಕ್ಕೆ ರೂಪಾ 35/- ರೋಲ್ಡ್ ಗೋಲ್ಡ್ ಹತ್ತು ವರುಷ ಗ್ಯಾರಂಟಿಯುಳ್ಳದ್ದಕ್ಕೆ ರೂಪಾ 38/- ಟಪ್ಪಾಲು ಖರ್ಚು ಪ್ರತ್ಯೇಕ. ಎರಡು ವಾಚುಗಳನ್ನು ಒಟ್ಟಿಗೆ ತರಿಸುವವರಿಗೆ ಟಪ್ಪಾಲು ಖರ್ಚು ಮಾಫಿ ಆರ್ಡರನ್ನು ಇಂಗ್ಲಿಷಿನಲ್ಲೇ ಕಳುಹಿರಿ. ಫೌಂಟನ್ ಪೆನ್ ಒಂದು ಇನಾಮು.

CALCUTTA CLOCK CO. (SEC. 624)
Post Box.No.12203 Calcutta

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ನಡಿಯುವ ಚಿತ್ರ—

ಡಾಟರ್ಸ್ ಆಫ್ ಇಂಡಿಯಾ

ಬರುವ ಚಿತ್ರ:—

ನೇಶನಲ್ ಚಿತ್ರ: **ವಿಜಯ್**

ಅನಂತರ:

ಪುಷ್ಪವಲ್ಲಿ & ವೈ. ವಿ. ರಾವ್ ನಟಿಸಿರುವ ತೆಲುಗು **ಸತ್ಯಭಾಮ**.
ನೇಶನಲ್ ಪಿಕ್ಚರ್ಸ್; ಅತ್ರಿ ಚಿತ್ರ **ರಾಜಾರಾಣಿ**, ಕುನಾರಿ.
ಜಿಂದ್ರವ್ವ, ಎಸ್. ಡಿ. ಸುಬ್ಬುಲಕ್ಷ್ಮಿ ನಟಿಸಿರುವ
ಕನ್ನಡ **ಕೃಷ್ಣ ಸುಧಾಮ**.

NOTICE.

In the court of the District Munsif of Mangalore.

R-I-A-No-1028/43 O S 320/43

Between:-

Rama Krishna Martobrao Kasbekar— Plaintiff

and

1. S. I S. Fernandes 2. Johnny Souza Son of Jacob Souza of Panamboor Defendants

To the 2nd Defendant Johnny Souza.

Take notice that the above suit filed by the plaintiff against you and another for possession of planit properties with mesne profit stands posted for hearing before this court on 18-9-43 at 11 A. M. You may appear on that day and state your defence if any otherwise the suit will be proceeded with ex-parte against you

Udyavar Rama Rao,
Vakil, Mangalore.
Mangalore: Dated 6-9-43

CHAMPAE'S
SNOW & CASTREX
AGENTS
SADANANDA STORES

ದಕ್ಷಿಣ ಕನ್ನಡ

ಮಂಗಳೂರು.

ದಕ್ಷಿಣಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಶ್ರೀ. ಎಂ. ಡಿ. ಅಧಿಕಾರಿಗಳು ತಮ್ಮ ಶಿಕ್ಷೆ ಅವಧಿ ಮುಗಿಸಿ ಬಿಡುಗಡೆಹೊಂದಿ ಬಂದಿರುವರು.

ಧಾರವಾಡ ಕರ್ನಾಟಕ ಹೈಸ್ಕೂಲ್ ಶಿಕ್ಷಕರಾಗಿದ್ದ ಮಂಗಳೂರಿನ ಶ್ರೀ. ಕೆ. ಕೃಷ್ಣಶೆಟ್ಟಿ ಬಿ. ಎ. ಇವರನ್ನು ಮಂಗಳೂರಲ್ಲಿ ಪೋಲೀಸರು ದಸ್ತಗಿರಿ ಮಾಡಿದ್ದು, ಇವರ ವಿಚಾರಣೆ ಧಾರವಾಡದಲ್ಲಿ ನಡೆದು ೮ ತಿಂಗಳ ಶಿಕ್ಷೆ ವಿಧಿಸಿ, 'ಬಿ' ಕ್ಲಾಸು ಕೊಟ್ಟು ಹಿಂಡಲಗಿ ಜೈಲಿನಲ್ಲಿಟ್ಟಿರುವರೆಂದು ತಿಳಿದಿದೆ.

ಅಗಸ್ಟ್ ೯ಕ್ಕೆ ಬಂಧಿಸಲ್ಪಟ್ಟ ಗಣಪತಿ ಹೈಸ್ಕೂಲಿನ ವಿದ್ಯಾರ್ಥಿ ಶ್ರೀ. ವೆಂಕಟರಾಯರು ವಿಚಾರಣೆಯಿಲ್ಲದೆ ಬಿಡಲ್ಪಟ್ಟಿರುವರು.

ಜಿಲ್ಲೆಯಲ್ಲಿ ಕೊಲೆರಾ ಚಿಹ್ನೆಗಳು.

ಪುತ್ತೂರು ಸಮೀಪ ಒಬ್ಬ [illegible] ಮನೆಯಲ್ಲಿ ಒಬ್ಬರು ವಾಂತಿಭೇದಿಯಾಗಿ ಮೃತಪಟ್ಟರೆಂದು ತಿಳಿದಿದೆ; ಕಾಸರಗೋಡು ತಾಲೂಕಿನಲ್ಲಿಯೂ ಅಲ್ಲಲ್ಲಿ ಕೆಲವು ಕಡೆಗಳಲ್ಲಿ ವಾಂತಿಭೇದಿಯ ಚಿಹ್ನೆಗಳು ತೋರಿಬಂದಿವೆ. ಮಂಗಳೂರು ತಾಲೂಕಿನ ಹರೇಕಳ ಗ್ರಾಮದ ಕೆಲವು ಕಡೆ ಉಳ್ಳಾಲದ ಪೆರುಮುನ್ನೂರು ಗ್ರಾಮದಲ್ಲಿಯೂ ಕೋಲೆರಾ ರೋಗದ ಚಿಹ್ನೆಗಳು ಕಂಡು ಬಂದಿವೆ. ಕಾರ್ಕಳದಲ್ಲಿಯೂ ಕೋಲೆರಾ ಚಿಹ್ನೆ ತಲೆದೋರಿದೆ. ಮುನ್ಸಿಫ್ ಕೋರ್ಟಿನ ಹಿಂಭಾಗದಲ್ಲಿ ಓರ್ವ ಹೆಂಗಸಿಗೆ ವಾಂತಿಭೇದಿಯಾಗಿರುವುದು. ಉಡುಪಿಯಲ್ಲಿಯೂ ಇಬ್ಬರಿಗೆ ಕೋಲೆರಾ ತಗಲಿದೆ. ಒಬ್ಬನನ್ನು ಸರಕಾರಿ ಆಸ್ಪತ್ರೆಗೆ ಸೇರಿಸಲಾಗಿದೆ.

ವಿದ್ಯಾರ್ಥಿ ವಿಹಾರ ಮಂಡಳಿಯೊಂದು ದ. ಕ. ಟೀಚರ್ಸ್ ಗಿಲ್ಡಿನ ಆಶ್ರಯದಲ್ಲಿ ಹಿಂದಿನ ವಾರ ಕೊಂಚಾಡಿಗೆ ಪಯಣ ಬೆಳೆಸಿತು. ಸ್ಥಳೀಯ ಹೈಸ್ಕೂಲುಗಳ ವಿದ್ಯಾರ್ಥಿಗಳು ವಿದ್ಯಾರ್ಥಿನಿಯರು ಬಂದಿದ್ದರು. ಡಾ| ಕೇಶವ ಪೈ, ಪ್ರೊ| ಸಂಜೀವ ರಾವ್, ಶ್ರೀ ಎಂ.ಎಸ್.ಮಾಧವರಾವ್ ಶ್ರೀ ಎಸ್. ಮುಕುಂದರಾವ್ ಮೊದಲಾದವರಿದ್ದರು. ಬರುವ ನವಂಬರಿನಲ್ಲಿ ಇನ್ನೊಂದು ವಿಹಾರವೇರ್ಪಡಿಸುವ ನಿರ್ಧಾರವಾಗಿದೆ.

ಸ್ಥಳೀಯ ವಕೀಲ ಸಂಘದವರು, ಲಾಹೋರ್ ಹೈಕೋರ್ಟಿನ ಜಸ್ಟಿಸ್ ಭೀಡೆ, ಐ| ಸಿ| ಎಸ್. ಮಿ. ರಾಜ್‌ಕುಮಾರ್ ಇವರಿಗೆ ಒಂದು ಸತ್ಕಾರ ಕೂಟವನ್ನೇರ್ಪಡಿಸಿದರು. ಜಿಲ್ಲಾ ಜಡ್ಜರು, ಸಬ್ ಜಡ್ಜರು, ಮುನ್ಸಿಫರೂ ಆಮಂತ್ರಿತರಾಗಿದ್ದರು.

ನಿಧನ

ಕೆಲಕಾಲದಿಂದ ಅಸ್ವಸ್ಥರಾಗಿದ್ದ ವಕೀಲ ಶ್ರೀ ಬಿ ವ್ಯಾಸರಾಯ [illegible] ಬೆಳಿಗ್ಗೆ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ನಿಧನ ಸಂತಾಪ ಸೂಚನೆಗಾಗಿ ಸ್ಥಳೀಯ ಎಡಿಶನಲ್ ಜಡ್ಜ್ ಕೋರ್ಟಿನಲ್ಲಿ ಎಲ್ಲರೂ ಎದ್ದು ನಿಂತು ಎರಡು ನಿಮಿಷ ಮೌನವ್ರತ ಆಚರಿಸಿದರು. ಮೃತರ ಆತ್ಮಕ್ಕೆ ಶಾಂತಿಯಿರಲಿ!

ಮರಳಿ ಮಣ್ಣಿಗೆ–ಗ್ರಂಥದ ಕುರಿತು ಪ್ರಕಾಶ ಕೂಟದವರು ತಾ. ೩೧ರಂದು ಅಭ್ಯಾಗತ [illegible] ಶ್ರೀ ಕೆ. ರಾಮಗೌಡ ಅವರ ಅಧ್ಯಕ್ಷತೆಯಲ್ಲಿ ನಡೆಸಿದರು. ಶ್ರೀ ತಿರುಮಲೇಶ್ವರ ಅಲಂಗಾರ್‌ರವರು ಗ್ರಂಥದ 'ರಚನೆ ಮತ್ತು ಶೈಲಿ'ಯ ಕುರಿತು, ಗ್ರಂಥದಲ್ಲಿ ಬರುವ ಪಾತ್ರಗಳ ಕುರಿತು ಶ್ರೀ ಪಿ. ಕೆ. ನಾರಾಯಣ, ಇವರು; ಗ್ರಂಥದ ಸ್ಥಾನ ಮತ್ತು ವೈಶಿಷ್ಟ್ಯದ ಕುರಿತು ಮಿ| ಇದಿನಬ್ಬ ಅವರು; ಅನಂತರ ಶ್ರೀ ಕಯ್ಯಾರರೂ ಮಾತನಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಇದೊಂದು ಉತ್ತಮ ಕಾದಂಬರಿ ಎಂದರು. ಕಾರ್ಯದರ್ಶಿ ಶ್ರೀ| ಜಿ. ಆರ್. ಚಂದರರು ದನ್ಯವಾದಗಳನ್ನರ್ಪಿಸಿದರು.

ಕಲ್ಲಿಕೋಟೆಗೆ ವರ್ಗಾಯಿಸಲ್ಪಟ್ಟ ಶ್ರೀ| ರಾಮಗೌಡರನ್ನು ಅವರ ಗೆಳೆಯರು ಸತ್ಕರಿಸಿ ಬೀಳ್ಕೊಟ್ಟರು.

ಉಡುಪಿ.

ಕೊಲೆರಾ–ಉಡುಪಿಯಲ್ಲಿ ಕೋಲೆರಾ ಹಾವಳಿ ತಲೆದೋರಿದೆ. ಆಸ್ಪತ್ರೆಗೆ ಸೇರಿಸಲ್ಪಟ್ಟ ಇಬ್ಬರೂ ತೀರಿಹೋಗಿರುವರೆಂದು ಸುದ್ದಿ. ಅನಂತರ ೪ ಜನರಿಗೆ ಕೋಲೆರಾ ತಗಲಿರುವುದಾಗಿ ವದಂತಿ.

ಸತ್ಕಾರ–ತಾ ೫ರಲ್ಲಿ ಡಾ| ಟಿ. ಮಾಧವಪೈಗಳು ಕಡೆಕಾರಿನ ತನ್ನ ಹೊಸ ನಿವಸದಲ್ಲಿ ಒಂದು ಟೀಪಾರ್ಟಿ ಸತ್ಕರಿಸಿತ್ತರು. ಇದೇ ಸಮಯದಲ್ಲಿ ಅವರು ಶೀಘ್ರವಾಗಿ ಕಟ್ಟಿಸಲಿರುವ ಹೆಂಗಸರ ಆಸ್ಪತ್ರೆಗೆ ಬುನಾದಿಕಲ್ಲು ಹಾಕಲ್ಪಟ್ಟಿತು. ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ| ಅಲೂರು ಲಕ್ಷ್ಮೀನಾರಾಯಣರಾಯರಿಗೂ ಕಡೆಕಾರು ಪಂಚಾಯತ ಬೋರ್ಡ್ ಅಧ್ಯಕ್ಷ ಶ್ರೀ| ಕಡೆಕಾರು ರಾಜಗೋಪಾಲಕೃಷ್ಣರಾಯರಿಗೂ ಮಾನಪತ್ರಗಳು ಸಮರ್ಪಿಸಲ್ಪಟ್ಟವು. ಈ ಸಂದರ್ಭದಲ್ಲಿ ಹಲವು ಭಾಷಣಗಳಾದುವು.

ಶ್ರೀ. ಲಕ್ಷ್ಮೀನಾರಾಯಣ ನಾಯ್ಕರ ಬಿಡುಗಡೆ:–ಕಳೆದ ಬಾರಿ ರಾಷ್ಟ್ರೀಯ ಚಳವಳದಲ್ಲಿ ಸೆರೆಹಿಡಿಯಲ್ಪಟ್ಟು ವರ್ಷದ ಶಿಕ್ಷೆಗೆ ಗುರಿಯಾಗಿದ್ದ ಶ್ರೀ| ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು ಶಿಕ್ಷೆಯ ಅವಧಿ ಮುಗಿದು ಬಿಡುಗಡೆಯಾಗಿ ಬಂದಿರುವರು. ಅವರು ಸೌಖ್ಯವಾಗಿರುವರಾದರೂ ಕ್ಷೀಣರಾಗಿರುವರು.

ಗಣಪತಿ ಪ್ರದರ್ಶನ ಮತ್ತು ವಿಸರ್ಜನೆ:–ಶ್ರೀ| ಕೃಷ್ಣಾಪುರ ಮಠದಲ್ಲಿ ಚೌತಿ ಸಂಬಂಧ ಈ ವರ್ಷ ಬೇರೆ ಬೇರೆ ರೀತಿಯ ಹಲವಾರು ಗಣಪತಿ ಪ್ರತಿಮೆಗಳ ಪ್ರದರ್ಶನವಿತ್ತು. ಬಡಗು ಮಹಾಲಿನಲ್ಲಿ ಈ ಪ್ರದರ್ಶನವು ಒಳ್ಳೆಯ ಆಸ್ಥೆ-ವ್ಯವಸ್ಥೆಗಳಿಂದ ಪ್ರೇಕ್ಷಕರನ್ನು ಮುಗ್ಧಗೊಳಿಸುವಷ್ಟು ಜಯಪ್ರದವಾಗಿತ್ತೆನ್ನಬಹುದು. ಅದಕ್ಕಾಗಿಯೇ ನಿರ್ಮಿಸಿದ ಕೆಲವು ಸ್ವಾಭಾವಿಕ ಸೀನ್ ಸಿನೆರಿಗಳು ಮನೋಹರವಾಗಿದ್ದುವು. ಹಾಗೆಯೇ ತಾ 6ರಲ್ಲಿ ಗಣಪತಿ ವಿಸರ್ಜನಾ ಸಮಾರಂಭವು ಅತಿ ವಿಜೃಂಭಣೆಯಿಂದ ಅಭೂತ ಪೂರ್ವ ರೀತಿಯಲ್ಲಿ ಜರಗಿತು. [illegible] ವೇಷಗಳನ್ನು ರಥಬೀದಿಯಲ್ಲಿ ಕಟ್ಟಿದ ಅಟ್ಟಳಿಗೆಯಲ್ಲಿ ಅವು ಪ್ರದರ್ಶನವಿತ್ತವು, ಅಂತೂ ಪ್ರದರ್ಶನ-ವಿಸರ್ಜನಗಳನ್ನು ಸುರೀತಿಯಲ್ಲಿ ವ್ಯವಸ್ಥೆಗೊಳಿಸಿದ ಈಗಿನ ಪರ್ಯಾಯ ಶ್ರೀ ಕೃಷ್ಣಾಪುರ ಸ್ವಾಮಿಗಳವರ ಉತ್ಸಾಹವು ಅಭಿನಂದನೀಯ.

ಕಳವು–ಇತ್ತೀಚೆಗೆ ಇಲೆಕ್ಟ್ರಿಕ್ ಬಲ್ಬುಗಳ ಕಳವು ವಿಶೇಷವಾಗಿ ಹೆಚ್ಚುತ್ತಿರುವುದಾಗಿ ತಿಳಿದು ಬರುತ್ತದೆ. ಈ ಮೊದಲು ಆಗಾಗ ಅಂಗಡಿ, ಮನೆ, ವಗೈರೆಗಳ ಬಲ್ಬುಗಳನ್ನು ರಾತ್ರಿ ಯಾರೋ ಕದ್ದುಕೊಂಡು ಹೋಗುತ್ತಿದ್ದ ಸುದ್ದಿ ಇತ್ತು. ಬಲ್ಬಿಗೆ ವಿಶೇಷ ಕ್ರಯ ಏರಿರುವ ಈ ಕಾಲದಲ್ಲಿ ಈ ಕಳವು ಹೆಚ್ಚಿರುವುದಾಗಿ ಮಾತ್ರ. ಅಧಿಕಾರಿಗಳು ಈ ಕಡೆಗೆ ಗಮನಕೊಡುವರೆ, [illegible] ಜನರಿಂದ ಬಲ್ಬುಗಳನ್ನು ಕೊಂಡುಕೊಳ್ಳುವವರೂ ಈ ಕುರಿತು ವಿಚಾರಿಸಿಕೊಳ್ಳುವರೇ ಎಂದು ನೋಡಬೇಕು.

ಭಾಷಣ.–ತಾ. 6 9 43ರಲ್ಲಿ ಸ್ಥಳೀಯ ಬೋರ್ಡ್ ಹೈಸ್ಕೂಲಿನ ತರ್ಕ ಸಂಘದ ಆಶ್ರಯದಲ್ಲಿ ಹೆಂಗಸರ ಟ್ರೈನಿಂಗ್ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಎಚ್. ವಿ. ಸೋಹನಾ ಬಾಯಿಯವರು ಸಹಶಿಕ್ಷಣದ ಕುರಿತು ಭಾಷಣವಿತ್ತರು.

ತಾ. 3-9-43ರಲ್ಲಿ ಉಡುಪಿ ಶ್ರೀಪರ್ಯಾಯ ಕೃಷ್ಣಾಪುರ ಮಠಾಧೀಶ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರ ಸನ್ನಿಧಿಯಲ್ಲಿ ಶ್ರೀಕೃಷ್ಣದೇವರ ಸಮ್ಮುಖದಲ್ಲಿ ಕಾಶೀ ಗವರ್ನಮೆಂಟ್ ಸಂಸ್ಕೃತ ಕಾಲೇಜಿನ ಪ್ರೊಫೆಸರ್ ಪಂಡಿತ ಶಿರೋಮಣಿ ವರಖೇಡ ನರಸಿಂಹಾಚಾರ್ಯರು "ಅಧ್ಯಾತ್ಮವಿದ್ಯಾ" ಎಂಬ ವಿಷಯದಲ್ಲಿ ಉಪನ್ಯಸಿಸಿತ್ತರು.

ದಕ್ಷಿಣ ಕನ್ನಡ ಜಿಲ್ಲಾ ಏಡೆಡ್ ಎಲಿಮೆಂಟರಿ ಶಾಲಾ ಫೆಡರೇಶನ್:–ಇದರ ಉಡುಪಿ ತಾಲೂಕಿನ ಸಭೆಯನ್ನು ತಾ 19 9-43ನೇ ಆದಿತ್ಯವಾರ ಬೆಳಿಗ್ಗೆ ಗಂಟೆ 10-30ಕ್ಕೆ ಉಡುಪಿ ಮೊಡರ್ನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕರೆಯುವುದಾಗಿ ನಿರ್ಣಯಿಸಿದೆ. ಉಡುಪಿ ತಾಲೂಕು ಏಡೆಡ್ ಶಾಲಾ ಮೆನೇಜರುಗಳೂ ವಿದ್ಯಾಪ್ರಸಾರದಲ್ಲಿ ಆಸಕ್ತಿಯಿರುವ ಉಪಾಧ್ಯಾಯರುಗಳೂ ಮತ್ತು ಇತರ ಮಹನೀಯರುಗಳೂ ಆ ಸಭೆಗೆ ದಯಮಾಡಿ ಹಾಜರಿದ್ದು ಫೆಡರೇಶನಿನ ಉದ್ದೇಶವು ಸಫಲವಾಗುವಂತೆ ಸಹಕರಿಸಬೇಕಾಗಿ ಕಾರ್ಯದರ್ಶಿಗಳು ಕೋರುತ್ತಾರೆ.

ಚೂರು-ಚೂರು

'ಯುದ್ಧವಂತಿಷ್ಟೇ ಅವಧಿಯೊಳಗೆ ಮುಗಿಯಬಹುದು-ಮುಂತಾಗಿ ಕಟ್ಟಿಕೊಳ್ಳುವ ಆಸೆಗಳೆಲ್ಲಾ ವ್ಯರ್ಥ ಹಾಗೂ ಲಾಭವಿಲ್ಲದವುಗಳು'–ಕ್ವಿಬೆಕಿನಿಂದ ಚರ್ಚಿಲ್ಲರ ಭಾಷಣ

ಅರ್ಥಾತ್ ಹಿಟ್ಲರನ ಅವತಾರ ಮುಗಿದೀತೆಂಬ ಆಸೆ ಕಟ್ಟಿಕೊಳ್ಳಬೇಕಲ್ಲದೆ ಯುದ್ಧ ಮುಗಿಯುವದೆಂದು ಯಾರೂ ಭಾವಿಸಬಾರದು

O

'ಜರ್ಮನ್ ಸೇನಾ ಭಾರವನ್ನೆಲ್ಲಾ ಹೊತ್ತಿರುವ ರಶ್ಯನರು ದ್ವಿತೀಯರಂಗದ ಕುರಿತು ನಮ್ಮನ್ನೆಷ್ಟೇ ವಿಮರ್ಶೆ ಮಾಡಿದರೂ ನಾವವರನ್ನು ದೂರುವಂತಿಲ್ಲ'—ಚರ್ಚಿಲ್.

ರಶ್ಯನರನ್ನು ದೂರುವಂತಿಲ್ಲ-ಜರ್ಮನರನ್ನು ದೂಡುವಂತಿಲ್ಲ!

O

'ಹಿಂದುಸ್ಥಾನಕ್ಕೆ ಯುದ್ಧಾನಂತರದ ಯೋಜನೆ ತಯಾರಿಸಲು ರಾಷ್ಟ್ರೀಯ ಸರಕಾರವಗತ್ಯ'-ಸರ್. ಎಮ್. ವಿಶ್ವೇಶ್ವರಯ್ಯನವರು ಬೊಂಬಾಯಿ ಭಾಷಣದಲ್ಲಿ.

'ಹಿಂದೀ ರಾಜ್ಯ ರಚನಾ ಬದಲಾವಣೆ ಮಾಡದಿರುವದು ಯುದ್ಧ ಕಾರ್ಯಕ್ಕಾಗಿ ಆಗತ್ಯ'–ಮಿ. ಅಮೆರಿ ಲಂಡನ್ ಭಾಷಣದಲ್ಲಿ

●

ಡಾ| ಶ್ಯಾಮ ಪ್ರಸಾದ ಮುಖರ್ಜಿಯವರು ಬಂಗಾಳದ ಆಹಾರಾಭಾವದ ಕುರಿತು ಕೊಟ್ಟ ಹೇಳಿಕೆಯೊಂದು ಬಂಗಾಳೇತರ ಪ್ರಾಂತ್ಯಗಳಲ್ಲಿ ಪ್ರಕಟವಾಗಬಾರದೆಂದು ಹಿಂದೀ ಸರಕಾರವು ನಿಷೇಧಿಸಿದೆ.

ಅನ್ಯ ಪ್ರಾಂತ್ಯಗಳೊಳಗೆ ಪ್ರವೇಶಿಸದಂತೆ ಬಂಗಾಳದ ದುರವಸ್ಥೆಗೂ ಇದೇ ನಿಷೇಧವಿರಲಿ.

●

'ದಕ್ಷಿಣ, ಪೂರ್ವಾಸ್ಯಾದ ಸೇನಾನಿಯಾಗಿ ನೇಮಕ ಹೊಂದಿರುವ ಲೋರ್ಡ್ ಮೌಂಟ್ ಬೇಟನರ ಮುಖ್ಯ ಕಾರ್ಯಸ್ಥಾನವು ಪ್ರಾಯಶಃ ನ್ಯೂ ಡಿಲ್ಲಿ'-ಲಂಡನಿನಿಂದ ಸುದ್ದಿ.

ಬೋಂಬು ಧಾಳಿಯ ಅನುಭವವಿರುವ ಲೋರ್ಡ್ ವೇವೆಲರು ಇದಕ್ಕೊಪ್ಪಿಯಾರೇ?

●

ಇದೇ ಸಪ್ಟಂಬರ್ ತಾ. 2ನೇ ರಾತ್ರಿಗೆ ಈ ಯುದ್ಧದ ನಾಲ್ಕನೇ ವರುಷಾಂತ್ಯವಾಯಿತು.

ಇನ್ನು ಮುಂದಿನ ಯುದ್ಧ ಕಾಲವನ್ನು ವರಷಾ (ನಾಲ್ಕು ನಾಲ್ಕು) ಸಂಖ್ಯೆಯಿಂದಲೇ ಲೆಕ್ಕಿಸಿದರೆ ಕಾಲ ಕಳೆಯುವ ಪ್ರಯಾಸ ತಿಳಿಯದು.

O

'ನಾಲ್ಕು ವರುಷಾವಧಿಯಲ್ಲಿ 96000 ಟನ್ನು ಬೋಂಬುಗಳನ್ನು ಜರ್ಮನಿಯ ಮೇಲೆ ಹಾಕಿದ್ದೇವೆ'-ಲಂಡನಿನ ಹೆಗ್ಗಳಿಕೆ.

'ಅಲ್ಪ ತೆತ್ತು ಅಧಿಕ ಪಡೆಯುವ ಲಾಭದಾಯೀ ವ್ಯಾಪಾರ ನಡೆಸಿದ್ದೇವೆ'-ಎಂದು ಸಹಜ ಹೆಮ್ಮೆ ಪಡಬಾರದಿತ್ತೆ?

●

'ಸೆಪ್ಟಂಬರ್ ನಾಲ್ಕರಲ್ಲಿ ಡೋವರಿನ ಎರಡೂ ಬದಿಯಿಂದ--ಇಂಗ್ಲ್ಯಾಂಡ್ ಫ್ರಾನ್ಸುಗಳಿಂದ–ಇತ್ತಂಡದವರೂ 45 ಮಿನಿಟು ಗನ್ನು ಹಾರಿಸಿಕೊಂಡರು'.

ಈ ವರುಷದ ಶಾಂತಿಯ ನೋಬೆಲ್ ಬಹುಮಾನವನ್ನು ಆ ಡೋವರ್ ಹೊಳೆಗೆ ಹಾಕಬೇಕು!

—ವಿನೋದಿ

BHUVANENDRA PRODUCTS Ltd,

Head Office and Factory:
Katapadi, S. Kanara

Depots:
1 Mahratha Galli, Hubli

"BHUVANENDRA"
Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"
ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ. ಆರ್. ಎಸ್. ಶೆಟ್ಟಿ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮೆಸಿ; ಡಾ. ಕೆ ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ವಿಜಯಾ ಸ್ಟೋರ್ಸ್

The Pangal Nayak Bank Limited.
ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in 1920)

Registered Office Court Road UDIPI South Canara District.
Business Offices Udipi, Mangalore, Katapadi, Kanhangad and Kinnigoli, South Canara

Authorised and Issued Capital Rs 2 00 000/-
Subscribed and Paid up Capital Rs. 2,00,000/-
Reserve Funds Rs 1,74,600/-

Short term bills are discounted for approved parties Loans and advances are made and overdrafts granted on fairly easy terms

Deposits are accepted at favourable rates of interest More than twenty-three years' reliable banking Service stands to our credit

For further particulars please call at or apply to the nearest office

Dated 27-8-1943

ಶ್ರೀ. ತಾರಾನಾಥ ಭೇಷಜಾಲಯ
ಶಾಸ್ತ್ರೀಯ ಮತ್ತು ಸಿದ್ಧೌಷಧಿಗಳ ಆಗಾರ, ಚಿಕ್ಕಮಗಳೂರು.

ನಿರ್ದೇಶಕ:- ಡಾ. M. L Shetty, ಪ್ರೇಮವಿದ್ಯಾಪೀಠದ ಗೌ. ಪ್ರಾಧ್ಯಾಪಕರು

ಎಲ್ಲಾ ತರದ ಭಸ್ಮ, ಖಲ್ವೀ ರಸಾಯನ, ಆಸವಾರಿಷ್ಟ, ಘೃತ, ತೈಲಗಳಿಗಾಗಿ ಕೂಡಲೇ ಬರೆಯಿರಿ.

ಒಕ್ಷಗಟ್ಟಲೆ ರೋಗಿಗಳಲ್ಲಿ ಫಲಕಾರಿಯಾದ ಔಷಧೀ ಯೋಗಗಳು. ಗುರುಪರಂಪರೆಯ ಅನುಭವದಿಂದ ಬಂದ ನಿರ್ದುಷ್ಟ ಔಷಧೀಕರಣ ವಿಧಾನ

ಡಾ। P. M Alva,
ಮೆನೇಜರ್.

The Moolky Bank, Ltd.,
MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ **1929**ರಲ್ಲಿ ಸ್ಥಾಪಿತವಾದದ್ದು)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager
ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,
ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ
ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ. : : : : ಮಂಗಳೂರು.

THE VIJAYA BANK, LIMITED.
Beg to announce that a Branch of the Bank will be opened at KASARAGOD, shortly.

ಅಮೃತಾಂಜನ ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ,

REGD.

ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಬೊಂಬಾಯಿ, ಮದ್ರಾಸು, ಕಲ್ಕತ್ತಾ.

ವಿದ್ಯಾ ವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ
ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. **1-8-0** ಮಾತ್ರ

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಮೆನೇಜರ್, **ಬಾಲಚಂದ್ರ**
ಸಂತೆಕಟ್ಟೆ, ಉಡುಪಿ.

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಪಥ್ಯ:— ಹರಪೇಪಲ್ಲಿ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ನಿರಾಳ.

ಮಾಲಕರು — ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ—ಹುಂಬರವಾಡಿ ಸ್ಟೋರ್ಸ ದಾವಣಗೇರಿ,—ದಾವಣಗೇರಿ ಪ್ರೆಸ್ಸ ಆರ್. ಎಚ್. ಕವಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ನವಜೀವಾತು ಎಂಬ ಸೂತಿಕಾರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರೀಕ್ಷಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ** ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದಕ**

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. M. 3618.

ಇಪ್ಪತ್ತನಾಲ್ಕನೆಯ ವರ್ಷ.

Estd. 1921 ಸ್ಥಾಪನೆ.

ಹೊಸಕೆರೆ ಚಿದಂಬರಯ್ಯನವರಿಂದ ರಚಿತವಾದ ಗೀತೆಯ ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು 449 ಪುಟಗಳು,

ಪ್ರತಿ ಮನೆಯಲ್ಲೂ ಇರಬೇಕಾದ ಪವಿತ್ರ ಗ್ರಂಥ.

ಬೆಲೆ (ಸುಂದರ ಪ್ರತಿ) ೧—೮—೦

ಹತ್ತಾಣೆ ಸ್ಟಾಂಪು ಕಳಿಸಿದ್ದಲ್ಲಿ ೧ ಪ್ರತಿಯನ್ನು ಬುಕ್‌ಪೋಸ್ಟ್ ಮಾಡಲಾಗುತ್ತೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪ ಸಂಚಿಕೆ ೩

FOUNDER
Sri. A. B. Shetty

Vol. 24 No. 3

NAVAYUGA— Kannada Weekly —UDIPI, S. I.

ಉಡುಪಿ • 16—9—1943 • ಮಂಗಳೂರು.

ಅಖಿಲ ಕರ್ನಾಟಕದ ಹೊಸಮಾದರಿಯ ವಾರಪತ್ರಿಕೆ

ಅಂತರಂಗ

ಜನ್ಮಕಾಳಿದ ಸ್ವಲ್ಪ ಸಮಯದಲ್ಲೇ ವಿಶಾಲ ಪ್ರಚಾರ ಮತ್ತು ಪ್ರಶಸ್ತಿ ಪಡೆದ ಸಚಿತ್ರ ವಾರಪತ್ರಿಕೆ.

ಪ್ರಸಿದ್ಧ ಜ್ಯೋತಿಷಿಗಳೊಬ್ಬರಿಂದ ವಾರಭವಿಷ್ಯವೂ ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ	ರೂ. ೪-೬-೦
6 ತಿಂಗಳಿಗೆ	ರೂ. ೨-೪-೦
ಬಿಡಿ ಪ್ರತಿಗೆ	ರೂ. ೦-೧-೬

ಮಾದರಿಗೆ ಬರೆಯಿರಿ:
ಮೆನೇಜರ್, ಅಂತರಂಗ, ಉಡುಪಿ.

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

The Canara Mutual Assurance Co., Ltd.,
UDIPI (S. India).

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸಮೀಪದವರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇವರಲ್ಲೊಂದು ಪೊಲಿಸಿಯನ್ನು ಪಡೆಯಿರಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು.-
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ (ದ. ಕನ್ನಡ)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್, ಕಲ್ಲಿಕೋಟೆ, ಮಂಗಳೂರು ಮತ್ತು ತ್ರಿವಾಂಕೂರು.

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋರತರಕ್ಕೆ ಪಳದೀ ಹಾಗು ಹತ್ತುತ್ತಿದ್ದರೆ. ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದಲೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಬೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದಲೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫-೦-೦ ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೆಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ.

ಆಯುರ್ವೇದ ಔಷಧಾಲಯ ಗದಗ.

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೪೨ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹು ಬಹು ಅಪಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನ್ನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ಶೀಘ್ರನೆ ಮುಂದುವರಿದವು.

೧೯೪೦, ೪೧ರಲ್ಲಿ ಕೆನರಾ ಬೇಂಕು ೯೦ ಲಕ್ಷ ಠೇವಣೆಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣೆಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡುವರೆ ಕೋಟಿಗೆ ಏರಿದೆ. ಹಾಗೂ ತೆತ್ತ ಮೂಲಧನವು ನಾಲ್ಕಡಿಯಾಗಿದೆ.

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮವಿಶ್ವಾಸದಿಂದಲೂ, ದೃಢಬುದ್ಧಿಯಿಂದಲೂ, ಯೋಗ್ಯಸೇವೆಯನ್ನು ಸಲ್ಲಿಸಿದರಿಂದಲೂ. ಇಂದಿನ ಈ ಪ್ರಗತಿಗೆ ಕಾರಣ ಭೂತರಾದ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಮಹತ್ವದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

CANARA BANK LIMITED.

ಕೆನರಾ ಬೇಂಕ್ ಲಿಮಿಟೆಡ್

ಸ್ಥಾಪನೆ 1906.

ಇಟಲಿ ದೊಗ್ಗಾಲೂರಿತು!

ಹಿಟ್ಲರರ ಭಾಷಣ-

ಇಟಲಿ ಮಿತ್ರರಾಷ್ಟ್ರಗಳೆದಿರು ದೊಗ್ಗಾಲೂರಿತು! ಭೂಕಂಪವಾದಂತಹ ಅಡಿಮೇಲುಗಳು-ಅದಲು ಬದಲಾವಣೆಗಳು-ಕಳೆದ ವಾರ ಘಟಿಸಿವುವು ಪ್ರಪಂಚದ ಪಕ್ಷ ಪ್ರತಿಪಕ್ಷಗಳಲ್ಲಿ ದಶಮಾನಗಳಿಂದ ಹಾರೈಕೆಗಳಾಗಿಯೇ ಉಳಿದಿದ್ದ ಚರಿತ್ರಾರ್ಹ ಘಟನೆಗಳು-ದೀರ್ಘಾವಧಿಯ ಪ್ರಯತ್ನದಿಂದ ಸಾಧಿಸಬೇಕಾಗಿದ್ದ ಅದ್ಭುತ ಅಸಾಧ್ಯ ಸಂಗತಿಗಳು-ಕಾಲ ಮಹಾತ್ಮೆಯಿಂದಾಗಿ ನಿಮಿಷ ನಿಮಿಷಗಳಲ್ಲಿ ಘಟಿಸುತ್ತಾ ಹೋದುವು! ಸೆಪ್ಟಂಬರ್ ತಾ. ೩ರಲ್ಲಿ ಇಟಲಿಯಾಕ್ರಮಣಾರಂಭ; ತಾ. ೮ರಲ್ಲೇ ಬೊಡೊಗ್ಲಿಯೋ ಸರಕಾರವು ಮಿತ್ರರ ಶರಣಾಶರ್ತಗಳನ್ನೊಪ್ಪಿಕೊಂಡು ಶಸ್ತ್ರ ಕೆಳಗಿಟ್ಟಿತು. ಬಡ ಇಟಲಿ ಯುದ್ಧರಂಗದಿಂದ ಹೊರಗೆ-ಮಿತ್ರಸೇನೆಗಳು! ಎತ್ತಿದ ಕೈಯು, ಹೊಡೆತ ಮತ್ತು ಹೊರದಬ್ಬುವಿಕೆ, ಎರಡನ್ನೂ ಸಾಧಿಸಿಬಿಟ್ಟಿತು. ಕೂಡಲೇ ಜರ್ಮನಿಯ ಮೇಲೇನೇ ಇಟಲಿಯ ಯುದ್ಧ ಜಾಹೀರಾಯಿತು; ನಾಜೀ ಸೇನೆಗಳು ಇಟಲಿಯನ್ನು ಅಪ್ಪಿ ಹಿಡಿದಲ್ಲಿಂದಲೇ ಅದುಮಿ ಹಿಡಿದುಕೊಂಡುವು; ರೋಮ್ ಮಿಲಾನ್ ಜಿನೋವಾ ಮೊದಲಾದ ಕೇಂದ್ರ ಪಟ್ಟಣಗಳನ್ನು ಜರ್ಮನರಾಕ್ರಮಿಸಿಕೊಂಡರು; ಬೋಡೋಗ್ಲಿಯೋ ಸೇನೆಗಳ ಶಸ್ತ್ರವುದುರಿಸಿ ನಪುಂಸಕರನ್ನಾಗಿ ಮಾಡಿಟ್ಟರು. ಇಟಲಿಯ ನೌಕಾ ಪಡೆಯ ಹಡಗಗಳಲ್ಲಿ ಕೆಲವು ಜರ್ಮನರ ಬೋಂಬಿಗೆ ಬಲಿ, ಇನ್ನು ಕೆಲವು ಜರ್ಮನರ ವಶ, ಕೆಲವು ಆತ್ಮಹತ್ಯೆ ಮಾಡಿಕೊಂಡವು; ಉಳಿದವು ಮಾಲ್ಟಾಕ್ಕೆ ಹೋಗಿ ಬ್ರಿಟಿಷರನ್ನು ಸೇರಿಕೊಂಡವು. ಇಟಲಿ ಪಂಚಾಂಮಾಡು! 1860ರಿಂದ ಒಮ್ಮೆಲೆಯಾಗಿ ರಾರಾಜಿಸಿದ್ದ ಇಟಲಿಯ ನೆಲವಿಂದು ಎರಡು ಕವರಿನ ಆಸ್ತಿಯಂತೆ ಇಕ್ಕಡೆಯವರಿಂದ ಆಕ್ರಮಿಸಲ್ಪಟ್ಟಿದೆ. ಪುರಾತನ ಸಂಸ್ಕೃತಿಯ ಕಣಗಳಿರುವ ಇಟಲಿಯಾನರ ರಕ್ತವಿಂದು ಇಬ್ಬದಿಯವರ ಓಕುಳಿ ನೀರಾಗಿದೆ! ರಾಜಾ ಇಮಾನ್ಯುಯೇಲರು ಪದವೀ ತ್ಯಾಗ ಮಾಡಿದರೆಂಬ ಗಾಳೀಸುದ್ದಿ; 'ಮಿತ್ರದ್ರೋಹಿ'ಯೆಂಬ ಹಿಟ್ಲರರ ವಾಗ್ಬಾಣವೇ ಗುಂಡಾಗಿ ನಾಟಿತೇನೋ—ಬೆನ್ನಲ್ಲೇ ಬೊಡೊಗ್ಲಿಯೋ ಕೊಲೆಮಾಡಲ್ಪಟ್ಟನೆಂಬ ನಂಬಲರ್ಹವಾದ ವಾರ್ತೆ-ಅಂತೂ ಇಟಲಿ ಪಾತಾಳಗತ! ಇದೇ ತಾ. 10ನೇ ರಾತ್ರಿ ಮಾರ್ಚ್ ತಿಂಗಳ ನಂತರ ಇದೀಗ ಮೊದಲನೇ ಸಲ-ಹಿಟ್ಲರರು ಬರ್ಲಿನಿನ ತನ್ನ ಮುಖ್ಯ ಕಾರ್ಯಾಲಯದಿಂದ ಮಾಡಿದ ಭಾಷಣವು ಇಟಲಿಯ ಹಿಂದಿನ ಮತ್ತು ಇಂದಿನ ಪರಿಸ್ಥಿತಿ, ಹಾಗೂ ಮುಂದಿನ ಯುದ್ಧಗತಿಯ ಉತ್ಕಷ ದಾಖಲೆ-ಜರ್ಮನರ ಮನೋದಾರ್ಢ್ಯದ ಮಾದರಿ ಮಾತು-ಪ್ರಚಾರಗಳ ಕಗ್ಗತ್ತಲೆ ಕವಿದಿರುವಾಗ ವಸ್ತುಸ್ಥಿತಿಯನ್ನು ತೋರಿಸುವ ಕೈದೀಪವಾದ್ದರಿಂದ ಅದನ್ನಿಲ್ಲಿ ಕೊಡಲಾಗಿದೆ.

ಹಿಟ್ಲರರ ಭಾಷಣ

"ನಾನು ನನ್ನನ್ನೇ ಅಥವಾ ಸಾರ್ವಜನಿಕರನ್ನು ವಂಚಿಸಲೇನೇ ಮತ್ತೊಮ್ಮೆ ಭಾಷಣಮಾಡುವ ಸಂದರ್ಭವೀಗ ನನಗೆ ಬಂದಿದೆ. ಜರ್ಮನರ ಬೆಂಬಲ ನಾಕಷ್ಟು ದೊರೆಯುವಿದ್ದುದರಿಂದಲ್ಲ-ಈಗ ತನ್ನ ದಗಾಖೋರತನಕ್ಕೆ ಪೂರ್ಣ ಪರಾಜಯದ ಕೀರ್ತಿಪಡೆದುಕೊಂಡ ಇಟಲಿಯ ಕೆಲ [illegible] ಗಳ ಕುಮುಬದ ವಂಚನೆಗಳಿಂದಾಗಿ ಇಟಲಿಯ ಪತನವು ಎಂದೋ ನಿರೀಕ್ಷಿಸಲ್ಪಟ್ಟಿದ್ದಿತು. ಇಂದು ಅಪಜಯಕ್ಕೊಡ್ಡಿದ ಈ ವ್ಯಕ್ತಿಗಳೇ 1939ರಲ್ಲಿ ಇಟಲಿಯು ಯುದ್ಧ ಪ್ರವೇಶಿಸದಂತೆ ಆತಂಕಿಸಿದ್ದರು. ಡ್ಯೂಸರು ಗೃಹರಂಗದಲ್ಲಿ ಇದಿರಿಸುತ್ತಿರುವ ಈ ಅಸಾಮಾನ್ಯ ಸಂಕಷ್ಟಗಳ ಪೂರ್ಣ ಅರಿವಿದ್ದುದರಿಂದಾಗಿಯೇ, ಇಟಲಿಯು ಯುದ್ಧ ಪ್ರವೇಶಿಸಬಾರದು, ಅಥವಾ ಅನುಕೂಲ ಸಂದರ್ಭ ಬರುವವರೆಗಾದರೂ ಪ್ರವೇಶಿಸಬಾರದೆಂದು ನಾನಿದನ್ನು ಸಂಪೂರ್ಣವಾಗಿ ಇಟಲಿ ಸರಕಾರಕ್ಕೇನೇ ಬಿಟ್ಟಿದ್ದೆ. 1940ನೇ ಜೂನಿನಲ್ಲಿ ಯುದ್ಧ ಪ್ರವೇಶ ವ್ಯವಸ್ಥೆಯಲ್ಲಿ ಮುಸಲನಿ ವಿಜಯಿಯಾದರು.

ನಮ್ಮ ಸಹಾಯ

"ಈ ಯುದ್ಧದ ಪರಿಣಾಮವು ನಮ್ಮೆರಡು ಜನತೆಗಳ ಪಾಲಿಗೂ ನಿಶ್ಚಯಾತ್ಮಕವಾಗುವದೆಂಬ ಕುರಿತು ನನ್ನ ಅಥವಾ ಡ್ಯೂಸರ ತಲೆಯೊಳಗೆ ಒಂದೇ ಒಂದು ಸೆಕುಂದಕ್ಕಾದರೂ ಸಂದೇಹ ಮೂಡಿದುದಿಲ್ಲ. ಜರ್ಮನಿಯು ತನ್ನ ಮಿತ್ರನಿಗೆ ಸಹಾಯಮಾಡುವ ಮೊದಲು, ಹಲವು ಬಾರಿ ಆವಶ್ಯ ಸೈನ್ಯ ಕಾಯಿದೆಯನ್ನೂ ನಮ್ಮ ಸಹಾಯದಾನ ತಿರಸ್ಕರಿಸಲ್ಪಟ್ಟಿತು. ಜರ್ಮನಿಯು ತನ್ನ ಮಿತ್ರನಿಗಾಗಿ ಏನೆಲ್ಲಾ ಮಾಡಿತು, ಭವಿಷ್ಯದಲ್ಲಿ ಏನೇನೆಲ್ಲಾ ಮಾಡಲಿತ್ತು ಎಂಬುದನ್ನು ತೋರಿಸುವ ವಿವರಗಳು ಯೋಗ್ಯ ಕಾಲಬಂದಾಗ ಪ್ರಕಟಿಸಲ್ಪಡಲಿವೆ. ಜರ್ಮನ್ ಯೋಧ ಕಾಲಿಡದಿರುತ್ತಿದ್ದರೆ ಉತ್ತರಾಫ್ರಿಕವು 1940ರ ಛಳಿಗಾಲದಲ್ಲೇ ಕೈಬಿಡುತ್ತಿತ್ತು. ಮಿತ್ರನಿಗೆ ಸಹಾಯಮಾಡಬೇಕು, ಮತ್ತು ಇಟಲಿಯ ಕೃತ್ಯದಿಂದಾಗಿ ಜರ್ಮನಿಗೂ ತಟ್ಟಲಿರುವ ಅಪಾಯ ನಿವಾರಣೆಮಾಡಿಕೊಳ್ಳಬೇಕು ಎಂಬ ಏಕೋದ್ದೇಶದಿಂದಲೇ 1941ನೇ ವಸಂತದಲ್ಲಿ ಬಾಲ್ಕನಿನಲ್ಲಿ ಇಟಲಿಯ ಸಹಾಯಕ್ಕೆ ಹೋಗಲು ಜರ್ಮನಿ ನಿರ್ಧರಿಸಿತು. ಒಂದೆಡೆಯಿಂದ ಬೋಲ್ಶೆವಿಕ್ ಧಾಳಿಯು ತಾಸುತಾಸಿಗೂ ನಿರೀಕ್ಷಿಸಲ್ಪಟ್ಟಿದ್ದ ಆ ಮುಹೂರ್ತದಲ್ಲಿಯೂ ಜರ್ಮನಿ ಈ ತ್ಯಾಗವನ್ನು ಮಾಡಿತು. ಆಧುನಿಕ ಕಾಲದ ಮುಖ್ಯ ಮಹಾ ಮನುಷ್ಯರಲ್ಲೊಬ್ಬ-ಪುರಾತನ ರೋಮ್ ಸಾಮ್ರಾಜ್ಯ ಪತನದ ಬಳಿಕ ಇಟಲಿ ಭೂಮಿ ಪಡೆದ ಅತಿದೊಡ್ಡ ಸುಪುತ್ರ-ಇಟಲಿ ಜನತೆಯ ಮುಂದಾಳುವಾಗಿದ್ದಾನೆಂಬುದರಿಂದಲೇ ಜರ್ಮನ್ ರೀಖ್ ಮತ್ತು ನಾನು ಈ ಧೋರಣೆ ವಹಿಸಿದೆವು. ಅವರ ಚಾಂಚಲ್ಯರಹಿತ ನಿಷ್ಠೆಯು ವಿಜಯ ಸಂಪಾದನೆಗಾಗಿ ಒಪ್ಪಂದ ಮಾಡಿಕೊಳ್ಳುವ ಜೆಂಗೋಲಾಗಿ ನಿಂತಿತು. ಅಂಥವನ ಪತನಕ್ಕಾಗಿ, ಇಟಲಿ ಜನತೆಯು ನಾಚಿಕೆಯಿಂದ ತಲೆತಗ್ಗಿಸಬೇಕಾದ ಭವಿಷ್ಯಬರಲಿದೆ.

ಮುಸೋನಿ ಪತನದ ಹೇತು.

''ಯುದ್ಧವನ್ನು ಜಯಶೀಲವಾಗಿ ಸಾಗಿಸಲಾಗುವಂತೆ ವಿಶೇಷಾಧಿಕಾರವನ್ನು ಡ್ಯೂಸರು ಅಪೇಕ್ಷಿಸಿದ ಕೊನೆಯ ಕೃತ್ಯವೇ ಇಂದಿನ ದುರಂತಾರಂಭ. ಯುದ್ಧಪ್ರಯತ್ನಕ್ಕೆ ಧಕ್ಕೆಯೊಡ್ಡುವವರನ್ನು ಸಮಾಜ ಕ್ರಿಯೆಗಳಿಗೆ ಕಿರುಕುಳ ತಂದೊಡ್ಡುವವನ್ನು ಕಠಿಣವಾಗಿ ಶಿಕ್ಷಿಸಿ, ಇಟಲಿಯಾನರ ಪ್ರತಿಭಟನಾ ದಾರ್ಢ್ಯವನ್ನು ಹೆಚ್ಚಿಸುವ ವಿಶೇಷಾಧಿಕಾರವನ್ನು ಅವರು ಯಾಚಿಸಿದರು. ಇಟಲಿ ಜನತೆಯು ಸ್ವಘಾತಕ ವೈರಿಗಳನ್ನು ನಿರ್ನಾಮಮಾಡಿ, ಇಟಲಿಯ ಭವಿಷ್ಯವನ್ನು ಭದ್ರಗೊಳಿಸಬೇಕೆಂದು ಕೊನೆಯವರೆಗೂ ಮುಸಲನಿಯ ಪ್ರಯತ್ನ ನಡೆದೇ ಇತ್ತು. ತನ್ನ ಜನತೆಯ ಕಲ್ಯಾಣವನ್ನೇ ಧ್ಯೇಯವಾಗಿಟ್ಟುಕೊಂಡವನೊಬ್ಬನಿಗೆ ನಡೆದ ಅನ್ಯಾಯ, ಅಂಥವನನ್ನು ಸಾಮಾನ್ಯ ತಕ್ಷೀರುಗಾರನಂತೆ ನಡೆಯಿಸಿಕೊಂಡ ರೀತಿ—ಇವುಗಳಿಂದಾಗಿ ವ್ಯಕ್ತಿಶಃ ನನ್ನಲ್ಲಾಗುವ ವೇದನೆಯ ಸ್ಪಷ್ಟಾನುಭವ ನನ್ನಲ್ಲಿದೆ. ಈ ಯಥಾರ್ಥವಾದಿ ಮಹಾಮನುಷ್ಯ ನನ್ನ ಮಿತ್ರನೆನ್ನಲು ನಾನು ಹೆಗ್ಗಳಿಕೆ ಪಟ್ಟಿದ್ದೇನೆ. ಮತ್ತು ಪಡುತ್ತಿದ್ದೇನೆ. ಪರಿಸ್ಥಿತಿ ಬದಲಾಯಿಸಿದಂತೆ ಅಭಿಪ್ರಾಯ ಬದಲಾಯಿಸಿಕೊಳ್ಳುವ ವಿದ್ಯೆ ಕಲಿತವನು ನಾನಲ್ಲ. ವಿಶ್ವಾಸವು ಅದಲು ಬದಲಾಗುವಂತಹದಲ್ಲ ಅದಿಲ್ಲದೆ ಹೋದರೆ ಮಾನವ ಸಮಾಜವು ಮರ್ಮಾಹತವಾಗುವದೆಂದು ನನ್ನ ನಂಬಿಕೆ. ಹಾಗಿಲ್ಲದಿರುತ್ತಿದ್ದರೆ, ಸಿಸಿಲಿಯಲ್ಲಿ ಜರ್ಮನ್ ಸೈನಿಕರು ಕೊನೆತನಕವೂ ನಮ್ಮ ಕಾರ್ಯಸಾಧಿಸುತ್ತಿರಲಿಲ್ಲ.

ಜರ್ಮನಿಗೆ ಶರಣಾಗುವ ಸುದ್ದಿ ತಿಳಿಸಲೇ ಇಲ್ಲ.

ಮೈತ್ರಿಕರಾರು ಮುರಿದುಕೊಂಡುದನ್ನು ಸಮರ್ಥಿಸಿಕೊಳ್ಳಲು ಇಟಲಿ ಸರಕಾರವು ಪ್ರಯತ್ನಿಸಬಹುದು; ಆದರೆ ಮುಂದಾಗಿ ತನ್ನ ಮಿತ್ರನಿಗೆ ತಿಳಿಸಿಕೊಳ್ಳದೇನೇ ಇದು ನಡೆದುಹೋಯಿತು. ಎಂಬ ಸತ್ಯಸ್ಥಿತಿಗಾಗಿ ಅದೆಂದೂ ಕ್ಷಮಾರ್ಹಕಾರಣ ಕೊಡಲಾರದು. ಶರಣಾಗುವ ದಿನವೇ ಅಲ್ಲಿಯ ರಾಜನು ಜರ್ಮನ್ ರಾಯಭಾರಿಗೆ ಇಟಲಿ ಎಂದೂ ಶರಣಾಗುವಂತಿಲ್ಲ ಎಂಬ ವಾಗ್ದಾನಕೊಟ್ಟಿದ್ದ ಘಟನೆ ನಡೆದ ಒಂದು ಘಂಟೆಯನಂತರ ಕೂಡಾ ಇಟಲಿಯ ಸೈನ್ಯ ಪ್ರಮುಖ ರೋಟ್ಟನು, 'ಇದು ಮಿತ್ರರ ಸುಳ್ಳು ಪ್ರಚಾರ ಎಂದು ಜರ್ಮನ್ ಸೇನಾ ಪ್ರತಿನಿಧಿಯೊಡನೆ ಹೇಳಿದ್ದ. ಶರಣು ಪತ್ರಕ್ಕೆ ಸಹಿಹಾಕಿದ ದಿನವೇ ರೋಮಿನಲ್ಲಿರುವ ಜರ್ಮನ್ ರಾಯಭಾರಿಗೆ-ತಾನೆಂದೂ ದ್ರೋಹಮಾಡಲಾರೆ, ಮೇಲಾಗಿ ಇಟಲಿಗೆ ಶರಣಾಗುವ ಇಚ್ಛೆಯೇ ಇಲ್ಲ-ಎಂದು ಆಶ್ವಾಸನೆಕೊಟ್ಟಿದ್ದ ಅದೇ ಹೊತ್ತಿನಲ್ಲಿ ಇಟಲಿಯ ವಿದೇಶೀ ಕಚೇರಿಯ ಪ್ರತಿನಿಧಿಯೊಬ್ಬನು, ಈ ವಾರ್ತೆಯು ಬ್ರಿಟಿಷ್ ಕುತಂತ್ರದ ಒಂದು ವಿಶಿಷ್ಟಮಾದರಿಯೆಂದೂ ತಾನಿದನ್ನು ಅಲ್ಲಗಳೆದು ಘೋಷಿಸುವೆನೆಂದೂ, ಹೇಳಿದ ಕಾಲು ಘಂಟೆಯೊಳಗೆ ಸಂಗತಿಯೆಲ್ಲಾ ಸತ್ಯವೆಂದು ಜಾಹೀರು ಮಾಡಿಬಿಟ್ಟ. ಒಪ್ಪಂದ ಕರಾರಿನನ್ವಯ ತನ್ನ ರಕ್ತ ಮತ್ತು ತ್ಯಾಗದಾನಮಾಡಿದ ಒಬ್ಬ ಮಿತ್ರನ ವಿರುದ್ಧವಾಗಿ ಇವೆಲ್ಲಾ ಕುತಂತ್ರಗಳ ಪ್ರಯೋಗವಾದುದಕ್ಕಾಗಿ ಇಟಲಿಯ ತಲಾಂತರಗಳ ಜನತೆಯು ಲಜ್ಜಿಪಡಬೇಕು. ನಾವೆಲ್ಲಾ ಸಿದ್ಧತೆಮಾಡಿಟ್ಟಿದ್ದೇವೆ. ಹಲವು ತಿಂಗಳುಗಳಿಂದ ಇಟಲಿಯ ಪ್ರಾಮುಖ್ಯ ಯುದ್ಧ ಹೊಣೆಯನ್ನು ಹೊತ್ತಿದ್ದುದು ಜರ್ಮನ್ ಸೇನೆಯೇ ಆದುದರಿಂದ ಇಟಲಿಯ ಮೋಸಕ್ಕೆ ಹೆಚ್ಚಿನ ಪ್ರಾಮುಖ್ಯತೆಯೇನೂ ಇಲ್ಲ. ಅಂತರಾಷ್ಟ್ರೀಯ ಅಪ್ರಾಗತಿಕ ದಗಾಖೋರರು, ಇಟಲಿಯಲ್ಲಿ ಜರ್ಮನರ ಪ್ರತಿಭಟನೆಯನ್ನು ತಾತ್ಸಾರಮಾಡುತ್ತಿರುವದು ಮುಕ್ಕ ಛಟಕೆಯೇ ಸರಿ.

ಮೂಲ ತಪ್ಪು.

'ಜರ್ಮನಿಗೂ ಜುಲಾಯಿ 25 (ಮುಸಲನಿ ಪತನದ ದಿನ)ನ್ನು ತಂದೊಡ್ಡುವದೆಂಬ ಅವರ ನಂಬಿಕೆಗೆ, ನನ್ನ ಶಸ್ತ್ರಧಾರಿ ಅನುಯಾಯಿಗಳ ಸ್ಥಾನ, ಧೋರಣೆಗಳ ಕುರಿತು ಅವರು ಕಟ್ಟಿಕೊಂಡಿರುವ ಮೂಲಭೂತ ತಪ್ಪೇ ಕಾರಣ. ಜರ್ಮನ್ ಮೇಲಧಿಕಾರವು ಹಿಂದೆಂದೂ ಇರದಷ್ಟು ಒಗ್ಗಟ್ಟು ಒಮ್ಮತದಿಂದ, ಮೇಲಿನ ಊಹನೆಯ ವಿರುದ್ಧ ನಿಂತಿದೆ. 1939ರಿಂದಲೂ ನಮ್ಮ ವಿರೋಧಿಗಳಿಂದಲೇ ಸಾರಲ್ಪಟ್ಟ ಯುದ್ಧಕ್ಕೆದಿರಾಗಿ ನಾವಿದ್ದೇವೆ. ಹೇಡಿತನದ ಶರಣಾರ್ಥಿಗಿಂತ, ಧೀರತ್ವದ ಪ್ರತಿಭಟನೆಯೇ ಯಾವ ಕಾಲಕ್ಕೂ ಉತ್ತಮವೆಂದ ಕ್ಲಾಸೆವಿಟ್ಸ್ ತತ್ವಕ್ಕನುಸಾರವಾಗಿ ವರ್ತಿಸಿದ್ದೇವೆ. ಅಂದಿನಿಂದ ವೈರಿಯನ್ನು ಜರ್ಮನಿಯ ಗಡಿಯಿಂದ 600 ಮೈಲು ದೂರಕ್ಕಟ್ಟಿದ್ದೇವೆ. ಆದ್ದರಿಂದಲೇ ಎಲ್ಲಕ್ಕಿಂತ ಹೆಚ್ಚಿನ ದೃಢತೆ ವಹಿಸುವದು ಪ್ರತಿಯೊಬ್ಬ ಯೋಧನ ಪವಿತ್ರ ಕರ್ತವ್ಯ. ಜರ್ಮನಿಯನ್ನು ದಾಸ್ಯ ರಾಷ್ಟ್ರವಾಗಿ ಮಾಡಬೇಕೆಂಬ ಏನೇನೋ ಕಲ್ಪನೆಗಳು ಈ ನಿರ್ಧಾರ ಹಾಗೂ ಈ ಘಟನೆಗೆ ಬಡಿದು ನುಚ್ಚುನುರಿಯಾಗಲಿವೆ. ನಮ್ಮ ಜನರ ಅಸ್ತಿತ್ವ ಮತ್ತು ಮುಂದಿನ ಹಲವು ತಲೆಮಾರಿನವರ ಅದೃಷ್ಟ ಹಾಗೂ ಭವಿಷ್ಯವು ತನ್ನ ಪ್ರಯತ್ನ ಮತ್ತು ತ್ಯಾಗಪ್ರೇಮವನ್ನೇ ಹೊಂದಿಕೊಂಡಿದೆ ಎಂದು ಪ್ರತಿಯೊಬ್ಬ ಜರ್ಮನನೂ ತಿಳಿದಿರಲಿ. ಈ ರಾಷ್ಟ್ರದ ಪುರಾಳ್ ಅನ್ನಿಸಿಕೊಳ್ಳಲು ನಾನು ಹೆಗ್ಗಳಿಕೆಪಡುತ್ತಿದ್ದೇನೆ. ಮತ್ತು ಈ ಚರಿತ್ರಾಪೂರ್ವ ಯುದ್ಧವನ್ನು ಜಯಿಸುವ ಪ್ರಯತ್ನಕ್ಕಾಗಿ ನನಗೀಯುವ ಪ್ರತಿಯೊಂದು ಘಂಟೆಗಾಗಿ ದೇವರನ್ನು ವಂದಿಸುತ್ತೇನೆ. ನಮ್ಮ ವೈರಿಯು ಆಕಾಶ ಮೂಲಕ ಮಾತ್ರವೇ ಜರ್ಮನ್ ಭೂಮಿಯನ್ನು ದಿಗಿಲುಗೊಳಿಸಲು ಶಕ್ತನಿದ್ದಾನೆ. ಆದರೆ ಈ ವಿಭಾಗದಲ್ಲಿ ಕೂಡಾ, ಛಳಿ ದಿಗಿಲು ಮುರಿಯುವಷ್ಟೇ ಅಲ್ಲ, ಪರಿಣಾಮಕಾರೀ ಪ್ರತೀಕಾರ ಮಾಡಲಾಗುವಂತಹ ಮಾರ್ಮಿಕ ಹಾಗೂ ಸುಸಂಘಟಿತ ವ್ಯವಸ್ಥೆ ನಿರ್ಮಾಣವಾಗುತ್ತಿದೆ. ಸಂದರ್ಭಕ್ಕನುಸಾರವಾಗಿ ಒಂದಲ್ಲೊಂದು ರಂಗದಿಂದ ಹಿಂಜರಿಯುವ ಹಾಗೂ ಕೆಲವುಗಳ ಗೊಡವೆಯನ್ನೇ ಬಿಡುವ ಅವಶ್ಯಕತೆ ನಮಗೆ ಬೀಳಬಹುದು. ಆದರೆ ಇದರಿಂದ ಜರ್ಮನಿಯ ಮೂಲನೆಲದ ಸುತ್ತಲಿರುವ ನಮ್ಮ ಸೈನಿಕರ ಧೀರತ್ವ ಹಾಗೂ ರಕ್ತವನ್ನಾಧರಿಸಿ, ರೀಖಿಗಾವರಣವಾಗಿರುವ, ಉಕ್ಕಿನ ಕಟ್ಟು ಎಂದೂ ಒಡೆಯಲ್ಪಡಲಾರದು. ಕಠಿಣನಿಷ್ಠೆಯಿಂದ ರಾಷ್ಟ್ರವು ತನ್ನ ಕರ್ತವ್ಯ ಸಾಧಿಸಬೇಕೆಂದು ನಾನು ಅಪೇಕ್ಷಿಸುತ್ತೇನೆ. ನಮ್ಮ ಪಕ್ಷವು ಪ್ರತಿಯೊಂದರಲ್ಲೂ ಮಾದರಿ ಹಾಕಿಕೊಡಬೇಕು. ಇಟಲಿಯ ಅದೃಷ್ಟವೇ ನಮ್ಮೆಲ್ಲರಿಗೊಂದು ಪಾಠವಾಗಲಿ. ಸರ್ವ ಶಕ್ತನಿಂದ ನಿರ್ಮಿಸಲ್ಪಡುವ ಈ ಪರೀಕ್ಷೆಯಲ್ಲಿ ತೇರ್ಗಡೆಯಾಗುವ ರಾಷ್ಟ್ರವು ಭಗವಂತನಿಂದ ವಿಜಯದುಡುಗೊರೆ ದೊರೆಯಲಿದೆ. ಇದು 1943ರಲ್ಲೇ ದೊರೆಯಬೇಕು ಮತ್ತು ದೊರೆಯಲಿದೆ".

The Canara Banking Corporation Limited.
(Incorporated in British India with limited Liability)
ESTD: 1906.
Head Office: **UDIPI**, S. Kanara.
(Branches & Agencies in all principal cities of India)

Authorised capital	Rs. 25.00.000/-
Issued & Subscribed	Rs. 16.00.000/-
Paid up capital	Rs. 10.06 000/-
Reserves	Rs. 3.85.000/-

Advances are made against approved securities and bills purchased or collected at most favourable rates. For further particulars please apply to the nearest Branch

ನವಯುಗ

ಉಡುಪಿ, ಗುರುವಾರ, ೧೬–೯–೧೯೪೩

ಇಟೆಲಿಯ ಪತನ

ಬೊಡೋಗ್ಲಿಯೋ ಸರಕಾರವು ಬ್ರಿಟಿಷ್ ಅಮೇರಿಕನರಿಗೆ ಶರಣು ಬಂತು. ಚರಿತ್ರೆಯಲ್ಲಿ ಗಣನೀಯ ಸ್ಥಾನ ಪಡೆಯಬಲ್ಲ ಲೋಕಪ್ರಾಮುಖ್ಯ ಘಟನೆಯಿದು. ಇದನ್ನು ಮಿತ್ರರಾಷ್ಟ್ರೀಯರು ನಿರೀಕ್ಷಿಸುವ ಮೊದಲೇ ಹಿಟ್ಲರರು ಊಹಿಸಿದ್ದರು. ಮಿತ್ರಸೇನೆಗಳ ಹೊಡೆತವೇನೋ ಪ್ರಬಲವಿರಬಹುದು—ಆದರೆ ಇಟೆಲಿಯಾನರ ಪ್ರತಿಭಟನಾ ಶಕ್ತಿಗೆ ಕಾಗಿದ ಸ್ಥಾಯಿ ಪ್ರತ್ಯೇಕವಿದ್ದಿತು– ಯುದ್ಧಭಾಗಿಗಳಾಗಲಿಷ್ಟವಿಲ್ಲದವರ ಪ್ರತಿಕ್ರಿಯೆಗಳು! ಮುಸಲಿನಿಯು ಅಧಿಕಾರದಂಡ ಕೆಳಗಿಟ್ಟುದು ಕೈಸೋತಲ್ಲ- ತನ್ನವರಿಂದಲೇ ಕೈತಡೆಯಲ್ಪಟ್ಟು. ಇಂದು ಬೊಡೋಗ್ಲಿಯೋ ಶರಣುಬಂದುದಾದರೂ ಇಟೆಲಿಯ ಶಕ್ತಿಯನ್ನೆಲ್ಲಾ ವ್ಯಯಿಸಿಯಲ್ಲ-ಯುಕ್ತಿಯನ್ನು ಮಾತ್ರ ಉಪಯೋಗಿಸಿ! ಮುಸಲಿನಿಯ ಕೈಯ ಅಧಿಕಾರವು ಬೊಡೊಗ್ಲಿಯೋನ ಕೈಗೆ ಹೋದಾಗಲೇ, ಇಟೆಲಿ ಮಿತ್ರ[illegible] ದಿಯರ್ಥಕ್ಕೆ ಬಂದಂತಾಗಿತ್ತು. ಬೊಡೋಗ್ಲಿಯೋ ಸಮಯ ಸಾಧನೆಗಾಗಿ ಬಂದವ ಹೊರತು ಸಮರ ಸಾಹಸಕ್ಕಾಗಿ ಅಧಿಕಾರ ವಹಿಸಿದವನಲ್ಲ. ಇಟೆಲಿಯ ಉತ್ತರಾರ್ಧವು ನಾಜೀ ಸೇನೆಯ ಹಿಡಿತದಲ್ಲಿದೆ: ದಕ್ಷಿಣ ಭಾಗಕ್ಕೆ ಮಿತ್ರ ಸೇನೆಗಳು ಬರುವ ಮೊದಲೇ ಮಿತ್ರರಿಗೆ ಶರಣೆಂದರೆ, ಅದು ಜರ್ಮನರ ಬಾಯಿಗೆ ಬೀಳುವ ಮೊದಲಿನ ಚೀತ್ಕಾರ ಮಾತ್ರವಾಗಿರುತಿತು ಎಂಬ ಭಯದಿಂದ ಬೊಡೋಗ್ಲಿಯೋ ಈ ತನಕ ಸಮಯ ಕಳೆದ; ಮಿತ್ರಸೇನೆಗಳು ಬಂದೊಡನೆ ಇಟೆಲಿಯನ್ನೆತ್ತಿ ಕಾಣಿಕೆಯರ್ಪಿಸಿದ-ಎಂದು ಈ ಮಹಾಘಟನೆಯನ್ನು ಚಿತ್ರಿಸಬಹುದು. ಮುಸಲಿನಿಯ ಪತನದೊಂದಿಗೇ ಮಿತ್ರರವೈರಿ ಇಟಲಿ ಅಂತರ್ಧಾನವಾಗಿದ್ದಿತು; ಅನಂತರ ಈ ವರೆಗೂ ಅಲ್ಲಿದ್ದುದು ಮಿತ್ರರಾಷ್ಟ್ರೀಯರ ಕಾವಲುಗಾರ ಬೊಡೊಗ್ಲಿಯೋನ ಇಟೆಲಿ! ಯಜಮಾನಂಗೆ ಮನವಾದೊಡನೆ ಒಪ್ಪಿಸಿಕೊಡುವ ಕೆಲಸ ಸೇವಕನಿಂದ ಸಾಂಗವಾಗಿ ನೆರವೇರಿತು-ಇಷ್ಟೆ. ಅಂತೂ ಇದು ಆಂಗ್ಲೋ ಅಮೇರಿಕಾನರಿಗಾದ ಸೇನಾವಿಜಯವೆನ್ನುವದಕ್ಕಿಂತಲೂ ಅವರ ಪ್ರಚಾರಕ್ಕೆ ಅಥವಾ ಅದೃಷ್ಟಕಬ್ಬದ ವಿಜಯವೆನ್ನುವದು ವಾಸಿ.

ಹೇಗಿದ್ದರೂ ಇಟೆಲಿಯ ಪತನವು ಹಿಟ್ಲರರೀ ಯುದ್ಧದಲ್ಲಿ ಅನುಭವಿಸಿದ ಅತಿ ದೊಡ್ಡ ಪರಾಜಯವೆಂಬುದನ್ನೊಪ್ಪಿಕೊಳ್ಳಬೇಕು. ಇತ್ತೀಚೆಗಿನ ಯುದ್ಧ ಘಟನೆಗಳು ಜರ್ಮನ್ ಯೋಧನನ್ನು ರಕ್ಷಣಾರಂಭಾಟವಾಡುವಂತೆ ಮಾಡಿ ನಿಲ್ಲಿಸಿಬಿಟ್ಟಿವೆ. ಹಿಟ್ಲರರ ಈ ಬಾರಿಯ ಭಾಷಣದಲ್ಲಿದ್ದುದು ಎದೆತಟ್ಟಿಕೊಳ್ಳುವ ಘೋರಣೆಮಾತ್ರ-ವೈರಿಗಳ ಎದೆ ಕಾಡಿಸುವ ಆವೇಶವದರಲ್ಲಿರಲಿಲ್ಲ. ಆದರೆ ದೀರ್ಘಕಾಲದ ರಕ್ಷಣಾ ಯುದ್ಧಕ್ಕೂ ಜರ್ಮನಿ ಅಸಮರ್ಥವಾಗಿದೆ ಎಂಬುದು ಬಯಲಾಸೆ; ಟೊಳ್ಳು ನಂಬಿಕೆ. ಈ ಮೊದಲು ಎದ್ದು ಘಾವಿಸುವಾಗ ಗೆಲ್ಲುವೆನೆಂದು ಹಿಟ್ಲರರಲ್ಲಿದ್ದಷ್ಟೇ ಸಾಧಾರ ಆತ್ಮವಿಶ್ವಾಸವು, ಈ ಬಾರಿ ಎದೆಗೊಟ್ಟು ನಿಂತು ಗೆಲ್ಲುವೆನೆಂದೂ ಹಿಟ್ಲರರಲ್ಲಿದೆ. ಇಟೆಲಿ ಶರಣಾದುದರಿಂದ ಆಕ್ಸಿಸ್ ಗೋಡೆಯ ಒಂದು ಭಾಗವೇನೋ ಜರಿದುಬಿದ್ದಂತಾಗಿದೆ. ಹಿಟ್ಲರರು ವ್ಯವಹಾರ ರಂಗದಲ್ಲಿ ಸೋತಿದ್ದಾರೆ; ಆದರೆ ಯುದ್ಧರಂಗದಲ್ಲಾ ಅಷ್ಟೇ ಅಪಜಯಕ್ಕೊಳಗಾದರೆಂದು ಊಹಿಸುವದು ಮೂಢತನ. ಸೂಕ್ಷ್ಮವಿವೇಚನೆ ಮಾಡಿದಲ್ಲಿ ನಾಜಿಗಳಿದರಿಂದ ಲಾಭ ಹೊಂದಿರಬಹುದೇ ಎಂಬ ಸಂದೇಹ ಮೂಡುತ್ತದೆ. ಇಟೆಲಿ ಯುದ್ಧಕ್ಕಿಳಿದುದೇ ಅರೆ ಮನಸ್ಸು, ಅರೆತ್ರಾಣವನ್ನು ಕಟ್ಟಿಕೊಂಡು. ಇತ್ತೀಚೆಗಂತೂ ಅದು ನಿರ್ಜೀವವಾಗಿತ್ತು. ಮೂರ್ಖತನವಾದವನನ್ನು ಕಟ್ಟಿಕೊಂಡು ಮುಂದೊತ್ತುವ ಪ್ರಯಾಸವೀ ತನಕ ಹಿಟ್ಲರರದಾಗಿತ್ತು. ಇಟೆಲಿಯ ಸೇನೆ, ನೌಕೆಗಳಿಂದ ಜರ್ಮನರಿಗಾವ ಪ್ರಯೋಜನವೂ ಇರಲಿಲ್ಲವೆಂಬ ಅರ್ಥವಲ್ಲ. ನಿತ್ರಾಣ ಇಟೆಲಿಯಿಂದಾಗಿ ಬೀಳುತ್ತಿದ್ದ ಭಾರ ಮತ್ತು ದೊರೆಯುತ್ತಿದ್ದ ಸಹಾಯ. ಇವೆರಡನ್ನೂ ತುಲನೆಮಾಡಿದರೆ ಯುದ್ಧದೃಷ್ಟಿಯಿಂದ ಇಟೆಲಿಯ ಪತನಕ್ಕಾಗಿ ಹಿಟ್ಲರರು ಸಮಾಧಾನಪಡಲಿಕ್ಕೇ ಬಿಡಬೇಕು. ಬೊಡೊಗ್ಲಿಯೋನ ವಿಶ್ವಾಸಘಾತುಕತನಕ್ಕಾಗಿ ಹಿಟ್ಲರರು ನೊಂದಿದ್ದಾರೆ—ಸೋತಿಲ್ಲ. ಇಟೆಲಿ ಶರಣಾದ ಮೇಲೆ ಅಲ್ಲಿ ಜರ್ಮನರಾಕ್ರಮಣ ಚಟುವಟಿಕೆ ಕಂಡುಬಂದಷ್ಟು ಮಿತ್ರಸೇನೆಗಳ ಪ್ರತಾಪ ಗೋಚರಿಸುವದಿಲ್ಲ. ಇಟೆಲಿಯ ನೌಕೆ, ಸೇನೆ, ಸ್ಥಳಗಳಾಕ್ರಮಣದಲ್ಲಿ ಜರ್ಮನರು ಮಿತ್ರರಿಗೆ ಸರಿಮಿಗಿಲಾಗಿದ್ದಾರೆ, ಬೊಡೊಗ್ಲಿಯೋ ಮರೆಹೊಕ್ಕುದರಿಂದಾಗಿ ಇಟೆಲಿಯ ಕಾಳಗ ಇನ್ನಷ್ಟು ಭೀಕರತೆಯಿಂದ ಸಾಗುವ ಲಕ್ಷಣಗಳೇ ಗೋಚರಿಸುತ್ತಿವೆ. ಈ ಘಟನೆಯಿಂದಾಗಿ ಕಡಿಮೆಯಾದುದೆಂದರೆ ಇಟೆಲಿಯ ಸ್ವಾತಂತ್ರ್ಯವೊಂದೆ; ಬೆಳೆದ ಹೋದವುಗಳಲ್ಲಿ ಜರ್ಮನರ ಆವೇಶ ಮತ್ತು ನಿರ್ಧಾರದ ಬಿಗುವು ಮುಖ್ಯವಾದವುಗಳು. ಅದ್ದರಿಂದ ಇಟೆಲಿಯ ಪತನದಿಂದ ಯುದ್ಧಗತಿ ಬದಲಾಗಿಲ್ಲ; ಬಯಲಾಸೆ ಕಟ್ಟಿಕೊಳ್ಳುವ ಸಂದರ್ಭ ಬಂದಿಲ್ಲವೆಂಬುದನ್ನು ಮರೆಯಬಾರದು.

ದುರ್ಬೀನು

ಉದ್ಯೋಗ ಬಿಟ್ಟರೂ ಉಣ್ಣುವದನ್ನು ಬಿಡಲಾಗುವದಿಲ್ಲ; ಸಾಹಸ ಬದಿಗಿಟ್ಟರೂ ಸ್ವಾಭಿಮಾನ ಬಿಡಲಾಗುವದಿಲ್ಲ.

oo oo oo

ಬೀಳದಂತೆ ಎಳೆದು ಹಾಕುವದು ಜಾಣ್ಮೆಯಲ್ಲ; ಹಾಳಾಗದಂತೆ ಹಾದಿ ತಡೆಯುವದು ತಪ್ಪಲ್ಲ.

oo oo oo

ತರಗೆಲೆಗೆ ಬೆಂಕಿ ಹಿಡಿದಂತೆ ಹಸಿ ಮರಕ್ಕೆ ಹಿಡಿಯುವದಿಲ್ಲ; ಒಣ ಮನೋವೃತ್ತಿಯುರಿದು ಬೀಳುವಂತೆ ಒಲವುಳ್ಳ ಬುದ್ಧಿ ಕೆರಳುವುದಿಲ್ಲ.

oo oo oo

ಕೊಳೆತರೇ ಹುಳ ಹುಟ್ಟುತ್ತದೆ; ಕೊಂಡಾಡಿದರೆ ಹಸಿ ಹುರುಪು ಹುಟ್ಟುತ್ತದೆ,

oo oo oo

ಕಲ್ಲು ಬೆಂಕಿಗೆ ಬಿದ್ದರೆ ಕೆಂಪಾದೀತು; ಕರಗಲಾರದು. ಕಡುಗಲಿ ಸಂಕಷ್ಟಕ್ಕೊಳಗಾದರೆ ಖತಿಗೊಂಡಾನು; ಕಂಗಾಲಾಗಲಾರ.

oo oo oo

ವಿದ್ಯುದ್ದೀಪದಿಂದ ದೀಪ ಹೊತ್ತಿಸಲಾಗುವದಿಲ್ಲ; ಕೃತಕ ಜ್ಞಾನಿಯಿಂದ ಜ್ಞಾನದಾನವಾಗುವದಿಲ್ಲ.

oo oo oo

ನರ್ತನವಾಗಬೇಕಾದರೆ ತೆರೆಯೆಳೆಯಬೇಕು; ಉತ್ಸವವಾಗಬೇಕಾದರೆ ತೇರೆಳೆಯಬೇಕು. ಕಾರ್ಯಕ್ಕೊಗ್ಗದ ಸನ್ನಾಹವಲ್ಲ.

oo oo oo

ಮನೆಯೊಳಗಿಡುವ ವಸ್ತುವೆಂದು ಮಾಡಿನಲ್ಲಿಯೂ ಇಟ್ಟಿರಾಗದು; ಮಾಡತಕ್ಕ ಕಾರ್ಯವೆಂದು ಅಡಿಯೂ ತೋರಿಸಬಾರದು.

ನೋಟೀಸು.

ಉಡುಪಿ ಡಿ. ಮು. ಕೋರ್ಟನಲ್ಲಿ.

S. C. No 268/1943

ಮಧ್ಯಸ್ಥ ಮಂಜುನಾಥಯ್ಯ- ಮಧ್ಯಸ್ಥ ಸುಬ್ರಾಯರ ಮಗ; ಉಡ್ಪಿತಾಲ್ಕು ಮಟ್ಟುಗ್ರಾಮ- ವಾದಿ

ಮತ್ತು

1. ರಾಮಪ್ಪಯ್ಯ. 2. ಗೋವಿಂದ, 3. ಜನಾರ್ಧನ, 4. ವೆಂಕಟರಮಣ, — ತಿಮ್ಮಂತರಾಯರ ಮಕ್ಕಳು ಉಡ್ಪಿತಾಲ್ಕು ಉಳಿಯಾರು ಗೋಳಿಗ್ರಾಮ — ಪ್ರತಿವಾದಿರು

ಯಾವರೊಳಗೆ,

ಮೇಲ್ಕಂಡ ಪ್ರತಿವಾದಿರಿಗೆ ಈ ಮೂಲಕ ತಿಳಿಸುವುದೇನೆಂದರೆ,

ವಾದಿಗೆ ಪ್ರತಿವಾದಿರಿಂದ ಕೆಳಗೆ ಏಕ್ರನು ಸಂಗ್ರರದ ಅದಿಯಿಂದ ಚೈತ್ರಮಾಸ ಸಂಗ್ರರದ ಅಂಕ್ಯದ ವರೇಗೆ ಬರತಕ್ಕ ಮೂಲಗೇಣಿ ಗೇಣಿ ಬಾಕಿಗೂ, ಅದ್ರ ಮೇಲಿನ ಬಡ್ಡಿ ಮತ್ತು ಸೆಸ್ಸುಕೂಡಾ ರ.ಸ್ವಾ. 26-5-0ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮೇಲ್ಕಂಡ ದಾವಾಮಾಡಿರುತ್ತಾನೆ. ಸದ್ರಿ ದಾವೆಯು ತಾ 15-10-1943ಕ್ಕೆ ಮುಟ್ಟರುತ್ತದೆ ಅಕ್ಷೇಪ ಹೇಳಲಿಕ್ಕಿದ್ದಲ್ಲಿ ಆ ದಿವಸ ಬೆಳಗ್ಗೆ 11 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ವ ವಕೀಲರ ಮುಖಾಂತರ ಹಾಜ್ರಾಗಿ ಜ್ವಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ಸದರಿ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

P. V. Acharya.
Vakil for Petitioner.

ಉಡ್ಪಿ,
ತಾ 9-9-43

ಅತ್ಯಾಶ್ಚರ್ಯಕರ
ಗುಣಕಾರಿ!
ಗಿಡಮೂಲಿಕೆಗಳ ವನಸ್ಪತಿ ಔಷಧ
(ಗುಣಕಾರಿಯಲ್ಲವೆಂದು ರುಜುಪಡಿಸುವವರಿಗೆ ರೂ. ೧೦೦ ಇನಾಂ.)

ನರೆತ ಕೂದಲು
ಮಾರ್ಕೆಟುಗಳಲ್ಲಿ ದೊರೆಯುವ ರಂಗುಗಳನ್ನು ಉಪಯೋಗಿಸಬೇಡಿರಿ. ಆಯುರ್ವೇದ ರೀತ್ಯಾ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ ತೈಲವನ್ನೇ ಉಪಯೋಗಿಸಿರಿ. ಆಗ ತಾನೆ ತಿಳಿಯುವುದು. ನರೆತ ಬಿಳಿ ಕೂದಲು ಕಪ್ಪಾಗುವುದು. ಮಾತ್ರವಲ್ಲದೆ ದೃಷ್ಟಿದೋಷ, ತಲೆನೋವು ಸಹ ಮಾಯವಾಗುವುದು. ಕೆಲವೇ ಕೂದಲು ನರೆತರೆ ಎರಡು ರೂಪಾಯಿ ಬೆಲೆಯ ಒಂದು ಸೀಸೆ ಸಾಕಾಗುವುದು. ಮೂರೂವರೆ ರೂಪಾಯಿ ಕ್ರಯದ ಒಂದು ಸೀಸೆ ತೈಲದಿಂದ ಹೆಚ್ಚಿಗೆ ನರೆತ ಕೂದಲುಗಳು ಕಪ್ಪಾಗುವುವು. ಎಲ್ಲಾ ಕೂದಲುಗಳು ನರೆತಲ್ಲಿ ಅವೆಲ್ಲ ಕಪ್ಪಾಗಲು ಐದು ರೂಪಾಯಿ ಬೆಲೆಯ ಒಂದು ಸೀಸೆ ಎಣ್ಣೆ ಸಾಕಾಗುವುದು. ಗುಣಕಾರಿಯಲ್ಲವೆಂದು ರುಜುಪಡಿಸಿದರೆ ಡಬ್ಬಲ್ ಕ್ರಯ ವಾಪಾಸು.

ಬಿಳಿ ಕುಷ್ಠ ಮತ್ತು ತೊನ್ನು
ಪಂಡಿತರಿಂದಲೂ ಹಕೀಮರೇ ಮೊದಲಾದವರಿಂದಲೂ ಗುಣಪಡಿಸಲಸಾಧ್ಯವಾದ ಬಿಳಿ ಕುಷ್ಠ ಮತ್ತು ತೊನ್ನು ಭಯಂಕರ ವ್ಯಾಧಿಯು ಹದಿನೈದು ದಿನಗಳ ವರೆಗೆ ನಮ್ಮ ಔಷಧಿಯನ್ನು ಲೇಪನ ಮಾಡಿದ್ದಲ್ಲಿ ಗುಣ ಹೊಂದುವುದು. ಹದಿನೈದು ದಿನಗಳ ಮದ್ದಿಗೆ ರೂಪಾಯಿ 2-8-0.

ಸಂತಾನ ನಿರೋಧ
ಬರ್ಥ ಕಂಟ್ರೋಲಿಗೆ ಹೇಳಿದ ಔಷಧವಿದು. ತಿಂಗಳಲ್ಲಿ ಎರಡು ಮೂರು ದಿವಸಗಳ ತನಕ ಸೇವಿಸತಕ್ಕದ್ದು. ಒಂದು ವರ್ಷಕ್ಕೆ ಬೇಕಾಗುವ ಔಷಧಿ ಬೆಲೆ ರೂಪಾಯಿ 2/- ಜೀವಮಾನದಲ್ಲಿ ಸಂತತಿಯಾಗಬಾರದೆಂದಿದ್ದರೆ ಅದಕ್ಕೂ ಬೇರೊಂದು ಔಷಧವಿದೆ. ಅದರ ಬೆಲೆಯು ಸಹಾ ರೂಪಾಯಿ 2/- ಇದರ ಸೇವನೆಯಿಂದ ಆರೋಗ್ಯಕ್ಕೆ ಹಾನಿಯೇನೂ ಇಲ್ಲ.

ಸಹನಶಕ್ತಿ ಮಾತ್ರೆ
ಸಂಜೆ ಹೊತ್ತಿಗೆ ಒಂದು ಮಾತ್ರೆಯನ್ನು ಸೇವಿಸಿದರೆ ಅದರ ಆನಂದವನ್ನು ಹೇಳತೀರದು. ಕಳೆದುಹೋದ ಮಾನುಷತ್ವವು ಪುನಹ ಪ್ರಾಪ್ತಿಯಾಗಿ ಶರೀರದಲ್ಲಿ ಹೊಸ ಹುರುಪು ಶಕ್ತಿ ವೃದ್ಧಿಯಾಗುವುದು ಒಮ್ಮೆ ಉಪಯೋಗಿಸಿದ್ದಲ್ಲಿ ಎಂದೆಂದಿಗೂ ಬಿಡಲಾರಿರಿ. 16 ಮಾತ್ರೆಗಳ ಒಂದು ಸೀಸೆಗೆ ರೂಪಾಯಿ 1/- ಬೆಲೆ.

ಕಿವುಡುತನ
ಕಿವಿ ಕೇಳದಿರುವುದು, ಕಿವಿ ನೋವು ಇತ್ಯಾದಿ ಸರ್ವ ಕಿವಿ ದೋಷಗಳಿಗೆ ದಿವ್ಯೌಷಧ. ಬೆಲೆ ರೂಪಾಯಿ 2/-

ಗೊನೋರಿಯಾ ಗುಣಕಾರಿ
ಗೊನೋರಿಯಾ ವ್ಯಾಧಿಗೆ ಸಂಬಂಧಿಸಿದ ಯಾವುದೇ ಇರಲಿ—ಈ ಔಷಧ ಸೇವನೆಯಿಂದ ಸರ್ವವೂ ಮಾಯವಾಗಿ ದೇಹದಲ್ಲಿ ಉಲ್ಲಾಸವುಂಟಾಗುವುದು. ಬೆಲೆ ರೂ. 2/-
(ಪತ್ರವ್ಯವಹಾರ ಇಂಗ್ಲಿಷಿನಲ್ಲೇ ಮಾಡತಕ್ಕದ್ದು)
ಕೂಡಲೇ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:-

Vaidraj Akhil Kishore Ram,
No. 37, P.O. Katrisarai (Gaya)

ಸುದ್ದಿ ಸೂಚನೆ.

○ ತನ್ನ ಸ್ವಾಧೀನವಿರುವ ದಕ್ಷಿಣ ಇಟಲಿಯಲ್ಲೆಲ್ಲಾ ಜರ್ಮನ್ ಸೇನಾನಿ ಕೆಸ್ಸೆಲ್ರಿಂಗರು ಮಾರ್ಶಲ್ ಲಾ ಜ್ಯಾರಿ ಮಾಡಿದ್ದಾರೆ.

○ ಮಿತ್ರ ಸೇನೆಗಳು ಇಟಲಿಯ ನೇಪಲ್ಸ್ ವಿಭಾಗಗಳನ್ನು ಸ್ವಾಧೀನಪಡಿಸಿಕೊಂಡಿವೆ.

○ ಮಾರ್ಶಲ್ ಬೋಡೋಗ್ಲಿಯೋ ಇಟಲಿಯ ಗುಪ್ತಸ್ಥಳವೊಂದರಿಂದ ಜರ್ಮನರನ್ನು ಆರೋಪಿಸಿ ಮಿತ್ರರಿಗೆ ಸಹಾಯ ಮಾಡಬೇಕೆಂದು ಇಟಲಿ ಜನತೆಗೆ ಆಕಾಶವಾಣಿ ಭಾಷಣವಿತ್ತಿದ್ದಾನೆ.

○ ರೋಮನ್ನು ಜರ್ಮನರು ಆಕ್ರಮಿಸಿಕೊಂಡುದರಿಂದ ಕೆಥೋಲಿಕ್ ಪ್ರಪಂಚ ಗಾಬರಿಗೊಂಡಿದೆ. ಇಟಲಿ ಸರಕಾರವು ಅಜ್ಞಾತ ಸ್ಥಳದಲ್ಲಡಗಿದೆ.

○ ಇಟಲಿ ಮತ್ತು ಮಿತ್ರರಾಷ್ಟ್ರಗಳೊಳಗಿನ ಶರಣು ಶರ್ತಗಳೀಗ ಪ್ರಕಟಿಸಲ್ಪಟ್ಟಿವೆ. ಇಟಲಿಯ ನೆಲ ಮತ್ತು ಬಲಗಳ ಪೂರ್ಣೋಪಯೋಗವನ್ನು ಮಿತ್ರರು ಪಡೆಯಲಾಗುವಂತಹ 13ಶರ್ತಗಳು ಅದರಲ್ಲಿವೆ

○ ಉತ್ತರ ಇಟಲಿಯ ನಾಜೀ ಸೇನಾನಿಯಾಗಿ, ಲಿಬಿಯಾ ಯುದ್ಧ ಪ್ರಸಿದ್ಧಿಯ ಹಿಟ್ಲರಿಂದ ಶಿಫಾರಸು ಪಡೆದ ಅತಿ ಚತುರ ನಾಯಕ ಜನರಲ್ ರೊಮೆಲರು ನೇಮಿಸಲ್ಪಟ್ಟಿದ್ದಾರೆ.

○ ಉತ್ತರ ಮತ್ತು ಮಧ್ಯ ಇಟಲಿಯ ಎಲ್ಲಾ ಮುಖ್ಯ ಕೇಂದ್ರಗಳನ್ನೂ ಜರ್ಮನರಾಕ್ರಮಿಸಿಕೊಂಡಿದ್ದಾರೆ. ಇಟಲಿ ಸೈನಿಕರನ್ನು ನಿಶ್ಶಸ್ತ್ರಗೊಳಿಸುವ, ಬಂಧಿಗಳಾಗಿ ಇಡುವ ಕೆಲಸ ಮುಗಿಸಿದ್ದಾರೆ.

○ ಜಪಾನಿನಲ್ಲಿ ಭೀಕರ ಭೂಕಂಪವಾಗಿ 1300 ಜನರು ಮಡಿದು ಅತಿ ಹೆಚ್ಚಿನ ಮನೆ ಸೊತ್ತು ನಷ್ಟವಾಗಿದೆ.

○ ಇಟಲಿ ಧೋರಣೆಯಿಂದ ಯುದ್ಧಗತಿ ಬದಲಾಗಿಲ್ಲ; ವಿಜಯದ ವರೆಗೆ ಯುದ್ಧ ಸಾಗಿಸುವ ನಮ್ಮ ಗುರಿ ಅಚಲವಿದೆ ಎಂದ. ಜಪಾನ್ ಸಾರಿದೆ.

○ ಬ್ರಿಟನಿನ ಟ್ರೇಡ್ ಯೂನಿಯನ್ ಕಾಂಗ್ರೆಸ್ ತನ್ನ ಈ ಬಾರಿಯ ಅಧಿವೇಶನದಲ್ಲಿ ಹಿಂದೀ ಸಮಸ್ಯೆಯನ್ನು ಬಗೆಹರಿಸಿ ರಾಷ್ಟ್ರೀಯ ಸರಕಾರ ಸ್ಥಾಪಿಸಬೇಕೆಂದು ಒತ್ತಾಯಪೂರ್ವಕ ಕೇಳಿಕೊಂಡಿದೆ.

ಇಟಲಿ ಗುಟ್ಟು

ಮಾರ್ಶಲ್ ಬೊಡೊಗ್ಲಿಯೋ ಮತ್ತು ಮಿತ್ರ ರಾಷ್ಟ್ರೀಯರೊಳಗೆ ಆಗೋಸ್ತು ಮಧ್ಯಾವಧಿಯಲ್ಲೇ ಸಂಧಾನದ ಗುಪ್ತ ಮಾತುಕತೆ ನಡೆದು, ಮಿತ್ರರು ಇಟಲಿಯಲ್ಲಿಳಿದೊಡನೆ ಶರಣಾಗುವ ನಿರ್ಧಾರ ಮೊದಲೇ ಆಗಿತ್ತು. ಮಿತ್ರ ಸೇನೆಯಿಳಿದ ತಾ. 3ರಲ್ಲೇ ಸಂಧಿ ಪತ್ರಕ್ಕೆ ಇತಂಡದವರ ಸಹಿ ಬಿದ್ದಿತ್ತೆಂದು ಈಗ ಅಧಿಕೃತವಾಗಿ ಪ್ರಕಟವಾಗಿದೆ. ಸ್ವತಃ ಹಿಟ್ಲರರ ಯೋಜನೆಯಂತೆ ನಾಜೀ ಗಾಳಿಕೊಡೆಯವರು ಮುಸೊಲಿನಿಯನ್ನು ಸೆರೆ ಬಿಡಿಸಿ, ಬರ್ಲಿನಿಗೊಯ್ಯುವ ಅಸಾಧಾರಣ ಸಾಹಸ ಮಾಡಿರುವರು. ಬರ್ಲಿನಿನಲ್ಲಿ ಫೇಸಿಸ್ಟ್ ಇಟಲಿ ಸರಕಾರ ಸ್ಥಾಪಿತವಾಗಲಿದೆ.

○ ಇಟಲಿಯ ಹೆಚ್ಚಿನ ನೌಕೆಗಳು, ಸಬ್‌ಮೆರಿನ್‌ಗಳು ಮಾಲ್ಟಾಕ್ಕೆ ಬಂದು ಬ್ರಿಟಿಷರಾಧೀನ ತಂಗಿವೆಯಂತೆ. ಉಳಿದವೂ ಅತ್ತ ಹೊರಟಿವೆ.

● ತಮ್ಮ ಬಾಲಿಯಾರಿಕ್ ಬಂದರಗಳಲ್ಲಿ ಅಡಗಿ ಕುಳಿತಿರುವ 7 ಇಟಲಿ ಹಡಗಗಳು 24ಘಂಟೆಗಳೊಳಗೆ ಹೊರಡತಕ್ಕದೆಂದು ಸ್ಪೇನಿಷ್ ಅಧಿಕಾರಿಗಳ ಆಜ್ಞೆಯಾಗಿದೆ.

○ ಇಟಲಿಯ ಯುದ್ಧ ಹಡಗಗಳನ್ನು ಜಪಾನಿನ ವಿರುದ್ಧ ಭೂಮಧ್ಯ ಸಮುದ್ರದಲ್ಲಿ ಪ್ರಕೃತ ಉಪಯೋಗಿಸಲಾಗುವದಿಲ್ಲವೆಂದು ಮಿತ್ರ ನೌಕಾಧಿಪರ ಅಭಿಪ್ರಾಯವಿದೆ.

○ ಶಾಂತ ಸಮುದ್ರದ ಸಾಲಮುವಾ ವಿಮಾನ ನಿಲ್ದಾಣವನ್ನು ಮಿತ್ರ ಸೇನೆಗಳಾಕ್ರಮಿಸಿ ಕೊಂಡಿವೆ; ಜಪಾನರು ಹಿಮ್ಮೆಟ್ಟಿದ್ದಾರೆ.

○ ರಶ್ಯದಲ್ಲಿ ಎಲ್ಲಾ ರಂಗಗಳಲ್ಲೂ ಕೆಂಪು ಸೇನೆಯೇ ಮೇಲ್ಗೈಯ್ಯಾಗಿದೆ. ಕೀವ್ ಕಡೆಗೆ ಅವರ ಧಾಳಿ ಸಾಗಿದೆ. ಪಾವ್ಲೊಗ್ರಾಡ್ ಮತ್ತು ಬ್ರಿಯಾಂಸ್ಕಿನ ಪತನದ ದಿನ ಇಂದು ನಾಳೆಯೆಂಬಂತಿದೆ.

○ ದಕ್ಷಿಣ ಉಕ್ರೈನಿನಲ್ಲಿ ಕಾಪೋರೋವ್ ಪಶ್ಚಿಮದಲ್ಲಿಯೂ ಜರ್ಮನರು ಹಿಂದೆ ಬಿದ್ದಿದ್ದಾರೆ. ನಾಜಿಗಳ ಪ್ರತಿಭಟನೆಯ ಒತ್ತಡವೀಗೀಗ ಏರಹತ್ತಿದೆ

○ ಹಿಂದೀ ಹಡಗಗಳ 'ಕಂಟ್ರೋಲರ್' ಆಗಿ ಯುರೋಪಿಯಾನನೊಬ್ಬನನ್ನು ಹಿಂದೀ ಸರಕಾರವು ದೇಶ ರಕ್ಷಣಾ ಕಾನೂನಿನನ್ವಯ ಬೊಂಬಾಯಿಯಲ್ಲಿ ನೇಮಿಸಿದೆ. ಈ ಅಧಿಕಾರಿಯ ಹಸ್ತೋಟಿಯನ್ವಯ ಭಾರತೀಯ ಹಡಗ ಯಜಮಾನರಿಗೆ ಲೈಸನ್ಸ್ ಮೊದಲಾದುವುಗಳಲ್ಲಿ ಆತಂಕವಾಗಬಹುದೆಂದು ತೀವ್ರ ಅತೃಪ್ತಿಯೆದ್ದಿದೆ.

ಕುಂದಾಪುರ:—ತಾ. 23-8-43ರಲ್ಲಿ ಕುಂದಾಪುರ ತಾಲೂಕು ತಹಶಿಲ್ದಾರ್ ಶ್ರೀ. ಪಿ. ಎಸ್. ತಿಮ್ಮಪ್ಪಸೆಟ್ರು ಬೈಂದೂರು ಸೆಂಟರ್ ನಿವಾಸಿಗರ ಒಂದು ಸಭೆಯನ್ನು ಬೈಂದೂರು ಬೋರ್ಡ್ ಮಿಡಲ್ ಸ್ಕೂಲಿನಲ್ಲಿ ವಿಸ್ತ್ರುಂಭಕತೆಯಿಂದ ಜರಗಿಸಿಯದ್ಧವಾರ್ತೆ, ಡಿಕನ್ಸ್ ಸೇವಿಂಗ್ಸ್ ಸ್ಕೀಮ್ ರೇಶನಿಂಗ್ ವಗೈರೆ ಸ್ಕೀಮ್‌ಗಳನ್ನು ವಿವರಿಸಿದರು. ಶ್ರೀಮಾನ್ ಜಮೀನ್ದಾರ್ ಯಂಡಾಡಿ ಕೃಷ್ಣಪ್ಪಸೆಟ್ರು ಅಗ್ರಾಸನವನ್ನು ವಹಿಸಿದ್ದರು. ಒಂದು ಹೊಸ ರೇಶನಿಂಗ್ ಕಮಿಟಿ ಚುನಾಯಿಸಲ್ಪಟ್ಟಿದೆ.

ತಾ 1-9-43ರಲ್ಲಿ ಕುಂದಾಪುರ ಮುಖ್ಯವರ್ಗದಾರರ ವಕೀಲರ ವ್ಯಾಪಾರಿಗಳ ಮತ್ತು ಇತರ ಪಟ್ಟಣಿಗರ ಒಂದು ಸಭೆಯು ಕುಂದಾಪುರ ತಾಲೂಕು ಕಚೇರಿಯಲ್ಲಿ ಮಾನ್ಯ ಕುಂದಾಪುರ ಡಿವಿಜನ್ ಸಬ್ ಕಲೆಕ್ಟರವರ ಅಧ್ಯಕ್ಷತೆಯಲ್ಲಿ ಸೇರಿ ಅಕ್ಕಿಯ ವಿಷಯ ಆಲೋಚಿಸಿ ನರಿ ವ್ಯಾಪಾರಿಗಳು ಮತ್ತು ವರ್ಗದಾರರ ಸಭೆಸೇರಿ ಅವರ ಅಭಿಪ್ರಾಯಗಳನ್ನು ತಿಳಿಸಬೇಕೆಂದು ನಿರ್ಣಯಿಸಲಾಯಿತು. ಕುಂದಾಪುರ ಟೌನಿಗೆ ಒಂದು ಹೊಸ ರೇಶನಿಂಗ್ ಕಮಿಟಿ ನೇಮಕ ಮಾಡಲ್ಪಟ್ಟಿತು.

ತಾ 2-9-43ರಿಂದ ತಾರೀಕ 5-9-43ರ ಲಾಗ್ಯಾಕ. ಬಡವರಿಗೆ 0-3-0ಕ್ರಯಾರ ಅಕ್ಕಿ ಹಂಚಲಾಯಿತು.

ತಾ. 5-9-43 ಈ ದಿವಸ ಸಾಯಂಕಾಲ ಯುದ್ಧದ ವಾರ್ಷಿಕ ಮಹಾ ಸಭೆಯು ಮಾನ್ಯ ಡಿಸ್ಟ್ರಿಕ್ಟ್ ಮುನ್ಸಿಫ್ ಸಿ. ಎಲ್. ಕೊಲಾಸೋ, ಬಿ. ಎ. ಎಮ್. ಎಲ್. ಇವರ ನೇತೃತ್ವದಲ್ಲಿ ಬಹಳ ವಿಜೃಂಭಣೆಯಿಂದ ತಾಲೂಕು ಕಚೇರಿಯಲ್ಲಿ ಆಚರಿಸಲ್ಪಟ್ಟಿತು.

ತಾರುಣ್ಯ

ಕೊಟ್ಟು, ವೀರ್ಯಸ್ತಂಭನೆ ಮಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟುಮಾಡಲು ರಮಣ ವಿಲಾಸಿನಿ ಅತ್ಯುತ್ತಮ ಔಷಧಿ. ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ,
184 ಚೈನಾ ಬಜಾರ್ ರೋಡ್,
ಮದ್ರಾಸು.

ಪುತ್ತೂರು ಏಜಂಟರು:—ಸ್ಟೈ ಫಾರ್ಮಸಿ

TENDER NOTICE

Tenders of rates to reach the Assistant Director of Fisheries (Coast) on or before 15-10-1943 are invited for transporting salt bags from vessels or railway wagons and stacking them in the fishcu[illegible]g yards and gollahs on the West Coast and for sundry other work. Details and terms of contract can be obtained form the Assistant Director of Fisheries(Coast)- West Hill.

D. D. Peter Devadas
Asst. Director of Fisheries (Coast)

West Hill.
9-9-1943.

NOTICE.

In the Court of the Dt. Munsif of Mangalore.

R. E. P. 644/42.

Between:—
Joseph Miranda —Petr'
and
1. Kujumbe Hengsu. 2. Dogra Pujari. 3. Choovappa Pujari —Respts.

To
Respondents 2 and 3, children of Kujumbe Hengsu, residing in Badaga Yekkaru village, Mangalore Taluk.

Please take notice that the above named Petitioner has filed the above Petition for the sale of property mentioned in the sale proclamation in the above E.P. and that the said Petition is posted for settling the terms of the sale on 23-9-1943.

If you desire to oppose the same you should appear in person or by duly instructed pleader on your behalf on the aforesaid date at 11 A. M. failing which the above petition will be decided in your absence.

(By order of the Court).

Mangalore, 11-9-1943. **B. S. Achar,** Vakil for Petitioner.

Degrees: Books: Medicines
Free H. L. M. S. M. B. H. M. D. etc. Free Homeo-Ayur- UnaniNaturco degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp:—
Principal Indian Homeopathi Institute & Society (Govt. Regd)
P.O. MAHUVA (Kathiawar Dt. India.)

Sidha-Kalpa Kavach (Regd.)
No. 3 Rs 2. No. 2 Rs. 5 No. 1 Rs. 7. Special Rs. 10, Extra Special Rs. 17 for owe marriage health, wealth. Ask any six questions with M. O. Re. 1/- and get correct answers by returnpost Life reading Rs.10 No V.P.P. Send M.O, Free. damplets.
Prof Dr. N. H Chhatbar.
P. O. MAHUVA (Kathiawar India.)

ಶುಚಿ!! **ಸೆಂಟ್ರಲ್ ಕೆಫೆ** ರುಚಿ!!

ಶ್ರೀನಿವಾಸ ಬಿಲ್ಡಿಂಗ್ಸ್, ಹೆಡ್ ಪೋಸ್ಟಾಫೀಸ್ ಸರ್ಕಲ್, ಶಿವಮೊಗ್ಗ.
ಪ್ರಯಾಣಿಕರಿಗೆ ಉಳಿದುಕೊಳ್ಳಲು ಸ್ಥಳಾನುಕೂಲ ಏರ್ಪಡಿಸಿರುತ್ತೆ.
ಸಕಾಲದಲ್ಲಿ ಉತ್ತಮವಾದ ಊಟ, ಕಾಫಿ ಮತ್ತು ಹಸನಾದ ತುಪ್ಪದಲ್ಲಿ ತಯಾರಿಸಿದ ತಿಂಡಿ ದೊರೆಯುತ್ತೆ.
ಈ ಸ್ಥಳವು ರೈಲ್ವೆಸ್ಟೇಷನ್, ಬಸ್ ಸ್ಟ್ಯಾಂಡ್, ಕೋರ್ಟುಗಳಿಗೆ ಮಧ್ಯ ಸ್ಥಳದಲ್ಲಿದೆ.
ಎಸ್. ರಾಮದಾಸ್, ಪ್ರೊಪ್ರೈಟರ್.



ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ತಾರೀಕು 13—9—43ರಿಂದ
ವೈ. ವಿ. ರಾವ್, & ಪುಷ್ಪವಲ್ಲಿ ನಟಿಸಿರುವ ತೆಲುಗು
ಸತ್ಯಭಾಮ
ಅನಂತರ ನಿರೀಕ್ಷಿಸಿರಿ: ನೇಶನಲ್ ಸಿದೋರ್ಸ್. ಅತ್ರಿ ಚಿತ್ರ: ರಾಜಾರಾಣಿ. ವಾರ್ನರ್ ನವರ 'ಫೈಟಿಂಗ್ 69th' ಇತ್ಯಾದಿ.
ಕುಮಾರಿ ಚಂದ್ರಮ್ಮ, ಎಸ್. ಡಿ. ಸುಬ್ಬುಲಕ್ಷ್ಮಿ, ಬೆಳ್ಳಾವೆ ನರಹರಿ ಶಾಸ್ತ್ರಿ ನಟಿಸಿರುವ
ಕನ್ನಡ **ಕೃಷ್ಣ ಸುಧಾಮ**

ಪ್ರಕಟಣೆ.

ಕಟಪಾಡಿ ಸರ್ಕಲಿನ ಮತದಾರರಲ್ಲಿ ಸವಿನಯ ವಿನಂತಿ.

ಈ ಬಾರಿ ನಡೆಯಲಿರುವ ಕಟಪಾಡಿ ಸರ್ಕಲಿನ ಉಪಚುನಾವಣೆಯಲ್ಲಿ ನಾನು ಒಬ್ಬ ಉಮೇದ್ವಾರನಾಗಿರುವೆ. ನಮ್ಮ ಜಿಲ್ಲೆಯ ಬೇರೆಬೇರೆ ಸ್ಥಳಗಳಲ್ಲಿ ಕೂಲಿಕಾರರ ಕಡೆಯಿಂದ ನನ್ನ ಕೈಲಾದಷ್ಟು ಜನತಾಸೇವೆಯನ್ನು ಮಾಡಿರುವೆನಲ್ಲದೆ, ಜಿಲ್ಲಾ ಅಸಿಸ್ಟೆಂಟ್ ಸ್ಕೌಟ್ ಕಮೀಶನರನಾಗಿಯೂ ನನ್ನ ಕೈಲಾದ ಸೇವೆಯನ್ನು ಜನತೆಗೆ ಸಲ್ಲಿಸುತ್ತಿರುವೆ. ಜಿಲ್ಲಾ ಬೋರ್ಡಿನಲ್ಲೂ ಕೂಡಾ ನನ್ನ ಕೈಲಾದಷ್ಟು ಜನತಾಸೇವೆಯನ್ನು ಮಾಡಬೇಕೆಂದಿರುವೆನಾದುದರಿಂದ ಈ ಬಾರಿಯ ಚುನಾವಣೆಯಲ್ಲಿ ನಿಮ್ಮ ಮತವನ್ನು ನನಗೇನೇ ಕೊಟ್ಟು ಪ್ರೋತ್ಸಾಹಿಸಬೇಕಾಗಿ ಅಪೇಕ್ಷಿಸುತ್ತೇನೆ.

ಕುಂಜೂರು ರಾಮಚಂದ್ರ ರಾವ.

ದಕ್ಷಿಣ ಕನ್ನಡ.

ಮಂಗಳೂರು.

ಬಂಗಾಳಕ್ಕೆ ಸಹಾಯ ಕೊಡಿರಿ!

ತಾ. ೮ರಂದು ಸಂಜೆ ಕೆನರಾ ಹೈಸ್ಕೂಲಿನ ಭುವನೇಂದ್ರ ಹಾಲ್‌ನಲ್ಲಿ ಶ್ರೀ| ಕೆ. ಆರ್. ಆಚಾರ್, ಎಂ. ಎ, ಎಲ್. ಎಲ್. ಬಿ. ಅವರ ಅಧ್ಯಕ್ಷತೆಯಲ್ಲಿ, ಒಂದು ಸಾರ್ವಜನಿಕ ಸಭೆ ಜರಗಿ ಬಂಗಾಳದ ಆರ್ತರಿಗಾಗಿ ಸಹಾಯ ನಿಧಿ ಸಂಗ್ರಹಿಸಲಿಕ್ಕೆಂದು ಒಂದು ಸಮಿತಿಯು ರಚಿಸಲ್ಪಟ್ಟಿತು. ಶ್ರೀಗಳಾದ ಎ. ಆರ್. ಬಿಜೂರ್, ಬಿ. ಪಿ. ಕಕ್ಕಿಲ್ಲಾಯ, ಕೆ. ದಾಮೋದರ ಕಿಣಿ, ದಾ| ಗಿರಿಧರ ರಾವ್, ಮತ್ತು ಎ. ಕೃಷ್ಣ ಶೆಟ್ಟಿ ಇವರು ಮಾತನಾಡಿ, ಬಂಗಾಳದ ದುರಂತ ಚಿತ್ರವನ್ನು ವರ್ಣಿಸಿದರು. 'ನಮ್ಮ ಪ್ರೀತಿಯ, ಸಹಾನುಭೂತಿಯನ್ನು ತೋರಿಸುವ ಕಾಲವಿದು. ಈ ಕಾರ್ಯಕ್ಕಾಗಿ ಉದಾರ ಹಸ್ತದಿಂದ ಪ್ರತಿಯೊಬ್ಬರೂ ದಾನ ಮಾಡುವರೆಂಬ ಭರವಸೆ ನಮಗಿದೆ' ಎಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದರು. ಶ್ರೀಗಳಾದ ಕೆ. ಬಿ. ಜಿನರಾಜ ಹೆಗ್ಡೆ, ಎ. ಬಿ. ಶೆಟ್ಟಿ, ವೆಂಕಟ್ರಾಯ ಬಾಳಿಗ, ಕೆ. ಆರ್. ಆಚಾರ್, ಇವರನ್ನೂ ವ್ಯಾಪಾರಿ ವರ್ಗ, ಡಾಕ್ಟರರು, ವಿದ್ಯಾರ್ಥಿಗಳು ಮತ್ತಿತರ ಹಲವು ಪ್ರತಿನಿಧಿಗಳನ್ನೂ ಈ ಸಮಿತಿಯಲ್ಲಿರುವಂತೆ ಕೇಳಿಕೊಳ್ಳಬೇಕೆಂದು ಗೊತ್ತಾಯಿತು.

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಪರಿಷತ್ತಿನ ತಾತ್ಕಾಲಿಕ ಸ್ಥಾನಿಕ ಸಮಿತಿಯೊಂದು, ತಾ. ೧೧ರಂದು ಸಂಜೆ, ಜಿಲ್ಲಾ ಪತ್ರಿಕೋದ್ಯೋಗಿ ಸಂಘದ ಆಫೀಸಿನಲ್ಲಿ ಶ್ರೀ| ಹುರುಳಿ ಭೀಮರಾಯರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ, ರಚಿಸಲ್ಪಟ್ಟಿರುವುದು.

ಸೇರಿಗೆ ಮೂರಾಣೆಯಂತೆ ಶ್ರೀ| ರಘುಚಂದ್ರ ಬಲ್ಲಾಳರು ತಮ್ಮ ಒಂದಷ್ಟು ಮುಡಿ ಅಕ್ಕಿಯನ್ನು ಹಂಪನಕಟ್ಟೆಯಲ್ಲಿ ಕಳೆದ ರವಿವಾರ ಮಾರಿದರು, ೩,೨೦೦ ಮಂದಿ ಆ ದಿನ ಒಂದೊಂದು ಸೇರು ಅಕ್ಕಿ ಪಡೆದುಕೊಂಡರು. ಮತ್ತೆ ಮೂರು-ನಾಲ್ಕು ಸಾವಿರದಷ್ಟು ಮಂದಿ ನಿರಾಶರಾಗಬೇಕಾಯಿತು. ಮಂಗಳೂರು ಕಮ್ಯೂನಿಸ್ಟ್ ಪಾರ್ಟಿಯ ೩೦ ಸ್ವಯಂ ಸೇವಕರು ಜನರ ಒತ್ತಡವನ್ನು ಹತೋಟಿಯಲ್ಲಿರಿಸಿ, ವ್ಯವಸ್ಥೆ ಏರ್ಪಡಿಸಿದರು. ಅನಂತರವೂ ಒಂದು ದಿನ ಶ್ರೀ| ಬಲ್ಲಾಳರು ಉಳಿದ ಮುಡಿಗಳಷ್ಟು ಅಕ್ಕಿಯನ್ನು ಅದೇ ಬೆಲೆಗೆ ಮಾರಿದರು.

ಜಿಲ್ಲಾ ಬೋರ್ಡಿನ ಖಾಲಿಬಿದ್ದ ಸ್ಥಾನಗಳಿಗೆ ಡಾ| ರಾಘವೇಂದ್ರ ರಾವ್,(ಕಾಸರಗೋಡು) ಶ್ರೀ| ಬೊಂಬ್ರಾಣ ಕರಿಯಪ್ಪ ಬಂಡಾರಿ (ಕುಂಬಳೆ) ಶ್ರೀ ಬಾಲಕುಟ್ಟಿ ನಾಯರ್ (ಹೊಸದುರ್ಗ) ಅಲ್ಲಿನ ಹರಿಜನ ಸೀಟಿಗೆ ಶ್ರೀ| ಶಂಕರ 'ಇವರು ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿಸಲ್ಪಟ್ಟರು. ಮಂಜೇಶ್ವರದಲ್ಲಿ ಶ್ರೀ| ಮುಕುಂದ ನಾಯಕರೂ ಶ್ರೀ| ರಾಮ ನಾಯಕರೂ ಪ್ರತಿಸ್ಪರ್ಧಿಗಳು.

ಶ್ರೀ| ವಕೀಲ್ ಯಸ್. ನರಸಪ್ಪಯ್ಯನವರೂ ಶ್ರೀ| ಕೃಷ್ಣ ಶೆಟ್ಟರೂ ಪ್ರತಿಸ್ಪರ್ಧಿಗಳಾಗಿ ನಿಂತಿರುವರು. ಮೂಡಬಿದ್ರೆ ಸರ್ಕಲಿಗೆ ಶ್ರೀ ಕೃಷ್ಣ ಶೆಟ್ಟರು, ಮತ್ತು ಶ್ರೀ. ರವಿವರ್ಮ ಶೆಟ್ಟರು, ಹಿರಿಯಡ್ಕ ಸರ್ಕಲಿಗೆ ಶ್ರೀಗಳಾದ ಉಂಬೆಟ್ಟು ನಾಗಣ್ಣ ಹೆಗ್ಡೆ ಮತ್ತು ಹಿರೆಬೆಟ್ಟು ತಿಮ್ಮಪ್ಪ ಹೆಗ್ಡೆಯರು, ಕಟಪಾಡಿ ಸರ್ಕಲಿನ ಜನರಲ್ ಸೀಟಿಗೆ ಶ್ರೀಗಳಾದ ಶ್ರೀನಿವಾಸ ಪುತ್ತೂರಾಯರು, ಆರ್. ಆರ್. ಕುಂಜೂರು, ಪ್ರತಿಸ್ಪರ್ಧಿಗಳಾಗಿರುವರು. ಕಟಪಾಡಿ ರಿಸರ್ವ್ ಸೀಟಿಗೆ ಮಿ. ಜೆ. ಸಿ. ಡಿಸೋಜ, ವಕೀಲ್, ಚುನಾಯಿತರಾಗಿರುವರು.

ಉಡುಪಿ.

ನಗರಸಭೆ:— ಈ ಸಾಮಾನ್ಯ ಮೀಟಿಂಗು ತಾ 11ರಲ್ಲಿ ಶ್ರೀ ನರಸಿಂಹ ವಿಠಲಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾರಂಭದಲ್ಲಿ ಶ್ರೀ ಉದ್ಯಾವರ ಮರೆಂಗಡಿ ಕೇಶವಕಾಮತರು ರಾಜಭಕ್ತಿ ಪ್ರಮಾಣವನ್ನು ಮಾಡಿದೊಡನೆ ಮಂಜುನಾಥರಾಯರು ಕೋಡಿಬೆಟ್ಟು ವಾರ್ಡಿನಿಂದ ಆರಿಸಲ್ಪಟ್ಟವರು ಶ್ರೀ ಕೇಶವಕಾಮತ್ ಎಂ. ಎಂದು ಪಾಯಿಂಟ್ ಆಫ್ ಆರ್ಡರ್ ಎತ್ತಿದರು. ಪಾಯಿಂಟ್ ಒಫ್ ಆರ್ಡರನ್ನು ಚೆಯರ್‌ಮೇನರು ಒವರ್ ರೂಲ್ ಮಾಡಿದರು. ನಗರ ಸಭೆಯ ಗತವರುಷದ ಆಡಳಿತದ ಕುರಿತು ಜಿಲ್ಲಾ ಕಲೆಕ್ಟರರು ಬರೆದ ರಿಮಾರ್ಕುಗಳನ್ನು ರಿಕಾರ್ಡು ಮಾಡಲಾಯಿತು. ನಗರಸಭೆಯ ನೌಕರರಿಗೆಲ್ಲಾ ಆಹಾರ ಸಾಮಗ್ರಿಗಳನ್ನು ಸಂಗ್ರಹಿಸಡುವರೆ ಅವರವರ ಮೂರು ತಿಂಗಳ ಸಂಬಳದಷ್ಟು ಹಣವನ್ನು ಅಡ್ವಾನ್ಸ್ ಕೊಡಬೇಕಾಗಿಯೂ ಸದ್ರಿ ಹಣವನ್ನು ಒಂದು ವರುಷದಲ್ಲಿ ಹನ್ನೆರಡು ಕಂತುಗಳಿಂದ ವಾಪಸು ಪಡೆಯಬೇಕಾಗಿಯೂ ನಿರ್ಧಾರವಾಯಿತು.

ಪತ್ರಿಕೋದ್ಯೋಗಿಗಳ ಸಭೆ:— ಒಂದು ತಾ. 12-9-43ರಲ್ಲಿ ನವಯುಗ ಪ್ರೆಸ್ಸಿನ ಮಾಳಿಗೆಯಲ್ಲಿ ಶ್ರೀ| ಕೆ. ವಿಟ್ಠಲ ಪೈ ಬಿ. ಎ. ಎಲ್. ಟಿ, ಯವರ ಅಧ್ಯಕ್ಷತೆಯಲ್ಲಿ ಜರಗಿ, ಸಂಘವು ಪುನರ್ಘಟಿಸಲ್ಪಟ್ಟು ಜಿಲ್ಲಾ ಸಂಘದೊಡನೆ ಸಂಬಂಧವನ್ನಿಟ್ಟುಕೊಳ್ಳಬೇಕೆಂದಾಯಿತು. ಜಿಲ್ಲಾ ಸಂಘದ ನಡುವಳಿಕೆಗಳಂತೆ ನಡೆಯುವುದೆಂದಾಯಿತು. ಚಾಲ್ತಿ ವರ್ಷಕ್ಕೆ ಶ್ರೀಗಳಾದ ಕೆ. ಹೊನ್ನಯ್ಯ ಶೆಟ್ಟಿ (ಅಧ್ಯಕ್ಷ) ಬಿ. ರಾಮಕೃಷ್ಣಾಚಾರ್, ಬಿ. ಎ. ವಿಶಾರದ (ಉಪಾಧ್ಯಕ್ಷ) ಕೆ. ಆರ್ ಶೆಣೈ (ಕೋಶಾಧಿಕಾರಿ) ಎಸ್. ಎಸ್. ಪರ್ಕಳ (ಕಾರ್ಯದರ್ಶಿ) ಕೊಡ್ಕಲ್ ಶ್ರೀನಿವಾಸ ರಾವ್, ಯು. ಎಸ್. ಭಟ್, ಮತ್ತು ಮಿಸ್. ಕೆ. ಪಿ. ಬಾಯಿ ಇವರನ್ನು ಕಾರ್ಯಕಾರಿ ಸಮಿತಿಗೆ ಚುನಾಯಿಸಲಾಯಿತು. ಶ್ರೀ| ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಪುಸ್ತಕಕ್ಕೆ ರೂ. 400ರ ದೇವರಾಜ ಬಹದ್ದೂರ್ ಪಾರಿತೋಷಕ ಶ್ರೀ| ?. ಎಸ್. ಕುದ್ಪರ ಮೋಟಾರು ವಿಜ್ಞಾನಕ್ಕೆ ರೂ. 750ರ ಮದ್ರಾಸ್ ಯೂನಿವರ್ಸಿಟಿಯ ಪಾರಿತೋಷಕ ಸಿಕ್ಕಿದುದಕ್ಕೆ ಅವರನ್ನು ಅಭಿನಂದಿಸಲಾಯಿತು. ಈ ಸಭೆಯಲ್ಲಿ ಜಿಲ್ಲಾ ಸಂಘದ ಕಾರ್ಯದರ್ಶಿ ಶ್ರೀ ಕು. ಶಿ. ರಾಯರೂ ಹಾಜರಿದ್ದರು.

ಪಾರಿತೋಷ:— ಪರ್ಯಾಯ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರು ಚೌತಿ ಗಣಪತಿ ಪ್ರತಿಮೆಗಳನ್ನು ಅಚ್ಚುಕಟ್ಟಾಗಿ ಮಾಡಿಕೊಟ್ಟ ಪೈಂಟಿಂಗ್ ಗಣಪತಿರಾಯರಿಗೆ ತಾ 6-9-43ರಂದು ಒಂದು ಪವನಿನ ಸುವರ್ಣಪದವನ್ನೊಂದನ್ನಿತ್ತುದಲ್ಲದೆ ಚಿತ್ರಕಲಾ ಧುರೀಣ ಎಂಬ ಬಿರುದನ್ನೂ ದಯಪಾಲಿಸಿರುವರೆಂದು ತಿಳಿದು ಬರುತ್ತದೆ.

ಚೂರು-ಚೂರು

'ಈಜಿಪ್ಟಿನ ಹೊಯಿಗೆ, ರಷ್ಯದ ಹಿಮದೊಳಗೆ ಇಟೆಲಿಯಾನರನ್ನು ಹೂಗಿಸಿದ ಹಿಟ್ಲರನ ಸೇಡನ್ನು ಇಟೆಲಿಯಿಂದೋಡಿಸಿರಿ'—ಇಟೆಲಿಯಾನರಿಗೆ ಚರ್ಚಿಲ್—ರೂಸವೆಲ್ಟರ ವಿನಂತಿ.

'ಈಜಿಪ್ಟಿನಲ್ಲಿ ಹೊಯಿಗೆ, ರಷ್ಯದಲ್ಲಿ ಹಿಮ ನಿರ್ಮಿಸಿದ ದೇವನನ್ನೂ ಎಚ್ಚರಿಸಿ ಬಿಡಿ'—ಪೋಪ್ ಗುರುಗಳೊಡನೆ ನಮ್ಮ ವಿನಂತಿ!

○

'ಸರಕಾರೀ ಕಂಟ್ರಾಕ್ಟುಗಳ ಸಂಬಂಧವಾಗಿ ನಡೆಯುತ್ತಿರುವ ಫೋರ್ಜರಿ, ಲಂಚ ಮತ್ತು ದಗಾ ಖೋರತನಗಳ ನಿವಾರಣೆಗಾಗಿ ಪ್ರತ್ಯೇಕ ಕಾಯಿದೆ ಮಾಡುವ ಯೋಜನೆಯಲ್ಲಿ ಸರಕಾರವಿದೆ'.—ನ್ಯೂಡೆಲ್ಲಿಯಿಂದ ಸರಕಾರೀ ಪ್ರಕಟಣೆ.

ಕಾಯಿದೆಯಿಂದೇನು ಫಾಯಿದೆ? ಸಾಧ್ಯವಿದ್ದರೆ ನೌಕರರ ಹೃದಯ ಮಾಪಕ ಯಂತ್ರವೊಂದನ್ನು ತಯಾರಿಸಲಿ!

○

ತಿರುವಾಂಕೂರು ವಿಶ್ವವಿದ್ಯಾಲಯದಲ್ಲಿ ತಮಿಳು ವಿದ್ಯಾಭ್ಯಾಸಕ್ಕಾಗಿ ಶ್ರೀ. ಅಲಗಪ್ಪ ಚೆಟ್ಟಿಯಾರರು ರೂ. 100001 ದಾನವಿತ್ತಿದ್ದಾರೆ.

ತಮಿಳಿನಲ್ಲಿ ಓರ್ವ ಅಲಗಪ್ಪನವರಂತಾಗ ಕನ್ನಡ ನಾಡಿನ ಶ್ರೀಮಂತರೆಲ್ಲಾ 'ಅಲುಗಪ್ಪ'ನವರು!

●

'ಸೇನಾನಿ ಲೊರ್ಡ್ ಮೌಂಟಬೇಟನ್ನರ ಬೆನ್ನಲ್ಲಿಯೇ ಅಮೇರಿಕದ ಮಿ. ಫಿಲಿಪ್ಸರೂ ಹಿಂದುಸ್ಥಾನಕ್ಕೆ ಬರಲಿದ್ದಾರೆ; ಆ ಮೊದಲು ತಾತ್ಕಾಲಿಕವಾಗಿ ಯುದ್ಧ ಇಲಾಖೆಯ ಕಾರ್ಯಮಾಡಲು ಲಂಡನ್ನಿಗೆ ಹೋಗಲಿದ್ದಾರೆ!

ಹಾಗಾದರೆ ಈ ಬಾರಿ ಆಗಾಖಾನ್ ಅರಮನೆ ಹೊಗಲು ಅನುಮತಿ ಕೇಳುವ ಬದಲಿಗೆ, ಟೋಕಿಯೋ ಹೋಗಲು ಪಾಸ್‌ಪೋರ್ಟ್ ಕೇಳಬಹುದು.

○

'ಕ್ರಿಕೆಟ್ ಪರಿಷತ್ತಿನಲ್ಲಿ ಭಾರತದ ರಾಜಕೀಯ ಪ್ರಶ್ನೆಯು ಚರ್ಚಿಸಲ್ಪಟ್ಟಿತೆಂಬ ವಾರ್ತೆ ಪೂರ್ತಿ ನಿರಾಧಾರವಾದುದು'—ಅಧಿಕೃತ ಸುದ್ದಿ.

ಅಥವಾ ಏನಾದರೂ ಚರ್ಚೆ ನಡೆದಿದ್ದರೆ ಚರ್ಚಿಲ್ ದಂಪತಿಗಳು ತಮ್ಮೊಳಗೆ ಏನೋ ದಕ್ಕಾಗ!

—ವಿನೋದಿ

ಶ್ರೀ ಬಡಗುಬೆಟ್ಟು ಗೋಪಹೆಗ್ಡೆರ ನಿಧನ:— ಇವರು ಸುಮಾರು ಒಂದು ವರ್ಷದಿಂದ ಕ್ಷಯ ಮತ್ತು ಮೂತ್ರರೋಗಪೀಡಿತರಿದ್ದು 3 ತಿಂಗಳ ಹಿಂದೆ ಶುಶ್ರೂಷೆಗಾಗಿ ಮಿರಾಜಿಗೆ ತೆರಳಿದ್ದರು. ತಾ. 9ರಂದು 52ನೇ ವಯಸ್ಸಿನಲ್ಲಿ ಮೃತರಾಗಿರುವರೆಂದು ತಿಳಿಸಲು ವಿಷಾದವಾಗುತ್ತದೆ. ಶ್ರೀಯುತರು ಹನುಮಾನ್ ಟ್ರಾನ್ಸ್‌ಪೋರ್ಟಿನ ಉತ್ಸಾಹಿ ಡೈರೆಕ್ಟರರಲ್ಲೊಬ್ಬರಾಗಿದ್ದರು. ಒಮ್ಮೆ ತಾಲೂಕು ಬೋರ್ಡಿನ ಸದಸ್ಯರಾಗಿದ್ದರು. ಶ್ರೀಯುತರ ನಿಧನದ ದುಃಖಸೂಚನಾರ್ಥವಾಗಿ ಹನುಮಾನ್ ಕಂಪೆನಿ ಕೆಲಸಗಾರರಿಗೆ ಒಂದು ದಿನರಜೆ ಕೊಡಲಾಗಿತ್ತೆಂದು ತಿಳಿದುಬರುತ್ತದೆ. ಮೃತರ ದುಃಖೀ ಕುಟುಂಬದೊಂದಿಗೆ ಸಹಾನುಭೂತಿ ಪಡುತ್ತೇವೆ.

ಬೈಲೂರು:— ಸ್ಥಳೀಯ ಬಿ. ಇ. ಮಿಶ್ಯನ್ ಶಾಲಾ ರಕ್ಷಕರ ಹಬ್ಬವು ತಾ 7-9-43ರಲ್ಲಿ ಕಾರ್ಕಳ ರೇಂಜ್ ಶಾಲೆಗಳ ಮಾನ್ಯ ಡೆಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ. ಯು. ಕೃಷ್ಣರಾವ್ ಬಿ. ಎ. ಎಲ್. ಟಿ. ರವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಶ್ರೀ| ಟಿ. ನಾಗಣ್ಣ ಹೆಗ್ಡೆಯವರು ಕಾಲೋಚಿತ ಬಾಷಣ ಕೊಟ್ಟರು. ಶ್ರೀ ಕೆ. ಸಂಜೀವ ಹೆಗ್ಡೆಯವರು ಬಡ ವಿದ್ಯಾರ್ಥಿ ನಿಧಿ ಸ್ಥಾಪನೆಯ ವಿಷಯ ಭಾಷಣಕೊಟ್ಟು ನಿಧಿಯನ್ನು ಶೇಖರಿಸಲಾಯ್ತು. ಅಧ್ಯಕ್ಷರು ಶಾಲೆಯೆಂಬುದು ಗ್ರಾಮದ ಅಧಿದೇವತೆಯ ಕುಂಕುಮ ಇದು ಇರುವವರೆಗೆ, ಮುತ್ತೈದೆ ಇದ್ದರೆ 5 ಮುತ್ತುಗಳುಳ್ಳವಳೆಂದು ಅರ್ಥ. ಅವಳ ಕಿವಿಯ ಕುಂಡಲಗಳೇ ಪಾಲಕಪಾಲಕರು ಮೈಯ ಕವಚವೇ ರಕ್ಷಕರು. ಕಂಕಣವೇ ಶಾಲಾ ಉಪಾಧ್ಯಾಯರು. ಮಾಂಗಲ್ಯ ಸೂತ್ರವನ್ನು ಕಟ್ಟುವವರೇ ಡಿಪ್ಟಿ ಇನ್ಸ್‌ಪೆಕ್ಟರರು ಎಂಬೀ ಸಾಮ್ಯಗಳಿಂದ ಉಜ್ವಲ ಭಾಷಣವನ್ನಿತ್ತರು.

ಸುರತ್ಕಲ್:— ಇಲ್ಲಿಯ ಮುಕ್ಕ, ಹೊಸಕೊಪ್ಲ ಪಟ್ಣದಲ್ಲಿ ಕೆಂಡಿಗ ಮತ್ತು ಹೊಸಕೊಪ್ಲ ಪಟ್ಣ ಎಂದಿದ್ದುದನ್ನು ತಾ 25-8-43ರಲ್ಲಿ ಕೂಡಿದ ಸಭೆಯಲ್ಲಿ ಒಡಮೂಡಿ ಒಮ್ಮಂದಿನ ಗ್ರಾಮಿಕ ಪಟ್ಣ' ಎಂಬ ನಾಮಧೇಯವಾಯಿತು.

ಮೈಸೂರು:— ಮೋಡರ್ನ್ ಹಿಂದೂ ಹೋಟೆಲ್ ಮಾಲಿಕರಾದ ಶ್ರೀ| ಕೆ| ಸೀತಾರಾಮರಾಯರಿಂದ ಕಟ್ಟಿಸಲ್ಪಟ್ಟ 'ದಾಸ ಪ್ರಕಾಶ' ಮಂದಿರದ ಪ್ರವೇಶೋತ್ಸವವು ವಿಜೃಂಭಣೆಯಿಂದ ಜರಗಿತು.

ಮಂಜೇಶ್ವರ— ಅಗ್ಗ ದರದ ವಸ್ತುಗಳ ಮಾರಾಟವು ಕೋ-ಆಪರೇಟಿವ್ ಬ್ಯಾಂಕಿನವರ ಆಶ್ರಯದಲ್ಲಿ ಆರಂಭವಾಗಿದೆ. ಈ ಶಾಪಿನ ಉದ್ಘಾಟನೆಯನ್ನು ಶ್ರೀ| ಮುಕುಂದ ನಾಯಕರು ತಾ. 2ರಂದು ಮಾಡಿದರು.

CHAMPAE'S
SNOW & CASTREX.
AGENTS:
SADANANDA STORES UDIPI

BHUVANENDRA PRODUCTS Ltd.,

Head Office and Factory:
Katapadi, S. Kanara

Depots:
1 Mahratha Galli, Hubli

"BHUVANENDRA"
Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ.
"ಭುವನೇಂದ್ರ"
ದಂತಧಾವನ ಚೂರ್ಣ
ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ನ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮೆಸಿ; ಡಾ. ಕೆ. ಕೇಶವಗಿರಿ ಪೈ L. I. M.; ಡಾ. ವೆಂಕಟರಾವ್, ಕೊರಡ್ಕಲ್; ವಿಜಯಾ ಸ್ಟೋರ್ಸ್

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in 1920)

Registered Office Court Road UDIPI South Canara District.

Business Offices Udipi, Mangalore, Katapadi, Kanhangad and Kinnigoli, South Canara

Authorised and Issued Capital Rs 2 00 000/-

Subscribed and Paid up Capital. Rs 2,00,000/-

Reserve Funds Rs 1,74,000/

Short term bills are discounted for approved parties Loans and advances are made and overdrafts granted on fairly easy terms

Deposits are accepted at favourable rates of interest More than twenty-three years' reliable banking Service stands to our credit

For further particulars please call at or apply to the nearest office.

Dated 2"-8-1943.

ಅಮೃತಾಂಜನ ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಬುಜಗಳಲ್ಲಿ ವೇದನೆಗಳಿಗೂ ಎದೆನೋವು, ಗಾಯಗಳು ಬತು ಕೊಳ್ಳುವುದ, ಚೇಳು ವಿಷಮುಂತಾದವುಗಳಿಗೆ, ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ,

REGD.

ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತಾ.

ವಿದ್ಯಾವಿಷಯಕ ಪ್ರಮುಖಕ ಮಾಸಪತ್ರ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. **1-8-0** ಮಾತ್ರ

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಮೆನೇಜರ್, **ಬಾಲಚಂದ್ರ**

ಸಂತೆಕಟ್ಟೆ, ಉಡುಪಿ

ಶ್ರೀ. ತಾರಾನಾಥ ಭೇಷಜಾಲಯ

ಶಾಸ್ತ್ರೀಯ ಮತ್ತು ಸಿದ್ಧೌಷಧಿಗಳ ಕಾರಾಗಾರ, ಚಿಕ್ಕಮಗಳೂರು.

ನಿರ್ದೇಶಕ:- ಡಾ. M. L Shetty, ಪ್ರೇಮವಿದ್ಯಾಪೀಠದ ಗೌ. ಪ್ರಾಧ್ಯಾಪಕರು.

ಎಲ್ಲಾತರದ ಭಸ್ಮ, ಖಲ್ವೀರಸಾಯನ, ಆಸವಾರಿಷ್ಟ, ಘೃತ, ತೈಲಗಳಿಗಾಗಿ ಕೂಡಲೇ ಬರೆಯಿರಿ.

ಉಕ್ಕಗಟ್ಟಲೆ ರೋಗಿಗಳಲ್ಲಿ ಫಲಕಾರಿಯಾದ ಔಷಧೀ ಯೋಗಗಳು. ಗುರುಪರಂಪರೆಯ ಅನುಭವದಿಂದ ಬಂದ ನಿರ್ದುಷ್ಟ ಔಷಧೀಕರಣ ವಿಧಾನ

ಡಾ| P. M. Alva,

ಮೆನೇಜರ್.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, ಯಂ. ಆರ್. ಪೂಂಜ,

President & Manager ಪ್ರೆಸಿಡೆಂಟ್ ಮತ್ತು ಮೆನೇಜರ್

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ. : : : : ಮಂಗಳೂರು.

THE VIJAYA BANK, LIMITED.

Glad to announce that a Branch of the Bank has been opened at KASARAGOD on 12-9-43.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಶೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ. ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯ:— ಹರವೀಸಲ್ಲಿ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. ೨—0—0 ಪೋಸ್ಟ ಚಾರ್ಜು ನಿರಾಳೆ

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ —ಕುಂಬರವಾಡಿ ಸ್ಟೋರ್ಸ. ದಾವಣಗೇರಿ —ದಾವಣಗೇರಿ ಪ್ರೆಸ್ಸ. ಆರ್. ಎಲ್. ಕಲಬದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ನವಜೀವಾತು ಎಂಬ ಸೂತಿಕಾರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ** ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚುಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ಆರುಬಾಟ್ಲಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ.ಕ**

ಸ್ಥಾಪನೆ **ಕ್ರೌನ ರಬ್ಬರ ಸ್ಟ್ಯಾಂಪ ವರ್ಕ್ಸ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore

Certified by the Agent of the Govt. of India in Ceylon.

Regd. No. M. 3618.

ಇಪ್ಪತ್ತನಾಲ್ಕನೆಯ ವರ್ಷ.

NAVAYUGA

ನವಯುಗ

Estd. 1921 ಸ್ಥಾಪನೆ.

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೪

FOUNDER
Sri. A. B. Shetty.

Vol 24
No. 4

NAVAYUGA— Kannada Weekly —UDIPI, S. I.

ಉಡುಪಿ • 23—9—1943 • ಮಂಗಳೂರು.

ಹೊಸಕೆರೆ ಚಿದಂಬರಯ್ಯನವ
ರಿಂದ ರಚಿತವಾದ ಗೀತೆಯ
ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು 44೧ ಪುಟಗಳು.

ಪ್ರತಿ ಮನೆಯಲ್ಲೂ ಇರಬೇಕಾದ
ಪವಿತ್ರ ಗ್ರಂಥ.

ಬೆಲೆ (ಸುಂದರ ಪ್ರತಿ) ೦—೮—೦

ಹತ್ತಾಣೆ ಸ್ಟಾಂಪು ಕಳಿಸಿದ್ದಲ್ಲಿ ೧ ಪ್ರತಿಯನ್ನು
ಬುಕ್‌ಪೋಸ್ಟು ಮಾಡಲಾಗುತ್ತೆ.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಅಖಿಲ ಕರ್ನಾಟಕದ
ಹೊಸಮಾದರಿಯ ವಾರಪತ್ರಿಕೆ

ಅಂತರಂಗ

ಜನ್ಮತಾಳಿದ ಸ್ವಲ್ಪ ಸಮಯದಲ್ಲೇ
ವಿಶಾಲ ಪ್ರಚಾರ ಮತ್ತು ಪ್ರಶಸ್ತಿ
ಪಡೆದ ಸಚಿತ್ರ ವಾರಪತ್ರಿಕೆ.

ಪ್ರಸಿದ್ಧ ಜ್ಯೋತಿಷಿಗಳೊಬ್ಬರಿಂದ
ವಾರಭವಿಷ್ಯವೂ ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ	ರೂ. ೪-೮-೦
6 ತಿಂಗಳಿಗೆ	ರೂ. ೨-೪-೦
ಬಿಡಿಪ್ರತಿಗೆ	ರೂ. ೦-೧-೬

ಮಾದರಿಗೆ ಬರೆಯಿರಿ.
ಮೆನೇಜರ್, ಅಂತರಂಗ, ಉಡುಪಿ

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

The Canara Mutual Assurance Co., Ltd.,
UDIPI (S. India).

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು
ಸಾರ್ವಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸಮೀಪದವರ ಮತ್ತು
ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇವರಲ್ಲೊಂದು ಪೋಲಿಸಿಯನ್ನು ಪಡೆಯಿರಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಬ್ಬೆಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಮುಖ ಏಜಂಟರು:-
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ (ದ. ಕನ್ನಡ.)

ಶಾಖಾ ಕಚೇರಿಗಳು:— ಬೆಂಗಳೂರು, ಬೊಂಬಾಯಿ, ಮದ್ರಾಸ್,
ಕಲ್ಲಿಕೋಟೆ, ಮಂಗಳೂರು ಮತ್ತು ತ್ರಿವಾಂಕೂರು.

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. **ಮೊದಲ** ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, **ಬಾಗಲಕೋಟಿ:**— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, **ದಾವಣಗೇರಿ:**—ದಾವಣಗೇರಿ ಪ್ರೇಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೪೨ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹುಬಹು ಅಪಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನ್ನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ತೀವ್ರನೆ ಮುಂದುವರಿದವು.

೧೯೪೦, ೪೧ರಲ್ಲಿ **ಕೆನರಾ ಬೇಂಕು** ೯೦ ಲಕ್ಷ ಠೇವಣಿಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣಿಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡೂವರೆ ಕೋಟಿಗೆ ಏರಿದೆ. ಹಾಗೂ ತೆತ್ತ ಮೂಲಧನವು ನಾಲ್ಮಡಿಯಾಗಿದೆ.

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮವಿಶ್ವಾಸದಿಂದಲೂ, ದೃಢಬುದ್ಧಿಯಿಂದಲೂ, ಯೋಗ್ಯಸೇವೆಯನ್ನು ಸಲ್ಲಿಸಿದರಿಂದಲೂ. ಇಂದಿನ ಈ ಪ್ರಗತಿಗೆ ಕಾರಣ ಭೂತರಾದ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಸುಸತ್ವದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

CANARA BANK LIMITED.

ಕೆನರಾ ಬೇಂಕ್ ಲಿಮಿಟೆಡ್.

ಸ್ಥಾಪನೆ 1906.

★ ಇಟೆಲಿ ಅಂತರ್ಲಾಗದ ಬಳಿಕ— ★

ಇಟೆಲಿ ಯುದ್ಧರಂಗದಿಂದ ನುಸುಳಿಕೊಂಡೊಡನೆ ಹಿಟ್ಲರರು ಮಾಡಿದ ವೇದನಾತ್ಮಕ ಭಾಷಣವನ್ನನುಸರಿಸಿ ನಾಜೀ ಯೋಧನು ತೋರಿಸಿದ ಚಟುವಟಿಕೆಗಳು, 'ಫ್ರಾನ್ಸ್ ಪತನ ಕಾಲದ ಜರ್ಮನರಿನ್ನೂ ಇದ್ದಾರೆ' ಅನ್ನಿಸಿಬಿಟ್ಟವೆ. ಇಡೀ ಉತ್ತರ ಇಟೆಲಿ ಮತ್ತು ರೋಮ್ ನಗರ, ಡೊಡಕೆನೀಸ್ ದ್ವೀಪವನ್ನಾಕ್ರಮಿಸಿಕೊಂಡು, ಕುಟುಂಬ ಸಮೇತ ಮುಸಲನಿಯ ಸೆರೆಬಿಡಿಸಿ, ಅವರ ನೇತೃತ್ವದಲ್ಲಿ 'ಇಟೆಲಿ ರಿಪಬ್ಲಿಕನ್ ಫೇಸಿಸ್ಟ್' ಪಕ್ಷ ಸ್ಥಾಪಿಸಿದ್ದಲ್ಲದೆ, ಇಟೆಲಿ ರಣರಂಗದ ಇಂಚು ಇಂಚನ್ನೂ ರಕ್ತದಿಂದ ನಾಜಿಗಳು ತೋಯಿಸಿರುವರು. ಸಾಲೆರ್ನೋ ರಣಕಣದಲ್ಲಿ ಒಮ್ಮೆ ಬಿದ್ದ ನಾಜೀ ಹೊಡೆತಗಳಿಂದ, ಮಿತ್ರ ಸೇನೆ, ಸೇನಾನಿಗಳು ಮತ್ತು ಪ್ರಮುಖರು ಕೂಡಾ ಗಾಬರಿಗೊಳ್ಳುವಂತಾಗಿದ್ದಿತು.

ಸಾಲೆರ್ನೋ ಸಾಹಸ.

ಜನರಲ್ ಕ್ಲಾರ್ಕರ ನಾಯಕತ್ವದಲ್ಲಿರುವ ಸುಪ್ರಸಿದ್ಧ ಅಮೇರಿಕಾಂಗ್ಲೋ 5ನೇ ಸೇನೆಯು ಸಾಲೆರ್ನೋ ಸಂಕರಿರಕ್ಕೆ ಮುಟ್ಟಿದೊಡನೆ, ದಕ್ಷಿಣ ಇಟೆಲಿಯ ಜರ್ಮನ್ ಸೇನಾನಿ ಜನರಲ್ ಕೆಸ್ಸರ್ಲಿಂಗರು ಹೂಡಿದ ಪ್ರತಿಭಟನೆಯು ಮಹಾಗಂಡಾಂತರದ್ದಿತ್ತು. ಅಲ್ಲಿ ಜರ್ಮನ್ ಯೋಧನು ತನ್ನ 1940ರ ನರಸಿಂಹಾವತರವನ್ನೇ ಪ್ರದರ್ಶಿಸಿದನೆನ್ನಬಹುದು. ಜರ್ಮನರ ಟೈಗರ್ ಟೇಂಕುಗಳು, ವಿಮಾನಗಳು, 5ನೇ ಸೇನಾ ಗೋಡೆಯಲ್ಲಿ ಬಿರುಕು ಬಿಡಿಸಿ ಕೆಲವು ಸ್ಥಳವನ್ನಾಕ್ರಮಿಸಿಕೊಂಡೊಡನೆ ಇಂಗ್ಲಾಂಡು ಅಮೇರಿಕಗಳ ಪತ್ರಿಕೆಗಳು, ಪ್ರಮುಖರು ತೋರಿಸಿದ ಭಯಾತುರಗಳು, ಜರ್ಮನರ ಕುರಿತು ಮಿತ್ರರ ಕರುಳಿಗಂಟಿರುವ ಭಯದ ನಿದರ್ಶನಗಳಾಗಿದ್ದುವು. ಆದರೆ ಜನರಲ್ ಈಸೆನ್ಹೋವರರ ಅಸಾಧಾರಣ ಸೇನಾನಿತ್ವವು ಮಹಾಪತ್ತೊಂದನ್ನು ತಪ್ಪಿಸಿಬಿಟ್ಟಿತು. ಸಾಲೆರ್ನೋದಿಂದ ಸುಮಾರು 80ಮೈಲು ದೂರದಲ್ಲಿದ್ದ ಎಂಟನೇ ಸೇನೆಯನ್ನು ವಾಯುವೇಗದಿಂದ ಒಂದೆರಡು ದಿನಗಳಲ್ಲೇ ಅತ್ತ ಸಾಗಿಸಿ, ಆ ತನಕ ಅಡಿಗಾಲು ತಪ್ಪಿಸಿದ್ದರೂ ತಡೆದು ನಿಂತಿದ್ದ 5ನೇ ಸೇನೆಗೆ ಬೆಂಬಲವಾಗಿ ತಂದರು; ವಿಚಕ್ಷಣ ರಣವಿದ್ಯೆಯನ್ನು ಪ್ರದರ್ಶಿಸಿದರು. ತತ್ಪರಿಣಾಮವಾಗಿ ನಾಜೀ ಸೇನೆಯೀಗ ವ್ಯವಸ್ಥಿತವಾಗಿ ಸಾಲೆರ್ನೋದಿಂದ ಹಿಂದೆಗೆದಿದೆ. ಮಿತ್ರರ 5 ಮತ್ತು 8ನೇ ಸೇನೆಗಳು ಪುನಃ ಧಾಳಿಗಾರಂಭಿಸಿವೆ. ಇಟೆಲಿಯಲ್ಲಿ ಕಾಲೂರಿದ ಹದಿನೈದೇ ದಿನಗಳೊಳಗೆ ದಕ್ಷಿಣ ಇಟೆಲಿಯ ಮೂರು ಪ್ರಾಂತ್ಯಗಳು ಸಂಪೂರ್ಣವಾಗಿ ಮಿತ್ರರ ವಶವಾಗಿವೆಯಲ್ಲದೆ, ಹಲವು ಉಪಯುಕ್ತ ವಿಮಾನ ನಿಲ್ದಾಣಗಳು ದೊರೆತಿವೆ. ಆದರೆ ಮುಂದೆ ಕ್ಷಣ ಕ್ಷಣಕ್ಕೂ ಇಟೆಲಿಯಲ್ಲಿ ಸಾಲೆರ್ನೋದ ಘಟನೆಯನ್ನು ಕಣ್ಣ ಮುಂದಿಟ್ಟುಕೊಂಡೇ ಮಿತ್ರರು ಮುಂದೊತ್ತ ಬೇಕಾದೀತು; ಮಿತ್ರರ ಸೇನಾದೌರ್ಬಲ್ಯದ ಕುರಿತು ಏನಾದರೂ ತಪ್ಪಭಿಪ್ರಾಯವು ಹಿಟ್ಲರರಲ್ಲಿದ್ದುದಿದ್ದರೆ, ಸಾಲೆರ್ನೋ ಯುದ್ಧಾನಂತರ ಅವರೂ ಅದನ್ನು ತಿದ್ದಿಕೊಂಡಿರಬಹುದು.

ಮುಸಲನಿಯ ಪತನ ಪುರಾಣ.

ಜಂಭಾಗ್ರೇಸರ ಮುಸಲನಿಯ ಪತನ, ಹಾಗೂ ಪುನರುತ್ಥಾನ, ಇವೆರಡೂ ಬಹಳ ಸ್ವಾರಸ್ಯವಾದ ಕಥೆಗಳು. ಕೌರವ ಪಾಳಯದೊಳಗಿನ ಕಚ್ಚಾಟ ಸದ್ಯರಿವಾದವುಗಳು. ಫುರರ್-ಡ್ಯೂಸರು ಕೊನೆಯಬಾರಿ ಇಟೆಲಿನಗರವೊಂದರಲ್ಲಿ ಒಟ್ಟಾದಾಗ ಬಿರುಸಿನ ವಾಗ್ಯುದ್ಧ ಮಾಡಿಕೊಂಡರಂತೆ. ಇಟೆಲಿಗೆ ಸಾಕಷ್ಟು ಸಹಾಯಕೊಡಬೇಕೆಂದು ಮುಸಲನಿ; ಅವಿಶ್ವಾಸ ದುರ್ಬಲ ಇಟೆಲಿಯಾನರನ್ನು ನಂಬಲಾರೆ. ಸಹಾಯವಾಗಿ ಯುದ್ಧಸೂತ್ರ ಚಾಲುಮಾಡಲು ಜರ್ಮನರನ್ನು ಮಾತ್ರ ಕೊಡುವೆನೆಂದು ಹಿಟ್ಲರ್. ಮಿತ್ರನನ್ನೊಲಿಸಲಾರದೆ ಮರಳಿದ ಮುಸಲನಿ ಫೇಸಿಸ್ಟ್ ಹಿರಿ ಸಮಿತಿಯ ಸಭೆ ಕರೆದು ಸಂಗತಿಯನ್ನೆಲ್ಲಾ ನಿವೇದಿಸಿಕೊಂಡ. ಹಿಟ್ಲರ್ ಮುಸಲನಿ ಭೇಟಿಯ ಸಮಯದಲ್ಲಿ ಹಾಜರಿದ್ದ ಜನರಲ್ ಎಂಬ್ರೋಜಿಯೋ ಎಂಬವ 'ಅವರು ಜುಟ್ಟಿಮಾತನಾಡಿಕೊಂಡರು. ಮುಸಲನಿಯ ತಾಳ್ಮೆ ತಪ್ಪಿದೆ' ಎಂದು ಎಲ್ಲಾ ಗುಟ್ಟನ್ನೂ ಅರಸರಿಗೂ ಬೊಡೋಗ್ಲಿಯೋವರಿಗೂ ಹೇಳಿದ. ಕೆಲವು ಫೇಸಿಸ್ಟ್ ನಾಯಕರು 'ಮುಸಲನಿಯನ್ನು ಡಿಸ್‌ಮಿಸ್ ಮಾಡಿ' ಎಂದು ಅರಸರನ್ನು ಕೇಳಿಕೊಂಡಾಗ 'ನಾನೇ ಅದನ್ನು ಮಾಡಲಾರೆ; ನಿಮ್ಮ ಫೇಸಿಸ್ಟ್ ಗ್ರೇಂಡ್ ಕೌನ್ಸಿಲ್ ಮಾಡಬೇಕಾದ ಕೆಲಸವದು' ಎಂದು ರಾಜಾ ಇಮನ್ಯುಯೇಲರು ಹೇಳಿದ್ದರು. ಅಂತೆಯೇ ಬೋಡೋಗ್ಲಿಯೋರವರನ್ನು ತಯಾರಿಸಿಯೂ ಇಟ್ಟರು. ಹೀಗೆ ಅಲಂಕಾರ ಕೋಣೆಯಲ್ಲಿ ಹೊಸಪಾತ್ರ ತಯಾರಾಗಿತ್ತು; ರಂಗದ ಮುಸಲನಿಯ ಪಾತ್ರ ಮುಕ್ತಾಯ ಕಾರ್ಯ ಫೇಸಿಸ್ಟ್ ಸಮಿತಿಯಲ್ಲಿ ನಡೆಯಿತು. ಇಟೆಲಿ ಯುದ್ಧನಡೆಸಲು ತನಗೆ ಬೇಕಾದ ವಿಶೇಷಾಧಿಕಾರಗಳನ್ನು ಮುಸಲನಿ ಮುಂದಿಟ್ಟಾಗ ಫೇಸಿಸ್ಟ್ ಪ್ರಮುಖರು ವಿರುದ್ಧ ಮಾತಾಡಿ, ಗೊಂದಲವೆದ್ದು, ಅನುಕಾರ ವಪಾಳಯವಾಗಿ ಹೋಯಿತು. ಸಿಸಿಲಿಯಲ್ಲಿ ಇಟೆಲಿಯೋಧನ ದೌರ್ಬಲ್ಯವನ್ನು ಮುಸಲನಿ ಟೀಕಿಸಿದಾಗ, ಓರ್ವ ನಿಶ್ಶಕ್ತ ಮುದಿ ಸೇನಾನಿ ಹಾರಿಬಿದ್ದು, ರಿವೋಲ್ವರನ್ನು ಮುಸಲನಿಯ ಮುಖದಿದಿರು ಹಿಡಿದು ಘರ್ಜಿಸಿದ "ಇಟೆಲಿಯ ಸೈನಿಕರಿಗವ ಮಾಡಿದ್ದಿ; ನಿನ್ನನ್ನು ಸುಟ್ಟು ಹಾಕಿಯೇನು" ಡ್ಯೂಸ್ ಈ ಹಳೇ ಯೋಧನು ರಣರಂಗಗಳಲ್ಲಿ ತೋರಿಸಿದ್ದ ಹೇಡಿತನವನ್ನೇ ಹಂಗಿಸಿ ಅವನ ಬಾಯಿ ಮುಚ್ಚಿಸಿಬಿಟ್ಟ. ಈ ಮಧ್ಯೆ ಬೇಸಾಯ ಮಂತ್ರಿ ಗೇಸುಸೋಂಕಿತೋ, ಅವರು ಸ್ಮೃತಿ ತಪ್ಪಿಬಿದ್ದರು; ಅವರನ್ನು ಉಪಚರಿಸುವದರಲ್ಲಿ ಎಲ್ಲರೂ ತುಸು ಹೊತ್ತು ಜಗಳ ನಿಲ್ಲಿಸಿದರಾದರೂ, ಅವರು ಚೇತರಿಸಿದೊಡನೆ ಪುನಃ ತಲೆತಗಾದೆಗಾರಂಭ! ಅದೇ ಬೇಸಾಯ ಮಂತ್ರಿ ಮತ್ತೊಮ್ಮೆ ಮೂರ್ಛೆಹೋದಾಗ ಅವರ ಮುಖನೋಡುವವರಿರಲಿಲ್ಲ; ಸ್ಮೃತಿ ತಪ್ಪಿದವರು ತಾನೇ ಚೇತನ ಸಂಪಾದಿಸಿಕೊಂಡು ಕಣ್ಣೀರಿಡುತ್ತಾ ಅಲ್ಲಿಂದ ಹೊರಟು ಹೋದರು. ಮುಸಲನಿಯ ತಾಳ್ಮೆಯೆಲ್ಲಾ ಬರಿದಾಯಿತು; ಉದ್ರೇಕವೇರಿತು. 'ಈತ ಬರುವಾಗ ನನಗೆ ದ್ರೋಹವನ್ನು ಕಟ್ಟಿಕೊಂಡೇ ಬಂದಿದ್ದ'- ಎಂದು ತನ್ನ ಅಳಿಯ ಕೌಂಟ್ ಸಿಯಾನೋಗಂದರು. ಸೀನರ್ ಗ್ರಾಂಡಿಯ ಮುಖದಿದಿರು ಕೈತೋರಿಸುತ್ತಾ "ಕೌಂಟ್ ಪದವಿ ಕೊಡಿ ಎನ್ನುತ್ತಾ ನೀನಲ್ಲವೇ ಇಪ್ಪತ್ತು ಬಾರಿ ನನ್ನ ಬಳಿ ಬಂದವ?"-ಎಂದು ಹಂಗಿಸಿದರು. 'ಇಲ್ಲಿಗೆಲ್ಲಾ ಮುಗಿದಂತೆಯೇ' ಎಂದು ಒಬ್ಬೊಬ್ಬರೇ ಸಭೆಯಿಂದ ನುಸುಳಲಿಕ್ಕಾರಂಭ. 'ನಮ್ಮನ್ನು ತೀರಿಸಿಬಿಡುವ ಯತ್ನ ನಡೆಯುತ್ತಿದೆ' ಎಂದು ಕೆಲವರು ಚೀಟಿ ಮುಖೇನ ಮಾತಾಡಿಕೊಂಡು ಹೊರಬಿದ್ದರು; ಇನ್ನು ಕೆಲವರು ಕಣ್ಣನ್ನೆ ಕೈಸನ್ನೆ ಮಾಡಿಕೊಂಡು ಕಿರುಬಾಗಿಲುಗಳಿಂದ ಪರಾರಿಯಾದರು. ಆ ಮೇಲೆ ಅರಸರಿಂದ ಮುಸಲನಿಗೆ ಕರೆಬಂತು. ಏನೂ ಅರಿಯದವರಂತೆ ರಾಜರು ಸಭೆಯ ವೃತ್ತಾಂತ ಕೇಳಿದಾಗ ಮುಸಲನಿ ಸುಳ್ಳು ಸುಳ್ಳೇ ವರದಿಮಾಡಿದ. ರಾಜರು ಮಧ್ಯೆ ಹಲ್ಲೇ ಬಾಯಿಹಾಕಿ 'ಸಾಕು. ನಮಗೆ ಬೇರೊಬ್ಬ ಮುಸಲನಿಯಿದ್ದಾನೆ. ನಿನ್ನ ಅನಂತರದವನನ್ನು ನೇಮಿಸಿಯಾಗಿದೆ-ಮಾರ್ಶಲ್ ಬೊಡೊಗ್ಲಿಯೋ. ಅವನಿಷ್ಟರಲ್ಲೇ ಅಧಿಕಾರವಹಿಸಿದ್ದಾನೆ. ನೀನು ಸ್ವತಃ ಅವನ ವಶವಾಗಬೇಕು' ಎಂದು ಗಂಭೀರವಾಗಿ ಆಜ್ಞಾಪಿಸಿದಾಗ ಪುನಃ ಮುಸಲನಿಯ ತಾಳ್ಮೆ ತಪ್ಪಿತು. ಅವ ಮುಷ್ಟಿಯೆತ್ತಿ ತಮ್ಮನ್ನು, ಸೈನಿಕರನ್ನು ಮತ್ತು ಎಲ್ಲರನ್ನೂ ವಿರೋಧಿಸುವ ಶಕ್ತಿ ಇನ್ನೂ ನನ್ನಲ್ಲಿದೆ" ಎಂದು ಘರ್ಜಿಸುತ್ತಾ ಹೊರಬಿದ್ದ ನಾಲ್ಕು ಮಾರು ಹೋಗುವುದರೊಳಗೆ ಬೋಡೊಗ್ಲಿಯೋನ ಸೈನಿಕರವನನ್ನು ಕೈದುಮಾಡಿಕೊಂಡೊಯ್ದರು.

ಮುಸಲನಿಯ ಪುನರುತ್ಥಾನಕತೆ.

ಈ ಕೈದಿಯನ್ನು ಪ್ರಥಮತಃ ಇಟೆಲಿಯಲ್ಲೇ ಬಂಧನದಲ್ಲಿಟ್ಟರಾದರೂ ಮುಸಲನಿ ತಪ್ಪಿಸಿಕೊಳ್ಳಲು ಯತ್ನಿಸಿದ. ಇಟೆಲಿಯ ನೆಲದಲ್ಲಿದ್ದರೆ ಇವ ಕುಣಿಯುತ್ತಾನೆಂದು ಬಹಳ ಗುಟ್ಟಿನಿಂದ ಸೈಂಟ್ ಮಡ್ಡಾಲೇನಾ ದ್ವೀಪಕ್ಕೊಯ್ದು 9000 ಅಡಿ ಎತ್ತರದ ಒಂದು ಜೈಲುಕೋಣೆಯಂತಹ ಗೃಹದಲ್ಲಿ ನೂಕಿಬಿಟ್ಟರು. ಬರಿದಾದ ಗೋಡೆಗಳು ಒಳಗೊಂದು ಹರಕು ಮುರುಕು ಮಂಚ, ಒಂದು ಮೇಜು ಮತ್ತು ಕೆಲವು ಕುರ್ಚಿಗಳು-ಡ್ಯೂಸನ ಆ ಕಾಲದ ಅರಮನೆಯೆಂದರೆ ಇಷ್ಟೆ! ಈ ಕತ್ತಲು ಕೋಣೆಯನ್ನು ಜರ್ಮನರು ಗೊತ್ತು ಹಚ್ಚಿದ ಬಗೆ ಹೇಗೋ! ಮಿತ್ರರ ಮುಖ್ಯ ಯುದ್ಧಗುರಿಗಳಲ್ಲೊಂದಾದ, ಯುದ್ಧಕೇಡಿ ಮುಸಲನಿಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವ ಕಾರ್ಯವನ್ನು, ಬೊಡೊಗ್ಲಿಯೋನೊಡನೆ ಗುಪ್ತ ಒಡಂಬಡಿಕೆಯಾದ ಮೇಲಾದರೂ ಮಾಡಿಲ್ಲವೇಕೋ! ನಾಜೀ ಕೊಡೆ ವೈಮಾನಿಕರು ಆ ದ್ವೀಪದಲ್ಲಿಳಿದು, ಅವರ ನಾಯಕನು ಮುಸಲನಿಯ ಕೋಣೆಗೆ ನುಗ್ಗಿದಾಗ, ಮುಸಲನಿ ಕೋಣೆಯ ನಡುವೆ ಸ್ವಾಗತಕ್ಕಾಗಿ ಕೈಯೆತ್ತಿ ನಿಂತಿದ್ದನಂತೆ. ಇಟೆಲಿ ಶರಣಾದ ವಾರ್ತೆಕೇಳಿ ಅವ ಉದ್ವೇಗದಿಂದೊಮ್ಮೆ ಹುಚ್ಚನಾಗಿ ಹೋದನಂತೆ. 'ನನ್ನ ಬಿಡುಗಡೆಯಿಂದಾಗಿ ಇಟೆಲಿ ಜನತೆ ರಕ್ಷಿಸಲ್ಪಟ್ಟಿತು'-ಎಂಬುದೇ ಅವನ ಪ್ರಥಮೋದ್ಗಾರವಂತೆ. ತನ್ನ ರಕ್ಷಕನ ಕೈಯನ್ನು ಆನಂದೋದ್ರೇಕದಿಂದ ಚುಂಬಿಸಿ 'ಹಿಟ್ಲರ್ ತನ್ನ ಕೈ ಬಿಡಲಾರನೆಂದು ನನಗೆ ಮೊದಲೇ ಗೊತ್ತು ಎಂದನಂತೆ. ಇತ್ತೀಚೆಗೆ ಕೌಂಟ್ ಸಿಯಾನೋ ಕೂಡಾ ನಾಜಿಗಳಿಂದ ರಕ್ಷಿಸಲ್ಪಟ್ಟಿದ್ದಾನೆ. ಮುಸಲನಿ ಪಕ್ಷ ಸ್ಥಾಪಿಸಲ್ಪಟ್ಟಿದೆ. ಇಟೆಲಿ ರಾಜ ಮತ್ತು ಬೊಡೊಗ್ಲಿಯೋ ಸಿಸಿಲಿಗೋಡಿಹೋಗಿದ್ದಾರೆ. ಇಲ್ಲವಾದರೆ ತಮ್ಮ ಇತರ ಮಂತ್ರಿಗಳು ಹಾಗೂ ಪ್ರಮುಖ ಸೇನಾನಿಯಂತೆ ಇಷ್ಟರಲ್ಲೇ ನಾಜಿಗಳ ವಶವಾಗಬೇಕಾಗುತ್ತಿತ್ತು. ಇದೀಗ ಕಾಲಮಹಿಮೆ!

'ಕಿರಿಯರ ಪ್ರಪಂಚ'ದ ತೊದಲ್ನುಡಿ ಗ್ರಂಥಮಾಲೆ ಸುಡಿ ೧೮

ಭಾರತೀಯ ಕತೆಗಳು

ಅಸಾಧಾರಣ ವಾಗ್ಮಿಗಳೂ ಪ್ರಸಿದ್ಧ ಗ್ರಂಥಕಾರರೂ ಆದ **ಶ್ರೀ. ಎ. ಎಸ್. ಪಂಚಾಪಕೇಶ ಐಯ್ಯರ್**, ಎಂ. ಎ., ಐ. ಸಿ. ಎಸ್., ಬಾರ್ ಎಟ್ ಲಾ., ಎಫ್. ಆರ್. ಎಸ್. ಎಲ್., ಇವರು ಇಂಗ್ಲಿಷಿನಲ್ಲಿ ಬರೆದ **Tales of Ind** ಎಂಬ ಕಥಾವಳಿಯ ಕನ್ನಡ ಅನುವಾದ. ನುರಿತ ಬರಹಗಾರರಾದ **ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರೇ** ಅನುವಾದಕರು.

೧೫೨ ಕತೆಗಳ ಈ ಪುಸ್ತಕದ ಬೆಲೆ ಬರೇ ೦—೧೪—೦

ಒಂದು ರೂಪಾಯಿ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ,

ರಿಜಿಸ್ಟರ್ಡ್ ಪಬ್ಲಿಷರ್ಸ್

ಉಡುಪಿ,

ಏಜಂಟರು:-ಸ್ಕೂಲ್ ಬುಕ್ ಕಂಪೆನಿ, ಮಂಗಳೂರು; ಯು. ಆರ್. ಶೆಣೈ & ಸನ್ಸ್, ಮಂಗಳೂರು; ಸಾಹಿತ್ಯ ಭಂಡಾರ, ಹುಬ್ಬಳ್ಳಿ; ಮನೋಹರ ಗ್ರಂಥ ಭಂಡಾರ, ಧಾರವಾಡ.

ತಾರುಣ್ಯ

ಕೊಟ್ಟು, ವೀರ್ಯಸ್ತಂಭನೆ ಮಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟುಮಾಡಲು ರಮಣಿ ವಿಲಾಸಿನಿ ಅತ್ಯುತ್ತಮ ಔಷಧಿ. ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ,
184 ಚೈನಾ ಬಜಾರ್ ರೋಡ್,
ಮದ್ರಾಸು.

ಪುತ್ತೂರು ಏಜಂಟರು:—**ಪೈ ಫಾರ್ಮಸಿ**

The Canara Banking Corporation Limited.

(Incorporated in British India with limited Liability)

ESTD: 1906.

Head Office: **UDIPI**, S. Kanara.

(Branches & Agencies in all principal cities of India)

Authorised capital	Rs. 25.00.000/-
Issued & Subscribed	Rs. 16.00.000/-
Paid up capital	Rs. 10.06.000/-
Reserves	Rs. 3.85.000/-

Advances are made against approved securities and bills purchased or collected at most favourable rates. For further particulars please apply to the nearest Branch.

ಉಡುಪಿ, ಗುರುವಾರ, ೨೩-೯-೧೯೪೩

ಬಂಗಾಳದ ಹಸಿವು.

ಇಂದು ಇಡೀ ಬಂಗಾಳವನ್ನು ಹಸಿವು ಆಕ್ರಮಿಸಿಕೊಂಡು ಆಳುತ್ತಿದೆ! ಜಪಾನ ರಾಕ್ರಮಣದ ಸಂಭವವನ್ನು ಎಂದೋ ಮನಗಂಡು ಯೋಗ್ಯ ರಕ್ಷಣೋಪಾಯ ಕೈಗೊಳ್ಳುವ ಅಧಿಕಾರಿಗಳು ಬಂಗಾಳಕ್ಕಿದ್ದರು; ಈ ವಿರೋಧಿಯ ಆಗಮನವನ್ನರುಹುವವರಾಗಲೀ, ಆದರಾಕ್ರಮಣವನ್ನು ಜಯಶೀಲವಾಗಿ ಪ್ರತಿಭಟಿಸುವವರಾಗಲೀ ಇರಲೂ ಇಲ್ಲ-ಈಗ ಇರುವದೂ ಇಲ್ಲ. ಹಸಿವು,ಆಳಲ್ಪಡುವವರ ವೈರಿಹೊರತು ಆಳುವವರ ವೈರಿಯಲ್ಲವೇನೋ! ಇದೀಗ ಹಿಂದುಸ್ಥಾನದ ಪರಿಸ್ಥಿತಿ; ಎರಡು ಶತಮಾನಗಳಿಂದ ಬ್ರಿಟಿಷ್ ಸಾಮ್ರಾಜ್ಯದ ಆರಾಧನೆ ನಡಿಸಿ ಹಿಂದೀಯರು ಪಡೆದಿರುವ ಪ್ರಸಾದ!

ಹಿಂದೀ ಯೋಧನ ಹೋರಾಟ ಶಕ್ತಿಯನ್ನು ಲೋರ್ಡ್‌ವೇವೆಲರ ಬಾಯಿಯಿಂದ ಕೇಳಿಯೇ ತಿಳಿಯ ಬೇಕೆಂಬಿಲ್ಲ-ಎಂಟೆಲೆಗಾಗಿ ನಾಯಿಯೊಡನೆ ಕಚ್ಚಾಟ, ಪರದಾಟದಲ್ಲಿರುವ ಬಂಗಾಳೀ ಹುಡುಗರ ಹೋರಾಟ ದೃಶ್ಯ ನಮ್ಮ ಕಣ್ಣಮುಂದಿದೆ! ಹೊಟ್ಟೆಬೆನ್ನುಗಳ ಏಕೀಕರಣ ಸಾಧಿಸಿ ಆಹಾರಕ್ಕಾಗಿ ಕೂಗಲೂ ಸ್ವರಬಾರದೆ ನಿರಾಶ ಜನರು ರಸ್ತೇ ಬದಿಗಳಲ್ಲಿ ಬಿದ್ದಿರುವ ದೃಶ್ಯ-ಎಳೆಯ ಮಗು ಹಾಲು ಅಥವಾ ಗಂಜೀ ನೀರಿಗಾಗಿ ತಾಯಿಯ ಎದೆ ಗೂಡಿಗೊಂಗಿಕೊಂಡು ಎಬ್ಬಿಸುವ ಕರುಳಕೂಗು-ಹಸುಗೂಸನ್ನು ನರಿ ಸೀಳಿತೆಂದ ಸುದ್ದಿ, ಇವೆಲ್ಲವನ್ನೂ ತಮ್ಮ ಸಾಮ್ರಾಜ್ಯದ ದ್ವಿತೀಯ ನಗರವೆಂದು ಬ್ರಿಟಿಷರಿಂದ ಬಿರುದು ಸಂಪಾದಿಸಿದ ಕಲ್ಕತ್ತದಲ್ಲೀಗ ಕಾಣಬಹುದು,ಕೇಳಬಹುದು! ಆಗೋಸ್ತು ಒಂದರಿಂದ ಸೆಪ್ಟಂಬರ್ ಹದಿನೈದರ ವರೆಗೆ, ಕಲ್ಕತ್ತ ನಗರವೊಂದರಲ್ಲೇ ಆಹಾರವಿಲ್ಲದೆ ಸತ್ತು ಸಂಸ್ಕಾರಕ್ಕೂ ಗಣನೆಗೂ ದೊರೆತ ಶವಗಳು 2107. ಆಗೋಸ್ತು 16ರಿಂದ ಸೆಪ್ಟಂಬರ್ 16ರ ವರೆಗೆ ಹಸಿವು ಮೂರ್ಛೆಗಾಗಿ ಆಸ್ಪತ್ರೆ ಪ್ರವೇಶಿಸಿದವರು 3583. ಇದು ಕಲ್ಕತ್ತಾ ನಗರವೊಂದರ-ಅದರಲ್ಲೂ ಗಣನೆಮಾಡಲು ದೊರೆತ-ಸಂಖ್ಯೆ ಮಾತ್ರ. ಇನ್ನು ಇಡೀ ಬಂಗಾಳದಲ್ಲಿ ಆಹಾರವಿಲ್ಲದೆ ಸತ್ತವರ-ಸಾಯುತ್ತಿರುವವರ-ಸಾಯಲಿರುವವರ ಸಂಖ್ಯೆ ಎಷ್ಟೋ! ಬದ್ವಾನ್ ನಗರದಲ್ಲಿ ಸರಾಸರಿ ದಿನಕ್ಕಿಪ್ಪತ್ತು, ಇಪ್ಪತ್ತೈದರಂತೆ ಜನರು ಸಾಯುತ್ತಿದ್ದಾರೆ ಎಂದು ಅಲ್ಲಿಯ ಸದಸ್ಯರು ಬಂಗಾಳಾ ಎಸೆಂಬ್ಲಿಯ ಇದೇ ತಾ. 17ರ ಅಧಿವೇಶನದಲಂದಿದ್ದಾರೆ. ಹಿಂದೆ 'ಬಂಗಾಳದ ಕಣಜ' ಎಂದು ಹೆಸರಾಗಿದ್ದ ಬಾರಿಸಾಲ್ ಜಿಲ್ಲೆಯಲ್ಲಿ ಕೂಸುಗಳನ್ನೂ ಹುಡುಗರನ್ನೂ ಧಾನ್ಯಕ್ಕಾಗಿ ಮಾರುತ್ತಿದ್ದಾರೆ ಎಂದು ಮತ್ತೊಬ್ಬ ಸದಸ್ಯರ ವರದಿ. ಇಡೀ ಬಂಗಾಳದ ಸರ್ವ ಬೇಸಾಯಕ್ಷೇತ್ರಗಳನ್ನು ಹುಡುಕಿದರೂ ದಿನಕ್ಕಿನ್ನೊತ್ತು ಉಣ್ಣುವ ಒಬ್ಬನೇ ಒಬ್ಬ ದೊರೆಯಲಾರನೆಂದು ಮತ್ತೊಬ್ಬರು ಶಪಥಹಾಕಿ ನುಡಿದಿದ್ದಾರೆ; 'ಇದನ್ನು ಬರಗಾಲವೆನ್ನಿ. ಇನ್ನೇನು ಬೇಕಾದರೂ ಹೇಳಿ, ಅಂತೂ ಬಂಗಾಳದ ಸದ್ಯಸ್ಥಿತಿ ಚರಿತ್ರೆಯಲ್ಲಿ ಹಿಂದೆಂದೂ ಇದ್ದುದಿಲ್ಲ"-ಎಂದು ಆರ್ಥಿಕ ಮಂತ್ರಿ ಗೋಸ್ವಾಮಿಯವರು ಮೇಲಿನ ಹೇಳಿಕೆಗಳಿಗೊಂದು 'ಹೆಡ್ಡಿಂಗ್' ಕೊಟ್ಟಿದ್ದಾರೆ. ಅಜ್ಞಾನ, ಕ್ರೋಧಾಸೂಯೆಗಳು ಮನುಷ್ಯನನ್ನು ಪಶುಸಮಾನಗೊಳಿಸಬಹುದು; ಆದರೆ ಅವನನ್ನು ನಾಯಿನರಿಗಳಿಗಿಂತಲೂ ಕೀಳು ದರ್ಜೆಗೆ ದೂಡುವ ಶಕ್ತಿಯಿರುವದು ಹಸಿವೆಗೆ ಮಾತ್ರ. ಅನ್ನಕೋಶದಿಂದ ಸಲಿಂದ ಕರಟಿಹೋಗದಂತಹ ಸೊಂಪು ಮಾನುಷತ್ವಕ್ಕಿಲ್ಲ. ಡಾಕಾದಿಂದೊಂದು ವಾರ್ತೆಬಂದಿದೆ: ನಾರಾಯಣಗಂಜದ ಸಬ್ ಡಿವಿಜನಲ್ ಆಫೀಸರರು ಊಟಮಾಡಲು ಕುಳಿತಿದ್ದಾಗ ಹುಡುಗನೊಬ್ಬನು ಧಾವಿಸಿ ಬಂದು ಅವರ ತಟ್ಟೆ ಮತ್ತು ಕೈಯಲ್ಲಿದ್ದ ತಿಂಡಿಗಳನ್ನು ಕಸಗೊಂಡು ಓಡಿದನಂತೆ! ಇಂತಹ ಅವಸರಣಗಳಿಂದಾರಂಭಿಸಿ, ಎಂಜಲೆಲೆ, ಕಸದ ರಾಶಿಗಳಲ್ಲಿ ಅನ್ನದ ಅಗುಳನ್ನು ಹುಡುಕುವ ವರೆಗೂ ಬಂಗಾಳದಲ್ಲಿ ಅನ್ನಶೋಧ ನಡೆದಿದೆ! ಮಾನವತ್ವದ ಅಣುಮಾತ್ರವನ್ನೂ ಉಳಿಸದೆ ಹಸಿವು ದಾವಾನಲ ಹರಡಿದೆ!

ಇದರ ನಿವಾರಣಕ್ಕೆ ತಡೆಯಿಲ್ಲದೆ ಹೋಯಿತು-ಅನ್ನು ನಿವಾರಣೆಯೂ ಇಲ್ಲವೆ? ಈ ಸಂಬಂಧದ ಅಪವಾದವು, ಬಂಗಾಳಾ ಸರಕಾರದಿಂದ ಕೇಂದ್ರ ಸರಕಾರದ ಮೇಲೆ, ಕೇಂದ್ರ ಸರಕಾರದಿಂದ ಧಾನ್ಯ ದಾಸ್ತಾನಿ ... ರ ಮೇಲೆ ಹೊರಿಸಲ್ಪಟ್ಟು ಚೆಂಡಿನಾಟ ನಡೆಯುತ್ತಿದೆ ಎಂಬುದು ಎದೆಕರಗಿಸುವ ಈ ಸನ್ನಿವೇಶದಲ್ಲೂ ರಕ್ತ ಕುದಿಸುವ ಘಟನೆ! ಇಂತಹ ಪರಿಸ್ಥಿತಿಯಲ್ಲಿ ಬಂಗಾಳದಿಂದ ಸಾರ ಕಲಿಯಲಿಕ್ಕಿದೆ. ಹಿಂದೂದೇಶವು ಪ್ರತ್ಯಕ್ಷ ಯುದ್ಧ ಸಹಾಯ ಕೊಡುತ್ತಿದೆ ಎಂದು ಅಧಿಕಾರಿಗಳೇ ಅಂದಿದ್ದಾರೆ; ಯುದ್ಧಜನ್ಯ ಪರಿಸ್ಥಿತಿ ...

ದುರ್ಬೀನು

ಸಮುದ್ರಕ್ಕೆ ಕಂಠವೆಂಬುದಿಲ್ಲವಾದರೂ ಘೋಷಣೆಯಿದೆ. ಮಹಾಮನುಷ್ಯರಲ್ಲಿ ಪ್ರದರ್ಶನಾ ಬುದ್ಧಿಯಿಲ್ಲವಾದರೂ ಅವರ ಘನತಾ ಪ್ರದರ್ಶನವಾಗುತ್ತದೆ.

೦೦ ೦೦ ೦೦

ಒಂಟಿಗಾಲಲ್ಲಿ ನಿಲ್ಲುವವನಿಗೆ ಆಧಾರಕ್ಕೊಂದು ಬೇಕೇಬೇಕು; ಅರೆಮನಸ್ಸಿನ ಕಾರ್ಯಮಾಡುವವನಿಗೆ ಆಧಾರಕ್ಕೊಬ್ಬನು ಬೇಕೇಬೇಕು.

೦೦ ೦೦ ೦೦

ಸಂಘಮೂಲ, ಸಂಪತ್ತು ಮೂಲಗಳು ನದೀ ಮೂಲದಂತೆ-ಕಿರಿದು.

೦೦ ೦೦ ೦೦

ಹಾವು ಹೆಡೆಯರಳಿಸುವುದೂ ಮನುಷ್ಯನು ದೊಡ್ಡಮನಸ್ಸುಮಾಡುವದೂ ವಿಕಾಸವಲ್ಲ-ವಿನಾಶ.

೦೦ ೦೦ ೦೦

ಅಂಕೆಗೆ ಅಂಕೆಯನ್ನೇ ಕೂಡಿಸಬೇಕಲ್ಲದೆ ಅಂಕೆಗಕ್ಷರವನ್ನು ಕೂಡಿಸಲಾಗುವದಿಲ್ಲ; ಸಮಾನ ಮನೋವೃತ್ತಿಯವರೇ ಸನ್ನಿಕಲನವಾಗಬೇಕು ಹೊರತು ವಿರುದ್ಧಗಾಮಿಗಳಲ್ಲ.

೦೦ ೦೦ ೦೦

ಕಂಬಿದ ನೀರನ್ನು ತೀರ್ಥವೆಂದು ಕುಡಿಯುತ್ತಾರೆ; ಸಂಕಪಡಿಯ ನೀರನ್ನಲ್ಲ. ಮಹಾತ್ಮರ ಮಾತನ್ನು ಆಜ್ಞೆಯಾಗಿ ಗಣಿಸುತ್ತಾರೆ ಮಹಾಧನಿಕರ ಮಾತನ್ನಲ್ಲ.

೦೦ ೦೦ ೦೦

ಜೇಲಿ ಮತ್ತು ಕಾವಲು ಎರಡೂ ಇರಬೇಕಾದರೆ, ಎರಡರಲ್ಲೊಂದು ದುರ್ಬಲವಿರಬೇಕು; ಆತ್ಮೀಯತೆ ಮತ್ತು ಅತ್ಯುಪಚಾರ, ಎರಡೂ ಕಂಡು ಬಂದರೆ ಎರಡರಲ್ಲೊಂದು ಸುಳ್ಳಾಗಿರಬೇಕು.

೦೦ ೦೦ ೦೦

ಒಲೆಗೆ(ಕೆಂಡವನ್ನೂ)ಡಿದರೆ ಪ್ರಜ್ವಲಿಸೀತು; ಹಣತೇ ದೀಪಕ್ಕಿಟ್ಟರೆ ನಂದಿಹೋದೀತು. ಸ್ಫೂರ್ತಿಯನ್ನುತ್ತೇಜಿಸುವಾಗಲೂ ಈ ತಾರತಮ್ಯವರಿತಿರಬೇಕು.

೦೦ ೦೦ ೦೦

ಕೈಹಿಡಿದು ಕುಲುಕುವದು ಮೈತ್ರೀ ಸೂಚನೆ; ಕೈಹಿಡಿದೆಳೆಯುವದು ಜುಲುಮೆ. ಹೃದಯವನ್ನೂ ಹಾಗೇನೇ-ಉತ್ತೇಜಿಸದವ ಪ್ರೀತ, ಉದ್ರೇಕಿಸಿದವ ಪ್ರೇತ.

೦೦ ೦೦ ೦೦

ಎಲ್ಲಾ ಸದ್ಗುಣಗಳ ನಡುವೆ ಅಸೂಯೆಯೊಂದು ಹುಟ್ಟಿಕೊಂಡರೆ ಪುಷ್ಪೋದ್ಯಾನವೊಳಕ್ಕೆ ಪರಶುರಾಮ ಹೊಕ್ಕಂತೆ.

ವರ್ಗಸಿದ ಶ್ರೀಮಂತರ ಸಂಖ್ಯೆಯೂ ದೊಡ್ಡದೇ; ಈ ರೀತಿ ಒಂದೆಡೆ ಧನಕೋಶ ತುಂಬುತ್ತಾ ಹೋಗಬೇಕು-ಇನ್ನೊಂದೆಡೆ ಅನ್ನಕೋಶಕ್ಕೆ ಬೆಂಕಿ ಬೀಳಬೇಕು! ಈ ಪರಿಸ್ಥಿತಿಯಿಂದಾದರೂ ಸದ್ಯದ ರಾಜ್ಯವ್ಯವಸ್ಥೆ, ಆರ್ಥಿಕ ವ್ಯವಸ್ಥೆಯ ವಿಷಮತೆಯು ಸರ್ವರಿಗೂ ಮಂದಟ್ಟಾಗಲಿ; ಬಂಗಾಳದಿಂದ ಕಲಿತ ಪಾಠವು ಶಾಶ್ವತ ಸುಭಿಕ್ಷವ್ಯವಸ್ಥೆ ಸ್ಥಾಪಿಸಲ್ಪಡುವ ವರೆಗೂ ಪಠಿಸಲ್ಪಡಲಿ; ಪ್ರಕೃತ ದೇಶದ ಸರ್ವ ಕಡೆಗಳಲ್ಲಿಯೂ ಪ್ರಮುಖರಿಂದ ಪತ್ರಿಕೆಗಳಿಂದ ತೆರೆಯಲ್ಪಟ್ಟಿರುವ 'ಬಂಗಾಳಾ ಸಹಾಯ ನಿಧಿ'ಗಳಿಗೆ ಸರ್ವರೂ ಬಿಚ್ಚುಕೈಯಿಂದ ಸಹಾಯ ಮಾಡಲಿ-ಎನ್ನುತ್ತೇನೆ.

NOTICE.

In the Court of the District Munsif of Mangalore.

S, C, 299/43.

Between

I. S. Pinto, son of Pascal Pinto Kalpane of Attavar Village, Mangalore Town— —Pltf.

and

Rymond mendosa son of Anthoni mendosa, residing in Pilikumer of Pachanady village Mangalore Taluq. Deft.

To

The deft. abovenamed

Please take notice that the abovenamed Pltf has filed the above suit for recovery of 57-0-8 due under the demand pronote executed by the deft in favour of Pltf- for Rs. 50/- and that the said suit stands posted to 28-9-1943 for disposal. you may appear in porson or by pleader and file your defence if any on that date failing which the suit will be decreed exparte.

P D Souza, & L. C. Pais,

Mangalore, 20—9—43. Vakil for Pltf.

ನೋಟೀಸು.

ಮಂಗಳೂರು ದಿ. ಮು. ಕೋರ್ಟನಲ್ಲಿ.

R, E, P. 313/43R. E. A 725/43.

ಗಂಗಪ್ಪಿನ ಜೋಜಪ್ಪ-ಅರ್ಜಿದಾರರು.

ಮತ್ತು

ಏಟ್ಟಮ್ಮ ಹೆಂಗ್ಸು-ದೇವಪ್ಪರ ವಿಧವೆ. ಮಂಗಳೂರು ತಾಲ್ಲೂಕು ಕೊಡವೂರು ಗ್ರಾಮದ ಮಕ್ಕೆ ಮನೆ. ಎಂಬಲ್ಲಿರ್ವವರು. -ರೆಸ್ಪೊಂಡೆಂಟ್

ಮೇಲಿನ ಅರ್ಜಿದಾರರು ಡಿಕ್ರಿ ವಿಧಿ ಪ್ರಕಾರ ಜಪ್ತಿ ... ಯಾವ ಪ್ರತಿವಾದಿ ... ಬಗ್ಗೆ ... ಮಾಡಿದ ... ಸ್ಥಿರಾಸ್ತಿಯ ... ಸಲಿಕ್ಕೂ ... ಸೇಲ್ ... ಆಸ್ತಿಗೆ ಸಮರ್ಪಕ ಬಗ್ಗೆ ಮಾಡಿದ R. E. A. 725/43ನೇ ಅರ್ಜಿಯು ತಾ. 5-10-43ಕ್ಕೆ ಇಟ್ಟಿದೆ. ಅದಕ್ಕೇನಾದರೂ ಆಕ್ಷೇಪವಿದ್ದರೆ ಮೇಲಿನ ರೆಸ್ಪೊಂಡೆಂಟರು ಸದ್ರಿ 5-10-43ನೇ ದಿನ ಪೂರ್ವಾಹ್ನ 10½ಘಂಟೆಗೆ ಮೇಲಿನ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ಹೇಳಿಕೊಳ್ಳತಕ್ಕದ್ದೆಂದೂ ತಪ್ಪಿದ್ದಲ್ಲಿ ಅವರ ಗೈರ್ ಹಾಜರಿಯಲ್ಲಿ ಅದು ತೀರ್ಮಾನವಾಗುವದೆಂದೂ ಈ ಮೂಲಕ ತಿಳಿಸಲಾಗಿದೆ.

ಮಂಗಳೂರು. 15-9-43

K. R. Achar.

ಅರ್ಜಿದಾರರ ವಕೀಲ್.

ಮಂಗಳೂರು.

ಬ್ಯಾರಿ ಮತ್ತು ದ. ಕ. ಜಿಲ್ಲೆಗಳ ಯುದ್ಧ ಪ್ರಚಾರಕರ ರಿಫ್ರೆಶರ್ ಕ್ಲಾಸುಗಳು ಮಂಗಳೂರಲ್ಲಿ ತಾ. 15ರಲ್ಲಿ ಆರಂಭವಾಗಿ ತಾ. 21ರಲ್ಲಿ ಮುಕ್ತಾಯವಾಯಿತು. ಕೊನೆಯ ದಿನ ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಕಲೆಕ್ಟರರು ವಹಿಸಿದ್ದರು.

ಕಟಪಾಡಿ:- ಇಲ್ಲಿಯ ಶ್ರೀ- ವೆಂ- ಸ್ವಾ- ಹಾ[ಎ] ಶಾಲೆಯಲ್ಲಿ 'ಶಾಲಾ ಸ್ಥಾಪಕರ ದಿನಾಚರಣೆ' ಸಮಾರಂಭವು ತಾ 14-9 43ರಲ್ಲಿ ಶ್ರೀ ಪಿ. ನಾರಾಯಣ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ವ್ಯವಸ್ಥಾಪಕರು 1915ರಿಂದ ಇಂದಿನವರೆಗಿನ ಶಾಲಾ ಸಂಕ್ಷಿಪ್ತ ಇತಿಹಾಸವನ್ನು ಶಾಲೆಯ ಪ್ರಗತಿಗೆ ಕಾರಣರಾದ ಶಾಲಾ ಸ್ಥಾಪಕರ ಸೇವೆಯನ್ನು ವಿವರಿಸಿ ವರದಿಯನೋದಿದರು. ಬಳಿಕ ಶ್ರೀ ಕೆ- ಆರ್- ಭಟ್, ಎಮ್. ಎಲ್; ಎನ್. ಎ- ಹೆಗ್ಡೆ, ಬಿ. ಸೀತಾರಾಮ ಆಚಾರ್, ವಿದ್ವಾನ್-ಇವರ ಸಂದರ್ಭೋಚಿತ ಭಾಷಣಗಳಾದವು. ವಿದ್ಯಾರ್ಥಿಗಳಿಗೆ ಪಾರಿತೋಷಕ ವಿತರಣೆ, ಅಧ್ಯಕ್ಷರ ಭಾಷಣ, ಮಕ್ಕಳ ವಿವಿಧ ಚಟುವಟಿಕೆಗಳ ಪ್ರದರ್ಶನವಾಗಿ ಸಮಾರಂಭವು ಮುಕ್ತಾಯವಾಯಿತು.

CHAMPAE'S SNOW & CASTREX.

ನವ ಮುಸಲನಿಯ ಮೊದಲ ಘರ್ಜನೆ.

ಬಿಡುಗಡೆಹೊಂದಿದ ಮುಸಲನಿ ಇದೀಗ ಮೊದಲಬಾರಿ ತಾ 18ರಲ್ಲಿ ಇಟಲಿಯಾನರಿಗಿತ್ತ ಆಕಾಶವಾಣಿ ಭಾಷಣದ ಮುಖ್ಯಭಾಗ: "ಇಟೆಲಿಯಾನರೇ-ನ್ನನ್ನ ಪರಿಚಯ ನಿಮಗಾಗಬಹುದೆಂದು ನಂಬುತ್ತೇನೆ.. ನನ್ನ ಸಾಹಸ ಮಯೀ ಜೀವನದಲ್ಲಿ ಅತ್ಯಂತ ಹೀನ ಸಾಹಸನಡೆದ ಜುಲಾಯಿ ತಾ. 25ರ ಕುರಿತು ಹೇಳುತ್ತೇನೆ. ವಿಲ್ಲಾ ಸಾವೋಯ ಗೃಹದಲ್ಲಿ ರಾಜರೊಡನೆ ನನ್ನ ಸಂಭಾಷಣೆಯು 20 ಮಿನಿಟಿನೊಳಗೇನೇ ಮುಗಿಯಿತು. ಅವನು ಸಕಾರಣ ವಾದವಾವುದನ್ನೂ ಒಪ್ಪದ ಮನುಷ್ಯನಾಗಿದ್ದ. ಅವನು ಮೊದಲೇ ತನ್ನ ನಿರ್ಧಾರಮಾಡಿದ್ದ. ಮಂತ್ರಿಯೊಬ್ಬನ ರದ್ದತಿ, ಅಥವಾ ಸೇನಾನಿಗೆ ಭಂಗವೆಂಬುದು ಯುದ್ಧ ಅಥವಾ ಶಾಂತಿಕಾಲಗಳಲ್ಲಿ ನಡೆಯುವಂತಹದೇ. ಆದರೆ 20 ವರುಷಗಳಲ್ಲಿ ಅತ್ಯಂತ ನಿಷ್ಠೆಯಿಂದ ರಾಜಸೇವೆ ಮಾಡಿದವನೊಬ್ಬನನ್ನು, ರಾಜನ ಖಾಸಗೀ ಗೃಹದಲ್ಲೇ ದಸ್ತಗಿರಿಮಾಡಿದ ಇನ್ನೊಂದು ದಾಖಲೆ ಚರಿತ್ರೆಯಲ್ಲೇ ಇಲ್ಲ. ದಂಗೆಗಾರರಿಂದ ರಕ್ಷಿಸುವನೆಂದು ಹೇಳಿ, ನನ್ನನ್ನು ಜುಲುಮೆಯಿಂದ ಎಂಬ್ಯೂಲೆನ್ಸೊಂದರಲ್ಲಿ ತುರುಕಿಸಿ, ಎಂಜಿನು ಮುರಿಯುವಷ್ಟು ರಭಸದಿಂದ ಪೋಲಿಸ್ ಠಾಣೆಯೊಂದರಿಂದಿನ್ನೊಂದಕ್ಕೊಯ್ಯಲಾಯಿತು. ಪೋಂಜಿನಿಂದ ಪೋನ್ಸಕ್ಕೆ, ಪೋನ್ಸದಿಂದಾಲಾ ಮೆಡಲಾನಕ್ಕೆ ಲಾಮೆಡಲಾನಾದಿಂದ ಗ್ರೇನ್ ಸಾಸ್ಸೋವಿಗೆ ಚಲಾಯಿಸುತ್ತಿರುವಾಗಲೇ, ನನ್ನನ್ನು ವಿರೋಧಿಗಳ ವಶಕ್ಕೊಪ್ಪಿಸುವದಕ್ಕಾಗಿಯೇ ಈ ಹಂಚಿಕೆಯೆಂದು ನನಗೆ ಮನವರಿಕೆಯಾಯಿತು. ನನಗೆ ಹೊರ ಪ್ರಪಂಚದ ಸಂಬಂಧವಿರಲಿಲ್ಲವಾದರೂ ಫ್ಯುರಾರರಿಗೆ ನನ್ನ ಅದೃಷ್ಟದ ಅರಿವು ಮೊದಲಾಗಿ ಇರಲಿಲ್ಲವೆಂದು ಗ್ರಹಿಸಿಕೊಂಡೆ"-ಈ ನಡುವೆ, ತನ್ನ ಪರಿಶುದ್ಧ ಬಂಧುತ್ವದ ಭರವಸೆಯ ತಂತಿಯೊಂದು ಹಿಟ್ಲರಿಂದ ಬಂದುದನ್ನೂ, ನಾಜೀಯೋಧರು ಆಕಾಶ ಮೂಲಕ ಇಳಿದು ಐದೇ ಮಿನಿಟುಗಳಲ್ಲಿ ತನ್ನನ್ನು ಬಿಡಿಸಿದ ಚರಿತ್ರಾರ್ಹ ಘಟನೆಯನ್ನೂ ಮುಸಲನಿ ರೋಮಾಂಚಕರವಾಗಿ ವಿವರಿಸಿ, ಬೊಡೊಗ್ಲಿಯೋನ ವಿಶ್ವಾಸಘಾತಕತನವನ್ನು ಟೀಕಿಸಿ, ಇಟಲಿ ರಾಜನನ್ನು ತೀವ್ರವಾಗಿ ಖಂಡಿಸಿರುವರು "ಫೇಸಿಸಮ್ ರಾಜಸತ್ತೆಗೆ ದ್ರೋಹವಾಡಿದೆ.ವಾಡಲಿಲ್ಲ; ರಾಜಸತ್ತೆ ಫೇಸಿಸಮಿಗೆ ದ್ರೋಹ ತಪ್ಪದಿರಾವುದಾಗಿ ಇಂದು ಯಾವ ಇಟಲಿಯಾನನಿಗೂ ರಾಜಸತ್ತೆಯಲ್ಲಿ ವಿಶ್ವಾಸವಿಲ್ಲ. ಈ ದ್ರೋಹದಿಂದಾಗಿ ಅದು ಅಸ್ತಿತ್ವವನ್ನು ಕಳಕೊಂಡಿದೆ ಆದ್ದರಿಂದ ತನ್ನ ಈಗಿನ ಪಕ್ಷವು 'ರಿಪಬ್ಲಿಕನ್ ಫೇಸಿಸ್ಟ್ ಪಕ್ಷವಾಗಿದೆ' ಎಂದು ಘೋಷಿಸಿ ಕಪ್ಪಂಗಿ ಸ್ವಯಂಸೇವರೆಲ್ಲಾ ಜರ್ಮನಿ ಜಾಪಾನುಗಳ ಪಕ್ಷವಹಿಸಿ ಶಸ್ತ್ರಧಾರಿಗಳಾಗಬೇಕೆಂದು ಆಜ್ಞಾಪಿಸಿರುವರು. "ಇಟಲಿ ಶರಣಾಯಿತೆಂದು ವಿರೋಧಿ ಹರ್ಷೋತ್ಪ್ರೇಕ್ಷಕದಲ್ಲಿದ್ದಾನೆ; ವಿಜಯವು ಅವನ ಮುಷ್ಟಿಯೊಳಗಾಯಿತೆಂದು ಇದರ ಅರ್ಥವಲ್ಲ ನಮ್ಮ ಧೈರ್ಯ, ವಿಶ್ವಾಸ, ನಿರ್ಧಾರಗಳು ಇಟಲಿಗೆ ಹೊಸ ಭವಿಷ್ಯ ಮತ್ತು ಸೂರ್ಯನಡಿಯಲ್ಲಿ ಸುದೃಢ ಸ್ಥಾನ ದೊರಕಿಸಿಕೊಡಲಿವೆ. ಈ ಆಸೆಯಲ್ಲಿ ನೀವು ತಿಲಾ ಸದೃಶ ಭರವಸೆಯಿಡಬೇಕು. ಇಟಲಿ ಚಿರಾಯುವಾಗಲಿ! ನವ ಫೇಸಿಸ್ಟ್ ರಿಪಬ್ಲಿಕನ್ ಪಕ್ಷ ಚಿರಾಯುವಾಗಲಿ!' ಎಂದು ಮುಸಲನಿ ಘೋಷಿಸಿದ್ದಾರೆ.

ಸುದ್ದಿ ಸೂಚನೆ.

○ ಭಾವೀ ವೈಸರಾಯಿ ಲೋರ್ಡ್ ವೇವಲರು ಭಾರತದ ಆರ್ಥಿಕ ಅಶಾಂತಿ ನಿವಾರಣೆ, ಬಿಕ್ಕಟ್ಟು ಪರಿಹಾರದ ಕುರಿತು ಲಂಡನಿನ ಯಾತ್ರಾ ಸಂಘದಲ್ಲಿ ಮಾಡಿದ ಸೌಹಾರ್ದ್ಯಪರ ಭಾಷಣವು ಎಲ್ಲರಿಂದಲೂ ಶ್ಲಾಘಿಸಲ್ಪಟ್ಟಿದೆ.

○ ಲೇ ದ್ವೀಪವನ್ನು ಮಿತ್ರರು ಜಪಾನರಿಂದ ಅಪಹರಿಸಿದ್ದಾರೆ.

○ ಹಿಂದೀ ಸಮಸ್ಯಾ ನಿವಾರಣೆಗಾಗಿ ಅಮೇರಿಕ, ಇಂಗ್ಲಾಂಡಿನ ತಜ್ಞರು ಗುಪ್ತ ಹಂಚಿಕೆಯಲ್ಲಿರುವರೆಂದು ಊಹೆ.

○ ರಷ್ಯದಲ್ಲಿ ಕೆಂಪು ಸೇನೆಯು ಸ್ಮೋಲೆಂಸ್ಕ್ ಮತ್ತು ಕೀವ್ ಪ್ರಾಮುಖ್ಯ ನಗರಗಳ ಕಡೆಗೆ ಧಾಳಿಯಾರಂಭಿಸಿ ಪ್ರಾಮುಖ್ಯ ವಿಜಯಗಳನ್ನು ಪಡೆದಿರುವರು.

○ ಜಪಾನಿನ ಮುಖ್ಯ ಮಂತ್ರಿ ಟೋಜೋ ರಾಜೀನಾಮೆ ಕೊಡಬಹುದೆಂದು ಸುದ್ದಿ. ಅಂತರಿಕ ಜಗಳಾವಣೆಗಳಿಂದ ರಾಷ್ಟ್ರೀಯ ಧೋರಣೆ ಬಿಡಬಾರದೆಂದು ಜಾಪಾನರಿಗೆ ಸರಕಾರದ ಸರ ಎಚ್ಚರಿಕೆಯಾಗಿದೆ.

○ ರಶ್ಯಾ ಮತ್ತು ಇಂಗ್ಲಾಂಡು ಅಮೇರಿಕಗಳೊಳಗೆ ಕಾರ್ಯಕ್ರಮ ನಿರ್ಣಯದ ಕುರಿತು ಭಿನ್ನಾಭಿಪ್ರಾಯ ಒಂದುದೇ ತ್ರಿರಾಷ್ಟ್ರ ಪರಿಷತ್ತು ತಡವಾಗಲು ಕಾರಣವೆಂದು ಪ್ರಕಟವಾಗಿದೆ.

○ ಮಿ. ಚರ್ಚಿಲ್ಲರು ಲಂಡನಿಗೆ ಮರಳಿದ್ದಾರೆ.

TENDER NOTICE

Tenders of rates to reach the Assistant Director of Fisheries (Coast) on or before 15-10-1943 are invited for transporting salt bags from vessels or railway wagons and stacking them in the fishcuring yards and gollahs on the West Coast and for sundry other work. Details and terms of contract can be obtained form the Assistant Director of Fisheries(Coast)- West Hill.

D. D. Peter Devadas

Asst. Director of Fisheries (Coast)

West Hill, 9-9-1943.

ಪ್ರಕಟನೆ.

ಕಟಪಾಡಿ ಸರ್ಕಲಿನ ಮತದಾರರಲ್ಲಿ ಸವಿನಯ ವಿನಂತಿ.

ಈ ಬಾರಿ ನಡೆಯಲಿರುವ ಕಟಪಾಡಿ ಸರ್ಕಲಿನ ಚುನಾವಣೆಯಲ್ಲಿ ನಾನು ಒಬ್ಬ ಉಮೇದ್ವಾರನಾಗಿರುವೆ. ನಮ್ಮ ಜಿಲ್ಲೆಯ ಬೇರೆಬೇರೆ ಸ್ಥಳಗಳಲ್ಲಿ ಕೂಲಿಕಾರರ ಕಡೆಯಿಂದ ನನ್ನ ಕೈಲಾದಷ್ಟು ಜನತಾಸೇವೆಯನ್ನು ಮಾಡಿರುವೆನಲ್ಲದೆ, ಜಿಲ್ಲಾ ಅಸಿಸ್ಟಾಂಟ್ ಸ್ಕೌಟ್ ಕಮಿಶನರನಾಗಿಯೂ ನನ್ನ ಕೈಲಾದ ಸೇವೆಯನ್ನು ಜನತೆಗೆ ಸಲ್ಲಿಸುತ್ತಿರುವೆ. ಜಿಲ್ಲಾ ಬೋರ್ಡಿನಲ್ಲೂ ಕೂಡಾ ನನ್ನ ಕೈಲಾದಷ್ಟು ಜನತಾಸೇವೆಯನ್ನು ಮಾಡಬೇಕೆಂದಿರುವೆನಾದುದರಿಂದ ಈ ಬಾರಿಯ ಚುನಾವಣೆಯಲ್ಲಿ ನಿಮ್ಮ ಮತವನ್ನು ನನಗೇನೇ ಕೊಟ್ಟು ಪ್ರೋತ್ಸಾಹಿಸಬೇಕಾಗಿ ಅಪೇಕ್ಷಿಸುತ್ತೇನೆ.

ಕುಂಜೂರು ರಾಮಚಂದ್ರ ರಾವ್,

In the court of the District Munsif of Mangalore.

S. C. No. 380/1943.

Between

C. Lokaya Naika. —Plaintiff.

Aithappa Shetty. —Defendant

To

The Defendant Aithappa Shetty, son of Ramappa Shetty and residing at Kulai village, Mangalore taluk.

Please take notice that the above suit has been filed against you for the recovery of Rs 268—3—7 being the arrears of rent and interest thereon, with future interest and costs of suit and the suit stands posted to 28—9—43 at 11 A. M. in the above Court for final disposal. You may appear in person or pleader and contest the suit or else it will be decided exparte

(By order of Court).

A. Shanker Alva,

Vakil for Plaintiff.

Dated 17-9-1943, Mangalore.

Degrees: Books: Medicines

Free H. L. M. S. M. B. H. M. D, etc. Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp:—

Principal Indian Homeopathi Institute & Society (Govt. Regd)

P.O. MAHUVA (Kathiawar Dt. India.)

Sidha-Kalpa Kavach (Regd.)

No 3 Rs 2, No. 2 Rs 4 No. 1 Rs. 7. Special Rs. 10, Extra Special Rs. 17 for ove marriage health, wealth. Ask any six questions with M. O. Re. 1/4 and get correct answers by returnpost Life reading Rs.10 No V.P.P.SendM.O,Free. Samplets

Prof. Dr. N. H Chhatbar.

P. O. MAHUVA (Kathiawar India.)

Sri Ramakirshna Theatre Ltd.

UDIPI

Notice is hereby given that the register of Members and Transfer Books of the Company will remain closed from Wednesday the 13th october 1943 to Tuesday the 26th october 1943 both days inclusive

(By order of the Board)

S. R. Bldgs. Udipi 23-9-43

Sd. **A. Janardhana Alse.**

Managing Director.

ಶುಭ!! **ಸೆಂಟ್ರಲ್ ಕೆಫೆ** ಶುಭ!!

ಶ್ರೀನಿವಾಸ ಬಿಲ್ಡಿಂಗ್ಸ್, ಹೆಡ್ ಪೋಸ್ಟಾಫೀಸ್ ಸರ್ಕಲ್, ಶಿವಮೊಗ್ಗ.

ಪ್ರಯಾಣಿಕರಿಗೆ ಉಳಿದುಕೊಳ್ಳಲು ಸ್ಥಳಾನುಕೂಲ ಏರ್ಪಡಿಸಿರುತ್ತೆ. ಸಕಾಲದಲ್ಲಿ ಉತ್ತಮವಾದ ಊಟ, ಕಾಫಿ ಮತ್ತು ಹಸನಾದ ತುಪ್ಪದಲ್ಲಿ ತಯಾರಿಸಿದ ತಿಂಡಿ ದೊರೆಯುತ್ತೆ.

ಈ ಸ್ಥಳವು ರೈಲ್ವೆಸ್ಟೇಷನ್, ಬಸ್ ಸ್ಟ್ಯಾಂಡ್, ಕೋರ್ಟುಗಳಿಗೆ ಮಧ್ಯ ಸ್ಥಳದಲ್ಲಿದೆ.

ಎಸ್. ರಾಮದಾಸ್, ಪ್ರೊಪ್ರೈಟರ್.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಂಜಿ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಆಭಾರ ಮನ್ನಣೆ.

ಕುಂಜಿಬೆಟ್ಟು ವಾರ್ಡಿನ ಮತದಾರರು ಹಾಗೂ ಪ್ಯಾರಾಸ್ಥರು ಅಪೇಕ್ಷೆ ಮೇರೆಗೆ ಕಳೆದ ಆಗೋಸ್ಟು ತಿಂಗಳಲ್ಲಿ ನಡೆದ ಕುಂಜಿಬೆಟ್ಟು ವಾರ್ಡಿನ ಮುನ್ಸಿಪಲ್ ಉಪ ಚುನಾವಣೆಯಲ್ಲಿ ನಾನು ವ. ಶ್ರೀ ಕುಂಜೂರು ರಾಮಚಂದ್ರ ರಾವ್ ಇವರು ಕೂಡಾ ಉಮೇದ್ವಾರರಾಗಿದ್ದು ಮತದಾರರು ಜಾತಿ ಮತ ಮುಂತಾದ ಭೇದಗಳನ್ನು ಎಣಿಸದೆ ನನಗೆ ಬಹಳ ಕೊಟ್ಟು ಪ್ರೋತ್ಸಾಹಿಸಿ ನನ್ನನ್ನು (47 ಮತಗಳ)ಬಹುಮತದಿಂದ ವಿಜಯಶಾಲಿಯಾಗುವಂತೆ ಸಹಾಯ ಮಾಡಿದ ಮತದಾರರಿಗೂ ಇಷ್ಟಮಿತ್ರರಿಗೂ ನಾನು ಆಭಾರಿಯಾಗಿರುವನಲ್ಲದೆ ಕುಂಟಾ ಕೃತಜ್ಞನಾಗಿರುತ್ತೇನೆ.

ಕೇಶವ ಕಾಮತ್, ಉದ್ಯಾವರ,

ರಥಬೀದಿ, ಉಡುಪಿ.

21-9-1943.

ಪ್ರಕಟನೆ.

ಇದೇ ಸಪ್ಟಂಬರ ತಾ 25ರಂದ "ಮದ್ರಾಸು ಸುಪೀರಿಯರ್ ಡೀಲರ್ಸ್ ಲೈಸೆನ್ಸಿಂಗ್ ಆರ್ಡರ್ 1943" ಈ ಮದ್ರಾಸು ಪ್ರಾಂತ್ಯದಲ್ಲಿ ಜ್ಯಾರಿಗೆ ಬರುತ್ತದೆ. ಆ ತಾರೀಕಿನ ಬಳಿಕ ಒಂದು ಸಲಕ್ಕೆ ಒಂದು ರೀತಿಗೆ ಮೀರಿದ ಸಾಗಣೆಯನ್ನು ಯಾರೂ ಲೈಸೆನ್ಸಿಲ್ಲದೆ ತನ್ನ ಸ್ವಾಧೀನ ಯಾ ತನ್ನ ಅಧಿಕಾರದೊಳಗೆ ಇಟ್ಟುಕೊಳ್ಳಕೂಡದು. ಸಾಗಣೆದಾರನು ತನ್ನ ಸ್ವಂತ ಉಪಯೋಗಕ್ಕಲ್ಲದೆ ಕೃಷಿಯಿಂದ ಪಡಕೊಳ್ಳುವ ಯಾ ಪ್ರಾಂತ್ಯದ ಯಾ ಜಿಲ್ಲೆಯ ಹೊರಗಿನಿಂದ ಬರುವ ವ್ಯಾಪಾರಿ ಲೈಸೆನ್ಸ ಬಗ್ಗೆ ಜಿಲ್ಲಾ ಕಲೆಕ್ಟರ ಧೊರೆಗಳಿಗೆ ಅರ್ಜಿಯಾದ 25-9-43ರ ಮೊದಲೇ ಲೈಸೆನ್ಸು ಪಡಕೊಳ್ಳತಕ್ಕದ್ದು. ಅರ್ಜಿಫಾರ್ಮು ವ ಇತರ ಸಂಗತಿಗಳ ಕಾರಿತ. ಬೇಕಾದ ಅನುಭವವನ್ನು ತಾಲೂಕು ಕಚೇರಿಯಿಂದ ಪಡಕೊಳ್ಳಬಹುದು. ಲೈಸೆನ್ಸು ಬಗ್ಗೆ ಅರ್ಜಿಮಾಡುವವರು ಶಹರಿನ್ನಾರ ಮಾಹಿತಿ ವಾಡಬೇಕಾಗಿ ಕಲೆಕ್ಟರರ ಹುಕುಂ ಆಗಿದೆ.

ದಕ್ಷಿಣ ಕನ್ನಡ.

ಮಂಗಳೂರು.

ಸ್ವಂತ ಕೃತಿಗಳ ವಾಚನ–ಕಳೆದ ರವಿವಾರ 'ಮಿತ್ರ ಮಂಡಲಿ'ಯ 'ಅಭ್ಯಾಸ ಗೋಷ್ಠಿ'ಯಲ್ಲಿ 'ಸ್ವಂತ ಕೃತಿಗಳ ವಾಚನ' ಕಾರ್ಯಕ್ರಮವು ಶ್ರೀ| ಸೇಡಿಯಾಪು ಕೃಷ್ಣಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಹಲವರು ತಮ್ಮ ಕೃತಿಗಳನ್ನು ಓದಿದರು.

ಚಲಚ್ಚಿತ್ರ ವಿಮರ್ಶಕ ಕೂಟದ ಚರ್ಚಾ ಸಭೆಯು ತಾ. 12ರಂದು ಬಸಂಟ್ ಇಂಟೆಕ್ಟ್ವೆಲ್ ಸ್ಟುಡಿಯೋದಲ್ಲಿ ಶ್ರೀ| ಜಿ| ಎನ್| ಶೆಣೈ ಅವರ ಅಧ್ಯಕ್ಷತೆಯಲ್ಲಿ ಜರಗಿ, ಕನ್ನಡ 'ಕೃಷ್ಣ ಸುಧಾಮ'ವು ಕನ್ನಡ ನಾಡಿಗೆ ಕಳಂಕಪ್ರಾಯವಾದ ಚಿತ್ರವೆಂದೂ 'ಪ್ರೇಮ ಸಂಗೀತ'ವು ಅಗ್ಗ ಹಾಸ್ಯ ಚಿತ್ರವೆಂದೂ 'ಸಿದ್ದೋಟೀಪ' ಪ್ರೋತ್ಸಾಹಕ್ಕರ್ಹ ವಾದುದಲ್ಲವೆಂದೂ ಅಭಿಪ್ರಾಯಗಳಾದುವು. ಮುಂದಕ್ಕೂ 'ಕೃಷ್ಣ ಸುಧಾಮ'ದಂತಹ ಚಿತ್ರಗಳನ್ನೇ ನಿರ್ಮಿಸಿದರೆ ಕರ್ನಾಟಕದಲ್ಲಿ ಅದಕ್ಕೆ ಬಹಿಷ್ಕಾರ ಬೀಳುವಂತೆ ಮಾಡುತ್ತೇವೆ' ಎಂಬರ್ಥದ ಪತ್ರವನ್ನು ನಿರ್ಮಾಪಕರಾದ ಕಲ್ಯಾಣ ಕಂಪೆನಿಯವರಿಗೆ ಬರೆಯಲು ಕೂಟವು ನಿರ್ಧರಿಸಿತು.

ನೇಮಕ–ನಿವೃತ್ತ ಡೆಪ್ಯುಟಿ ಕಲೆಕ್ಟರ್ ಶ್ರೀ| ಜಿ| ದತ್ತಾತ್ರೇಯರಾಯರು ಜಿಲ್ಲಾ ಕಲೆಕ್ಟರಿಗೆ ಖಾಸಗಿ ಸಹಾಯಕರಾಗಿ ನೇಮಿಸಲ್ಪಟ್ಟಿದ್ದಾರೆ.

ಕೊಲೆರಾ ರೋಗಕ್ಕೆ ಬಲಿ–ತಾರೀಕು 17ರ ತನಕ ಮಂಗಳೂರಲ್ಲಿ ಕಾಲೆರಾ ರೋಗಕ್ಕೆ ತುತ್ತಾದವರ ಸಂಖ್ಯೆ 114; ಮಡಿದವರ ಸಂಖ್ಯೆ 46; ಕೋಲೆರಾ ನಿರೋಧಕ ಮದ್ದು ಹಾಕಿಸಿಕೊಂಡವರ ಸಂಖ್ಯೆ 56,970.

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಪರಿಷತ್ತು–ಇದರ ತಾತ್ಕಾಲಿಕ ಸ್ವಾಗತ ಸಮಿತಿಯ ಸಭೆಯು ತಾ. 16ರಂದು ಸಂಜೆ, ಶ್ರೀ| ಮಂಗಳೂರು ಜಾರಪ್ಪ ಅವರ ಅಧ್ಯಕ್ಷತೆಯಲ್ಲಿ, ಪತ್ರಿಕೋದ್ಯೋಗಿ ಸಂಘದ ಆಫೀಸಿನಲ್ಲಿ ಜರಗಿತು. ಒಡನೆಯೇ ಇಪ್ಪತ್ತೈದರಷ್ಟು ಮಂದಿ ಸ್ವಾಗತ ಸಮಿತಿಯ ಸದಸ್ಯರನ್ನು ಸೇರಿಸಿ, ಅವರ ಸಭೆ ಕರೆದು, ನಿಜವಾದ ಸ್ವಾಗತ ಸಮಿತಿಯನ್ನು ರಚಿಸುವುದಕ್ಕಾಗಿ ಐದು ಮಂದಿಯನ್ನೊಳಗೊಂಡ ಒಂದು ಉಪ ಸಮಿತಿಯ ರಚನೆಯಾಯಿತು. ಸೌತ್ ಕೆನರಾ ಪ್ರತಿನಿಧಿಯಾಗಿ ಜಿಲ್ಲಾ ಸಂಘದ ಉಪಾಧ್ಯಕ್ಷರಾದ ಶ್ರೀ| ಕಯ್ಯಾರ ಕಿಂಞಣ್ಣ ರೈ ಅವರನ್ನು ದ್ವಿತೀಯ ಮೈಸೂರು ಪತ್ರಿಕೋದ್ಯೋಗಿ ಸಮ್ಮೇಲನಕ್ಕೆ ಕಳುಹಲು ಸಮಿತಿಯು ನಿರ್ಧರಿಸಿತು. ಅ| ಕರ್ನಾಟಕ ಪ್ರಾಂತಿಕ ಪರಿಷತ್ತನ್ನು ಯಶಸ್ವಿಯಾಗಿ ಜರಗಿಸುವುದರ ಕುರಿತು ... ಉಪಯುಕ್ತ ಸೂಚನೆಗಳನ್ನಿತ್ತರು. ಶ್ರೀ| ಕೊಳಕೆಬೈಲು ರ ಶಿ. ರಾ. ಅವರು ಧನ್ಯವಾದಗಳನ್ನರ್ಪಿಸಿದರು.

ಗಣಪತಿ ಹೈಸ್ಕೂಲಿನ ವಿಜಯ ದಶಮಿ ಸಮಾರಂಭಗಳು ಅಕ್ಟೋಬರ ತಾ. 5ರಿಂದ 8ರ ತನಕ ಜರಗಲಿವೆ.

ಆರನೆ ಫಲ ಪುಷ್ಪ ಪ್ರದರ್ಶನದ ಬದಲಿಗೆ ಈ ವರ್ಷ ಒಂದು ತೋಟಗಾರಿಕೆಗಳ ಸ್ಪರ್ಧೆಯನ್ನು ನಡೆಸಬೇಕೆಂದು ಜಿಲ್ಲಾ ಎಡ್ವೈಸ್ಮೆಂಟ್ ಸಂಘದ ಒಂದು ಸಭೆಯು ನಿರ್ಧರಿಸಿರುವುದು. ಸ್ಪರ್ಧಿಸುವವರ ಅರ್ಜಿಗಳು ತಾ. ೩೦ರ ಮೊದಲ ಕಾರ್ಯದರ್ಶಿಗಳ ಕೈಸೇರಬೇಕು.

'ಹರಿಜನ ವಾರ'

(24-9-'43ರಿಂದ 2-10-43ರ ವರೆಗೆ)

ಎಂದಿನಂತೆ ಈ ವರ್ಷವೂ ಅಖಿಲ ಭಾರತ ಮಟ್ಟದಲ್ಲಿ ನಡೆಯುವಂತೆ ನಮ್ಮ ಜಿಲ್ಲೆಯಲ್ಲಿಯೂ 'ಹರಿಜನ ವಾರ'ವನ್ನು ಜರಗಿಸುವುದಾಗಿ ಜಿಲ್ಲಾ ಸಂಘವು ನಿರ್ಣಯಿಸಿರುತ್ತದೆ. ಈ ದಿನಗಳಲ್ಲಿ ಹರಿಜನ ವಸತಿಗಳಿಗೆ ಸಂದರ್ಶನ ಮತ್ತು ಹರಿಜನ ಸೇವೆಗಾಗಿ ಊರಲ್ಲಿ ಧನ ಸಂಗ್ರಹ ಕಾರ್ಯಗಳು ನಡೆಯಲಿವೆ. ಅಲ್ಲದೆ ತಾ. 25-9-43ನೇ ಶನಿವಾರ ಹಗಲು ಘಂಟೆ 5ಕ್ಕೆ ಮಂಗ್ಳೂರು ಬಸೆಂಟ್ ಬಾಲಿಕಾ ಪಾಠಶಾಲೆಯ ಎದುರು ಕೆನರಾ ಹೈಸ್ಕೂಲಿನ ಆಟದ ಮೈದಾನಿನಲ್ಲಿ ಹಾಲಿನ ಮಕ್ಕಳ ಪಂದ್ಯಾಟಗಳನ್ನು ನಡೆಸಲಿದೆ. ಡಾ| ಕೇಶವ ಪೈಗಳು ಅಧ್ಯಕ್ಷರಾಗಿ ಗೆದ್ದವರಿಗೆ ಬಹುಮಾನಗಳನ್ನು ಕೊಡಲಿರುವರು. ಅದೇ ದಿನ ಹರಿಜನ ಮಕ್ಕಳಿಗೆ ವೈ. ಸಿ. ಎಂ. ಶಾಲೆಯಲ್ಲಿ ಕಬ್ಬು ಮತ್ತು ಮಿಠಾಯಿ ಹಂಚುವ ಕೆಲಸವೂ ನಡೆಯಲಿದೆ. ಮಹಿಳೆಯರೂ ಮಹನೀಯರೂ ಉದಾರ ಸಹಾಯಗಳನ್ನಿತ್ತು ನಮ್ಮೊಡನೆ ಸಹಕರಿಸಬೇಕಾಗಿ ವಿನಂತಿ.

ಮಂಗ್ಳೂರು. 20-9-43 } ನಾರಾಯಣ ಕಿಲ್ಲೆ. (ಜಿಲ್ಲಾ ಹರಿಜನ ಸೇವಕ)

ಉಡುಪಿ.

ದಕ್ಷಿಣ ಕನ್ನಡ ಜಿಲ್ಲಾ ಎಯಿಡೆಡ್ ಎಲಿಮೆಂಟರಿ ಶಾಲಾ ಫೆಡರೇಶನಿನ ಉಡುಪಿ ಶಾಖೆಯು–ತಾ 19ರಲ್ಲು ರಾವ್ ಬಹದೂರ್ ಡಾಕ್ಟರ್ ಎಮ್. ಕೇಶವಪೈ ಒ. ಬಿ. ಇ. ಎಮ್. ಡಿ ಅವರಿಂದ ತೆರೆಯಲಾಯಿತು. ಫೆಡರೇಶನಿನ ಸ್ಥಾಪನೆ ಉದ್ದೇಶ ಮತ್ತು ಅಂತಿಮ ಧ್ಯೇಯಗಳ ಕುರಿತು ಶ್ರೀಗಳಾದ ಕೆ. ಗೋಪಾಲರಾವ್, ಎಂ. ಎಸ್. ಮಾಧವರಾವ್, ಕುಕ್ಕೋರ್ಲು ಗಣಪಯ್ಯ ಸೆಟ್ಟಿ ಮೊದಲಾದವರ ಭಾಷಣಗಳಾದುವು. ಆಡಳಿತ ಮಂಡಳಿಗೆ ಡಾ| ಟಿ. ಮಾಧವಪೈ (ಅಧ್ಯಕ್ಷ) ಶ್ರೀಗಳಾದ ಕೆ. ಆರ್. ಶೆಣೈ (ಕಾರ್ಯದರ್ಶಿ) ಬಿ. ಸುಬ್ಬಣ್ಣ ಹೆಗ್ಡೆ, ಕೆ. ನರಸಿಂಹ ಕಾರಂತ, ಎಮ್ ಎಚ್ ಕಲ್ಕೂರ, ಪಿ. ಎನ್. ಮಾಧವರಾವ್, ಕೆ. ಜಗನ್ನಾಥ ನಾಯಕ್, ಕೆ. ಮುಖ್ಯಪ್ರಾಣ ಉಪಾಧ್ಯಾಯ ಕೆ. ಗಣಪಯ್ಯ ಶೆಟ್ಟರು, ಸದಾನಂದ ಸೆಟ್ಟಿ, ರಾಮದಾಸ ನಾಯಕ್ ಮತ್ತು ಶ್ರೀನಿವಾಸ ನಾಯಕ್ ಆರಿಸಲ್ಪಟ್ಟರು.

ವರ್ಗ–ಉಡುಪಿ ಮುನಿಸಿಪಲ್ ಕಮಿಶನರ್ ಶ್ರೀ| ಡಿ ವಿಶ್ವನಾಥ ರೆಡ್ಡಿಯವರಿಗೆ ಕಡಪಾ ಜಿಲ್ಲೆಗೆ ವರ್ಗವಾಗಿಯದೆ.

ಸಭೆಗಳಿಗೆ ತಿರುಗಿ ನಿಷೇಧ–ಡಿಫೆನ್ಸ್ ಆಫ್ ಇಂಡಿಯಾ ಕಾನೂನಿನ 56 (1)ನೇ ಕಲಮಿಗನುಸಾರವಾಗಿ ಸಭೆ ಮೆರವಣಿಗೆಗಳನ್ನು ಮಾಡಬಾರದೆಂದು ದ. ಕ. ಜಿಲ್ಲೆಯಲ್ಲಿ ಹಾಕಿದ್ದ ನಿಷೇಧಾಜ್ಞೆಯನ್ನು ತಾ. 18-9-43ರಿಂದ ತಿರುಗಿ ಎರಡು ತಿಂಗಳು ಮುಂದರಿಸಲಾಗಿದೆಯೆಂದು ಜಿಲ್ಲಾ ಕಲೆಕ್ಟರು ಆಜ್ಞೆ ಹೊರಡಿಸಿರುವರು.

ಕಾರ್ಕಳ–ಕಾರ್ಕಳ ತಾಲೂಕು ರಾಷ್ಟ್ರಭಾಷಾ ಪ್ರಚಾರ ಸಂಘದ ದ್ವಿತೀಯ ಪ್ರಮಾಣ ಪತ್ರವಿತರಣೋತ್ಸವವು ಇದೇ ಶನಿವಾರ ತಾ 2-10-43ರ ಸಾಯಂ 5-30ಕ್ಕೆ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ. ಕೆ. ಪಿ. ಶೇಷಗಿರಿ ಪ್ರಭು ಬಿ. ಎ. ಯವರ ಅಧ್ಯಕ್ಷತೆಯಲ್ಲಿ ಜರಗುವದು. ವಿದ್ವಾನ್ ಶ್ರೀ. ಬಿ. ರಾಮಕೃಷ್ಣಾಚಾರ್, ಬಿ. ಎ. ವಿಶಾರದರವರು ಅಭಿಭಾಷಣವನ್ನು ಕೊಡುವರು. ಈ ಸಂದರ್ಭದಲ್ಲಿ ಆವಶ್ಯಕ ಮತ್ತು ಮನೋರಂಜಕ ಇತರ ಕಾರ್ಯಕ್ರಮಗಳೂ ಇರುವವು. ಹಿಂದೀ ಪ್ರೇಮಿಗಳೆಲ್ಲರೂ ಬಂದು ಪ್ರೋತ್ಸಾಹಿಸಬೇಕಾಗಿಯೂ ಸಂಘಕ್ಕೆ ಉದಾರ ಸಹಾಯವನ್ನು ಕೊಟ್ಟು ರಾಷ್ಟ್ರಕಾರ್ಯದಲ್ಲಿ ನೆರವಾಗಬೇಕೆಂದೂ ಸಂಘದ ಪರವಾಗಿ ಕಾರ್ಯದರ್ಶಿ ಶ್ರೀ. ಕಟಪಾಡಿ ಶ್ರೀನಿವಾಸ ಶೆಣೈಯವರು ಕೋರುತ್ತಾರೆ.

ಹರಿಜನ ಸೇವಕ ಸಂಘ, ಕಾರ್ಕಳ. ಈ ಸಂಸ್ಥೆಯ ತಾ 31-3-1943ಕ್ಕೆ ಅಂತ್ಯವಾದ ಹಳನೆ ವರುಷದ ಜಮಾ ಖರ್ಚು, ಲಾಭ ನಷ್ಟದ ವರದಿಯು ನಮ್ಮ ಕೈ ಸೇರಿದೆ. ವರದಿ ವರುಷದಲ್ಲಿ ಸಂಘದ ಸದಸ್ಯರ ವಂತಿಗೆ, ಜಿಲ್ಲಾ ಬೋರ್ಡಿನ ಧನ ಸಹಾಯ; ಠೇವಣಾತಿಗಳ ಬಡ್ಡಿ, ಇನ್ನಿತರ ಆದಾಯ ಐಟಮುಗಳ ಜಮಾ ಮೊಬಲಗು ಮತ್ತು ಖರ್ಚಿನ ಅಂಕೆಗಳನ್ನು ಪರಿಶೀಲಿಸುವಾಗ್ಗೆ ಉತ್ಪತ್ತಿಗಿಂತ ವೆಚ್ಚವೇ ಜಾಸ್ತಿಯೆಂಬುದು ಶೋಚನೀಯವಿದೆ. ವರದಿಯಲ್ಲಿ ಧನ ಸಹಾಯವನ್ನಿತ್ತ ಸ್ತ್ರೀ ಪುರುಷರ ಹೆಸರುಗಳು ಸೂಚಿಸಲ್ಪಟ್ಟಿವೆ. ಸಂಘವು ಸ್ಥಾಪಿತವಾದಂದಿನಿಂದ ಮಹಾ ಜನರ ಬೆಂಬಲದಿಂದ ಹರಿಜನ ಬಂಧುಗಳ ಸೇವೆಯು ಯೋಗ್ಯ ರೀತಿಯಲ್ಲಿ ನಡೆಯುತ್ತಲಿದೆ. ಆರ್ಥಿಕ ಮುಗ್ಗಟ್ಟಿನ ಈ ಕಾಲದಲ್ಲಿ ಹರಿಜನರು ದರಿದ್ರ ನಾರಾಯಣ ಸೇವಾ ದೃಷ್ಟಿಯಿಂದ ಶ್ರೀ, ವಿಠಲ ಸಂಘಕ್ಕೆ ನೆರವಾಗಬೇಕಾಗಿ ನಾಯಕ ಮಂಡಳಿಯವರು ಮಾಡಿದ ವಿನಂತಿಯನ್ನು ಸಮರ್ಥಿಸುತ್ತೇವೆ.

ಬಾರ್ಕೂರು, ಬಿಲ್ಲವ ಚಾರಿಟಿ ಸಂಘ ಮುಂಬಾಯಿ:– "ಬಿಲ್ಲವ ಯೂನಿಯನ್" ಮುಖಪತ್ರದ ಆಧ್ಯಕ್ಷ ಶ್ರೀ. ಯಂ. ರಂಗನವರು ಶ್ರೀ ಗುರುನಾರಾಯಣ ಮಂದಿರಕ್ಕೆ ಧನ ಸಂಗ್ರಹಿಸಲು ಬಂದಿರುವರು. ಇವರಿಗೆ ನಮ್ಮ ಸಂಪೂರ್ಣ ಬೆಂಬಲವಿದೆಯೆಂದೂ ಜಾತಿಮತ ಭೇದವಿಲ್ಲದೆ ಸರ್ವರೂ ಸಹಕಾರವನ್ನೀಯಬೇಕೆಂದೂ ಈ ಸಂಘವು ಅಪೇಕ್ಷಿಸುತ್ತದೆ.

ಚೂರು-ಚೂರು

"ಅನಿವಾರ್ಯವಾಗಿ ರಕ್ಷಣಾ ಯುದ್ಧ ಕೊಡುವ ದುರವಸ್ಥೆಗೀಡಾಗಿದ್ದರೂ, ತಾನು ಯುರೋಪನ್ನು ಅಜೇಯ ಕೋಟೆಯನ್ನಾಗಿ ಮಾರ್ಪಡಿಸಿರುವೆನೆಂದು ಜಂಭವಾಡುತ್ತಿರುವ ಹಿಟ್ಲರನು, ಅದಕ್ಕೆ ಮಾಡು ಮಾಡಿಲ್ಲವೆಂಬುದನ್ನೂ, ಅದರ ಗೋಡೆಯ ಹಲವೆಡೆಗಳಲ್ಲಿ ನಾವು ನುಗ್ಗಬಹುದಾದ ಬಿರುಕುಗಳಿವೆಯೆಂಬುದನ್ನೂ ಮರೆತಿದ್ದಾನೆ"–ರೂಸವೆಲ್ಟರ ಕಾಂಗ್ರೆಸ್ ಸಂದೇಶದಲ್ಲಿ.

ಅಂತೆಯೇ ಮಾಡು, ಬಿರುಕುಗಳಲ್ಲಿ ನುಗ್ಗಿ ನುಸುಳುವ ಮೂಷಿಕ ಬುದ್ಧಿ ಮಿತ್ರ ರಾಷ್ಟ್ರೀಯರದೆಂಬುದನ್ನೂ ಮರೆತಿದ್ದಾನೆ.

●

'ಕ್ರೂರ, ಕೊಲೆ ಘಾತಕ ಜಾಪಾನಿಗೆ ಸಂದಾಯ ಮಾಡಬೇಕಾದ ದ್ವೇಷ ಋಣವೊಂದು ಕೂಡಾ ಹಿಂದುಸ್ಥಾನಕ್ಕೆ ಹೋಗುವಾಗ ನನ್ನ ಬೇಗಿನಲ್ಲಿದೆ'– ಲಂಡನಿನ ಯಾತ್ರಾ ಸಂಘದವರ ಸತ್ಕಾರ ಕೂಟದಲ್ಲಿ ಲೋರ್ಡ್ ವೇವೆಲ್.

ಜಾಗ್ರತೆ! ಅವರು ನವ ಡಿಲ್ಲಿಯಲ್ಲಿಳಿದಾಗ ಆ ಬೇಗ್ ಹೊರಲು ಹಿಂದೀಯರು ಮುಂದಾಗದಿರಲಿ!

●

"ಹಿಂದುಸ್ಥಾನವು ಇನ್ನೂ ಬಡತನದ ಬೇಗೆಯಲ್ಲೇ ಇರುವುದರಿಂದ, ನಾವು ಅದರ ಮೇಲೆ ಇನ್ನಷ್ಟು ಭಾರ ಹೊರಿಸುವ ಮೊದಲು, ಆ ನಿಲ್ದಾಣವೇ ಅಲುಗಾಡದಂತೆ ಅಥವಾ ಕುಸಿದು ಬೀಳದಂತೆ ವಿಶೇಷ ಮುಂಜಾಗ್ರತೆ ವಹಿಸಬೇಕು"–ಲೋರ್ಡ್ ವೇವೆಲ್.

ಅದರೆ ಈ ಭೂಮಿಯನ್ನು ಆದಿಶೇಷ ಮತ್ತು ಅಷ್ಟ ದಿಗ್ಗಜಗಳು ಹೊತ್ತಿರುವವೆಂಬ ಹಿಂದೂ ಪುರಾಣದಲ್ಲಿ ಯುದ್ಧ ಭಾರ ಹೊರಿಸುತ್ತಿರುವ ಅಧಿಕಾರಿಗಳಿಗೆ ಪೂರ್ಣ ವಿಶ್ವಾಸವಿದೆ!

○

'ಸರಕಾರಿ ನೌಕರರು ಯುದ್ಧ ನಿಧಿಗೆ ಹಣ ಶೇಖರಿಸಬಾರದು; ಮತ್ತು ಪ್ರಯಾಣ ಕಾಲದಲ್ಲಿ ಫೈಲಿಗಳನ್ನು ಪಡೆಯಬಾರದು'–ಪಂಜಾಬ್ ಸರಕಾರದ ಆಜ್ಞೆ.

ಈ ಆಜ್ಞಾ ವಾರ್ತೆ ಮದ್ರಾಸಿನಲ್ಲಿ ಪ್ರಕಟವಾಗದಂತೆ ಗವರ್ನರ್ ಸರ್. ಹೋಪರು ತಡೆ ಹಾಕದಿದ್ದುದೊಂದು ವಿಶೇಷ.

●

'ಜನಾಂಗ ಭೇದವೆಂಬುದು ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ವಾರೀಸು ಹಕ್ಕು. ಹಿಂದೀ ಸಮಸ್ಯೆಯ ಕಾಯಬೇಕೆಂದರೆ ಇದೇ'– ಅಮೇರಿಕದ 'ಲೈಫ್' ಪತ್ರಿಕೆಯ ಸಂಪಾದಕ ಸುಪ್ರಸಿದ್ಧ ಜೋನ್. ಸಿ. ಜೆಸುಫ್ ಇವರ ಟೀಕೆ.

'ಜಾತಿ ಭೇದವೆಂಬುದು ಹಿಂದೀಯರ ವಾರೀಸು ಹಕ್ಕು–ಹಿಂದೀ ಸಮಸ್ಯೆಯು ತಾಯಬೇಕೆಂದರೆ ಇದೇ'– ಎಂಬ ಅಮೆರಿಕಾಣಿಗೂ ಮೇಲಿನ ಮಾತಿಗೂ ಶಬ್ದ ಮಾತ್ರ ವ್ಯತ್ಯಾಸ.

—ವಿನೋದಿ.

BHUVANENDRA PRODUCTS Ltd.,

Head Office and Factory: Katapadi, S. Kanara

Depots: Mahratha Galli, Hubli.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮೆಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ವಿಜಯಾ ಸ್ಟೋರ್ಸ್

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in 1920)

Registered Office. Court Road UDIPI South Canara District.

Business Offices Udipi, Mangalore, Katapadi, Kanhangad and Kinnigoli, South Canara.

Authorised and Issued Capital: Rs. 2,00,000/-

Subscribed and Paid up Capital: Rs. 2,00,000/-

Reserve Funds: Rs. 1,74,000/-

Short term bills are discounted for approved parties. Loans and advances are made and overdrafts granted on fairly easy terms.

Deposits are accepted at favourable rates of interest. More than twenty-three years' reliable banking Service stands to our credit.

For further particulars please call at or apply to the nearest office.

Dated 27-8-1943.

ಶ್ರೀ ತಾರಾನಾಥ ಭೇಷಜಾಲಯ

ಶಾಸ್ತ್ರೀಯ ಮತ್ತು ಸಿದ್ಧೌಷಧಿಗಳ ಕಾರಾಗಾರ, ಚಿಕ್ಕಮಗಳೂರು.

ನಿರ್ದೇಶಕ:- ಡಾ. M. L. Shetty, ಪ್ರೇಮವಿದ್ಯಾಪೀಠದ ಗ್ರಾ. ಪ್ರಾಧ್ಯಾಪಕರು.

ಎಲ್ಲಾ ತರದ ಭಸ್ಮ, ಖಲ್ವೀ ರಸಾಯನ, ಆಸವಾರಿಷ್ಟ, ಘೃತ, ತೈಲಗಳಿಗಾಗಿ ಕೂಡಲೇ ಬರೆಯಿರಿ.

ಲಕ್ಷಗಟ್ಟಲೆ ರೋಗಿಗಳಲ್ಲಿ ಫಲಕಾರಿಯಾದ ಔಷಧೀ ಯೋಗಗಳು ಗುರುಪರಂಪರೆಯ ಅನುಭವದಿಂದ ಬಂದ ನಿರ್ದುಷ್ಟ ಔಷಧೀಕರಣ ವಿಧಾನ

ಡಾ| P. M. Alva,
ಮೆನೇಜರ್.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager

ಯಂ. ಆರ್. ಪುಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,

ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ

ಉಡುಪಿ. : : : : ಮಂಗಳೂರು.

THE VIJAYA BANK, LIMITED.

Glad to announce that a Branch of the Bank has been opened at KASARAGOD on 12-9-43.

ಅಮೃತಾಂಜನ ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವುದು, ಚೇಳು ವಿಷಮುಂತಾದ ಜಿನೆ, ಪಕ್ಷವಾತ, ಮೂಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ, ಹುಳುಕಟ್ಟಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. **1-8-0** ಮಾತ್ರ

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಮೆನೇಜರ್, **ಬಾಲಚಂದ್ರ**

ಸಂತೆಕಟ್ಟೆ, ಉಡುಪಿ.

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. ೨—೦—೦ ಪೋಸ್ಟ ಚಾರ್ಜ ಬೇರೆ.

ಮಾಲಿಕರು:— ಪಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ:—ಕುಂಬರವಾಡಿ ಸ್ಟೋರ್ಸ. ದಾವಣಗೇರಿ,—ದಾವಣಗೇರಿ ಸ್ಟೋರ್ಸ. ಡಾ. ಎಲ್. ಕವಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ನವಜೀವಾತು ಎಂಬ ಸೂತಿಕಾ ರಸಾಯನ.



(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ** ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ. ಕ.**

ಸ್ಥಾಪನೆ 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸ್ಟೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.

Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI. S. INDIA.

Regd. No M. 3618.

ಇಪ್ಪತ್ತನಾಲ್ಕನೆಯ ವರ್ಷ.

NAVAYUGA

ನವಯುಗ

Estd. 1921 ಸ್ಥಾಪನೆ.

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೫

FOUNDER
Sri. A. B. Shetty

Vol 24
No 5

NAVAYUGA— Kannada Weekly —UDIPI, S. I.

ಉಡುಪಿ • 30—9—1943 • ಮಂಗಳೂರು.

ಹೊಸಕೆರೆ ಚಿದಂಬರಯ್ಯನವ
ರಿಂದ ರಚಿತವಾದ ಗೀತೆಯ
ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು 440 ಪುಟಗಳು,
ಪ್ರತಿ ಮನೆಯಲ್ಲೂ ಇರಬೇಕಾದ
ಪವಿತ್ರ ಗ್ರಂಥ.

ಬೆಲೆ (ಸುಂದರ ಪ್ರತಿ) ೦—೮—೦

ಅಣ್ಣೆ ಸ್ಟಾಂಪು ಕಳಿಸಿದ್ದಲ್ಲಿ ೧ ಪ್ರತಿಯನ್ನು
ಬುಕ್‌ಪೋಸ್ಟ್ ಮಾಡಲಾಗುತ್ತೆ.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಅಖಿಲ ಕರ್ನಾಟಕದ
ಹೊಸಮಾದರಿಯ ವಾರಪತ್ರಿಕೆ

ಅಂತರಂಗ

ಜನ್ಮತಾಳಿದ ಸ್ವಲ್ಪ ಸಮಯದಲ್ಲೇ
ವಿಶಾಲ ಪ್ರಚಾರ ಮತ್ತು ಪ್ರಶಸ್ತಿ
ಪಡೆದ ಸಚಿತ್ರ ವಾರಪತ್ರಿಕೆ.

ಪ್ರಸಿದ್ಧ ಜ್ಯೋತಿಷಿಗಳೊಬ್ಬರಿಂದ
ವಾರಭವಿಷ್ಯವೂ ಪ್ರಕಟವಾಗುತ್ತಿದೆ

ವಾರ್ಷಿಕ ಚಂದಾ	ರೂ. ೪-೮-೦
6 ತಿಂಗಳಿಗೆ	ರೂ. ೨-೪-೦
ಬಿಡಿಪ್ರತಿಗೆ	ರೂ. ೦-೧-೬

ಮಾದರಿಗೆ ಬರೆಯಿರಿ.
ಮ್ಯಾನೇಜರ್, ಅಂತರಂಗ, ಉಡುಪಿ.

M. Vittala Hegde.

M. Vittala Hegde.

Charter of Protection Sriman.

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim

The Canara Mutual Assurance Co., Ltd.,
UDIPI. (S. India).

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು
ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸಮೀಪದವರ ಮತ್ತು
ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇದರಲ್ಲೊಂದು ಪೋಲಿಸಿಯನ್ನು ಪಡೆಯಿರಿ.

ಪ್ರತಿನಿಧಿಯಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಿ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ಮಯಮಾದಿ ವಿಚಾರಿಸಿರಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಮುಖ್ಯ ಏಜಂಟರು -
ದಿ ಬೊಂಬಾಯಿ ಲೈಫ್ ಬಿಲ್ಡಿಂಗ್, ಉಡುಪಿ. (ದ. ಕನ್ನಡ.)

ಶಾಖಾ ಕಚೇರಿಗಳು:— ಬೆಂಗಳೂರು, ಬೊಂಬಾಯಿ, ಮದ್ರಾಸ್,
ಕಲ್ಲಿಕೋಟೆ, ಮಂಗಳೂರು ಮತ್ತು ತ್ರಿವಾಂಕೂರು.

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋರರಕ್ತ ಹಳದೀ ದಾಗು ಹತ್ತುತ್ತಿದ್ದರೆ ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನನ್ನ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೭ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೆಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಿ ಇಂಗ್ಲೀಷಿನಲ್ಲಿ.

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

ವೃದ್ಧಿಯಿಂದ ಅಭಿವೃದ್ಧಿ.

ಈ ೧೯೧೪ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಒಹ ಬಗೆ ಅಪಾಯಗಳಿಂದಲೂ ಹಾಗೂ ನಿಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನ್ನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ತೀವ್ರನೆ ಮುಂದುವರಿದವು.

೧೯೪೦ ರಲ್ಲಿ **ಕೆನರಾ ಬೇಂಕು** ೯೦ ಲಕ್ಷ ಠೇವಣಿಗಳ ಮತ್ತು ಒಂದು ಕೋಟಿ ಸಂಪತ್ತಿನ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣಿಗಳು ಇಮ್ಮಡಿಯಾಗಿವೆ ಸಾಂಪತ್ತಿಕ ಸ್ಥಿತಿಯು ಎರಡು ವರೆ ಕೋಟಿಗೆ ಏರಿದೆ ಹಾಗೂ ಶೇರು ಮೂಲಧನವು ನಾಲ್ಮಡಿಯಾಗಿದೆ

ಜಾಣತನದ ವ್ಯವಸ್ಥೆಯ ಪರಾಕಾಷ್ಠೆಯಿಂದಲೂ, ಆತ್ಮವಿಶ್ವಾಸದಿಂದಲೂ, ದೃಢಪಟ್ಟಿಯಿಂದಲೂ, ಯೋಗ್ಯಸೇವೆಯನ್ನು ಸಲ್ಲಿಸಿದರಿಂದಲೂ. ಇಂದಿನ ಈ ಪ್ರಗತಿಗೆ ಕಾರಣ ಭೂತರಾದ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಮಹತ್ವದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

CANARA BANK LIMITED.
ಕೆನರಾ ಬೇಂಕ್ ಲಿಮಿಟೆಡ್.

ಸ್ಥಾಪನೆ 1906.

ಈ ಆಮದು ರಫ್ತು!

ಲೋರ್ಡ್ ವೇವಲ್- ಲೋರ್ಡ್ ಲಿನ್‌ಲಿತ್‌ಗೋ.

ಇನ್ನು ಕೆಲವೇ ದಿನಗಳಲ್ಲಿ ಹಿಂದುಸ್ಥಾನಕ್ಕೆ ಹೊರಡಲಿರುವ ಲೋರ್ಡ್ ವೇವೆಲರಿಗೆ ಲಂಡನಿನಲ್ಲಿ ಸನ್ಮಾನವೇ ಸನ್ಮಾನ! ಇತ್ತ ಹಿಂದುಸ್ಥಾನ ಬಿಟ್ಟು ಹೋಗಲಿರುವ ಲೋರ್ಡ್ ಲಿನ್‌ಲಿತ್‌ಗೋರವರು, ದೇಶದಲ್ಲೆಲ್ಲಾ ವಿದಾಯ ಪ್ರವಾಸ ಮುಗಿಸಿಕೊಂಡು ನವ ದಿಲ್ಲಿಗೆ ಹೋಗಿ ಅಲ್ಲಿ ಪಡೆಯುತ್ತಿರುವ ಆತಿಥ್ಯವೇ ಆತಿಥ್ಯ! ಹೀಗೆ ಬರುವ ಮತ್ತು ಹೋಗುವ ವೈಸರಾಯರುಗಳು ಅಲ್ಲಿ ಮತ್ತು ಇಲ್ಲಿ ಪಡೆಯುತ್ತಿರುವ ಸತ್ಕಾರ ಕೂಟಗಳ ಸಂಖ್ಯೆಯ ಮೊತ್ತವು, ಭಾರತದಲ್ಲಿ ಆಹಾರವಿಲ್ಲದೆ ಸಾಯುತ್ತಿರುವವರ ಸಂಖ್ಯೆಯೊಡನೆ ಸ್ಪರ್ಧಿಸುವಂತಿದೆ!

ಲೋರ್ಡ್ ಲಿನ್‌ಲಿತ್ ಗೋ!

'ಭಾರತ ಬಿಡಿ' ಎಂದ ಕಾಂಗ್ರೆಸಿಗರಿಗೆ ಉತ್ತರವೆಂಬಂತೆ, ಅವಧಿಗೆ ಮಿಕ್ಕಿ ಎರಡೂವರೆ ವರ್ಷ-ಒಟ್ಟು ಏಳೂವರೆ ವರುಷ-ಹಿಂದುಸ್ಥಾನವನ್ನಾಳಿದವರು ಲೋರ್ಡ್ ಲಿನ್‌ಲಿತ್ ಗೋ ಅವರು ಪಶು ಪ್ರೇಮಿ. ಭಾರತಕ್ಕೆ ಬಂದಾಗ ಬೀಜದ ಹೋರಿಗಳ ಸಾಕಣೆಯಲ್ಲಿ ತೋರಿಸಿದ ಅಭಿರುಚಿಯು ವೈಸರಾಯರದಲ್ಲ–ಗೋವಳನದು! ಆದು ಲೋರ್ಡ್ ಲಿನ್‌ಲಿತ್‌ಗೋರವರ ವೈಶಿಷ್ಟ್ಯವಾಗಿ, ವ್ಯವಸಾಯೀ ಭಾರತವನ್ನು ಆಕರ್ಷಿಸಿದ್ದಿತು. ಹೀಗೆ ಪಶು ಪ್ರೇಮದೊಡನೆ ಆರಂಭವಾಗಿದ್ದ ಅವರ ವೈಸರಾಯೀ ಜೀವನವು ಪಶು ಪ್ರೇಮ ಪ್ರದರ್ಶನದೊಡನೆಯೇ ಅಂತ್ಯವಾಗಿದೆ. ಭಾರತೀಯರನ್ನೆಲ್ಲಾ ಪಶು ಸಮಾನವಾಗಿ ಇರುವವರಲ್ಲೇ ಅವರು ಆಸಕ್ತಿ ತೋರಿಸಿದ್ದಾರೆ. ಹಿಂದುಸ್ಥಾನದ ಏಳೂವರೆ ವರುಷಗಳ ಸಂಪಾದನೆಯಾಗಿ ಅವರು ಇಂಗ್ಲಂಡಿಗೆ ಕಟ್ಟಿಕೊಂಡು ಹೋಗುವ ಮೂಟೆ ಬಲು ದೊಡ್ಡದು. ಆ ಹೊರೆಯಲ್ಲಿ-ರಾಜಕೀಯ ಸಮಸ್ಯೆಯನ್ನು ಬಿಗುಗೊಳಿಸಿ ರಕ್ತ ಕುದಿಸಿದ, ಆಂದೋಲನ ದಮನಕ್ಕಾಗಿ ರಕ್ತ ಚೆಲ್ಲಿದ, ಆಹಾರಾಭಾವದಿಂದ ರಕ್ತವು ಬತ್ತಿಸಿದ, ತ್ರಿವಿಧ ಪಾಪಗಳು ಸೇರಿವೆ. ಇಷ್ಟನ್ನು ಮೌನವಾಗಿ, ಅಚಲ ನಿಷ್ಠೆಯಿಂದ ಅವರು ಸಂಪಾದಿಸಿದ್ದರು.

ಮಹಾ ಸ್ವಾಭಿಮಾನಿ

ಲೋರ್ಡ್ ಲಿನ್‌ಲಿತ್ ಗೋ ಅವರಲ್ಲಿ ಎತ್ತಿ ಹೇಳತಕ್ಕ ಒಂದು ಗುಣವಿದೆ. ಅವರಲ್ಲಿದ್ದ ಅಧಿಕಾರ ಗಾಂಭೀರ್ಯಕ್ಕಿಂತ ಆತ್ಮಾಭಿಮಾನದ ಪರಿಮಾಣ ದೊಡ್ಡದು. ಎಷ್ಟೋ ರೈಲ್ವೇ ಸ್ಟೇಶನುಗಳಲ್ಲಿ ಬಂದಿಳಿಯುವ ಪ್ರಯಾಣಿಕರಿಗೆ ಮತ್ತು ಅವರ ಸಾಮಾನುಗಳಿಗೆ ಕೈ ಕೊಡುವದನ್ನೇ ಉದ್ಯೋಗವಾಗಿ ಇಟ್ಟುಕೊಂಡ ಕೂಲಿಗಳಿದ್ದಾರಷ್ಟೆ? ಅಂತೆಯೇ ಬಂದ ಬಂದ ವೈಸರಾಯರುಗಳಿಗೆ ಮತ್ತು ಪ್ರಮುಖ ಯುರೋಪಿಯನರಿಗೆ ಹಸ್ತಲಾಘವ ಕೊಡುವದನ್ನೇ ತಮ್ಮ ವೃತ್ತಿಯಾಗಿ ಮಾಡಿಕೊಂಡ ಕೆಲವು ಶ್ರೀಮಂತ ಗೊಂಬೆಗಳು ಹಿಂದುಸ್ಥಾನದಲ್ಲಿಯೂ ಇದ್ದಾರೆ. ಹಣ, ಯುರೋಪಿಯನರ ಹಸ್ತ, ಇವೆರಡನ್ನು ಬಿಟ್ಟು ಬೇರಾವುದನ್ನೂ ಸ್ಪರ್ಶಿಸದ 'ಮರಗೈ ಮರುಳ್ಳ'ಗಳೇ ಈ ಶ್ರೀಮಂತರಿಗೆ. ಪ್ರಮುಖ ರಾಜಕರ್ತರನ್ನು, ಗಾಂಧಿ, ನೆಹರುಗಳಂತಹ ರಾಷ್ಟ್ರೀಯ ಪ್ರಮುಖರನ್ನು ಮತ್ತು ದೇಶವ್ಯಾಪೀ ಪಕ್ಷ ಸಂಘಗಳ ಮುಖಂಡರನ್ನು ಹೊರತು ಬೇರಾರನ್ನೂ ಲೋರ್ಡ್ ಲಿನ್‌ಲಿತ್ ಗೋ ಆಮಂತ್ರಿಸಿದವರಲ್ಲ, ಕೈ ಕುಲುಕಿದ್ದಿಲ್ಲ. ವೈಸರಾಯರ ಈ ನಡತೆಯನ್ನು 'ಶೇಕ್ ಹೇಂಡ್ ಸಾಹೇಬ'ರುಗಳು ತಮಗಾಗುವ ಕೀರ್ತಿ ಭಂಗದಂತಹ ಅಪಮಾನವೆಂದು ಭಾವಿಸಿಕೊಂಡಿದ್ದಾರೆ. ಕೌನ್ಸಿಲ್ ಓಫ್ ಸ್ಟೇಟಿನಲ್ಲಿ ಈ ಕುರಿತು ಪ್ರಶ್ನೆ ಕೇಳುವಷ್ಟು, ದೊಡ್ಡ ಮಾನಭಂಗವಿದೆಂದು ತೋರಿದ್ದಿತು ಮೇಲಿನ ಭೂಷಣ ಜೀವಿಗಳಿಗೆ. ಆದರೆ ಲೋರ್ಡ್ ಲಿನ್‌ಲಿತ್‌ಗೋರವರಿಗೆ ಇಂಥವರನ್ನು ಕಾಣಕೂಡದೆಂದು ಇಷ್ಟ. 'ಈಗಲಾದರೂ ಹೋದರಲ್ಲ!' ಎಂಬ ಸಂತೋಷ ಪ್ರದರ್ಶನಕ್ಕಾಗಿ ಅವರಿಗೆ ಕೊಡಬಹುದಾದ ಯೋಗ್ಯ ಬಿರುದೆಂದರೆ 'ಜನ ಜಂಬ ವಿರೋಧಿ!' 'ನನ್ನ ಪತ್ರವನ್ನು ತಡೆಯುವ ಧೈರ್ಯ ಯಾರಿಗಿದೆ' ಎಂದು ಹಂಕರಿಸಿದ ಮಿ. ಜಿನ್ನರ ಪತ್ರವನ್ನು ಮರು ಮಾತಾಡದೆ ಹಿಂದಿರುಗಿ ಕಳಿಸಿದವರಿವರು! ಭಾರತದ ಬಹುಸಂಖ್ಯಾಕರು ಗಾಂಧಿಯವರ ಬೆನ್ನ ಹಿಂದಿದ್ದಾರೆ ಎಂದು ಇವರು ಬಾಯಿ ಬಿಚ್ಚಿ ಹೇಳದಿದ್ದ ವಸ್ತುಸ್ಥಿತಿಯನ್ನರಿತವರು. ಅವರು ಆಡಂಬರಗಳಿಲ್ಲದವರು, ಕಾರ್ಯ ಸಾಧಕರು. ಆದರೆ ಈ ಗುಣಗಳನ್ನೇ ಉಪಕರಣಗಳಾಗಿ ಮಾಡಿ ಬ್ರಿಟಿಷ್ ಸಾಮ್ರಾಜ್ಯ ರಕ್ಷಣೆಯ ಮಹಾ ಯಜ್ಞಕ್ಕೆ, ಮಾನುಷತ್ವ, ಸ್ವಾತಂತ್ರ್ಯಗಳನ್ನು ಪೂರ್ಣಾಹುತಿ ಕೊಟ್ಟು ಮುಗಿಸಿಯೇ ಈಗ ಹೊರಡಲಿದ್ದವರು.

'ಅಪಸ್ವರದ ಕೂಗು'!—

—ಇದು ಲೋರ್ಡ್ ಲಿನ್‌ಲಿತ್‌ಗೋರವರಿಗೆ ಕೊಡಬಹುದಾದ ಇನ್ನೊಂದು ಬಿರುದು. ಬ್ರಿಟನರ ಮುಖ್ಯ ಗುಣವಾದ ಸಾಮ್ರಾಜ್ಯ ಪ್ರೇಮವೊಂದು ಮಾಸಿ ಹೋದರೆ ಲೋರ್ಡ್ ಲಿನ್‌ಲಿತ್‌ಗೋರವರು ಮಾಜೀ ವೈಸರಾಯರಾದಾಗ ತನಗೆ ದೊರೆತ ಪ್ರತಿಫಲಗಳಿಗಾಗಿ ಕಣ್ಣೀರಿಡುವ ಭೀಕರ ಸ್ಮರಣೀಯರು! ಇಲ್ಲಿ ಭಾರತದಿಂದ ಅವರ ಸಹಚರಿಯಾಗಿ ಹೊರಡಲಿರುವದು 100 ಮಿಲಿಯ ಭಾರತೀಯರ ಶಾಪ, ಅಲ್ಲಿ ಸ್ವಾಗತಕ್ಕೆ ಸಿದ್ಧವಾಗಿರುವದು ಕೆಲವೇ ಮಂದಿ ಅಧಿಕಾರಿಗಳ ಆಶೀರ್ವಾದ. ಸತ್ಯ ಸ್ಥಿತಿಯನ್ನರಿತ ಬ್ರಿಟಿಷರವರ ದೃಷ್ಟಿಯಲ್ಲಿ ನೋಡುವದಾದರೆ ಮಿ. ಚರ್ಚಿಲ್ಲರಿಗೆ ಎರಡನೆಯ ಸಾಧಕ ಲೋರ್ಡ್ ಲಿನ್‌ಲಿತ್ ಗೋ ಎನ್ನಬೇಕು. ಯಾವನೇ ಒಬ್ಬ ಬ್ರಿಟಿಷ್ ರಾಯಭಾರಿ–ಪ್ರತಿಷ್ಠಿತ ವಿದೇಶ ಮಂತ್ರಿ ಮಿ. ಅಂತೋನಿ ಈಡನ್ ಕೂಡ—ಇದಿರಿಸಿರದ ಬಿಗು ಸಮಸ್ಯೆಗಳಲ್ಲಿ ಒದ್ದಾಡಿ ಈ ವೈಸರಾಯಿ ಗೆದ್ದಿದ್ದಾರೆ, ಸಾಮ್ರಾಜ್ಯ ರಕ್ಷಣೆ ಮಾಡಿದ್ದಾರೆ. ಆದರೆ ಅಪರಿದ್ದ ಕತ್ತಲೆ ಕೋಣೆಯ ಗುರುತ್ವ ಬ್ರಿಟಿಷ ಸಾರ್ವಜನಿಕರಿಗಿಲ್ಲ, ಅವರು ಬಿಟ್ಟು ಬಂದ ಆ ಕಠಿಣ ಕಾರ್ಯ ಕ್ಷೇತ್ರದ ಕ್ಷೇಮವನ್ನು ಬ್ರಿಟನ್ನಿನ ನಾಗರಿಕರರಿಯರು. ಹಿಂದುಸ್ಥಾನದ ಕುರಿತು ಬ್ರಿಟನಿಗಿರುವ ಉಪೇಕ್ಷೆ, ಅಜ್ಞಾನವೇ ಇದಕ್ಕೆ ಕಾರಣ. ಅದ್ದರಿಂದಲೇ ಲೋರ್ಡ್ ಸಾಮ್ಯುಯೆಲರು ಮೊನ್ನೆ ಲಂಡನ್ ಭಾಷಣದಲ್ಲಿ "ಯಾರು ವೈಸರಾಯರ ದಕ್ಷತೆ, ಕಾರ್ಯ ನಿಷ್ಠೆ ಪ್ರದರ್ಶಿಸಿಯೂ ಸಂಕಷ್ಟ ಕೀರ್ತಿ ಕೇಳಿಲ್ಲವೋ ಆ ಲೋರ್ಡ್ ಲಿನ್‌ಲಿತ್ ಗೋ ನನ್ನ ಆದರ್ಶ" ಎಂದಿದ್ದಾರೆ. ಅಂತೂ ಇವರು ಇಲ್ಲಿ ಹೊತ್ತ ಆರೋಪಕ್ಕೆ ಸರಿದೂಗುವಷ್ಟು ಆದರ ಅಲ್ಲಿ ದೊರಕುವಂತಿಲ್ಲ. ಹೋಗುವ ವೈಸರಾಯರ ಕೀರ್ತಿಯ ಆಯ ವ್ಯಯ ಪಟ್ಟಿ ಹೀಗಿದೆ. ಆದರೆ ಲೋರ್ಡ್ ಲಿನ್‌ಲಿತ್‌ಗೋ ಇದಕ್ಕಾಗಿ ಅಳುವಂತಿಲ್ಲ, ಸಾಮ್ರಾಜ್ಯ ಸೇವೆ ಸಲ್ಲಿಸಿ ಕೃತಕೃತ್ಯನಾದೆನೆಂಬ ಆತ್ಮ ತೃಪ್ತಿ ಅವರಿಗಿರಬಹುದು.

ಲೋರ್ಡ್ ವೇವೆಲ್

'ಚುರುಕು ಬುದ್ಧಿಯ ಆನೆ ತಾನು ಕಾಲಿಡಲಿರುವ ಸಂಕಟವನ್ನು ಮುಂದಾಗಿ ಪರೀಕ್ಷಿಸಿಕೊಳ್ಳುತ್ತದೆ'—ಲೋರ್ಡ್ ವೇವೆಲರಿಗೆ ಲಂಡನಿನಲ್ಲಿತ್ತ ಸತ್ಕಾರ ಕೂಟವೊಂದರಲ್ಲಿ ಭಾರತ ಕಾರ್ಯದರ್ಶಿ ಮಿ. ಆಮೆರಿಯವರ ಮಾತು ಹೌದಂತೆ! ನಮ್ಮ ಭಾವೀ ವೈಸರಾಯಿ, ಉಪನಯನವಾಗಲಿರುವ ಹುಡುಗ ಮಂತ್ರಾಭ್ಯಾಸ ಮಾಡುವಷ್ಟು ನಿಷ್ಠೆಯಿಂದ ಭಾರತೀಯ ಪರಿಸ್ಥಿತಿಯ ಅಭ್ಯಾಸ ಮಾಡುತ್ತಿದ್ದಾರಂತೆ. ಪಾರ ಪ್ರವಚನ, ಕೂಟ ಸಮ್ಮೇಲನಗಳನ್ನೆಲ್ಲಾ ಮುಗಿಸಿ, ತಾ 21 ರಲ್ಲಿ ಬಕ್ಕಿಂಗ್ಹಾಮ್ ಅರಮನೆಯಲ್ಲಿ ಚಕ್ರವರ್ತಿಗಳಿಂದ ವಿದಾಯ ಮರ್ಯಾದೆ ಪಡೆದೂ ಆಗಿದೆ. ಇನ್ನು ಕೆಲವೇ ದಿನಗಳೊಳಗೆ ಅವರು ಹಿಂದುಸ್ಥಾನಕ್ಕೆ ಹೊರಡಲಿದ್ದಾರೆ. ಈ ತನಕ ಪ್ರಕಟವಾಗಿರುವ ಲೋರ್ಡ್ ವೇವೆಲರ ಅಭಿಪ್ರಾಯಗಳು ತಪ್ಪಲ್ಲ. 'ನಾನು ಹಿಂದುಸ್ಥಾನದ ಯಥಾರ್ಥ ಮಿತ್ರ' 'ಭಾರತೀಯ ರಾಷ್ಟ್ರೀಯ ಭಾವನೆಯನ್ನು ಪ್ರೋತ್ಸಾಹಿಸಬೇಕು' 'ಅದು ತನ್ನ ಗುರಿ ಸೇರುವಂತೆ ಮನಸಾ ಪ್ರಯತ್ನಿಸುತ್ತೇನೆ' 'ಭಾರತದ ಮೇಲೆ ಇನ್ನು ಭಾರ ಹೊರಿಸಬಾರದು' 'ಹಿಂದುಸ್ಥಾನವು ಆರ್ಥಿಕ ಸಾಮಾಜಿಕ ಮಹಾ ಗಂಡಾಂತರಕ್ಕೊಳಗಾಗಿದೆ; ಸರ್ವ ಶಕ್ತಿಯಿಂದ ಈ ಭಾಗದಲ್ಲಿ ಸುಧಾರಣೆಯಾಗಬೇಕು'—ಇತ್ಯಾದಿ ಮಾತುಗಳು ಬ್ರಿಟಿಷ್ ಪತ್ರಿಕೆಗಳಿಂದ ಶ್ಲಾಘನೆ ಪಡೆದಿವೆ, 'ನುಡಿಯಲ್ಲಿ ತಪ್ಪಿಲ್ಲ' ಎಂದು ಹಿಂದೀಯರೂ ಹೇಳುವಂತಾಗಿದೆ. ಕಾರ್ಯದಲ್ಲಿ?

ಅವರಲ್ಲಿರುವ ಶಂಕೆ

ಸೇನಾನಿ ವೇವೆಲರ ಎದೆಗೆ ವೈಸರಾಯೀ ಮೊಹರು ಬಿದ್ದೊಡನೆ ಅವರು ನಾಗರಿಕರಾಗಿ ಹೋದುದಷ್ಟೇ ಅಲ್ಲ-ನಯವಿದರೂ ಆಗಿದ್ದಾರೆ. ಮರ ಕಡಿಯುತ್ತಿದ್ದವನನ್ನು ಹೂದೋಟದೊಳಗೆ ಹೊಗಿಸಿದರೆ ಅವನು 'ಹೂ ಕೀಳುವ ಹಿಂಸೆಗೂ ಶಂಕಿಸುತ್ತಾನೆ!' ಸೈನಿಕ ನಾಗರಿಕನಾದ-ಸೇನಾನಿ ವೈಸರಾಯಾದ-ಎಂದು ವೇವೆಲರ ಮುಖ ಮುಂದೆ ಒಂದೊಡನೆ ಭಾರತ ದಿಗಿಲುಗೊಂಡಿದ್ದಿತು. ಅದರ ನಿವಾರಣೆಗಾಗಿ ಭಾವೀ ವೈಸರಾಯರು ಉಪಚಾರೋಕ್ತಿಗಳನ್ನೆಲ್ಲಾ ವ್ಯಯಿಸಿಬಿಟ್ಟಿದ್ದಾರೆ. ಇವೆಲ್ಲ ಮಾತುಗಳ ಮೂಲವೆಂದರೆ ಶಂಕೆ; ಮದುಮಗಳ ಸಂಕೋಚದಂತಹ ಸಂಕಟ, ಹೊರತು ಸ್ವಭಾವವೇ ಅದಲ್ಲ. ಲೋರ್ಡ್ ವೇವೆಲರು ಹಿಂದೀ ಸೈನಿಕರ ಭಕ್ತಿ, ಗೌರವಗಳನ್ನು ಪಡೆದಿದ್ದ ಸೇನಾನಿ, ಆ ಮನುಷ್ಯ ಯಂತ್ರಗಳನ್ನು ಚಾಲನೆ ಮಾಡುವ 'ಎಂಜಿನು' ಆಗಿ ಇದ್ದವರು, ಸೇನಾನಿ ಧರ್ಮದಂತೆ ಲೋರ್ಡ್ ವೇವೆಲರಿಗೆ ಮುನಿಯುವದು ಮತ್ತು ಮರೆಯುವದೂ ತಿಳಿದಿದೆ, ಹೊಗಳುವದು ಮತ್ತು ಹೊತ್ತುಕೊಳ್ಳುವದೂ ಗೊತ್ತಿದೆ. ಆದರೆ ಇವೆರಡಕ್ಕೊಂದು ಮಧ್ಯ ನೀತಿಯೆ ಅಲ್ಲಿಲ್ಲ. ವೈಸರಾಯ್ ಸೇನಾನಿಯಾಗಿರುವಾಗ, ಅವರಲ್ಲಿ ಸೈನಿಕ ಬುದ್ಧಿಯಿದ್ದುದು ನಿಜವಾದರೆ ಈ ಮಧ್ಯವರ್ತೀ ಧೋರಣೆಯಲ್ಲಿರಲು ಸಾಧ್ಯವೇ ಇಲ್ಲ. ಅದು ನುರಿತ ರಾಜಕೀಯ ನಿಪುಣನಿಗೆ ಮಾತ್ರ ಸಿದ್ಧಿಸತಕ್ಕ ಗುಣ. ನೇಮಕವಾದಂದಿನಿಂದ ಈ ಗುಣ ಸಂಪಾದನೆಗಾಗಿ ವೇವೆಲರು ಗಾಢ ಸಾಧನ ನಡಿಸಿದ್ದಾರೆಂಬುದು ನಿಜ. ಆದರೆ ಅವರ ಭಾಷಣಗಳಿಂದ ಈ ತನಕ ಅದು ಸಿದ್ಧಿಸಿದಂತೆ ಕಂಡುಬರುವದಿಲ್ಲ. ಅವರು ಸೇನಾನಿಯಾಗಿಯೇ ಇದ್ದಾರೆ, ಆದರೆ ಹಿಂದುದೇಶವನ್ನು ವೈರಿ ರಾಷ್ಟ್ರವಾಗಿ ಗಣಿಸದೆ ಮಿತ್ರರಾಷ್ಟ್ರವಾಗಿ ಗಣಿಸಿದ್ದಾರೆ, ಎಂಬುದಿಷ್ಟು ಸ್ಪಷ್ಟವಾಗುತ್ತದೆ; ಸಂತೋಷ!

ವೈಸರಾಯಿಗಳ ಗಮನಾಗಮನಗಳು ಭಾರತದಲ್ಲಿ ಇಳಿತ ಭರತವನ್ನುಂಟುಮಾಡಲಾರವು. ಆದರೆ ಕೆಲಸವಿಲ್ಲದವನು ಮುಂಭಾಗದಲ್ಲಿ ಹೋಗುವವರ ಎದುರಿನ ಅಂದಚೆಂದವನ್ನು ಪರೀಕ್ಷಿಸುತ್ತಾ ಕತ್ತು ಕೊಳ್ಳುವದಿದೆ. ಕರ್ತವ್ಯಶೂನ್ಯ, ಸ್ತಬ್ಧ ಭಾರತವಿಂದು ವೈಸರಾಯರುಗಳ ಆಗಮನ ನಿರ್ಗಮನವನ್ನು ಈ ದೃಷ್ಟಿಯಿಂದಲೇ ನೋಡುತ್ತಿದೆ!



ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ರುಚಿ! **ಸೆಂಟ್ರಲ್ ಕೆಫೆ** ರುಚಿ!!
ಶ್ರೀನಿವಾಸ ಬಿಲ್ಡಿಂಗ್ಸ್, ಹೆಡ್ ಪೋಸ್ಟಾಫೀಸ್ ಸರ್ಕಲ್, ಶಿವಮೊಗ್ಗ.
ಪ್ರಯಾಣಿಕರಿಗೆ ಉಳಿದುಕೊಳ್ಳಲು ಸ್ಥಳಾನುಕೂಲ ಏರ್ಪಡಿಸಿರುತ್ತೆ
ಸಕಾಲದಲ್ಲಿ ಉತ್ತಮವಾದ ಊಟ, ಕಾಫಿ ಮತ್ತು ಹಸನಾದ ತುಪ್ಪದಲ್ಲಿ ತಯಾರಿಸಿದ ತಿಂಡಿ ದೊರೆಯುತ್ತೆ
ಈ ಸ್ಥಳವು ರೈಲ್ವೆಸ್ಟೇಷನ್, ಬಸ್ ಸ್ಟ್ಯಾಂಡ್, ಕೋರ್ಟುಗಳಿಗೆ ಮಧ್ಯ ಸ್ಥಳದಲ್ಲಿದೆ
ಎಸ್ ರಾಮದಾಸ್, ಪ್ರೊಪ್ರೈಟರ್

ಸ್ಥಿತಿ ಗತಿ

★

ಮುಸಲನಿ ರಕ್ಷಣೆ.

ಬೊಡೋಗ್ಲಿಯೋ ಸರಕಾರವು ಮುಸಲನಿಯನ್ನು ಬಂಧಿಸಿ ದೂರದ ದ್ವೀಪದಲ್ಲಿ ಗುಪ್ತ ಸ್ಥಳದಲ್ಲಿ ಅಡಗಿಸಿಟ್ಟಿದ್ದಿತು. ಬಲವಾದ ಪಹರೆಯನ್ನಿಟ್ಟು, ಯಾವ ವಿಧದಿಂದಲೂ ಪಾರಾಗದಂತಹ ಮುಂಜಾಗರೂಕತೆ ವಹಿಸಿದ್ದಿತು. ಯಾರಾದರೂ ಬಿಡುಗಡೆಗಾಗಿ ಪ್ರಯತ್ನಿಸಿದರೆ ಕೂಡಲೇ ಮುಸಲನಿಯನ್ನು ಗುಂಡಿಟ್ಟು ಕೊಲ್ಲುವಂತೆ ಕಾವಲುಗಾರರಿಗೆ ಆಜ್ಞೆ ಕೂಡಾ ಇತ್ತು. ಆದರೇನು? ಜರ್ಮನ್ ಗಾಳಿಕೊಡೆಯವರು, ಎಂತಹ ಪ್ರತಿಭಟನೆಯನ್ನಾದರೂ ಮುರಿದೇ ಸಿದ್ಧವೆಂಬ ದೃಢನಿರ್ಧಾರದೊಡನೆ ಸಿಡಿಲ ಮರಿಗಳಂತೆ ಆಕಾಶದಿಂದ ಬೀಳುತ್ತಿದ್ದಾಗ ಪಹರೆಗಾರರ ಕೈಕಾಲು ಬಿತ್ತು! ಅವರು ಶಿಲಾ ಪ್ರತಿಮೆಗಳಂತೆ ನಿಂತುಬಿಟ್ಟರು. ಜರ್ಮನರು ಮುಸಲನಿಯನ್ನೆತ್ತಿಕೊಂಡು ಹಾರಿಹೋದರು. ಕೇಡಿ ಮುಸಲನಿಯನ್ನು ಮಿತ್ರರ ವಶಕ್ಕೊಪ್ಪಿಸುವೆವೆಂಬ ಶಪಥದ ಬದಲಿಗೆ ರಾಜ ಮತ್ತು ಬೊಡೋಗ್ಲಿಯೋ ರವರೇ ಈಗ ಮಿತ್ರರ ವಶವಾಗಿದ್ದಾರೆ.

ತ್ರಿರಾಷ್ಟ್ರ ಪರಿಷತ್ತು.

ಇಂಗ್ಲಾಂಡು, ಅಮೇರಿಕ, ರಷ್ಯಗಳ ತ್ರಿರಾಷ್ಟ್ರೀಯ ವಿದೇಶ ಮಂತ್ರಿಗಳ ಪರಿಷತ್ತಿನ ಪೂರ್ವ ಸಿದ್ಧತೆಯೇ ಹನುಮನ ಬಾಲದಂತೆ ಬೆಳೆದಿದೆ. ಕಾರಣವೇನುಗೊತ್ತೇ- ರಷ್ಯಾ ಮತ್ತು ಮಿತ್ರರಾಷ್ಟ್ರಗಳೊಳಗಿರುವ ತೀವ್ರ ಮತಭೇದ. ಹಿಟ್ಲರನ ಪಶ್ಚಿಮ ಗೋಡೆಯನ್ನು ಕೂಡಲೇ ಮುರಿಯಬೇಕೆಂಬ ರಷ್ಯನರ ಬೇಡಿಕೆಯನ್ನು ಅಕ್ಷರಶಃ ಅಂಗೀಕರಿಸಲು ಆಂಗ್ಲೋ ಅಮೆರಿಕಾನರು ಸಿದ್ಧರಿಲ್ಲ. ಮೇಲಾಗಿ ಜರ್ಮನಿಯನ್ನು ಸೋಲಿಸಿದ ಮೇಲೆ ಅದರ ವಿಷದ ಹಲ್ಲುಗಳನ್ನು ಮಾತ್ರ ಕಳಚಿದರೆ ಸಾಲದು; ಅದನ್ನೇ ಮರ್ದಿಸಿ 'ಹಾವಲ್ಲ ಹಗ್ಗ' ವನ್ನಿಸಿ ಬಿಡಬೇಕೆಂದು ಮಿತ್ರರ ಛಲ. ರಷ್ಯಾನರು ಜರ್ಮನಿಗಳೊಡನೆ ನಡೆಸಿದಷ್ಟು ದೊಡ್ಡ ಪರಿಮಾಣದ ರಕ್ತವ್ಯಾಪಾರವನ್ನು ಬೇರಾರೂ ನಡೆಸಿಲ್ಲ ಬಾವರೂ [illegible]ಸಿಯನ್ನು [illegible]ನಿರ್ಧರಿಸುವಷ್ಟು ಕಠಿಣ ಬದ್ಧಿ ಸಮತಾವಾದಿ ರಷ್ಯಕ್ಕಿಲ್ಲ. ಅವನ್ನು ಸಾಧಗೊಳಿಸಿ ಒದಗಿಸಬೇಕೆಂದು ಅವರ ವಾದ. ತ್ರಿರಾಷ್ಟ್ರ ಪರಿಷತ್ತೇನೋ ಸದ್ಯದಲ್ಲೇ ಮೋಸ್ಕೋದಲ್ಲಿ ನೆರೆಯಲಿದೆ ಆದರೆ ಭಾವೀ ಜಾಗತಿಕ ವ್ಯವಸ್ಥೆಯ ಕುರಿತು ಒಮ್ಮತವಾಗುವದು ಕಷ್ಟ.

ಚರ್ಚಿಲ್ಲರ ಭಾಷಣ.

ಕೆನಡಾ ಅಮೇರಿಕ ಸಂಚಾರ ಮುಗಿಸಿ ಬಂದ ಬ್ರಿಟಿಷ್ ಪ್ರಧಾನಿಗಳು ಕಾಮನ್ಸ್ ಸಭೆಯಲ್ಲಿ ಸುದೀರ್ಘ ಭಾಷಣ ಮೂಲಕ ಯುದ್ಧಗತಿಯ ವರದಿಯೊಪ್ಪಿಸಿದ್ದಾರೆ. ಜರ್ಮನಿ, ಜಪಾನಿಗಳು ಸೋಲಿನ ಹಾದಿಯಲ್ಲಿವೆ; ಆದರೆ ಪೂರ್ಣವಾಗಿ ಸೋಲಿಸುವ ಮೊದಲು ಮಿತ್ರರೂ ಬಹಳ ನೋತು ಹೋಗಬೇಕಾಗುತ್ತದೆ ಎಂದೇ ಅದರ ಒಟ್ಟಾರ್ಥ. ಮುಸಲನಿ ಪತನದಿನದಿಂದ ಇಟಲಿ ಸರಕಾರವು ಸಂಪೂರ್ಣವಾಗಿ ಮಿತ್ರರ ಕಡೆಗಿದ್ದರೂ, ಅಲ್ಲಿ ನಾಜಿಗಳನ್ನು ಅಡ್ಡಗಾಲಿಟ್ಟು ಕೆಡಹಲಾಗಲಿಲ್ಲ; ಇಟಲಿಯ ಹಡಗಗಳು ದೊರೆತುದೊಂದನ್ನು ಬಿಟ್ಟರೆ ಮಿಕ್ಕ ಯಾವ ಅನುಕೂಲತೆಯೂ ಮಿತ್ರರಿಗೆ ದೊರೆತಿಲ್ಲ. ಒಟ್ಟಿನ ಮೇಲೆ ಜಾಗತಿಕ ಕಗ್ಗತ್ತಲೆಯ ನಡುರಾತ್ರಿ ದಾಟುತ್ತಿದೆ ಮಾತ್ರ, ಬೆಳಗಾಗಲು ಇನ್ನೂ ಹೊತ್ತಿದೆ. ಆದರೆ ಮಿತ್ರರಾಷ್ಟ್ರಗಳ ಪ್ರಚಾರಕರು ಮಾತ್ರ ಇಷ್ಟರಲ್ಲೇ ಉದಯರಾಗ ಹಾಡುತ್ತಿದ್ದಾರೆ!

ರಷ್ಯಾನರ ವಿಜಯ

ಇತ್ತೀಚೆಗೆ ರಷ್ಯನರು ಪಡೆದ ವಿಜಯಗಳು ಬಹು ಪ್ರಾಮುಖ್ಯವಾದುವು. ಹಿಟ್ಲರರ ಮುಖ್ಯ ರಣ್ಯಾಸಾಗಿದ್ದ, ಹಾಗೂ ಜರ್ಮನರ ಪ್ರಮುಖ ಯುದ್ಧ ಕೇಂದ್ರವಾಗಿದ್ದ ಬೀಸ್ಮಾರ್ಕ್ಯು ಸ್ಮೊಲೆನ್ಸ್ಕ್ ನಗರವನ್ನು ಕೆಂಪು ಸೇನೆ ಪುನರಾಧೀನಪಡಿಸಿಕೊಂಡಿದೆ. ಎರಡು ವರುಷಗಳ ನಂತರ, ಯುರೋಪಿನ ಮೂರನೇ ಅತಿದೊಡ್ಡ ಹೊಳೆ ನೀಪರನ್ನು ಐದಾರು ಕಡೆಗಳಲ್ಲಿ ದಾಟಿ ರಷ್ಯನರು ಪಶ್ಚಿಮ ದಡಕ್ಕೆ ಬಂದಿದ್ದಾರೆ. ಕೀವ್ ನಗರದ ಪತನವು ನಿರೀಕ್ಷಿಸಲ್ಪಟ್ಟಿದೆ. ಆದರೆ ಇಲ್ಲಿ ಹಿಟ್ಲರರು ಅಪಜಯಕ್ಕೊಳಗಾದರೆನ್ನುವದಕ್ಕಿಂತ ತನ್ನದೊಂದು ಯೋಜನೆಯನುಸಾರವಾಗಿ ವರ್ತಿಸಿದರೆನ್ನುವದು ವಾಸಿ. ಯುರೋಪಿನಲ್ಲಿ ರಕ್ಷಣಾ ಲೈನಿನ ಗಡಿ ಕಮಿಕೊಂಡಂತೆಯೇ ನಾಜಿಗಳು ರಷ್ಯನ್ನರೂ ಒಂದು ಗಡಿ ನಿಶ್ಚಯಿಸಿಟ್ಟಿದ್ದರೆ ಎಲ್ಲಿಯೂ ಇಲ್ಲಿಯೂ ಆ ಗಡಿ ತನಕ ಜರ್ಮನರನ್ನೋಡಿಸಲು ಇನ್ನಾರಿಗೂ ಹೆಚ್ಚಿನ ಪ್ರಯಾಸವಿಲ್ಲ. ಜರ್ಮನರ ಶಕ್ತಿ,ಯುಕ್ತಿ,ಸಾಮರ್ಥ್ಯಮಾನಗಳು ನಿಜ ರೂಪದಿಂದ [illegible] ಈ ಗಡಿಗಳಲ್ಲೇ [illegible] ಪ್ರಕೃತ [illegible] ಸಲ್ಲಿದೆ.

ಚೀನದ ಸ್ಥಾನ

'ಏಸ್ಯವನ್ನು ಗುಲಾಮಗಿರಿಯಲ್ಲಿಟ್ಟ ಯುರೋಪು ಒಡೆತನದಲ್ಲಿದೆ'-ಇದು ಜಗತ್ತಿನ ನಿಜವಾದ ಚಿತ್ರ. ಆ ಪೈಕಿ ಜಪಾನರು ಯುರೋಪಿನಿಂದ ತಮ್ಮಲ್ಲಿಗಾಮದುಪಡಿಸಿಕೊಂಡುದು ಅಲ್ಲಿಯ ಸಾಮ್ರಾಜ್ಯಾಭಿಲಾಷೆಯನ್ನು ಮಾತ್ರ; ಮಿಕ್ಕವರೆಲ್ಲಾ ಅವರ ಸಾಮ್ರಾಜ್ಯಾಧಿಕಾರವನ್ನೇ. ಅರ್ಥಾತ್ ಏಸ್ಯದಲ್ಲಿ ಯುರೋಪಿಯನ್ ಸಾಮ್ರಾಜ್ಯದ ಬದಲಿಗೆ ಜಪಾನೀ ಸಾಮ್ರಾಜ್ಯ ಸ್ಥಾಪಿಸುವ ಸಾಧನೆ ಜಪಾನರದು. ಹೀಗೆ ಹುಲಿಗೆ ಗುರಿ ಹಿಡಿದವನು ಹುಲ್ಲೆಯನ್ನು ಕಡೆಗಣಿಸಲು ಸಿದ್ಧನಿದ್ದಾನೆ.—ಆಂಗ್ಲೋ ಅಮೇರಿಕಾನರ ಬೇಟೆಗೆದ್ದ ಜಪಾನು ಚೀನಾ ಯುದ್ಧವನ್ನು ಮುಗಿಸಲು ತಯಾರಿದೆ. ಇದಕ್ಕಾಗಿ ಒಂದಕ್ಕಿಂತ ಇನ್ನೊಂದು ಆಕರ್ಷಣೀಯವಾದಂತಹ ಸಂಧಿಸೂಚನೆಗಳು ಸರ್ತಿ ತಪ್ಪದೆ ಜಪಾನರಿಂದ ಬರುತ್ತಿವೆ ಎಂದು ಚೀನೀ ವಿದೇಶ ಮಂತ್ರಿಯೇ ಹೇಳಿದ್ದಾರೆ. ಈ ಸೂಚನೆಗಳು ಚೀನೀಯರಿಗೊಂದು ಉಪಕಾರ ಮಾಡಿವೆ. ಮಿತ್ರರಾಷ್ಟ್ರೀಯರು ಕಣ್ಣು ತೆರೆದು ಜಪಾನರನ್ನು ಕಡೆಗಣಿಸಬಾರದು, ಚೀನೀಯರಿಗೆ ಮಾತಿನ ಮೂಲಕವೇ ಅಲ್ಲ, ಕಾರ್ಯ ಮೂಲಕವೂ ನೆರವಾಗಬೇಕೆಂದು ಎದ್ದಿದ್ದಾರೆ.

ಅಂತಿಮ ಹೊಡೆತ ಸಿದ್ಧತೆ

ಅಮೇರಿಕದ ಸೇನಾಮಂಡಲ ಪ್ರಮುಖರಾದ ಜನರಲ್ ಜಾರ್ಜ್ ಮಾರ್ಶಲರು ಯುರೋಪಿನ ದ್ವಿತೀಯ ರಂಗದ ಪ್ರಮುಖ ಸೇನಾನಿಯಾಗಿ ನೇಮಕಹೊಂದಿದ್ದಾರೆಂದು ತಿಳಿದುಬರುತ್ತದೆ. ಅವರು ಸದ್ಯದಲ್ಲೇ ಲಂಡನಿಗೆ ಬರಲಿದ್ದಾರೆ. 'ನಮಗೆ ಧಾಳಿಗಾಗುವ ಸೇನೆ ಕೊಡಿ, ನಾವು ನಿಮಗೆ ವಿಜಯ ಕೊಡುತ್ತೇವೆ' ಎಂದು ಕಮಾಂಡರ್ ಪ್ರಿಯರ್ ಕ್ವಿ.ಪ.ನ್ಸ್ ಸಭೆಯ [illegible] ಸರಕಾರೀ ಸದಸ್ಯರಿಗಂದರು. ಅಂತೂ ಹಿಟ್ಲರರ ಪಶ್ಚಿಮ ಕೋಟೆಯನ್ನೊಡೆಯುವ ಪೂರ್ವ ಸಿದ್ಧತೆ ಭರದಿಂದ ಸಾಗಿದೆ. ಇತ್ತ ಜಪಾನರನ್ನೂ ಬೆಳೆಯಲು ಬಿಡಬಾರದು. ಜನರಲ್ ಮೇಕರ್ಥರ್ ಶಾಂತ ಸಮುದ್ರದಲ್ಲಿ ಮತ್ತು ಜನರಲ್ ವರ್‍ಟ್ರ್ ಬೇಟನರು ಬರ್ಮಾದಲ್ಲಿ, ಮಾರ್ಶಲ್ ಚಿಯಾಂಗರು ಚೀನದಲ್ಲಿ, ಪ್ರತ್ಯೇಕವಾಗಿಯೂ ಹೊಂದಿಕೆಯಾಗಿಯೂ ಜಪಾನರನ್ನು ಹಣ್ಣು ಮಾಡಬೇಕು ಎಂಬ ಯೋಜನೆಯೂ ತಯಾರಾಗಿದೆ. ಮಿ. ಚರ್ಚಿಲ್ಲರು ತನ್ನ ಭಾಷಣದಲ್ಲಂದಂತೆ ಮುಂದಿನ ವಾರಗಳ ಸೇನಾಚಲನೆಗಳೇ ಯುದ್ಧಾದೃಷ್ಟವನ್ನು ನಿಶ್ಚಯಿಸಬೇಕು.

ಈ ಕೈಕಂಭಗಳು.

ಮಿತ್ರ ಪಾಳಯಗಳ ಸೇನಾಚಾಲಕರಿವರು:—ರಷ್ಯದ ಸರ್ವ ಸೇನಾನಿ ಮಾರ್ಶಲ್ ಸ್ಟಾಲಿನ್, ಇವರಷ್ಟು ಭಾರಹೊತ್ತ ಸೇನಾನಿ ಪ್ರಕೃತ ಬೇರೊಬ್ಬನಿಲ್ಲ. ಚೀನದ ಸರ್ವ ಸೇನಾಧಿಪತಿ ಜನರಲಿಸಮೋ ಚಿಯಾಂಗ್ ಕೈಶೇಕ್; ಇವರು ಏಳು ವರುಷಗಳಿಂದಲೂ ಅವಿಶ್ರಾಂತಿಯಾಗಿದ್ದೂ ಕುಸ್ತಿ ನಿಲ್ಲಿಸದೆ ನಿಂತಿದ್ದಾರೆ. ಇಟಲಿ ಯುದ್ಧದ ಸೇನಾನಿ ಜನರಲ್ ಐಸೇನೋವರ್, ಇವರೇನೋ ಸರ್ತಿ ಪ್ರಕಾರ ಇದುವರೆಗೆ ವಿಜಯಪಡೆದಿದ್ದಾರೆ. ಶಾಂತಸಮುದ್ರದ ಮುಖ್ಯ ಸೇನಾನಾಯಕ ಜನರಲ್ ಮೇಕ್ ಅರ್ಥರ್, ಇವರು ಸ್ವಲ್ಪ ಸ್ವಲ್ಪವಾಗಿ ಜಪಾನರನ್ನು ಝಾಡಿಸಿ ತೆಗೆಯುತ್ತಾ ಇದ್ದಾರೆ. [illegible] ಸೇನಾನಿಯಾಗಿ ಈಗ ಮುಂದೆ ಬಂದವರು ಜನರಲ್ ಮೌಂಟ್ ಬೇಟನ್, ಇವರ ಪ್ರತಿಭೆ ಹೇಗೆಂದು ನೋಡಲಿಕ್ಕಿದೆ. ಯುರೋಪು ದ್ವಿತೀಯರಂಗದ ಪ್ರಮುಖ ನಾಯಕರಾಗಿ ಏಳಲಿರುವವರು ಜನರಲ್ ಮಾರ್ಶಲ್, ಇವರ ಕೈವಾಡ ಹೇಗೇನೆಂಬುದನ್ನು ಕಾಲವೇ ಕಲಿಸಿ ಕೊಡಬೇಕು.

ನವ ಘೋರಣೆ. ನೂತನಾಯುಧ

ಜರ್ಮನಿ, ಜಪಾನುಗಳೀಗ ಬಹುತೇಕವಾಗಿ ರಕ್ಷಣಾ ಯುದ್ಧ ವ್ಯವಸ್ಥೆಯಲ್ಲೇ ನಿರತವಾಗಿವೆ. 'ರಾಷ್ಟ್ರವೀರ ಮಹಾಸಂ[illegible] ಹಾಂತರದ ಗಡಿಯಲ್ಲಿದೆ. ಜಪಾನರು ಧ್ವನಿ ವಹಿಸಬೇಕು' ಎಂದು ಇದೀಗ ನೂತನ [illegible] ಜ. ಟೋಜೋ ಆಡಿತೋರಿಸಿದ್ದಾನೆ. ಜರ್ಮನಿಯಲ್ಲಿ ಗೋಬೆಲ್ಸನಂತೂ ಇತ್ತೀಚೆಗೆ ಏಳು ಸೂತ್ರಗಳನ್ನು ಜರ್ಮನರ ಮುಂದಿಟ್ಟಿದ್ದಾನೆ. 'ಏನೇ ಎಂದರೂ ಶರಣಾಗುವಂತಿಲ್ಲ' ಎಂಬುದು ಅವುಗಳಲ್ಲಿ ಮೊದಲನೆಯದು. ತನ್ನ ನೂತನಾಸ್ತ್ರದ ಪ್ರಸ್ತಾಪವನ್ನು ಯುದ್ಧಾರಂಭದಲ್ಲೇ ಹಿಟ್ಲರರು ಮಾಡಿದ್ದರು. ಮಿತ್ರ ಹಡಗಗಳ ಮೇಲೆ ಕೆಲವೆಡೆ ಬಿದ್ದ ತೀವ್ರ ಧ್ವಂಸಕ ನವ ಬಾಂಬುಗಳ ಕುರಿತು ಮಿ. ಚರ್ಚಿಲ್ಲರೂ ಮೊನ್ನೆಯ ಭಾಷಣದಲ್ಲಿ ಎಚ್ಚರಿಕೆಯಿತ್ತಿದ್ದಾರೆ. ಜರ್ಮನಿಯೊಳಗೊಳಗೊಟಿಗೆ ಮಿತ್ರ ಸೇನೆಗಳು ನುಗ್ಗುತ್ತಿದ್ದಂತೆ, ನಿಶ್ಶೇಷತಕ್ಕಾಗಿ ಅಳಿಕ್ಕುಳಕ್ಕಿಗೆವಾಗ ವಿಚಿತ್ರ ವಿಷ ಜಂತುಗಳು ಕಾಣಿಸಿಕೊಂಡ ಕಥೆಯಂತಹ ಅದ್ಭುತವೇ ನಡೆಯಬಹುದು; ಜರ್ಮನರ ಹಲವು ನೂತನೋಪಕರಣಗಳ ಪರಿಚಯವಾಗಬಹುದು. ಆದರೆ ಮಿತ್ರ ವೈಜ್ಞಾನಿಕರೇನು ಕುಪುದರಲ್ಲ!

The Canara Banking Corporation Limited.

(Incorporated in British India with limited Liability)

ESTD: 1906.

Head Office: **UDIPI**, S. Kanara.

(Branches & Agencies in all principal cities of India)

Authorised capital	Rs. 25.00.000/-
Issued & Subscribed	Rs. 16.00.000/-
Paid up capital	Rs. 10.06.000/-
Reserves	Rs. 3.85.000/-

Advances are made against approved securities and bills purchased or collected at most favourable rates. For further particulars please apply to the nearest Branch.

ನವಯುಗ

ಉಡುಪಿ, ಗುರುವಾರ, ೩೦-೯-೧೯೪೩

ದ. ಕ. ರೈತಬಂಧುಗಳನ್ನು-

ಮತ್ತೊಮ್ಮೆ ಕೆಣಕಿ ಕೇಳಬೇಕಾಗಿದೆ- 'ನಿಮ್ಮ ಸಂಘವೆಲ್ಲಿದೆ?' ಇಂದಿನ ಪರಿಸ್ಥಿತಿಯನ್ನು ನೋಡಿದರೆ ದಕ್ಷಿಣ ಕನ್ನಡದ ರೈತರು(ಒಕ್ಕಲು ಬೇಸಾಯದವರು ಮತ್ತು ಸಣ್ಣ ವರ್ಗದಾರರು) ಹೆಳವಾಗಿ ಸೇರುವ ಹಸಿಗಳಲ್ಲವೇ ಅಲ್ಲ-ಎಂದೆಂದಿಗೂ ಸಂಘಟಿತರಾಗದ ಗಾಜಿನ ಚೂರುಗಳು ಎಂದು ನಿಟ್ಟುಸಿರು ಬಿಡಬೇಕಾಗುತ್ತದೆ. ಈ ಕಾಲದಲ್ಲಿ ಕೂಡಾ ರೈತರದೆನ್ನುವ ಪ್ರತಿನಿಧಿ ಸಂಸ್ಥೆಯೊಂದಿಲ್ಲವೆಂದರೆ, ಇಲ್ಲಿಯವರ ಅಸಡ್ಡೆ, ಅಜ್ಞಾನಗಳನ್ನರಿಯದ ಹೊಸಬನೊಬ್ಬನು 'ಲೋಕದ ಅದ್ಭುತಗಳಲ್ಲೊಂದನ್ನು ಕಂಡೆ' ಎಂದು ಉದ್ಗರಿಸದಿರನು. ಯುಗಾರಂಭದ ಮೊದಲಾದರೂ ರೈತನೆಂದರೆ ಸರಕಾರ ಮತ್ತು ಮಿಕ್ಕ ವರ್ಗಗಳ ಪಾಲಿಗೆ ದೇವರಿಗೆ ಸಮ!-ಭಾಷಣಗಳೇ ಖನಗಳಲ್ಲಿ ಅವನ ನಾಮ ಸ್ಮರಣೆಮಾಡುವವರಿದ್ದರಲ್ಲದೆ, ಸ್ವತಃ ಅವನ ಪರಿಚಯ ಮಾಡಿಕೊಂಡ ಮಹಾ ತಪಸ್ವಿಗಳಿರಲಿಲ್ಲ. ಎಷ್ಟೆಷ್ಟು ಸಂಘಟನಾ ಬುದ್ಧಿಯಿರುತ್ತಿದ್ದರೆ ಆ ಕಾಲದ ತಾತ್ಸಾರವೇ ಸಾಕಾಗುತ್ತಿತ್ತು ರೈತರ ಒಗ್ಗಟ್ಟಿಗೆ. ಆದರೆ ರೈತರಲ್ಲಿ ಸಾಕಷ್ಟು ವಿದ್ಯಾ ಪ್ರಸಾರವಾಗುದಿಲ್ಲ, ಅವರಿಗೆ ಜ್ಞಾನದಾನ ಮಾಡಿದವರಿಲ್ಲ, ಎಂಬುದರಿಂದ ಆಗಿನ ಜಡಮನೋವೃತ್ತಿ ಗೊಂಡು ಕ್ಷಮೆಯಿದ್ದಿತು ಯುದ್ಧಾರಂಭವಾದ ಮೇಲೆ ರೈತನಿಗೊದಗಿದ ನಷ್ಟ ಕಷ್ಟ, ಅಪಮಾನಗಳು ಅಗಣಿತ; ಎಷ್ಟು ಹೆಚ್ಚೆನೆಂದರೆ, ಆತನು ಅರ್ಥಶಾಸ್ತ್ರವನ್ನು ಕರಗಿಸಿಕೊಂಡ ಪಂಡಿತನೇ ಆಗಿರಬೇಕೆಂದಿಲ್ಲ-ರಾಜಕೀಯ ವಿಷಯಗಳನ್ನು ಜೀರ್ಣಿಸಿಕೊಂಡ ಮುತ್ಸದ್ದಿಯಾಗಿರಬೇಕೆಂದಿಲ್ಲ-ದುಡಿದು ಉಣ್ಣುವ ಮನುಷ್ಯನಾಗಿರುವದಾದರೂ ಹೌದಾದರೆ ಕಣ್ಣೀರಿಯದಿರಲು ಸಾಧ್ಯವೇ ಇಲ್ಲ! ಆದರ ದಕ್ಷಿಣಕನ್ನಡದ ರೈತರು ಕಣ್ತೆರೆದ ಚಿಹ್ನೆಗಳಲ್ಲಿ ಗೋಚರಿಸುತ್ತಿವೆ? ಅವರು ತಮ್ಮ ಪರವಾಗಿ ವ್ಯವಹರಿಸಲು ಸ್ಥಾಪಿಸಿಕೊಂಡ ಅಧಿಕೃತ ಸಂಸ್ಥೆಯಾವುದಿದೆ? ನಾವು ಈ ಕುರಿತು ಹಿಂದೊಮ್ಮೆ ಆಗ್ರಹ ಪೂರ್ವಕ ವಿನಂತಿಸಿಕೊಂಡಿದ್ದೆವು. ದೇಶಾಭಿಮಾನಿಗಳಿಗೆ ಕರ್ತವ್ಯ ಭೋಧಕೊಡುವ ಬೇಸಾಯಗಾರರ ದುಸ್ಥಿತಿಯನ್ನು ಪ್ರತಿಬಿಂಬಿಸುವ ದರ್ಪಣವಾಗಿ ಇರಲಿ,ಎಂದು ಆ ನಿವೇದನೆ ಮಾಡಿಕೊಂಡಿದ್ದೆವು. ಆದರೆ,'ಬಟ್ಟೆಗೆ ಬೆಂಕಿಬಿದ್ದುದನ್ನು ತೋರಿಸಿಕೊಡಬೇಕಾದೀತು; ಹೊಟ್ಟೆಗೆ ಬೆಂಕಿ ಬಿದ್ದುದನ್ನೂ ತೋರಿಸಿಕೊಡಬೇಕೆ?' ಎಂಬ ನಾಣ್ಣುಡಿಯಿದೆ. ತಮ್ಮ ಹೊಟ್ಟೆಯುರಿ ತಮಗೇನೇ ತಿಳಿಯದ ಪ್ರಜ್ಞಾ ಶೂನ್ಯರಾದವರನ್ನು ಅನ್ಯರ ಹಿತಸೂಚನೆಯೆಚ್ಚರಿಸಲಾರದು.

'ರೈತನಿಗೆ ಬೆಳೆಸುವ ಹಕ್ಕು ಮಾತ್ರ;ಬೆಲೆ ಕಟ್ಟುವ ಅಧಿಕಾರವಿಲ್ಲ' ಎಂದು ಆ ಬಾರಿ ನಾವು ಆಡಿತೋರಿಸಿದ್ದರೆ, ಸರಕಾರನಿಂದು ಅದನ್ನು ಪ್ರತ್ಯಕ್ಷವಾಗಿ (ಎಂದಿನಂತೆ ಅವ್ಯಕ್ತ ಹಾದಿಯಲ್ಲಲ್ಲ) ಮಾಡಿ ತೋರಿಸಲಣಿಯಾಗಿದೆ. 'ಈ ಬಾರಿಯ ಕಂದಾಯವನ್ನು ಧಾನ್ಯ ರೂಪದಲ್ಲೇ ಪಡೆಯುವ ಕುರಿತು ಸರಕಾರವು ಪರ್ಯಾಲೋಚನೆ ನಡೆಯುತ್ತಿದೆ' ಎಂದು ಮದ್ರಾಸ್ ಗವರ್ನರರ ಸಲಹೆಗಾರ ಶ್ರೀ. ರಾಮಮೂರ್ತಿಯವರಂದಿದ್ದಾರೆ. 'ಆಲೋಚನೆ ನಡೆಸುತ್ತಿದೆ' ಎನ್ನುವದಕ್ಕಿಂತ 'ಸಿದ್ಧತೆ ನಡೆಯುತ್ತಿದೆ' ಎಂಬುದು ನಿಜವಾದ ಮಾತು. ಸರಕಾರವು ಕೆಲವಂಶಗಳನ್ನು ತುಲನೆ ಮಾಡಿ ನೋಡಿಕೊಳ್ಳಬೇಕು; ರೈತರು ವಂಚಿಸದಂತೆ ಪ್ರಕೃತ ಸಂಧಿಗ್ಧವಾಣಯಲ್ಲೇ ಆಡಬೇಕು—ಎಂಬುದಕ್ಕಾಗಿಯೇ ಈ ಯೋಜನೆಗೆ 'ಅಂದಾಜು ನೋಡಿಕೊಳ್ಳುವದು' ಎಂದು ಸರಕಾರವು ಸದ್ಯಕ್ಕಿಟ್ಟ ಹೆಸರು. ಸ್ಪಷ್ಟವಾದ ಏಕವಾಕ್ಯದಲ್ಲಿ ಹೇಳುವದಾದರೆ, ರೈತನಿಗೆ ಈ ಬಾರಿ ತನ್ನ ಧಾನ್ಯದ ದರ್ಶನಾಧಿಕಾರ ಮಾತ್ರ. ಕಟಾವಾದೊಡನೆ ಅವನ ಕಣಜದಲ್ಲಿ ಸರಕಾರದ ಕೈಯ್ಯಾಡಲಿದೆ! ಈ ಯೋಜನೆಯಿಂದ ರೈತರಿಗೆ ಲಾಭವೇ ನಷ್ಟವೇ ಎಂಬ ಪ್ರಶ್ನೆಯ ಮೊದಲು 'ಇದು ಸಹನೀಯವೆ?' ಎಂದು ಕೇಳಬೇಕಾಗಿದೆ. ಇನ್ನು ಅದರ ಲಾಭ-ನಷ್ಟಗಳನ್ನು ತಿಳಿಯಲಾಗುವಂತೆ ರೈತರಿಗೀ ಯೋಜನೆಯನ್ನು ವಿವರಿಸಿ ಹೇಳಿದವರಿಲ್ಲ; ಹೇಳುವ ಅವಶ್ಯಕತೆಯನ್ನು ಸರಕಾರವು ಮನಗಂಡಿಲ್ಲ. ಎಲ್ಲವನ್ನೂ ತೂಗಿನೋಡಿ ತಮ್ಮ ಅಭಿಪ್ರಾಯವನ್ನು ಮುಂದಿಡಲು-ಇದೊಂದು ಹೊಸ ವಿಪತ್ತೆಂದಾದರೆ ಅದಕ್ಕೊಂದು ಶಮನ ಅಥವಾ ಪ್ರತಿಭಟನೆ ಕೊಡಲು ರೈತರ ಪ್ರತಿನಿಧಿ ಸಂಸ್ಥೆಯೊಂದಿಲ್ಲ. ಇಂತಹ ದುಸ್ಥಿತಿಗೇನನ್ನಬೇಕು? ಇನ್ನಾದರೂ ರೈತರು ಹಾಗೂ ದೇಶಾಭಿಮಾನಿಗಳು ಕಣ್ತೆರೆಯಲಾರರೆ?

ದುರ್ಬೀನು

ಹಗ್ಗ ಹಿಡಿದೆಳೆವಾಗ ಬಾರದ ದನ, ಹುಲ್ಲು ತೋರಿಸಿದಾಗ ಬರುತ್ತದೆ. ಒತ್ತಾಯದಿಂದಾಗದ ಕಾರ್ಯ ಒಲವಿನಿಂದಾಗುತ್ತದೆ

oo oo oo

ಅಂಗೈಯಲ್ಲಿ ರೋಮ ಮೊಳೆಯುವದಿಲ್ಲ; ಅಕಲಂಕನಲ್ಲಿ ದೋಷ ಮೊಳೆಯುವದಿಲ್ಲ.

oo oo oo

ನಾಯಿ ನಗುವದೆಂದಿಲ್ಲ; ಪಾಪಿ ಪ್ರಸನ್ನನಾಗುವದೆಂದಿಲ್ಲ.

oo oo oo

ಕಾಲು ಜಾರಿದರಾಗದು; ಕಾಯಿದೆ ಮೀರಿದರಾಗದು. ಅಸ್ತಿತ್ವವೇ ಕಾಲು-ಶಿಸ್ತೇ ಕಾಯಿದೆ.

oo oo oo

ಒಂದೇ ಇದ್ದುದು ಕಾಳು-ಒಟ್ಟು ಹಾಕಿದುದು ಕಣಜ. ಸ್ವಕಾರ್ಯ ಸಾಧಕ ಮನುಷ್ಯ-ಸರ್ವ ಹಿತಸಾಧಕ ಮಾನ್ಯ.

oo oo oo

ಹಾಲು ಕುಡಿದು ಹಲ್ಲುದುರುವಂತಿಲ್ಲ; ಜ್ಞಾನ ಘೋಷೆಯಿಂದ ಮಾನ ಹೋಗುವಂತಿಲ್ಲ

oo oo oo

ಮಲೇರಿಯ ಶಮನಕ್ಕೆ ಕ್ವಿನೀನು; ಮದಾಂಧರ ಮರ್ದನಕ್ಕೆ ಕಾನೂನು.

oo oo oo

ಗಿಳಿ ಮುದ್ದು ಮುದ್ದಾಗಿ ಮಾತಾಡುತ್ತದೆಂದು ಚುಂಬಿಸ ಹೋದರೆ ಕೊಕ್ಕಿನಿಂದ ಕುಟುಕಿ ನೋಯಿಸುವದಿದೆ; ನವಿನುಡಿಯನ್ನು ನಂಬಿ ಸಹವಾಸ ಬೆಳೆಸಿದರೆ ಸಂಕಷ್ಟಕ್ಕೊಳಗಾಗುವದಿದೆ.

oo oo oo

ಹಣೆಗೆಳೆದ ನಾಮವನ್ನು ಉಜ್ಜಿ ತೆಗೆಯಬಹುದು; ಹಣೆಯಲ್ಲಿ ಬಿದ್ದ ನೆರಿಗೆಯನ್ನು ಮಾಸಿ ಬಿಡಲಾಗುವದಿಲ್ಲ. ಆಡಂಬರ ಬಿಡಬಹುದು; ಅಭ್ಯಾಸ ಬಿಡಲಾಗುವದಿಲ್ಲ.

oo oo oo

ಕೆಸರುಗೈಯ್ಯವ ಬೆನ್ನು ತಟ್ಟದಿರುವದೇ ವಾಸಿ; ಕಲ್ಮಷ ಹೃದಯಿಯ ಶ್ಲಾಘನೆ ದೊರೆಯದಿರುವದೇ ವಾಸಿ.

oo oo oo

ಎದೆ ಬಿಚ್ಚಿ ಮುಖ ಮುಚ್ಚಿಕೊಂಡರದು ಲಜ್ಜೆಯಲ್ಲ; ಹೇಯ ಬುದ್ಧಿ ಪ್ರದರ್ಶಿಸಿ, ಹೆಗ್ಗಳಿಕೆಯುಳಿಸಿಕೊಂಡರದು ಹಿರಿತನವಲ್ಲ.

oo oo oo

ತೋಟ ಹೊಕ್ಕವ ಕೀಟದ ಕಿರಿಚಾಟ ಕೇಳಿ ನಿಲ್ಲಬಾರದು; ಕಾರ್ಯಮಗ್ನ ಕಿರುಕುಳಗಳನ್ನು ಗಣಿಸಿ ಸ್ತಬ್ಧನಾಗಬಾರದು.

oo oo oo

ಪಥಿಕ ಪಥ ನೋಡಿದರಾಯಿತು-ಹಾದಿಯ ಕಲ್ಲುಮುಳ್ಳುಗಳನ್ನೂ ಲೆಕ್ಕಿಸುತ್ತಾ ಹೋಗಬೇಕೆಂದಿಲ್ಲ. ಕೆಲಸಗಾರ ಕಾರ್ಯದತ್ತ ಗಮನವಿಟ್ಟರಾಯಿತು—ಅಲ್ಲಿಯ ಕಹಿ, ಕಳಂಕ, ಕಪಟಗಳನ್ನೆಲ್ಲಾ ಗಣಿಸಬೇಕೆಂದಿಲ್ಲ.

oo oo oo

ಗಾಯನ ಕೇಳಲು ಹೊರಟವನಾದರೂ ರೋದನ ಕೇಳಿ ತಡೆದಾನು; ಹಿರಿಬಯಕೆಯಿಂದ ಮುಂದೊತ್ತುವವನಾದರೂ ಕಿರುಕುಳಗಳಿಂದಾಗಿ ಹಿಂದೆಬಿದ್ದಾನು.

oo oo oo

ಆಳುವವನನ್ನಣಕಿಸಿದರದು ಧೊರೆಪಾತ್ರ; ಆಳುವವನನ್ನಣಕಿಸಿದವನಿಗೆ ಮೊರೆಮಾತ್ರ! ಟೀಕೆಗಾದರೂ ಹೆಗ್ಗುಣಗಳೇ ಗುರಿಯಾಗಿರಬೇಕು ಹೊರತು ಅಲ್ಪ ಗುಣಗಳಲ್ಲ.

oo oo oo

ಮೊಹರು ಬಿದ್ದರೆ ಕಾಗದ ಕರೆನ್ಸಿಯಾಗುತ್ತದೆ; ಅಧಿಕಾರ ಬಂದರೆ ಸಾಮಾನ್ಯ ಸಮಾನ್ಯನಾಗುತ್ತಾನೆ.

ತುತ್ತಿನ ತುತೂರಿ

'ಕಲ್ಕತ್ತದ ಮರಣವಾರ್ತೆಗಳನ್ನು ಕೇಳುವಾಗ ಮಧ್ಯಯುಗದ ಭೀಕರ ಮೃತ್ಯುಗಳ ನೆನಪಾಗುತ್ತದೆ'-ಲಂಡನ್ ಟೈಮ್ಸ್.

×

'ಕ್ಷಾಮದಲ್ಲಿ ಕಡಿಮೆಯೆಂದರೆ 24.4ರಷ್ಟು ಕುಟುಂಬಗಳು ಛಿನ್ನಭಿನ್ನವಾಗಿವೆ. ಆಹಾರಾಭಾವದಿಂದ ಗಂಡಹೆಂಡತಿಯನ್ನು ಹೆಂಡತಿ ದುರ್ಬಲಗಂಡನನ್ನು, ಮಕ್ಕಳು ಮುದಿ ತಂದೆತಾಯಿಗಳನ್ನು, ತಂದೆತಾಯಿಗಳು ಹಸುಕೂಸುಗಳನ್ನು, ಸಹೋದರರು ವಿಧವೆ ಹಾಗೂ ನಿರ್ಗತಿಕ ಸಹೋದರಿಯರನ್ನು ದೂರಮಾಡಿದ್ದಾರೆ'-ಕಲ್ಕತ್ತಾ ಯುನಿವರ್ಸಿಟಿ ಸಮಿತಿಯ ವರದಿ.

×

'ಸರಕಾರವು ಮಾನಾಪಮಾನಗಳನ್ನು ಗಣಿಸದೆ ಬಂಗಾಳದ ಆಹಾರಾಭಾವ ನಿವಾರಣೆಯ ಧೋರಣೆಯನ್ನು ನಿಷ್ಠೆಯಿಂದ ಜ್ಯಾರಿಗೆರ ತರಬೇಕು. ಹಸಿವು ಪೀಡಿತರನ್ನು ಣ್ಣಿಸುವದು ಎಂದೂ ಅಪರಾಧವಾಗಲಾರದು!'—ದಿ. ಎಕೋನಾಮಿಸ್ಟ್'

×

'ಕಲ್ಕತ್ತಾ ರಸ್ತೆಯಲ್ಲಿ ದಿನಕ್ಕೆ 350 ಮಂದಿಯಂತೆ ಆಹಾರವಿಲ್ಲದೆ ಸಾಯುತ್ತಿದ್ದಾರೆ' 'ಹಿಂದುಸ್ಥಾನಕ್ಕೆ ಹಸಿವು ಪೀಡೆ'. 'ಬ್ರಿಟಿಷ್ ಸಾಮ್ರಾಜ್ಯದ ದ್ವಿತೀಯ ನಗರ ಕಲ್ಕತ್ತದ ಬಜಾರುಗಳಲ್ಲಿ ಹಿಡಿ ಧಾನ್ಯವಿಲ್ಲ'—ಲಂಡನ್ ಪತ್ರಿಕೆಗಳಲ್ಲಿ ತಲೆಬರಹಗಳು.

×

'ಪ್ರಾಂತಿಕ ಸ್ವಾತಂತ್ರ್ಯವನ್ನು ಮನ್ನಿಸಬೇಕಾದ ದೆಸೆಯಿಂದಲೇ ಹಿಂದುಸ್ಥಾನದ ಆಹಾರ ಸಮಸ್ಯೆಯ ಕುರಿತು ತಾವೇನನ್ನೂ ಮಾಡಲಾರೆವೆಂಬರ್ಥದ ಮಿ. ಅಮೆರಿಯವರ ಹೇಳಿಕೆಯಲ್ಲಿರುವಷ್ಟು ಎಡೆಗಾರಿಕೆ ಮತ್ತು ವಂಚನೆ ಇನ್ನಾವುದರಲ್ಲಿಯೂ ಇರಲಾರದು. ಕೇಂದ್ರ ಸರಕಾರವು ರಾಷ್ಟ್ರೀಯ ಸರಕಾರವಾಗಿ ರೂಪಾಂತರಗೊಳ್ಳದಿದ್ದರೆ ಮುಂದೆ ನಾವು ಇದಕ್ಕಿಂತ ಹಿರಿದಾದ ಗಂಡಾಂತರಕ್ಕೊಳಗಾಗಬೇಕಾಗುವದು'--ರಾಜಾಜಿ.

×

'ಯುದ್ಧವಸೆಯಿಂದ ಹಿಂದುಸ್ಥಾನದ ಮೇಲ್" ಹೊಲವಾಗದ ಹೊರೆಬಿದ್ದಿದೆ. ಇನ್ನದನ್ನು ಹೆಚ್ಚಿಸದಂತೆ ಜಾಗ್ರತೆವಹಿಸಬೇಕು'-ಲೋರ್ಡ್ ವೇವೆಲ್.

×

"ಮುಂದಿನ ರಾಜಕೀಯ ಆಶ್ವಾಸನೆಗಳಿಗಿಂತ ಇಂದು ಬಡತನದಿಂದ ಸಾಯುತ್ತಿರುವ ಬಂಗಾಳಿಗಳಿಗೆ ನಾವು ಕೊಡುವ ಸಹಾಯಗಳಿಗೆ ಎಷ್ಟೋ ಪಾಲು ಅಧಿಕ ಬೆಲೆಯಿದೆ"-'ಈ ವನಿಂಗ್ ಸ್ಟೇಂಡಾರ್ಡ್.

×

"ಬೇಸಾಯ ತಜ್ಞನೆಂದು ಹೆಸರುಗೊಂಡಿರುವ ಲೋರ್ಡ್ ಲಿನ್‌ಲಿತ್‌ಗೋರವರು ಹಿಂದುಸ್ಥಾನದ ಪಥ್ಯದ ಆಹಾರಾಭಾವ ದುಸ್ಥಿತಿಯನ್ನು ಮುಂದಾಗಿ ನಿರೀಕ್ಷಿಸಿದುದೂ ಇಲ್ಲ; ಈಗ ನಿಶ್ಚಯಾತ್ಮಕ ಕಾರ್ಯ ಕೈಗೊಂಡುದೂ ಇಲ್ಲ"-ಡಾ। ಗಂಗುಲಿ.

ಸುದ್ದಿ ಸೂಚನೆ.

○ ರಶ್ಯದ ಯುದ್ಧ

ರಶ್ಯದಲ್ಲಿ ನಾಜಿಗಳೀಗ ಸಾರ್ವತ್ರಿಕ ಹಿಂದೋಟವನ್ನಾರಂಭಿಸಿದ್ದಾರೆ ಸ್ಮೋಲೆಂಸ್ಕ್ ಪತನದ ಬಳಿಕ ಪೋಲ್ಟೋವಾ, ನಾಝಿನ್ ಎಂಬ ಮುಖ್ಯ ನಿಲ್ದಾಣಗಳು ರಶ್ಯಾನರ ವಶವಾದುದರಿಂದ ಉಕ್ರೈನಿನ ರಾಜಧಾನಿ ಕೀವ್ ನಗರವು ಬಿದ್ದಂತೆಯೇ ಕೀವನ್ನು ಜರ್ಮನರು ಇಷ್ಟರಲ್ಲೇ ಖಾಲಿ ಮಾಡಹತ್ತಿರುವರೆಂಬ ವಾರ್ತೆ ಬಂದಿದೆ ಕ್ರಿಮಿಯಾ ಮತ್ತು ಕಾಕಸಸಿನ ಸಂಬಂಧಗಳು ಜರ್ಮನರ ಪಾಲಿಗೆ ಕಡಿದುಹೋಗುವ ಅಪಾಯಗಳು ಸನ್ನಿಹಿತವಾಗಿವೆ ಅಂತೂ ರಶ್ಯದಲ್ಲಿ ಸ್ಮಾಲೆಂಸ್ಕಿನಿಂದ ಕ್ಯೂಬಾನಿನ ವರೆಗಿನ 800 ಮೈಲುದ್ದದ ನಾಜೀ ರಕ್ಷಣಾ ಲೈನು ಈಗ ಮುರಿದು ಬಿದ್ದಿದೆ-ಬೀಳುತ್ತಿದೆ ಎಂಬುದು ಸುಸ್ಪಷ್ಟ. ಮಾರ್ಶಲ್ ಸ್ಟಾಲಿನರ ಅಭೂತಪೂರ್ವ ವಸಂತ ಧಾಳಿಯು ಹಿಟ್ಲರರಿಗೊಡ್ಡಿದ ಈ ದುರವಸ್ಥೆಯನ್ನು ಚರಿತ್ರಕಾರರು ದಪ್ಪ ಅಕ್ಷರಗಳಲ್ಲಿ ಉಲ್ಲೇಖಿಸದಿರಲಾರರು

○ ಮುಂದಿನ ಗೆರೆಯೆಲ್ಲಿ?

ನಾಜಿಗಳ ಮೇಲೆ ಬಿದ್ದ ಅನಿವಾರ್ಯ ಆಪತ್ತಿದು ಎಂಬುದನ್ನೊಪ್ಪಿಕೊಳ್ಳುವಾಗಲೇ ರಶ್ಯದಲ್ಲಿ ಜರ್ಮನರು ಸೋತು ಹಿಮ್ಮೆಟ್ಟುತ್ತಿದ್ದಾರೆಂದು ಊಹಿಸಲಾಗುವದಿಲ್ಲ ಜನಾಭಾವ ಮತ್ತು ಇಟಲಿಯಾಕ್ರಮಣದ ದೆಸೆಯಿಂದಾಗಿ ರಶ್ಯದಲ್ಲಿ ಸಾರ್ವತ್ರಿಕವಾಗಿ ಹಿಂದೊತ್ತುವ ವ್ಯವಸ್ಥೆ ನಡಯುತ್ತಿದ ಎಂದು ಬರ್ಲಿನಿನ ಮಾತುಗಾರನು ಕಳೆದ ವಾರ ಮುಂದಾಗಿ ಜ್ಯಾಹೀರುಮಾಡಿದ್ದ ಮುಂದೊತ್ತುವದಸಾಧ್ಯವಾಗಿ ಬದ್ಧನೆಲೆಗೆ ಹಿಂದೆ ಸರಿದು ನಿಲ್ಲುವ ಯುದ್ಧ ಕ್ರಮವನ್ನೇ ನಾಜಿಗಳೀಗ ಕೈಕೊಂಡಿದ್ದರೆನ್ನಬಹುದು ಜೆಕೊಸ್ಲೊವೇಕಿಯಾದ ಅಧ್ಯಕ್ಷ ಅಸಾಧಾರಣ ಜ್ಞಾನಿ ಡಾ। ಬೆನಸರು ಕಳದ ವರುಷವೇ ಹೇಳಿದಂತೆ ಜರ್ಮನರು ಪೋಲೆಂಡು ಗಡಿಯಿಂದಾರಂಭಿಸಿ, ಉತ್ತರದಲ್ಲಿ ಡ್ವಿನಾ ಹೊಳೆ ಬದಿಯ ವರೆಗಿನ ಒಂದು ಲೈನಿನಲ್ಲಿ ಸ್ಥಿರವಾಗಿ ನಿಲ್ಲಬಹುದು ಸಂದರ್ಭ ಬಂದರೆ ಆ ಗಡಿಯ ವರೆಗೂ ಹಿಂದೆ ಸರಿಯಬಹುದು. ಈಗ ರಶ್ಯಾನರು ನೀಪರ್ ಹೊಳೆ ದಾಟಿ ಮುಂದೊತ್ತುತ್ತಿದ್ದಾರೆ.

○ ಇಟಲಿ ಯುದ್ಧ

ಇಟಲಿಯಲ್ಲಿ ಮಿತ್ರಸೇನೆಗಳು ನಿಧಾನವಾಗಿ, ಅತ್ಯಂತ ಪ್ರಯಾಸದಿಂದ ಜರ್ಮನರೊಡನೆ ಕೈಕೈ ಹೋರಾಟ ಕೊಡುತ್ತಾ ಆದರೆ ಹಿಮ್ಮೊಗ ಮಾಡದೆ ಮುಂದೊತ್ತುತ್ತಿವ ಸಾಲರ್ನೋದಿಂದ ಮುಂದೊತ್ತಿದ 5ನೇ ಪಿ ತ, ಸೇನೆಯು ನೇಪಲ್ಸ್ ಬಯಲಿಗ ತೀವ್ರಗತಿಯಿಂದ ಧಾವಿಸಿದೆ ಜರ್ಮನರ ಪ್ರತಿಭಟನೆ ಇಂಚು ಇಂಚಿಗೂ ಇದೆ. ಸಮುದ್ರದಿಂದ ಹಿಡಿದು ಇಟಾಲಿಯನ್ ಪೆನಿನ್ಸುಲಾದ ಹಿಂಬದಿಯ ವರೆಗಿನ ಕ್ಷೇತ್ರವನ್ನದು ಆಕ್ರಮಿಸಿಕೊಂಡಿದೆ ಈ ಸ್ಥಳವು ಅಜೇಯವೆಂದು ಜರ್ಮನರು ಭಾವಿಸಿದ್ದರು ಕೋರ್ಸಿಕಾದಲ್ಲಿಯೂ ಸ್ವತಂತ್ರ ಫ್ರೆಂಚ್ ಹಾಗೂ ಮಿತ್ರಸೇನೆಗಳು ಬಾಸ್ಟಿಯಾ ಮೊದಲಾದ ಹಲವುಬಂದರು ನಿಲ್ದಾಣಗಳನ್ನು ಸ್ವಾಧೀನಪಡಿಸಿಕೊಂಡಿವೆ. ಇಟಲಿಯಲ್ಲಿ 8ನೇ ಸೇನೆಯು ದಕ್ಷಿಣಪೂರ್ವಾಭಿಮುಖವಾಗಿ ಘಂಟೆಗೊಂದು ಮೈಲಿನಂತೆ ಮುಂದೊತ್ತಿ ಜರ್ಮನರ ಪ್ರಮುಖ ನಿಲ್ದಾಣ ಫೋಗಿಯಾ ಸಮೀಪಿಸಿದ ಅಂತೂ ಇಟಲಿಯಲ್ಲಿ ಮಿತ್ರರ ಧಾಳಿಯು ಊಹಿಸಿದಷ್ಟು ತೀವ್ರವಾಗಿಯಲ್ಲವಾದರೂ ಯೋಜನೆಗೆ ಭಂಗಬಾರದೇನೇ ಸಾಗಿದೆ.

○ ಯುಗೊಸ್ಲೋವಿಯಾದ 'ರಾಷ್ಟ್ರೀಯ ಸ್ವಾತಂತ್ರ್ಯ ಸೇನೆಯವರು ಮಿತ್ರಸೇನೆಗಳ ಸಹಕಾರದೊಡನೆ ನಾಜೀ ಸೇನೆಗಳೊಡನೆ ಪ್ರತ್ಯಕ್ಷ ಯುದ್ಧವನ್ನೇ ಆರಂಭಿಸಿ ತೀವ್ರ ಹೋರಾಟ ನಡೆಯುತ್ತಿದೆ

○ ಹಿಟ್ಲರರು ನೋರ್ವೆಯವರಿಗಿತ್ತ ಸಂದೇಶದಲ್ಲಿ ಇಂಗ್ಲೆಂಡು ಅಮೇರಿಕಗಳ ಬಂಡವಾಳಗಾರರು ಮೋಸ್ಕೋ ಯೆಹೂದಿಗಳಿಗೆ ಯುರೋಪನ್ನು ಒಲಿಕೊಡುತ್ತಿದ್ದಾರೆಂದೂ ಬೋಲ್ಶೆವಿಕ್ ಭೀತಾಳನಿಂದ ಯುರೋಪನ್ನು ಉಳಿಸಿಕೊಳ್ಳುವದಕ್ಕಾಗಿ ಜರ್ಮನಿ ಮಾಡಿದ ತ್ಯಾಗವು ಅತಿ ಹೆಚ್ಚಿನದೆಂದೂ ಯುದ್ಧಾನಂತರ ನೋರ್ವೆಯನ್ನು ಸ್ವತಂತ್ರಗೊಳಿಸಲಾಗುವದೆಂದೂ ತಿಳಿಸಿದ್ದಾರೆ

○ ಉತ್ತರ ಇಟಲಿ ಹಾಗೂ ಫ್ರಾನ್ಸ್ ಮತ್ತು ಇತರ ಆಕ್ರಮಿತ ರಾಷ್ಟ್ರಗಳಲ್ಲಿಯೂ ಜರ್ಮನಿ ವಿರುದ್ಧ ದಂಗೆಗಳೆದ್ದ ವಾರ್ತೆಗಳಿವೆ

○ ವಿಜಯ ಖಂಡಿತವೆಂಬುದು ಈಗ ಸಿದ್ಧವಾಗಿದೆ ಆದರೆ ಜನ ಮತ್ತು ಸಮಯವನ್ನು ಉಳಿಸಿಕೊಳ್ಳುವದಕ್ಕಾಗಿ ಅಧಿಕ ಪರಿಣಾಮದಲ್ಲಿ ವಿಮಾನ ತಯಾರಾಗಬೇಕು' ಎಂದು ಬ್ರಿಟನಿನ ಆಕಾಶಮಂತ್ರಿ ಸರ್ ಕ್ರಿಪ್ಸರ ಬೋಧನೆ

○ ಜಮ್ಮು ಸಂಸ್ಥಾನದಲ್ಲಿ ಜನರು ಪೋಲಿಸ್ ಸ್ಟೇಶನಿನಿದಿರು ಗುಂಪು ಕೂಡಿ ಗವರ್ನರರ ಕಾರನ್ನು ಸುಟ್ಟು ಹಾಕಿದಾಗ, 7 ಮಂದಿ ಸತ್ತು 16 ಮಂದಿ ಜಖಂಗೊಂಡಿದ್ದಾರೆ.

——ವಿಷಬೀಜ——

ಇಟಲಿಯ ಪರಾಜಯಕ್ಕೆ ರಶ್ಯದ ಯುದ್ಧವೇ ಮೂಲಕಾರಣವೆಂದು ರಶ್ಯಾನರ ಅಂಬೋಣ 'ನಮ್ಮ ಮಿತ್ರರಾಷ್ಟ್ರವು ಮಧ್ಯಪೂರ್ವದ ಕುರಿತು ಇಷ್ಟೊಂದು ಮೈತ್ರೀ ಭಾವವಹಿಸಿದುದಕ್ಕಾಗಿ ನಾವು ಅಭಾರಿಗಳಿದ್ದೇವೆ'-ಎಂದು ಚರ್ಚಿಲ್ಲರು ಪರಕೀಯ ಭಾವನೆಸೂಚಿಸಿದ್ದಾರೆ ಹೀಗೆ ರಶ್ಯಾ ಮತ್ತು ಮಿತ್ರರಾಷ್ಟ್ರಗಳೊಳಗೆ ಭಾವನೆ ಮತ್ತು ಧೋರಣೆಗಳಲ್ಲಿ ಗುಪ್ತ ಆದರೆ ಅತಿ ಪ್ರಬಲ ಭೇದವಿರುವುದರಿಂದ ಭಾವಿ ಜಾಗತಿಕ ಕಲ್ಯಾಣಸಾಧ್ಯವೆ?

——ಒಂದು ಪ್ರಶ್ನೆ——

ಬಂಗಾಳದ ಗಡಿಯಲ್ಲಿ ನೂತನೋಪಕರಣ ಸಜ್ಜಿತವಾದ, ಸರ್ವ ಸಲಕರಣೆ ಅನುಕೂಲತೆಗಳನ್ನು ಪಡೆದು ಕೊಬ್ಬಿದ ಹಿಂದೀ ಸೇನೆ ಜಪಾನರ ಮೇಲೆ ಬೀಳಲು ತಯಾರಾಗಿ ನಿಂತಿದೆ, ಬಂಗಾಳದೊಳಗೆ ಹಲವು ದಿನಗಳಿಂದ ಆಹಾರ ಕಾಣದ ಜನರು ಸಾವಿರ ಸಂಖ್ಯೆಯಲ್ಲಿ ಸಾಯುತ್ತಿದ್ದಾರೆ ಈ ತಾರತಮ್ಯದಿಂದೇಳುವ ಪ್ರಶ್ನೆ—'ಸೈನಿಕನಾಗುವೆಯಾ-ಸಾಯುವೆಯಾ?'

NOTICE

In the Court of the District Munsif of Mangalore.

O S No 465 of 39
R I A 781 of 43

K. Seetharama Bhatt— Petitioner
Chandu Shetty— Respondant

To

Chandu Shetty S/of Kaveri Shedthi Kuthethoor Village, Mangaloor Taluk

The abovenamed petitioner has made the above petition praying that his bond executed to this Court as receiver may be cancelled The said petition stands posted to 6-10 43 You may appear in person or by a duly authorised agent, failing which it will be decided in your absence

K Balakrisna Rao

Mangalore 24 9 43 } Advocate for Petitioner

ನ ವ ಯು ಗ

ಪ್ರಕಟಣೆ

ನವರಾತ್ರಿ ಸಂಬಂಧ ಬರುವ ವಾರ ಅಂದರೆ ತಾ 7—10—43ರ ನವಯುಗ ಸಂಚಿಕೆಯು ಹೊರಡುವುದಿಲ್ಲ

ಮೆನೇಜರ್.

ಚಂದಾದಾರರಲ್ಲಿ ಮತ್ತೊಮ್ಮೆ ವಿನಂತಿ

ಇದೇ ಕಳದ ಆಗೋಸ್ತು ತಿಂಗಳ ಅಂತ್ಯಕ್ಕೆ ನವಯುಗದ 23ನೇ ಸಂಪುಟವು ಸಂಪೂರ್ಣವಾಗಿ ಸಪ್ಟಂಬರ ಆದಿಯಿಂದ 24ನೇ ಹೊಸ ವರ್ಷಾರಂಭವಾಗಿರುವುದಷ್ಟೆ; ನಮ್ಮ ವಿನಂತಿಯನ್ನು ಮನ್ನಿಸಿ ಹಲವರು ತಮ್ಮ ಬಾಕಿ ಮತ್ತು ಚಾಲ್ತಿ ವರ್ಷದ ಚಂದಾ ಹಣವನ್ನು ಕಳುಹಿಸಿಕೊಟ್ಟಿರುತ್ತಾರೆ ಆದರೆ ಕಲವರು ಇನ್ನೂ ಕಳುಹಿಸಿರುದಿಲ್ಲ ಅಂಥವರು ಇನ್ನಾದರೂ ತಮ್ಮ ಚಾಲ್ತಿ ಮತ್ತು ಹಿಂದಿನ ಬಾಕಿ ಇದ್ದರೆ ಅದನ್ನು ಕೂಡಾ ದಯಮಾಡಿ ಕೂಡಲೇ ಕಳಿಸಿಕೊಡುವಂತೆ ನಾವು ಮತ್ತೊಮ್ಮೆ ವಿನಂತಿಸಿಕೊಳ್ಳುತ್ತೇವೆ

ಮೆನೇಜರ್.

ಪ್ರಕಟಣೆ.

ಕಟಪಾಡಿ

ಶ್ರೀ ವೆಂಕಟರಮಣ ದೇವರ ಸನ್ನಿಧಿಯಲ್ಲಿ—ಇದೇ ಆಶ್ವಿಜ ಶುದ್ಧ ದಶಮಿ (~~ಸ್ಮಾರ್ತ ಏಕಾದಶಿ~~)ತಪ್ಪಿ ಸೋಮವಾರ, ಲಾಗಾಯ್ತು ಆಶ್ವಿಜ ಬಹುಳ ತದಿಗೆ ಶನಿವಾರ (ತಾ. ~~?—10—'4~~3ರಿಂದ 16—10—43) ವರೆಗೆ ಏಳು ದಿನ ಆಹೋ ರಾತ್ರಿ ಭಜನಾ ಸಪ್ತಾಹವು ಶ್ರೀ ದೇವರ [illegible] ಲೂ, ಇಹಪರಕ್ಕೆ ಸಾಧನವಾದ ಈ ಮಹತ್ಕಾರ್ಯಕ್ಕೆ ತಾವು ಭಕ್ತಿಪೂರ್ವಕವಾಗಿ ಉದಾರಹಸ್ತದಿಂದ ಮಾಡಿದ ದ್ರವ್ಯ ಸಹಾಯದಿಂದಲೂ ಎಂದಿನಂತೆ ಸರ್ವ ವಿನಿಯೋಗಗಳೊಂದಿಗೆ ಸಾಂಗವಾಗಿ ನೆರವೇರುವುದು. ಈ ಮಹೋತ್ಸವಕ್ಕೆ ತಾವು ಅಗತ್ಯವಾಗಿ ಬಂದು ಶ್ರೀ ದೇವರ ಪ್ರಸಾದವನ್ನು ಸ್ವೀಕರಿಸಿ, ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ ಶ್ರೀ ಭಜನೆ ಸಪ್ತಾಹ ಸಮಾರಂಭದಲ್ಲಿ ಶ್ರೀ ದೇವರ ಸನ್ನಿಧಿಯಲ್ಲಿ ನಡೆಸಬಹುದಾದ ಸದ್ವಿನಿಯೋಗಗಳ ವಿವರ - ರಾತ್ರಿ ಕಾಲದ ಹೂವಿನ ಪೂಜೆಗೆ ರೂ 10—0—0, ಹೂವಿನ ಪೂಜೆಗೆ ರೂ 5—0—0, ದೀಪಾರಾಧನ ರೂ 2—0—0 ಪಿಟ್ಲ ಪಿಂಡಿ ರೂ. 0—8—0, ಕರ್ಪೂರಾರತಿ ರೂ. 0—2—3, ತುಳಸೀಹಾರ ರೂ 0—1—3, ಅಹೋ ರಾತ್ರಿಯ ಪೂರ್ಣ ವಿನಿಯೋಗಕ್ಕೆ ರೂ 25—0—0.

ಪಿ. ಅಣ್ಣಪ್ಪ ನಾಯಕ್
ಪ್ರಕೃತ ಪ್ರೆಸಿಡೆಂಟ್

ಕಟಪಾಡಿ
ತಾ ?.9.43

ದಿವಂಗತ ಶ್ರೀ ಪಿ. ಎ ಪೈಗಳು

(ಮಣಿಪಾಲ ಟೈಲ್ಸ್ ಫ್ಯಾಕ್ಟರಿಯ ಸ್ಥಾಪಕ ಮಾಲಕರಾಗಿದ್ದ ಇವರ ಛಾಯಾಚಿತ್ರ ಅನಾವರಣವು ಕಾರಣಿಕ ಸ್ಮಾರಕ ಮಂದಿರದಲ್ಲಿ ತಾ. 26ರಲ್ಲಿ ನೆರವೇರಿತು ವಿವರವನ್ನು ಇನ್ನೊಂದೆಡೆ ಕೊಡಲಾಗಿದೆ)

ದಕ್ಷಿಣ ಕನ್ನಡ.

ಮಂಗಳೂರು

ಅಭ್ಯಾಸಗೋಷ್ಠಿ: ಕನ್ನಡ ಪದವೀಧರ ಶಾಲೆಗಳ ಅಭ್ಯಾಸ ಗೋಷ್ಠಿಯು ಮಿತ್ರಮಂಡಳಿಯಲ್ಲಿ ತಾ. 18ರಂದು ಶ್ರೀ ಪಿ. ವಾಸುದೇವರಾವ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಸೂರ್ಯನಾರಾಯಣ ಅಡಿಗರು ತಮ್ಮ ಅಭ್ಯಾಸವನ್ನು ಸಭೆಯ ಮುಂದಿಟ್ಟರು.

ಕಾಲರಾ ರೋಗಕ್ಕೆ ಬಲಿ.– ತಾರೀಕು 24ರ ವರೆಗೆ ಮಂಗಳೂರಿನಲ್ಲಿ ಕಾಲರಾ ರೋಗಕ್ಕೆ ಒತ್ತಾದವರ ಸಂಖ್ಯೆ 125, ಮಡಿದವರ ಸಂಖ್ಯೆ 51, ಕಾಲರಾ ನಿರೋಧಕ ದಾಳು ಹಾಕಿಸಿಕೊಂಡವರ ಸಂಖ್ಯೆ 60,063.

ಮುಂದೆಬಿತ್ತು:– ಜಿಲ್ಲಾ ಬೋರ್ಡಿಗೆ ಈ ತಾಲೂಕಿನಿಂದ ಉಪಚುನಾವಣೆಯು ತಾ. 20ರಂದು ನಿಗದಿಯಾಗಿತ್ತು. ಬ್ಯಾಲಟ್ (ಮತದಾನದ) ಪತ್ರಿಕೆಗಳು ಬಾರದುದರಿಂದ, ಚುನಾವಣೆ ನವಂಬರ ತಾ. 4ಕ್ಕೆ ಬರುವುದು.

ಯುದ್ಧ ಪ್ರಚಾರ–ಡಿ. ಪಿ. ಓ. ರವರ ಪರ್ಸನಲ್ ಅಸಿಸ್ಟೆಂಟರಾದ ಶ್ರೀ ಬಿ. ವಿ. ರಮಣ್ಣ, ಎಂ. ಎ. ಎಲ್. ಟಿ. ಯವರು ತಾ. 23ರಲ್ಲಿ ಕುಂದಾಪುರ ಬೋರ್ಡು ಹೈಸ್ಕೂಲಿನಲ್ಲಿಯೂ ತಾ. 24ರಲ್ಲಿ ಉಡುಪಿ ಬೋರ್ಡ್ ಹೈಸ್ಕೂಲಿನಲ್ಲಿಯೂ ತಾ. 25ರಲ್ಲಿ ಬಾರ್ಕೂರು ಶಾಲೆಯಲ್ಲಿಯೂ, ತಾ. 27–29ರಲ್ಲಿ ಶಿರ್ವ ಮತ್ತು ಕಾಪು ಎಂಬಲ್ಲಿಗಳಲ್ಲಿಯೂ ಯುದ್ಧ ಪ್ರಚಾರ ಭಾಷಣ ಮಾಡಿ ಜನರು ಯುದ್ಧದಲ್ಲಿ ಹೇಗೆ ಭಾಗವಹಿಸಬಹುದೆಂಬುದನ್ನು ವಿವರಿಸಿದರು. ವಾರ್ ಸರ್ವಿಸಿಗೆ ಸೇರಲಿಚ್ಛಿಸುವವರು ಶ್ರೀ ಬಿ. ವಿ. ರಮಣ್ಣ, ಎಂ. ಎ. ಎಲ್. ಟಿ. ಪರ್ಸನಲ್ ಅಸಿಸ್ಟೆಂಟ್ ಡಿ. ಪಿ. ಓ. ಮಂಗಳೂರು ಇವರಿಗೆ ಬರೆಯಬಹುದು.

ಉಡುಪಿ

ನಗರ ಸಭೆಯ ಸಾಮಾನ್ಯ ಸಭೆಯೊಂದು ತಾ. 25ರಲ್ಲಿ ಚೆಯರ್ ಮೆನ್ ಶ್ರೀ ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿ ಭಟ್ಕಳಕ್ಕೆ ವರ್ಗವಾಗಿ ಹೋಗಲಿರುವ ಕಮಿಶನರ್ ಶ್ರೀ ವಿಶ್ವನಾಥ ರೆಡ್ಡಿಯವರು ನಗರ ಸಭೆಗೆ ಸಲ್ಲಿಸಿದ ಸೇವೆಯನ್ನು ಅಭಿನಂದಿಸಿ ಠರಾವು ಮಾಡಲಾಯಿತು. ಈ ಸಂದರ್ಭದಲ್ಲಿ ಶ್ರೀಗಳಾದ ನರಸಿಂಹ ಕಿರಲಕುಮಾರ್, ಜಿ. ಸಿ. ರೇಗೋ, ಕೆ. ಆರ್. ಶೆಣೈ, ಯು. ರಾಮಚಂದ್ರ ಮತ್ತು ಶ್ರೀಮತಿ ಲೀಲಾಬಾಯಿ ಕಾಮತರು ವಿದಾಯ ಭಾಷಣ ಮಾಡಿದರು. ಗ್ರೂಪ್ ಫೋಟೋ ಮತ್ತು ಉಪಹಾರದ ವ್ಯವಸ್ಥೆಯೂ ಮಾಡಲಾಗಿತ್ತು. ಟೋಲ್ ಗೇಟುಗಳ ನಿಮಿತ್ತ ಈ ನಗರ ಸಭೆಗೆ ಸಲ್ಲತಕ್ಕ ರೂಪಾಯಿ 6000/ ಕೊಡಲಾಗುವುದೆಂದು ಸರಕಾರದ ಆಜ್ಞೆಯನ್ನು ರಿಕಾರ್ಡು ಮಾಡಲಾಯಿತು. ಬಿಲ್ ಕಲೆಕ್ಟರಿಗೆ ಕಳೆದ ಜೂನ್ ತಿಂಗಳಿಂದ ತಿಂಗಳೊಂದರ ತುಟ್ಟಿ ಭತ್ತೆ ಎರಡರಂತೆಯೂ ಅದನ್ನು ಏಪ್ರಿಲ್ ತನಕ ಮುಂದುವರಿಸಲು ಮಂಜೂರು ಮಾಡಲಾಯಿತು.

ಶ್ರೀಕೃಷ್ಣ ಮಠದಲ್ಲಿ ದಸರಾ ಮಹೋತ್ಸವ:– ತಾ. 30-9-43ರಿಂದ ಪರ್ಯಾಯ ಶ್ರೀ ವಿದ್ಯಾರತ್ನ ತೀರ್ಥ ಶ್ರೀ ಪಾದಂಗಳವರ ಸೇತೃತ್ವದಲ್ಲಿ ಒಂಭತ್ತು ದಿನಗಳ ಪರ್ಯಂತ ಸಂಜೆ ಶ್ರೀ ಹರಿಸರ್ವೋತ್ತಮ ದಾಸರ ಹರಿಕಥೆ, ರಾತ್ರಿ ಶ್ರೀವಿದ್ಯಾರತ್ನ ತೀರ್ಥ ಕೃಪಾಪೋಷಿತ ಯಕ್ಷಗಾನ ಮಂಡಳಿಯವರ ವಿವಿಧ ನಾಟ್ಯಕಲಾಪ್ರದರ್ಶನಾದಿ ಕಾರ್ಯಕ್ರಮಗಳಿಂದ ನವರಾತ್ರಿ ಮಹೋತ್ಸವವು ವಸಂತ ಮಹಲಿನಲ್ಲಿ ವಿಜೃಂಭಣೆಯಿಂದ ಜರಗುವುದು.

ಅನಾವರಣ

ದಿ. ಶ್ರೀ ಪಿ. ಎ. ಪೈಗಳ ತೈಲಚಿತ್ರ ಅನಾವರಣ ಸಮಾರಂಭವು ತಾ. 26ಕ್ಕೆ ಪುರಭವನದಲ್ಲಿ ಸೊಸೈಟಿ ಕಾರ್ಪೊರೇಶನ್ ಪಿ. ಎ. ಪೈ ಸ್ಮಾರಕ ಸಮಿತಿಯ ಆಶ್ರಯದಲ್ಲಿ ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳ ಅಧ್ಯಕ್ಷತೆಯಲ್ಲಿ ಶ್ರೀ ಎ. ನಾರಾಯಣ ಪೈಗಳಿಂದ ಜರಗಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಶ್ರೀಗಳಾದ ಶ್ರೀನಿವಾಸಪ್ಪ, ಎಂ. ಎಸ್. ಅಧಿಕಾರಿ, ಬಿ. ಶ್ಯಾಮರಾಯ ಕಟ್ಟೆಮೊದಲಾದವರ ಭಾಷಣಗಳಿದ್ದುವು. ಅಂತ್ಯದಲ್ಲಿ ಪಿ. ಎ. ಪೈ ಸ್ಮಾರಕ ವೃಕ್ಷವನ್ನು ಅಧ್ಯಕ್ಷರು ನೆಟ್ಟರು. ಆರಂಭದಲ್ಲಿ ಉಪಹಾರವೂ ಇದ್ದಿತು.

ಬೀಡಿ ಕೆಲಸಗಾರರ ಸಂಘ:– ಇದರ ಮಹಾ ಸಭೆಯು ನೋಂದಾಯಿಸಲ್ಪಟ್ಟಿರುವ ಸಂಘದ ಕಾರ್ಯಾಲಯದಲ್ಲಿ ತಾ. 26-9-43ರಲ್ಲಿ ಶ್ರೀ ಎಂ. ವಿ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಮಂಗಳೂರು ಸಂಘದಿಂದ ಬಂದಿದ್ದ ಶ್ರೀ ಸೋನ್ಸರ ಭಾಷಣವಾಗಿ ತಂಬಾಕು ನಿಯಂತ್ರಣ ಗೊಳಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುವ, ಮಂಗಳೂರಿನ ಸ್ವಸ್ತಿಕಾ ಬೀಡಿ ಫ್ಯಾಕ್ಟರಿ ಕೆಲಸಗಾರರೊಡನೆ ಸಹಾನುಭೂತಿ ಸೂಚಿಸಿ, ಅದನ್ನು ಕೂಡಲೇ ತೆರೆಯಬೇಕೆಂದು ಮಾಲಕರನ್ನೂ ಸರಕಾರವನ್ನೂ ಕೇಳಿಕೊಳ್ಳುವ ನಿರ್ಧಾರಗಳ ಬಳಿಕ ಕಾರ್ಯಕಾರೀ ಮಂಡಳಿಯ ಚುನಾವಣೆ ಅಧ್ಯಕ್ಷ ಭಾಷಣದೊಂದಿಗೆ ಸಭಾಂತ್ಯವಾಯಿತು.

ಮೈಸೂರು ರಾಜಧಾನಿಯಲ್ಲಿ ಯಕ್ಷಗಾನ:– ಇದೇ ಕಳೆದ ಅಗೋಸ್ತು ತಾ. 8ರಲ್ಲಿ ಇಲ್ಲಿಯ ಅರಮನೆ ಎದುರುಗಡೆ ಆಂಜನೇಯ ಗುಡಿಯಲ್ಲಿ "ಪಂಚವಟಿ–ವಾಲಿವಧೆ" ಎಂಬ ಪ್ರಸಂಗವೂ, ಸಪ್ಟಂಬರ ತಾ. 19ರಲ್ಲಿ ಇಲ್ಲಿಯ ಬಂಡಿಕೇರಿ ವೆಂಕಟ್ರಮಣ ದೇವಸ್ಥಾನದಲ್ಲಿ "ಸೌಭದ್ರಪರಿಣಯ" ಎಂಬ ಪ್ರಸಂಗದಲ್ಲಿ ಯಕ್ಷಗಾನಸಮಾರಂಭವೂ "ಉಡ್ಪಿ ಶ್ರೀಕೃಷ್ಣ ಪ್ರಸಾದಿತ ಯಕ್ಷಗಾನ ಕಲಾ ಸಂಘ"ದವರಿಂದ ಬಹಳ ವಿಜೃಂಭಣೆಯಿಂದ ಜರಗಿತು.

ಎಡ್ಮೇರು:– ಸ್ಥಳೀಯ ಶ್ರೀ ವಿ. ಹಾಬಕೇಶ್ವರ ಎಲಿಮೆಂಟರಿ ಶಾಲಾ ರಕ್ಷಕರ ಮಹಾ ಸಭೆಯು ತಾ. 17-9-43ರಲ್ಲಿ ಉಪ್ಪಿನಂಗಡಿ ರೇಂಜ್ ಶಾಲೆಗಳ ಡೆಪ್ಯುಟಿ ಇನ್ಸ್‌ಪೆಕ್ಟರ್, ಶ್ರೀ. ಕೆ. ಸಂಜೀವ ಭಟ್ ಎಮ್. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಮಕ್ಕಳ ವಿವಿಧ ಚಟುವಟಿಕೆ, ಸಭಿಕರ ಭಾಷಣಾದಿ ಕಾರ್ಯಕ್ರಮಗಳಿಂದ ಜರಗಿತು. ಸಂಘದ ಖಾಯಂ ಅಧ್ಯಕ್ಷ ಶ್ರೀ ಆರ್. ಎನ್. ಸಿಂಜೂರ್ ಕಾರರು ಶಾಲಾ ಹೆಣ್ಮಕ್ಕಳಿಗೆ ಯುನಿಫೋರ್ಮ್ ಡ್ರೆಸ್ ಧರ್ಮಾರ್ಥ ಮಾಡಿಸಿ ಕೊಡುವದಾಗಿ ವಾಗ್ದಾನ ಮಾಡಿದರು.

ನೀಲಾವರ:– ತಾ. 6-10-1943ನೇ ಬುಧವಾರ ಸಾಯಂಕಾಲ 3ಗಂಟೆಗೆ ನೀಲಾವರ ಶ್ರೀ ಮಹಿಷಮರ್ದಿನಿ ಶಾಲೆಯಲ್ಲಿ ಮಾಮೂಲು ಪ್ರಕಾರ ನಡೆಯತಕ್ಕ ಶಾಲಾ ವರ್ಧಂತ್ಯುತ್ಸವವು ಉಡ್ಪಿ ರೇಂಜ್ ಶಾಲೆಗಳ ಜೂನಿಯರ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ N. ಸುಂದರರಾಯರ ಅಧ್ಯಕ್ಷತೆಯಲ್ಲಿ ಜರಗುವುದು. ಯಕ್ಷಗಾನ ಮುಂತಾದ ಶಾಲಾ ಮಕ್ಕಳ ಚಟುವಟಿಕೆಗಳು ತುಂಬಾ ಇವೆ. ಸರ್ವರಿಗೂ ಸ್ವಾಗತವಿದೆ.

ಕಾಪು:– ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ಹಳೇ ವಿದ್ಯಾರ್ಥಿಗಳು ತಾ. 19-9-1943ನೇ ದಿನ, ಕೆಲದಿಂದ ನಿವೃತ್ತರಾದ ತಮ್ಮ ಗುರುಗಳಾದ ಶ್ರೀ ಎಮ್. ಗೋವಿಂದ್ಯಾಯರಿಗೆ ಒಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಸದರಿ ಸಮಾರಂಭಕ್ಕೆ ಹಳೇ ವಿದ್ಯಾರ್ಥಿಗಳಲ್ಲೊಬ್ಬರಾದ ಶ್ರೀ ವಿ. ಟಿ. ಗೋವಿಂದ್ರಾವ್ ಎಮ್. ಎ. ಬಿ. ಓ. ಎಲ್. ಇವರು ಅಧ್ಯಕ್ಷರಾಗಿದ್ದರು. ಮಾನಪತ್ರಸಮರ್ಪಣೆ, ಉಡುಗೊರೆ, ಉಪಾಹಾರಾದಿಗಳಿಂದ ತಮ್ಮ ಗುರುಗಳನ್ನು ಸತ್ಕರಿಸಿದರು.



ಇದೇ ಕಳೆದ ಗಣೇಶ ಚತುರ್ಥಿ ಸಮಯದಲ್ಲಿ, ಪರ್ಯಾಯ ಶ್ರೀಕೃಷ್ಣಾಪುರ ಮಠದ ಶ್ರೀವಿದ್ಯಾರತ್ನ ಶ್ರೀಪಾದಂಗಳವರು ನವೀನ ರೀತಿಯಲ್ಲಿ ಬಡಗು ಮಹಾಲಿನಲ್ಲಿ ವ್ಯವಸ್ಥೆಗೊಳಿಸಿದ ಗಣಪತಿ ಪ್ರದರ್ಶನದಲ್ಲಿಯ ಒಂದು ದೃಶ್ಯ.

ಚೂರು-ಚೂರು

"ಪಾಕಿಸ್ತಾನವನ್ನು ಕಡ ಮಾಡದೆ ಜನ್ಯಾರಿಗೆ ತರಬೇಕು; ಲೋರ್ಡ್ ವೇವೆಲರೇ ನಂತರ?"–ಮಿ. ಜಿನ್ನರ ಅಬ್ಬರ.

ಅಂದರೆ ಈ ಬಾರಿ, ಪಾಕಿಸ್ತಾನ್ ವೈಸರಾಯಿ-ಹಿಂದುಸ್ಥಾನ್ ವೈಸರಾಯರು ಒಟ್ಟೊಟ್ಟಿಗೆ ಬರಬೇಕೆಂದೇ ಪ್ರಯಾಣ ಸನ್ನದ್ಧ ಲೋರ್ಡ್ ವೇವೆಲರಿಗೆ ಈ ಎಚ್ಚರಿಕೆ!

●

ಭಾರತ ಸ್ವಾತಂತ್ರ್ಯ ಪ್ರತಿಪಾದನೆಗಾಗಿ ಪ್ರತಿನಿಧಿ ಮಂಡಲಿಯೊಂದನ್ನು ಅಮೇರಿಕಕ್ಕೆ ಕಳುಹಬೇಕೆಂಬ, ಹಿಂದೀ ಸ್ವಾತಂತ್ರ್ಯಕ್ಕೆ ಅಂತರಾಷ್ಟ್ರೀಯ ಸಮ್ಮತಿ ಕೊಡಲು ಸ್ಥಾಪಿತವಾದ ಲಂಡನ್ ಸಮಿತಿಯ ನಿರ್ಧಾರಕ್ಕೆ ವಿಂಡೆಲ್ ವಿಲ್ಕಿಯವರು ಬೆಂಬಲ ಕೊಟ್ಟಿದ್ದಾರೆ.

ಆದರೆ ಕಡಿಮೆಯಾದುದೆಂದರೆ ವಿಲ್ಕಿಯವರಿಗೆ ಅಮೇರಿಕದಲ್ಲಿ ಬೆಂಬಲ.

●

'ರಶ್ಯಾನರು ಕೀವನ್ನು ತೆಗೆದುಕೊಳ್ಳಲು ಧಾವಿಸುತ್ತಿದ್ದಾರೆ'–ಯುದ್ಧ ವಾರ್ತೆ.

ಕೀವ್ರ ಹೋದರ ಅಲ್ಲಿಯ ನಾಜೀ ಹುಣ್ಣು ತಕ್ಕ ಮಟ್ಟಿಗೆ ಗುಣವಾದಂತೆಯೇ!

●

'ಮಿ. ಚರ್ಚಿಲ್ಲರು ತನ್ನ ಮಂತ್ರಿ ಮಂಡಲದಲ್ಲಿ ಪುನಃ ಕೆಲವು ಅದಲು ಬದಲು ಮಾಡಿಕೊಂಡರು'–ತಾ. 24ರ ವಾರ್ತೆ.

ಘೋರಣೆಯಲ್ಲಿಲ್ಲ–ಸದಸ್ಯರಲ್ಲಿ.

○

'ಹಿಂದೀಯ ಆಹಾರ ಸಮಸ್ಯಾ ನಿವಾರಣೆಗೆ ಅಲ್ಲಿಯ ರಾಷ್ಟ್ರೀಯ ಬಿಕ್ಕಟ್ಟು ಬಿಡಿಸುವದೇ ತಕ್ಕ ಉಪಾಯ'–ಮೆಂಚೆಸ್ಟರ್ ಗಾರ್ಡಿಯನ್.

ರಾಜಕೀಯ ಬಿಕ್ಕಟ್ಟು ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆಂದು ಯಾವ ಡಾಕ್ಟರನೂ ಹೇಳಿಲ್ಲವಾದ್ದರಿಂದ, ಇದನ್ನು ಚರ್ಚಿಲ್ ಆಮೆರಿಯವರು ಒಪ್ಪುವಂತಿಲ್ಲ

●

'ರಾಜಕೀಯ ಕೈದಿಗಳ ಬಿಡುಗಡೆಯೇ ಲೋರ್ಡ್ ವೇವೆಲರ ಪ್ರಥಮ ಕರ್ತವ್ಯ'–ನ್ಯೂ ಸ್ಟೇಟ್ಸ್ ಮೇನ್.

ಹಾಗಾದರೆ ಜಿನ್ನರ ದ್ವೇಷ ಸಂಪಾದನೆಯೇ ಲೋರ್ಡ್ ವೇವೆಲರ ಪ್ರಥಮ ಸಂಪಾದನೆ.

BHUVANENDRA PRODUCTS Ltd.,

Head Office and Factory: Katapadi, S. Kanara

Depots: 1 Mahratha Galli, Hubli.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar Prevents caries of the teeth

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತದಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು.— **ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ;** ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ **ಫಾರ್ಮೆಸಿ;** ಡಾ. ಕೆ. ಶೇಷಗಿರಿ ಪೈ, L. I. M; ಡಾ. ವೆಂಕಟ ರಾವ್, **ಕೊರಡ್ಕಲ್; ನವಭಾರತ ಬುಕ್ ಡಿಪ್ಪೊ**

ಬಂಟರ ಯಾನೆ- ನಾಡವರ ಯುವಕರಿಗೆ ಸುಸಂದರ್ಭ.

ನಮ್ಮ ಹಿಂದಿನ ಸ್ಥಾನದ ಯುವಕರನೇಕರು ಪ್ರತಿದಿನವೂ ಸಾಸಿರಗಟ್ಟಲೆಯಲ್ಲಿ ಸೈನ್ಯಕ್ಕೆ ಸೇರ ತ್ತಿದ್ದರೆ ಸೈನ್ಯದಲ್ಲಿ ದೊರೆಯುವ ವಿದ್ಯಾಭ್ಯಾಸವೂ ಶಿಸ್ತೂ ಈಗಿನ ಸಂದರ್ಭದಲ್ಲಿ ಮಾತ್ರವಲ್ಲ ನಮ್ಮ ಮುಂದಿನ ಏಳಿಗೆಗೂ ಅಭಿವೃದ್ಧಿಗೂ ಅತ್ಯಗತ್ಯವಾಗಿದೆ. ಈ ಗಟ್ಟಿನ್ನು ಭೂಲೋಕದಲ್ಲಿ ಎಲ್ಲೆಲ್ಲಿಯೂ ಈಗ ಜನತೆಯು ತಿಳಿದಂತಿದೆ. ಹೀಗಿರುತ್ತ ದಕ್ಷಿಣ ಕನ್ನಡದ ಬಂಟರ ಯಾನೆ ನಾಡವ ಯುವಕರು ಹಿಂದುಳಿಯುವುದು ಎಷ್ಟು ಮಾತ್ರಕ್ಕೂ ಸರಿಯಲ್ಲ.

ಬಂಟರ ಯಾನೆ ನಾಡವರು ಗಟ್ಟಿಪ್ಪರು, ಧೈರ್ಯಶಾಲಿಗಳು ಮತ್ತು ದೃಢಕಾಯ ರೆಂಬುದು ಎಲ್ಲರಿಗೂ ತಿಳಿದ ವಿಚಾರ. ಈಗಿನ ಯಂತ್ರ ವಿದ್ಯಾಕಲೆಯಲ್ಲಿ ಕುಶಲತೆಯನ್ನು ಪಡೆಯುವುದಕ್ಕೆ ಬೇಕಾದಷ್ಟು ಮೇಧಾಶಕ್ತಿಗೂ ನಮ್ಮಲ್ಲಿ ಕೊರತೆಯಿಲ್ಲ. ನಮ್ಮ ಹೆಂಡರು ಮಕ್ಕಳನ್ನೂ, ಮಾನವರಗಳನ್ನೂ ದೇಶವನ್ನೂ ರಕ್ಷಿಸುವ ಸಂದರ್ಭ ಬಿದ್ದಲ್ಲಿ ನಾವು ಎಷ್ಟು ಮಾತ್ರಕ್ಕೂ ಹಿಂಜರಿಯತಕ್ಕವರಲ್ಲ. ಹೀಗಿರುವಾಗ ಸೈನ್ಯದ ಬೇರೆ ಬೇರೆ ಇಲಾಖೆಗಳಿಗೆ ಸೇರುವುದು ಅತೀ ಅಗತ್ಯ. ನಿರುದ್ಯೋಗಿಗಳಿಗೂ, ಸಾಹಸಿಗಳಿಗೂ ಇದೊಂದು ಸಂದರ್ಭವೇ ಸರಿ.

ಯುದ್ಧವು ಮುಗಿದನಂತರ ಸೈನ್ಯದಿಂದ ಹಿಂತಿರುಗಿ ಬಂದವರಿಗೆ ತಕ್ಕ ಯೋಗ್ಯ ಹುದ್ದೆಗಳನ್ನು ಕೊಡುವುದಾಗಿ ಸರಕಾರದವರು ಭರವಸೆ ಕೊಟ್ಟಿರುತ್ತಾರೆ. ಯಂತ್ರ ಕಲೆಗಳಲ್ಲಿ ಯೋಗ್ಯ ಶಿಕ್ಷಣವನ್ನು ಪಡೆದು ಹಿಂದಿರುಗಿ ಬಂದ ಯೋಧರು ನಮ್ಮ ರಾಷ್ಟ್ರದ ನಾನಾ ಮೂಲೆಗಳಲ್ಲಿ ದೊಡ್ಡ ದೊಡ್ಡ ಹೊಸ ಕಾರ್ಯಾನೆಗಳನ್ನು ತೆರೆದು ನಮ್ಮ ದೇಶದ ಕೈಗಾರಿಕೆಯನ್ನು ಅತೀ ಉನ್ನತ ಸ್ಥಿತಿಗೆ ತರಲು ಅನುಕೂಲವಾಗುವುದು.

ನಮ್ಮ ಜಾತಿಯ ಯುವಕರನೇಕರು ಸೈನ್ಯಕ್ಕೆ ಸೇರಿ ಇಷ್ಟರೊಳಗೆ ಬಹಳ ಖ್ಯಾತಿಯನ್ನು ಪಡೆದಿದ್ದಾರೆ. ಅವರ ಪೈಕಿ ಕೆಲವರ ಹೆಸರನ್ನು ಎತ್ತಿ ಹೇಳುವುದಾದರೆ ಕೆಪ್ಟನ್ ರಮೇಶ ಹೆಗ್ಡೆ, ಲೆಫ್ಟಿನೆಂಟ್ ನಾರಾಯಣ ರೈ, ಶ್ರೀ ರಘುನಾಥ ಶೆಟ್ಟಿ ಎತ್ತೂರು, ಶ್ರೀ ವೆಂಕಪ್ಪ ರೈ ಕಿಂಗ್ಸ್ ಕಮಿಶನ್‌ನಲ್ಲಿರುವರು. ಡಾಕ್ಟರ್ ಅನಂತರಾಮ ಶೆಟ್ಟಿ ಇಂಡಿಯನ್ ಮೆಡಿಕಲ್ ಸರ್ವೀಸ್‌ನಲ್ಲಿರುವರು. ಶ್ರೀ ಸದಾಶಿವ ರೈ ಸುರತ್ಕಲ್ ಬಂಟವಾಳ ಜಗನ್ನಾಥ ರೈ ಪ್ರತೀ ಜಿಲ್ಲಾ ಟ್ರೈನಿಂಗ್ ಸ್ಕೂಲ್ ಅಧ್ಯಾಪಕರಲ್ಲಿರುವರು ಮತ್ತು ಶ್ರೀಗಳಾದ ರಾಮಯ ಆಳ್ವ, ತ್ಯಾಂಪಣ್ಣ ರೈ, ಸೀತರಾಮ ಶೆಟ್ಟಿ, ಜಯಪಾಲ ಶೆಟ್ಟಿ, ಸಂಜೀವ ಮಾರ್ಲ, ಸಂಜೀವ ಮಲ್ಲಿ, ಮಂಜನಾಥ ರೈ ಇವರೆಲ್ಲರೂ ಯಂತ್ರ ಕಲೆಯಲ್ಲಿ ನಗಿತ ಯುದ್ಧ ಸಾಮಗ್ರಿಗಳನ್ನು ಒದಗಿಸುವುದಕ್ಕೆ ... ಡುತ್ತಿರುವರು. ಶ್ರೀ ವಿಠಲ ರೈ ಎಂಬವರು ವೈಸರಾಯರ ಕಮಿಶನ್ ಪಡೆದಿರುವರು, ಇವರಲ್ಲದೆ ಇನ್ನೂ ಅನೇಕರು ಬೇರೆ ಬೇರೆ ಇಲಾಖೆಗಳಲ್ಲಿರುವರು. ಬಂಟರಯಾನ ನಾಡವರ ಸಮಾಜದವರೂ ಮತ್ತು ಇತರ ಜಾತಿಯ ಯುವಕರೂ ಸೈನ್ಯಕ್ಕೆ ಸೇರುವಂತೆ ಆಯಾಯ ಜಾತಿಯ ಕಮಿಟಿಗಳನ್ನು ಏರ್ಪಡಿಸಿವೆ. ಬಂಟರಯಾನೆ ನಾಡವರ ಪರವಾಗಿ ಈ ಮೂಲಕ ತಿಳಿಸುವುದೇನೆಂದರೆ ಯುದ್ಧ ಇಲಾಖೆಗೆ ಸೇರಬೇಕೆಂದಿದ್ದರೆ ಅದಕ್ಕೆ ಬೇಕಾದ ಅನುಕೂಲತೆಗಳನ್ನು ಒದಗಿಸಿಕೊಡುವುದಕ್ಕಾಗಿಯೇ ಬಂಟರ ಯಾನೆ ನಾಡವರ ಒಂದು ಕಮಿಟಿಯು ರಾವ್ ಬಹದ್ದೂರ್ ಕೆ. ಟಿ ಆಳ್ವರವರ ಅಧ್ಯಕ್ಷತೆಯಲ್ಲಿ ನೇಮಿಸಲ್ಪಟ್ಟಿದೆ. ಸದ್ರಿ ಕಮಿಟಿಯವರು ಅಗತ್ಯವಿದ್ದವರಿಗೆ ಬೇಕಾದ ಧನ ಸಹಾಯ ಕೊಡತಕ್ಕವರು. ಈ ಸಂಗ್ರಿಗೆ ಹೆಚ್ಚಿನ ಮಾಹಿತಿಯನ್ನು ಸದ್ರಿ ಕಮಿಟಿಯ ಕಾರ್ಯದರ್ಶಿಗಳಾದ ಎಡ್ವಕೇಟ್ ಶ್ರೀ. ಕೆ. ಉಗ್ಗಪ್ಪ ಶೆಟ್ರಿಂದಲೂ ಎಡ್ವಕೇಟ್ ಶ್ರೀ ಸದಾನಂದ ಹೆಗ್ಡೆಯವರಿಂದಲೂ ತಿಳಿದುಕೊಳ್ಳಬಹುದು.

K U. Shetty.
S. R S, Home Mangalore.

CHAMPAE'S
... & GASTREX.
AGENTS
SADANANDA STORES UDIPI

TENDER NOTICE

Tenders of rates to reach the Assistant-Director of Fisheries (Coast) on or before 15 10 1943 are invited for transporting salt bags from vessels or railway wagons and stacking them in the fishcuring yards and gollahs on the West Coast and for sundry other work Details and terms of contract can be obtained from the Assistant Director of Fisheries(Coast West Hill.

D. D Peter Devadas
Asst Director of Fisheries (Coast)

West Hill. 9 9-1943.

ನೋಟೀಸು

ಮಂಗಳೂರು ಡಿ. ಮು ಕೋರ್ಟಿನಲ್ಲಿ.

R. L P 281/43

ಅಕ್ಕೂ ತಿಮ್ಮಪ್ಪ ಪ್ರಭು, ಅರ್ಜಿದಾರ ಮತ್ತು

ಅಪ್ಪಿಬ್ಯಾಸರು ರೆಸ್ಪಾಂಡೆಂಟರು.

12 ಬಾಬುರಾವ್ 13 ನಾರಾಯಣ 16 ಗಂಗಾಧರ ಕಾರ್ಕಳ. ಲಕ್ಷ್ಮೀನಾರಾಯಣನವರ ಮಕ್ಕಳು —17 ಕಾರ್ಕಳ ಅನಂತಯ್ಯ - ಬಳ್ಳಾರಿಯಲ್ಲಿ ಬ್ರಾಹ್ಮಣ ಸ್ಟ್ರೀಟಿನಲ್ಲಿ ಆನಂದ ವಿಲಾಸ ಬೀಡಿಕೋರ್ಲಿನಲ್ಲಿರುವವರ,

ಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಮೇಲ್ಕಂಡ ಅಸ್ಸಲ್‌ದಾವಾ ವ್ಯವಹಾರದಲ್ಲಿ ಅರ್ಜಿದಾರರು ಪಡೆದ ಡಿಕ್ರಿ ಮೇರೆಗೆ ಯಿಸ್ತಾರಿನ ಶರತ್ತುಗಳನ್ನು ... ಯಿ ... ಯೂ ವಸೂಲು ಯೋಜನೆ ಯ ಬಗ್ಗೆ & set off ಮಾಡುವರೆ ಪರಿಗಣನೆ ... ದವರಾಗಿ ಅರ್ಜಿದಾರರು ದಾಖಲು ಮಾಡಿದ R L A 582/1943ನೇ ಅರ್ಜಿ ಕಲಾ ಯಿ 13 10 1943ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಹಗಲು ಘಂಟೆ 10 30ಕ್ಕೆ ನೀವು ಮುದ್ದಾಂನಾಗಲೀ ವಕೀಲರ ಮುಖಾಂತರವಾಗಲೀ ಹಾಜರಾಗಿ ಉತ್ತರಿಸುವರೆ ತಪ್ಪಿದ್ದಲ್ಲಿ ಸದ್ರಿ ಅರ್ಜಿಗಳು ನಿಮ್ಮ ಗೈರುಹಾಜರಿನಲ್ಲಿ ತೀರ್ಮಾನ ಮಾಡಲಾಗುವುದು.

M. Jdnardan Malya,
Pleader for Petitioner

Mangalore
Dated 20 9 43

Degrees: Books Medicines

Free M I M S M, I H M D, etc Free Homeo Ayur Unani Nature degree by post also—Practitioner also get soon Homeo Materiamedica, Rs. 5 Homeo Practice book Rs 4 Instant Cure Pills Rs. 10 Enclose 2 annas stamp—

Principal Indian Homeopathic Institute & Society (Govt Regd)
P O MAHUVA (Kathiawar Dt India)

Sidha-Kalpa Kavach (Regd)
No 3 Rs 2 No 2 Rs ... No 1 Rs. 7 Special Rs 10, Extra Special Rs 17 for over marriage health wealth Ask any six questions with M O Re 1/4 and get correct answers by return post Life reading ... 10 No V P P ... M O. Free ... amplets

Prof Dr N B Chhabar
P O MAHUVA (Kathiawar ... dia)

ತಾರುಣ್ಯ

ಕೊಟ್ಟು, ಶೀಘ್ರಸ್ಖಲನ ನಾಶಿ, ರತಿ ಸುಖದಲ್ಲಿ ಪರಮಾನಂದವನ್ನುಂಟು ಮಾಡಲು ರಮಣ ವಿಲಾಸಿನಿ ಉತ್ತಮ ಔಷಧಿ. ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,
184 ಜೈನಾ ಬಜಾರ್ ರೋಡ್,
ಮುಂಬಯಿ

ಪತ್ತೂರು ಏಜಂಟರು — ಕೆ. ಪುಂಡರೀಕ ಪೈ,

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರಸೂಡನೆ ಹೋಗುವಿಕೆ, ಸೊಂಟನೋವು ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತ ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—0—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವ ಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ—1 ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ ಎಂಡ್ ಜನರಲ್ ಮರ್ಚಂಟ್ಸ್, 183 ಸುಪಾರಿಬಾಗ್ ರೋಡ್, ಪರೇಲ ಬೊಂಬಾಯಿ, ನಂಬ್ರ 12 2. ಜನರಲ್ ಸ್ಟೋರ್ಸ್, ಜಿ. ಐ ಪಿ ಮಾಟುಂಗ 3 ಮುಲ್ಲರ್ ಪೆಟರ್ಸ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ 4 ಧನ್ವಂತರಿ ವೈದ್ಯಶಾಲೆ, ಲೆನ್ಸ್‌ಡೌನ ಬಜಾರ್, ಮೈಸೂರು. 5. ಮಂಗ್ಲೂರ್ ಸ್ಟೋರ್ಸ್, ಮಡಿಕೇರಿ 6 ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ 7 ಡಾ॥ ಶ್ರೀನಿವಾಸ ಪೈ, ಪುತ್ತೂರು 8 ಕಾಂತಾವರ ವಾಸ್ತೇವ ಕಮ್ತಿ, ಬೆಳ್ತಂಗಡಿ. 9 ಮುಲ್ಕಿ ಮೆಡಿಕಲ್ ಸ್ಟೋರ್ಸ್, ಮುಲ್ಕಿ. 10 ನವಭಾರತ ಬುಕ್ ಡಿಪ್ಪೋ, ಸಂತೆಕಟ್ಟೆ, ಉಡುಪಿ 11. ಕೃಷ್ಣ ಫಾರ್ಮಸಿ, ಕುಂದಾಪುರ. 12. ಎಚ್ ನರಸಿಂಹ ನಾಯ್ಕ, ಮರ್ಚಂಟ್, ಶಂಕರನಾರಾಯಣ 13. ಕಾಸರಗೋಡು ಶ್ರೀ ರಾಮಾ ಸ್ಟೇಶನರಿ ಹೌಸ್, ಶ್ರೀರಾಮ ಪೇಟೆ. 14. ಕೆ ಶ್ರೀನಿವಾಸ ಹೆಗ್ಡೆ, ತೀರ್ಥಹಳ್ಳಿ 15 ಬಿ ಯಸ್. ನರಸಿಂಗರಾವ್, ಮರ್ಚಂಟ್, ಚಿಕ್ಕಮಂಗ್ಳೂರು.

'ಕಿರಿಯರ ಪ್ರಪಂಚ'ದ ಮೊದಲ್ನೆಯ ಗ್ರಂಥಮಾಲೆ—ಮುದ್ರಣ

ಭಾರತೀಯ ಕತೆಗಳು

ಅಸಾಧಾರಣ ವಾಗ್ಮಿಗಳೂ ಪ್ರಸಿದ್ಧ ಗ್ರಂಥಕಾರರೂ ಆದ ಶ್ರೀ ಎ ಎಸ್. ಪಂಚಾಪಕೇಶ ಐಯ್ಯರ್, ಎಂ. ಎ, ಐ. ಸಿ. ಎಸ್, ಬಾರ್ ಎಟ್ ಲಾ, ಎಫ್ ಆರ್ ಎಸ್ ಎಲ್, ಇವರು ಇಂಗ್ಲಿಷಿನಲ್ಲಿ ಬರೆದ **Tales of Ind** ಎಂಬ ಕಥಾವಳಿಯ ಕನ್ನಡ ಅನುವಾದ. ಸುರಿತ ಬರಹಗಾರರಾದ ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರೇ ಅನುವಾದಕರು.

೧೫೨ ಕತೆಗಳ ಈ ಪುಸ್ತಕದ ಬೆಲೆ ಬರೇ ೦-೧೪-೦

ಒಂದು ರೂಪಾಯಿ ಸ್ಟ್ಯಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಲಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ರಿಜಿಸ್ಟರ್ಡ್ ಪಬ್ಲಿಷರ್ಸ್,
ಉಡುಪಿ

ಏಜಂಟರು:-ಸ್ಕೂಲ್ ಬುಕ್ ಕಂಪೆನಿ, ಮಂಗಳೂರು, ಯು. ಆರ್. ಶೆಣೈ & ಸನ್ಸ್, ಮಂಗಳೂರು, ಸಾಹಿತ್ಯ ಭಂಡಾರ, ಹುಬ್ಬಳ್ಳಿ; ಮನೋಹರ ಗ್ರಂಥ ಭಂಡಾರ, ಧಾರವಾಡ, ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ.

THE
Canara Land Investments Ltd., Manipal.
NOTICE.

Notice is hereby given that the Register of Members and Transfer Books of the Company will remain closed from Friday the 8th October 1943 to Sunday the 24th October 1943 both days inclusive.

(By order of the Board)

"Shanthi Bhavan"
MANIPAL.
27th September 1943.

(Sd) **Upendra Anant Pai,**
Managing Director,

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in 1920)

Registered Office Court Road UDIPI South Canara District

Business Offices Udipi Mangalore, Katapadi, Lanhingad and Kinnigoli, South Canara

Authorised and Issued Capital	Rs 2,00,000/
Subscribed and Paid up Capital	Rs 2,00,000,-
Reserve Funds	Rs 1,74,000/-

Short term bills are discounted for approved parties. Loans and advances are made and overdrafts granted on fairly easy terms.

Deposits are accepted at favourable rates of interest. More than twenty three years' reliable banking service stands to our credit.

For further particulars please call at or apply to the nearest office

Dated 27-8-1943

ಶ್ರೀ. ತಾರಾನಾಥ ಭೇಷಜಾಲಯ

ಶಾಸ್ತ್ರೀಯಮತ ಸಿದ್ಧೌಷಧಿಗಳ ಕಾರಾಗಾರ, ಚಿಕ್ಕಮಗಳೂರು

ನಿರ್ದೇಶಕ:- ಡಾ. M L Shetty, ಪ್ರವಿದ್ಯಾಪೀಠದ ಗೌ ಪ್ರಾಧ್ಯಾಪಕರು

ಎಲ್ಲಾ ತರದ ಭಸ್ಮ, ಖಲ್ವೀ ರಸಾಯನ, ಆಸವಾರಿಷ್ಟ, ಘೃತ ತೈಲಗಳಿಗಾಗಿ ಕೂಡಲೇ ಬರೆಯಿರಿ

ಜಟಿಲ ರೋಗಗಳಲ್ಲಿ ಸಲಕಾರಿಯಾದ ಔಷಧೀಯೋಗಗಳು ಗ... ಪರೆಯ ಅನುಭವದಿಂದ ಬಂದ ನಿರ್ದಿಷ್ಟ ಔಷಧೀಕರಣ ವಿಧಾನ

ಡಾ। P. M. Alva,

ಮೇನೇಜರ್

ಅಮೃತಾಂಜನ ತಲೆನೋವು, ನೆಗಡಿ, ವೇದನೆ, ಉಳುಕು, ಕುತ್ತಿಗೆ, ಭುಜ ಇಲ್ಲ ವೇದನೆಗಳು ಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷಮುಂತಾದ ಮಿಗಿ, ಪಕ್ಕವಾತ, ಮೊದಲಾದ ಎಲ್ಲಾ ರೋಗಗಳಿಗೂ ಪಥ್ಯ, ಹುಳುಕಟ್ಟು ಮತ್ತು ಸಹ ಸರ್ವಶ್ರೇಷ್ಠ ಚಿಕಿತ್ಸೆ

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತಾ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ

ವಾರ್ಷಿಕ ಚಂದಾ

ರೂ 1-8-0 ಮಾತ್ರ

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಮೆನೇಜರ್, ಬಾಲಚಂದ್ರ

ಸಂತೆಕಟ್ಟೆ, ಉಡುಪಿ

ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ ಗುಳಿಗೆ, ಮಧ್ಯಾಹ್ನಕ್ಕ ಗುಳಿಗ, ಸಂಜೆಗೆ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಪಥ್ಯ — ಹೆರೇನೂ ಪಥ್ಯ ಬೇಡ. ಏಳು ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ... ಪೋಸ್ಟ ಚಾರ್ಜು ನಿರಾಳ

ಮೇನೇಜರ — ಹ ಲಿಂಗಪ್ಪಾ ಘಂಟೆಪ್ಪಾ ಜಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಬಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಧಾರವಾಡ—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—... ಬೆಳಗಾವಿ ... ಮಂಗಳೂರು ... ಸ್ಟೇಷನ್ ... ಬೆಂಗಳೂರು ... ಕೆಮಿಸ್ಟ, ಮಿನರಲ್, ವ್ಯಾಪಾರಿ.

The Moolky Bank, Ltd.,

MOOLKY S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲಿ, ದ ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲರ ಸಹಕಾರ ಅಪೇಕ್ಷಿಸುವುದು.

M. R. Punja, President & Manager

ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮನೇಜರ್

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಸ್ನಾನ,

ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗ ಅತ್ಯನುಕೂಲವಿದೆ ವಿದ್ಯಾರ್ಥಿಗಳಿಗೆ ಸಕಲ ಸ... ಯಿದೆ

ಉಡುಪಿ. ಮಂಗಳೂರು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

ಚಿಕ್ಕ ಬಾಟ್ಲಿಗಳು ಪೆಟ್ಟುಕಟ್ಟು ಇಲಾಖೆಗಳಿಗೆ ಬರುವವು, ಅಂದರೆ ಕೇವಲ ಆರೂ ಬಾಟ್ಲಿಗಳು ಒಂದು ಬಾಣಂತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ 5 ಕೊಡಿಯಾಲಬೈಲು, ದ.ಕ

THE VIJAYA BANK, LIMITED.

Glad to announce that a Branch of the Bank has been opened at KASARAGOD on 12-9-43.

ಸ್ಥಾಪನೆ 1920

18 ಬಲ್ಮಠ ರಸ್ತೆ, ಮಂಗಳೂರು

ರಬ್ಬರ್ ಮೊಹರು ನ್ಯೂನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road MANGALORE

Approved firm by the Govt. Mysore

Certified by the Agent of the Govt of India in Ceylon

EDITED PRINTED & PUBLISHED BY ... SHETTY AT THE NAVAYUGA PRESS, UDIPI S. INDIA

Regd. No. M. 3618.

Estd. 1921 ಸ್ಥಾಪನೆ.

ನವಯುಗ

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೬

FOUNDER
Sri. A. B. Shetty.

Vol 24
No 6

NAVAYUGA— Kannada Weekly —UDIPI, S. I.

ಉಡುಪಿ ● 14—10—1943 ● ಮಂಗಳೂರು.

ಹೊಸಕೆರೆ ಚಿದಂಬರಯ್ಯನವ
ರಿಂದ ರಚಿತವಾದ ಗೀತೆಯ
ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು 440 ಪುಟಗಳು,
ಪ್ರತಿ ಮನೆಯಲ್ಲೂ ಇರಬೇಕಾದ
ಪವಿತ್ರ ಗ್ರಂಥ.

ಬೆಲೆ (ಸುಂದರ ಪ್ರತಿ) ೦—೮—೦

ಆತ್ತಾಣೆ ಸ್ಟಾಂಪು ಕಳಿಸಿದ್ದಲ್ಲಿ ೧ ಪ್ರತಿಯನ್ನು
ಬುಕ್‌ಪೋಸ್ಟ್ ಮಾಡಲಾಗುತ್ತೆ.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಅಖಿಲ ಕರ್ನಾಟಕದ
ಹೊಸವಾದರಿಯ ವಾರಪತ್ರಿಕೆ

ಅಂತರಂಗ

ಜನ್ಮತಾಳಿದ ಸ್ವಲ್ಪ ಸಮಯದಲ್ಲೇ
ವಿಶಾಲ ಪ್ರಚಾರ ಮತ್ತು ಪ್ರಶಸ್ತಿ
ಪಡೆದ ಸಚಿತ್ರ ವಾರಪತ್ರಿಕೆ.

ಪ್ರಸಿದ್ಧ ಜ್ಯೋತಿಷಿಗಳೊಬ್ಬರಿಂದ
ವಾರಭವಿಷ್ಯವೂ ಪ್ರಕಟವಾಗುತ್ತಿದೆ

ವಾರ್ಷಿಕ ಚಂದಾ ರೂ ೪-೮-೦
6 ತಿಂಗಳಿಗೆ ರೂ. ೨-೪-೦
ಬಿಡಿಪ್ರತಿಗೆ ರೂ. ೦-೧-೬

ಮಾದರಿಗೆ ಬರೆಯಿರಿ:
ಮೆನೇಜರ್, ಅಂತರಂಗ, ಉಡುಪಿ

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim

The Canara Mutual Assurance Co., Ltd.,
UDIPI. (S. India).

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು
ಮೌಲಿಕವಾದುದು.

ಜಾಗರೂಕರಾಗಿರಿ! ನಿಮ್ಮ ಮತ್ತು ಸಮೀಪದವರ ಮತ್ತು
ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇವರಲ್ಲೊಂದು ಪೊಲಿಸಿಯನ್ನು ಪಡೆಯಿರಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ಸೆಂಟ್ರಲ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು.
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ (ದ. ಕನ್ನಡ.)

ಶಾಖಾ ಕಚೇರಿಗಳು—ಬೆಂಗಳೂರು, ಬೊಂಬಾಯಿ, ಮದ್ರಾಸ್,
ಕಲ್ಲಿಕೋಟೆ, ಮಂಗಳೂರು ಮತ್ತು ತ್ರಿವಾಂಕೂರು.

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ. ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ...ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಬುಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಮೇಹ ಕುಟುಂಬ ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೨ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ.— ಬಾಗಲಕೋಟೆ ಫಾರ್ಮಸಿ, ಧಾರವಾಡ—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೇಸ್

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ.
ಆಯುರ್ವೇದ ಔಷಧಾಲಯ ಗದಗ

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೩೦ನೇ ವರ್ಷದಿಂದ ಚಾಲು ೧೯೩೯ನೇ ಪ್ರಾರಂಭದ ಮಾಸಗಳು ಒಹ ಒಳು ಅಪಾಯಗಳಿಂದಲೂ ಹಾಗೂ ಸಂಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನ್ನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ಶೀಘ್ರನೆ ಮುಂದುವರಿದವು.

೧೯೩೦, ೪೦ರಲ್ಲಿ ಕೆನರಾ ಬೇಂಕು ೯೦ ಲಕ್ಷ ಠೇವಣಿಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಆಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣಿಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡು ವರೆ ಕೋಟಿಗೆ ಏರಿದೆ. ಹಾಗೂ ತೆತ್ತ ಮೂಲಧನವು ನಾಲ್ಮಡಿಯಾಗಿದೆ.

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮವಿಶ್ವಾಸದಿಂದಲೂ, ದೃಢಬುದ್ಧಿಯಿಂದಲೂ, ಯೋಗ್ಯಸೇವೆಯನ್ನು ಸಲ್ಲಿಸಿದರಿಂದಲೂ, ಇಂದಿನ ಈ ಪ್ರಗತಿಗೆ ಕಾರಣ ಭೂತರಾದ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಮಹತ್ವದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

CANARA BANK LIMITED.
ಕೆನರಾ ಬೇಂಕ್ ಲಿಮಿಟೆಡ್.
ಸ್ಥಾಪನೆ 1906.

ಲೋರ್ಡ್ ಮೌಂಟ್ ಬೇಟನ್.

ಮೊದಲು ನಾವಿಕ--ಈಗ ನಾಯಕ.

ನವಡಿಲ್ಲಿ; ತಾ. 7–10–43ನೇ ಮಧ್ಯಾಹ್ನ 12-25 ಘಂಟೆ. ಕಪ್ಪು ವರ್ಣದ ದೊಡ್ಡ ಅಮೇರಿಕನ್ ಬೋಂಬರ್ ವಿಮಾನವೊಂದು ಅಲ್ಲಿಯ ಕಂಟೋನ್ಮೆಂಟ್ ವಿಮಾನ ನಿಲ್ದಾಣಕ್ಕೆ ಬಂದಿಳಿಯಿತು. ಕೆಲವೇ ಮಿನಿಟುಗಳಲ್ಲಿ ನಾವಿಕಾಧಿಪನ ಖಾಕೀ ಕವಚ ತೊಟ್ಟ ಗಂಭೀರ ವ್ಯಕ್ತಿಯೊಂದು ನಗುಮೊಗದೊಡನೆ ಹೊರಬಂತು. ಇದಿರಿನಲ್ಲಿ ಹಿಂದುಸ್ಥಾನದ ಸರ್ವಸೇನಾನಿ ಜನರಲ್ ಅಫ್‌ಲೆಕರು ಇತರ ಅಧಿಕಾರಿಗಳೊಂದಿಗೆ ಸಾಲಾಗಿ ನಿಂತಿದ್ದರು. ಅಫ್‌ಲೆಕರ ಕಡೆಗೆ ಮುಖ ಮಾಡಿ ಬಂದ ಆ ಅತಿಥಿಯೂ ಎಲ್ಲರಿಗೂ ಸೆಲ್ಯೂಟ್ ಮತ್ತು ಹಸ್ತಲಾಘವ ಕೊಟ್ಟು ಸಾಲು ಸೇರಿದರು. ವೈಸರಾಯರಲ್ಲಿಂದಿಲ್ಲ. ಸಿಮ್ಲಾದಿಂದ ಅವರ ಪತ್ರವೊಂದನ್ನು ತಂದ ಎ.ಡಿ.ಸಿ. ಯೊಬ್ಬರು ಅಲ್ಲಿಯೇ ಅದನ್ನು ಒಪ್ಪಿಸಿದಾಗ ಬಂದವರೋದಿಕೊಂಡರು– ಇವರೇ ದಕ್ಷಿಣ ಪೂರ್ವ ಏಶ್ಯಾ ರಣರಂಗಗಳ ಸರ್ವ ಸೇನಾನಿ ಲೋರ್ಡ್ ಲುಯಿಸ್ ಮೌಂಟ್‌ಬೇಟನ್. ಹಿಂದುಸ್ಥಾನವು ಲೋರ್ಡ್ ವೇವೆಲರಿಂದ ನಿರೀಕ್ಷಿಸುವದಕ್ಕಿಂತ ಹೆಚ್ಚಾಗಿ ಇವರಿಂದ ನಿರೀಕ್ಷಿಸಬೇಕು. ವೈಸರಾಯರು ಸತ್ಯಬಲಿ ಪಡೆಯುವ ಕುಲದೈವವಾಗಿ ಬರುತ್ತಾರೆ- ಲೋರ್ಡ್ ಮೌಂಟ್ ಬೇಟನರು ಹೊಸ ಭೂತದಂತೆ ಅವತರಿಸಿದ್ದಾರೆ. ಬರ್ಮದಲ್ಲಿ ಧಾಳಿ ನಡಿಸುವ ಹೊಣೆ ಇವರದು. ಈಗ ಬಂದಿರುವದಾದರೂ ಚುಂಕಿಂಗಿಗೆ ಹೋಗಿ ಚಿಯಾಂಗ್ ಕೈಶೇಕರೊಡನೆ ಮಾತಾಡುವ ಮೊದಲು, ಭಾರತ ಸೇನಾನಿಯ ಅಭಿಪ್ರಾಯ ತಿಳಿಯುವದಕ್ಕಾಗಿಯೇ. ಅದ್ದರಿಂದ ಸಮೀಪಿಸುತ್ತಿದೆ–ನಿಂತಲ್ಲೇ ಬೋಂಬಿನ ಬೆಂಕಿ, ಗನ್ನಿನ ಘರ್ಜನೆಗಳನ್ನು ಕೇಳುವ ಯೋಗ ಹಿಂದುಸ್ಥಾನಕ್ಕೆ! ಲೋರ್ಡ್ ಮೌಂಟ್ ಬೇಟನರು ಮುಂದಿನ ಮಹಾ ಸಂಭವದ ಶಕುನವಾಗಿ ಹಿಂದುಸ್ಥಾನದಲ್ಲಿ ಕಾಣಿಸಿಕೊಂಡಿದ್ದಾರೆ

ರಾಜ ವಂಶಜ.

ಈ ದಕ್ಷಿಣ ಪೂರ್ವ ಏಶ್ಯಾ ಸೇನಾನಿತ್ವದ ಜನನವಾದುದು ಕ್ವಿಬೆಕಿನಲ್ಲಿ; ಚರ್ಚಿಲ್ ರೂಸವೆಲ್ಟ್ ಸಂಗಮದ ಪರಿಣಾಮವಾಗಿ. ಆದರೆ ಇವರು ಜನ್ಮತಃ ವಿಕ್ಟೋರಿಯಾ ರಾಣಿಯವರ ಮೊಮ್ಮಗ. ಜರ್ಮನಿಯ ಬೇಟನ್‌ಬರ್ಗಿನ ರಾಜಾ ಲುಯಿಸ್ ಮತ್ತು ರಾಜಪುತ್ರಿ ವಿಕ್ಟೋರಿಯಾರವರೇ ಇವರ ತಂದೆ ತಾಯಿ. ರಾಜಾ ಲುಯಿಸರು 1868ರಲ್ಲಿ ಇಂಗ್ಲಂಡಿನ ನಾಗರಿಕರಾಗಿ, ಬ್ರಿಟಿಷ್ ನಾವೆಯಲ್ಲಿ ಹಲವು ವರ್ಷ ಉದ್ಯೋಗ ನೋಡಿ, ಪ್ರಥಮ ಲೋಕ ಯುದ್ಧವೇಳುವಾಗ ಇಂಗ್ಲಂಡಿನ ಸಮುದ್ರ ಮಂತ್ರಿ ಸ್ಥಾನದಲ್ಲಿದ್ದರು. ಲೋರ್ಡ್ ಮೌಂಟ್‌ಬೇಟನರ ಜನನ 1900ರಲ್ಲಿ. 43 ವರುಷದ ನಡುಪ್ರಾಯದಲ್ಲೇ ಇಂತಹ ಜವಾಬ್ದಾರಿ ಸ್ಥಾನಕ್ಕೇರಿದ ಕೀರ್ತಿ ಈ ಯುದ್ಧದಲ್ಲಿ ಪ್ರಾಯಶಃ ಇವರೊಬ್ಬರಿಗೇನೇ. ತಂದೆಯಂತೆ ಇವರೂ ಈ ತನಕವೂ 'ಬ್ರಿಟಿಷ್ ತಿಮಿಂಗಿಲ'ವಾಗಿಯೇ ಇದ್ದವರು. ಸಮುದ್ರ ಜೀವಿ. ತನ್ನ ಹನ್ನೆರಡನೇ ವಯಸ್ಸಿನಲ್ಲಿ ಹಡಗವೊಂದರಲ್ಲಿ ಕೆಲಸಗಾರರಾಗಿ ನೇಮಿಸಲ್ಪಟ್ಟು ಆ ಮೇಲೆ ಕ್ರಮ ಪ್ರಕಾರ ಮೇಲ್ದರ್ಜೆಗೇರುತ್ತಾ ಬಂದವರು. 1920-21ರಲ್ಲಿ ಆಗಿನ ಪ್ರಿನ್ಸ್-ಒಫ್-ವೇಲ್ಸರು ಆಸ್ಟ್ರೇಲಿಯಾ, ನ್ಯೂಜೀಲೇಂಡ್, ಹಿಂದುಸ್ಥಾನಗಳಲ್ಲಿ ಸಂಚರಿಸಿದಾಗ ಅವರ ಖಾಸಗಿ ಎ.ಡಿ.ಸಿ. ಆಗಿ ಮೌಂಟ್‌ಬೇಟನರು ಜತೆಯಲ್ಲಿದ್ದರು.

'ಇಂಗ್ಲಂಡು ಮೋಹಿನಿಯ' ಪತಿ.

ಐದಾರು ವರುಷಗಳ ಹಿಂದಿನ ಮಾತು. ಉಗ್ರ ಸೆಖೆ ಕಾಲದ ಒಂದಿನ ಒಂದು ವಿಮಾನ ಕರಾಚಿಯಲ್ಲಿ ತಂಗಿತು. ದೇವ ಕನ್ಯೆಯಂತಹ ಬಿಳಿ ಯುವತಿಯೊಬ್ಬಳನ್ನು ಹೊರಡಿಸಿ, ನೋಟಕರನ್ನೆಲ್ಲಾ ದಂಗುಗೊಳಿಸಿತು. ಎದೆ, ಸೊಂಟಗಳನ್ನೆಲ್ಲಾ ಅರ್ಧ ಮರ್ಧವೇ ಮುಚ್ಚಿಕೊಂಡಿದ್ದರೂ ಅರೆ ನಗ್ನ ತಪಸ್ವಿಗಳ ಗಾಂಭೀರ್ಯವನ್ನು ಹೋಲುವ ಶ್ರೀಮಂತಿಕೆಯ ಘನತೆಯೊಡನೆ ಅವಳು ಹೊಟೇಲೊಂದನ್ನು ಹೊಕ್ಕು ಅಲ್ಲಿ ಸ್ನಾನಾಜ್ಞೆ ಕೊಟ್ಟವಳೇ ಎದೆಯನ್ನು ಪೂರಾ ಬಿಚ್ಚಿ ಗಾಳಿಗೊಡ್ಡಿದ್ದಳು. ಮಂಕು ಬಡಿದು ನೋಡುತ್ತಿರುವ ಪ್ರೇಕ್ಷಕರೆಲ್ಲಾ ದನದ ಹಿಂಡುಗಳಂತೆ ಕಡೆಗಣಿಸಿ, ತನ್ನ ಫಲಾಹಾರ ಮುಗಿಸಿ, ಬಂದಂತೆ ಅದೃಶ್ಯವಾಗಿದ್ದಳು. ಈಕೆಯೇ ಲೋರ್ಡ್ ಮೌಂಟ್ ಬೇಟನರ ಪತ್ನಿ. 'ಇಂಗ್ಲಂಡಿನ ಅತಿ ಮನೋಹರಿ' ಎಂದು ಹೆಸರಾದವಳು. ತನ್ನ 22ನೇ ವಯಸ್ಸಿನಲ್ಲಿ ಲೋರ್ಡ್ ಮೌಂಟ್ ಬೇಟನರು ಈಕೆಯನ್ನು ವಿವಾಹವಾಗಿದ್ದರು. ವೆಸ್ಟ್ ಮಿನಿಸ್ಟರ್‌ನಲ್ಲಿ ನಡೆದಿದ್ದ ಈ ವಿವಾಹ ಸಮಾರಂಭದಲ್ಲಿ ಎಲ್ಲಾ ಕುಟುಂಬಿಕರೊಡನೆ ಚಕ್ರವರ್ತಿ, ಚಕ್ರವರ್ತಿನಿಯರು ಸ್ವತಃ ಭಾಗವಹಿಸಿದ್ದರು. ಮೌಂಟ್ ಬೇಟನರ ಆಪ್ತ ಮಿತ್ರರಾದ ಯುವ ರಾಜರೇ ಮದುಮಗನ ಬಂಟನಾಗಿ ನಿಂತು ವಿವಾಹ ನೆರವೇರಿಸಿಕೊಟ್ಟಿದ್ದರು.

ಸಮುದ್ರ ಯೋಧ.

ಈ ಯುದ್ಧಾರಂಭದಲ್ಲಿ ಇವರು ಕೆಪ್ಟನ್ ಮೌಂಟ್ ಬೇಟನ್; ಇವರ ಹಡಗ 'ಕೆಲ್ಲಿ'ಯೊಮ್ಮೆ ಸಿಡಿಮದ್ದಿಗೆ ಬಡಿದರೂ ಇವರು ಅತಿ ಚಾತುರ್ಯದಿಂದ ಅದನ್ನು ರಿಪೇರಿ ನಡಿಸಿಕೊಂಡಿದ್ದರು. ಮತ್ತೊಮ್ಮೆ ನೋರ್ವೆಯಿಂದ ಹೊರಟಾಗ ಟೋರ್ಪೆಡೋ ಪ್ರಹಾರಕ್ಕೊಳಪಟ್ಟರೂ, ನಾಲ್ಕು ದಿನಗಳ ಬೋಂಬು ಧಾಳಿಯ ನಡುವೆ ತನ್ನ ಹಡಗವನ್ನು ಬಂದರಕ್ಕೆ ನಡೆಯಿಸಿ ಮುಟ್ಟಿಸಿದ. 'ಬಿರುಕಿಗಂಜದ ಭೀಮ' ಇವರು! ಹೀಗೆ ಎರಡೆರಡು ಬಾರಿ ತನ್ನ ಹಡಗ ಕೆಲ್ಲಿಯನ್ನು ಮೃತ್ಯು ದವಡೆಯಿಂದ ಪಾರು ಮಾಡಿದವರು ಕೊನೆಗದನ್ನು ಕ್ರೀಟ ಯುದ್ಧದಲ್ಲಿ 1941ನೇ ಮೇ 23ರಲ್ಲಿ ಕಳಕೊಂಡರು. ಅದೇ ಆಗೋಸ್ತಿನಲ್ಲಿ ಇಂಗ್ಲಂಡಿನ ಅತಿ ಪ್ರಮುಖ ವಿಮಾನವಾಹಕ ಹಡಗ 'ಇಲ್ಲಸ್ಟ್ರಿಯಸ್'ನ ನಾಯಕತ್ವವು ಅವರಿಗೆ ದೊರೆಯಿತು. ಈಗ ಈ ಸುಪ್ರಸಿದ್ಧ ಹಡಗವು ಅಮೇರಿಕದ ದುರಸ್ತಿ ನಿಲಯವೊಂದರಲ್ಲಿ ರಿಪೇರಿಯಲ್ಲಿದೆ. ಆ ಮೇಲೆ ಕರಾವಳಿ ಧಾಳಿಗಾಗಿ ನೇಮಿಸಲ್ಪಟ್ಟ ಲೋರ್ಡ್ ಮೌಂಟ್ ಬೇಟನರು ಲೊಫೊಟೆನ್, ಬೊಲೋನ್, ವಾಗೋ, ಡೀಪೇ ಮೊದಲಾದ ಜರ್ಮನ್ ಕೇಂದ್ರಗಳನ್ನೆಲ್ಲಾ ನಡುಗಿಸಿಬಿಟ್ಟಿದ್ದರು; ನಾಜೀ ಕರಾವಳಿ ಕಾವಲುಗಾರರ ಕಳವಳವಾಗಿ ಪರಿಣಮಿಸಿದ್ದರು. ಇಂತಹ ಸಮುದ್ರ ಯೋಧನು ಇಂದು ಸಿಲೋನ್ ಬರ್ಮಾ ರಂಗಗಳ ಸರ್ವ ಸೇನಾನಿ ಪಟ್ಟಕ್ಕೇರಿದ್ದಾನೆ.

ಅವರ ವೈಶಿಷ್ಟ್ಯ.

ಈ ನೇಮಕದಿಂದಾಗಿ ಶಾಂತ ಸಮುದ್ರದಲ್ಲಿ ಮಿತ್ರ ಸೇನಾನಿಯಾಗಿದ್ದು, ಜಾಪಾನರನ್ನು ದ್ವೀಪಾಂತರ್ಲಾಗ ಹಾಕಿಸುತ್ತಿರುವ ಜನರಲ್ ಮೇಕ್ ಆರ್ಥರರಿಗೆ ಉದರ ವೈರಾಗ್ಯ ಬಡಿದಿದೆ ಎಂಬ ವಾರ್ತೆಯಿದೆ. ಚೀನಾ ಮತ್ತು ಬರ್ಮಾಗಳಿಗೆ ಜೊಂದಿಕೆಯಾಗುವ ಯುದ್ಧ ಹೂಡುವ ಜವಾಬ್ದಾರಿ ಲೋರ್ಡ್ ಮೌಂಟ್ ಬೇಟನರದಾದರೆ, ತನ್ನ ಕಣ್ಣ ಮುಂದುಳಿಯುವದು ಕೆಲವು ದ್ವೀಪಗಳು ಮಾತ್ರ. ಇದುವರೆಗಿನ ತನ್ನ ಕಾರ್ಯದಿಂದ ಸಮಾಧಾನಗೊಳ್ಳದ ಮಿತ್ರರಾಷ್ಟ್ರೀಯ ಪ್ರಮುಖರು ತನ್ನನ್ನೀ ರೀತಿ ಮೂಲೆ ಹಿಡಿಸಿರಬೇಕೆಂದು, ಜ. ಮೇಕರ್ಥರರಿಗೆ ಬೇಸರವಂತೆ. ಇದನ್ನು ಅಧ್ಯಕ್ಷ ರೂಸವೆಲ್ಟರು ಅಲ್ಲಗಳೆದಿದ್ದಾರೆ. ಆದರೂ ಅಂಗಣಕ್ಕೆ ಮೇಕರ್ಥರರನ್ನಿಳಿಸಿ, ಚಾಪಡಿಗೆ ಮೌಂಟ್ ಬೇಟನರನ್ನು ಹತ್ತಿಸಿದ್ದಾರೆಂಬುದು ಖಂಡಿತ. ಈ ನೂತನ ಸೇನಾನಿಯ ಕೈಕೆಳಗೆ ಆ ಹಳೇ ಸೇನಾನಿಯ ಸ್ಥಾನ ಬರುವದಿಲ್ಲವಾದರೂ ಮೌಂಟ್ ಬೇಟನರ ಕ್ಷೇತ್ರ ಸ್ವಾಧೀನವಾಗಿ ಮೇಕರ್ಥರರ ರಣರಂಗವಿದೆ. ಆದ್ದರಿಂದ ಸೇನಾಧಿಕಾರಿಗಳಿಗೆ ಕಾರ್ಯವೇ ಗೌರವವೆಂಬ ತತ್ವವನ್ನು ಬಿಟ್ಟರೆ, ಮೇಕ್ ಆರ್ಥರರಿಗೆ ಅಪಮಾನವಾಗಿರುವದು ನಿಜ. ಹೀಗೆ ಮೊದಲೇ ಸ್ಥಾನಾಪನ್ನನಾಗಿರುವವನನ್ನು, ತುಸುಬದಿಗೆ ಸರಿಸಿ, ಇವರನ್ನು ಮುಹೂರ್ತ ಮಾಡಿಸುವಂತಹ ಘನಸ್ಥಿಕೆ ಲೋರ್ಡ್ ಮೌಂಟ್ ಬೇಟನರಲ್ಲೇನಿದೆ? ಅವರು ಬಿಸಿನೆತ್ತರ ಜವ್ವನಿಗ; ಯುದ್ಧ ಘಟನೆಗಳನ್ನು, ಪಥಿಕನು ವಾಹನಗಳನ್ನು ನೋಡುವಂತೆ ನೋಡದೆ ಪೋಲೀಸನ ಶೋಧನಾ ದೃಷ್ಟಿಯಿಂದಲೇ ನೋಡುವವರು; ಚರಿತ್ರಾರ್ಹವಾಗಿ ವರ್ತಿಸಿ ತೃಪ್ತಿ ಹೊಂದುವವರಲ್ಲ— ಚರಿತ್ರೆಯನ್ನೇ ನಿರ್ಮಿಸಬೇಕೆಂಬ ಹುರುಪುಳ್ಳವರು. ಜಾಪಾನಾಕ್ರಮಿತ ಬರ್ಮವೀಗ ಜಿಡುಕುಗಟ್ಟಿರುವ ಅರಣ್ಯದಂತಿದೆ; ಅದರೊಳ ನುಗ್ಗುವವನು ಪಥ ಹಿಡಿದು ಸಾಗುವ ಪ್ರಯಾಣಕನಾದರಾಗದು-ಹೊಸ ಹಾದಿ ರಚಿಸುವ ನಿರ್ಮಾಪಕನೇ ಆಗಬೇಕೆಂಬುದರಿಂದ, ಚರ್ಚಿಲ್ ರೂಸವೆಲ್ಟರಿವರನ್ನು ಇತ್ತ ಬೀಳ್ಕೊಟ್ಟಿದ್ದಾರೆ; ಜಾಪಾನರ ಹಣೆ ಬರಹ ಬರೆಯುವ ಈ ಕೈಯನ್ನು ಮುಂದೆಮಾಡಿದ್ದಾರೆ. ಮುಂದೆ ಹೇಗಾಗುವದೋ ನೋಡಲುಳಿದಿದೆ.

ಚಂದಾದಾರರಲ್ಲಿ ಮತ್ತೊಮ್ಮೆ ವಿನಂತಿ.

ಇದೇ ಕಳೆದ ಆಗೋಸ್ತು ತಿಂಗಳ ಅಂತ್ಯಕ್ಕೆ ನವಯುಗದ 23ನೇ ಸಂಪುಟವು ಸಂಪೂರ್ಣವಾಗಿ, ಸಪ್ಟಂಬರ ಆದಿಯಿಂದ 24ನೇ ಹೊಸ ವರ್ಷಾರಂಭವಾಗಿರುವುದಷ್ಟೆ; ನಮ್ಮ ವಿನಂತಿಯನ್ನು ಮನ್ನಿಸಿ ಹೆಚ್ಚಿನವರು ತಮ್ಮ ಬಾಕಿ ಮತ್ತು ಚಾಲ್ತಿ ವರ್ಷದ ಚಂದಾ ಹಣವನ್ನು ಕಳುಹಿಸಿಕೊಟ್ಟಿರುತ್ತಾರೆ. ಆದರೆ ಕೆಲವರು ಇನ್ನೂ ಕಳುಹಿಸಿರುದಿಲ್ಲ. ಅಂಥವರು ಇನ್ನಾದರೂ ತಮ್ಮ ಚಾಲ್ತಿ ಮತ್ತು ಹಿಂದಿನ ಬಾಕಿ ಇದ್ದರೆ ಅದನ್ನು ಕೂಡಾ ದಯಮಾಡಿ ಕೂಡಲೇ ಕಳಿಸಿಕೊಡುವಂತೆ ನಾವು ಮತ್ತೊಮ್ಮೆ ವಿನಂತಿಸಿಕೊಳ್ಳುತ್ತೇವೆ.

ಮೆನೇಜರ್.

3ನೇ ವಾರ

ತಾರೀಕು **15—10—43**ರಿಂದ

ಕೃಷ್ಣ ಸುಧಾಮವು ದಿನೇದಿನೇ ಉಡುಪಿಯ ಮಹಾಜನರನ್ನು ಆಕರ್ಷಿಸುತ್ತಿದೆ. ಸ್ಥಳ ಸಿಗದೆ ಹಿಂತಿರುಗಿದವರು ಬಹಳ ಮಂದಿ. ಮುಂದಾಗಿ ಬನ್ನಿ

ಕೃಷ್ಣ ಸುಧಾಮ (ಕನ್ನಡ

ಎಸ್.ಡಿ.ಸುಬ್ಬುಲಕ್ಷ್ಮಿ, ನರಹರಿ ಶಾಸ್ತ್ರಿ, ಮೊದಲಾದವರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ

ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ತಾರುಣ್ಯ

ಕೊಟ್ಟು, ವೀರ್ಯಸ್ಥಂಭನೆ ಮಾಡಿ, ರತಿ ಸುಖದಲ್ಲಿ ಪರಮಾನಂದವನ್ನುಂಟುಮಾಡಲು ರಮಣ ವಿಲಾಸಿನಿ ಅತ್ಯುತ್ತಮ ಔಷಧಿ. ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ,
184 ಚೈನಾ ಬಜಾರ್ ರೋಡ್,
ಮದ್ರಾಸು.

ಪುತ್ತೂರು ಏಜಂಟರು: – ಪೈ ಫಾರ್ಮಸಿ

ತ್ರಿಮೂರ್ತೀ ಸಂಗಮ.

ಬ್ರಿಟನಿನ ವಿದೇಶಮಂತ್ರಿ ಮಿ. ಆಂತೋನಿ ಈಡನರು ಮೋಸ್ಕೋವಿಗೆ ಹೊರಟಿದ್ದಾರೆ. ಅಲ್ಲಿ ರಶ್ಯ, ಅಮೇರಿಕ, ಇಂಗ್ಲಾಂಡುಗಳ ವಿದೇಶ ಮಂತ್ರಿ ಸಮ್ಮೇಳನ ನಡೆಯಲಿದೆ. ಇಟೆಲಿ ಮತ್ತು ಬಾಲ್ಕನ್ ರಾಜಕೀಯ ಸ್ಥಿತಿಗತಿ, ರಶ್ಯಾ, ಬ್ರಿಟನ್, ಇಂಗ್ಲಾಂಡುಗಳ ಸ್ಥಿರ ಮೈತ್ರಿ ಯೋಜನೆ, ಜರ್ಮನಿ ಮತ್ತು ಅದರ ಹಿಂಬಾಲಕ ರಾಷ್ಟ್ರಗಳ ಮುಂದಿನ ವ್ಯವಸ್ಥೆಗಳ ಕುರಿತು ಸರ್ವಸಮ್ಮತಿಯ ಕಾರ್ಯಕ್ರಮಗಳು ತಯಾರಾಗಿವೆಯಂತೆ. ತ್ರಿರಾಷ್ಟ್ರೀಯ ವಿದೇಶ ಮಂತ್ರಿಗಳೊಟ್ಟಾಗಿ ಸವಿವರ ಯೋಜನೆಯನ್ನು ತಯಾರಿಸಿದ ಮೇಲೆ ಕೊನೆಯ ಮಂಜೂರಾತಿಗಾಗಿ ಚರ್ಚಿಲ್, ರುಸವೆಲ್ಟ್, ಸ್ಟಾಲಿನ್ ಪರಿಷತ್ತು ಸೇರಲಿದೆ. ಹೀಗೆ ತ್ರಿಮೂಲೆಗಳ ಒಂದೊಂದೇ ಮೆಟ್ಟಲಿನಿಂದ ಜಗತ್ತು ಭಾವೀ ವ್ಯವಸ್ಥೆಯೆಂಬ ಮಹಡಿಗೇರತ್ತಿದೆ!

ರಶ್ಯದ ಯುದ್ಧ

ಜರ್ಮನರು ಸಾರ್ವತ್ರಿಕವಾಗಿ ಆದರೆ ಸುವ್ಯವಸ್ಥೆಯಿಂದ ರಶ್ಯದ ಎಲ್ಲಾ ಕಡೆಗಳಲ್ಲಿಯೂ ಹಿಂದೆ ಸರಿಯುತ್ತಿದ್ದಾರೆ. ಪೋಲೆಂಡು ಗಡಿ ತನಕವೂ ಹಿಂಜರಿದು ನಿಲ್ಲಬಹುದೆಂಬ ಊಹೆಯೆದ್ದಿದೆ. ಕೆಂಪುಸೇನೆಯ ಮುಂದೋಟದ ಕೊನೆಯ ಗುರಿಯೆಂದರೆ ರಶ್ಯನ್ ಸರಹದ್ದು. ಜರ್ಮನಿಯೊಳಗೆ ನುಗ್ಗುವ ಸಂಭವವಿಲ್ಲವಾದ್ದರಿಂದ, ಬರ್ಲಿನನ್ನೇ ಗುರಿಯಾಗಿಟ್ಟುಕೊಂಡಿರುವ ಆಂಗ್ಲೋ ಅಮೇರಿಕನ್ನರ ಆಕ್ರಮಣಕ್ಕೇನೇ ಹಿಟ್ಲರರು ಪ್ರಾಮುಖ್ಯತೆ ಕೊಟ್ಟು ರಶ್ಯದಲ್ಲಿ ಹೆಜ್ಜೆ ಹಿಂದಿಡಲಾರಂಭಿಸಿರುವರೆಂಬುದು ಖಂಡಿತ. ರಶ್ಯದ ಬೆಂಕ ಮುರಿದು ಅಪಾಯ ನಿವಾರಿಸಿಕೊಳ್ಳುವ ತಮ್ಮ ಉದ್ದೇಶವಿಷ್ಟರಲ್ಲೇ ಫಲಿಸಿದೆ ಎಂದು ನಾಜಿಗಳಿಗೆ ಸಮಾಧಾನ. ಆದರೆ ರಶ್ಯಾನರ ಬೆಂಕ ಮುರಿಯುವ ಉರುಡಾಟ

ನೋಟೀಸು.

ಮಂಗಳೂರು ಡಿ. ಮು. ಕೋರ್ಟಿನಲ್ಲಿ.

O. S. 105/1941 R.E.O 245/1943

R. E. A. 733/1943

ಶಂಮೋಶ್ವರಿ ಯಾನೆ ಪೊನ್ನಮ್ಮ, ಬಸವನ ರ ವಿಧವೆ, ಮಂಗಳೂರು ಪಡ್ ಬೆಂದೂರಲ್ಲಿರುವವರು—ಮಾಡಿಲು ಅರ್ಜಿದಾರರು.

ಮತ್ತು

1 ಅಬ್ದುಲ್ಲ ಬ್ಯಾರಿ, ಗುಡ್ಡೆ ಮೂಂಗಿಬ್ಯಾರಿಗಳ ಮಗ, ಸೋಮೇಶ್ವರ ಗ್ರಾಮದ ಉಚ್ಚಿಲದಲ್ಲಿರುವವ, 2 ನಂಜಪ್ಪ ಗೌಡ, ದೇಜಪ್ಪಗೌಡಾ ಮಗ, ಮಂಜರಾಬಾದ್ ತಾಲ್ಲು ಬೇಲೂರಲ್ಲಿರುವವರು, 3 ಓಫೀಸಿಯಲ್ ರಿಸೀವರ್ ಮಂಗಳೂರು—ಪ್ರತಿವಾದಿರ್ರು ಕ್ಷೆಪೊಂಡೆಂಟ್ಸು.

ಮೇಲಿನ ಅಮ್ಮಣ್ಣಾರಿಯಲ್ಲಿ ದಾವಾ ಆದವಿನ ಆಸ್ತಿಯೇಲಂವಿಗೆ ಅಪೇಕ್ಷಿಸಿ ವಾದಿಲು ಹಾಜ್ರಾಸಿದ್ದಿದ ಯೇಲಂ ಇಸ್ತಿಹಾರಿನ ಶರ್ತಗಳು ಮಂಜೂರು ಮಾಡುವರೆ ಮತ್ತು ಸದ್ರಿ ಆಸ್ತಿಯೇಲಂ ಸಮಯ ದರ್ಖಾಸ್ತಿಗೆ ನಂತು ದರ್ಖಾಸ್ತಿನ ಹಣವನ್ನು ವೈಷ್ಣೆ ಹಾಕ್ಕೆ ಮುಟ್ಟಿಮಾಡುವರೆ ಪರ್ಮಿಶನ್ ಕೇಳಿ ವಾದಿಲು ದಾಖಲ್ಲುಮಾಡಿದ R. E. A. 449/1943ನೇ ಅರ್ಜಿ ತನ್ನ ಬಗ್ಗೆ ತಾ 30-10-1943 ನೇ ದಿವ್ಸ ಪೂರ್ವಾಹ್ನ 11ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುತ್ತದೆಂತ 2ನೇ ಪ್ರತಿವಾದಿಗೆ ಯೀ ಮೂಲಕ ತಿಳಿಸೋಣಾಗುತ್ತದೆ

M. Madhava Rao.
Vakil for Pettitioner.

Mangalore
29-9-1943

ಸ್ಥಿತಿಗತಿ

ದಲ್ಲಿ ಜರ್ಮನರು ಟೊಂಕ ಮುರಿದುಕೊಂಡಿದ್ದಾರೆಂಬುದನ್ನು ಮರೆಯಬಾರದು!

ಪೋಲೆಂಡ್

ಈಗ ಪೋಲೆಂಡ್ ಪ್ರಮುಖವು ಚಟುವಟಿಕೆ ತೋರಿಸಬೇಕಾದ ಕಾಲ. ಜರ್ಮನರು ಪೋಲೆಂಡ್ ಗಡಿಯ ತನಕ ಹಿಂಜರಿದು ನಿಲ್ಲಬಹುದು; ಆದರೆ ರಶ್ಯಾನರು ಮಿಕ್ಕ ಯಾವ ಭಾಗದಲ್ಲಿ ತಡೆದರೂ ಪೋಲೆಂಡಿನೊಳಗೆ ನುಗ್ಗುವದಂತೂ ಖಂಡಿತ. ಜರ್ಮನಿಯನ್ನು ವೈರಿಯಾಗಿ ಗಣಿಸಿರುವ ಪೋಲಿಷ್ ಪ್ರಮುಖರು ರಶ್ಯವನ್ನೂ ಸಂದೇಹ ದೃಷ್ಟಿಯಿಂದಲೇ ನೋಡುತ್ತಿದ್ದಾರೆ. 'ರಶ್ಯಾನರು ನಮ್ಮ ಗಡಿಯೊಳಗೆ ಸ್ವಾತಂತ್ರ್ಯ ನೀಡಲು ನುಗ್ಗಿಯಾರು; ಸ್ವಾಹಾ ಮಾಡಲು ನುಗ್ಗಲಾರರೆಂದು ನಾವು ಆಶಿಸುತ್ತೇವೆ' ಎಂದು ಪೋಲೆಂಡ್ ಮಾತುಗಾರನೊಬ್ಬನು ಮುಂದಾಗಿ ಆಡಿತೋರಿಸಿದ್ದಾನೆ. ಮೋಸ್ಕೋವಿಗೆ ಹೊರಡುವ ಮೊದಲು ಮಿ. ಈಡನರು ಪೋಲೆಂಡ್ ಪ್ರಧಾನರೊಡನೆ ಸಂಭಾಷಿಸಿದುದೂ ಇದಕ್ಕಾಗಿಯೇ. ಅಂತೂ ಪೋಲೆಂಡ್ ರಶ್ಯಾ ಗಡಿ ನಿರ್ಣಯವು ತ್ರಿರಾಷ್ಟ್ರ ಪರಿಷತ್ತನ್ನು ತ್ರಿಶಂಕು ಸ್ವರ್ಗವನ್ನಾಗಿ ಮಾಡದಿರಲಾರದು!

ಇಟೆಲಿ ಯುದ್ಧ

ಮಿತ್ರರು ಇಟೆಲಿಯಲ್ಲಿ ಸಾವಧಾನವಾಗಿ ಮುಂದೊತ್ತುತ್ತಿದ್ದಾರೆ. ಇಟೆಲಿಯಲ್ಲಿ ಅನಿರೀಕ್ಷಿತ ಅನುಕೂಲತೆಗಳೊದಗಿದುದರಿಂದಾಗಿ, ಯುರೋಪು ದ್ವಿತೀಯ ರಂಗದ ಕಾಲವು ತಿಂಗಳಿನಷ್ಟು ಸಮೀಪಿಸಿತು ಎಂದು ಮಿತ್ರರಾಷ್ಟ್ರೀಯ ಯುದ್ಧತಜ್ಞರು ಸಂತೋಷ ವ್ಯಕ್ತಮಾಡಿದ್ದಾರೆ. ಆದರೆ ಹಾಗಾಗಿದೆಲ್ಲಿ, ಹೇಗೆ ಎಂಬುದು ಪ್ರಕಟವಾಗಿಲ್ಲ. ಆಕ್ರಮಣಾರಂಭದ ಮೊದಲು ಇಟೆಲಿ ಯುದ್ಧಕ್ಕೆ ಒಂದೇ ತಿಂಗಳ ಅವಧಿ ಕೊಡಲಾಗಿತ್ತು. ಈಗ ಎರಡೂವರೆ ತಿಂಗಳಾದರೂ 'ರೋಮ್ ಪತನ'ವಾಗಲಿಲ್ಲ. ನಿರೀಕ್ಷೆಗೆ ಮಿಕ್ಕಿ ದಕ್ಷಿಣ ಇಟಲಿಯ ಮಿತ್ರರನ್ನು ತಡೆಹಿಡಿದಿದೆ. ಜರ್ಮನರ ತೀವ್ರ ಪ್ರತಿಭಟನೆಯನ್ನು ಉತ್ತರಗಡಿಯಲ್ಲ ಇದಿರಿಸಲಿಳಿದಿದೆ. ಹೀಗಿದ್ದರೂ, ವಿಮಾನಗಳಿಗಿಂತ ವೇಗವಾಗಿ ಮಿತ್ರರ ಆಶೆ ಮುಂದೋಡಬಲ್ಲುದೆಂಬುದೊಂದು ಸಂತೋಷ!

ಗುಪ್ತ ಸಂಧಾನ?

ರಶ್ಯದಲ್ಲಿ ಜರ್ಮನರು 1939ರ ಗಡಿ ತನಕ ಹಿಂದೊತ್ತಿದೊಡನೆ ಯುದ್ಧ ನಿಲ್ಲುವದೆಂದೂ, ಹಾಗೆಂದು ರಶ್ಯಾ ಜರ್ಮನಿ ಒಡಂಬಡಿಕೆಯಾಗಿದೆ ಅಥವಾ ಆಗಲಿದೆಯೆಂದೂ ವಾರ್ತೆ. ಬೋಲ್ಶೆವಿಕರಿಗಿದಿರಾಗಿ ಮಿತ್ರರು ಮತ್ತು ಜರ್ಮನರೊಂದಾಗಬೇಕೆಂಬ ಸಂಧಿ ಸೂಚನೆಯನ್ನು ನಾಜಿಗಳು ತಟಸ್ಥರ ಮೂಲಕ ಮುಂದಿಟ್ಟಿರುವರೆಂದು ಇನ್ನೊಂದೆಡೆಯ ಸುದ್ದಿ. ಗೋಬೆಲ್ಸನು ಈ ಎರಡು ಬಾಯಿಯ ಖಡ್ಗ ಬೀಸುತ್ತಿರುವದು ತಮ್ಮ ತ್ರಿರಾಷ್ಟ್ರ ಪರಿಷತ್ತನ್ನು ಕತ್ತರಿಸುವದಕ್ಕಾಗಿಯೇ ಎಂದು ಬ್ರಿಟಿಷರ ಅಂಬೋಣ. ಈ ಸಂಧಾನ ಪ್ರಸ್ತಾಪಗಳೆಲ್ಲಾ 'ಗೋಬೆಲ್ಸ್ ಕುತಂತ್ರ'ವೆಂದೇ ಕಸರಿಡೋಣ. ಆದರೆ ಇದಕ್ಕಾದರೂ ಮಿತ್ರಪಾಳಯದೊಳಗೆ ಹೊಗೆಯಾಡುತ್ತಿರುವ ಅಂತಃಕಲಹವೇ ಆಧಾರವಲ್ಲವೆ?

ಹಿಂದೀ ಸಮಸ್ಯೆ.

ಸರ್ವವನ್ನು ಸಮರ್ಪಿಸಿಯಾದರೂ ಸಂಧಾನ ಸಾಧಿಸಲೇಬೇಕು ಎಂದು ಶ್ರೀ. ರಾಜಗೋಪಾಲಾಚಾರ್ಯರು ಭೀಷ್ಮ ಪ್ರತಿಜ್ಞೆ ತೊಟ್ಟಂತಿದೆ. 'ಕ್ರಿಪ್ಸ್ ಸೂಚನೆಯು ಅನೋಘವಾದು; ಅದು ಎಲ್ಲಿ ಮುರಿದು ಬಿದ್ದಿತ್ತೋ ಅಲ್ಲಿಂದಲೇ ಪ್ರಶ್ನೆ ಮಾತುಕತೆಯಾರಂಭಿಸಬೇಕು' ಎಂಬುದೇ ಅವರ ಇತ್ತೀಚಿನ ಅನಿಸಿಕೆ. ಆದರೆ ಸದ್ಯಕ್ಕದನ್ನೂ ಬ್ರಿಟಿಷರು ಮರೆತು ಬಿಟ್ಟಂತಿರುವದರಿಂದ ರಾಜಾಜಿಯ ಮಾತಿಗೆ ಈ ತನಕ ಬೆಲೆಬಂದಿಲ್ಲ. ಬರ್ಮಾ ಧಾಳಿಯಾರಂಭವಾಗಲಿರುವ ಈ ಕಾಲದಲ್ಲಿ, ಹಿಂದೀ ಜನತೆಯ ಬೆಂಬಲವಗತ್ಯವೆಂದು ಬ್ರಿಟಿಷರು ಮನಗಾಣುವವರಾದರೆ, ಅದಕ್ಕಾಗಿ ಎಂದೋ ಮುಚ್ಚಲ್ಪಟ್ಟು ಬರ್ಮಾರಸ್ತೆಯಂತಾಗಿದ್ದ ಹಳೇ ಮಾರ್ಗವನ್ನೇ ಪುನಃ ತೆರೆಯಿರೆಂದು ರಾಜಾಜಿ ತೋರಿಸಿಕೊಟ್ಟಿದ್ದಾರೆ. ಆಚಾರ್ಯರಿಗೆ ಹೇಗಾದರೂ ಪಾಪಿಸಿ ಬ್ರಿಟಿಷ್ ಮೈತ್ರಿ ಗಳಿಸಬೇಕಾಗಿದೆ; ಬ್ರಿಟಿಷರಿಗೆ ಹೇಗಾದರೂ ವಾದಿಸಿ ದೂರ ಸರಿಯಬೇಕಾಗಿದೆ. ಸ್ವಾರಸ್ಯದ ತಿಕ್ಕಾಟ!

ಆಹಾರ ಸಮಸ್ಯೆ.

ಹಿಂದುಸ್ಥಾನದ ಆಹಾರಾಭಾವದ ಕುರಿತು ಬ್ರಿಟಿಷ್ ಪತ್ರಿಕೆಗಳು ಪ್ರದರ್ಶಿಸಿದ ಆತುರಕ್ಕಾಗಿ ಅಭಿನಂದಿಸಬೇಕಾಗಿದೆ. ಬಂಗಾಳದ ನಿರಾಹಾರೀ ಮೃತರ ಪ್ರೇತಬಾಧೆ ಇಂಗ್ಲಾಂಡಿಗೂ ಬಡಿದಂತಿದೆ. ಭೂಮಧ್ಯ ಸಮುದ್ರ ವಿಜಯಗಳಿಂದಾಗಿ ಹಿಂದುಸ್ಥಾನಕ್ಕೆ ಸಾಮಗ್ರಿ ಸಾಗಿಸಲು ಹಡಗಾನುಕೂಲತೆಯುಂಟಾಗಿದೆ; ಬ್ರಿಟಿಷ್ ಸರಕಾರವು ಅದಕ್ಕಾಗಿ ವ್ಯವಸ್ಥೆ ಮಾಡಿದೆ; ಆಸ್ಟ್ರೇಲಿಯದಿಂದ ಗೋದಿಹಿಟ್ಟು ಬರಲಿದೆ, ಎಂದೆಲ್ಲಾ ಆನಂದದಾಯಕ ಸುದ್ದಿಗಳಿವೆ. ಹೀಗೆ ಸಾಯುವವರೆಲ್ಲಾ ಸತ್ತು, ನೋಯುವವರೆಲ್ಲಾ ನೊಂದಾದ ಮೇಲೆ ಅಲ್ಲಿಂದ ಆಮದೂ ಆಗುತ್ತಿದೆ; ಇಲ್ಲಿ ಬೆಳೆ ಕಟಾವೂ ಪ್ರಾರಂಭಿಸಿದೆ. ಇನ್ನು ಸ್ವಲ್ಪ ದಿನಗಳಲ್ಲಿ ಪರಿಸ್ಥಿತಿ ಸುಧಾರಿಸಬಹುದು—ಆದರೆ ಆ ಸುಧಾರಣೆಗೂ ಅಲ್ಪಾಯುಷ್ಯವೇನೋ ಎಂಬ ಭಯವಿದ್ದೇ ಇದೆ. ಆದ್ದರಿಂದ, ಇನ್ನೆಂದಿಗೂ ಹಾಗಾಗಲು ಬಿಡಲಾರೆನೆಂದು, ಆಹಾರವಿಲ್ಲದೆ ಸತ್ತವರ ಆತ್ಮಸಾಕ್ಷಿಯಾಗಿ ಸರಕಾರವು ಈಗಲೇ ಪ್ರಮಾಣಪೂರ್ವಕ ಪ್ರತಿಜ್ಞೆ ಮಾಡಲಾರದೆ?

ನೋಟೀಸು.

ಮಂಗಳೂರು ಡಿ. ಮು. ಕೋರ್ಟಿನಲ್ಲಿ.

R. E. P No 901/1942 ಕ್ರಮಸಂಖ್ಯೆ 312/1930

ಡಿಕ್ರಿ ಹೋಲ್ಡರು—ಅರ್ಜಿದಾರ್ರು

1 ಹಂಮದುಮ್ಮಾ 2 ಪಳ್ಳಿಬ್ಯಾರಿ 3 ಇದ್ದಿನಬ್ಯಾರಿ – ಸ್ವಾಬ್ಬಯ್ಯಾರಿ ಮಕ್ಕಳು, ಅಡ್ಯಾರುಗ್ರಾಮದಲ್ಲಿರುವವರು – ರೆಸ್ಪೊಂಡೆಂಟರು.

ಮೇಲೆ ಹೇಳೋಣಾದ 2ನೆ 3ನೇ ರೆಸ್ಪೊಂಡೆಂಟರಿಗೆ.

ಮೇಲೆ ಹೇಳೋಣಾದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದ ಅರ್ಜಿದಾರರು ಅಪ್ಪಾದ ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿಮಾಡಿದ್ದಾರೆ. ಆದುದರಿಂದ ವಿಕ್ರಯದ ಇಸ್ತಿಹಾರಿನ ಶರತುಗಳನ್ನು ನಿರ್ಣಯಿಸಲಿಕ್ಕೆ ತಾ 16-10-43ಎಂತ ನಿಶ್ಚಯಿಸುತ್ತದೆ.

B R. Vyasaraya Achar.

ಮಂಗಳೂರು
ತಾ 28-9-43

ಪ್ರಕಟಣೆ

ಬಂಟಕಲ್ಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನಕ್ಕೆ ಸೇರಿದ ರಾಜಾಪುರ ಸಾರಸ್ವತ ಬ್ರಾಹ್ಮಣ ವೃಂದದ ಮಹಾಜನರ ತಿಳುವಳಿಕೆಯ ಬಗ್ಗೆ.

ನಮ್ಮ ಸಮಾಜದ ಮಹಾಸಭೆಯೊಂದು ತಾ 25-7-43ರಲ್ಲಿ ಸದ್ರಿ ದೇವಸ್ಥಾನದಲ್ಲಿ ಜರಗಿ ಅದರ ಆಡಳಿತ ಕಮಿಟಿಗಾಗಿ ಒಬ್ಬರು ಮಂದಿ ಮೆಂಬರರನ್ನು ಚುನಾಯಿಸಿ ಅವರಲ್ಲಿ ಸೀರೆ ಶ್ರೀನಿವಾಸ ಕಾಮ್ತ ಆಡಳಿತ ಕಮಿಟಿಯ ಅಧ್ಯಕ್ಷರನ್ನಾಗಿಯೂ ಚುನಾಯಿಸಿ ಆ ಪ್ರಕಾರ ತಾ 25-8-43ರ ಒಳಗೆ ಆಡಳಿತ ಕರಾರನ್ನು ರಿಜಿಸ್ಟ್ರಿ ಮಾಡಿಸಿಕೊಳ್ಳಬೇಕಾಗಿಯೂ ನಿರ್ಣಯಿಸಲಾಗಿತ್ತು. ಆದರೆ ಸದ್ರಿ ನಿರ್ಣಯದ ಪ್ರಕಾರ ಆ ಸಮಯದೊಳಗೆ ಕರಾರು ರಿಜಿಸ್ಟ್ರಿ ಯಾಗದಿರುವುದರಿಂದಲೂ, ಸದ್ರಿ ಮೆಂಬರರಲ್ಲಿ ಈಗ ಭಿನ್ನಾಭಿಪ್ರಾಯಗಳಿರುವುದರಿಂದಲೂ, ಪುನಃ ಮಹಾಸಭೆಯಾಗಿ ಆಡಳಿತ ಮೆಂಬರರ ಚುನಾವಣೆಯಾಗಿ, ಕರಾರು ರಿಜಿಸ್ಟ್ರಿ ಯಾಗುವವರೆಗೆ ಸದ್ರಿ ಸೀರೆ ಶ್ರೀನಿವಾಸ ನಾಯಕರು ತಾ 25-7-43ರ ಮೊದಲು ಇದ್ದಂತೆಯೇ ದೇವಸ್ಥಾನದ ಗೌರವ ಕಾರ್ಯದರ್ಶಿಯಾಗಿರುವದಲ್ಲದೆ ಮುಖ್ಯ ಅಧಿಕಾರವೂ ಅವರಿಗಿರುವುದಿಲ್ಲ. ಹಾಗೆ ಬೇರೆ ಯಾವ ಅಧಿಕಾರದಿಂದಲೂ ಕಾರ್ಯನಿರ್ವಾಹವಾದರೆ ಅದು ಸಂಘವಾಗತಕ್ಕದಲ್ಲ ಅಥವಾ ಅದರಿಂದ ದೇವಸ್ಥಾನಕ್ಕೆ ಆಗಬಹುದಾದ ಸಕಲ ನಷ್ಟಗಳಿಗೂ ಅವರೇ ಜವಾಬ್ದಾರರಾಗಿರುತ್ತಾರೆ. ಈ ಎಲ್ಲಾ ವಿಷಯಗಳನ್ನು ಸಮಾಜದ ಮಹಾಜನರಿಗೂ ಸೀರೆ ಶ್ರೀನಿವಾಸ ನಾಯಕರಿಗೂ ತಿಳಿಸುವೆವು.

ಸಮಾಜದ ಹಿತಕಾಂಕ್ಷಿ,

ವಿಶ್ವನಾಥ ಪ್ರಭು.

THE CANARA MUTUAL ASSURANCE COMPANY, Ltd.

NEW APPOINTMENTS.

Applications ... selection of S. S. L. C. standard (both boys & girls) are invited for clerical post ... Students fresh from school will be preferred. The ... post ... Rs. 3.

Applicants should possess a good ... good command of English, a good moral character and should be quick at figures.

All applications ... two testimonials, one from the Headmaster of the School and another from any local gentleman and should reach the office before the 1st Nov. 43.

UDIPI,
5th Oct., 1943.

Managing Director.

N. B.—Canvassing or influencing will be a disqualification.

The Canara Banking Corporation Limited.

(Incorporated in British India with limited Liability)

ESTD: 1906

ANNOUNCEMENT.

A Branch of the Bank will be opened shortly at:-

BANGALORE CITY,

(ARCOT SREENIVASACHARS STREET.)

ಉಡುಪಿ, ಗುರುವಾರ, ೧೪-೧೦-೧೯೪೩

ನೂಲರಿವೆ ನಿಯಂತ್ರಣ.

ಕಳೆದ ವಾರ ಬೊಂಬಾಯಿಯಲ್ಲಿ ಸೇರಿದ ಅರಿವೆ ನಿಯಂತ್ರಣ ಸಮಿತಿಯು ಎಲ್ಲಾ ವಿಧದ ಅರಿವೆ ಮತ್ತು ನೂಲುಗಳ ಮೇಲೂ ನಿಯಂತ್ರಣ ಜ್ಯಾರಿ ಮಾಡುವ ನಿರ್ಧಾರ ಮಾಡಿ ಮಹದುಪಕಾರ ಮಾಡಿದೆ. ಕಳೆದ ಆಗೋಸ್ತು ತಿಂಗಳಲ್ಲೊಮ್ಮೆ ಈ ಬೋರ್ಡು ಕೇವಲ ಹನ್ನೆರಡು ವಿಧದ ಅರಿವೆ ಮತ್ತು ನೂಲುಗಳ ಮೇಲೆ ನಿರ್ಬಂಧ ಹಾಕಿತು; ಅದು ನಿರೀಕ್ಷಿಸಿದಷ್ಟು ಪರಿಣಾಮಕೊಡಲಿಲ್ಲ. ನಿಯಂತ್ರಿತ ಅರಿವೆ, ಅನಿರ್ಬಂಧಿತ ಅರಿವೆಯೆಂಬ ವರ್ಗಭೇದವುಂಟಾಯಿತು; ಬಡವನ ವಸ್ತ್ರದ ಬೆಲೆ ತಗ್ಗಲಿಲ್ಲ. ಆಗಿನ ನಿಯಂತ್ರಣ ಮೂಲಕ ತಗ್ಗಿಸಿದ ಬೆಲೆಯಾದರೂ, ಮಿಲಿಯಾವಧಿ ಜನತೆಯ ಲಕ್ಷ್ಯದಲ್ಲಿರದೆ, ಮಿಲ್ಲುಗಳ ಪಕ್ಷಪಾತಿಯಾಗಿತ್ತೆಂದೂ ಸಲ್ಲುವದು. ಸೂತ್ರವಲ್ಲ, ನಿಯಂತ್ರಣಕ್ಕೊಳಗಾದ 12 ವರ್ಗಗಳ ಬೆಲೆಯಲ್ಲಿ ತುಸು ಇಳಿತವಾದರೆ ಅಂತಹ ನಿರ್ಬಂಧವಿಲ್ಲದ ಸಾವಿರಾರು ವಿಧದ ಅರಿವೆಗಳ ಬೆಲೆಯಲ್ಲಿ ಭರತ ಕಂಡು ಬಂತು. ಅರ್ಥಾತ್ ಮಿಲ್ ಮಾಲಕರು ಮತ್ತು ವ್ಯಾಪಾರಿಗಳು ಸೈಯ ನಷ್ಟವನ್ನು ಮಾವಳಿಯಿಂದ ಭರ್ತಿಮಾಡಿಕೊಳ್ಳಲಾಗುವ ಹಾದಿಯೊಂದು ಆ ನಿಯಂತ್ರಣದಿಂದ ನಿರ್ಮಾಣಗೊಂಡಿದ್ದಿತು. ಇವೆಲ್ಲಾ ವಿದ್ಯಮಾನಗಳ ಕೂಲಂಕುಷ ಪರ್ಯಾಲೋಚನೆ ನಡಿಸಿ, ಸೇಯಿಗೆ ನಿಯಂತ್ರಣ ಬೋರ್ಡಿನವರು ಎಲ್ಲಾ ವರ್ಗದ ಅರಿವೆ ಮತ್ತು ನೂಲುಗಳನ್ನು ನಿರ್ಬಂಧಕ್ಕೊಳಪಡಿಸಿದುದು ಅತ್ಯಂತ ಸ್ತುತ್ಯವಿದೆ. ಮೊದಲಿನದು ದೃಢಕಾಯರಾದ ಕೆಲವರನ್ನೇ ಸೈನ್ಯಕ್ಕಾರಿಸುವ ಕ್ರಮದಂತಿದ್ದರೆ, ಈಗಿನದು ಸರ್ವರನ್ನೂ ಸೈನ್ಯಕ್ಕೆ ಸೇರಿಸುವ ಖಡ್ಡಾಯಾಜ್ಞೆ! ಹಿಂದೀಯರು ಇಂದಿನ ಬದುಕು-ಸಾವುಗಳ ನಡುವಿನ ಜೀವನ ಹೋರಾಟದಲ್ಲಿ ವಿಜಯ ಹೊಂದಬೇಕಾದರೆ ಇಂತಹ ಸಾರ್ವತ್ರಿಕ ಅರಿವೆ ನಿಯಂತ್ರಣವು ಅತ್ಯಗತ್ಯ. ಈ ನಿಯಂತ್ರಣವು ಪ್ರತಿಯೊಂದು ಜಾತಿಯ ಅರಿವೆಗೂ-ಸುಮಾರು 3000 ವಿಧ-ಅನ್ವಯಿಸುವದು. ಕಳೆದ ಬಾರಿಗಿಂತ ಈ ಸಲ ಬೆಲೆಯನ್ನು ಮತ್ತಷ್ಟು ತಗ್ಗಿಸಲಾಗುವದೆಂಬುದು ಸಂತೋಷಕರ.

ಈ ಮೊಹರು ನಿಶಿ ಬೆಲೆಯು ಇದೇ ದಶಂಬರ ತಾ. 1ರಿಂದ ಜ್ಯಾರಿಗೆ ಬರಲಿದೆ. ಬೆಲೆ ನಿಶ್ಚಯಿಸುವುದಕ್ಕೆ ಕೆಲವು ದಿನಗಳ ಅವಕಾಶ ಬೇಕಾಗಿರುವದರಿಂದ ನವಂಬರ್ ಮಧ್ಯಭಾಗದಲ್ಲಿ ನಿಯಂತ್ರಿತ ಅರಿವೆ ಮೌಲ್ಯವು ಜಾಹೀರಾಗುವುದೆಂದು ಪ್ರಕಟವಾಗಿದೆ. "ದಶಂಬರ ತಾ. 1ರಿಂದ ಅರಿವೆ ಮತ್ತು ನೂಲುಗಳ ಮೇಲೆ ಹೊಸ ನಿಯಂತ್ರಣ ಬೆಲೆಯ ಚೀಟಿಯಂಟಿಸಲ್ಪಟ್ಟ ಮೇಲೆ, ಈಗ ಕೊಡುವದಕ್ಕಿಂತ ಸೇಕಡಾ 30ರಷ್ಟು ಕಡಿಮೆ ಬೆಲೆಕೊಟ್ಟು ಅರಿವೆ ಪಡಕೊಂಡರಾಯಿತು"-ಎಂದು ನಿಯಂತ್ರಣ ಮಂಡಲದ ಅಧ್ಯಕ್ಷ ಶ್ರೀ ಕೃಷ್ಣರಾಜ ಠಾಕರ್ಸಿಯವರ ಅಭಿಪ್ರಾಯ. ಈಗ ನೂರು ರೂಪಾಯಿ ಹಿಡಕೊಂಡು ಮಳಿಗೆಗೆ ಹೋಗತಕ್ಕವನು, ಅವುಗಳಲ್ಲಿ 30ನ್ನು ವ್ಯಯಿಸಿಯಾದರೂ ಇನ್ನೆರಡೂವರೆ ತಿಂಗಳು ಕಾಯಬಲ್ಲನಾದರೆ ಆಗ ಉಳಿಯುವ 70 ರೂ. ಗಳೇ ಇಂದಿನ 100ರ ಕೆಲಸ ಮಾಡಿಕೊಡುತ್ತವೆ! 'ಪಾಷಾಣವೊಂದು ಪಲ್ಲಂಗದಷ್ಟು ದೊಡ್ಡದಾಗಿ ಕಾಣುತ್ತಿದೆ' ಎಂಬ ಅತಿಶಯೋಕ್ತಿಯನ್ನು ನಾಣ್ಣುಡಿಯಾಗಿ ಮಾಡಿಕೊಂಡಿರುವ ಬಡವರು ಇದನ್ನೊಂದು ಅಲ್ಪಲಾಭವೆಂದು ಅಲ್ಲಗಳೆಯುವಂತಿಲ್ಲ. ಆದರೆ ಅಖಿಲ ಹಿಂದುಸ್ಥಾನದ ಹಿಂದುಗಳು, ವರ್ಷಕ್ಕಾಗುವ ಬಟ್ಟೆ ತೆಗೆಯುವ ಕಾಲವೆಂದರೆ ದೀಪಾವಳಿ. ನವ ನಿಯಂತ್ರಣವು ಈ ಹಬ್ಬಕ್ಕೆ ಮೊದಲೇ ಆಗಮಿಸಿದ್ದರೆ ದೀಪಾವಳಿಯನ್ನು ಸುಗಮಗೊಳಿಸಿದ ಪುಣ್ಯ ಸಂಪಾದಿಸಬಹುದು. ಈ ಸುಸಂಬಂಧ ನಿರ್ಮಾಣವು ಈಗಲಾದರೂ ನಿಯಂತ್ರಣಾಧಿಕಾರಿಗಳಿಗೆ ಅಸಾಧ್ಯವಾದ ವಿಷಯವಲ್ಲ. ಇನ್ನೊಂದು ಮುಖ್ಯ ವಿಷಯವೆಂದರೆ ಸರಕಾರದ ಇದುವರೆಗಿನ ಇಂತಹ ನಿಯಂತ್ರಣಗಳು ತಮ್ಮ ಸಡಿಲು ವರ್ತನೆಯಿಂದಾಗಿ ಬೆಲೆ ಕೆಡಿಸಿಕೊಂಡಿವೆ. ನಿಶ್ಚಿತ ಬೆಲೆಗಳು ಕಾರ್ಯಕ್ಷೇತ್ರದಲ್ಲಿ ಕಂಡುಬಾರದೆ, 'ನಿಯಂತ್ರಣವೆಂದರೆ ಸರಕಾರದ ಹತೋಟಿಯೇನೂ ಇಲ್ಲ-ಅಭಿಪ್ರಾಯ ಸೂಚನೆ ಮಾತ್ರ' ಎಂಬ ಭಾವನೆ ಜನರಲ್ಲಿ ಬೇರೂರಿದೆ. ಆದ್ದರಿಂದ ಅಧಿಕಾರಿಗಳು ಈ ನಿಯಮವನ್ನಾದರೂ ಕಠಿಣವಾಗಿ ಜ್ಯಾರಿಗೆ ತರಬೇಕು. ಸರಕಾರವು ಇತ್ತೀಚೆಗೆ ಸಂಗ್ರಹಿಸಿದ ದಾಸ್ತಾನು ದಾಖಲೆಗಳಿಂದ ಹಿಂದುಸ್ಥಾನದಲ್ಲಿ 9 ತಿಂಗಳುಗಳಿಗೆ ಸಾಕಾಗುವಷ್ಟು ಅರಿವೆ ಮತ್ತು ನೂಲುಗಳಿದಿವೆ ಎಂದು ತಿಳಿದುಬರುತ್ತದೆ. ಯುದ್ಧಪೂರ್ವದಲ್ಲಿ ಹಿಂದೆಂದೂ 3 ತಿಂಗಳುಗಳಿಗೆ ಮಿಕ್ಕಿ ಸಾಕಾಗುವಷ್ಟು ದಾಸ್ತಾನಿದ್ದುದಿಲ್ಲವಂತೆ. ಬೆಲೆಯಿನ್ನೂ ಏರಬಹುದೆಂಬ ವ್ಯಾಪಾರೀ ಅಭಿಲಾಷೆಯಿಂದಲೇ ಈ ರೀತಿ ಸಂಗ್ರಹಿಸಿಟ್ಟದ್ದಾಗಿರಬೇಕು. ಇಂತಹ ಕುತಂತ್ರಗಳು ಇನ್ನೂ ನಡೆಯದಂತೆ, ಈ ಅರಿವೆ ನಿಯಂತ್ರಣವು ಅಕ್ಷರಶಃ ಕಾರ್ಯಕಾರಿಯಾಗುವಂತೆ ಅಧಿಕಾರಿಗಳು ನಿಗಾ ಕೊಡಲೆಂದು ಹಾರೈಸುತ್ತೇವೆ.

ದುರ್ಬೀನು

ಕಟ್ಟೆಯ ಅಶ್ವತ್ಥ ಮರಕ್ಕೆ ಸುತ್ತು ತೆಗೆಯುತ್ತಾರೆ; ಕಾಡಿನ ಮರಕ್ಕೂ ಪ್ರದಕ್ಷಿಣೆಯಿದೆಯೇನು? ಸ್ಥಾನಾಪನ್ನನಿಗೇ ಸನ್ಮಾನ; ಸ್ಥಾನ ತಪ್ಪಿದವನಿಗಲ್ಲ.

ಂಂ ಂಂ ಂಂ

ಚೂರಿ ಕೈಯಲ್ಲಿ ಹಿಡಿದುಕೊಂಡವ ಕಾಯಿ ಕಡಿದಾನು; ಚೂರಿಯನ್ನಡಗಿಸಿ ಹಿಡಿದುಕೊಂಡವ ಕಂಠ ಕಡಿದಾನು. ಕ್ರೋಧ ಪ್ರದರ್ಶಕನಿಗಿಂತ ಅದನ್ನಡಗಿಸಿಟ್ಟುಕೊಂಡವ ಅಪಾಯಕರ.

ಂಂ ಂಂ ಂಂ

ರಾವಣನ ಪಾತ್ರ ಧರಿಸಬಹುದು; ಆದರೆ ಹತ್ತು ಬಾಯಿಗಳಿಂದ ಮಾತಾಡಬೇಕೆಂದರಾಗದು. ಧನವಂತನಂತೆ ನಟಿಸಬಹುದು; ಗಣ್ಯಕಾರ್ಯ ಮಾಡುವದಸಾಧ್ಯ.

ಂಂ ಂಂ ಂಂ

ಹಾಗಲಕಾಯಿ ಪಲ್ಯವಾದಾಗಲಾದರೂ ಕಹಿ ಅಂಶ ಇದ್ದೇ ಇದೆ; ಕಹಿ ಮನಸ್ಸು ಪಕ್ವವಾದಾಗಲಾದರೂ ಮೂಲಾಂಶವಿದ್ದೇ ಇದೆ.

ಂಂ ಂಂ ಂಂ

ಅಜೇ ಊರಿಗೆ ಹುಲಿ ಇಳಿದರೂ ಆಡುಗೇ ಮನೆಗೆ ಇಲಿ ಇಳಿಯಬಾರದು; ಅನ್ಯರ ಮನೆ ಹಾಳಾದರೂ ತನ್ನ ಮರ್ಜಿ ಹಾಳಾಗಬಾರದು.

ಂಂ ಂಂ ಂಂ

ಪಕ್ಕದಲ್ಲಿದ್ದರೆ ಅರಮನೆಯಾದರೂ ನೆರೆಮನೆ; ಸುಲಭದಲ್ಲಿ ಸಾಧ್ಯವಾದರೆ ಮಹತ್ಕಾರ್ಯವಾದರೂ ಮನೇ ಕಾರ್ಯ.

ಂಂ ಂಂ ಂಂ

ಹುಲಿ ಕಂಠಕ್ಕೆ ನೆಗೆಯುತ್ತದೆ; ಹುಳ ಕಾಲಿಗೆ ಕಚ್ಚುತ್ತದೆ. ಅಗ್ರಗಾಮಿಯ ವಿರೋಧಕ್ಕೂ, ಅಧಮನ ವಿರೋಧಕ್ಕೂ ಅಷ್ಟೇ ವ್ಯತ್ಯಾಸ.

ಂಂ ಂಂ ಂಂ

ಯೋಚನೆಯಿಂದ ತಲೆ ಹಿಡಿದುಕೊಂಡ 'ತಲೆ ಸಿಡಿತವೆ?' ಎಂಬ ಪ್ರಶ್ನೆ ಬಂದೀತು; ಶುಷ್ಕ ಮನಸ್ಸಿನ ಸೂಚನೆಯನ್ನಾದರೂ 'ಸುಳಿ ಗುಂಡಿಯೆ?' ಎಂದು ಅನುಮಾನಿಸಿಯಾರು.

ಂಂ ಂಂ ಂಂ

ಜನ ಹಾದಿ ಹಿಡಿದು ಹೋಗುತ್ತಾರೆ; ಸೈನ್ಯ ಹಾದಿ ಕಡಿದು ಹೋಗುವದೂ ಇದೆ. ಕ್ರಮಬದ್ಧ ನಿಯಮ ಪಾಲಿಸುತ್ತಾನೆ; ಕ್ರಾಂತಿಕಾರ ನಿಯಮೋಲ್ಲಂಘಿಸುವದೂ ಇದೆ.

ಂಂ ಂಂ ಂಂ

'ವಿ' ಇಡುವದು ವಿಜಯದ ಚಿಹ್ನೆ: 'ಹೀ'ಮಾಡುವದು ಹೀನಬುದ್ಧಿಯ ಚಿಹ್ನೆ.

ಹೆಬ್ರಿ—ಸ್ಥಳೀಯ ಬೋ. ಹಾ. ಎ. ಶಾಲೆಯಲ್ಲಿ ತಾ. 5.10-43ರಲ್ಲಿ 'ಶ್ರೀ. ಶಾರದಾ ಪೂಜೋತ್ಸವವು' ಯಶಸ್ವಿಯಾಗಿ ಜರಗಿತು

ಅಖಿಲ ಕರ್ಣಾಟಕ

ಪತ್ರಿಕೋದ್ಯೋಗಿ ಸಮ್ಮೇಳನ, ಮಂಗಳೂರು.

ಅಖಿಲ ಕರ್ಣಾಟಕ ಪತ್ರಿಕೋದ್ಯೋಗಿ ಪರಿಷತ್ತೊಂದನ್ನು, ಬರುವ ದಶಂಬರದ ಕೊನೆಯ ವಾರದೊಳಗೆ ಅಥವಾ ೧೯೪೪ ಜನವರಿಯ ಪ್ರಥಮದ ವಾರದಲ್ಲಿ ಮಂಗಳೂರಲ್ಲಿ ಜರಗಿಸಲು ದ. ಕ. ಜಿಲ್ಲಾ ಪತ್ರಿಕೋದ್ಯೋಗಿ ಸಂಘವು ನಿರ್ಧರಿಸಿದೆ. ಅಖಿಲ ಕರ್ನಾಟದ ಪತ್ರಿಕೋದ್ಯೋಗಿಗಳೊಳಗೆ ಪರಸ್ಪರ ಸಂಪರ್ಕವಿರುವಂತೆ ಮಾಡುವುದು; ಅವರೊಳಗೆ ಐಕ್ಯ, ಅನ್ಯೋನ್ಯ ಸಹಕಾರ, ಸೌಹಾರ್ದಗಳನ್ನು ಹುಟ್ಟಿಸಿ, ಕನ್ನಡ ಪತ್ರಿಕೋದ್ಯಮದ ಶೀಘ್ರ ಮತ್ತು ಪೂರ್ಣ ಅಭಿವೃದ್ಧಿಗೆ ಪ್ರಯತ್ನಿಸುವಂತೆ ಮಾಡುವುದು; ಅದಕ್ಕಾಗಿ, ಸಾಧ್ಯವಿದ್ದರೆ ಅಖಿಲ ಕರ್ಣಾಟಕ ಪತ್ರಿಕೋದ್ಯೋಗಿ ಸಂಘವನ್ನು ರಚಿಸುವುದು; —ಇವು ಸಮ್ಮೇಳನದ ಉದ್ದೇಶಗಳು.

ಕರ್ಣಾಟಕದಲ್ಲಿರುವ ಎಲ್ಲಾ ಪತ್ರಿಕೋದ್ಯೋಗಿ ಸಂಘಗಳೂ (ಮೈಸೂರು ಸಂಸ್ಥಾನವೂ ಸೇರಿ) ದೈನಿಕ, ಸಾಪ್ತಾಹಿಕ, ಮಾಸಿಕ ಮತ್ತಿತರ ಕನ್ನಡ ಪತ್ರಿಕೆಗಳೂ ತಮ್ಮ ಪತಿನಿಧಿಗಳನ್ನು ಸಮ್ಮೇಳನಕ್ಕೆ ಕಳುಹಬೇಕು. ಪ್ರಾತಿನಿಧ್ಯದ ಹಣವಾಗಿ ಒಂದು ರೂಪಾಯಿಯನ್ನು ಪ್ರತಿನಿಧಿಗಳು ತೆರಬೇಕು; ಅವರ ವಸತಿ ಮತ್ತು ಊಟದ ಏರ್ಪಾಡನ್ನು ಉಚಿತವಾಗಿ ಮಾಡಲಾಗುವುದು.

ಸಮ್ಮೇಳನವನ್ನು ಜರಗಿಸುವ ಮತ್ತು ಪ್ರತಿನಿಧಿಗಳನ್ನು ಸ್ವಾಗತಿಸುವ ವ್ಯವಸ್ಥೆಯನ್ನು ಮಾಡುವುದಕ್ಕಾಗಿ ಒಂದು ಸ್ವಾಗತ ಸಮಿತಿಯನ್ನು ಜಿಲ್ಲಾ ಪತ್ರಿಕೋದ್ಯೋಗಿ ಸಂಘವು ರಚಿಸಿದೆ. ಕೆಳಗೆ ಕಾಣಿಸಿದ ಮಹನೀಯರ ಹೆಸರುಗಳನ್ನೊಳಗೊಂಡ ಕಾರ್ಯನಿರ್ವಾಹಕ ಸಮಿತಿಯನ್ನು ಅಕ್ಟೋಬರ ತಾ. 6ರಂದು ಸ್ವಾಗತ ಸಮಿತಿಯು ಆರಿಸಿರುವುದು. ಶ್ರೀ ಪಿ. ಎಸ್. ಕುಡ್ವ (ಸ್ವಾಗತಾಧ್ಯಕ್ಷರು); ಶ್ರೀಯುತರು ಕ. ಆರ್. ಆಚಾರ್, ರಾವ್ ಸಾಹೇಬ್ ಎ. ಎಲ್ ಪಿಂಟೋ, ಕೆ. ಹೊನ್ನಯ್ಯ ಶೆಟ್ಟಿ ಮತ್ತು ಎಚ್. ಭೀಮರಾವ್ (ಉಪಾಧ್ಯಕ್ಷರು); ಶ್ರೀ ಉಡುಪಿ ಗೋವಿಂದ ರಾವ್ (ಕೋಶಾಧಿಕಾರಿ); ಶ್ರೀಯುತರು ಕಯ್ಯಾರ ಕಿಂಞಣ್ಣ ರೈ, ಶಿ. ರಾ. ಕುಳುಕುಂದ ಮತ್ತು ತಿರುಮಲೇಶ್ವರ ಭಟ್ (ಕಾರ್ಯದರ್ಶಿಯರು); ಶ್ರೀಯುತರು ಎ. ಬಿ ಶೆಟ್ಟಿ, ಹಿ. ರಾ. ಮಲ್ಯ, ಡಾ ಎಸ್. ಪಿ ಭಟ್, ಎ. ಎಸ್. ಕಾಮತ್, ಕಡೆಂಗೋಡ್ಲು ಶಂಕರ ಭಟ್, ಕುಡ್ಪಿ ವಾಸುದೇವ ಶೆಣೈ, ಮಂಗಳೂರು ಜಾರಪ್ಪ, ಎಂ. ಎಸ್. ಮಾಧವ ರಾವ್, ಜೆ ವಾಮನ ಭಟ್, ಕಾಪು ವಾಮನಶೆಣೈ, ಟಿ. ಆರ್. ಎ. ಪೈ, ಬಂಟ್ವಾಳ ನಾರಾಯಣ ನಾಯಕ್, ಬೋಳಾರ ವಿಠ್ಠಲ ರಾವ್, ಕೆ. ಕೃಷ್ಣ ರಾವ್, ವಿ. ಕೇಶವ ಕಾಮತ್, ಬಿ. ವಿ. ಬಾಳಿಗ, ಮತ್ತು ಎಸ್. ಮುಕುಂದ ರಾವ್ (ಕಾರ್ಯ ನಿರ್ವಾಹಕ ಸಮಿತಿಯ ಸದಸ್ಯರು). ಜಿಲ್ಲೆಯಲ್ಲಿರುವ ಎಲ್ಲಾ ಪತ್ರಿಕೋದ್ಯೋಗಿಗಳೂ ಪತ್ರಿಕೋದ್ಯಮದಲ್ಲಿ ಆಸಕ್ತಿ-ಸಹಾನುಭೂತಿಗಳಿರುವ ಇತರ ಎಲ್ಲಾ ಮಹನೀಯರೂ ರೂ. ೧೦ ಇಲ್ಲವೆ ಅದಕ್ಕಿಂತ ಹೆಚ್ಚು, ರೂ. ೫,

ಮುಖ್ಯವಾರ್ತೆ

● ರಶ್ಯದ ಕಾಠಿಣ್ಯ

ತಾವು ರಶ್ಯವನ್ನು ಸಂಪೂರ್ಣವಾಗಿ ಬಿಟ್ಟುಕೊಡುವೆವೆಂಬ ಜರ್ಮನರ ಸಂಧಾನ ಸೂಚನೆಯನ್ನು ರಶ್ಯಾನರು ಧಿಕ್ಕರಿಸಿ, ಅತಿಶಿಸ್ತಾಗಿ ಪ್ರತಿಸೂಚನೆ ಕಳುಹಿದ್ದಾರೆಂಬ ವಾರ್ತೆಯನ್ನು 'ಸ್ಟೋಕ್ ಹೋಮಿ'ನ 'ಸೋಶಿಯಲ್ ಡೆಮೊಕ್ರೇಟನ್' ಪತ್ರಿಕೆ ದೊಡ್ಡ ತಲೆ ಬರೆಹ ಕೊಟ್ಟು ಪ್ರಕಟಿಸಿದೆ. ಜರ್ಮನರು ತಾವು ಆಕ್ರಮಿಸಿಕೊಂಡ ಎಲ್ಲಾ ದೇಶಗಳನ್ನೂ ಬಿಟ್ಟುಕೊಡಬೇಕು; ಮತ್ತು ಹಿಟ್ಲರನನ್ನು ಹಿಡಿದು ತಮಗೊಪ್ಪಿಸಬೇಕೆಂಬುದೇ ಸೋವಿಯೆಟರ ಸೂಚನೆ! ಆದ್ದರಿಂದ ಈಗ ನಾಜಿಗಳು ರಶ್ಯನ್ ಪಂಚಾಯಿತಿಕೆಯನ್ನೇ ಬಿಟ್ಟು ಮೇಡ್ರಿಡ್ ಮತ್ತು ಲಿಸ್ಬನಿನ ಮೂಲಕ ಆಂಗ್ಲೋ ಅಮೆರಿಕಾನರೊಡನೆ ಸಂಧಾನ ಪ್ರಸ್ತಾಪ ಮಾಡಲಿದ್ದಾರಂತೆ. ಏನೇ ದೊರೆಯದಿದ್ದರೂ ರಶ್ಯಾ ಮತ್ತು ಅದರ ಮಿತ್ರರಾಷ್ಟ್ರಗಳ ಕೃತಕ ಸಂಬಂಧದಿಂದಾಗಿ ಒಬ್ಬರಲ್ಲದಿದ್ದರಿನ್ನೊಬ್ಬರೊಡನೆ ರಾಜಿ ಮಾತಾಡುವ ಅನುಕೂಲತೆಯಾದರೂ ನಾಜಿಗಳಿಗೆ ದೊರೆತಿದೆ!

○ ಜಾಗತಿಕ ಬ್ಯಾಂಕ್

ಮುಂದಿನ ಲೋಕ ನವನಿರ್ಮಾಣಕ್ಕಾಗಿ 10,000 ಮಿಲಿಯ ಡೋಲರುಗಳ ಜಾಗತಿಕ ನವ ರಚನಾ ಬ್ಯಾಂಕೊಂದನ್ನು ಸ್ಥಾಪಿಸುವ ಸೂಚನೆಯು ಅಮೇರಿಕದ ಖಜಾನ್ಜಿಗಳಿಂದ ಮುಂದೆ ಬಂದಿದೆ. ಮಿ. ಮೋರ್ಗೆಂತಾವು ಇವರು ತಯಾರಿಸಿ ಅತ್ಯಂತ ಗುಪ್ತವಾಗಿ, ಅಮೇರಿಕದ ಬ್ಯಾಂಕಿಂಗ್ ಮತ್ತು ವಿದೇಶ ಸಂಬಂಧ ಸಮಿತಿಗಳಿಗೆ ಒಕ್ಟೋಬರ್ ತಾ. 5ರಲ್ಲಿ ಕಳುಹಿಸ್ದ ಈ ಯೋಜನೆಯು ಇನ್ನೂ ಅಮೇರಿಕದಲ್ಲಿ ಬಹಿರಂಗವಾಗಿಲ್ಲ. ಆದರೆ ಲಂಡನಿನಿಂದ ಇದು ಬೆಳಕು ಕಂಡಿರುವುದು ಆಶ್ಚರ್ಯವೇ ಸರಿ! ಅಂತೂ ಮುಂದಿನ ರಾಮರಾಜ್ಯ ನಿರ್ಮಾಣದ ಹಣ, ಗಜ, ಸಂಸ್ಕೃತಿ, ಭಾಷೆಗಳೆಲ್ಲಾ ಅಮೇರಿಕ ಮತ್ತು ಇಂಗ್ಲಾಂಡುಗಳದೇ! ಜಗತ್ತಿನ ಮಿಕ್ಕ ರಾಷ್ಟ್ರಗಳು ಆಂಗ್ಲೋ-ಅಮೆರಿಕಾನರ ಈ ಪರೋಪಕಾರಕ್ಕಾಗಿ ಧನ್ಯವಾದಗಳನ್ನರ್ಪಿಸಿ ಸುಮ್ಮಗಿದ್ದರಾಯಿತು!

○ ಮದ್ರಾಸಿಗೆ ಬೊಂಬು!

ಇದೇ ತಾ 11ರಲ್ಲಿ ಮದ್ರಾಸಿನ ಮೇಲೆ ನೇ ಜಪಾನರು ಬೊಂಬು ಹಾಕಿದರೆಂದೂ ರೈಲ್ವೇಸ್ಟೇಶನಿಗೆ ಪೆಟ್ಟಾದುದನ್ನು ಬಿಟ್ಟರೆ ಬೇರೆ ಗಣನೀಯ ಹಾನಿಯಾಗಿಲ್ಲವೆಂದೂ ಆದರೆ ಕೆಲ ಪ್ರಾಣಹಾನಿಯಾಗಿದೆಯೆಂದೂ ಸುದ್ದಿ. ಇದರಿಂದ ಪ್ರಾಂತ್ಯದಲ್ಲೇ ಉದ್ವೇಗವೆದ್ದಂತಿದೆ. ಇನ್ನು ಲೋರ್ಡ್ ಮೌಂಟ್ ಬೇಟನರಿಗೆ ಜಪಾನರು ಕೊಟ್ಟ ಸ್ವಾಗತ ವಾಗಿರಬೇಕು. ಸರ್ ಕ್ರಿಪ್ಸರು ಬಂದಾಗಲೂ ಇಂತಹ ಎಚ್ಚರಿಕೆಯೇ ಜಪಾನರಿಂದ ದೊರೆತ್ತಿದ್ದಿತು.

ಅಥವಾ ರೂ. ೨ ಹೀಗೆ ಫೀ ತೆತ್ತು ಸ್ವಾಗತ ಸಮಿತಿಯ ಸದಸ್ಯರಾಗಬಹುದು. ದಕ್ಷಿಣ ಕನ್ನಡದ ಎಲ್ಲಾ ಪತ್ರಿಕೋದ್ಯೋಗಿಗಳೂ ಪತ್ರಿಕೋದ್ಯೋಗದ ಪ್ರಾಧಾನ್ಯವನ್ನು ಮನಗಾಣುವ ಇತರ ಎಲ್ಲಾ ಮಹನೀಯರೂ ಸ್ವಾಗತ ಸಮಿತಿಯ ಸದಸ್ಯರಾಗಬೇಕೆಂದು ವಿನಂತಿ.

ಅಖಿಲ ಕರ್ಣಾಟಕ ಪತ್ರಿಕೋದ್ಯೋಗಿಗಳ ಸಂಘವು ಇಲ್ಲದ ಕಾರಣ, ಸಮ್ಮೇಳನದ ಅಧ್ಯಕ್ಷರನ್ನು ಆರಿಸುವ ಭಾರವು ಜಿಲ್ಲಾ ಪತ್ರಿಕೋದ್ಯೋಗಿ ಸಂಘದ ಮೇಲೆಯೇ ಬಿದ್ದಿದೆ. ಸ್ವಾಗತ ಸಮಿತಿಯ ಕಾರ್ಯನಿರ್ವಾಹಕ ಮಂಡಲದವರೂ ಜಿಲ್ಲಾ ಪತ್ರಿಕೋದ್ಯೋಗಿ ಸಂಘದವರೂ ಜತೆಯಾಗಿಯೇ ಅಧ್ಯಕ್ಷರನ್ನು ಗೊತ್ತುಪಡಿಸುವರು. ಅಧ್ಯಕ್ಷರು ಒಬ್ಬ ಪ್ರಖ್ಯಾತ ಪತ್ರಿಕೋದ್ಯೋಗಿ ಇದ್ದು, ಕನ್ನಡನಾಡಿನ ಎಲ್ಲಾ ಪತ್ರಿಕೋದ್ಯೋಗಿಗಳಿಗೂ ಮೆಚ್ಚುಗೆಯಾಗುವಂತೆ, ಆವಶ್ಯವಿರುವ ಎಚ್ಚರಿಕೆಯನ್ನು ಆಯ್ಕೆಯ ಸಮಯದಲ್ಲಿ ತೆಗೆದುಕೊಳ್ಳಲಾಗುವುದು.

ಸಮ್ಮೇಳನವು ಜರಗುವ ನಿಶ್ಚಿತ ದಿನ ಮತ್ತು ಅಧ್ಯಕ್ಷರ ಆಯ್ಕೆ— ಈ ಕುರಿತಾದ ಪ್ರಕಟನಾ ಪತ್ರಗಳು ಕ್ರಮವಾಗಿ ಹೊರಬೀಳುವುವು.

ತಮ್ಮ ಸಹಕಾರವನ್ನಿತ್ತು ಅಖಿಲ ಕರ್ಣಾಟಕ ಪತ್ರಿಕೋದ್ಯೋಗಿ ಪರಿಷತ್ತನ್ನು ಯಶಸ್ವಿಗೊಳಿಸಬೇಕೆಂದು ಕನ್ನಡ ನಾಡಿನ ಎಲ್ಲಾ ಪತ್ರಿಕೋದ್ಯೋಗಿಗಳಿಗೆ ವಿನಂತಿ ಮಾಡುತ್ತೇವೆ, ಎಂಬುದಾಗಿ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ. ವಿ. ಎಸ್. ಕುಡ್ವರು ಅಪೇಕ್ಷಿಸುತ್ತಾರೆ.

ಪ್ರಕಟಣೆ.

"ಕುಂದಾಪುರ ತಾಲೋಕು ಹಾರ್ದಳ್ಳಿ ಮಂಡಳ್ಳಿ, ಗ್ರಾಮದ ಮಡಿಯಾರದ ವಿಶ್ವೇಶ್ವರ ಅಡಿಗರ ಮಗ ನರಸಿಂಹ ಅಡಿಗನು ಈ ಮೂಲಕ ಎಲ್ಲವರಿಗೂ ತಿಳಿಸುವದೇನೆಂದರೆ:—ನಮ್ಮ ತಂದೆ ವಿಶ್ವೇಶ್ವರ ಅಡಿಗರು ತಾ. 21-1-1943ರಲ್ಲಿ ಸ್ವರ್ಗಸ್ಥರಾದಂದಿನಿಂದ ನನ್ನ ಖಾಸಾ ಅಣ್ಣ ಪದ್ಮನಾಭ ಅಡಿಗನು ಅಡಳಿತದಾರನಾಗಿದ್ದು ದುರುದ್ದೇಶದಿಂದ ಅನಾವಶ್ಯಕವಾದ ಸಾಲಗಳನ್ನು ಮಾಡುತ್ತಾ ಇದ್ದಾನೆ. ನಮ್ಮ ತಂದೆಯವರು ಮಾಡಿದ ಸಾಲವೇನೂ ಇರುವುದಿಲ್ಲ. ನಮ್ಮ ತಂದೆಯವರು ಹೊರಗೆ ಆಭರಣಗಳ ಅಡವಿನ ಮೇಲೆ ಕೈಕಡವಾಗಿ ಕೊಟ್ಟ ರೂ. 400/(ನಾನೂರ)ಕ್ಕೆ ಕಡಿಮೆಯಾಗದ ಹಣವನ್ನು ಸದ್ರಿ ಪದ್ಮನಾಭ ಅಡಿಗನು ವಸೂಲು ಮಾಡಿದ್ದನು. ಕಳೆದ ಚಿತ್ರಭಾನು ಸಂ|ದ ಹುಟ್ಟುವಳಿಯನ್ನು ಅಮಿತವಾಗಿ ಖರ್ಚು ಮಾಡಿದ್ದನು; ಮಿಗತೆಯನ್ನು ದುರುಪಯೋಗಿಸಿದ್ದನು. ನಮ್ಮ ತಂದೆಯವರಿಗೆ [illegible] ಮುಖೇನ ತಾ. 29-6-1943ರಲ್ಲಿ ನನ್ನ ಅರ್ಧಾಂಶ ಹಿಸೆಯನ್ನು ಬರಹ ಮೂಲಕವಾಗಿ ಅವನಿಂದ ನಾನು ಕೇಳಿದ್ದರೂ ಖಾಲಿ ಸಮಜಾಯಿಸಿಕೆ ನೆವನಗಳಿಂದ ದಿನದೂಡಿ ನನ್ನನ್ನು ಮೋಸಗೊಳಿಸುತ್ತಾ ಇದ್ದಾನೆ. ಆದುದರಿಂದ ನಾನು ಸಾಧ್ಯವಾದಷ್ಟು ಜಾಗ್ರತೆಯಲ್ಲಿ ನನ್ನ ಪಾಲಿನ ಬಗ್ಗೆ ಅವನ ಮೇಲೆ ಸಿವಿಲ್ ವ್ಯವಹರಣೆಯನ್ನು ದಾಕಲು ಮಾಡಲಿಕ್ಕಿದ್ದೇನೆ. ಅವನು ಇಷ್ಟರ ಒಳಗೆ ಮಾಡಿದ ಮತ್ತು ಇನ್ನು ಮುಂದೆ ಮಾಡಬಹುದಾದ ಯಾವತ್ತೂ ಸಾಲಗಳು ಕುಟುಂಬದ ಪ್ರಯೋಜನಾರ್ಥವಾಗಿಯಲ್ಲ. ಆದುದರಿಂದ ಆ ಎಲ್ಲಾ ಸಾಲಗಳು ಸದ್ರಿ ಪದ್ಮನಾಭ ಅಡಿಗನ ದೇಹ ಮತ್ತು ಸ್ಥಿರಚರ ಸೊತ್ತುಗಳ ಮೇಲೆ ಬೈಂಡಾಗತಕ್ಕದ್ದು. ನಮಗೆ ಸಲತಕ್ಕ ಹಣಗಳನ್ನು ಸಂಬಂಧಪಟ್ಟವರು ನಮಗಿಬ್ಬರಿಗೂ ಪಾಲುಗಳಿಂದ ಕೊಟ್ಟು ಪ್ರತ್ಯೇಕ ಪ್ರತ್ಯೇಕ್ಕ್ವರಶೀದಿ ಪಡೆಯತಕ್ಕದ್ದು; ಅಥವಾ ಕೋರ್ಟಿನಲ್ಲಿ 'ಡಿಪೋಸಿಟ್' ಮಾಡತಕ್ಕದ್ದು".

M. Narasimha Adiga.
4th October 1943.

ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

ಕ್ರಿ.ನಂಬ್ರ 124/1943.

ರಾಮಚಂದ್ರಪ್ಪ-ವಾಸುದೇವಪ್ಪಗಳ ಮಗ, ಕಾರ್ಕಳ ತಾಲ್ಲೂಕು ವರಂಗ ಗ್ರಾಮದ ಮುನಿಯಾಲು-ವಾದಿ ವಗೈರೆ

1 ಶೀನಸೆಟ್ಟಿ, ಗೋವಿಂದಶೆಟ್ಟಿ ಅಳಿಯ. 2 ಮಂಜಮ್ಮಸೆಟ್ಟಿ, 1ನೇಯವನತಾಯಿ. 3 ವೀರಯ್ಯಸೆಟ್ಟಿ, 2ನೇಯವಳ ಮಗ—ಕಾರ್ಕಳ ತಾಲ್ಲೂಕು ಅಂಡಾರು ಗ್ರಾಮದ ಮುಡ್ಲಪಾಡಿ ನಡುಮನೆ.
-ಪ್ರತಿವಾದಿರು.

ಕೋರ್ಟು ಹುಕುಂ ಪ್ರಕಾರ ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದ್ರೆ:—

ಸದ್ರಿ 2-3ನೇ ಪ್ರತಿವಾದಿರ ಮೇಲೆ ವ ಅವರ ಕುಟುಂಬದ ಮೇಲೆ ವಾದಿಯು ಪಡೆದ ಮೇಲ್ಕಂಡ ಕೋರ್ಟು O. S. ನಂಬ್ರ 761/'30ನೇ ದಾವೆಯಲ್ಲಿ ಪಡೆದ ಡಿಕ್ರಿ ಅಲ್ಲದೆ ಬೇರೆ ಸಾಲ ವ, ಡಿಕ್ರಿವಗೈರೆ ಹೊಂದಿದವರು ಯಿದ್ದಲ್ಲಿ ಸದ್ರಿಯವರ ಸವಕ್ಷಮ ಮೇಲ್ಕಂಡ ದಾವೆಯು ತೀರ್ಮಾನ ಆಗದೇ ಇದ್ದಾಗಿ ವಾದಿಯು ಕೊಟ್ಟ R. I. A. ನಂಬ್ರ 995/43ನೇ ಅರ್ಜಿಯ ತನ್ನ ಬಗ್ಗೆ ಇದೇ ತಾ 18-10-1943ಕ್ಕೆ ಯಿಟ್ಟಿರುವದರಿಂದ ಸದ್ರಿ ಅರ್ಜಿ ಕುರಿತು ಆಕ್ಷೇಪವಿದ್ದಲ್ಲಿ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜಾಹೀರುಮಾಡತಕ್ಕದ್ದು. ತಪ್ಪಿದ್ದಲ್ಲಿ ಸದ್ರಿ ಅರ್ಜಿಯು ಯುಕ್ತಕಂಡಂತೆ ತೀರ್ಮಾನಿಸಲಾದೀತು

Sd. **K. J. Kamath.** B. A. L. L.
ವಾದಿಯ ಕಡೆ ವಕೀಲ್

ಕಾರ್ಕಳ,
ತಾ 4-10-43.

ನೋಟೀಸು,

ಮಂಗ್ಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ,

ಕ್ರಮ ವ್ಯಾಜ್ಯ ನಂಬ್ರ 380/1943.

1. Mrs. A. ಗಿರಿಜಮ್ಮ 2. Mrs. A. ಕಲ್ಯಾಣಿ ಶೆಡ್ತಿ, 3. Mrs. M. ಸುಂದರಿ ಅಡಪ್ಪ. —ವಾದಿರು

ವ

ಅಂತ್ಯಕ್ಕೆ ವಗೈರೆರು—ಪ್ರತಿವಾದಿರು.

5ನೇ ಪ್ರತಿವಾದಿ—ಕೇಸಣ್ಣ—ಅಂತ್ಯಕ್ಕೆ ಮಗ- ಮಂಗ್ಳೂರು ತಾಲ್ಲೂಕು ಅಡೂರು ಗ್ರಾಮದ ಬೆಳ್ಳೂರು ಗುತ್ತಿನಲ್ಲಿರುವವ. ಇವರಿಗೆ ತಿಳಿಯಪಡಿಸುವುದೇನೆಂದ್ರೆ:—

ಮೇಲ್ಕಂಡ ವಾದಿರು- ಕೊರೊವೊಳು ಹೆಂಗ್ಸು ಕೂಡಾ ಬರಕೊಟ್ಟ ಆಡವು ದಸ್ತಾವೇಜಿನ ಬಾಬ್ತು ಬಾಕಿ ಅಸ್ಲು ಬಡ್ಡಿ ರೂಪಾಯಿ 1027—6—6 ವ, ಇವುಗಳ ಮೇಲಿನ ಮುಂದಿನ ಬಡ್ಡಿ, ವ, ಕೋರ್ಟು ಖರ್ಚು ಸಮೇತ ಹಣವನ್ನು ಬರಮಾಡಿಕೊಳ್ಳುವರೆ- ಈ ಕೋರ್ಟಿನಲ್ಲಿ ದಾವಾ ದಾಖ್ಲು ಮಾಡಿರುತ್ತಾರೆ. ಸದ್ರಿ ದಾವೆಯು ಪ್ರಕೃತ ತಾ. 26-10-1943ನೇ ತಾರೀಕಿಗೆ ಸದ್ರಿ ಕೋರ್ಟು ಮುಂದೆ ತನ್ಸಿಗೆ ಇಟ್ಟಿರುವುದರಿಂದ ನೀವು ಸ್ವತಹಾ, ಯಾ. ವಕೀಲ್ ಮುಖಾಂತ್ರ ಸದ್ರಿ ತಾರೀಕಿನೆ ಗಂಟೆ 10–30ಕ್ಕೆ ಸರಿಯಾಗಿ ಸದ್ರಿ ಕೋರ್ಟು ಮುಂದೆ ಹಾಜರಾಗುವರೆ ತಪ್ಪಿದಲ್ಲಿ ನಿಮ್ಮನ್ನು ಗೈರುಹಾಜರು ಮಾಡಿ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದು ಎಂತ ಈ ಮೂಲಕ ತಿಳಿಸೋಣಾಗಿಯದೆ-

ಮಂಗ್ಳೂರು, 11-10-43. **M. N. Chouta,** Vakil for Plaintiffs

ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನ.

ಈ ಭವನದ ಕ್ರಿಕೆಟ್ ಆಟಗಾರರ ಕೂಟವೊಂದು ಭವನದ ಸುಪರಿಂಟೆಂಡೆಂಟರಾದ ಶ್ರೀ. ಕೆ. ಜಿ ಯಂ ಭಂಡಾರಿಗಳು ಮತ್ತು ಮೊದಲು ಸುಪರಿಂಟೆಂಡೆಂಟರಾದ ಶ್ರೀ ಕೆ. ಉಗ್ಗಪ್ಪ ಶೆಟ್ರು, ಇವರ ಮುಂದಾಳುತನದಲ್ಲಿ ತಾ 30-9-43 ರಲ್ಲು ಕಾರ್ಕಳಕ್ಕೆ ಹೋಗಿದ್ದು ಅಕ್ಟೋಬರ ತಾ1 ಮತ್ತು 2ರಲ್ಲು ಸ್ಥಳೀಯ ಕ್ರಿಕೆಟ್ ಟೀಮುಗಳೊಡನೆ ಪಂದ್ಯಾಟ ಮಾಡಿರುವರು ಆ ಸಂದರ್ಭದಲ್ಲಿ ಸ್ಥಳೀಯ ಬಂಟ ಮಹನೀಯರು ಮತ್ತು ಸ್ಥಳೀಯ ಕ್ರಿಕೆಟ್ ಸಂಸ್ಥಾಧಿಕಾರಿಗಳು ಮಾಡಿದ ಹೃತ್ಪೂರ್ವ ಸತ್ಕಾರಕ್ಕೆ ಭವನದ ಪರವಾಗಿ ಅವರುಗಳೆಲ್ಲರಿಗೂ ನಾವು ನಮ್ಮ ಹೃದಯಪೂರ್ವಕ ವಂದನೆಗಳನ್ನು ಅರ್ಪಿಸುವೆವು ಎಂದು ಜತೆಕಾರ್ಯದರ್ಶಿಗಳಾದ ಶ್ರೀ ಬಿ. ವಿಶ್ವನಾಥ ರೈ; ಶ್ರೀ. ಬಿ. ಜಯರಾಮ ಶೆಟ್ಟಿ. ಇವರು ತಿಳಿಸುತ್ತಾರೆ

ಇನ್ನಂಜೆ-ಶ್ರೀ ವಿಷ್ಣುಮೂರ್ತಿ ಹಯವದನ ಸ್ವಾಮಿ ಹೈಸ್ಕೂಲಿನ ಅಧ್ಯಾಪಕವರ್ಗದವರೂ, ವಿದ್ಯಾರ್ಥಿವೃಂದವೂ ತಾ. 11-10-43ನೆ ಸೋಮವಾರ ಪೂರ್ವಾಹ್ನ ಘಂಟೆ 11-30ಕ್ಕೆ ಸಭೆ ಸೇರಿ ಶಾಲಾ ಸಂಸ್ಥಾಪಕರಾದ ಶ್ರೀ ಸೋದೆ ವಾದಿರಾಜ ಮಠದ ಶ್ರೀ ವಿಶ್ವೇಂದ್ರ ಶ್ರೀ ಪಾದಂಗಳವರು, ಕಳೆದ ತಾ.8-10-43ನೇ ಶುಕ್ರವಾರ ಪ್ರಾತಃ ಘಂಟೆ 6-30ಕ್ಕೆ ವಿಷ್ಣು ಸಾನಿಧ್ಯವನ್ನು ಹೊಂದಿದ ನಿಮಿತ್ತ ವಿಷಾದವನ್ನು ಸೂಚಿಸಿದ್ದಲ್ಲದೆ, ಶ್ರೀ ಶ್ರೀಗಳವರ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಈಯಲೆಂದು ದಯಾಮಯನನ್ನು ಪ್ರಾರ್ಥಿಸಿ, ದಿವಂಗತರ ಚಿರಸ್ಮರಣೆಗಾಗಿ ಅವರ ತೈಲಚಿತ್ರವನ್ನು ಶಾಲೆಯಲ್ಲಿ ಅನಾವರಣಗೊಳಿಸುವ ನಿರ್ಣಯವನ್ನು ಮಾಡಿದರು. ತತ್ಸಂಬಂಧ ಶಾಲೆಯು ಆ ದಿನದ ಮಟ್ಟಿಗೆ ಮುಚ್ಚಲಾಯಿತು.

In the Court of the District Munsiff of Mangalore:

O. S. No. 403/1943

1. Nakra Shetty
2. Sheshi alias Achimu } Plaintiffs

and

1. Ramanna Bhatta son of Chandra Bhatta, 2. Dooma Shetty son of Ramu, 3, Thowda Shetty Son of Doomu Shetty 4, Puttu Shetty son of Ramu— Defendants.

All the defendants reside in Delanthabetto village, Mangalore Taluq.

Please take notice that the above named plaintiffs have filed the above suit praying that the orders passed in R. E. A. Nos. 1294/1942 and 1405/1942 in R. E. P. Nos 744/42 and 861/1942 on the file of this court, be uacated and the said suit stands posted to 19-10-1943 at 10-30 A. M. you are hereby warned to apear in this court or by a pleader duly instructed. Failing which the above suit will be held in your absence.

Mangalore
12-10-43 } **P. Shridhara Rao**
Advocate for Plaintiffs

Notice by substituted Service.

In the Court of the District Munsiff of Mangalore,

S. C. No. 413/1943.

Messrs. Vittalji Madhavji — Plaintiff

Vs.

Kulyadi Krishna Pai — Defendant

To

Defendant—Kulyadi Krishna Pai, son of Kulyadi Shamanna alias Subraya Pai, residing in Haleyangadi of Mangalore Taluk.

Please take notice that the plaintiff has filed the above suit against you for recovery of Rs. 262-8-6 together with future interest from 30-8-1943 till payment and costs of the suit with interest and that the suit stands posted to 20-10-1943 at 11 A. M., for hearing in the said court, You may apear in person or by a pleader on or before the said date and contest the suit, failing which the same will be decided exparte.

Mangalore,
12-10-1943. } **B. M. Baliga**
Advocate fo. Plaintiff

ದಕ್ಷಿಣ ಕನ್ನಡ

ಮಂಗಳೂರು.

ಅ. ಕ. ಪತ್ರಿಕೋದ್ಯೋಗಿ ಸಮ್ಮೇಳನ:—ಸ್ವಾಗತ ಸಮಿತಿಯ ಕಾರ್ಯದರ್ಶಿಗಳ ಮಂಡಲದ ಆಯ್ಕೆಯು ಪೂರ್ಣವಾಗಿರುವುದು. ಶ್ರೀ. ಟಿ. ಪಟ್ಟಸ್ವಾಮಿಯವರು ಸ್ವಾಗತಾಧ್ಯಕ್ಷರಾಗಲು ಅನಾರೋಗ್ಯದ ಕಾರಣ ಅಸಮರ್ಥತೆಯನ್ನು ವ್ಯಕ್ತಪಡಿಸಿದುದರಿಂದ, 'ನವಭಾರತ'ದ ಸಂಪಾದಕರಾದ ಶ್ರೀ. ವಿ. ಎಸ್. ಕುಡ್ವರು ಆ ಸ್ಥಾನಕ್ಕೆ ಆರಿಸಲ್ಪಟ್ಟಿರುವರು.

ಗಾಂಧಿಜಯಂತಿ:—ಯು ತಾ 2ರಂದು ಬೆಸೆಂಟ್ ಶಾಲೆಯಲ್ಲಿ ಆಚರಿಸಲ್ಪಟ್ಟಿತು. ಶ್ರೀಮತಿ ಸುಶೀಲಾ ಚೌಟ ಅವರು ಶಾಲೆಯ ಧ್ವಜವನ್ನು ಏರಿಸಿದ ನಂತರ ಶ್ರೀಯುತರು ಎಂ. ಎಸ್. ಮಾಧವರಾವ, ಪಿ. ಕೆ. ನಾರಾಯಣ ಮತ್ತು ಎಚ್. ಎಸ್. ಉಪ್ಪರ ಇವರು ಮಹಾತ್ಮಾಜೀಯ ಜೀವನದ ಕುರಿತು ಭಾಷಣಗಳನ್ನಿತ್ತರು.

ಬೆಸೆಂಟ್ ದಿನ ತಾ 1ರಂದು ಸಂಜೆ ಬೆಸೆಂಟ್ ರಾಷ್ಟ್ರೀಯ ಹುಡುಗಿಯರ ಶಾಲೆಯಲ್ಲಿ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎಂ. ಸಿ. ಬಿ. ಕೋಲ್ಮನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ| ಎಂ. ಕೇಶವಪೈ ಅವರು ಸ್ಮಾರಕ ಭಾಷಣವನ್ನು ಮಾಡಿದ ಮೇಲೆ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸುಶೀಲಾ ಚೌಟ ಅವರು ಶಾಲಾ ವಾರ್ಷಿಕ ವರದಿಯನ್ನೊಪ್ಪಿಸಿದರು. ಶ್ರೀ ಎಂ. ಎಸ್. ಮಾಧವರಾಯರು ಡಾ| ಆನ್ನಿ ಬೆಸೆಂಟರು ಆರಂಭಿಸಿದ ಸ್ಕೌಟ್ ಚಳವಳದ ಕುರಿತು ಮಾತನಾಡಿದರು. ಸಭಾಂತ್ಯದಲ್ಲಿ ಶಾಲಾ ಮಕ್ಕಳ ವಿನೋದಾವಳಿ ಇತ್ತು.

ಕಾಲರಾ ರೋಗಕ್ಕೆ ಬಲಿ:—ನಗರದಲ್ಲಿ ಆರಂಭವಾದ ಕಾಲರಾ ಇನ್ನೂ ಪೂರ್ಣವಾಗಿ ನಿಂತಿಲ್ಲ. ತಾ 9ರ ತನಕ ಒಟ್ಟು ಕಾಲರಾ ರೋಗ ತಗಲಿದವರ ಸಂಖ್ಯೆ 142. ಅವರಲ್ಲಿ ಮಡಿದವರು 60 ಮಂದಿ. ಈ ತನಕ ಒಟ್ಟು 62,178 ಜನರಿಗೆ ಕಾಲರಾ ನಿರೋಧಕ ದ್ರಾವಣ ಚುಚ್ಚಲಾಗಿದೆ.

ಉಡುಪಿ.

ಸ್ಥಳೀಕ ಅಯ್ಯರ್ಸ್ ಮೊಡರ್ನ್ ಸ್ಕೂಲ್ ಆಫ್ ಕಾಮರ್ಸ್ ಇದರ ಯೂನಿಯನಿನ ಶಾರದಾ ಪೂಜೆಯು ಶ್ರೀ ಕೊಟ್ಟಿಕಾರ್ ಪದ್ಮನಾಭಪೈ, B. A. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲೆಯ ಪ್ರಿನ್ಸಿಪಾಲರಾದ ಶ್ರೀ ಟಿ. ಎ. ವಾಸುದೇವನ್‌ರು ವರದಿಯನ್ನು ಓದಿದ ಮೇಲೆ ಶ್ರೀಗಳಾದ ಎನ್. ವಿ. ಕಾಮತ್, ಯು. ವಿ. ಪ್ರಭು ಮೊದಲಾದವರ ಭಾಷಣಗಳಾದುವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಾಲೆಯ ವಿದ್ಯಾರ್ಥಿಗಳಿಗೆ ಸಮಯೋಚಿತ ಸಲಹೆಗಳನ್ನಿತ್ತು ಶಾಲೆಗೆ ಸ್ವಂತ ಕಟ್ಟಡವನ್ನು ರಚಿಸುವ ಸುಯೋಗವು ಬಹಳ ಬೇಗನೆ ಬರಲೆಂದು ಹಾರೈಸಿದರು.

ಶ್ರೀಕೃಷ್ಣ ಮಠದಲ್ಲಿ ನವರಾತ್ರಿ ಮಹೋತ್ಸವವು:—ತಾ 30-9-43ರಿಂದ ತಾ 9-10-43ರ ತನಕ ವಿವಿಧ ಕಾರ್ಯಕ್ರಮಗಳಿಂದ ಅತ್ಯಂತ ವಿಜೃಂಭಣೆಯಿಂದ ಜರಗಿತು. ಸಾಯಂಕಾಲ 4 ಗಂಟೆಯಿಂದ 7ರ ತನಕ ಪ್ರಸಿದ್ಧ ಹರಿಕೀರ್ತನಕಾರರಾದ ಶ್ರೀ ಹರಿಪುರೋತ್ತಮ ದಾಸ ಹರಿಕೀರ್ತನೆ, ರಾತ್ರಿ 9-30ರಿಂದ 1ರ ತನಕ ಶ್ರೀಮದ್ವಿದ್ಯಾರತ್ನ ತೀರ್ಥ ಕೃಪಾ ಪೋಷಿತ ಯುವಕ ಮಂಡಳಿಯವರ ನಾಟಕಪ್ರದರ್ಶನಗಳು ಯಶಸ್ವಿಯಾಗಿ ಜರಗಿದವು. ತಾ 8ರಲ್ಲಿ ಅಸ್ವಸ್ಥರಾಗಲಿಲ್ಲಿಂದಾದ ಶ್ರೀ ಸೋದೆ ಮಠದ ಶ್ರೀಗಳವರ ಬೃಂದಾವನ ಪ್ರವೇಶ ವಾರ್ತೆಯನ್ನು ಹೊಂದಿದ ಪ್ರಯುಕ್ತ ಆ ದಿನದ ಹರಿಕಥಾ ಕಾರ್ಯಕ್ರಮವು ಪ್ರಾರಂಭವಾಗುವ ಮೊದಲು ಶ್ರೀ ಬಿ. ಶ್ರೀನಿವಾಸಭಟ್ಟರು ದುಃಖಸೂಚಕ ಭಾಷಣಮಾಡಿ 5 ನಿಮಿಷ ಮೌನವನ್ನಾಚರಿಸಲಾಯಿತು. ರಾತ್ರಿ ಪಂಡಿತ ವೆಂಕಟ್ರಮಣಾಚಾರ್ಯರು ದಿವಂಗತ ಶ್ರೀಪಾದಂಗಳವರ ಕುರಿತು ಭಾಷಣಮಾಡಿ ದುಃಖಸೂಚನೆಮಾಡಿ ಪುನಃ 5 ನಿಮಿಷ ಮೌನಧಾರಣೆಮಾಡಿ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಕೊನೆಯ ದಿನದಲ್ಲಿ ನವರಾತ್ರಿ ಉತ್ಸವವು ಜಯಶೀಲವಾಗಿ ನೆರವೇರುವಂತೆ ನೆರವಾದ ಮಹನೀಯರಿಗೆಲ್ಲಾ ಶ್ರೀ. ಬಿ. ಶ್ರೀನಿವಾಸಭಟ್ಟರು ಧನ್ಯವಾದಗಳನ್ನು ಅರ್ಪಿಸಿದರು.

ಶಲಿಮಾರು:—ತಾ 5-10-43ರಲ್ಲಿ ಜಿಲ್ಲಾ ವಿಹಾರ ವಿನೋದದ ಮೂರನೆಯ ಕೇಂದ್ರವು ಶ್ರೀ. ಕೆ. ಸಂಜೀವ ಭಟ್ M. A. L. T.ಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ರಿಕ್ರಿಯೇಶನ್ ಆಫೀಸರರಾದ ಶ್ರೀ. ಬಿ. ಯಂ. ಬಾಳಿಗರವರಿಂದ ತೆರೆಯಲ್ಪಟ್ಟು ಆ ಬಗ್ಗೆ ಒಂದು ಸಮಿತಿಯು ರಚನೆಯಾಯಿತು.

ಶ್ರೀ ಸೋದೆ ವಾದಿರಾಜ ಮಠದ ಶ್ರೀ ವಿಶ್ವೇಂದ್ರ ತೀರ್ಥ ಮಹಾ ಸ್ವಾಮಿಗಳವರು ತಾ 8ರಲ್ಲಿ ಉದ್ಯಾವರ ಮಠದಲ್ಲಿ 63ನೆ ವಯಸ್ಸಿನಲ್ಲಿ ವೃಂದಾವನಸ್ಥರಾದರೆಂಬುದು ಅತ್ಯಂತ ವಿಷಾದವಿದೆ. ಸ್ವಾಮಿಗಳವರ ವೃಂದಾವನ ಉದ್ಯಾವರ ಮಠದಲ್ಲಿ ಭಕ್ತಸಮುದಾಯದ ಮುಂದೆ ಸಾಂಗವಾಗಿ ಜರಗಿತು. ಸ್ವಾಮಿಗಳವರು ಕನ್ಯಾರಿಯಾದ ದುಃಖಸೂಚನಾರ್ಥವಾಗಿ ಉಡುಪಿ ಪೇಟೆಯಲ್ಲ ಹರತಾಳವನ್ನಾಚರಿಸಿದ್ದರು. ದಿವಂಗತ ಸ್ವಾಮಿಗಳವರು ಮಹಾವಿದ್ವಾಂಸರೂ ಕೆಲವೊಂದು ಘನರೋಗಗಳಿಗೆ ಔಷಧ ಕೊಡುವ ಪಂಡಿತರೂ, ನಿರ್ಭೀತರೂ, ತ್ಯಾಗಿಗಳೂ, ವಿದ್ಯಾಭಿಮಾನಿಗಳೂ ಆಗಿದ್ದರು. ವಿಶ್ವೋತ್ತಮ ತೀರ್ಥರೆಂಬ ಬಾಲಯತಿಗಳನ್ನು ಇವರು ಕಳೆದ ಗಣೇಶ ಚತುರ್ಥಿದಿನ ಉತ್ತರಾಧಿಕಾರಿಯಾಗಿ ನೇಮಿಸಿದ್ದರು.

ಅಲೆವೂರು:—ಇಲ್ಲಿನ ಪಡು ಅಲೆವೂರು ಎಲಿಮೆಂಟರಿ ಶಾಲೆಯ ಶಾರದಾ ಪೂಜೆಯು ತಾ 7-11-43ರಲ್ಲಿ ಶ್ರೀ. ಕೆ. ಗಿರಿಯಣ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಶ್ರೀ ಯು. ಕೃಷ್ಣಭಟ್ಟರ ಸೌಹಾರ್ದತೆಯಿಂದ ಜರಗಿತು. ಮಕ್ಕಳ ಚಟುವಟಿಕೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಶ್ರೀ ಸುಬ್ರಾವ್ ಜಗನ್ನಾಥ ಶ್ಯಾನುಭೋಗ್, ಎಂಡ್ ಸನ್ಸ್ A. ಆನಂದರಾವ್ ಇವರಿಂದ ಬಹುಮಾನ ಹಂಚಲ್ಪಟ್ಟಿತು. ಶಾಲಾ ಮೆನೇಜರ್ ಎಂ. ಅಚ್ಚಣ್ಣ ಸೆಟ್ಟರಿಂದ ಧನ್ಯವಾದವಾಗಿ ರಾತ್ರಿ ಯಕ್ಷಗಾನ ಜರಗಿತು.

ಪಡುಬಿದ್ರೆ:—ಸ್ಥಳೀಕ ಬೋ. ಹಾ. ಎ. ಶಾಲೆಯಲ್ಲಿ ತಾ 6ರಲ್ಲಿ ಶ್ರೀ. ಕೆ. ಸಂಜೀವ ಭಟ್ ಯಮ್. ಎ. ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ರಿಕ್ರಿಯೇಶನ್ ಆಫೀಸರರಾದ ಶ್ರೀ. ಬಿ. ಯಮ್. ಬಾಳಿಗರವರಿಂದ ಜಿಲ್ಲೆಯ 4ನೆ ವಿಹಾರ ವಿನೋದ ಕೇಂದ್ರದ ಉದ್ಘಾಟನೆ ಜರಗಿ ಒಂದು ಸಮಿತಿಯು ನಿರ್ಮಾಣವಾಯಿತು. ಆಟ, ವ್ಯಾಯಾಮ ಪ್ರದರ್ಶನ ಭಾಷಣಗಳು ಇದ್ದುವು. ಅದೇ ದಿನ ಶಾರದಾ ಪೂಜಾ ಸಮಾರಂಭವು ಬಹು ಸಂಭ್ರಮದಿಂದ ಜರಗಿತು.

ಬಾರಕೂರು—ಬಾರಕೂರು "ಶ್ರೀ ನವಭಾರತ ವ್ಯಾಯಾಮ ಸಂಘದ"ವರು, ಬಾರಕೂರು ಸಾರ್ವಜನಿಕರಿಂದ ಚಂದಾ ಎತ್ತಿ "ಸಂಯುಕ್ತ ಕರ್ನಾಟಕ" ಪತ್ರಿಕೆ ಹುಬ್ಬಳ್ಳಿಗೆ ಇಂದು ರೂ. 117-8-0ಯಲ್ಲಿ ಟಪ್ಪಾಲು ಹಾಕಲು ಖರ್ಚು 0-9-6 ನಜಾ ಕಳೆದು ಉಳಿದ ರೂ. 116-14-6 ಯನ್ನು ಕಳ್ಳಿರ ಶ್ರಾರಾಗಿ ಕಳುಹಿಸುತ್ತದೆ.

ಬಾರಕೂರಿಗೊಂದು ಹೈಸ್ಕೂಲು ಬೇಕೆಂದು ಊರ ಪ್ರಮುಖರ ಸಭೆ:—ಯೊಂದು ತಾ. 6-10-43ರಲ್ಲಿ ಬೋ. ಹಾ. ಎ. ಶಾಲೆಯಲ್ಲಿ ಸೇರಿತು. ಈ ಊರಿಗೊಂದು ಹೈಸ್ಕೂಲು ಆಗತ್ಯವಿದೆಯೆಂದೂ, ಅಂತಹ ಹೈಸ್ಕೂಲಿಗೆ ಬಾರಕೂರು ಉತ್ತಮ ಕೇಂದ್ರವೆಂದೂ, ಅದರಿಂದ ಸಾವಿರಾರು ಮಂದಿ ವಿದ್ಯಾರ್ಥಿಗಳು ಪ್ರಯೋಜನ ಪಡೆಯಬಹುದೆಂದೂ ನೋಡಲಾದ ಹಲವು ವಿಷಯಗಳ ಕುರಿತು ಶ್ರೀ. ಬಿ. ವಿ. ಕಾಮತ್ ಮತ್ತು ಶ್ರೀ ಡಾ| ಕೃಷ್ಣ ಬ್ಯಾರಿಯವರು ಭಾಷಣವಿತ್ತರು. ಜಿಲ್ಲಾ ಬೋರ್ಡು ಅಪ್ಪಣೆಯಿತ್ತರೆ, ಹಲವು ಸಾವಿರ ರೂಪಾಯಿ ಖರ್ಚು ಮಾಡಿ, ಉತ್ತಮ ಕಟ್ಟಡವೊಂದು ಮತ್ತು ಪಠ್ಯೋಪಕರಣಗಳನ್ನು ಊರವರು ಒದಗಿಸಿ ಬೋರ್ಡಿಗೆ ಬಿಟ್ಟುಕೊಡಲು ಸಿದ್ಧವಿರುವರೆಂದೂ, ಅಂದರೆ ಮುಂದೆ ಹೈಸ್ಕೂಲನ್ನು ನಡಿಸಿಕೊಂಡು ಹೋಗಲು ಬೇಕಾದ ಹಣವ ವಿಟ್ಟು, ಒಪ್ಪಿದರೆ ಹಾಗೆ ಬೋರ್ಡಿನಿಂದ ಅಪ್ಪಣೆ ಪಡೆಯಲು ಶ್ರೀ ರೆ ಫಾ- ಕಸ್ತುರಿನೋರವರನ್ನೊಳಗೊಂಡ 7 ಜನ ಸದಸ್ಯರುಗಳ ಕಮಿಟಿಯೊಂದು ರಚಿತವಾಯಿತೆಂದು ತಿಳಿದ ಬರುತ್ತದೆ.

ಪ್ರೇಮವಿದ್ಯಾಪೀಠ ತುಂಗಭದ್ರಾ:—ನಿಜಾಮ ಕಾಲೇಜದ ಮಾಜಿ ಪ್ರೊಫೆಸರ್ ಶ್ರೀ ಪರ್ವತೀ ರಾಮರಾಯರ ಅಧ್ಯಕ್ಷತೆಯಲ್ಲಿ ಮೆಡಿಕಲ್ ಕಾಲೇಜದ ವಿದ್ಯಾರ್ಥಿಗಳ ಸಭೆಯೊಂದು ಸೇರಿತ್ತು. ವೈದ್ಯಗುರು ಸ್ವಾಮಿರಾಯಾಚಾರ್ಯರು ಇಂದಿನ ಪ್ಲಾಟ್‌ಫಾರ್ಮ್ ಯುಗದಲ್ಲಿ ವಾಗ್ಮಿತ್ವಕ್ಕಿರುವ ಸ್ಥಾನಮಾನವು, ವೈಶಿಷ್ಟ್ಯವೇನು ಎಂಬುದನ್ನು ವಿವರಿಸುತ್ತಾ ಶೀ. ಶೀ. ಪಂಡಿತ್ ತಾರಾನಾಥಜೀಯವರ ವಾಗ್ವೈಖರಿಯ ಪ್ರಭಾವವನ್ನು ವರ್ಣಿಸಿದನಂತರ ಅಧ್ಯಕ್ಷರಿಂದ ತರ್ಕಸಂಘದ ಉದ್ಘಾಟನಾ ಸಮಾರಂಭವು ನೆರವೇರಿಸಲ್ಪಟ್ಟಿತು. ಶ್ರೀ ಬೊಮ್ಮಯ್ಯ ಶೆಟ್ಟರು ಹಾಗೂ ಮಹಾಬಲ ಶೆಟ್ಟರು ಕಾರ್ಯದರ್ಶಿಗಳೆಂದು ಚುನಾಯಿತರಾದರು.

ಶಿರಿಯರ ಪ್ರಪಂಚದ ತೊಟ್ಟಿಲು ಗ್ರಂಥಮಾಲೆಯ ಎರಡು ಪ್ರಕಟನೆಗಳು

ಪ್ರಸಿದ್ಧ ಹಿಂದೀ ಸಾಹಿತಿಗಳಾದ ಶೇಠ ಭಕ್ತ ಶೇಠ್ ಗೋವಿಂದದಾಸರು ಬರೆದ ಹಿಂದೀ ನಾಟಕದ ಕನ್ನಡ ಅನುವಾದ

ಪ್ರಕಾಶ

(ಅನುವಾದಕಿ:—
ಶ್ರೀ. ಸರಸ್ವತಿಬಾಯಿ ರಾಜವಾಡೆ

ಉತ್ತಮ ಸಾಮಾಜಿಕ ರಾಜಕೀಯ ನಾಟಕ.

ಬೆಲೆ ರೂ. 1—12—0

ರೂ 2ರ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟು ಮಾಡಲಾಗುವುದು.

ವಿಖ್ಯಾತ ಗ್ರಂಥಕಾರರಾದ ಶ್ರೀ. ಎ. ಎಸ್. ಪಂಚಾಪಕೇಶ ಅಯ್ಯರ್, ಎಂ. ಎ., ಐ. ಸಿ. ಯಸ್., ಬಾರ್-ಎಟ್-ಲಾ, ಎಫ್. ಆರ್. ಎಸ್. ಎಲ್., ಇವರು ಇಂಗ್ಲಿಷಿನಲ್ಲಿ ಬರೆದ

TALES OF IND

ಕಥಾವಳಿಯ ಕನ್ನಡ ಅನುವಾದ

ಭಾರತೀಯ ಕತೆಗಳು

ಅನುವಾದಕರು:—ಶ್ರೀ. ಕೊಳದ್ಕಲ್ ಶ್ರೀನಿವಾಸರಾಯರು.

೧೫೨ ಪುಟಗಳು ಬೆಲೆ 0-14-0

ರೂ. 1/-ರ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟು ಮಾಡಲಾಗುವುದು.

ಪ್ರತಿಯೊಬ್ಬ ಕನ್ನಡಿಗನೂ ಓದಲೇಬೇಕಾದ ಅಪೂರ್ವ ಪುಸ್ತಕಗಳು.
ನಮ್ಮಲ್ಲಿ ಸಿಗುವ ಇತರ ಪುಸ್ತಕಗಳ ಕೆಟಲಾಗಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ,
ರಿಜಿಸ್ಟರ್ಡ್ ಪಬ್ಲಿಷರ್ಸ್
ಉಡುಪಿ.

ಚೂರು-ಪಾರು

'ದಕ್ಷಿಣ—ಪೂರ್ವ ಏಸ್ಯಗಳ ಮಿ ಸೇನಾನಿ ಲೋರ್ಡ್ ಮೌಂಟ್ ಬೇಟರು ನವದಿಲ್ಲಿಗೆ ಬಂದಿದ್ದಾರೆ; ಮಿ. ಅಂತೊನಿ ಈಡೆನರು ಮೋಸ್ಕೋವಿಗೆ ಹೊರಡದ್ದಾರೆ'—ವಾರ್ತೆ.

ಬ್ರಿಟಿಷ್ ಯುದ್ಧ ಪ್ರಮುಖರೆಲ್ಲ ಹೀಗೆ ಲಂಡನ್ ಬಿಡಬೇಕಾದರೆ ಲಂಡನಿಗಾರು ಬರುತ್ತಾರೆ?

●

'ಹಿಂದುಸ್ಥಾನದ ವಿಷಯವಾಗಿ ಬ್ರಿಟನನ್ನು ಟೀಕಿಸುವ ಅಮೇರಿಕದ ವಿಮರ್ಶಕರ ಭಾವನೆಯು ಸುಮಾರು 30—40 ವರುಷಗಳ ಹಿಂದಿಂದ್ದ ಬ್ರಿಟಿಷ್ ಲಿಬರಲ್ ಮತ್ತು ಲೇಬರ್ ಮೆಂಬರರ ಅಭಿಪ್ರಾಯದಂತಿದೆ'—ಬ್ರಿಟನಿನ ಗೃಹ ಮಂತ್ರಿ ಮಿ. ಹರ್ಬರ್ಟ್ ಮೋರಿಸನರ ಮಾತು.

ಮೋರಿಸನ್‌ರಂತಹ ಬ್ರಿಟಿಷ್ ಅಧಿಕಾರಿಗಳು ಹಿಂದೀಯರಿಗೆ ಕೊಡುತ್ತಿರುವ ಆಶ್ವಾಸನೆಗಳು ಮುಂದಿನ 30—40 ವರುಷಗಳ ನಂತರವೇ ಫಲಿಸುವಂತಹವಾದುದರಿಂದ ಹೀಗೆ ತೋರಿತೇನೊ!

○

'ಯುದ್ಧ ಮುಗಿದೊಡನೆಯೇ ಫಿಲಿಪೈನಿಗೆ ಪೂರ್ಣ ಸ್ವಾತಂತ್ರ್ಯ'—ಅಧ್ಯಕ್ಷ ರುಸವೆಲ್ಟರ ಆಶ್ವಾಸನೆ.

ಈ ಮಾತನ್ನು ಅಧ್ಯಕ್ಷರು ಮಿ. ಚರ್ಚಿಲ್ಲರ ಹಿಂದೀ ವ್ಯಾಖ್ಯೆಯಿಂದ ಕದ್ದು ಕೊಡುದು!

●

'ಹಿಂದುಸ್ಥಾನಕ್ಕೆ ಆಹಾರ ಸಾಮಗ್ರಿ ಸಾಗಿಸುವ ಹಡಗಾನುಕೂಲತೆಯೀಗ ದೊರಕಿದೆ'—ನವದಿಲ್ಲಿಯಿಂದ ವಾರ್ತೆ. 'ಯುರೋಪು ಧಾಳಿಯಾರಂಭಿಸುವಷ್ಟು ಹಡಗಾನುಕೂಲತೆಯೊದಗಿದೆ'—ವಾಷಿಂಗ್ಟನ ವಾರ್ತೆ.

ಜಾಗ್ರತೆ! ಇವೆರಡು ಹಡಗ ಬಲಗಳ ಅದಲು ಬದಲಾಗುವ ಪ್ರಮಾದವಾಗದಿರಲಿ!

●

'ಕ್ರಿಪ್ಸ್ ಸೂಚನೆಯು ಎಲ್ಲಿ ಮುರಿತ್ತೋ, ಅಲ್ಲಿಂದಲೇ ಎತ್ತಿಕೊಂಡು ಪುನಃ ಸಂಧಾನ ಮಾತು ಕತೆಯಾರಂಭಿಸಬೇಕು'—ರಾಜಾಜಿಯ ಅಭಿಪ್ರಾಯ.

ಅರ್ಥಾತ್ ಪ್ರಥಮತಃ ಈಗ ವಿಮಾನ ಮಂತ್ರಿಯಾಗಿರುವ ಕ್ರಿಪ್ಸರು ಮೊದಲಿನ ಸ್ಥಾನಕ್ಕೆ ಬರಬೇಕು! ವಿಮಾನ ದೊರೆತರೆ ಲಂಡನಿಗೆ ಹಾರುತ್ತೇನೆಂದು ತಾನು ಹೇಳಿದ್ದರೂ ವಿಮಾನ ದೊರಕಿಸಿ ಕೊಡದೆ ಕ್ರಿಪ್ಸರನ್ನು ಸ್ಥಾನ ಚ್ಯುತಿಗೊಳಿಸಲು ರಾಜಾಜಿ ಹೂಡಿದ ಮಾಟವಿದಾಗಿರಬಹುದೆ?

●

'ಮಹಾತ್ಮಾ ಗಾಂಧಿಯವರ ಜನ್ಮದಿನಾಚರಣೆಗೆ ದೇಶದ ಎಲ್ಲಾ ಕಡೆಗಳಲ್ಲಿಯೂ ಪ್ರತಿಬಂಧ, ನಿಷೇಧಗಳು ಬಿದ್ದಿವೆ'

ಗಾಂಧಿಜೀ ಹುಟ್ಟಿದ್ದೇ ಇಲ್ಲವೆಂದು ಸರ್ವರೂ ಭಾವಿಸಿಕೊಳ್ಳಲಿ!

●

'ಪ್ರಾಂತ್ಯದ ಆಹಾರ ಸಮಸ್ಯಾ ನಿವಾರಣೆಗೆ ಸಾಧ್ಯವಿದ್ದ ಎಲ್ಲಾ ಹಾದಿಗಳಿಂದಲೂ ಸರಕಾರವು ಪ್ರಯತ್ನಿಸುವದು'—ಮದ್ರಾಸ್ ಗವರ್ನರರ ಆಶ್ವಾಸನೆ.

ಸುದೈವ ವಶಾತ್ ಈ ವಿಭಾಗದಲ್ಲಿ ಇತರ ಕಣಜದ ಕಡೆಗೆ ಹೋಗುವ ಒಂದೆ ಒಂದು ಹಾದಿ ಹಿಡಿದರಾಯಿತು.

—ವಿನೋದಿ.

ನೋಟೀಸು.

ದ. ಕ. ಮಂಗ್ಳೂರು ಡಿ. ಮು. ಕೋರ್ಟಿನಲ್ಲಿ

O. S. 421/1943

ಸರಸ್ವತಿಯಮ್ಮ ...ವಾದಿಳು.

ಮತ್ತು

1. ಕೆ. ಸುಬ್ಬರಾವ್, ಕಲ್ಯಾಣಿ ಗುಂಡುರಾಯರ ಮಗ. ಮಂಗಳೂರು ತಾಲೂಕು ಬೋಳೂರು ಗ್ರಾಮದ ಗಡ್ಡೆಮನೆ ಎಂಬಲ್ಲಿ ಬೋಳೂರು ಮೂರಲ್ ಎಲಿಮೆಂಟರಿ ಶಾಲೆ ಬಳಿಯಿರುವವ, 2 ಕೆ. ಶಾಮರಾವ್. 3. ಕೆ ಭೀಮರಾವ್, ಕಲ್ಯಾಣಿ ಗುಂಡುರಾಯರ ಮಗ ಮಂಗ್ಳೂರು ಪಟ್ಟಣದ ಪಾಂಡೇಶ್ವರದಲ್ಲಿ ಚಕ್ರಪಾಣಿಬಳಿ ಕಾಮತ್ ಭೀಮ ರಾಯರಲ್ಲಿರುವವ, 4. ಗುಂಡಿಲ ಮಂಜಪ್ಪಶೆಟ್ಟಿ, 5. ಕಂಬ್ಳ ಶೆಟ್ಟಿ.

ಸದ್ರಿ ಮೇಲಿನ 1ರಿಂದ 3ನೇ ವರೆಗಿನ ಪ್ರತಿವಾದಿಯು ಅನಂತಯ್ಯ ಹೊಳ್ಳ ಎಂಬವರಿಗೆ ತಾ 29.9-1940ರಲ್ಲಿ ಅಪ್ಪೈಸಿ ಸಲ ಬರಕೊಟ್ಟ ಚಾಲಗೇಣಿ ಚೀಟಿಗೊಪ್ಪಿದ ಸರ್ವಾಪಿ ಆಸ್ತಿಯ ಈಗಿನ ಹಕ್ಕುದಾರಳಿಂದ ಸದ್ರಿ ಮೇಲಿನ ಎಲ್ಲರು ಅವಳಿಗೆ ಬರತಕ್ಕ ಸದ್ರಿ ಗೇಣಿಚೀಟುಪ್ರಕಾರ ಕೆಳದ ವಿಷು ಮತ್ತು ಚಿತ್ರಭಾನು ಸಂವತ್ಸರಗಳ 2ವರ್ಷಗಳ ಗೇಣಿ ಬಾಕಿ ಹುಟ್ಟುವಳಿ, ಬಡ್ಡಿ ವಗೈರೆ ಒಟ್ಟು ರೂಪಾಯಿ 1276 9.8ಕ್ಕೆ ವ ಮುಂದಿನ ಬಡ್ಡಿ ಕೋರ್ಟು ಖರ್ಚು ಮತ್ತು ಹಿಗ್ಗೆ ವ ಆಸ್ತಿ ಸ್ವಾಧೀನತೆ ವಗೈರೆ ಬರಮಾಡಿಕೊಳ್ಳುವರೆ ದಾಕ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 27-10-1943ನೇ ಪೂರ್ವಾಹ್ನ 11ಘಂಟೆಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಸದ್ರಿ ದಿವಸ ಸದ್ರಿ ಮೇಲ್ಕಾಣಿಸಿದ 1 ಮತ್ತು 3 ನೇ ಪ್ರತಿವಾದಿರು ಖುದ್ದಾಗಿ ಯಾ ವಕೀಲರ ಮುಖಾಂತ್ರ ಕೋರ್ಟಿನ ಮುಂದೆ ಹಾಜರಾಗಿ ಆಕ್ಷೇಪಗಳಿದ್ದರೆ ಮನವಿ ಮಾಡಿಕೊಳ್ಳಬಹುದು. ತಪ್ಪಿದ್ರೆ ಸದ್ರಿ ವ್ಯಾಜ್ಯವು ಅವರ ಗೈರ ಹಾಜರಿಯಿಂದ ತೀರ್ಮಾನವಾಗುವದು ಎಂತ ಕೋರ್ಟು ಹುಕುಂಪ್ರಕಾರ ಪ್ರಕಟಿಸಲಾಗಿಯದೆ.

P Vasudeva Rao
Advocate for Plaintiff

ಮಂಗ್ಳೂರು
7-10-43

NOTICE.

In the Court of the District Judge of S. K.

O. S. 3/1943

H Raghavendra Pai & another— Plaintiffs.

The Hindu Religious Endowments Board & others, —Defendants.

To

The 6th defendant Raghavendra Padiar.

Take notice that the above suit filed by plaintiffs for setting a side the order passed by the 1st defendant Board is posted for trial to 1-11-1943. If the 6th defendant has got any objection he must either appear in person or by a pleader on the said date Otherwise the suit will be decided in his absence

Mangalore 6—10—43 **S. Venket Rao** Vakil for Plaintiffs.

ದ. ಕ ಜಿಲ್ಲಾ ಬೋರ್ಡು ಉಪ ಚುನಾವಣೆ.

ಈ ಬಾರಿಯ ಜಿಲ್ಲಾ ಬೋರ್ಡಿನ ಉಪ ಚುನಾವಣೆಗಳಲ್ಲಿ ಒಪ್ಪಿ ರಾಜಿಕೊಟ್ಟ ಕಾಂಗ್ರೆಸಿಗರು ಉಮೇದ್ವಾರಿಗಳಾಗಬಾರದೆಂದು, ಕಾಂಗ್ರೆಸ್ ಗೌರವ ಪಾಲನೆಯ ದೃಷ್ಟಿಯಿಂದ ನಾನು ಹಿಂದೊಮ್ಮೆ ಮಾಡಿಕೊಂಡ ವಿನಂತಿಯು ಮನ್ನಿಸಲ್ಪಟ್ಟುದಕ್ಕಾಗಿ ಅಭಿಮಾನವನ್ನಿಸುತ್ತದೆ. ಮಂಗಳೂರು, ಕಾರ್ಕಳ, ಉಡುಪಿ, ಪುತ್ತೂರು ತಾಲೂಕುಗಳಲ್ಲಿ, ಕಾಂಗ್ರೆಸ್ ಧ್ಯೇಯ ಪಾಲನೆಗಾಗಿ ತಮ್ಮ ಸ್ಥಾನಗಳಿಗೆ ರಾಜೀನಾಮೆಯಿತ್ತಿದ್ದ ಮಹನೀಯರಿಗೆ, ಆಯಾಯಾ ಸ್ಥಾನಗಳಲ್ಲಿ ಸಂಪೂರ್ಣ ಬೆಂಬಲವಿದ್ದರೂ ಕಾಂಗ್ರೆಸ್ ಪ್ರತಿಷ್ಠಾ ಪಾಲನೆಗಾಗಿ ಉಪ ಚುನಾವಣೆಯನ್ನು ಧಿಕ್ಕರಿಸಿದ ಆ ಮಹನೀಯರನ್ನೆಲ್ಲಾ ಹೃತ್ಪೂರ್ವಕ ಅಭಿನಂದಿಸುತ್ತೇನೆ. ಪ್ರಕೃತ ನಾಮಪತ್ರ ಹಂಡಿಸಲು ಬಾಕಿಯಿರುವ ತಾಲೂಕೆಂದರೆ ಕುಂದಾಪುರ. ಅಲ್ಲಿ ಖಾಲಿ ಸ್ಥಬಿದ್ದಿರುವದೆಂದರೆ:—ಜಿಲ್ಲಾ ಕಾಂಗ್ರೆಸ್ ಕಮಿಟಿಯ ಉತ್ಸಾಹೀ ಕಾರ್ಯದರ್ಶಿಯಾಗಿದ್ದು, ಕಾಂಗ್ರೆಸ್ ಧೋರಣೆಗನುಸಾರವಾಗಿ ತ್ಯಾಗ, ಕಷ್ಟಗಳನ್ನನುಭವಿಸಿರುವ ಶ್ರೀ. ಬಿ. ಸುಬ್ಬಣ್ಣ ಶೆಟ್ಟರು ಮತ್ತು ಆದಿಯಿಂದಲೂ ತತ್ವತಃ ದೇಶಾಭಿಮಾನ ಪ್ರದರ್ಶಿಸುತ್ತಿರುವ ನಿಷ್ಠಾವಂತ ಕಾಂಗ್ರೆಸಿಗರಾದ ಶ್ರೀ. ಕೆ. ವೆಂಕಪ್ಪ ಶೆಟ್ಟಿ, ವಕೀಲ್—ಶ್ರೀ ಬಿ ಶಿವರಾವ ಶೆಟ್ಟಿ, ವಕೀಲ್ ಈ ಮೂವರು ರಾಜೀನಾಮೆಯಿತ್ತ ಮೂರು ಸ್ಥಾನಗಳು. ಮೇಲಿನ ಮಹನೀಯರೂ ಸ್ವತಃ ಸಿದ್ಧವಾಗಿರುವಂತೆ, ಪುನಃ ಉಮೇದ್ವಾರಿಗಳಾಗದಿದ್ದಲ್ಲಿ ಇಡೀ ಜಿಲ್ಲೆಯು ಕಾಂಗ್ರೆಸಿನ ಬೆಂಬಲಕ್ಕಿದೆಯೆಂಬುದು ಮತ್ತೊಮ್ಮೆ ಪ್ರದರ್ಶಿಸಲ್ಪಡುವದು. ಮಾತ್ರವಲ್ಲ, ಕಾಂಗ್ರೆಸ್ ಟಿಕೇಟಿನಿಂದ ಜಿಲ್ಲಾ ಬೋರ್ಡು ಪ್ರವೇಶಿಸಿಯೂ ಕಾಂಗ್ರೆಸ್ ಕರೆಯಂತೆ ರಾಜೀನಾಮೆ ಕೊಡದ ಸದಸ್ಯರು ಸ್ವಕರ್ತವ್ಯ ಬಾಹಿರರೆಂಬುದೂ ಸ್ಪಷ್ಟವಾಗುವದು. ರಾಷ್ಟ್ರಾಭಿಮಾನ ಪ್ರದರ್ಶನ, ಕಾಂಗ್ರೆಸ್ ಶಿಸ್ತುಪಾಲನೆ ಮತ್ತು ಪ್ರತಿಕಾರಣೆಗಾಗಿ ಈ ಬಹಿಷ್ಕಾರವು ಪರಿಪೂರ್ಣವಾಗಲೆಂದು ಮತ್ತೊಮ್ಮೆ ಹಾರೈಸುತ್ತೇನೆ.

B. Krisnaya Hegde,
Balkatta Beedu.

ನೀಲಾವರ:—ಇಲ್ಲಿಯ ಶ್ರೀಮಹಿಷಮರ್ದಿನಿ ಶಾಲೆಯಲ್ಲಿ ತಾ 6-10 1943ರಲ್ಲಿ ಶಾರದಾಪೂಜೆಯೂ ಶಾಲಾ ವರ್ಧಂತ್ಯುತ್ಸವವೂ ಉಡ್ಪಿ ರೇಂಜ್ ಶಾಲೆಗಳ ಜೂನಿಯರ್ ಡಿ. ಇನ್‌ಸ್ಪೆಕ್ಟರ್ ಶ್ರೀ N. ಸುಂದರರಾಯರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ವಿವಿಧ ವಿನೋದಾವಳಿಗಳು ಮಕ್ಕಳಿಂದ ನಡೆಸಲ್ಪಟ್ಟು ಪ್ರೇಕ್ಷಣೀಯವಾಗಿದ್ದವು. ಮಕ್ಕಳಿಗೆ ಬಹುಮಾನ ಹಂಚೋಣವಾಗಿ ಸಭಿಕರ ಭಾಷಣವಾದ ತರುವಾಯ ಅಧ್ಯಕ್ಷರ ಸರಸ ಭಾಷಣವಾಯಿತು. ಮನೇಜರರಿಂದ ಫಲಹಾರ, ಧನ್ಯವಾದಗಳಾದ ಮೇಲೆ "ಅಂಗದ ಸಂಧಾನ" ಎಂಬ ಯಕ್ಷಗಾನ ನಾಟಕವಾಯಿತು.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವದು, ಮಲಬದ್ಧತೆ, ಒಳಜ್ವರ, ಅಶಕ್ತಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—0—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಯೊಂದುವದಲ್ಲದೆ, ಶಿಸುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 16 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ—1 ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ ಅಂಡ್ ಜನರಲ್ ಮರ್ಚೆಂಟ್ಸ್, 183 ಸುವಾರಿಬಾಗ್ ರೋಡ್, ಪರೇಲ, ಬೊಂಬಾಯಿ, ನಂಬ್ರ 12 2. ಜನರಲ್ ಸ್ಟೋರ್ಸ್, ಜಿ. ಐ ಪಿ ಮಾಟುಂಗಾ 3 ಮಿಲ್ಲರ್ ಪೆಟರ್ಸ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ. 4. ಧನ್ವಂತರಿ ವೈದ್ಯಶಾಲೆ, ಲಿಸ್ಸಡೌನ ಬಜಾರ್, ಮೈಸೂರು 5. ಮಂಗ್ಳೂರು ಸ್ಟೋರ್ಸ್, ಮಡಿಕೇರಿ. 6 ಬಿ. ಪುಟ್ಟಯ್ಯ ಶೆಟ್ಟಿ, ... ಸನ್ಸ್, ಸೋಮವಾರ ಪೇಟೆ. 7. ಡಾ। ಶ್ರೀನಿವಾಸ ಪೈ, ಪುತ್ತೂರು. 8. ಶಾಂತವರ ... , ಬೆಳ್ತಂಗಡಿ. 9 ಮುಲ್ಕಿ ಮೆಡಿಕಲ್ ಸ್ಟೋರ್ಸ್, ಮುಲ್ಕಿ. 10. ನವಭಾರತ ಬುಕ್ ಡಿಪ್ಪೋ ಸಂತೆಕಟ್ಟೆ, ಉಡುಪಿ. 11. ಕೃಷ್ಣ ಫಾರ್ಮಸಿ, ಕುಂದಾಪುರ. 12 ಎಚ್ ನರಸಿಂಹ ನಾಯ್ಕ, ಮರ್ಚೆಂಟ್, ಶಂಕರನಾರಾಯಣ. 13. ಕಾಸರಗೋಡು ಶ್ರೀ ರಾಮಾ ಸ್ಟೇಶನರಿ ಹೌಸ್, ಶ್ರೀ ರಾಮ ಪೇಟೆ 14. ಕೆ. ಶ್ರೀನಿವಾಸ ಹೆಗ್ಡೆ, ತೀರ್ಥಹಳ್ಳಿ 15. ಬಿ ಯಸ್. ನರಸಿಂಗ ರಾವ್, ಮರ್ಚೆಂಟ್, ಚಿಕ್ಕಮಂಗ್ಳೂರು.

Degrees: Books: Medicines

Free H. L. M. S. M. B. H. M. D. etc. Free Homeo-Ayur- UnaniNaturo degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp:—

Principal Indian Homeopathi Institute & Society (Govt Regd)
P.O. MAHUVA (Kathiawar Di. India.)

Siddha-Rupa Kavach (Regd.)
No. 3 Rs 2. No. 2 Rs 4 No. 1 Rs. 7. Special Rs. 10, Extra Special Rs. 17 for love marriage health, wealth. Ask any six questions with M. O. Re. 1/4 and get correct answers by returnpost Life reading Rs.10 No V.P.P. Send M.O, Free. Pamplets

Prof. Dr. N. H Chhatbar.
P. O. MAHUVA (Kathiawar India.)

CHAMPAE'S SNOW & CASTREX
AGENTS SADANANDA STORES UDIPI

BHUVANENDRA PRODUCTS Ltd,

Head Office and Factory:
Katapadi, S. Kanara

Depots:
1 Mahratha Galli, Hubli

"BHUVANENDRA"

Danthadavan Choorna

Economical in use. Cheapest in value. Genuine in quality and choiced by all Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— **ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ;** ಶ್ರೀ. ಆರ್. ಎಸ್. ಶೆಣೈ, ರಥಬೀದಿ; **ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ;** ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪ್ಪೊ.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in 1920.)

Registered Office. Court Road UDIPI South Canara District.
Business Offices. Udipi, Mangalore, Katapadi, Kanhangad and Kinnigoli, South Canara.

Authorised and Issued Capital: Rs 2 00 000/-
Subscribed and Paid up Capital: Rs 2,00,000/-
Reserve Funds: Rs. 1,74,600/-

Short term bills are discounted for approved parties, Loans and advances are made and overdrafts granted on fairly easy terms.

Deposits are accepted at favourable rates of interest More than twenty-three *years' reliable banking Service stands to our credit.*

For further particulars please call at or apply to the nearest office.

Dated 27-8-1943.

REGD.

ಅಮೃತಾಂಜನ ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷಮುಂತಾದ ಚೀನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ, ಜುಳುಕಿದ್ದ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1-8-0 ಮಾತ್ರ

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಮೆನೇಜರ್, ಬಾಲಚಂದ್ರ

ಸಂತೆಕಟ್ಟೆ, ಉಡುಪಿ.

ರುಚಿ!! **ಸೆಂಟ್ರಲ್ ಕೆಫೆ** ರುಚಿ!!

ಶ್ರೀನಿವಾಸ ಬಿಲ್ಡಿಂಗ್ಸ್, ಹೆಡ್ ಪೋಸ್ಟಾಫೀಸ್ ಸರ್ಕಲ್, ಶಿವಮೊಗ್ಗ.

ಪ್ರಯಾಣಿಕರಿಗೆ ಉಳಿದುಕೊಳ್ಳಲು ಸ್ಥಳಾನುಕೂಲ ಏರ್ಪಡಿಸಿರುತ್ತೆ. ಸಕಾಲದಲ್ಲಿ ಉತ್ತಮವಾದ ಊಟ, ಕಾಫಿ ಮತ್ತು ಹಸನಾದ ತುಪ್ಪದಲ್ಲಿ ತಯಾರಿಸಿದ ತಿಂಡಿ ದೊರೆಯುತ್ತೆ.

ಈ ಸ್ಥಳವು ರೈಲ್ವೆಸ್ಟೇಷನ್, ಬಸ್‌ಸ್ಟ್ಯಾಂಡ್, ಕೋರ್ಟುಗಳಿಗೆ ಮಧ್ಯ ಸ್ಥಳದಲ್ಲಿದೆ.

ಎಸ್. ರಾಮದಾಸ್, ಪ್ರೊಪ್ರೈಟರ್.

— ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಹಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯ:— ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಷ್ಟ ಚಾರ್ಜ ೧೨ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದಂಡ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager

ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ನವಜೀವಾತು ಎಂಬ ಸೂತಿಕಾರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚುಕಡಿಮೆ ಆಲವಸಗಳಿಗೆ ಬರುವವು. ಅಂದರೆ ಕೇವಲ ೮ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ. ಕ.**

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ. : : : : ಮಂಗಳೂರು.

ಸ್ಥಾಪನೆ 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

THE VIJAYA BANK, LIMITED.

Glad to announce that a Branch of the Bank has been opened at KASARAGOD on 12-9-43.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618.

ಇಪ್ಪತ್ತನಾಲ್ಕನೆಯ ವರ್ಷ.

Estd. 1921 ಸ್ಥಾಪನೆ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪ ಸಂಚಿಕೆ ೭

FOUNDER Sri. A. B. Shetty.

Vol. 24 No. 7

NAVAYUGA— Kannada Weekly —UDIPI, S. I.

ಉಡುಪಿ • 21—10—1943 • ಮಂಗಳೂರು.

ಹೊಸಕೆರೆ ಚಿದಂಬರಯ್ಯನವ
ರಿಂದ ರಚಿತವಾದ ಗೀತೆಯ
ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು ೪೪೧ ಪುಟಗಳು.
ಪ್ರತಿ ಮನೆಯಲ್ಲೂ ಇರಬೇಕಾದ
ಪವಿತ್ರ ಗ್ರಂಥ.
ಬೆಲೆ (ಸುಂದರ ಪ್ರತಿ) ೦—೮—೦
ಅತ್ತಾಣೆ ಸ್ಟಾಂಪು ಕಳಿಸಿದ್ದಲ್ಲಿ ೧ ಪ್ರತಿಯನ್ನು
ಬುಕ್‌ಪೋಸ್ಟು ಮಾಡಲಾಗುತ್ತೆ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಅಖಿಲ ಕರ್ನಾಟಕದ
ಹೊಸಮಾದರಿಯ ವಾರಪತ್ರಿಕೆ

ಅಂತರಂಗ

ಜನ್ಮ ತಾಳಿದ ಸ್ವಲ್ಪ ಸಮಯದಲ್ಲೇ
ವಿಶಾಲ ಪ್ರಚಾರ ಮತ್ತು ಪ್ರಶಸ್ತಿ
ಪಡೆದ ಸಚಿತ್ರ ವಾರಪತ್ರಿಕೆ.
ಪ್ರಸಿದ್ಧ ಜ್ಯೋತಿಷಿಗಳೊಬ್ಬರಿಂದ
ವಾರಭವಿಷ್ಯವೂ ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ	ರೂ. ೪-೮-೦
6 ತಿಂಗಳಿಗೆ	ರೂ. ೨-೪-೦
ಬಿಡಿಪ್ರತಿಗೆ	ರೂ. ೦-೧-೬

ಮಾದರಿಗೆ ಬರೆಯಿರಿ:
ಮೆನೇಜರ್, ಅಂತರಂಗ, ಉಡುಪಿ.

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim

The Canara Mutual Assurance Co., Ltd.,
UDIPI. (S. India).

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು
ನೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸಮೀಪದವರ ಮತ್ತು
ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇವರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಮುಖ್ಯ ಏಜಂಟರು.
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ. ಕನ್ನಡ.)
ಶಾಖಾ ಕಛೇರಿಗಳು:— ಬೆಂಗಳೂರು, ಬೊಂಬಾಯಿ, ಮದ್ರಾಸ್,
ಕಲ್ಲಿಕೋಟೆ, ಮಂಗಳೂರು ಮತ್ತು ತ್ರಿವಾಂಕೂರು.

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:— ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:—ದಾವಣಗೇರಿ ಪ್ರೆಸ್.

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ.
ಆಯುರ್ವೇದ ಔಷಧಾಲಯ ಗದಗ.

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೩೦ನೇ ವರ್ಷದಿಂದ ಚಾಲು ೧೯೪೦ನೇ ಪ್ರಾರಂಭದ ಮಾಸಗಳು ಬಹ ಬಹು ಅಪಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನ್ನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ತೀವ್ರನೆ ಮುಂದುವರಿದವು.

೧೯೪೦, ೪೧ರಲ್ಲಿ **ಕೆನರಾ ಬೇಂಕು** ೯೦ ಲಕ್ಷ ಠೇವಣಿಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣಿಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡೂವರೆ ಕೋಟಿಗೆ ಏರ್ಕಿದೆ. ಹಾಗೂ ತೆತ್ತ ಮೂಲಧನವು ನಾಲ್ಮಡಿಯಾಗಿದೆ.

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮವಿಶ್ವಾಸದಿಂದಲೂ, ದೃಢ ಬುದ್ಧಿಯಿಂದಲೂ, ಯೋಗ್ಯಸೇವೆಯನ್ನು ಸಲ್ಲಿಸಿದರಿಂದಲೂ. ಇಂದಿನ ಈ ಪ್ರಗತಿಗೆ ಕಾರಣ ಭೂತರಾದ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಮಹತ್ತರ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

CANARA BANK LIMITED.
ಕೆನರಾ ಬೇಂಕ್ ಲಿಮಿಟೆಡ್.
ಸ್ಥಾಪನೆ 1906.

• ಆಹಾರದಲ್ಲೂ ಅನಾಸಕ್ತಿ! •

"ಕಳೆದ ಹಲವು ತಿಂಗಳುಗಳಿಂದ ನನ್ನನ್ನು ಅತಿರೇಕ ಯೋಚನೆಗೀಡುಮಾಡುವ ಸಂಗತಿ, ಸ್ವಾಭಾವಿಕವಾಗಿ ಈ ದಿನ ನಮ್ಮೆಲ್ಲರ ಮನಸ್ಸಿನ ತುದೀ ಭಾಗದಲ್ಲಿ ನಿಂತಿರುವ ವಿಷಯವೆಂದರೆ, ಬಂಗಾಳದಲ್ಲಿ ಭಯಂಕರವಾಗಿರುವ ಬರಗಾಲ ಮತ್ತು ವಿಶಾಲ ಭಾರತದ ಇತರ ಹಲವು ಜಿಲ್ಲೆಗಳಲ್ಲಿ ಹಬ್ಬಿರುವ ಆಹಾರಸಂಕಷ್ಟ. ನಮ್ಮ ವಿರೋಧಿಗಳಿಂದಾಕ್ರಮಿಸಲ್ಪಟ್ಟಿರುವ ದೇಶಗಳ ಅಖಿಲ ಜನತೆಯನುಭವಿಸುತ್ತಿರುವ ಹಸಿವು ಪೀಡೆಯ ಯೋಚನೆಯೇ ನಮ್ಮ ನಿತ್ಯಾಭ್ಯಾಸವಾಗಿ ಹೋಗಿತ್ತು. ಆದರೆ ಅಂತಹ ದುಃಸ್ಥಿತಿಯು ಬ್ರಿಟಿಷ್ ಧ್ವಜದಡಿಯಲ್ಲಿದೆ; ಬ್ರಿಟಿಷ್ ಸಾಮ್ರಾಜ್ಯದ ದ್ವಿತೀಯ ನಗರದ ರಸ್ತೆಗಳಲ್ಲಿ ಜನರು ಹಸಿವೆಯಿಂದ ಸಾಯುತ್ತಿದ್ದಾರೆ ಎಂಬುದು ನಮ್ಮ ತಾಳ್ಮೆ ಕೆಡಿಸುವ ಅತಿ ದೊಡ್ಡ ಆಘಾತ"—ವೇಲಿನ ಮಾತು ಭಾರತ ಕಾರ್ಯದರ್ಶಿ ಮಿ. ಅಮೆರಿಯವರದು ತಾ. 15ನೇ ರಾತ್ರಿ ಬರ್ಮಿಂಗ್ಹಾಮಿನಲ್ಲಿತ್ತ ಅವರ ಭಾಷಣದಲ್ಲಿ ಬಂದ ಮಾತುಗಳಿವು! ಕಣ್ಣಿಂದ ನೀರು ಬರಿಸಿದ ವಿದ್ಯಮಾನ ದೊಡ್ಡದಲ್ಲ–ಕಲ್ಲಿಂದ ನೀರು ಜಿನುಗಿಸಿದುದೇ ದೊಡ್ಡದು. ಮಾನುಷತ್ವವಿಲ್ಲದವರ ಮನಕರಗಿಸಿತೆಂಬುದರಿಂ ಬಂಗಾಳದ ಬರಗಾಲದ ಭೀಕರತೆಯನ್ನರಿಯುವದಲ್ಲ-ಮಿ. ಅಮೆರಿಯಂತಹ ಪಾಷಾಣ ಹೃದಯಿಗಳನ್ನು ಕೂಡಾ ಬಾಯಿಬಿಡಿಸಿದ ಆಹಾರಾಭಾವ ಮಹಾತ್ಮೆ ದೊಡ್ಡದು. ಭಾರತೀಯ ಬರಗಾಲಕ್ಕಾಗಿ ಇನ್ನೂ ಮರುಕಮೂಡದಿರುವುದೆಂದರೆ, ಬಂಗಾಳದಲ್ಲಿ ಈಗಲೂ ದಿನಕ್ಕೆ ನೂರಿನ್ನೂರು ಮಂದಿಯನ್ನು ಬಲಿಗೊಳ್ಳುತ್ತಿರುವ ಮೃತ್ಯುವಿಗೆ ಮಾತ್ರ.

ಪಾರ್ಲಿಮೆಂಟಿನಲ್ಲಿಯೂ

ಈ ಪ್ರಸ್ತಾಪ ಬಂತು. ಮುಂದಿನ ಕಾಮನ್ಸ್ ಸಭೆಯಲ್ಲಿ ಹಿಂದೀಯ ಆಹಾರ ಬಿಕ್ಕಟ್ಟಿನ ಪರ್ಯಾಲೋಚನೆಗೆ ಅನುವು ಮಾಡಿಕೊಳ್ಳಲಿರುವೆನೆಂದು ಮಿ. ಚರ್ಚಿಲ್ಲರು ಹೇಳಿಕೆಯಿತ್ತಾಗ ಮಿ. ಗ್ರೀನ್‍ವುಡ್ಡರು ಒತ್ತಾಯಿಸಿದರು: "ಇದು ಅತ್ಯವಸರದ ಹಾಗೂ ಅತಿ ಮುಖ್ಯ ಸಾರ್ವಜನಿಕ ಸಂಗತಿಯಾಗಿರುವದೆಂದು ನನಗನ್ನಿಸುತ್ತದೆ, ಆದ್ದರಿಂದ ಇನ್ನೂ ಸ್ವಲ್ಪಾವಧಿಯ ನಂತರದ ಮುಂದಿನ ಅಧಿವೇಶನಕ್ಕದನ್ನು ಮುಂದರಿಸಿಡುವದೆಂದರೆ, ಒಂದು ಮುಖ್ಯ ಚರ್ಚೆಯನ್ನು ಅನಗತ್ಯವಾಗಿ ಮುಂದತಾಡಿದಂತಾಗುವದು". "ನೋಡೋಣ. ನಾವು ಈ ಬಾರಿ ಆಗಲುವ ಮೊದಲೇ ಒಂದು ದಿನ ಸಂಪಾದಿಸಲು ಶಕ್ಯವಿದ್ದ ಪ್ರಯತ್ನಮಾಡೋಣ"-ಎಂದು ಬ್ರಿಟಿಷ್ ಪ್ರಧಾನಿಗಳೂ ಸಮಾಧಾನಪಡಿಸಿದ್ದಾರೆ. 'ಇಲ್ಲಿಯೂ ಬಂಗಾಳವಾಗದಿದ್ದರಾಯಿತು'-ಎಂಬುದೇ ಹಿಂದುಸ್ಥಾನದ ಮೂಲೆಮೂಲೆಯ ಹಾರೈಕೆ; ಗಾದೇ ಮಾತು; ಚರ್ಚೆಯ ವಿಷಯ! ಅದು ಬ್ರಿಟಿಷ್ ಪಾರ್ಲಿಮೆಂಟಿನಲ್ಲೂ ಚರ್ಚಿಸಲ್ಪಡಲಿದೆಯೆಂಬುದು ಸಂತೋಷ. ಭಾರತೀಯ ರಾಜಕೀಯ ಸಮಸ್ಯೆಯಂತೆಯೇ "ಇದು ಸಂಗ್ರಾಹಕರ ದುರಾಚರಣೆಯ ಫಲ; ಹಿಂದೀ ಸರಕಾರದ ಅಭಿಮತಕ್ಕಿಂತ ಭಿನ್ನವಾದುದನ್ನು ಪ್ರಕಟಿಸಲು ನಮ್ಮಲ್ಲೇನೂ ಇಲ್ಲ"-ಎಂದು ಈ ವಿಷಯದಲ್ಲೂ ಚರ್ಚಿಲ್ ಅಮೆರಿಯವರು ಬಾಯಿ ಹಾರಿಸಿ ಬಿಡುತ್ತಿದ್ದರೆ ಯಾರೇನು ಮಾಡುತ್ತಿದ್ದರು?

ಆಹಾರ ಸಮ್ಮೇಲನ.

ಎಲ್ಲವನ್ನೂ ತುಲನೆಮಾಡಿ, ಗಾಢಾಲೋಚನೆ ನಡೆಸಿ, ಪ್ರಾಂತ್ಯಪ್ರಾಂತ್ಯಗಳ ಪ್ರತ್ಯಪ್ರತ್ಯೇಕ ಪರಿಸ್ಥಿತಿಯನ್ನು ಕಡೆಗಣಿಸದೆ ಅಖಿಲ ಭಾರತ ಯೋಜನೆಯೊಂದನ್ನು ನಿರ್ದಾಕ್ಷಿಣ್ಯವಾಗಿ ಜಾರಿಗೆ ತರುವ ಹೊಣೆಗಾರಿಕೆ ಕೇಂದ್ರ ಸರಕಾರದ್ದಿದೆ. ಇದು ಈ ವರೆಗೂ ಬಾಕಿಯಲ್ಲೇ ಇದ್ದ ಅತ್ಯಾವಶ್ಯಕ ಕಾರ್ಯ. ಆಹಾರ ಸಮಸ್ಯೆಯು ಪ್ರಾಂತಿಕ ಪ್ರಶ್ನೆಯೆಂದೇ ಕೇಂದ್ರ ಸರಕಾರದ ಭಾವನೆ. ಹೀಗಾಗಿ ವೈಸರಾಯಿ ಕೌನ್ಸಿಲಿನ ಆಹಾರ ಸದಸ್ಯರಿಗೆ ಸ್ಥಾನಕ್ಕನುಗುಣವಾದ ಸಾಹಸ ಕೈಗೊಳ್ಳುವ ಪ್ರಯಾಸವಿರಲಿಲ್ಲ. ಪ್ರಾಂತಿಕ ಸರಕಾರಗಳ ಅಸಾಮರ್ಥ್ಯ, ಕೇಂದ್ರ ಸರಕಾರದ ಅಸಡ್ಡೆ-ಇವೆರಡು ಅಪಮೃತ್ಯುವಿನ ದ್ವಿಬಾಹುಗಳಾಗಿ ಬಂಗಾಳದಂತೆ ಸಾವಿರಾರು ಜನರನ್ನೆತ್ತಿಕೊಂಡವೆನ್ನಲಡ್ಡಿಯಿಲ್ಲ. ಆದರೆ ಪರಿಸ್ಥಿತಿಯ ಕೆಟ್ಟಾಗಲದ ಭೀಕರತೆಯು ಚರ್ಚಿಲ್, ಅಮೆರಿಯವರಂತೆಯೇ ಹಿಂದೀ ಸರಕಾರವೂ ಕಣ್ಣುಬಿಡುವಂತೆಸಗಿದೆ, ಢಿಲ್ಲಿಯಲ್ಲಿ ಇದೇ ತಾ 15. 16ರಂದ ವಿವಿಧ ಪ್ರಾಂತ್ಯ ಸಂಸ್ಥಾನಗಳ ಪ್ರಾತಿನಿಧ್ಯವುಳ್ಳ ಕೇಂದ್ರ ಆಹಾರ ಸಮ್ಮೇಲನವು ಜರಗಿದೆ. ವಸ್ತುಸ್ಥಿತಿ, ಅಂಕೆಸಂಖ್ಯೆ, ಆಗುಹೋಗುಗಳನ್ನೆಲ್ಲಾ ಕೂಲಂಕುಷವಾಗಿ, ತುಲನಾತ್ಮಕ ದೃಷ್ಟಿಯಿಂದ ಪರ್ಯಾಲೋಚಿಸಿ ಸುದೃಢ ನಿರ್ಧಾರದ ಕಡೆಗೆ ಹೆಜ್ಜೆಯಿಟ್ಟಿದೆ ಎಂಬುದು ಸಂತೋಷಕರ. ಪ್ರಾಂತಿಕ ಭಿನ್ನಾಭಿಪ್ರಾಯಗಳೆಲ್ಲಾ ಆ ಸಮ್ಮೇಲನದಲ್ಲಿ ಮುಂದೆ ಬಂದಿವೆಯಾದರೂ, ಆಹಾರ ಧಾನ್ಯ ಧೋರಣಾ ಸಮಿತಿಯವರು ಮಾಡಿದ ಶಿಫಾರಸಿಗನುಸಾರವಾಗಿ, ಆಹಾರದವಸಗಳಿಗೆ ಕಾಯಿದೇ ಬದ್ಧ ಅದು ನಿರ್ಣಯವನ್ನು ಮಂಜೂರು ಮಾಡಿದೆ. ಮುಖ್ಯ ಆಹಾರ ಧಾನ್ಯಗಳ ಮೇಲೆ ಎಲ್ಲಾ ಪ್ರಾಂತ್ಯಗಳಲ್ಲೂ ಸಾರ್ವತ್ರಿಕ ಬೆಲೆ ನಿಯಂತ್ರಣ—ಪಟ್ಟಣಗಳಲ್ಲಿ ಸದಾ ಪದ್ಧತಿ ವ್ಯವಸ್ಥೆಯ ಜವಾಬ್ದಾರಿ ಪ್ರಾಂತ್ಯಗಳಿಗೆ–ಎಂದು ಆ ಸಮ್ಮೇಲನದ ನಿರ್ಧಾರವಾಗಿದೆ. ಏಕ ರೀತಿಯ ಬೆಲೆಯೆಂದಾದರೂ ಪ್ರಾಂತ್ಯಭೇದವನ್ನು ಅಲಕ್ಷ್ಯಿಸಬಾರದು. ಬೆಲೆಯ ಮಟ್ಟಿಗೆ ನ್ಯಾಯವು ಪಾಲಿಸಲ್ಪಟ್ಟರೂ ಆಹಾರಧಾನ್ಯಗಳು ಅಂತರ್ಧಾನವಾಗದಂತೆ ನೋಡಬೇಕು; ಅನಾವೃಯವಾಗದ ಹತೋಟಿಯೂ ಬೇಕು ಇವೆಲ್ಲವುಗಳಿಗಾಗಿ ಜನತಾ ಸಹಕಾರವಂತೂ ಅತ್ಯಗತ್ಯವಾಗಬೇಕು. ಆದರೆ ಅದನ್ನು ಸಂಪಾದಿಸಲು ಸರಕಾರಕ್ಕೆ ಇಚ್ಛೆಯಿದೆಯೆ? ಆ ಇಚ್ಛೆಯಿದೆಯಾದರೆ ಅದನ್ನು ಸಾಧಿಸಲು ಉಳಿದಿರುವ ಏಕಮಾತ್ರ ಹಾದಿ ಹಿಡಿಯಲು ಅದು ತಯಾರಿದೆಯೆ? ತಯಾರಿದೆಯಾದರೆ ಅನನ್ಯ ಜನತಾ ವಿಶ್ವಾಸ ಸಂಪಾದಿಸಿರುವ ಗಾಂಧಿಜೀಯಂತಹ ಮುಖಂಡರ ಬಿಡುಗಡೆಗೆ ತಡವೇಕೆ? ಪ್ರಜೆಗಳ ಪ್ರಾಣಕ್ಕಿಂತ ತನ್ನ ಪ್ರತಿಷ್ಠೆಗೆ ಅಧಿಕ ಬೆಲೆ ಕೊಡುವ ಸರಕಾರದಿಂದ ಇಷ್ಟನ್ನೆಲ್ಲಾ ನಿರೀಕ್ಷಿಸಬಹುದೇ-ಸಂದೇಹವಿದೆ!

ಆದರೆ ಪರಿಹಾರ ಹೇಗೆ? —

ಈ ಪ್ರಶ್ನೆಗೆ ಸರ್ವ ಸಮ್ಮತವಾಗುವ ಉತ್ತರವನ್ನಿತ್ತವರಿಲ್ಲ; ಯೋಗ್ಯ ಪರಿಹಾರೋಪಾಯವನ್ನು ಶೋಧಿಸಿದವರಿಲ್ಲ. ಎಲ್ಲವೂ ಚಿಂತೆ, ಭೀತಿ ಉದ್ವೇಗಗಳ ಪ್ರದರ್ಶನಗಳೇ ಹೊರತು ಸ್ಥಿತಿ ಜ್ಞಾನ, ತುಲನೆ, ಉಪ್ಯೋಗ ಪ್ರವರ್ತನೆಗಳು ಬಹಳ ಕಡಿಮೆ. ಕಾರಣ? ಮೊದಲನೆಯದಾಗಿ ಹಿಂದೀ ಸರಕಾರದ ಪರಕೀಯ ಭಾವನೆ. ಭಾರತದ ಜನ ಜೀವನಕ್ಕೂ, ಸರಕಾರೀ ಭಾವನೆಗೂ ಬಹಳ ದೂರ; ಸ್ವತಂತ್ರ ರಾಜ್ಯಭಾರವಿದ್ದಲ್ಲಿ ಪ್ರಜೆಗಳ ನೋವಿನಿಂದಾಗುವ ಪರಿಣಾಮ, ಇಲ್ಲಿ ಜನರ ಸಾವಿನಿಂದಲೇ ಆಗಬೇಕು. ಆದ್ದರಿಂದ ಆಹಾರ ವ್ಯವಸ್ಥೆಯು ಮುಂಜಾಗ್ರತೆಯಿರಲಿಲ್ಲ; ಪರಿಸ್ಥಿತಿ ಕೈ ಮೀರಿದ ಮೇಲೆ, ನಡೆಸಿದ ನಾಮ ಮಾತ್ರ ಪರಿಹಾರಗಳು ಅದಕ್ಕೆ ನಾಟಲಿಲ್ಲ. ಎರಡನೆಯದಾಗಿ ಭಾರತದ ವಿಸ್ತಾರವೂ ಏಕ ವ್ಯವಸ್ಥೆಗೊಂದು ತೊಡಕಾಗಿದೆ ಬಂಗಾಳವು ದೇಶದ ಎಲ್ಲಾ ಕಡೆಗಳಿಂದ–ಲೋಕದ ಕೆಲವು ಭಾಗಗಳಿಂದ-ತನಗೆ ಆಹಾರ ಸಾಮಾಗ್ರಿ ಬರಲಿ ಎಂದು ಆರಿದ ನಾಲಿಗೆಯಾಡಿಸುತ್ತಿದೆ. ಸಿಂಧ, ಬೊಂಬಾಯಿ, ಅಸ್ಸಾಮ್, ಬಿಹಾರುಗಳಿಗೂ ಸ್ವಲ್ಪಾಂಶ ಹೊರಗಿನಿಂದಲೇ ಬೇಕು. ಪಂಜಾಬಿಗೆ ತನ್ನಲ್ಲಿರುವ ಅಧಿಕಾಂಶವನ್ನಾದರೂ ಹೊರ ಹಾಕಿ ಮಿಕ್ಕವರ ದುಃಖದಲ್ಲಿ ಪಾಲು ಪಡೆಯುವ ಆತುರ ಕಡಿಮೆ. ಮಧ್ಯ ಪ್ರಾಂತ್ಯ, ಸಂಯುಕ್ತ ಪ್ರಾಂತ್ಯಗಳೂ ತಂತಮ್ಮ ಉತ್ಪತ್ತಿಗಳಿಂದ ಸಮಾಧಾನಗೊಂಡಿಲ್ಲವಾದರೂ ಎಲ್ಲರೊಡನೆ ಮಿಲನವಾಗುವಾಗ ಲಾಭಕ್ಕಿಂತ ನಷ್ಟಾಂಶವಧಿಕವಾಗದೇ ಎಂಬ ಸಂದೇಹದಿಂದಿವೆ. ಮದ್ರಾಸಂತೂ ದರ ನಿರ್ಣಯದ ಬದಲಿಗೆ ಬತ್ತ ನಿಯಂತ್ರಣದ ಯೋಜನೆಯಲ್ಲಿದ್ದು ತನ್ನನ್ನು ತನ್ನ ಪಾಲಿಗೇನೇ ಬಿಟ್ಟರೂ ಆಗಬಹುದೆನ್ನುತ್ತಿದೆ. ಇನ್ನು ಆಶ್ರಿತ ಸಂಸ್ಥಾನಗಳಲ್ಲೂ ಇದೇ ಏರುತಗ್ಗು; ಕೊಚ್ಚಿ ತಿರುವಾಂಕೂರುಗಳಂತಹ ಕೆಲವು ಸಂಸ್ಥಾನಗಳಲ್ಲಿ ಅಭಾವವಿದ್ದರೆ, ಇನ್ನು ಕೆಲವು ಆತ್ಮ ತೃಪ್ತಿಯಲ್ಲಿವೆ. ಹೀಗೆ ಈ ಸಮಸ್ಯಾ ನಿವಾರಣೆಯ ಮಟ್ಟಿಗೆ ತಲೆಗೊಂದು ಯೋಚನೆಯಿದೆ.

Dear Advertiser,

Now, thanks to the long drawn war, foreign business is being broken down. Now is the opportunity to push Indian commerce and industry. Your business will certainly flourish provided you seize the opportunity by the forelock and bring your concern to the notice of the public by stricking advertisements.

An advertisement in a diary is a daily advertisement which will catch the eye again and again everyday. Our Navabharat pocket diary has a wide circulation and is a means of effective advertisement. Its 1944 edition is being prepared and we have already received many advance orders for large number of copies.

An advertisement in Navabharat diary will pay you well. May we request you to kindly book your advertisement. Please expedite. Tariff rates are as follows

Full page, Rs 20/-. Half page, Rs. 10/- Back cover page, Rs 40/-. Front inside cover page, Rs.35/- Second inside cover page, Rs 30/-. (Front cover page has already been booked).

NAVABHARAT BOOK DEPOT.
Registered Publishers, UDIPI.

1944 ನೇ ಇಸವಿಯ
ನವಭಾರತ ಪೊಕೆಟ್ ಡೈರಿ
ಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ವ್ಯಾಪಾರವನ್ನು ಹೆಚ್ಚಿಸಿ ಕೊಳ್ಳಿರಿ.
ಡೈರಿಯಲ್ಲಿಯ ಜಾಹೀರಾತೆಂದರೆ ದಿನಪ್ರತಿಕೆಯಲ್ಲಿ-ಒಂದು ವರ್ಷ ಜಾಹೀರಾತುಕೊಟ್ಟಷ್ಟು ಫಲ
ದರಗಳು:—ಪುಟಕ್ಕೆ ರೂ 20/, ಅರ್ಧ ಪುಟಕ್ಕೆ ರೂ 10/-
ತ್ವರೆಮಾಡಿರಿ!! ತ್ವರೆಮಾಡಿರಿ!!
ನವಭಾರತ ಪುಸ್ತಕ ಭಂಡಾರ, ಉಡುಪಿ.



ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

— ತಾರುಣ್ಯ —
ಕೊಟ್ಟು, ವೀರ್ಯಸ್ಥಂಭನೆ ಮಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು ರಮಣ ವಿಲಾಸಿನಿ ಅತ್ಯುತ್ತಮ ಔಷಧಿ. ಡಬ್ಬಿ 1ಕ್ಕೆ ರೂ. 1.
ಮದನಮಂಜರಿ ಫಾರ್ಮಸಿ,
184 ಚೈನಾ ಬಜಾರ್ ರೋಡ್,
ಮದ್ರಾಸು.
ಪುತ್ತೂರು ಏಜಂಟರು: – ಶ್ರೀ ಫಾರ್ಮಸಿ

ಸ್ಥಿತಿಗತಿ

ಗಡಿ—ಬಿಡಿ!

ಮೊಲೊಟೊವ್, ಹಲ್, ಈಡೆನ್ ತ್ರಿರಾಷ್ಟ್ರಪರಿಷತ್ತಿನ ಕುರಿತು ಪ್ರಥಮ ಘೋಷಣೆ ರಶ್ಯದ 'ಪ್ರಾವ್ಡಾ' ಪತ್ರಿಕೆಯದು. ದ್ವಿತೀಯ ರಂಗನಿರ್ಮಾಣವೇ ಪರಿಷತ್ತಿನ ಮುಖ್ಯ ಕಾರ್ಯಕ್ರಮ. ಅದು ಆಚಾರಬದ್ಧ ನಿರ್ಣಯಮಾಡಲಿದೆ ಹೊರತು ಆಕಾಶಗಾಮಿಧೋರಣೆ ವಹಿಸುವಂತಿಲ್ಲ. ಆರ್ಥಿಕ ರಾಜಕೀಯ ವಿಷಯಗಳನ್ನು ಅದು ಚರ್ಚಿಸಬಹುದಾದರೂ ಎಲ್ಲಕ್ಕಿಂತ ಹೆಚ್ಚಿನ ಪ್ರಾಮುಖ್ಯತೆ ಮಿಲಿಟರಿಯೋಜನೆಗೆ ಎಂದು 'ಪ್ರಾವ್ಡಾ' ನಮೂದಿಸಿ, ಪರಿಷತ್ತಿನಲ್ಲಿ ಯುದ್ಧಾನಂತರದ ರಶ್ಯದ ಗಡಿ ನಿರ್ಣಯವಾಗಬೇಕೆಂಬ ಕೆಲವು ಬ್ರಿಟಿಷ್ ಅಮೆರಿಕ ಪತ್ರಿಕೆಗಳ ಅಭಿಪ್ರಾಯಕ್ಕೆ ಧಿಕ್ಕಾರ ಸೂಚಿಸಿದೆ "ಅಮೇರಿಕದ ಗಡಿ ಅಥವಾ ಕೆಲಿಫೋರ್ನಿಯದ ಸ್ಥಾನವು ಹೇಗೆ ಚರ್ಚಾಸ್ಪದ ವಿಷಯವಾಗಲಾರದೋ, ರಶ್ಯದ ಗಡಿ ನಿರ್ಣಯವೂ ಹಾಗೇನೇ ಎಂಬುದನ್ನು ಪ್ರತಿಯೋರ್ವನೂ ತಿಳಿದಿರಲಿ"- ಎಂದು ರಶ್ಯಾ ಸರಕಾರದ ಮುಖಪತ್ರ 'ಪ್ರಾವ್ಡಾ'ದ ಎಚ್ಚರಿಕೆ! ಮಿತ್ರರಾಷ್ಟ್ರೀಯರೇನಂತೆ?

ಜಪಾನಿನ ಮೇಲೆ ರಶ್ಯವನ್ನು ಬಿಡಲಾರೆವು!

ಅಮೆರಿಕದ ಸಿನೇಟರ್ ಮೋಡ್ಜ್ಗಿಯವರ ಅಭಿಪ್ರಾಯದಂತೆ ಸೈಬೇರಿಯಾ ನಿಲ್ದಾಣವನ್ನು ಮಿತ್ರರು ಜಪಾನಿನ ವಿರುದ್ಧ ಉಪಯೋಗಿಸುವಂತಾದರೆ ಒಂದು ಮಿಲಿಯ ಅಮೇರಿಕಾನರ ಪ್ರಾಣವನ್ನು ಉಳಿಸಬಹುದು. ಈ ಸಂಬಂಧದ ಪ್ರಶ್ನೆಗಳು ಅಮೇರಿಕ ಸಿನೆಟಿನ ಗುಪ್ತಾಧಿವೇಶನದಲ್ಲಿ ಬಂದಾಗ ಅಧ್ಯಕ್ಷ ರುಸುವೆಲ್ಟರ ಉತ್ತರಃ "ಜಪಾನಿನ ಮೇಲೆ ಬೀಳುವಂತೆ ರಶ್ಯವನ್ನು ಒತ್ತಾಯಿಸುವ ಸ್ಥಿತಿಯಲ್ಲಿ ಮಿತ್ರರಾಷ್ಟ್ರೀಯರೀಗ ಇಲ್ಲ. ರಶ್ಯವು ಸೈಬೇರಿಯವನ್ನು ಮಿತ್ರರ ಯುದ್ಧೋಪಯೋಗಕ್ಕೆ ಬಿಟ್ಟರೆ, ಜರ್ಮನಿಗೆ ಅಂತಿಮ ಹೊಡತಕೊಡುತ್ತಿರುವ ಈ ಕಾಲದಲ್ಲೇ ಜಪಾನು ರಶ್ಯದ ಮೇಲೆ ಬೀಳುವಂತಾಗುವದು" ಹಾಗಾಗಬೇಕು-ಜರ್ಮನಿಯಂತೆಯೇ ಜಪಾನೂ ರಶ್ಯದ ಮೇಲೆ ಬೀಳುವ ದೃಶ್ಯವನ್ನು ಕಂಡೇ ಸಾಯಬೇಕು ಎಂದು ಕೆಲವು ಅಮೇರಿಕಾನರ ಬಯಕೆ?

ಸಂಯುಕ್ತ ರಾಜ್ಯಘಟನೆ.

ನವದಿಲ್ಲಿಯ ರಾಜ ಸಂಘದಲ್ಲಿ ಭಾಷಣ ಮಾಡುತ್ತಾ ಲೋರ್ಡ್ ಲಿನ್‌ಲಿತ್ ಗೋರವರು ಹಿಂದುಸ್ಥಾನದ ಸಂಯುಕ್ತ ರಾಜ್ಯಭಾರ ಘಟನೆಯಲ್ಲಿ ತನಗಿರುವ ವಿಶ್ವಾಸವನ್ನು ಪುನರುಚ್ಚರಿಸಿದರು. "ಕೆಲವು ವಿಶಿಷ್ಟ ವಿದ್ಯಮಾನಗಳಿಗನುಗುಣವಾಗಿ ಹೊಂದಿಕೊಂಡು ರಚಿಸಲ್ಪಡುವ ಸಂಯುಕ್ತಘಟನೆಯೇ ಭಾರತದ ಭವಿಷ್ಯಕ್ಕೆ ಯೋಗ್ಯವಾದುದು"-ಎಂದು ವೈಸರಾಯರ ಅಭಿಪ್ರಾಯ. "ನಾವೆಲ್ಲಾ ಆಧುನಿಕ ಸ್ಥಿತಿಗನುಸಾರ ವರ್ತಿಸಲು ಬಾಧ್ಯರಿದ್ದೇವೆ. ಬೇರೆ ಬೇರೆ ವಿಭಾಗಗಳೊಳಗಿನ ಸಂಬಂಧಗಳೆಷ್ಟು ಲಘುವಾಗಿಯೇ ಇರಲಿ-ಆದರೆ ಅವು ಇವೆ; ಇದ್ದೇ ಇವೆ. ಅವುಗಳ ಸಾಮರ್ಥ್ಯ ಮತ್ತು ವೈಶಿಷ್ಟ್ಯವನ್ನು ಅಲ್ಲಗಳೆಯುವದು ಅಸಾಧ್ಯ"-ವೈಸರಾಯರ ಮಾತು. ಇದನ್ನು ಕೇಳಿದ ಮಿ. ಜಿನ್ನರು ಲೋರ್ಡ್ ಲಿನ್‌ಲಿತ್ ಗೋರವರು ಹೊರಡುವ ದಿನವನ್ನು ಪಾಕಿಸ್ತಾನ್ ಸಮರ್ಥಕರೆಲ್ಲಾ ,ಸಂತೋಷದ ದಿನವಾಗಿ ಆಚರಿಸಬೇಕೆಂಬ ಆಜ್ಞೆ ಹೊರಡಿಸುವರೇನೊ!

ಮನ ಮಹಾತ್ಮೆ

"ಜರ್ಮನ್ ಜನತೆಯು ತನ್ನ ಮನೋದಾರ್ಢ್ಯವನ್ನು ಕಳಕೊಳ್ಳದಿದ್ದರೆ ಯುದ್ಧವೆಂದಿಗೂ ಅಪಜಯಹೊಂದುವಂತಿಲ್ಲ" ಬರ್ಲಿನಿನಲ್ಲಿ ಕಳದ ವಾರ ನೇರಿದ ನಾಜೀ ಪಕ್ಷದ ಸಭೆಯಲ್ಲಿ ಹಿಟ್ಲರರ ಭಾಷಣ. 'ಆಯುಧಗಳ ಶಕ್ತಿಯಷ್ಟೇ ಅಂತರಂಗ ಶಕ್ತಿಯೂ ವಿಜಯಕ್ಕಗತ್ಯ'-ಇದೂ ಹಿಟ್ಲರರ ಮಾತೇ. "ಜರ್ಮನ್ ಜನತೆಯಲ್ಲಿ ನಿರಾಶಾವಾದವೆಂಬುದಿಲ್ಲವೇ ಇಲ್ಲ. ಎಲ್ಲಿಯಾದರೂ ಅದು ತೋರಿಬಂದರೆ ದಯೆದಾಕ್ಷಿಣ್ಯವಿಲ್ಲದೆ ಶಿಕ್ಷಿಸಲ್ಪಡುವದು. ಯಾವನೇ ಆದರೂ, ವೈರಿಯ ಕೆಲಸಮಾಡಿದರೆ-ಅಸ್ತಿತ್ವಕ್ಕಾಗಿ ಅತಿ ಕಠಿಣ ಹೋರಾಟದಲ್ಲಿರುವ ಜರ್ಮನ್ ಜನತೆಯಲ್ಲಿ ನಿರಾಶೆಯನ್ನು ಹರಡುವ ಮೂಲಕ ಬೆಂಗಡೆಯಲ್ಲಿ ಶಿವಿವರೆ-ಅದರ ಬೆಲೆಯಾಗಿ ಮತ್ತು ಅನ್ಯರಿಗೊಂದು ಎಚ್ಚರಿಕೆಯಾಗಿ ಪ್ರಾಣ ಕೊಡಲೇಬೇಕು"-ಗೆಸ್ಟ್ಪೋ ನಾಯಕ ಹಿಮ್ಲರನ ಮಾತು. ಮೇಲಿನ ಮಾತುಗಳನ್ನು ಕೇಳಿದ ಮೇಲೆ ನಿರಾಶಾವಾದ ಹರಡುವವರೇ ನಿರಾಶೆಗೊಳ್ಳದೆ ವಿಧಿಯುಂಟೆ?

ಇಬ್ಬರ ತ್ರಿಶಂಕು ಸ್ಥಾನ

ಕಳೆದ ವಾರದ ಎರಡು ಮುಖ್ಯ ಸಂಬಂಧ ನಿರ್ಮಾಣಗಳು ಇಬ್ಬರಿಗೆ ತ್ರಿಶಂಕು ಸ್ಥಾನ ಕೊಟ್ಟಿವೆ. ಪೋರ್ಚುಗಲ್ ಸರ್ವಾಧಿಕಾರಿ ಸಾಲಾಝಾರರು ಯುದ್ಧಗತಿಯನ್ನು ಗಮನಿಸಿ ಅಟ್ಲಾಂಟಿಕಿನ ತಮ್ಮ ನಿಲ್ದಾಣ ಅಝೋರ್ಸನ್ನು ಮಿತ್ರರಾಷ್ಟ್ರೀಯರ ಉಪಯೋಗಕ್ಕೆ ಕೊಟ್ಟುದರಿಂದ ನೆರೆಯ ರಾಷ್ಟ್ರ ಸ್ಪೈನಿನ ನಾಯಕ ಜನರಲ್ ಫ್ರಾಂಕೋ ತ್ರಿಶಂಕುವಾಗಿದ್ದಾನೆ; ತನ್ನ ಪ್ರಜೆಗಳ ಮೇಲೆ ವಿಷಗಾಳಿ ಬಿಟ್ಟ ಪ್ರಲಯ ಭೈರವ ಮಾರ್ಶಲ್ ಬೊಡೊಗ್ಲಿಯೋ ಸರಕಾರವನ್ನು ಮಿತ್ರರಾಷ್ಟ್ರೀಯರು ಮನ್ನಿಸಿದುದರಿಂದ ಮಿತ್ರರ ಮಿತ್ರ ಅಬಿಸೀನಿಯಾ ರಾಜರು ತ್ರಿಶಂಕು ಸ್ಥಾನಕ್ಕೇರಿದ್ದಾರೆ. 'ಇದಕ್ಕೇನು ಪರಿಹಾರ?'-ಎಂಬ ಚಿಂತೆ ಫ್ರಾಂಕೋ ಮತ್ತ ಹೈಲಿಸಿಲಾಸಿ, ಇಬ್ಬರಿಗೂ ತಾಗಿದೆ ಈ ಚಿಂತಕರೇ ಜತೆಯಾಗಿ ಲೋಕ ಶಾಂತಿ ಪ್ರಯತ್ನಕ್ಕೆ ಹೊರಡುವ ಅದೊಂದು ಉಪಾಯ ಮಾಡಬಾರದೇಕೆ?

ಏಕರೂಪಬೇಕು.

ನವದಿಲ್ಲಿಯಲ್ಲಿ ಜರಗಿದ ಆಹಾರ ಪರಿಷತ್ತನ್ನು ಮುಕ್ತಾಯಗೊಳಿಸುವಾಗ ಆಹಾರ ಮಂತ್ರಿ ಶ್ರೀ ಶ್ರೀವಸ್ತವರಂದರು, "ಹಿಂದುಸ್ಥಾನಕ್ಕೆಲ್ಲಾ ಏಕರೂಪೀ ಆರ್ಥಿಕ ಧೋರಣೆಯಿಲ್ಲದಿದ್ದರೆ ಆಹಾರ ಸಮಸ್ಯಾ ಪರಿಹಾರವು ಅತಿ ಕಷ್ಟವೇ ಸರಿ"- "ಆಹಾರ ಸಮಸ್ಯೆ ತೀರ್ಮಾನ ಹೊಂದಬೇಕೋ, ಕೇಂದ್ರ ಹತೋಟಿ-ಹತೋಟಿಯೆಂದರೆ ಕೇಂದ್ರದ್ದೊಂದೇ—ಇರಬೇಕು" —ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರು ಒತ್ತಿ ಹೇಳಿದರು. ಆಹಾರ ಮತ್ತು ಸುಭಿಕ್ಷೆಯ ಹೆಸರು ಹೇಳಿ ಈ ರೀತಿ ಅಖಿಲ ಭಾರತವನ್ನು ಅವಿಭಕ್ತವಾಗಿ ಇಡುವ ಒಳ ಸಂಚು ಕ್ವಯದ್ ಅಝಾಮರ ಅವಗಾಹನೆಗೆ ಬಂದೊಡನೆ ಖಂಡಿಸಲ್ಪಡುವ ನಿರೀಕ್ಷೆಯಿದೆ.

ಆಂಧ್ರರ ಆಕ್ರಮಣ.

ಕನ್ನಡ ನಾಡಿನದಾದ ಬಳ್ಳಾರಿಯಲ್ಲಿ ಆಂಧ್ರ ಮಹಾಸಭೆಯ 24ನೇ ಅಧಿವೇಶನವನ್ನು ಕರೆದ ವರ್ತನೆಯನ್ನು ನಿಷೇಧಿಸಿ ಸರಕಾರಕ್ಕೆ ವಿನಂತಿಗಳು ಹೋಗಿವೆ. ಕನ್ನಡಿಗರ ನಿಷೇಧ ಪ್ರದರ್ಶನಗಳಾಗಿವೆ; ಕಳೆದ ತಾ. 17ನೇ ಆದಿತ್ಯವಾರವನ್ನು ನಿಷೇಧ ದಿನವಾಗಿ ಆಚರಿಸಿಯಾಗಿದೆ. ಬೆಂಗಳೂರಿನ ಕರ್ನಾಟಕ ಸಾಹಿತ್ಯ ಪರಿಷನ್ಮಂದಿರದಲ್ಲಿ ಸೇರಿದ ಸಭೆಯಲ್ಲಿ ಶ್ರೀಗಳಾದ ಶ್ರೀಕಂಠಯ್ಯ, ಮಾಸ್ತಿ, ಗುಂಡಪ್ಪರಂತಹ ಹಿರಿಯರೂ ಕ್ರೋಧ ಪ್ರದರ್ಶಿಸಿದ್ದಾರೆ. ಇಷ್ಟೊಂದು ಗೊಂದಲವನ್ನು ಮುಂದಾಗಿ ನಿರೀಕ್ಷೆಯೇ ಆಂಧ್ರರು ಸಮ್ಮೇಲನ ಸಿದ್ಧತೆ ನಡಿಸಿರಬಹುದು. ಅವರು ಜನ್ಮತಃ ಆಂಧ್ರರು— ನಾವು ನೊನ್ನೆ ವರೆಗೂ ಆಂಧರು!

ಉಡುಪಿ:—ದ. ಕ. ಜಿಲ್ಲಾ ನಾರ್ದರ್ನ್ ಇಂಟರ ಸ್ಕೂಲ್ ಎತ್ಲೆಟಿಕ್ ಎಸೋಸಿಯೇಶನ್‌ನವರ ನೇತೃತ್ವದಲ್ಲಿ ಜೂನಿಯರ್ ಕ್ರಿಕೆಟ್ ಪಂದ್ಯಾಟಗಳು ಜರಗಿದವು. ಉಡುಪಿ ಕ್ರಿಶ್ಚನ್ ಹ್ಯಾಸ್ಕೂಲ್ ಮತ್ತು ಕಲ್ಯಾಣಪುರ ಮಿಲಾಗ್ರಿಸ್ ಹ್ಯಾಸ್ಕೂಲ್‌ಗಳೊಳಗೆ ಉಡುಪಿ ಕ್ರಿಶ್ಚನ್ ಹ್ಯಾಸ್ಕೂಲಿನವರೂ ಉಡುಪಿ ಮತ್ತು ಮಲ್ಪೆ ಬೋರ್ಡ್ ಹೈಸ್ಕೂಲ್‌ಗಳೊಳಗೆ ಉಡುಪಿ ಬೋರ್ಡ್ ಹೈಸ್ಕೂಲಿನವರೂ ಜಯಶೀಲರಾದರು. ಫೈನಲ್ಸ್‌ನಲ್ಲಿ ಉಡುಪಿ ಬೋರ್ಡ್ ಹ್ಯಾಸ್ಕೂಲ್‌ನೊಂದಿಗೆ ಆಡಿ ಉಡುಪಿ ಕ್ರಿಶ್ಚನ್ ಹೈಸ್ಕೂಲ್‌ನವರೇ ಗೆದ್ದಿರುತ್ತಾರೆ.

ಕುಂದಾಪುರ:—ಬೈಂದೂರು, ಬಸ್ರೂರು, ವಂಡ್ಸೆ, ಕುಂದಾಪುರ (ಹೆಂಗಸರ ಸೀಟು) ಸರ್ಕಲ್‌ಗಳ ಜಿಲ್ಲಾ ಬೋರ್ಡ್ ಉಪಚುನಾವಣೆಯು ತಾ 23-11-43ಕ್ಕೆ ನಡೆಯಲಿದೆ. ಈ ಸಂಬಂಧದ ಶಿಫಾರಸು ಪತ್ರಗಳನ್ನು ಕುಂದಾಪುರ ಡಿ. ಬೋರ್ಡ್ ಬಂಗ್ಲೆಯಲ್ಲಿ ಇದೇ ತಾ. 21, 22ಕ್ಕೆ ಕೊಡತಕ್ಕದ್ದು. ತಾ 23ಕ್ಕೆ ಅವುಗಳ ತನಿಕೆ ನಡೆಯಲಿದೆ.

ಹಿರಿಯಡ್ಕ ಕಟಪಾಡಿ ಸರ್ಕಲುಗಳ ಜಿಲ್ಲಾ ಬೋರ್ಡ್ ಉಪಚುನಾವಣೆ.

ಯು ತಾ 18ರಲ್ಲಿ ಜರಗಿ 750 ಓಟುಗಳ ಬಹುಮತದಿಂದ ಶ್ರೀ. ಎ. ಎಂ. ನಾಗಣ್ಣ ಹೆಗ್ಡೇರೂ (ಶ್ರೀ- ಎಂ. ತಿಮ್ಮಪ್ಪ ಹೆಗ್ಡೇರು ಪ್ರತಿಸ್ಪರ್ಧಿಗಳು). 64 ಓಟುಗಳ ಬಹುಮತದಿಂದ ಶ್ರೀ. ಎಂ. ಶ್ರೀನಿವಾಸ ಮಿತ್ತಂತಾಯರು (ಶ್ರೀ. ಎಂ. ಆರ್. ಕುಂಜೂರರು ಪ್ರತಿಸ್ಪರ್ಧಿಗಳು) ಆರಿಸಿ ಬಂದಿರುವರು.

Advt.

ಕಿರಿಯರ ಪ್ರಪಂಚದ ತೊದಲ್ನುಡಿ ಗ್ರಂಥಮಾಲೆಯ ಎರಡು ಹೊಸ ಪ್ರಕಟಣೆಗಳು

ಪ್ರಸಿದ್ಧ ಹಿಂದೀ ಸಾಹಿತಿಗಳಾದ ದೇಶಭಕ್ತ ... ಗೋ ... ಪ್ರಸಾದ್ ಎಂ. ಎಲ್. ಎ. (ಸೆಂಟ್ರಲ್) ಇವರು ಬರೆದ ಹಿಂದೀ ನಾಟಕದ ಕನ್ನಡ ಅನುವಾದ

ಪ್ರಕಾಶ

(ಅನುವಾದಕಿ:— ಶ್ರೀ. ಸರಸ್ವತಿಬಾಯಿ ರಾಜವಾಡೆ

ಉತ್ತಮ ಸಾಮಾಜಿಕ ರಾಜಕೀಯ ನಾಟಕ.

ಬೆಲೆ ರೂ. 1-12-0

ರೂ 2-0 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟು ಮಾಡಲಾಗುವುದು.

ವಿಖ್ಯಾತ ಗ್ರಂಥಕಾರರಾದ ಶ್ರೀ. ಎ. ಎಸ್. ಪಂಚಾಪಕೇಶ ಅಯ್ಯರ್, ಎಂ. ಎ., ಐ. ಸಿ. ಯಸ್., ಬಾರ್-ಎಟ್-ಲಾ, ಎಫ್. ಆರ್. ಎಸ್. ಎಲ್., ಇವರು ಇಂಗ್ಲಿಷಿನಲ್ಲಿ ಬರೆದ

TALES OF IND

ಕಥಾವಳಿಯ ಕನ್ನಡ ಅನುವಾದ

ಭಾರತೀಯ ಕತೆಗಳು

ಅನುವಾದಕರು:-ಶ್ರೀ ಕೊರಡ್ಕಲ್ ಶ್ರೀನಿವಾಸರಾಯರು.

೧೫ ಕತೆಗಳು ಬೆಲೆ 0-14-0

ರೂ 1-0 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟು ಮಾಡಲಾಗುವುದು

ಪ್ರತಿಯೊಬ್ಬ ಕನ್ನಡಿಗನೂ ಓದಲೇಬೇಕಾದ ಅಪೂರ್ವ ಪುಸ್ತಕಗಳು. ನಮ್ಮಲ್ಲಿ ಸಿಗುವ ... ರ ಪುಸ್ತಕಗಳ ಕೆಟಲಾಗಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ,

ದಿವಿಷ್ಯನ್ ಪಬ್ಲಿಷರ್ಸ್

ಉಡುಪಿ.

ಪ್ರಕಟಣೆ.

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisserri.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ- ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ಕಳುಹಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುನ್ನಿರಾಮನ್,
ಮೇನೇಜರ್.

The Canara Banking Corporation Limited.
(Incorporated in British India with limited Liability)
ESTD: 1906.

ANNOUNCEMENT.

A Branch of the Bank will be opened shortly at:-

BANGALORE CITY,
(ARCOT SREENIVASACHARS STREET.)

ನವಯುಗ
ಉಡುಪಿ, ಗುರುವಾರ, ೨೧-೧೦-೧೯೪೩

ಮತ್ತೊಂದು ಬಾಣ!

ಇದೇ ತಾ 16ರಲ್ಲಿ, ಹಿಂದೀ ಸರಕಾರದ ಓರ್ಡಿನನ್ಸ್ ಬತ್ತಳಿಕೆಗೆ 'ಅಡಿಮೇಲು ಕೃತ್ಯಗಳ ನಿವಾರಣ' (Subversive Activities Ordinance) ವೆಂಬ ಅತ್ಯುಗ್ರಬಾಣವೊಂದು-ಹೊಸತಾಗಿ ಸೇರಿದೆ. 'ಯಾರಾದರೂ ಏನಾದರೂ ವಿನಾಶದಾಯೀ ಕಾರ್ಯಮಾಡಿದರೆ-ಅಥವಾ ಯಾವುದೇ ರೀತಿಯಿಂದ ಹೇಗಾದರೂ, ಕಾಯಿದೆ, ಅಧಿಕಾರ, ಇಲ್ಲವೇ ಕಾರಣವಿಲ್ಲದ ಉದ್ಗಾರ ಅಥವಾ ಕೃತ್ಯ, ಮುದ್ರಣ, ಪ್ರಕಟಣೆ, ಹಂಚೋಣ, ಜರುಗಿಸುವಿಕೆಗಳನ್ನು ಮಾಡಿದರೆ-ವಿನಾಶದಾಯೀ ವಿಷಯಗಳಿರುವ ಯಾವುದೇ ದಾಖಲೆಗಳಿದ್ದರೆ-ಅಂಥವರು ಜನ್ಮಾವಧಿ ಶಿಕ್ಷೆ ಅಥವಾ ಹತ್ತು ವರುಷಗಳ ಸಜೆ ಮತ್ತು ಜುಲ್ಮಾನೆಗೊಳಗಾಗುವರು. ಕಾಯಿದೆಬದ್ಧ ಅಧಿಕಾರ ಅಥವಾ ಕಾರಣವಿಲ್ಲದೆ ವಿನಾಶಾತ್ಮಕ ವಿಷಯವಿರುವ ದಾಖಲೆಗಳು ಯಾರೊಡನಾದರೂ ಇದ್ದರೆ ಅಂಥವರು ಹೆಚ್ಚೆಂದರೆ 10 ವರುಷ ಸಜೆ ಮತ್ತು ಜುಲ್ಮಾನೆಗೊಳಗಾಗುವರು"

ವಿನಾಶದಾಯೀ ಕೃತ್ಯಗಳಿಗೆ-ಆಧಾರರಹಿತ ಸುದ್ದಿಗಳಿಗೆ- ವ್ಯತ್ಯಸ್ತವಾಗಿ ಹೋದುವ ಯಾವ ಕಾನೂನಿಗಾದರೂ ವಿಚಾರವಂತರ ಸ್ವಾಗತವಿದೆ. ಮಿಕ್ಕ ಯಾವ ಭಾಗದಲ್ಲಿ ಹಿಂದೀ ಸರಕಾರದ ಮೇಲೆ ಆರೋಪವಿದ್ದರೂ, ಈ ವರ್ಗದ ಕಾನೂನು ರಚನೆಯ ಪಟ್ಟಿಗೆ ಅದು ಅಷ್ಟು ಕೊರತೆಯನ್ನು ತೋರಿಸಿಲ್ಲ. ಎಲ್ಲಾ ವಿಧದ ದುಷ್ಕೃತ್ಯಗಳನ್ನೂ ಆಹುತಿಗೊಳ್ಳುವಂತೆ ಬಗೆಬಗೆಯ ವಿಶೇಷ ಶಾಸನಗಳು ಈ ಮೊದಲೇ ಜ್ಯಾರಿಯಲ್ಲಿದ್ದುವು. ಅಂದ ಮೇಲೆ ವೈಸರಾಯರಿಗೆ ಈ ನೂತನಾಸ್ತ್ರ ಪ್ರಯೋಗದ ಪ್ರೇರಣೆಕೊಟ್ಟ ವಿಶೇಷ ವಿದ್ಯಮಾನವಾವುದು? ಪ್ರಾಯಶಃ ಮದ್ರಾಸಿನ ಮೋಟಾರ ನಾಮ ಮಾತ್ರ ಧಾಳಿಯಿಂದೆದ್ದ ಗೊಂದಲ; ಬರ್ಮಾಕ್ರಮಣದ ಕಾಲ ಸನ್ನಿಹಿತವಾಗುತ್ತಿರುವಾಗ, ದೇಶದೊಳಗಡೆ ಏನೇನೋ ಹುಟ್ಟಿಕೊಳ್ಳಬಹುದೆಂಬ ಸಂದೇಹ. 'ಕಾರಣವಿಲ್ಲದ ಅಸಂಬದ್ಧ'ಗಳನ್ನು ನಿರ್ನಾಮ ಮಾಡಲು ಮುಂದೆ ಬಂದಿರುವ ಮೇಲಿನ ಕಾನೂನಿಗೂ ಮೇಲಿನ ಕಾರಣವಿರಲೇಬೇಕು.

ಯುದ್ಧ ಕಾಲದ ಕಾನೂನಿನ ಕಾಠಿಣ್ಯತೆಗೆ, ವೈದ್ಯನ ನಿಷ್ಠುರತೆಯ ಸ್ಥಾನವಿದೆ; ಸಹಜ ಕ್ಷಮೆಯಿದೆ. ಆದರೆ ಆ ನಿಷ್ಠುರತೆಯು ವೈದ್ಯನದೇ ಆಗಿರಬೇಕು ಹೊರತು ವೈರಿಯದಾಗಿರಬಾರದು. ಯುದ್ಧಪ್ರಸ್ತ ರಾಷ್ಟ್ರಗಳಲ್ಲೆಲ್ಲಾ ಇಂತಹ ಕಠಿಣ ನಿರ್ಬಂಧಗಳಿವೆ; ರಾಷ್ಟ್ರ ಪಾಲನಾ ದೃಷ್ಟಿಯಿಂದ ಅವುಗಳ ಕಾಠಿಣ್ಯತೆಯು ಕ್ಷಮಿಸಲ್ಪಟ್ಟಿದೆ. ಹಿಂದುಸ್ಥಾನದ ಗಡಿಯೊಳಗೆ ಈ ತನಕ ಯುದ್ಧ ಬಂದಿಲ್ಲ, ಆದರೂ ಅದು ಬಂದಂತೆಯೇ ಎಂದು ಭಾವಿಸಿ ಇಂತಹ ವಿಶೇಷ ಶಾಸನ ಹೊರಡಿಸುವ ಆವಶ್ಯಕತೆ ಬಿದ್ದಿದೆ. ಇದಕ್ಕೇನು ಕಾರಣ? ಗುಂಡು ಹಾರುವ ಮೊದಲೇ ಜನರ ಗುಂಡಿಗೆ ಹಾರಬೇಕಾದರೆ, ಇಂತಹ ಅಪಸ್ಮಾರಕ್ಕೊಂದು ಪ್ರತ್ಯೇಕ ಕಾರಣವಿರಲೇಬೇಕಲ್ಲವೇ? ಕಾನೂನು ನಿರ್ಬಂಧಗಳು ದಿಗಿಲನ್ನು ನಿವಾರಿಸಲಾರವು-ಅದರ ಬದಲು ಪ್ರದರ್ಶನವನ್ನು ಮಾತ್ರ ತಡೆಗಟ್ಟಬಲ್ಲವೆಂಬುದಕ್ಕಿಂತ ಮಿಕ್ಕಿ ಸರಕಾರದ ನಿರೀಕ್ಷೆ ಕೂಡಾ ಇರಲಾರದು. ಆ ದಿಗಿಲನ್ನೇ ಧೀರತನವಾಗಿ ಮಾರ್ಪಡಿಸುವ ವಿಧಾನವು ಇದಕ್ಕಿಂತ ಉತ್ತಮವಾದುದೆಂಬುದರಲ್ಲಿ ಅನುಮಾನವಿಲ್ಲವಷ್ಟೆ? ಇಲ್ಲಿ ಮುಂದೆ ಬರುವ ಪ್ರಶ್ನೆ:- ಸರಕಾರವು ಆ ಸಹಜ ಹಾದಿಯನ್ನೇ ಏಕೆ ತುಳಿಯಬಾರದು? ರಾಷ್ಟ್ರದ ಬಯಕೆಯಂತೆ ಮುಂದಾಗಿ ಪ್ರವರ್ತಿಸುವುದನ್ನೇಕೆ ಬಿಡಬಾರದು? ಭಯ, ಸಂದೇಹಗಳೆಂದರೆ ಕತ್ತರಿಸಿದಷ್ಟು ಚಿಗುರುವ ವರ್ಗಗಳು- ಬೇರು ಸಮೇತ ಕಿತ್ತರೇನೇ ಅವುಗಳ ನಿರ್ನಾಮ. ಆಡಳಿತೆಯಲ್ಲಿರುವ ಅತೃಪ್ತಿಯೊಂದೇ ಭಾರತೀಯರ ದಿಗಿಲಿನ ಮೂಲ. ಸರಕಾರವು ಈ ಗುಟ್ಟನ್ನರಿತೂ ಮರೆ ಮಾಚಬಾರದು. ಫೇಸಿಸ್ಟ ವಿರೋಧದಲ್ಲಿ-ದೇಶ ರಕ್ಷಣಾ ಪ್ರಯತ್ನದಲ್ಲಿ-ನೆಹರುಗಳಂತಹ ರಾಷ್ಟ್ರ ಮುಖಂಡರ ಮನೋಧರ್ಮವು ಸರಕಾರೀ ಧೋರಣೆಗಿಂತ ಎಷ್ಟೋ ಮುಂದಿದೆ. ಈ ಸತ್ಯ ಸ್ಥಿತಿಯನ್ನು ಮರೆತು ಬಿಡುವಷ್ಟು-ಈ ಸತ್ಸಂಬಂಧವನ್ನು ಕಡೆಗಣಿಸುವಷ್ಟು-- ಮಹದನ್ಯಾಯವು ರಾಷ್ಟ್ರ ಮುಖಂಡರಿಂದಾದ ನಿದರ್ಶನ ಸರಕಾರೀ ದೃಷ್ಟಿಯಿಂದ ನೋಡಿದರೂ ಕಾಣುವಂತಿಲ್ಲ. ದೇಶದ ಪರೀಕ್ಷಾ ಕಾಲ ತೀರಾ ಸಮೀಪಿಸಿದೆ. ಇಂತಹ ಕಠಿಣ ಸನ್ನಿವೇಶದಲ್ಲಿ ಸರಕಾರವು ಉದಾರ ಧೋರಣೆಯನ್ನಲ್ಲವಾದರೆ, ಸ್ವಕಾರ್ಯ ಸಾಧನೆಯ ತುಲನಾತ್ಮಕ ಬುದ್ಧಿಯನ್ನಾದರೂ ಪ್ರದರ್ಶಿಸಬೇಕು. ರಾಷ್ಟ್ರದ ಮನೋದಾರ್ಢ್ಯತೆಗಾಗಿ ಮುಖಂಡರ ಬಿಡುಗಡೆಯಾಗಬೇಕು.

ದುರ್ಬೀನು

ಉಯ್ಯಾಲೆಯಲ್ಲಿ ಕುಳಿತವನು ಹಿಂದೆ-ಮುಂದೆ ಓಲಾಡಿಯಾನು; ಪಹರೆ ಕುಳಿತವನು ಕದಲಲಾರ. ವಿನೋದ ಜೀವಿಯಲ್ಲಿ ಇಳಿತ ಭರತವಿದ್ದೀತು; ವಿಚಾರಿ ದೃಢತೆಯಲ್ಲಿರುತ್ತಾನೆ.

೦೦ ೦೦ ೦೦

ಕೆಂಡ ನೀರು ಹೊಯ್ದಾಗ ನಂದುತ್ತದೆ; ಸುಣ್ಣದ ಚಿಪ್ಪು ನೀರು ಹೊಯ್ದಾಗಲೇ ಬೆಂಕಿ ಹುಟ್ಟಿ ಕುದಿಯುತ್ತದೆ. ವ್ಯಕ್ತ ಕ್ರೋಧ ಶಾಂತಿಭೋದೆಯಿಂದ ಶಮನ; ಗುಪ್ತ ದ್ವೇಷವದರಿಂದಲೇ ಉದ್ರೇಕ.

೦೦ ೦೦ ೦೦

ಡ್ರೈವರನಿಲ್ಲದಿದ್ದರೂ ಪಹರೆಯ ಪೋಲಿಸ್ ಕೈ ತೋರಿದತ್ತ ಕಾರು ತಿರುಗಲೇ ಬೇಕು. ಸಂಚಾಲಕನ ಬಯಕೆ ಹೇಗಿದ್ದರೂ ಅಗ್ರಪ್ಪಟ ನಡೆಯಲೇ ಬೇಕು.

೦೦ ೦೦ ೦೦

ಮುಖದಲ್ಲಿ ಕ್ಷೌರಕತ್ತಿಯಾಡಿಯೇ ಸೌಂದರ್ಯ ಹೊಂದಬೇಕು; ಮುಖದಿದಿರು ದುಸ್ತರ ಚಾಳಿಯಿದ್ದೇ ಕೀರ್ತಿಹೊಂದಬೇಕು.

೦೦ ೦೦ ೦೦

ಕುಡುಕನ ತಲೆಯೊಡೆಯುವದಕ್ಕಿಂತ ಹೆಂಡದ ಗಡಿಗೆಯೊಡೆಯುವದು ವಾಸಿ; ಬಡವರನ್ನು ದೂಡುವದಕ್ಕಿಂತ ಬಡತನವನ್ನು ದೂಡುವದು ವಾಸಿ

೦೦ ೦೦ ೦೦

ಗೋಮಟೇಶ್ವರ ಅಭಿಷೇಕಕ್ಕೊಲಿಯುತ್ತಾನೆ. ಗೋಮಟನಂತಹ ಸ್ಥಾನಾಪನ್ನ ಮೂರ್ತಿಗಳು ಮುಖಸ್ತುತಿಗೊಲಿಯುತ್ತಾರೆ.

೦೦ ೦೦ ೦೦

ನಡೆದು ಗುರಿ ಸೇರಬೇಕು; ನುಡಿದು ಗುಣತೋರಬೇಕು.

೦೦ ೦೦ ೦೦

ಉರುಳಾಟಕ್ಕೆ ನಿಂತವನು ಕಾಲುಹಿಡಿಯುವದು ಕೆಡಹುವುದಕ್ಕೆ ಹೊರತು ಭಕ್ತಿಯಿಂದಲ್ಲ; ವಿರೋಧಿ ಪ್ರದರ್ಶಿಸುವ ವಿನಯವೂ ಹಾಗೇನೇ.

೦೦ ೦೦ ೦೦

ಮುಂಡಾಸು ಹಾರಿಸಿದರೆ ಮಾನ ಹೋದೀತು; ತಲೆಹಾರಿಸಿದರೆ ಪ್ರಾಣವೇ ಹೋದೀತು. ಮಾನ್ಯತ ನಟಿಸಿದವರೂ ಪರವಾ ಇಲ್ಲ; ಮಾನುಷತ್ವಕ್ಕೇನೇ ಬೀಳುವ ಧಕ್ಕೆಯನ್ನು ಸಹಿಸಲಾಗದು.

೦೦ ೦೦ ೦೦

ಹೂ ಪರಿಮಳವಿದೆ ನಿಜ-ಅದನ್ನು ಹಿಸುಕಿ ಇನ್ನಷ್ಟು ಪರಿಮಳ ಪಡೆಯುವ ಹುಚ್ಚು ಬೇಡ; ಸಜ್ಜನರಲ್ಲಿ ವಿನಯವಿದೆ ನಿಜ; ಅವರನ್ನು ಕಣಕಿ ವಿಧೇಯರನ್ನಾಗಿ ಮಾಡುವ ಭ್ರಮೆಬೇಡ.

೦೦ ೦೦ ೦೦

ಸ್ನಾನಮಾಡುವದಕ್ಕೂ ನೆರೆಬಂದು ಕೊಳ್ಳಲಿ ಎಂದು ಕಾಯಬೇಕೆಂದಿಲ್ಲ; ಆಗತ್ಯ ಕಾರ್ಯಕ್ಕೂ ಅನುಕೂಲತೆಯೊದಗಿ ಕೊಳ್ಳಲಿ ಎಂದು ತಡೆಯುವದಲ್ಲ.

೦೦ ೦೦ ೦೦

ಕೆಂಪಂಗಿಯುಳ್ಳಾದ ರಕ್ತದಕಲೆ ಗೊತ್ತಾಗುವದಿಲ್ಲ; ಕೇಡಿಗಾದ ಕೇಡೂ ಗೋಚರಿಸುವದಿಲ್ಲ.

೦೦ ೦೦ ೦೦

ಕೂದಲೇ ಇಲ್ಲದ ತಲೆಯಲ್ಲಿ ಬೈತಲೆಯೆಲ್ಲಿಂದ? ಸ್ವವ್ಯಕ್ತಿತ್ವವಿಲ್ಲದವನಿಗೆ ಸ್ವಾಭಿಮಾನವೆಂದರೇನು?

ಚೂರು-ಚೂರು

'ಈಗಿನ ಅಧಿವೇಶನದಲ್ಲಿ ನಮಗೆ ಬೇರೆ ನಾಕಷ್ಟು ಕೆಲಸವಿರುವದರಿಂದ, ಮುಂದಿನ ಪಾರ್ಲಿಮೆಂಟ್ ಕಾಮನ್ಸ್ ಅಧಿವೇಶನದಲ್ಲಿ ಒಂದು ದಿನವನ್ನು ಭಾರತೀಯ ಆಹಾರ ಪರಿಸ್ಥಿತಿಯ ಕುರಿತು ಚರ್ಚಿಸಲು ಮೀಸಲಿಡುತ್ತೇವೆ'-ಕಾಮನ್ಸ್ ಸಭೆಯಲ್ಲಿ ಚರ್ಚಿಲ್.

ಹಿಂದುಸ್ಥಾನದಲ್ಲಿ ಆಹಾರವಿಲ್ಲದೆ ಸಾಯಲು ಹೊರಟವರೂ, ಅದನ್ನು ಮುಂದಿನ ಪಾರ್ಲಿಮೆಂಟ್ ಸಭೆಯತನಕ ಮುಂದರಿಸಿಟ್ಟು, ಪ್ರಕೃತ ಅಗತ್ಯವಿರುವ ಇತರ ಕೆಲಸಗಳನ್ನು ಮಾಡಿ ಮುಗಿಸಲಿ!

●

'ಜರ್ಮನರ ಛಳಿಗಾಲದ ರಕ್ಷಣಾ ಲೈನು ಮುರಿಯಲ್ಪಟ್ಟಿತು'-ಮೋಸ್ಕೋದಿಂದ ಯುದ್ಧ ವಾರ್ತೆ.

ಹೀಗಾದುದು ಹಿಮಗಾಲ ಕಳೆದು ಬಹುಕಾಲವಾದ ಮೇಲಾದ್ದರಿಂದ, ಛಳಿ ಬಿಟ್ಟ ಮೇಲೆ ಕಂಬಳಿ ಕಸಕೊಂಡದ್ದಕ್ಕಾಗಿ ಜರ್ಮನರೂ ಸಿಟ್ಟಾಗಲಾರರು.

●

ಅಮೃತ ಬಝಾರ್ ಪತ್ರಿಕೆಯು ಪ್ರಕಟಿಸುವ ಅಭಿಪ್ರಾಯಗಳನ್ನು ಮುಂದಾಗಿ ಸರಕಾರೀ ಅಧಿಕಾರಿಗಳ ಶೋಧನೆಗೊಪ್ಪಿಸಬೇಕೆಂಬ ಆಜ್ಞೆ ಬಂದುದರಿಂದ ಅದು ಅಗ್ರಲೇಖನದ ಕಲಮುಗಳನ್ನು ಖಾಲಿಯಿಟ್ಟೇ ಪ್ರಕಟವಾಗಿದೆ

ಇನ್ನು ಕಾಗದ ಹಾಳು ಮಾಡಿದ ಅಪರಾಧ ಹೊರಿಸಿದರಾಯಿತು!

●

ಮಂಗಳೂರಿನ ಶ್ರೀಮಂತರಿಗೂ, ತಿಂಗಳಿಗೆ ರೂ. ೩ಕ್ಕೆ ಮಿಕ್ಕಿ ಆದಾಯವಿಲ್ಲದವರಿಗೆ ಕೊಡುವಂತಹ ರೇಶನಿಂಗ್ ಕಾರ್ಡು ತಲುಪಿವೆಯಂತೆ!

ಹಾಂ? ಅಲ್ಲಿಯ ರೇಶನಿಂಗ್ ನೌಕರರಿಗೂ ಸಮತಾವಾದದ ಹುಚ್ಚು ಹಿಡಿದಿರಬಹುದೇ ಎಂಬುದನ್ನು ಶೋಧಿಸಲು ಗುಪ್ತ ಪೋಲಿಸರು ಹೊರಡಬೇಕೆ?

●

ಮದ್ರಾಸ್ ನಗರ ಮತ್ತು ಚಿಂಗಲ್ಪೇಟ್ ಜಿಲ್ಲೆಯಲ್ಲಿ ಕಳೆದ ವಾರ ಬಂದ ಭಾರೀ ಮಳೆಯಿಂದ ಸುಮಾರು ನೂರು ಕೆರೆಕಟ್ಟುಗಳೊಡೆದಿವೆ. ಕಡಿಮೆಯೆಂದರೆ ನಲ್ವತ್ತಾದರೂ ಪ್ರಾಣಹಾನಿಯಾಗಿದೆ. ಎಲ್ಲವನ್ನೂ ತನಿಖೆ ಮಾಡಿ ವರದಿಯೊಪ್ಪಿಸಲು ಸರಕಾರವು ಸ್ಪೆಶ್ಯಲ್ ಆಫೀಸರರನ್ನು ನೇಮಿಸಿದೆ

ಈ ಆಫೀಸರರಿಗೆ ಬಿಸಿ-ತಂಪು; ಬೋಂಬಿನ ಬೆಂಕಿ-ಮಳೆಯ ನೀರು-ಇವುಗಳ ವ್ಯತ್ಯಾಸವನ್ನರಿಯಲಿಕ್ಕಾದರೂ ತಿಳಿದಿರಲಿ!

O

'ರಬೋಲಿನ ಜಾಪಾನೀ ನಿಲ್ದಾಣದ ಮೇಲೆ ಮೇಕರ್ಥರರು ಹೊಡೆಸಿದ ಪೆಟ್ಟಿನಿಂದ ವೈರಿಯ 199 ವಿಮಾನ, 120 ಹಡಗಗಳು ಧ್ವಂಸವಾಗಿವೆ'— ಯುದ್ಧ ವಾರ್ತೆ.

ಅಂತಹ ರಭಸದ ಹೊಡೆತದಿಂದ ಹಡಗ ವಿಮಾನಗಳೆಲ್ಲಾ ತುಂಡುತುಂಡಾಗಿರಬೇಕು-ಮೇಲಿನ ಸಂಖ್ಯೆಗಳೂ ತುಂಡುಗಳದ್ದೇ ಆಗಿರಬಹುದೇ?

—ವಿನೋದಿ.

ಸುದ್ದಿ ಸೂಚನೆ.

○ ಇಟಲಿಯಲ್ಲಿ ಮಿತ್ರರು ಹೆಜ್ಜೆ ಹೆಜ್ಜೆಗೂ ಪ್ರಬಲ ಪ್ರತಿಭಟನೆಯನ್ನಿದಿರಿಸಿಯಾದರೂ ಮುನ್ನುಗ್ಗುತ್ತಿದ್ದಾರೆ. ದಿನಹೋದಂತೆ ಜರ್ಮನರು, ಮಿಮಾನ, ಟೇಂಕು, ಧೈರ್ಯ ಸಾಹಸ ದೃಢತೆಗಳನ್ನು ಅಧಿಕ ಪರಿಮಾಣದಲ್ಲಿ ಮುಂದೊಡ್ಡುತ್ತಿರುವರು.

● ರೋಮಿನ ಕಡೆಗೆ ಧಾಳಿಯಾರಂಭಿಸಿದ ಮಿತ್ರ ಸೇನೆಗಳ ಮುಂಭಾಗದ ರೋಮ್- ಫ್ಲೋಗಿಯಾ ಹಾದಿಯಿಂದ ನಾಜಿಗಳು ತಮ್ಮ ಸೇನೆಗಳನ್ನು ಹಿಂಭಾಗದ ಪವ-ತಸ್ಥಳಕ್ಕೆ ಹಿಂದೆಗೆದಿರುವರು

○ ಇಟಲಿ ಮಧ್ಯ ರಣರಂಗದ ಕಾಪ-ವಾದಲ್ಲಿ ಜರ್ಮನರು ಅತ್ಯುಗ್ರ ಪ್ರತಿಭಟನೆ ಕೊಡುತ್ತಿದ್ದು ಅಲ್ಲಿಯ ಕಾಳಗ ಅತಿ ಭೀಕರವಾಗುವ ಸಂಭವವಿದೆ.

● ರಶಿಯಾದಲ್ಲಿಯೂ ನಾಜಿಗಳು ಮೊದಲಿನ ಹಿಂಪೋಟದ ಬದಲಿಗೆ ಉಗ್ರ ಪ್ರತಿಭಟನೆಕೊಡಲಾರಂಭಿಸಿರುವರು. ಎಲ್ಲಾ ಕಡೆಗಳಲ್ಲೂ ನಾಜೀ ಲುಫ್ಟ್‌ವಾಫ್ ವಿಮಾನಗಳು ಅಧಿಕ ಸಂಖ್ಯೆಯಲ್ಲಿ ಕಾಣಿಸಿಕೊಳ್ಳಹತ್ತಿರುವದೇ ಇತ್ತೀಚೆಗಿನ ವಿಶೇಷ.

○ ಕೆಂಪು ಸೇನೆಗೆ ಪ್ರತಿಬಂಧವೊಡ್ಡಲು ದಕ್ಷಿಣ ರಶ್ಯದಲ್ಲಿ ನಾಜಿಗಳು ದೊಡ್ಡ ಪರಿಮಾಣದ ನವಧಾಳಿ ಹೂಡಿದ್ದಾರೆ.

○ ಕೀವ್ ನಗರದ ಹೊರವಲಯದ ರಕ್ಷಣಾ ಕೋಟೆಯನ್ನು ಭೇದಿಸಲು ರಶ್ಯನರ ಅತೀವ ಸಾಹಸ ನಡೆದಿದೆ. ಕೀವಿನ ಇದಿರುಗಡೆಯ ಮಖನೋವ್ ದ್ವೀಪದಲ್ಲಿದ್ದ ಜರ್ಮನರಲ್ಲಿ ಒಬ್ಬನನ್ನೂ ಬಿಡದೆ ರಶ್ಯನರು ನಾಶಮಾಡಿದ್ದಾರೆ.

○ ಕ್ರಿಮಿಯದಲ್ಲಿರುವ 7 ಡಿವಿಜನ್ ಸೇನೆಗಳು ಎಂತಹ ಪರಿಸ್ಥಿತಿಯಲ್ಲೂ ಹಿಂದೆಗೆಯ ಬಾರದೆಂದು ಹಿಟ್ಲರರ ಆಜ್ಞೆಯಾಗಿದೆ. ಮೆಲಿಟೊಪೋಲ್ ರಶ್ಯನರ ವಶವಾದರೆ ಕಪ್ಪು ಸಮುದ್ರ ಕರಾವಳಿ ಮತ್ತುರುಮೇನಿಯದ ಎಣ್ಣೆ ಗಣಿಗಳು ಕೈ ಬಿಡುವವೆಂಬ ಭೀತಿಯೇ ಈ ಅಂತಿಮ ನಿರ್ಧಾರಕ್ಕೆ ಕಾರಣ

○ ಕೀವ್ ನಗರದಲ್ಲಿ ಜನರು ಜೀವಸಂಚಾರವಿಲ್ಲವೆಂದೂ ಆಕಾಶವಿಡೀ ಹೊಗೆಯಿಂದ ತುಂಬಿದೆ ಎಂದೂ ಒಳಗಿದ್ದುದೆಲ್ಲವನ್ನೂ ಜರ್ಮನರು ಅಗ್ನಿಗಾಹುತಿಯಿತ್ತಿದ್ದಾರೆಂದೂ ತಿಳಿದು ಬರುತ್ತದೆ.

○ ರಾಬೂಲಿನ ಜಪಾನೀ ಕೇಂದ್ರ ನಿಲ್ದಾಣಗಳ ಮೇಲೆ ಜನರಲ್ ಮೆಕ್ ಆರ್ಥರರು ನಡಿಸಿದ ಅತಿದೊಡ್ಡ ಆಕಾಶ ಧಾಳಿಯಲ್ಲಿ ಜಪಾನರಿಗೆ 199 ವಿಮಾನ, 120 ಹಡಗನಷ್ಟವಾಗಿದೆ. ಸೊಲೊಮನ್ನಿನಲ್ಲಿ ಈಗ ಮಿತ್ರರ ಪಾರುಪತ್ಯವೇ ಸ್ಥಾಪಿತವಾಯಿತೆನ್ನಬಹುದು.

○ ಅಟ್ಲಾಂಟಿಕಿನ ತನ್ನ ನಿಲ್ದಾಣವಾದ ಅಝೋರನ್ನು ಮಿತ್ರರ ಉಪಯೋಗಕ್ಕೆ ಕೊಡುವ ಒಪ್ಪಂದವನ್ನು ಪೋರ್ಚುಗಲ್ ಸರಕಾರವು ಮಾಡಿಕೊಂಡಿದೆ. ಪೋರ್ಚುಗೀಸಿಗೆ ಪೂರ್ಣ ಬೆಂಬಲದ ಆಶ್ವಾಸನೆಯನ್ನು ಮಿ. ಚರ್ಚಿಲ್ಲರಿತ್ತಿದ್ದಾರೆ.

○ ಪೋರ್ಚುಗಲ್ ಘೋಷಣೆಯಿಂದಾಗಿ ನೆರೆಯ ರಾಷ್ಟ್ರ ಸ್ಪೈನಿನ ಮೇಲೆ ತೀವ್ರ ಪರಿಣಾಮವಾಗಲಿರುವದರಿಂದ ಜ. ಫ್ರಾಂಕೋ ಕಿರಿಕಿರಿ ಅವಸ್ಥೆಗೀಡಾಗಿದ್ದಾನೆ. ಮಿತ್ರರಾಷ್ಟ್ರೀಯರು ನಾನಾ ಹಂಚಿಕೆಗಳಿಂದ ಸ್ಪೈನನ್ನೊಲಿಸುವ ಯತ್ನ ನಡೆಸಿದ್ದಾರೆ.

ಕೃತಜ್ಞತೆ.

ಶ್ರೀ. ಕೆ.ಬಿ. ಸೀತಾರಾಮ ಬೋರೆಬಲ್ಲಾಳರು ಮಗ್ಗೆರರು ಇನ್ನಂಜೆ ಬಂಟರ ಯಾನೆ ನಾಡವರ ವಿದ್ಯಾರ್ಥಿ ಭವನದ ಕಟ್ಟಡದ ಸಹಾಯಾರ್ಥಕವಾಗಿ ಬೊಂಬಾಯಿಗೆ ಹೋದಲ್ಲಿ-ಈ ಕೆಳಗಿನ ಮಹನೀಯರು ಈ ಕೆಳಗೆ ಕಂಡಂತೆ ಧನಸಹಾಯಮಾಡಿದುದಕ್ಕಾಗಿ- ಶ್ರೀಯುತರು ಮತ್ತು ಎಲ್ಲಾ ಕಮಿಟಿ ಮೆಂಬರರೂ ಅವರಿಗೆ ತುಂಬಾ ಕೃತಜ್ಞರಾಗಿರುತ್ತಾರೆಂದು ತಿಳಿಸುತ್ತಾರೆ.

●

ಶ್ರೀಯುತರುಗಳಾದ

1 ಡಾಕ್ಟರ್ ಯನ್. ವಿ. ಅದ್ಯಂತಾಯರು 50 0 0
2 ಕೊಟ್ಟಾರಿ ಕರಿಯಣ್ಣ ಸೆಟ್ರು 20 0 0
3 ಮೂಲ್ಕಿ ನಾರಾಯಣ ಸೆಟ್ರು 25 0 0
4 ಕಟಪಾಡಿ ವೆಂಕಪ್ಪ ಸೆಟ್ರು 21 0 0
5 ಗುತ್ತಿ ಆಯ್ಯಾದಿ ಶೇಶ ಸೆಟ್ರು 5 0 0
6 ಕಟಪಾಡಿ ಸೇರ ಸಟ್ರು 25 0 0
7 ಕೋಂಗರಪಾಡಿ ಬೊಮ್ಮಯ್ಯ ಸೆಟ್ರು 10 0 0
8 ಹೇಳಿಂಜೆ ಶೀನ ಸೆಟ್ರು 5 0 0
9 ಅಂಗರ ಬಸಪ್ಪ ಸೆಟ್ರು 25 0 0
10 ಜೆಳ್ಳಿ ಪಡುಮನೆ ರಾಮ ಸೆಟ್ರು 25 0 0
11 ಕಾಪು ಭಾಸ್ಕರ ಸೆಟ್ರು 2 0 0
12 ಪುತ್ತೂರು ಕಾಳಪ್ಪ ಸೆಟ್ರು 10 0 0
13 ಕಲ್ಮಟ್ಟ ರಾಘು ಸೆಟ್ರು 26 0 0
14 ಪಾದೂರು ಮಾಸು ಸೆಟ್ರು 10 0 0
15 ಅಜ್ಜೆ ಶೀನ ಸೇಟ್ರು 5 0 0
16 ಶಿರ್ವ ಮಟ್ಟಾರು ಮನ್ನು ಸೆಟ್ರು 10 0 0
17 ನಾಂತೂರು ಪಡುಮನೆ ರಾಜು ಸೆಟ್ರು 1. 0 0
18 ಮಾಂಗಾಳ ಮಹಾಬಲ ಸೆಟ್ರು 5 0 0
19 ಪದಾಡಿ ಕೊರಗ ಸೆಟ್ರು 5 0 0
20 ಅಜ್ಜದ ಗೋಪ ಸೆಟ್ರು 10 0 0
21 ಕೊಡೂರು ಪಡುಮನೆ ವಿಟ್ಠಲ ಸೆಟ್ರು 10 0 0
22 ಕೆರಮ ಪಾಂಡ್ಯಾರು ಒರ್ವಾಣಿ ನಾಸು ಸೆಟ್ರು 10 0 0
23 ಎಲ್ಲೂರು ಭಂಡಾರಿಮನೆ ಮುದ್ದಣ್ಣ ಸೆಟ್ರು 11 0 0
24 ಕಲ್ಲುಗುಡ್ಡೆ ಪಡುಮನೆ ರಾಮಣ್ಣ ಸೆಟ್ರು 11 0 0
25 ಪಾಂಗಾಳ ಗುರುವ ಇವರು 27 0 0
26 ಮುಂಡ್ಕೂರು ರೆಂಜಗುತ್ತು ರಾಮಣ್ಣ ಸೆಟ್ರು ಮತ್ತು ಸಹೋದರರು 115 0 0
27 ಕರ್ನಿರೆ ಮಾಗಂದಡಿ ಸರ್ವ ಸೆಟ್ರು 25 0 0
28 ಯನ್ ರಾಮಣ್ಣ ಸೆಟ್ರು 15 0 0
29 ವೆರ್ನಂಕಿಲ್ ಪಡುಬೆಟ್ಟು ಕಳಮನೆ ನಾರಾಯಣ ಸೆಟ್ರು 115 0 0
30 ಸಂಪಕ್ಕೆ ನಡಮನಗುತ್ತು ಕೊರಗ ಸಟ್ರಿ ಅಳಿಯ ... ನಾರಾಯಣ ಸೆಟ್ರು ಮಗ್ಗೆರರು 125 0 0
31 ಸೂಡಾ ಬೂತಬೆಟ್ಟು ಸೂರಪ್ಪ ಸೆಟ್ರು 5 1 0
32 ಕುರ್ಕಾಲು ಚಂದ್ರಸೆಟ್ರಿ ಮಗ ದೇಜು ಸೆಟ್ರು 25 0 0
33 ಕೆಮ್ಮಣ್ಣು ಪಡುಮನೆ ಸುಂದರ ನಾಗ ಸೆಟ್ರು 5 0 0
34 ಮೂಲ್ಕಿ ಪಡುಮನೆ ಮಂಜಯ್ಯ ಸೆಟ್ರು 10 1 0
35 ಎಲ್ಲೂರು ಕಾಂತಪ್ಪ ಇವರು 21 0 0
36 ಬೋಳ ಮಂಜಯ್ಯ ಸೆಟ್ರು 100 0 0
37 ಸೀರೆ ಗುಂಡಿಬೈಲು ಗಿರಿಯಣ್ಣ ಸಟ್ರು 25 0 0
38 ಕಟ್ಪಾಡಿ ಹೊಸ್ಮನೆ ರಾಜು ಸಟ್ರು 25 0 0
39 ಪಡುಬಿದ್ರಿ ರಾಮ ಸೆಟ್ರು 25 0 0
40 ಕೆಮ್ಮಣ್ಣು ಆದಪ್ಪ ಸೆಟ್ರು 1 0 0
41 ಕಲ್ಮಟ್ಟ ಕೋತಿ ಸೆಟ್ರು 27 0 0
42 ಇನ್ನ ಕಲ್ಲಡ್ಕ ಗೋವಿಂದ ಸೆಟ್ರು 5 1 0
43 ಪುತ್ತೂರು ನಾರಾಯಣ ಸೆಟ್ರು 5 4 0
44 ಕುತ್ಯಾರು ಪಡುದೇವಸೆ ಪುಟ್ಟಣ್ಣ ಸೆಟ್ರು 5 4 0
45 ಪಾಪೆಬೆಟ್ಟು ಕಲಾಯಿಗುತ್ತು ಲೋಕು ಸೆಟ್ರು 5 4 0
46 ಸಿಮಂತೂರು ಚಗನಸಾಪ ವೆಂಕಪ್ಪ ಸೆಟ್ರು 25 4 0
47 ಹಿ... ಕ...ಮನೆ ವಿಟ್ಠಲ ಸೆಟ್ರು 51 0 0
48 ಕಡಂದಲೆ ಎಲ್ಲೂರುಗುತ್ತು ಮಾಲಿಂಗು ಸೆಟ್ರು 51 0 0
49 ಕಡಂದಲೆ ಕೆಳಗಿನಮನೆ ದೂಮಣ್ಣ ಸೆಟ್ರು 10 0 0
50 ಅಜ್ಜೆ ತಂಬರೋಣಿ ಶ್ಯಾಮ ಸೆಟ್ರು 10 0 0
51 ಸಿಂಜೂರು ಪಡು ಕೊಟ್ರುಬೆಟ್ಟು ಕೃಷ್ಣ ಸೆಟ್ರು 75 0 0
52 ಸಿದ್ದೆ ಎಲಂಗೂರು ರಾಮಣ್ಣ ಸೆಟ್ರು 5 4 0
53 ಕಡಂದಲೆ ಉಪ್ಪಿನಡ್ಕ ಮುತ್ತಯ್ಯ ಸೆಟ್ರು 5 4 0
54 ಮೂಲ್ಕಿ ನಡ್ಸಾಲ್ ದೇಜು ಸೆಟ್ರು 5 4 0
55 ಕೇಂಜ ಬರ್ವಾಣಿ ರಾಜು ಸೆಟ್ರು 5 4 0
56 ಕಟಪಾಡಿ ಪೂರಸೆಟ್ರಿ ಮಗ ಅಣ್ಣಯ್ಯ ಸೆಟ್ರು 75 0 0
57 ಸೂಡಾ ಮಾಂಜಾಲು ಸರ್ವ ಸೆಟ್ರು 15 0 0
58 ಪಳ್ಳಿ ಹಿರಿಯಣ್ಣ ಸೆಟ್ರು 5 0 0
59 ಇನ್ನ ಹಿತ್ಲು ಸೋಮಪ್ಪ ಸೆಟ್ರು 10 0 0
60 ಮಡುಂಬು ದೊಡ್ಡಮನೆ ನಾರಾಯಣ ಸೆಟ್ರು 105 0 0
61 ಹೇರಿಂಜೆ ಕಲ್ಮಾಡಿ ಮನೆ ಮಹಾಲಿಂಗ ಸೆಟ್ರು 5 0 0
12 ಪಂಜಿಮಾರು ಪಡುಮನೆ ಮುದ್ದಣ್ಣ ಸೆಟ್ರು 5 4 0
63 ರಾಜು ಸೆಟ್ರು, ಬೊಂಬಾಯಿ 51 0 0
64 ಕುಂಜೂರು ರಾಜು ಸೆಟ್ರು 11 0 0
65 ಬೈಲಾಡಿ ಕುಕ್ಕಿಮಾರು ಶ್ಯಾಮ ಸೆಟ್ರು 151 0 0
66 ಮುಂಡ್ಕೂರು ರೆಂಜಗುತ್ತು ರಾಮ ಸೆಟ್ರು ಮಗ ಗೋಪಾಲ ಸೆಟ್ರು 25 4 0
67 ಮೂಲ್ಕಿ ಅತಿಕಾರಿಬೆಟ್ಟು ನಿಮ್ಮುಗುತ್ತು ಲೋಕಯ್ಯ ಸೆಟ್ರು 15 4 0
68 ಕಾಪು ಪಡುಗ್ರಾಮ ಬೊಮ್ಮಯ್ಯ ಮನೆ ಮಹಾಬಲ ಸೆಟ್ರು 10 4 0
69 ಪಡುಗ್ರಾಮ ಒಪ್ಪ ಸೆಟ್ರಿ ಮಗ ಮಹಾಬಲ ಸೆಟ್ರು 10 4 0
70 ಪಿಲಾರು ಪುಜಿಲಬೆಟ್ಟುಬೀಡು ಮಹಾಬಲ ಸೆಟ್ರು 11 0 0
71 ಉಪಗ್ರಾಮ ಅಮ್ಮುಂಜೆ ತೆಂಕುಮನೆ ಕೃಷ್ಣಯ್ಯ ಸೆಟ್ರು 15 0 0
72 ಪಾದೂರು ಅಚ್ಚಣ್ಣ ಸೆಟ್ರು 25 0 0
73 ಬಂಟಕಲ್ಲು ರಾಜಾಲಿ ಬೊಮ್ಮಯ್ಯ ಸೆಟ್ರು 100 0 0
74 ಸುರತ್ಕಲ್ ಬಾಳಿಕೆ ನಾರಾಯಣ ಸೆಟ್ರು 11 0 0
75 ಕಾರ್ಕಳ ಕಾಸಂಗ ಹೊಸಮನೆ ಮಹಾಬಲ ಸೆಟ್ರು 5 0 0
76 ಬರಿಂಜೆ ಮಂಜಯ ಸೆಟ್ರು 11 0 0
77 ಸೂರಿಂಜೆ ಹೊಸ್ಯಾಗೆಪಾರು ಸೇಸು ಸೆಟ್ರು 25 4 0
78 ಮೂಲೂರು ಬೈಲ-ಮನೆ ಸೀನ ಸೆಟ್ರು 25 4 0
79 ಕೆಮ್ಮಾರು ಪಡುಮನೆ ಸಂಕಪ್ಪ ಸೆಟ್ರು 25 4 0
80 ಮೂಲ್ಕಿ ಬಿಮಂತೂರು ಹೊಸ್ಮನೆ ಬಾಬ ಸೆಟ್ರು 51 0 0
81 ಬೆಳ್ವಂಜೆ ಪಡಿವಾಳ್ ಮನೆ ಸದಾನಂದ ಸೆಟ್ರು 11 0 0
82 ಬಡಗಬೆಟ್ಟು ಕಲ್ಲಡ್ಕ ಸಿದ್ದು ಸೆಟ್ರು 5 0 0
83 ಎಲ್ಲೂರುಗುತ್ತು ಬಾಬ ಸೆಟ್ರಿ ಮಗ ಸೀಲಯ್ಯ ಸೆಟ್ರು 5 0 0
84 ಕೇಂಜ ಕಿರೆಕಟ್ಟ ಮಾಸು ಸೆಟ್ರು 15 0 0
85 ಮೂಡುಬೆಟ್ಟು ತನ್ಯ ಸೆಟ್ರು 15 0 0
86 ಮಾವಂಜೆ ಕಂಡೇವು ಗುತ್ತು ಎಲ್ಲಪ್ಪನವರು. 25 0 0
87 ಪೊಲ್ಯ ಬರ್ವಾಣಿ ಕೊರಗ ಸೆಟ್ರು 25 0 0
88 ಸಂದಿಕೂರು ತಮ್ಮರಮಜಲು ಹೊನ್ನಯ್ಯ ಸೆಟ್ರು 25 0 0
89 ಕೊಂಡಾಡಿ ಪಡುಮನೆ ದುಗ್ಗಪ್ಪ ಸೆಟ್ರು 25 0 0
90 ಕದಿಕಾರು ಬೈರಂಜೆ ಚಂತ್ರೈ ಸೆಟ್ರು 10 0 0
91 ಕೈರಾಳಿ ಮೂಡುಮನೆ ನಾಗ ಸೆಟ್ರಿ ಅಳಿಯ ನಾರಾಯಣ ಸೆಟ್ರು 20 0 0
92 ಬೊಮ್ಮಾರ ಬೆಟ್ಟು ಕೈರಾಳಿ ಮೂಡುಮನೆ ಅಂತ್ಯೆ ಸೆಟ್ರು 10 0 0
93 ಮೂಲ್ಕಿ ಮುಕುಂದ ನಾರಾಯಣ ಭಟ್. 10 0 0
94 ಸೀರೆ ಬೈಲೂರು ದೇವೇಂದ್ರ ಎಸ್. ನಾಯಕ್ 10 0 0
95 ಬೋಳ ಬೊಡ್ಮಾನ್ ಬೆಮ್ಮನಗುತ್ತು ಕಾಂತು ಸೆಟ್ರು 5 4 0
96 ಶಿರ್ವ ಬೂತಬೆಟ್ಟು ನಾಗಪ್ಪ ಸೆಟ್ರು 21 4 0
97 ಕೆ. ವೆಂಕಪ್ಪ ಶೇಕಗಿರಿ ನಾಯಕ್. 51 4 0
98 ಹೂವಣ್ಣ ಸೆಟ್ರು, ಸ್ಪೆಶಲ್ ಟೀ ಹೌಸ್ 25 0 0
99 ಅನಂತ ಸೇರಿಗಾರ 10 0 0
100 ಸೂಡಾ ರಾಮಣ್ಣ ಸೆಟ್ರು 15 0 0
101 ಮೂಡಬೆಟ್ಟು ಗುತ್ತು ನಾರಾಯಣ ಸೆಟ್ರು 10 0 0
102 ಶಿರ್ವ ಕೋಡು ಗೋವಿಂದ ಹೆಗ್ಡೆ 25 0 0
103 ಶಿರ್ವ ಕೋಡು ಕೃಷ್ಣ ಹೆಗ್ಗಡ್ತಿಯರು 5 0 0
104 ತೋನ್ಸೆ ಮಹಾಬಲ ಸೆಟ್ಟರು 5 0 0
105 ಕೌಡೂರು ವೆಂಕಪ್ಪ ಹೆಗ್ಡೇರು 10 1 3
106 ಆರ್. ಆರ್. ಶೆಟ್ಟರು 10 0 0
107 ಯಮ್. ಯಸ್. ಶೆಟ್ಟರು 2 0 0
108 ಕೊರಂಗ್ರಪಾಡಿ ವೆಂಕಪ್ಪ ಶೆಟ್ಟರು 5 0 0
109 ಶಿರ್ವನಡಿಬೆಟ್ಟು ವೆಂಕಪ್ಪ ಹೆಗ್ಡೇರು 5 0 0

110 ಯುಸ್. ಸಂಜೀವ ಸೆಟ್ಟರು 10 0 0
111 ಕೆ ಪುರುಷೋತ್ತಮ ಸೆಟ್ಟರು. 5 0 0
112 ಬಳಿಕುಂಜೆ ಕೋಟಿನಾಯ ಗುತ್ತು ಗೋಪಾಲ ಸೆಟ್ಟರು. 10 4 0
113 ಸೂದ ಕಲ್ಲೊಟ್ಟು ಗುತ್ತು ವೀರಪ್ಪ ಸೆಟ್ರ ಅಳಿಯ ನಾರಾಯಣ ಸೆಟ್ರು. 25 0 0
114 ಬೇಲಾಡಿ ಕಾಂತಾವರ ಇಂದಬೆಟ್ಟು ಆನಂದ ಹೆಗ್ಡೇರು. 10 0 0
115 ಕುಡುಂದೂರು ಮುದ್ದಣ್ಣ ಸೆಟ್ರು 15 0 0
116 ಬೋಳ ಮಾನ್ಯೊಟ್ಟು ಚಂದು ಸೆಟ್ರು 25 0 0
117 ಬೋಳ ಮಾನ್ಯೊಟ್ಟು ಕಾಡ್ಯ ಸೆಟ್ರು 10 0 0
118 ಪೆಜ್ಮಾಡಿ ಕೊರಗ ಸೆಟ್ರು 5 0 0
119 ಶಿರ್ವ ಮಟ್ಟಾರು ಗೋಪ ಸೆಟ್ರು 5 0 0
120 ಬೋಳ ಮಣ್ಣಬೆಟ್ಟು ಮಹಾಬಲ ಸೆಟ್ರು 15 0 0
121 ಪೆಜ್ಮಾಡಿ ಪಡುಮನೆ ಸೇಸು ಸೆಟ್ರು 10 0 0
122 ಹಿಲಿಂಜೆ ಕಂಬಲ ಮನೆ ನರ್ಸು ಸೆಟ್ರು 10 0 0
123 ಇನ್ನಂಜೆ ಮೇಲ್ಮನೆ ಸೀನ ಸೆಟ್ರು 105 0 0
124 ಮೂಲ್ಕಿ ಕಾರ್ನೋಳಿಮನೆ ನಾರಾಯಣ ಸೆಟ್ರು 61 0 0
125 ಪಾವಂಜೂರು ಬೊಂಡಂತಿಲ್ ಬರ್ಕೆಮನೆ ಕೋಚು ಸೆಟ್ರು 5 0 0
126 ಬೋಳಪು ಗುತ್ತು ಸೂರ ಸೆಟ್ರು 5 0 0
127 ನಂದಳ್ಕೆ ಬೋಜರಾಜ ಹೆಗ್ಡೆ 10 0 0
128 ಕುತ್ಯಾರು ಪಡು ಇರಂದಾಡಿ ರಾಜು ಸೆಟ್ರು 11 0 0
129 ಪಡುಬಿದ್ರಿ ಪಾದೆಬೆಟ್ಟು ವಾಸು ಸೆಟ್ರು 21 0 0
130 ಕುಡುಂದೂರು ಸಂಜೀವ ಸೆಟ್ರು 5 0 0
131 ಯಸ್. ಯಸ್. ಶೆಟ್ಟಿ, ಮನೋಹರ ಆರೋಗ್ಯ ಭವನ 15 0 0
132 ಪಾದೆಬೆಟ್ಟು ಗ್ರಾಮ ಪಡುಮನೆ ಕಾಡ್ಯ ಸೆಟ್ರು 5 0 0
133 ಕಡೆಕಾರು ದೊಡ್ಡಮನೆ ನಾಗಪ್ಪ ಗಣಪಯ್ಯ ಹೆಗ್ಡೇರು 101 0 0
134 ಮುಂಡ್ಕೂರು ಅಂಗಡಿಗುತ್ತು ಮೋನ ಸೆಟ್ರು 25 4 0
135 ಕಳ್ಯ ಗ್ರಾಮ ಗಾಂದಟ್ಯ ಕಾಂತರ ಸೆಟ್ರು 10 0 0
136 ಸೈಗಾಂ ರೋಡ್ ಸುಬ್ಬಯ್ಯ ಸೆಟ್ರು 5 0 0
137 ಕಲ್ಲಮುಂಡ್ಕೂರು ಶಿಮ್ಮಂಜೆ ಪುರಾರಿ ದೊಂಬ ಸೆಟ್ರು 5 0 0
138 ಬೈಲೂರು ಗುತ್ತುಮನೆ ರಾಘವ ಸೆಟ್ರು 5 0 0
139 ಪಳ್ಳಿ ಸೀನ ಸೆಟ್ರು 5 0 0
140 ಬಳಿಕುಂಜೆ ಕೋಟಿನಾಯ ಗುತ್ತು ಲೋಕಯ್ಯ ಸೆಟ್ರು 5 0 0
141 ಕೆರವ. ಪಾದೆಬೆಟ್ಟು ಬಗ್ಗಪ್ಪ ಸೆಟ್ರ ಮಗ ಕರಿಯಣ್ಣ ಸೆಟ್ರು 25 0 0
142 ಕೌಡೂರು ಜೋಗಪ್ಪ ಹೆಗ್ಡೇರು 101 0 0
143 ಮೂಡಬೆಟ್ಟು ಬಾರೆಬೈಲು ಅಣ್ಣಯ್ಯ ಸೆಟ್ರು 105 0 0
144 ಸೆಟ್ಟಿ ಬೊಟ್ಟುಕೆರೆ ರಾಜು ಸೆಟ್ರು 5 0 0
145 ಪಡುಬಿದ್ರಿ ನರ್ಸು ಸೆಟ್ರು 15 0 0
146 ಅಡ್ವೆ ರುಕ್ಕ ಸೆಟ್ರು 15 0 0
147 ಸಿ. ಯಸ್. ಹೆಗ್ಡೆ, ಟೈಮ್ಸ್ ಓಫ್ ಇಂಡಿಯಾ 5 0 0
148 ಅಂಬಾಡಿಬೀಡು ನಾರಾಯಣ ಸೆಟ್ರು 25 4 0
149 ಶಿರ್ವ ಹೊಸಮನೆ ಕೃಷ್ಣ ಸೆಟ್ರು 11 0 0
150 ಮೂಡಬೆಟ್ಟು ಮಹಾಬಲ ಸೆಟ್ರು 10 4 0
151 ಬೆಳ್ಮಣ್ಣು ಕಿಟ್ಟಸೆಟ್ರ ಮಗ ಮುತ್ತಯ ಸೆಟ್ರು 25 0 0
152 ಕುಡಕ್ಕೂರು ದೇವಸ್ಯ ಬೊಮ್ಮಯ್ಯ ಸೆಟ್ರು 15 0 0
153 ಪಾದೂರು ಭಂಡಸಾಲೆ ರಾಜು ಸೆಟ್ರು 101 0 0
154 ಬೋಳ ಹೊಸ್ಮನೆ ನಾರಾಯಣ ಸೆಟ್ರು 41 0 0
155 ಸೂದ ಸಂಜೀವ ಸೆಟ್ರು 11 0 0
156 ಪೆಜ್ಮಾಡಿ ಪಡುಮನೆ ವಾಸು ಸೆಟ್ರು 11 0 0
157 ಸಿಟ್ಟಿ ಹೊಸಮನೆ ಶಾಂತಾರಾಮ ಅಡ್ಯಂತಾಯರು 15 0 0
158 ಕೆ. ವಿಟ್ಠಲ ಸೆಟ್ರು, ಶಿವಾಜಿ ಪಾರ್ಕ್ 15 0 0
159 ಯನ್. ಎಚ್. ಶೆಟ್ಟಿ, 1319 ಮೆಡೋಸ್ಟ್ರೀಟ್ 5 0 0
160 ಕೆ. ಬಿ ನಾಯಕ್, ಆರ್ಟಿಸ್ಟ್ 5 0 0
161 ಯಮ್. ಯಸ್. ಹೆಗ್ಡೇರು, ಶಿವಾಜಿಪಾರ್ಕ್ 20 0 0
162 ಸೋಮ ಸೆಟ್ರು, ನಾನಾ ಚೌಕ್ 5 4 0
163 ಗುಡ್ಡೆ ಕೊಟ್ಯಾರಿ ಮುತ್ತಯ್ಯ ಸೆಟ್ರ ಮಗ ಸೀನ ಸೆಟ್ರು 25 0 0
164 ಪಡುಬಿದ್ರಿ ಸೀನ ಸೆಟ್ರು 5 0 0
165 ಬಗ್ಗರಗುತ್ತು ನರ್ಸು ಸೆಟ್ರು 25 0 0
166 ಕಾಪು ಬಿಕ್ಕಿರಿಗುತ್ತು ಶ್ರೀಧರ ಸೆಟ್ರು 10 0 0
167 ಬಿ. ಯಸ್. ಹೆಗ್ಡೆ 1 0 0
168 ಪಾಂಗಾಳ್ಯರು ಬರ್ಪಾಣೆ ನಾರಾಯಣ ಸೆಟ್ರು 10 0 0
169 ಎಳ್ಳೂರು ಗುತ್ತು ಗುಂಡು ಆರ್. ಸೆಟ್ರು 5 0 0
170 ಮಡಂಬು ಉಚ್ಚಣ್ಣ ಸೆಟ್ರು 155 0 0
171 ಬಿ ಟಿ. ಹೆಗ್ಡೆ 2 0 0
172 ಯೆಕ್ಕಾರು ರಾಮಣ್ಣ ಸೆಟ್ರು 5 0 0
173 ಬಿ. ಯಚ್. ಶೆಟ್ರು 2 0 0
174 ಬೈಲ ಕೆಂಬಾವರ ಹೊಸಮನೆ ದೊಂಬ ಸೆಟ್ರು 15 0 0
175 ಎಲ್ಲೂರು ಕೋರಿಬೆಟ್ಟು ಬೊಲ್ಲ ಸೆಟ್ರು 15 0 0
176 ಅಡ್ವೆ ತಂಡೋಣಿ ಶ್ಯಾಮ ಸೆಟ್ರು 15 0 0
177 ಅಡ್ವೆ ಮುಂಡ್ರುಗುತ್ತು ಮುದ್ದಣ್ಣ ಸೆಟ್ರು 5 0 0
178 ಅಣ್ಕಾರ ಮುದ್ದಣ್ಣ ಸೆಟ್ರು 5 0 0
179 ನಿಡ್ಡೋಡಿ ನಾರಾಯಣ ಸೆಟ್ರು 5 0 0
180 ಕಾಪು ಶಾಂತಪ್ಪ ಸೆಟ್ರು 51 0 0
181 ಕಟೀಲಡಿ ಅಣ್ಣಯ್ಯ ಇವರು 10 0 0
182 ಕಟೀಲಡಿ ಕುಡ್ಪ ಸೇರಿಗಾರ, ಇವರು 40 0 0
183 ಎ ನರಸಿಂದಾಸ್ ಮತ್ತು ಕಂಪೆನಿ 25 4 0
184 ಎ. ಪಿ. ಭಂಡಾರ್ ಕರ್ 10 4 0
185 ಕಟೀಲಡಿ ವೆಂಕಟೇಶ್ ವಿದ್ಯಾಭಾಗರು 25 4 0
186 ಕೆ. ಕೆ. ಶೆಟ್ರು 25 0 0
187 ಬಿ. ಸಂಜೀವ ಸೆಟ್ರು 5 0 0
188 ಪಿ. ಯಮ್.ಸೆಟ್ರು, ಕೆ. ಇ ಯಮ್. ಆಸ್ಪತ್ರೆ 15 0 0
189 ಮದರ ಸೆಟ್ರು, ಬೊಂಬಾಯಿ 11 0 0
190 ಸೂರ್ಯಣ್ಣ ಸೆಟ್ರು ಮತ್ತು ಸಂಕು ಸೆಟ್ರು, ಅಂಬಾಡಿಬೀಡು 201 0 0
191 ಆಯರ್ಾಡಿ ಮೂಡುಮನೆ ತಬಾರ ಸೆಟ್ರು 101 0 0

Adv.

ವವರ ವಾರಸಂಖ್ಯೆಯು ಸುಮಾರು 1000 ಎಂದು ಯು. ಅಮೆರಿಯ-ವರಂದು ದು ನಿರಾಧಾರವಾದುದೆಂದೂ, ಇತರ ಒಂದು ಅಂದಾಜಿನಂತೆ ಅದು ವಾರಕ್ಕೆ 10,700, ಮತ್ತೊಂದು ಅಭಿಪ್ರಾಯದಂತೆ 9200. ಆದರೆ ಇವುಗಳಲ್ಲೂ ತಪ್ಪಿಹೋದ ಸಂಖ್ಯೆಗಳಿವೆಯಾದ್ದರಿಂದ ಸಂಖ್ಯೆ ಇನ್ನೂ ಹೆಚ್ಚಾಗಿರಬಹುದೆಂದೂ ಕಲ್ಕತ್ತದ 'ಸ್ಟೇಟ್ಸ್‌ಮೇನ್' ಪತ್ರಿಕೆ ಪ್ರಕಟಿಸಿದೆ.

○ ನವ ಡಿಲ್ಲಿಯಲ್ಲಿ 70ಕ್ಕೂ ಮಿಕ್ಕಿ ರಾಜರು ಮತ್ತು ಅವರ ವಾರೀಸುದಾರರು ನೆರೆದಿದ್ದ 'ರಾಜರ ಕೂಟ' (ಚೇಂಬರ್ ಒಫ್ ಪ್ರಿನ್ಸಸ್)ದ 19ನೇ ಅಧಿವೇಶನದ ಆರಂಭ ಭಾಷಣವೀಯುತ್ತಾ ವೈಸರಾಯರು ಸಾಮ್ರಾಜ್ಯ ಮತ್ತು ಆಶ್ರಿತ ರಾಜರ ಸಂಬಂಧಗಳನ್ನು ಸುದೀರ್ಘವಾಗಿ ವಿವರಿಸಿದರು. ವೈಸರಾಯರಿಗೆ ವಿದಾಯ ಸಮಾರಂಭವೂ ನಡೆಯಿತು.

● ಕೊಚ್ಚಿ ಮಹಾರಾಜಾ ಕೇರಳ ವರ್ಮರು ತನ್ನ 79ನೇ ವಯಸ್ಸಿನಲ್ಲಿ ಕಳೆದ ವಾರ ದಿವಂಗತರಾದರು.

○ ಭಾರತಕ್ಕೆ ಸ್ವಾತಂತ್ರ್ಯ ದಾನವೀಯಲು ಇಂಗ್ಲಾಂಡು ಪ್ರತಿಜ್ಞಾ ಬದ್ಧವಿದೆ;ಪಕ್ಷದ ಬಿಕ್ಕಟ್ಟು ನಿವಾರಣೆಯ ತೀರ್ಮಾನವನ್ನು ಮಧ್ಯ ಪಂಚಾಯತಿದಾರರಿಗೆ ಬಿಡಬೇಕು-ಎಂದು ಶ್ರೀ ಶ್ರೀನಿವಾಸ ಶಾಸ್ತ್ರಿಗಳ ಹೇಳಿಕೆ.

○ ಭಾರತದಲ್ಲಿ ಜನಜವಾಬ್ದಾರೀ ಕೇಂದ್ರ ಸರಕಾರವಿದ್ದು ಪ್ರಾಂತ್ಯಗಳ ಹೊಣೆಗಾರಿಕೆಯನ್ನು ಒಂದು ವರುಷಕ್ಕೆ ಮೊದಲೇ ಆದು ವಹಿಸುತ್ತಿದ್ದರೆ ಇಂದಿನ ಬರಗಾಲ ಪುಂಟಾಗುತ್ತಿರಲಿಲ್ಲ ವೆಂಬಜ್ಞಾನೋದಯ ಇಂಗ್ಲಾಂಡಿನಲ್ಲಾಗಿದೆ,

○ ಬ್ರಿಟಿಷ್, ಅಮೇರಿಕ, ರಶ್ಯಾ, ಚೀನಗಳ ಸಂಯುಕ್ತ ಮಂಡಲಿಯೊಂದು ಹಿಂದುಸ್ಥಾನವನ್ನು ಸಂದರ್ಶಿಸಿ, ಬರಗಾಲಸ್ಥಿತಿ, ಮತ್ತು ರಾಜಕೀಯ ಸಮಸ್ಯೆಗಳ ತೀರ್ಮಾನ ಹೊಂದಬೇಕೆಂದು ಇಂಗ್ಲಾಂಡಿನ ಕೆಲವು ಕೂಲಿಗಾರ ಮುಖಂಡರು ಪಾರ್ಲಿಮೆಂಟ್ ಸದಸ್ಯರನ್ನು ಸಂಧಿಸಲಿದ್ದಾರೆ.

○ ಬರುವವಾರದೊಳಗೆ ಲೋರ್ಡ್‌ಲಿನ್‌ಲಿತ್‌ಗೋರವರು ಗವರ್ನರ್ ಜನರಲ್ ಹುದ್ದೆಯನ್ನು ಲೋರ್ಡ್ ವೇವೆಲರಿಗೆ ಒಪ್ಪಿಸಿ ಕೊಡಲಿದ್ದಾರೆ.

○ 'ಹಿತವಾದ' ಮತ್ತು 'ಅಮೃತಬಝಾರ್' ಪತ್ರಿಕೆಗಳ ಮೇಲೆ ಜ್ಯಾರಿಯಾದ ಆಜ್ಞೆಗಳನ್ನು ಎಲ್ಲಾ ಪತ್ರಿಕಾ ಸಂಘಗಳೂ ನಿಷೇಧಿಸಿವೆ.

● ಎಲ್ಲಾ ಪಟ್ಟಣಗಳಲ್ಲೂ ಸದ್ಯದಲ್ಲೇ 'ರೇಶನಿಂಗ್'ಪದ್ಧತಿ ಜ್ಯಾರಿಗೆ ಬರುವ ಸಂಭವವಿದೆ.

ಸುದ್ದಿ ಸೂಚನೆ.

○ ಇಟೆಲಿಯನ್ನು ಇಂಗ್ಲಾಂಡು ಅಮೇರಿಕಗಳು ಮಿತ್ರರಾಷ್ಟ್ರವೆಂದು ಒಪ್ಪಿಗೆ ಕೊಟ್ಟವೆ. ಬೆಡೋಗ್ಲಿಯೋ ಸರಕಾರವು ಜರ್ಮನಿಯ ಮೇಲೆ ಯುದ್ಧ ಸಾರಿದೆ.

○ 'ಪೂರ್ಣ ಶಾಂತಿ ಸ್ಥಾಪನೆಯಾಗುವ ತನಕ ಇಟೆಲಿಯನ್ನು ವೈರಿಯೆಂದೇ ಗಣಿಸಬೇಕು. ಅನಗತ್ಯವಾಗಿ ನೆರೆ ರಾಷ್ಟ್ರಗಳ ಆಕ್ರಮಣ ಮಾಡಿದ ದ್ರೋಹಿ ಇಟೆಲಿಯು ಮಿತ್ರ ರಾಷ್ಟ್ರವಾಗಲು ಎಷ್ಟಕ್ಕೂ ಅರ್ಹವಿಲ್ಲ. ನಮ್ಮ ನಿಶ್ಶಸ್ತ್ರ ನಿರಪರಾಧೀ ಜನರ ಮನೆಮಾರು ಸುಟ್ಟು, ವಿಷ ಗಾಳಿ ಬಿಟ್ಟ ಕೇಡಿ ಬೊಡೊಗ್ಲಿ ಯೋನೊಡನೆ ಮೈತ್ರಿಯಿಲ್ಲ" ಎಂದು ಅಬಿಸೀನಿಯದ ಚಕ್ರವರ್ತಿ ಹೈಲ್ ಸಿಲಾಸಿಯವರಂದಿದ್ದಾರೆ.

● ಹಿಂದೀಯ ಆಹಾರ ಸಮಸ್ಯೆಯ ಕುರಿತು ಪಾರ್ಲಿಮೆಂಟ್ ಸದಸ್ಯರಲ್ಲಿ ಅಪೂರ್ವ ಎಚ್ಚರಿಕೆಯುಂಟಾಗಿರುವುದರಿಂದ . ಅದು ಅತಿ ಬೇಗನೇ ಕಾಮನ್ಸ್ ಸಭೆಯಲ್ಲಿ ಚರ್ಚಿಸಲ್ಪಡಲಿದೆ.

○ ಬಂಗಾಳದಲ್ಲಿ ಆಹಾರವಿಲ್ಲದೆ ಸಾಯು

ತಾರೀಕು 22—10—43ರಿಂದ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ
ಬೊಂಬೆ ಟೋಕೀಸಿನವರ
ಬಂಧನ್
ಅಶೋಕ್ ಕುಮಾರ್ ಮತ್ತು ಲೀಲಾ ಚಿಟ್ನಿಸ್
ಬರುವುದು. ನೀವು ನಿರೀಕ್ಷಿಸುತ್ತಿರುವ
ಚಿತ್ರಲೇಖಾ

NOTICE.

Notice is hereby given that compulsory cholera preventive inoculations will be inforced in certain villages of Kasaragod and Mangalore Taluks, as per the declaration issued by the Collector of South Kanara under section 76f(b)of the Madras Public Health Act and published as an Extraordinary Notification in the South Kanara Dt. Gazette for September 1943. The residents of the villages concerned are requested to get themselves inoculated during the visits of the Health Inspectors or cholera Inspectors to their respective villages, failing which criminal prosecution will be launched against them.

Mangalore, 15-10-1943. (Sd) K. P. Thomas, District Health Officer, South Kanara

ದಕ್ಷಿಣ ಕನ್ನಡ.

ಮಂಗಳೂರು.

ಜಿಲ್ಲಾ ಬೋರ್ಡಿನ ಸಭೆ——ತಾ. ೧೩ ರಂದು ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಸೇರಿ, ಹೊಸ ಸದಸ್ಯರು ಶ್ರೀಗಳಾದ ಶ್ರೀ ಸಿ. ಲ. ಲೋಬೊ, ಬಂಟ್ವಾಳ ಕರಿಯಪ್ಪ ಭಂಡಾರಿ, ಎ. ಸ ಚಾತುಕಟ್ಟ ನಾಯರ್, ಕೆ. ಶಂಕರ, ರಾಮಯ ನಾಯಕ್, ಬೋಳ ವಾಸುದೇವ ರಾವ್, ಬಿ. ಸಿ. ರೇಗೋ, ಕೃಷ್ಣ ಶೆಟ್ಟಿ ಇವರು ರಾಜಭಕ್ತಿ ಪ್ರದರ್ಶನ ಮಾಡಿದರು, ಶ್ರೀಮತಿ ಸುಶೀಲಾ ಬಾಯಿ ಪೈಯವರ ಅಕಾಲ ನಿಧನಕ್ಕೆ ಸಂತಾಪ ಸೂಚಿಸಿ ಠರಾವು ಅಧ್ಯಕ್ಷರಿಂದ ಹೇಳಲ್ಪಟ್ಟ ಮೇಲೆ ಎಲ್ಲರೂ ಎದ್ದು ನಿಂತು ಶಾಂತಿ ಪ್ರಾರ್ಥನೆ ಮಾಡಿ ಬಳಿಕ ನಿಮಿತ್ತ ಸಭಾ ಕಾರ್ಯ ಮುಂದುವರಿಸಲ್ಪಟ್ಟಿತು. ಉಪಾಧ್ಯಕ್ಷ ಶ್ರೀ ಮಹಾಲಿಂಗ ಶೆಟ್ಟರು ತನಗೆ ಬಂಗ್ಲೆ ಧರ್ಮಾರ್ಥ ಉಳಕೊಳ್ಳಲು ಕೊಡಬೇಕೆಂದು ಬರೆದ ಪತ್ರವು ಚರ್ಚಿಸಿ ತಿರಸ್ಕೃತವಾಯಿತು. ವಾರ್ ಫ್ರಂಟಿನ ಉಪನ್ಯಾಸಕಿಯರಿಬ್ಬರು (ಶ್ರೀಮತಿ ಸಾವಿತ್ರಿ ಮತ್ತು ಶ್ರೀಮತಿ ರಾಧಾ) ತಮಗೆ ಒಂದು ವಾರದ ವರೆಗೆ ಉಳಕೊಳ್ಳಲು ಬಂಗ್ಲೆ ಕೊಡಬೇಕೆಂದು ಮಾಡಿಕೊಂಡ ವಿನಂತಿಯ ಮೇಲೆ ಅಧ್ಯಕ್ಷರು ವಿವರಿಸಿ ಚರ್ಚೆಯಾಗಿ ಮತ ಹಾಕಿ ತಿರಸ್ಕೃತವಾಯಿತು. ಕೊಟ್ಟರೆ ಸಾರ್ವಜನಿಕ ಕೆಲಸ ಮಾಡುವ ಎಲ್ಲಾ ಮಹಿಳೆಯರಿಗೂ ಕೊಡಬೇಕಾಗುತ್ತದೆಂದು ಶ್ರೀ ಪಿ. ಟಿ. ಆಚಾರ್ಯರು ವಾದಿಸಿದರು. ಉಪಾಧ್ಯಾಯರ ನೇಮಕ ವಿಷಯ ಜಾಹೀರಾತು ಮಾಡಬೇಕಾಗಿರುವುದರಿಂದ, ಆ ಖರ್ಚು ಕೊಡಿಸ ವರಿ ಅರ್ಜಿ ಮಾಡುವವರು ಅರ್ಜಿಯೊಡನೆ ಫೀಸು ಕಟ್ಟಬೇಕೆಂದು ಸರಕಾರದಿಂದ ಬಂದ ಸೂಚನೆಯನ್ನು ಬೋರ್ಡು ಒಪ್ಪಿತು. ಮದ್ರಾಸು ವಿಜಿಲೆನ್ಸ್ ಕಮಿಟಿಯವರು ಸಹಾಯ ದ್ರವ್ಯ ಕೇಳಿದ್ದಕ್ಕೆ ತಿರಸ್ಕಾರ ಸೂಚಿಸಿ, ಕಾಸರಗೋಡು 'ಅಕ್ಕಿ ಫಂಡಿನ'ವರಿಗೆ ಸಹಾಯ ದ್ರವ್ಯ ಕೊಡಲಾಯಿತು. ಜಿಲ್ಲೆಯಲ್ಲಿ ಕೋಲೆರಾ ಇನ್ನೂ ಇದೆಯೆಂದೂ, ಆಹಾರಾಭಾವದಿಂದ ಕೋಲೆರಾ ಉಂಟಾದ ಕೇಸುಗಳೂ ಗಮನಕ್ಕೆ ಬಂದಿವೆಯೆಂದೂ ಹೇಳಲಾಯಿತು. ಬಜೆಟ್ ಕಮಿಟಿಗೆ ಶ್ರೀಗಳಾದ ಜತ್ತಪ್ಪ ರೈ, ನಾಗಪ್ಪಯ್ಯ, ಖಾನ್ ಬಹದ್ದೂರ್ ಚೆಮ್ನಾಡ್ ಸಾಹೇಬ್, ಚಾತುಕುಟ್ಟಿ ನಾಯರ್, ಸಿ. ಎಲ್. ಲೋಬೋ, ರಘುಚಂದ್ರ ಬಲ್ಲಾಳ, ಮೀರ್ ಹೈದರ್ ಸಾಹೇಬ್, ಶ್ರೀ ಅದ್ಯಂತಾಯ, ಟಿ. ಕೃಷ್ಣಯ್ಯ ಹೆಗ್ಡೆ, ಬಿ. ಸಿ. ರೇಗೋ, ಸರ್ವೋತ್ತಮ ಪೈ ಮತ್ತು ಕೃಷ್ಣರಾಯ ಕೊಡ್ಗಿಯವರನ್ನು ಸದಸ್ಯರಾಗಿ ಆರಿಸಲಾಯಿತು.

ಬಿಡುಗಡೆ——ಮಂಗಳೂರಿನ ರಾಜಕೀಯ ಕೈದಿಗಳಾದ ಶ್ರೀಗಳಾದ ಉಪೇಂದ್ರ ನಾಯಕ್, ನಾರಾಯಣ ಶೆಟ್ಟಿ, ಮಹಾಬಲೇಶ್ವರ ಭಟ್ಟ, ಮಹಾಬಲ ಹೆಗ್ಡೆ, ಆನಂದ ರೈ, ಲೋಬೋ ದಾಸ, ಸಂಕಪ್ಪ ಶೆಟ್ಟಿ, ಗಂಗಯ್ಯ, ಪತಪ್ಪ ಶೆಟ್ಟಿ, ಹರಿಹರ ನಾಯಕ್, ಮಾಧವ ನಾಯಕ್, ತಿಮ್ಮಪ್ಪ ಮಲ್ಲಿ, ವಿಟ್ಠಲ ಶೆಣೈ, ಅನಂತ ಭಟ್ಟ ಮತ್ತು ನಾರಾಯಣ ಶೆಟ್ಟಿ ಇವರು ಆಲಿಪುರಂ ಕೇಂಪ್ ಜೈಲಿನಿಂದ ತಾ. ೧೭ರಂದು ಬಿಡುಗಡೆಯಾಗಿ ಊರಿಗೆ ಬಂದಿರುವರು.

೨ ವರ್ಷ ಶಿಕ್ಷೆ—ಆಗಸ್ಟ್ ತಿಂಗಳಲ್ಲಿ ಸೆರೆ ಹಿಡಿದ ಶ್ರೀ ವರದರಾಯ ಪ್ರಭುಗಳಿಗೆ ೨ ವರ್ಷಗಳ ಕಠಿಣ ಶಿಕ್ಷೆ ವಿಧಿಸಿರುವರೆಂದು ಕೇಳುತ್ತೇವೆ.

ಎಡ್ವೈಜರರಿಗೆ ತಂತಿ— ಈ ಜಿಲ್ಲೆಯ ಭೂಮಾಲಕ ಸಂಘದವರೂ ಬಂಟರ ಯಾನೆ ನಾಡವ ಸಂಘದವರೂ ಬತ್ತದ ಹೊಸ ಬೆಳೆಯನ್ನು 'ರಿಕ್ವಿಸಿಶನ್' ಮಾಡುವ ಕುರಿತು ಆಕ್ಷೇಪಿಸಿಯೂ, ಆ ಸೂಚನೆಯನ್ನು ಜ್ಯಾರಿಗೆ ತರಬಾರದೆಂದು ಪ್ರಾರ್ಥಿಸಿಯೂ, ಈ ಕ್ಷೇತ್ರವನ್ನು ಸಂದರ್ಶಿಸಬೇಕೆಂದು ಅಪೇಕ್ಷಿಸಿಯೂ ಮದ್ರಾಸ್ ಗವರ್ನರರ ಎಡ್ವೈಜರರಿಗೆ ತಂತಿ ಬಿಟ್ಟಿರುವರು.

ಅಂಗಡಿ ನೌಕರರ ಮನವಿ—ನಗರದ ಅಂಗಡಿಗಳ ನೌಕರರೆಲ್ಲ ಒಂದು ಮನವಿಯನ್ನು ಚೇಂಬರ್ ಆಫ್ ಕಾಮರ್ಸಿಗೆ ಒಪ್ಪಿಸಲಿರುವರು. ಅಂಗಡಿಗಳಲ್ಲಿ ತಮ್ಮಷ್ಟು ಹೆಚ್ಚು ದುಡಿಯುವವರು ಬೇರಾರೂ ಇಲ್ಲ. ಕೆಲ ಅಂಗಡಿಗಳ ಮಾಲಿಕರು ಪ್ರತಿ ರವಿ ವಾರವನ್ನು ರಜೆಯಾಗಿ ಮಾಡಿ, ದುಡಿಯುವ ಗಂಟೆಗಳನ್ನು ಕಡಿಮೆ ಮಾಡಿರುವರು. ವಾರದಲ್ಲಿ ಒಂದು ದಿನವಾದರೂ ತಮಗೆ ರಜೆ ಸಿಗುವುದು ಅವಶ್ಯವಿದೆ; ಈ ಕೋರಿಕೆಯನ್ನು ಮನ್ನಿಸಬೇಕೆಂದು ಚೇಂಬರ್ ಆಫ್ ಕಾಮರ್ಸಿನವರೂ ವ್ಯಾಪಾರಿಗಳಲ್ಲೂ ವಿನಂತಿ ಎಂದು ಆ ಮನವಿಯಲ್ಲಿ ಹೇಳಲಾಗಿದೆ.

ಒಂದು ಶವ——ಮಹಮ್ಮಾಯಿ ದೇವಸ್ಥಾನದ ಕೆರೆಯಲ್ಲಿ ತೇಲುತ್ತಿದ್ದುದು ತಾ. ೧೯ರಂದು ಕಂಡುಬಂತು. ವ್ಯಕ್ತಿಯ ಪ್ರಾಯ ೨೦ರ ಒಳಗಿರಬೇಕೆಂದು ಅಂದಾಜು. ಹುಡುಗನು ದಸರಾ ವೇಷ ಹಾಕಿದನೆಂದೂ ಅವನು ಗಳಿಸಿದ್ದ ಹಣವನ್ನು ಹೊಡೆಯುವಾಗಲು ರಾತ್ರಿ ಹೊತ್ತು ಕೊಲೆಯಾಗಿರಬೇಕೆಂದೂ ಊಹೆ.

ಉಡುಪಿ.

ಭಾಷಣ——ತಾ. 14-10-43ರಲ್ಲಿ ಮೋಡರ್ನ್ ಸ್ಕೂಲ್ ಆಫ್ ಕಮರ್ಸಿನಲ್ಲಿ ಶ್ರೀ ರಾಮಕೃಷ್ಣ ಮಠದ ಸ್ವಾಮಿ ಅಜರಾನಂದ ಸ್ವಾಮಿಯವರು "ದಿ ಟಾಸ್ಕ್ ಬಿಫೋರ್ ಅಸ್" (ನಮ್ಮ ಮುಂದಿರುವ ಕೆಲಸ) ಎಂಬುದರ ಕುರಿತು ಭಾಷಣವಿತ್ತರು.

ಶಂಕು ಸ್ಥಾಪನೆ— ಸ್ಥಳೀಯ ಬೋರ್ಡ್ ಹೈಸ್ಕೂಲಿನ ಎಕೆಡೆಮಿ ಹೋಲಿನ ಶಂಕು ಸ್ಥಾಪನಾ ಸಮಾರಂಭವು ಶ್ರೀ ಎಲ್. ಎಚ್. ಪ್ರಭು, ಎಡ್ವಕೇಟ್, ಹೊನ್ನಾವರ ಇವರಿಂದ ತಾ. 22-10-43ನೇ ಬೆಳಿಗ್ಗೆ 8-30ಕ್ಕೆ ನಡೆಯಲಿರುವುದು.

ನೃತ್ಯ:—ತಾ 17-10-1943ರಲ್ಲಿ ಶ್ರೀ. ಕೆ. ಎಲ್. ಭಟ್ ಮತ್ತು ಇವರ ಶಿಷ್ಯಂದಿರ ನೃತ್ಯ ಪ್ರದರ್ಶನವೊಂದು ಶ್ರೀ. ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಶ್ರೀ ರಾಮಕೃಷ್ಣ ಟಿ ಯೇಟರಿನಲ್ಲಿ ಯಶಸ್ವಿಯಾಗಿ ಜರಗಿತು. ಕುಮಾರಿಗಳಾದ ವತ್ಸಲಾ ಸಾಂಗಾಳ, ಭಾರತೀ ಸಾಂಗಾಳ, ವಿಜಯಾ ಕಾಮತ್ ಮೊದಲಾದ ಬಾಲಿಕೆಯರ ನೃತ್ಯವು ಅತಿ ಮನೋಹರವಾಗಿತ್ತು.

ಬೆಳ್ಮಣ್ಣು——ಬೆಳ್ಮಣ್ಣು ಪಂಚಾಯತ ಬೋರ್ಡಿನ ಹೊಸ ಮೆಂಬರರ ಚುನಾವಣೆಯು ತಾ. 8-10-43ರಲ್ಲಿ ಜರಗಿ ಈ ಕೆಳಗಿನ ಮೆಂಬರರನ್ನು ಆರಿಸಲಾಗಿದೆ. ಶ್ರೀ ಬಿ. ನಾರಾಯಣ ಶೇಟ್, ಪಟೇಲ್ ಪ್ರೆಸಿಡೆಂಟ್, ಶ್ರೀ ಬಿ. ಗೋಪಾಲ ಶೆಣೈ, ವ್ಹಾಯಿಸ್ ಪ್ರೆಸಿಡೆಂಟ್, ಶ್ರೀ ಬೈರಾಮಯ್ಯ ಶ್ಯಾನುಭಾಗ, ಶ್ರೀ ಬಿ. ಬಾಬುರಾಯ ಕಾಮತ್, ಶ್ರೀ ಪಿ. ವಾಸುದೇವ ಶೆಣೈ, ಶ್ರೀ ಬಿ. ಪಾಂಡುರಂಗ ಪೈ, ಶ್ರೀ ಮೊಯ್ದು ಕುಂಞ ಬ್ಯಾರಿ, ಶ್ರೀ ಬಿ. ಕೋಚಣ್ಣ ರೈ ಸದಸ್ಯರು.

ಕುಂದಾಪುರ-ಕಂಡ್ಲೂರು.

ಜನಾಬ್ ಖಾಜಿ ಮೈದೀನ್ ಸಾಹೇಬರ ನಿಧನ:— ಕಂಡ್ಲೂರು ಜುಮ್ಮಾ ಮಸೀದಿಯ ಖಾಜಿಗಳಾಗಿ, ಸುಮಾರು ಅರವತ್ತು ಸಂವತ್ಸರ ಕಾಲ ಕಂಡ್ಲೂರು ನವಾಯತರ ಸೇವೆ ಮಾಡಿ, ಕೃತಾರ್ಥರಾದ ಜನಾಬ್ ಖಾಜಿ ಮೈದೀನ್ ಸಾಹೇಬರು, ತಾ. 11-10 43ನೇ ಸೋಮವಾರ ದಿನ ಗಂಟೆ 2ಕ್ಕೆ ಸ್ವರ್ಗಸ್ಥರಾದರೆಂದು ತಿಳಿಸಲು ತುಂಬಾ ವಿಷಾದ ಪಡುತ್ತೇವೆ. ಮತಭೇದವಿಲ್ಲದ ಇವರು, ಎಲ್ಲಾ ಮತದವರ ಪ್ರೀತಿಗೆ ಪಾತ್ರರಾಗಿದ್ದು, ಇಡೀ ಊರಿನ ಹೃದಯವನ್ನೇ ತನ್ನೆಡೆಗೆ ಆಕರ್ಷಿಸಿಕೊಂಡಿರುವರು. ಅಂದು, ಊರಲ್ಲಿ ಪೂರ್ಣ ಹರತಾಳವಿದ್ದುದೇ ಇದಕ್ಕೆ ನಿದರ್ಶನ! ಸುಮಾರು 500ಕ್ಕೂ ಮಿಕ್ಕಿ ಜನ ಸಂದಣಿಯಿಂದ ಊರ ಮೆರವಣಿಗೆಯಾಗಿ, ಅತಿ ವಿಜೃಂಭಣೆಯಿಂದ ಶವ ಸಂಸ್ಕಾರವು ನೆರವೇರಿಸಲ್ಪಟ್ಟಿತು. ಜನಾಬ್ ಖಾಜಿಗಳ ನಿಧನವು ಊರಿಗೇ ಉಲ್ಕಾಪಾತವಾದಂತಾಯಿತು. ಉಜ್ವಲ ಜೀವಿಯೊಂದು ಅನಾದಿ ಅನಂತವಾದ ಕಾಲ ಪ್ರವಾಹದಲ್ಲಿ ಮುಳುಗಿ ಹೋಯಿತು. ಅವರು ತಮ್ಮ 84ನೇ ವಯಸ್ಸಿನಲ್ಲಿ ಕೀರ್ತಿಶೇಷರಾದರು! ಮೃತರ ಆತ್ಮಕ್ಕೆ ಶಾಂತಿ ಸಿಗಲಿ" 'ನವಾಯತ ಬಂಧು'

Degrees: Books: Medicines

Free H. L. M. S. M. B. H. M. D, etc Free Homeo Ayur- Unani Natureo degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp:—

Prof. Dr. N. H. Chhatbar,

Principal Indian Homeopathi Institute & Society (Govt. Regd)
P.O MAHUVA (Kathiawar Dt. India.)

Sidha-Kalpa Kavach (Regd.)

No. 3 Rs 2. No. 2 Rs 4 No. 1 Rs. 7. Special Rs. 10 Extra Special Rs. 17 for ove marriage health, wealth, Ask any six questions with M. O. Re. 1/4 and get correct answers by returnpost Life reading Rs 10 No V.P.P Send M.O. Free dmplets.

Prof Dr N. H Chhatbar,
P. O. MAHUVA (Kathiawar India.)

CHAMPAE'S SNOW & CASTREX
AGENTS.
SADANANDA STORES UDIPI

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—0—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1—12—0.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ—1 ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ ಎಂಡ್ ಜನರಲ್ ಮರ್ಚೆಂಟ್ಸ್, 183 ಸುಪಾರಿಬಾಗ್ ರೋಡ್, ಪರೇಲ, ಬೊಂಬಾಯಿ, ನಂಬ್ರ 12 2. ಜನರಲ್ ಸ್ಟೋರ್ಸ್ ಜಿ. ಐ ಪಿ ಮಾಟುಂಗಾ. 3. ಮುಲ್ಲರ್ ಪಟೆರ್ಸನ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ. 4. ಧನ್ವಂತರಿ ವೈದ್ಯಶಾಲೆ, ಲೆನ್ಸ್ ಡೌನ . . . ಮೈಸೂರು. 5. ಮಂಗ್ಳೂರು ಸ್ಟೋರ್ಸ್, ಮಡಿಕೇರಿ. 6 ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ. 7. ಡಾ। ಶ್ರೀನಿವಾಸ ಪೈ, ಪುತ್ತೂರು 8 ಕಾಂತಾವರ ಮಾಸ್ತೇವ ಕಮ್ಮಿ, ಬೆಳ್ತಂಗಡಿ. 9 ಮುಲ್ಕಿ ಮೆಡಿಕಲ್ ಸ್ಟೋರ್ಸ್, ಮುಲ್ಕಿ. 10 ನವಭಾರತ ಬುಕ್ ಡಿಪ್ಪೋ ಸಂತೆಕಟ್ಟೆ, ಉಡುಪಿ 11. ಕೃಷ್ಣ ಫಾರ್ಮಸಿ, ಕುಂದಾಪುರ. 12. ಎಚ್. ಸ ಸಿಂಹ ನಾಯ್ಕ, ಮರ್ಚೆಂಟ್, ಶಂಕರನಾರಾಯಣ 13 ಕಾಸರಗೋಡು ಶ್ರೀ ಉಮಾ ಸ್ಟೋರ್ಸ್ ಹೌಸ್, ಶ್ರೀ ರಾಮ ಪೇಟೆ. 14. ಕೆ. ಶ್ರೀನಿವಾಸ ಹೆಗ್ಡೆ, ತೀರ್ಥಹಳ್ಳಿ. 15. ಬ ಯುಸ್. ನರ್ಸಿಂಗ ರಾವ್, ಮರ್ಚೆಂಟ್, ಚಿಕ್ಕಮಂಗಳೂರು.

BHUVANENDRA PRODUCTS Ltd.,

Head Office and Factory: **Katapadi**, S. Kanara

Depots: Mahratha Galli, Hubli.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ ಹಲ್ಲುಗಳೇ ಮುಖ್ಯ ಕಾರಣ.

"ಭುವನೇಂದ್ರ"

ದಂತಧಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ನ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಟ್ಟಿ, ರಥಬೀದಿ; ಡಾ. ಪಿ. ಜಿ. ಆಚಾರ್ಯ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪ್ಪೋ.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in 1920)

Registered Office Court Road UDIPI South Canara District
Business Offices Udipi Mangalore, Katpadi, Kanhangad and Kinnigoli, South Canara

Authorised and Issued Capital	Rs 2 00 000/
Subscribed and Paid up Capital	Rs 2,00,000/-
Reserve Funds	Rs 1,74,600/-

Short term bills are discounted for approved parties Loans and advances are made and overdrafts granted on fairly easy terms
Deposits are accepted at favourable rates of interest More than twenty three years reliable banking Service stands to our credit
For further particulars please call at or apply to the nearest office
Dated 27-8 1943

ರುಚಿ!! **ಸೆಂಟ್ರಲ್ ಕೆಫೆ** ರುಚಿ!!

ಶ್ರೀನಿವಾಸ ಬಿಲ್ಡಿಂಗ್ಸ್, ಹೆಡ್ ಪೋಸ್ಟಾಫೀಸ್ ಸರ್ಕಲ್, ಶಿವಮೊಗ್ಗ
ಪ್ರಯಾಣಿಕರಿಗೆ ಉಳಿದುಕೊಳ್ಳಲು ಸ್ಥಳಾನುಕೂಲ ಏರ್ಪಡಿಸಿರುತ್ತೆ ಸಕಾಲದಲ್ಲಿ ಉತ್ತಮವಾದ ಊಟ, ಕಾಫಿ ಮತ್ತು ಹಸನಾದ ತುಪ್ಪದಲ್ಲಿ ತಯಾರಿಸಿದ ತಿಂಡಿ ದೊರೆಯುತ್ತೆ.
ಈ ಸ್ಥಳವು ರೈಲ್ವೆಸ್ಟೇಷನ್, ಬಸ್‌ಸ್ಟ್ಯಾಂಡ್, ಕೋರ್ಟುಗಳಿಗೆ ಮಧ್ಯ ಸ್ಥಳದಲ್ಲಿದೆ
ಎಸ್ ರಾಮದಾಸ್, ಪ್ರೊಪ್ರೈಟರ್.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲರ ಸಹಕಾರ ಅಪೇಕ್ಷಿಸುವುದು.

M. R. Punja, President & Manager — ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ
ಉಡುಪಿ. : : · ಮಂಗಳೂರು

THE VIJAYA BANK, LIMITED.

Glad to announce that a Branch of the Bank has been opened at KASARAGOD on 12-9-43.

RLGD.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ನೋವುಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವುದು, ಚೇಳು ವಿಷವುಂಟಾದ ಬೇನೆ, ಪಕ್ಷವಾತ, ಮೊಡವೆ ನೋವು ಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ,
ಮಾಲುಕಟ್ಟೆ ಎಲ್ಲಾ ಸಹ ನಮ್ಮಲ್ಲಿ ಸಿಕ್ಕುತ್ತದೆ
ಅಮೃತಾಂಜನ ಲಿಮಿಟೆಡ್
ಬೊಂಬಾಯಿ, ಮದ್ರಾಸು, ಕಲ್ಕತ್ತಾ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ
ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ
ವಾರ್ಷಿಕ ಚಂದಾ
ರೂ **1-8-0** ಮಾತ್ರ
ಹೆಚ್ಚಿನ ವಿಚಾರಕ್ಕೆ ಬರೆಯಿರಿ
ಮೆನೇಜರ್, ಬಾಲಚಂದ್ರ
ಸಂತೆಕಟ್ಟೆ, ಉಡುಪಿ.

— ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷದವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ ಗುಳಿಗೆ, ಮಧ್ಯಾಹ್ನಕ್ಕೆ ಗುಳಿಗೆ, ಸಂಜಗ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷದವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಪತ್ಯ:—ಹರವೀಪಲ್ಲೆ ಬಿಡಬೇಕು ೭ ದಿವಸ ಸಂಪೂರ್ಣ ಔಷದದ ಕಿಮ್ಮತ್ತು ರೂಪಾಯಿ ೨—0—0 ಪೋಷ್ಟ ಚಾರ್ಜು ನಿರಾಳ

ಮಾಲಕರು. — ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ
ನಮ್ಮ ಏಜಂಟರಲ್ಲಿ ಔಷದಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ಚಿಕ್ಕೋಡಿಯಲ್ಲಿ —ಕುಂಬರಮಠಿ ಸ್ಟೋರ್ಸ. ದಾವಣಗೇರಿ —ದಾವಣಗೇರಿ ಪ್ರೆಸ್ ರ್ ಎಲ್ ಕವಳದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿಶ್ಚೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ. ಕ**

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು
ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.
Crown Rubber Stamp Co. 18 Balmat Road, MANGALORE.
Approved firm by the Govt Mysore
Certified by the Agent of the Govt of India in Ceylon

EDITED PRINTED & PUBLISHED BY K H. SHETTY AT THE NAVAYUGA PRESS UDIPI S, INDIA

Regd. No. M. 3618.

Estd. 1921 ಸ್ಥಾಪನೆ

ಹೊಸಕೆರೆ ಚಿದಂಬರಯ್ಯನವ
ರಿಂದ ರಚಿತವಾದ ಗೀತೆಯ
ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು 440 ಪುಟಗಳು.

ಪ್ರತಿ ಮನೆಯಲ್ಲೂ ಇರಬೇಕಾದ
ಪವಿತ್ರ ಗ್ರಂಥ.

ಬೆಲೆ (ಸುಂದರ ಪ್ರತಿ) ೦—೮—೦

ಅಣ್ಣಾಣೆ ಸ್ಟಾಂಪು ಕಳಿಸಿದ್ದಲ್ಲಿ ೧ ಪ್ರತಿಯನ್ನು
ಬುಕ್‌ಪೋಸ್ಟು ಮಾಡಲಾಗುತ್ತೆ.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ನವಯುಗ

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೮

FOUNDER
Sri. A. B. Shetty.

Vol. 24
No. 8

NAVAYUGA— Kannada Weekly —UDIPI, S. I.

ಉಡುಪಿ • 28—10—1943 • ಮಂಗಳೂರು.

ಅಖಿಲ ಕರ್ನಾಟಕದ
ಹೊಸಮಾದರಿಯ ವಾರಪತ್ರಿಕೆ

ಅಂತರಂಗ

ಜನ್ಮತಾಳಿದ ಸ್ವಲ್ಪ ಸಮಯದಲ್ಲೇ
ವಿಶಾಲ ಪ್ರಚಾರ ಮತ್ತು ಪ್ರಶಸ್ತಿ
ಪಡೆದ ಸಚಿತ್ರ ವಾರಪತ್ರಿಕೆ.

ಪ್ರಸಿದ್ಧ ಜ್ಯೋತಿಷಿಗಳೊಬ್ಬರಿಂದ
ವಾರಭವಿಷ್ಯವೂ ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ ರೂ. ೪-೪-೦
6 ತಿಂಗಳಿಗೆ ರೂ. ೨-೪-೦
ಬಿಡಿಪ್ರತಿಗೆ ರೂ. ೦-೧-೬

ಮಾದರಿಗೆ ಬರೆಯಿರಿ:
ಮೆನೇಜರ್. ಅಂತರಂಗ, ಉಡುಪಿ.

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

The Canara Mutual Assurance Co., Ltd.,
UDIPI. (S. India).

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು
ಮೌಲಿಕವಾದುದು.

ಜಾಗರೂಕರಾಗಿರಿ! ನಿಮ್ಮ ಮತ್ತು ಸವಿಾಪದವರ ಮತ್ತು
ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇದರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು:-
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ ಕನ್ನಡ.)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್
ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಪ್ರೇಸ್. [ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ.
ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda Oushadalaya, GADAG.

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೩೯ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹು ಬಹು ಅಪಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನ್ನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ಶೀವ್ರನೆ ಮುಂದುವರಿದವು.

೧೯೪೦, ೪೧ರಲ್ಲಿ ಕೆನರಾ ಬೇಂಕು ೯೦ ಲಕ್ಷ ಠೇವಣಿಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣಿಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡೂವರೆ ಕೋಟಿಗೆ ಏರಿದೆ. ಹಾಗೂ ತೆತ್ತ ಮೂಲಧನವು ನಾಲ್ಕುಡಿಯಾಗಿದೆ.

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮವಿಶ್ವಾಸದಿಂದಲೂ, ದೃಢ ಬುದ್ಧಿಯಿಂದಲೂ, ಯೋಗ್ಯಸೇವೆಯನ್ನು ಸಲ್ಲಿಸಿದರಿಂದಲೂ. ಇಂದಿನ ಈ ಪ್ರಗತಿಗೆ ಕಾರಣ ಭೂತರಾದ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಮಹತ್ವದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

CANARA BANK LIMITED.
ಕೆನರಾ ಬೇಂಕ್ ಲಿಮಿಟೆಡ್.
ಸ್ಥಾಪನೆ 1906.

ಈ ವಿವಾದಗಳು

ರಶ್ಯಾ ಮತ್ತು ಇಂಗ್ಲಾಂಡದ ತೇರಿಕೆ

ತ್ರಿರಾಷ್ಟ್ರೀಯ ವಿದೇಶ ಮಂತ್ರಿಗಳ ಸಮ್ಮೇಲನವು ಮೋಸ್ಕೋದ ಸಿರಿರೋಡನ್ಸ್ವಕ ಅರಮನೆಯಲ್ಲಿ ಕಳೆದ ವಾರದಿಂದ ದಿನಂಪ್ರತಿ ನಡೆಯುತ್ತಿದೆ. ದಿನ ಹೋದಂತೆ ಚರ್ಚೆಯ ನಿಗೂಢತೆಯುಂಟಾಗಿ ಸದಸ್ಯರೆಲ್ಲಾ ದಣಿಯುವವನ್ನು ಅಧಿಕಾಧಿಕ ಸಮಯ ಮತ್ತು ಶಕ್ತಿಯು ಸಮ್ಮೇಲನಕ್ಕಾಗಿ ವ್ಯಯವಾಗುತ್ತಿದೆ. ಈ ಪರಿಷತ್ತಿನಲ್ಲಿ ಮೊಲೊಟೋವ್, ಈಡೆನ್, ಹಲ್ಲರೊಡನೆ ತ್ರಿರಾಷ್ಟ್ರಗಳ ಯುದ್ಧ ಪ್ರಮುಖರೂ, ತಜ್ಞರೂ ಭಾಗವಹಿಸುತ್ತಿದ್ದಾರೆ. ಸಂಬಂಧ ಸುಗಮವಾಗುತ್ತಾ ಬರುತ್ತಿದೆ, ಪ್ರಾಮುಖ್ಯ ನಿರ್ಣಯಗಳಲ್ಲಿ ಒಮ್ಮತವುಂಟಾಗದೆ–ಎಂದು ಮಿತ್ರರಾಷ್ಟ್ರೀಯರ ಅಂಬೋಣ. ಈ ಪರಿಷತ್ತು ಅಸಜಯದಲ್ಲಿ ಪರ್ಯವಸಾನಗೊಳ್ಳುವದೆಂದು ಗೋಬೆಲ್ಸನ ಭವಿಷದ್ವಾಣಿ. ಪೋಲೆಂಡಿನ ಸ್ಥಾನ, ಭಾವೀ ಜರ್ಮನಿಯ ಸ್ಥಾನ, ಮೊದಲಾದವುಗಳ ಕುರಿತು ಈ ತ್ರಿರಾಷ್ಟ್ರಗಳ ಪೈಕಿ ದ್ವಿರಾಷ್ಟ್ರ ಮತ್ತು ರಶ್ಯಗಳೊಳಗೆ ತೀವ್ರ ಭಿನ್ನಾಭಿಪ್ರಾಯವಿದೆಯೆಂಬುದು ನಿಜ. ಮೋಸ್ಕೋ ಪರಿಷತ್ತಿನ ಪರಿಣಾಮವಾಗಿ ತ್ರಿರಾಷ್ಟ್ರಗಳೇ ತ್ರಿಶೂಲವಾಗಿ ನಿಂತರೆ ಹಿಟ್ಲರರ ಅವಸಾನ ಸಮೀಪಿಸಿದಂತೆಯೆ!

ಅಮೆರಿ ಮತ್ತು ಆಚಾರ್ಯ

ಭಾರತ ಕಾರ್ಯದರ್ಶಿ ಮಿ ಅಮೆರಿಯವರು, ವೇವೆಲರು ಭಾರತಕ್ಕೆ ಹೊರಟ ಸಂದರ್ಭ ಸಾಧಿಸಿ ಹೇಳಿಕೆಯೊಂದನ್ನು ಕೊಡುತ್ತಾ, 'ಬ್ರಿಟನು ಈಗಲೂ ಕ್ರಿಪ್ಸ್ ಸೂಚನೆಗಳನ್ವಯ ವರ್ತಿಸಲು ಬಾಧ್ಯವಿದೆ. ಆದರೆ ಯುದ್ಧಕಾಲದಲ್ಲಿ ಗೊಂದಲವೆಬ್ಬಿಸಿದ ಕಾಂಗ್ರೆಸಿಗರಿಗೆ ಭಾವೀ ರಾಜ್ಯಾಂಗ ರಚನೆಯಲ್ಲಿ ಭಾಗವಹಿಸುವ ಹಕ್ಕು ಬರಬೇಕಾದರೆ ಅವರು ಪ್ರಥಮತಃ ತಮ್ಮ ಚಳವಳವನ್ನು ಹಿಂದೆಗೆದು ಕ್ಷಮೆ ಕೇಳಬೇಕು. ಕಾಂಗ್ರೆಸ್ ಅಧಿಕಾರ ವಹಿಸಿದಾಗ ಪ್ರಾಂತ್ಯಗಳಲ್ಲಿ ಪ್ರದರ್ಶಿಸಿದ ಸರ್ವಾಧಿಕಾರಿತ್ವದ ದೆಸೆಯಿಂದಲೇ ಆಶ್ರಿತ ರಾಜರು ಮತ್ತು ಮುಸ್ಲಿಂ ಲೀಗಿಗೆ, ಸಂಯುಕ್ತ ರಾಜ್ಯ ಘಟನೆಯಲ್ಲಿ ಭಯ, ಸಂದೇಹ ಜಿಗುಪ್ಸೆಗಳುಂಟಾದುವು' ಎಂದು ಆರೋಪಿಸಿರುವರು. "ಇದು ಇದು ಶುದ್ಧ ಸುಳ್ಳು. ಕಾಂಗ್ರೆಸ್ ಮಂತ್ರಿಗಳು ತೀರಾ ಅಲ್ಪ ಸಂಖ್ಯಾಕರಾಗಿದ್ದ ಇತರ ಪಕ್ಷೀಯರಿಗೆ ವಿಶೇಷಾನುಕೂಲತೆಗಳನ್ನೊದಗಿಸಿ ಕೊಟ್ಟಿದ್ದರು. ಸಂದರ್ಭ ಬಂದಾಗ ಕಾಂಗ್ರೆಸಿಗರನ್ನೇ ಶಿಕ್ಷಿಸಿದ್ದರು" ಎಂದು ರಾಜಾಜಿಯವರು ಮದ್ರಾಸ್ ಲೋಯಲಾ ಕಾಲೇಜ್ ಯೂನಿಯನಿನ ಸಭೆಯೊಂದರಲ್ಲಿ ಅಮೆರಿ ವಾದವನ್ನು ಸಕಾರಣವಾಗಿ ಖಂಡಿಸಿದ್ದಾರೆ. ಆದರೇನು? ಸದ್ಯಕ್ಕೆ ಬ್ರಿಟಿಷ್ ಮುತ್ಸದ್ದಿಗಳ ಬಾಯಿಯೆಂದರೆ ಫಿರಂಗೀ ಬಾಯಿಯಂತೆಯೆ!

ಆಹಾರ ಮತ್ತು ಸರಕಾರ

ಪಾರ್ಲಿಮೆಂಟಿನ ಲೋರ್ಡ್ಸ್ ಸಭೆಯಲ್ಲಿ ಕಳೆದ ವಾರ ಭಾರತೀಯ ಆಹಾರ ಸಮಸ್ಯೆಯ ಚರ್ಚೆ ನಡೆಯಿತು. ಹಿಂದೀ ಸರಕಾರದ ಕರ್ತವ್ಯ ಬಾಹಿರತ್ವ, ಬಂಗಾಲದ ಬಂಗಾಲದ ಭೀಕರತೆ, ಜನತಾ ಸರಕಾರದ ಅವಶ್ಯಕತೆಗಳ ಕುರಿತು ಹಟ್ಟಿಂಗ್ಟನ್, ಸ್ಟ್ರಾಬೋಲ್ಗಿ ಮೊದಲಾದ ಲೋರ್ಡ್‌ಗಳು ಒತ್ತಿ ಮಾತಾಡಿದರು. ಭಾರತದ ಉಪಕಾರ್ಯದರ್ಶಿ ಲೋರ್ಡ್ ಮನ್ಸ್ಟರರು ಹಿಂದೀ ಸರಕಾರದ ವರ್ತನೆಯನ್ನು ಸಮರ್ಥಿಸಿ ಉತ್ತರವಿತ್ತರು. ಕಾಮನ್ಸ್ ಸಭೆಯಲ್ಲಿ ಪ್ರಶ್ನೆಗಳು ಬಂದಾಗ ಮಿ ಅಮೆರಿಯವರಿತ್ತ ಉತ್ತರದಲ್ಲಿ ಕಳ್ಳ ದಾಸ್ತಾನು ಬಂಗಾಳದ ಬರಗಾಲಕ್ಕೆ ಕಾರಣವೆಂಬ ಅಭಿಪ್ರಾಯವಿತ್ತು. ಲೀಬ್ರೀಜ್ ಕಾರ್ಖಾನೆಯವರು ಮಿ. ಅಮೆರಿಯವರನ್ನು ಡಿಸ್‌ಮಿಸ್ ಮಾಡಬೇಕೆಂದು ಮಾಡಿಕೊಂಡ ವಿನಂತಿಯ ಕುರಿತು ಗೆಲಾಚರ್, ಶಿನ್‌ವೆಲ್, ಸೋರೆನ್ಸನ್ ಮೊದಲಾದ ಮೆಂಬರರು ಕೆಣಕಿ ಪ್ರಶ್ನಿಸಿದಾಗ ಚರ್ಚಿಲ್ಲರು ಜಾರಿಕೆಯ ಉತ್ತರವಿತ್ತು, ಅದು ಲೀಬ್ರಿಜಿ ಸಂತಸ್ಥಯಾವುದಾದರೊಂದು ವಿಭಾಗಕ್ಕೆ ಸಂಬಂಧಿಸಿದ ಪ್ರಶ್ನೆಯಲ್ಲವೆಂದರು. ಮಿ. ಫಜಲುಲ್ ಹಕ್ಕರ ರಾಜೀನಾಮೆಯ ಕುರಿತು ಪ್ರಶ್ನೆ ಬಂದಾಗ, ಮಿ. ಹಕ್ಕರೇ ರಾಜೀನಾಮೆ ಕೊಟ್ಟದೆಂದು ಮಿ. ಅಮೆರಿಯವರ ಉತ್ತರ. ಚರ್ಚಿಲ್ ಅಮೆರಿಗಳು ಪ್ರಶ್ನಾತೀತರೆಂದೇ ಹೇಳಬೇಕು!

ಇಂಗ್ಲಾಂಡು ಮತ್ತು ಅಮೇರಿಕ

ಅಮೇರಿಕದ ಕೆಲವು ಸಿನೇಟ್ ಮೆಂಬರರಿಗೇನೇ ಇಂಗ್ಲಾಂಡಿನ ಮೇಲಿರುವ ಜಿಗುಪ್ಸೆ ಅಸಾಧಾರಣವಾದುದು. ಅವರಲ್ಲೈವರು ಕಾಂಗ್ರೆಸಿಗೊಪ್ಪಿಸಿದ ವರದಿಯು ಬ್ರಿಟನಿನ ಮೇಲಿರುವ ಅವಿಶ್ವಾಸದ ಸೂಚೀಪತ್ರದಂತಿದೆ. ಈ ಕುರಿತು ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಬಂದಾಗ, ಇಂತಹ ಅನಧಿಕಾರೀ ವಾದಗಳೊಡನೆ ತಾವು ಮಾತು ಜಗಳಕ್ಕಿಳಿಯಲು ತಯಾರಿಲ್ಲವೆಂದು ಮಿ. ಚರ್ಚಿಲ್ಲರು ಘನಸ್ಥಿಕೆಯನ್ನು ಮುಂದೆ ಮಾಡಿ ಉತ್ತರಿಸಿದ್ದಾರೆ. "ಹಿಟ್ಲರನ ಸೋಲು ಇಂಗ್ಲಾಂಡು ರಶ್ಯಗಳಿಗೆ ಸಂಬಂಧಿಸಿದಷ್ಟು ಅಮೇರಿಕಕ್ಕೆ ಸಂಬಂಧಿಸಿಲ್ಲ. ಅವರಷ್ಟೇ ನಾವೂ ಆ ಕುರಿತು ಉತ್ಸಾಹ ಪ್ರದರ್ಶಿಸಿ ಹೆಚ್ಚೆಂದರೆ ಕೀರ್ತಿ ಗಳಿಸಬಹುದು" ಎಂದು ಬಹಿರಂಗವಾಗಿ ಹೇಳುವದಕ್ಕೂ ಓರ್ವ ಸದಸ್ಯರು ಹಿಂಜರಿದಿಲ್ಲ. ರಶ್ಯವು ಜಾಪಾನಿನ ವಿರುದ್ಧ ಸೈಬೇರಿಯದ ನಿಲ್ದಾಣಗಳ ಉಪಯೋಗವನ್ನೊಪ್ಪುವದಕ್ಕೂ ದ್ವಿತೀಯರಂಗ ನಿರ್ಮಾಣಕ್ಕೂ ಗಂಟು ಹಾಕಬೇಕೆಂದು ಕೆಲವರ ಅಭಿಪ್ರಾಯ. ಹೀಗೆ ಇಂಗ್ಲಾಂಡು ಅಮೇರಿಕಗಳೊಳಗೂ ಮನಸ್ತಾಪ; ರಶ್ಯಾ-ಇಂಗ್ಲಾಂಡು ಅಮೆರಿಕಗಳೊಳಗೆ ಮನಃ[illegible]ಸ್ತಾಪ! ಈ ತ್ರಿಮುಖಗಳನ್ನೂ ತಾಡಿಸುತ್ತಿರುವ ಹಿಟ್ಲರನೊಬ್ಬ ತಪ್ಪಿದ ಮರುದಿನ, ಹುಲಿಭೀತಿ ತಪ್ಪಿದ ಗೋರಿಗಳು ತಮ್ಮೊಳಗೇನೇ ಹೋರಾಡಿಕೊಳ್ಳಲಾರವೆ?

ಶಾಸ್ತ್ರಿ ಮತ್ತು ಸದ್ಯಸ್ಥಿತಿ

ಮಾನ್ಯ ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳು, ಅಮೆರಿ, ವೇವೆಲ್ ಮತ್ತು ಗಾಂಧಿಯವರಿಗೆ ಮೂರು ಬಹಿರಂಗ ಪತ್ರಗಳನ್ನು–ಸದ್ಯಸ್ಥಿತಿಗೆ ತಕ್ಕಂತಹ ಆತುರದೊಡನೆ, ಶಾಸ್ತ್ರಿಗಳಿಗೆ ಮಾತ್ರ ಸಾಧ್ಯವಾದ ಪರಿಣಾಮಕಾರೀ ಶೈಲಿಯಲ್ಲಿ–ಬರೆದಿದ್ದಾರೆ. 'ರಾಷ್ಟ್ರೀಯ ಮುಖಂಡರು ಕಣ್ಣಲ್ಲಿ ನೀರು, ಕೈಯ್ಯಲ್ಲಿ ಬೊಗಸೆಯೊಡನೆ ವೈಸರಾಯಿ ಗೇಟನ್ನು ತಾಯಬೇಕೆಂದು ವಿಧಿಸದೆ ನಾಗರಿಕತೆ ಪ್ರದರ್ಶಿಸಿರಿ'–ಎಂದು ಅಮೆರಿಯವರೊಡನೆ ಶಾಸ್ತ್ರಿಗಳ ಆಗ್ರಹದ ವಿನಂತಿ. "ಅಮೆರಿ ಬೋಧನೆಯೇ ಅಮೂಲ್ಯವೆನ್ನದೆ ರಾಷ್ಟ್ರೀಯ ಕೇಂದ್ರ ಸರಕಾರ ಸ್ಥಾಪಿಸುವ ನ್ಯಾಯದಾನ ಮಾಡಿರಿ" ಎಂದು ಲೋರ್ಡ್ ವೇವೆಲರಿಗೆ ಶಾಸ್ತ್ರಿಗಳ ಮನಮುಟ್ಟುವ ಹಿತೋಪದೇಶ. "ನಿಮ್ಮಂತೆ ಭಾರತೋದ್ಧಾರ ಮಾಡಿದ ಇನ್ನೊಬ್ಬನಿಲ್ಲ. ಈ ಬಾರಿಯ ಚಳವಳದ ನಿಮ್ಮ ಉದ್ದೇಶ ಫಲಿಸಿಲ್ಲ. ಆದ್ದರಿಂದ ಯೋಗ್ಯ ಸೇನಾನಿ ಸಂದರ್ಭಕ್ಕನುಸಾರವಾಗಿ ಕಾಲು ಹಿಂದೆಗೆವಂತೆ ಹಿಂದೆಗೆಯಿರಿ. ದೇಶದ ದಾರುಣ ಸ್ಥಿತಿ ನಿವಾರಣೆಗಾಗಿ ಹೊರಬನ್ನಿರಿ. ರಾಮಾಯಣದಲ್ಲಿ ಹನುಮಂತನಂದಿದ್ದ:-'ಸಣ್ಣ ಗುರಿಯೊಂದನ್ನು ಸೇರುವದಕ್ಕೂ ಒಂದೇ ಯೋಜನೆ ಸಾಕಾಗುವಂತಿಲ್ಲ; ವಿವಿಧ ವಿದ್ಯಮಾನಗಳಲ್ಲಿ ವಿವಿಧ ಯೋಜನೆಗಳನ್ನಂಗೀಕರಿಸುವವನೇ ವಿಜಯಿಯಾಗಬಲ್ಲನು'-ಅದರಂತೆ ವರ್ತಿಸಿರಿ"-ಎಂದು ಗಾಂಧಿಯವರೊಡನೆ ಶಾಸ್ತ್ರಿಗಳ ಕಳಕಳಿಯ ವಿಜ್ಞಾಪನೆ. ಈ ಕಾಲದಲ್ಲೂ ಶಾಸ್ತ್ರಿಗಳು ಶಾಸ್ತ್ರ ಹೇಳಿದರೆ ನಡೆದೀತೆ?

ಆಂಧ್ರ ಮತ್ತು ಕನ್ನಡ

ಕನ್ನಡಿಗಳ ಹೃತ್ಪೂರ್ವಕ ವಿಜ್ಞಾಪನೆ, ನ್ಯಾಯಬದ್ಧ ನಿಷೇಧಗಳನ್ನು ಕಡೆಗಣಿಸಿ ಆಂಧ್ರ ಮಹಾಸಭೆಯ 23ನೇ ಅಧಿವೇಶನವು ಇದೇ ತಾ. 23ರಿಂದ ಮಹಾರಾಜಾ ಕುಮಾರಾ ಸರ್. ವಿಜಯರ ಅಧ್ಯಕ್ಷತೆಯಲ್ಲಿ ಆರಂಭವಾಗಿದೆ. ಪೂರ್ಣ ಹರತಾಳ, ಎಲ್ಲೆಲ್ಲೂ ಕರಿ ನಿಶಾನೆ, ಪ್ರಚಂಡ ನಿಷೇಧ ಸಭೆಗಳ ಕಗ್ಗತ್ತಲನ್ನೇ ಬಳ್ಳಾರಿಯು ಆಂಧ್ರ ಸಮ್ಮೇಲನಕ್ಕೆ ನಿರ್ಮಿಸಿದೆ. ಮಹಾಸಭೆಯ ನಿಶ್ಚಿತ ಮೆರವಣಿಗೆ ನಡೆಯಲಿಲ್ಲ. ಸರ್. ವಿಜಯರು ಅಧ್ಯಕ್ಷ ಭಾಷಣದಲ್ಲಿ "ದೇಶದ ಪ್ರಾಮುಖ್ಯ ಪ್ರಶ್ನೆಗಳ ತೀರ್ಮಾನವಾಗುವ ವರೆಗೆ ಪ್ರತ್ಯೇಕ ಆಂಧ್ರ ಪ್ರಾಂತ್ಯ ನಿರ್ಮಾಣಕ್ಕಾಗಿ ತಡಮಾಡಬೇಕೆಂದಿಲ್ಲ. ಅದು ಪಾಕಿಸ್ತಾನ್ ಬೇಡಿಕೆಯಂತಹ ಕೃತ್ರಿಮ ಬೇಡಿಕೆಯಲ್ಲ; ಸರಕಾರವು ಪ್ರತ್ಯೇಕಾಂಧ್ರವು ಕಾಂಗ್ರೆಸ್ ಪ್ರಾಂತ್ಯವಾಗುವದೆಂದು ಹೆದರುತ್ತಿದೆ. ಭಾಷಾವಾರು ಪ್ರಾಂತ್ಯ ರಚನೆಯು ಮೂಲಭೂತ ಹಕ್ಕು" ಎಂದಿದ್ದಾರೆ. ಆದರೆ ಬಳ್ಳಾರಿಯ ಪ್ರಸ್ತಾಪವನ್ನೇ ಎತ್ತಿಲ್ಲ. ಯಾಕೆ? ಅಖಿಲ ಕರ್ನಾಟಕದ ವಿರೋಧ ಪ್ರದರ್ಶನ, ಬಳ್ಳಾರಿಯ ಮುಷ್ಕರಗಳಿಗೆ ಅವರ ಉತ್ತರವಿಲ್ಲವೇಕೆ? ಈ ರೀತಿ, ನ್ಯಾಯಬದ್ಧ ವಾದ, ವರ್ತನೆಗಳಿಗೆ ಸರ್. ವಿಜಯರಂತಹ ರಾಷ್ಟ್ರೀಯ ಮನೋವೃತ್ತಿಯವರ ಕಿವಿ, ಕಣ್ಣುಗಳೇ ಕುರುಡಾಗಿರುವಾಗ ಅಧಿಕಾರಿಗಳಿಗಾ ರೋಗವಿರುವುದರಲ್ಲಿ ಆಶ್ಚರ್ಯವೇನು?

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು, ಬಾಟ್ಲಿ 1ಂದರ ರೂ. 3—0—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಒಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಔಷಧಿ ಸಿಕ್ಕುವ ಸ್ಥಳ—1 ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ ಎಂಡ್ ಜನರಲ್ ಮರ್ಚೆಂಟ್ಸ್, 183 ಸುಪಾರಿಬಾಗ್ ರೋಡ್, ಪರೇಲ, ಬೊಂಬಾಯಿ, ನಂಬ್ರ 12 2. ಜನರಲ್ ಸ್ಟೋರ್ಸ್, ಜಿ. ಐ. ಪಿ. ಮಾಟುಂಗಾ. 3. ಮುಲ್ಲರ್ ಪೆಟರ್ನ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ. 4. ಧನ್ವಂತರಿ ವೈದ್ಯಶಾಲೆ, ಲೆನ್ಸ್‌ಡೌನ ಬಜಾರ್, ಮೈಸೂರು. 5. ಮಂಗ್ಳೂರು ಸ್ಟೋರ್ಸ್, ಮಡಿಕೇರಿ. 6. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ. 7. ಡಾ। ಶ್ರೀನಿವಾಸ ಪೈ, ಪುತ್ತೂರು. 8. ಕಾಂತಾವರ ವಾಸ್ದೇವ ಕಮ್ತಿ, ಬೆಳ್ತಂಗಡಿ. 9. ಮುಲ್ಕಿ ಮೆಡಿಕಲ್ ಸ್ಟೋರ್ಸ್, ಮುಲ್ಕಿ. 10. ನವಭಾರತ ಬುಕ್ ಡಿಪ್ಪೊ, ಸಂತೆಕಟ್ಟೆ, ಉಡುಪಿ. 11. ಕೃಷ್ಣಾ ಫಾರ್ಮೆಸಿ, ಕುಂದಾಪುರ. 12. ಎಚ್. ನರಸಿಂಹ ನಾಯ್ಕ, ಮರ್ಚೆಂಟ್, ಶಂಕರನಾರಾಯಣ. 13. ಕಾಸರಗೋಡು ಶ್ರೀ ರಾಮಾ ಸ್ಟೇಶನರಿ ಹೌಸ್, ಶ್ರೀ ರಾಮ ಪೇಟೆ. 14. ಕೆ. ಶ್ರೀನಿವಾಸ ಹೆಗ್ಡೆ, ತೀರ್ಥಹಳ್ಳಿ. 15. ಬಿ. ಯಸ್. ನರಿಸಿಂಗರಾವ್, ಮರ್ಚೆಂಟ್, ಚಿಕ್ಕಮಂಗ್ಳೂರು.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ವಿಶೇಷ ಸಾಮಾನುಗಳಿವೆ.

ತಾರುಣ್ಯ

ಕೊಟ್ಟು, ವೀರ್ಯಸ್ತಂಭನೆ ಮಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟುಮಾಡಲು ರಮಣ ವಿಲಾಸಿನಿ ಅತ್ಯುತ್ತಮ ಔಷಧಿ. ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ,

184 ಚೈನಾ ಬಜಾರ್ ರೋಡ್,

ಮದ್ರಾಸು.

ಪ್ರತಿಷ್ಠಿತರು ಏಜಂಟರು:—**ಸೈ ಫಾರ್ಮಸಿ**

ಯುದ್ಧ ಗತಿ

ಇಟೆಲಿಯಲ್ಲಿ ಮಿತ್ರರ ೮ನೇ ಮತ್ತು ೫ನೇ ಸೇನೆಗಳ ಪ್ರಗತಿ ನಿಧಾನವಾಗಿದೆ. ರೋಮನ್ನು ಮಾನವ ಸಾಧ್ಯವಾದ ಎಲ್ಲಾ ಯತ್ನದಿಂದ ವಶಪಡಿಸಿಕೊಳ್ಳಬೇಕೆಂಬ ಮಿತ್ರರ ತೀವ್ರಾಭಿಲಾಷೆಯನ್ನು, ರಸ್ತೆಗಳ ಲ್ಯಾಂಡ್ ಮೈನ್ಸ್ ಹಾಕಿ, ಸಂಕ ಸೇತುವೆ ಕಡಿದು ಜರ್ಮನರು ಕುಂಠಿತಗೊಳಿಸಿದ್ದಾರೆ. ನಿರೀಕ್ಷಿಸಿದಷ್ಟು ತೀವ್ರವಾಗಿ ಮುಂದೊತ್ತುವದಸಾಧ್ಯವೆಂದು ಮಿತ್ರ ಸೇನಾನಿಗಳು ಒಪ್ಪುತ್ತಾರೆ. ರಶ್ಯದಲ್ಲಿ ಕೆಂಪು ಸೇನೆಯ ಪ್ರಗತಿ ಸಾಗಿದೆ. ಸ್ಮೋಲೆಂಸ್ಕಿನ ಪಶ್ಚಿಮ ಕಡೆಯಿಂದ ನೂತನ ಧಾಳಿಯನ್ನು ಪ್ರಾರಂಭಿಸಿ ಹಲವೆಡೆಗಳಲ್ಲಿ ಮುನ್ನುಗ್ಗಿದ್ದಾರೆ. ಉಕ್ರೈನಿನಲ್ಲಿ ಪುನಃ ಹಲವು ಪ್ರಮುಖ ನಗರಗಳು ಕೆಂಪು ಸೇನೆಗೆ ದೊರೆತು ಡ್ನೀಪರ್ ರಣವು ಕೊನೆಯ ಹಂತದಲ್ಲಿದೆ. ಕೀವ್ ಮುತ್ತಿಗೆಯು ಹೋರಾಟ ನಡೆದಿದೆ. ಜರ್ಮನರ ಪ್ರತಿಭಟನೆಯ ತೀವ್ರತೆ ಈ ಬಾರಿ ಹೆಚ್ಚಿದೆ. ಜರ್ಮನಿಯ ಬರ್ಲಿನ್ ಮೊದಲಾದ ನಗರ, ಕೇಂದ್ರ ಸ್ಥಳಗಳ ಮೇಲೆ ನಿತ್ಯದ ವಿಮಾನ ಧಾಳಿ ನಡೆಯಿತು. ಕಳೆದ ವಾರ ದಿನ ತಪ್ಪದೆ ಲಂಡನ್ ವಲಯವೇ ಮೊದಲಾಗಿ ಇಂಗ್ಲೆಂಡಿನ ಹಲವು ಕಡೆಗಳಿಗೆ ನಾಜಿ ಧಾಳಿ ನಡೆದಿದೆ. ಶಾಂತ ಸಮುದ್ರದಲ್ಲಿಯೂ ಜಪಾನರ ಪ್ರತಿಭಟನೆಯು ಬಿಗಿತವೇರಿದೆ "ಮುಂದೆ ಮಹಾ ಗಂಡಾಂತರದ ಯುದ್ಧ ನಡೆಯಲಿದೆ. ನಾವು ಜಪಾನರನ್ನು ಸಮೀಪಿಸಿದಷ್ಟೂ ಅವರು ಭೀಕರಾವತಾರ ಧರಿಸುತ್ತಿದ್ದಾರೆ" ಎಂದು ಮಿತ್ರ ನಾವಿಕಾಧಿಪತಿ ರೀಯರ್ ಎಡ್ಮಿರಲ್ ಡಾನಿಯೇಲ್ ಬಾರ್ಬೆಯವರ ಅಂಬೋಣ.

ಹಿರಿಯಡ್ಕ ಸರ್ಕಲ್ ಮತದಾರರಲ್ಲಿ ವಿನಂತಿ.

ಇದೇ ಕಳೆದ ತಾ. ೧೮ರಲ್ಲಿ ನಡೆದ ಜಿಲ್ಲಾ ಬೋರ್ಡು ಉಪ ಚುನಾವಣೆಯಲ್ಲಿ ಪ್ರೀತ್ಯಭಿಮಾನದಿಂದ ತಮ್ಮ ಮತಗಳನ್ನಿತ್ತು ನನ್ನನ್ನು ಸದಸ್ಯನಾಗಿ ಚುನಾಯಿಸಿದ ಬಗ್ಗೆ ನಾನು ಹಿರಿಯಡ್ಕ ಮತ್ತು ಉದ್ಯಾವರ ಸೆಂಟರುಗಳ ಎಲ್ಲಾ ಮತದಾರರಿಗೂ, ನನಗೆ ಸರ್ವ ಸಹಕಾರ ಸಹಾಯವನ್ನಿತ್ತ ಯಾವತ್ತೂ ಮಹನೀಯರಿಗೂ ನಾನೀ ಮೂಲಕ ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸುತ್ತೇನೆ.

ನಾಗಣ್ಣ ಹೆಗ್ಡೆ, ಎ. ಎಂ.

ಹಿರಿಯಡ್ಕ }
24-10-43 }

ನೋಟೀಸು.

ದ. ಕ. ಜಿಲ್ಲಾ, ಪುತ್ತೂರು ತಾಲೂಕು, ಸುಬ್ರಹ್ಮಣ್ಯ ಗ್ರಾಮದ ಕುಲುಕುಂದದಲ್ಲಿ ವರುಷಂಪ್ರತಿ ಆಗುವ ಜಾನುವಾರು ಸಂತೆಯು ಇದೇ ಬರುವ ನವಂಬರ 12ರಿಂದ, 27ರ ವರೆಗೆ ಜರಗುವದು. ಸಂತೆಗೆ ತರಲ್ಪಡುವ ಪ್ರತಿಯೊಂದು ಜಾನುವಾರಿನ ಮೇಲೆ ಎಂದು ಆಕೆ ಪ್ರಕಾರ ಫೀಜು ವಸೂಲು ಮಾಡಲಾಗುವದು. ಅಗತ್ಯ ಸಂದರ್ಭ ಒದಗಿದಲ್ಲಿ ಹೆಚ್ಚಿಗೆ ಫೀಜು ವಸೂಲುಮಾಡಲಾಗುವದು. ಮೈಸೂರು ಪ್ರಾಂತ್ಯದಿಂದ ಜಾನುವಾರುಗಳನ್ನು ತರುವಕೆಂದಿರುವ ವ್ಯಾಪಾರಿಗಳು ಕೃಷ್ಣ ಸಮಯದಲ್ಲಿ ಬೇಕಾದ ಹುಕುಮಿಗೆ, ಮೈಸೂರು ಪ್ರಾಂತ್ಯದ ಸಂಬಂಧಪಟ್ಟ ಜಿಲ್ಲಾ ಮೆಜಿಸ್ಟ್ರೇಟರಿಗೆ ಬಂಕೊಳ್ಳಕ್ಕೃದ್ದು ಎಂಕ ಪುತ್ತೂರು ರೆವಿನ್ಯೂ ಡಿ. ಆಫೀಸರರು ತಿಳಿಸುತ್ತಾರೆ.

ದ. ಕ. ವರ್ಗದಾರರ ಸಂಘ, ಮಂಗಳೂರು

(ದಕ್ಷಿಣ ಕನ್ನಡದ ಅಕ್ಕಿ ನಿಯಂತ್ರಣ).

ದ. ಕ. ಜಿಲ್ಲಾ ಕಲೆಕ್ಟರರಿಂದ ಇದೇ ತಾ. 26-9 1943ರಲ್ಲಿ ಕರೆಯಲ್ಪಟ್ಟ ಸಮ್ಮೇಲನದಲ್ಲಿ ದ. ಕ ವರ್ಗದಾರ ಸಂಘದ ಅಧಿಕಾರೀ ಮೆಂಬರರು ಮತ್ತು ಇತರ ಕೆಲವು ಮುಖ್ಯ ವರ್ಗದಾರರು, ಕಲೆಕ್ಟರರ ಮುಂದೆ ಈ ಕೆಳಗಿನ ಸೂಚನೆಗಳನ್ನು ಮಂಡಿಸಿದ್ದಾರೆ:—

1 ದಕ್ಷಿಣ ಕನ್ನಡದ ಎಲ್ಲಾ ಮುಖ್ಯ ಪಟ್ಟಣಗಳಲ್ಲೂ ಹಸುಗೆ ಪದ್ಧತಿಯನ್ನು (ರೇಶನಿಂಗ್) ಜ್ಯಾರಿಗೆ ತರಬೇಕು. ಮತ್ತು ಹಸುಗೆ ಜ್ಯಾರಿಯಲ್ಲಿರುವ ಪ್ರದೇಶಗಳಲ್ಲಿ ವರ್ತಕರು ವ್ಯಾಪಾರ ಮಾಡದಂತೆ ಪ್ರತಿಬಂಧಿಸಬೇಕು ಪಡಕೊಳ್ಳೋಣ, ಸಂಗ್ರಹ, ವಿತರಣೆ—ಇವೆಲ್ಲವುಗಳ ಜವಾಬ್ದಾರಿಯನ್ನು ಸಹಕಾರ ಸಂಘಗಳಿಗೆ ಕೊಡಬೇಕು.

2 ಹಸುಗೆ ಪದ್ಧತಿಯಿರುವ ಪ್ರದೇಶಗಳಿಗೆ ಬೇಕಾಗುವ ಸಂಗ್ರಹಕ್ಕಾಗಿ, ರೂ.50 ಅಥವಾ ಹೆಚ್ಚಿಗೆ ತೀರ್ವೆ ಕೊಡುವ ಎಲ್ಲಾ ವರ್ಗದಾರರಿಂದ 'ರಿಕ್ವಿಜಿಶನ್' ಮೂಲಕ ಅಕ್ಕಿಯನ್ನು ಪಡೆಯಬೇಕು.

3 ತಮ್ಮ ಅಕ್ಕಿ ಉತ್ಪತ್ತಿಯಲ್ಲಿ ಸೇಕಡಾ ೨೫ರಷ್ಟನ್ನು 1944ನೇ ಫೆಬ್ರವರಿಯೊಳಗೆ ಕೊಡಲು ವರ್ಗದಾರರ ಒಪ್ಪಿಗೆಯಿದೆಯಲ್ಲದೆ, ಅಗತ್ಯವಿರುವಷ್ಟು ಸಂಗ್ರಹವಾಗಲಿಲ್ಲವೆಂದಾದರೆ ಪುನಃ ತಮ್ಮ ಅಕ್ಕಿ ಉತ್ಪತ್ತಿಯ 25% ರಷ್ಟನ್ನು 1944ನೇ ಎಪ್ರಿಲಿನೊಳಗೆ ಕೊಡಲಿದ್ದಾರೆ. ಅಂಥಾ ವರ್ಗದಾರರ ಮೇಲೆ ಮತ್ತೆ 'ರಿಕ್ವಿಜಿಶನ್' ಇರಬಾರದು.

4 ಸರಕಾರವು, ತಾಲೂಕು ಮತ್ತು ಸಬ್ ತಾಲೂಕು ಕೇಂದ್ರಗಳಲ್ಲಿ ಅಕ್ಕಿ ಪಡಕೊಳ್ಳುವರೆ ಆಫೀಸರರನ್ನು ನೇಮಿಸಬೇಕು ಮತ್ತು ವರ್ಗದಾರರು ಮೇಲೆ ನಮೂದಿಸಿದ ಅವಧಿಯೊಳಗೆ, ಸ್ವಂತ ತಾವೇ ಅಕ್ಕಿಯ ಸ್ಟಾಕನ್ನು ಕೇಂದ್ರಗಳಿಗೆ ತಂದೊಪ್ಪಿಸಬೇಕು. ಹಾಗೆ ಒಪ್ಪಿಸಿದ ಕೂಡಲೇ ಅವುಗಳ ಬೆಲೆಯು ನಗದಿಯಾಗಿ ವರ್ಗದಾರರಿಗೆ ದೊರೆಯಬೇಕು.

[illegible] ಗೇಣಿದಾರರ ಕಡೆಗಳಿಂದ ಒಕ್ಕಲುಗಳಿಂದಾಗಲಿ, ವರ್ಗದಾರರಿಂದಾಗಲಿ—ಬತ್ತವನ್ನು ರಿಕ್ವಿಜಿಶನ್ ಮಾಡಲೇಬಾರದು. ಯಾಕೆಂದರೆ, ಅವರಿಂದ ಮುಂದಿಗೆ 3ರಿಂದ 4 ತಿಂಗಳ ವರೆಗೆ ಅಕ್ಕಿ ಸಿಕ್ಕುವಾಗುತ್ತದೆ ಮತ್ತು ಜಾನುವಾರುಗಳಿಗೆ ಗತ್ಯಂತರವ ತೌಡು ಮತ್ತು 'ಬೂಸಾ'ಗಳ ಅಭಾವವುಂಟಾಗುತ್ತವೆಯೆಲ್ಲವೆ. ಈ ಜಿಲ್ಲೆಯಲ್ಲಿ ಏಕಮಾತ್ರವಿರುವ ಹಳ್ಳಿ ಉದ್ಯೋಗವನ್ನೂ ನಾಶಮಾಡಿದಂತಾಗುತ್ತದೆ. ಬೇಸಾಯ ಖರ್ಚು, ಒಯ್ಯೋಣ-ಗೋಡೌನ್ ಚಾರ್ಜು ಹಾಗೂ ಚಿಕ್ಕ ಮೊತ್ತದ ಧನದ ಬಡ್ಡಿಯಾಗಿ ಸ್ವಲ್ಪಾಂಶ ಮುನಾಫೆ ಮಾತ್ರ ಹಿಡಿದು ಪೇಟೆ ಪಟ್ಟಣಗಳಿಗೆ ಬೇಕಾಗುವ ಅಕ್ಕಿಯನ್ನು ಒದಗಿಸುವ ಉದ್ದೇಶವನ್ನಿಟ್ಟುಕೊಂಡೇ ಮೇಲಿನ ಸೂಚನೆಗಳನ್ನು ಮಾಡಿಪಡಾಗಿದೆ. ಮದ್ರಾಸ್ ಸರಕಾರದಲ್ಲಿ ಈಗ ಜ್ಯಾರಿಯಲ್ಲಿರುವ ಮಾರಾಟದ ಧಾರಣೆಯೆಂದರೆ ಮುಡಿಗೆ ರೂ.11-3-3 ಇದೇ ಧಾರಣೆಯು ಇತರ ಕಡೆಗಳಲ್ಲೂ ಇದೆ. ಮದ್ರಾಸ್ ಗವರ್ನರರ ಸಲಹೆಗಾರರು ಇದು ನ್ಯಾಯವಾದ ಧೋರಣೆಯೆಂದು ಒಪ್ಪಿಕೊಂಡಿದ್ದಾರೆ. ಈ ಆಧಾರದ ಮೇಲೆಯೇ ಅಕ್ಕಿಗೆ ಮುಡಿಗೆ ರೂ 10ರಂತೆ ದೊರೆಯಬೇಕೆಂದು ವರ್ಗದಾರರ ಬೇಡಿಕೆಯಿದೆ. ತಾಲೂಕು ಅಥವಾ ಸಬ್ ತಾಲೂಕು ಕೇಂದ್ರಗಳಿಗೆ ಅಕ್ಕಿಯನ್ನು ತಂದೊಪ್ಪಿಸುವ ಖರ್ಚನ್ನು ತಾವೇ ನೋಡಿಕೊಳ್ಳುವದಕ್ಕೆ ಅವರು ಒಪ್ಪಿಗೆಯಿದೆ. ಸಮಗ್ರ, ಸರಕಾರವು ಅಧಿಕೃತವಾಗಿ ತನ್ನ ಉದ್ದೇಶವನ್ನು ತಿಳಿಸಿರುವದೇನೂ ಇಲ್ಲ; ಸಂಘವು ತನ್ನ ಈ ಸೂಚನೆಗಳನ್ನು ಅಂಗೀಕರಿಸಿಕೊಳ್ಳುವಂತೆ ಎಡ್ವೈಸರರಿಗೆ ಒಲಿದುಕೊಂಡಿದೆ. ಎಡ್ವೈಸರರು ನವಂಬರ್ ತಿಂಗಳಲ್ಲಿ ಈ ಜಿಲ್ಲೆಯನ್ನು ಸಂದರ್ಶಿಸುವ ಅವಕಾಶವನ್ನಿತ್ತಿದ್ದಾರಲ್ಲವೆ, ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸಿ ತನಗೆ ವರದಿಯೊಪ್ಪಿಸುವಂತೆ ಸಿವಿಲ್ ಸಪ್ಲೈಸ್ ಡಿಪ್ಯುಟಿ ಕಮಿಶನರರನ್ನು ಕಳುಹಿಕೊಟ್ಟಿದ್ದಾರೆ. ಅವರು ಮಂಗಳೂರಿಗೆ ಬಂದಿದ್ದಾರಲ್ಲದೆ ಉಡುಪಿಯನ್ನೂ ಸಂದರ್ಶಿಸಿದ್ದಾರೆ. ತಾ|18-10-43ರಲ್ಲಿ ಸಂಘದವರು ಮತ್ತು ಇತರ ಪ್ರಮುಖ ವರ್ಗದಾರರು ಅವರ ಭೇಟಿಮಾಡಿ ಮೇಲಿನ ಸೂಚನೆಗಳನ್ನು, ಅವುಗಳ ಕಾರಣಗಳೊಟ್ಟಿಗೆ ವಿವರವಾಗಿ ನಿವೇದಿಸಿಕೊಂಡಿದ್ದಾರೆ. ಅಕ್ಕಿ ಧಾರಣೆಯ ಭಾಗವೊಂದರ ವಿನಹ ಮಿಕ್ಕ ಎಲ್ಲಾ ಸೂಚನೆಗಳನ್ನು ಬಳಸುವವರು ಒಪ್ಪಿಕೊಂಡಿದ್ದಾರೆನ್ನಲು ಸಮಾಧಾನವಾಗುತ್ತದೆ.

ಕೊನೆಯ ತೀರ್ಮಾನವೇನೂ ಆಗಲಿಲ್ಲ. ಈ ಜಿಲ್ಲೆಯ ಆಹಾರ ಸಮಸ್ಯೆಯು ಸರ್ವ ಪ್ರಾಮುಖ್ಯ ಪ್ರಶ್ನೆಯನ್ನು ಸರಕಾರವು ತೀರ್ಮಾನಿಸುವದೆಂದು ನಾವು ಆಶಿಸುತ್ತೇವೆ. ಈ ಮಹಾ ಸಮಸ್ಯಾ ಪರಿಹಾರ ಕಾರ್ಯದಲ್ಲಿ ಸರ್ವೋಕನೆ ಸಹಕರಿಸಬೇಕೆಂದೂ, ತಮ್ಮ ತಮ್ಮ ಒಕ್ಕಲುಗಳ ಹಾಗೂ ಸಾಗುವಳಿ ಕೆಲಸಗಾರರ ಹಿತ ಸಂಬಂಧಗಳನ್ನು ಕಾಪಾಡಿಕೊಳ್ಳಬೇಕೆಂದೂ, ಅವಕ್ಕಾಗಿ ಗಲಿಬಿಲಿಗೊಳ್ಳಬಾರದೆಂದೂ ವರ್ಗದಾರರಲ್ಲಿ ನಮ್ಮ ವಿನಂತಿ.

ಡಿ. ಮಂಜಯ್ಯ ಹೆಗ್ಡೆ,
ಕೆ. ಬಿ. ಜೆ. ಹೆಗ್ಡೆ,
ಕೆ. ಎಸ್ ಹೆಗ್ಡೆ (ಗೌ. ಕಾರ್ಯದರ್ಶಿ)

ತಾರೀಖು 31—10—43ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ

ಚಿತ್ರಗಳಲ್ಲಿ ಅತ್ಯುತ್ಕೃಷ್ಟ ಚಿತ್ರವೆನಿಸಿದ

ಚಿತ್ರಲೇಖಾ

ನಂದ್ರೇಕರ್, ಮೆಹತಾಬ್, ರಾಮ ದುಲಾರಿ, ಗ್ಯಾನಿ ಮೊದಲಾದವರು.

ಒಬುವರು:- ಪುರಂದರದಾಸ

Notice

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ.

O. P. No. 105/1943

ರತಿ ಸೆಟ್ಟಿ ಕೂಡಾ 4 ಜನರು— ಅರ್ಜಿದಾರರು.
1. ಮಹಾಲಿಂಗ ಸೆಟ್ಟಿ, 2. ಲಕ್ಷ್ಮೀನಾರಾಯಣ ಸೆಟ್ಟಿ— ಎದ್ರಿರು.

ಈ ಮೂಲಕ ಸಕಲ ಜನರಿಗೆ ತಿಳಿಸುವದೇನೆಂದರೆ ಉಡ್ಪಿ ತಾಲೂಕು ಎಲ್ಲೂರು ಗ್ರಾಮದ ಕುಂಜೂರು ಹೊಸಮನೆಯೆಂಬಲ್ಲಿ ಮೃತಪಟ್ಟ ನೇತ್ರಾವತಿ ಸೆಡ್ತಿಗೆ ಬರಬೇಕಾದ ಸಾಲ ಬಗ್ಗೆಗಳನ್ನು ವಸೂಲು ಮಾಡುವರೆ, ಅವಳು ತಾ. 22-7-1943ರಲ್ಲಿ ಬರೆದಿಟ್ಟ ವೀಲು ಪ್ರಕಾರ ಅವಳ [illegible] 4ನೇ ಅರ್ಜಿದಾರಳು ವ್ಯವಸ್ಥಕಳಾದ [illegible] ದಾರಳಾಗಿರುವದರಿಂದ ಸದ್ರಿ ಕಲೆಕ್ಷನ್ ವಾರಿಸು ಸರ್ಟಿಫಿಕೇಟು ಕೊಡಬೇಕಾಗಿ ಅಪೇಕ್ಷಿಸಿ ಅರ್ಜಿದಾರರು ಮೇಲ್ಕಾಣಿಸಿದ ಕೋರ್ಟಿನಲ್ಲಿ ಅರ್ಜಿ ಕೊಟ್ಟಿರುತ್ತಾರೆ. ಅದ್ದರಿಂದ ಆ ವಿಷಯದಲ್ಲಿ ಆಕ್ಷೇಪವುಳ್ಳಂಥವರು ತಾ. 13-11-1943ನೇ ಹಗಲು ಗಂಟೆ 10ಕ್ಕೆ ಸದ್ರಿ ಕೋರ್ಟಿನ ಮುಂದೆ ಸ್ವತಃ ಯಾ ವಕೀಲರ ದ್ವಾರಾ ಹಾಜರಾಗಿ ಅವರವರಿಗೆ ಇರತಕ್ಕ ಆಕ್ಷೇಪಗಳನ್ನು ತಿಳಿಸಿ ರುಜುಪಡಿಸತಕ್ಕದ್ದು. ತಪ್ಪಿದರೆ ಸದ್ರಿ ಅರ್ಜಿಯು ಅರ್ಜಿದಾರರ ಗುಣಕ್ಕೆ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಈ ಮೂಲಕ ಕೋರ್ಟು ಹುಕುಂ ಪ್ರಕಾರ ತಿಳಿಸಲಾಗುತ್ತದೆ.

K. M. Hegde, B. A. B. L.

ತಾರೀಕು 24-10-43 } ಅರ್ಜಿದಾರರ ಕಡೆ
ಕಾರ್ಕಳ } ವಕೀಲ್.

ಪ್ರಕಟಣೆ.

ಇದೇ ಬರುವ ನವಂಬರ ತಿಂಗಳಲ್ಲಿ ಮಾನ್ಯ ಗವರ್ನರರ ಎಡ್ವೈಸರರು ನಮ್ಮ ಜಿಲ್ಲೆಯಲ್ಲಿ ಅಕ್ಕಿ ಮತ್ತು ಬತ್ತದ ರಿಕ್ವಿಸಿಶನ್ ಕುರಿತು ವಿಚಾರಿಸತಕ್ಕ ನಿಮಿತ್ತ ಸಂಚರಿಸಲಿಕ್ಕಿದಾರೆ. ಆ ಸಂದರ್ಭದಲ್ಲಿ ಈ ಕೆಳಗಿನ ಮಾಹಿತಿಗಳು ಅಗತ್ಯವಿರುವುದರಿಂದ ನಮ್ಮ ತಾಲೂಕಿನ ರೈತರೆಲ್ಲಾ ಅವುಗಳನ್ನು ಕೂಡಲೇ ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇವೆ.

1 ಕಳೆದ ವರ್ಷ ಪ್ರತಿಯೊಬ್ಬ ರೈತನಿಂದ ರಿಕ್ವಿಸಿಶನ್ ಮಾಡಿದ ಅಕ್ಕಿ ಎಷ್ಟು? ಯಾವ ತಾರೀಕಿನಲ್ಲಿ ರಿಕ್ವಿಸಿಶನ್ ಮಾಡಿದ್ದು? ಹಾಗೆ ರಿಕ್ವಿಸಿಶನ್ ಮಾಡಿದ ಅಕ್ಕಿಯನ್ನು ಸರಕಾರದವರು ಈ ವರೆಗೆ ಕೊಂಡುಹೋಗಿದ್ದಾರೋ? ಹಾಗೆ ಕೊಂಡುಹೋಗಿದ್ದರೆ ಯಾವ ತಾರೀಕಿನಲ್ಲಿ? ಮತ್ತು ಕೊಂಡುಹೋದ ಅಕ್ಕಿಯ ಕ್ರಯ ಬಂದಿದೆಯೇ? ಬಂದಿದ್ದರೆ ಯಾವಾಗ ತಾರೀಕಿನಲ್ಲಿ ಎಷ್ಟೆಷ್ಟು ಬಾಕಿ ಇದ್ದರೆ ಎಷ್ಟು?

2 ಈ ವರ್ಷ ಪ್ರತಿ ವರ್ಗದಾರರಿಂದ ಎಷ್ಟೆಷ್ಟು ಬತ್ತ ರಿಕ್ವಿಸಿಶನ್ ಆಗಿದೆ; ಅಂತಹ ವರ್ಗದಾರರ ಅಕ್ಕಿ ಹುಟ್ಟುವಳಿ ಎಷ್ಟು ಮತ್ತು ಅವರು ಕೊಡತಕ್ಕ ತೀರ್ವೆ ಎಷ್ಟು?

ಬತ್ತ ರಿಕ್ವಿಸಿಶನ್ ಬಗ್ಗೆ ವಿಚಾರಿಸತಕ್ಕ ಕೈಫಿಯತ್ ಅರ್ಜಿಗಳಿಗೆ ಕೋರ್ಟು ಫೀ ಸ್ಟ್ಯಾಂಪು ಹಚ್ಚುವ ಅಗತ್ಯವಿರುವುದಿಲ್ಲ.

ಕೆ. ಜೆ. ಬಲ್ಲಾಳ್, (ಅಧ್ಯಕ್ಷ),
ಉಡುಪಿ ತಾಲೂಕು ವರ್ಗದಾರರ ಸಂಘ.

ಉಡುಪಿ, 26-10-43

Degrees: Books: Medicines
Free H. L. M. S. M. B. H. M. D, etc. Free Homeo-Ayur-UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp:—
Prof. Dr. N. H. Chhatbar,
Principal Indian Homeopathi Institute & Society (Govt. Regd)
P. O. MAHUVA (Kathiawar Dt. India.)

Sidha-Kalpa Kavach (Regd.)
No. 3 Rs 2. No. 2 Rs. 4 No. 1 Rs. 7. Special Rs. 10, Extra Special Rs. 17 for ove marriage health, wealth. Ask any six questions with M. O. Re. 1/4 and get correct answers by returnpost Life reading Rs.10 No V.P.P.SendM.O,Free.dmplets.
Prof. Dr. N. H. Chhatbar,
P. O. MAHUVA (Kathiawar India.)

ಪ್ರಕಟಣೆ.

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisseri.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ- ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ವಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಸ್ತುಗಳ ತಲುಪಿಸುವವಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಸ್ತುಗಳನ್ನು ಮೇಲ್ಕಂಡ ವಿಳಾಸಕ್ಕೆ ಮನಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಕಾದಾಗಿ ಪ್ರಾರ್ಥನೆ.

ಪಿ. ಯಂ. ಕುಞ್ಞಿರಾಮನ್,
ಮನೇಜರ್.

The Canara Banking Corporation Limited.
(Incorporated in British India with limited Liability)
ESTD: 1906

ANNOUNCEMENT.

A Branch of the Bank will be opened shortly at:-

BANGALORE CITY,
(ARCOT SREENIVASACHARS STREET.)

ಉಡುಪಿ, ಗುರುವಾರ, ೨೮-೧೦-೧೯೪೩.

ದ. ಕ. ಜಿಲ್ಲೆಯ ಕಳವಳ.

ಮದ್ರಾಸ್ ಸರಕಾರವು ಒಕ್ಕಲುಗಳ ಗೇಣಿ ಭತ್ತವನ್ನೇ 'ರಿಕ್ವಿಜಿಶನ್' ಮಾಡಿರುವ ನೂತನ ವಿಧ್ಯಮಾನದಿಂದ ದಕ್ಷಿಣ ಕನ್ನಡದಲ್ಲೆದ್ದಿರುವ ಕಳವಳವು ಅಸಾಮಾನ್ಯವಾದುದು. ಅದು ಮೊಗಲರಾಳಿಕೆಯ ಕಾಲದ ಹಲವು ಕಹಿ ಅನುಭವಗಳ ಪುನರಾವರ್ತನೆಯಂತಿದ್ದು ಸ್ವಾಭಾವಿಕ ದಿಗಿಲನ್ನೆಬ್ಬಿಸಿದೆ. ಆದರಲ್ಲೂ ಸಖೇದಾಶ್ಚರ್ಯ ವಿಷಯವೆಂದರೆ, ಇಂತಹ ಪ್ರಾಮುಖ್ಯ ಬದಲಾವಣೆಯನ್ನು ಮುಂದಾಗಿ ಜನತೆಯ ಪರಿಶೀಲನೆಗೊಪ್ಪಿಸದಿದ್ದುದು. ತನ್ನೀ ಯೋಜನೆಯ ಕುರಿತು ಅಭಿಪ್ರಾಯ ತಿಳಿಯಬೇಕೆಂಬ ಹಂಬಲ ಮದ್ರಾಸ್ ಸರಕಾರಕ್ಕಿದೆ. ಸಿವಿಲ್ ಸಪ್ಲೈ ಖಾತೆಯ ಡಿಪ್ಯುಟಿ ಕಮಿಶನರ್, ರಾವ್ ಸಾಹೇಬ್ ಆರ್. ಸಿ. ರಾಥೋ-ಇವರು ಇತ್ತೀಚಿನ ವಿಧ್ಯಮಾನಗಳನ್ನು ಪರಿಶೀಲಿಸಿ ವರದಿಯೊಪ್ಪಿಸಲು ದಕ್ಷಿಣ ಕನ್ನಡಕ್ಕೆ ಬಂದು ಹೋಗಿದ್ದಾರೆ; ಮದ್ರಾಸ್ ಗವರ್ನರರ ಸಲಹೆಗಾರರು ನವಂಬರದಲ್ಲಿ ಬರಲಿರುವರೆಂದೂ ತಿಳಿದುಬರುತ್ತದೆ. ಇವರು ದಕ್ಷಿಣ ಕನ್ನಡಿಗರ ಸೂಚನೆಗಳೇನೆಂಬುದನ್ನು ವಿಚಾರಿಸಿ ತಿಳಿದುಕೊಂಡಿದ್ದಾರೆ. ಆದರೆ ಈ ವಿಚಾರಣೆಗಿಷ್ಟು ತಡವೇಕೆ? ಯೋಜನೆ ತಯಾರಿಯ ಮೊದಲೇ ಜನತಾಭಿಪ್ರಾಯವನ್ನು ಪಡೆಯುತ್ತಿದ್ದರೆ ಆಗಬಹುದಾಗಿದ್ದ ನಷ್ಟವೇನು? ಹಾಗೆ ಮಾಡುವ ಬದಲಿಗೆ ಅತ್ತ ಒಕ್ಕಲುಗಳಿಗೆಲ್ಲಾ ಆಜ್ಞೆ ಹೊರಡಿಸಿ, ಇತ್ತ ಕೆಲವರ ಅಭಿಪ್ರಾಯ ಸೂಚನೆಗಾಮಂತ್ರಣ ಕೊಡುವ ಈ ಕೈ-ಬಾಯಿ ವ್ಯತ್ಯಾಸವು ಶೋಚನೀಯವಾದುದು; ಸಂದೇಹಾಸ್ಪದವಾದುದು. ಬಾಯಿ ತುತ್ತಿನ ಮೇಲೂ ಹದ್ದೆರಗಿದಂತಹ, ಸಿಡಿಲು ಬಡಿದಂತಹ, ಆಜ್ಞೆಗಳನ್ನು ಹೊರಡಿಸುವ ಒಂದು ಸರಕಾರವು ಜನರಲ್ಲಿ ದಿಗಿಲನ್ನಲ್ಲದೆ ಬೇರಾವುದನ್ನು ತಾನೇ ನಿರ್ಮಿಸಬಲ್ಲುದು?

ಒಮ್ಮೆ ತಾಡನಕೊಟ್ಟು ಮತ್ತೊಮ್ಮೆ ಇಂತಹತೈಲ ಹಚ್ಚುವ ಮಾತೃಪ್ರೇಮವುಂದಿದೆ; ಸರಕಾರವಿನ್ನು ಈ ಹೃದಯವನ್ನಾದರೂ ಪ್ರದರ್ಶಿಸಬೇಕು. ತನ್ನೀ ಹೊಡೆತಕ್ಕೆ ತಾನೇ ಔಪಚಾರಿಕ ಚಿಕಿತ್ಸೆಯನ್ನಾದರೂ ಮಾಡಬೇಕು. ಧನಿಗಳಿಗೆ ಗೇಣಿಯಾಗಿಸಲತಕ್ಕ ಭತ್ತವನ್ನು ನೇರಾಗಿ ಒಕ್ಕಲುಗಳಿಂದಲೇ ಸರಕಾರವು ಸೆಳೆದುಕೊಳ್ಳಲಿರುವದರಿಂದ ಭೂಮಾಲಿಕರು ಸಹಜವಾಗಿ ಕಳವಳಗೊಂಡಿದ್ದಾರೆ. ತಮ್ಮದಾಗಿದ್ದ 'ಧನಿತ್ವ'ವು ಸರಕಾರದ ಕೈಗೆ ಬಂತು. ಗೇಣಿಯ ಬಹ್ವಂಶವನ್ನು ಸರಕಾರಕ್ಕೆ ಒಪ್ಪಿಸಲೇಬೇಕೆಂಬ ಹೊಸ ನಿರ್ಬಂಧ ಬಂದ ಮೇಲೆ ತಾವೀಗ ಸರಕಾರದ ಒಕ್ಕಲುಗಳಾಗಿ ಮಾರ್ಪಟ್ಟಿದ್ದೇವೆ—ಗೇಣಿಯ ಬಾಕಿ ಅಂಶವನ್ನು ಭೂಮಾಲಿಕರಿಗೆ ಕೊಡಲೇಬೇಕೆಂದೇನು-ಎಂದು ತಮ್ಮನ್ನು ಒಕ್ಕಲುಗಳು ವಂಚಿಸಿಯಾರೆಂದು ಧನಿಗಳ ಭಯ. ಸತ್ಯಸ್ಥಿತಿಯೆಂದರೆ ಈ ಹೊಸ ನಿಯಮವು ಭೂಮಾಲಿಕರಿಗೆ ಶೋಕದಾಯಿಯಾಗಿದ್ದರೆ, ಒಕ್ಕಲುಗಳಿಗೆ ಸಂಕಟದಾಯಿಯಿದೆ. ಅವರು ಧನಿಗಳನ್ನು ಕಾಡಿ, ಬೇಡಿ, ಸಮಜಾಯಿಸಿ, ಅಥವಾ ಅನಿವಾರ್ಯವಾಗಿ ವಂಚಿಸಿ, ಈ ತನಕ ಪಡೆಯುತ್ತಿದ್ದ ಗೇಣಿರಿಯಾಯಿತಿಗಳನ್ನು ಈ ಯೋಜನೆಯು ನುಣ್ಣಮಾಡಿತೆಂದು ಭಾವಿಸಿ ಬೇಕು. ಯಾವ ಆಟವನ್ನೂ ನಡೆಯಬಿಡದೆ ಗೇಣಿಯ ಬಹುಭಾಗವನ್ನು ಸರಕಾರವೆಂತೂ ಸೆಳೆದುಕೊಳ್ಳುತ್ತದೆ; ನೇರಾಗಿ ತನಗೆ ದೊರೆಯತಕ್ಕ ಅಂಶದ ಬಾಬಿನಲ್ಲಿ ಧನಿಯೂ ಮತ್ತಷ್ಟು ನಿಷ್ಠುರನಾಗುತ್ತಾನೆ. ಒಕ್ಕಲುಗಳ ಮೇಲೆ ಅವನಿಗಿರುವ ಕಾನೂನು ಬದ್ಧ ಅಧಿಕಾರಕ್ಕೆ, ಯಜಮಾನಿಕೆಯ ಸ್ಥಾನಮಾನಕ್ಕೆ, ಈ ಯೋಜನೆಯು ಭಂಗತಂದಿಲ್ಲ. ಅಂದ ಮೇಲೆ ಒಕ್ಕಲು ಬೇಸಾಯಗಾರರಿಗೀಗ ಮುಂಗಡೆಯ ಓರ್ವ ಕಾವಲುಗಾರನ ಬದಲಿಗೆ, ಎಡಬಲ ಕಾಯುವ ಇಬ್ಬರು ಪಹರೆಗಾರರೊದಗಿದ್ದಾರೆ; ಅವ ಕತ್ತಿಯ ಬಾಯಿಯ ಬದಲಿಗೆ ಕತ್ತರೀ ಬಾಯಿಯಲ್ಲಿ ಬಿದ್ದಿದ್ದಾನೆ!

ಇನ್ನು ಈ ಯೋಜನೆಯನ್ನು ಜ್ಯಾರಿಗೆ ತರುವಾಗ ಅಧಿಕಾರಿಗಳಿಂದ ಆಗಬಹುದಾದ ಅನ್ಯಾಯಗಳನ್ನು ಊಹಿಸಿಕೊಂಡರೆ ಯಾವ ರೈತನಲ್ಲಾದರೂ ಇಹವೈರಾಗ್ಯ ಮೂಡೀತು! "ನಮ್ಮ ಜಿಲ್ಲೆಯಲ್ಲಿ ರೆವಿನ್ಯೂ ಅಧಿಕಾರಿಗಳಿಗೆ ಅಪರಿಮಿತಾಧಿಕಾರ ಕೊಡಲ್ಪಟ್ಟಿದೆ. ರೆವಿನ್ಯೂ ಅಧಿಕಾರಿಗಳು ಲಂಚಪಡೆದು ಹಣಗಳಿಸುತ್ತಿದ್ದಾರೆಂದು ತಿಳಿದುಬಂದಿದೆ. ಡಿಫೆನ್ಸ್ ಕಾನೂನಿಗಂಜಿ ಜನರಾರೂ ಬಾಯಿಬಿಡುವದಿಲ್ಲ. ಸರಕಾರವು ಅಧಿಕಾರಿಗಳ ಲಂಚ ಖೋರತನದ ವಿರುದ್ಧ ಚಳವಳ ಹೂಡದಿದ್ದರೆ, ನೌಕರರ ಪ್ರತಿಯೊಂದು ಅನ್ಯಾಯವೂ ಸರಕಾರದ್ದೇ ಎಂದು ಜನರು ತಿಳಿದುಕೊಳ್ಳುವಂತಾಗುವದು" ಎಂದು ಶ್ರೀ. ಎ. ಬಿ. ಸೆಟ್ಟರು, ಮದ್ರಾಸ್ ಸರಕಾರದ ಸಿವಿಲ್ ಸರಬರಾಯಿ ಖಾತೆಯ ಎಡಿಶನಲ್ ಡಿಪ್ಯುಟಿ ಕಮಿಶನರರು ಕರೆದ ಸಭೆಯಲ್ಲೇ ಖಂಡತುಂಡವಾಗಿ ಹೇಳಿಬಿಟ್ಟಿದ್ದಾರೆ. ಸರಕಾರವು ಸತ್ಯಾನ್ವೇಷಿಯಾಗಿದ್ದರೆ ಮೇಲಿನ ಮಾತನ್ನೇ ತನ್ನ ನೌಕರರ ಜಾತಕವೆಂದಿಟ್ಟುಕೊಂಡು ಶೋಧಿಸಬೇಕು. ಬೇಸಾಯಗಾರರ ಅಕ್ಕಿ ಭತ್ತದ ಅಳತೇಕೋಲನ್ನೆತ್ತುವ ಮೊದಲು ಅಧಿಕಾರಿಗಳ ಹೃದಯಮಾಪಕ ತಕ್ಕಡಿಯೊಂದರ ಕೆಲಸ ಮುಗಿಸಿಕೊಳ್ಳಬೇಕು. ಜನತೆಯ ಹೊಟ್ಟೆಪಾಡಿನ ಪ್ರಶ್ನೆಯನ್ನು ಪರಿಶೀಲಿಸುವದರಲ್ಲಿ ಎಂದೂ ಲಘುತ್ವವಿರಬಾರದು.

ದುರ್ಬೀನು

ವಸ್ತ್ರದಲ್ಲಿ ತೂತಿರಬಾರದು— ಬಲೆಯಲ್ಲಿ ತೂತುಗಳಿರಲೇಬೇಕು. ಧೋರಣೆಯಲ್ಲಿ ಶಂಕೆ, ಚಾಂಚಲ್ಯವಿರಬಾರದು- ಯೋಚನೆಯಲ್ಲಿ ಶಂಕೆ, ಸಂದೇಹಗಳಿರಬೇಕು.

oo oo oo

ಬೂದಿಯನ್ನಾದರೂ ಕ್ರಮವಾಗಿ ಎಳೆದುಕೊಂಡವ ಬೈರಾಗಿ— ಬೂದಿಯಲ್ಲಿ ಹೊರಳಾಡಿದವ ಹುಚ್ಚನಾದಾನು. ಆವ ಹೇಳನವನ್ನಾದರೂ ಅಂಗೀಕರಿಸಿಕೊಳ್ಳುವ ರೀತಿ ಗೊತ್ತಿರಬೇಕು-ಅದನ್ನು ಅನ್ವಯಿಸಿಕೊಂಡು ಹುಚ್ಚರಾಗಬಾರದು.

oo oo oo

ನಿಮ್ಮ ಹಸಿಯನ್ನು ನೀವು ಮುಟ್ಟಿಕೊಳ್ಳುವದಾದರೂ ಅವನ ಪಾಲಿಗದು 'ಸಲಾಮು'; ನಿಮ್ಮನ್ನು ನೀವು ಸುಧಾರಿಸಿಕೊಂಡರೇನೇ ಅನ್ಯರ ಪಾಲಿಗೂ ಯೋಗ್ಯ.

oo oo oo

ಅಂಗಳ ಗುಡಿಸುವಾಗ ಬಗ್ಗಬೇಕಾಗುತ್ತದೆ; ಮಾಡು ರಿಪೇರಿಯಾಗಬೇಕಾದರೆ ಏರಬೇಕಾಗುತ್ತದೆ. ಕೆಳ ದರ್ಜೆಯವರ ಸುಧಾರಣೆ ವಿನಯ ಪೂರ್ವಕ; ಮೇಲ್ದರ್ಜೆಯವರದಾಗಬೇಕು ತೇಂಕಾರಪೂರ್ವಕವೇ.

oo oo oo

ಬೆನ್ನಿಗೆ ತಿವಿಯುವವನಿಗಾದರೂ ಬೆನ್ನಲ್ಲಿ ಕಣ್ಣಿರುವದಿಲ್ಲ; ವಂಚಿಸಬಲ್ಲವನಿಗಾದರೂ ವಂಚನೆಗೀಡಾಗದಿರುವದು ಅಸಾಧ್ಯ.

oo oo oo

ಕಾಲೆಡವಿದವ ಮುಗ್ಗರಿಸಿಬೀಳುತ್ತಾನೆ—ತಲೆ ತಾಡಿಸಿದವ ತಲೆ ತಿರುಗಿ ಬೀಳುತ್ತಾನೆ. ಪ್ರಮಾದವಶಾತ್, ಅಥವಾ ಉದ್ದೇಶಪೂರ್ವಕ ಆಗುವ ಅಪರಾಧಗಳ ಪರಿಣಾಮವೊಂದೆ.

oo oo oo

ಬೆರಳೆತ್ತಿ ತೋರಿಸಬೇಕು ಹೊರತು ಬೆರಳಿನಿಂದ ಕಣ್ಣಿಗೆ ಕುಕ್ಕಿ ತೋರಿಸುವದಲ್ಲ; ಬೋಧಿಸಿ ಕಲಿಸಬೇಕು ಹೊರತು ಮರ್ದಿಸಿ ಕಲಿಸಿದರಾಗದು.

oo oo oo

ಸ್ವಚ್ಛ ಕಣ್ಣಾವ ದೂರವಿದ್ದರೂ ತೋರುತ್ತದೆ;—ಮಂದ ದೃಷ್ಟಿಯಾದರೆ ಮುಖವಿಟ್ಟು ನೋಡಬೇಕು. ಅಭಿಮಾನ ಮೂಡಿದರೆ ದೂರವಿದ್ದರೂ ಪರವಾ ಇಲ್ಲ— ಅನುಮಾನ ಮೂಡಿದರೆ ಸಮೀಪ ಸಾರಬೇಕು.

oo oo oo

ಅಡಿಗೆ ಕುಳಿತವನಷ್ಟೇ ಪ್ರಯಾಸ ಅರಸುವವನಿಗೂ; ಅಜ್ಞಾನಿಯಷ್ಟೇ ಕೇಡು ಅತಿ ಜಾಣನಿಗೂ.

oo oo oo

ಕೋಲ್ಮಿಂಚಿದ್ದರೂ ಮನೇ ದೀಪ ಬೇಕೇಬೇಕು; ಕ್ರಾಂತಿಯ ಕಿಡಿ ಸುಳಿದಾಡಿದರೂ ವಿಚಾರಬುದ್ಧಿಯಿರಲೇ ಬೇಕು.

ಚೂರು-ಚೂರು

ಹಿಟ್ಲರರನ್ನು ಹಿಡಿದು ಆಂಗ್ಲೋ-ಅಮೇರಿಕಾನರಿಗೊಪ್ಪಿಸುವ ಹಂಚಿಕೆಯಿಂದ ಬೊಡೋಗ್ಲಿಯೋ ಸರಕಾರವು ಮಿತ್ರರೊಡನೆ ಗುಪ್ತ ಸಂಧಾನನಡಿಸಿದ ಮೇಲೊಮ್ಮೆ ಅವರನ್ನು ರೋಮಿ.ಗಾಮಂತ್ರಿಸಿದ್ದಿತಂತೆ;ಆ ಆದರೆ ಬೋಡೋಗ್ಲಿಯೋ ದ್ರೋಹವನ್ನು ಊಹಿಸಿದ್ದ ಜರ್ಮನ್ ಸರಕಾರವದನ್ನು ತಿರಸ್ಕರಿಸಿದ್ದಿತಂತೆ.

ಆದರೂ ಮೊನ್ನೆ ತಾನೇ ಇಟಲಿ ರಣರಂಗದಲ್ಲಿ 'ಹಿಟ್ಲರ್' ಸೆರೆಸಿಕ್ಕ ಆಗಿದೆ—ಆ ಹಿಟ್ಲರ್ ಅಲ್ಲ, ಹಿಟ್ಲರ್ ಹೆಸರಿನ ಓರ್ವ ನಾಜೀ ಸೈನಿಕ!

●

'ಜರ್ಮನಿಯ 'ಶ್ವೇನ್‌ಫರ್ಟ್' ಕಾರ್ಖಾನೆಯ ಮೇಲೆ ಧಾಳಿಯಿಡಲು ಹೋದಾಗ ಜರ್ಮನರು ದುರ್ಸುಬಾಣದಂತ ರೊಕೆಟ್ (ಅಗ್ನಿ) ವಿಮಾನಗಳನ್ನು ಉಪಯೋಗಿಸಿ 60 ಅಮೇರಿಕನ್ ವಿಮಾನಗಳನ್ನಾಹುತಿಗೊಂಡರು'-ಅಮೇರಿಕದ ಯುದ್ಧಮಂತ್ರಿ ಹೆನ್ರಿ ಸ್ಟಿಮ್ಸನರ ಮಾತು.

ಹಾಗಾದರೆ ಇನ್ನು ಮುಂದೆ ಜರ್ಮನಿಯ ಮೇಲೆ ಹಾರುವ ವಿಮಾನಗಳಲ್ಲಿ ನೀರ ನಳಿಗೆಗಳನ್ನೇ ತುಂಬಿ ಕಳುಹಿಸಲಿ!

●

'ಅಮೆರಿಯವರನ್ನು ಮನೆಗೆ ಕಳುಹಬೇಕೆಂದು ಇಂಗ್ಲಾಂಡಿನ ಲೀಬ್ರಿಜ್ ಕಾರ್ಪೊರೆನೆಯವರು ಮಾಡಿಕೊಂಡ ಮನವಿಗೇನು ಮಾಡುವಿರಿ?' ಎಂದು ಕಾಮನ್ಸ್ ಸಭೆಯಲ್ಲಿ ಪ್ರಶ್ನೆ ಬಂದಾಗ 'ಏನೂ ಮಾಡುವಂತಿಲ್ಲ' ಎಂದು ಮಿ. ಚರ್ಚಿಲ್ಲರ ಉತ್ತರ.

ಇನ್ನು 'ಅಮೆರಿಯನ್ನು ಕಳುಹಿಸಿರಿ' ಎನ್ನುವ ಬದಲಿಗೆ 'ಕರಕೊಂಡು ತೆರಳಿರಿ' ಎಂದು ಕೇಳಿಕೊಂಡರಾಗದೇ?

●

'ನವವೈಸರಾಯಿ ಲೋರ್ಡ್ ವೇವೆಲರು ಸದ್ಯದಲ್ಲೇ ಆಹಾರಪೀಡಿತ ಕಲ್ಕತ್ತಕ್ಕೆ ಭೇಟಿಕೊಡುವ ಸಂಭವವಿದೆ'—ನವದಿಲ್ಲಿಯಿಂದ ವಾರ್ತೆ

ಅಲ್ಲಿ ಬಲವಾದ ಸೈನಿಕ ಪಹರೆಯಿಟ್ಟು ಔತನ ಸತ್ಕಾರ ಪಡೆಯುವದನ್ನು ಮರೆಯದಿರಲಿ!

●

'ಲೋರ್ಡ್ ಮೌಂಟ್ ಬೇಟನರು ಚುಂಕಿಂಗಿನಲ್ಲಿ ಚಿಯಾಂಗ್ ಕೈಶೇಕರೊಡನೆ ೫ ದಿನ ಸಂಭಾಷಿಸಿ, ತೃಪ್ತಿಕರ ಪರಿಣಾಮ ಪಡೆದು ಢಿಲ್ಲಿಯ ತನ್ನ ಕಾರ್ಯಾಲಯಕ್ಕೆ ಮರಳಿ ಬಂದಿದ್ದಾರೆ'—ನವದಿಲ್ಲಿ ವಾರ್ತೆ.

ಹೀಗೆ ಚೀನಕ್ಕೆ ಹೋದವರೆಲ್ಲಾ 'ತೃಪ್ತಿಕರ ಪ್ರತಿಫಲ' ಪಡೆದು ಹಿಂದಿರುಗುತ್ತಾರೆ—ಜಪಾನೊಂದೇ ಇದಕ್ಕಪವಾದ!

— ವಿನೋದಿ.

NOTICE.

In the Court of the District Munsif of Udipi.

O. P. 66/1943.

In the matter of the debts due to B. Mahabaleshwara Shetty (deceased).

B. Jagajeevandas Shetty and 5 others. —Petitioners.

To all whom it may concern

Notice is hereby given that the petitioners who are the children of Late Sri. B. Mahabaleshwara Shetty have made an application to the above Court for the grant of a succession certificate under Part X of Indian Succession Act 1925 in favour of the above named 1st Petitioner B. Jagajeevandas Shetty in respect of certain debts due to the said Mahabaleshwara Shetty who died on 21-1-1943 and that the hearing of the said application is posted to 8th day of November 1943 when you are at liberty to appear and file your objections if any.

Udipi. 26—10—43. } **Narayana Shetty. B.** Advocate for petitioners

ದಕ್ಷಿಣ ಕನ್ನಡ.

ಮಂಗಳೂರು.

ಜಿಲ್ಲಾ ಕಲೆಕ್ಟರಂಲ್ಲಿ ಮುನ್ಸಿಪಲ್ ಸಮಿತಿ.

ಮಂಗಳೂರು ಮುನಿಸಿಪಲ್ ಕೌನ್ಸಿಲಿನಿಂದ ನಿಯೋಜಿಸಲ್ಪಟ್ಟ 7ಮಂದಿ ಸದಸ್ಯರ ಸಮಿತಿಯವರು ನಮ್ಮ ಜಿಲ್ಲಾ ಕಲೆಕ್ಟರನ್ನು ಕಳೆದ ಶನಿವಾರ ಹುಜೂರ್ ಕಚೇರಿಯಲ್ಲಿ ಭೇಟಿಯಾಗಿ, ಚಿಮಿಣಿ ಎಣ್ಣೆ, ಹೊಸ ಬತ್ತ, ಅಕ್ಕಿಗಳ ವಿಚಾರದಲ್ಲಿ ಮಾತುಕತೆ ನಡೆಸಿದರು. ಚಿಲ್ಲರೆ ವ್ಯಾಪಾರಿಗಳು ತಮಗೆ ಕೊಡಲಾದ ಎಣ್ಣೆಯಲ್ಲಿ ದಿನಪೊಂದಕ್ಕೆ ಇಂತಿಷ್ಟೇ ಎಣ್ಣೆಯನ್ನು ಮಾರಬೇಕೆಂದೂ ಆ ಪರಿಮಿತಿಯನ್ನು ನಿರ್ಧರಿಸಬೇಕೆಂದೂ ಬಂದ ಸೂಚನೆಯನ್ನು ಸ್ವೀಕರಿಸಲಾಯಿತೆಂದು ಗೊತ್ತಾಗಿದೆ.

ಮಿಲ್ಲುಗಳಿಗೆ ಬತ್ತವನ್ನು ಒದಗಿಸುತ್ತಿರುವ ಆ ಕ್ಷೇತ್ರಗಳಿಂದಲೂ, ಬತ್ತವನ್ನೇ ಗೇಣಿರೂಪದಲ್ಲಿ ತರುವ ಆ ಕ್ಷೇತ್ರಗಳಿಂದಲೂ ಬತ್ತವನ್ನು ರಿಕ್ವಿಜಿಶನ್ ಮಾಡುವಂತೆಯೂ, ಅವಲಕ್ಕಿಗಾಗಿ ಬತ್ತ ವ್ಯಾಪಾರವಾಗುತ್ತಿರುವಲ್ಲಿ ಆ ವ್ಯಾಪಾರವನ್ನು ನಿಲ್ಲಿಸಲಾಗುವುದಿಲ್ಲವೆಂತಲೂ ಅಭಿಪ್ರಾಯವು ಪ್ರಕಟವಾಯಿತಲ್ಲದೆ, ರಿಕ್ವಿಜಿಶನ್ ಕಾರ್ಯದಿಂದ ತಪ್ಪುವ ಹಾಗೆ ಹಸಿಬತ್ತವನ್ನೇ ವ್ಯಾಪಾರ ಮಾಡುವವರಾದರೆ ಅದನ್ನು ರಿಕ್ವಿಜಿಶನ್ ಮಾಡಲಾಗುವುದೆಂದೂ ಈ ಸಂಬಂಧ ವರ್ಗದಾರರ ಸಹಕಾರವನ್ನು ಪಡೆಯಲು ಡೆಪ್ಯುಟಿ ಕಲೆಕ್ಟರರು ಅಲ್ಲಲ್ಲಿ ಸಂಚರಿಸುವರೆಂದೂ, ಅಂಥ ಸಹಕಾರ ದೊರೆಯದ ಕಡೆಗಳಲ್ಲಿ ಬತ್ತವನ್ನು ರಿಕ್ವಿಜಿಶನ್ ಮಾಡಲಾಗುವುದೆಂದೂ, ಅಕ್ಕಿ ತಯಾರಿಗಾಗಿ ಎರಡು ಹೊಸ ಮಿಲ್ಲುಗಳು ಸ್ಥಾಪನೆಯಾಗಲಿದ್ದು ಅಲ್ಲಿ ಅಕ್ಕಿ ಭತ್ತಗಳ ಸರಿಯಾದ ಲೆಕ್ಕಾಚಾರಕ್ಕೆ ಸೌಲಭ್ಯ ದೊರೆಯುವುದೆಂದೂ, ಬರುವ ಫೆಬ್ರುವರಿ ವರೆಗೆ ಈ ಏರ್ಪಾದು ಜಾರಿಯಲ್ಲಿರಬಹುದೆಂದೂ, ರೂ. ೧೦೦ಕ್ಕೆ ಅಥವಾ ಮೇಲ್ಪಟ್ಟ ತೀರ್ವೆ ತೆರುವವರ ಮಟ್ಟಿಗೆ ಈಗ ರಿಕ್ವಿಜಿಶನ ಏರ್ಪಾದು ಅನ್ವಯಿಸುತ್ತಿದ್ದರೂ ೫೦ರೂ ಅಥವಾ ಮೇಲ್ಪಟ್ಟು ತೀರ್ವೆ ತೆರುವವರ ವಿಚಾರವನ್ನೂ ಅಗತ್ಯವಿದ್ದಂತೆ ಪರ್ಯಾಲೋಚಿಸಲಾಗುವುದೆಂದೂ ಧಾರಣೆ ನಿಯಂತ್ರಣ ಕ್ರಿಯೆಯನ್ನು ನಿರ್ಧರಿಸಬೇಕಾದುದು ಕೇಂದ್ರ ಸರಕಾರದ ಅಧಿಕಾರಕ್ಕೆ ಒಳಪಟ್ಟದ್ದೆಂದೂ, ರೇಶನಿಂಗ್ ಬಂದ ಮೇಲೆ ಮಾತ್ರ ಆ ಕಾರ್ಯದಲ್ಲಿ ಜಿಲ್ಲಾ ಕಲೆಕ್ಟರರು ಪ್ರವೇಶಿಸಬಹುದೆಂದೂ, ಜಿಲ್ಲೆಯ ಹೆಡ್ ಕ್ವಾರ್ಟರ್ಸ್‌ಗಳಲ್ಲಿಯೂ ಸಣ್ಣ ಊರುಗಳಲ್ಲಿಯೂ ರೇಶನಿಂಗ್ ಪದ್ಧತಿ ಜಾರಿಗೆ ಬರುವಂತೆ ಜಿಲ್ಲಾ ಕಲೆಕ್ಟರರು ಶಿಫಾರಸು ಮಾಡುವರೆಂದೂ, ಮಂಗಳೂರಲ್ಲಿಯೂ ಈಸರಗೋಡು ಪ್ರಾಂತ್ಯದಲ್ಲಿ ಸಾ ಮುಖ್ಯ ಡಿಫಿಸಿಟ್ ಕ್ಷೇತ್ರಗಳಲ್ಲಿಯೂ ಮೊದಲು ರೇಶನಿಂಗ್ ಜ್ಯಾರಿಗೆ ಬರಬಹುದೆಂದೂ, ಭತ್ತ ಅಕ್ಕಿ ಜಿಲ್ಲೆಗೆ ಹೋಗದಂತೆ ಆ ಸಂಬಂಧವು ಇಲ್ಲ ಇರುವುದೆಂದೂ ಮೈಸೂರಲ್ಲಿ ಅಕ್ಕಿಯ ಬೆಲೆ ಇಲ್ಲಿಗಿಂತ ಕಡಿಮೆ ಇರುವುದರಿಂದ ಅತ್ತ ಕಡೆಗೆ ಇಲ್ಲಿ ಭತ್ತ ಅಕ್ಕಿ ಸಾಗುವ ಸಂಭವವೇ ಇಲ್ಲವೆಂದೂ, ಘಟ್ಟಗಳಲ್ಲಿ ಸಾಗುವ ಅಕ್ಕಿ ಭತ್ತಗಳನ್ನು ಅಲ್ಲಲ್ಲಿ ಶೋಧಿಸುವ ಈ ವ್ಯವಸ್ಥೆಯನ್ನು ಬಹಳ ಪರಿಣಾಮಕಾರಿಯಾದ ರೀತಿಯಲ್ಲಿ ನಡೆಸುತ್ತಿದ್ದು, ಕೆಳಗಿನಿಂದ ಅಕ್ಕಿ ಭತ್ತ ಸಾಗದಂತೆ ಮಲಬಾರಿನ ಅತ್ತ ಕಡೆಗೆ ಜಾಗರೂಕತೆ ವಹಿಸಲಾಗಿದೆ ಎಂದೂ ಈ ಮಾತುಕತೆಯಲ್ಲಿ ತಿಳಿದುಬಂದಿದೆ.

ಪೂರ್ಣ 'ರೇಶನಿಂಗ್' ಬೇಕು.— 'ಪೂರ್ಣ ರೇಶನಿಂಗ್' ಜ್ಯಾರಿಮಾಡಿ; ನಾವು ಕಡಿಮೆ ಕ್ರಯದಲ್ಲಿ ಅಕ್ಕಿ ಕೊಡಲು ಸಿದ್ಧರಿದ್ದೇವೆ, ಕಳೆದ ವರ್ಷದಂತೆ. ನಮ್ಮ ಸ್ವಾರ್ಥ ತ್ಯಾಗದ ಫಲದಿಂದ ವ್ಯಾಪಾರಿಗಳು ಲಾಭ ಮಾಡಕೂಡದು. ಅಧಿಕಾರಿಗಳ ಲಂಚಕೋರತನದ ವಿರುದ್ಧ ಚಳವಳ ಹೂಡಬೇಕು; ಜನರು ಡಿಫೆನ್ಸ್ ಕಾನೂನಿಗೆ ಹೆದರಿ ಈ ವಿಷಯ ಬಾಯಿ ಬಿಡಲು ಅಂಜುತ್ತಾರೆ. ಆದರೆ ಸರಕಾರವು ಲಂಚಕೋರ ಅಧಿಕಾರಿಗಳನ್ನು ಬಯಲಿಗೆಳೆಯುವಿದ್ದರೆ ಸರಕಾರದ ಹೆಸರಿಗೆ ಕಳಂಕ! "ಹೀಗೆಂದು ಶ್ರೀ! ಎ. ಬಿ ಶೆಟ್ಟರು ತಾ. ೧೬ರಂದು ಸಂಜೆ ಜಿಲ್ಲಾ ಕಲೆಕ್ಟರರ ಕಚೇರಿಯ ಬೆಂಚ್ ಕೋರ್ಟಿನಲ್ಲಿ ಮದ್ರಾಸ್ ಸರಕಾರದ ಎಡಿಶನಲ್ ಡೆಪ್ಯುಟಿ ಕಮಿಶನರ್ ಒಫ್ ಸಿವಿಲ್ ಸಪ್ಲೈಸ್ ಇವರ ಮುಂದೆ ಜಿಲ್ಲಾ ಭೂಮಾಲಿಕ ಸಂಘದ ಪರವಾಗಿ ವಿನಂತಿಯನ್ನು ಮಂಡಿಸುತ್ತಾ, ಜಿಲ್ಲೆಯಲ್ಲಿ ಪೂರ್ಣ ರೇಶನಿಂಗ್ ಜ್ಯಾರಿಗೆ ತರಬೇಕೆಂದೂ ಮುಡಿ ಒಂದರ ೧೦ ರೂ. ಕ್ರಯದಲ್ಲಿ ಅಕ್ಕಿ ಒದಗಿಸಲು ತಾವು ಸಿದ್ಧರೆಂದೂ, ಆದರೆ ಈ ಸಲವೂ ಅಕ್ಕಿ, ವ್ಯಾಪಾರಿಗಳ ಕೈಗೆ ಹೋಗಬಾರದೆಂದೂ ಹೇಳಿದರು. ಶ್ರೀ! ಕೆ. ಬಿ. ಜಿನರಾಜ ಹೆಗ್ಡೆ, ಇವರು ಶ್ರೀ ಶೆಟ್ಟರ ಅಭಿಪ್ರಾಯವನ್ನು ಸಮರ್ಥಿಸಿದರು. ಶ್ರೀಯುತರು ಸಿ. ಎಲ್. ಲೋಬೋ, ಎಸ್. ನಾಗರಾಜಯ್ಯ, ಡಾ! ಪಿ. ಎನ್. ಭಟ್, ಎಂ. ಎಸ್. ಶ್ರೇಷ್ಠ, ಎನ್. ರಾಮ ರಾವ್, ರಂಗನಾಥ ಪೂಂಜ, ಡಿ. ಮಂಜಯ್ಯ ಹೆಗ್ಡೆ, ಕೆ. ಟಿ. ಅಲ್ವ, ಶೇಷಗಿರಿ ಪ್ರಭು, ಅವರೂ ಅದೇ ರೀತಿಯಾಗಿ ಮಾತನಾಡಿದರು.

ಸರಬರಾಯಿ—ಯ ಸಹಾಯಕ ಡೆಪ್ಯುಟಿ ಕಮಿಶನರಾದ ರಾ. ಸಾ. ಆರ್ ಸಿ. ರಾಪ್ ಅವರು ತಾ. ೧೬ರಂದು ಇಲ್ಲಿಗೆ ಬಂದು ಕೆಲ ದಿನಗಳಿದ್ದು ಹಲವರನ್ನು ಕಂಡು ಮಾತನಾಡಿ, ಮದ್ರಾಸಿಗೆ ತೆರಳಿದರು.

ಆಂಧ್ರ ಆಕ್ರಮಣಕ್ಕೆ ನಿಷೇಧ— 'ಬಳ್ಳಾರಿಯ ಹಾಗೂ ಸುತ್ತಲಿನ ಕೆಲ ಆಂಧ್ರರು ಬಳ್ಳಾರಿಯಲ್ಲಿ ಆಂಧ್ರ ಮಹಾ ಸಭೆಯ ೨೦ನೆಯ ಅಧಿವೇಶನವನ್ನು ಕರೆದು ಆ ಮೂಲಕ ಬಳ್ಳಾರಿ, ಅನಂತಪುರ, ಕರ್ನೂಲು ಜಿಲ್ಲೆಗಳ ಕನ್ನಡ ಭಾಗಗಳನ್ನು ಆಂಧ್ರ ಪ್ರಾಂತ್ಯಕ್ಕೆ ಸೇರಿಸುವ ಒಪ್ಪಿಗೆ ಪಡೆಯಲು ಪ್ರಯತ್ನ ಮಾಡುತ್ತಿರುವರೆಂಬುದನ್ನು ಕೇಳಿ ಅಖಿಲ ಕರ್ನಾಟಕದ ಕನ್ನಡಿಗರು ಬಹಳ ಸಂತಾಪಪಟ್ಟಿದ್ದಾರೆ. ಆದ್ದರಿಂದ ಈ ಕುರಿತು ದಕ್ಷಿಣ ಕನ್ನಡದ ಕನ್ನಡಿಗರ ನಿಷೇಧ ಪ್ರದರ್ಶನಾರ್ಥವಾಗಿ ಮಂಗ[illegible] ವಿ ಸ್ವ ಮಂಡಳಿಯ ಈ ಸಭೆಯು ಆಂಧ್ರರ ಈ ಆಕ್ರ[illegible]ವನ್ನು ನಿಷೇಧಿಸುತ್ತದಲ್ಲದೆ, ಆಂಧ್ರರ ಆಕ್ರಮಣ ಧೋರಣೆಯು ಕನ್ನಡಿಗರ ಹಾಗೂ ಆಂಧ್ರರ ಐಕಮತ್ಯ ವೃತ್ತಿ ಹಾಗೂ ಹಿತಸಂಬಂಧಗಳಿಗೆ ಘಾತುಕವಾದುದೆಂದು ಅಭಿಪ್ರಾಯ ಪಡುತ್ತದೆ ಎಂಬ ನಿರ್ಣಯವು ತಾ. ೧೭ರಂದು ಜರಗಿದ ಮಿತ್ರ ಮಂಡಳಿಯ ಸಭೆಯಲ್ಲಿ ಸ್ವೀಕರಿಸಲ್ಪಟ್ಟಿದೆ.

ಅದೇ ದಿನ ಸಂಜೆ ಶ್ರೀ! ಟಿ. ಎನ್. ಶೆಣೈ, ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪ್ರಕಾರ ಕೋಟೆಬಾಗಿಲವರೂ ಆಂಧ್ರರ ಆಕ್ರಮಣವನ್ನು ನಿಷೇಧಿಸುವ ನಿರ್ಣಯವನ್ನು ಮಾಡಿದರು.

ಕೊಲೆರಾ ರೋಗ—ಕ್ಕೆ ನಗರದಲ್ಲಿ ತಾ. ೨೦ರ ತನಕ ಒಟ್ಟು ಬಲಿಯಾದವರ ಸಂಖ್ಯೆ ೯೪, ಈ ಜನರೂ ಕೂಡಿ ಒಟ್ಟು ರೋಗ ತಗಲಿದವರ ಸಂಖ್ಯೆ ೧೪೯.

ಉಡುಪಿ.

ಭತ್ತ—ಅಕ್ಕಿ ಸ್ವಾಧೀನತೆ—ಯನ್ನು ಸಂಪೂರ್ಣವಾಗಿ ಸರಕಾರವೇ ವಹಿಸಿ, ಸಹಕಾರಿ ಸಪ್ಲೈಯರುಗಳ ಮೂಲಕ ವಿನಿಯೋಗಿಸಬೇಕು. ಗೇಣಿ ಒಕ್ಕಲುಗಳಿಂದಲೇ ಭತ್ತವನ್ನು ಸ್ವಾಧೀನ ಪಡಿಸಿಕೊಳ್ಳುವ ಸಂದರ್ಭದಲ್ಲಿ ಅದರ ಮೌಲ್ಯವು ಸರಕಾರದಿಂದ ನೇರವಾಗಿ ದಣಿಗೇ ಸಿಗುವಂತಾಗಬೇಕು—ಎಂಬರ್ಥದ ಮನವಿಯನ್ನು ಉಡುಪಿ ತಾಲೂಕು ವರ್ಗದಾರರ ಹಾಗೂ ರೈತರ ಸಂಘದವರು ಡೆಪ್ಯುಟಿ ಕಮಿಶನರ್ ಅಫ್ ಸಿವಿಲ್ ಸಪ್ಲೈಸ್ ಮದ್ರಾಸ್ ಅವರಿಗೆ ಒಪ್ಪಿಸಿದ್ದಾರೆ.

ಕಟಪಾಡಿ ಸರ್ಕಲ್ ಜಿ. ಬೋ. ಉಪಚುನಾವಣೆಯಲ್ಲಿ ತನಗೆ147ಮತಗಳು ಹೆಚ್ಚಿಗೆ ಸಿಕ್ಕಿವೆಯೆಂದೂ ಕಳೆದ ಸಂಚಿಕೆಯಲ್ಲಿ ಪ್ರಕಟವಾದಂತೆ 64 ಅಲ್ಲವೆಂದೂ ಶ್ರೀ ಶ್ರೀನಿವಾಸ ಮಿತ್ತಂತಾಯರು ತಿಳಿಸುತ್ತಾರೆ.

ತಾ. 24, 25ರಲ್ಲಿ ವಿಪರೀತ ಮಳೆ ಬಂದು ಸುತ್ತಮುತ್ತಲಿನ ಹಳ್ಳಿಗಳಲ್ಲೆಲ್ಲಾ ಕಟಾವಿಗೆ ತುಂಬಾ ತೊಂದರೆಯಾಗಿರುವುದಲ್ಲದೆ ಅಪಾರ ನಷ್ಟವೂ ಆಗಿರುತ್ತದೆ.

ಬೀಡಿ ಕೆಲಸಗಾರ ಸಂಘದ— ಮಾಸಿಕ ಮಹಾ ಸಭೆಯು ತಾ. 24ನೇ ಅಪರಾಹ್ನ ಸಂಘದ ಆಫೀಸಿನಲ್ಲಿ ಶ್ರೀ. ಎಮ್. ವಿ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ನೆರೆಯಿತು. ಶ್ರೀಗಳಾದ ಬಿ. ಎ ಕಕ್ಕಿಲ್ಲಾಯ, ಆರ್. ಆರ್. ಕುಂಜೂರು, ಜನಾರ್ದನ ಅಲ್ಲೆ, ಸಿ. ಕೆ. ಗೋವಿಂದನರ ಭಾಷಣಗಳಾಗಿ, ಸದಸ್ಯರಿಗೆ ರಾತ್ರಿ ಶಾಲೆಯ ಸಭೆ ರಾಯದುಗ ಶ್ರೀ. ಕುಂಜೂರರು ರೂ. 5. ಶ್ರೀ. ಅಳ್ವರವರು ರೂ. 2. ಶಾಲೆಗೆ ಸಹಾಯವಿತ್ತರು. ಅಧ್ಯಕ್ಷರ ಭಾಷಣ, ಧನ್ಯವಾದಗಳಾಗಿ ಸಭಾಂತ್ಯವಾಯಿತು.

ಎಕ್ಕಾರು— ನೆರೆಯು ತಾ. ೧೭ರಂದು ಬಂದು ಗದ್ದೆಯಲ್ಲಿದ್ದ ಪೈರು, ಕೊಯ್ದು ಒಟ್ಟಿದ್ದ ಪೈರು, ಭತ್ತ ಎಲ್ಲವೂ ತೊಳೆದುಹೋಗಿವೆ. ನಿರಾಶ್ರಿತರಿಗೆ ನೆರವು ಕೊಡಬೇಕೆಂದು ವಿನಂತಿಸಿ ಗ್ರಾಮಸ್ಥರು ಕಲೆಕ್ಟರರಿಗೆ ವಿನಂತಿ ಮಾಡಿರುವರು.

ಕಡಂದಲೆ:—ಅನುಭವಶಾಲಿ ಉಪಾಧ್ಯಾಯರೂ ಕ್ರಿಕೆಟ್ ಪ್ರೇಮಿಗಳೂ, ದೇಶಾಭಿಮಾನಿಗಳೂ ಆಗಿದ್ದ ಶ್ರೀ! ಕೆ. ಪಿ ಬಾಬು ಶೆಟ್ಟರು ಇದೇ ತಾ. 17ರಲ್ಲಿ ಎಮರ್ಜಲದಲ್ಲಿ ಕ್ಯಾನ್ಸರ್ ರೋಗದಿಂದ ತನ್ನ 47ನೇ ವಯಸ್ಸಿನಲ್ಲಿ ಮೃತರಾದರೆಂಬುದು ವಿಷಾದಕರವಿದೆ. ಮೃತರ ದುಃಖೀ ಕುಟುಂಬದೊಂದಿಗೆ ನಾವೂ ಸಂತಾಪ ಪಡುತ್ತೇವೆ.

ಬೆಳ್ಳೆ—ಸ್ಥಳೀಯ ಬೋರ್ಡ್ ಶಾಲೆಯ ಹೊಸ ಕಟ್ಟೋಣದ ಶಂಕು ಸ್ಥಾಪನೆಯು ತಾ. 21-10-43ರಲ್ಲಿ ಶಾಲಾ ಡಿಪ್ಪಿ ಇನ್ಸ್ಪೆಕ್ಟರ್ ಶ್ರೀ ಸಂಜೀವ ಭಟ್ಟರಿಂದ ನೆರವೇರಿಸಲ್ಪಟ್ಟಿತು.

ಇನ್ನಂಜೆ:— ತಾ 20-10-43ರಲ್ಲಿ ಎಸ್. ವಿ. ಎಚ್. ಹೈಸ್ಕೂಲಿನ ಉಪಾಧ್ಯಾಯರೂ ವಿದ್ಯಾರ್ಥಿಗಳೂ ಸೇರಿ, ಕಟಪಾಡಿ ಸರ್ಕಲಿನ ಡಿ. ಬೋ. ಚುನಾವಣೆಯಲ್ಲಿ ಶಾಲಾ ವ್ಯವಸ್ಥಾಪಕ ಶ್ರೀ ಶ್ರೀನಿವಾಸ ಮಿತ್ತಂತಾಯರು ಜಯಶೀಲರಾದುದರ ಅಭಿನಂದನಾರ್ಥವಾಗಿ ಸತ್ಕಾರ್ಯ ಕೂಟವನ್ನೇರ್ಪಡಿಸಿದರು. ಲಘುಪಹಾರದ ಬಳಿಕ ಶ್ರೀ ನಾರಾಯಣ ಶ್ರೀನಿವಾಸಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆಸೇರಿ ವಿವಿಧ ವಿನೋದ ಸಂಗೀತಾದಿಗಳಾದ ಮೇಲೆ ಶ್ರೀಗಳಾದ ಎ. ಶ್ಯಾಮರಾವ್, ಕೆ. ಜಿ.ಶೆಟ್ಟಿ, ಪಿ.ಎಲ್. ರಾವ್, ಕೆ. ಆರ್. ಉಡುಪ, ಶಂಕರ್ಣಾಲು ಗಣಪಯ್ಯ ಶೆಟ್ಟರು, ಶ್ರೀ ಮಿತ್ತಂತಾಯರ ಕಾರ್ಯಚಾತುರ್ಯಾದಿಗುಣಗಳನ್ನು, ಅಭಿನಂದಿಸಿ, ಮಾತನಾಡಿದರು.

ಪೆರುವಾಜೆ ಶ್ರೀ. ಜಲದುರ್ಗಾ ದೇವಿ ದೇವಸ್ಥಾನ ಜೀರ್ಣೋದ್ಧಾರ ಜೀರ್ಣೋದ್ಧಾರ ಬೆಳ್ಳಾರೆ ಪೋಸ್ಟ್:— ಈ ದೇವಸ್ಥಾನದ ಕಟ್ಟಡಗಳು ಹಾಳು ಬಿದ್ದಿರುವುದನ್ನು ಜೀರ್ಣೋದ್ಧಾರ ಮಾಡಬೇಕೆಂದು ಉತ್ಸಾಹದಿಂದ ಮಹಾಜನರ ಸಹಾಯ ಕೋರುತ್ತೇನೆಂದು ಈ ದೇವಸ್ಥಾನದ ಕೆಲಸಗಳನ್ನು ಈ ಮೊದಲೇ ಆರಂಭಿಸಿ ಈಗಾಗಲೇ ಗೋಪುರದ ಪಂಚಾಂಗವೂ ಗೋಡೆಯ ಕೆಲಸವೂ ಮುಗಿದಿರುತ್ತದೆಂದೂ ಈ ಕಾರ್ಯವನ್ನು ಸಂಪೂರ್ಣಗೊಳಿಸುವಂತೆ ಸರ್ವರೂ ಶಕ್ತ್ಯಾನುಸಾರ ಸಹಾಯ ಮಾಡಬೇಕೆಂದೂ ಶ್ರೀ! ಕೆ. ಯಸ್. ಶೆಟ್ಟಿ, L. E. E. ಮೊಕ್ತೇಸರ, ಇವರು ಅಪೇಕ್ಷಿಸುತ್ತಾರೆ.

ಪುತ್ತೂರು.

ಭೂಮಾಲಿಕರ ಸಭೆಯೊಂದು ತಾ. ೨೩ರಂದು ಮಧ್ಯಾಹ್ನ ೩ಗಂಟೆಗೆ ಸಹಕಾರೀ ಸಂಘದ ಕಟ್ಟಡದಲ್ಲಿ ಜರಗುವುದು. ೧)ಅಕ್ಕಿ ಯಾ ಭತ್ತವನ್ನು ಬಲಾತ್ಕಾರದಿಂದ ಸರಕಾರದವರು ಭೂಮಾಲೀಕರಿಂದಾಗಲಿ ಅವರ ಒಕ್ಕಲುಗಳಿಂದಾಗಲಿ ಕೊಂಡು ಹೋಗ ಬಾರದು. ೨) ಪ್ರತಿಯೊಂದು ತಾಲೂಕಿನ ಮ ಸಬ್ ತಾಲೂಕಿನ ಕೇಂದ್ರಗಳಲ್ಲೆಲ್ಲಾ ಅಕ್ಕಿಯನ್ನು ಹಂಚುವ ಏರ್ಪಾಡು ಮಾಡಬೇಕು. ೩) ರೇಶನಿಂಗ್ ಮಾಡುವ ಬಗ್ಗೆ ಅಕ್ಕಿ ಸಂಗ್ರಹಿಸುವದರಿಂದ ೫೦ ಕ್ಕಿಂತ ಹೆಚ್ಚು ತೀರ್ವೆ ಕೊಡುವ ವರ್ಗದಾರರು ಖರ್ಚಿನ ಮಟ್ಟಿಗೆ ಇಟ್ಟುಕೊಂಡು ಮಿಕ್ಕ ತಮ್ಮ ಅಕ್ಕಿ ಭತ್ತಗಳಲ್ಲಿ ಶೇಕಡಕ್ಕೆ ಕಡಿಮೆಯಾಗದಷ್ಟು ಅಗತ್ಯವಿದ್ದಲ್ಲಿ ಸ್ವಪರಿಗೂ ಮುಡಿ ಒಂದರ ರೂ. ೧೦ರ ಕ್ರಯಕ್ಕೆ ಸರಕಾರಕ್ಕೆ ಆಯಾಯ ತಾಲೂಕು ಕೇಂದ್ರಗಳಿಗೆ ತಮ್ಮ ಖರ್ಚಿನಿಂದ ಸಾಗಿಸಿ ಕೊಡಬೇಕು. ೪) ಹೀಗೆ ಸಾಗಿಸದ ಕೂಡಲೇ ವರ್ಗದಾರರಿಗೆ ಬೆಲೆ ಕೊಡುವ ಏರ್ಪಾಡನ್ನು ಸರಕಾರ ಮಾಡಬೇಕು. ೫) ಮೇಲೆ ತಿಳಿಸಿದಂತೆ ಅಕ್ಕಿಯನ್ನು ೧೯೪೪ ಫೆಬ್ರುವರಿ ಒಳಗೆ ವರ್ಗದಾರರು ಕೊಡಬೇಕು—ಇತ್ಯಾದಿ ವಿಚಾರಗಳೆದುರಲ್ಲಿ ಚರ್ಚಿಸಲ್ಪಡುವವು.

CHAMPAE'S
SNOW & CASTREX
AGENTS:
SADANANDA STORES UDIPI

BHUVANENDRA PRODUCTS Ltd.,

Head Office and Factory:
Katapadi, S. Kanara

Depots:
1 Mahratha Galli, Hubli.

"BHUVANENDRA"
Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Useful in Pyorrhoea, Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ.
"ಭುವನೇಂದ್ರ"
ದಂತಧಾವನ ಚೂರ್ಣ
ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ
ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು
ಮುಂತಾದ ದೋಷಗಳನ್ನು ನಿವಾರಿಸುವುದು.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ;
ಡಾ. ಪಿ. ಬಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಶೈ L. I. M.; ಡಾ. ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated 1920)

Registered Office Court Road UDIPI South Canara District.
Business Offices Udipi Mangalore, Katapadi, Kanhangad and Kinnigoli, South Canara

Authorised and Issued Capital Rs 2 00 000/
Subscribed and Paid up Capital Rs 2,00,000/-
Reserve Funds Rs 1,74,600/-

Short term bills are discounted for approved parties Loans and advances are made and overdrafts granted on fairly easy terms

Deposits are accepted at favourable rates of interest More than twenty-three years' reliable banking Service stands to our credit

For further particulars please call at or apply to the nearest office

Dated 27-8-1943

ಶುಚಿ!! **ಸೆಂಟ್ರಲ್ ಕೆಫೆ** ರುಚಿ!!

ಶ್ರೀನಿವಾಸ ಬಿಲ್ಡಿಂಗ್ಸ್, ಹೆಡ್ ಪೋಸ್ಟಾಫೀಸ್ ಸರ್ಕಲ್, ಶಿವಮೊಗ್ಗ

ಪ್ರಯಾಣಿಕರಿಗೆ ಉಳಿಯಕೊಳ್ಳಲು ಸ್ಥಳಾನುಕೂಲ ಏರ್ಪಡಿಸಿದುತ್ತೆ ಸಕಾಲದಲ್ಲಿ ಉತ್ತಮವಾದ ಊಟ, ಕಾಫಿ ಮತ್ತು ಹಸನಾದ ತುಪ್ಪದಲ್ಲಿ ತಯಾರಿಸಿದ ತಿಂಡಿ ದೊರೆಯುತ್ತೆ

ಈ ಸ್ಥಳವು ರೈಲ್ವೆಸ್ಟೇಷನ್, ಬಸ್‌ಸ್ಟ್ಯಾಂಡ್, ಕೋರ್ಟುಗಳಿಗೆ ಮಧ್ಯ ಸ್ಥಳದಲ್ಲಿದೆ

ಎಸ್ ರಾಮದಾಸ್, ಪ್ರೊಪ್ರೈಟರ್

The Moolky Bank, Ltd.,

MOOLKY, S. K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager

ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಸ್ನಾನ, ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ : : . : ಮಂಗಳೂರು.

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.

ಹೆಡ್ ಆಫೀಸ್: ಮಂಗಳೂರು

ಶಾಖೆಗಳು

ಮಂಗಳೂರು, ಸಿಟಿ-ಮಂಗಳೂರು.
ಉಡುಪಿ, ಕಾರ್ಕಳ, ಕುಂದಾಪುರ.
ಕಾಪು, ಬ್ರಹ್ಮಾವರ, ಕಾಸರಗೋಡು,

ಪ್ರತಿ ಶಾಖೆಗಳಲ್ಲೂ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳು ಕೈಗೊಳ್ಳಲ್ಪಡುತ್ತವೆ.

THE VIJAYA BANK LIMITED, MANGALORE.

ಅಮೃತಾಂಜನ ತಲೆನೋವು ಶಿರೋವೇದನೆ, ಉಳುಕು, ಕುತ್ತಿಗೆ, ಭುಜ. ಇವುಗಳ ವೇದನೆಗಳ ಗಾಯ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ,

REGD

ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತಾ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ

ವಾರ್ಷಿಕ ಚಂದಾ

ರೂ **1-8-0** ಮಾತ್ರ

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಮೆನೇಜರ್, ಬಾಲಚಂದ್ರ

ಸಂತೆಕಟ್ಟೆ, ಉಡುಪಿ.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಸಲ್ಲೆ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0 ಪೋಸ್ಟ ಖರ್ಚು ನಿರಾಳೆ

ಮಾಲಕರು — ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.
ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಮುಲ್ಕ ಫಾರ್ಮಸಿ, -ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ, ವಿಜಾಪೂರ—ದಾಸಪ್ಪ ಸಿದ್ದಲಿಂಗಪ್ಪ ಧಾರವಾಡಕರ ವಿಜಾಪೂರ ಚಿಕ್ಕೋಡಿಯಲ್ಲಿ —ಹುಂಬರವಾಡಿ ಸ್ಟೋರ್ಸ. ದಾವಣಗೇರಿ — ದ ವಣಗೇರಿ ಪ್ರೆಸ್ ಆರ್ ಎಲ್ ಶಿವಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ನವಜೀವಾತು ಎಂಬ ಸೂತಿಕಾರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಧರಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

೬ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗೆ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 ಕೊಡಿಯಾಲಬೈಲು, ದ.

ಸ್ಥಾಪನೆ 19

18 ಬಲ್ಮಠ ರಸ್ತೆ, ಮಂಗಳೂರು

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು

Crown Rubber Stamp Co 18 Balmat Road, MANGALORE

Approved firm by the Govt Mysore
Certified by the Agent of the Govt of India in Ceylon

EDITED PRINTED & PUBLISHED BY K H. SHETTY AT THE NAVAYUGA PRESS UDIPI S INDIA

Regd. No. M. 3618.

Estd. 1921 ಸ್ಥಾಪನೆ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೯

FOUNDER
Sri. A. B. Shetty.

Vol. 24
No. 9

NAVAYUGA— Kannada Weekly —UDIPI, S. I.

ಉಡುಪಿ • 4—11—1943 • ಮಂಗಳೂರು.

ಹೊಸಕೆರೆ ಚಿದಂಬರಯ್ಯನವ
ರಿಂದ ರಚಿತವಾದ ಗೀತೆಯ
ಸರಳ ಭಾಷಾಂತರ

ಗೀತೆಯ ಕೈಗನ್ನಡಿ.

ಸುಮಾರು 440 ಪುಟಗಳು,
ಪ್ರತಿ ಮನೆಯಲ್ಲೂ ಇರಬೇಕಾದ
ಪವಿತ್ರ ಗ್ರಂಥ.

ಬೆಲೆ (ಸುಂದರ ಪ್ರತಿ) ೦—೮—೦

ಹತ್ತಾಣೆ ಸ್ಟಾಂಪು ಕಳಿಸಿದ್ದಲ್ಲಿ ೧ ಪ್ರತಿಯನ್ನು ಬುಕ್‌ಪೋಸ್ಟ್ ಮಾಡಲಾಗುತ್ತ.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಅಖಿಲ ಕರ್ನಾಟಕದ
ಹೊಸಮಾದರಿಯ ವಾರಪತ್ರಿಕೆ

ಅಂತರಂಗ

ಜನ್ಮತಾಳಿದ ಸ್ವಲ್ಪ ಸಮಯದಲ್ಲೇ
ವಿಶಾಲ ಪ್ರಚಾರ ಮತ್ತು ಪ್ರಶಸ್ತಿ
ಪಡೆದ ಸಚಿತ್ರ ವಾರಪತ್ರಿಕೆ.

ಪ್ರಸಿದ್ಧ ಜ್ಯೋತಿಷಿಗಳೊಬ್ಬರಿಂದ
ವಾರಭವಿಷ್ಯವೂ ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ	ರೂ. ೪-೮-೦
6 ತಿಂಗಳಿಗೆ	ರೂ. ೨-೪-೦
ಬಿಡಿಪ್ರತಿಗೆ	ರೂ. ೦-೧-೬

ಮಾದರಿಗೆ ಬರೆಯಿರಿ:
ಮೆನೇಜರ್, ಅಂತರಂಗ, ಉಡುಪಿ

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

The Canara Mutual Assurance Co., Ltd.,
UDIPI. (S. India).

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು
ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸಮೀಪದವರ ಮತ್ತು
ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇವರಲ್ಲೊಂದು ಪೋಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಮುಖ್ಯ ಏಜಂಟರು.
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ ಕನ್ನಡ)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್
ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲಿ
—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಿಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನ್ನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಪ್ರೆಸ್. [ಮಾಲಕರ ವಿಳಾಸಕ್ಕೆ ಪತ್ರವ್ಯವಹರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ.**

ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda [Oushadalaya, GADAG.

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೪೨ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹಳ ಬಹು ಅಪಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನ್ನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ತೀವ್ರನೆ ಮುಂದುವರಿದವು.

೧೯೪೦, ೪೧ರಲ್ಲಿ **ಕೆನರಾ ಬೇಂಕು** ೯೦ ಲಕ್ಷ ಠೇವಣಿಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣಿಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡುವರೆ ಕೋಟಿಗೆ ಮಿಕ್ಕಿದೆ. ಹಾಗೂ ತೆತ್ತ ಮೂಲಧನವು ನಾಲ್ಮಡಿಯಾಗಿದೆ.

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮವಿಶ್ವಾಸದಿಂದಲೂ, ದೃಢಬುದ್ಧಿಯಿಂದಲೂ, ಯೋಗ್ಯಸೇವೆಯನ್ನು ಸಲ್ಲಿಸಿದರಿಂದಲೂ, ಇಂದಿನ ಈ ಪ್ರಗತಿಗೆ ಕಾರಣ ಭೂತರಾದ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಮಹತ್ವದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

CANARA BANK LIMITED.

ಕೆನರಾ ಬೇಂಕ್ ಲಿಮಿಟೆಡ್.

ಸ್ಥಾಪನೆ 1906.

ಎರಡು ಯೋಜನೆಗಳು

- ಮೋಸ್ಕೋ ತೀರ್ಮಾನ.
- ವೇವೆಲ್ ವಿಧಾನ.

ಎರಡೂ ಸಂಪೂರ್ಣವಲ್ಲ!

ಮೋಸ್ಕೋ ಸಮ್ಮೇಲನ.

ಕಳೆದ ಮೂರು ವಾರಗಳಲ್ಲಿ ಅವಿಚ್ಛಿನ್ನವಾಗಿ ಮೋಸ್ಕೋದಲ್ಲಿ ಸೇರಿದ ತ್ರಿರಾಷ್ಟ್ರೀಯ ವಿದೇಶ ಮಂತ್ರಿಗಳ ಸಮ್ಮೇಲನವು ಈಗ ಮುಕ್ತಾಯಗೊಂಡಿತು, ಸುಖಪ್ರಸವವಾಯಿತು-ಎಂಬ ಸುವಾರ್ತೆ ಬಂದಿದೆ. ಒಪ್ಪಂದ ಕರಾರಿಗೆ ಮೂವರ ಸಹಿಗಳೂ ಬಿದ್ದವು; ವಿವರವಿನ್ನೂ ಪ್ರಕಟವಾಗಿಲ್ಲ ಮೊಲೋಟೊವ್, ಈಡನ್, ಹಲ್ಲರನ್ನು ಮೋಸ್ಕೋಪರಿಷತ್ತು ನೆಗಳಿದ್ದ ಮದುವಿನಂತೆ ಬಹಳ ಆಳಕ್ಕೆಳೆಸಿದ್ದಿತು. ಚರ್ಚೆಯ ನಿಗೂಢತೆಯು ಸಹಭಾಗಿಗಳೆಲ್ಲರ ಶಕ್ತಿ, ಸಾಹಸ, ಯೋಜನಾ ಸಾಮರ್ಥ್ಯಗಳ ಪೂರ್ಣೋಪಯೋಗವನ್ನು ಪಡೆದಿದ್ದಿತು. ಇಂತಹ ಪರಿಶ್ರಮವು ಸುಖಪರ್ಯವಸಾಯಿಯಾದುದಕ್ಕಾಗಿ ತ್ರಿರಾಷ್ಟ್ರಗಳೂ ಈಗ ಸಮಾಧಾನದುಸಿರು ಬಿಡುತ್ತಿವೆ

ಚರ್ಚಿಸಿದುದೇನನ್ನು?

ಮುಖ್ಯವಾಗಿ ಜರ್ಮನಿಗೊಪ್ಪಿಸಬೇಕಾದ ಯುದ್ಧ ಶರ್ತಗಳನ್ನೇ. ಇಟೆಲಿಯ ಪರಾಜಯದ ಮೂಲ ರಶ್ಯವಲ್ಲೇ ಎಂದು ರಶ್ಯನರ ವಾದ. ಅದನ್ನು ಗೆದ್ದ ಪೂರ್ಣ ಹಕ್ಕು ತಮ್ಮದೆಂದೇ ಆಂಗ್ಲೋ-ಅಮೇರಿಕನರ ಅಭಿಮತ. ಆದರಲ್ಲೂ ಅಮೆರಿಕನರಿಗಿಂತ ದೊಡ್ಡಪಾಲು ತನ್ನ ಪಂಗಡದ ಹೆಗ್ಗಳಿಕೆ ಬ್ರಿಟಿಷರಲ್ಲಿದ ಎಂಬುದನ್ನು ಮರೆಯಬಾರದು. ಹೀಗೆ ಜರ್ಮನಿಯ ಕೆಂಪ ಒತ್ತಿಹಿಡಿಯುವ ಪ್ರಯಾಸ ರಶ್ಯಕ್ಕಾದರೆ ಕೈಯ್ಯಲ್ಲಿದ್ದುದನ್ನು ಕಸಗೊಳ್ಳುವ ಭಾಗ್ಯ ಮಿತ್ರರಾಷ್ಟ್ರೀಯರಿಗೆ! ಇದರಿಂದ ರಶ್ಯವು ಗುಪ್ತ ಬೇಸರಕ್ಕೊಳಗಾಗಿದೆ ಎಂಬುದು ಖಂಡಿತ. ಇನ್ನು ಮುಂದ ಕಾಲದರೂ ತನಗಿಂತಹ ಅನ್ಯಾಯವಾಗಬಾರದು ಎಂಬ ರಶ್ಯದ ಆತುರವೇ ಮೊಸ್ಕೋ ಪರಿಷತ್ತಿನ ಹೇತು. ಅಲ್ಲಿ ಆದ ಮುಖ್ಯ ತೀರ್ಮಾನವು ಪರಾಜಿತ ಜರ್ಮನಿಯ ಸಂಬಂಧದ ಸ್ಪಷ್ಟೀಕರಣವೆಂದು ತಿಳಿದುಬರುತ್ತದೆ.

ಪೂರ್ಣ ಒಮ್ಮತವೆ?

'ಈ ಪರಿಷತ್ತಿನ ತೀರ್ಮಾನದಿಂದ ರಶ್ಯವು ಯುದ್ಧಾನಂತರದ ವ್ಯವಸ್ಥೆಯಲ್ಲಿ ಸಹಕರಿಸುವದೆಂಬ ಆಶ್ವಾಸನೆಯುಂಟಾಗಿದೆ' ಎಂಬ ಅಧ್ಯಕ್ಷ ರುಸುವೆಲ್ಟರ ಮಾತಿನಿಂದಲೇ, ಸಮ್ಮೇಲನವು ಭಾವೀಲೋಕವ್ಯವಸ್ಥೆಯ ಕುರಿತಿದ್ದ ನಿರಾಶೆಯನ್ನು ತಪ್ಪಿಸಿತೇ ಹೊರತು ನಿರ್ಧಾರವಾಡಿಲ್ಲವೆಂಬುದು ಸ್ಪಷ್ಟ; ಇದು ಸ್ವಾಭಾವಿಕ. ಪೋಲೆಂಡಿನ ಗಡಿನಿರ್ಣಯ, ಬಾಲ್ಟಿಕ್ ಸಂಬಂಧ ನಿರ್ಣಯಗಳನ್ನೆಲ್ಲಾ ಬಾಕಿಯಿಡಲಾಗಿದೆ. ವಿದೇಶ ಮಂತ್ರಿಗಳ ಕೂಟದಲ್ಲಿ ಯುದ್ಧ ಹೊಂದಿಕೆಯಾಗಬಲ್ಲ ದೇಶ ಸಂಬಂಧಗಳ ಕುರಿತು ತೀರ್ಮಾನವಾಗಿರಬಹುದೇ ಹೊರತು ದ್ವಿತೀಯರಂಗ ನಿರ್ಮಾಣದಂತಹ ಪ್ರತ್ಯಕ್ಷ ಯುದ್ಧಯೋಜನೆ ತಯಾರಾಗುವದು ಅಸಂಭವ ಮೂಲಭಿನ್ನಾಭಿಪ್ರಾಯ, ಭಿನ್ನ ರುಚಿಗಳಿಂದಾಗಿ ರಶ್ಯ ಮತ್ತು ಮಿತ್ರರಾಷ್ಟ್ರಗಳ ನಡುವೆ ಕೆಲವು ಪ್ರಶ್ನೆಗಳು ಹುಟ್ಟಿಕೊಂಡಿದ್ದವು. ಸ್ಟಾಲಿನರ ಸಹಭಾಗಿತ್ವವಿಲ್ಲದ ಚರ್ಚಿಲ್-ರುಸವೆಲ್ಟರೊಳಗೇನೇ ನಡೆದ ಪರಿಷತ್ತುಗಳ ಪರಿಣಾಮವಾಗಿ ಅವು ಭೇತಾಳ ರೂಪವನ್ನೂ ತಾಳಿದ್ದವು. ಆ ಪೈಕಿ ಮಿತ್ರರ ಯುದ್ಧ ಯೋಜನೆಗೇನೇ ತೊಡಕಾಗಬಲ್ಲ ಕೆಲವನ್ನಾದರೂ ಮೋಸ್ಕೋ ಪರಿಷತ್ತು ಶಮನಪಡಿಸಿತೆನ್ನಬಹುದು. ಇದು ಸಮಾಧಾನ ಕೊಟ್ಟಿದೆ-ತೃಪ್ತಿಪಡಿಸಿಲ್ಲ.

ಲೋರ್ಡ್ ವೇವೆಲರು-

ಹುದ್ದೆಯಂಗೀಕರಿಸಿದೊಡನೆ ತನ್ನ ವೈಸರಾಯಿತನವನ್ನು ಅತಿಯೋಗ್ಯ ಕಾರ್ಯದಿಂದಾರಂಭಮಾಡಿದುದು ಶ್ಲಾಘನೀಯ. ಅವರ ಪ್ರಥಮ ಭೇಟಿಯು ರಾಜಮಹಾರಾಜ, ಗವರ್ನರುಗಳ ಬದಲಿಗೆ ಅನ್ನಾನ್ನಗತಿಕ ಬಂಗಾಳಿಗಳಿಗೆ! ರಾತ್ರಿ ಹೊತ್ತಿನಲ್ಲಿ ಅಜ್ಞಾತ ವೇಶದಿಂದ ವೈಸರಾಯರು ಕಲ್ಕತ್ತದಲ್ಲಿ ಆಹಾರ ಪೀಡಿತರು ಬಿದ್ದಿದ್ದ ಹಲವು ಕೇಂದ್ರಗಳನ್ನು ಸಂದರ್ಶಿಸಿ ಬಂದವರೇ, ಬಂಗಾಳದ ಕ್ಷಾಮ ನಿವಾರಣಾ ಕಾರ್ಯಕ್ಕೆ ಸೈನಿಕ ಸಹಾಯದ ಆಜ್ಞೆಯಿತ್ತಿರುವರು ಆಹಾರ ಧಾನ್ಯಗಳ ಸ್ವಾಧೀನತೆ ಮತ್ತು ವಿತರಣಾಧಿಕಾರವು ಇಷ್ಟರಲ್ಲೇ ಸೇನಾಧಿಕಾರಿಗಳ ವಶಕ್ಕೆ ಬಂದಿದೆ. ಮೇಜರ್ ಜನರಲ್ ಎ. ವಿ. ಟಿ. ವೇಕ್ಲಿ ಮತ್ತು ಮೇಜರ್ ಜನರಲ್ ಆರ್. ರಿಚಾರ್ಡ್ಸನರು ಈ ಕಾರ್ಯಭಾರ ವಹಿಸಲು ಕಲ್ಕತ್ತಕ್ಕೆ ಧಾವಿಸಿದ್ದಾರೆ. ಹಸಿವು ಮೂರ್ಛಿತರ ಆರೈಕೆ, ಆರೈಕೆಗಳಲ್ಲಿ ಸೋಲ್ಜರರು ಭಾಗವಹಿಸುವರು. ಸೈನಿಕ ಕೇಂದ್ರಗಳಿಂದ ವೈದ್ಯಕೀಯೋಪಕರಣಗಳೂ ಕಲ್ಕತ್ತಕ್ಕೆ ಸಾಗಿವೆ.

ಬಂಗಾಳವನ್ನು ಬದುಕಿಸಲು—

ಮುಂದಿನ ಬೆಳೆ ಕಟಾವಿನ ವರೆಗಿನ ಎರಡೂವರೆ ತಿಂಗಳ ಅವಧಿಗೆ 250,000 ಟನ್ ಧಾನ್ಯಗಳು ಬೇಕೆಂದು ಬಂಗಾಳಾ ಗವರ್ನರರು ಮಾಡಿಕೊಂಡ ವಿನಂತಿಯಂತೆ ಬೇರೆ ಬೇರೆ ಪ್ರಾಂತ್ಯಗಳಿಂದ 292,000ಟನ್ನನ್ನು ಜಮಾಯಿಸುವ ವ್ಯವಸ್ಥೆಯಾಗಿದೆ. ಇದರಲ್ಲಿ ರೇಶನಿಂಗ್ ವಿತರಣೆಗಾಗಿ ಕಲ್ಕತ್ತಾ ನಗರಕ್ಕೇನೇ 112,000 ಟನ್ನುಗಳು ಬೇಕಾಗುವದರಿಂದ, ಉಳಿದ 180,000 ಟನ್ನುಗಳು ಜಿಲ್ಲೆಗಳಿಗೆ ದೊರಕುವವೆಂದು ಆಸೆ ಆದರೆ ಈ ಅವಧಿಯಲ್ಲಿ 1 ಲಕ್ಷ ಟನ್ನಿಗಿಂತ ಮಿಕ್ಕಿ ಕಲ್ಕತ್ತದಿಂದ ಜಿಲ್ಲೆಗಳಿಗೊಯ್ಯುವದು ಅಸಾಧ್ಯವೆಂಬುದರಿಂದ ಉಳಿದ ೮೦ ಸಾವಿರ ಟನ್ನನ್ನು ಸಂಗ್ರಹಿಸುವ ಜವಾಬ್ದಾರಿಯೂ ಸೈನಿಕಾಧಿಕಾರಿಯ ಮೇಲಿದೆ. ಕಲ್ಕತ್ತ ನಗರವೊಂದರಲ್ಲೇ ದಿನಂಪ್ರತಿ ಶತ ಸಂಖ್ಯೆಯಲ್ಲಿ ಈಗಲೂ ಆಹಾರವಿಲ್ಲದೆ ಸಾಯುತ್ತಿದ್ದಾರೆ. ಇಡೀ ಬಂಗಾಳದಲ್ಲಿ ವಾರಂಪ್ರತಿ ಸಾಯುತ್ತಿರುವವರ ಸರಾಸರಿ ಸಂಖ್ಯೆ ಕಡಿಮೆಯೆಂದರೂ 10ಸಾವಿರಕ್ಕೆ ಮಿಕ್ಕಿ ಇದೆ. ದಿನಂಪ್ರತಿ 20 78 880 ಜನರಿಗೆ ಆಹಾರವೀಯಬಲ್ಲ 5442 ಧರ್ಮಾರ್ಥ ಭೋಜನ ಗೃಹಗಳು ಅನಧಿಕಾರಿಗಳಿಂದ ಹಾಗೂ ಅಧಿಕಾರಿಗಳಿಂದ ಸ್ಥಾಪಿಸಲ್ಪಟ್ಟಿವೆ. ಹಲವು ರಕ್ಷಣಾ ನಿಲಯಗಳೂ ಕಲ್ಕತ್ತದಲ್ಲಿವೆ.

ತಾತ್ಕಾಲಿಕ ಶಮನ!

ಆದರ ಮೋಸ್ಕೋ ಸಮ್ಮೇಲನದಂತೆಯೇ ಬಂಗಾಲದ ಬರಗಾಲ ನಿವಾರಣೋಪಾಯವೂ ತಾತ್ಕಾಲಿನ ಶಮನವೆಂಬುದನ್ನು ಮರೆಯಬಾರದು. ಮಲಬಾರ್, ರಾಯಲ್‌ಸೀಮೆ, ಕೊಚ್ಚಿ, ಒರಿಸ್ಸಾ ಮೊದಲಾದ ಕೆಲವೆಡೆಗಳ ಪರಿಸ್ಥಿತಿ ಇಂದಾದರೂ ಬಂಗಾಳಕ್ಕೆ ಬಹಳ ಬಿಟ್ಟಿಲ್ಲ. ಈ ವರುಷ ಬರಗಾಲದ ವ್ಯಾಪಕತೆ ಹೆಚ್ಚಬಹುದೆಂಬ ಭೀತಿಯೆದ್ದಿದೆ. ರೋಗಿಯ ಚಿಕಿತ್ಸೆಯನ್ನು ದಾದಿಯೂ ಮಾಡಿಯಾಳು—ಆದರೆ ರೋಗ ನಿರ್ಮಾಣವಾಗದಂತೆ ಆರೈಕೆ ನೋಡಬಲ್ಲವಳು ಮಾತೆಯೊಬ್ಬಳೇ! ಬರಗಾಲ ನಿವಾರಣಾ ಕಾರ್ಯವನ್ನು ಸೈನಿಕರೂ ಮಾಡಬಲ್ಲರು - ಅದು ಹುಟ್ಟಿಕೊಳ್ಳದಂತೆ ಪೂರ್ವ ವ್ಯವಸ್ಥೆ ಮಾಡಲು, ಜನತೆಯ ಸಹಾನುಭೂತಿ, ಬೆಂಬಲಪಡೆದಿರುವ ಪ್ರಮುಖರಿಂದ ಮಾತ್ರ ಸಾಧ್ಯ. ಲೋರ್ಡ್‌ವೇವೆಲರಲ್ಲಿ ಈ ಸದ್ಬುದ್ಧಿ ಯಿರಬಹುದೆ? ಅವರು ಸೈನಿಕರನ್ನು ರಕ್ಷಣಕಾರ್ಯಕ್ಕಾಗಿ ಕೇಂಪ್‌ಗಳಿಂದ ಹೊರಕಳೆದಂತೇ ರಾಷ್ಟ್ರೀಯ ಪ್ರಮುಖರನ್ನೂ ಜೈಲಿನಿಂದಬಿಡುಗಡೆಮಾಡಬಲ್ಲರೆ? ಅಥವಾ ತಾನು ಸಹೃದಯಿ ಎಂಬುದರ ಪ್ರದರ್ಶನವಿಷ್ಟರಿಂದಲೇ ಆಯಿತೆಂದು ತೃಪ್ತಿಗೊಂಡು, ಇನ್ನುಳಿದ ವಿಷಯಗಳಲ್ಲಿ ದ್ವಿತೀಯಲಿನ್‌ಲಿನ್‌ಗೋ ಆಗುವರೆ?

ಶ್ರೀ ಕೆ. ಎಲ್. ಭಟ್ಟರು.

ಶ್ರೀಯುತರು ಉಡುಪಿಯ ಮಹಾರಾಜ ಬಂದಾದಿನ್ ಕಲಾಮಂದಿರದ ಸಂಚಾಲಕರು. ಇವರ ಮತ್ತು ಇವರ ಶಿಷ್ಯವರ್ಗದವರ ನೃತ್ಯಕಲಾ ಪ್ರದರ್ಶನವೊಂದು ತಾ 17-10-43ರಲ್ಲಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಯಶಸ್ವಿಯಾಗಿ ಜರಗಿಸಲ್ಪಟ್ಟಿತು. ಶ್ರೀ ಭಟ್ಟರು ಉತ್ತಮ ಭವಿಷ್ಯವುಳ್ಳ ನೃತ್ಯಕಲಾವಿದರಿದ್ದು ಜಿಲ್ಲೆಗೇ ಕೀರ್ತಿಪ್ರದರಾಗುವರೆಂದು ನಿರೀಕ್ಷಿಸಲಾಗಿದೆ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಒಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತಿ,ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—0—0.

ಕಸ್ತೂರಿಮಿಶ್ರಿತ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ—1. ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ ಅಂಡ್ ಜನರಲ್ ಮರ್ಚೆಂಟ್ಸ್, 183 ಸುಪಾರಿಬಾಗ್ ರೋಡ್, ಪರೇಲ, ಬೊಂಬಾಯಿ, ನಂಬ್ರ 12. 2. ಜನರಲ್ ಸ್ಟೋರ್ಸ್, ಜಿ. ಐ. ಪಿ. ಮಾಟುಂಗಾ. 3. ಮುಲ್ಲರ್ ಪೆಟರ್ನ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ. 4. ಧನ್ವಂತರಿ ವೈದ್ಯಶಾಲೆ, ಚೆನ್ನಪಟ್ಟಣ ಬಜಾರ್, ಮೈಸೂರು. 5. ಮಂಗ್ಳೂರು ಸ್ಟೋರ್ಸ್, ಮಡಿಕೇರಿ. 6 ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ. 7. ಡಾ। ಶ್ರೀನಿವಾಸ ಪೈ, ಪುತ್ತೂರು 8 ಕಾಂತಾವರ ವಾಸುದೇವ ಕಮ್ತಿ, ಬೆಳ್ತಂಗಡಿ. 9. ಮುಲ್ಕಿ ಮೆಡಿಕಲ್ ಸ್ಟೋರ್ಸ್, ಮುಲ್ಕಿ. 10 ನವಭಾರತ ಬುಕ್ ಡಿಪೊ, ಸಂತೆಕಟ್ಟೆ, ಉಡುಪಿ 11. ಕೃಷ್ಣ ಫಾರ್ಮಸಿ, ಕುಂದಾಪುರ. 12. ಎಚ್. ನರಸಿಂಹ ನಾಯ್ಕ, ಮರ್ಚಂಟ್, ಶಂಕರನಾರಾಯಣ. 13. ಕಾಸರಗೋಡು ಶ್ರೀ ರಾಮಾ ಸ್ಟೇಶನರಿ ಹೌಸ್, ಶ್ರೀರಾಮ ಪೇಟೆ. 14. ಕೆ ಶ್ರೀನಿವಾಸ ಹೆಗ್ಡೆ, ತೀರ್ಥಹಳ್ಳಿ. 15. ಬಿ ಯಸ್. ನರಿಂಗರಾವ್, ಮರ್ಚೆಂಟ್, ಚಿಕ್ಕಮಂಗ್ಳೂರು.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಣಿ ನ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

The Canara Banking Corporation Limited.
(Incorporated in British India with limited Liability)
ESTD: 1906
ANNOUNCEMENT.
A Branch of the Bank will be opened shortly at:-
BANGALORE CITY,
(ARCOT SREENIVASACHARS STREET.)

ನವಯುಗ

ಉಡುಪಿ, ಗುರುವಾರ, ೪-೧೧-೧೯೪೩

'ರಿಕ್ವಿಜಿಶನ್'ವಂಚನೆಗಳು.

ದಕ್ಷಿಣ ಕನ್ನಡದಲ್ಲೀಗ ಓರ್ವ ಒಕ್ಕಲು ಬೇಸಾಯಗಾರನಿಗೊಂದು ಬಾಣವೆಂಬಂತೆ, ಬತ್ತ 'ರಿಕ್ವಿಜಿಶನ್' ನೋಟೀಸುಗಳು ಸರ್ವತ್ರ ಜ್ಯಾರಿಯಾಗಿವೆ; ಜಿಲ್ಲೆ ನೋಟೀಸು ಹಾವಳಿಗೊಳಗಾಗಿದೆ. ಮೊಗಲಾಯಿ ಕಾಲದ ಈ ಘೋಷಣೆಯ ಪುನರಾವರ್ತನೆಯಿಂದಾಗಿ ಜಿಲ್ಲೆಯಲ್ಲಿದ್ದಿರುವ ಕಳವಳದ ಕುರಿತು ನಾವು ಕಳೆದ ವಾರ ಪ್ರಸ್ತಾಪಿಸಿದ್ದೇವೆ. ಈ ನವಘೋಷಣೆಯು ಬೇಸಾಯಗಾರರಲ್ಲಿ ದಿಗಿಲನ್ನೆಬ್ಬಿಸಿದ್ದರೆ, ಅದನ್ನು ಕಾರ್ಯಕ್ಕಿಳಿಸುವ ರಿಕ್ವಿಜಿಶನ್ ರೀತಿನೀತಿಗಳು ಕಣ್ಣೀರನ್ನೇ ಬರಿಸುತ್ತಿವೆ. ಸಲಲಿರುವ ಗೇಣಿಯ ಅರೆವಾಸಿ ಬತ್ತವನ್ನು ರಿಕ್ವಿಜಿಶನ್ ಮಾಡುವದೇ ಸರಕಾರದ ನಿಶ್ಚಿತ ಘೋಷಣೆಯೆಂದು ಕೇಳಿದ್ದೇವೆ. ಆದರೆ ಜಿಲ್ಲೆಯಲ್ಲೆಲ್ಲಾ ಜ್ಯಾರಿಯಾಗಿರುವ ನೋಟಿಸುಗಳಲ್ಲಿ ಸೇಕಡಾ 50ರಿಂದ ಹಿಡಿದು 100ಕ್ಕೆ ನೂರನ್ನೂ (ಕೆಲವೆಡೆ ಸೇಕಡಾ 100ಕ್ಕೂ ಮಿಕ್ಕಿ!) ರಿಕ್ವಿಜಿಶನ್ ಮಾಡಿದ ತರಗತಿ ಭೇದಗಳಿವೆ ಎಂದು ತಿಳಿದು ಬರುತ್ತದೆ. ಇದರ ಅರ್ಥವೇನು? ಸರಕಾರಕ್ಕೊಂದು ಘೋಷಣೆ- ಅದನ್ನು ಜ್ಯಾರಿಗೆ ತರುವಾಗ ನೌಕರರಿಗಿನ್ನೊಂದು ಘೋಷಣೆಯೆ? ಅಥವಾ ಸೇಕಡಾ 50ರಷ್ಟನ್ನು ಕೊನೆಯ ಕಡಿಮೆಯಂಶವೆಂದಿಟ್ಟುಕೊಂಡು, ಜನ, ಸಂದರ್ಭ ನೋಡಿ ಅದನ್ನು ಮನಸೇಚ್ಛೆ ಬೆಳೆಸುವ ಪೂರ್ಣಾಧಿಕಾರವನ್ನು ರೆವಿನ್ಯೂ ಅಧಿಕಾರಿಗಳು ಪಡೆದಿರಬಹುದೆ? ಇಲ್ಲವಾದರೆ ರಿಕ್ವಿಜಿಶನಿನ ಅಂಶ ನಿರ್ಣಯದಲ್ಲಿ ಈ ಪಕ್ಷಪಾತವೇಕೆ? ತಾಲೂಕಿಗೊಂದು ಘೋಷಣೆಯಂತಾದರೂ ಇರುತ್ತಿದ್ದರೆ, ನೋಟೀಸು ಬರೆಯುವ 'ಕೈಗೊಂದು ಬುದ್ಧಿ' ಅರ್ಥ ಮಾಡಿಕೊಳ್ಳಬಹುದಾಗಿತ್ತು— ಆದರೆ ಇಲ್ಲಿದೆ: 'ಹೆಜ್ಜೆಗೊಂದು ಬುದ್ಧಿ!' ಒಂದೇ ಊರಿನಲ್ಲಿರುವ ಇಬ್ಬರು ರೈತರಲ್ಲಿ- ನೆರೆಕರೆಯ ಇಬ್ಬರಲ್ಲೇ-ಒಬ್ಬನ ಉತ್ಪತ್ತಿಯ ಸೇಕಡಾ 50ರಷ್ಟು ರಿಕ್ವಿಜಿಶನ್ ಆಗಿದ್ದರೆ ಇನ್ನೊಬ್ಬನದು ಸೇಕಡಾ 75-80ರಷ್ಟು ರಿಕ್ವಿಜಿಶನ್ ಆದ ನಿದರ್ಶನಗಳೆಷ್ಟೋ ಇವೆ. 'ಇದು ಪುಲಿಗೆಯಿಲ್ಲ- ಒಂದು ಯೋಜನೆ' ಎಂಬ ಸಮಾಧಾನವಾದರೂ ಜನತೆಗುಂಟಾಗಬೇಕಾದರೆ ಇಂತಹ ಭಿನ್ನ ರೀತಿಗಳಿರಬಾರದು. ರೆವಿನ್ಯೂ ಇಲಾಖೆಯ ಕೆಲ ನೌಕರರು ರೈತರ ಅಜ್ಞಾನದಾಶ್ರಯದಲ್ಲಿ ಅವರನ್ನು ವಂಚಿಸಲು ಎಲ್ಲಿ ತನಕ ಸಿದ್ಧರಿರುವರೆಂಬುದನ್ನು ಈ ಅನ್ಯಾಯದಿಂದ ಊಹಿಸಿಕೊಳ್ಳಬಹುದು. ರಿಕ್ವಿಜಿಶನ್ ಘೋಷಣೆಯಾಗಿ ಅರೆವಾಸಿ ಭತ್ತವನ್ನು ಪಡೆಪಡಿಸಿಕೊಳ್ಳಬೇಕೆಂದಿದ್ದರೆ ಸ್ಥಳೀಯ ಅಧಿಕಾರಿಗಳು ನೋಟಿಸಿನಲ್ಲಿ ನಮೂದಿಸಬೇಕಾದುದು ಮುಡಿಯ ಸಂಖ್ಯೆಯನ್ನೇ. ಈ ಸಂಖ್ಯೆಯನ್ನೆಣಿಯುವಾಗ ತಪ್ಪನ್ನೊಪ್ಪಿಸಿದವನ ಉತ್ಪತ್ತಿ ಕಡಿಮೆಯಾಗಿ, ಮೆಚ್ಚಿಸದವನ ಹುಟ್ಟುವಳಿಯಧಿಕವಾಗಿ ನೌಕರರ ದೃಷ್ಟಿಗೆ ತೋರಿಬಂದು, ಆ ತೋರುವಿಕೆಯ ಅರೆವಾಸಿಯಷ್ಟರ ನೋಟೀಸಿನಲ್ಲಿ ನಮೂದಿಸಲಿಕ್ಕಾತಂಕವೇನು? 'ನೌಕರರು ಲಂಚ ಪಡೆದುದನ್ನು ಸರಕಾರದ ಅವಗಾಹನೆಗೆ ತಂದರೆ ಆ ಕುರಿತು ಕಠಿಣ ಕಾರ್ಯ ಕೈಕೊಳ್ಳಲಿದ್ದೇವೆ'–ಎಂದು ನಾಗರಿಕ ಸರಬರಾಯಿ ಖಾತೆಯ ಎಡಿಶನಲ್ ಡೆಪ್ಯುಟಿ ಕಮಿಶನರರು ದ. ಕ. ಭೂಮಾಲಿಕ ಸಂಘದವರಿಗಿತ್ತ ಆಶ್ವಾಸನೆಯಿದೆ. ಈ ರಿಕ್ವಿಜಿಶನ್ ತಾರತಮ್ಯವನ್ನೇ ಸರಕಾರದ ಅವಗಾಹನೆಗೆ ತಂದು 'ಇದರ ಹಿನ್ನೆಲೆಯನ್ನು ಶೋಧಿಸಿ ನೋಡಿ, ಲಂಚದ ಪ್ರಭಾವ ಕಾಣದೆ?' ಎಂದು ಪ್ರಾರ್ಥಿಸಿಕೊಂಡರೆ ಹೇಗೆ? ಇವಕ್ಕೆಲ್ಲಾ ಆಕ್ಷೇಪವೀಯುವ ಒಂದು ಸಂದರ್ಭವನ್ನೇನೋ ಸರಕಾರವು ಒದಗಿಸಿ ಕೊಟ್ಟಿದೆ– ಆದರೆ ವಿಚಾರಣೆಯೂ ಅಧಿಕಾರಿಗಳಿಂದಲೇ ತಾನೆ!

ಇನ್ನು ಈ ರಿಕ್ವಿಜಿಶನಿನಾಧಾರವಾಗಿ ಒಂದು ನಿಯಮ, ನೀತಿಯಿಲ್ಲವೇ ಇಲ್ಲವೇನು? ಮುಂಗೇಣಿ ಕೊಟ್ಟು ಒಕ್ಕಲಾಗಿ ನಿಂತು, ಈ ವರುಷದ ಗೇಣಿಯಲ್ಲಿ ಆ ಮೊತ್ತ ವಜಾಪಡಿಸಿಕೊಂಡು ಪಕ್ಕದವರು, ಬೇರೆ ಕಾರ್ಯ ಕೈಕೊಳ್ಳುವ ಉದ್ದೇಶವಿಟ್ಟುಕೊಂಡ ಬೇಸಾಯಗಾರರಿರಬಹುದು; ಅಂಥವರ ಗೇಣಿ ಭತ್ತವನ್ನೂ ರಿಕ್ವಿಜಿಶನ್ ಮಾಡಿದ ಸರಕಾರವು ಅವರಿಗೆ ಮುಂದಿನ ಜೀವನ ವ್ಯವಸ್ಥೆಯನ್ನು ಮಾಡಿಕೊಡಲು ಸಿದ್ಧವಿದೆಯೆ? ಜೀವನ ನಿರ್ವಹಣಕ್ಕೆ ಸಾಕು-ಸಾಲದು ಎಂಬಷ್ಟು ಕುಟುಂಬದ ಆಸ್ತಿಯ ಅಂಶವನ್ನು ಬಾಯಿದೆರೆ ಅಥವಾ ಕರಾರು ಮೂಲಕ ಪಡೆದು ಬೇರೆ ಬೇರೆಯಾಗಿ ಅನುಭೋಗಿಸುತ್ತಿರುವ ಅವಿಭಕ್ತ ಕುಟುಂಬಗಳೆಷ್ಟೋ ಇವೆ. ಅಂತಹ ಕುಟುಂಬಗಳ ಇಡೀ ಆಸ್ತಿಗೆ ಪಟ್ಟೇದಾರನೊಬ್ಬನೇ ಇದ್ದು, ಆದರ ಒಟ್ಟು ಉತ್ಪತ್ತಿಯನ್ನಷ್ಟೇ ನೋಡಿದರೆ ಸಂಖ್ಯೆ ದೊಡ್ಡದೇ-ಕುಟುಂಬದ ಸದಸ್ಯರ ಸಂಖ್ಯೆಯೊಡನೆ ಉತ್ಪತ್ತಿಯ ಸಂಖ್ಯೆಯನ್ನು ತಳೆದಾಗ ಮಾತ್ರ ತಲೆಗೊಂದು ಮುಡಿಯಂತೆ ಬರುವ ನಿದರ್ಶನಗಳೂ ಇವೆ! ಇಂತಹ ಸಂದರ್ಭಗಳಲ್ಲಿ ಹುಟ್ಟುವಳಿ ಸಂಖ್ಯೆಯನ್ನಷ್ಟೇ ಗಣಿಸಿ ಹೊರಟ ರಿಕ್ವಿಜಿಶನ್ ನೋಟೀಸಿಗೆ ಅನ್ಯಾಯಪರಾರದ ದ್ರೋಹ ತಟ್ಟದೆ? ನರುವಕ್ಕೆ ಮುಡಿ ಸಾಗುವಳಿಯ

ದುರ್ಬೀನು

ಪಲ್ಲಂಗವೇರಿದವ ಸಾಯಲಾರ-ಫಾಸಿಗೇರಿದವನೂ ಸಾಯಲಾರನೆ? ಅದರ ಪಡೆದವ ನೋಯಲಾರ–ಆಪತ್ತಿಗೊಳಗಾದವನೂ ನೋಯಲಾರನೆ?

೦೦ ೦೦ ೦೦

ಪೆಟ್ಟು ದೇಹಕ್ಕೆ ಬಿದ್ದರೂ ನೋವಿನ ಅರಿವಾಗುವದು ಮನಸ್ಸಿಗೆ; ಅವಮಾನ ದೇಹಕಿಕ್ಕಿದರೂ ಅದರ ಅರಿವಾಗಬೇಕು ಧುರೀಣರಿಗೆ.

೦೦ ೦೦ ೦೦

ಜೇಡನು ಸಿಕ್ಕುಬಿಡಿಸುವದಕ್ಕಿಂತ ಕೂದಲು ಕತ್ತರಿಸುವ ಕಾರ್ಯ ಸುಲಭ; ವಿಷಯ ವಿಮರ್ಶೆಗಿಂತ ವಿಷಯ ಒಡನೆ ಸುಲಭ.

೦೦ ೦೦ ೦೦

ಸಮುದ್ರಾಳವಿದ್ದರೂ ಕೆಸ್ತ ನನಗೇನು ಚಿಂತೆ? ಆಳುವವನ ಮನಸ್ಸಿನಲ್ಲಿ ಏನಿದ್ದರೂ ಆಳುವವನಿಗೇನು ಯೋಜನೆ?

೦೦ ೦೦ ೦೦

ಸರುವನ್ನು ಮೂಗಿಗೇರಿಕೊಂಡು ಬಿದ್ದು ತುಂಬಿಸಿಟ್ಟು ಜೀವಾನವನಾದವರೆಂದೆಲ್ಲ-ಆದೊಂದು ಅಭಿರುಚಿಯಿಂದ ಅಜ್ಞಾನಿಗಳನ್ನು ಆಮಂತ್ರಿಸುವುದು ಸತ್ಯಾರಕ್ಕಾಗಿಯಲ್ಲ-ಅದೊಂದು ವ್ಯಂಗ್ಯ ಪಿನೋದಕ್ಕಾಗಿ

೦೦ ೦೦ ೦೦

ಕೈಕೋಲನ್ನು ತಿರುಗಿಸುವಂತೆ ಕೈಯನ್ನು ತಿರುಗಿಸಲಾಗುವದಿಲ್ಲ; ಮಾತಾಡಿದಂತೆ ಮನಸ್ಸನ್ನೂ ಆಡಿಸುವದಸಾಧ್ಯ

೦೦ ೦೦ ೦೦

ಮುಮುಕ ನೂರು ವೈಬವ ಮುಂದೆ ಪಿಡಲಾರ; ಮರುಳು ಬುದ್ಧಿಯವ ಹೂಗು ಬಿಟ್ಟು ಮುಂದೆ ನೋಡಲಾರ

ಪ್ರ ನೂರರಿಂದ ಅಂಶ ಪ್ರಕ ರಣೆ ತೆತ್ತು ಬದುಕುವ (ಒಂದೇ ನಾಗುವಳಿಯ ಉತ್ಪತ್ತಿಯು ಗೇಣಿಗೆ ಸಾಕಾಗುವಂತಿಲ್ಲ.) ಯೋಜನೆ ತಯಾರಿಸಿದ ಒಕ್ಕಲುಗಳು, ಪ್ರಥಮ ಸಾಗುವಳಿಯಿಂದಲೇ ಹೆಚ್ಚಿನ ಅಂಶವನ್ನು ಕೊಡಬೇಕೆಂದರೆ ತರುವದೆಲ್ಲಿಂದ! ಇವೆಲ್ಲವನ್ನೂ ಪರ್ಯಾಲೋಚಿಸಿ ಸರಕಾರವು ರಿಕ್ವಿಜಿಶನನ್ನು ಹಿಂದೆಗೆಯಲಿ-ರೈತರ ನಾಶಿಗೆ ಹೊಟ್ಟೆಯ ಪೆಟ್ಟಾಗಿ ಒಡಿಯದೆ ಎಂಬುದರ ಕಡೆಗೆ ಲಕ್ಷ್ಯ ವಿಡಲಿ-ಎನ್ನುತ್ತೇವೆ.

ಚೂರು-ಚೂರು

●

ಬರಗಾಲ ಪೀಡಿತ ಬಂಗಾಳಾ ಕ್ಷೇತ್ರಗಳನ್ನು ಸಂದರ್ಶಿಸಿ ಬಂದ ಲೋರ್ಡ್ ವೇವೆಲರ ಕುರಿತು ಲಂಡನಿನ 'ಟೈಮ್ಸ್' ಪತ್ರಿಕೆಯಲ್ಲಿ ತಲೆಬರಹ:–'ವೈಸರಾಯರ ಶೀಘ್ರಕಾರ್ಯ'.

ನಿಜ. ವೈಸರಾಯರು ಕಲ್ಕತ್ತದಿಂದ ಅಷ್ಟು ಬೇಗನೇ ಮರಳಬಾರದಿತ್ತು!

O

'ಮೋಸ್ಕೋ ಸಮ್ಮೇಲನದಲ್ಲಿ ಒಪ್ಪಂದವಾಗಿದೆ-ದಸ್ಕತು ಹಾಕುವುದು ಮಾತ್ರ ಬಾಕಿಯಿದೆ'-ತಾ 29ರಲ್ಲಿ ಅಧ್ಯಕ್ಷ ರುಸುವೆಲ್ಟರ ಹೇಳಿಕೆ.

ಅರ್ಥಾತ್ ಮನಸ್ಸು ಸೈಗೊಟ್ಟರೂ ಸಹಿಹಾಕುವ ಕೈ ಹಿಂಜರಿಯುತ್ತಿದೆ!

O

'ಅನಿರೀಕ್ಷಿತ ಘಟನೆಯೊದಗದಿದ್ದಲ್ಲಿ ಮುಂಬರುವ ಬಾಂಬ್ ಬೀಟಿಸ್ ಯುದ್ಧ ಕಾರ್ಯಕ್ಕಾಗಿ ಡಿಲ್ಲಿಯ ಮನೆಗಳನ್ನು 'ರಿಕ್ವಿಜಿಶನ್' ಮಾಡುವ ಯೋಜನೆ ಸರಕಾರಕ್ಕಿಲ್ಲ'-ಲೋರ್ಡ್ ವೇವೆಲರ ಆಶ್ವಾಸನೆ

ಈ ಮಾತನ್ನು ಕೇಳಿ ಬ್ರಿಟಿಶರಲ್ಲಿದ್ದ, ಸಾಸಿಕೆಗೆಯುವ ಬುದ್ಧಿಯೇ ಹೋಯಿತೆಂದು ಯಾರೂ ಸಂತೋಷ ಪಡಬಾರದು.

●

'ಯಾರ ಪ್ರತಿನಿಧಿಯೂ ಆಗಿರದ ಸದಸ್ಯರ ವೈಸರಾಯರ ಕೌನ್ಸಿಲಿಗೆ ಹಿಂದುಗಳ ಜಾವ ಮುಸಲ್ಮಾನರ ಮೇಲೆ; ಏನೂ ಪ್ರತಿಷ್ಠೆಯಿಲ್ಲವಾದ್ದರಿಂದ ಆಹಾರ ಸಮಸ್ಯಾ ವಿವರಣೆಯಲ್ಲಿ ಕೇಂದ್ರ ಸರಕಾರವು ಲೋಚನೀಯ ರೀತಿಯಿಂದ ಅಪಜಯಗೊಂಡಿದೆ'-ಮುಸ್ಲಿಂಲೀಗಿನ ಕಾರ್ಯಕಾರೀ ಸದಸ್ಯ ಪಿ. ಕಾಶ್ಮೀ ಮಹಮ್ಮದ್ ಇಸ್ಮಾಯಿಲರ ಮಾತು.

ಆದರೆ 'ಎಂತಹ ಅಪಜಯದಲ್ಲಾದರೂ ಎದೆಗುಂದ ಬಾರದು' ಎಂಬ ಯುದ್ಧ ತತ್ವ ಆ ಸದಸ್ಯರಿಗೆಲ್ಲಾ ಗೊತ್ತಿದೆ

●

'ನಿಯರಿಗಿಂತ ಮೊದಲು ಆಂಗ್ಲೋ ಅಮೇರಿಕಾದವರು ಜರ್ಮನಿಯೊಳಗೆ ನುಗ್ಗಬೇಕೆಂದು ಸಿಗಾರೆಗೊಂಡ ಜರ್ಮನರಲ್ಲಿ ಹೆಚ್ಚಿನವರೀಗ ಅಪೇಕ್ಷಿಸುತ್ತಿದ್ದಾರೆ'-ನ್ಯೂಜಿಲ್ಯಾಂಡ್ ಮಂತ್ರಿ ಜಾನ್ಸನ ಮಾತು.

ಸತ್ಯವಾಗಿರಬಹುದು-ಯಾಕೆಂದರೆ ಶತ್ರುಗಳಿಗಿಂತ ಮಿತ್ರರನ್ನು ಪ್ರತಿಭಟಿಸುವದು ಸುಲಭ.

●

'ಬಂಗಾಲದ ಪರಿಸ್ಥಿತಿಯು ಪತ್ರಿಕೆಗಳಲ್ಲಿ ಬರುತ್ತಿರುವುದಕ್ಕಿಂತಲೂ ಭೀಕರವಿದೆ. ಅದನ್ನು ಹೇಳಿ ಮುಗಿಯದು-ಬರೆದು ತೀರದು'-ಕಲ್ಕತ್ತಾ ಮೇಯರರ ಕಂಬನಿ.

ಅದು ಗೊತ್ತಿದ್ದೇ ಅಧಿಕಾರಿಗಳು ಕೊನೆವರೆಗೂ ಮೌನವಾಗಿದ್ದುದು!

—ವಿನೋದಿ.

PROGRESSIVE EFFICIENT ECONOMICAL
It pays to own a Life Policy in the
INDO UNION
ASSURANCE CO., LTD.
HEAD OFFICE.
INDO UNION BUILDINGS, G. T. MADRAS.
For Representation apply to
M. SUNDERRAM SHETTY,
Branch Manager,
Sir Pherozeshah Mehta Road, Fort, BOMBAY.

ಕಾರ್ಕಳ ತಾಲೂಕು ರೈತರ ಮಹಾ ಸಭೆ– ಸರಕಾರದ ಕಡೆಯಿಂದ ಆಗುತ್ತಿರುವ ಭತ್ತ ತಗಾದೆಗಳು ವಗೈರೆ ವಿಶಯಗಳ ಕುರಿತು ಆಲೋಚಿಸುವುದಕ್ಕೂ ಸಂಘದ ಹೊಸ ಅಧಿಕಾರಿಗಳನ್ನು ಚುನಾಯಿಸುವುದಕ್ಕೂ ರೈತರ ಸಂಕಷ್ಟಗಳ ಕುರಿತು ಆಲೋಚಿಸಿ, ಅವರ ಪರಿಹಾರಾರ್ಥವಾಗಿ ಯೋಗ್ಯ ಯೋಜನೆಗಳನ್ನು ಕೈಕೊಳ್ಳುವುದಕ್ಕೂ ತಾ. 13-11-43 ನೇ ಅಪರಾಹ್ನ ಗಂಟೆ 4ಕ್ಕೆ ಕಾರ್ಕಳ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಸಭೆ ಸೇರುವುದು.

Notice

ಉಡಿಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ಸಂಖ್ಯೆ 266/1943

ಲಕ್ಷ್ಮೀನಾರಾಯಣಪ್ಪಯ್ಯ — ವಾದಿ

1. ವಾಸು ನಾಯ್ಕ 2. ರಾಧಂಮ.

— ಪ್ರತಿವಾದಿಗಳು.

ಇವರೊಳಗೆ

2ನೇ ಪ್ರತಿವಾದಿಳು–ರಾಧಂಮ, ಶ್ರೀನಿವಾಸ ಬಂಗೇರರ ಹೆಂಡ್ತಿ ಉಡಿಪಿ ತಾಲ್ಲೂಕ ಪೆಜಮಂಗೂರು ಗ್ರಾಮದ ಕೊಕ್ಕರ್ಣೆಯಲ್ಲಿರುವವಳು.

ಇವಳಿಗೆ–

ವಾದಿ ವ 1ನೇ ಪ್ರತಿವಾದಿ ಸಹಾ ತಾರೀಕು 25-10-1940ರಲ್ಲಿ ರಿಜಿಸ್ಟ್ರಿ ಸಹಿ ಮಾಡಿಕೊಂಡ ಮೂಲಗೇಣಿ ಚೀಟು ಮೇರೆಗೆ 1ನೇ ಪ್ರತಿವಾದಿಯು ಮೂಲ ಗೇಣಿಗೆ ಅನುಭವಿಸಿಬರುವ ದಾವಾ ಆಸ್ತಿಗಳ ಬಾಬ್ತು ಚಿತ್ರಭಾನು ಸಂವತ್ಸರದ ಗೇಣಿ ಬಾಕಿ ಬಡ್ಡಿ ಕೂಡಾ ರೂಪಾಯಿ 65-8-0ಕ್ಕೆ ಸದ್ರಿ ಮೂಲಗೇಣಿ ಆಸ್ತಿಗಳ ಈದುದಾರಳಾದ 2ನೇ ಪ್ರತಿವಾದಿಳ ಉಜ್ರ್ಯಶಿವಾಯ್ ಸದ್ರಿ ಆಸ್ತಿಗಳ ಮಾರಾಟದ ಬಗ್ಗೆ ಕೂಡಾ ಡಿಕ್ರಿ ಕೇಳಿ ವಾದಿಯು ದಾಖಲ್ಮಾಡಿರುವ ಈ ದಾವೆಯು ತಾರೀಕು 16-11-1943ಕ್ಕೆ 2ನೇ ಪ್ರತಿವಾದಿಳಿಗೆ ನೋಟೀಸು ಬಗ್ಗೆ ಇಟ್ಟಿರುತ್ತದೆ, ಆ ದಿವಸ ಸದ್ರಿ 2ನೇ ಪ್ರತಿವಾದಿಳು ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಲಿಕ್ಕೆ ತಪ್ಪಿದ್ದಲ್ಲಿ ಅವಳ ಗೈರು ಹಾಜರಿಯಲ್ಲಿ ಈ ದಾವೆಯು ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ.

V. R. Kidiyur

ಉಡುಪಿ. } Advocate for
ತಾ 22-10-1943 } Plaintiff.

ತಾರುಣ್ಯ

ಕೊಟ್ಟು, ವೀರ್ಯಸ್ತಂಭನೆ ಮಾಡಿ, ರತಿ ಸುಖದಲ್ಲಿ ಪರಮಾನಂದವನ್ನುಂಟು ಮಾಡಲು ರಮಣ ವಿಲಾಸಿನಿ ಅತ್ಯುತ್ತಮ ಔಷಧಿ. ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ.
184 ಚೈನಾ ಬಜಾರ್ ರೋಡ್,
ಮದ್ರಾಸು.

ಪುತ್ತೂರು ಏಜಂಟರು: ಪೈ ಫಾರ್ಮಸಿ

ಪ್ರಕಟಣೆ.

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisserri.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ– ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅಸಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುನ್ಹಿರಾಮನ್,
ಮೆನೇಜರ್

ಯುದ್ಧ ಗತಿ

ರಶ್ಯದಲ್ಲಿ ನೀಪರ್ ಹೊಳೆಯ ಸರಹದ್ದಿನಲ್ಲಿ ಕೆಂಪುಸೇನೆ ಯಾರಂಭಿಸಿರುವ ಧಾಳಿಗಳು ಅತಿಮಹತ್ವದ್ದಿವೆ. ಕ್ರಿಮಿಯಾದೊಳಗೆ ರಶ್ಯನ್ ಸೇನೆ ಧೃಢಸಿರ್ಧಾರ, ಆಜಲಾವೇಶದೊಡನೆ ನುಗ್ಗಿದೆ. ಜರ್ಮನರು ಅನಿವಾರ್ಯವಾಗಿ ಹಿಮ್ಮೆಟ್ಟುತ್ತಾ ಹೋಗಿ ಈಗ ಕ್ರಿಮಿಯದಲ್ಲಿರುವ ಪ್ರಬಲ ನಾಜೀಸೇನೆ ಗಂಡಾಂತರಕ್ಕೊಳಗಾಗಿದೆ. ಅಲ್ಲಿಂದ ನುಸುಳಿ ಹೋಗದಿದ್ದಲ್ಲಿ ನಾಶವಾಗುವ ಭಯ–ತಪ್ಪಿಸಿಕೊಂಡಲ್ಲಿ ಎಂಟುತಿಂಗಳ ಭಯಂಕರ ಹೋರಾಟದಿಂದ ಸ್ವಾಧೀನ ಪಡಿಸಿಕೊಂಡಿದ್ದ ಒಂದು ಪ್ರಾಮುಖ್ಯ ಕೇಂದ್ರವನ್ನೇ ಕಳಕೊಂಡ ನಷ್ಟ, ಹೀಗೆ ಜರ್ಮನರು ಪ್ರಾಣಾವಧಿ ಪರಿಸ್ಥಿತಿಕ್ಕೀಡಾಗಿದ್ದಾರೆ. ನೀಪರ್ ಆಣೆಕಟ್ಟನ್ನು ಸ್ವಹಸ್ತದಿಂದ ಧ್ವಂಸಮಾಡುವ ಲೋಕವಿಸ್ಮಯಕಾರೀ ಮಹಾತ್ಯಾಗವನ್ನು ಮಾಡಿ ಹಿಂದೊಮ್ಮೆ ಹಿಂಜರಿದಿದ್ದ ರಶ್ಯನರು ಈಗ ಆ ಪ್ರಾಂತ್ಯವನ್ನು ವಶಪಡಿಸಿಕೊಂಡು ಮಹಾ ವಿಜಯ ಸಂಪಾದಿಸಿದ್ದಾರೆ. ಜರ್ಮನ್ ಜನತೆಯಲ್ಲಿಯೂ ನಿರಾಶೆಯೆದ್ದ ಚಿಹ್ನೆಗಳು ಕಾಣುತ್ತಿವೆ ವಿಶ್ವ ಎಲ್ಲಾ ಯುದ್ಧ ಮುಖಗಳಲ್ಲೂ ಕೆಂಪು ಸೇನೆಯ ಪ್ರಗತಿ ಸಾಗಿದೆ.

ಇಟಲಿಯಲ್ಲಿ ಮಿತ್ರಸೇನೆಗಳು ಮುಂದೊತ್ತುತ್ತಲೇ ಇವೆ–ಆದರೆ ಅಂತ್ಯಂತ ನಿಧಾನವಾಗಿ. ರೋಮ್ ನಗರಕ್ಕಭಿಮುಖವಾಗಿ ಬೇರೆ ಬೇರೆ ಕಡೆಯಿಂದ ಸಾಗಿರುವ ಆರನೇ ಮತ್ತು ಎಂಟನೇ ಸೇನೆಗಳ ಪ್ರಗತಿಯು ನಿರೀಕ್ಷಿಸಿದಷ್ಟು ಸಾಗಿಲ್ಲ. ಇದಕ್ಕೆ ಪರ್ವತ ಪ್ರದೇಶ, ವಾತಾವರಣದ ಅನಾನುಕೂಲತೆ, ಮೊದಲಾದ ಕಾರಣಗಳನ್ನು ಕೊಡಲಾಗಿದೆ. ಮಿತ್ರರ ದೊಡ್ಡ ಸೇನಾ ವಿಭಾಗಕ್ಕೆ ಇಟಲಿಯಲ್ಲಿ ದೀರ್ಘಾವಧಿಯ ಕೆಲಸವೀಯುವದೇ ಹಿಟ್ಲರರ ಉದ್ದೇಶವಾಗಿದ್ದರೆ ಅದು ಫಲಿಸಿದಂತೆ ಕಂಡುಬರುತ್ತದೆ. ದಕ್ಷಿಣ ಇಟಲಿಯ ನಾಜೀಸೇನಾನಿ ಮಾರ್ಶಲ್ ಕೆಸ್ಸರ್‌ಲಿಂಗರ ಬದಲಿಗೆ ಜನರಲ್ ವೋನ್ ವಿಟ್ಟಿಂಗೋಫರು ಬಂದ ಮೇಲೆ ಯುದ್ಧ ಇನ್ನಷ್ಟು ಕಠೋರವಾದಂತಿದೆ.

ಸೊಲೊಮನ್ಸ್ ದ್ವೀಪಗಳಲ್ಲಿ ಮಿತ್ರ ಸೇನೆಗಳು ಕಾಲೂರಿವೆ. ಜಪಾನರು ಸುವ್ಯವಸ್ಥೆಯಿಂದ ಹಿಮ್ಮೆಟ್ಟುತ್ತಿದ್ದಾರೆ. ಅಲ್ಲಿಯ ಜಪಾನೀ ಕೇಂದ್ರಗಳು ನಾಶ ಮಾಡಲ್ಪಡುತ್ತಿವೆ. ಇನ್ನು ರಾಬೂಲಿನ ಸರ್ಕಿಯಿಂದೂ ಇತ್ತರಲ್ಲೇ ರಾಬೂಲ್ ಮೊದಲಾದ ಜಪಾನೀ ಕೇಂದ್ರಗಳು ಆಕಾಶ ಧಾಳಿಯಿಂದ ನಿಪಾತವಾಗಿವೆಯೆಂದೂ ತಿಳಿದುಬರುತ್ತದೆ.

○ ಜರ್ಮನಿಯ ಪ್ರದೇಶ ಹಾಗೂ ಬರ್ಮಾದ ಮಾಂಡಲೆಯ ಕೇಂದ್ರ ಸ್ಥಳಗಳ ಮೇಲೆ ಮಿತ್ರರ ಆಕಾಶ ಧಾಳಿ ನಡೆದಿದೆ.

○ ಅಂದಮಾನ್ ದ್ವೀಪದ ಮೇಲೂ ಮಿತ್ರರ ಆಕಾಶ ಧಾಳಿನಡೆಯಿತು. ಲಂಡನಿನ ಮೇಲೂ ಬೋಂಬು ಬಿದ್ದಿದೆ.

ಕೇರಳ
ಘನತರ
'ಡೆಂಟಿಫ್ರಿಸ್' ದಂತಚೂರ್ಣ
ಹಲ್ಲುರೋಗಗಳಿಗೆ ಅತ್ಯುತ್ತಮ.
●
ಶಾಸ್ತ್ರೀಯರೀತ್ಯಾ ತಯಾರಿಸಲ್ಪಟ್ಟದ್ದು
ಮತ್ತು
ಮಿತ ದರದಲ್ಲಿ ಮಾರಾಟಮಾಡಲ್ಪಡುವುದು.
ಕಾರ್ಡುಬೋರ್ಡು ಪೊಟ್ಟಣಗಳಲ್ಲೂ 'ಬೆಕಲೈಟ್' ಕರಡಿಗೆಗಳಲ್ಲೂ ಸೀಸೆಗಳಲ್ಲೂ ಭದ್ರವಾಗಿರಿಸಲ್ಪಟ್ಟಿದೆ.
ತಯಾರಿಸಿದವರು:
ಕೇರಳಾ ಸೋಪ್ ಇನ್‌ಸ್ಟಿಟ್ಯೂಟ್, ಕಲ್ಲಿಕೋಟೆ
(ಸರಕಾರೀ ಸಂಸ್ಥೆ)
K. S. I. I.

ನಿಶ್ಚಿತ ಘಂಟೆ 10ಕ್ಕೆ ಸರಿಯಾಗಿ ಪ್ರಣಯಿಗಳಿಬ್ಬರ ಮನ ಮಂದಿರಗಳಲ್ಲಿ ಉರಿಯುತ್ತಿದ್ದ ಪ್ರೇಮಜ್ಯೋತಿಯನ್ನು ಬೆಳಗಿಸಿ ಪವಿತ್ರ ಪ್ರೇಮದ ಪೂರ್ಣತೆ ತೋರಿಸಿದ
ಪ್ರಭಾತಚಿತ್ರ:
ದಸ್‌ಬಜೆ (10 O'clock.)
ಊರ್ಮಿಳಾ, ಬೆನರ್ಜಿ ವಸಂತ್ ಠೆಂಗ್ಡಿ ಮೊದಲಾದವ.
ತಾರೀಕು 4—11—43ರಿಂದ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ
ಬರುವಚಿತ್ರ:– ಕನ್ನಡ ಪುರಂದರದಾಸ.

ಪ್ರಕಟಣೆ.

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ ಲೈಫ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್, ಮದ್ರಾಸು. ಇದರ ಮಂಗಳೂರು ಶಾಖೆಯ ಒರ್ಗನೈಜರಾಗಿರುವ ಶ್ರೀ ಕುರುಕಾಲು ಗಣಪಯ್ಯಸೆಟ್ರು, ಕಂಪೆನಿಯ ಕಾರ್ಯಾರ್ಥವಾಗಿ ತಾ 1-11 43ರಲ್ಲಿ ಮುಂಬೈಗೆ ಪ್ರಯಾಣ ಬೆಳಸಿದ್ದಾರೆ. ಮುಂಬೈಯ ಬಂಧುಗಳು ಹಿಂದಿನಂತೆಯೇ ಈ ಸಲವೂ ಶ್ರೀಯುತ ಸೆಟ್ರ ಕಾರ್ಯದಲ್ಲಿ ತುಂಬಾ ಪ್ರೋತ್ಸಾಹವನ್ನು ಕೊಡುವರಾಗಿ ಭಾವಸಿದೆ.

ನೋಟೀಸು.

ಪುತ್ತೂರ ಡಿ. ಮು. ಕೋರ್ಟಿನಲ್ಲಿ,

R. E. P. 327/43.

ಕೃಷ್ಣಶಾಸ್ತ್ರಿ ... ಅರ್ಜಿದಾರ
ಪರಮೇಶ್ವರ ಭಟ್ಟ ಕೂಡಾ-ಎದ್ರಿರು.

ಸದ್ರಿ ಅಮ್ಲಜ್ಯಾರಿಯ 5ನೇ ಎದ್ರಿ ರಾಮಕೃಷ್ಣ ಭಟ್ಟ 8ನೇ ಎದ್ರಿ ಲಕ್ಷ್ಮಿ ಹೆಂಗ್ಸು ಕೂಡಾ ಯೀ 2 ಜನರಿಗೆ

ಮೇಲ್ಕಂಡ ಅರ್ಜಿದಾರನು ದಾಖಲ್ಮಾಡಿದ ಮೇಲಿನ ಅಮ್ಲಜ್ಯಾರಿ ಅರ್ಜಿಯು ತನಿಕೆ ಬಗ್ಗೆ ತಾ 8-11 43ಕ್ಕೆ ಇಟ್ಟಿದೆ ಸದ್ರಿ ಅಮ್ಲಜ್ಯಾರಿಯಲ್ಲಿ ಡಿಕ್ರಿ ಪರಾಭಾರೆ ಕುರಿತು ಆಕ್ಷೇಪಣೆಗಳಿದ್ರೆ ಆ ದಿವಸ 10ಗಂಟೆಗೆ ಸರಿಯಾಗಿ ಸ್ವತಃ ಆಗ್ಲಿ ವಕೀಲರ ಮುಖಾಂತ್ರವಾಗ್ಲಿ ಹಾಜ್ರು ಆಗಿ ವ್ಯವಹರಿಸತಕ್ಕದು. ತಪ್ಪಿದ್ರೆ ಏಕಪಾರ್ಟಿ ವಿಚಾರಣೆಯಿಂದ ತೀರ್ಮಾನಮಾಡಲಾಗುವುದು ತಿಳಿದಿರಲಿ

C. S. Shasthry

ಪುತ್ತೂರು } Vakil for Petitioner.
14-10-43 }

NOTICE.

In the Court of the District Munsif of Kundapur.

S. C. suit No 414of 1942

R. E. O. 367/1943

Anandrama Basri Plaintiff, Petr
against
Srinivasa Holla & others, Defendanta's respts

To

1st Respt. Srinivasa Holla, son of Seetharama Hoolla, Residing in Manu Village.

Whereas in the abovenamed suit, the decree-holder has applied for the sale of immoveble property you are hereby informed that the 19th day of November 1943 has been fixed for settling the terms of the proclamation of sale.

Sd/. **A. V. N. Hebbar**
Pleader fot Petr

Kundapur }
31—10—43 }

ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

R. E. P. No. 1943
O. S. 646/1930

ಮಂಜುನಾಥಕಮ್ತಿ – ಅರ್ಜಿದಾರ
ದೂಮಪ್ಪ ಆಚಾರಿ – ಎದ್ರಿ

ಭದ್ರ್ಯಾಚಾರಿ ಮಗ. ಮಂಗಳೂರು ತಾಲ್ಲೂಕ ಬಡಗಗ್ರಾಮದ ಕೊಲ್ಲೊಟ್ಟು ಎಂಬಲ್ಲಿರುವವ.

ಸದ್ರಿ ಎದ್ರಿಗೆ ಈ ಮೂಲಕ ತಿಳಿಸುವದೇನೆಂದ್ರೆ ಸದ್ರಿ ಅಮ್ಲಜ್ಯಾರಿಯಲ್ಲಿ ಎದ್ರಿಯ ಕುಟುಂಬದ ಬಾಬ್ತು ಸ್ಥಿರಾಸ್ತಿಗಳನ್ನು ಯೇಲಂಗೆ ಅಪೇಕ್ಷಿಸಿ ಅರ್ಜಿದಾರನು ದಾಖಲ್ಮಾಡಿದ ಯೇಲಂಯಿಸ್ತಿಹಾರಿನ ದೃಷ್ಟ ಮಂಜೂರುಮಾಡುವ ಬಗ್ಗೆ ಮತ್ತು ಸದ್ರಿ ಆಸ್ತಿಗಳು ಯೇಲಂ ಸಮಯ ಅರ್ಜಿದಾರ Bid ವ Set off ಪರ್ಮಿಶನ ಕೊಡಬೇಕಾಗಿ ಅರ್ಜಿದಾರನು ಕೊಟ್ಟ R E A 519/43 ಅರ್ಜಿ ಕೂಡಾ ತಾರೀಕು 17-11-43ಕ್ಕೆ ಇರುವದ್ರಿಂದ ಆ ಕುರಿತು ಆಕ್ಷೇಪಯಿದ್ದರೆ ಸದ್ರಿ ದಿವಸ 10ಗಂಟೆಗೆ ಕೋರ್ಟಿನಲ್ಲಿ ಹಾಜರ್ರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು.

ಕೋರ್ಟುಹುಕುಂ ಪ್ರಕಾರ

ಎಂ. ಎಸ್. ಅಧಿಕಾರಿ

ಕಾರ್ಕಳ } ಅರ್ಜಿದಾರನ ಕಡೆ
ತಾ 31-10-43 } ವಕೀಲ.

ದಕ್ಷಿಣ ಕನ್ನಡ.

ಮಂಗಳೂರು.

ಜಿಲ್ಲಾಧಿಕಾರಿಗಳಲ್ಲಿ ಶ್ರೀ. ಎ ಬಿ. ಶೆಟ್ಟರ ಪ್ರಶ್ನೆಗಳು– ಶ್ರೀ ಎ ಬಿ ಶೆಟ್ಟರು ಜಿಲ್ಲಾಧಿಕಾರಿಗಳ ಗಮನದ ಬಗ್ಗೆ ಈ ಕೆಳಗಿನ ಪ್ರಶ್ನೆಗಳುಳ್ಳ ಒಂದು ಪತ್ರ ಬರೆದಿರುವರು.

೧) 'ರಿಕ್ವಿಸಿಶನ್' ಮಾಡಿದ ಭತ್ತವನ್ನು ಡೆಲಿವರಿ ಮಾಡುವ ಮೊದಲು ಅಕ್ಕಿಯಾಗಿ ಮಾಡಬಹುದೆ? ೨) ಯಾರಿಗೆ, ಯಾವಾಗ, ಎಲ್ಲಿ ಇದನ್ನು ಡೆಲಿವರಿ ಮಾಡಬೇಕು? ೩) ಬೇರೆ ಬೇರೆ ತರದ ಅಕ್ಕಿಗಳಿಗೆ ಯಾವ ಕ್ರಯ ಕೊಡಲಾಗುವುದು? ೪) ಒಕ್ಕಲು ಕೊಡುವ ಗೇಣಿಯಲ್ಲಿ ಶೇಕಡಾ ಎಷ್ಟು ಈಗ ರಿಕ್ವಿಶನ್ ಮಾಡಲಾಗುವುದು? ಈ ಮಾಮೂಲಾಯ ಉತ್ಪತ್ತಿಯ ಪರಿಸ್ಥಿತಿಯನ್ನು ಹೊಂದಿ ಬದಲಾಗುವುದೆ? ಆಗುವುದಾದರೆ ಹೇಗೆ? ೫) ಎಂಡನೆಯ ಬೆಳೆಯ ನಂತರ ಪುನಃ ರಿಕ್ವಿಸಿಶನ್ ಮಾಡಲಾಗುವುದೆ? ೬) ಆತಂಕದ ಬಗ್ಗೆ ಕೊಡುವ ಅರ್ಜಿಗಳು ಸ್ಟ್ಯಾಂಪ್ ಪೇಪರ್‌ನಲ್ಲಿ ಬರೆಯಲ್ಪಡಬೇಕೆ?

ಈ ಸುದ್ದಿಗಳ ಕುರಿತು ಸರಿಯಾದ ವಿವರ ಕೊಡದಿರುವುದರಿಂದ ರೈತರು ಸರಕಾರದ ಉದ್ದೇಶವೇನು, ಸರಕಾರಕ್ಕೆ ಎಷ್ಟು ಅಕ್ಕಿ ಭತ್ತ ಬೇಕು ಎಂದು ಮೊದಲಾಗಿ ತಿಳಿಯದೆ ಗಾಬರಿಗೊಂಡಿರುವರು. ಆದ್ದರಿಂದ ಮೇಲಿನ ವಿಷಯದಲ್ಲಿ ವಿವರವನ್ನು ಸ್ಥಳೀಯ ಕನ್ನಡ ಪತ್ರಿಕೆಗಳಲ್ಲಿ ಪ್ರಕಟಣೆ ಮಾಡಿದರೆ, ಅಗತ್ಯವಿರುವವರಿಗೆ ಬಹಳ ಉಪಕಾರವಾಗುತ್ತಿತ್ತು.'

ಕೆನರಾ ಚೇಂಬರ್ ಓಫ್ ಕಾಮರ್ಸ್–ಇವರ ಕಚೇರಿಯಲ್ಲಿ ಶ್ರೀ ಮರೋಳಿ ದೇವರಾಯ ಕಾಮತರ ಅಧ್ಯಕ್ಷತೆಯಿಂದ ಸೇರಿದ ಹೊಗೆಸೊಪ್ಪಿನ ವ್ಯಾಪಾರಿಗಳ ಹಾಗೂ ತಯಾರಿಕಾರರ ಸಭೆಯಲ್ಲಿ ಈ ಕೆಳಗಿನ ನಿರ್ಣಯಗಳಾದುವು. (೧) ಡ್ಯೂಟಿಪೈಡ್ ಹೊಗೆಸೊಪ್ಪಿಗೆ, ವಿಶೇಷವಾಗಿ ಆಫೀಸರಿಲ್ಲದ ಹಳ್ಳಿ ಸ್ಥಳಗಳಲ್ಲಿ ಟಿ.ಪಿ. ಪರ್ಮಿಟುಗಳು ಸಿಗುವುದು ಕಷ್ಟವಿದ್ದುದರಿಂದ, ಹಾಗೂ ಇಂದಿನ ರೀತಿಯು ಆ ವ್ಯಾಪಾರಕ್ಕೆ ಬಾಧಕವಿರುವುದರಿಂದ, ವ್ಯಾಪಾರಿಗಳಿಗೆ, ಡ್ಯೂಟಿಪೈಡ್ ಹೊಗೆಸೊಪ್ಪಿಗೆ ಹಾಗೂ ಅದರಿಂದ ತಯಾರಿಸಿದ ಸಾಮಾನುಗಳಿಗೆ ಪರ್ಮಿಟು ಕೊಡುವರೆ ಅಧಿಕಾರ ಹೊಂದುವಂತೆ ಮಾಡಬೇಕೆಂದೂ, (೨) ಇಂದಿನ ಅಳತೆ ಕ್ರಮದಲ್ಲಿ ಸರಿಯಾದ ಒಂದು ನಿಶ್ಚಿತ ಕ್ರಮವಿಲ್ಲದಿರುವುದರಿಂದ ಸರಕಾರವು ಸ್ಟೇಂಡರ್ಡ್ ಅಳತೆಯನ್ನು ಹೊಗೆಸೊಪ್ಪಿನ ಕುರಿತು ನಿಶ್ಚಯಿಸಬೇಕೆಂದೂ (೩) ಸ್ಟೇಟಿನಲ್ಲಿ ಬೆಳೆದ ಹೊಗೆಸೊಪ್ಪನ್ನು ಬರುವಂತೆ ಮಾಡುವ ಸೌಕರ್ಯ ಒದಗಿಸಬೇಕೆಂದೂ, (೪) ಹೊಗೆಸೊಪ್ಪಿಗೆ ಹೊಯಿಗೆ ಸೇರಿಸುವ ಪದ್ಧತಿಯನ್ನು ತಡೆಗಟ್ಟಬೇಕೆಂದೂ, (೫) ಈ ವಿಷಯದ ಎಲ್ಲಾ ಆರ್ಡರು, ರೂಲ್ಸು, ವಿವರಗಳ ಪ್ರತಿಗಳನ್ನು ಕೆನರಾ ಚೇಂಬರ್ ಓಫ್ ಕಾಮರ್ಸಿಗೆ ಕಳುಹಿಸಬೇಕೆಂದೂ, ಸರಕಾರವನ್ನು ಕೇಳಿಕೊಳ್ಳಲಾಗಿದೆ.

ಗುರುತು ಚೀಟಿ–ನಗರದಲ್ಲಿ ಬಡವರಿಗೆ ಕಡಿಮೆ ಕ್ರಯದಲ್ಲಿ ಅಕ್ಕಿ ಒದಗಿಸುವ ಬಗ್ಗೆ ಗುರುತ ಚೀಟಿ ಕೊಡುವ ವ್ಯವಸ್ಥೆಯಲ್ಲಿ ಹಿಂದೆ ಸ್ವಲ್ಪ ಅವ್ಯವಸ್ಥೆ ನಡೆದರೂ, ಈಗ ಅದರ ತಿದ್ದುಪಡಿ ಆಗುತ್ತಿದ್ದು, ಹೊಸ ಅರ್ಜಿಗಳ ತನಿಖೆ ನಡೆಯುತ್ತದೆಂದು ತಿಳಿದುಬರುತ್ತದೆ.

ಉಡುಪಿ.

ಪರ್ಯಾಯ ಶ್ರೀಕೃಷ್ಣಾಪುರ ಮಠದ ಶ್ರೀಮದ್ವಿದ್ಯಾರತ್ನ ಶ್ರೀಪಾದಂಗಳವರು ತಮ್ಮ ಕೃಷ್ಣಪೋಷಿತ ಯುವಕ ಮಂಡಳಿಯವರಿಗೆ ತಾ 11-43ರಲ್ಲಿ ಮಂಡಳಿಯವರು ನವರಾತ್ರಿ ಸಮಯದಲ್ಲಿ ನಾಟಕವಾಡಿದುದಕ್ಕಾಗಿ ಅಭಿನಂದಿಸುವರೆ ತಮ್ಮ ಕಡೆಯಿಂದ ಶಿಂದಿಕಾರ್ಥಗಳನ್ನಿತ್ತು ಪ್ರೋತ್ಸಾಹಿಸಿದರು.

ದಿ ಉಡುಪಿ ತಾಲೂಕು ಮರ್ಚಂಟ್ಸ್ ಎಸೋಸಿಯೇಶನಿಗೆ 1913ನೇ ಇಸ್ವಿಯ ಇಂಡಿಯನ್ ಕಂಪೆನೀಸ್ ಎಕ್ಟಿನ ಸೆಕ್ಷನ್ 26ರ ಪ್ರಕಾರ ಲ್ಯಾಸೆನ್ಸ್ ಈಗ ತಾನೇ ಬಂದಿರುತ್ತದೆ. ಸದ್ರಿ ಯೆಸೋಸಿಯೇಶನಿನ ಮೀಟಿಂಗನ್ನು ಇದೇ ತಿಂಗಳ ತಾರೀಕು 14ನೇ ರವಿವಾರ ಅಪರಾಹ್ನ ಘಂಟೆ 3ಕ್ಕೆ ಉಡುಪಿ ದಿ ಕೆನರಾ ಬೇಂಕಿಂಗ್ ಕೋರ್ಪೋರೇಶನ್ ಬೇಂಕಿನ ಉಪ್ಪರಿಗೆಯಲ್ಲಿ ಕರೆಯಬೇಕಾಗಿ ನಿರ್ಣಯಿಸಿರುತ್ತದೆ. ಸದ್ರಿ ಸಭೆಗೆ ಉಡುಪಿ ತಾಲೂಕಿನ ಯಾವತ್ತೂ ವರ್ತಕರು ಬಂದು ಸಹಕರಿಸಬೇಕಾಗಿ ಉಡುಪಿ ತಾಲೂಕು ಮರ್ಚಂಟ್ಸ್ ಎಸೋಸಿಯೇಶನಿನ ಅಧ್ಯಕ್ಷ ಶ್ರೀ ಉಪೇಂದ್ರ ಶ್ರೀನಿವಾಸ ನಾಯ್ಕರು ವಿನಂತಿಸುತ್ತಾರೆ.

ಮುನ್ಸಿಪಲ್ ಸಭೆ:–ಯೊಂದು ತಾ. 27-10-43ರಲ್ಲಿ ಅಧ್ಯಕ್ಷ ಶ್ರೀ ಅದೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿ, ಅಜ್ಜರಕಾಡು ಮೈದಾನವನ್ನು ದುರಸ್ತಿ ಮಾಡಿಸಲು ಕೌನ್ಸಿಲು ಮಂಜೂರುಗೊಳಿಸದೆ ವಿನಿಯೋಗಿಸಿದ್ದ ರೂ 875ನ್ನು ಮಂಜೂರು ಗೊಳಿಸಲಾಯಿತು. ಇನ್ನೂ ರೂ 50/ ಸಜ್ಜಿಗೆ ವೆಚ್ಚ ಮಾಡಬೇಕೆಂದೂ ತೀರ್ಮಾನವಾಯಿತು. ಮೂಡನಿಡಂಬೂರು ಗ್ರಾಮದಲ್ಲಿರುವ ದಾಯು ರಾಮರಾಯರ ಖಾಲಿಜಾಗವನ್ನು ಟೌನ್ ಹೋಲ್ ಬಗ್ಗೆ ವಶಮಾಡಿಕೊಳ್ಳುವರೆ ನಿರ್ಧಾರವಾಯಿತು. ಹಂಗಾಮಿಯಾಗಿ ಇಬ್ಬರೂ ಬಿಲ್ ಕಲೆಕ್ಟರನ್ನು ತಿಂಗಳೊಂದರ ರೂಪಾಯಿ 15/ ಮತ್ತು ರೂ 5/ ತುಟ್ಟಿಭತ್ತೆ ಯಂತೆ ನೇಮಿಸಬೇಕೆಂದಾಯಿತು.

ಕೊರೋನೇಶನ್ ಕಪ್ ಫ್ಯಾನಲ್ಸ್ ಕ್ರಿಕೆಟ್ ಪಂದ್ಯಾಟದಲ್ಲಿ ಉಡುಪಿ ಟೀಮಿನವರು ಆರು ರನ್ಸ್ ಒಂಭತ್ತು ಎಕೆಟ್ಟುಗಳ ಅಧಿಕಲಾಭದಿಂದ ವೈ. ಎಮ್. ಎಸ್. ಎ. ಟೀಮಿನವರನ್ನು ಸೋಲಿಸಿರುವರು. ಉಡುಪಿ ಟೀಮಿನ ಕಡೆಯಿಂದ ಶ್ರೀಗಳಾದ ಕಲ್ಯಾಣಪುರ ಮಂಜುನಾಥಯ್ಯ ಮತ್ತು ಕರುಣಾಕರ ಹೆಗ್ಡೆಯವರೂ ವೈ. ಎಮ್. ಎಸ್. ಎ. ಟೀಮಿನ ಕಡೆಯಿಂದ ಶ್ರೀಗಳಾದ ಬೇವರಾಯ ಕಾಮತ್ ಮತ್ತು ವಿಷ್ಣು ಕಾಮತರು ಚುರುಕಾಗಿ ಆಟವಾಡಿದ್ದರು.

ಉಡುಪಿ ಲೋಕಲ್ ಕೋಪರೇಟಿವ್ ಯೂನಿಯನ್ನಿನ ... [illegible] ... ವಕೀಲ್ ಶ್ರೀ. ಕೆ. ಜಿ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿ ನಾಯಕ ಮಂಡಳಿಗೆ ಶ್ರೀಗಳಾದ ಕೆ. ಜಿ. ಬಲ್ಲಾಳ್ (ಪ್ರೆಸಿಡೆಂಟ್) ಕೆ. ಆರ್ ರೆಡ್ಡಿ (ವೈಸ್ ಪ್ರೆ) ಕ. ಗಣಪಯ್ಯ ಸೆಟ್ಟಿ, ಎಸ್. ಅಣ್ಣಯ್ಯ ಹೆಗ್ಡೆ, ಯು. ವೆಂಕಟ್ರಾವ್, ಪಿ. ವೆಂಕಟಕೃಷ್ಣ ರಾವ್ ಮತ್ತು ಎಮ್. ರಾಮಕೃಷ್ಣ ಭಟ್ಟರು ಆಯ್ಕೆ ಕ್ರಮದಿಂದ ಆರಿಸಲ್ಪಟ್ಟರು. ಸಹಕಾರೀ ಸ್ಟೋರ್ಸ್‌ಗಳಿಂದ 'ಸೇಲ್ ...' ವಸೂಲುಮಾಡದಂತೆ ಇಲಾಖಾ ಆಫೀಸರರ ಮೂಲಕ ಸರಕಾರವನ್ನು ಪ್ರಾರ್ಥಿಸಬೇಕೆಂದು ನಿರ್ಣಯವಾಯಿತು.

ಶ್ರೀಕೃಷ್ಣಾಪುರದಲ್ಲಿ ಲಕ್ಷದೀಪೋತ್ಸವವು ತಾ 9ರಲ್ಲು ಆರಂಭವಾಗಿ ಪೌರ್ಣಿಮೆಪರ್ಯಂತ ಪರ್ಯಾಯ ಪೀಠಾಧಿಕೃತರಾದ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಸ್ವಾಮಿಗಳವರಿಂದ ಸಾಂಗವಾಗಿ ನೆರವೇರಿಸಲ್ಪಡುತ್ತದೆ.

ಪೇಟೆಗೆ ಅಭಾವವು ದಿನೇ ದಿನೇ ಜಾಸ್ತಿಯಾಗುತ್ತಲಿದೆ ಕಾರಣವೇನೋ ತಿಳಿಯದಾಗಿದೆ.

ದ. ಕ. ಜಿಲ್ಲಾಧಿಕಾರಿಗಳಿಗೆ ಉಡುಪಿ ತಾಲೂಕು ಭೂಮ್ಯಾಲಿಕ ಸಂಘದ ಅಧ್ಯಕ್ಷ ಶ್ರೀ ಕೆ. ಜಿ. ಬಲ್ಲಾಳ್, ಬಿ. ಎ. ಎಲ್. ಎಲ್. ಬಿ. ಇವರ ಮನವಿ.

ಅಯ್ಯಾ,

ಸಂಬಂಧಪಟ್ಟ ಆಫೀಸರರು ಕೈಕೊಂಡ ಭತ್ತ ರಿಕ್ವಿಜಿಶನ್ ರೀತಿಯಿಂದ ಇತರ ಕಡೆಗಳಂತೆ ನಮ್ಮ ತಾಲೂಕಿನಲ್ಲಿಯೂ ಗಮನಾರ್ಹ ಭಯ ಮತ್ತು ಗೊಂದಲಗಳಿದ್ದಿವೆ. ಅವರ ಮುಖ್ಯ ಸಂಕಷ್ಟಗಳಲ್ಲಿ ಈ ಕೆಳಗಿನವು ಕೆಲವು—

1. ಒಕ್ಕಲುಗಳ ಮತ್ತು ವರ್ಗದಾರರ ಉತ್ಪತ್ತಿಯ ಕುಂಠಿತ. ಮಿತವಿಲ್ಲದ ಅತಿ ಹೆಚ್ಚಿನ ಅಂದಾಜು ಕಟ್ಟಿ, ಈ ಮಿತಿ ಮೀರಿದ ಊಹಾತ್ಮಕ ಉತ್ಪತ್ತಿಯ ಶೇಕಡಾ 75ರ ವರೆಗೂ 'ರಿಕ್ವಿಜಿಶನ್' ಮಾಡಿ ನೋಟೀಸು ಜ್ಯಾರಿಯಾಗಿದೆ. ತಮ್ಮ ಸಂಸಾರ ಸ್ವಕಾರಗಳಿಗಾಗಿ ರೂ. 50ಕ್ಕೂ ಕಡಿಮೆ ತೀರ್ವೆ ಕೊಡುವ ಪಟ್ಟಾದಾರರು ಕೆಲವರಿಗೂ ನೋಟೀಸುಗಳು ಕೊಡಲ್ಪಟ್ಟಿವೆ ಈ ನೋಟೀಸಿನಲ್ಲಿದ್ದಂತೆ ಭತ್ತ ರಿಕ್ವಿಜಿಶನ್ ಮಾಡಲ್ಪಟ್ಟರೆ ಇವರ ಪರಿವಾರ ಸಣ್ಣ ವರ್ಗದಾರರಿಗೆ ಮತ್ತು ಬಹುತೇಕವಾಗಿ ಎಲ್ಲಾ ಒಕ್ಕಲುಗಳಿಗೆ ಮುಂದಿನ ಬೇಸಾಯ ಮತ್ತು ತಮ್ಮ ಹಾಗೂ ತಮ್ಮ ಆಶ್ರಿತರ ಜೀವನಾಂಶಕ್ಕಾಗಿ ಭತ್ತವೇನೂ ಉಳಿಯದಂತಾಗುವುದು.

2. ಅಳಿಯಸಂತಾನ ಕಾನೂನು ಮತ್ತು ಪದ್ಧತಿಬದ್ಧವಾದ ಹೆಚ್ಚಿನ ಕುಟುಂಬಗಳ ಆಸ್ತಿಯ ಪಟ್ಟಾದಾರಿಕೆಯು ಅತ್ಯಂತ ಹಿರಿಯ ಮೆಂಬರನ ಹೆಸರಿನಲ್ಲಿದ್ದರೂ, ಆಸ್ತಿಗಳು ಮಾತ್ರ ಅನುಭೋಗಕ್ಕಾಗಿ ಬೇರೆ ಬೇರೆ ತವರುಗಳಿಗೆ ಅಥವಾ ಮಂಬರರಿಗೆ ಹಂಚಲ್ಪಟ್ಟಿವೆ. ಇಲ್ಲವೇ ಬಾಯಿಮಾತಿನ ಅಥವಾ ಬರೆಹ ಮೂಲಕ ದಾಲು ಮಾಡಲ್ಪಟ್ಟ ಆಯಾ ಮಾಲ್ಕನ್ನು ಆಯಾಯ ವಿಭಾಗದವರು ಸ್ವತಃ ಅಥವಾ ಮೂಲಗೇಣಿ ಒಕ್ಕಲುಗಳ ಮೂಲಕ ಅನುಭೋಗಿಸುತ್ತಿದ್ದಾರೆ. ಇಂತಹ ಸಂದರ್ಭಗಳಲ್ಲಿ, ತಮ್ಮ ಅನುಭೋಗದಲ್ಲಿರುವ ಕುಟುಂಬದ ಆಸ್ತಿಯುತ್ಪತ್ತಿಯು ತಮ್ಮ ಜೀವನ ನಿರ್ವಹಣಕ್ಕೇನೇ ಸಾಕಾಗದಂತಿರುವ ಮೆಂಬರರ ಭತ್ತವನ್ನೆಲ್ಲಾ ಪಟ್ಟಾದಾರರಿಗೇನೇ ನೋಟೀಸು ಕೊಡುವ ಮೂಲಕ ರಿಕ್ವಿಜಿಶನ್ ಮಾಡಲಾಗಿದೆ.

ಏನಾದರೂ ಆಕ್ಷೇಪವಿದ್ದರೆ ನೋಟೀಸು ಜ್ಯಾರಿಯಾದ 7 ದಿನಗಳೊಳಗೆ ತಿಳಿಸಬೇಕೆಂದು ಆ ನೋಟೀಸಿನಲ್ಲಿದೆ. ಮೇಲಿನ ಕಾರಣಗಳಿಂದಾಗಿ ಆಕ್ಷೇಪಗಳು ಅನಿವಾರ್ಯವಿದ್ದು, ಅಂತಹ ಆಕ್ಷೇಪಗಳು ಪ್ರತಿ ದಿನ ದಾಖಲಾಗುತ್ತಿವೆ ಹೀಗೆ ಬಹು ಸಂಖ್ಯೆಯಿಂದ ಆಕ್ಷೇಪಗಳು ದಾಖಲಾಗುತ್ತಿರುವಾಗ್ಯೂ ಯಾವನೇ ಒಬ್ಬ ಆಫೀಸರಿಗೆ ಕೊನೆಯ ಪಕ್ಷ ಆ ವಿಷಗಳನ್ನು ವಿಲೋಕಿಸುವದು ಕೂಡಾ ಮಾನವ ಸಾಧ್ಯವಾದ ಕೆಲಸವಲ್ಲ; ಅವುಗಳ ವಿಚಾರಣೆಯಂತೂ ಇನ್ನಷ್ಟು ಅಸಾಧ್ಯ; ಆದ್ದರಿಂದ ಆಕ್ಷೇಪಣಾ ಅರ್ಜಿಗಳು ದಾಖಲಾದಂತೆಯೇ ಡಿಸ್ ಮಿಸ್ ಮಾಡಲ್ಪಡುವ ಇಲ್ಲವೇ ತಿರಸ್ಕರಿಸಲ್ಪಡುವ ಭಯ ಸಂದೇಹಗಳಿದ್ದಿವೆ. ಆಂದ ಮೇಲೆ ಜನರ ಸಂಕಷ್ಟಗಳಿಗೇನು ಪರಿಹಾರ?

ಖಾಸಗೀ ಕೊತ್ತುಗಳ 'ರಿಕ್ವಿಜಿಶನ್' ಎಂಬುದು ಅಸಾಮಾನ್ಯ ಸಂಗತಿಯಾದ್ದರಿಂದ, ಅಸಾಧ್ಯ ಪರಿಸ್ಥಿತಿಗೆ ಹೊಂದಿಕೆಯಾಗಬಲ್ಲ ಇತರ ಕ್ರಮಗಳೇನಾದರೂ ದೊರೆಯದಿದ್ದಲ್ಲಿ ಮಾತ್ರ ಅದನ್ನು ಕೈಕೊಳ್ಳಬೇಕಾಗಿದೆ. ಸಿವಿಲ್ ಸಪ್ಲೈಸ್ ಖಾತೆಯ ಎಡಿಶನಲ್ ಡಿಪ್ಯುಟಿ ಕಮಿಶನರರು ಉಡುಪಿಯನ್ನು ಸಂದರ್ಶಿಸಿದಾಗ, ನಮ್ಮ ಸಂಘವು ಒಪ್ಪಿಸಿದ ಮನವಿಯಲ್ಲಿ, ಯುದ್ಧಾವಧಿಯ ತನಕ ಅಕ್ಕಿ ವ್ಯಾಪಾರದ ಪೂರ್ಣ ಮತ್ತು ಏಕಸ್ವಾತ್ರ್ಯಾಧಿಕಾರವನ್ನು ಸರಕಾರವೇ ವಹಿಸಿಕೊಂಡು ಖಾಸಗೀ ಕೊಡಕೊಳ್ಳದವನ್ನು ನಿಷೇಧಿಸಬೇಕೆಂಬ ಒಂದು ಪ್ರತ್ಯೇಕೋಪಾಯವನ್ನು ನಾವು ಸೂಚಿಸಿದ್ದೆವೆ. ಇದು ಕೂಡ ಸರಕಾರದ ಪರ್ಯಾಲೋಚನೆಯಲ್ಲಿದೆ ಎಂದು ನಾವು ತಿಳಿಯುತ್ತೇವೆ.

ಸರಕಾರದ ಎಲ್ಲಾ ಚಿಂತೆಗಳನ್ನೂ ನಿವಾರಿಸಬಲ್ಲುದೆಂದು ನನಗೆ ದೃಢ ವಿಶ್ವಾಸವಿರುವ ಮೇಲಿನ ಬದಲು ಸೂಚನೆಯನ್ನು ದಯವಿಟ್ಟು ಪರ್ಯಾಲೋಚಿಸಿ, ರಿಕ್ವಿಜಿಶನಿನಿಂದಾಗಿ ರೈತರಿಗುಂಟಾಗುವ ಸಂಕಷ್ಟಗಳನ್ನು ನಿವಾರಿಸಬೇಕೆಂದು ನಾನು ತಮ್ಮನ್ನು ಪ್ರಾರ್ಥಿಸಿಕೊಳ್ಳಲೆ? ಯಾವುದೇ ಕಾರಣದಿಂದ ಸದ್ಯಕ್ಕೆ ಅದು ಅಸಾಧ್ಯವೆಂದಾದರೆ, ಬೇರಬೇರೆಯವರಿಂದ ದಾಖಲಾಗಿರುವ ಆಕ್ಷೇಪಗಳನ್ನೆಲ್ಲಾ ಸ್ವತಃ ಪ್ರತ್ಯೇಕವಾಗಿ ಕೂಲಂಕುಷವಾಗಿ ವಿಚಾರಿಸಿ, ಅವರಿಗೆ ನ್ಯಾಯ ದೊರೆಯುವಂತೆ ಮಾಡಬೇಕೆಂದಾದರೂ ನಾನು ತಮ್ಮನ್ನು ಪ್ರಾರ್ಥಿಸಿಕೊಳ್ಳಲೆ?

ತಮ್ಮ ವಿಶ್ವಾಸ ಪಾತ್ರ

ಕೆ. ಜೆ. ಬಲ್ಲಾಳ್.

ಅಧ್ಯಕ್ಷ, ತಾಲೂಕು ವರ್ಗದಾರ ಸಂಘ,
ಉಡುಪಿ.

ಹೆಗ್ಗರ್ಜ–ಇಲ್ಲಿಯ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದಲ್ಲಿ ಊರವರ ಪರವಾಗಿ ಇದೇ ತಾ 1ರಲ್ಲಿ, ಹಿರಿಯಡ್ಕ ಸರ್ಕಲಿನಿಂದ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಆರಿಸಿಬಂದ ಶ್ರೀ. ಎ. ಎಮ್. ನಾಗಣ್ಣ ಹೆಗ್ಡೆಯವರಿಗೆ ಮಾನಪತ್ರವರ್ಪಿಸಲ್ಪಟ್ಟಿತು. ಪಟೇಲ್ ಶ್ರೀ ರಾಮಕೃಷ್ಣ ಐತಾಳರಿಂದ ಶ್ರೀ ಹೆಗ್ಡೆಯವರಿಗೆ ಪುಷ್ಪಹಾರ, ಸಮರ್ಪಣೆ ಮಾಸ್ತರ್ ಶ್ರೀ ಸುಬ್ರಾಯ ಶೆಣ್ಯೆಯರಿಂದ ಮಾನಪತ್ರ ಸಮರ್ಪಣೆಯಾದ ಬಳಿಕ ಶ್ರೀ ಎಸ್. ಧರ್ಮಸಿಂಹರ ಹೆಗ್ಡೆಯವರು ವಿಜಯೀ ಹೆಗ್ಡೆಯವರ ಗುಣಕಥನವಮಾಡಿ ಭಾಷಣವಿತ್ತರು. ಶ್ರೀ. ನಾಗಣ್ಣ ಹೆಗ್ಡೆಯವರು ಜನತಾ ಸೇವೆಯ ತನ್ನ ಧ್ಯೇಯವನ್ನು ವಿವರಿಸಿ ಸಮಯೋಚಿತ ಉತ್ತರವಿತ್ತ ಮೇಲೆ ದನ್ಯವಾದ ಸಮರ್ಪಣ ಲಘುಫಲಾಹಾರಗಳಿಂದ ಸಮಾರಂಭವು ಕೊನೆಗೊಂಡಿತು.

CHAMPAES
SNOW & CASTREX
AGENTS:
SADANANDA STORES UDIPI

THE BEST PREVENTIVE IN EPIDEMICS OF
CHOLERA
"BHUVANENDRA"
CHANDRAMAS
Will give you the best results. Try once and be satisfied with the results.
Dose: For adults:- 3 to 5 drops 2 to 3 times a day with the decoction of cloves or ajwan.
For Children: 1 to 2 drops with the said decoction.
Also a sovereign remedy for [illegible],
Stomachache, Vomiting and Nausea.
BHUVANENDRA PRODUCTS Ltd.

"ಭುವನೇಂದ್ರ"
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ
ನೂಡನಿರಬೇಕಾದ ಅತ್ಯುತ್ತಮ ಔಷಧಿ
ದೊಡ್ಡವರಿಗೆ 4ರಿಂದ 8 ಬೊಟ್ಟು. ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು
ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ
ಯುಕ್ತ ಕಂಡಂತೆ ಕೊಡುವುದು.
ಅತಿಸಾರ. ಹೊಟ್ಟೆನೋವು, ಹಲ್ಲುನೋವು, ಅಜೀರ್ಣ
ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣ್ಯೆ, ರಥಬೀದಿ;
ಡಾ. ಪಿ. ಜಿ. ಆಚಾರ್ಯ್ಸ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in 1920)

Registered Office Court Road UDIPI South Canara District.

Business Offices Udipi, Mangalore, Katapadi, Kanhangad and Kinnigoli, South Canara

Authorised and Issued Capital Rs 2,00,000/-

Subscribed and Paid up Capital Rs 2,00,000/-

Reserve Funds. Rs 1,75,853/

Short term bills are discounted for approved parties Loans and advances are made and overdrafts granted on fairly easy terms

Deposits are accepted at favourable rates of interest More than twenty three years' reliable banking Service stands to our credit

For further particulars please call at or apply to the nearest office

Dated 31-10-1943

ಶುಚಿ!! **ಸೆಂಟ್ರಲ್ ಕೆಫೆ** ರುಚಿ!!

ಶ್ರೀನಿವಾಸ ಬಿಲ್ಡಿಂಗ್ಸ್, ಹೆಡ್ ಪೋಸ್ಟಾಫೀಸ್ ಸರ್ಕಲ್, ಶಿವಮೊಗ್ಗ.

ಪ್ರಯಾಣಿಕರಿಗೆ ಉಳಿದುಕೊಳ್ಳಲು ಸ್ಥಳಾನುಕೂಲ ಏರ್ಪಡಿಸಿರುತ್ತೆ ಸಕಾಲದಲ್ಲಿ ಉತ್ತಮವಾದ ಊಟ, ಕಾಫಿ ಮತ್ತು ಹಸನಾದ ತುಪ್ಪದಲ್ಲಿ ತಯಾರಿಸಿದ ತಿಂಡಿ ದೊರೆಯುತ್ತೆ.

ಈ ಸ್ಥಳವು ರೈಲ್ವೆಸ್ಟೇಷನ್, ಬಸ್‌ಸ್ಟ್ಯಾಂಡ್, ಕೋರ್ಟುಗಳಿಗೆ ಮಧ್ಯ ಸ್ಥಳವಲ್ಲಿದೆ.

ಎಸ್. ರಾಮದಾಸ್, ಪ್ರಾಪ್ರೈಟರ್.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲರ ಸಹಕಾರ ಅಪೇಕ್ಷಿಸುವುದು.

M. R. Punja, President & Manager — ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮನೇಜರ್.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ : : : : ಮಂಗಳೂರು.

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.

ಹೆಡ್ ಆಫೀಸ್: ಮಂಗಳೂರು.

ಶಾಖೆಗಳು:

ಮಂಗಳೂರು, ಸಿಟಿ-ಮಂಗಳೂರು.

ಉಡುಪಿ, ಕಾರ್ಕಳ, ಕುಂದಾಪುರ,

ಕಾಪು, ಬ್ರಹ್ಮಾವರ, ಕಾಸರಗೋಡು,

ಪ್ರತಿ ಶಾಖೆಗಳಲ್ಲೂ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳು ಕೈಗೊಳ್ಳಲ್ಪಡುತ್ತವೆ

THE VIJAYA BANK LIMITED, MANGALORE.

REGD.

ಅಮೃತಾಂಜನ ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದನೋವು, ಸ್ನಾಯುಗಳು ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೂಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ, ಹುಳುಕಟ್ಟಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1—8—0 ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. 2—8—0

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯ:—ಹರಪೇಪಲ್ಲಿ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೨—೦—೦ ಪೋಸ್ಟ ಚಾರ್ಜು ೧೦ಆಣೆ.

ಮಾಲಕರು—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿ ಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ —ಕುಂಬರವಾಡಿ ಸ್ಟೋರ್ಸ. ದಾವಣಗೇರಿ —ದಾವಣಗೇರಿ ಪ್ರೆಸ್ಸ್. ಆರ್ ಎಲ್. ಕಮಲದಾಸ, ಕೆಮಿಸ್ಟ್, ಹಾವೇರಿ, ಬ್ಯಾಡಗಿ

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಧರಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾ** ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೬ ಬಾಟ್ಲಿಗಳು ಹೆಚ್ಚುಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಯಿಗೆ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿ

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. ೨ **ಕೊಡಿಯಾಲಬೈಲು, ದ.**

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 192

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE

Approved firm by the Govt. Mysore.

Certified by the Agent of the Govt. of India in Ceylon

EDITED PRINTED & PUBLISHED BY K. H. SHETTY AT THE NAVAYUGA PRESS, UDIPI. S. INDIA

Regd. No. M. 3070

Estd. 1921

ನವಯುಗ

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪ ಸಂಚಿಕೆ ೧೦

FOUNDER Sri. A. B. Shetty.

Vol. 24 No. 10

NAVAYUGA— Kannada Weekly —UDIPI, S. I.

ಉಡುಪಿ • 11—11—1943 • ಮಂಗಳೂರು.

ಕಿರಿಯರ ಪ್ರಪಂಚದ ಹೊಸ ಪ್ರಕಟಣೆ

—ಪ್ರಕಾಶ—

ಸಾಮಾಜಿಕ—ರಾಜಕೀಯ ನಾಟಕ.

ಮೂಲ ಲೇಖಕರು:—ಶೇಟ್ ಗೋವಿಂದ ದಾಸ್, ಎಂ. ಎಲ್. ಎ. (ಸೆಂಟ್ರಲ್)

ಅನುವಾದಕಿ: ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ.

ಬೆಲೆ ರೂ. 1-12-0. ಟ. ಖ. 0-4-0

ರೂ. 2ನ್ನು ಮನಿಯಾರ್ಡರ್ ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟ್ಯಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಲಕ ಕಳುಹಿಸಲಾಗುವದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಿರಿಯರ ಪ್ರಪಂಚದ ಇನ್ನೊಂದು ಪ್ರಕಟಣೆ.

ಭಾರತೀಯ ಕತೆಗಳು

ಸಣ್ಣ ಕತೆಗಳ ಸಂಗ್ರಹ

ಮೂಲ ಲೇಖಕರು— ಶ್ರೀ. ಎ. ಎಸ್. ಪಂಚಾಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್. ಲಾ., ಎಫ್. ಆರ್. ಎಸ್. ಎಲ್.,

ಅನುವಾದಕರು— ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರು.

ಬೆಲೆ 0-14-0 ಟ. ಖ. 0-2-0

ರೂ. 1/ನ್ನು ಮನಿಯಾರ್ಡರು ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟ್ಯಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಲಕ ಕಳುಹಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

The Canara Mutual Assurance Co., Ltd.,

UDIPI (S. India).

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ಸಮಯೋಚಿತವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ನಮ್ಮ ಮನೆಯವರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇವರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ,

ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಮುಖ್ಯ ಏಜಂಟರು.

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ ಕನ್ನಡ)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್ ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋ[illegible] ರೋಗಗಳ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಬೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಯೋನಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟೆ ಫಾರ್ಮಸಿ, ಧಾರವಾಡ:— [illegible] ಫಾರ್ಮಸಿ, ದಾವಣಗೇರಿ:ದಾವಣಗೇರಿ ಪ್ರೇಸ್. [ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**

ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,

Ayurveda Oushadalaya, GADAG.

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೪೨ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹು ಬಹು ಅಪಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನ್ನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ತೀವ್ರನೆ ಮುಂದುವರಿದವು.

೧೯೪೦, ೪೧ರಲ್ಲಿ ಕೆನರಾ ಬೇಂಕು ೯೦ ಲಕ್ಷ ಠೇವಣೆಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣೆಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡುವರೆ ಕೋಟಿಗೆ ಏರಿಕ್ಕಿವೆ. ಹಾಗೂ ತೆತ್ತ ಮೂಲಧನವು ನಾಲ್ಮಡಿಯಾಗಿದೆ.

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮವಿಶ್ವಾಸದಿಂದಲೂ, ದೃಢಬುದ್ಧಿಯಿಂದಲೂ, ಯೋಗ್ಯಸೇವೆಯನ್ನು ಸಲ್ಲಿಸಿದರಿಂದಲೂ, ಇಂದಿನ ಈ ಪ್ರಗತಿಗೆ ಕಾರಣ ಭೂತರಾದ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಮಹತ್ವದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

CANARA BANK LIMITED.

ಕೆನರಾ ಬೇಂಕ್ ಲಿಮಿಟೆಡ್.

ಸ್ಥಾಪನೆ 1906.

ಪಾರ್ಲಿಮೆಂಟಿನ ಫಾರ್ಸ್!

'ಅಧಿಕಾಧಿಕ ಹುಟ್ಟಿದ್ದಾರೆ—ಅನ್ನವಿಲ್ಲದೆ ಸಾಯಲಿ'!

ಭಾರತೀಯರ ಗಂಟಲೊಣಗಿದಾಗೆಲ್ಲಾ ಬ್ರಿಟಿಷರ ಗಾಯನ ಕೇಳುವ ಸುಯೋಗವಿದ್ದೇ ಇದೆ! ಬಂಗಾಳದಲ್ಲಿ ಆಹಾರವಿಲ್ಲದೆ ಹುಳ ಹುಪ್ಪಡಿಗಳಂತೆ ಜನರು ಸಾಯುತ್ತಿದ್ದಾರೆ- ಬ್ರಿಟಿಷರದನ್ನು ಚರ್ಚಿಸುತ್ತಿದ್ದಾರೆ. ಪಾರ್ಲಿಮೆಂಟಿನ ಕಾಮನ್ಸ್ ಸಭೆಯು ಇದೇ ತಾ 4ರಿಂದ ಹಿಂದುಸ್ಥಾನದ ಆಹಾರ ಸಮಸ್ಯೆಯನ್ನು ಚರ್ಚಿಸಿ ಮುಗಿಸಿತು. ಪರಿಣಾಮವಾಗಿ ಕೆಲವು ಯುದ್ಧ ಸಿ. ಗಳ ಕಂಠಶೋಷಣೆಯಾಯಿತೇ ಹೊರತು ಅನ್ನಾನ್ನಗತಿಕರ ಪೋಷಣೆಯಾಗಲಿಲ್ಲ. ಹಿಂದುಸ್ಥಾನದ ಮೇಲೆ ಅಭಿರುಚಿಯುಳ್ಳ ಮೆಂಬರರೂ, ಪ್ರೇಕ್ಷಕರೂ, ಅಧಿಕ ಸಂಖ್ಯೆಯಲ್ಲಿ ನೆರೆದಿದ್ದರು; ಸಭೆಯಾದರೂ ಈ ಪ್ರಶ್ನೆಯನ್ನು ಪದ್ಧತಿಯಂತೆ ಗಾಳಿಪಟವಾಗಿ ಹಾರಿಸಿ ಬಿಡದೆ ಗಂಭೀರವಾಗಿಯೇ ಪರ್ಯಾಲೋಚಿಸಿತು. ಆದರೆ ಪರ್ಯವಸಾನಮಾತ್ರ ನಿರಾಶೆಯಲ್ಲಿಯೇ; ಪರಿಣಾಮ ಸೊನ್ನೆಯೇ! ಪ್ರಾಸಂಗಿಕ ಜಾಹೀರಾತುಪಡೆದ ಈ ಮಹಾ ಚರ್ಚೆಯಿಂದ ನಿರ್ಮಾಣಗೊಂಡುದೆಂದರೆ 'ಹಿಂದೀಯರಿಗೆ-ಸಾವು ಬ್ರಿಟಿಷರಿಗೆ ಸಭೆ' ಎಂಬಗಾದೆಯೊಂದೆ!

ಪೆಥಿಕ್ ಲೋರೆನ್ಸ್—ಚರ್ಚೆಯನ್ನಾರಂಭಿಸಿದವರು. ಅರ್ಥಶಾಸ್ತ್ರಜ್ಞರು. 10-50ವರುಷಗಳಿಗೆ ಮೊದಲೊಮ್ಮೆ ಹಿಂದುಸ್ಥಾನವನ್ನು ಸವಿಸ್ತಾರವಾಗಿ ಸಂಚರಿಸಿ ಹೋದವರು. ಇವರ ಭಾಷಣವು ಆಗ್ರಹಾನುಗ್ರಹ ರಹಿತವಿದ್ದು ಬರಗಾಲದ ಮೂಲವನ್ನು ಶೋಧಿಸಿ ತೋರಿಸಿತು' ಎಲ್ಲರ ಮೇಲೂ ಪರಿಣಾಮವನ್ನುಂಟುಮಾಡಿತು. 'ಈ ದುರಂತಕ್ಕೆ ಹಿಂದೀ ಸರಕಾರ ಅನುಕ್ರಮವಾಗಿ ಪಾರ್ಲಿಮೆಂಟ್-ಹೊಣೆ. ಬರಗಾಲಕ್ಕೆ ಮೂಲಕಾರಣವೆಂದರೆ ಜನರ ಕೊಂಡುಕೊಳ್ಳುವ ಶಕ್ತಿ ನಶಿಸಿದುದು. ಧಾರಣೆ ಮಿತಿಮೀರಿ ಏರಿದುದೇ ಜನರ ಪಡಕೊಳ್ಳುವ ಶಕ್ತಿ ಕುಗ್ಗಲು ಕಾರಣ,- ನೋಟುಗಳ ಅತಿ ಪ್ರಸರಣವೇ ಧಾರಣೆಯೇರಲು ಕಾರಣ. ಒಕ್ಕಲಿಗನಿಗೆ ನಿತ್ಯವಿರುವ ಪದಾರ್ಥಗಳ ಬೆಲೆ ಮೊದಲಿಗಿಂತ ಶೇಕಡಾ 400-500ರಷ್ಟು ಅವನ ಆಹಾರ ಪದಾರ್ಥಗಳ ಬೆಲೆ ಶೇ. 500-700ವರೆಗೆ ಕೆಲವು ವಿಶಿಷ್ಟ ಸಾಮಾನುಗಳ ಕ್ರಯ ಶೇ. 900ವರೆಗೂ ಏರಿದೆ" ಎಂದರು. ಬಂಗಾಲದ ಬರಗಾಲವನ್ನು ಯುದ್ಧ ಪರಿಣಾಮವೆಂದೇ ಭಾವಿಸಬೇಕೆಂದರು.

ಅಮೆರಿಯವರ—ಲೋಕಪ್ರತ್ಯೇಕ! ಲಾರೆನ್ಸರ ಆತುರ, ಅಭಿಪ್ರಾಯಗಳಿಗೆ ಅವರು ಹಾರ್ದಿಕ ಸಮ್ಮತಿ ಸೂಚಿಸಿ, ಬರಗಾಲದ ಕಾರಣವೆಂದು ಮಾತ್ರ ಬೇರೆ ದಿಕ್ಕನ್ನೇ ತೋರಿಸಿದರು- ಬ್ರಿಟಿಷರು ಹಿಂದುಸ್ಥಾನವನ್ನು ಎಲ್ಲಾ ವಿಧದಿಂದ ಸುಧಾರಿಸಿದರೂ ಅಲ್ಲಿ ಮಿತಿಮೀರಿ ಬೆಳೆಯುತ್ತಾ ಬಂದ ಜನಸಂಖ್ಯೆಗೆ ಯಾವುದೂ ತಾಗಲಿಲ್ಲವೆಂದೇ ಭಾರತ ಕಾರ್ಯದರ್ಶಿಯ ಆರೋಪ. "ಕಳೆದ ಹನ್ನೆರಡೇ ವರುಷಗಳಲ್ಲಿ 6ಕೋಟಿ ಜನ ಹೆಚ್ಚಾಗಿದ್ದಾರೆ. ಬಂಗಾಳವೊಂದರಲ್ಲೇ ಕಳೆದ 10ವರುಷಗಳಿಂದ ವರುಷಕ್ಕೆ 10ಲಕ್ಷದಂತೆ ಹೆಚ್ಚಿನ ಜನನಗಳಾಗುತ್ತಿವೆ. ಈ ಜನೋತ್ಪತ್ತಿಗೆ ಸರಿಯಾಗಿ ಧಾನ್ಯೋತ್ಪತ್ತಿಯಾಗುತ್ತಿಲ್ಲ. ಸಾಲದುದಕ್ಕೆ ಕಳೆದ ವರುಷ ಬಂಗಾಳದಲ್ಲಿ ಬಿರುಗಾಳಿ ಮೊದಲಾದ ಅಪಘಾತಗಳಿಂದ ಬೆಳೆ ಹಾಳಾಗಿತ್ತು. ಹೀಗಾಗುವವೆಂದು ನಮಗೆ ತಿಳಿಯುವ ಅವಕಾಶವಿರಲಿಲ್ಲ. ಆಗ ಮಂತ್ರಿಗಳಾಗಿದ್ದ ಮಿ. ಫಜಲುಲ್ ಹಕ್ಕರೇ ಬಂಗಾಳವನ್ನು ಆದರ ಪಾಲಿಗೇನೇ ಬಿಡುವಂತೆ ಕೇಳಿಕೊಂಡಿದ್ದರು' ಎಂದು ಹೇಳಿ ಹಿಂದೀ ಸರಕಾರ ಮತ್ತು ಲೋರ್ಡ್ ಲಿನ್‌ಲಿತ್‌ಗೋರವರ ಸ್ತುತ್ಯ ಕಾರ್ಯಗಳನ್ನು ಪ್ರಶಂಸಿಸಿದರು. ಈ ಯುಗದಲ್ಲಿ ಯಾವುದೇ ಬದಲಾದರೂ ಅಮೆರಿಯವರದು ಅಮರವಾಣಿ ತಾನೆ!

ಹೋರ್ ಬೆಲಿಷಾ—ಸರಕಾರೀ ಧೋರಣೆಯನ್ನು ಕಡಿಡಿ ಖಂಡಿಸುವದರಲ್ಲಿ ಹೆಸರುಗೊಂಡ ಈ ಪೂರ್ವ ಭೂತ ಯುದ್ಧಮಂತ್ರಿ, ಅಮೆರಿಯವರ ನಂತರ ಮಾತಾಡಿದರು-ಅವರ ವಾದವನ್ನೇ ಸಮರ್ಥಿಸಿದರು. ಕಳೆದ ನೂರುವರುಷದಲ್ಲಿ ಎರಡೂವರೆಪಾಲಷ್ಟು ಬೆಳೆದು ಹೋದ ಹಿಂದೀ ಜನಸಂಖ್ಯೆಯೇ ಬರಗಾಲವನ್ನು ತಂದಿತೆಂದರು. 'ನೀವೇಕೆ ಅವರನ್ನು ಸುಧಾರಿಸಲಿಲ್ಲ, ಎಂಬ ಪ್ರಶ್ನೆಗೆ "ಹಿಂದುಸ್ಥಾನವೆಂದರೆ ಕೈರಾಟಿಯನ್ನೇ ರಾಷ್ಟ್ರೀಯ ಚಿಹ್ನೆಯಾಗಿ ಗಾಂಧಿಯವರಿಂದ ಸ್ವೀಕರಿಸಿಕೊಂಡ ರಾಷ್ಟ್ರವಾದ್ದರಿಂದ ಅಸಾಧ್ಯ" ಎಂದು ಹೋರ್ ಬೆಲಿಶರ ಉತ್ತರ. ಹಡಗ ಸಂಚಾರದ ಕಷ್ಟ, ಹಿಂದುಸ್ಥಾನದ ರಾಜಕೀಯ ಸಮಸ್ಯೆ, ಮೊದಲಾದುವುಗಳನ್ನು ಪ್ರಸ್ತಾಪಿಸಿ, ಬಂಗಾಳದ ವೃತ್ತಾಂತಗಳು ಬ್ರಿಟಿಷರಿಗೆ ಪೀಡೆಕೊಡದಂತೆ ಎಲ್ಲಕ್ಕೂ ಭಾರತೀಯರನ್ನೇ ಹೊಣೆಮಾಡಿದರು! 'ಯುದ್ಧ ಸ್ಥಿತಿಯಿಂದಾಗಿ ಹಿಂದುಸ್ಥಾನವು ತನ್ನ 350 ಮಿಲಿಯ ಪವನು ಸಾಲವನ್ನು ತೀರಿಸಿ, ಈಗ ನಮಗೇನೇ 85ಮಿಲಿಯ ಸ್ಟರ್ಲಿಂಗ್ ಸಾಲವಿತ್ತಿದೆ' ಎಂದು ಬೆಲಿಷರ ಲೆಕ್ಕಾಚಾರ.

ಸರ್. ವಾಡ್ಲ್ಸ್ ಮಿಲ್ನೆ—ಸರ್. ಆಲ್. ಫ್ರೆಡ್ ನೋಕ್ಸ್=ಮಿ. ರಿಡ್ಲೆ- ಇವರೆಲ್ಲಾ ತಲೆಗೊಂದು ಅಭಿಪ್ರಾಯ ಕೊಟ್ಟರು.

ಮಿ. ಕೂವೆ—ಸರಕಾರದ ಧೋರಣೆಯನ್ನು ಕಠಿಣವಾಗಿ ಖಂಡಿಸಿದವರೆಂದರೆ ಇವರೇ. ಆಹಾರವಾಗದಿದ್ದರೂ ಅರ್ಥವಾಗಬಲ್ಲ ಮಾತಾಡಿದ್ದಾರೆ. "200ವರುಷಗಳ ಆಳ್ವಿಕೆಯ ನಂತರ ಭಾರತದಲ್ಲಿ ನಮ್ಮ ನೀತಿ ಯಂತ್ರವೇ ಮುರಿದು ಬಿದ್ದಿದೆ. ನಾವು ಹಾಸ್ಯಾಸ್ಪದವಾಗಿ ಸೋತು ಹೋಗಿದ್ದೇವೆ ನಮ್ಮ ಸನ್ಮಿತ್ರ ನೆಹರುಗಳಂಥವರನ್ನು ಜೈಲಿಗೆ ನೂಕಿದ್ದೇವೆ. ಧುರೀಣರ ಬಿಡುಗಡೆಯಾಗದೆ ಜನರ ಸಹಕಾರ ದೊರೆಯದು. ಹಿಂದುಸ್ಥಾನಕ್ಕೆ ಹಡಗಾನುಕೂಲತೆಯೊದಗಿಸುವಂತೆಯೇ ಧುರೀಣರ ಬಿಡುಗಡೆಯೂ ಅತ್ಯಗತ್ಯ" ಎಂದು ಕೆಣಕಿ ನುಡಿದರು.

ಮಿ. ರೈಕೆಸ್—ಹಿಂದುಸ್ಥಾನದ ಸಾಗುವಳಿಯನ್ನು ಅಧಿಕಗೊಳಿಸಿಯೇ ಬೇಕಾದ ಆಹಾರಧಾನ್ಯ ಪಡೆಯಬಹುದೆಂದು ಇವರ ಭಾಷಣಾಭಿಪ್ರಾಯ.

ಮಿ. ಆಮನ್—ಅಮೆರಿ ವಾದದ ನಿಷ್ಪ್ರಯೋಜಕತೆಯನ್ನು ಮನಗಾಣಿಸಿ 'ಈ ಅನಾಹುತದ ಪೂರ್ಣ ಹೊಣೆಗಾರಿಕೆ ಇಲ್ಲಿದೆ-ನಮ್ಮಲ್ಲಿಯೇ ಇದೆ'-ಎಂದರು.

ಗೋಡ್‌ಫ್ರೇ ನಿಕೋಲ್ಸನ್—'ಬರಗಾಲದ ಕಾನೂನುಬದ್ಧ ಹೊಣೆ ಹಿಂದುಸ್ಥಾನದ ಮೇಲೆ; ನೀತಿಬದ್ಧ ಜವಾಬ್ದಾರಿ ಪಾರ್ಲಿಮೆಂಟಿನ ಮೇಲಿದೆ. ಈ ಆಳ್ವಿಕೆಯು ದುರಂತಗಳನ್ನು ಇನ್ನೂ ಬೆಳೆಯಲು ಬಿಡದಿರೋಣ' ಅಂದರು.

ಸರ್. ಜೋರ್ಜ್ ಶುಸ್ಟರ್—ವೇವೆಲರ ಶಕ್ತಿಯನ್ನು ಶ್ಲಾಘಿಸಿ, ಭರವಸೆ ಸೂಚಿಸಿದರು. ಈ ವರೆಗಿನ ಅರೆಮನಸ್ಸಿನ, ಅರ್ಥವರ್ಧಯೋಜನೆಗಳ ನಿಷ್ಪ್ರಯೋಜಕತೆಯನ್ನು ಟೀಕಿಸಿ, ಅಖಿಲ ಭಾರತಯೋಜನೆ ಕೈಕೊಳ್ಳಲ್ಪಡಬೇಕೆಂದು ಒತ್ತಿ ಹೇಳಿದರು

ಸರ್. ಜೋನ್. ಅಂಡರ್ಸನ್—ಇಂಗ್ಲಾಂಡಿನ ಅರ್ಥ ಸಚಿವ. ಚರ್ಚೆಗಳುತ್ತರ ಇವರಿಂದ ಬಂತು,-ಅಸ್ಪಷ್ಟತೆ, ಆವೇಶವಲ್ಲದೆ ತಿರುಳೇನೂ ಇಲ್ಲದ ಮಾತನ್ನಾಡಿದರೆನ್ನಬಹುದು. 'ನಾವು ನಮ್ಮ ಹೊಣೆಯಂತೇ ವರ್ತಿಸಿದ್ದೇವೆ. ಬಂಗಾಳದ ಬರಗಾಲಕ್ಕೆ ಮುಖ್ಯ ಹೊಣೆಗಾರ. ಅಲ್ಲಿಯ ಪ್ರಾಂತಿಕ ಸರಕಾರ.ಮಿ. ಫಜಲುಲ್ ಹಕ್ಕರ ಅಂದಿನ ಮಾತೇ ಇದಕ್ಕೆ ನಿದರ್ಶನ.ಸಮಾನತೆ ಕೊಟ್ಟೊಡನೆ ಪ್ರಕೃತಿ ಜನ್ಯಗಂಡಾಂತರದ ನಿವಾರಣೆಯಾಗುವದಿಲ್ಲ' ಎಂದು ವಿವರಿಸುತ್ತಿದ್ದಂತೆಯೇ ಆವೇಶಗೊಂಡು ಮೇಜಿನ ಮೇಲೆ ಕೈ ಬಡಿದು ನುಡಿದರು. "ಹಿಂದೀ ಸರಕಾರವು ಮೊದಲೇ ತೀವ್ರೋಪಾಯ ಕೈಕೊಳ್ಳಬೇಕಿತ್ತೆಂಬ ಟೀಕೆಯಾಗಿದೆ. ಆದರೆ ಮುಂದಾಗುವದು ಮೊದಲೇ ತಿಳಿಯದೆ ಹೋಯಿತು!" ಅಂತೂ ಅಂಡರ್ಸನರು ಅಡ್ಡಾದಿಡ್ಡಿ ಮಾತಾಡಿ ಹಾರಿಸಿಬಿಟ್ಟರು.

ಸಿಮೂರ್ ಕಾಕ್ಸ್—'ಲಂಡನಿನವರಂತೆಯೇ ಕಲ್ಕತ್ತದವರೂ ಚಕ್ರವರ್ತಿ ಪ್ರಜೆಗಳು; ಅಲ್ಲಿಯವರು ಸಾಯುತ್ತಿದ್ದರೆ ಇಲ್ಲಿಯವರು ಸತ್ತಂತೆಯೇ ಜಾಪಾನರೊಡನೆ ಮೂರು ಅಥವಾ ಆರುತಿಂಗಳ ಯುದ್ಧ ನಡೆಸಬೇಕಾಗಿ ಪರಿಣಮಿಸಿದರೂ ಹಿಂದುಸ್ಥಾನಕ್ಕೆ ಗೋದಿ ಕಳುಹಿಸಲೇ ಬೇಕು. ಈ ಜನರ ರಕ್ಷಣಾ ಕಾರ್ಯದ ಪರಿಣಾಮವಾಗಿ ದೂರಪ್ರಾಚ್ಯದ ಯುದ್ಧಾಯುಷ್ಯ ಬೆಳೆಯಬೇಕಾಗಿ ಬಂದರೂ, ಅವರ ಹಸಿವು ನಿವಾರಿಸದಿರುವದು ಬ್ರಿಟಿಷ್ ಘನತೆಗೆ ಹೇಳಿಸಿದ್ದಲ್ಲ!" ಎಂದು ಕಳಕಳಿಯ ಮಾತಾಡಿದರು.

ಇಷ್ಟೆಲ್ಲಾ ಚರ್ಚೆ ನಡೆಸಿ, ಗೊಂದಲವೆಬ್ಬಿಸಿ, ಆದ ಲಾಭನೇನು? ಬ್ರಿಟಿಷ್ ಎಂ. ಪಿ. ಗಳ ಮಾತೇನೋ ಇಲ್ಲಿದೆ-ಹಸಿದವರಿಗೆ ತುತ್ತೆಲ್ಲಿದೆ? ಅವರು ತಮ್ಮ ನಾಲಿಗೇ ತೀಟೆ ತಣಿಸಿಕೊಂಡರು ಹಸಿದವರ ಹೊಟ್ಟೆಯುರಿ ತಣಿಸಲಿಲ್ಲ!

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—0—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ—1. ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ ಅಂಡ್ ಜನರಲ್ ಮರ್ಚೆಂಟ್ಸ್, 183 ಸುಪಾರಿಬಾಗ್ ರೋಡ್, ಪರೇಲ, ಬೊಂಬಾಯಿ, ನಂಬ್ರ 12 2. ಜನರಲ್ ಸ್ಟೋರ್ಸ್, ಜಿ. ಐ. ಪಿ. ಮಾಟುಂಗಾ. 3. ಮುಲ್ಲರ್ ಪೆಟರ್ನ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ. 4. ಧನ್ವಂತರಿ ವೈದ್ಯಶಾಲೆ, ಲೆನ್ಸ್ ಡೌನ ಬಜಾರ್, ಮೈಸೂರು. 5. ಮಂಗ್ಳೂರು ಸ್ಟೋರ್ಸ್, ಮಡಿಕೇರಿ. 6. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ. 7. ಡಾ। ಶ್ರೀನಿವಾಸ ಪೈ, ಪುತ್ತೂರು. 8. ಕಾಂತಾವರ ವಾಸ್ದೇವ ಕಮ್ತಿ, ಬೆಳ್ತಂಗಡಿ. 9. ಮುಲ್ಕಿ ಮೆಡಿಕಲ್ ಸ್ಟೋರ್ಸ್, ಮುಲ್ಕಿ. 10. ನವಭಾರತ ಬುಕ್ ಡಿಪೊ, ಸಂತೆಕಟ್ಟೆ, ಉಡುಪಿ. 11. ಕೃಷ್ಣಾ ಫಾರ್ಮಸಿ, ಕುಂದಾಪುರ. 12. ಎಚ್. ನರಸಿಂಹ ನಾಯ್ಕ, ಮರ್ಚಂಟ್, ಶಂಕರನಾರಾಯಣ. 13. ಕಾಸರಗೋಡು ಶ್ರೀ ರಾಮಾ ಸ್ಟೇಶನರಿ ಹೌಸ್, ಶ್ರೀರಾಮ ಪೇಟೆ. 14. ಕೆ. ಶ್ರೀನಿವಾಸ ಹೆಗ್ಡೆ, ತೀರ್ಥಹಳ್ಳಿ. 15. ಬಿ ಯಸ್. ನರ್ಸಿಂಗ ರಾವ್, ಮರ್ಚೆಂಟ್, ಚಿಕ್ಕಮಂಗ್ಳೂರು.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

The Canara Banking Corporation Limited.
(Incorporated in British India Liability of members limited)
ESTD: 1906

ANNOUNCEMENT.

We have pleasure to announce that our Bangalore City Office has been opened on the 3rd instant and regular business is transacted from that date.

PROGRESSIVE EFFICIENT ECONOMICAL
It pays to own a Life Policy in the
INDO UNION
ASSURANCE CO., LTD.
HEAD OFFICE.
INDO UNION BUILDINGS, G. T. MADRAS.
For Representation apply to
M. SUNDERRAM SHETTY,
Branch Manager,
Sir Pherozeshah Mehta Road, Fort, BOMBAY.

ನವಯುಗ

ಉಡುಪಿ, ಗುರುವಾರ, ೧೧-೧೧-೧೯೪೩

ಸ್ವಾತಂತ್ರ್ಯ ಯಾರಿಗೆ?

'ಕೋಟಿ ಯುದ್ಧ ವಿಜಯಗಳಿಗೆ ಸಮಾನವಾದ ಮಹಾ ವಿಜಯ' ಎಂದು ಲಂಡನ್ ಪತ್ರಿಕೆಗಳಿಂದ ಶ್ಲಾಘನೆ ಪಡೆದ ಮೋಸ್ಕೋ ಪರಿಷತ್ತಿನ ಶೀರ್ಮಾನದಲ್ಲಿ ಗೂಢವನ್ನರಿಯದವರಿಗೆ ಯಾವ ನವೀನತೆಯೂ ಗೋಚರಿಸುವದಿಲ್ಲ. ಬಾಲ್ಕನ್ ಭವಿಷ್ಯ, ಪೋಲೆಂಡಿನ ಗಡಿ ನಿರ್ಣಯ ಜರ್ಮನಿಯ ಮುಂದಿನ ಸ್ಥಾನಗಳ ಕುರಿತು ರಶ್ಯಾ ಮತ್ತು ಮಿತ್ರ ರಾಷ್ಟ್ರಗಳೊಳಗೆ ಮತ ಭೇದವಿತ್ತು; ಮೋಸ್ಕೋ ಪರಿಷತ್ತು ಇವುಗಳ ಕುರಿತು ತೀರ್ಮಾನವಿತ್ತಿಲ್ಲ. ಮತ ಭೇದಗಳಿರುವ ವಿಷಯಗಳನ್ನೇ ತಾತ್ಕಾಲಿಕವಾಗಿ ಮರೆತು ಬಿಡುವ ಮೂಲಕ ಮೋಸ್ಕೋದಲ್ಲಿ ಸೇರಿದ ತ್ರಿರಾಷ್ಟ್ರಗಳು ಮತ ಭೇದಗಳನ್ನೂ ಸದ್ಯಕ್ಕೆ ಮರೆತವೆಂಬುದೊಂದೇ ಸಂತೋಷ. ಪರಸ್ಪರರೊಳಗುಂಟಾಗುವ ತಪ್ಪು ತಿಳುವಳಿಕೆಗಳ ನಿವಾರಣೆಗಾಗಿ ಒಂದು ಸ್ಥಾಯೀ ಸಮಿತಿಯ ಸ್ಥಾಪನೆಯಾಗಿದೆ. ಇದರಿಂದಾಗಿ ತಿಕ್ಕಾಟಗಳಿದ್ದಂತೆ ತೀರ್ಮಾನಿಸುವವರೂ ಇದ್ದಾರೆ ಎಂಬ ಸಮಾಧಾನವೊಂದಿದೆ. ಯುದ್ಧಕಾಲ ಮತ್ತು ಯುದ್ಧಾನಂತರವೂ ತ್ರಿರಾಷ್ಟ್ರಗಳು ಕೂಡಿ ನಡೆಯಬೇಕೆಂದಾಯಿತು. ಜರ್ಮನಿಯನ್ನು ಸೋಲಿಸುವ ಯೋಜನೆ ತಯಾರಾಯಿತು; ಆದರೆ ಇವುಗಳಲ್ಲಾವುದೂ ಮೋಸ್ಕೋ ನಿರ್ಮಾಣವಲ್ಲ—ಮೊದಲೇ ಇದ್ದ ಅಭಿಪ್ರಾಯಗಳು. ಆದರೆ ಮೋಸ್ಕೋ ಪರಿಷತ್ತಿನ ವಿಜಯ ದುಂದುಭಿ ನಾಲ್ದೆಸೆಗಳಲ್ಲೂ ಇಷ್ಟು ಬಲವಾಗಿ ಮಾರ್ದನಿಗೊಡುತ್ತಿರುವದನ್ನು ಕಾಣುವಾಗ, ಅದರ ಪರಿಣಾಮವಾಗಿ ಮುಂದೆ ಮಹಾ ಘಟನೆಗಳು ನಡೆಯಲಿವೆ ಎಂಬ ಆಶೆಗಾಸ್ಪದವಿದೆ. ಯುದ್ಧಾವಸಾನ ಕಾಲವನ್ನು ಮೋಸ್ಕೋ ಪರಿಷತ್ತು ಸಮೀಪಕ್ಕೆ ಕರೆದಿದ್ದರೆ—ಅಂತಹದೇನೂ ಲೋಕದೆದಿರು ಜಾಹೀರಾಗಿಲ್ಲ—ಅದು ಒಂದು ವಿಭಾಗದಲ್ಲಾದರೂ ವಿಜಯಿಯಾದುದು ನಿಜ.

ಈ ಪರಿಷತ್ತು ರಶ್ಯ, ಇಂಗ್ಲೆಂಡು, ಅಮೇರಿಕಗಳೊಳಗಿನ ಪರಸ್ಪರ ವ್ಯವಹಾರವನ್ನು ಸುಗಮಗೊಳಿಸಿದ ಸುಖಸ್ವಪ್ನವನ್ನಾದರೂ ಕಾಣಿಸಿತು; ಆದರೆ ಲೋಕ ಸ್ವಾತಂತ್ರ್ಯ, ಸರ್ವಸಮಾನತೆಯ ಮಟ್ಟಿಗೆ ಪ್ರಮುಖ ರಾಷ್ಟ್ರಗಳು ಇನ್ನೂ ಗಾಢ ನಿದ್ರೆಯಲ್ಲಿವೆ—ಕನಸನ್ನೂ ಕಾಣುತ್ತಿಲ್ಲ—ಎಂಬುದಕ್ಕೆ ಮೋಸ್ಕೋ ತೀರ್ಮಾನವೇ ದೃಷ್ಟಾಂತ. ಭಾವೀ ಸ್ವಾತಂತ್ರ್ಯದ ಪಟ್ಟಿಯಲ್ಲಿ ಯುರೋಪಿನ ಜರ್ಮನಾಕ್ರಮಿತ ರಾಷ್ಟ್ರಗಳನ್ನು ಮಾತ್ರವೇ ಆ ಪರಿಷತ್ತು ಸೇರಿಸಿದೆ. ರಶ್ಯನ್ ಕ್ರಾಂತಿಯ 26ನೇ ವಾರ್ಷಿಕ ದಿನದಲ್ಲಿ ಕಾ. ಸ್ಟಾಲಿನರಿತ್ತ ಭಾಷಣದಲ್ಲಾದರೂ ಎಲ್ಲಾ ರಾಷ್ಟ್ರಗಳ ಹೆಗಲಿಂದ ನಾಜೀನೊಗವನ್ನಿಳಿಸುವ ಆಶ್ವಾಸನೆ ಮಾತ್ರವಿತ್ತು. 'ಒಬರಿಗೆ ಹೆಗಲಿದ್ದಲ್ಲಿ ನೊಗವಿರಬಾರದು' ಎಂಬ ಲೋಕ ಸುಭಿಕ್ಷ ಮಂತ್ರವನ್ನೇ ಈ ತ್ರಿರಾಷ್ಟ್ರಗಳು ಪಠಿಸಲಿಲ್ಲವೇಕೆ? ಹಿಂದುಸ್ಥಾನ, ಪೆಲೆಸ್ಟೈನ್‌ಗಳಂತಹ ದೇಶಗಳ ಹೆಗಲಮೇಲೆ ಜರ್ಮನ್ ನೊಗವಿಲ್ಲ-ಜಪಾನಿ ನೊಗವಿಲ್ಲ-ಬ್ರಿಟಿಷ್ ನೊಗವಿದೆ! ಇದು ಮಾನ್ಯವೇ? ಇಂಗ್ಲೆಂಡು, ರಶ್ಯಾ, ಅಮೇರಿಕಗಳಿಗೆ ಇದು ಮಾನ್ಯವೆಂದಾದರೆ, ಅವರ ಧ್ಯೇಯವೆಂದರೆ 'ಯುದ್ಧ ವಿಜಯ ಮಾತ್ರ' ಇದನ್ನೇ ಘೋಷಿಸಿದರೆ ಸಾಕು; 'ಲೋಕ ಸುಭಿಕ್ಷ', 'ಮಾನವ ವರ್ಗಕ್ಕೆಲ್ಲಾ ಸ್ವಾತಂತ್ರ್ಯ'-ಮುಂತಾದ ಗಂಭೀರ ಶಬ್ದಗಳನ್ನು ಉಚ್ಚರಿಸಬೇಕೆಂದಿಲ್ಲ. ಅಮೇರಿಕದ ವಿಂಡೆಲ್ ವಿಲ್ಕಿ ಮತ್ತು ಕೆಲವಂದಿ ಸಿನೆಟ್ ಮೆಂಬರರ ಪಾಲಿಗೇನೇ ಅದನ್ನು ಬಿಟ್ಟು ಬಿಡುವದು ವಾಸಿ. ಆದರೆ ಲೋಕಕ್ಕೀಗ ಸರ್ವ ಸಮಾನತೆ ಬೇಕಾಗಿದೆ ಹೊರತು ಚರ್ಚಿಲ್, ರುಜುವೆಲ್ಟರ ಅಧಿಕಾರ ಬೇಕಾಗಿಲ್ಲ; ಆದ್ದರಿಂದ ಮಿತ್ರ ರಾಷ್ಟ್ರೀಯ ಪ್ರಮುಖರಿಗೂ 'ಸರ್ವಸ್ವಾತಂತ್ರ್ಯ ಮಂತ್ರ'ವನ್ನು ಬಿಡಲಾಗುವದಿಲ್ಲ! ಯಾರೇ ಗೆದ್ದರೂ ಈ ವಂಚನೆ ಮಾತ್ರ ಗೆಲ್ಲುವಂತಿಲ್ಲ. ಈ ಬಾರಿ ಅಮೇರಿಕದಲ್ಲೆಲ್ಲಾ ನಡೆದ ಗವರ್ನರ್ ಚುನಾವಣೆಗಳು ಅದನ್ನು ಸ್ಪಷ್ಟಪಡಿಸಿವೆ ಇನ್ನೊಮ್ಮೆ ಅಧ್ಯಕ್ಷ ಪದಕ್ಕೇರುವ ... ಆಶೆಯನ್ನು ಅಡಿಮೇಲು ಮಾಡಿವೆ. 'ಸರ್ವ ರಾಷ್ಟ್ರಗಳಿಗೂ ಸ್ವಾತಂತ್ರ್ಯ'ವೆಂಬ ಆದಿ ಪ್ರಶ್ನೆಗೆ ಹೆಬ್ಬಾಗಿಲನ್ನು ಮುಚ್ಚಿದರೆ, ಅದು ಹಿಂಬಾಗಿಲಿಂದ ಪ್ರವೇಶಿಸಿಯಾದರೂ ಆಕ್ರಮಿಸಿಕೊಳ್ಳುವದೇ ಸರಿ. ಸರ್ವರ ಸ್ವಾತಂತ್ರ್ಯ ಮನ್ನಣೆಯ ಸದ್ಬುದ್ಧಿ ಮಿತ್ರರಾಷ್ಟ್ರ ಪ್ರಮುಖರಲ್ಲಿ ಹುಟ್ಟುವವರೆಗೆ, ಲೋಕಸಂಪತ್ತಿನ ಚೆಂಡಾಟ ನಡೆದೀತು—ಅದು ಒಂದೆಡೆಯಿಂದ ಇನ್ನೊಂದೆಡೆಗೆ ಹೋಗಿ ಬಿದ್ದೀತು. ಜರ್ಮನಾಕ್ರಮಿತ ರಾಷ್ಟ್ರಗಳಲ್ಲಿ ತಂಗಿದ್ದುದು ಬ್ರಿಟನಾಶ್ರಿತ ದೇಶಗಳಲ್ಲಿ ತಲೆಯೆತ್ತಬಹುದು! ಸ್ವಾತಂತ್ರ್ಯವೆಂಬುದು ಯುದ್ಧ ಗೆದ್ದವರಿಗೆ ಮಾತ್ರ ದೊರೆಯುವ ಬಹುಮಾನವೆಂದು ಬಾಯಿಬಿಟ್ಟು ಹೇಳುವವರಿಲ್ಲವೆಂಬುದು ನಿಜ. ಆದರೆ ಕಾರ್ಯತಃ ಅಷ್ಟನ್ನೇ ಹೊರತು ಅನ್ಯಥಾ ಸಾಧಿಸುವವರೂ ಇಲ್ಲ ಅಂದ ಮೇಲೆ ಹಿಂದುಸ್ಥಾನದಂತಹ ರಾಷ್ಟ್ರಕ್ಕೆ, ಯುದ್ಧ ಪ್ರವೃತ್ತ ಪಕ್ಷಗಳ ಪೈಕಿ ಒಂದು ಆಕ್ರಮಣಗಾರರ ಪಕ್ಷವನ್ನಿಂದರೆ ಇನ್ನೊಂದು ವಂಚಕರ ಸಂಗಡವಾಗಿ ಕಾಣುವದು ಸ್ವಾಭಾವಿಕ. ಸ್ವಾತಂತ್ರ್ಯದ ದುಡುಗೊರೆಯನ್ನು ಗೆದ್ದು ಪಡೆಯುವ ಒಂದೇ ಒಂದು ದಾರಿ ಹಿಂದುಸ್ಥಾನದ ಪಾಲಿಗೂ ಉಳಿದಿಲ್ಲವೆ?

ದುರ್ಬೀನು

ಸೀರೆಯ ಸೆರಗು ಹಿಡಿದರೂ ಸ್ವಂತ ಕೈ ಹಿಡಿದು... ವ್ಯಂಗ್ಯಟೀಕೆಯಾದರೂ ಸ್ವಸ್ತಿ ಹಿಡಿಯಿತು.

೦೦ ೦೦ ೦೦

ಗೋಲಿ ಹೊಡೆದವರೆ ಗೋಳೀಬಾರು ಮಾಡಿದಂತಾಗದು; ಗುಣಾಗದ ಮಾತ್ರಕ್ಕೆ ಗೋಳೆಬ್ಬಿಸಿದಂತಾಗದು.

೦೦ ೦೦ ೦೦

ಬಾಳೇಗಿಡ ಕೊಟ್ಟಮ್ಮಳಿ ಗೊನೆ-ಗೋಳೀ ಮರಕ್ಕಾದರೆ ಮರಸಂಪ್ರತಿ ಫಲ; ಘನ ಬುದ್ಧಿ ಮಾಪಿಸಿಗೊಂಡೇ ಸಿದ್ಧಾರ-ಲಘು ಬುದ್ಧಿಯವರಿಗೆ ಮುಹೂರ್ತಕ್ಕೊಂದು.

೦೦ ೦೦ ೦೦

ಸಿಂಹದ ಭುಜದಲ್ಲಿರುವ ಕೇಸರ ಗಾಂಭೀರ್ಯವನ್ನು ಹೆಚ್ಚಿಸುತ್ತದೆ-ಗಮನವನ್ನು ತಡೆಯುವದಿಲ್ಲ, ಘನಸಂತನ ಶೀವಿಗಾರವನ್ನು ತರುತ್ತದೆ-ಗಳಿಕೆಯಿಸುವುದಿಲ್ಲ.

೦೦ ೦೦ ೦೦

ಬೆರಳಿಗೆ ಉಂಗುರ ವಿಟ್ಟರಾಯಿತು-ಕೈಗೆ ಬಳೆಯನ್ನು ತೊಡಬೇಕು. ಎಲ್ಲರಿಗಲ್ಲ ಸಂಘಟನೆ-ಅನುಭವದನ್ನು ಅತಿ ನಾರಿಯರನ್ನು ರಂಜಿಸಬೇಕು.

೦೦ ೦೦ ೦೦

ಮುಖವಿದಿರಿಲ್ಲದ ಮೇಲೆ ಕಣ್ಣು ಹಾಕೆ ಕರೆಯಬೇಕೆಂದೇನಿ ಹೃದಯ ಸಾಮ್ಯತೆಯಿದ್ದ ಮೇಲೆ ಕೃತಕೋಪಚಾರದಿಂದೇನು?

೦೦ ೦೦ ೦೦

ಎತ್ತರದ ಆನೆಗೆ ನೊಂಡಿಲು ಬೇಕು-ಗಿಡ್ಡ ಮೂಷಕಕ್ಕೆ ಮುಸುಡೇ ಸಾಕು. ಐಶ್ವರ್ಯವಂತನಿಗೆ ಜವಾರ ಪಹಿವಾಟು ಬೇಕು-ದುಡಿಯುವವನಿಗೆ ದುಡಿಮೆಯೇ ಸಾಕು.

೦೦ ೦೦ ೦೦

ಅಣುವನ್ನು ಪರೀಕ್ಷಿಸುವದಕ್ಕೆ ಭೂತಗನ್ನಡಿ ಬೇಕು ಹೊರತು ಪರ್ವತವನ್ನು ನೋಡಬೇಕಾದರೆ ವಿಶಾಲಾಕ್ಷಿ ಬೇಕೆಂದಿಲ್ಲ. ಅಲ್ಪ ಬುದ್ಧಿಯ ಅಂದಾಜು ಕಟ್ಟುವದೇ ಪ್ರಯಾಸ ಹೊರತು, ವಿಶಾಲ ಬುದ್ಧಿಯನ್ನರಿಯಲು ವಿಶೇಷ ಪ್ರಯಾಸವಿಲ್ಲ.

೦೦ ೦೦ ೦೦

ಜೀವವಿದ್ದರೆ ಮಾತ್ರ ನೋವು ಇದೆ; ಹೃದಯವಿದ್ದರೇನೇ ದುಃಖಜ್ಞಾನವಿದೆ.

—ತಾರುಣ್ಯ—

ಕೊಟ್ಟು, ವೀರ್ಯಸ್ತಂಭನೆ ಮಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು ರಮಣ ವಿಲಾಸಿನಿ ಅತ್ಯುತ್ತಮ ಔಷಧಿ. ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ,
184 ಚೈನಾ ಬಜಾರ್ ರೋಡ್,
ಮದ್ರಾಸು.

ದಕ್ಷಿಣ ಕನ್ನಡ ಏಜಂಟರು:—ಶ್ರೀ ಫಾರ್ಮಸಿ

ಚೂರು-ಚೂರು

'ನಿಜಕ್ಕೂ ಭಾರತೀಯ ಕಾಂಗ್ರೆಸ್ ಜನಪ್ರತಿನಿಧಿಯಲ್ಲ—ಅಲ್ಲಿಯ ಜನತೆಯಲ್ಲಿ ಇನ್ನೂರಕ್ಕೊಬ್ಬನಂತೆ ಮಾತ್ರ ಅದರ ಮೆಂಬರರಾಗಿದ್ದಾರೆ. ಅದು 'ರಾಷ್ಟ್ರೀಯ'ವಲ್ಲವೆಂಬುದಕ್ಕೆ 100ಮಿಲಿಯ ಮುಸ್ಲಿಮ್ಸ್, 50 ಮಿಲಿಯ ಅಸ್ಪೃಶ್ಯರ ಪ್ರತಿಭಟನೆಯಿಂದ ಸುವ್ಯಕ್ತ'—ಬ್ರಿಟನಿನ ಯುದ್ಧಮಂತ್ರಿ ಸರ್. ಜೇಮ್ಸ್ ಗ್ರಿಗ್.

'ಅಮೆರಿಯನ್ನೋಡಿಸಿರಿ' ಚಳವಳಿ ವಿಜಯಪ್ರದವಾದರೆ ಮುಂದಿನ ಭಾರತ ಸೆಕ್ರೆಟರಿ ಸರ್. ಗ್ರಿಗ್ಗರೇ ಸರಿ.

○

'ಸಾರ್ಡಿನಿಯಲ್ಲಿ ಸದ್ಯದಲ್ಲೇ ಮಿತ್ರಸೇನೆ ಮುತ್ತಿಗೆಯ ಸಿದ್ಧತೆ ನಡೆದಿದೆ'-ಪ್ಯಾರಿಸ್ ರೇಡಿಯೋ.

ಈ ಸಿದ್ಧತೆ ಮುಗಿಯುವಾಗ, ಈಗ ಸಿದ್ಧರಾಗಿರುವ ಸೋಲ್ಜರರು ಮುದುಕರಾಗದಂತೆಯೂ ನೋಡಿಕೊಳ್ಳಲಿ!

○

'ಜರ್ಮನರು ಉಕ್ರೈನಿನ ರಾಜಧಾನಿ ಕೀವ್ ನಗರವನ್ನು ಖಾಲಿಮಾಡಿದರು'-ಜರ್ಮನರಿಂದಲೇ ಮೊದಲಾಗಿ ವಾರ್ತೆ.

ಕೀವು (!) ಹೋದರೆ ನೋವು ತಾನಾಗಿ ಕಡಿಮೆಯಾಗುತ್ತದೆಂದು ಜರ್ಮನರಿಗೆ ಸಂತೋಷವೆ?

●

'ಬರ್ಮಾದಲ್ಲಿ ಜಾಪಾನೀ ಸೇನೆ ಬಹುಸಂಖ್ಯೆಯಿಂದ ಜಮೆಯಾಗುತ್ತಿದೆ-ಹಿಂದುಸ್ಥಾನಾಕ್ರಮಣದ ಯೋಜನೆಯಿರಬಹುದು'-ಚೀನೀಯರ ಎಚ್ಚರಿಕೆ.

'ಶಾಂತ ಸಮುದ್ರ ದ್ವೀಪಗಳಿಂದ ಓಡಿಸಲ್ಪಟ್ಟವರು ಬೇರೆ ಸ್ಥಳವಿಲ್ಲದೆ ದೆಸೆಯಿಂದ ಅಲ್ಲಿ ಅಡಗಿಕೊಳ್ಳುತ್ತಿರಬಹುದು'-ಬಹುಶಃ ಮಿತ್ರರ ಸಮಾಧಾನ.

●

"ಅಮೇರಿಕದ ಕಾರ್ಖಾನೆ, ಗಣಿಗಳ ಕೆಲಸಗಾರರಲ್ಲಿ ಮುಷ್ಕರರೋಗ ಹಬ್ಬುತ್ತಿದೆ'-ವಾರ್ತೆ.

ಆ ಕೆಲಸಗಾರರನ್ನೆಲ್ಲಾ 'ಲೀಸ್‌ಲೆಂಡ್' ಯೋಜನೆಯನ್ವಯ ಇಂಗ್ಲೆಂಡಿಗೆ ರವಾನಿಸಿದರೆ ಚರ್ಚಿಲ್ಲರೇ ನೋಡಿಕೊಂಡಾರು!

●

'ಕಾಂಗ್ರೆಸ್ ಧುರೀಣರ ಮೇಲೆ ಕೈಕೊಂಡಂತಹ ತೀವ್ರ ಕಠಿಣ ಕಾರ್ಯಾಚರಣೆಯು ಜನತೆಗಾಧಾರವೊದಗಿಸುವವರಲ್ಲೂ ಕೈಕೊಳ್ಳಲ್ಪಡಲಿಲ್ಲವೇಕೆ?'-ಪಾರ್ಲಿಮೆಂಟಿನಲ್ಲಿ ಮಿ. ಕೋನೆಯವರ ಪ್ರಶ್ನೆ.

ಯಾಕೆಂದರೆ ಕಾಂಗ್ರೆಸ್ ಧುರೀಣರು ಕೈಗೆ ಸಿಕ್ಕಿದರು-ಅಪಾರಸೀಡಿತರು ಕೈತಪ್ಪಿಹೋಗಿಬಿಟ್ಟರು!

—ವಿನೋದಿ.

ಯುದ್ಧ ಗತಿ

ಉಕ್ರೈನಿನ ರಾಜಧಾನಿ ಕೀವನ್ನು ಜರ್ಮನರಿಂದ ಬಿಡುಗಡೆಮಾಡಿಸಿ, ಕೆಂಪುಸೇನೆ ಯಾಕ್ರಮಿಸಿಕೊಂಡು ಮಹಾ ವಿಜಯ ಪಡೆದಿದೆ. ಎಲ್ಲಾ ಕಡೆಗಳಲ್ಲಿ ರಶ್ಯನ್ ಧಾಳಿ ಮುಂದೊತ್ತಿದೆ. ಕೆರ್ಚ್ ಸಮೀಪದಲ್ಲೂ ರಶ್ಯಾನರಿಳಿದಿದ್ದಾರೆ. ಪ್ರತಿ ದಿನ ಹದಿನೆಂಟರಷ್ಟು ಬೇರೆ ಬೇರೆ ನವೀನ ಧಾಳಿಯಾರಂಭಿಸುತ್ತಿರುವ ರಶ್ಯಾನರ ಹೊಡೆತದಿಂದ ಜರ್ಮನರ ಎಲ್ಲಾ ರಕ್ಷಣಾ ಲೈನುಗಳೂ ಸದ್ಯದಲ್ಲೇ ಕುಸಿದು ಬೀಳುವ ಸಿದ್ಧತೆಯಿದೆ. ಕಳೆದ ನಾಲ್ಕು ತಿಂಗಳ ಯುದ್ಧದಲ್ಲಿ 30 ಲಕ್ಷ ರಶ್ಯಾನರು ಮಡಿದರೆಂದು ಜರ್ಮನರೂ 27 ಲಕ್ಷ ನಾಜಿಗಳು ಹತರಾದರೆಂದು ರಶ್ಯನರೂ ಪ್ರಕಟಿಸಿದ್ದಾರೆ.

ಇಟೆಲಿ ಯುದ್ಧ ಪೃಥವಾಗಿ ಆದರೆ ಅತಿ ನಿಧಾನವಾಗಿ ಸಾಗಿದೆ. ಮಧ್ಯ ಇಟಲಿಯ ಹಲವು ನಗರಗಳು ಪುನಃ ಮಿತ್ರರ ವಶವಾಗಿವೆ. ರೋಮ್ ಸೇರುವ ರಸ್ತೆಗಳಲ್ಲೇ ಇನ್ನೂ ಮಿತ್ರ ಸೇನೆಗಳಿವೆ. ಮಧ್ಯ ರಂಗದಲ್ಲಿ ಮುಂದೊತ್ತುತ್ತಿರುವ ಎಂಟನೇ ಸೇನೆಗಿದಿರಾಗಿ ಈಗ 5 ಡಿವಿಜನ್ ಸೇನೆಗಳನ್ನು ಮಾರ್ಶಲ್ ಕೆಸ್ಸರ್‌ಲಿಂಗನ್ನು ಮುಂದೊಡ್ಡಿದ್ದಾನೆ.

ಶಾಂತ ಸಮುದ್ರದಲ್ಲಿ ಜಾಪಾನರ ಹಲವು ನೌಕೆಗಳನ್ನು ಮಿತ್ರರು ಮುಳುಗಿಸಿದ್ದಾರೆ. ಲಂಡನಿನ ಮೇಲೂ ಜರ್ಮನಿಯ ಹಲವು ಕಡೆಗಳಲ್ಲೂ ಬರ್ಮದ ಮೇಲೂ ಆಗಾಗ ವಿಮಾನ ಧಾಳಿಗಳು ನಡೆದಿವೆ.

● ರಶ್ಯಾ ಕ್ರಾಂತಿಯ 26ನೇ ವಾರ್ಷಿಕೋತ್ಸವ ಭಾಷಣವೀಯುತ್ತಾ ಸ್ಟಾಲಿನರು, ನಿಜವಾದ ದ್ವಿತೀಯ ರಂಗವು ಸದ್ಯದಲ್ಲೇ ನಿರ್ಮಾಣಗೊಳ್ಳುವದೆಂಬ ಆಶೆ ವ್ಯಕ್ತ ಮಾಡಿ, ಪೂರ್ಣ ವಿಜಯದ ಕಾಲ ಶೀಘ್ರ ತೀರಾ ಸಮೀಪದಲ್ಲಿದೆಯೆಂದೂ ಸೋವಿಯೆಟ್ ರಶ್ಯವು ಮೊದಲಿಗಿಂತಲೂ ಬಲಶಾಲಿಯಾಗಿ ಯುದ್ಧದಿಂದ ಹೊರಬೀಳುವದೆಂದೂ ತಿಳಿಸಿದ್ದಾರೆ.

● ಮದ್ರಾಸ್ ಪ್ರಾಂತ್ಯದ ನಿಜಾಮ ಪಟ್ಟಣ ಜಿಲ್ಲೆಯ ಕರಾವಳಿಯಲ್ಲಿ ಕಳೆದ ತಾ. 31ರಲ್ಲಿ ಭೀಕರ ಬಿರುಗಾಳಿ ಬೀಸಿ ಬೆಳೆ ಮನೆಗಳೆಲ್ಲೆಲ್ಲಾ ಹಾಳು ಬಿದ್ದಿವೆ. ಕೆಲವು ಪ್ರಾಣ ಹಾನಿಗಳೂ ಆಗಿವೆ. ಆದರೆ ಈ ಸುದ್ದಿಯನ್ನು ಇದೇ ತಾ 6.ರ ವರೆಗೂ ಸರಕಾರವು ಹೊರ ಹಾಕದಿದ್ದುದೊಂದು ಸೋಜಿಗ!

● ಪಾರ್ಲಿಮೆಂಟಿನ ಲೋರ್ಡ್ಸ್ ಸಭೆಯಲ್ಲಿ ಹಿಂದುಸ್ಥಾನಕ್ಕೂ 'ಪೆಸ್ಟ್ ಮಿನಿಸ್ಟರ್' ಸ್ಥಾನವಿರಬೇಕೆಂದು ಲೋರ್ಡ್ ಸ್ಟ್ರಾಬೋಲ್ಗಿಯವರು ತಂದ ಸೂಚನೆಯು ಪ್ರಥಮ ವಾಚನವೇ ವಿರೋಧಿಸಲ್ಪಟ್ಟು ಬಿದ್ದುಹೋಯಿತು.

ದ. ಕ. ಜಿಲ್ಲೆಯ ಮಟ್ಟಿಗೆ ರೆವಿನ್ಯೂ ಬೋರ್ಡಿನ ಶಿಫಾರಸುಗಳು.

1. ಮಂಗಳೂರು ಹಾಗೂ ಕಾಸರಗೋಡಿನ ನಗರಗಳಲ್ಲಿ ರೇಶನಿಂಗ್ ಜ್ಯಾರಿಮಾಡುವ ಆಶ್ವಾಸನೆ 2. ಸರಕಾರದ ಸ್ವಾಧೀನಕ್ಕೆ ಬರುವ ರಿಕ್ವಿಜಿಶನಿನ ಹಾಗೂ ಇತರ ಸಂಗ್ರಹವನ್ನೆಲ್ಲಾ ಮಂಗಳೂರು ಕೋಪರೇಟಿವ್ ಸ್ಟೋರ್ಸ್ಸು ಮತ್ತು ಅದರ ಶಾಖೆಗಳಿಗೊಪ್ಪಿಸುವಂತೆ ಅಧಿಕಾರಿಗಳನ್ನು ಕೇಳಿಕೊಳ್ಳಲಾಗಿದೆ. 3. ತಾಲೂಕು ಕೇಂದ್ರಗಳಿಗೆ ವರ್ಗದಾರರು ತಂದೊಪ್ಪಿಸುವ ಅಕ್ಕಿ ಮುಡಿಯೊಂದಕ್ಕೆ ರೂ.10ರಂತೆ ಅವರಿಗೆ ಕೊಡಲಾಗುವದು. ಆದರೆ ಈ ಅಕ್ಕಿಯನ್ನು ಒಕ್ಕಲುಗಳಿಂದ ಸ್ವಾಧೀನಪಡಿಸಿಕೊಳ್ಳಲಾಗುವದೋ ವರ್ಗದಾರರಿಂದ ಪಡೆಯಲಾಗುವದೋ ಎಂಬುದು ಸ್ಪಷ್ಟವಾಗಿಲ್ಲ.

ರೆಕ್ವಿಸಿಶನ್ ವಿರೋಧಗಳು.

ಪರ್ಕಳದಲ್ಲಿ ಶ್ರೀ. ಬಡಗಬೆಟ್ಟು ರಾಮಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಕಳೆದ 29.ರಲ್ಲಿ ರೈತರ ಸಭೆಸೇರಿ ನಿವೇದಿಸಿತು. ಈ ಕುರಿತು ಮದ್ರಾಸ್ ಪ್ರಾಂತಿಕ ಕಂದಾಯ ಖಾತೆಯವರು ಸರಕಾರಕ್ಕೆ ಮಾಡಿದ ಶಿಫಾರಸುಗಳನ್ನು ಸಹಕಾರಿ ಸಂಘಗಳ ಡಿಪ್ಯುಟಿ ರಿಜಿಸ್ತ್ರಾರರೂ ಜಿಲ್ಲಾ ಕೋಪರೇಟಿವ್ ಹೋಲ್ ಸೇಲ್ ಸ್ಟೋರ್ಸಿನ ಪ್ರೆಸಿಡೆಂಟರಾದ ಶ್ರೀ ಮೊಳಹಳ್ಳಿ ಶಿವರಾಯರೂ ತಾ 9ರಲ್ಲಿ ಸಂಜೆ ಉಡುಪಿ ಮುನಿಸಿಪಲ್ ಹೈಸ್ಕೂಲ್ ಶಾಲೆಯಲ್ಲಿ ಕೂಡಿದ ಪೂರ್ವ ಪೀಠಿಕಾ ಸಭೆಯಲ್ಲಿ ವಿವರಿಸಿ ಹೇಳಿದರು. ಈ ಸಂಬಂಧವಾಗಿ ದ. ಕ. ವರ್ಗದಾರ ಸಂಘದಿಂದ ಬಂದ ಸವಿವರ ಹೇಳಿಕೆಯನ್ನು ಮುಂದಿನವಾರ ಪ್ರಕಟಿಸಲಾಗುವದು.

ನೋಟೀಸು.

ಉಡುಪಿ ತಾಲೂಕು ರೈತರ ಅವಗಾಹನೆ ಬಗ್ಗೆ.

ನಮ್ಮ ಜಿಲ್ಲೆಯಲ್ಲಿ ಆಗುತ್ತಿರುವ ಬತ್ತ ಅಕ್ಕಿ ರಿಕ್ವಿಜಿಶನ್ ಕುರಿತು ಸ್ವತಃ ವಿಚಾರಿಸಿ ತನಿಕೆ ನಡೆಸುವ ಬಗ್ಗೆ ಮಾನ್ಯ ಗವರ್ನರರ ಎಡ್ವೈಸರರಾದ ಶ್ರೀ ಎಸ್. ವಿ. ರಾಮ ಮೂರ್ತಿ, ಸಿ. ಐ. ಇ., ಐ. ಸಿ. ಯಸ್., ಇವರು, ನಮಗೆ ಬರೆದ ತಾ 5-11-43ರ ಪತ್ರದಂತೆ ಇದೇ ತಾ ತಾ. 23-11-43ಕ್ಕೆ ಉಡುಪಿಗೆ ಸಂದರ್ಶಿಸಲಿರುವರು. ಆ ದಿನ ಉಡುಪಿ ತಾಲೂಕಿನ ರೈತರೆಲ್ಲರೂ ದಯಮಾಡಿ ಆಗತ್ಯ ಬರಬೇಕಾಗಿ ಅಪೇಕ್ಷಿಸುತ್ತೇನೆ.

ಅದಲ್ಲದೆ ಮಾನ್ಯ ಎಡ್ವೈಸರರಿಗೆ ಸಾಮೂಹಿಕವಾಗಿ ನಿವೇದಿಸಿಕೊಳ್ಳಲು ನಮ್ಮ ಸಂಕಷ್ಟಗಳೇನು ಅವನ್ನು ನಿವಾರಿಸಿಕೊಳ್ಳಲು ಯಾವ ಯೋಜನೆಯನ್ನು ಕೈಕೊಳ್ಳಬಹುದು ಎಂಬಿತ್ಯಾದಿ ಅತ್ಯಾವಶ್ಯಕ ವಿಷಯಗಳನ್ನು ಒಟ್ಟಾಗಿ ಆಲೋಚಿಸುವ ಬಗ್ಗೆ ತಾ. 15-11-43ನೇ ಸೋಮವಾರ ದಿನ ಸಂಜೆ 4ಗಂಟೆಗೆ ಉಡುಪಿ ನವಯುಗ ಪ್ರೆಸ್ಸಿನ ಮಾಳಿಗೆಯಲ್ಲಿ ನಮ್ಮ ತಾಲೂಕಿನ ವರ್ಗದಾರರ ಸಂಘದ ಒಂದು ಸಭೆಯು ಜರಗಲಿಕ್ಕಿದೆ. ಅದಕ್ಕೆ ಪ್ರತಿ ಗ್ರಾಮದ ಕನಿಷ್ಟ ಪಕ್ಷ ಒಬ್ಬೊಬ್ಬ ಪ್ರತಿನಿಧಿಯಾದರೂ ಬರಬೇಕಾಗಿಯೂ ವಿನಂತಿ.

ಈ ಮೊದಲು ನವಯುಗದಲ್ಲಿ ಪ್ರಕಟಿಸಿದಂತೆ ಮಾಹಿತಿಗಳು ಆಗತ್ಯವಿರುವುದರಿಂದ ಅವುಗಳನ್ನು ಕೂಡಲೇ ಕಳಿಸಿಕೊಡುವಂತೆಯೂ ಕೇಳಿ ಕೊಳ್ಳುತ್ತೇನೆ.

ಕೆ. ಜೆ. ಬಲ್ಲಾಳ, ಅಧ್ಯಕ್ಷ

Degrees: Books: Medicines
Free B. L. M. S, M, B. H. M, D, etc. Free Homeo-Ayur- UnaniNaturo degree by post also—Practitioner also get soon Homeo Materiamedica, Rs. 5 Homeo Practice book Rs. 4, Insanity Cure Pills Rs. 10 Enclose 2 annas stamp:—
Prof. Dr. N. H. Chhatbar,
Principal Indian Homeopathic Institute & Society (Govt. Regd)
P.O. MAHUVA (Kathiawar Dt. India.)
Sidha-Kalpa Kavach (Regd.)
No. 3 Rs 2. No. 2 Rs. 5 No. 1 Rs. 7 Special Rs. 10, Extra Special Rs 17 fo ove marriage health, wealth. Ask an six questions with M. O. Re. 1/4 an get correct answers by returnpost Life reading Rs.10 No V.P.P.SendM.O.Free, pmplets.
Prof. Dr. N. H Chhatbar,
P. O. MAHUVA (Kathiawar India.)

ಕೇರಳ
ಘನತರ
'ಡೆಂಟಿಫ್ರಿಸ್' ದಂತಚೂರ್ಣ
ಹಲ್ಲುರೋಗಗಳಿಗೆ ಅತ್ಯುತ್ತಮ.
●
ಶಾಸ್ತ್ರೀಯರೀತ್ಯಾ ತಯಾರಿಸಲ್ಪಟ್ಟುದು
ಮತ್ತು
ಮಿತ ದರದಲ್ಲಿ ಮಾರಾಟಮಾಡಲ್ಪಡುವುದು.
ಕಾರ್ಡುಬೋರ್ಡು ಪೊಟ್ಟಣಗಳಲ್ಲೂ 'ಬೇಕಲೈಟ್' ಕರಡಿಗೆಗಳಲ್ಲೂ ಸೀಸೆಗಳಲ್ಲೂ ಭದ್ರವಾಗಿರಿಸಲ್ಪಟ್ಟಿದೆ.
ತಯಾರಿಸಿದವರು:
ಕೇರಳಾ ಸೋಪ್ ಇನ್ಸ್ಟಿಟ್ಯೂಟ್, ಕಲ್ಲಿಕೋಟೆ
(ಸರಕಾರೀ ಸಂಸ್ಥೆ)
K. S. I. I.

ಕನ್ನಡದಲ್ಲಿ ವಿಠಲ ಭಕ್ತನೊಬ್ಬರ ಜೀವನ ಚರಿತ್ರೆಯು ಚಿಪಟಚಿತ್ರವಾಯಿತು.
(ಕನ್ನಡ) ಪುರಂದರದಾಸ
ತ್ರಿಪುರಾಂಬ, ಲಲಿತ ಮೊದಲಾದವರು.
ತಾ. 10—11—43ರಿಂದ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ
ಬರುವ ಚಿತ್ರ:-ಅತಿ ನವೀನ ರೀತಿಯ ಸಾಹಸ ಸುಖೀ ಜೀವನ್

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

R. E. P. No. 1073/1942.
O. S. 646/1930

ಮಂಜುನಾಥ ಕಮ್ತಿ - ಅರ್ಜಿದಾರ
ದೂಮಪ್ಪ ಆಚಾರಿ - ಎದ್ರಿ

ಭದ್ರಾಚಾರಿ ಮಗ. ಮಂಗಳೂರು ತಾಲ್ಲೂಕು ಬಳೆ ಸಾಡಿಗ್ರಾಮದ ಕೊಲ್ಲೊಟ್ಟು ಎಂಬಲ್ಲಿರುವವ..

ಸದ್ರಿ ಎದ್ರಿಗೆ ಈ ಮೂಲಕ ತಿಳಿಸುವದೇನೆಂದ್ರೆ- ಸದ್ರಿ ಅಪ್ಲಿಕೇಶನಿಯಲ್ಲಿ ಎದ್ರಿಯ ಕುಟುಂಬದ ಬಾಬ್ತು ಸ್ಥಿರಾಸ್ತಿಗಳನ್ನು ಯೇಲಂಗೆ ಅಪೇಕ್ಷಿಸಿ ಅರ್ಜಿದಾರನು ದಾಖಲುಮಾಡಿದ ಯೇಲಂ ಯಿಸ್ತಿಹಾರಿನ ಡ್ರಾಫ್ಟು ಮಂಜೂರುಮಾಡುವ ಬಗ್ಗೆ ಮತ್ತು ಸದ್ರಿ ಆಸ್ತಿಗಳು ಯೇಲಂ ಸಮಯ ಅರ್ಜಿದಾರಗೆ Bid ವ Set off ಪರ್ಮಿಟ್ ಕೊಡಿಸಬೇಕಾಗಿ ಅರ್ಜಿದಾರನು ಕೊಟ್ಟ R E A 519/43ನೇ ಅರ್ಜಿ ಕೂಡಾ ತಾರೀಕು 17-11-43ಕ್ಕೆ ಯಿಟ್ಟಿರುವದ್ರಿಂದ ಆ ಕುರಿತು ಆಕ್ಷೇಪಯಿದ್ದರೆ ಸದ್ರಿ ದಿವಸ 10ಗಂಟೆಗೆ ಕೋರ್ಟಿನಲ್ಲಿ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

ಕೋರ್ಟು ಹುಕುಂ ಪ್ರಕಾರ
ಎಂ. ಎಸ್. ಅಧಿಕಾರಿ.
ಅರ್ಜಿದಾರನ ಕಡೆ ವಕೀಲ.

ಕಾರ್ಕಳ
ತಾ 31 10-43

ನೋಟೀಸು.

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. P. ನಂಬ್ರ 77/1943.

ಸೇತ್ರಾವತಿ ಹೆಗಡ್ತಿ, ಓರ್ವಾಡಿ ರಾಧಮ್ಮ ಹೆಗಡ್ತಿರ ಮಗಳು. ಉಡುಪಿತಾಲೂಕು ಶಿರ್ವಾಗ್ರಾಮ —ಅರ್ಜಿದಾರಳು.

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವದೇನೆಂದ್ರೆ.—

ಅರ್ಜಿದಾರಳ ಮಗ.ಓರ್ವಾಡಿ ರಘುರಾಮ ಹೆಗ್ಡೇರು ಶಿರ್ವಾ ಗ್ರಾಮದಲ್ಲಿ ತಾ 25-9.43ರಲ್ಲಿ ಮೃತಪಟ್ಟಿರುವದ್ರಿಂದ.ಆತನು-ದಿ. ಪೊಪ್ಯುಲರ್ ಇನ್ಷ್ಯುರನ್ಸ್ ಕೊ. ಲಿಮಿಟೆಡ್, ಮಂಗಳೂರು. ಈ ಕಂಪೆನಿಯಲ್ಲಿ ಪಡದ ನಂಬ್ರ 5804ನೇ ಪೋಲಿಸಿ ಪ್ರಕಾರ ಬರಾ ಪ್ರೀಮಿಯಮ್-ಬೋನಸ್ಸು ವಗೈರೆ ಹಣವನ್ನು ಪಡಿಯುವರೆ ಕೂಡಾ ತಾನು ವಾರಸುದಾರಳೆಂತಲೂ-ತನ್ನ ಹೆಸರಿಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕೆಂತಲೂ ಸಹಾ ಅರ್ಜಿದಾರಳು ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಸದ್ರೀ ಅರ್ಜಿಯು 2-12-43ಕ್ಕೆ ಹಗಲು 11 ಗಂಟೆಗೆ ತನ್ಕಿಗೆ ಯಿಟ್ಟಿರುತ್ತದೆ ಅರ್ಜಿ ಕುರಿತು ಆಕ್ಷೇಪ ಹೇಳತಕ್ಕವರು ಮೇಲ್ಕಂಡ ಕೋರ್ಟು ಮಮುಂದೆ ಸದ್ರೀ ದಿವಸ ತಕ್ಕ ಸಮಯ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು- ತಪ್ಪಿದ್ರೆ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದು-

K. J. Ballal
Vakil for Petitioner.

ಉಡುಪಿ, ದ. ಕ.
ತಾರೀಕು 6-11-43

ಪ್ರಕಟಣೆ.

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisserri.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ- ಪರಸಿನಿ ಕಡವು ದೇವಸ್ಥಾನದಿಂದ ನಡೆಸುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಮ್ಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು, ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುನ್ನಿರಾಮನ್,
ಮನೇಜರ್

ದಕ್ಷಿಣ ಕನ್ನಡ.

ಮಂಗಳೂರು.

ಜಿಲ್ಲೆಯಲ್ಲಿ ಅಕ್ಕಿ ಸರಬರಾಯಿ ಮತ್ತು ವಿತರಣೆಯ ವ್ಯವಸ್ಥೆ:— ಜಿಲ್ಲಾ ಸಹಕಾರಿ ಸಂಘಗಳ ಸಹಾಯವನ್ನು ಪಡೆದು, ಜಿಲ್ಲೆಯ ಆಹಾರ ಸಂಕಷ್ಟವನ್ನು ಪರಿಹರಿಸಬೇಕೆಂದು ಪ್ರಾಂತಿಕ ಕಂದಾಯ ಸಮಿತಿಯವರು (ಬೋರ್ಡ್ ಆಫ್ ರೆವಿನ್ಯೂ-ಸಿವಿಲ್ ಸಪ್ಲೈಸ್) ಸರಕಾರಕ್ಕೆ ಸಲಹೆ ಕೊಟ್ಟಿರುವರು. ಅವರು ಬಿಕ್ಕಟ್ಟಿನ ಪರಿಹಾರಕ್ಕೆ ತೋರಿಸುವ ಹಾದಿ ಇದು: 'ದ. ಕ. ಜಿಲ್ಲೆಯಲ್ಲಿ ವ್ಯಾಪಾರಿಗಳೂ ಭೂಮಾಲಿಕರಲ್ಲಿ ಒಂದು ವಿಭಾಗದವರೂ ಒಂದಾಗಿ ಬೆಲೆ ಏರಿಸಿ ಏರುವಂತೆ ಮಾಡಿದ್ದಾರೆ. ಅಂತಹ ವ್ಯಾಪಾರಿಗಳನ್ನು ಸಹಕಾರ ಸಂಘಗಳವರು ಹೊರಗೋಡಿಸುವ ಕಾಲವೀಗ ಬಂದಿದೆ. ಬತ್ತ ಮತ್ತು ಅಕ್ಕಿಯನ್ನು ಕೊಂಡುಕೊಂಡು ಕಲೆಕ್ಟರರ ನೇತೃತ್ವದಲ್ಲಿ ಅದರ ವಿತರಣವನ್ನು ಮಾಡಲು ಜಿಲ್ಲಾ ಹೋಲ್‌ಸೇಲ್ ಸ್ಟೋರು ಸಿದ್ಧವಿದೆ ಎಂದು ಮದ್ರಾಸಿನ ಕೋ-ಆಪರೇಟಿವ್ ಸ್ಟೋರ್ಸ್‌ಗಳ ರೆಜಿಸ್ಟ್ರಾರರು ಹೇಳಿರುವರು.

'ಶಾಲೂಕು ಕೇಂದ್ರಗಳಿಗೆ ಮುಡಿಗೆ ರೂ. ೧೦ರಂತೆ ಅಕ್ಕಿಯನ್ನು ತಂದೊಪ್ಪಿಸಲು ಭೂಮಾಲಿಕರು ಸಿದ್ಧರಿರುವರೆಂದು ಬೋರ್ಡು ತಿಳಿಯುತ್ತದೆ. ಈ ಬೆಲೆ ನ್ಯಾಯವಾದುದು. ಅಕ್ಕಿಯನ್ನು ಶೇಖರಿಸಿ ಒಯ್ಯುವ ನಿಜವಾದ ವೆಚ್ಚವಲ್ಲದೆ ಮುಡಿಯಲ್ಲಿ ಹೆಚ್ಚಿಗೆ ನಾಲ್ಕಾಣೆಯನ್ನು ಸ್ಟೋರುಗಳು ಲಾಭ ಪಡೆಯಲು ಸಮ್ಮತಿಸಬೇಕು.

'ಮಂಗಳೂರು ಮತ್ತು ಕಾಸರಗೋಡುಗಳಲ್ಲಿ ಹಸುಗೆ ಪದ್ಧತಿಯನ್ನು (ರೇಶನಿಂಗ್) ಜಾರಿಗೆ ತರಲು ಪ್ರತ್ಯೇಕ ಆಜ್ಞೆಗಳನ್ನು ಕೊಡಲಾಗಿದೆ.

'ಸ್ವಾಧೀನ ಪಡಿಸಿಕೊಂಡದು ಭತ್ತವಾದರೆ ಸ್ಟೋರಿನವರೇ ಅದನ್ನು ಕುಟ್ಟಿಸಿ, ಅಕ್ಕಿಯಾಗಿ ಮಾರ್ಪಡಿಸಬೇಕು—'

ವಿದ್ಯಾರ್ಥಿಗಳೊಳಗೆ ಸಂಧಿಯನ್ನು ಸಾಧಿಸುವ ಯತ್ನವೊಂದು ಕಳೆದ ವಾರ ನಡೆದು ವಿಫಲವಾಯಿತು. ಶ್ರೀಯುತರು ಕೆ. ಕೆ. ಶೈ ಮತ್ತು ಬಿ. ಎಸ್. ಭಾಸ್ಕರ ಶೈ ಇವರು ಮಧ್ಯಸ್ಥಿಕೆ ವಹಿಸಿದ್ದರು. ಹಿಂದೆಯೇ ಇದ್ದ ಯೂನಿಯನಿನವರೂ ಸಂಧಿಗೆ ಸಿದ್ಧವಿದ್ದರು. ಕಳೆದ ವರ್ಷ ಸ್ಥಾಪಿಸಲ್ಪಟ್ಟ ಹೊಸ ಯೂನಿಯನಿನವರು, ಇತ್ತಂಡಗಳ ಪ್ರತಿನಿಧಿಗಳನ್ನೂ ಸೇರಿಸಿ ಆರಿಸಲ್ಪಟ್ಟ ಐಕ್ಯದ ಹೊಸ ಕಾರ್ಯಕಾರಿ ಸಮಿತಿಯನ್ನು ಮಂಜೂರು ತಿಗಾಗಿ ಮಹಾ ಸಭೆಯ ಎದುರಿಗಿಡಲು ಒಪ್ಪಲಿಲ್ಲ. ತತ್ಫಲವಾಗಿ ಸಂಧಿಯತ್ನ ಮುರಿದು ಬಿತ್ತು.

ಉಡುಪಿ.

ತಾ. ೩ರಲ್ಲಿ ಕೆನರಾ ಮ್ಯೂಚುವಲ್ ಬಿಲ್ಡಿಂಗಿನಲ್ಲಿ ಶ್ರೀ ಬಿ. ಅಚ್ಯುತ ಬಾಳಿಗಾರವರು ಎಕೆಡೆಮಿ ಆಫ್ ಜನರಲ್ ಎಡ್ಯುಕೇಶನಿನ ಬ್ಯಾಂಕಿಂಗ್ ಮತ್ತು ಇನ್ಸೂರೆನ್ಸ್ ವಿಭಾಗದ ವಿದ್ಯಾರ್ಥಿಗಳಿಗೆ "ಸೇವೆ" (service) ವಿಷಯ ಭಾಷಣಗಿತ್ತರು. ಶ್ರೀ ರಾಮಕೃಷ್ಣ ವಿಶ್ವನಿನ ಟ್ರಸ್ಟಿಯರ್ ಶ್ರೀ ಸ್ವಾಮಿ ಅಜದಾನಂದರು ಅಗ್ರಾಸನ ವಹಿಸಿದ್ದರು.

ದಿವಂಗತ ಆರ್ಟಿಸ್ಟ್ ಪಿ. ಶ್ರೀನಿವಾಸರಾಯರ ಸ್ಮಾರಕ ದಿನಾಚರಣೆಯು ತಾ. 8-11-43ರಲ್ಲಿ ಶ್ರೀ ಯು. ಎ. ಪೈಗಳ ಅಧ್ಯಕ್ಷತೆಯಲ್ಲಿ, ಮಾಡರ್ನ್ ಸ್ಟುಡಿಯೋದಲ್ಲಿ ಜರಗಿತು. ದಿವಂಗತರ ಕಲಾನೈಪುಣ್ಯದ ಕುರಿತು ಶ್ರೀಗಳಾದ ಎಲ್. ಡಿಸ್ಸಾ, ಪಿ. ಶೀನ ಶೆಟ್ಟಿ ಮತ್ತು ಜನಾರ್ದನ ಅಲ್ಸೆ ಇವರು ಮಾತನಾಡಿದರು. ಅಧ್ಯಕ್ಷರ ಭಾಷಣಾನಂತರ ಉಪಾಹಾರದೊಂದಿಗೆ ಸಭಾಂತ್ಯವಾಯಿತು.

ಸತ್ಕಾರ ಕೂಟ:— ಎಕೆಡೆಮಿ ಆಫ್ ಜನರಲ್ ಎಡ್ಯುಕೇಶನ್ ಎಂಬ ಔದ್ಯೋಗಿಕ ಶಿಕ್ಷಣ ನಿಲಯವು ನಡೆಸುತ್ತಿರುವ ವಿಮಾ ಶಿಕ್ಷಣ ತರಗತಿಯ ವಿದ್ಯಾರ್ಥಿಗಳಿಗೆ ವಿಮಾ ಶಾಸ್ತ್ರದ ಕುರಿತು ಉಪನ್ಯಾಸ ಮಾಲೆಯನ್ನೀಯಲು ಬಂದಿದ್ದು ಉಪನ್ಯಾಸಾವಳಿಯನ್ನು ಪೂರೈಸಿ ತೆರಳುವ ವಿಮಾ ಶಾಸ್ತ್ರ ವಿಶಾರದ ಪ್ರೊ. ಕೆ. ಬಿ. ಮಾಧವ ಎಕ್ಚ್ಯುರಿ, ಇವರಿಗೆ ಕೃತಜ್ಞತಾಪೂರ್ವಕ ವಿದಾಯವನ್ನೀಯು ಸಮಾರಂಭವನ್ನು ವಿದ್ಯಾರ್ಥಿಗಳು ಕಳೆದ ತಾ. ೬ರಂದು ಕೆನರಾ ಮ್ಯೂಚುವಲ್ ಭವನದಲ್ಲಿ ಎಕೆಡೆಮಿಯ ರಿಜಿಸ್ಟ್ರಾರರುಗಳಾದ ಡಾ| ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿಸಿದರು. ಲಘು ಉಪಹಾರದ ನಂತರ ಡಾ| ಪೈಗಳವರು ಆರಂಭ ಭಾಷಣವನ್ನಿತ್ತರು. ಅನಂತರ ಶ್ರೀಗಳಾದ ಮಂಡಳೀಕ ಶೆಣೈ, ಟಿ. ಎ. ಪೈ, ನಾರಾಯಣ ಶೆಣೈ, ಕೊರಡ್ಕಲ್ ಶ್ರೀನಿವಾಸ ರಾವ್ ಇವರುಗಳು ಮಾತನಾಡಿದರು. ಧನ್ಯವಾದಾರ್ಪಣೆಯೊಂದಿಗೆ ಅವರಿಗೆ ಸರಿಮಾನಂದದ ವಿದಾಯವನ್ನೀಯಲಾಯಿತು.

ದಕ್ಷಿಣ ಕನ್ನಡವೂ ಬಂಗಾಳವಾಗಬೇಕೆ?

ಕಳೆದ ಮಾರ್ಚ್, ಎಪ್ರಿಲ್‌ಗಳಲ್ಲಿ ಅಕ್ಕಿ ರೆಕ್ವಿಸಿಶನ್‌ಗೆ ಪ್ರಾರಂಭವಾಯ್ತು. ಹೆಚ್ಚಿನ ವರ್ಗದಾರರೆಲ್ಲ ತಮ್ಮ ಅಕ್ಕಿಯನ್ನು 8 ರೂಪಾಯಿಯಲ್ಲಿ ಮಾರಿ ಬಿಟ್ಟರು. ರೆಕ್ವಿಸಿಶನ್ ಆದ ಅಕ್ಕಿಯ ಕೆಲವಂಶ, ಅಲ್ಲಿ ಇಲ್ಲಿ ಏನೋ ಒಂದು ರೀತಿಯಲ್ಲಿ ಕಮ್ಮಿ ಕ್ರಯದಲ್ಲಿ ಮಾರಲ್ಪಟ್ಟಿತು. ಇನ್ನು ಕೆಲವಂಶ ಇನ್ನೂ ಸರ್ಕಾರದವರಿಂದ ಕೊಂಡುಹೋಗಲಾಗಲ್ಪಡದೆ ಹಾಳಾಗಿ ಹೋಗುತ್ತಿದೆ. ಬಜಾರದಲ್ಲಿರುವ ಹದಿನಾಲ್ಕು ಹದಿನಾಲ್ಕುವರೆ ರೂಪಾಯಿಯ ಅಕ್ಕಿಯನ್ನು ಕೊಂಡು ಉಣ್ಣುವ ಯೋಗ್ಯತೆಯಿಲ್ಲದೆ ಬಡವರ ನೇಕರು ಕಾಲರಾ ವಗೈರೆ ಭಯಂಕರ ಪೀಡೆಗೊಳಗಾಗಿದ್ದಾರೆ.

ಈ ಮಧ್ಯದಲ್ಲಿ ಈಗಲೆ ಬತ್ತವನ್ನೇ ರೆಕ್ವಿಸಿಶನ್ ಮಾಡುವ ರಭಸ, ಈ ವರ್ಷ ಅಕಾಲ ವೃಷ್ಟಿ, ಕಳೆ ಮತ್ತು ಕೊಯ್ಯುವ ಸಮಯದಲ್ಲಿ ಇದ್ದ ಮಳೆಯ ದೆಸೆಯಿಂದ ಸೇಕಡಾ 30ರಷ್ಟು ಬೆಳೆಯು ನಷ್ಟವಾಗಿರುವದು ಎಲ್ಲರಿಗೂ ಅನುಭವವೇ. ಉಳಿದ ಸೇಕಡಾ 70ರಲ್ಲಿ 50 ರೆಕ್ವಿಸಿಶನ್ ಮಾಡಬೇಕೆಂದು ನಿಯಮ. ಆದರೆ ದುರ್ದೈವವಶಾತ್ ಕೆಲವು ಕಡೆಗಳಲ್ಲಿ ಎಲ್ಲವೂ ರೆಕ್ವಿಸಿಶನ್ ಆದರೂ ಇಲ್ಲವೆಂದಿಲ್ಲ. ಭತ್ತವನ್ನೇ ಕೊಂಡುಹೋಗಿ ಒಡವೆಗೆ ನಾಲ್ಕಾರು ತಿಂಗಳ ಕಷ್ಟವನ್ನು ಅಪಹರಿಸಿ, ಜನಕರುಗಳ ಬಾಯಿಗೂ .....

ಕೂಡಾ ಸಿಕ್ಕದೆ ಮುಂದಿನ ಸಾಗುವಳಿಯ ಅನುಕೂಲತೆಯನ್ನೂ ತಪ್ಪಿಸಿದರೆ ಯಾವರೀಗೆ ಬೇರೆ ಕಡೆಗಳಿಗೆ ಅನ್ನ ಒದಗಿಸುವ ದಕ್ಷಿಣ ಕನ್ನಡವೂ ಬಂಗಾಳವಾಗುವ ದಿನವು ದೂರವಿಲ್ಲವೆಂದ ಹಾಗಾಯಿತು.

ಮಾನ್ಯ ಸರ್ಕಾರಕ್ಕೆ ಈ ವಿಪತ್ತನ್ನು ಪರಿಹರಿಸಲಿಕ್ಕೆ ಉಪಾಯವಿಲ್ಲವೆಂದಲ್ಲ. ಮೊದಲಾಗಿ ಬತ್ತ ಮತ್ತು ಅಕ್ಕಿಯ ಮಾರಾಟವು ಸರ್ಕಾರವೇ ತೆಗೆದುಕೊಂಡು ಪ್ರತಿ ಎರಡು ಮೈಲಿಗೊಂದು ಬತ್ತ ಮತ್ತು ಅಕ್ಕಿಯ ವಹಿವಾಟದ ಕೇಂದ್ರವನ್ನು ತೆರೆಯಬೇಕು. ವರ್ಗದಾರರು ತಮ್ಮಲ್ಲಿ ಜಮಾ ಆಗುವ ಅಕ್ಕಿ ಮತ್ತು ಬತ್ತದಲ್ಲಿ ಖರ್ಚು ಕಳೆದು ಉಳಿದುದನ್ನು ಇದೇ ಕೇಂದ್ರಕ್ಕೆ ಕೊಡಬೇಕು. ಫೆಬ್ರವರಿ ಮಾರ್ಚ್, ಎಪ್ರಿಲ್, ಮೇ ಯೀ ನಾಲ್ಕು ತಿಂಗಳುಗಳಲ್ಲಿಯಾದರೂ ತಮ್ಮ ಅಕ್ಕಿ ಮತ್ತು ಬತ್ತವನ್ನು ನಗದಿ ತೆಗೆದುಕೊಂಡು ಯಾ ಡಿಪೋಗಳಿಗೆ ಕೊಡದಿದ್ದ ರೈತನ ಅಕ್ಕಿ ಬತ್ತವನ್ನು ರೆಕ್ವಿಸಿಶನ್ ಮಾಡಿದರೆ ತಪ್ಪಾಗುವುದಿಲ್ಲ. ಆಗ್ಗೆ ಎಲ್ಲಾ ಕಡೆಗಳಲ್ಲೂ ಬೇಕಾದಷ್ಟು ಅಕ್ಕಿಯೂ ಸಿಕ್ಕುತ್ತದೆ. ಅಕ್ಕಿಯ ಕ್ರಯವೂ ಹತೋಟಿಯಲ್ಲಿ ನಿಲ್ಲುತ್ತದೆ. ರೈತನ ಗೋಳೂ ನಿವೃತ್ತಿಯಾಗ ವುದು ಅಕ್ಕಿ ನೂಯವಾಗಲಿಕ್ಕೂ ಆಸ್ಪದವಿಲ್ಲ.

ಸೀತಾರಾಮ ಧೋರಿ ಬಲ್ಲಾಳ.

ಕಟಪಾಡಿ ರೈತರ ಸಭೆಯ ನಿರ್ಣಯ— ಪ್ರಕೃತ ಜ್ಯಾರಿ ಮಾಡಿ ಎವ ರೆಕ್ವಿಸಿಶನ್ ಕಾರ್ಯಕ್ರಮವನ್ನು ಕೂಡಲೇ ರದ್ದುಪಡಿಸಬೇಕಾಗಿಯೂ, ಅಕ್ಕಿ ಮತ್ತು ಬತ್ತದ ವ್ಯಾಪಾರದ ವಹಿವಾಟನ್ನು ಸರಕಾರದವರು ತಮ್ಮ ಸ್ವಂತ ಹತೋಟಿಯಲ್ಲಿಯೇ ಇಟ್ಟುಕೊಂಡು ಖಾಸಗಿ ಜನರಿಂದ ಅಕ್ಕಿ ಬತ್ತದ ವ್ಯಾಪಾರ ನಡೆಯಲಿಕ್ಕೆ ಆಸ್ಪದ ಕೊಡದಂತೆಯೂ, ರೈತರು ತಮ್ಮಲ್ಲಿ ಜಮೆ ಆಗಿ ಖರ್ಚು ಕಳೆದು ಉಳಿಯುವ ಅಕ್ಕಿಯನ್ನು ಸರ್ಕಾರಿ ಡಿಪೋಗಳಿಗೆ ಸ್ವೇಚ್ಛೆಯಿಂದ ಫೆಬ್ರವರಿ ಮಾರ್ಚ್ ಎಪ್ರಿಲ್, ಮೇ ಈ ನಾಲ್ಕು ತಿಂಗಳುಗಳಲ್ಲಿ ಒಪ್ಪಿಸದೆ ಇದ್ದರೆ ಮಾತ್ರ ಅಂತಹ ರೈತರಲ್ಲಿ ಆಯಾಯ ಮಾದೆ ನಂತರ ರೆಕ್ವಿಸಿಶನ್ ಕ್ರಮವನ್ನು ಜ್ಯಾರಿಗೆ ತರಬಹುದೆಂತಲೂ, ಸ್ವೇಚ್ಛೆಯಿಂದ ತಂದು ಒಪ್ಪಿಸುವ ಕನಿಷ್ಠ ತರಗತಿಯ ಅಕ್ಕಿಗೆ ಕನಿಷ್ಠ ಪಕ್ಷ ರೂಪಾಯಿ ಹತ್ತರಂತೆ ಕ್ರಯವನ್ನು ಕೊಡಬೇಕಾಗಿಯೂ, ಒತ್ತಾಯದಿಂದ ರೆಕ್ವಿಸಿಶನ್ ಮಾಡಿದ ಅಕ್ಕಿಗೆ ಸರ್ಕಾರದವರು ನಿರ್ಣಯಿಸುವ ಕ್ರಯ ಕೊಡಬಹುದೆಂತಲೂ, ಸ್ವೇಚ್ಛೆಯಿಂದ ಒಪ್ಪಿಸುವ ಯಾ ರೆಕ್ವಿಸಿಶನ್ ಮಾಡುವ ಯಾವತ್ತು ಅಕ್ಕಿಯನ್ನು ಸರ್ಕಾರದವರು ಅವರವರ ಸ್ವಂತ ಡಿಪೋಗಳ ಮೂಲಕವಾಗಲೀ ಸಹಕಾರ ಸಂಘಗಳ ಮೂಲಕವಾಗಲೀ ಅಥವಾ ಸರ್ಕಾರದ ಶರ್ತಗಳಿಗೊಳಪಟ್ಟು ಮಾರಾಟ ಮಾಡಲಿಕ್ಕೆ ಒಪ್ಪುವ ಖಾಸಗಿ ವ್ಯಾಪಾರಿಗಳ ಮೂಲಕವಾಗಲೀ ರೇಷನಿಂಗ ಕಾರ್ಡುಗಳ ಮೂಲಕ ಮಾರಾಟ ಮಾಡಬೇಕೆಂತಲೂ ಅಂತಹ ಮಾರಾಟ ಮಾಡುವ ಮತ್ತು ಡೆಲಿವರಿ ತೆಗೆದುಕೊಳ್ಳುವ ಕೇಂದ್ರಗಳು ಕನಿಷ್ಠಪಕ್ಷ ಎರಡು ಮೈಲುಗಳಿಗೆ ಒಂದರಂತೆ ಇರಲೇ ಬೇಕೆಂತಲೂ ಸ್ವೇಚ್ಛೆಯಿಂದ ಮೇಲಿನ ಕಂಡ ಪ್ರಕಾರ ಅಕ್ಕಿ ಕೊಡುವಾಗ ಅವರ ಅಪೇಕ್ಷೆಗಳಿಗನುಸರಿಸಿ ಕ್ರಯದ ಐವೇಜನ್ನು ಶೀಘ್ರಗೆ ಅವಶ್ಯವಿರುವಷ್ಟು ವಿಚಾರ ಮಾಡಿಕೊಳ್ಳಬೇಕೆಂತಲೂ ಸ್ವೇಚ್ಛೆಯಿಂದ ತಂದುಕೊಡುವ ಅಕ್ಕಿಯ ಮೌಲ್ಯವನ್ನು ನಗದಿಯಿಂದ ಕೊಡುವ ಏರ್ಪಾಡು ಮಾಡಬೇಕಾಗಿಯೂ ಪ್ರತಿಕೇಂದ್ರಗಳಿಗೆ ಸಂಬಂಧಪಟ್ಟ ರೈತರ ಅಕ್ಕಿಯನ್ನು ಅದೇ ಕೇಂದ್ರದಲ್ಲಿ ಡೆಲಿವರಿ ತೆಗೆದುಕೊಳ್ಳಬೇಕಾಗಿಯೂ ಸರ್ಕಾರದವರನ್ನು ಕೇಳಿಕೊಳ್ಳಬೇಕಾಗಿಯೂ ಸಭೆಯು ನಿರ್ಣಯಿಸುತ್ತದೆ.

ಬರುವ ವಾರದಲ್ಲಿ ಯೀ ಜಿಲ್ಲೆಗೆ ಸಂದರ್ಶಿಸುವ ಶ್ರೀ ರಾಮಮೂರ್ತಿಯವರ ಭೇಟಿ ಮಾಡುವ ಬಗ್ಗೆ ಈ ಪಿಕಾರಿಂದ ಶ್ರೀ ಸೀತಾರಾಮ ಧೋರಿ ಬಲ್ಲಾಳರವರನ್ನು ಶ್ರೀ, ವೆಂಕಟ್ರಾಯ ನಾಯ್ಕರನ್ನೂ ನೇಮಿಸಲಾಯಿತು. ಇವರಿಬ್ಬರೂ ಅನುಕೂಲವಾದಷ್ಟು ಇತರ ಮೆಂಬರರನ್ನು ಕರೆತರಬೇಕೆಂದು ಈ ಸಭೆಯು ಸೂಚಿಸುತ್ತದೆ.

ಪಡುಬಿದ್ರೆ— ತಾ. 14-11-43 ಗಂಟೆ 3ಕ್ಕೆ ಬೋರ್ಡ್ ಹೈಯರ್ ಎಲಿಮೆಂಟರಿ ಶಾಲಾ ವಠಾರದಲ್ಲಿ ಶ್ರೀ| ಕೆ. ಸಂಜೀವ ಭಟ್ ಯಮ್. ಎ. ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಕಾಪು ಸರ್ಕಲಿನ ಸ್ಕೌಟರರ ಪರಿಷತ್ತು ರೋವರ್ ದಳದ ಉದ್ಘಾಟನಾ ಸಮಾರಂಭವೂ ಜರಗಲಿರುವುದು.

ಶಿರೂರು— ದ. ಕನ್ನಡ ಮತ್ತು ಉತ್ತರ ಕನ್ನಡಗಳ ಗಡಿಯಲ್ಲಿರುವ ಈ ಪಟ್ಟಣವಾಗಿ ಕಂಟ್ರೋಲ್ ಇರುವ ಆಹಾರ ಸಾಮಗ್ರಿಗಳು ಕಳ್ಳ ಸಾಗಾಟಿಕೆಯಿಂದ ಆಮದಾಗುತ್ತಿವೆಯೆಂದೂ ಕೆಲವು ಸರಕಾರಿ ನೌಕರರೇ ಲಂಚ ಪಡಕೊಂಡು ಸಾಮಾನು ಸಾಗಿಸಲು ಬಿಡುತ್ತಿರುವರೆಂದೂ ಈ ಕುರಿತು ಸಂಬಂಧಪಟ್ಟವರು ಕೂಡಲೇ ವಿಚಾರಿಸಬೇಕೆಂದೂ ಅರ್ಥವಾಗುವ ದೀರ್ಘ ಪತ್ರವೊಂದು ನಮ್ಮ ಬಳಿಗೆ ಬಂದಿದೆ. ಸ್ಥಳಾಭಾವದಿಂದ ಪ್ರಕಟಿಸಲಿಲ್ಲ.

ಸುಬ್ರಹ್ಮಣ್ಯ:— ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ತಾ. 24-11-43ರಲ್ಲು ಉತ್ಸವ ಪ್ರಾರಂಭವಾಗಿ ತಾ 27-11-43ಕ್ಕೆ ಲಕ್ಷದೀಪೋತ್ಸವ 2-12-43ಕ್ಕೆ ಪಂಚಮಿ ರಥೋತ್ಸವ 3-12-43ಕ್ಕೆ ಚಂಪಾಷಷ್ಠಿ ಮಹೋತ್ಸವ 4-12-43ಕ್ಕೆ ಅವಭೃತೋತ್ಸವ ಮೊದಲಾದ ಉತ್ಸವಗಳು ಜಾಗುವವು.

ಆರ್ಯ ಸಮಾಜ ಫೋರ್ಟ್,

ಮುಂಬಯಿ— ಇದರ ನೇತೃತ್ವದಲ್ಲಿ ಕಾಂಜೀ ಖೇತಸೀ ಭಾಟಿಯಾವಾಡಿಯಲ್ಲಿ ತಾ 29-10-43ರಲ್ಲಿ ದೀಪಾವಳಿ ಮತ್ತು ದಯಾನಂದ ನಿರ್ವಾಣೋತ್ಸವವು ಪಂಡಿತ ಮಹೇಂದ್ರಚಂದ್ರರ ಅಧ್ಯಕ್ಷತೆಯಲ್ಲಿ ಜರಗಿತು. ತಾ 31-10-43ರ ಸಮಾಜದ ಸಾಪ್ತಾಹಿಕ ಅಧಿವೇಶನದಲ್ಲಿ ಶ್ರೀ ಬಿ. ಲಕ್ಷ್ಮಣ ದೇವ ವಿದ್ಯಾರ್ಥಿಯವರ ವ್ಯಾಖ್ಯಾನವಿತ್ತು.

ತಿದ್ದುಪಡಿ.

ತಾ. 28-10-43ನೇ ಸಂಚಿಕೆಯಲ್ಲಿ ಪ್ರಕಟವಾದ ಎಡ್ವಕೇಟ್ ಶ್ರೀ ಬಿ. ನಾರಾಯಣ ಶೆಟ್ರು ಉಡುಪಿ ಡಿ. ಮು. ಕೋರ್ಟಿನ O. P. 66/43 ನೇ ನೋಟೀಸಿನಲ್ಲಿ ಶ್ರೀ ಮಹಾಬಲೇಶ್ವರ ಶೆಟ್ರು ದಿವಂಗತರಾದ ತಾರೀಕು 21-1-43 ಎಂದು ತಪ್ಪಾಗಿ ಬಿದ್ದಿದೆ. ಅದನ್ನು 20-1-43 ಎಂದು ಸರಿಪಡಿಸಿಕೊಳ್ಳಬೇಕಾಗಿರುತ್ತ— ಸಂ. ಸ.

CHAMPAE'S
SNOW & CASTREX
AGENTS.
SADANANDA STORES UDIPI

THE BEST PREVENTIVE IN EPIDEMICS OF
CHOLERA
"BHUVANENDRA"
CHANDRAMAS
Will give you the best results. Try once and be satisfied with the results.
Dose: For adults:- 3 to 5 drops 2 to 3 times a day with the decoction of cloves or ajwan.
For Children: 1 to 2 drops with the said decoction.
Also a sovereign remedy for diarrhoea. Stomachache, Vomiting and Nausea.
BHUVANENDRA PRODUCTS Ltd.

"ಭುವನೇಂದ್ರ"
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ.
ದೊಡ್ಡವರಿಗೆ 3ರಿಂದ 5 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.
ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ
ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಯ್ ಫಾರ್ಮೆಸಿ; ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪ್ಪೋ

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in 1920.)

Registered Office Court Road UDIPI South Canara District.
Business Offices Udipi, Mangalore, Katapadi, Kanhangad and Kinnigoli, South Canara.

Authorised and Issued Capital: Rs 2,00,000/-
Subscribed and Paid up Capital: Rs 2,00,000/-
Reserve Funds. Rs 1,75,853/-

Short term bills are discounted for approved parties. Loans and advances are made and overdrafts granted on fairly easy terms.

Deposits are accepted at favourable rates of interest. More than twenty-three years' of active banking Service stands to our credit.

For further particulars please call at or apply to the nearest office.

Dated 31-10-1943.

ಜನಪ್ರಿಯವಾದ ಲೇಖಕರ ಪ್ರಪಂಚದ ಪ್ರಕಟಣೆಗಳು-

ಮಧುವನ	೨	೮	೦	ರಂಗಭೂಮಿ	೦	೮	೦
ಪ್ರಕಾಶ	೧	೧೨	೦	ಸಂಶಯ ಪಿಶಾಚಿ	೦	೮	೦
ಭಾರತೀಯ ಕತೆಗಳು	೦	೧೪	೦	ಸೇವಾಪಥ	೦	೮	೦
ನಾರೀ ಹೃದಯ	೧	೧೪	೦	ಕುರಿಲವ	೦	೫	೦
ದೇಶಭಕ್ತ	೦	೧೪	೦	ಹೆಂಡ್ತಿ ಗಂಡಸಾದರೆ	೦	೪	೦
ಕಾವ್ಯ ಸಾಮ್ರಾಜ್ಯ	೦	೧೨	೦	ಪುರುಷವಧು	೦	೪	೦
ಪ್ರೇಮ ವಿಜಯ	೦	೧೨	೦	ಸ್ವತಂತ್ರ ಜೀವನೋಪಾಯ	೦	೩	೦
ವ್ಯಭಿಚಾರಿಣಿ ಯಾರು	೦	೧೩	೦	ನಾಡಕತೆಗಳು	೦	೩	೦
ನಂದಾದೀಪ	೦	೧೦	೦	ಮುಂದಿನ ದೇವರು	೦	೩	೦
ಸನ್ಯಾಸಿಯ ಸೋಲಿನಲ್ಲಿ	೦	೮	೦				

ನವಭಾರತ ಪುಸ್ತಕ ಭಂಡಾರ, ಉಡುಪಿ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲರ ಸಹಕಾರ ಅಪೇಕ್ಷಿಸುವುದು.

M. R. Punja, ಯಂ. ಆರ್. ಪೂಂಜ,
President & Manager ಪ್ರೆಸಿಡೆಂಟ್ ಮತ್ತು ಮೆನೇಜರ್.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,
ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ : : : : ಮಂಗಳೂರು.

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.

ಹೆಡ್ ಆಫೀಸ್: ಮಂಗಳೂರು

ಶಾಖೆಗಳು:

ಮಂಗಳೂರು, ಸಿಟಿ-ಮಂಗಳೂರು.
ಉಡುಪಿ, ಕಾರ್ಕಳ, ಕುಂದಾಪುರ,
ಕಾಪು, ಬ್ರಹ್ಮಾವರ, ಕಾಸರಗೋಡು,

ಪ್ರತಿ ಶಾಖೆಗಳಲ್ಲೂ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳು ಕೈಗೊಳ್ಳಲ್ಪಡುತ್ತವೆ.

THE VIJAYA BANK LIMITED, MANGALORE.

ಅಮೃತಾಂಜನ ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವುದು, ಚೇಳು ವಿಷಮುಂತಾದ ಚೇನೆ, ಪಕ್ಷವಾತ, ನೋಡಿವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ,

ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಬೊಂಬಾಯಿ, ಮದ್ರಾಸು, ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. 1-8-0 ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. 2-8-0

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಪರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಷ್ಟ ಚಾರ್ಜು ೧೨ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:— ಕುಂಬಾರವಾಡಿ ಸ್ಟೋರ್ಸ. ದಾವಣಗೇರಿ:— ದಾವಣಗೇರಿ ಪ್ರೆಸ್ಸ. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ** ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ.ಕ.**

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618.

ಇಪ್ಪತ್ತನಾಲ್ಕನೆಯ ವರ್ಷ.

Estd. 1921 ಸ್ಥಾಪನೆ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೧೧

FOUNDER
Sri. A. B. Shetty.

Vol. 24
No 11

NAVAYUGA— Kannada Weekly —UDIPI, S. I.

ಉಡುಪಿ • 18—11—1943 • ಮಂಗಳೂರು.

ಕಿರಿಯರ ಪ್ರಪಂಚದ ಹೊಸ ಪ್ರಕಟಣೆ

—ಪ್ರಕಾಶ—

ಸಾಮಾಜಿಕ—ರಾಜಕೀಯ ನಾಟಕ.
ಮೂಲ ಲೇಖಕರು.—ಶೇಟ್ ಗೋವಿಂದ ದಾಸ್, ಎಂ. ಎಲ್. ಎ. (ಸೆಂಟ್ರಲ್)
ಅನುವಾದಕಿ: ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ.

ಬೆಲೆ ರೂ. 1-12-0. ಟ. ಖ. 0-1-0

ರೂ. 2ನ್ನು ಮನಿಯಾರ್ಡರ್ ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಲಾಗುವದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕಿರಿಯರ ಪ್ರಪಂಚದ
ಇನ್ನೊಂದು ಪ್ರಕಟಣೆ.

ಭಾರತೀಯ ಕತೆಗಳು

ಸಣ್ಣ ಕತೆಗಳ ಸಂಗ್ರಹ

ಮೂಲ ಲೇಖಕರು— ಶ್ರೀ. ಎ. ಎಸ್. ಪಂಚಾಪಕೇಶ ಅಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್. ಲಾ., ಎಫ್. ಆರ್. ಎಸ್. ಎಲ್.,
ಅನುವಾದಕರು:— ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರು.

ಬೆಲೆ 0-11-0 ಟ. ಖ. 0-2-0

ರೂ. 1/ನ್ನು ಮನಿಯಾರ್ಡರು ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಲಾಗುವುದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

Charter of Protection

History gives us instances of how people by united efforts fought against a common foe and mitigated the evils brought about by him.

Insurance is a scientific device of united efforts of such an instance. Policies of insurance are its Charter of Protection and they protect the family from the distress caused by death.

To extend the Charter of Protection to every unprotected family is our aim.

The Canara Mutual Assurance Co., Ltd.,
UDIPI. (S. India).

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸವಿಾಪದವರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇದರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಪ್ಪಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದ. ಭಾರತದ ಪ್ರಮುಖ ಏಜಂಟರು.
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ ಕನ್ನಡ)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್ ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗ...

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಳುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ. ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಪ್ರೆಸ್. [ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ

Revanasiddappa Halappa Davangeri,
Ayurveda Oushadalaya, GADAG.

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೪೨ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹು ಅಪಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನ್ನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ಶೀಘ್ರನೆ ಮುಂದುವರಿದವು.

೧೯೪೦, ಆಗಲ್ಲಿ ಕೆನರಾ ಬೇಂಕು ೯೦ ಲಕ್ಷ ಠೇವಣೆಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣೆಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡುವರೆ ಕೋಟಿಗೆ ಏರಿದೆ. ಹಾಗೂ ತೆತ್ತ ಮೂಲಧನವು ನಾಲ್ಕಡಿಯಾಗಿದೆ.

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮವಿಶ್ವಾಸದಿಂದಲೂ, ದೃಢಬುದ್ಧಿಯಿಂದಲೂ, ಯೋಗ್ಯಸೇವೆಯನ್ನು ಸಲ್ಲಿಸಿದರಿಂದಲೂ, ಇಂದಿನ ಈ ಪ್ರಗತಿಗೆ ಕಾರಣ ಭೂತರಾದ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಉತ್ತಮ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

CANARA BANK LIMITED.
ಕೆನರಾ ಬೇಂಕ್ ಲಿಮಿಟೆಡ್.
ಸ್ಥಾಪನೆ 1906.

ಲೆಬನಾನ್ ದುರಂತ

ಪ್ರಮುಖರಿಗೆ ಗಡೀಪಾರು
ಪ್ರಜೆಗಳಿಗೆ ಗೋಳೀಬಾರು

ಭಾರತದ್ದೇ ಅದೃಷ್ಟ!

ಕಳೆದವಾರ ಆಕ್ರಮಣ ಬುದ್ಧಿಯ ಇನ್ನೊಂದು ಸ್ಪಷ್ಟ ಪ್ರದರ್ಶನವಾಯಿತು. ಈ ಕಾಲದಲ್ಲಿ ಕರಾರು ಭಂಗಗಳಿಗೆ ಅವುಗಳನ್ನು ಲೆಕ್ಕಿಸಿದ ಕಾಗದಗಳ ಬೆಲೆಯೂ ಇಲ್ಲವೆಂಬುದಕ್ಕೆ ಮತ್ತೊಂದು ನಿದರ್ಶನ ದೊರೆಯಿತು; ನ್ಯಾಯಿಯಿಂದ ದೂಳಿಸಲ್ಪಟ್ಟ ಬೆಕ್ಕಿಗೆಕೂಡಾ ಇಲಿಜೇಟಿಯಿಸ್ಟೇ ಇದೆ ಎಂಬಪರಾಕ್ರಮಣ ತತ್ವದ ಪ್ರಭಾವ ಕಂಡುಬಂತು; ಭಾರತ ದುರಂತದಂತಹ ದುರಂತವೊಂದು ಲೆಬನಾನಿನಲ್ಲಿ ನಡೆಯಿತು!

ಲೆಬನಾನ್

ಸಿರಿಯಾದ ಜತೆಯಲ್ಲಿರುವ ಲೆಬನಾನ್ ಚಿಕ್ಕ ದೇಶ. ಇವೆರಡೂ ಫ್ರೆಂಚ್ ಆಧೀನ ರಾಷ್ಟ್ರಗಳು. ಸಿರಿಯಾದಲ್ಲಿ ಮುಸಲ್ಮಾನರ ಸಂಖ್ಯೆ ಜಾಸ್ತಿ. ಅರಬರ ಚಳವಳದಲ್ಲಿ ಆದಿಯಿಂದಲೂ ಅದಕ್ಕೆ ಆಸಕ್ತಿ. ಆದ್ದರಿಂದ ಕಳೆದ 1920ರಿಂದ 32ರವರೆಗೂ ಸಿರಿಯವು ಫ್ರೆಂಚ್ ವಿರುದ್ಧ ಗಲಭೆಗಳನ್ನೆಬ್ಬಿಸುತ್ತಲೇ ಇದ್ದಿತು. ಲೆಬನಾನಿನ ಬಹು ಸಂಖ್ಯಾತರು ಕ್ರೈಸ್ತರು. ಬಹು ಪುರಾತನ ಕಾಲದಿಂದ ಫ್ರೆಂಚರೊಡನೆ ಹಾರ್ದಿಕ ಮಿಲನ ಹೊಂದಿದ್ದರಲ್ಲದೆ 1860ರ ವಿಧ್ವಂಸಕ ಹೋರಾಟದಲ್ಲಿ ಫ್ರೆಂಚ್ ಸೇನೆಯಿಂದ ರಕ್ಷಿಸಲ್ಪಟ್ಟು ಇವೆರಡು ಜನಾಂಗಗಳ ಸಂಬಂಧ ಹಾಲುನೀರಿನಂತಾಗಿ ಹೋಗಿದ್ದಿತು. ಆದರೆ ಕೆಲವೇ ವರುಷಗಳ ಫ್ರೆಂಚ್ ಆಳ್ವಿಕೆಯ ಕಹಿಯನುಭವಗಳಿಂದ ಲೆಬನಾನ್ ಪ್ರಜೆಗಳ ಹೃದಯವು ಫ್ರೆಂಚರಕಡೆಗೆ ಬೂದಿಮುಚ್ಚಿದ ಕೆಂಡವಾಗಿದ್ದಿತು. 1940ರಲ್ಲಿಫ್ರಾನ್ಸ್ ಜರ್ಮನಿಯಿದಿರು ದೂಗ್ಗಾಲೂರಿದಾಗ ಸಿರಿಯ ಮತ್ತು ಲೆಬನನ್‌ಗಳ ಆಳ್ವಿಕೆ ಆಕ್ಸಿಸ್ ಪಕ್ಷಪಾತಿಗಳ ಕೈಗೆಬಂತು.

ಫ್ರೆಂಚ್ ಆಶ್ವಾಸನೆ.

1941ರಲ್ಲಿ ಬ್ರಿಟಿಷ್ ಮತ್ತು ಸ್ವತಂತ್ರ ಫ್ರೆಂಚ್ ಸೇನೆಗಳು ಸಿರಿಯಾ, ಲೆಬನಾನನ್ನು ಆಕ್ರಮಿಸಿಕೊಂಡವು ಈ ಆಕ್ರಮಣ ಸೇನೆಯನ್ನು ನಡೆಸಿದ, ಮಧ್ಯಪೂರ್ವದ ಫ್ರೆಂಚ್ ಹೈ ಕಮಿಷನರರಾದ ಜನರಲ್ ಕಾಟ್ರೂಕ್ಸರು, ಜನರಲ್ ಡಿ.ಗೋಲೆಯವರ ಪರವಾಗಿ, ಇವೆರಡು ದೇಶಗಳಿಗಿತ್ತ ಆಶ್ವಾಸನೆಯಿದು:—"ನಾನು ಇಂದಿ ಅಜ್ಞಾಬದ್ಧ ಆಳ್ವಿಕೆಯಿಂದ ವಿನಾಯತಿಗೊಳಿಸಿ, ನೀವು ಸ್ವತಂತ್ರರು ಎಂಬುದನ್ನು ಸಾರುವುದಕ್ಕಾಗಿ ಬಂದಿದ್ದೇನೆ. ಇಂದಿನಿಂದ ನೀವೊಂದು ರಾಜ್ಯದ ಸ್ವತಂತ್ರ ಪ್ರಜೆಗಳು. ಬೇರೆ ಬೇರೆಯಾಗಿರುವ ಅಥವಾ ಏಕ ರಾಷ್ಟ್ರವಾಗಿ ಒಟ್ಟಾಗಿರುವಂತೆ ನಿಮ್ಮನ್ನುನೀವೇ ರೂಪಿಸಿಕೊಳ್ಳುವ ಹಕ್ಕುಳ್ಳವರಿದ್ದೀರಿ. ನಿಮ್ಮ ಸ್ವಾತಂತ್ರ್ಯ ಮತ್ತು ರಾಷ್ಟ್ರಸ್ಥಾನಗಳಿಗೆ ನಮ್ಮೊಳಗಿನ ಪರಸ್ಪರ ಸಂಬಂಧಗಳನ್ನು ಸ್ಪಷ್ಟಪಡಿಸುವ ಅದೊಂದು ಒಪ್ಪಂದ ಕರಾರಿನ ಮೂಲಕ ಭದ್ರತೆ ಕೊಡಲ್ಪಡುವದು ತನ್ನ ಪ್ರಾಣ ಮತ್ತು ಲೋಕ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ತನ್ನ ಮಕ್ಕಳ ಕಂಠ"ಮುಖಾಂತರ ಫ್ರಾನ್ಸ್ ನಿಮ್ಮ ಸ್ವಾತಂತ್ರ್ಯವನ್ನು ಘೋಷಿಸುತ್ತಿದೆ"

ಆ ನಂತರ?

ಈ ಪ್ರತಿಜ್ಞಾವಾತಿಗನುಗುಣವಾದ ಕಾರ್ಯವೇನೂ ಸ್ವತಂತ್ರ ಫ್ರೆಂಚರಿಂದ ಕೈಕೊಳ್ಳಲ್ಪಡಲಿಲ್ಲ. ಲೆಬನಾನ್ ರಾಜ್ಯಭಾರ ಪದ್ಧತಿಯಲ್ಲಿ ಏನೂ ಬದಲಾವಣೆಯಾಗಲಿಲ್ಲ. ಇದರಿಂದಾಗಿ ಅಲ್ಲಿಯ ಜನತೆಯ ಆಳೆಯು ಇಳಿಯುತ್ತಿತ್ತು ಇಳಿಯುತ್ತಿತ್ತು ನಿರಾಶೆ, ಜಿಗುಪ್ಸೆ, ದ್ವೇಷವಾಗಿ ಮಾರ್ಪಟ್ಟು ಹೋಗಿತ್ತು (ಹಿಂದೂ ದೇಶದಂತೆಯೇ) ಕಳೆದ ಬಾರಿ ನಡೆದ ಚುನಾವಣೆಯಲ್ಲಿ ಫ್ರೆಂಚ್ ದಾಸ್ಯ ನಿವಾರಣಾ ಹೋರಾಟ ನಡೆಸಿದ್ದ ಲೆಬನಾನ್ ರಾಜಕೀಯ ಪಂಗಡಕ್ಕೆ ಪ್ರಬಲ ಬಹುಮತ ದೊರೆತು ಆ ಹೊರ, ಒಳ, ಮತ್ತು ಆರ್ಥಿಕ ವಿಭಾಗಗಳ ಮೇಲೆ ತನ್ನ ಪೂರ್ಣಾಧಿಕಾರವಿರುವ ರಾಜ್ಯಾಂಗ ರಚನಾ ತಿದ್ದುಪಡಿಯ ನಿರ್ಧಾರವನ್ನು ಲೆಬನಾನ್ ಸರಕಾರವು ಮಾಡಿತು. ಫ್ರೆಂಚ್ ಹೈಕಮಿಶನರರನ್ನು ವಿಚಾರಿಸಿಕೊಳ್ಳಲೇ ಇಲ್ಲ. ಇದರಪರಿಣಾಮ ಈ ವರೆಗೆ ಫ್ರೆಂಚರಿಗೆ ಹೊಗುತ್ತಿದ್ದ

ಪಕ್ಷವು ಅಧಿಕಾರಕ್ಕೆ ಬಂತು. 'ನಾವು ಯುದ್ಧಕಾಲದಲ್ಲಿ ಮಿತ್ರ ರಾಷ್ಟ್ರೀಯರಿಗೆ ಪೂರ್ಣ ನೆರವಾಗುತ್ತೇವೆ. ಆದರೆ ಅಟ್ಲಾಂಟಿಕ್ ಘೋಷಣೆಯಂತೆ ನಮ್ಮ ರಾಜ್ಯದೊಳಗಿನ ಪೂರ್ಣಾಧಿಕಾರ ನಮ್ಮದೇ ಆಗಬೇಕು. ಆದ್ದರಿಂದ ಮಿತ್ರ ರಾಷ್ಟ್ರೀಯ ಹಿತ ಸಂಬಂಧಗಳಿಗೆ ಧಕ್ಕೆ ಬಾರದ ರೀತಿಯಲ್ಲಿ ನಮ್ಮ ದೇಶರಾಜ್ಯಭಾರ ವ್ಯವಸ್ಥೆಯನ್ನು ಬೇಕಾದಂತೆ ತಿದ್ದುಪಡಿಮಾಡಿಕೊಳ್ಳುವ ಪೂರ್ಣಾಧಿಕಾರ ನಮ್ಮದು' ಎಂದು ಈ ಪಕ್ಷದ ಹೇಳಿಕೆ (ಕಾಂಗ್ರೆಸ್ ಬೇಡಿಕೆಯಂತೆ!). ಅಂತೆಯೇ ರಾಷ್ಟ್ರದ ನಕಂದಾಯದ ಬಹುಭಾಗವು ತಡೆಗಟ್ಟಲ್ಪಡುತ್ತದೆ; ಫ್ರೆಂಚರೀಗೇನೇ ಪೂರ್ಣಾಧಿಕಾರವಿರುವ ಅಲ್ಲಿಯ ಹೊಗೆಸೊಪ್ಪಿನ ಹತೋಟಿಯೂ ತಪ್ಪಿಹೋಗುತ್ತದೆ. ಇದನ್ನು ಸ್ವತಂತ್ರ ಫ್ರೆಂಚರು ಸಹಿಸುವಂತಿದೆಯೆ? ತಾವು ಬ್ರಿಟನಿನ ಕೈಗೊಂಬೆಯಾಗಿರುವಾಗ, ತಮ್ಮ ಕೈಗೊಂಬೆಯಾಗಿರುವದಕ್ಕೆ ಲೆಬನಾನ್ ಇಷ್ಟು ಜಿಗುಪ್ಸೆ ಪಡುವದೆಂದರೇನು?

ಫ್ರೆಂಚ್ ಆಕ್ರಮಣ

ಫ್ರೆಂಚ್ ಅಧಿಕಾರಿಗಳ ನಿಜರೂಪ ದರ್ಶನಕ್ಕೆ ತಡವಾಗಲಿಲ್ಲ. ಕಾಂಗ್ರೆಸ್ ಅಂದು ಚರಿತ್ರಾರ್ಹ ಆಗೋಸ್ತು ನಿರ್ಧಾರಮಾಡಿದೊಡನೆ ಲೋರ್ಡ್ ಲಿನ್‌ಲಿತ್‌ಗೋ ಧರಿಸಿದ ಸ್ವಾಹಾತಾರವನ್ನೇ ಅಲ್ಲಿಯ ಫ್ರೆಂಚ್ ಹೈಕಮಿಶನರರೂ ಧರಿಸಿದರು. ಲೆಬನಾನ್ ಸರಕಾರದ ಸ್ವಾತಂತ್ರ್ಯಕಾಂಕ್ಷೆಯನ್ನೇ 'ಫ್ರಾನ್ಸ್ ವಿರುದ್ಧ ಒಳಸಂಚು' ಎಂದು ಕರೆದು ಅಲ್ಲಿಯ ಅಧ್ಯಕ್ಷ, ಪ್ರಧಾನ ಸಚಿವ,ತಲೆತಪ್ಪಿಸಿಕೊಂಡ ಓರ್ವ ಮಂತ್ರಿಯನ್ನುಳಿದು ಇಡೀ ಮಂತ್ರಿಮಂಡಲ, ಸಾಲದುದಕ್ಕೆ ಲೆಬನಾನ್ ತಿದ್ದುಪಡಿ ಮಸೂದೆಗೆ ಮತಕೊಟ್ಟ 48ಡೆಪ್ಯುಟಿಗಳನ್ನು ಕೂಡಾ, ಅಪ್ಪಾಡುವ ಪಶುಗಳನ್ನು ಹಿಡಿದಂತೆ ಬಂಧಿಸಿ ಯಾವದೊಡ್ಡಿಗೋ—ಎಲ್ಲಿಗ್ಯೊದರೆಂದು ಗೊತ್ತಿಲ್ಲ—ಕೊಂಡೊಯ್ದರು. ಅಧ್ಯಕ್ಷರ ಮನೆ ಮುರಿತ, ಉದ್ರೇಕಗೊಂಡ ಜನಸಮೂಹದ ಮೇಲೆ ಟೇಂಕು ಧಾಳಿ,ಗುಂಡು ಪ್ರಯೋಗ, ಸರ್ವತ್ರ ಮಾರ್ಶಲ್ ಲೋಜಾರಿ, ಎಲ್ಲಾ ಕಡೆಗಳಲ್ಲೂ ಜನ-ಸೇನೆಗಳೊಳಗೆ ಘರ್ಷಣೆ, ಅಲ್ಲಿಯ ಮುಸ್ಲೀಂ ಕ್ರೈಸ್ತರೊಂದಾಗಿ ನಡೆಸುತ್ತಿರುವ ಮಹಾ ವಿರೋಧ ಪ್ರದರ್ಶನಗಳು, ಸಂಪೂರ್ಣ ಹರತಾಳ, ಮು.ಷ್ಕರಗಳಿಂದ ಲೆಬನಾನ್ ದೇಶ ರಣರಂಗವಾಗಿದೆ! ಫ್ರೆಂಚ್ ಅಧಿಕಾರಿಗಳು ಹೊಸಚುನಾವಣೆಗಾಜ್ಞೆ ಹೊರಡಿಸಿದ್ದಾರೆ. ಈಗ ಎಲ್ಲವನ್ನೂ ತಮ್ಮಾಧೀನ ಪಡಿಸಿಕೊಂಡಿದ್ದಾರೆ.

ಪ್ರತಿಕ್ರಿಯೆ

ಇಜಿಪ್ಟಿನ ಪ್ರಧಾನಿ ನಾಹಾಸ್ ಪಾಶರು ನೆರೆಯ ಸಹೋದರ ರಾಷ್ಟ್ರಕ್ಕಾದ ಈ ಅನ್ಯಾಯದಿಂದ ಉರಿದೆದ್ದರು. ಅವರು ತೀವ್ರ ನಿಷೇಧವನ್ನು ಜನರಲ್ ಡಿಗೋಲೆಗೆ ಕಳುಹಿದ್ದಲ್ಲದೆ "ನಮ್ಮ ಲೆಬನಿಸ್ ಸಹೋದರರ ಮೇಲಿನ ದಬ್ಬಾಳಿಕೆ ಮುಂದುವರಿಯಲು ನಾನು ಬಿಡಲಾರೆ. ಲೆಬನಾನ್ ಅಧ್ಯಕ್ಷ, ಪ್ರಧಾನಿ ಮತ್ತು ಎಲ್ಲಾ ಮಂತ್ರಿಗಳ ಬಿಡುಗಡೆಯಾಗಿ ಅವರ ಮೊದಲಿನ ಸ್ಥಾನಮಾನಗಳು ದೊರೆಯುವ ವರೆಗೆ ನಾನು ವಿಶ್ರಾಂತಿ ಪಡೆಯುವಂತಿಲ್ಲ"ಎಂದುಘರ್ಜಿಸಿದ್ದಾರೆ.ಬ್ರಿಟಿಷರೂ ಕಣ್ತೆರೆದುಒಂದು ಮುಖ್ಯ ಯುದ್ಧ ನಿಲ್ದಾಣವಾದ ಲೆಬನಾನಿನ ಶಾಂತಿಯನ್ನೂ ತಾವು ಆದಕ್ಕಿತ್ತಿರುವ ಸ್ವಾತಂತ್ರ್ಯ ಬರವಸೆಯನ್ನೂ ರಕ್ಷಿಸುವ ಜವಾಬ್ದಾರಿ ತಮ್ಮದೆಂದು ಘೋಷಿಸಿದ್ದಾರೆ ಲೆಬನಾನ್ ಜನತೆಯ ಉದ್ರೇಕ, ಸ್ವಾತಂತ್ರ್ಯ ಪ್ರೇಮಿಗಳ ಖಂಡನೆಗಳಬಿಸಿ ಸ್ವತಂತ್ರ ಫ್ರೆಂಚ್ ಮುಖ್ಯಾಧಿಕಾರಿಗಳಿಗೂ ತಾಗಿದಂತಿದೆ. 'ಹಿಂದಿನ ವಾಗ್ದಾನಗಳನುಸಾರವಾಗಿ ಫ್ರೆಂಚ್‌ಸೂತ್ರಕ್ಕೊಳಪಟ್ಟ ಕ್ರಮಬದ್ಧ ಶಾಂತಸ್ಥಿತಿ ಸ್ಥಾಪಿಸುವ ತಮ್ಮ ಉದ್ದೇಶವನ್ನು ಫ್ರೆಂಚ್ ರಾಷ್ಟ್ರ ವಿಮೋಚನಾ ಸಮಿತಿ ಸಾರಿದೆ. ಫ್ರೆಂಚ್ ಅಭಿಪ್ರಾಯ ಕೇಳದೆ ಮಾಡಿಕೊಳ್ಳುವ ತಿದ್ದುಪಡಿಯನ್ನು ತಾವೆಂದೂ ಒಪ್ಪುವಂತಿಲ್ಲ. ಆದರೆ ಸಾಧ್ಯವಿದ್ದಷ್ಟು ಬೇಗನೇ ಲೆಬನಾನ್ ಸ್ವಾತಂತ್ರ್ಯವನ್ನು ದೊರಕಿಸಿಕೊಡಲು ಬದ್ಧರಿದ್ದೇವೆ'ಎನ್ನುತ್ತಾ ಬ್ರಿಟಿಷರು ಭಾರತವನ್ನಾಳಿಕೆಸುವ ಭಾಷೆಯನ್ನೇ ಫ್ರೆಂಚರೂ ಅನುಕರಿಸಿದ್ದಾರೆ. ಅಲ್ಲಿಯ ಫ್ರೆಂಚ್ ಡೆಲಿಗೇಟ್ ಜನರಲ್ ಎಮ್. ಹೆಲ್ಲುವು ಇವರು ಮೂಲ ಸಮಿತಿಯ ಅಭಿಪ್ರಾಯ ಕೇಳದೇನೇ ಅವಸರಗೊಡು ದುಡುಕಿದುದಂತೆ! ಅಂತೂ ಲೆಬನಾನ್ ವಿವಾದ ತೀರ್ಮಾನ ಹೊಂದ ಬಹುದು; ಆದರೆ ಅದೇ ಸಮಸ್ಯೆಯನ್ನು ದೊಡ್ಡ ಪರಿಮಾಣದಲ್ಲಿ ಇದಿರಿಸಿ ನಿಂತಿರುವ ಹಿಂದೂ ದೇಶದ ತೀರ್ಮಾನವೆಲ್ಲಿದೆ?

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವದು, ಮಲಬದ್ಧತೆ, ಒಳಜ್ವರ, ಅಶಕ್ತಿ,ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—0—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ—1. ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ ಅಂಡ್ ಜನರಲ್ ಮರ್ಚೆಂಟ್ಸ್, 183 ಸುಪಾರಿಬಾಗ್ ರೋಡ್, ಪರೇಲ, ಬೊಂಬಾಯಿ, ನಂಬ್ರ 12 2. ಜನರಲ್ ಸ್ಟೋರ್ಸ್, ಜಿ. ಐ. ಪಿ. ಮಾಟುಂಗಾ. 3. ಮುಲ್ಲರ್ ಪೆಟರ್ನ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ. 4. ಧನ್ವಂತರಿ ವೈದ್ಯಶಾಲೆ, ಲೆನ್ಸ್‌ಡೌನ ಬಜಾರ್, ಮೈಸೂರು. 5. ಮಂಗ್ಳೂರು ಸ್ಟೋರ್ಸ್, ಮಡಿಕೇರಿ. 6. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ. 7. ಡಾ। ಶ್ರೀನಿವಾಸ ಪೈ, ಪುತ್ತೂರು. 8. ಕಾಂತಾವರ ವಾಸ್ದೇವ ಕಮ್ತಿ, ಬೆಳ್ತಂಗಡಿ. 9. ಮುಲ್ಕಿ ಮೆಡಿಕಲ್ ಸ್ಟೋರ್ಸ್, ಮುಲ್ಕಿ. 10. ನವಭಾರತ ಬುಕ್ ಡಿಪ್ಪೊ, ಸಂತೆಕಟ್ಟೆ, ಉಡುಪಿ. 11. ಕೃಷ್ಣಾ ಫಾರ್ಮಸಿ, ಕುಂದಾಪುರ. 12. ಎಚ್. ನರಸಿಂಹ ನಾಯ್ಕ, ಮರ್ಚಂಟ್, ಶಂಕರನಾರಾಯಣ. 13. ಕಾಸರಗೋಡು ಶ್ರೀ ರಾಮಾ ಸ್ಟೇಶನರಿ ಹೌಸ್, ಶ್ರೀ ರಾಮ ಪೇಟೆ. 14. ಕೆ. ಶ್ರೀನಿವಾಸ ಹೆಗ್ಡೆ, ತೀರ್ಥಹಳ್ಳಿ. 15. ಬಿ ಯಸ್. ನರ್ಸಿಂಗ ರಾವ್, ಮರ್ಚೆಂಟ್, ಚಿಕ್ಕಮಂಗ್ಳೂರು.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಂಜಿ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

The Canara Banking Corporation Limited.
(Incorporated in British India Liability of members limited)
ESTD: 1906.

ANNOUNCEMENT.

We have pleasure to announce that our Bangalore City Office has been opened on the 3rd instant and regular business is transacted from that date.

ಉಡುಪಿ, ಗುರುವಾರ, ೧೮-೧೧-೧೯೪೩

ಸಹಜ ಬೇಡಿಕೆ

'ಬಂಗಾಳ ದುರಂತದ ಹೊಣೆಗಾರರಾದ ಲೋರ್ಡ್ ಲಿನ್‌ಲಿತ್‌ಗೋ, (ಮಾಜಿ ವೈಸರಾಯಿ) ಲಿಯೊಪೋಲ್ಡ್ ಅಮೆರಿ (ಭಾರತ ಕಾರ್ಯದರ್ಶಿ) ಸರ್. ಜೋನ್ ಹರ್ಬರ್ಟ್, (ಬಂಗಾಳದ ಮಾಜಿ ಗವರ್ನರ್) ಇವರನ್ನು ಬಹಿರಂಗ ವಿಚಾರಣೆಗೊಳಪಡಿಸಬೇಕೆಂಬ ಉಪಸೂಚನೆಯೊಂದು, ಆಹಾರ ಮಂತ್ರಿಗಳ ಠರಾವಿಗೆ ತಿದ್ದುಪಡಿಯಾಗಿ ಕೇಂದ್ರ ಎಸೆಂಬ್ಲಿಯಲ್ಲಿ ಕಾಂಗ್ರೆಸ್ ಸದಸ್ಯ ಪಂಡಿತ ಶಂಭುದಯಾಲ ಮಿಶ್ರರಿಂದ ಬಂದಿದೆ. ಈ ಉಪಸೂಚನೆಯು ಅಪಹಾಸ್ಯಕರವಾಗಿ ತೋರುವವರಿರಬಹುದು. ಆದರದು ಭಾರತೀಯರ ಕಳವಳದ ಛಾಯೆಯಾಗಿದ್ದು ಅವರ ಪಾಲಿನ ನ್ಯಾಯವಾದ ಬೇಡಿಕೆಯಾಗಿದೆ. ಹಿಟ್ಲರ್ ಮುಸಲನಿಗಳ ಬಂಧನವನ್ನೂ ತಮ್ಮ ಯುದ್ಧಗುರಿಗಳೊಂದಿಗೆ ಮಿತ್ರ ರಾಷ್ಟ್ರೀಯರು ಸೇರಿಸಿದ್ದಾರೆ—ಇಂದಿನ ಪ್ರಾಪಂಚಿಕ ಪ್ರಳಯದ ಹೊಣೆಗಾರರೆಂಬುದಕ್ಕಾಗಿ! ಫೇಸಿಸ್ಟರ ವಿಮಾನಬಲ, ಟೇಂಕು ದಳಗಳ ನಿರ್ನಾಮಮಾಡಿ, ಆಕ್ರಮಿತ ಭಾಗಗಳನ್ನು ನಿಶ್ಶಸ್ತ್ರಗೊಳಿಸಿ ಮಿತ್ರರು ತೃಪ್ತಿ ಹೊಂದುವಂತಿಲ್ಲ—ಕಾರಣ ಪುರುಷರಾದ ಹಿಟ್ಲರ್ ಮುಸಲನಿಗಳು ವ್ಯಕ್ತಿಶಃ ಪ್ರಾಯಶ್ಚಿತ್ತ ಹೊಂದಬೇಕು! ಅಂದ ಮೇಲೆ ಬಂಗಾಳದಲ್ಲಿ ಲಕ್ಷಾವಧಿ ಜನರು ದುರ್ಮರಣ ಹೊಂದುತ್ತಿದ್ದಾರೆ-ಅದರ ಕಾರಣ ಪುರುಷರಾದ ಈ ಮೂವರನ್ನೂ ಬೆಳಕಿಗೆಳೆಯಿರಿ ಎಂದು ಶ್ರೀ ಮಿಶ್ರರು ಯಾಚಿಸಿದುದರಲ್ಲಿ ತಪ್ಪೇನಿದೆ? 'ಬಂಗಾಳದಲ್ಲಿ ಬರಗಾಲ ಏಳದಂತೆ ಮಾಡಲು ಸಾಧ್ಯವಿತ್ತು' ಎಂಬುದರ ಕುರಿತು ಇಡೀ ಪ್ರಪಂಚದಲ್ಲಿ ಎರಡಭಿಪ್ರಾಯವಿಲ್ಲ. ಅದು ಸಾಧ್ಯವಿದ್ದಾಗ್ಯೂ, ಹಾಗೆ ಮಾಡುವ ಅಧಿಕಾರ ಮತ್ತು ಜವಾಬ್ದಾರಿಯಿದ್ದ ಮಿ. ಅಮೆರಿ, ಲೋರ್ಡ್ ಲಿನ್‌ಲಿತ್‌ಗೋ, ಮತ್ತು ಸರ್ ಹರ್ಬರ್ಟರಿಗೆ ಮಾತ್ರ. ಅವರು ಕರ್ತವ್ಯ ಬಾಹಿರರಾದರು. ಅಪರಾಧ ಮಾಡಿದರು; ತತ್ಫಲವಾಗಿ ಲಕ್ಷಾವಧಿ ಜನರ ಪ್ರಾಣಕ್ಕೆ ಎರವಾದರು. ಬಂಗಾಳದ ಬರಗಾಲ ಸಂಬಂಧದಲ್ಲಿ ಹಿಂದೀ ಸರಕಾರವು ನಿರ್ದೋಷಿಯೆನ್ನುವವರಲ್ಲಿ ಮಿ. ಅಮೆರಿಯವರು ಅಗ್ರಗಣ್ಯರು. ಅವರ ವಾದವನ್ನೇ ಅಂಗೀಕರಿಸಿದರೂ ಬಂಗಾಲದ ಬರಗಾಲಕ್ಕೆ ಬೇರೆ ಬೇರೆ ಕಾರಣಗಳಿವೆಯಷ್ಟೆ-ಹಲವು [illegible]—ಎನ್ನಬೇಕಾಗುತ್ತದೆ ಹೊರತು, ಅಮೆರಿ, ಲಿನ್‌ಲಿತ್‌ಗೋ, ಹರ್ಬರ್ಟರು ನಿರಪರಾಧಿಗಳೆಂದಾಗುವದಿಲ್ಲ. ಅಮೆರಿ ಅಂಬೋಣದಂತೆ ಜನಾಭಿವೃದ್ಧಿ, ಉತ್ಪತ್ತಿಯ ಕೊರತೆ, ಧಾನ್ಯದುರ್ವ್ಯಾಪಾರಗಳೇ ಬರಗಾಲಕ್ಕೆ ಹೊಣೆಯೆಂದಾದರೆ ಇದು ಅನಿವಾರ್ಯ ವಿಪತ್ತು; ಬಹು ಸಂಖ್ಯಾಕರು ಸತ್ತೇ ಸುಭಿಕ್ಷೆ ನಿರ್ಮಿಸಬೇಕಾದ ಸಂದರ್ಭ! ಆದರೆ ಮಿ. ಅಮೆರಿಯಾದರೂ ಹಾಗನ್ನುವದಿಲ್ಲ; 'ಜನರನ್ನು ಬದುಕಿಸಬೇಕು-ಬರಗಾಲ ನಿವಾರಣೆ ಮಾಡಬೇಕು—ಆಗುತ್ತಿದೆ' ಎಂದು ಆಶ್ವಾಸನೆ ಕೊಡುತ್ತಿದ್ದಾರೆ. ಇಂದು ನಿವಾರಣೆ ಮಾಡುವ ಹೊಣೆಯಿರುವವರಿಗೆ, ಅಂದು ಬರ ನಿರ್ಮಾಣವಾಗದಂತೆ ನೋಡುವ ಜವಾಬ್ದಾರಿಯಿರಲಿಲ್ಲವೆ? ತಮ್ಮ ಆಗಿನ ಹೊಣೆಯನ್ನು ಸರಿಯಾಗಿ ನಿರ್ವಹಿಸದೆ ಅಸಡ್ಡೆ ಮಾಡಿದುದರ ಪರಿಣಾಮವಾಗಿ, ಲಕ್ಷಗಟ್ಟಲೆ ಜನರು ನರಕಯಾತನೆಯನ್ನನುಭವಿಸಿ ಸಾಯುವಂತೆ ಮಾಡಿದವರನ್ನು ಪ್ರಶ್ನಿಸುವವರು ಕೂಡಾ ಸತ್ತುಹೋಗಿಲ್ಲ-ಎಂಬುದನ್ನಲ್ಲದೆ ಬೇರಾವ ಮಹತ್ವವನ್ನೂ ಪಂಡಿತರ ಈ ಸೂಚನೆ ಸಾಧಿಸುವಂತಿಲ್ಲ, ಆದರೆ ಅದು ಮಾನ್ಯವಾದಲ್ಲಿ ಮೃತರ ಆತ್ಮಗಳಿಗಾದರೂ ಶಾಂತಿ ದೊರಕಬಹುದು. ಈ ಯುದ್ಧಕಾಲದಲ್ಲಿ ಧಾರಣೆ ತಗ್ಗಿದ ಏಕಮಾತ್ರ ವಸ್ತುವಾದ [illegible] ಬೆಲೆ ಸ್ವಲ್ಪವಾದರೂ ಏರಬಹುದು. ಆಹಾರ ಸಮಸ್ಯೆಯ ಕುರಿತು ಲೋರ್ಡ್ ವೇವೆಲರು ಪ್ರದರ್ಶಿಸಿರುವ ಆತುರಕ್ಕಿಂತ ಭಿನ್ನವಾದ 'ಹುಚ್ಚಾಟ' ಈ ಸೂಚನೆಯು. [illegible] ಮೇಲಾಗಿ ಆಹಾರ ಖಾತೆಗಳಲ್ಲಿ ಕಪಟನಾಟಕವಾಡಿದ ನೌಕರರನ್ನು ವಿಚಾರಣೆ, ಶಿಕ್ಷೆಗಳಿಗೆ ಗುರಿಪಡಿಸಿದ ವಾರ್ತೆಗಳು ದೇಶದ ಹಲವೆಡೆಗಳಿಂದ ಈಗೀಗ ಕೇಳಿಬರುತ್ತಿವೆ. ಅಧಿಕಾರಿಗಳಿಗಾದರೂ ವಂಚನೆ ನಡೆಸುವ ಅಧಿಕಾರವಿಲ್ಲವೆಂಬುದು ಇದರಿಂದ ಸ್ಪಷ್ಟ. ಅಂತಹ ಅಪರಾಧಿಗಳಲ್ಲಿ ಮೊದಲಿಗರಾಗಿ ತೋರುತ್ತಿರುವ ಮೇಲಿನ ತ್ರಿಮೂರ್ತಿಗಳಿಗೆ ಪ್ರಾಯಶ್ಚಿತ್ತ ಬೇಡವೆ? ಅಧಿಕಾರಿಗಳ ಪ್ರತಿಷ್ಠೆಗಿಂತ ಪ್ರಜೆಗಳ ಪ್ರಾಣಕ್ಕೆ ಅಧಿಕ ಬೆಲೆ ಕೊಡಬಲ್ಲ ಸ್ವತಂತ್ರ ಸರಕಾರವೊಂದು ಒಂದ್ವೇಳೆ ಮೇಲಿನ ಮೂವರೂ ಜಗತ್ಸಿದ್ಧ ಕೈದಿಗಳ ಪಟ್ಟಿಯಲ್ಲಿ ದಾಖಲಾಗುವರೆಂಬುದಕ್ಕನುಮಾನವಿಲ್ಲ. ಇಂತಹ ಪಾಪವಿಮೋಚನಾಕಾರ್ಯವೂ, ಯುದ್ಧ ಸಿದ್ಧತೆಗೆ ಬಾಧಕವೆಂದು ಸರಕಾರವು ಭಾವಿಸಲಾರದಷ್ಟೆ?

ಚೂರು-ಪಾರು

'ಶ್ರೀ. ಜೈಪ್ರಕಾಶ ನಾರಾಯಣರ ಆಹಾರ ನಿದ್ರೆಯನ್ನು ಕೆಡಿಸಲಾಗಿದೆ; ಬೆನ್ನಿಲ್ಲದ ಕುರ್ಚಿಯ ಮೇಲೆ ಬರ್ಫ [illegible] ಕೂತುಕೊಳ್ಳಿಸಿ ಅಮಾನುಷವಾಗಿ ನೋಡಲಾಗಿದೆ'—ಎಸೆಂಬ್ಲಿಯಲ್ಲಿ ನಿಲುವಳಿ ಸೂಚನೆ ತಂದ ಸರಕಾರದ ಮೇಲೆ ಶ್ರೀ ದೇಶಮುಖರ ಆರೋಪ.

ಜೈಲಿನಿಂದ ತಪ್ಪಿಸಿಕೊಳ್ಳುವ ಬುದ್ಧಿಯಿರುವ ಜೈಪ್ರಕಾಶರ ಕೈ ಕಾಲ ಬಲ ಕುಂದಿಸುವದೇ ತಮ್ಮ ಈಗಿನ ಧ್ಯೇಯವೆಂದು ಗೃಹ ಮಂತ್ರಿಗಳು ಹೇಳಲಿಲ್ಲ.

'ಬ್ರಿಟಿಷ್ ಆಳ್ವಿಕೆಯ ಪ್ರಯೋಜನಗಳನ್ನು ಉಪಕರಿಸಿಕೊಂಡಾಗ ಎದ್ದ [illegible] ಸ್ವಯಸ್ತಂಭನವಾಗಿ ಕಲ್ಕತ್ತೆಯಲ್ಲಿ ಜನರು ಸಾಯುತ್ತಿದ್ದಾರೆ ಹೊರತು ಆಹಾರಾಭಾವದಿಂದಲ್ಲವೆಂಬುದು ನಿಜವೇ?'—ಎಸೆಂಬ್ಲಿಯಲ್ಲಿ ನಿಯೋಗಿಯವರ ವ್ಯಂಗ್ಯ ಪ್ರಶ್ನೆ.

ನಿಜ! ಆದರೆ ಭಾರತೀಯರ ಇಂತಹ [illegible] ಕೃತಜ್ಞತೆಯನ್ನೂ ಹಿಸಿಕೊಂಡಾಗಲಾದರೂ ಚರ್ಚಿಲ್ ಅಮೆರಿಯವರ ಹೃದಯ ಚಲಾವಣೆ ನಿಲ್ಲದಿರುವದೊಂದು ಆಶ್ಚರ್ಯ!

'ಈ ದಿನ ಬಹು ಮುಂಜಾನೆ ಸಿಲೋನ್ ಮತ್ತು ಮದ್ರಾಸಿನ ಮೇಲೆ ಜಪಾನೀ ವಿಮಾನಗಳು ಕಾಣಿಸಿಕೊಂಡವು, ಒಂದನ್ನು ನಾಶ ಮಾಡಿ ಇನ್ನೊಂದನ್ನು ಹಿಮ್ಮೆಟ್ಟಿಸಲಾಗಿದೆ. [illegible]'—[illegible] ಯುದ್ಧ ವಾರ್ತೆಯ ಪ್ರಕಟಣೆ.

ಪ್ರಾಯಶಃ ಈಗ ಜಪಾನರ ಬೋಂಬುಗಳಿಲ್ಲ; [illegible] ಅವರು ವಿಮಾನಗಳನ್ನೇ ಕಳುಹುತ್ತಿದ್ದಾರೆ!

'[illegible] ಕೇಂದ್ರ ಎಸೆಂಬ್ಲಿಯಲ್ಲಿ ಭಾರತದ ಆಹಾರ ಚರ್ಚೆ ನಡೆಯುತ್ತಿದೆ'.

ಪ್ರಜಾ ಪ್ರತಿನಿಧಿ ಸದಸ್ಯರಲ್ಲೆಲ್ಲಾ ಸರಕಾರೀ ಮೆಂಬರರನ್ನೇ ಹಗಿದು ನುಂಗುವಷ್ಟು ಹೊಟ್ಟೆ ಹಸಿದಿದೆ!

'ಇದೇ ತಾ. [illegible] ನ್ಯೂಸಿಟಿನಲ್ಲಿ ಹಿಟ್ಲರರು, ಲಂಡನಿನಲ್ಲಿ ಚರ್ಚಿಲ್ಲರು ಭಾಷಣ ಮಾಡುತ್ತಾರೆ.'

—ಹೀಗೆ ಮುಂಚಿತವಾಗಿ [illegible] ಅವರೆಡು ಭಾಷಣಗಳ ಅಂಶಗಳು ಅದಲುಬದಲಾಗಿರಬಹುದೆಂದು ಚರ್ಚಿಲ್ಲರ ಭಾಷಣವೋದಿದವರಿಗನುಮಾನ ಬಂದಿದೆ!

'ಬ್ರಿಟಿಷ್ ಮಂತ್ರಿ ಮಂಡಲದಲ್ಲಿ ಅಲ್ಪಸ್ವಲ್ಪ ಬದಲಾವಣೆಯಾದರೂ ಅಮೆರಿಯವರು ಇದ್ದಲ್ಲೇ ಇದ್ದಾರೆ'.

ಭೂಕಂಪಕ್ಕಿಂತ ಕಡಿಮೆಯ ಅದಲುಬದಲಾವಣೆಗಳಿಂದ ಅಮೆರಿ ಅಲುಗಾಡುವಂತಿಲ್ಲ!

—ವಿನೋದಿ.

ತಾರುಣ್ಯ

[illegible] ಶೀಘ್ರಸ್ತಂಭನೆ ಮಾಡಿ, ರತಿ ಸುಖದಲ್ಲಿ ಪರಮಾನಂದವನ್ನುಂಟು ಮಾಡುವ ರಮಣ ವಿಲಾಸಿನಿ ಅತ್ಯುತ್ತಮ ಔಷಧಿ ಪಟ್ಟಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ,
184 ಜೈನಾ ಬಜಾರ್ ರೋಡ್,
ಮದ್ರಾಸು.

ಸ್ಥಳೀಯ ಏಜಂಟರು:—[illegible] ಫಾರ್ಮಸಿ

ಜಿಲ್ಲೆಯಲ್ಲಿ ಅಕ್ಕಿಯ ಸರಬರಾಯಿ ಮತ್ತು ವಿತರಣೆಯ ಬಗ್ಗೆ ಆಗಿರುವ ಏರ್ಪಾಡು.

೧. ಮಂಗಳೂರು ಮತ್ತಿತರ ನಗರಗಳಲ್ಲಿ ಪೂರ್ಣ ಹಂಚುಗೆಯನ್ನು ಜಾರಿಗೆ ತರಬೇಕು. ೨ ಅಕ್ಕಿಯ ವ್ಯಾಪಾರದ ಮತ್ತು ರಿಕ್ವಿಸಿಶನ್ ಮಾಡಿದ ಅಕ್ಕಿಯ ಮಾರಾಟದ ಹಕ್ಕುಗಳನ್ನು ದ. ಕನ್ನಡ ಜಿಲ್ಲಾ ಸೆಂಟ್ರಲ್ ಕೋಆಪರೇಟಿವ್ ಹೋಲ್‌ಸೇಲ್ ಸ್ಟೋರ್ಸಿಗೆ ಕೊಡಬೇಕು. ೩ ತಾಲೂಕಿನ [illegible] ಭೂಮಾಲಿಕರು ತಮ್ಮ ಪಟ್ಟದಲ್ಲೇ ತಂದೊಪ್ಪಿಸುವ ಅಕ್ಕಿ ಮುಡಿಗೆ ರೂ ೧೦ರ ಬೆಲೆ ಸಿಗಬೇಕು. ಎಂಬ ದ. ಕ. ಭೂಮಾಲಿಕ ಸಂಘದ ಹೇಳಿಕೆಯನ್ನು ಪ್ರಾಂತಿಕ ಕಂದಾಯ ಸಮಿತಿಯು ಸರ್ವಸಾಮಾನ್ಯ ಮಾನ್ಯಮಾಡಿ, ದ. ಕ. ಜಿಲ್ಲಾ ಸಹಕಾರಿ ಸ್ಟೋರ್ಸಿನವರು ಅಕ್ಕಿಯ ಸರಬರಾಯಿ ಮತ್ತು ವಿತರಣದ ಏರ್ಪಾಡನ್ನು ಮಾಡಬೇಕೆಂದೂ ಮಂಗಳೂರು [illegible]ಗಳಲ್ಲಿ (ಆದಷ್ಟು ಬೇಗನೆ) ಪೂರ್ಣ ಹಂಚುಗೆಯನ್ನು ಜಾರಿಗೆ ತರಬೇಕೆಂದೂ ಆಜ್ಞೆಗಳನ್ನು ಹೊರಡಿಸಿತು.

ತಾವೇ ಮುಂದಿಟ್ಟ ಯೋಜನೆಯನ್ನು ಸರಕಾರವು ಸ್ವೀಕರಿಸಿದ ಮೇಲೆ, ಭೂಮಾಲಿಕರು [illegible] ಸರಕಾರದ ಆಜ್ಞೆಯು ಫಲರೂಪಕ್ಕೆ ಬರುವಂತೆ ಮಾಡಲು ಒಪ್ಪದೆಯೇ ಮುಂದಾದರು. ಭೂಮಾಲಿಕ ಸಭೆಯೊಂದು ತಾ. ೭ರಂದು ನಡೆದು ಸರಕಾರದ ಆಜ್ಞೆಗೆ [illegible]. ಹಲವಾರು ಸಂದೇಹಗಳಿದ್ದುವು, ಅವುಗಳನ್ನು ಕಲೆಕ್ಟರರ ಮುಂದಿರಿಸಿ ಸಮರ್ಪಕ ಉತ್ತರಗಳನ್ನು ಪಡೆಯುವ ಅಧಿಕಾರವನ್ನು ಭೂಮಾಲಿಕರ ಸಂಘವು ಶ್ರೀ ಮೊಳಹಳ್ಳಿ ಶಿವರಾಯರಿಗೆ ಕೊಟ್ಟಿತು. ಸೆಂಟ್ರಲ್ ಸಹಕಾರೀ ಸ್ಟೋರ್ಸಿನ ಅಧ್ಯಕ್ಷರೂ ಆಗಿರುವ ಶ್ರೀ ಎಂ. ಶಿವರಾಯರು ತಾ ೮ರಂದು ಬೆಳಗ್ಗೆ ಕಲೆಕ್ಟರರನ್ನು ಕಂಡು ಮಾತನಾಡಿ ತಮ್ಮ ಪ್ರಶ್ನೆಗಳನ್ನು ಮುಂದಿಟ್ಟರು. ಆ ಪ್ರಶ್ನೆಗಳಿಗೆ ಕಲೆಕ್ಟರರು ಕೊಟ್ಟ ಉತ್ತರಗಳು:—[illegible] ಅಕ್ಕಿಯ ಬೆಲೆಗೆ ಈ ಆಜ್ಞೆ ಅನ್ವಯವಾಗುವದಿಲ್ಲ. ಹಿಂದೆ ರಿಕ್ವಿಸಿಶನ್ ಮಾಡಿದಾಗ [illegible] ಕ್ರಮವೇ ಈಗಲೂ. ಅಕ್ಕಿ ಭತ್ತಗಳನ್ನು [illegible] ಅಲ್ಲದೆ ಹೋಲ್‌ಸೇಲ್ ಸ್ಟೋರಿಗಾಗಲಿ ಅದರ ಏಜೆಂಟರಿಗಾಗಲಿ ಮಾರಲು ಆತಂಕವಿಲ್ಲವೆಂಬುದನ್ನು ಸ್ಪಷ್ಟಪಡಿಸಲಾಗುವದು. ಭತ್ತವನ್ನು ಅಕ್ಕಿಯಾಗಿ ಮಾರ್ಪಡಿಸುವದಕ್ಕೆ ಅಡ್ಡಿಯಿಲ್ಲ. ಸಾಧಾರಣ ಸುಗ್ಗಿ ಇಲ್ಲವೆ ಏಣೆಲು ರಾಶಿಗೆ ಮುಡಿಗೆ ೧೦; ಗುಡ್ಡೆ ಅಕ್ಕಿಗೆ ರೂ. ೧೦||; ಮಸ್ಸೂರಿಗೆ ರೂ. ೧೧, ಜೀರಿಗೆಗೆ ರೂ; ೧೩; ಕಚೆ ರಾಶಿಗೆ ರೂ ೯||. ಕ್ರಯ [illegible] ಭತ್ತಕ್ಕೆ ಒಂದು ಮುಡಿ ಅಕ್ಕಿ ಎಂಬ ಲೆಕ್ಕ ಹಿಡಿಯಲಾಗುವದು. 'ಹೆಚ್ಚಿಗೆ' ಅಕ್ಕಿ (Surplus) ಎಂದರೆ, ಸ್ವಂತದ ಮತ್ತು ವ್ಯವಸಾಯದ ಖರ್ಚಿಗೆ ಬೇಕಾದುದನ್ನು ಬಿಟ್ಟು ಉಳಿದ ಎಲ್ಲಾ ಅಕ್ಕಿ. ಇದನ್ನೆಲ್ಲಾ ಸ್ವಾಧೀನಪಡಿಸಿಕೊಳ್ಳುವ ಹಕ್ಕು ಸರಕಾರಕ್ಕೆ ಅಧಿಕಾರವಿದೆ, 'ಪೇಟೆಯ ಈಗಿನ ಧಾರಣೆ ಏರುತ್ತಿದೆ. ಅದನ್ನು ತಗ್ಗಿಸುವದಕ್ಕಾಗಿ ಈಗಿನ ಸ್ಟಾಕನ್ನು ನವಂಬರ ಅಂತ್ಯದೊಳಗೆ ಮಾರಲು ವ್ಯಾಪಾರಿಗಳಿಗೆ ಆಜ್ಞಾಪಿಸಬೇಕು. ಹಾಗೆ ಮಾರದಿದ್ದರೆ ಆ ಅಕ್ಕಿಯನ್ನು ರಿಕ್ವಿಸಿಶನ್ ಮಾಡಿಕೊಳ್ಳಲಾಗುತ್ತದೆಂದು ಹೆದರಿಸಬೇಕು'-ಎಂದು ಭೂಮಾಲಿಕರು ಕೇಳುವದು ಸಾಕ್ಷ್ಯವೇನೂ ಇಲ್ಲ- ಆದರೂ ಅವಶ್ಯವಿದ್ದುದನ್ನು ಸರಕಾರವು ಮಾಡುವದು. ರೈತರು ಸ್ಟೋರಿಗೆ ಅಕ್ಕಿಯನ್ನು ತಲುಪಿಸಿದರೆ ಅದರ ಮೌಲ್ಯವನ್ನು ಒಡನೆಯೇ ಕೊಡಲಾಗುವದು-ರೈತನ ಒಪ್ಪಿಗೆ ಇದ್ದರೆ ಆ ಮೌಲ್ಯವನ್ನು ಭೂಮಾಲಿಕರಿಗೆ ಕೊಡಬಹುದು- ಕೆಲ ತಾಲೂಕುಗಳಲ್ಲಿ ತಹಶಿಲ್ದಾರರು; ೧೯೪೪ ನವಂಬರದ ತನಕ ಮಾರಬಾರದೆಂದು ಆಜ್ಞಾಪಿಸಿರುವರು- ಅದರಿಂದೇನೂ ದೋಷವಿಲ್ಲ. ಈಗಿನ ಯೋಜನೆಯು ಅದನ್ನು ಪರಿಹರಿಸುವದು. ಹಾಗೆ 'ಹಿಡಿದಿರುವ' (freezing) ಅಕ್ಕಿಯು ವ್ಯಾಪಾರದ ಅಕ್ಕಿ ಮಾತ್ರ ಸ್ವಂತದ ಇಲ್ಲವೆ ವ್ಯಾವಸಾಯಿಕ ವೆಚ್ಚದ ಅಕ್ಕಿಗೆ ಆ ಆಜ್ಞೆ ಅನ್ವಯಿಸುವದಿಲ್ಲ.

CHAMPAE'S
SNOW & CASTREX
AGENTS:
SADANANDA STORES, UDIPI

ಯುದ್ಧ ಗತಿ

ರಶ್ಯದಲ್ಲಿ ಕೆಂಪು ಸೇನೆಯು ಸುವ್ಯವಸ್ಥವಾಗಿ ಮುಂದೊತ್ತುತ್ತಲೇ ಇದೆ. ಕ್ರಿಮಿಯಾದ ರಕ್ಷಣೆಗಾಗಿ ಜರ್ಮನರು ಅತ್ಯುಗ್ರ ಪ್ರತಿಭಟನೆ ಕೊಡುತ್ತಿದ್ದಾರೆಂದೂ, 11 ದಿನಗಳಲ್ಲಿ ನೂರು ನಿಷ್ಫಲ ಪ್ರತಿ ಧಾಳಿಯನ್ನು ಹೂಡಿರುವರೆಂದೂ ತಿಳಿದು ಬರುತ್ತದೆ. ನೀಪರ್ ವಿಭಾಗದಲ್ಲಿ ಝಾಪರೋಸೆಯಿಂದ ಕ್ರಿವೋಯಿರೋಗ್ ಎಂಬಲ್ಲಿ ವರೆಗಿನ ಜರ್ಮನ್ ರಕ್ಷಣಾ ಲೈನನ್ನು ಭೇದಿಸಲು ಮೊದಲೇ ನಿರೀಕ್ಷಿಸಲ್ಪಟ್ಟಿದ್ದ ರಶ್ಯನ್ ಧಾಳಿಯೀಗ ಆರಂಭವಾಗಿದೆ. ಹಲವೆಡೆ ಜರ್ಮನ್ ವ್ಯೂಹವನ್ನವರು ಭೇದಿಸಿದ್ದಾರೆ. ಪೋಲೆಂಡಿನ ಗಡಿಗೆ ಅರ್ವತ್ತೇ ಮೈಲು ದೂರದ ರಸ್ತೆಯನ್ನು ಕೆಂಪು ಸೇನೆ ಮುಟ್ಟಿದೆ.

ಇಟೆಲಿಯಲ್ಲಿ ಮಿತ್ರರ ಸಾವಧಾನಾಕ್ರಮಣ ನಡೆದಿದೆ. ರೋಮ್ ಮುಂಭಾಗದ 83 ಮೈಲುದ್ದದ ಪರ್ವತ ಪ್ರದೇಶದಲ್ಲಿ ಹಿಟ್ಲರರು ಛಳಿಗಾಲ ರಕ್ಷಣಾ ವ್ಯೂಹವನ್ನು ನಿರ್ಮಿಸಿ ಜನವರಿ ತನಕ, ಏನೇ ಸಂಭವಿಸಿದರೂ ಅಲ್ಲಿಂದ ಹಿಮ್ಮೆಟ್ಟಬಾರದೆಂದು ಆಜ್ಞೆಯಿತ್ತಿದ್ದಾರೆ. ನಾಜೀ ವಿಮಾನಗಳೂ ಬಹು ಸಂಖ್ಯೆಯಿಂದ ಅಲ್ಲಿ ಧಾಳಿಯಿಡಲಾರಂಭಿಸಿವೆ. ಇಟೆಲಿ ಯುದ್ಧದಲ್ಲಿ ಈ ತನಕ ಕಂಡುಬಾರದಂತಹ ಕಠೋರ ಪ್ರತಿಭಟನೆಯು ತಮ್ಮನ್ನು ಕಾದಿದೆ ಎಂದು ಮಿತ್ರರರಿತಿದ್ದಾರೆ. ರೋಮ್ ವಶವಾದೊಡನೆ ತಾನು ರಾಜೀನಾಮೆ ಕೊಡುವೆನೆಂದು ಬೊಡೊಗ್ಲಿಯೋ ಹೇಳಿದ್ದಾನೆ.

○ ಶಾಂತ ಸಮುದ್ರ ವಿಭಾಗದಲ್ಲಿ ಮಿತ್ರರ ವಿಮಾನ ಧಾಳೀ ಕೃತ್ಯ ನಡೆದಿದೆ. ರಾಬೂಲಿನಲ್ಲಿ ಜಾಪಾನೀ ಹಡಗಗಳನ್ನು ಮುಳುಗಿಸಲಾಗಿದೆ.

○ ಲೆಬನಾನ್ ಗೊಂದಲದಲ್ಲಿ ಮಿತ್ರ ರಾಷ್ಟ್ರೀಯರು ಕೈ ಹಾಕುವ ಲಕ್ಷಣಗಳಿವೆ. ಫ್ರೆಂಚರು ತಮ್ಮ ಧೋರಣೆಯನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ

○ ತಾ 14ರಲ್ಲಿ ಮದ್ರಾಸಿಗೆ ಬರುತ್ತಿದ್ದ ಇಂಡೋ-ಸಿಲೋನ್ ಎಕ್ಸ್‌ಪ್ರೆಸ್ಸು ಸೆಂಡರ್ನೂರು ಎಂಬಲ್ಲಿ ಮಹಾ ಅಪಘಡಕ್ಕೊಳಗಾಗಿ 39 ಜನರು ಮಡಿದು 88 ಜಖಂಗೊಂಡಿದ್ದಾರೆ. ಇದು ದುಷ್ಕರ್ಮಿಗಳ ಹಂಚಿಕೆ ಎಂಬ ಅನುಮಾನಕ್ಕಾಸ್ಪದ ಇಲ್ಲವಂತೆ.

○ ಮುಸ್ಲಿಂ ಲೀಗ್ ಕೌನ್ಸಿಲಿನ ಸಭೆಯು ನವಡಿಲ್ಲಿಯಲ್ಲಿ ಈ ವಾರ ನಡೆದು, ಹಲವು ನಿರ್ಧಾರಗಳನ್ನು ಮಾಡಿದೆ. ಮಿ. ಜಿನ್ನರು ಸರ್ವಾನುಮತದಿಂದ ಮುಂದಿನ ವರುಷ ಕ್ಕೂ ಲೀಗ್ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

○ ಶ್ರೀ. ಕೆ. ಎಮ್. ಮುನ್ಶಿಯವರು ವೈಸರಾಯರೊಡನೆ ಸಂಭಾಷಣೆ ನಡೆಸಿದರು.

○ ಕೇಂದ್ರ ಎಸೆಂಬ್ಲಿಯ ಅಧಿವೇಶನ ನಡೆಯುತ್ತಿದೆ. ಆಹಾರ ಪರಿಸ್ಥಿತಿ ಮೊದಲಾದ ಪ್ರಾಮುಖ್ಯ ವಿಷಯಗಳು ಚರ್ಚಿಸಲ್ಪಡುತ್ತಿವೆ. ಕಾಂಗ್ರೆಸ್ ಸದಸ್ಯರು ಭಾಗವಹಿಸಿದ್ದಾರೆ.

○ ಬಂಗಾಳದ ಹಸಿವು ಮರಣಗಳ ಸಂಖ್ಯೆಯಿನ್ನೂ ತಗ್ಗಿಲ್ಲ. ಕಲ್ಕತ್ತಾ ನಗರವೊಂದರಲ್ಲೇ ದಿನಕ್ಕೆ 100ಕ್ಕೆ ಮಿಕ್ಕಿ ಸಾಯುತ್ತಿರುವ ವಾರ್ತೆ ಬರುತ್ತಲೇ ಇದೆ,

○ ಮಿ. ಅಮೆರಿಯವರು ಹೋಗಬೇಕು ಎಂಬ ಸೂಚನೆಯೊಂದು ಕೇಂದ್ರ ಎಸೆಂಬ್ಲಿಯಲ್ಲಿ ಮುಂದೆಬಂದಿದೆ. ಚರ್ಚಿಸಲ್ಪಡಲಿದೆ,

○ 'ಹಿಂದುಸ್ಥಾನದಲ್ಲಿ ಸಂಯುಕ್ತ ಕೇಂದ್ರ ಸರಕಾರ ಸ್ಥಾಪನೆಯ ಭಾವನೆ ಹುಟ್ಟುತ್ತಿರುವ, ಇಂಗ್ಲಾಂಡನ್ನೀಗ ಆಳುತ್ತಿರುವ, ಅಪ್ರಾಗತಿಕ ಬ್ರಿಟಿಷರ ಧೋರಣೆಯಿಂದ ಅವರು ಹಿಂದುಸ್ಥಾನದ ಮೇಲಿನ ತಮ್ಮ ಹಿಡಿತವನ್ನು ಸಡಿಲಿಸಲು ಸಿದ್ಧರಿಲ್ಲವೆಂಬುದೊಂದು ಸುಸ್ಪಷ್ಟ. ಪಾಕಿಸ್ಥಾನ ವಿನಹ ಹಿಂದುಗಳಿಗಾಗಲೀ ಮುಸಲ್ಮಾನರಿಗಾಗಲೀ ಸ್ವಾತಂತ್ರ್ಯವಿಲ್ಲ'-ಎಂದು ಮಿ. ಜಿನ್ನರು ಲೀಗ್ ಕೌನ್ಸಿಲಿನ ಭಾಷಣದಲ್ಲಂದಿದ್ದಾರೆ.

ಕೇರಳ
ಘನತರ
'ಡೆಂಟಿಫ್ರಿಸ್' ದಂತಚೂರ್ಣ
ಹಲ್ಲುರೋಗಗಳಿಗೆ ಅತ್ಯುತ್ತಮ.
ಶಾಸ್ತ್ರೀಯರೀತ್ಯಾ ತಯಾರಿಸಲ್ಪಟ್ಟುದು
ಮತ್ತು
ಮಿತ ದರದಲ್ಲಿ ಮಾರಾಟಮಾಡಲ್ಪಡುವುದು.
ಕಾರ್ಡುಬೋರ್ಡು ಪೊಟ್ಟಣಗಳಲ್ಲೂ 'ಬೆಕಲೈಟ್' ಕರಡಿಗೆಗಳಲ್ಲೂ ಸೀಸೆಗಳಲ್ಲೂ ಭದ್ರವಾಗಿರಿಸಲ್ಪಟ್ಟಿದೆ.
ತಯಾರಿಸಿದವರು:
ಕೇರಳಾ ಸೋಪ್ ಇನ್ಸ್ಟಿಟ್ಯೂಟ್, ಕಲ್ಲಿಕೋಟೆ
(ಸರಕಾರೀ ಸಂಸ್ಥೆ)
K. S. I. I.

1944ನೇ ಇಸವಿಯು ಇನ್ನೊಂದೂವರೆ ತಿಂಗಳಲ್ಲಿ ಬರುವುದು. ಆದರೆ ನಮ್ಮ ನವಭಾರತ ಪಾಕೆಟ್ ಡೈರಿ ಬರುವ ವಾರದಲ್ಲೇ ಸಿದ್ಧವಾಗಿ ವಿಕರಿಗೆ ಬರುವುದು. ಕಳೆದ ವರ್ಷ ತಡವಾಗಿ ಬಂದ ಎಷ್ಟೋ ಜನರು ಡೈರಿಸಿಗದೆ ನಿರಾಶರಾದರು. ಆದುದರಿಂದ ನಿಮ್ಮ ಪ್ರತಿಯನ್ನು ಸಕಾಲದಲ್ಲಿ ಕೊಂಡುಕೊಳ್ಳಲು ಮರೆಯದಿರಿ.

ದರಗಳು:

ಸಣ್ಣ ಸೈಜು (ಸಾದಾ) 1—0—0 (ಕೆಲಿಕೊ) 1—4—0
,, (ಮುಚ್ಚಳದ್ದು) 1—8—0 ದೊಡ್ಡ ಸೈಜು (ಕೆಲಿಕೊ) 2—0—0
ದೊಡ್ಡ ಸೈಜು (ಮುಚ್ಚಳದ್ದು) 2—6—0

ಕಳೆದ ವರ್ಷದಂತೆ ಈ ವರ್ಷವೂ ನಮ್ಮ ಡೈರಿಗಳಿಗೆ ನುಣುಪಾದ ಬಿಳುಪು ಕಾಗದವನ್ನು ಉಪಯೋಗಿಸಲಾಗಿದೆ. ಒಂದೊಂದು ಪ್ರತಿಯನ್ನು ಅಪೇಕ್ಷಿಸುವವರು ಸಣ್ಣ ಸೈಜಿನ ಡೈರಿಗೆ 0-3-0; ದೊಡ್ಡ ಸೈಜಿನದ್ದಕ್ಕೆ 0-4-0; ಪ್ರತ್ಯೇಕ ಅಂಚವೆಚ್ಚ ಕಳಿಸಬೇಕು. ವ್ಯಾಪಾರಿಗಳಿಗೆ ಕಮಿಶನ್ ಇದೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ತಾ. **20—11—43**ರಿಂದ
ಬೊಂಬೆ ಟೋಕಿಸ್‌ನವರ
ಝೂಲಾ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ
ಅಶೋಕಕುಮಾರ್, ಲೀಲಾ ಚಿಟ್ನಿಸ್, ಶಾನ್‌ವಾಜ್
ಬರುವುದು—ಕಲಿಯುಗ
ಕನ್ನಡ ಹರಿಶ್ಚಂದ್ರ ನಿರೀಕ್ಷಿಸಿರಿ.

ಗವರ್ನರರ 4ನೇ ಎಡ್ವೈಸರರ ದ. ಕ. ಜಿಲ್ಲಾ ಸಂಚಾರ ಕಾರ್ಯಕ್ರಮ

ತಾ. 23-11-43ನೇ ಅಪರಾಹ್ನ ಮಂಗಳೂರಿಗಾಗಮನ. 24ರಲ್ಲಿ ಮಂಗಳೂರಿನ ಕಾರ್ಯಕ್ರಮ ಮುಗಿಸಿ, 25ನೇ ಬೆಳಿಗ್ಗೆ 8-30ಕ್ಕೆ ಕಾರಿನಲ್ಲಿ ಹೊರಟು, ಗುರುಪುರ, ಮೂಡಬಿದ್ರೆ, ಕಾರ್ಕಳ, ಹಿರಿ ಬೈಲೂರುಗಳ ಕಾರ್ಯಕ್ರಮ ನೆರವೇರಿಸಿ, ಘಂಟೆ 12-15ಕ್ಕೆ ಸರಿಯಾಗಿ ಉಡುಪಿಗಾಗಮನ. ಉಡುಪಿಯ ವೆಂಟಲೇಂಡ್ ಬಂಗಲೆಯಲ್ಲಿ ಊಟ, ವಿಶ್ರಾಂತಿ ಪಡೆದು, ಘಂಟೆ 2ಕ್ಕೆ ತಾಲೂಕು ಆಫೀಸಿನಲ್ಲಿ ಬೇಸಾಯಗಾರರ ಪರಿಷತ್ತಿಗೆ ಹಾಜರಾಗುವರು. 3 ಘಂಟೆಗೆ ಕಲ್ಯಾಣಪುರಕ್ಕೆ ಪ್ರಯಾಣ. ಅಲ್ಲಿಂದ ಮರಳಿ ಉಡುಪಿಗೆ ಬಂದು ಸೆಂಟ್ಲೆಂಡ್ ಪೇಟೆಯ ಬಂಗಲೆಯಲ್ಲಿ ಚಹಾ ಕೂಟ ಪಡೆದು ಘಂಟೆ 5ಕ್ಕೆ ಮಂಗಳೂರಿಗೆ ಹೊರಡುವರು.

NOTICE.

ಮಂಗಳೂರು ಡಿ. ಮು. ಕೋರ್ಟಿನಲ್ಲಿ.

S. C. 419/1943.

ಬೆಳಾಡು ನಾರಾಯಣ ಭಟ್ಟ — ವಾದಿ.

ಮತ್ತು

ರೀತಾ ಲೋಬೋಬಾಯಿ ಕೂಡಾ-ಪ್ರತಿವಾದಿರು

2ನೇ ಪ್ರತಿವಾದಿ. ಮಂಗಳೂರು ತಾಲೂಕು ಸುರತ್ಕಲ್ ಗ್ರಾಮದ ಮರಿಯಾನ್ ಸೋಜರ ಮಗಳು ಕತ್ರಿನ ಸೋಜಾ ಬಾಯಿಗೆ

ಮೇಲೆ ಕಾಣಿಸಿದ ವಾದಿಯು ನಿಮ್ಮ ಮೇಲೆ ಒಂದು ವ್ಯಾಜ್ಯ ದಾಖಲು ಮಾಡಿದ್ದಾರೆ. ಆದಕಾರಣ ದಾವೆಗೆ ಖುದ್ದಾಗಲೀ ಕ್ರಮವಾದ ಮಾಹೀತು ಪಡಕೊಂಡು ವ್ಯಾಜ್ಯ ಸಂಬಂಧವಾದ ಮುಖ್ಯ ಸವಾಲುಗಳಿಗೆ ಜವಾಬು ಕೊಡತಕ್ಕ ಪ್ಲೀಡರ್ ಮೂಲಕವಾಗಲೀ ದಾವೆಗೆ ಪ್ರತ್ಯುತ್ತರ ಹೇಳುವುದಕ್ಕಾಗಿ ನೀವು 1943ನೇ ಯಿಸ್ವಿ ನವಂಬ್ರ ತಾ 16ರಲ್ಲು ಬೆಳಿಗ್ಗೆ ಗಂಟೆ 10½ಗೆ ಈ ಕೋರ್ಟಿನಲ್ಲಿ ಹಾಜರಾಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ನಿಮ್ಮ ಗೈರಾಜರಿಯಲ್ಲಿ ವ್ಯಾಜ್ಯವು ಫೈಸಲು ಮಾಡೋಣಾದೀತೆಂತ ನೀವು ತಿಳಿದಿರತಕ್ಕದ್ದು.

(By Order of the Court)

K. Gopal Rau.
Advocate for Plff

Notice

In the Court of the Dt. Munsiff of Mangalore.

S. C. Suit No. 442/43,

Between—
J. A. Brito— Plaintiff
and
N. Padmappa— Defendant.

Notice to the defendant, N.Padmappa, broker, residing near Railway Goods shed,Bunder, Mangalore,is hereby given that the plaintiff has filed the above suit against him for the recovery of Rs. 66-10-3 being the balance amount due in respect of advances made by the plaintiff to him from 31-8-1942 upto 31-10-42 and that the said suit is posted to 23-11-1943 for hearing. On default of the defendant's appearance on the abovesaid date, the suit will be heard and determind exparte.

(By order)

John Gonsalves, LLB.

Mangalore, 15—11—1943 } Vakil for Plff.

Degrees: Books: Medicines
Free H. L. M. S.M, B, H. M, D, etc Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 aunas stamp:—
Prof. Dr. N. H. Chhatbar,
Principal Indian Homeopathi Institute & Society (Govt. Regd)
P.O. MAHUVA (Kathiawar Dt. India.)

Sidha-Kalpa Kavach (Regd.)
No. 3 Rs 2. No. 2 Rs. 5 No. 1 Rs. Special Rs. 10, Extra Special Rs. 17 for love marriage health, wealth. Ask any six questions with M. O. Re. 1/4 and get correct answers by returnpost. Life reading Rs.10 No V.P.P. SendM.O,Free pmplets.
Prof. Dr. N. H Chhatbar.
P. O. MAHUVA (Kathiawar India.)

ದಕ್ಷಿಣ ಕನ್ನಡ.

ಮಂಗಳೂರು.

ಬರಲಿರುವರು–ಆಹಾರ ವಿಷಯದಲ್ಲಿ ಗವರ್ನರರ ಬೋಧಕರಾದ ಸರ್ ರಾಮಮೂರ್ತಿ ಅವರು ತಾ| ೨೦ರಂದು ಸಂಜೆ ಮಂಗಳೂರಿಗೆ ಬರುವರು. ಸಿವಿಲ್ ಸಪ್ಲೈಸ್ ಕಮಿಶನರಾದ ವಿ | ಗ್ರಬ್ ಅವರು ತಾ| ೧೩ರಂದು ಮಂಗಳೂರಿಗೆ ಬಂದವರು ಆ ದಿನವೂ ಮರುದಿನವೂ ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ಅಭ್ಯಾಸಿಸುವರು.

ಕುಷ್ಠ ರೋಗಿ.ಗಳ ಧರ್ಮದ ಆಸ್ಪತ್ರೆ ಮನೆಯನ್ನು ಜಿಲ್ಲಾ ಕಲೆಕ್ಟರ ಮಿ| ಕರಂತ್ ಲ್ಯಾ ಅವರು ತಾ|೮ರಂದು ಸಂಜೆ ಆಂಕನಾಡಿಯಲ್ಲಿ ತೆರೆದರು. ಜಿಲ್ಲಾ ನ್ಯಾಯಾಧೀಶರಾದ ಮಿ| ಕೋಮನ್ಸ್ ಅವರು ಅಧ್ಯಕ್ಷತೆ ವಹಿಸಿದ್ದರು. ನಗರ ಸಭೆಯು ತೆರೆಯುತ್ತಿರುವ ೫ ಭಿಕ್ಷುಕರ ಧರ್ಮದ ಆಡಗೆ ಮನೆಗಳಲ್ಲಿ ಇದೊಂದು. ಸೈಮನ್ ಕುಷ್ಠ ರೋಗಿಗಳ ವಸತಿಯ ಮೇಲ್ವಿಚಾರಕರಾಗಿರುವ ಫಾದರ್ ಕ್ಯೊಲೋ ಅವರೇ ಈ ಆಡಗೆ ಮನೆಯನ್ನು ನಡೆಸುವರು.

ಮದ್ರಾಸು ಸತ್ಕಾರ ಕೂಟ–ದ. ಕ ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ. ಆರೂರು ಲಕ್ಷ್ಮೀನಾರಾಯಣರಾಯರು ಮದ್ರಾಸಿಗೆ ಬಂದಿದ್ದಾಗ ಮೈಸೂರು ಕೆಫೆಯ ಮಾಲಿಕರಾದ ಶ್ರೀ. ಗೋಪಾಲಾಚಾರ್ಯರೂ ಇತರ ಕೆಲ ಕನ್ನಡ ಮಹನೀಯರೂ ಅವರ ಗೌರವಾರ್ಥ ತಾ. ೪ರಂದು ಒಂದು ಸತ್ಕಾರ ಕೂಟವನ್ನೇರ್ಪಡಿಸಿದರು.

ರೇಶನಿಂಗ್ ಬರುವ ಮುಂಚೆ ಅಕ್ಕಿ ಕ್ರಯ ಏಕೆ ಏರಬೇಕು? ಮಂಗಳೂರು ನಗರದಲ್ಲಿ ರೇಶನಿಂಗ್, ಬೇಗನೇ ಜಾರಿಗೆ ಬರಲಿದೆಯೆಂದು ಮದರಾಸು ಪ್ರಾಂತಿಕ ರೆವೆನ್ಯೂ ಬೋರ್ಡಿನವರ ಅಪ್ಪಣೆಯಿಂದ ತಿಳಿದು ಬರುತ್ತದೆ.ಆದರೆ ಈಗ ಕೆಲ ದಿನಗಳಿಂದ ಅಕ್ಕಿ ಕ್ರಯ ಏರುತ್ತಾ ಇದೆ. ಅಕ್ಕಿ ಮುಡಿ ಒಂದರ ರೂ. ೧೮ಕ್ಕೆ ವಿಕ್ರಯವಾಗುತ್ತದೆ. ಹೀಗಾದರೆ ಬಡ ಜನರು ಇಲ್ಲಿ ಉಪವಾಸ ಬೀಳಲೇ ಬೇಕು. ಅಧಿಕಾರಿಗಳು ಇದರ ಕಡೆಗೆ ಕಣ್ಣು ತೆರೆದು ನೋಡಲಾರರೇ?

ಉಡುಪಿ.

ಸಾಹುಕಾರರ ಸಭೆಯು–ತಾ. ೧೪ರಲ್ಲಿ ಕೊಪರೇಶನ್ ಬೇಂಕಿನ ಮಾಳಿಗೆಯಲ್ಲಿ ಶ್ರೀ ಉಪೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಸಾಹುಕಾರರ ಸಂಘವನ್ನು ರಿಜಿಸ್ಟ್ರಿ ಮಾಡುವರೆ ಲೈಸೆನ್ಸು ದಯಪಾಲಿಸಿದ ಮಾನ್ಯ ಮದ್ರಾಸ್ ಗವರ್ನರರಿಗೆ ಧನ್ಯವಾದಗಳನ್ನರ್ಪಿಸಲಾಯಿತು. ರಿಕ್ವಿಸಿಶನ್ ಪದ್ಧತಿಯಿಂದ ಸಾಹುಕಾರರಿಗೆ ಉಂಟಾದ ಮತ್ತು ಉಂಟಾಗಬಹುದಾದ ಸಂಕಷ್ಟಗಳನ್ನು ಅರಿಕೆಮಾಡಿಕೊಳ್ಳುವರೆ ತಾ. ೨೪ರಲ್ಲಿ ಉಡುಪಿಗೆ ಬರಲಿರುವ ಮಾನ್ಯ ಗವರ್ನರರ ಎಡ್ವೈಸರ್ ಶ್ರೀ. ಎಸ್. ವಿ. ರಾಮಮೂರ್ತಿಯವರನ್ನು ಭೇಟಿಯಾಗಲು ಶ್ರೀಗಳಾದ ಉಪೇಂದ್ರ ಶ್ರೀನಿವಾಸ ನಾಯಕ್, ಬರ್ನಾರ್ಡ್ ಕೃಷ್ಣ ರಾವ್, ಎ. ಕೃಷ್ಣಯ್ಯ ಹೆಗ್ಡೆ, ಕೇಶವ ಕಾಮತ್ ಮತ್ತು ವೋಮು ಸೆಟ್ಟರನ್ನು ಆರಿಸಲಾಯಿತು.

ರೈತರ ಸಭೆ–ಯು ತಾ ೧೫ರಲ್ಲಿ ನವಯುಗ ಪ್ರೆಸ್ಸಿನ ಮಾಳಿಗೆಯಲ್ಲಿ ಶ್ರೀ ವೆಂಕೋಬಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ರಿಕ್ವಿಸಿಶನ್ ಕುರಿತು ಮಾತುಕತೆಗಳಾದುವು. ಶ್ರೀ. ಕೆ. ಜೆ. ಬಲ್ಲಾಳರು ಸಭೆ ಕರೆದ ಉದ್ದೇಶಗಳನ್ನು ವಿವರಿಸಿ ಹೇಳಿದ ಮೇಲೆ ವಿಷಯಗಳೆಲ್ಲಾ ಸವಿವರವಾಗಿ ಚರ್ಚಿಸಲ್ಪಟ್ಟು, ಉಡುಪಿ ತಾಲೂಕನ್ನು ಅಧಿಕೋತ್ಪತ್ತಿಯ ತಾಲೂಕಾಗಿ ಗಣಿಸಿ ಇಲ್ಲಿಂದ ೨ ಲಕ್ಷ ಮುಡಿ ಅಕ್ಕಿ ರಿಕ್ವಿಸಿಶನ್ ಮಾಡಬೇಕೆಂಬ ಸರಕಾರದ ಅಭಿಪ್ರಾಯವನ್ನು ಖಂಡಿಸಲಾಯಿತು. ಈ ವರುಷ ಶೇ. ೩೫ರಷ್ಟು ಬೆಲೆ ನಷ್ಟವಾಗಿರುವದರಿಂದ, ವರ್ಕಲುಗಳಿಗೆ ನೋಟಿಸು ಕೊಟ್ಟು ಮಾಡಿದ ರಿಕ್ವಿಸಿಶನ್ ಅನ್ಯಾಯದ್ದಿರುವದರಿಂದ ದುರಸ್ತಿಯ ಸಾಧ್ಯವಿದ್ದು ಅದನ್ನು ರದ್ದು ಪಡಿಸಬೇಕೆಂದು ನಿರ್ಧರವಾಯಿತು. ಸರಕಾರವು ಒಂದು ಟ್ರಿಬ್ಯುನಲ್ ಏರ್ಪಡಿಸಿ, ದ. ಕ. ವರ್ಗದಾರ ಸಂಘವು ಸೂಚಿಸಿದ ಧಾರಣೆಗೆ ಕಮ್ಮಿಯಾಗದಂತೆ ದರ ನಿಶ್ಚೈಸಬೇಕು. ಲೋಕಲ್ ಏಜನ್ಸಿಗಳನ್ನು ಸ್ಥಾಪಿಸಿ ಅವುಗಳಿಂದಲೇ ಅಕ್ಕಿಯ ವಿತರಣೆಯನ್ನು ಮಾಡಿಸಬೇಕು ಎಂಬ ನಿರ್ಧಾರಗಳಾದವು. ತಾ. ೨೪ರಲ್ಲಿ ಬರಲಿರುವ ಮಾನ್ಯ ಗವರ್ನರರ ಎಡ್ವೈಸರರಿಗೆ ರೈತರ ಹಾಲುಹವಾಲುಗಳನ್ನು ತಿಳಿಸ ಬರೆ ಮನವಿಯೊಂದನ್ನು ತಯಾರಿಸುವರೆ ಶ್ರೀಗಳಾದ ಕೆ. ಜೆ. ಬಲ್ಲಾಳ್, (ಅಧ್ಯಕ್ಷ) ಬಿ. ವಾಸುದೇವ ರಾವ್, (ಕಾರ್ಯದರ್ಶಿ) ಪಿ ಪಿ ನಾಯಕ್, ಎನ್. ರಾಜಗೋಪಾಲಕೃಷ್ಣ ರಾವ್ ಮತ್ತು ದಾಪಿ ಜಿ ಆಚಾರ್, ಇವರಿಗೆ ಅಧಿಕಾರವೀಯಲಾಯಿತು. ಎಡ್ವೈಸರರನ್ನು ಭೇಟಿಯಾಗುವ ಸ್ಥಳವು ವಿಕ್ಟೋರಿಯಾ ಜ್ಯುಬಿಲಿ ಯೂಸಿಯನ್ ಕ್ಲಬ್ ಎಂದಾದ ಒಳಕಸಿದ್ದಿ ಕ್ಲಬ್ಬಿನ ಪಟಾರವನ್ನು ಆ ದಿನದ ಮಟ್ಟಿಗೆ ರೈತರ ಸಂಘದ ಸುಪರ್ದಿಗೆ ಬಿಟ್ಟು ಕೊಡುವಂತೆ ಕ್ಲಬ್ಬಿನ ಅಧಿಕಾರಿಗಳನ್ನು ಕೇಳಿಕೊಳ್ಳಲಾಯಿತು. ಈ ಸಂಗತಿಯನ್ನು ಜಿಲ್ಲಾ ಕಲೆಕ್ಟರ್ ಸಾಹೇಬರ ಅವಗಾಹನೆಗೆ ತರಬೇಕೆಂದು ಸರ್ವಾನುಮತ ನಿರ್ಣಯವಾಯಿತು.

ಸೌ. ಶಾಮಲಾಬಾಯಿ

ಬೆಳಗಾಂವಕರರ ನಿಧನ

ಜಯಕರ್ನಾಟಕ ಮಾಸಪತ್ರಿಕೆಯ ಹಿಂದಿನ ಸಹಸಂಪಾದಿಕೆಯರಾಗಿದ್ದ ಸೌ. ಶಾಮಲಾಬಾಯಿ ರಾಮಚಂದ್ರರಾವ ಬೆಳಗಾಂವಕರ ಇವರು ತಾ. ೯ರಂದ ಸಾಯಂಕಾಲ ನಿಧನ ಹೊಂದಿದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ. ಇವರು ಲೇಖಿಕೆಯರೂ ಆಗಿದ್ದರು. ಅವರು ಬರೆದ "ದೂವಿಸಿಲು" ಎಂಬ ಚಿಕ್ಕ ಕತೆಗಳ ಸಂಗ್ರಹವೊಂದು ಪ್ರಸಿದ್ಧವಾಗಿ ಜನರ ಮೆಚ್ಚುಗೆಗೆ ಪಾತ್ರವಾಗಿರುವದಲ್ಲದೆ ಅವರ ಮತ್ತೊಂದು "ಹೊಂಬಿಸಿಲು" ಎಂಬ ಕಥಾ ಸಂಗ್ರಹವೂ ಬೇಗನೆ ಪ್ರಸಿದ್ಧವಾಗಲಿದೆ. ಸಾಹಿತ್ಯದಲ್ಲಿ ಕೆಲಸ ಮಾಡಿದಂತೆಯೇ ಅವರು ಕರ್ನಾಟಕದ ಸಾಮಾಜಿಕ ಸಾಂಸ್ಕೃತಿಕ [illegible]ದಲ್ಲಿ ಬಹಳ ಕೆಲಸ ಮಾಡಿರುವರು. ಕರ್ನಾಟಕ ಮಹಿಳಾ ಸಮಾಜದ ಕಾರ್ಯದರ್ಶಿನಿಯೂ ಆದರ ಪ್ರತಿನಿಧಿಗಳಾಗಿ ಅವರು ಬೆಂಗಳೂರು, ನಾಗಪುರ, ಕಲಕತ್ತಾ, ಟಿಟ್ಟಿ ಮೊದಲಾದ ದೂರದ ಪಟ್ಟಣಗಳಲ್ಲಿ ಸಂಚರಿಸಿ ಬಂದಿದ್ದರು. ಇವರು ಧಾರವಾಡ ನಗರ ಸಭೆಯ ಹಾಗು ಸ್ಕೂಲಬೋರ್ಡಿನ ಸದಸ್ಯರಾಗಿಯೂ ಕೆಲಸ ಮಾಡಿರುವರು.

ಇಂಟರ್ ಸ್ಕೂಲ್ ಕ್ರಿಕೆಟ್ ಪಂದ್ಯಾಟಗಳ ಫೈನಲ್ಸಿನಲ್ಲಿ ಉಡುಪಿ ಕ್ರಿಶ್ಚನ್ ಹೈಸ್ಕೂಲಿನವರು ಮೂಲ್ಕಿ ಬೋರ್ಡ್ ಹೈಸ್ಕೂಲಿನವರೆದುರು ಆಡಿ 26 ರನ್ಸ್ ಹೆಚ್ಚಿಗೆ ತೆಗೆದು ಜಯ ಹೊಂದಿರುವರು.

ತಿದ್ದುಪಡಿ.

ತಾ. 11-11-43ನೇ ಸಂಚಿಕೆಯ 4ನೇ ಪುಟದಲ್ಲಿ ಪ್ರಕಟಿಸಲ್ಪಟ್ಟ ಉಡುಪಿ ಮುನ್ಸೀಫ್ ಕೋರ್ಟು O. P. 77/43ನೇ ಅರ್ಜಿ ನೋಟೀಸಿನ ದುರಸ್ತಿ.

ಸದರೀ ನೋಟೀಸಿನಲ್ಲಿ "5804ನೇ ಪೋಲಿಸಿ ಪ್ರಕಾರ ಬಹಾ ಆಪೇಜು ಬೋನಸ್ಸು ವಗೈರೆ" ಎಂತ ಆದ ಕೊನ್ನೆ ಕೆಳಗಿನ ವಾಚಕಗಳನ್ನು ಓದತಕ್ಕದ್ದು.

"ಮತ್ತು ದ. ಕ. ಜಿಲ್ಲಾ ಎಡ್ಯುಕೇಶನಲ್ ಆಫೀಸರರಿಂದ ಶಿವಾಯಿ ಹಿಂದೂ ಹಾಯರ್ ಎಲಿಮೆಂಟರಿ ಶಾಲಾ ಮೆನೇಜರನಾಗಿದ್ದ ಮೃತ ರಘುರಾಮ ಹೆಗ್ಡೇರಿಗೆ 1943ನೇ ಇಸ್ವಿ 3ನೇ ಕಂತಿನ ಎಲಿಮೆಂಟರಿ ಬಹಾ ಗ್ರೇಂಟು ಮತ್ತು ಡಿಯರ್‌ನೆಸ್ಸ್ ಎಲೋವೆನ್ಸ್ ಸಹಾ ರೂಪಾಯಿ154/-"

Udipi 15-11-43. } **K. J. Ballal**
Vakil for Petitioner.

ಪ್ರಕಟಣೆ

ಕಾರ್ಕಳ ತಾಲೂಕು ನಿಂಜೂರು ಗ್ರಾಮದ ಕುಂದ್ರಬೆಟ್ಟು ವಿಶಕ್ಕ ಸೆಡ್ತಿಯ ಮಗಳು ಗುಲಾಬಿ ಸೆಡ್ತಿಯು ಈ ಮೂಲಕ ತಿಳಿಯಪಡಿಸುವುದೇನೆಂದರೆ– ನಾನು ಮಾಯನಾರೀಕಾಗಿ ಯಿರುವ ಸಮಯ ನನ್ನ ಕುಟುಂಬದ ಪೈಕಿ ಕೆಲವು ಮೆಂಬರರನ್ನು ಉಬ್ಬಿ ತಾಲೂಕು ಕೇಳ ಆರ್ಕಲ್‌ಬೆಟ್ಟು ಗ್ರಾಮದ ನರಸಿಂಹ ಪಂಡೇರ ಮಗ ಸುಬ್ಬಣ್ಣ ಪಂಡೇರರೆಂಬವರು ವಳಸಂಚೀಗೆ ತೆಗೆದುಕೊಂಡು ಘೋಟಿಸಿ ವಂಚು ಪ್ರೋನೋಟನ್ನು ತನ್ನ ಹೆಸರಿನಲ್ಲಿ ನಿರ್ಮಿಸಿಕೊಂಡು ಸದ್ರಿ ನೋಟಿನ ಮೇಲೆ ಡಿಕ್ರಿ ಹೊಂದಿ ಅದನ್ನು ಜಾರಿ ನಡ್ಸಿ ನನ್ನ ಅಳಿಯ ಸಂತಾನದ ಕುಟುಂಬದ ಪಿತ್ರಾರ್ಜಿತ ಆಸ್ತಿಗಳ ಪೈಕಿ ನಿಂಜೂರು ಗ್ರಾಮದ ಪಂಟಬೆಟ್ಟುಯೆಂಬ ಆಸ್ತಿಯ ಮೂಲಿಹಕ್ಕನ್ನು ಮತ್ತು ಸದ್ರಿ ನಿಂಜೂರು ಗ್ರಾಮದ ಕುಂಧ್ರಬೆಟ್ಟುಯೆಂಬ ಆಸ್ತಿಯ ಮೂಲಿಹಕ್ಕನ್ನು ಹೋಲುಮಾಡಿಸಿ ತಾನೇ ಯೇಲದಿನಲ್ಲಿ ದರ್ಕಾಸ್ತಿಗೆ ವಕೀಲರನ್ನು ನಿಲ್ಲಿಸಿ ತನ್ನ ಹೆಸರಿಗೆ ಕಾಯಂ ಮಾಡಿಸಿಕೊಂಡು ಸದ್ರಿ ಹಕ್ಕನ್ನು ಉಬ್ಬಿ ತಾಲ್ಲೂಕ ಕಟ್ಟಂಗೇರಿ ಗ್ರಾಮದ ಬ್ರೆಸ್ಸೀಲಿಯೆಂಬವರಿಗೆ ಅವರು ಪೂಜಾರ್ತಿಯೆಂಬವರಿಗೆ ಕ್ರಯಕ್ಕೆ ಕೊಟ್ಟಿರುತ್ತಾರಾಗಿಯೂ ಮತ್ತೆ ಪಂಟಬೆಟ್ಟು ಯೆಂಬ ಆಸ್ತಿಯ ಮೂಲಿ ಹಕ್ಕನ್ನು ನಿಂಜೂರು ಗ್ರಾಮದ ಯಮುನಾ ಸೆಡ್ತಿಯೆಂಬವರಿಗೆ ಕ್ರಯಕ್ಕೆ ಕೊಟ್ಟಿರುತ್ತಾರೆಂದಾಗಿಯೂ ಈಗ ತಾನೇ ವ್ಯಾಯಕ್ಕೆ ಬಂದನನಗೆ ತಿಳುವಳಿಕೆಗೆ ಬಂದಿರುವದರಿಂದ ಈಗ ನಾನು ಆ ಬಗ್ಗೆ ಆಗತಕ್ಕವುಳ್ಳ ದಾವೆಗಳನ್ನು ಹಾಕ್ಲಿ [illegible] ಆಸ್ತಿಯಿಂದ ಸದ್ರಿ ಆಸ್ತಿಗಳನ್ನು ಯಿನ್ನು ಬೇರೆಯವರು ಕ್ರಯಕ್ಕೆ ತೆಗೆದುಕೊಳ್ಳಕೂಡದು. ಯಿವಕ್ಕೂ ಮೀರಿ ಕ್ರಯಕ್ಕೆ ತೆಗೆದುಕೊಂಡಲ್ಲಿ ನಾನು ಮಾಡುವ ವ್ಯಾಜ್ಯದ ಸಕಲ ಕಷ್ಟ ನಷ್ಟಗಳಿಗೆ ಅವು ಗುರಿಯಾಗಬೇಕಾಗುವದು. ಯೀ ಸಂಗ್ತಿಯನ್ನು ಸರ್ವ ಜನರಿಗೆ ಮುಂಚಿತವಾಗಿ ತಿಳಿಸಿರುತ್ತೇನೆ

ಗುಲಾಬಿ ಸೆಡ್ತಿ ರುಜು.

NOTICE.

ದ. ಕ. ಮಂಗಳೂರು ಡಿ. ಮು.

ಕೋರ್ಟಿನಲ್ಲಿ.

O. S. 348/1943

ಬಾಳಿ ಶೀನ ಶೆಟ್ಟಿ — ವಾದಿ

ಮತ್ತು

ದೂಮ ಶೆಡ್ತಿ ಕೂಡಾ — ಪ್ರತಿವಾದಿರು.

ಪ್ರತಿವಾದಿರು;

11ನೇ ಶೇಷಮ್ಮ—ದೂಮುಶೆಡ್ತಿ ಮಗಳು 14ನೇ ಸಂಕು 15ನೇ ದೊಡ್ಡಣ್ಣ 17ನೇ ಭೋಜ. ಶೇಷಮ್ಮನ ಮಕ್ಕಳು. — ಎಲ್ಲರೂ ಮಂಗ್ಳೂರು ತಾಲ್ಲೂಕು ಕೊಂಪದವು ಗ್ರಾಮದ ಕೊಂಪದವು ಮನೆಯಲ್ಲಿರುವುದು.

ಮೇಲ್ಕಂಡ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:

ನಿಮ್ಮ ಮೇಲೆ ಕೂಡಾ ಸದ್ರಿ ವಾದಿಯು ಕೈಪೇತಿನಲ್ಲಿ ಕೇಳಿದ ನಿವೃತ್ತಿಗಳ ಬಗ್ಗೆ ದಾಕ್ಲು ಮಾಡಿದ ಮೇಲ್ಕಂಡ O. S. 348/43ನ್ನು ಇದೇ ಬರುವ 26-11-1943ಕ್ಕೆ ತನ್ನಿಗೆ ಇಟ್ಟಿರುತ್ತದೆ.

ಆದ್ದರಿಂದ ನಿಮಗೇನಾದ್ರೂ ಸದ್ರಿ ದಾವೆಗೆ ಆಕ್ಷೇಪಣೆಯಿರುವಲ್ಲಿ ಅದನ್ನು ನೀನ್ರು ಖುದ್ದು ಯಾ ವಕೀಲ್ ಮುಕಾಂತ್ರ ಈ ಕೋರ್ಟುಮುಂದೆ ಸದ್ರಿ ೨6-11-43ರಲ್ಲು ಹಾಜ್ರು ಮಾಡತಕ್ಕದ್ದು. ಇಲ್ಲದಿದ್ದಲ್ಲಿ ಸದ್ರಿ ವ್ಯಾಜ್ಯವನ್ನು ನಿಮ್ಮ ಗೈರು ಹಾಜ್ರನಲ್ಲಿಯೇ ತೀರ್ಮಾನಿಸಲ್ಪಡುವುದು

By Order of the court.

H. D. Alva.

Vakil for Plff

ಮಂಗ್ಳೂರು } 10-11-43 }

ಪ್ರಕಟಣೆ.

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisserri.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ- ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮನಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುಞ್ಞಿರಾಮನ್,
ಮೆನೇಜರ್

THE BEST PREVENTIVE IN EPIDEMICS OF
CHOLERA
"BHUVANENDRA"
CHANDRAMAS
Will give you the best results. Try once and be satisfied with the results.
Dose: For adults:– 3 to 5 drops 2 to 3 times a day with the decoction of cloves or ajwan.
For Children: 1 to 2 drops with the said decoction
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS Ltd.

"ಭುವನೇಂದ್ರ"
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ.
ದೊಡ್ಡವರಿಗೆ 3ರಿಂದ 5 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು
ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪ್ಪೊ.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in 1920)

Registered Office: Court Road UDIPI South Canara District.

Business Offices: Udipi, Mangalore, Katapadi, Kanhangad and Kinnigoli, South Canara.

Authorised and Issued Capital: Rs 2,00,000/-
Subscribed and Paid up Capital: Rs 2,00,000/-
Reserve Funds: Rs. 1,75,853/-

Short term bills are discounted for approved parties. Loans and advances are made and overdrafts granted on fairly easy terms.

Deposits are accepted at favourable rates of interest. More than twenty-three years' reliable banking Service stands to our credit.

For further particulars please call at or apply to the nearest office.

Dated 31-10-1943.

ನಮ್ಮ ಸುವರ್ಣೋತ್ಸವ ಸಂಚಿಕೆಗೆ ದಯಮಾಡಿ ನಿಮ್ಮ

ಸಹೃದಯ ಸಂದೇಶವನ್ನು

ಕಳುಹಿಸಿ ಕೊಡಿರಿ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1–8–0 ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. 2–8–0

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಜನಪ್ರಿಯವಾದ ಕಿರಿಯರ ಪ್ರಪಂಚದ ಪ್ರಕಟಣೆಗಳು.

ವಿಧುವನ	೨	೮	೦	ರಂಗಭೂಮಿ	೦	೮	೦
ಪ್ರಕಾರ	೧	೧೨	೦	ಸಂಶಯ ಪಿಶಾಚಿ	೦	೮	೦
ಭಾರತೀಯ ಕತೆಗಳು	೦	೧೪	೦	ಸೇವಾಪಥ	೦	೮	೦
ನಾರೀ ಹೃದಯ	೦	೧೪	೦	ಕುಶಲವ	೦	೫	೦
ದೇಶಭಕ್ತ	೦	೧೪	೦	ಹೆಂಡ್ತಿ ಗಂಡನಾದರೆ	೦	೪	೦
ಕಾವ್ಯ ಸಾಮ್ರಾಜ್ಯ	೦	೧೨	೦	ಪುರುಷವಧು	೦	೪	೦
ಪ್ರೇಮ ವಿಜಯ	೦	೧೭	೦	ಸ್ವತಂತ್ರ ಜೀವನೋಪಾಯ	೦	೩	೦
ವ್ಯಭಿಚಾರಿಣಿ ಯಾರು	೦	೧೭	೦	ನಾದಕತೆಗಳು	೦	೩	೦
ನಂದಾದೀಪ	೦	೧೦	೦	ಮಂದಿನ ದೇವರು	೦	೩	೦
ಸನ್ಯಾಸಿಯ ಸೋಗಿನಲ್ಲಿ	೦	೮	೦	ಮೂರು ಪ್ರಹಸನಗಳು	೦	೧೪	೦

ಕಿರಿಯರ ಪ್ರಪಂಚ, ಉಡುಪಿ.

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯ:— ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಷ್ಟ ಚಾರ್ಜು ೧೨ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳಿ ಫಾರ್ಮಸಿ,— ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:— ಕುಂಬಾರವಾಡಿ ಸ್ಟೋರ್ಸ. ದಾವಣಗೇರಿ.— ದಾವಣಗೇರಿ ಪ್ರೆಸ್ಸ. ಆರ್. ಎಲ್. ಕರಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager — ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮನೇಜರ್.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ. ಕ.**

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ. ಕಡಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ : : : : ಮಂಗಳೂರು.

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.

ಹೆಡ್ ಆಫೀಸ್: ಮಂಗಳೂರು.

ಶಾಖೆಗಳು:

ಮಂಗಳೂರು, ಸಿಟಿ-ಮಂಗಳೂರು.
ಉಡುಪಿ, ಕಾರ್ಕಳ, ಕುಂದಾಪುರ,
ಕಾಪು, ಬ್ರಹ್ಮಾವರ, ಕಾಸರಗೋಡು,

ಪ್ರತಿ ಶಾಖೆಗಳಲ್ಲೂ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳು ಕೈಗೊಳ್ಳಲ್ಪಡುತ್ತವೆ.

THE VIJAYA BANK LIMITED, MANGALORE.

ಸ್ಥಾಪನೆ 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co, 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618.

ಇಪ್ಪತ್ತನಾಲ್ಕನೆಯ ವರ್ಷ.

Estd. 1921 ಸ್ಥಾಪನೆ

ನವಯುಗ

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೧೨

FOUNDER
Sri. A. B. Shetty.

Vol. 24
No. 12

NAVAYUGA — Kannada Weekly — UDIPI, S. I.

ಉಡುಪಿ • 25—11—1943 • ಮಂಗಳೂರು.

ಕಿರಿಯರ ಪ್ರಪಂಚದ ಹೊಸ ಪ್ರಕಟಣೆ

—ಪ್ರಕಾಶ—

ಸಾಮಾಜಿಕ—ರಾಜಕೀಯ ನಾಟಕ.
ಮೂಲ ಲೇಖಕರು:— ಶೇಟ್ ಗೋವಿಂದ ದಾಸ್, ಎಂ. ಎಲ್. ಎ. (ಸೆಂಟ್ರಲ್)
ಅನುವಾದಕಿ: ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ.

ಬೆಲೆ ರೂ. 1-12-0. ಟ. ಖ 0-4-0

ರೂ. 2ನ್ನು ಮನಿಯಾರ್ಡರ್ ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಲಕ ಕಳುಹಿಸಲಾಗುವದು.

ನವಭಾರತ ಪುಸ್ತಕ ಭಂಡಾರ,
ಉಡುಪಿ

ಕಿರಿಯರ ಪ್ರಪಂಚದ
ಇನ್ನೊಂದು ಪ್ರಕಟಣೆ

ಭಾರತೀಯ ಕತೆಗಳು

ಸಣ್ಣ ಕತೆಗಳ ಸಂಗ್ರಹ
ಮೂಲ ಲೇಖಕರು— ಶ್ರೀ. ಎ. ಎಸ್. ಪಂಚಾಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್. ಲಾ., ಎಫ್. ಆರ್. ಎಸ್. ಎಲ್.,
ಅನುವಾದಕರು— ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರು.

ಬೆಲೆ 0-14-0 ಟ. ಖ. 0-2-0

ರೂ. 1/ನ್ನು ಮನಿಯಾರ್ಡರು ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಲಕ ಕಳುಹಿಸಲಾಗುವುದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

Life is Full of Level Crossings

Mr. A had planned to live a 100 years clean. He was healthy and sound both in body and mind. He went his daily rounds, had his prescribed food and ample rest. Doctors saw him twice a week and specialists once a month. All opined that he had the finest prospects of a century. But alas! he died at the age of 35 only, survived by his wife and four children, his doctors, nurses, specialists, food patents, health institutes and gymnasiums.

For he had forgotten trains at level crossings.

The Canara Mutual Assurance Co., Ltd.,
UDIPI.

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ಸಾರ್ವಜನಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸಮೀಪದವರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇವರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಮುಖ್ಯ ಏಜಂಟರು.
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ ಕನ್ನಡ)

ಶಾಖಾ ಕಚೇರಿಗಳು:— ಬೆಂಗಳೂರು, ಬೊಂಬಾಯಿ, ಮದ್ರಾಸ್ ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧ ತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:— ಗದಗ:- ಗದಗ ಫಾರ್ಮಸಿ, ಹುಬ್ಬಳ್ಳಿ:- ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:— ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. [ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda [Oushadalaya, GADAG.

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೪೦ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹು ಬಹು ಅಪಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನ್ನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ಶೀಘ್ರನೆ ಮುಂದುವರಿದವು.

೧೯೪೦, ಇದರಲ್ಲಿ ಕೆನರಾ ಬೇಂಕು ೯೦ ಲಕ್ಷ ಠೇವಣೆಗಳ ಮತ್ತು ಒಂದು ಕೋಟಿ ಸಂಪತ್ತಿಕ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣೆಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡುವರೆ ಕೋಟಿಗೆ ಮಿಕ್ಕಿದೆ. ಹಾಗೂ ತೆತ್ತ ಮೂಲಧನವು ನಾಲ್ಮಡಿಯಾಗಿದೆ.

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮವಿಶ್ವಾಸದಿಂದಲೂ, ದೃಢ ಬುದ್ಧಿಯಿಂದಲೂ, ಯೋಗ್ಯಸೇವೆಯನ್ನು ಸಲ್ಲಿಸಿದರಿಂದಲೂ, ಇಂದಿನ ಈ ಪ್ರಗತಿಗೆ ಕಾರಣ ಭೂತರಾದ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಉತ್ತಮ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

CANARA BANK LIMITED.

ಕೆನರಾ ಬೇಂಕ್ ಲಿಮಿಟೆಡ್.

ಸ್ಥಾಪನೆ 1906.

ಅನ್ನಾಪರಾಧಿ ಯಾರು?

ಜಿನ್ನರು ಕೈಯೆತ್ತಿ ತೋರಿಸುತ್ತಾರೆ-- ಕ್ವಯಾಮರು ಎದೆತಟ್ಟಿ ಹೇಳುತ್ತಾರೆ-

ಸರಕಾರೀ ಮೆಂಬರರು!

ಇದೇ ತಾ 15ರಿಂದ 18ರ ವರೆಗೆ ಡಿಲ್ಲಿ ನ ಕೇಂದ್ರ ಎಸೆಂಬ್ಲಿಯಲ್ಲಿ ಆಹಾರ ಪರಿಸ್ಥಿತಿಯ ಚರ್ಚೆನಡೆದು ಮುಕ್ತಾಯಗೊಂಡಿತು. ವಿಚಾರಣೆಗಾಗಿ ರಾಯಲ್ ಕಮಿಶನನ್ನು ನೇಮಿಸಬೇಕೆಂದು ಮುಸ್ಲಿಂ ಲೀಗಿನವರಿಂದ ಬಂದ ಉಪಸೂಚನೆಯೂ ಅಂತಹ ಇತರ ಉಪಸೂಚನೆಗಳೂ ಬಿದ್ದು ಹೋದವು. ಈ ಭಾರಿಯ ಅಧಿವೇಶನದಲ್ಲಿ ಭಾಗವಹಿಸಿದ ಕಾಂಗ್ರೆಸ್ ಪಕ್ಷೀಯರು, ಹಾಗೂ ರಾಷ್ಟ್ರ ಪಕ್ಷದವರು ಮತ್ತು ಸ್ವತಂತ್ರ ಸದಸ್ಯರು ಕೆಲವರು ಮತದಾನವನ್ನೇ ಮಾಡಲಿಲ್ಲ. ಎಸೆಂಬ್ಲಿ ವಿಮರ್ಶೆಯ ಪರಿಣಾಮ ಸೊನ್ನೆಯಾದರೂ, ಅದಕ್ಕೆ ಪ್ರಚಾರ ಮೌಲ್ಯವಿದೆ. ಕಾಂಗ್ರೆಸ್ ಪಕ್ಷದ ಉಪನಾಯಕ ಅಬ್ದುಲ್ ಕ್ವಯಮ್ ಮತ್ತು ಮಿ. ಜಿನ್ನರು ನಿರ್ದಾಕ್ಷಿಣ್ಯವಾಗಿ ಹೊರಿಸಿದ ಆರೋಪಗಳನ್ನು-ಸರಕಾರದ ಪಕ್ಷದಿಂದ ಝಾಡಿಸಿಕೊಳ್ಳಲು ಸರ್. ರಾಮಸ್ವಾಮಿ ಮುದಲಿಯಾರರಂತಹ ಸಮರ್ಥವಾಗ್ಮಿಗಳಿಂದ ಕೂಡಾ ಆಗಲಿಲ್ಲ.

ತೀವ್ರಬಾಣಗಳು.

"ನಿಮ್ಮ ದೌರ್ಬಲ್ಯವನ್ನೊಪ್ಪಿಕೊಳ್ಳಿ, ರಾಜೀನಾಮೆಕೊಡಿ" ಕಾಂಗ್ರೆಸ್ ಸದಸ್ಯ ದೇಶಮುಖರ ಧುರವೀಳ್ಯ. "ಇದು ಯೋಜನೆಗನುಸಾರವಾಗಿ ನಿರ್ಮಾಣಗೊಂಡ ಬರಗಾಲವಿರಬೇಕೆಂದು ನನಗನುಮಾನ ಬಂದಿದೆ; ಆಹಾರ ಸಮಸ್ಯೆಯೊಡನೆ ಈ ರೀತಿ ಚಂಗನಾಟವಾಡುವ ಒಂದು ಹಂಚಿಕೆಯೇ ಇರಬೇಕು, ಹಾಗಲ್ಲದೆ ನೀವು ಏನೆಂದು ಉತ್ತರಕೊಡುವಿರಿ?" ಎಂದವರು ಕೆಣಕಿಕೇಳಿದ್ದಾರೆ. ಶ್ರೀ- ನಿಯೋಗಿ, ಶ್ರೀ ಕೃಷ್ಣಮಾಚಾರಿ, ಸರ್, ಫ್ರೆಡರಿಕ್, ಸೀಲಕಾಂತದಾಸ್, ನವಾಬಜಾದಾ ಲಿಯಾಖತ್‌ಖಾನ್, ಜೋಶಿ, ಅಂತೋನಿ-ಅವರವರೆನ್ನದೆ, ಯುರೋಪಿಯನ್ ಹಿಂದೀಯನೆಂಬ ಭೇದವಿಲ್ಲದೆ ಅನಧಿಕಾರೀ ಸದಸ್ಯರೆಲ್ಲಾ ಸರಕಾರದ ಧೋರಣವನ್ನು ಕಠಿಣವಾಗಿ ಟೀಕಿಸಿದ್ದಾರೆ. 'ಸರಬರಾಯಿಯ ವ್ಯವಸ್ಥೆಯಲ್ಲಿ ಮುತವರ್ಜಿ ವಹಿಸಿಲ್ಲ' ಎಂದು ಒಬ್ಬರೆಂದರೆ 'ಸೈನ್ಯಖಾತೆಯಲ್ಲಿ ಆಹಾರ ಅನಾವಶ್ಯಯವಾಗುತ್ತಿದೆ' ಎಂದು ಇನ್ನೊಬ್ಬರು ಬೆಟ್ಟೆತ್ತಿ ತೋರಿಸಿದ್ದಾರೆ.

ಸರಕಾರೀ ಸದಸ್ಯರು.

ಯುದ್ಧ ಸರಬರಾಯಿ ಸದಸ್ಯ ಸರ್ ಬೆಂಥಾಲ್, ಸಪ್ಲೈ ಸದಸ್ಯ ಸರ್, ರಾಮಸ್ವಾಮಿ ಮುದಲಿಯಾರ್, ಆಹಾರ ಮಂತ್ರಿ ಸರ್. ಜೆ. ಪಿ. ಶ್ರೀವಸ್ತವ-ಇವರು ಸರಕಾರೀ ಧೋರಣೆಯ ಸಮರ್ಥನೆಯನ್ನು ಮಾಡಿಕೊಂಡರು. ಸರ್. ಮುದಲಿಯಾರರ ವಾದದಲ್ಲಿ ಚಾತುರ್ಯದೊಂದಿಗೆ ತಾವು ನಿರ್ದೋಷಿಗಳೆಂಬ ಆತ್ಮವಿಶ್ವಾಸವೂ ಇತ್ತು. ಸರಕಾರವು ಆದಿಯಿಂದಲೂ ಮುಂಜಾಗ್ರತೆ ವಹಿಸಿ ಕೈಕೊಂಡ ಕಾರ್ಯಕ್ರಮಗಳನ್ನೂ ಅದಕ್ಕೆ ವಿರುದ್ಧವಾಗಿ 'ಧಾನ್ಯ ವಿಕ್ರಯಸಬೇಡಿ-ನೋಟು ಪಡೆಯಬೇಡಿ' ಎಂದು ಹಳ್ಳಿಗಳಿಗೆ ದುರ್ಬೋಧನೆ ಕೊಟ್ಟ ಒಂದು ಪಂಗಡದವರನ್ನೂ ಅವರೆತ್ತಿ ತೋರಿಸಿದರು. ತನ್ನ ಭಾಷಣದ ನಡುನಡುವೆ ಜನಪ್ರತಿನಿಧಿಗಳ ಟೀಕೆ, ಪ್ರಶ್ನೆ, ಉದ್ರೇಕಗಳನ್ನೆದಿರಿಸಬೇಕಾಗಿ ಬಂದರೂ ಸರ್. ರಾಮಸ್ವಾಮಿಯವರು ಗಡಿಮುಟ್ಟಿದೆ ಬಿಡಲಿಲ್ಲ. ಆದರೆ ಒಂದು ವಿಲಕ್ಷಣ ಗುಪ್ತ ಘರ್ಷಣೆಯ ಪರಿಚಯವು ಸರಕಾರೀ ಸದಸ್ಯರಿಂದಾಗಲೇ ಹೋಯಿತೆನ್ನುವಾಗ ವಿನೋದವೆನಿಸುತ್ತದೆ. ಸರ್. ಮುದಲಿಯಾರರು ಸರಕಾರವು ಯುದ್ಧಾದಿಯಿಂದಲೂ ಯೋಜನೆಗನುಸಾರವಾಗಿ ಸುವ್ಯವಸ್ಥೆಯಿಂದ ವರ್ತಿಸಿದುದನ್ನು ವಿವರಿಸುವಾಗ ಆಹಾರಖಾತೆಯ ಕಾರ್ಯದರ್ಶಿ ಮಿ. ಹಚಿಂಗ್ಸ್ ಹೇಳುತ್ತಾರೆ: "ನಮ್ಮಲ್ಲಿ ಒಂದು ವರ್ಷಕ್ಕೆ ಮೊದಲು ಇಲ್ಲದಿದ್ದ ಒಂದು ಧೋರಣೆ, ಒಂದು ಯೋಜನೆ, ಈಗ ಇದೆ. ನಮ್ಮ ಆಡಳಿತೆಯು ಈಗ ಮೊದಲಿನಂತಿರದೆ ಪೂರ್ಣ ಮನಸ್ಸಿನಿಂದ ಕರ್ತವ್ಯನಿರತವಾಗಿದೆ". ಅ.ತೂ ಎಸೆಂಬ್ಲಿಯಲ್ಲಿ ದ್ವಿಮುಖ ಸ್ಪರ್ಧೆ! ಜನ ಪ್ರತಿನಿಧಿಗಳಿಗೂ ಅಧಿಕಾರೀ ಸದಸ್ಯರಿಗೂ ತಿಕ್ಕಾಟ-ಸರಕಾರೀ ಮೆಂಬರರಲ್ಲೇ ಒಬ್ಬನವಾದಕ್ಕೆ ಇನ್ನೊಬ್ಬನ ಪ್ರತಿವಾದದೊಡನೆ ಘರ್ಷಣೆ!

ಅಬ್ದುಲ್ ಕ್ವಯುಮ್.

"ನಾನು ಜನತಾ ಕಮಿಷನಿನಲ್ಲಿ ವಿಶ್ವಾಸವುಳ್ಳವ ಹೊರತು ರೋಯಲ್ ಕಮಿಷನಿನಲ್ಲಿಲ್ಲ. ಜನರ ದೃಷ್ಟಿಯಲ್ಲಿ ಬ್ರಿಟಿಷ್ ಸರಕಾರ ಮತ್ತು ಅವರ ಸೂತ್ರದ ಗೊಂಬೆಗಳಾಗಿ ನಮ್ಮೆದಿರು ಕುಳಿತಿರುವ ಈ ಸದಸ್ಯರೇ ಇಂದಿನ ದುರಂತದ ಹೊಣೆಗಾರರು. ಇಂತಹ ಅಪರಾಧಿಗಳನ್ನೇ ವಿಚಾರಣೆ ನಡಿಸಲಿಕ್ಕು ಕೇಳಿಕೊಂಡು, ತಮ್ಮ ಅಪರಾಧಕ್ಕೆ ತಾವೇ ಬಣ್ಣ ಬಳಿದುಕೊಳ್ಳಲು ಆಸ್ಪದ ಮಾಡಿಕೊಡುವದು ಅನ್ಯಾಯ." ಎನ್ನುತ್ತ 'ಹಳ್ಳಿಗರಿಗೆ ದುರ್ಬೋಧನೆ ಕೊಟ್ಟ'ರೆಂದು ಕಾಂಗ್ರೆಸಿಗರ ಮೇಲೆ ಸರ್. ರಾಮಸ್ವಾಮಿಯವರು ಕಾರಿದ ನಂಜಿಗಾಗಿ ಪ್ರಶ್ನಿಸಿದರು: "ಅತಿ ಪ್ರಸರಣದ ಅನಾಹುತ ಮತ್ತು ಹಳ್ಳಿಯ ನಿಜ ಸ್ಥಿತಿಯನ್ನರಿತ ಕಾಂಗ್ರೆಸಿಗರ ಅಂತಹ ಬೋಧನೆಯಲ್ಲಿ ತಪ್ಪೇನು?" ಅನ್ಯ ದೇಶಗಳಿಂದ ಆಹಾರ ತಜ್ಞರನ್ನಾಮಂತ್ರಿಸುವದರಲ್ಲಿರುವ ಹುಳುಕನ್ನು ಬಯಲಿಗೆಳೆದು 'ಅವರೆಲ್ಲಾ ನಿಜವಾಗಿಯೂ ತಜ್ಞರಾಗಿದ್ದರೆ ಈ ಯುದ್ಧ ಕಾಲದಲ್ಲಿ ಅವರ ಸ್ವದೇಶಗಳು ಇಂಥವರನ್ನೇಕೆ ಕಳಕೊಳ್ಳಬೇಕು?'- ಎಂದು ನಗೆಯ ಕೋಲಾಹಲದ ನಡುವೆ ಮಿ. ಕ್ವಯುಮರ ಪ್ರಶ್ನೆ. ಮಹಾತ್ಮಾಜೀ ಮೊದಲಾದ ಕಾಂಗ್ರೆಸ್ ಪ್ರಮುಖರ ಬಿಡುಗಡೆ ಮಾಡಿ ಜನತಾ ಸರಕಾರಸ್ಥಾಪಿಸುವ ಸೂಚನೆಯನ್ನು ಅವರಿತ್ತರು.

ಮಿ. ಜಿನ್ನಾ.

ಸದಸ್ಯರು ಮತ್ತು ಪ್ರೇಕ್ಷಕರನ್ನು ತಲ್ಲೀನತೆಗೊಳಿಸಿದ-ಅಂತಃಕರಣದಿಂದೆದ್ದು ಅಂತಃಕರಣವನ್ನು ಮುಟ್ಟಿದ-ಪ್ರಾಯಶಃ ಕೆಲವು ವರುಷಗಳಿಂದ ಅವರು ಮಾಡಿದ ಏಕಮಾತ್ರ ನಿರ್ದೋಷೀ-ಭಾಷಣವೆಂದರೆ ಮಿ. ಜಿನ್ನರದು. "ಇಂಗ್ಲಾಂಡಿನಲ್ಲಿ, ಸಾವಿರಾರು ಜನರಂತಿರಲಿ; ನೂರಾರೇ ಜನರು ಹೀಗೆ ಸಾಯುತ್ತಿದ್ದರೆ-ಚರ್ಚಿಲ್ ಸರಕಾರವು ಅಧಿಕಾರೀ ಬೆಂಚುಗಳಲ್ಲಿ 24 ಘಂಟೆಯಾದರೂ ಕುಳಿತುಕೊಳ್ಳಲು ಸಾಧ್ಯವಿತ್ತೇ? ಆದರೆ ಇಲ್ಲಿ ನಮಗಿದೆ-ಬೇಜವಾಬ್ದಾರಿ, ಪದ್ಧತಿ ರಹಿತ,ಹಾಗೂ ಬುಡದಿಂದ ತಲೆಯವರೆಗೂ ಅಸಮರ್ಥವಾಗಿದ್ದು, ಯಜಮಾನ ಸ್ಟೇಟ್ ಸೆಕ್ರೆಟರಿಯ ಸೂತ್ರಕ್ಕೆ ಬಿಗಿಯಲ್ಪಟ್ಟ ಸರಕಾರ! ಅದೆಂದೂ ಯಾವ ಮಹಾಬಿಕ್ಕಟ್ಟನ್ನೂ ಸಶಕ್ತಿಯಿಂದ ಎದಿರಿಸಿದುದಿಲ್ಲ. ಸ್ವಕರ್ತವ್ಯ, ಜವಾಬ್ದಾರಿಗಳನ್ನು ನಿರ್ವಹಿಸದ ಭಯಂಕರ ಅಸಡ್ಡೆಯ ಆರೋಪವನ್ನು ನೀವು ತಪ್ಪಿಸಿಕೊಳ್ಳಲಾರಿರಿ. 1943ನೇ ಜನವರಿಯಲ್ಲಿ ಹಿಂದುಸ್ಥಾನಕ್ಕೆ ಬರಗಾಲದ ಭಯವೇ ಇಲ್ಲ-ಎಲ್ಲವೂ ಸರಿಯಿದೆ-ಎಂದು ಮಿ. ಅಮೆರಿಯಂದಿದ್ದರು. ಯಾವ ಆಧಾರದಿಂದ ಅವರು ಹಾಗೆಂದುದು? ಅವರು ಹಾಗನ್ನಬೇಕಾದರೆ ಆ ಸುದ್ದಿ ಮುಟ್ಟಿಸಿದವರಾರು?" ಎಂದು ಮಿ. ಜಿನ್ನರು ನೆಲವೊದೆದು ಪ್ರಶ್ನಿಸಿ, ಸರಕಾರೀ ಬೆಂಚಿನ ಕಡೆಗೆ ಬೆಟ್ಟು ತೋರಿಸುತ್ತಾ "ನೀವು ಅಪರಾಧಿಗಳೆಂಬುದನ್ನು ನೀವೇ ಬಲ್ಲಿರಿ. ಇಷ್ಟನ್ನು ಕೂಡಾ ನೀವು ತಿಳಿದಿಲ್ಲವಾದರೆ ದೇವರೇ ನಿಮ್ಮನ್ನು ಕಾಪಾಡಲಿ!" ಎಂದರು. "ಇದು ದೈವನಿರ್ಮಿತವೆನ್ನಬೇಡಿ. ದೇವರು ಈ ವಿಡಿಗೂ ನಡುವೆ ಬಂದಿಲ್ಲ. ಅವನು ಕೈ ಹಾಕಬಹುದು; ಅದ್ದರಿಂದ ಅದಕ್ಕೆ ತಯಾರಾಗಿ ನಿಲ್ಲಿ" ಎಂದು ಮಿ. ಜಿನ್ನರು ಹೃದಯ ಕುಲುಕಿಸಿ ಎಚ್ಚರಿಕೆ ಕೊಡುತ್ತಾ, ಜನಸಂಖ್ಯೆಯ ಹೆಚ್ಚಳವೇ ಬರಗಾಲ ಹೇತುವೆಂದ ಮಿ ಅಮೆರಿಯವರ ವಾದಕ್ಕುತ್ತರವಾಗಿ "ಓರ್ವ ಯಥಾರ್ಥವಾದಿ ಇನ್ನೊಬ್ಬ ಯಥಾರ್ಥವಾದಿಗೆ ಹೇಳತಕ್ಕ ಮಾತೇ ಇದು? ಈ 50ಮಿಲಿಯ ಜನರು ಒಂದೇ ದಿನದಲ್ಲ ಈ ದೇಶಕ್ಕೆ ಇಳಿದುದಲ್ಲ. ಹಲವು ವರುಷಗಳಲ್ಲಾದ ಹೆಚ್ಚಳವದು. ಆ ಅವಧಿಯಲ್ಲಿ ಸರಕಾರವೇನುಮಾಡಿತು?" ಎಂದು ಪ್ರಶ್ನಿಸಿದರು. "ಭಾರತದ ಪ್ರತಿಯೊಂದು ಪಕ್ಷವನ್ನೂ ಸರಕಾರವು ಜಿಗುಪ್ಸೆಯಿಂದಲೇ ಕಾಣುತ್ತಿದೆ". ಎಂದರು ಜಿನ್ನ.

ಕೌನ್ಸಿಲ್ ಓಫ್ ಸ್ಟೇಟಿನಲ್ಲಿಯೂ ಆಹಾರ ಚರ್ಚೆ ನಡೆಯುತ್ತಿದೆ. ಅಸ್ಸಾಮ್ ಎಸೆಂಬ್ಲಿಯಲ್ಲಿ ಮುಖ್ಯ ಮಂತ್ರಿ ಸರ್. ಎಮ್. ಸಾದುಲ್ಲಾರಿತ್ತ ಉತ್ತರವು ಸ್ವಾರಸ್ಯದನ್ನಬೇಕು."ಅದೃಷ್ಟದಲ್ಲಿ ಸಾವೇ ಬರೆದಿದ್ದವರು ಖಂಡಿತವಾಗಿಯೂ ಸಾಯುತ್ತಾರೆ; ಯಾವನ ಅದೃಷ್ಟ ಬದಲಾವಣೆ ಮಾಡುವ ಅಧಿಕಾರವೂ ನನ್ನ ಸರಕಾರಕ್ಕಿಲ್ಲ"

'ಅಂದ ಮೇಲೆ 'ತಪ್ಪಿಸಿಕೊಳ್ಳಲಾಗದ ಈ ಅದೃಷ್ಟ ಅಧಿಕಾರಿಗಳಿಗೊದಗಿದಾಗಲೇ ಬರಗಾಲ ನಿವಾರಣೆಗಾರಂಭ!

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ರಕ್ತವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅರುಚಿ,ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—0—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ರಕ್ತವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವನ್ನು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಯೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ—1. ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ ಎಂಡ್ ಜನರಲ್ ಮರ್ಚೆಂಟ್ಸ್, 183 ಸುಪಾರಿಬಾಗ್ ರೋಡ್, ಪರೇಲ, ಬೊಂಬಾಯಿ, ನಂಬ್ರ 12 2. ಜನರಲ್ ಸ್ಟೋರ್ಸ್, ಜಿ. ಐ. ಪಿ. ಮಾಟುಂಗಾ. 3. ಮುಲ್ಲರ್ ಪೆಟರ್ನ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ. 4. ಧನ್ವಂತರಿ ವೈದ್ಯಶಾಲೆ, ಲೆನ್ಸ್‌ಡೌನ ಬಜಾರ್, ಮೈಸೂರು. 5. ಮಂಗ್ಳೂರು ಸ್ಟೋರ್ಸ್, ಮಡಿಕೇರಿ. 6. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ. 7. ಡಾ। ಶ್ರೀನಿವಾಸ ಪೈ, ಪುತ್ತೂರು. 8. ಕಾಂತಾವರ ವಾಸ್ದೇವ ಕಮ್ತಿ, ಬೆಳ್ತಂಗಡಿ. 9. ಮುಲ್ಕಿ ಮೆಡಿಕಲ್ ಸ್ಟೋರ್ಸ್, ಮುಲ್ಕಿ. 10. ನವಭಾರತ ಬುಕ್ ಡಿಪೋ, ಸಂತೆಕಟ್ಟೆ, ಉಡುಪಿ. 11. ಕೃಷ್ಣ ಫಾರ್ಮೆಸಿ, ಕುಂದಾಪುರ. 12. ಎಚ್. ನರಸಿಂಹ ನಾಯ್ಕ, ಮರ್ಚೆಂಟ್, ಶಂಕರನಾರಾಯಣ. 13. ಕಾಸರಗೋಡು ಶ್ರೀ ರಾಮಾ ಸ್ಟೇಶನರಿ ಹೌಸ್, ಶ್ರೀರಾಮ ಪೇಟೆ. 14. ಕೆ. ಶ್ರೀನಿವಾಸ ಹೆಗ್ಡೆ, ತೀರ್ಥಹಳ್ಳಿ. 15. ಬಿ ಯಸ್. ನರಸಿಂಗ ಪ್ರಭು, ಮರ್ಚೆಂಟ್, ಚಿಕ್ಕಮಂಗ್ಳೂರು.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಂಜಿ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲು ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

The Canara Banking Corporation Limited.

(Incorporated in British India Liability of members limited)

ESTD: 1906.

ANNOUNCEMENT.

We have pleasure to announce that our Bangalore City Office has been opened on the 3rd instant and regular business is transacted from that date.

ನವಯುಗ

ಉಡುಪಿ, ಗುರುವಾರ, ೨೫-೧೧-೧೯೪೩.

ಯುದ್ಧ ಸ್ಥಿತಿ.

ಜರ್ಮನರು ಗೆಲ್ಲಬಹುದೆಂದು ಲೋಕಕ್ಕಿದ್ದ ಭಯವಿನ್ನು ಪೂರ್ತಿ ನಿವಾರಣೆಗೊಂಡಂತೆಯೇ; ತಮಗಪಜಯವೇ ಗತಿ ಎಂಬ ನಿರಾಶೆ ಸ್ವತಃ ನಾಜಿಗಳಲ್ಲೇ ತಲೆದೋರಿದೆಎಂಬ ನಂಬಿಕೆಯನ್ನು ಮಿತ್ರ ಪ್ರಚಾರಕರು ನಿರ್ಮಿಸಿದ್ದರು. ಜರ್ಮನರು ಹಲವು ರಣರಂಗಗಳನ್ನು ಕಳಕೊಂಡಿರುವುದು ನಿಜ. ಅವರ ವಿಜಯಾಂಕವು ಪೂರ್ತಿ ಮುಗಿದು ಇಳುಕಿನ ಮೇಲಾಯಿತು. ಫೇಸಿಸ್ಟ ಪರಾಜಯದಲ್ಲಿ ಯುದ್ಧ ಮುಕ್ತಾಯ ಹೊಂದಬೇಕು ಖಂಡಿತವಾಗಿಯೂ ಹಾಗಾಗಲಿದೆ-ಎಂಬ ಅಭಿಪ್ರಾಯ ಮತ್ತು ಭರವಸೆಯ ಮಟ್ಟಿಗೆ ಹಿಂದುಸ್ಥಾನದಲ್ಲಿ ಭಿನ್ನಮತವಿಲ್ಲ. ಆದರೆ ಒಂದು ಮುಖ್ಯ ವಿಷಯವನ್ನು ಮರೆಯಲಾಗುವದಿಲ್ಲ. ಇಂದು ಪ್ರಪಂಚಕ್ಕೆ ಹಿಟ್ಲರನಿಗಿಂತ ದೊಡ್ಡ ವೈರಿಯಾಗಿ 'ಯುದ್ಧ' ಕಾಣುತ್ತಿದೆ. ಜಗತ್ತು ಯಾರ ಅಸ್ತಿತ್ವವನ್ನಾದರೂ ಇನ್ನೂ ಕೆಲಕಾಲ ಸಹಿಸಿಕೊಂಡೀತು-ಯುದ್ಧಾವಸಾನವು ಮಾತ್ರ ಕ್ಷಿಪ್ರದಲ್ಲೇ ಆಗಬೇಕಾಗಿದೆ. ಯುದ್ಧಾವಧಿ ಬೆಳೆಯಬೇಕಾದಷ್ಟು ಬೆಳೆಯಿತು. ಸ್ಥಿತಿಯಲ್ಲೀಗ ಜರ್ಮನಿ ಎನ್ನುವ ಜಪಾನುಗಳಿರುವಾಗ ಮಿತ್ರರಿಗೆ ಅದರ ಆದಷ್ಟು ಬೇಗನೇ ಮುಗಿಯಬೇಕಾಗಿದೆ. ಆದ್ದರಿಂದ ಈಗ ಯುದ್ಧಗತಿಯ ಅಧಿಕಭಾರ ಯಾವ ಕಡೆಗೆ ಬಿದ್ದಿದೆ ಎಂಬುದನ್ನು ತೂಗಬೇಕು ಈ ತಕ್ಕಡಿಯಿಂದಲೇ. ಯುದ್ಧಾರಂಭವಾಗಿ ನಾಲ್ಕು ವರುಷಗಳ ಮೇಲೆ ತಿಂಗಳುಗಳಾಗಿ ಹೋದವು. ಹಿಟ್ಲರನು ಯುರೋಪಿನ ಬಹುಭಾಗವನ್ನಾಕ್ರಮಿಸಿ ಮುಗಿಸಿದ ಮೇಲೇನೇ ರಕ್ಷಣಾಯುದ್ಧ ಕೊಡುವ ಸ್ಥಿತಿಗೊಳಗಾಗಿದ್ದಾನೆ. 'ಹಿಟ್ಲರ್ ಆಕ್ರಮಿಸಿಕೊಂಡಿದ್ದಾನೆ' ಎನ್ನುವ ದೂರುವವರಿಗೆ, ಆ ಆಕ್ರಮಣ ಪೊತ್ತುಗಳನ್ನು ಬಿಡಿಸಿಕೊಳ್ಳದೆ ಹಿಟ್ಲರ್ 'ಸೋತಿದ್ದಾನೆ' ಎಂದು ಹೇಳುವ ಅಧಿಕಾರವೂ ಇಲ್ಲ. ಉಳಿದ ದೇಶಗಳನ್ನು ಆಕ್ರಮಿಸಕೊಳ್ಳಲಾಗದೆ ಹೋದುದೇ ಹಿಟ್ಲರನ ಸೋಲೆಂದ ನರೆ, ಅವನಾಕ್ರಮಣದಲ್ಲಿರುವವುಗಳನ್ನು ಇನ್ನೂ ಬಿಡಿಸಿಕೊಳ್ಳಲಾಗದ ಮಿತ್ರರು ವಿಜಯಿಗಳೆ? ನಾಲ್ಕು ವರುಷಗಳ ಯುದ್ಧಾನಂತರ, ಈ ಅವಧಿಯಲ್ಲಿ ತಾವು ವಶಪಡಿಸಿಕೊಂಡ ರಾಷ್ಟ್ರಗಳ ಜನೋಪಕರಣಗಳ ಬೆಂಬಲದಿಂದ ದೀರ್ಘಾವಧಿ ಹೋರಾಟಕ್ಕೆ ಹುರುಪಿನ ಸಿದ್ಧತೆಯಲ್ಲಿರುವ ಜರ್ಮನಿ ಜಪಾನುಗಳನ್ನು ಸ್ಪಷ್ಟವಾಗಿ ಹಂಗಿಸುವ ಸ್ಥಿತಿಗಾದರೂ ಮಿತ್ರರಾಷ್ಟ್ರೀಯರು ಬಂದಿರುವರೆ? ಮಿತ್ರರಿಗೆ ಕ್ಷಿಪ್ರ-ವಿಜಯದ ಭವಿಷ್ಯವಿದೆ- ಅದಕ್ಕನುಸಾರವಾದ ಅವರ ಯೋಜನೆ ಜಾರಿಯಲ್ಲಿದೆ-ಎನ್ನಬೇಕಾದರೆ ಯುದ್ಧವು ಬೇಗನೇ ಮುಗಿಯುವಂತೆ ಯುರೋಪಿನಲ್ಲಿ ಪ್ರತ್ಯಕ್ಷ ಧಾಳಿಯಾರಂಭವಾಗಬೇಕು; ಅದು 'ಆಗಲಿದೆ' ಎನ್ನುವ ಬದಲಿಗೆ 'ಆಗೋ ಆಗಿದೆ' ಎಂದು ತೋರಿಸುವಂತಿರಬೇಕಿತ್ತು. ಈ ತನಕ ಅಂತಹ ದ್ವಿತೀಯ ರಂಗವಿಲ್ಲ; ಇನ್ನದರ ನಿರ್ಮಾಣದ ನೊದಲೇ ನಿರ್ನಾಮ ಮಾಡಲು ಹಿಟ್ಲರನೂ ಸಿದ್ಧನಿದ್ದಾನೆ ಎಂಬುದರ ನಿದರ್ಶನಗಳು ಇದೀಗ ಪುನಃ ಕಳೆದ ವಾರ ಗೋಚರಿಸಹತ್ತಿವೆ.

ಡೊಡಕನೀಸ್ ಗುಂಪಿನ ಲೆರೋಸ್ ದ್ವೀಪವನ್ನು ನಾಜೀ ಸೇನೆಯಾಕ್ರಮಿಸಿಕೊಂಡಿದೆ; ಆ ಮೂಲಕ ಬಾಲ್ಕನಿಗೆ ನುಗ್ಗುವ ಮಿತ್ರ ಸೇನೆಗಳನ್ನಿದಿರುಗೊಳ್ಳಲು ಹೆಬ್ಬಾಗಿಲಿಗೇನೇ ಬಂದು ನಿಂತಿದೆ. ಇಟಲಿಯಲ್ಲಿ ರೋಮ್ ನಗರದ 90 ಮೈಲು ದೂರದಲ್ಲಿ ತಮ್ಮ ಸೈನ್ಯ ಕೋಟೆಯ ಹಿಂಭಾಗದಲ್ಲೇ ಮಿತ್ರ ಸೇನೆಗಳನ್ನು ನಾಜಿಗಳು ತಡೆದು ನಿಲ್ಲಿಸಿದ್ದಾರೆ. 'ಚಳಿಗಾಲದ ಅಂತ್ಯದ ವರೆಗೆ ಏನೇ ಸಂಭವಿಸಿದರೂ ಚಳಿಗಾಲದ ಲೈನನ್ನು ಬಿಟ್ಟುಕೊಡಬೇಡಿ' ಎಂಬ ಹಿಟ್ಲರನ ಆಜ್ಞೆಯು ಅಕ್ಷರಶಃ ಪಾಲಿಸಲ್ಪಡುವ ಲಕ್ಷಣ ಕಾಣುತ್ತಿದೆ. ರಶಿಯದಲ್ಲಿಯೂ ತಮ್ಮ ಆಯಕಟ್ಟಿನ ಸ್ಥಳಗಳಿಗೆ ಅಪಾಯ ಬಂದಿನ್ನು ವಾಗ ನಾಜೀ ಸೈನೆಗಳು ಹೂಡುತ್ತಿರುವ ಪ್ರತಿ ಧಾಳಿಗಳನ್ನು, 'ಝಿಟೊಮಿರ್'ನಂತಹ ಸ್ಥಳವನ್ನು ಅವರು ಪುನರಾಧೀನಪಡಿಸಿಕೊಂಡುದನ್ನೂ ಕಂಡುವಾಗ, 1918ರ ಜರ್ಮನಿಯನ್ನೂ ಇದ್ದಾರೆ ಎಂಬ ಭಯ ಹುಟ್ಟುತ್ತಿದೆ. ಅಪಜಯವನ್ನು ತಪ್ಪಿಸಿ ಬಿಡುವ ಶಕ್ತಿಯುಕ್ತಿಗಳು ಹಿಟ್ಲರನಲ್ಲಿ ಇನ್ನೂ ಹೇರಳವಿವೆ ಎಂಬುದು ಮೇಲಿನ ದೃಷ್ಟಾಂತಗಳಿಂದ ಸ್ಪಷ್ಟ. ಅಂದ ಮೇಲೆ ಯುದ್ಧವು ಮಿತ್ರರ ನಿರೀಕ್ಷೆಯಂತೆ ಬೇಗನೇ ಮುಗಿಯುವ ಬದಲಿಗೆ ಅಕ್ಸಿಸ್ ಬಯಕೆಯಂತೆ ಆಯುಷ್ಯಾಭಿವೃದ್ಧಿಗೊಳ್ಳಲಿದೆ ಇತ್ತ ಹಿಟ್ಲರ್ ಮುಕ್ತಾಯದ ವರೆಗೂ ಜಾಪಾನನ್ನು ಬಿಡದು ನಿಲ್ಲಿಸುವದಕ್ಕಿಂತ ತೀವ್ರವಾದ ಯೋಜನೆಯಾವುದೂ ಮಿತ್ರರಲ್ಲಿಲ್ಲ ಇದರ ಪರಿಣಾಮವನ್ನು, ಜಪಾನಿನ ಪೂರ್ಣ ಪರಿಚಯವಿರುವ ಅಮೇರಿಕದ

ದುರ್ಬೀನು

ರೋಗಕ್ಕೆ ಚಿಕಿತ್ಸೆ ಮಾಡಿಸಿಕೊಳ್ಳುವದಕ್ಕಿಂತ, ಮುಂದಾಗಿ ಆರೋಗ್ಯ ನಿಯಮಗಳನ್ನು ಪಾಲಿಸಿ, ರೋಗನಿವಾರಣಾತಂಕ ಪೊಡ್ಡುವದುತ್ತಮ; ಅನ್ಯಾಯಕ್ಕೆ ಪ್ರತೀಕಾರಮಾಡುವದಕ್ಕಿಂತ, ಅನ್ಯಾಯಕ್ಕಾಸ್ಪದವೀಯದ ಸಂಯಮವನವಿರುವದು ವಾಸಿ.

೦೦ ೦೦ ೦೦

ಎಷ್ಟೇ ಸವಿದರೂ ತುಟಿಯಚ್ಚಾಗುವದೆಂದಿಲ್ಲ; ಎಷ್ಟೇ ಅನುಭವ ಸಂಪಾದಿಸಿದರೂ ಅದು ಪೂರ್ಣವಾಯಿತೆಂದಿಲ್ಲ.

೦೦ ೦೦ ೦೦

ಗೆಲ್ಲುಗಳಿಲ್ಲದ ಬಾಳೆಯ ಮರ ಗೊನೆ ಬಿಡುತ್ತದೆ; ಗೆಲ್ಲಿದ್ದ ಆಲದ ಮರ ಪುಟ್ಟ ಕಾಯಿ ಬಿಡುತ್ತದೆ. ಬುದ್ಧಿಯೂ ಹಾಗೇನೇ-ಕವಲೊಡೆಯದಿದ್ದರೆ ಏಕ ಧೋರಣೆ; ಕವಲೊಡೆದರೆ ಅಲ್ಪಧೋರಣೆ.

೦೦ ೦೦ ೦೦

ಮುಂದಲೆ ಸವರುವವ ಮುತ್ತು ಕೊಡಲಾರನೇ? ಅಣಕಿಸವವ ಅಡ್ಡಗಾಲಿಡಲಾರನೆ?

೦೦ ೦೦ ೦೦

ಕೊರಳು ಕೊಂಕಿಸಿದರೆ ಕೊಂಕುವಾತೆ ಹೊರಡುವದಲ್ಲ; ದರಗು ನಡತೆಯವರೆಲ್ಲಾ ದರ್ಪಾಯಿಸುವವರೇ ಅಲ್ಲ.

೦೦ ೦೦ ೦೦

ಬೆಳದಿಂಗಳಲ್ಲಿ ಕೊಡಿಹಿಡಿಸುವವಳು ನಡುಬಿಸಿಲಲ್ಲಿ ನಡೆದಾಳೆ? ಸರಸವಾತಿಗೂ ಸಂತಾಪಗೊಳ್ಳುವವರು ತೀವ್ರ ಖಂಡನೆಯನ್ನು ಸಹಿಸಿಯಾರೆ?

೦೦ ೦೦ ೦೦

ಗೆಲ್ಲೋಣಗಿದುದು ಕಾಣುತ್ತದೆ-ಜೇಬೋಣಗಿದುದು ತೋರಲಾರದು. ಮಾನಹಾನಿಯಾದರೆ ತಿಳಿದೀತು- ಮನುಷ್ಯತ್ವ ನಶಿಸುವದು ಗೊತ್ತಾಗಲಾರದು

೦೦ ೦೦ ೦೦

ಹಣ್ಣು 'ಕೊಯ್ಯಲು' ತಿಳಿದ ಮಾತ್ರಕ್ಕೆ ಹುಣ್ಣು 'ಓಪರೇಶನ್' ತಿಳಿಯದು; ಸರಸವಾಡಬಲ್ಲವರು ಸಂಕಟನಿವಾರಣೆಯನ್ನೂ ಮಾಡಲಾರರು.

೦೦ ೦೦ ೦೦

... ಬೆನ್ನಲ್ಲೇ ವೈರು ಹಾರಾದೀತು; ವರ್ತನೆ ಸಡಿಲು ಬಿದ್ದರೆ ವರ್ಚಸ್ಸೂ ಕುಂದೀತು.

೦೦ ೦೦ ೦೦

ಕಂಠವಕ್ಕಿಂತ ಕಂಪಿಸುವಬಲ; ಸತ್ಯ ಮಾತಿಗಿಂತ ಕಪಟನಾಣಿ ಜಾಸ್ತಿ.

ಗುಂಬೆಯನ್ನೆತ್ತಿ ಕೊಳ್ಳುವಂತೆ ಮನುಷ್ಯರನ್ನೆತ್ತಿ ಕೊಳ್ಳುವದಿಲ್ಲ; ಹುಂಬರಿಗೆ ದೂರವಾಕ್ಯ, ಚತುರರಿಗಿಲ್ಲ.

ಪಿ. ಲೀಯವರ ಮಾತಿನಿಂದಲೇ ಊಹಿಸಬಹುದು: "ಶಾಂತ ಸಮುದ್ರದಲ್ಲಿ 'ತಡೆಯುದ್ಧ' ಮಾತ್ರ ನಡೆಸುವ ನಮ್ಮ ಸದ್ಯದ ಧೋರಣೆಯಿಂದಾಗಿ ನಾವು ಟೋಕಿಯೋದ ಕೈಯಲ್ಲಾಡುತ್ತಿದ್ದೇವೆ. ನಾವು ಜಪಾನೀ ನಿರ್ಮಿತ ಲೈನುಗಳನ್ನು ರಕ್ಷಿಸುತ್ತಿದ್ದೇವೆ ಹೊರತು ನಮ್ಮವುಗಳನ್ನಲ್ಲ" ಎಂದವರು ಹೇಳುತ್ತಾರೆ. ಜಾಗ್ರತೆ ವಹಿಸಲು ಸ್ಪಷ್ಟ ತಿಳಿದಿರಬೇಕಾದ ವಿಷಯ... ಪ್ರಪಂಚದ ನಂ. 1ನೇ ವೈರಿಯಾದ ಯುದ್ಧ ಅಭಿವೃದ್ಧಿಯಲ್ಲಿದೆ- ಅವಸಾನಗೊಳ್ಳುತ್ತಿಲ್ಲ!

ಚೂರು-ಚೂರು

'ಹನ್ನೊಂದು ಪ್ರಾಂತ್ಯಗಳ ಗವರ್ನರರೂ ಇದೇ ತಾ 19ರಲ್ಲಿ ವೈಸರಾಯರನ್ನು ಸಂದರ್ಶಿಸಿ, ಆಹಾರ ಪರಿಸ್ಥಿತಿಯ ಕುರಿತು ವಿಚಾರ ವಿನಿಮಯ ನಡೆಸಿದರು; ಆ ಮೇಲೆ ಎಲ್ಲರಿಗೂ ವೈಸರಾಯರ ಭೋಜನಸತ್ಕಾರವಾಯಿತು'-ವವತ್ರಿಕೆ.

ಎಲ್ಲಾ ಪ್ರಾಂತ್ಯಗಳ ಗವರ್ನರರು ಒಟ್ಟಾಗಿ ಆಹಾರದ ಅವಶ್ಯಕತೆಯನ್ನು ವೈಸರಾಯರಿಗೆ ಮನಗಾಣಿಸಿದರೆಂಬುದಕ್ಕೆ ಬೇರೆ ನಿದರ್ಶನ ಬೇಡವಷ್ಟೆ?

●

'ಬಂಗಾಳದಲ್ಲಿ ಇದೇ ನವಂಬರಕ್ಕೆ ಕಟಾವಾಗುವ, ಅಮನ್ ಬೆಳೆಯ ಕುರಿತು ಬಂಗಾಳಾ ಸರಕಾರವು ತಾನು ಕೈಕೊಂಡ ಯೋಜನೆಯನ್ನು ಪಕ್ಷ ಪ್ರಮುಖರ ಪರಿಷತ್ತಿನ ಮುಂದಿಟ್ಟಿತು'-ಕಲ್ಕತ್ತದಿಂದ ವಾರ್ತೆ.

ನಸಿಸಿಲಿ—'ಬೆಳೆ ಕಟಾವಿನ ಯೋಜನೆ'ಯನ್ನು, ಕಟಾವು ಮಾಡಿದ ಬೆಳೆಯನ್ನು ಮುಂದಿಟ್ಟಿಕ್ಕಲ್ಲ!

●

'ಲೆಬನಾನಿಗೆ ಪೂರ್ಣ ಸ್ವಾತಂತ್ರ್ಯ ಕೊಡಬೇಕೆಂಬ ಸಂದೇಶವನ್ನು ಅವರು ಫ್ರೆಂಚ್ ಸ್ವಾತಂತ್ರ್ಯ ಸಮಿತಿಗೆ ಕಳುಹಿದೆ'-ಮಿ. ಕೋರ್ಡೆಲ್ ಹಲ್ಲರ ಹೇಳಿಕೆ.

ತಮಗೇನೇ ಇಲ್ಲದ ಆ ಸ್ವಾತಂತ್ರ್ಯವನ್ನು ತಾವು ಎಲ್ಲಿಂದ ತಂದು ಕೊಡಲೆಂದು ಸ್ವತಂತ್ರ ಫ್ರೆಂಚ್ ಧುರೀಣರು ಸಮಸ್ಯೆಯಲ್ಲಿ ಬಿದ್ದಿದ್ದಾರೆ!

●

'ಡೊಡಕನೀಸ್ ಗುಂಪಿನ ಲೆರೋಸ್ ದ್ವೀಪವನ್ನು ಮಿತ್ರ ಸೇನೆಯನ್ನು ತಮ್ಮ ವಿಮಾನ ಪಡೆಯಿಂದ ಸೋಲಿಸಿ ಜರ್ಮನರಾಕ್ರಮಿಸಿ ಕೊಂಡರು'—ಯುದ್ಧವಾರ್ತೆ.

ವ್ರಾಯ ಈ ತಾ 18ರಲ್ಲಿ ಜರ್ಮನಿಯ ಮೇಲೆ 2500 ಟನ್ನು ಬೋಂಬುಗಳನ್ನು ಒಗೆಯುವದಕ್ಕಾಗಿ ಮಿತ್ರ ವಿಮಾನಗಳೆಲ್ಲಾ ಜರ್ಮನಿಗೆ ಹೋಗಿದ್ದುದರಿಂದ ಲೆರೋಸ್‌ನಲ್ಲಿ ಜರ್ಮನ್ ವಿಮಾನ ಮೇಲ್ಮೈಯ್ಯಾಗಿರಬೇಕು.

●

'ಇಟಲಿಯಲ್ಲಿ ಸೆರೆಸಿಕ್ಕಿದ ಜರ್ಮನ್ ಯೋಧರೆಲ್ಲಾ ಸರಕ್ತ ಅಹಂಕಾರಿಗಳು. ಅವರಿಗಿನ್ನೂ ಹಿಟ್ಲರನ ಮೇಲೆ ಅತಿ ವಿಶ್ವಾಸ'-ಅಮೇರಿಕದ ವಿಜ್ಞಾನೆಯ ಕಾರ್ಯದರ್ಶಿ ಮಿ. ಪೋರ್ಗೆಂತಾವು.

ಹಾಗಾದರೆ ಮನುಷ್ಯನನ್ನು ಸೆರೆಹಿಡಿಯುವದಕ್ಕಿಂತ ಮನಸ್ಸನ್ನು ಸೂರೆಗೊಳ್ಳುವದು ವಾಸಿ.

●

'ಹಸಿ ಹೆಂಡದಲ್ಲಿ ಆಹಾರ ಗುಣವಿರುವದರಿಂದ ಆಹಾರಾಭಾವದ ಈ ಕಾಲದಲ್ಲಿ ಕೂಲಿಗಾರರಿಗದನ್ನು ತಪ್ಪಿಸುವದು ಸರಿಯಲ್ಲ'-ಮದ್ರಾಸಿನ ಕೆಲವು ಜಿಲ್ಲೆಗಳಲ್ಲಿದ್ದ ಪಾನ ಪ್ರತಿಬಂಧಕವನ್ನು ರದ್ದುಮಾಡುತ್ತಾ ಮದ್ರಾಸ್ ಸರಕಾರದ ಪ್ರಕಟಣೆ.

ಆ ಹಸಿ ಆಹಾರ ಸೇವಿಸಿದಾಗಲೇ ಈ ಪ್ರಕಟಣೆಯನ್ನು ಹೊರಡಿಸಿರಬಹುದೆ?

—ವಿನೋದಿ.

CHAMPAE'S
SNOW & CASTREX
AGENTS
SADANANDA STORES UDIPI

ಯುದ್ಧ ಗತಿ

ರಶ್ಯದಲ್ಲಿ ಹಲವು ರಣರಂಗಗಳಲ್ಲಿ ಕೆಂಪು ಸೇನೆಯ ಧಾಳಿಯ ವ್ಯಥತೆ ಮೊದಲಿನಂತೆಯೇ ಇದ್ದರೂ, ನಾಜಿಗಳು ಈಗೀಗ ಅಧಿಕ ಪರಿಮಾಣದಲ್ಲಿ ಶಕ್ತಿಪ್ರಯೋಗಕ್ಕೆ ಅಣಿಯಾದಂತಿದೆ. ಝಿಟೋಮಿರ್ ಕ್ಷೇತ್ರದಲ್ಲಿ ಜರ್ಮನರು ಮುಂದೊತ್ತಿ ಅಲ್ಲಿಯ ಹೋರಾಟವು ಅತಿ ತೀವ್ರತೆ, ಅನಿಶ್ಚಿತದೃಷ್ಟಕ್ಕೆ ಮುಟ್ಟಿದೆ. ಆ ಭಾಗದಲ್ಲಾದರೂ ಜರ್ಮನರಿಗೆ ಗಣನೀಯ ವಿಜಯ ದೊರೆತಿಲ್ಲವೆಂದು ರಶ್ಯಾನರನ್ನುತ್ತಾರೆ. ಓವ್ರುಚ್ ನಗರದಿಂದ ರಶ್ಯನರನ್ನು ಹೊರದಬ್ಬಲು ನಾಜಿಗಳಾರಂಭಿಸಿದ ಪ್ರಬಲ ಧಾಳಿಗೆ ಕೆಂಪು ಸೇನೆ ಹಿಂಜರಿಯ ಕೊಟ್ಟಿವೆ. ರಶ್ಯನರ ನೂತನ ಕೀವ ... ಧಾಳಿಯ ... ಅಭಿವೃದ್ಧಿಗೊಳ್ಳುತ್ತಿದೆ. ... ಟೋಮಿರ್-ರಚಿಟ್ಸಾ ಮತ್ತು ರೋ... ಓವ್ರುಚ್ ವಲಯಗಳಲ್ಲಿ ಮೂರು ... ಯುದ್ಧಗಳೀಗ ನಡೆಯುತ್ತಿದ್ದು ... ಪರಿಣಾಮಗಳನ್ನು ಆತುರದಿಂದ ... ಕ್ಷಿಸಲಾಗಿದೆ.

ಇಟೆಲಿಯಲ್ಲಿ ಮಿತ್ರರ ಧಾಳಿ ಇನ್ನಷ್ಟು ... ನಗೊಂಡಿದೆ. ರೋಮ್ ನಗರದ ... ರದ ರಕ್ಷಣಾ ಲೈನಿನ ಬಳಿ ಧಾಳಿ ಸ್ಥಗಿತವಾದಂತಿದೆ. ಮಿತ್ರರು ಅಲ್ಲಿಯ ನೆಲದ ರೀತಿ, ಹವಾಮಾನದ ಪ್ರತಿಕೂಲತೆಯನ್ನೇ ಇದಕ್ಕೆ ಕಾರಣವಾಗಿ ಹೇಳುತ್ತಿದ್ದಾರೆ. ಇದಿರುಗಡೆ ಪ್ರಬಲ ನಾಜೀ ಸೇನೆಗಳಿರುವದೂ, ಹಿಂದೆ ಸರಿಯುವಾಗ ಜರ್ಮನರು ಮೈನ್ ಮೊದಲಾದ ಕಂಟಕಗಳನ್ನು ನಿರ್ಮಿಸಿ ಹೋಗಿರುವದೂ ಮಿತ್ರರ ಗತಿ ಮಂದವಾಗಲು ಕಾರಣವೆಂದು ಊಹಿಸಲಾಗಿದೆ.

ಇದೇ ತಾ 23ನೇ ರಾತ್ರಿ ಮಿತ್ರ ವಿಮಾನಗಳು ಬರ್ಲಿನ್ ನಗರದಉತ್ಪಾದನಾ ಹಾಗೂ ಆಯಕಟ್ಟಿನ ಕೇಂದ್ರಗಳ ಮೇಲೆ ಅತಿ ಪ್ರಬಲ ಬೋಂಬು ಧಾಳಿ ನಡಿಸಿದವು. ಗಣನೀಯ ನಷ್ಟವಾಗಿದೆ ಎಂದು ಜರ್ಮನರೇ ಒಪ್ಪಿದ್ದಾರೆ. ಲಂಡನಿನ ಮೇಲೂ ವಿಮಾನಧಾಳಿ ನಡೆದಿದೆ.

ಶಾಂತ ಸಮುದ್ರದಲ್ಲಿ ಬೋಗೈನ್ ವಿಲ್ಲೆಎಂಬ ದ್ವೀಪದಲ್ಲಿ ಅತಿ ಬಿರುಸಾದ ಹೋರಾಟನಡೆಯುತ್ತಿದೆ. ನೈಋತ್ಯ ಶಾಂತ ಸಮುದ್ರದ ಜಪಾನಿನ ಮುಖ್ಯ ನಿಲ್ದಾಣವಾದ ರಾಬೂಲನ್ನಾಕ್ರಮಿಸಿಕೊಳ್ಳುವ ಮೊದಲು ಮಿತ್ರರು ಈ ದ್ವೀಪವನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆ. ಬರ್ಮದಲ್ಲಿ ಆಕಾಶ ಧಾಳಿ ಮತ್ತು ಗಸ್ತಿ ಚಟುವಟಿಕೆಗಳಲ್ಲದೆ ಬೇರೆ ಗಣನೀಯ ಸ್ಪರ್ಧೆಯಿಲ್ಲ. ಚೀನದಲ್ಲಿ ಜಪಾನರು ದೊಡ್ಡ ಪರಿಮಾಣದ ಧಾಳಿಗಳನ್ನಾರಂಭಿಸುವದರಲ್ಲಿದ್ದಾರೆ.

ಲೆಬನಾನ್ ಸಮಸ್ಯೆ

ಮಧ್ಯ ಪೂರ್ವದ ಫ್ರೆಂಚ್ ಹೈ ಕಮಿಶನರ್ ಜನರಲ್ ಕಾಟ್ರೂಕ್ಸರು ಲೆಬನಾನಿನ ದುರಂತ ತೀರ್ಮಾನಕ್ಕಾಗಿ ಅಲ್ಲಿಯ ರಾಜಧಾನಿ ಬೇರುಟ್‌ಗೆ ಬಂದಿದ್ದಾರೆ. ಸ್ವತಂತ್ರ ಫ್ರೆಂಚ್ ಸಮಿತಿಯು ಸಭೆಸೇರಿ ಪರ್ಯಾಲೋಚನೆ ನಡೆಸಿದ್ದಾರೆ. ಬ್ರಿಟಿಷ್ ರಾಯಭಾರಿ ಕೇಸಿಯವರೂ ಅಲ್ಲಿಯೇ ಇದ್ದಾರೆ. ಮಿತ್ರ ಸಮಿತಿಯೊಂದು ಲೆಬನಾನ್ ಪಂಚಾಯತಿ ವಹಿಸಿದರೆ ಸಮಸ್ಯೆಯು ಐದಾರುಪಾಲು ಕಠಿಣವಾಗುವದೆಂದೂ, ಲೆಬನಾನಿನಲ್ಲಿ ಫ್ರೆಂಚರ ಅಧಿಕಾರ ರಾಜಕೀಯ ಮತ್ತು ಆಡಳಿತೆಯದಾದರೆ, ಬ್ರಿಟಿಷರಿಗೆ ಮಿಲಿಟರಿ ಸಂಬಂಧ ಮಾತ್ರವೆಂದೂ ಕಾಟ್ರೂಕ್ಸರ ಹೇಳಿಕೆ. ಕಾಟ್ರೂಕ್ಸ್ ಅಭಿಪ್ರಾಯದಂತೆ ಲೆಬನಾನ್ ಅಧ್ಯಕ್ಷರಿಗೆ ಬಿಡುಗಡೆ ಮತ್ತು ಮೊದಲ ಸ್ಥಾನ ದೊರೆತಿದೆ. ಮಂತ್ರಿಗಳು ಕೂಡಲೇ ಬಿಡುಗಡೆಹೊಂದಿದ್ದಾರೆ. ಆದರೆ ಅವರಿಗೆ ಹಿಂದಿನ ಅಧಿಕಾರ ದೊರೆಯುವದು ಅಸಂಭವ. ಅಲ್ಲಿಯ ಗಲಭೆಗಳು ಪ್ರಕೃತ ಬಹುಮಟ್ಟಿಗೆ ಶಾಂತವಾಗಿವೆಯಾದರೂ ಒಪ್ಪಂದವಾಗದಿದ್ದಲ್ಲಿ ಲೆಬನಾನ್ ಪ್ರಜೆಗಳು ಉದ್ರೇಕಗೊಂಡ ವಿಧ್ವಂಸಕ ಕಾರ್ಯಾಚರಿಸುವ ಭಯವಿದ್ದಿದೆ. ಗಲಭೆಗೆ ಕಾರಣಭೂತನಾದ ಫ್ರೆಂಚ್ ಡೆಲಿಗೇಟ್ ಜನರಲ್ ಹೆಲ್ಲುವೂನನ್ನು ಹಿಂದೆಕರೆದು, ಅಲ್ಲಿಯ ಮರು ಚುನಾವಣೆಯನ್ನೂ ರದ್ದುಪಡಿಸಲಾಗಿದೆ. ಆದರೆ ಹಿಂದಿನ ಮಂತ್ರಿಗಳಿಗೆ ಅಧಿಕಾರದೊರೆತಿಲ್ಲವಾದ್ದರಿಂದಲೂ ಫ್ರೆಂಚ್ ಲೆಬನಾನಾ ಸಂಬಂಧ ಸ್ಪಷ್ಟವಾಗಿಲ್ಲವಾದ್ದರಿಂದಲೂ ಪೂರ್ಣ ಶಾಂತಿ ನೆಲಸಿಲ್ಲ.

○ ಬ್ರಿಟನಿನಲ್ಲಿದ್ದ ಫೇಸಿಸ್ಟ ಯೂನಿಯನಿನ ಅಧ್ಯಕ್ಷರಾಗಿದ್ದು ಬಂಧನದಲ್ಲಡಲ್ಪಟ್ಟಿದ್ದ ಸರ್. ಒಸ್‌ವಾಲ್ಡ್ ಮೋಸ್ಲೋ ಮತ್ತು ಅವರ ಪತ್ನಿಯನ್ನು ಬ್ರಿಟಿಷ್ ಸರಕಾರವು ಬಿಡುಗಡೆಮಾಡಿದೆ ಇದರಿಂದ ಇಂಗ್ಲಾಂಡಿನವರೆಲ್ಲಾ ಕ್ರೋಧಗೊಂಡಿದ್ದಾರೆ.

○ ಶಾಂತ ಸಮುದ್ರದ ಮಾಕಿನ್ ಮತ್ತು ಟರಾವಾ ದ್ವೀಪಗಳಲ್ಲಿ ಅಮೇರಿಕನ್ ಸೇನೆಗಳಿಳಿದಿವೆ. ಹೋರಾಟ ನಡೆಯುತ್ತಿದೆ. ಇದು ಟೋಕಿಯೋ ಗಮನದ ಆರಂಭ ಎಂದು ಅಮೇರಿಕಾನ ಹೆಗ್ಗಳಿಕೆ.

○ ಶಾಂತ ಸಮುದ್ರದ ವಿದ್ಯಮಾನಗಳನ್ನವಲೋಕಿಸುವಾಗ ಅಲ್ಲಿಯ ಯುದ್ಧಗತಿಯು ಜಪಾನರಿಗೀಗ ಪ್ರತಿಕೂಲವಾಗಿದೆಯೆಂದೂ ಮಿತ್ರರ ಕೈಗೆ ಯುದ್ಧ ಸೂತ್ರ ಬಂದಿದೆಯೆಂದೂ ರಶ್ಯಾನರ ಅಭಿಪ್ರಾಯ.

Await

The gala opening day

OF

The Victory Club

Both Vegetarian & Non-vegetarian dishes

Old Post office Building,

VICTORY ROAD, UDIPI.

ಪ್ರಾರಂಭದ ದಿನವನ್ನು ನಿರೀಕ್ಷಿಸಿರಿ!

ಅತ್ಯಾಧುನಿಕ ಮಾದರಿಯ ಮೇಲ್ತರಗತಿಯ

ಭೋಜನ ಮತ್ತು ವಿಶ್ರಾಂತಿ ಗೃಹ.

ವಿಕ್ಟರಿ ಕ್ಲಬ್

ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ರೋಡ್, ಉಡುಪಿ.

1944 ನೇ ಇಸವಿಯ

ನವಭಾರತ ಪಾಕೆಟ್ ಡೈರಿ.

ಬಿಕರಿಗೆ ತಯಾರಾಗುತ್ತಿದೆ.

ದರಗಳು:

ಸಣ್ಣ ಸೈಜು (ಸಾದಾ) 1—0—0 (ಕೆಲಿಕೊ) 1—1—0

,, (ಮುಚ್ಚಳದ್ದು) 1—8—0 ದೊಡ್ಡ ಸೈಜು (ಕೆಲಿಕೊ) 2—0—0

ದೊಡ್ಡ ಸೈಜು (ಮುಚ್ಚಳದ್ದು) 2—6—0

ಕಳೆದ ವರ್ಷದಂತೆ ಈ ವರ್ಷವೂ ನಮ್ಮ ಡೈರಿಗಳಿಗೆ ನುಣುಪು ಬಿಳುಪಾದ ಹೊಳಪಿನ ಕಾಗದವನ್ನು ಉಪಯೋಗಿಸಲಾಗಿದೆ. ಒಂದೊಂದು ಪ್ರತಿಯನ್ನು ಅಪೇಕ್ಷಿಸುವವರು ಸಣ್ಣ ಸೈಜಿನ ಡೈರಿಗೆ 0—1—0; ದೊಡ್ಡ ಸೈಜಿನದ್ದಕ್ಕೆ 0—1—0; ಪ್ರತ್ಯೇಕ ಅಂಚವೆಚ್ಚ ಕಳಿಸಬೇಕು. ವ್ಯಾಪಾರಿಗಳಿಗೆ ಕಮಿಶನ್ ಇದೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾ. **20—11—43** ರಿಂದ

ಬೊಂಬೆ ಟೋಕಿಸ್‌ನವರ

ಝೂಲ

ಅಶೋಕಕುಮಾರ್, ಲೀಲಾಚಿಟ್ನಿಸ್, ದೇಸಾಯಿ, ಷಾನ್ ವಾಜ್,

ಬರುವಚಿತ್ರ:—ಹಿಂದ್ ಪಿಕ್ಚರ್ಸಿನವರ 'ಕಲಿಯುಗ' ಸಿತಾರ, ನಾಜಿರ್, ಕುಮಾರ್, ಮತ್ತು ಗೋಪ್.

Notice

ಪುತ್ತೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ.

R. E. P. 111/43

ನಾರಾಯಣ ಶೆಟ್ಟಿ ರ— ಅರ್ಜಿದಾರ.

ಅನಂತ ಭಟ್ಟ-ವೀರೇಶ್ವರ ಭಟ್ಟ ಮಗ್ಗಹಕ್ಕಡ್ಕ ಗ್ರಾಮದಲ್ಲಿರುವವ- ಎದ್ರಿ:

ಮೇಲ್ಕಂಡ ಎದ್ರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:-

ಮೇಲ್ಕಂಡ ಅರ್ಜಿದಾರನು ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾನೆ. ಆದುದರಿಂದ ಯಿಸ್ತಿಹಾರಿನ ಷರತುಗಳನ್ನು ನಿರ್ಣಯಿಸಲಿಕ್ಕೆ 1943 ನೇ ಯಿಸವಿ ಡಿಸಂಬ್ರ ತಿಂಗಳ 3ನೇ ತಾರೀಕು ನಿಶ್ಚಯಿಸಲಾಗಿಯದಂತ ನಿಮಗೆ ಇದರಿಂದ ತಿಳಿಸಲಾಗುತ್ತದೆ-

(By order of the Court)

S. Soorappaya.

Vakil for petitioner

ತಾ. 16-11-43

WANTED.

Applications are invited from local candidates for appointment as Bill Collectors under the Udipi Municipality. Only those who have passed III From in a recognised secondary school and who can furnish a cash security of Rs 200/- need apply. Applications should reach the Commissionor, Udipi Municipality on or before 29-11-1943

K. Raghavendra Kamath,
Commissioner-Delegate

Station: Udipi
Dated 22-11-1943

ಪ್ರಕಟಣೆ.

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisserri.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ- ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ವಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುನ್ಹಿರಾಮನ್,
ಮೆನೇಜರ್

Degrees: Books: Medicines

Free H. L. M. S. M, B. H. M, D, etc. Free Homeo-Ayur- Unani Natureo degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp:—

Prof. Dr. N H. Chhatbar,
Principal Indian Homeopathi Institute & Society (Govt. Regd)
P.O. MAHUVA (Kathiawar Dt. India.)

Sidha-Kalpa Kavach (Regd.)

No. 3 Rs 2. No. 2 Rs. 5 No. 1 Rs. 7 Special Rs. 10, Extra Special Rs. 17 fo ove marriage health, wealth. Ask an six questions with M. O. Re. 1/4 an get correct answers by returnpost Life reading Rs.10 No V.P.P. Send M.O, Free, pmplets.

Prof. Dr. N. H Chhatbar,
P. O. MAHUVA (Kathiawar India.)

ದಕ್ಷಿಣ ಕನ್ನಡ.

ಮಂಗಳೂರು.

ನಿರ್ಬಂಧಕಾಜ್ಞೆ-ಜಿಲ್ಲಾ ಕಲೆಕ್ಟರರು ನವಂಬರ ತಾ. ೧೮ರ ಮೊದಲ್ಗೊಂಡು ಸಭೆ, ಮೆರವಣಿಗೆಗಳ ಮೇಲಿನ ನಿರ್ಬಂಧಕಾಜ್ಞೆಯನ್ನು ಮಂಗಳೂರು ಮತ್ತು ಉಡುಪಿ ನಗರ ಸಭಾ ಪ್ರದೇಶಗಳಲ್ಲಿ ಮತ್ತು ಇದೇ ಕಾಸರಗೋಡು ತಾಲೂಕಿನಲ್ಲಿ ಮಾತ್ರ ಪುನಃ ಎರಡು ತಿಂಗಳ ತನಕ ಮುಂದುವರಿಸಿರುವರು.

ಪ್ರಾಥಮಿಕ ಸ್ಟೋರುಗಳ ಪರಿಷತ್ತು

ಜಿಲ್ಲೆಯ ಎಲ್ಲಾ ಪ್ರಾಥಮಿಕ ಸಹಕಾರಿ ಸ್ಟೋರುಗಳ ಪ್ರಥಮ ಪರಿಷತ್ತು ತಾ. ೧೩ರಂದು ಸಂಜೆ ಜಿಲ್ಲಾ ಸಹಕಾರಿ ಸಂಘದ ಕಟ್ಟಡದಲ್ಲಿ ಶ್ರೀ| ಮೊಳಹಳ್ಳಿ ಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲೆಯಲ್ಲಿ ಅಕ್ಕಿಯ ವಿತರಣೆಯ ಭಾರವನ್ನು ವಹಿಸಿಕೊಂಡಿರುವುದರಿಂದ ಒಡನೆಯೇ ಸಹಕಾರಿ ರಖಂ ಸ್ಟೋರುಗಳ ಪಾಲು ಭಂಡವಾಳವನ್ನು ಒಂದು ಲಕ್ಷಕ್ಕಾದರೂ ಏರಿಸುವ ನಿರ್ಧಾರವನ್ನು ಪರಿಷತ್ತು ಮಾಡಿತು. ೧೯೪೪ರ ಜನವರಿಯಲ್ಲಿ ಸ್ಟೋರುಗಳು ಒಮ್ಮೆ ಸ್ಟೋರು ದಿನವನ್ನಾಚರಿಸಬೇಕೆಂದೂ ಆಗ ಹೆಚ್ಚು ಸದಸ್ಯರನ್ನು ಸೇರಿಸಿ ಪಾಲು ಭಂಡವಾಳವನ್ನು ಹೆಚ್ಚಿಸಬೇಕೆಂದೂ ಗೊತ್ತಾಯಿತು. ಸ್ಟೋರುಗಳ ಆದೇಶಕ್ಕೆ ಸಂಬಂಧಿಸಿದ ಹಲವಾರು ವಿಷಯಗಳ ಇತ್ಯರ್ಥವಾದ ಮೇಲೆ, 'ಜಿಲ್ಲೆಯಲ್ಲಿ ಸ್ಟೋರುಗಳಿರುವ ಪ್ರದೇಶಗಳಲ್ಲೆಲ್ಲಾ ಸರಕಾರವು ನಿಯಂತ್ರಿತ ಸಾಧನೆಗಳ ವಿತರಣಕ್ಕೆ ಆ ಸ್ಟೋರುಗಳನ್ನು ಉಪಯೋಗಿಸಬೇಕು' ಎಂದು ಕಲೆಕ್ಟರರನ್ನು ಕೇಳಿಕೊಳ್ಳುವ ನಿರ್ಣಯವನ್ನು ಪರಿಷತ್ತು ಸ್ವೀಕರಿಸಿತು.

ವರ್ತಕರಲ್ಲಿ ವಿನಂತಿ-ಕಳೆದ ಫೆಬ್ರವರಿಯಲ್ಲಿ ರಚಿಸಲ್ಪಟ್ಟಿದ್ದ 'ಮಹಾಜನ ಆಹಾರ ಸಂಕಷ್ಟ ನಿವಾರಣಾ ಸಮಿತಿಯ ಸದಸ್ಯರಲ್ಲೊಬ್ಬರಾದ ಶ್ರೀ| ಧರ್ಮಸ್ಥಳ ಮಂಜಯ್ಯ ಹೆಗ್ಗಡೆ ಅವರು ಒಂದು ವಿನಂತಿಯನ್ನು ಹೊರಡಿಸಿ, 'ವರ್ತಕರಲ್ಲಿ ಅನೇಕರು ಊರಿನಲ್ಲಾಗುವ ಸ್ಥಿತಿಗತಿಗಳನ್ನು ಗಮನಕ್ಕೆ ತಾರದೆ ಸ್ವೇಚ್ಛಾವರ್ತಿಗಳಾಗಿ ತಮ್ಮ ಲಾಭದ ಕಡೆಗೇ ಲಕ್ಷ್ಯ ಕೊಡುತ್ತಾರೆ ಇದು ಜನಸಮುದಾಯಕ್ಕೆ ಹಿತಕರವಲ್ಲ. ಬಂಗಾಳದ ಅವಸ್ಥೆ ನಮಗೆ ಎಂದಿಗೂ ಬೇಡ. ಖರ್ಚು ಕಳೆದು ಉಳಿಯುವ ಅಕ್ಕಿಯನ್ನೆಲ್ಲಾ ಕೋ- ಅಪರೇಟಿವ್ ಹೋಲ್ ಸೇಲ್ ಸ್ಟೋರ್ಸುಗಳಿಗೇ ಕೊಡುವುದರ ಮೂಲಕ ನಾವು ಕಲೆಕ್ಟರರೊಡನೆ ಸಹಕರಿಸಬೇಕು ಭೂಮಾಲಿಕ ಸಂಘದ ಅಭಿಪ್ರಾಯವನ್ನು ಒಕ್ಕಲುಗಳೂ ಧನಿಯವರೂ ಎಲ್ಲರೂ ಅನುಸರಿಸಬೇಕು' ಎಂದು ವಿನಂತಿ ಮಾಡಿರುವರು.

ಕೆನರಾ ಹೈಸ್ಕೂಲು-ಸಂಸ್ಥಾಪಕರ ದಿನವು ತಾ. ೧೯ರಂದು ಆಚರಿಸಲ್ಪಟ್ಟಿತು. ಬೆಳಗ್ಗೆ ಡಾ| ಕೇಶವ ಪೈ ಅವರು ಧ್ವಜಾರೋಹಣ ಮಾಡಿ, ವಿದ್ಯಾರ್ಥಿಗಳನ್ನು ಕುರಿತು ಹಿತವಚನಗಳನ್ನಾಡಿದರು. ಸಂಜೆ ಶ್ರೀ| ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಸಂಸ್ಥಾಪಕರ ದಿನಾಚರಣೆಯ ಸಂಬಂಧವಾಗಿ ಜರಗಿಸಲ್ಪಟ್ಟಿದ್ದ ಪಂದ್ಯಾಟಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಲಾಯಿತು. ಖಾನ್‌ ಬಹದ್ದೂರ್ ಹಾಜಿಸಯ್ಯದ್ ಹುಸೇನ್ ಸಾಹೆಬ್ ಬಹದ್ದೂರರು ಶಾಲೆಯ ಸ್ಮಾರಕ ಭಾಷಣವನ್ನಿತ್ತರು. ಈ ದಿನವು ಶಾಲೆಯ ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ ಜರಗಿಸಲ್ಪಟ್ಟಿತು.

ದ. ಕ. ಸೆಂಟ್ರಲ್ ಕೋ-ಅಪರೇಟಿವ್ ಹೋಲ್‌ಸೇಲ್ ಸ್ಟೋರ್ಸ್, ಮಂಗಳೂರು.

ನಮ್ಮ ಜಿಲ್ಲೆಯ ಆಹಾರ ಪರಿಸ್ಥಿತಿಯ ಬಗ್ಗೆ ಸರಕಾರದವರು ರೈತವರ್ಗದವರಿಂದ ಅಕ್ಕಿ ಭತ್ತಗಳನ್ನು ಕೊಂಡುಕೊಳ್ಳಬೇಕೆಂದು ಈಗ ಹಾಸಿಕೊಂಡ ಕಾರ್ಯವನ್ನು ದ. ಕ. ಸೆಂಟ್ರಲ್ ಸ್ಟೋರಿಗೆ ವಹಿಸಿ ಕೊಟ್ಟ ಸಂಗತಿಯು ಸರ್ವರಿಗೂ ತಿಳಿದಿದೆಯಷ್ಟೆ-ಅಕ್ಕಿಯನ್ನು ಕೊಂಡುಕೊಳ್ಳುವ ಬಗ್ಗೆ ಕೆಳಗೆ ಕಾಣಿಸಿದಂತೆ ಡಿಪೋಗಳನ್ನು ಕೂಡಲೆ ತೆರೆಯಲಾಗಿದೆ. ಗಂಗೊಳ್ಳಿ ಬಂದರದಲ್ಲಿ, ಕುಂದಾಪುರ ವೆಂಕಟ್ರಮಣ ದೇವಸ್ಥಾನದ ಒಳ್ಳೆ, ಕಾರ್ಕಳ ದೊಡ್ಡ ಬೀದಿಯಲ್ಲಿ, ಉಡುಪಿ ಪೇಟೆಯಲ್ಲಿ, ಮಂಗಳೂರು ಬಂದರದಲ್ಲಿ, ಹಂಗಾರಕಟ್ಟೆ ಬಂದರದಲ್ಲಿ, ಮತ್ತು ಪುತ್ತೂರು ಪೇಟೆಯಲ್ಲಿ, ರಿಕ್ವಿಸಿಶನ್ ಮಾಡಲ್ಪಟ್ಟ ಭತ್ತ ಯಾ ಅದರಿಂದ ತಯಾರಿಸಿದ ಅಕ್ಕಿಯನ್ನು ಈ ಡಿಪೋಗಳಿಗೆ ಕೊಟ್ಟಲ್ಲಿ ನಮ್ಮ ಏಜಂಟರು ಅದರ ನಿಷ್ಕೃತ ಕ್ರಯವನ್ನು ಕೂಡಲೇ ಕೊಡುವರು.

ಹೀಗೆ ಒದಗಿಸಲ್ಪಟ್ಟ ಅಕ್ಕಿಯ ಪ್ರತಿ ಒಂದಂಶವನ್ನು (ಇದು ಅನಿವಾರ್ಯ ಎಂದೆನಿಸಿದರೆ-) ಆಯಾ ತಾಲೂಕಿನ ಪೇಟೆ ಪಟ್ಟಣಗಳ ಕೃಷಿಕರಲ್ಲದವರ ಬಗ್ಗೆ ಅಲ್ಲಲ್ಲಿ ದಾಸ್ತಾನಿಟ್ಟು ಅದನ್ನು ಆಯಾ ಕೇಂದ್ರಗಳಲ್ಲಿನ ಮುಂದಾಳುಗಳ ಸಹಕಾರದಿಂದ ಗುರುತಿನ ಚೀಟಿಗಳನ್ನು ಕೊಟ್ಟು ಮಾರಾಟದ ವ್ಯವಸ್ಥೆ ಮಾಡಲಾಗುವುದು. ಬಂದ ಅಕ್ಕಿಯನ್ನು ಮಂಗಳೂರಿನಲ್ಲಿ ಸದ್ಯ ಜ್ಯಾರಿಯಲ್ಲಿ ಬರಲಿಕ್ಕಿರುವ ರೇಶನಿಂಗ್ ಬಗ್ಗೆ ಕಾಸರಗೋಡು ತಾಲೂಕಿನ ಕೊಟ್ಟೆಯ ಊರುಗಳ ಆಹಾರದ ಬಗ್ಗೆ ಒಯ್ದು ಉಪಯೋಗಿಸಲ್ಪಡುವದು. ಜಿಲ್ಲೆಯ ಮಹಾಜನರ ಆಹಾರ ಸಂಕಷ್ಟ ನಿವಾರಣೆಯ ಮಹತ್ಕಾರ್ಯದಲ್ಲಿ ಸರ್ವರೂ ನೆರವಾಗಬೇಕಾಗಿ ವಿನಂತಿ.

ಈ ಯೋಜನೆಯ ಮುಖ್ಯ ಕಾರ್ಯಾಲಯವನ್ನು ಮಂಗಳೂರು ಕೊಡಿಯಾಲಬೈಲಿನಲ್ಲಿ ಸೆಂಟ್ರಲ್ ಬೆಂಕಿನ ಎದುರು ಇಂದು ತೆರೆಯಲಾಗಿದೆ. ಪತ್ರ ವ್ಯವಹಾರವ ಹೆಚ್ಚಿನ ಮಾಹಿತಿ ಆಫೀಸಿನ ಮುಖ್ಯ ಅಧಿಕಾರಿ ಎಕ್ಸಿಕ್ಯೂಟಿವ್ ಆಫೀಸರವರ ಕೂಡೆ ಮಾಡಬಹುದೆಂದು ಅಧ್ಯಕ್ಷ ತಿಳಿಸುತ್ತಾರೆ- ಮೊಳಹಳ್ಳಿ ಶಿವರಾಯರು.

ಉಡುಪಿ.

ಗೀತಾ ಜಯಂತಿ—ಉಡುಪಿಯ ಕೆಲವು ಗೀತಾ ಪ್ರೇಮಿಗಳು ಸೇರಿ ಡಿಸಂಬ್ರ ತಾ| ೧ರಿಂದ ೭ರ ತನಕ ಗೀತಾ ಜಯಂತಿಯನ್ನು ಜರಗಿಸುವ ವ್ಯವಸ್ಥೆ ಮಾಡಿರು.... ಈ ಸಮಯದಲ್ಲಿ ಗೀತಾ ಸ್ಪರ್ಧೆ ಯೂ ದಿನಂಪ್ರತಿ ಗೀತೆಯ ಕುರಿತು ಉಪನ್ಯಾಸಗಳೂ ಇವೆ ಎಂದು ಕೇಳುತ್ತೇವೆ.

ರಾತ್ರಿ ಶಾಲೆ—ಉಡುಪಿ ಬೀಡಿ ಕೆಲಸಗಾರರ ಸಂಘದ ರಾತ್ರಿ ಶಾಲೆಯೊಂದು ತಾ| 21ರಲ್ಲಿ ಶ್ರೀ| ಯು| ನಾಗಪ್ಪ ಕಂಮ್ತಿಯವರ ಅಧ್ಯಕ್ಷತೆಯಲ್ಲಿ ಶ್ರೀ| ಯು. ಎಸ್. ಶೆಟ್ಟರಿಂದ ಉದ್ಘಾಟನೆ ಮಾಡಲ್ಪಟ್ಟಿತು. ಶ್ರೀ| ಸಿ. ಕೆ. ಗೋವಿಂದನ್‌ರವರು ಈಗಿನ ಆಹಾರ ತುಟ್ಟಿಯ ವಿಷಮ ಸ್ಥಿತಿಯನ್ನು ವಿವರಿಸಿ ಜಿಲ್ಲೆಯಲ್ಲೆಲ್ಲಾ 'ಸಿವಿಲ್ ಫುಡ್ ಕಮಿಟಿ'ಗಳು ಸ್ಥಾಪಿಸಲ್ಪಡಬೇಕಾಗಿಯೂ ಸರ್ವತ್ರ ರೇಶನಿಂಗ್ ಪದ್ಧತಿ ಜ್ಯಾರಿಗೆ ಬಂದರೆನೇ ಬಡಜನರಿಗೆ ಉಳಿಗಾಲವಿರುವುದೆಂದೂ ಭಾಷಣವಿತ್ತರು. ಧನ್ಯವಾದಾರ್ಪಣೆಯೊಂದಿಗೆ ಸಭೆ ಮುಗಿಯಿತು.

ಪಡುಬಿದ್ರೆ:—ತಾ. 14-11-43ರಲ್ಲಿ ಬೋ. ಹೈ. ಎ. ಶಾಲಾ ವಠಾರದಲ್ಲಿ ಶ್ರೀ. ಕೆ. ಸಂಜೀವ ಭಟ್ ಬಿ.ಎ., ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಕಾಪು ಸರ್ಕಲಿನ ರೋವರ್ ಸ್ಕೌಟರ ಸಂಪತ್ತು ಸಂಭ್ರಮದಿಂದ ಜರಗಿತು. ಜಿಲ್ಲಾ ಆರ್ಗನೈಸಿಂಗ್ ಕಮಿಶನರ್ ಶ್ರೀ ಯು. ಎಸ್. ರಾಜಗೋಪಾಲನ್ ಮತ್ತು ಶ್ರೀ| ಯು. ಎಸ್. ಮಾಧವರಾವ್ ಇವರಿಂದ ಕಾಪು ಸರ್ಕಲಿನ ಹಿಂದುಸ್ಥಾನ್ ಸ್ಕೌಟ್ ಎಸೋಸಿಯೇಶನ ಮತ್ತು ಪಡುಬಿದ್ರೆ ರೋವರ್ ದಳದ ಉದ್ಘಾಟನಾ ಸಮಾರಂಭವು ಸ್ಕೌಟರ ವಿವಿಧ ವಿನೋದಾವಳಿಗಳೂ ನೆರವೇರಿದುವು. ತಾ 12-11-43ರಲ್ಲಿ ಬೋ. ಹೈ. ಎ. ಶಾಲೆಯನ್ನು ತಹಶಿಲ್ದಾರ್ ಶ್ರೀ. ಕೆ. ಕೃಷ್ಣ B. A. L. T. B. ಇವರು ಸಂದರ್ಶಿಸಿ ಹರಿಜನ ಮಕ್ಕಳಿಗೆ ಬಡಗಿ ತೋಟಗಾರಿಕೆ ಸಹಾಯವಿತ್ತು ಪ್ರೋತ್ಸಾಹಿಸಿದುದು ಸ್ತುತ್ಯಾರ್ಹವಾಗಿದೆ.

ವಿಷಾದ ಸೂಚನೆ.

ಕೈಪುಂಜಾಲು ಚೆನ್ನಪ್ಪ ಸವರು-ಮೊಗವೀರ ಪ್ರಮುಖ, ದೇಶಾಭಿಮಾನಿ, ಪರೋಪಕಾರಿ, ವಿನಯಶಾಲೀ ಸಜ್ಜನರೂ ಕೀರ್ತಿಗಳಿಸಿದ್ದ ಈ ಮಹನೀಯರು ಯಾತ್ರೆಗಾಗಿ ತಿರುಪತಿಗೆ ಹೋದಲ್ಲಿಯೇ ತಾ. 10-10-43ರಲ್ಲಿ ಅಕಾಲ ನಿಧನ ಹೊಂದಿದರೆನ್ನಲು ವಿಷಾದಿಸುತ್ತೇವೆ. ದಿವಂಗತರು ಮೊಗವೀರ ಸಮಾಜೋದ್ಧಾರಕ್ಕಾಗಿ ಹಲವು ಸಂಘ ಸಂಸ್ಥೆಗಳ ಸ್ಥಾಪನೆ, ಚಾಲನೆ, ಪೋಷಣೆ ಮಾಡಿದವರು. ಸರ್ವ ಜನಪ್ರಿಯರು; ಉಪಕಾರ ಬದ್ಧಿಯುಳ್ಳವರು; ಸತತ ಖಾದಿಧಾರಿ; ಕಾಂಗ್ರೆಸ್ ಅಭಿಮಾನಿ. ತಾಲೂಕು ಬೋರ್ಡು ಮೊದಲಾದ ಸಾರ್ವಜನಿಕ ಸಂಸ್ಥೆಗಳ ಸದಸ್ಯರಾಗಿದ್ದ ಪ್ರತಿಷ್ಠಾವಂತ ಶ್ರೀಮಂತರು. ಇವರ ನಿಧನದಿಂದ ಮೊಗವೀರ ಸಮಾಜವು ಅಪಾರ ನಷ್ಟಕ್ಕೊಳಗಾಗಿದೆ. ದಿವಂಗತರ ಸಂಬಂಧಿಕರೊಡನೆ ನಮ್ಮ ಸಹ ಸಂತಾಪವಿದೆ.

ನೋಟೀಸು

ಬಿಸೆ ಮಾರಾಟಕ್ಕಿದೆ.

15 ವರ್ಷ ಪ್ರಾಯದ ಗಂಡಾನೆಯೊಂದು ಮಾರಾಟಕ್ಕಿದೆ. ಬೇಕಾದವರು ಹೆಚ್ಚಿನ ಮಾಹಿತಿಗೆ ಬರೆಯ ಬಹುದು ಯಾ ಸಮಕ್ಷಮ ನೋಡಬಹುದು.

Manager,
'Navayuga' Udipi

ಯೆಣಗುಡ್ಡೆ ವೆಂಕಯ್ಯ ಹೆಗ್ಗಡೆಯವರು- ತಾ 21ರಲ್ಲಿ ಕಾರ್ಕಳದಲ್ಲಿ ದಿವಂಗತರಾದರೆನ್ನಲು ಖೇದವಾಗುತ್ತಿದೆ. ದಿವಂಗತರು ನಾಡವ ಸಮಾಜದ ಪ್ರತಿಷ್ಠಾವಂತರಲ್ಲೊಬ್ಬರು. ಶ್ರೀಮಂತ ಕುಟುಂಬಕ್ಕೆ ಸೇರಿದವರು, ರಾಜಯೋಗ್ಯ ನಡತೆ, ಔದಾರ್ಯ, ಸ್ಪಷ್ಟ ವಕ್ತೃತ್ವ, ದೇಶಾಭಿಮಾನ, ಪರೋಪಕಾರ, ಸಾರ್ವಜನಿಕ ಕಾರ್ಯಾಸಕ್ತಿ—ಮೊದಲಾದ ಸದ್ಗುಣಗಳಿಂದ ಹೆಗ್ಗಡೆಯವರು ಸರ್ವ ಜನಾದರಣೀಯರಾಗಿದ್ದರು. ತಾಲೂಕು ಬೋರ್ಡು ಮೆಂಬರರಾಗಿ- ಹಲವು ತಿಕ್ಕಾಟಗಳಲ್ಲಿ ಪಂಚಾಯತದಾರರಾಗಿ- ಆಪದ್ಬಾಂಧವರಾಗಿ ವೆಂಕಯ್ಯ ಹೆಗ್ಗಡೆಯವರು ಕಾರ್ಕಳದ ಊರುಗಳಲ್ಲಿ ಕೀರ್ತಿಗಳಿಸಿದ್ದ ಮಹನೀಯರು. ವ್ಯಾಜ್ಯಗಳಲ್ಲಿ ನಿಷ್ಪಕ್ಷಪಾತ ತೀರ್ಮಾನ ಪಡೆಯಬೇಕೆಂಬ ಕಕ್ಷಿಗಾರರಿಗೆ-ನ್ಯಾಯ ನಿಷ್ಠುರತೆಯನ್ನ ಪೇಕ್ಷಿಸುವವರಿಗೆ- ಹೆಗ್ಗಡೆಯವರ ಸದನವೊಂದಾಗಿ ಆಶ್ರಯ ಸ್ಥಾನವೊಂದು ತಪ್ಪಿದಂತಾಯಿತು. ಅವರು ಕಾಂಗ್ರೆಸ್ ಪಕ್ಷಪಾತಿಯಾಗಿದ್ದು ಖಾದಿ ವ್ರತ ಧರಿಸಿದವರು ದೀರ್ಘ ಕಾಲದಿಂದ ಮಧುಮೇಹ ರೋಗ ಪೀಡಿತರಾಗಿದ್ದರು. ಹೆಗ್ಗಡೆಯವರ ಅಗಲುವಿಕೆಯಿಂದ ನಾಡವ ಸಮಾಜದ ಸುಪುತ್ರನೊಬ್ಬನ ಕೊರತೆ ಉಂಟಾಗಿದೆ. ದಿವಂಗತರ ಸಂಬಂಧಿಕರೊಡನೆ ನಮ್ಮ ಸಹ ಸಂತಾಪವಿದೆ.

ನೋಟೀಸು.

ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ— ಕೊಲ್ಲೂರು ಶ್ರೀ ಮೂಕಾಂಬಿಕಾ ಅಮ್ಮನವರ ದೇವಳ ಬಾಬ್ತು ಕುಂದಾಪುರ ತಾಲ್ಲೂಕು ನಂಬ್ರ 5ನೆ ಜಡ್ಕಲ್ ಗ್ರಾಮದ ಪಟ್ಟಾ ನಂಬ್ರ 59ನೇ ಸ್ಥಳದಲ್ಲಿರುವ 200 ಕಪ್ಪ (ಕಾಚಿನ) ಮರಗಳನ್ನು ಇದೇ ತಿಂಗಳ ತಾ. 30-11-43ನೇ ಮಂಗಳವಾರ ಗಂಟೆ 11ಕ್ಕೆ ಕೊಲ್ಲೂರು ಶ್ರೀ. ಮೂಕಾಂಬಿಕಾ ದೇವಳ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುತ್ತದೆ. ಖಾಯಿಸ್ತರಕಕ್ಕೆಯವರು ಏಲಂನ್ನಿನ ಸಮಯ ಹಾಜರಿದ್ದು ಏಲಂನ್ನಿನಲ್ಲಿ ಪಾಲುಗೊಳ್ಳಬಹುದು. ¼ ಅಂಶ ಹಣವನ್ನು ಆಗಲೇ ಕಟ್ಟಬೇಕಾದ್ದು- ಬಾಕಿ ಇರುವ ಹಣಗಳನ್ನು ಏಲಂ ಮಾಡಿದ ಒಂದು ವಾರದೊಳಗೆ ಶ್ರೀ ಭಂಡಾರಕ್ಕೆ ಸಲ್ಲಿಸುತ್ತಾ ರಶೀದಿ ಪಡೆಯಬೇಕು. ರಿಜರ್ವ ಪ್ರೈಸ್ ಮರ 1ರ ರೂ5-0-0 ಇಟ್ಟಿರುತ್ತದೆ.

ಎಂಡೋಮೆಂಟ್ ಬೋರ್ಡು ಹುಕುಂ ನಂ. 4841-I-11-43 ರ ಪ್ರಕಾರ-

C. H. Shetty,
Executive Officer

ತಾರುಣ್ಯ

ಕೊಟ್ಟು, ವೀರ್ಯಸ್ತಂಭನೆ ಮಾಡಿ, ರತಿ ಸುಖದಲ್ಲಿ ಪರಮಾನಂದವನ್ನುಂಟು ಮಾಡಲು ರಮಣ ವಿಲಾಸಿನಿ ಅತ್ಯುತ್ತಮ ಔಷಧಿ. ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ,
184 ಜೈನಾ ಬಜಾರ್ ರೋಡ್,
ಮದ್ರಾಸು.

ಪುತ್ತೂರು ಏಜಂಟರು: ಪೈ ಫಾರ್ಮಸಿ

THE BEST PREVENTIVE IN EPIDEMICS OF

CHOLERA

"BHUVANENDRA"

CHANDRAMAS

Will give you the best results. Try once and be satisfied with the results.

Dose: For adults:- 3 to 5 drops 2 to 3 times a day with the decoction of cloves or ajwan.
For Children: 1 to 2 drops with the said decoction.

Also a sovereign remedy for diarrhoea. Stomachache, Vomiting and Nausea.

BHUVANENDRA PRODUCTS Ltd.

"ಭುವನೇಂದ್ರ"

ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 3ರಿಂದ 5 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ. ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್, ಎಂಪ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಟ್ಟಿ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in 1920)

Registered Office: Court Road UDIPI South Canara District.

Business Offices Udipi, Mangalore, Katapadi, Kanhangad and Kinnigoli, South Canara.

Authorised and Issued Capital: Rs 2 00 000/-

Subscribed and Paid up Capital. Rs 2,00,000/-

Reserve Funds: Rs. 1,75,853/-

Short term bills are discounted for approved parties. Loans and advances are made and overdrafts granted on fairly easy terms.

Deposits are accepted at favourable rates of interest More than twenty-three years' reliable banking Service stands to our credit.

For further particulars please call at or apply to the nearest office

Dated 31-10-1943.



ನಮ್ಮ ಸುವರ್ಣೋತ್ಸವ ಸಂಚಿಕೆಗೆ ದಯಮಾಡಿ ನಿಮ್ಮ ಸಹೃದಯ ಸಂದೇಶವನ್ನು ಕಳುಹಿಸಿ ಕೊಡಿರಿ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. 1-8-0 ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. 2-8-0

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಜನಪ್ರಿಯವಾದ ಕಿರಿಯರ ಪ್ರಪಂಚದ ಪ್ರಕಟಣೆಗಳು

ಮಧುವನ	೩	೮	೦	ರಂಗಭೂಮಿ	೦	೮	೦
ಪ್ರಕಾಶ	೧	೧೨	೦	ಸಂಶಯ ಪಿಶಾಚಿ	೦	೮	೦
ಭಾರತೀಯ ಕತೆಗಳು	೦	೧೪	೦	ಸೇವಾಪಥ	೦	೮	೦
ನಾರೀ ಹೃದಯ	೧	೧೪	೦	ಕುರುಲವ	೦	೫	೦
ದೇಶಭಕ್ತ	೦	೧೪	೦	ಹೆಂಡ್ತಿ ಗಂಡನಾದರೆ	೦	೪	೦
ಕಾವ್ಯ ಸಾಮ್ರಾಜ್ಯ	೦	೧೩	೦	ಪುರುಷವಧು	೦	೪	೦
ಪ್ರೇಮ ವಿಜಯ	೦	೧೨	೦	ಸ್ವತಂತ್ರ ಜೀವನೋಪಾಯ	೦	೩	೦
ವ್ಯಭಿಚಾರಿಣಿ ಯಾರು	೦	೧೨	೦	ನಾಡಕತೆಗಳು	೦	೩	೦
ನಂದಾದೀಪ	೦	೧೦	೦	ಮುಂದಿನ ದೇವರು	೦	೩	೦
ಸನ್ಯಾಸಿಯ ಸೋಗಿನ	೦	೮	೦	ಮೂರು ಪ್ರಹಸನಗಳು	೦	೧೪	೦

ಕಿರಿಯರ ಪ್ರಪಂಚ, ಉಡುಪಿ.

— ಮಕ್ಕಳನ್ನು ಹಡೆಯುವದ ಸಾಕ —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಹಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯೆ:— ಹರವೀಪಲ್ಲ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. ೫—೦—೦ ಪೋಸ್ಟ ಚಾರ್ಜ ೧೨ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳಿ ಫಾರ್ಮಸಿ,— ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ— ಹುಂಬರವಾಡಿ ಸ್ಟೋರ್ಸ ದಾವಣಗೇರಿ:— ದಾವಣಗೇರಿ ಪ್ರೆಸ್, ಆರ್. ಎಲ್. ಕವಲದಾಸಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager

ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ನವಜೀವಾಮೃತ ಎಂಬ ಸೂತಿಕಾ ರಸಾಯನ



(ಇದು ರಜಸ್ಸನ್ನು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹ ಸ್ಥಿತಿಯನ್ನು ನಿಶ್ಚೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ ಅಮೋಘವಾದ ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚುಕಡಿಮೆ ೪೦ದಿನಗಳಿಗೆ ಬರುವವು, ಅಂದರೆ ಕೇವಲ ೪ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 ಕೊಡಿಯಾಲಬೈಲು, ದ. ಕ.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ : : : : ಮಂಗಳೂರು.

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.

ಹೆಡ್ ಆಫೀಸ್: ಮಂಗಳೂರು.

ಶಾಖೆಗಳು:

ಮಂಗಳೂರು, ಸಿಟಿ-ಮಂಗಳೂರು.

ಉಡುಪಿ, ಕಾರ್ಕಳ, ಕುಂದಾಪುರ.

ಕಾಪು, ಬ್ರಹ್ಮಾವರ, ಕಾಸರಗೋಡು,

ಪ್ರತಿ ಶಾಖೆಗಳಲ್ಲೂ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳು ಕೈಗೊಳ್ಳಲ್ಪಡುತ್ತವೆ.

The Vijaya Bank Ltd., Mangalore.

ಸ್ಥಾಪನೆ 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ಸ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.

Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M 3618. | Estd. 1921 ಸ್ಥಾಪನೆ.

ನವಯುಗ

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೧೩

FOUNDER
Sri. A. B. Shetty.

Vol. 24
No 13

NAVAYUGA— Kannada Weekly —UDIPI, S. I.

ಉಡುಪಿ ● 2—12—1943 ● ಮಂಗಳೂರು.

ಕರಿಯರ ಪ್ರಪಂಚದ ಹೊಸ ಪ್ರಕಟಣೆ !

—ಪ್ರಕಾಶ—

ಸಾಮಾಜಿಕ—ರಾಜಕೀಯ ನಾಟಕ
ಮೂಲ ಲೇಖಕರು:—ಶೇಟ್ ಗೋವಿಂದ ದಾಸ್, ಎಂ. ಎಲ್. ಎ. (ಸೆಂಟ್ರಲ್)
ಅನುವಾದಕಿ: ಶ್ರೀಮತಿ ಸರಸ್ವತಿ ಬಾಯಿ ರಾಜವಾಡ.
ಬೆಲೆ ರೂ. 1-12-0. ಟ. ಖ. 0-4-0
ರೂ. 2ನ್ನು ಮ ನಿಯಾರ್ಡರ್ ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡ ಲಾಗುವದು.

ನವಭಾರತ ಪುಸ್ತಕ ಭಂಡಾರ,
ಉಡುಪಿ

ಕರಿಯರ ಪ್ರಪಂಚದ
ಇನ್ನೊಂದು ಪ್ರಕಟಣೆ.

ಭಾರತೀಯ ಕತೆಗಳು

ಸಣ್ಣ ಕತೆಗಳ ಸಂಗ್ರಹ
ಮೂಲ ಲೇಖಕರು— ಶ್ರೀ. ಎ. ಎಸ್. ಪಂಚಾಪಕೇಶ ಅಯ್ಯರ್,
ಎಂ. ಎ., ಐ. ಸಿ. ಎಸ್., ಬಾರ್ ಎಟ್ ಲಾ., ಎಫ್. ಆರ್. ಎಸ್. ಎಲ್.,
ಅನುವಾದಕರು— ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರು.
ಬೆಲೆ 0-14-0 ಟ. ಖ. 0-2-0
ರೂ. 1/ನ್ನು ಮನಿಯಾರ್ಡರು ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡ ಲಾಗುವುದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

Life is Full of Level Crossings

Mr. A had planned to live a 100 years clean. He was healthy and sound both in body and mind. He went his daily rounds, had his prescribed food and ample rest. Doctors saw him twice a week and specialists once a month. All opined that he had the finest prospects of a century. But alas! he died at the age of 35 only, survived by his wife and four children, his doctors, nurses, specialists, food patents, health institutes and gymnasiums

For he had forgotten trains at level crossings.

The Canara Mutual Assurance Co., Ltd.,
UDIPI.

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸನಿಹಾಪದವರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇವರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಏಜನ್ಸಿಗಾಗಲಿ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿ:

ಕೋಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದ. ಕನ್ನಡದ ಪ್ರಮುಖ್ಯ ಏಜಂಟರು.

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ ಕನ್ನಡ)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್ ಕಲ್ಲಿಕೋಟೆ. ಮಂಗಳೂರು, ಮತ್ತು ತ್ರಿವಾಂಕೂರು

THE BOMABY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಳಿ ಕುಟು ಗರ್ಮಿಯಿಂದ ಗರ್ಭಕೋಶ ನಾಶವೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಪ್ರೇಸ್. [ಮಾಲಕರ ವಿಳಾಸಕ್ಕೆ ಪತ್ರವ್ಯವಹರ ಮಾಡಬೇಕು.

ಮಾಲಕರ ವಿಳಾಸ: ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ.
ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda Oushadalayn, GADAG.

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೩೯ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹು ಬಹು ಅಪಾಯಗಳಿಂದಲೂ ಹಾಗೂ ಸಂಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನ್ನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ಶೀಘ್ರನೆ ಮುಂದುವರಿದವು.

೧೯೪೦, ೪೧ರಲ್ಲಿ ಕೆನರಾ ಬೇಂಕು ೬೦ ಲಕ್ಷ ಠೇವಣಿಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣಿಗಳು ಇಮ್ಮಡಿಯಾಗಿವೆ ಸಾಂಪತ್ತಿಕ ಸ್ಥಿತಿಯು ಎರಡು ವರೆ ಕೋಟಿಗೆ ಮಿಕ್ಕಿವೆ. ಹಾಗೂ ತೆತ್ತ ಮೂಲಧನವು ನಾಲ್ಮಡಿಯಾಗಿದೆ.

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮವಿಶ್ವಾಸದಿಂದಲೂ, ದೃಢ ಬುದ್ಧಿಯಿಂದಲೂ, ಯೋಗ್ಯಸೇವೆಯನ್ನು ಸಲ್ಲಿಸಿದರಿಂದಲೂ, ಇಂದಿನ ಈ ಪ್ರಗತಿಗೆ ಕಾರಣ ಭೂತರಾದ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಮಹತ್ವದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

CANARA BANK LIMITED.
ಕೆನರಾ ಬೇಂಕ್ ಲಿಮಿಟೆಡ್.
ಸ್ಥಾಪನೆ 1906.

ಈ ಸುಭಾಸ್

ಆಗ-ರಾಷ್ಟ್ರಗೌರವ
ಆ ಮೇಲೆ-ಪರಾರಿಪ್ರವೀಣ
ಈಗ-ಮಾರ್ಶಲ್

ಇನ್ನು—
ರಾಷ್ಟ್ರಘಾತಕ?

"ನೀವು ನಾಜೀ ಪಕ್ಷಪಾತಿಗಳಂತೆ, ನಿಜವೆ?"—ಸುಭಾಸರು ಭಾರತದಲ್ಲಿರುವಾಗ ಈ ಪ್ರಶ್ನೆಯೊಮ್ಮೆ ಬಂದಿತ್ತು. "ಸಂಪೂರ್ಣ ಸುಳ್ಳು"—ಅಂದಿದ್ದರು ರಾಷ್ಟ್ರಗೌರವ ಬೋಸ್.

"ವಿರೋಧಿ ರೇಡಿಯೋ ವಾರ್ತೆಗಳಂತೆ ಸುಭಾಸ್ಚಂದ್ರ ಬೋಸ್ ಜಪಾನರ ಪರವಾಗಿ ಯುದ್ಧ ಕೈದಿ ಭಾರತೀಯ ಸೈನಿಕರು ಮತ್ತು ಇತರರನ್ನು ಸೇರಿಸಿ ಒಂದು ಸೈನ್ಯ ಕಟ್ಟಿದ್ದಾರೆ ಎಂದು ನಂಬ ಬೇಕಾಗುತ್ತದೆ' -ಎಂದು ಹಿಂದುಸ್ಥಾನದ ಗೃಹ ಮಂತ್ರಿ ಮೇಕ್ಸ್‌ವೆಲ್ಲರು ಇತ್ತೀಚೆಗೆ ಎಸೆಂಬ್ಲಿಯಲ್ಲಂದಿದ್ದರು.

ಸುಭಾಸರು ಸುಳ್ಳಾಡಿದ, ಮೇಕ್ಸ್‌ವೆಲ್ಲರು ಸತ್ಯ ಹೇಳಿದ ದಾಖಲೆ,ಅವರದೊಂದು ಇವರದೊಂದು!

ಇವರಿಂದ—ಅವರಿಗೆ

ಸುಭಾಸ್ ಸರಕಾರೀ ಪಹರೆಯಿದ್ದ ಕೋಣೆಯಿಂದ ಕಾಣೆಯಾಗಿದ್ದರು. ಮೋದಲು ಜಪಾನೀ ಹಡಗದಲ್ಲೆಂದು ಆ ಮೇಲೆ ಪ್ರಕಟವಾಯಿತು 'ಸತ್ತರು' ಎಂಬ ವಾರ್ತೆ ಬಂತು. ಆ ಮೇಲೆ ಬರ್ಲಿನಿನಲ್ಲಿದ್ದಾರೆ, ಎಂದು ಖಾತ್ರಿಯಾಗಿ ತಿಳಿಯಿತು. ಅನೇಕ ಹಾಗೆ ಟೋಜೋ ಹಿಡಿದ ಗಿಣಿಗೆ ಹಿಟ್ಲರ್ ಭಾಷೆ ಕಲಿಸುತ್ತಿದ್ದುದೇಕೆ? ಬೋಸರನ್ನು ಜಪಾನರೊಯ್ದು ಜರ್ಮನರಿಗೆ ಕಾಣಿಕೆ ಕೊಟ್ಟ ಗುಟ್ಟೇನು? ಅದು ಅಮೇರಿಕವು ಬ್ರಿಟನಿಗೆ ಕೊಡುತ್ತಿರುವ 'ಕಡಚಿತ್ತಿ' ಸಹಾಯದಂತಹ ಸಹಾಯ— ಟೋಕಿಯೋದಿಂದ ಬರ್ಲಿನಿಗೆ! ಹಿಂದುಸ್ಥಾನದ ಸ್ಥಿತಿಗತಿಗಳು ಜಪಾನರಿಗಿರುತ್ತಿದ್ದಷ್ಟು ಜರ್ಮನರಿಗೆ ಗೊತ್ತಿರಲಿಲ್ಲ; ಆದರದನ್ನು ಜಪಾನರಷ್ಟೇ ಜರ್ಮನರೂ ತಿಳಿದುಕೊಳ್ಳುವ ಆವಶ್ಯಕತೆಯಿತ್ತು. ಆದ್ದರಿಂದ ಸುಭಾಸರು ಜರ್ಮನರಿಗೆ ಕಲಿಸಿಕೊಡಬೇಕು—ಜರ್ಮನರ ಕೈಯಲ್ಲಿರಬೇಕು—ಎಂದೇ ಜಪಾನರವರನ್ನು ನಾಜಿಗಳಿಗೊಪ್ಪಿಸಿದ್ದರು.

ಆ ಯೋಜನೆಯೇನು?

ಒಂದು ಕೊಳ್ಳೆಯನ್ನು ಹೊಡೆಯುವ ಇಬ್ಬರಲ್ಲೊಬ್ಬ:—'ಇಗೋ, ನೀನು ಈ ಕೋಲು ಹಿಡಿದುಕೊಂಡು ಆ ಬಾಗಿಲಿಂದ ಬಾ' ಎಂದು ಮತ್ತೊಬ್ಬನನ್ನೂ ಅಣಿಮಾಡಿದಂತಿದೆ ಜಪಾನೀ-ಜರ್ಮನರ ಹಂಚಿಕೆ. ಅದಿಷ್ಟೆ: ಭಾರತ ಮೇಲೆ ಪಶ್ಚಿಮದಿಂದ ಜರ್ಮನಿ—ಪೂರ್ವದಿಂದ ಜಪಾನು ನುಗ್ಗಬೇಕು. ಪೋಲೆಂಡನ್ನು ಜರ್ಮನಿ ರಶ್ಯಾಗಳು ಹರಿದುಕೊಂಡಂತೆ, ಫ್ರಾನ್ಸಿನ ಎದೆಗೆ ಹಿಟ್ಲರ್ ಗುರಿಹಿಡಿದಾಗ ಬೆನ್ನಿಗೆ ಮುಸಲಿನಿ ತಿವಿದಂತೆ—ಹಿಂದುಸ್ಥಾನದ ಆ ಮಗ್ಗುಲಿಗೆ ಜರ್ಮನರ ಪೆಟ್ಟು, ಈ ಮಗ್ಗುಲಿಗೆ ಜಪಾನರ ಪೆಟ್ಟು ಬೀಳಬೇಕು. ಈ ಚರಿತ್ರಾಪೂರ್ವ ಕತ್ತರೀ ಯೋಜನೆ ಕಳೆದ ವರ್ಷ ತಯಾರಾಗಿತ್ತು. ಜಪಾನರು ಮುಂದೊತ್ತಿ ಬರ್ಮಾವನ್ನಾಕ್ರಮಿಸಿಕೊಂಡರು; ಹಿಂದುಸ್ಥಾನದ ಗಡಿಯಲ್ಲಿ ಬಂದು ನಿಂತರು. ಇನ್ನೊಂದೆಡೆಯಿಂದ ಜರ್ಮನರು ಮುಂದೊತ್ತುವದೇ ಬಾಕಿ. ಆದೇನು ಮಹಾ? ಸ್ಟಾಲಿನ್‌ಗ್ರಾಡ್ ಬಿದ್ದರಾಯಿತು— ಅಲ್ಲಿಂದ ನೇರಾಗಿ ಮುನ್ನುಗ್ಗಲಿದೆ. ಈ ಕತ್ತರಿಯ ಛಾಯೆ, ಆಗಿನ ಭಾರತ ಸೇನಾನಿ ಜನರಲ್ ವೇವೆಲರ ಮೆದುಳಲ್ಲಿ ಮೂಡದೆ ಹೋಗಲಿಲ್ಲ. ಅವರು ಕೂಡಲೇ ರಶಕ್ಕೋಡಿದರು; ಕಾಕಸಸಿನ ವಿದ್ಯಮಾನಗಳನ್ನು ಪರಿಶೀಲಿಸಿ, ಅಲ್ಲಿಂದ ಮಧ್ಯ ಪೂರ್ವದ ಸೇನಾ ತಜ್ಞರೊಡನೆ ಆಲೋಚಿಸಿಕೊಂಡರು. ಹಿಂದುಸ್ಥಾನಕ್ಕೋಡಿ ಬಂದು ಪಶ್ಚಿಮ ಸರಹದ್ದಿನಲ್ಲಿ ಕೋಟೆ ಕೊತ್ತಲಗಳನ್ನು ಭದ್ರಪಡಿಸ ಹತ್ತಿದರು.

ಸ್ಟಾಲಿನ್‌ಗ್ರಾಡ್

ಆದರೆ ಸ್ಟಾಲಿನ್‌ಗ್ರಾಡ್-ಆ ಉಕ್ಕಿನ ನಗರ—ನಾಜೀ ರಕ್ತದಿಂದ ಪುಟವೇರಿದ ಕೆಂಪು ಧ್ವಜ ಹಾರಾಡಿಸುತ್ತಿರುವ ಆ ಚಿರಸ್ಮರಣೀಯ ಪಟ್ಟಣ—ಅದೇ ಹಿಂದುಸ್ಥಾನದ ಕೋಟೆಯಾಯಿತು! ನಾಜೀ ಸೇನೆಗೆ ಹಾದಿಯ ಕಣಿವೆಯಾಗಿ—ಜರ್ಮನ್ ಛಾಳಿಯಾಯುಷ್ಯಕ್ಕೆ ಅಪಮೃತ್ಯುವಾಗಿ-ಸ್ಟಾಲಿನ್‌ಗ್ರಾಡ್ ಭಾರತವನ್ನುಳಿಸಿತು ನಾಜೀ ಮುದ್ದಾನೆಯ ಗುರಿ ಭಾರತೋದ್ಯಾನ,ಆದರೆ ಮಧ್ಯದಲ್ಲಿರುವ ಸ್ಟಾಲಿನ್‌ಗ್ರಾಡ್ ಕುಳಿ ನೆಯೆಂಬುದನ್ನು ಅದು ಪ್ರಥಮತಃ ಊಹಿಸಿರಲಿಲ್ಲ ಜರ್ಮನರ ಪ್ರಬಲ ಸೇನೆ ಅಲ್ಲಿಯೇ ಸುತ್ತುಗಟ್ಟಲ್ಪಟ್ಟು ನಿರ್ನಾಮವಾದಾಗ, ಇನ್ನೊಂದಡೆಯಿಂದ ಅದರ ಆಗಮನವನ್ನೇ ಹಾರೈಸುತ್ತಾ ನಿಂತಿದ್ದ ಜಪಾನೀ ಸೇನೆಯೂ ಮೇಲೆ ಕೆಳಗೆ ನೋಡಬೇಕಾಯಿತು; ತನ್ನ ಯುದ್ಧ ಯೋಜನೆಯನ್ನೇ ಬದಲಾಯಿಸಿಕೊಳ್ಳಬೇಕಾಯಿತು. ಹಿಂದುಸ್ಥಾನದ ಕಂಠದ ಕಡೆಗೆ ಕಳೆದ ವರುಷವೇ ಬಂದಿದ್ದ ಕತ್ತರಿ ಮುರಿದು ಬಿದ್ದುದು ಹೀಗೆ!

ಆ ಮೇಲೆ-

ಜಪಾನರು ಹಿಂದುಸ್ಥಾನದ ಆಕ್ರಮಣದ ಹೊಣೆ ತಮ್ಮದೊಂದೇ ರಾಷ್ಟ್ರದ ಮೇಲೆ ಬಿತ್ತು ಎಂಬುದನ್ನರಿತುಕೊಂಡರು. ಆದಕಾರಣ ತಮ್ಮ ಸರ್ವಶಕ್ತಿಯನ್ನು ಕೇಂದ್ರೀಕರಿಸಿಕೊಳ್ಳ ಹತ್ತಿದರು. ಚೀನದಲ್ಲಿ ಪ್ರಬಲ ಯುದ್ಧವನ್ನೇ ನಡಿಸಲಿಲ್ಲ. ಬಹಳವಾಗಿ ನಿರೀಕ್ಷಿಸಲ್ಪಟ್ಟಿದ್ದ ಆಸ್ಟ್ರೇಲಿಯದ ಆಕ್ರಮಣಾ ಯೋಜನೆಯನ್ನೇ ಬಿಟ್ಟು ಆ ಕಡೆಯಿಂದ ತಮಗೆ ಅಪಾಯ ಬರುವ ಬಾಗಿಲುಗಳನ್ನಷ್ಟೇ ಭದ್ರಪಡಿಸಿಕೊಂಡರು. ಇವಲ್ಲಾ ಸನ್ನಾಹ ಭಾರತಾಕ್ರಮಣಕ್ಕಾಗಿ! ಆದೂ ಕ್ಷಿಪ್ರ ಸನ್ನಾಹ. ಈ ತನಕ ಭಾರತವನ್ನು ಉಳಿಸಿದುದು ಸ್ಟಾಲಿನ್‌ಗ್ರಾಡಾದರೆ, ಇದ ವರೆಗೆ ಜಪಾನರನ್ನುಳಿಸಿದುದು ಜರ್ಮನರೇ. ಮಿತ್ರ ಸೇನಾ ಪ್ರವಾಹವನ್ನು ನಾಜೀ ಅಣೆಕಟ್ಟು ತಡೆದು ನಿಲ್ಲಿಸಿದೆ; ಈ ತನಕ ತಮ್ಮತ್ತ ಹರಿದು ಬರುವದು ಆ ಕಟ್ಟಿನ ಬದಿಯ ಕಾಲುವೆಯ ತೊರೆ ಮಾತ್ರ. ದ್ವಿತೀಯ ರಂಗ ನಿರ್ಮಾಣವಾಗಿ ಆ ಅಣೆಕಟ್ಟನ್ನೊಡೆದರೆ, ಆ ಮೇಲೆ ಇಡೀ ಪ್ರವಾಹಕ್ಕೆ ತಾವೇ ಬಲಿ ಎಂಬುದನ್ನು ಜಪಾನರು ಬಲ್ಲರು ಜಪಾನರ ಸರ್ತಿ ಬರಬೇಕಾದರೆ ಹಿಟ್ಲರನ ಪೂರ್ಣಾವಸಾನವೇ ಆಗಬೇಕೆಂದಿಲ್ಲ. ಯುರೋಪಿನಲ್ಲಿ ದ್ವಿತೀಯರಂಗವನ್ನು ಜಯಶೀಲವಾಗಿ ಆರಂಭಿಸಿದ ಮೇಲೆ ಮಿತ್ರರ ಹಡಗಬಲದ ಬಹುಭಾಗವು ಜಪಾನರ ಕಡೆಗೆ ಹೊರಳಲು ಸಾಧ್ಯವಿದೆ. ಇಷ್ಟನ್ನು 1944ನೇ ವಸಂತ ಕಾಲದೊಳಗೆ ಸಾಧಿಸದಿದ್ದರೆ ಮಿತ್ರರ ಯುದ್ಧ ಯೋಜನೆ ಹಾಳಾಗುವದು. ಅಷ್ಟಾಗುವ ಮೊದಲೇ ಹಿಂದುಸ್ಥಾನಾಕ್ರಮ ಪ್ರಾರಂಭಿಸದಿದ್ದರೆ ಜಪಾನರ ಯುದ್ಧ ಯೋಜನೆ ಮಣ್ಣುಪಾಲಾಗುವದು! ಆದ್ದರಿಂದ ಜಪಾನರು ಅವಸರದಲ್ಲಿದ್ದಾರೆ.

ಮಾರ್ಶಲ್ ಬೋಸ್.

ಜರ್ಮನ್ನಾ ರಕ್ಷಾಣುಗಳೆಲ್ಲಲ್ಲಾ ಸೇರಿದ್ದ ಹಿಂದುಸ್ಥಾನಾಕ್ರಮಣದ ಬಯಕೆಯು ಆ ರಕ್ತದೊಂದಿಗೇನೇ ಸ್ಟಾಲಿನ್‌ಗ್ರಾಡಿನಲ್ಲಿ ಬಿದ್ದುಹೋದ ಮೇಲೆ ಹಿಟ್ಲರರು ಮಾರ್ಶಲ್ ಬೋಸರನ್ನು ಜನರಲ್ ಟೋಜೋರವರಿಗೊಪ್ಪಿಸಿದರು. ಸುಭಾಸ್ ಬರ್ಲಿನಿನಿಂದ ಸಿಂಗಾಪುರಕ್ಕೆ ಬಂದರು. ಅಲ್ಲಿ ಟೋಜೋ- ಸುಭಾಸ್ ಮಾತುಕತೆ ನಡೆಯಿತು. ಅಲ್ಲಿ ತಯಾರಾದ ಯೋಜನೆಯಂತೆ ಅಕ್ಟೋಬರ್ 30ರಲ್ಲಿ ಮಾರ್ಶಲ ಬೋಸರ ಮುಖ್ಯ ಕಾರ್ಯಾಲಯವು ಸಿಂಗಾಪುರದಿಂದ ರಂಗೂನಿಗೆ ವರ್ಗಾಯಿಸಲ್ಪಟ್ಟಿತು. ಆ ಮೇಲೆ ನವಂಬರ್ 5 ಮತ್ತು 6ರಲ್ಲಿ ಸುಭಾಸಚಂದ್ರ ಹಾಜರಿಯಿಂದ ಜನರಲ್ ಟೋಜೋರವರ ಸಮಕ್ಷಮದಲ್ಲಿ ಟೋಕಿಯೋದಲ್ಲಿ ನಡೆದ 'ಮಹಾ ಏಸ್ಯಾ ಸ್ವತಂತ್ರ ರಾಷ್ಟ್ರ'ಗಳ ಪರಿಷತ್ತಿನಲ್ಲಿ ಎಲ್ಲವೂ ನಿರ್ಧರಿಸಲ್ಪಟ್ಟಿರಬೇಕು ನವಂಬರ್ 11ರಲ್ಲಿ 'ಭಾರತ ರಾಷ್ಟ್ರೀಯ ಸೇನೆ ಹಿಂದುಸ್ಥಾನದ ಗಡಿಗೆ ಹೋಯಿತು' ಎಂದು ಏಕ್ಸಿಸ್ ಆಕಾಶವಾಣಿಯಲ್ಲಿ ಕೇಳಿಬಂತು. ತಾ. 12ರಲ್ಲೇ ಮದ್ರಾಸ್ ಮತ್ತು ಸಿಲೋನುಗಳ ಮೇಲೆ 'ಬೋಂಬು ಹಾಕ ಸಾಧು ಜಪಾನೀ ವಿಮಾನ'ಗಳು ಹಾರಾಡಿಹೋಗಿವೆ. ಇದೇ ಸಮಯದಲ್ಲಿ ಇಂಪಾಲ್ ವಿಮಾನ ನಿಲ್ದಾಣದ ಮೇಲೊಮ್ಮೆ ಚಿತ್ತಗಾಂಗಿನ ಮೇಲೆರಡು ಬಾರಿ, ಬ[...]ವಾಗಿ ಬೋಂಬುಗಳೂ ಬಿದ್ದಿವೆ.

ಆ ಸೇನೆ.

ಇನ್ನು ಸುಭಾಸರ ಆ 'ರಾಷ್ಟ್ರೀಯಸೇನೆ' ಲಕ್ಷ. ಸೆರೆಸಿಕ್ಕಿದ ಹಿಂದೀ ಯೋಧರು ಮತ್ತು ಬಹುಕಾಲದಿಂದ ದೇಶಬಿಟ್ಟಿದ್ದ ಭಾರತೀಯ ತರುಣರ ತಂಡವದು. ಜಪಾನರಿಂದ ತರಬೇತಿ ಪಡೆದಿದ್ದಾರೆ. ಶಸ್ತ್ರೋಪಕರಣಗಳನ್ನು ಪಡೆದಿದ್ದಾರೆ 'ಇವರನ್ನು ಕಟ್ಟಿಕೊಂಡು ಸುಭಾಸರು ಮುನ್ನುಗ್ಗಲಿ; ಬೆನ್ನು ಹಿಡಿದು ನಮ್ಮ ಪ್ರಬಲ ಸೇನೆ ಬರಲಿದೆ' ಎಂದು ಜಪಾನರನ್ನುತ್ತಾರೆ. 'ಬಿದ್ದರೆ ಹಣ್ಣು—ಹೋದರೆ ಕಲ್ಲು!'— 'ನಿಮಗೇನೇ ಇರಲಿ—ಆದರಿಂದ ನೀವೇ ಮಾಡಿಕೊಳ್ಳಿ'- ಎಂದು ಸುಭಾಸರಿಗೆ ಟೋಜೋ ಊದಿದ್ದಾರೆ. ಲೋರ್ಡ್ ವೇವೆಲರು ಅಧಿಕಾರ ಸ್ವೀಕರಿಸಿದ ದಿನವೇ 'ಸುಭಾಸ್ ಸರಕಾರ' ಸ್ಥಾಪಿಸಲ್ಪಟ್ಟಿದೆ. 'ತಾತ್ಕಾಲಿಕ ರಾಷ್ಟ್ರೀಯ ಸರಕಾರ' ಎಂಬ ಹೆಸರಿನಿಂದ ಸುಭಾಸರೇ ಪ್ರಧಾನಿ, ವಿದೇಶ ಮಂತ್ರಿ, ಯುದ್ಧ ಮಂತ್ರಿಯಾಗಿ ಸೂತ್ರ ವಹಿಸಿದ್ದಾರೆ. ಈ 'ಭಾರತ ಸರಕಾರಕ್ಕೆ 'ಜಪಾನ್, ಜರ್ಮನಿ, ಇಟಲಿ ಮತ್ತು ಆಕ್ಸಿಸ್ ಪಕ್ಷಪಾತಿ ರಾಷ್ಟ್ರಗಳೆಲ್ಲವುಗಳ ಮಂಜೂರಾತಿ ದೊರೆತಿವೆ. ಅ[...]ತೂ ಈಗ ಮಾರ್ಶಲ್ ಸುಭಾಸರಿಗೆ ಅಧಿಕಾರ ಮತ್ತು ಅನುಕೂಲತೆ,ಎರಡೂ ದೊರತಿವೆ. ಈ ಬೋಂಬಿಗೊಂದು ಆಕಾರ ಕೊಟ್ಟು ಸಿಡಿ ಮದ್ದುಗಳನ್ನು ತುಂಬಿಸಿಯೆ ಜಪಾನರು ಭಾರತದ ಮೇಲೆ ಒಗೆದಿದಾರೆ ಇನ್ನೇನು-ಅದು ಬಿದ್ದು ಸಿಡಿಯುವದೊಂದೇ ಬಾಕಿ! ಭಾರತದ ಪಾಲಿಗೆ ಇದಕ್ಕಿಂತ ಭೀಕರಾವಸ್ಥೆ ಇನ್ನೇನಿದೆ? ಕೊಡಲಿ ಕಾವಿನಂತೆ. ಆತ್ಮದಲ್ಲೇ ಹುಟ್ಟಿದ ವಂಚ[...]ಯಂತೆ ಸುಭಾಸ್ ಭಾರತಕ್ಕೆ ಕಾಣಿಸಿಕೊಳ್ಳುವಾಗ, ಅದನ್ನಿದಿರಿಸಲು ರಾಷ್ಟ್ರಕ್ಕೆ [...]ತಿಕ ಬೆಂಗೋಲಿರಬೇಡವೆ? 'ರಾಷ್ಟ್ರೋದ್ಧಾರ ಹಾಗಲ್ಲ, ಹೀಗೆ'-ಎಂದು ಪರ[...] ದಿಕ್ಕನ್ನು ತೋರಿಸಬಲ್ಲ ಗಾಂಧೀ ನೆಹ[...]ಗಳಿರುವದು ಬೇಡವೆ? 'ಜಾಪಾನರ ಸ್ವಾತಂತ್ರ್ಯದಾನವೆಂದರೆ ಅದೊಂದು ಗಾ[...] ನಿಜವಾದ ಸ್ವಾತಂತ್ರ್ಯವಿಲ್ಲದೆ'- ಎಂದು ತೋರಿಸಲು ರಾಷ್ಟ್ರೀಯ ಸರಕಾರ ಬೇ[...]ವೆ—ಇವೆಲ್ಲಿವೆ? ಏಕಿಲ್ಲ?

Watch

The gala opening day
OF

The Victory Club

Both Vegetarian & Non-vegetarian dishes

Old Post office Building,
VICTORY ROAD, UDIPI.

ಪ್ರಾರಂಭದ ದಿನವನ್ನು ನಿರೀಕ್ಷಿಸಿರಿ!
ಅತ್ಯಾಧುನಿಕ ಮಾದರಿಯ ಮೇಲ್ತರಗತಿಯ
ಭೋಜನ ಮತ್ತು ವಿಶ್ರಾಂತಿ ಗೃಹ.

ವಿಕ್ಟರಿ ಕ್ಲಬ್

ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ರೋಡ್, ಉಡುಪಿ.

The Canara Banking Corporation Limited.

(Incorporated in British India Liability of members limited)

ESTD: 1906.

ANNOUNCEMENT.

We have pleasure to announce that our Bangalore City Office has been opened on the 3rd instant and regular business is transacted from that date.

ಉಡುಪಿ, ಗುರುವಾರ, ೨-೧೨-೧೯೪೩

ಸಲಹೆಗಾರರ ನಿರೂಪಣೆ.

ದಕ್ಷಿಣ ಕನ್ನಡವು ಅನ್ನ, ಹಾಹಾಕಾರಕ್ಕೆ ಗುರಿಯಾದ ಕೂಡಲೆ ಆತುರದಿಂದ ನಿರೀಕ್ಷಿಸಿದ್ದ ಮದ್ರಾಸ್ ಗವರ್ನರ್ ಬೋಧಕರು ಕಳೆದವಾರ ಜಿಲ್ಲೆಯಲ್ಲಿ ಸಂಚರಿಸಿಹೋದರು. ಅವರೋರ್ವ ಸುಧಾರಕನಾಗಿ ಬರುವರೆಂದು ಜನರ ನಿರೀಕ್ಷೆಯಿತ್ತು; ಆದರೆ ಶ್ರೀ ರಾಮಮೂರ್ತಿಯವರು ಸರಕಾರದ ಡಂಗುರದಾಗಿ ಅವರ ನಿಶ್ಚಿತ ಧೋರಣೆಯನ್ನು ಪ್ರತಿಷ್ಠಾಪಿಸಲು ಬಂದಿದ್ದರು. ವರ್ಗದಾರರ ಕಡೆಯಿಂದ-ವ್ಯಾಪಾರಿಗಳ ಪರವಾಗಿ-ಕೊಂಡುಕೊಳ್ಳುವವರ ವತಿಯಿಂದ ಮುಂದೆಬಂದ ವಿಜ್ಞಾಪನೆಗಳೆಲ್ಲಾವುದಕ್ಕೂ 'ಪರಿಶೀಲಿಸಲಾಗುವದು' ಎಂಬ ಪದ್ಧತಿಯ ಉತ್ತರಕೂಡಾ ಎಷ್ಟೋ ಸರರಿಂದದೊರೆತಿಲ್ಲ; ಕಾರಣ, ಅವರು ಇಲ್ಲಿಯ ಸ್ಥಿತಿಗತಿಗಳ ಪರಿಶೀಲನೆಗೆ ಬಂದವರಲ್ಲ; ಜನಾಭಿಪ್ರಾಯ ತಿಳಿಯಲು ಆಗಮಿಸಿದವರಲ್ಲ. ನೋಟೀಸುಗಳಲ್ಲಿದ್ದ ಅಭಿಪ್ರಾಯಗಳನ್ನು ಬಾಯಿದೆರೆಯಾಗಿಯೂ ಹೇ[illegible] ಸರಕಾರೀ 'ಪಾಗ್ರಾಂ'ವನ್ನು ಸುಂಗಟ್ಟು ಮಾಡಲು ಬಂದವರು. ಜಿಲ್ಲೆಯ ಕೆಲವರಿಗೆ ಅವರ ಸಹಿತ ದರ್ಶನಲಾಭ, ಸಂಭಾಷಣಾಯೋಗಗಳನ್ನು ಪಟ್ಟಿಸಿ, ಶ್ರೀ. ರಾಮಮೂರ್ತಿಯವರೊಂದಿಗೆ ಹೊಸತೇನೂ ನಮ್ಮಲ್ಲಿಗೆ ಬರಲಿಲ್ಲವೆಂಬುದು, ಈ ಸಂಚಿಕೆಯ ಇನ್ನೊಂದೆಡೆ ಪ್ರಕಟವಾಗಿರುವ ಅವರ ಸೂಚನೆಗಳನ್ನೋದಿದರೆ ಸ್ಪಷ್ಟವಾಗ ಬಹುದು.

ಅಂತೂ ರೈತನ ಅಕ್ಕಿ ರಿಕ್ವಿಜಿಶನ್, ಅದಂತೆಯೇ. ಅದಕ್ಕೆ ನಿಶ್ಚಿತ ಬೆಲೆ ದೊರೆಯುವದು. ಅದನ್ನು ಪಡಕೊಳ್ಳುವಿಕೆ ಮತ್ತು ವಿತರಣಾಧಿಕಾರ ಸಹಕಾರೀ ಸ್ಟೋರ್ಸ್‌ಗಳಿಗೆ. ಅಂತಹ ಸಾಪಗಳಿಲ್ಲದ ಕಡೆಗಳಲ್ಲಿ ಲೈಸನ್ಸ್‌ದಾರರಿಗೆ. ದಕ್ಷಿಣ ಕನ್ನಡವು ಸ್ವತಂತ್ರ ಸ್ಪಾರ್ಕೆಯ ಜಿಲ್ಲೆ; ಕಡಿಮೆ ಬಿದ್ದಲ್ಲಿ ಹೊರಗಿನಿಂದ ಅಕ್ಕಿ ತರಿಸಿಕೊಳ್ಳಬಹುದು; ಜಿಲ್ಲೆಯಿಂದ ಹೊರಹೋಗದಂತೆ ನೋಡಿಕೊಳ್ಳಲಾಗುವದು.

ಅಕ್ಕಿಯು ಕಳ್ಳ ಸಂತೆಗೆ ಹೋಗಿ, ಕೊಂಡು ಜೀವಿಸುವ ಜನಸಾಮಾನ್ಯರಿಗೆ ನ್ಯಾಯವಾಗದಂತೆ ನೋಡುವ ಧ್ಯೇಯವು ಅಗತ್ಯವಾಗಿ ಇರಬೇಕು. ಈ ಧ್ಯೇಯಕ್ಕನುಸಾರವಾದ ಮೇಲಿನ ಯೋಜನೆಯ 'ಚೌಕಟ್ಟು' ಕೂಡಾ ತಪ್ಪಲ್ಲ. ಈ ಚೌಕಟ್ಟಿನೊಳಗಿನ (1. ಬೆಳೆಸುವವರಿಂದ ಸ್ವಾಧೀನಪಡಿಸಿಕೊಳ್ಳುವ, 2. ಸಹಕಾರೀ ಸಂಘದ ಮೂಲಕ ವಿತರಣೆ ಮಾಡಿಸುವ) ಎರಡು ವಿಭಾಗಗಳನ್ನು ಕೂಡಾ ಒಪ್ಪಬಹುದು. ಅಂತೂ, ಯೋಜನೆಯ ಸಕಾರಣತೆಯ ಕುರಿತು ಆಕ್ಷೇಪವಿಲ್ಲ. ಆದರೆ ಅದಕ್ಕೆ ಸ್ವರೂಪಕೊಟ್ಟು, ತುಂಬಿಸಿಕೊಳ್ಳುವಾಗ ಬ್ರಹ್ಮಾಂಡದಂತಹ ಪ್ರಮಾದಗಳಾಗಿವೆ-ಆಗಲಿವೆ ಎಂಬುದು ಸ್ಪಷ್ಟವಾಗಿದೆ. ಆ ಯೋಜನೆಯ ಸ್ವರೂಪದ ವಿಭಾಗಗಳಲ್ಲಿ ಮೊದಲನೆಯದು ರೈತನ ಕಣ್ಣೀರಿನಿಂದ ತುಂಬಿದೆ; ಎರಡನೆಯದು ಕೊಂಡುಕೊಳ್ಳುವವನ ಕಳವಳದಿಂದಲೇ ತುಂಬಲಿದೆ! ಇವೆರಡಕ್ಕೂ ಶ್ರೀ. ರಾಮಮೂರ್ತಿಯವರಿಂದ ಪರಿಹಾರ ದೊರೆತಿಲ್ಲ.

ಮೊದಲನೆಯದಾದ 'ರಿಕ್ವಿಜಿಶನ್' ವಿಭಾಗದಲ್ಲಿ ಸಾಗುವಳಿದಾರರಿಗೆ- ಹೆಚ್ಚಾಗಿ ಸಣ್ಣ ವರ್ಗದಾರರಿಗೆ- ಮಹದನ್ಯಾಯವಾಗಿದೆ. ಜಿಲ್ಲೆಯ ನಗರವಾಸಿಗಳಿಗಾಗಿ (ಹೀಗೆಂದು ಅಧಿಕಾರಿಗಳನ್ನುತ್ತಾರೆ) ಸಾಗುವಳಿದಾರರಿಂದ 12 ಲಕ್ಷ ಮುಡಿ ಅಕ್ಕಿಯನ್ನು ಅಪಹರಿಸುವ ಯೋಜನೆ ಸರಕಾರದ್ದು. ಈ ತಪ್ಪು ಲೆಕ್ಕದಲ್ಲಿರುವ ಅನರ್ಥ, ಅನ್ಯಾಯಗಳನ್ನು ಉಡುಪಿ ತಾಲೂಕು ಭೂಮಾಲಿಕ ಸಂಘದವರು ಸಲಹೆಗಾರರಿಗೊಪ್ಪಿಸಿದ 'ಮೆಮೊರಾಂಡಮ್'ನಲ್ಲಿ ಸರಿಯಾದ ಅಂಕೆ ಸಂಖ್ಯೆಗಳೊಡನೆ ಸ್ಪಷ್ಟಪಡಿಸಿದ್ದರೆ. ರಿಕ್ವಿಜಿಶನ್ ಪ್ರಾರಂಭಿಸುವಾಗ ಅಧಿಕಾರಿಗಳ ಕಣ್ಣ ಮುಂದೆ ಶ್ರೇಣಿಯ ಅಂಕೆಗಳಲ್ಲದೆ ಇಂತಹ ವಾಸ್ತವಿಕತೆಗಳಿರಲಿಲ್ಲವೆಂಬುದು ಸ್ಪಷ್ಟ. ಆದರೂ ರಿಕ್ವಿಜಿಶನ್ ಅಂಕೆ ಸಂಖ್ಯೆಗಳಿಗೇನೇ ಮಂಜೂರಾತಿ ದೊರೆತಂತಿದೆ. ಆಕ್ಷೇಪಗಳ ವಿಚಾರಣೆಯಿದೆ-ದುಂಸ್ಕಿಗವಕಾಶವಿಯೆಂದು ಕೇಳುತ್ತೇವೆ. ಆದರೆ ರಿಕ್ವಿಜಿಶನ್ ಅಸ್ತಿವಾರ. ಅಧಿಕಾರಿಗಳ ಮನೋದೃಷ್ಟಿ, ಅಧಿಕಾರದಾಹ, ತಪ್ಪು ಲೆಕ್ಕಗಳು ಜಿಡುಗಟ್ಟಿರುವ ರೀತಿ—ಇವುಗಳನ್ನು ಕಾಣುವಾಗ ನ್ಯಾಯದಾನವು ಅಸಾಧ್ಯ ಅಥವಾ ಮೂರನೆಯವರಿಂದ ಮಾತ್ರ ಸಾಧ್ಯವೆನ್ನಿಸುತ್ತದೆ.

ಎರಡೆಯದಾದ, ವಿತರಣಾ ವಿಭಾಗದಲ್ಲೂ ಕೊಂಡುಕೊಳ್ಳುವ ಜನಸಾಮಾನ್ಯರಿಗೆ ಅನ್ಯಾಯವಾಗುವ ಸಂಭವವಿದೆ. ಸರ್ವತ್ರ ರೇಶನಿಂಗ್ ಜ್ಯಾರಿಯಾಗದಿದ್ದರೆ ಕೊಂಡುಕೊಳ್ಳುವವರೇ ಲಾಭಕೋರರಾಗಬಹುದು; ವ್ಯಾಪಾರಕ್ಕಾಗುವಷ್ಟನ್ನು ಪಡಕೊಂಡು ಕಳ್ಳಸಂತೆ ನಿರ್ಮಿಸಬಹುದು. ಇಂತಹ ದುರ್ವ್ಯಾಪಾರಗಳನ್ನು ಪ್ರತಿಬಂಧಿಸುವ ಸುವ್ಯವಸ್ಥೆ ಈ[illegible] ಬರುವದಿ

ದಕ್ಷಿಣ ಕನ್ನಡ-

ಮಂಗಳೂರು.

ಶ್ರೀ. ಜಿನರಾಜ ಹೆಗ್ಡೆಯವರು ಕೇಂದ್ರ ಎಸೆಂಬ್ಲಿ ಅಧಿವೇಶನದಲ್ಲಿ ಮಾತನಾಡುತ್ತಾ, 'ಕಳೆದ ೧೮ ತಿಂಗಳಿಂದ ನನಗೆ ಅರ್ಧ ಮಣ ಗೋಧಿ, ಎರಡು ಪೌಂಡು ಸಕ್ಕರೆ ಸಿಕ್ಕಿದೆ. ವಾಹನ ಸೌಕರ್ಯದ ಅನಾನುಕೂಲತೆಯಿಂದ ಆಹಾರ ಪೂರೈಸಲಿಕ್ಕಾಗಲಿಲ್ಲವೆಂದು ಸ್ಥಳೀಯ ಅಧಿಕಾರಿಗಳು ತಿಳಿಸುತ್ತಾರೆ. ರೈತರು ಆಹಾರ ಧಾನ್ಯಗಳನ್ನು ಕೂಡಿಸುವರೆಂಬ ಅಪವಾದವು ನಿರಾಧಾರದ್ದು. ಯಾವ ಪ್ರಾಂತದಲ್ಲಿ ರೈತರು ಕೂಡಿ ಹಾಕುವರೆಂಬುದನ್ನು ಸರಕಾರ ತಿಳಿಸುವುದೇ? ಗವರ್ನರು ಯುದ್ಧ ನಿಧಿಗೆ ಸಹಾಯವಿತ್ತ ಸಾಹುಕಾರರನ್ನು ಅವರು ಹೇಳಿದ ಸಂಗ್ರಹಿಸಿದ್ದ ಕೈವಿನಲ್ ಆರೋಪಕ್ಕೆ ಗುರಿಯಾದರೂ ಎಡೆಗೊಡಲಾಗಲೆಂದು ಬಿಡಲಾಗಿದೆ' ಎಂದು ದ. ಕ. ಜಿಲ್ಲೆಯ ಆಹಾರ ಪರಿಸ್ಥಿತಿಯ ಕುರಿತು ಹೇಳಿದರು.

ಪ್ರಯಾಣಿಕರ ಮರಣ- ತಾ. ೨೨ರಂದು ಕುಂದಾಪುರಕ್ಕೆ ಹೋಗಲೆಂದು ಕೊಡಿಯಾಲ್ ಬೈಲಿನ ಬಸ್ಸ್ ಆಫೀಸಿಗೆ ಬಂದ ಮೈಸೂರಿನ ಶ್ರೀ. ಟಿ. ಶಿವರಾಮ ಪಂಡಿತರೆಂಬವರು ಆಯಾಸದಿಂದ ಬೆಂಚಿನ ಮೇಲೆ ಒರಗಿ ವಾಂತಿಮಾಡಿ ಪ್ರಾಣ ಬಿಟ್ಟರು.

ನೀಲೇಶ್ವರ— ತಾ. ೨೦-೧೧-೪೩ರ ಸಂಜೆ ಗಂಟೆ ೫-೩೦ಕ್ಕೆ ನೀಲೇಶ್ವರದಲ್ಲಿ ಮಿಂಚು ಹಾರಿ ಓರ್ವ ಮುಸಲ್ಮಾನ ಬಂಧುವು ದಾರಿಯಲ್ಲಿ ಮೃತಿ ಹೊಂದಿರುತ್ತಾನೆ. ಅಲ್ಲದೆ ಜಾನುವಾರುಗಳು ಕೂಡಾ ಮಡಿದಿರುತ್ತವೆ.

ಉಡುಪಿ.

ತಾಲೂಕಿನ ಎಲ್ಲಾ ಗ್ರಾಮ ಉದ್ಯೋಗಸ್ಥರಿಗೆ--ಈಗಿನ ಆರ್ಥಿಕ ದುಸ್ಥಿತಿಯಲ್ಲಿ ಜಡ ಜನರಿಗೆ ಬಟ್ಟೆಯ ತೊಂದರೆಗಳು ಬಾರದಂತೆ ಉದ್ದೇಶದಿಂದ ಹಿಂದೀ ಸರಕಾರದವರು ಸ್ಟೇಂಡಾರ್ಡ್ ಬಟ್ಟೆಯನ್ನು ಸುಲಭ ದರದಲ್ಲಿ ಎಲ್ಲಾ ಜನರಿಗೆ ಒದಗಿಸುವ ಏರ್ಪಾಡು ಮಾಡಿರುತ್ತಾರೆ. ಇದಾ ಸಲ್ ಸ್ಟೇಂಡಾರ್ಡ್ ಬಟ್ಟೆಯು ಈಗ ಉಡುಪಿಯಲ್ಲಿ ಮೂರು ಅಂಗಡಿಗಳಲ್ಲಿ ಮಾರಲ್ಪಡುವುದು. ಈ ಸ್ಟೇಂಡಾರ್ಡ್ ಬಟ್ಟೆಯು ಹೆಚ್ಚು ಕಾಲ ಬಾಳುವುದಿಲ್ಲವೆ ಅದನ್ನು ಉಡಲಿಕ್ಕೂ ಜನರು ತುಂಬಾ ಸಂತೋಷಪಡ[illegible] ದರದಲ್ಲಿ ಸಂತೆಯಲ್ಲಿ ಸೀರೆಗಳು ಎಷ್ಟೋ ಅಂದವಾಗಿರುತ್ತವೆ. ಇನ್ನು ಈ ಸ್ಟೇಂಡಾರ್ಡ್ ಬಟ್ಟೆಯನ್ನು ಪ್ರತಿ ಗ್ರಾಮದಲ್ಲಿ ಪ್ರತಿಯೊಬ್ಬರಲ್ಲಿ ರೂಢಿಗೆ ತರುವ ಭಾರ ನಿಮ್ಮ ಮೇಲಿದೆ. ಜನರ ಹಿತದೃಷ್ಟಿಯಿಂದ ನೀವೆಲ್ಲರೂ ಈ ಕೆಲಸವನ್ನು ಕೈಕೊಂಡು- ಈ ತಾಲೂಕಿನ [illegible] ಹಾಗೆಯೇ ದರಿದ್ರರಲ್ಲಿ [illegible] ಈ ಅಗ್ಗ ಸುಂದರ ಬಟ್ಟೆಯೇ ಕಾಣುವಂತೆ ಪ್ರಯತ್ನಪಡಬೇಕೆಂದು ತಹಸೀಲ್ದಾರ್ ಶ್ರೀ. ಕೇಶವ ಕುಡ್ವರ ತಿಳಿಸುತ್ತಾರೆ.

ಕ್ರಿಕೆಟ್ ಪಂದ್ಯಾಟಗಳು--ದ. ಕ. ಜಿಲ್ಲಾ ಇಂಟರ್ ಸ್ಕೂಲ್ ಎಥ್ಲೆಟಿಕ್ ಎಸೋಸಿಯೇಶನ್ ಕಡೆಯಿಂದ ನಡೆದ ಸೀನಿಯರ್ ಫೈನಲಿನಲ್ಲಿ ದಕ್ಷಿಣ ಶಾಖೆಯವರು ಒಂದು ರನ್ನಿನ ಅಧಿಕ ಲಾಭದಿಂದ ಉತ್ತರ ಶಾಖೆಯವರೊಡನೆ ಗೆದ್ದರು. ಉತ್ತರ ಶಾಖೆಯಲ್ಲಿ ಉಡುಪಿ ಕಾರ್ಕಳ ಮತ್ತು ಕುಂದಾಪುರ ತಾಲೂಕುಗಳ ಎಲ್ಲಾ ಹೈಸ್ಕೂಲುಗಳೂ, ದಕ್ಷಿಣ ಶಾಖೆಯಲ್ಲಿ ಮಂಗಳೂರಿನ ಕೆನರಾ ಹೈಸ್ಕೂಲ್, ಮಿಶನ್ ಹೈಸ್ಕೂಲ್ ಮತ್ತು ಕಾಸರಗೋಡು ಬೋರ್ಡ್ ಹೈಸ್ಕೂಲುಗಳೂ ಭಾಗವಹಿಸಿದ್ದುವು. ಒಂದೇ ಪಂದ್ಯಾಟದಲ್ಲಿ ಜಿಲ್ಲೆಯ 8 ಬೇರೆ ಬೇರೆ ಹೈಸ್ಕೂಲುಗಳು ಭಾಗವಹಿಸಿದುದು ಪ್ರಾಯಶಃ ಇದೇ ಮೊದಲನೆಯ ಬಾರಿ. ಉತ್ತರ ಶಾಖೆಯ ಆಟಗಾರರಲ್ಲಿ ಕೋಟೆ ವಿಶ್ವನಾಥ ಶೆಣೈ ಇವರು 61 ರನ್ಸ್ ತೆಗೆದುದಕ್ಕಾಗಿ ಶ್ರೀ. ಎಲ್. ಎನ್. ಕಲ್ಮಂಜೆಯವರು ಅವರಿಗೆ ಒಂದು ಕಪ್ಪನ್ನು ಬಹುಮಾನವಾಗಿ ಕೊಟ್ಟಿರುತ್ತಾರೆಂದು ತಿಳಿದುಬರುತ್ತದೆ.

ಉಡುಪಿ ಟೌನ್ ಟೀಮಿನವರು ಮಂಗಳೂರಿನಿಂದ ಇಲ್ಲಿಗೆ ಆಗಮಿಸಿದ ಕ್ರಿಕೆಟ್ ಆಟಗಾರರೊಂದಿಗೆ ಆಡಿ, ಮೂರು ವಿಕೆಟುಗಳ ಅಧಿಕ ಲಾಭದಿಂದ ಜಯಶಾಲಿಗಳಾದರು. ಉಡುಪಿ ಟೀಮಿನ ಶ್ರೀ ವಾದಿರಾಜ ಹೆಗ್ಡೆಯವರ ಆಟವು ಪ್ರೇಕ್ಷಣೀಯವಾಗಿತ್ತು. ಹೀಗೆ ಜಯಶಾಲಿಯಾಗಿ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರಿಂದ ಕೊಡಲ್ಪಟ್ಟ ಕಪ್ಪನ್ನು ಉಡುಪಿ ಟೀಮಿನವರು ಪಡೆದುದು ಅಭಿನಂದನೀಯ.

ಕುಸ್ತಿ ಸ್ಪರ್ಧೆ-ತಿರುವಾಂಕೂರಿನ ಜಟ್ಟಿ ಜೋಸೆಫ್ ಮತ್ತು ಇಲ್ಲಿಯ ಗಫೂರ್ ಸಾಹೇಬರೊಳಗೆ ಇದೇ ತಾ. 28ರಲ್ಲಿ ಶ್ರೀ ಕಡಿಯಾಳಿ ಶಾಲಾ ಮೈದಾನದಲ್ಲಿ ಕುಸ್ತಿ ನಡೆದು ಜೋಸೆಫ್ ಪೈಲ್ವಾನರು ಗೆದ್ದಿರುವರು.

ಬೈಂದೂರು--ಇಲ್ಲಿಯ ಬೋರ್ಡ್ ಮಿಡ್ಲ್ ಸ್ಕೂಲಿನ ಉಪಾಧ್ಯಾಯರಾದ ಶ್ರೀ ಯು. ಶೇಷ ಭಟ್ಟರನ್ನು ವರ್ಗಾಯಿಸಿರುವುದು ಕೇವಲ ವಿಷಾದಕರ. ಶ್ರೀ ಭಟ್ಟರು ಒಳ್ಳೆಯ ಮಹಾನಿಷ್ಠೆಯಿಂದ ಕೆಲಸ ಮಾಡುವ ಉಪಾಧ್ಯಾಯರಲ್ಲಿ ಒಬ್ಬರಾಗಿದ್ದರು. [illegible] ಹಿತದೃಷ್ಟಿಯಿಂದ ಸಂಬಂಧಪಟ್ಟವರು ಇನ್ನಾದರೂ ಈ ಕುರಿತು ಗಮನಿಸುವರೋ ಎಂದೇ ಆಶೆ.

ಸೀತಾನದಿ ಜಾನುವಾರು ಜಾತ್ರೆ-ಯು ತಾ. 7-12-43ರಿಂದ ಹನ್ನೆರಡು ದಿನಗಳ ವರೆಗೆ ನಡೆಯಲಿದೆ. ನಮ್ಮ ಜಿಲ್ಲೆಯ ಜಾನುವಾರು ವ್ಯಾಪಾರಿಗಳು ಮೈಸೂರು ಪ್ರಾಂತ್ಯದ ಜಿಲ್ಲೆ ಕಮಿಶನರರಿಂದ ಪರವಾನಗಿ ಪಡೆಯಬೇಕು; ಜಾನುವಾರುಗಳನ್ನು ಈ ಜಿಲ್ಲೆಯ ಸಂತೆಗಳಿಗೆ ತರಲು ಆಕ್ಷೇಪವಿಲ್ಲವೆಂದೂ, ವ್ಯಾಪಾರಿಗಳು ತಮ್ಮ ಉತ್ತಮ ತರದ ರಾಸುಗಳನ್ನು ಮಾರಾಟಕ್ಕೂ ಪ್ರದರ್ಶನಕ್ಕೂ ತಂದು ಪ್ರೋತ್ಸಾಹಿಸಬೇಕಾಗಿಯೂ ಅವರಿಗೆ ಸರ್ವಾನುಕೂಲತೆಗಳನ್ನು ಒದಗಿಸಲಾಗುವದೆಂದೂ ಜಿಲ್ಲಾ ಸಂಬ್ಯಾಕ ಬೋರ್ಡ್ ಪ್ರೆಸಿಡೆಂಟರು ತಿಳಿಸುತ್ತಾರೆ.

ಕಟಪಾಡಿ--ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲೆಯ ನಿವೃತ್ತ ಅಧ್ಯಾಪಕ ಶ್ರೀ ಎಮ್. ದಾಮೋದರ ಶೆಣೈಯವರ ನಿಧನದ [illegible] ಸೂಚಕ ಶಾಲೆಯು ತಾ. 30-11-43ರಲ್ಲಿ ಮುಚ್ಚಲ್ಪಟ್ಟಿತು. ಅಂದು ಶಾಲಾ ಅಧ್ಯಾಪಕರೂ ವಿದ್ಯಾರ್ಥಿಗಳೂ ಸೇರಿ ಮೃತರ [illegible] ಗಣಕೆದನ [illegible] ಮಾಡಿದರು.

ನಿಧನ.

ಕಟಪಾಡಿ ಶ್ರೀ ವೆಂಕಟರಮಣ ಸ್ವಾಮಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ 1916ರಿಂದ 1920ರ ತನಕ ಮುಖ್ಯ ಅಧ್ಯಾಪಕರಾಗಿಯೂ ಅನಂತರ 1938ರ ವರೆಗೆ ಸಹಾಯಕ ಅಧ್ಯಾಪಕರಾಗಿಯೂ ಇದ್ದು ಆದರ್ಶ ಅಧ್ಯಾಪಕರೆಂದು ಕೀರ್ತಿ ಗಳಿಸಿ ಅಸಂಖ್ಯಾತ ಶಿಷ್ಯವೃಂದದ ಪ್ರೀತಿಗೆ ಪಾತ್ರರಾಗಿದ್ದ ಶ್ರೀ ಮೂಲ್ಕಿ ದಾಮೋದರ ಶೆಣೈಯವರು ತಮ್ಮ 66ನೇ ವರ್ಷ ಪ್ರಾಯದಲ್ಲಿ ಉಡುಪಿಯ ತಮ್ಮ ಮನೆಯಲ್ಲಿ ತಾ. 30-11-43ನೇ ಪ್ರಾತಃಕಾಲ ಸ್ವರ್ಗಸ್ಥರಾದರೆಂದು ತಿಳಿಸಲು ತುಂಬಾ ವಿಷಾದವೆನಿಸುತ್ತದೆ. ಇವರ ನಿಧನದಿಂದಾಗಿ ಇವರ ಕುಟುಂಬದವರಿಗುಂಟಾದ ದುಃಖದಲ್ಲಿ ನಾವೂ ಸಹಭಾಗಿಗಳಾಗಿರುವೆವು. ಮೃತರ ಆತ್ಮಕ್ಕೆ ಭಗವಂತನು ಚಿರ ಶಾಂತಿಯನ್ನು ದಯಪಾಲಿಸಲಿ!

ಉಡುಪಿ ತಾಲೂಕಿನ ವರ್ಗದಾರರಲ್ಲಿ ವಿನಂತಿ.

ಮದ್ರಾಸ್ ಗವರ್ನರರ—ಎಡ್ವೈಸರರು ನಮ್ಮ ಜಿಲ್ಲೆಗೆ ಹಾಗೂ ಉಡುಪಿಗೆ ಸಂದರ್ಶಿಸಿದ ಸಮಯ ಈಗಿನ ರಿಕ್ವಿಜಿಶನ್ ಕುರಿತು, ಕೆಲವು ತಿದ್ದುಪಡಿಗಳನ್ನು ಸೂಚಿಸಿ ಅಕ್ಕಿಯ ದರವನ್ನು ಸಮಾ ನಿರ್ಣಯಿಸಿದ್ದಲ್ಲದೆ ವರ್ಗದಾರರ ಮೇಲೆ ಹೊಂದಿಕೊಂಡಿರುವವರ ಜೀವನಕ್ಕೂ ವ್ಯವಸಾಯಕ್ಕೂ ಅಗತ್ಯವಿರುವ ಎಲ್ಲಾ ಸಾಮಾನುಗಳನ್ನು ಕಂಟ್ರೋಲ್ ದರದಲ್ಲಿ ಸಿಕ್ಕುವ ಹಾಗೆ ಏರ್ಪಾಡು ಮಾಡುವುದಾಗಿ ತಿಳಿಸಿರುತ್ತಾರೆ. ಆ ಪ್ರಕಾರ ರಿಯಾಯತಿ ಸಿಕ್ಕಬಹುದಾಗಿ ನಮಗೆ ಭರವಸೆಯಿದೆ.

ಆದರೆ ಪ್ರಕೃತ ಅಕ್ಕಿ ತತ್ಕ್ಷಣ ಯಾಗಿರುವ ಕಾರಣ ಆಯಾಯ ತಾಲೂಕಿನ ವರ್ಗದಾರರು ಕನಿಷ್ಠ ಪಕ್ಷ 5000 ಮುಡಿಗೆ ಕಮ್ಮಿಯಾಗದಷ್ಟು ಅಕ್ಕಿಯನ್ನು ಇದೇ ದಸಂಬ್ರ ತಿಂಗಳ ತಾ 15ರ ಒಳಗೆ ಮಾಡಿಕೊಡಬೇಕಾಗಿಯೂ ಎಡ್ವೈಸರರು ಕೇಳಿಕೊಂಡಿರುತ್ತಾರೆ. ಹಾಗೆ ಕೊಡುವ ಅಕ್ಕಿಯನ್ನು ಪಡಕೊಳ್ಳುವ ಬಗ್ಗೆ ತಾಲೂಕಿನಲ್ಲಿ ಹಂಗಾರಕಟ್ಟೆ, ಉಡುಪಿ, ಕಟಪಾಡಿ, ಪಡುಬಿದ್ರಿ ಮೊದಲಾದ ಸ್ಥಳಗಳಲ್ಲಿ ಸರಕಾರಿ ಡಿಪೋಗಳನ್ನು ಏರ್ಪಡಿಸಿಯದೆ. ಆದುದರಿಂದ ನಮ್ಮ ಉಡುಪಿ ತಾಲೂಕಿನ ಪ್ರತಿಯೊಬ್ಬ ವರ್ಗದಾರರು ಇದೇ ದಸಂಬ್ರ ತಿಂಗಳ ತಾ 15ರ ಒಳಗೆ ತಮ್ಮಿಂದ ಕೂಡಿದಷ್ಟು ಮಟ್ಟಿಗೆ ತಯಾರಿಸಿ ಕೊಡಬೇಕಾಗಿ ಅಪೇಕ್ಷಿಸಲಾಗುತ್ತದೆ. ಹೆಚ್ಚಿನ ಮಾಹಿತಿಗಳನ್ನು ಸಂಬಂಧಪಟ್ಟ ಡಿಪೋಗಳಲ್ಲಿ ವಿಚಾರಿಸಿ ತಿಳಕೊಳ್ಳಬಹುದು.

ಕೆ. ಜೆ ಬಲ್ಲಾಳ
ಅಧ್ಯಕ್ಷ,
ಉಡುಪಿ ತಾಲೂಕು ವರ್ಗದಾರರ ಸಂಘ

ಮೊಕ್ಕಾಂ. ಉಡುಪಿ.
ತಾ. 30-11-43.

ದಿವಂಗತ ಕೆ. ಗೋವಿಂದ ಸೆಟ್ಟರು.

ಮಂಗಳೂರಿನಲ್ಲಿ ಅಬ್ಕಾರಿ ಸಬ್ ಇನ್ಸ್ಪೆಕ್ಟರರಾಗಿದ್ದ ಶ್ರೀ. ಕುತ್ಯಾಡಿ ಗೋವಿಂದ ಸೆಟ್ಟರು 22-11-43ರಲ್ಲಿ ತನ್ನ ನಡುಪ್ರಾಯದಲ್ಲೇ ದಿವಂಗತರಾದರೆಂದು ತಿಳಿದು ವಿಷಾದಿಸುತ್ತೇವೆ. ಅವರು ಇದೇ ತಾ. 1ರಲ್ಲಿ ಅಬ್ಕಾರಿ ಘೋರೆಯಾಗಿ ಭಡ್ತಿಹೊಂದಿ ಉಡುಪಿ ಸರ್ಕಲಿಗೆ ವರ್ಗ ಹೊಂದಿದ್ದರು. ದಿವಂಗತ ಸೆಟ್ಟರು ತನ್ನ ಸೌಜನ್ಯ, ನ್ಯಾಯ ಪಕ್ಷಪಾತಿತ್ವದಿಂದ ಸರ್ವ ಜನಾದರಣೀಯರಾಗಿದ್ದರು. ಉಪಕಾರಿಯೆಂದು ಹೆಸರುಗಳಿಸಿದ್ದರು. ದಿವಂಗತರ ಸಂಬಂಧಿಕರೊಡನೆ ನಮ್ಮ ಸಹಸಂತಾಪ ಸೂಚಿಸುತ್ತೇವೆ.

Degrees: Books: Medicines
Free H. L. M. S. M, B. H. M. D, etc. Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs. 4, Insanity Cure Pills Rs. 10 Enclose 2 annas stamp:—
Prof. Dr. N. H. Chbatbar,
Principal Indian Homeopathic Institute & Society (Govt. Regd)
P.O. MAHUVA (Kathiawar Dt. India.)

Sidha-Kalpa Kavach (Regd.)
No. 3 Rs 2. No 2 Rs. 5 No. 1 Rs. 7 Special Rs. 10, Extra Special Rs. 17 for love marriage health, wealth. Ask any six questions with M. O. Re. 1/4 and get correct answers by returnpost Life reading Rs. 10 No V.P.P. Send M.O. Free pmplets.
Prof. Dr. N. H Chbatbar.
P. O. MAHUVA (Kathiawar India.)

ಸನ್ಮಾನ— ಮೈಸೂರು ಆಸ್ಥಾನ ವಿದ್ವಾನ್ ಉಡುಪಿ ಶ್ರೀ. ಲಕ್ಷ್ಮೀನಾರಾಯಣ ಉಪಾಧ್ಯಾಯರನ್ನು ಸನ್ಮಾನಿಸುವುದಕ್ಕಾಗಿ ತಾ. 30-11-43 ಸಂಜೆ 6 ಗಂಟೆಗೆ ಶ್ರೀ ಫಲಿಮಾರು ಮಠದ ಶ್ರೀ ರಘುಮಾನ್ಯ ತೀರ್ಥ ಶ್ರೀಪಾದಂಗಳವರು ತಮ್ಮ ಮಠದಲ್ಲಿ ಶ್ರೀ ಪುತ್ತಿಗೆ ಮಠದ ಶ್ರೀ ಶ್ರೀಸುತ್ತೀರ್ಥೇಂದ್ರ ತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಜರಗಿಸಿದರು. ಕಾಣೂರು ಮಠದ ಶ್ರೀಗಳವರೂ ಅಧಮಾರು ಮಠದ ಏಜಂಟ್ ವೆಂಕಟಾಚಾರ್ಯರೂ, ವೈದಿಕ ಲೌಕಿಕ ಮಹನೀಯರನೇಕರೂ ನೆರೆದಿದ್ದರು. ವಿದ್ವಾನ್ ಬಿ. ಅನಂತಕೃಷ್ಣ ಉಪಾಧ್ಯಾಯರು ಸಭೆಯ ಉದ್ದೇಶವನ್ನು ಪ್ರಕಟಿಸಿದ ಮೇಲೆ ಸಾಹಿತ್ಯ ಶಿರೋಮಣಿ ವಿ. ಶ್ರೀನಿವಾಸ ಭಟ್ಟರು, ಶ್ರೀ ಲಕ್ಷ್ಮೀನಾರಾಯಣ ಉಪಾಧ್ಯಾಯರು ಸಾಹಿತ್ಯ, ನ್ಯಾಯ, ವಿದ್ವಾನ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಪಂಡಿತ ಶ್ರೇಷ್ಠರೆನಿಸಿ ಮೈಸೂರು ಮಹಾರಾಜರಿಂದ ಆಸ್ಥಾನ ವಿದ್ವಾನ್ ಪದವಿಗೇರಿಸಲ್ಪಟ್ಟ ಕುರಿತು ಪರಿಚಯ ಭಾಷಣವನ್ನು ಕೊಟ್ಟರು. ಶ್ರೀ ಲಕ್ಷ್ಮೀನಾರಾಯಣ ಉಪಾಧ್ಯಾಯರು ತನ್ನನ್ನು ಸನ್ಮಾನಿಸಿದ್ದಕ್ಕೆ ಕೃತಜ್ಞತೆಯನ್ನು ಸೂಚಿಸಿದರು. ಕಡೆಗೆ ಶ್ರೀ ಫಲಿಮಾರು ಶ್ರೀಗಳವರು ಶ್ರೀ ಉಪಾಧ್ಯಾಯರು ಇನ್ನಷ್ಟು ಕೀರ್ತಿಶಾಲಿಗಳಾಗಬೇಕೆಂದು ಹರಸಿ ಅಧ್ಯಕ್ಷರ ಹಸ್ತದಿಂದ ಜರತಾರಿ ಶಾಲನ್ನು ಕೊಡಿಸಿ ಮಂತ್ರಾಕ್ಷತೆಯನ್ನಿತ್ತರು.

ಉಡುಪಿಯ ಮಹನೀಯರಿಗೊಂದು ಉತ್ಸಾಹದ ಹಬ್ಬ.
ಇವರೊಂದಿಗೆ ಸಹಕರಿಸಲು ಇತರ ಹಳ್ಳಿ ನಾಡಿನವರೆಲ್ಲರಿಗೂ ಸುಸ್ವಾಗತ.
ತಾ. 2-12-43 ರಿಂದ
ಕನ್ನಡದ ಸರ್ವಶ್ರೇಷ್ಠ ಚಿತ್ರ.
ಹರಿಶ್ಚಂದ್ರ
ಸುಬ್ಬಯ್ಯನಾಯ್ಡು, ಲಕ್ಷ್ಮೀಬಾಯಿ ನಾಗೇಂದ್ರ ರಾವ್, ರಾಜ್ಞಿ, ಯಂಗಾರ್ ಮೊದಲಾದವರ:
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಧಾತುಪುಷ್ಟಿ ಲೇಹ
ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೋಗಿ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಬಳಲ್ಕೆ, ಅರುಚಿ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—0—0.

ಕಸ್ತೂರಿಮಿಶ್ರಣ ದಶಮೂಲ
ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅನೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವ ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಂ. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ—1. ಪ್ರೊವ್ಯಿಂಶಿಯಲ್ ಸ್ಟೋರ್ಸ್, ಕೆಮಿಸ್ಟ್ ಎಂಡ್ ಜನರಲ್ ಮರ್ಚೆಂಟ್ಸ್, 183 ಸುಪಾರಿಬಾಗ್ ರೋಡ್, ಪರೇಲ, ಬೊಂಬಾಯಿ, ನಂಬ್ರ 12 2. ಜನರಲ್ ಸ್ಟೋರ್ಸ್, ಜಿ. ಐ. ಪಿ. ಮಾಟುಂಗಾ. 3. ಮುಲ್ಲರ್ ಪೆಟರ್ಸ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ. 4. ಧನ್ವಂತರಿ ವೈದ್ಯಶಾಲೆ, ಲೆನ್ಸ್‌ಡೌನ ಬಜಾರ್, ಮೈಸೂರು. 5. ಮಂಗ್ಳೂರು ಸ್ಟೋರ್ಸ್, ಮಡಿಕೇರಿ. 6. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ. 7. ಡಾ। ಶ್ರೀನಿವಾಸ ಪೈ, ಪುತ್ತೂರು. 8. ಕಾಂತಾವರ ಪಾರ್ಶ್ವ ಕಮ್ಮ, ಬೆಳ್ತಂಗಡಿ. 9. ಮುಲ್ಕಿ ಮೆಡಿಕಲ್ ಸ್ಟೋರ್ಸ್, ಮುಲ್ಕಿ. 10. ನವಭಾರತ ಬುಕ್ ಡಿಪೊ, ಸಂತೆಕಟ್ಟೆ, ಉಡುಪಿ. 11. ಕೃಷ್ಣಾ ಫಾರ್ಮೆಸಿ, ಕುಂದಾಪುರ. 12. ಎಚ್. ನರಸಿಂಹ ನಾಯ್ಕ, ಮರ್ಚೆಂಟ್, ಶಂಕರನಾರಾಯಣ. 13. ಕಾಸರಗೋಡು ಶ್ರೀ ರಾಮಾ ಮೆಡಿಸಿನ ಹೌಸ್, ಶ್ರೀ ರಾಮ ಪೇಟೆ. 14. ಕೆ. ಶ್ರೀನಿವಾಸ ಹೆಗ್ಡೆ, ತೀರ್ಥಹಳ್ಳಿ. 15. ಬಿ ಯಸ್. ನರಸಿಂಗ ರಾವ್, ಮರ್ಚೆಂಟ್, ಚಿಕ್ಕಮಂಗ್ಳೂರು.



ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಾಂಜಿ ನ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕನ್ನು ಸಾಮಾನುಗಳಿವೆ.

ಯುದ್ಧ ಗತಿ.

ರಷ್ಯದಲ್ಲಿ ಸ್ಥಳೀಕ ಸಣ್ಣ ಅಪಜಯಗಳನ್ನು ಬಿಟ್ಟರೆ ಎಲ್ಲಾ ಕಡೆಗಳಲ್ಲಿಯೂ ರಶ್ಯಾನರೇ ಮೇಲ್ಮೈಯಾಗಿ ಮುಂದೊತ್ತುತ್ತಿದ್ದಾರೆ. ಕೀವರ್ ಸರಹದ್ದಿನಲ್ಲಿ ಜರ್ಮನರ ಅತೀವ ಪ್ರತಿಭಟನೆಯಿದಿರಲ್ಲಿ ರಶ್ಯಾನರು ಪ್ರಗತಿ ಪಡೆಯುತ್ತಿದ್ದಾರೆ. ಯುದ್ಧ ಮುಖದ ದಕ್ಷಿಣ ಭಾಗದಲ್ಲಿ ಝಿಟೋಮಿರಿನಿಂದ ನಿಕೋಪೋಲ್ ವರೆಗಿನ ನಾಜೀ ರಕ್ಷಣಾ ಲೈನನ್ನು ಪಶ್ಚಿಮಕ್ಕೆ ಹಿಂದೂಡುವದರಲ್ಲಿ ಕೆಂಪು ಸೇನೆಯು ಸಾಹಸಪಡುತ್ತಿದೆ. ಈ ಭಾಗದಲ್ಲಿ ಕೀವಿನ ಕಡೆಗೆ ಮುನ್ನುಗ್ಗಲು ಜರ್ಮನರು ಪ್ರಬಲಯತ್ನದಲ್ಲಿದ್ದಾರಾದರೂ ಈ ತನಕ ಪರಾಭವಕ್ಕೊಳಗಾಗಿದ್ದಾರೆ. ಉತ್ತರಗಡೆಯಲ್ಲಿ ಪ್ರಾಮುಖ್ಯ ನಿಲ್ದಾಣ ಗೋಮೆಲ್ ರಶ್ಯಾನರ ವಶವಾಗಿದೆ; ನೀಸರ್ ಮತ್ತು ಪ್ರಿಪೆಟ್ ನದಿಗಳ ಮಧ್ಯವಲಯವೂ ಅವರಿಗೆ ದೊರೆತಿದೆ. ಎಲ್ಲಾ ಕಡೆಗಳಲ್ಲಿಯೂ ಯುದ್ಧವು ರಭಸದಿಂದ ಸಾಗಿದೆ.

ಇಟೆಲಿಯಲ್ಲಿ ರೋಮ್ ಕಡೆಗೆ ಮುಂದೊತ್ತುವ ಮಿತ್ರ ಸೇನೆ ಈಗ ಸಾಂಗ್ರೋ ನದಿಯನ್ನು ದಾಟಿದುದು ಶುಭವಾರ್ತೆಯೆನ್ನಬೇಕು. ಸಾಂಗ್ರೋ ಸಂಕಟರದಲ್ಲಿ ಕೊನೆಯ ಮನುಷ್ಯನಿರುವ ತನಕವೂ ಪ್ರತಿಭಟನೆ ಕೊಡತಕ್ಕದ್ದೆಂದು ಹಿಟ್ಲರ್ ಸೇನೆಗಾಜ್ಞೆಯಿತ್ತಿರುವನಂತೆ. ಈಗ 8ನೇ ಸೇನೆಯ ನಾಯಕ ಜನರಲ್ ಮೊಂಟಗೋಮೆರಿಯವರು ಮುಂದಿನ ಪ್ರಬಲ ಹೊಡೆತಕ್ಕೆ ಸಿದ್ಧತೆ ಮಾಡುತ್ತಿದ್ದಾರೆ. ಸಿಸಿಲಿಯಲ್ಲಿ ಹೋರಾಡಿದ್ದ ಅಮೇರಿಕದ 3ನೇ ಡಿವಿಜನೂ ಈಗ ಇಟಲಿಗೆ ಬಂದಿದೆ. ರೋಮಿಗೆ ಹತ್ತಿರ ಹಾಗೂ ಸುಗಮ ದಾರಿಯಾದ ಕಸ್ಸಿನೋವನ್ನು ಜರ್ಮನರು ಅತ್ಯಂತ ಭದ್ರಗೊಳಿಸಿರುವರು. ಸಾಂಗ್ರೋ ನದಿಯ ಸಮರದಲ್ಲಿ ಹಿಂದೀ ಯೋಧರು ಪ್ರದರ್ಶಿಸಿದ ಅಸಾಮಾನ್ಯ ಧೈರ್ಯ ಸ್ಥೈರ್ಯಗಳನ್ನು ಜನರಲ್ ಮೊಂಟ್ ಗೋಮೆರಿಯವರು ಮುಕ್ತ ಕಂಠದಿಂದ ಹೊಗಳಿರುವರು.

ಪ್ರಕಟಣೆ.

P M Kunhi Raman, Manager,
Parassini Madappura Temple,
P. O. Parassinikkatavu
(Via) Pappinisserri.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ-
ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಒಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುನ್ಹಿರಾಮನ್,
ಮೆನೇಜರ್

ತಾರುಣ್ಯ
ಕೊಟ್ಟು, ವೀರ್ಯಸ್ತಂಭನೆ ಮಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟುಮಾಡುವ ರಮಣ ವಿಲಾಸಿನಿ ಅತ್ಯುತ್ತಮ ಔಷಧಿ. ಡಬ್ಬಿ 1ಕ್ಕೆ ರೂ. 1.
ಮದನಮಂಜರಿ ಫಾರ್ಮಸಿ,
184 ಚೈನಾ ಬಜಾರ್ ರೋಡ್,
ಮದ್ರಾಸು.
ಪುತ್ತೂರು ಏಜಂಟರು:— ಪೈ ಫಾರ್ಮಸಿ

ದ. ಕ.ದಲ್ಲಿ ಮದ್ರಾಸು ಗವರ್ನರ್ ಸಲಹೆಗಾರರ ಸಂಚಾರ.

ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ಅಭ್ಯಾಸಿಸುವುದಕ್ಕಾಗಿ ತಾ. ೨೩ರಂದು ೭ಕ್ಕೆ ಮಂಗಳೂರಿಗೆ ಬಂದ, ಮದ್ರಾಸು ಗವರ್ನರರ ಬೋಧಕರಾದ ಶ್ರೀ. ರಾಮಮೂರ್ತಿ ಐ. ಸಿ. ಎಸ್. ಅವರು ಮರುದಿನ ಅಪರಾಹ್ನ ಮೂರು ಘಂಟೆಗೆ ಸೇರಿದ ನಗರದ ಮತ್ತು ಜಿಲ್ಲೆಯ ಪ್ರಮುಖರ ಸಭೆಯ ಭಾಗವಹಿಸಿದರು.

ಸರಕಾರದ ಯೋಜನೆ

"ನಮ್ಮದನ್ನು ಹೆಚ್ಚು ಕಡಿಮೆ 'ಸ್ವಂತ ಪೂರ್ತಿ'ಯ (self-sufficient) ಜಿಲ್ಲೆಯಾಗಿ ಪರಿಗಣಿಸಲಾಗಿದೆ ಆದರೂ ಅಭಾವ ಕಂಡುಬಂದರೆ ಸರಕಾರವು ಹೊರ ಪ್ರದೇಶದಿಂದ ಅಕ್ಕಿಯನ್ನು ಇಲ್ಲಿಗೆ ತರಿಸುವದು. ಕಟ್ಟು ಉತ್ಪತ್ತಿಯ ಅಕ್ಕಿಯಾದ ಸಗ್ಗಿ ರಾಶಿಗೆ (ಕಳವು ಕೂಡಿ) ಮುಡಿಗೊ ೧೦, ಗುಡ್ಡೆ ರೂ. ೧೦||; ಮಸ್ಕತಿ ರೂ ೧೧; ಬೆಳ್ತಿಗೆ ೧೨ ಮತ್ತು ಕಜೆ ರಾಶಿಗೆ ಹಸ್ತಕ್ಕಿಂತ ಕಡಿಮೆ; ಹೀಗೆ ಕೊಂಡುಕೊಳ್ಳುವ ಬೆಲೆ ಇರುವದು. ವೆಚ್ಚವನ್ನು ಸೇರಿಸಿ ಮಾರಾಟದ ನಿಶ್ಚಿತ ಬೆಲೆಯನ್ನು ಕಲೆಕ್ಟರರು ಗೊತ್ತುಪಡಿಸುವರು. ಈ ನಿರ್ಧಾರದ ಬೆಲೆಯು (ceiling price) ಒಂದೆರಡು ವರ್ಷಗಳ ತನಕವಾದರೂ ಹಾಗೆಯೇ ಇರುವದು. 'ಜಿಲ್ಲೆಯಲ್ಲಿ ಆಹಾರ ವಿತರಣೆಯ ಭಾರವನ್ನು ಸಹಕಾರಿ ಸಂಘದವರು ವಹಿಸಿಕೊಂಡಿದ್ದಾರೆ. ಸಂಘದ ಶಾಖೆಗಳು ಇಲ್ಲದೆ ಹೋದ ಸ್ಥಳಗಳಲ್ಲಿ ಚಿಲ್ಲರೆ ವ್ಯಾಪಾರಿಗಳ ಮೂಲಕ ವಿತರಣೆಯ ಏರ್ಪಾಡಾಗುವುದು. ಇನ್ನು ನೂರು ರೂ. ಗಳಿಗಿಂತ ಹೆಚ್ಚು ತೀರ್ವೆ ಕೊಡುವವರು ಮಾತ್ರವಲ್ಲದೆ, ಅದಕ್ಕಿಂತ ಕಡಿಮೆ ಮತ್ತು ಐದು ಎಕರೆಗಳಿಗಿಂತ ಹೆಚ್ಚು ಆಸ್ತಿ ಇರುವವರಿಂದಲೂ ಅಕ್ಕಿ ರೆಕ್ವಿಸಿಶನ್ ಮಾಡಲಾಗುತ್ತದೆ. ಸ್ಟೋರುಗಳು ಮಾರುವ ಬೆಲೆಯಲ್ಲೇ ಅಕ್ಕಿಯನ್ನು ಮಾರಬೇಕೆಂದು ಲೈಸೆನ್ಸ್ ಇರುವ ವ್ಯಾಪಾರಿಗಳಿಗೂ ಆಜ್ಞಾಪಿಸಲಾಗುವುದು. ಜಿಲ್ಲೆಯಲ್ಲಿ ಆಹಾರ ಧಾನ್ಯಗಳ ಚಲನೆಯ ಮೇಲೆ ಆತಂಕವಿಟ್ಟು ಕಳ್ಳತನದಿಂದ ಜಿಲ್ಲೆಯ ಹೊರಗೆ ಏನೂ ಸಾಗದಂತೆ ಸರ್ವ ಕಾವಲಿಡಲಾಗುವುದು. ಈ ವಿಷಯದಲ್ಲಿ ನಿಮ್ಮೆಲ್ಲರ ಸಹಕಾರಬೇಕು. ಭತ್ತವನ್ನು ಸ್ವಾಧೀನಪಡಿಸಿಕೊಳ್ಳುವುದರಿಂದ ಹಳ್ಳಿಯಲ್ಲಿ ಅಕ್ಕಿ ಕಯ್ಯಾರಿಸುವ ಕೆಲವರಿಗೆ ನಷ್ಟವಾಗುತ್ತದೆ ನಿಜ ಸ್ವಾಧೀನಪಡಿಸಿಕೊಂಡ ಭತ್ತವನ್ನು ಅಕ್ಕಿಯಾಗಿ ಮಾರ್ಪಡಿಸಲು ಅವರಿಗೇ ಆಸ್ಪದ ಕೊಡಲಾಗುವುದು. ಹೊಸಗೆ ಪದ್ಧತಿಯನ್ನು ಜಾರಿಗೆ ತರಲು ತಿಂಗಳಿಗೆ ೩೦,೦೦೦ ಮುಡಿ ಅಕ್ಕಿ ಬೇಕಾಗುವುದು. ಅದು ನಮಗೆ ಸಿಗುವಂತೆ ಭೂಮಾಲಿಕರು ನೆರವಾಗುವರೋ ಡಿಸೆಂಬರದಲ್ಲೇ ಈ ಅಕ್ಕಿ ಸಿಗಬೇಕು...ಹೊಸಗೆ ಬಂದಾಗ ಒಂದು ಅನಧಿಕೃತ ಸಮಿತಿಯು ರಚಿಸಲ್ಪಡಬೇಕು ..' ಎಂದು ನಿಕಟದ ಅಭಿಪ್ರಾಯವನ್ನು ಸೂಚಿಸಿದರು.

ಭೂಮಾಲಿಕ ಸಂಘದ ಅಭಿಪ್ರಾಯ

ಜಿಲ್ಲಾ ಭೂಮಾಲಿಕ ಸಂಘದ ಪರವಾಗಿ ಮಾತನಾಡುತ್ತ ಶ್ರೀ ಎ. ಬಿ. ಸೆಟ್ಟರು "ಈಗಾಗಲೇ ಸ್ವಾಧೀನ ಪಡಿಸಿಕೊಳ್ಳಲ್ಪಟ್ಟಿರುವ ಅಕ್ಕಿಯು ಎಂದೂ ಬೆಲೆ ಸೇರಿ, ಕೆಲವು ಬರಿದಾಗಬಹುದು. ಅದರಿಂದ ಲಕ್ಷ ಮುಡಿಯಾಗಬಹುದೆಂದು ಅಂದಾಜಿದೆ ಕಾಸರಗೋಡಿನಲ್ಲಿ ಈ ತನಕ ರೆಕ್ವಿಸಿಶನ್ ಮಾಡಬೇಕಿಲ್ಲ. ಸ್ವಾಧೀನ ಪಡಿಸಿಕೊಳ್ಳುವ ಸಮಯದಲ್ಲಿ ಕೆಲವರಿಗೆ ಅನ್ಯಾಯವಾಗಿದೆಯೆಂಬ ದೂರುಗಳಿವೆ. ಆ ಕುರಿತು ವಿಚಾರಿಸಬೇಕು. 'ಈ ಜಿಲ್ಲೆಯು ಸ್ವಂತ ಪೂರ್ತಿಯದೆಂದು ಹೇಳಲು ಸಾಧ್ಯವಿಲ್ಲ. ವ್ಯತಿರಿಕ್ತ ಹವಾಮಾನದಿಂದಾಗಿ ಈ ಸಲ ಬೆಳೆಯಲ್ಲಿ ಸೇಕಡಾ ೨೫ ನಷ್ಟವಾಗಿರುವುದು; ಅಲ್ಲದೆ ಎರಡನೆಯ ಬೆಳೆಯೂ ಒಳ್ಳೆಯದಿಲ್ಲ...ಹೊರಗಿನಿಂದ ಇಲ್ಲಿಗೆ ಅಕ್ಕಿ ತರಬೇಕು. ಕಾನೂನನ್ನು ಬಲಪಡಿಸಿ ದಾಸ್ತಾನುಗಾರರಿಗೂ ಲಾಭಕೋರರಿಗೂ ಕಠಿಣ ದಂಡನೆ ಕೊಡಬೇಕು. ಕಳ್ಳಸಂತೆಯನ್ನು ನಿಲ್ಲಿಸಬೇಕು. ಸಹಕಾರದೊಡನೆ ಸಹಕರಿಸಲು ಜನರು ಸಿದ್ಧರಿರುವರು. ಏರಿದ ಬೆಲೆಯಿಂದ ಜನರು ಬಲು ಬಳಲಿದ್ದಾರೆ...ದೆಸೆಂಬರದಲ್ಲಿ ಅಕ್ಕಿ ಒದಗಿಸುವ ವಿಚಾರ, ಈ ಪರಿಸ್ಥಿತಿಯಲ್ಲಿ ಏನನ್ನೂ ಹೇಳುವಂತಿಲ್ಲ. ಆದಷ್ಟು ಮಟ್ಟಿಗೆ ಒದಗಿಸಲು ಯತ್ನಿಸುವೆವು.' ಎಂದರು. ಆಹಾರವನ್ನು ಕೊಂಡುಕೊಂಡು ಉಪಯೋಗಿಸುವವರ ಪರವಾಗಿ ಶ್ರೀ ಸಿ. ಎಲ್. ಲೋಬೋ ಅವರು ಮಾತನಾಡಿ, ೧೫ ಲಕ್ಷ ಮುಡಿಯಷ್ಟು ಅಕ್ಕಿ ಈ ವರ್ಷ ಜಿಲ್ಲೆಯಲ್ಲಿ ಕಡಿಮೆ ಬೀಳುವುದೆಂದರು.

ಕೆನರಾ ಚೇಂಬರ್ ಆಫ್ ಕಾಮರ್ಸಿನವರು-

'ಅಕ್ಕಿಯ ಖಂಡಿತ ಬೆಲೆಯನ್ನು ನಿರ್ಧರಿಸಿರೆಂದು ನಮಗೆ ಒತ್ತಾಯ ಪಡಿಸಲಾಗುತ್ತಿದೆ. ಹಾಗೆ ಮಾಡಿದರೆ ನಮ್ಮ ಕೈಗೆ ಅಕ್ಕಿ ಬಾರದೆ ಮಿಲ್ ಮಜೂರರೆಲ್ಲ ಉಪವಾಸ ಬೀಳಬೇಕಾದೀತು. ಮಂಗಳೂರಲ್ಲಿ ದಾಸ್ತಾನು ಇದೆಯೆಂಬ ಮಾತು ಸುಳ್ಳು. ನಾವು ಲಾಭಕೋರರೂ ಅಲ್ಲ, ದಾಸ್ತಾನುಗಾರರೂ ಅಲ್ಲ. ಮುಡಿಯ ಮೇಲೆ ನಾಲ್ಕಾಣೆ ಇಲ್ಲವೆ ಆರಾಣೆ ಲಾಭಪಡಿಯುವುದು ಲಾಭಕೋರತನವೆ? ಕೊಂಡುಕೊಳ್ಳುವವನ ಶಕ್ತಿಯನ್ನು ಕುಂದಿಸಗೊಳಿಸಿ- ಅದಕ್ಕೆ ಹೊಸಗೆ ಪದ್ಧತಿಯೊಂದೇ ಪರಿಹಾರ ಮಾರ್ಗ," ಎಂದು ಕೆನರಾ ಮರ್ಚೆಂಟ್ ಸಂಘದ ಪರವಾಗಿ ಮಾತನಾಡುತ್ತ ಶ್ರೀ ರಾಘುವೇಂದ್ರ ಪೈ ಅವರು ಹೇಳಿದರು.

ಬೇರೆಹಲವರು ಮಾತನಾಡಿ ವಿವಿಧ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

'ದೆಸೆಂಬರ ಮಧ್ಯದೊಳಗೆ ೧೦,೦೦೦ ಮುಡಿ ಅಕ್ಕಿಯನ್ನು ಒಪ್ಪಿಸಲು ಯತ್ನಿಸುವೆವು. ಖಂಡಿತ ಬೆಲೆಯನ್ನು ನಿರ್ಧರಿಸಿ ಬಿಡಿರಿ. ಕಟ್ಟರೆಯಾಗಿರುವ ದಾಸ್ತಾನೆಲ್ಲ ಹೊರ ಬರುವುವು' ಎಂದು ಭೂಮಾಲಿಕ ಸಂಘದ ಕಾರ್ಯದರ್ಶಿ ಶ್ರೀ ಟಿ. ಸದಾನಂದ ಹೆಗ್ಡೆ ಅವರು ಹೇಳಿದರು. ಶ್ರೀ ನರ್ಸಪ್ಪಯ್ಯ, ಎ. ಜೆ. ರೋಬನ್ ಸಾಲ್ಡಾನಾ, ಎ. ಶ್ರೀ ... ಸೆಟ್ಟಿ ಮೊದಲಾದ ... ಮೇಲಿನ ಅಭಿಪ್ರಾಯಗಳನ್ನೇ ಸಮರ್ಥಿಸಿದರು.

ತಾ, ೨೪ರಂದು ಬೆಳಗ್ಗೆ ಸೆಂಟ್ರಲ್ ಕೋ-ಆಪರೇಟಿವ್ ಹೋಲ್‌ಸೇಲ್ ಸ್ಟೋರ್ಸ್, ಕೋ-ಆಪರೇಟಿವ್ ಎಗ್ರಿಕಲ್ಚರ ಸೊಸೈಟಿ, ಕೋ-ಆರೇಟಿವ್ ಹೋಲ್‌ಸೇಲ್ ಎಂಪೋರಿಯಂಗಳನ್ನು ಶ್ರೀ. ರಾಮಮೂರ್ತಿಯವರು ಸಂದರ್ಶಿಸಿದರು. ಅನಂತರ ಶ್ರೀಯುತರು ಎಂ. ಶಿವರಾವ್, ಎ. ಬಿ. ಸೆಟ್ಟಿ, ಕ್ಯಾಪ್ಟನ್ ಲೋಬೋ ಮತ್ತು ಡಾ. ಬಿ. ಶಿವ್ರಾವರಿಗೆ ಭೇಟಿಕೊಟ್ಟರು. ಶಿಷ್ಟ ಮಂಡಲಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಸ್ವೀಕರಿಸಲು ಅಧ್ಯಕ್ಷರು ಒಪ್ಪಲಿಲ್ಲ.

ಸಂಜೆ ೫|| ಘಂಟೆಗೆ ಕೆನರಾ ಚೇಂಬರ್ ಆಫ್ ಕಾಮರ್ಸಿನವರು ಶ್ರೀ| ರಾಮಮೂರ್ತಿಯವರನ್ನು ಕೆನರಾ ಹೈಸ್ಕೂಲಿನ ಅಂಗಣಕ್ಕೆ ಆಹ್ವಾನಿಸಿ, ಟೀ ಪಾರ್ಟಿ ಇತ್ತು ಸತ್ಕರಿಸಿದರು.

ಉಡುಪಿ ವರ್ಗದಾರ ಸಂಘದ ಭಿನ್ನವತ್ತಳೆ

ತಾ. ೨೫ರಂದು ಬೆಳಗ್ಗೆ ಶ್ರೀ ರಾಮಮೂರ್ತಿಯವರು ಉಡುಪಿಗೆ ಹೊರಟು ಹಾದಿಯಲ್ಲಿ ಗುರುಪುರದಲ್ಲಿ ಜಮೀನ್ದಾರರಿಂದ ಶ್ರೀಯುತರು ಬಲ್ಲಾಳ ಮತ್ತು ಮಾರ್ಲ ಇವರು ಸರಕಾರದೊಡನೆ ಸಹಕರಿಸುವುದಾಗಿ ಆಶ್ವಾಸನೆ ಕೊಟ್ಟರು. ಮೂಡುಬಿದ್ರೆಯಲ್ಲಿ ಶ್ರೀ| ಧರ್ಮಸಾಮ್ರಾಜ್ಯ ಅವರು ಸಂದರ್ಶಕರನ್ನು ಸ್ವಾಗತಿಸಿದರು. ಕಾರ್ಕಳದಲ್ಲಿ ಸಾರ್ವಜನಿಕ ಸಭೆ ಜರಗಿತು. ಜಮೀನ್ದಾರರ ಪರವಾಗಿ ಶ್ರೀಯುತರು ಕೆ. ಪಿ. ಶೇಷಗಿರಿ ಪ್ರಭು ಮತ್ತು ಬಿ ಜಾಮಾತರೂ ವಾಣಿಜ್ಯ ಸಂಘದ ಕಡೆಯಿಂದ ಶ್ರೀ| ಕೆ. ಜಿ. ಶೆಣೈ ಅವರೂ ತಮ್ಮ ಹವಾಲೆಗಳನ್ನು ಹೇಳಿಕೊಂಡರು. ಉಡುಪಿ ತಾಲೂಕಿನ ಗಡಿಯಿಂದ ಉಡುಪಿಯ ತನಕವೂ ಸಾಲುದ್ದಕ್ಕೆ ತೋರಣಗಳಿದ್ದುವು. ಪ್ರತಿಯೊಂದು ತೋರಣದಲ್ಲೂ 'ನಮ್ಮ ಅಕ್ಕಿಯನ್ನು ಸ್ವಾಧೀನ ಪಡಿಸಬೇಡಿ,' ಅಕ್ಕಿಯನ್ನು ಕೊಂಡು ಹೋಗಬೇಡಿ' ಇತ್ಯಾದಿ ಘೋಷಣೆಗಳು ಬರೆಯಲ್ಪಟ್ಟಿದ್ದುವು. ಉಡುಪಿಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಉಡುಪಿ ತಾಲೂಕು ವರ್ಗದಾರರ ಸಂಘದವರೊಪ್ಪಿಸಿದ ಮನೋರಂಜನವಿನಲ್ಲಿ ಕಳೆದ ವರುಷ ವರ್ಗದಾರರ ಅಕ್ಕಿಯನ್ನು ರೆಕ್ವಿಸಿಶನ್ ಮಾಡಿ ವ್ಯಾಪಾರಿಗಳ ಲಾಭ ಬಡಕತನಕ್ಕೆ ಯಾವ ಪ್ರತಿಬಂಧವನ್ನೂ ಒಡ್ಡದ ವಿಧ್ಯಮಾನವನ್ನು ಸವಿವರವಾಗಿ ಸಕಾರಣವಾಗಿ ನಿರೂಪಿಸಲಾಗಿತ್ತು, ಅದರಂತೆ ಈ ವರುಷವೂ ರೆಕ್ವಿಸಿಶನಿಂದ ಬೆಲೆ ನಿಯಂತ್ರಣವಾಗುವಂತಿಲ್ಲ. ಉಡುಪಿ ತಾಲೂಕಿನಲ್ಲಿ ನಿರ್ಧಿಷ್ಟ ಹಾಗೂ ಅವಿಧಿಷ್ಟವಾಗಿರುವ ವರ್ಗದಾರರಲ್ಲಿ ರೂ. 1ಕ್ಕೂ ಕಡಿಮೆ ತೀರ್ವೆ ಕೊಡುವವರು 6952. ರೂ.1ರಿಂದ ರೂ. 10ರ ವರೆಗಿನವರು 12037- ರೂ. 10ರಿಂದ 30ರ ವರೆಗಿನವರು 5003- ರೂ- 30ರಿಂದ 50ರ ವರೆಗಿನವರು 1805- ರೂ- 50ರಿಂದ 100ರ ವರೆಗಿನವರು 1238- ರೂ- 100ರಿಂದ 250ರ ವರೆಗೆ 667- ರೂ- 250ರಿಂದ 500ರ ತನಕ 188- ರೂ- 500ರಿಂದ 1000 ತನಕ 61 ಮಂದಿ- ಸಾವಿರಕ್ಕೆ ಮೇಲ್ಪಟ್ಟು ತೀರ್ವೆ ಕೊಡುವವರು 24 ವರ್ಗದಾರರು ಮಾತ್ರ- ಹೀಗೆ 27975 ವರ್ಗದಾರರಲ್ಲಿ ಸೇಕಡಾ ೯೦ರಷ್ಟು ಮಂದಿ ರೂ. 30ಕ್ಕೂ ಕಡಿಮೆ ತೀರ್ವೆ ಕೊಡುವವರಿದ್ದು ಅವರ ಉತ್ಪತ್ತಿಯು ಸ್ವಂತ ಖರ್ಚಿಗೇನೇ ಎಂದೂ ಸಾಕಾಗುವಂತಿಲ್ಲ- ರೆಕ್ವಿಸಿಶನ್ ಉದ್ದೇಶದಂತೆ, ತಪ್ಪು ಲೆಕ್ಕ ಹಿಡಿದು ಈ ತಾಲೂಕಿನ ಬೇಸಾಯಗಾರರಿಂದ 2 ಲಕ್ಷ ಮುಡಿಯನ್ನು ಪೇಟೆ ಪಟ್ಟಣಗಳಿಗೊಯ್ಯುವ ಅಂದಾಜಾಗಿದೆ. ಇಡೀ ಜಿಲ್ಲೆಯಿಂದ 12 ಲಕ್ಷ ಮುಡಿಯನ್ನು ಈ ಉದ್ದೇಶದಿಂದಲೇ ಒಯ್ಯಲಾಗುವದೆಂದು ತಿಳಿದು ಬರುತ್ತದೆ. ದಕ್ಷಿಣ ಕನ್ನಡದ ಜನ ಸಂಖ್ಯೆಯು ಸುಮಾರು 15 ಲಕ್ಷ. ಅವರಲ್ಲಿ ಹೆಚ್ಚೆಂದರೆ ಸೇಕಡಾ 10ರಷ್ಟು ಮಾತ್ರ ನಗರ ಅಥವಾ ಪೇಟೆಯಂತಹ ಸ್ಥಳಗಳಲ್ಲಿರುವವರು. ಇವರಿಗೆ 4 ಅಥವಾ 5 ಲಕ್ಷ ಮುಡಿಗಿಂತ ಹೆಚ್ಚಿಗೆ ಅಕ್ಕಿ ಬೇಕಾಗುವಂತಿಲ್ಲ. ಅಂದ ಮೇಲೆ ಹನ್ನೆರಡು ಲಕ್ಷವೇಕೆ? ಉಡುಪಿ ತಾಲೂಕಿನ ಒಟ್ಟು ಬೇಸಾಯ ಕ್ಷೇತ್ರವಾದ 73775 ಎಕ್ರೆಗಳಲ್ಲಿ, ಎಲ್ಲವುಗಳಲ್ಲೂ ಭತ್ತ ಬೆಳೆಯೇ ಸಮೃದ್ಧಿಯಾಗಿ ಬೆಳೆದರೂ ತಾಲೂಕಿನ 2½ ಲಕ್ಷ ಮಂದಿಗೆ 800745 ಮುಡಿ ಅಕ್ಕಿಗಿಂತ ಹೆಚ್ಚಿನ ಉತ್ಪತ್ತಿಯಿಲ್ಲ- ಅವುಗಳಲ್ಲಿ ಕಬ್ಬು ಮತ್ತು ಇತರ ಧಾನ್ಯಗಳು ಬೆಳೆಯುವ ಕ್ಷೇತ್ರಗಳಿವೆ. ಈ ವರುಷ ಬೆಳೆ ಸೇಕಡಾ 30ರಷ್ಟು ಹಾಳಾಗಿದೆ. ಹೀಗಿದ್ದೂ ನಗರವಾಸಿಗಳಿಗೆಂದು ಈ ತಾಲೂಕಿನಿಂದ ಎರಡು ಲಕ್ಷ ಮುಡಿಯನ್ನು ಕೊಂಡು ಹೋಗುವದು ತೀರಾ ಅನ್ಯಾಯ ಎಂದೆಲ್ಲಾ ಆ ಮನವಿಯಲ್ಲಿ ವಿವರಿಸಲಾಗಿತ್ತು. ಶ್ರೀ ಪಾಂಡು ರಂಗನಾಯಕರು ಮಾತನಾಡುತ್ತಾ 'ಉಡುಪಿ 'ಕಡಿಮೆ ಪೂರ್ತಿಕೆ'ಯ ತಾಲೂಕು; ಇಲ್ಲಿಂದ ಅಕ್ಕಿಯನ್ನು ಸ್ವಾಧೀನ ಪಡಿಸಿಕೊಳ್ಳಬಾರದು; ಇಲ್ಲಿಗೇ ಹೊರಗಿನಿಂದ ಆಮದು ಮಾಡಬೇಕು' ಎಂದು ಮುಂತಾಗಿ ಹೇಳಿದರು. ರಾಮಮೂರ್ತಿಯವರು ಅದು ಸಾಧ್ಯವಿಲ್ಲವೆಂದು ಅಸಹಾಯತೆಯನ್ನು ವ್ಯಕ್ತಪಡಿಸಿದರು. ವ್ಯಾಪಾರಿಗಳ ಪರವಾಗಿ ಶ್ರೀ| ಶಾನಭಾಗ್ ಕೃಷ್ಣರಾಯರು ಅಭಿಪ್ರಾಯಗಳನ್ನು ಹೇಳಿದರು. ಕುಂದಾಪುರದಿಂದ ಅಲ್ಲಿಗೆ ಬಂದಿದ್ದ ಶ್ರೀ| ಬಿ. ಶಿವರಾಮ ಶೆಟ್ಟಿ ಅವರು ಮಾತನಾಡಿ 'ನಮ್ಮ ಊರಿನ ಕಜೆ ಅಕ್ಕಿಗೆ ಮುಡಿಗೆ ೬||ರೂ- ಇಟ್ಟಿರುವುದು ಸರಿಯಲ್ಲ; ಹೆಚ್ಚು ಬೇಕು' ಎಂದರು.

ರಾಮಮೂರ್ತಿಯವರು ಅಲ್ಲಿಂದ ಕುಂಜಿಬೆಟ್ಟಿಗೆ ಹೋಗಿ ಭತ್ತ ಕುಟ್ಟುವ ಕೆಲಸವನ್ನು ನೋಡಿದರು. ಉಡುಪಿಯಲ್ಲಿ ಶ್ರೀ| ಫಲಿಮಾರು ಸ್ವಾಮಿಯವರು ಅವರಿಗೆ ಭೋಜನವನ್ನೇರ್ಪಡಿಸಿದರು. ಆ ರಾತ್ರಿಯೇ ಮಂಗಳೂರಿಗೆ ಮರಳಿದ ರಾಮಮೂರ್ತಿಯವರು ಜಿಲ್ಲಾ ಕಲೆಕ್ಟರರು ಏರ್ಪಡಿಸಿದ ಔತಣ ಕೂಟದಲ್ಲೂ ಭಾಗವಹಿಸಿದರು.

Sewing Mechine Needles.

Apents and Stockis's throughout India to sell Venus Sewing Machine Needles and their Parts. Hsghly Polished, Strong and more lasting than other needless in the Market Used with all kinds of Sewing Machines Terms liberal, No basiues. Guaranteed. Ask for Sample Box. Please correspond in English only.

M/G The American Trading (Engg- works) No- 49 Gurdaspur (Panjab)

CHAMPAE'S
SNOW & CASTREX
AGENTS:
SADANANDA STORES UDIPI

THE BEST PREVENTIVE IN EPIDEMICS OF
CHOLERA
"BHUVANENDRA"
CHANDRAMAS
Will give you the best results. Try once and be satisfied with the results.

Dose: For adults:- 3 to 5 drops 2 to 3 times a day with the decoction of cloves or ajwan.
For Children: 1 to 2 drops with the said decoction

Also a sovereign remedy for diarrhoea, Stomachache, Vomiting and Nausea

BHUVANENDRA PRODUCTS Ltd.

"ಭುವನೇಂದ್ರ"
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ.
ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.
ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ- ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್, ಕೆನರಾ ಲಿಂಗ್ ರೋಡ್, ... ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ;

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in 1920)

Registered Office: Court Road UDIPI South Canara District.

Business Offices: Udipi, Mangalore, Katapadi, Kanhangad and Kinnigoli South Canara

Authorised and Issued Capital: Rs 2,00,000/-

Subscribed and Paid up Capital: Rs 2,00,000/-

Reserve Funds: Rs. 1,75,851/-

Short term bills are discounted for approved parties. Loans and advances are made and overdrafts granted on fairly easy terms.

Deposits are accepted at favourable rates of interest. More than twenty-three years' reliable banking Service stands to our credit.

For further particulars please call at or apply to the nearest office.

Dated 31-10-1943.



ನಮ್ಮ ಸುವರ್ಣ ಮಹೋತ್ಸವ ಸಂಚಿಕೆಗೆ ದಯಮಾಡಿ ನಿಮ್ಮ ಸಹೃದಯ ಸಂದೇಶವನ್ನು ಕಳುಹಿಸಿ ಕೊಡಿರಿ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. 1-8-0 ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. 2-8-0

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಜನಪ್ರಿಯವಾದ ಕಿರಿಯರ ಪ್ರಪಂಚದ ಪ್ರಕಟಣೆಗಳು

ಮಧುವನ	೨	೮	೦	ರಂಗಭೂಮಿ	೦	೮	೦
ಪ್ರಕಾಶ	೧	೧೨	೦	ಸಂಶಯ ಪಿಶಾಚಿ	೦	೮	೦
ಭಾರತೀಯ ಕತೆಗಳು	೦	೧೪	೦	ಸೇವಾಪಥ	೦	೮	೦
ನಾರೀ ಹೃದಯ	೦	೧೪	೦	ಕುರುಲವ	೦	೬	೦
ದೇಶಭಕ್ತ	೦	೧೪	೦	ಹೆಂಡ್ತಿ ಗಂಡನಾದರೆ	೦	೪	೦
ಶಾನ್ತಿ ಸಾಮ್ರಾಜ್ಯ	೦	೧೨	೦	ಪುರುಷವಧು	೦	೪	೦
ಪ್ರೇಮ ವಿಜಯ	೦	೧೨	೦	ಸ್ವತಂತ್ರ ಜೀವನೋಪಾಯ	೦	೩	೦
ವ್ಯಭಿಚಾರಿಣೀ ಯಾರು	೦	೧೨	೦	ನಾಡಕತೆಗಳು	೦	೩	೦
ನಂದಾದೀಪ	೦	೧೦	೦	ಮುಂದಿನ ದೇವರು	೦	೩	೦
ಸನ್ಯಾಸಿಯ ಸೋಗಿನ	೦	೮	೦	ಮೂರು ಪ್ರಹಸನಗಳು	೦	೧೪	೦

ಕಿರಿಯರ ಪ್ರಪಂಚ, ಉಡುಪಿ

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರಿಸೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೩—೦—೦ ಪೋಸ್ಟ ಚಾರ್ಜ ೧೨ಆಣೆ.

ಮಾಲಿಕರು:—ಚಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ ಚಿಕ್ಕೋಡಿಯಲ್ಲಿ—ಕುಂಬರವಾಡಿ ಸ್ಟೋರ್ಸ ದಾವಣಗೇರಿ,—ದಾವಣಗೇರಿ ಪ್ರೆಸ್ಸ. ಆರ್. ಎಲ್. ಶಿವಲಿಂಗನ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ಸುಲಭ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲರ ಸಹಕಾರ ಅಪೇಕ್ಷಿಸುವುದು.

M. R. Punja, ಯಂ. ಆರ್. ಪೂಂಜ,

President & Manager ಪ್ರೆಸಿಡೆಂಟ್ ಮತ್ತು ಮೆನೇಜರ್.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಧರಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ** ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೩ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ,ಆಯುರ್ವೇದ ಭೂಷಣ ,ನಂ. 5 **ಕೊಡಿಯಾಲಬೈಲು, ದ.ಕ.**

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ : : : : ಮಂಗಳೂರು.

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.

ಹೆಡ್ ಆಫೀಸ್: ಮಂಗಳೂರು.

ಶಾಖೆಗಳು:

ಮಂಗಳೂರು, ಸಿಟಿ-ಮಂಗಳೂರು.

ಉಡುಪಿ, ಕಾರ್ಕಳ, ಕುಂದಾಪುರ.

ಕಾಪು, ಬ್ರಹ್ಮಾವರ, ಕಾಸರಗೋಡು,

ಪ್ರತಿ ಶಾಖೆಗಳಲ್ಲೂ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳು ಕೈಗೊಳ್ಳಲ್ಪಡುತ್ತವೆ.

The Vijaya Bank Ltd., Mangalore.

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1920

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.

Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. M. 3618.

Estd. 1921 ಸ್ಥಾಪನೆ.

ನವಯುಗ

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪ ಸಂಚಿಕೆ ೧೪

FOUNDER Sri. A. B. Shetty.

Vol 24 No. 14

NAVAYUGA— Kannada Weekly —UDIPI, S. I.

ಉಡುಪಿ • 9—12—1943 • ಮಂಗಳೂರು.

ಕರಿಯರ ಪ್ರಪಂಚದ ಹೊಸ ಪ್ರಕಟಣೆ

—ಪ್ರಕಾಶ—

ಸಾಮಾಜಿಕ—ರಾಜಕೀಯ ನಾಟಕ

ಮೂಲ ಲೇಖಕರ :—ಶೇಟ್ ಗೋವಿಂದ ದಾಸ್, ಎಂ ಎಲ್. ಎ. (ಸೆಂಟ್ರಲ್)

ಅನುವಾದಕಿ: ಶ್ರೀಮತಿ ಸರಸ್ವತಿ ಬಾಯಿ ರಾಜವಾಡ.

ಬೆಲೆ ರೂ. 1-12-0. ಟ. ಖ 0-1-0

ರೂ. 2ನ್ನು ಮನಿಯಾರ್ಡರ್ ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಲಕ ಕಳಿಸಲಾಗುವದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕರಿಯರ ಪ್ರಪಂಚದ
ಇನ್ನೊಂದು ಪ್ರಕಟಣೆ

ಭಾರತೀಯ ಕತೆಗಳು

ಸಣ್ಣ ಕತೆಗಳ ಸಂಗ್ರಹ

ಮೂಲ ಲೇಖಕರು— ಶ್ರೀ. ಎ ಎಸ್. ಪಂಚಾಪಕೇಶ ಐಯ್ಯರ್,
ಎಂ ಎ., ಐ ಸಿ. ಎಸ್., ಬಾರ್. ಎಟ್. ಲಾ., ಎಫ್. ಆರ್ ಎಸ್. ಎಲ್.,

ಅನುವಾದಕರು:— ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರು.

ಬೆಲೆ 0-14-0 ಟ. ಖ. 0-2-0

ರೂ. 1/ನ್ನು ಮನಿಯಾರ್ಡರು ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಲಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

Is Your Scholarship Protected?

Donors of some well-known scholarships insist that their recipients should be insured to the extent of the whole scholarship amount. Why is that? Because they do not wish that, should the recipient's lives be lost their monies too should be lost. When they can easily avoid such loss, they are determined to do so. Hence their insistence on insurance

Are not Parents too donors of scholarships to their children? Then should not they also insure them?

Is it not in the mutual interests of both parents and children to do so? It is

Parents should insure their children to the extent of the total amount of money required for their upkeep and education or students should prevail upon their parents to do so, especially, when it is a question of higher education and larger expenditure.

The Canara Mutual Assurance Co., Ltd.,
UDIPI.

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು
ಸಾರ್ವತ್ರಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸಮೀಪದವರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇದರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು..

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ ಕನ್ನಡ)

ಶಾಖಾ ಕಚೇರಿಗಳು—ಬೆಂಗಳೂರು, ಬೊಂಬಾಯಿ, ಮದ್ರಾಸ್
ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMABY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ [illegible] ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಜಳದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಿಗೆ ಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷದ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲ**ಕೋಟೆ:**— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ ದಾವಣಗೇರಿ:ದಾವಣಗೇರಿ ಪ್ರೆಸ್. [ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ.

ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda Oushadalaya, GADAG.

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೩೯ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹಳ ಅಪಾಯಗಳಿಂದಲೂ ಹಾಗೂ ಕುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನ್ನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ತೀವ್ರನೆ ಮುಂದುವರಿದವು.

೧೯೪೦, ೪೧ರಲ್ಲಿ ಕೆನರಾ ಬೇಂಕು ೫೦ ಲಕ್ಷ ಠೇವಣಿಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯುಳ್ಳದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣಿಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡು ವರೆ ಕೋಟಿಗೆ ಏರಿದೆ. ಹಾಗೂ ತೆತ್ತ ಮೂಲಧನವು ನಾಲ್ಕಡಿಯಾಗಿದೆ.

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮವಿಶ್ವಾಸದಿಂದಲೂ, ದೃಢಬುದ್ಧಿಯಿಂದಲೂ, ಯೋಗ್ಯಸೇವೆಯನ್ನು ಸಲ್ಲಿಸಿದರಿಂದಲೂ, ಇಂದಿನ ಈ ಪ್ರಗತಿಗೆ ದಕ್ಷಿಣ ಭಾರತದ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ವಿಶ್ವಾಸದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

CANARA BANK LIMITED.

ಕೆನರಾ ಬೇಂಕ್ ಲಿಮಿಟೆಡ್.

ಸ್ಥಾಪನೆ 1906.

ನಾಲ್ವರಿದ್ದರೇನು? ಸೇರಿದುದು ಮೂರುಮೂರೇ!

ಕೈರೋ ಸಮ್ಮೇಲನ.

ಚರ್ಚಿಲ್-ರುಸವೆಲ್ಟ್- ಚಿಯಾಂಗ್ ಕೈಶೇಕರು ನವಂಬರಾಂತ್ಯದಲ್ಲಿ ಉತ್ತರಾಫ್ರಿಕದಲ್ಲಿ-ಕೈರೋ ನಗರದಲ್ಲಿ ಒಟ್ಟಾದರು. ೫ ದಿನಗಳ ಗುಪ್ತ ಸಮ್ಮೇಲನ ನಡೆಯಿತು. ದಶಂಬರ್ ತಾ. 1ರಲ್ಲಿ ಸಮ್ಮೇಲನದ ಫಲಶ್ರುತಿಯಾದ ಪ್ರಕಟಣೆ ಹೊರಬಿತ್ತು:-- ''ಯುದ್ಧ ಕಾರ್ಯ ರೀತಿಯು ಅಂಗೀಕಾರವಾಯಿತು. ಮೂರು ಮಹಾಮಿತ್ರ ರಾಷ್ಟ್ರಗಳು ತಮ್ಮ ಪಾಶವಿಕ ವೈರಿಗಳ ಮೇಲೆ ನೆಲ, ಜಲ, ಆಕಾಶದ ಮೂಲಕ ಒತ್ತುವ ನಿರ್ಧಾರ ಮಾಡಿದವು. ಈ ಒತ್ತಡವು ಇಷ್ಟರಲ್ಲೇ ಎದ್ದಿದೆ. ಈ ಮೂರು ಮಹಾ ಮಿತ್ರ ರಾಷ್ಟ್ರಗಳು ಆಕ್ರಮಣಗಾರ ಜಾಪಾನನ್ನು ತಡೆದು ಶಿಕ್ಷಿಸುವದಕ್ಕಾಗಿಯೇ ಹೋರಾಡುತ್ತಿವೆ ಹೊರತು ತಮ್ಮ ಲಾಭಕ್ಕಾಗಿ ಅಥವಾ ಹೆಚ್ಚಿನ ಸ್ಥಳಾಭಿಲಾಷೆಯಿಂದಲ್ಲ. ಜಾಪಾನು ಚೀನದಿಂದ ಕದ್ದುಕೊಂಡ ಮಂಚೂರಿಯಾ, ಫೋರ್ಮೋಸಾ, ಪೆಸ್ಕೆಡೋರ್ಸ್‌ನಂತಹ ಸ್ಥಳಗಳನ್ನು ಕಸಗೊಂಡು ಚೀನಕ್ಕೊಪ್ಪಿಸುವ ಮತ್ತು 1914ರ ಪ್ರಥಮ ಮಹಾಯುದ್ಧದ ನಂತರ ಅದು ಆಕ್ರಮಿಸಿಕೊಂಡ ಅಥವಾ ನೆಲೆನಿಂತ ಶಾಂತ ಸಮುದ್ರದ ಎಲ್ಲಾ ದ್ವೀಪಗಳನ್ನು ಜಾಪಾನರಿಂದ ಕಿತ್ತುಕೊಳ್ಳುವ ಉದ್ದೇಶ ನಮ್ಮದು. ಜಾಪಾನು ಹಿಂಸೆ ಅಥವಾ ಅನ್ಯಾಯದಿಂದ ಆಕ್ರಮಿಸಿಕೊಂಡ ಎಲ್ಲಾ ಸ್ಥಳಗಳಿಂದಲೂ ಅದನ್ನು ಹೊರಗಟ್ಟಲಾಗುವದು. ಕೊರಿಯಾದ ಜನರ ದಾಸ್ಯ ಬಂಧನದ ಅರಿವು ನಮಗಿದೆ. ಯೋಗ್ಯ ಕಾಲದಲ್ಲಿ ಕೊರಿಯಕ್ಕೆ ಸ್ವಾತಂತ್ರ್ಯದಾನ ಮಾಡುವ ನಿರ್ಧಾರ ಮಾಡಿದ್ದೇವೆ. ಸಂಯುಕ್ತ ಮಿತ್ರ ರಾಷ್ಟ್ರಗಳು ಜಾಪಾನು ನಿಶ್ಶರ್ತ ಶರಣು ಬರುವ ವರೆಗೂ ಯುದ್ಧ ಮುಂದೊತ್ತುವವು".

ಟೆಹರಾನ್ ಸಮ್ಮೇಲನ.

ಕೈರೋ ಸಮ್ಮೇಲನ ಮುಗಿಸಿದ ಚರ್ಚಿಲ್ ರುಸವೆಲ್ಟರು ಚಿಯಾಂಗ್ ದಂಪತಿಗಳನ್ನು ಅಲ್ಲಿಯೇ ಬಿಟ್ಟು ಇರಾನಿಗೆ ಹೊರಟರು. ಜನರಲಿಸಿಮೋ ಚಿಯಾಂಗ್ ಕೈಶೇಕರು ಚುಂಕಿಂಗಿಗೆ ಮುಟ್ಟುವಾಗ ಚರ್ಚಿಲ್ ರುಸವೆಲ್ಟರು ಇರಾನಿನ ಟೆಹರಾನ್ ಸೇರಿದ್ದರು. ಮಾರ್ಶಲ್ ಸ್ಟಾಲಿನರು ಅಲ್ಲಿ ಇವರ ಬರೋಣವನ್ನು ಕಾಯುತ್ತಾ ನಿಂತಿದ್ದರು. ಅಲ್ಲಿ ಮತ್ತೊಂದು ತ್ರಿಮೂರ್ತಿ ಸಮ್ಮೇಲನವಾಯಿತು. 'ಯುದ್ಧ ಮತ್ತು ರಾಜಕೀಯ ಸಂಬಂಧ ಚರ್ಚೆ ನಡೆದು ನಿರ್ಧಾರವಾಯಿತು' ಎಂದು ಪ್ರಕಟವಾಗಿದೆ. ಬ್ರಿಟನಿನಲ್ಲಿ ಜಮೆಯಿರುವ ಸೇನೆಗಳನ್ನು ಪಶ್ಚಿಮ ಕಡೆಯಿಂದ ನೂಗಿಸುವ ದ್ವಿತೀಯ ರಂಗಾರಂಭಕ್ಕೆ ಹತ್ತಿರದ ದಿನ ನಿರ್ಧಾರ--ಇದಕ್ಕೆ ಹೊಂದಿಕೆಯಾಗಿ ರಶ್ಯ ಮತ್ತು ಭೂಮಧ್ಯ ಸಮುದ್ರದ ಯುದ್ಧಗಳನ್ನು ಬಲಗೊಳಿಸುವದು-- ಇದಕ್ಕನುಸಾರವಾಗಿ 'ನಾಜೀ ಸರಕಾರವನ್ನು ಕಿತ್ತೊಗೆಯಿರಿ-- ಇಲ್ಲವೇ ಪರಿಣಾಮವನ್ನನುಭವಿಸಿರಿ' ಎಂದು ಜರ್ಮನ್ ಜನತೆಗೆ ಮೊದಲ ಎಚ್ಚರಿಕೆ ಕೊಡಬೇಕು— ಜರ್ಮನಿಯ ಮೇಲೆ ಇನ್ನಷ್ಟು ಉಗ್ರ ಆಕಾಶ ಧಾಳಿ ಮಾಡಬೇಕು--ಬಳಿಕ ಬರಿತ್ವಾ ಪೂರ್ವ ನೆಲಧಾಳಿಯನ್ನಾರಂಭಿಸಬೇಕು, ಎಂದು ಆ ಸಮ್ಮೇಲನದಲ್ಲಿ ನಿರ್ಧಾರವಾಗಿದೆ. ಬಾಲ್ಕನಿನ ಮಿತ್ರಾಕ್ರಮಣ ಹೂಡಬಹುದೆಂಬ ಊಹೆಯೂ ಎದ್ದಿದೆ. ಕೆಲವು ಪ್ರಾಮುಖ್ಯ ರಾಜಕೀಯ ಸಂಬಂಧಗಳ ನಿರ್ಣಯವೂ ಆಯಿತಂತೆ.

ಅಪೂರ್ವ--ಅತಿಗುಪ್ತ.

ಈ ವರೆಗೂ ಚರ್ಚಿಲ್, ರುಸವೆಲ್ಟ್, ಚಿಯಾಂಗ್ ಸಮ್ಮೇಲನವಾಗಲೀ, ಚರ್ಚಿಲ್, ರುಸವೆಲ್ಟ್, ಸ್ಟಾಲಿನ್ ಕೂಟವಾಗಲೀ ನಡೆದುದಿಲ್ಲ. ಇನ್ನು ಬಾಕಿಯುಳಿದುದೆಂದರೆ ಚರ್ಚಿಲ್, ರುಸವೆಲ್ಟ್, ಸ್ಟಾಲಿನ್, ಚಿಯಾಂಗ್--ಚತುರ್ಮುಖೀ ಪರಿಷತ್ತು ಮಾತ್ರ! ಆದರೆ ಸ್ಟಾಲಿನರು ಕೈರೋವಿಗೆ ಬರಲಿಲ್ಲ; ಕೈಶೇಕರು ಟೆಹರಾನಿಗೆ ಹೋಗಲಿಲ್ಲ. ಯಾಕೆ? ಚಿಯಾಂಗರೊಡನೆ ಕುಳಿತರೆ ಜಾಪಾನೀ ವಿರುದ್ಧ ಸಾಲಲ್ಲಿ ಕುಳಿತಂತಾಗುವದರಿಂದ ಜಾಪಾನರೊಡನೆ ಅನಾಕ್ರಮಣ ಒಪ್ಪಂದದಲ್ಲಿರುವ ತಾನದಕ್ಕೀಗ ಸಿದ್ಧನಿಲ್ಲವೆಂದು ಸ್ಟಾಲಿನರೆಂದಿರಬಹುದು. ಅಂದಮೇಲೆ ಚಿಯಾಂಗ್-- ಸ್ಟಾಲಿನರನ್ನು ದೂರ ದೂರ ಕುಳ್ಳಿರಿಸಿ ಅವರೊಡನೊಮ್ಮೆ ಇವರೊಡನೊಮ್ಮೆ, ಅದೂ ಇರಾನ್ ಉತ್ತರಾಫ್ರಿಕದಂತಹ ಪೂರ್ವ ವಲಯಗಳಲ್ಲಿ ಈ ಮಿತ್ರಬೈಠಕ ಮಾಡಿದುದೇನು? ದ್ವಿತೀಯ ರಂಗ, ಭಾವೀ ರಾಜಕೀಯ ವ್ಯವಸ್ಥೆಗಳ ಆಸ್ತಿಭಾರವನ್ನು ಈಡನ್, ಹಲ್, ಮೊಲೊಟೊವರ ಪರಿಷತ್ತು ಹಾಕಿದ್ದಿತು. ಅದಕ್ಕೆ ಗೋಡೆ ಮಾಡೇರಿಸಿ ಕಳಶವಿಡುವ ಮೂರು ಮುಖಂಡರ ಕೂಟವು ಹೀಗೆ ಅಲ್ಲೊಮ್ಮೆ ಇಲ್ಲೊಮ್ಮೆ ಹರಿಣ ನೆಗೆತದಂತೆ ನಡೆಯಬೇಕಾಗಿರಲಿಲ್ಲ. ಏನೋ ಒಂದು ಗುಪ್ತ ಮಹಿಮಾಟ ಇದರಲ್ಲಿರಬೇಕೆಂಬುದು ಸ್ಪಷ್ಟವಲ್ಲವೆ?

ಅದೇನು?

ಹಿಟ್ಲರನ ಅವಸಾನವಾಗದೆ ಜಾಪಾನರಿಗೆ ಮೃತ್ಯುಹೊಡೆತ ಕೊಡಲಾಗುವದಿಲ್ಲವೆಂಬುದು ಮಿತ್ರರ ಪ್ರಕಟಿತ ನಿರ್ಧಾರ. ಹಿಟ್ಲರನ ಅವಸಾನವಂತೂ ಬೇಗನೇ ಆಗುವಂತಿಲ್ಲವೆಂಬುದು ಇಟೆಲಿ ಯುದ್ಧ--ರಶ್ಯಾ ಯುದ್ಧಗತಿಗಳಿಂದ ಸುವ್ಯಕ್ತ. ಮುಂದಿನ ದೀರ್ಘಾವಧಿಯು ಹಿಟ್ಲರನಿಗೋಸ್ಕರ ವ್ಯಯವಾಗುವಾಗ ಆ ಅವಧಿಯಲ್ಲಿ ಜಾಪಾನು ಭೇತಾಳ ರೂಪದಿಂದ ಬೆಳೆಯಬಹುದು. ಹಿಟ್ಲರನ ಮುಕ್ತಾಯಮಗ್ನರಾಗಿರುವಾಗಲೇ ಜಾಪಾನರ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತಿರಬೇಕು. ರಶ್ಯವು ವ್ಲಾಡಿವೋಸ್ತಕನ್ನು ಕೊಟ್ಟರೆ ಅಲ್ಲಿಂದ 600 ಮೈಲು ಮಾತ್ರವಿರುವ ಜಾಪಾನನ್ನು ಆಕಾಶ ಧಾಳಿಯಿಂದ ಹಣ್ಣು ಮಾಡಬಹುದು. ಚರ್ಚಿಲ್ ರುಸವೆಲ್ಟರು ಅದನ್ನು ಕೇಳುವದಕ್ಕಾಗಿಯೇ ಚಿಯಾಂಗರೊಡನೆ ವಿಚಾರಿಸಿ ಸ್ಟಾಲಿನರ ಬಳಿಗೆ ಹೋಗಿರಬಹುದೆ? ಯುರೋಪಿನಲ್ಲಿ ದ್ವಿತೀಯ ರಂಗ ತೆರೆಯುವದೆಂದರೆ ಈ ತನಕ ರಶ್ಯದ ಮೇಲೆ ಮಾತ್ರ ಬಿದ್ದಿರುವ ನಾಜೀ ಸೇನೆಯ ಭಾರದ ಬಹುಭಾಗವನ್ನು ಇಂಗ್ಲಾಂಡು ಅಮೇರಿಕಗಳು ಹೊತ್ತುಕೊಳ್ಳುವದೆಂದರ್ಥ. ಅಲ್ಲಿ ನಿಮ್ಮ ಭಾರವನ್ನು ನಾವು ಹೊರುತ್ತೇವೆ; ಇಲ್ಲಿ ಜಾಪಾನೀ ವಿಭಾಗದ ನಮ್ಮ ಭಾರವನ್ನು ನೀವು ಸ್ವಲ್ಪ ಹೊತ್ತುಕೊಂಡು ಪರಸ್ಪರ ಸುಧಾರಿಸಿಕೊಳ್ಳುವ ಎಂದು ಚರ್ಚಿಲ್ ರುಸವೆಲ್ಟರು ಸ್ಟಾಲಿನರೊಡನೆ ಹೇಳಿರಬಹುದು.

ಗುಟ್ಟಿನೊಳಗಿನ ಗೂಢ.

ಈ ಗುಟ್ಟಿನೊಳಗೂ ಒಂದು ಅಂತರಂಗವಿದೆ. ನಾಜೀ ಸೇನೆಯ ಟೊಂಕ ಮುರಿದ ಈ ಸೋವಿಯೆಟ್ ರಶ್ಯದ ಪ್ರಭಾವ ಇಷ್ಟರಲ್ಲೇ ಹೆಚ್ಚಿದೆ. ಇನ್ನು ದ್ವಿತೀಯ ರಂಗ ತೆರೆದರೆ ವಿಕ್ರಮಿ ರಶ್ಯಕ್ಕೆ ವಿಜಯದಾನ ಮಾಡಿದ ಹಾಗೆ-- ಸಮತಾವಾದಿ ರಶ್ಯಕ್ಕೆ ಸರ್ವ ಪ್ರಥಮ ಸ್ಥಾನ ಸಂಪಾದಿಸಿಕೊಟ್ಟ ಪ್ರಮಾದ— ತಪ್ಪಾದಾಗಬಹುದೆಂದು ಇಂಗ್ಲಾಂಡು ಅಮೇರಿಕಗಳು ಒಳಗಿಂದೊಳಗೆ ಹೆದರುತ್ತಿವೆ. ಮೈ ಮೇಲೆ ಹಾಕಿಕೊಂಡು ಹಿಸುಕಿ ಕೊಲ್ಲುವಷ್ಟು ಹಿಟ್ಲರನು ಇಂದು ಕೂಡಾ ಬಡಕಲಾಗಿಲ್ಲ; ಅಂಬ ಮೇಲೆ ರಶ್ಯದಿಂದ ಅವನನ್ನು ತಮ್ಮಲ್ಲಿಗೆಳೆದುಕೊಳ್ಳುವದೆಂದರೆ ಅಪಾಯವನ್ನು ಅಂಗೀಕರಿಸಿಕೊಂಡಂತೆಯೇ. ಹಾಗೆಂದು ಅದನ್ನು ಇನ್ನೂ ಮುಂದುವರಿಸುವದಸಾಧ್ಯ. ಹಿಟ್ಲರನನ್ನು ಹಿಂದೂಡಲು ಕಲಿತ ರಶ್ಯವು ತನ್ನ ಗಡಿಯ ವರೆಗೆ ಮಾತ್ರ ಹೋರಾಡಿ ಶಸ್ತ್ರ ಕೆಳಗಿಟ್ಟರೆ ಆ ಮೇಲೆ ತಮಗೊದಗುವ ಅಪಾಯ ಇನ್ನಷ್ಟು ದೊಡ್ಡದು. ಅಂತೂ ಇಂದಿನ ಯುದ್ಧ ಮೇರೆಯೊಳಗೆ ಯಾವ ಪರಿಸ್ಥಿತಿಯಿದಿರಾದರೂ, ಎದೆಗೊಡಬಲ್ಲೆನೆಂಬ ಆತ್ಮ ವಿಶ್ವಾಸ ಮತ್ತು ಹಂಚಿಕೆಯಲ್ಲಿ ರಶ್ಯವಿದೆ. ರಶ್ಯದ ದಾರುಣಾಧ್ಯಾಯದ ಮುಕ್ತಾಯವು, ಇಂಗ್ಲಾಂಡು ಅಮೇರಿಕಗಳ ಕಠಿಣ ಪರೀಕ್ಷಾಂಕದ ಆರಂಭವಾಗುತ್ತಿರುವ ಸಂಧಿಕಾಲವಿದು. ಈ ಭಿನ್ನತೆಯನ್ನು ಮಾಯಗೊಳಿಸಿ ಸಮಾನ ಸಾಲಲ್ಲಿ ನಿಲ್ಲಿಸುವದಕ್ಕಾಗಿಯೇ ಚರ್ಚಿಲ್ ರುಸವೆಲ್ಟರು ಸ್ಟಾಲಿನರನ್ನು ಸಂಧಿಸಿರಬೇಕೆಂಬುದು ನಿಶ್ಚಯ.

ಇಲ್ಲಿಯೂ ಸ್ಟಾಲಿನ್ ವಿಜಯ.

ಆದರೆ ಟೆಹರಾನಿನಲ್ಲಿ ಸ್ಟಾಲಿನ್ ಘೋಷಣೆಯೇ ವಿಜಯಿಯಾದಂತೆ ಕಾಣುತ್ತಿದೆ. ದ್ವಿತೀಯರಂಗದ ಪೂರ್ಣ ರೂಪ ಮತ್ತು ದಿನ ನಿಶ್ಚಯ ಕೂಡಾ ಟೆಹರಾನಿನಲ್ಲಾಯಿತೆಂದೂ, ಬೇಸಿಗೆ ಕಾಲದೊಳಗೆ ಅದರ ಆರಂಭ ನಿಶ್ಚಯವೆಂದೂ ಪ್ರಕಟವಾಗಿದೆ. ಜರ್ಮನಿಯ ಪೂರ್ಣ ಪರಾಜಯವನ್ನು ಸಾಧಿಸಿದ ಮೇಲೆ, ಜಾಪಾನನ್ನು ಸೋಲಿಸುವ ಸುಲಭ ಕಾರ್ಯದಲ್ಲಿ ಸಹಕರಿಸಲು ರಶ್ಯವೂ ಒಪ್ಪಿರಬಹುದು. ಅಂತೆಯೇ ಅತ್ತ ದ್ವಿತೀಯ ರಂಗವಾರಂಭವಾರಂಭವಾಗುವಾಗ, ಇತ್ತ ರಶ್ಯದಲ್ಲಿ ನಾಜಿಗಳಿಗೆ ಇನ್ನಷ್ಟು ಬಲವಾದ ತಾಡನ ಕೊಡುವ ಯೋಜನೆಗೆ ಸ್ಟಾಲಿನರ ಸಂತೋಷದ ಸಮ್ಮತಿ ದೊರೆತಿರಬೇಕು. ಇವೆಲ್ಲಾ ಒಳಾಂದೋಲನವನ್ನು ಮುಚ್ಚಿಟ್ಟು ಕೈರೋವಿನಲ್ಲಿ ಜಾಪಾನರನ್ನು ಸೋಲಿಸುವ ಹಂಚಿಕೆ, ಟೆಹರಾನಿನಲ್ಲಿ ಜರ್ಮನ್ ಪರಾಭವದ ಯೋಜನೆ ತಯಾರಾಯಿತೆಂದಿಷ್ಟೇ ಅಧಿಕೃತ ಪ್ರಕಟಣೆ ಹೇಳುತ್ತಿದೆ. 'ಮಿತ್ರರಲ್ಲಿ ಒಮ್ಮತವಾಗಲಿಲ್ಲ' ಎಂದು ಜರ್ಮನ್ ರೇಡಿಯೋ ಎಲ್ಲರಿಗಿಂತ ಮುಂದಾಗಿ ಪ್ರಕಟಿಸಿದುದು ಈ ಗುಟ್ಟನ್ನು ತಿಳಿದೇ. ಬಹಳ ಗುಪ್ತವಾಗಿ ನಡೆಸಿದ ಕೈರೋ ಸಮ್ಮೇಲನದ ವಾರ್ತೆಯು 'ರೂಟರ್' ಬಾತ್ಮೀದಾರರ ಮೂಲಕ ಹೇಗೋ ಮುಂದಾಗಿ ವಾಷಿಂಗ್ಟನಿನಲ್ಲಿ ಪ್ರಕಟವಾಯಿತು. ಅದು ಬ್ರಿಟಿಷ್ ವಾರ್ತಾ ಸಂಸ್ಥೆಯಿಂದ ಲಂಡನ್ ಮಾರ್ಗವಾಗಿ ಹೋದುದಾದರೂ ವಾರ್ತಾ ನಿರ್ಬಂಧದಂತೆ ಲಂಡನಿಗೂ ಸುದ್ದಿ ತಿಳಿಯಲಿಲ್ಲ. ಟೆಹರಾನ್ ಸಮ್ಮೇಲನದ ವಾರ್ತೆಯನ್ನು ಮೋಸ್ಕೋ ರೇಡಿಯೋ ಮಾತ್ರ ಪ್ರಕಟಿಸಿತು. ಲಂಡನ್ ವಾಷಿಂಗ್ಟನುಗಳಿಗೆ ಆ ಭಾಗ್ಯವಿಲ್ಲ. ಇಂತಹ ಪ್ರಾಮುಖ್ಯ ವಾರ್ತೆಗಳು ಹೀಗೆ ಅಲ್ಲಲ್ಲಿ ಸೋರಿ ಹೋಗದಂತೆ ಮುಂದಕ್ಕಾದರೂ ಜಾಗ್ರತೆ ವಹಿಸಬೇಕೆಂಬ ಚಳವಳವೆದ್ದಿದೆ. ಅಂತೂ ಯುದ್ಧದ ಕೊನೆಯಂಕದ ತೆರೆಯು ಪರಿಸ್ಥಿತಿಯ ಒತ್ತಡದಿಂದಾಗ ಕೂಡಲೇ ಎತ್ತಲ್ಪಡುವ ಲಕ್ಷಣಗಳು ಕಾಣುತ್ತಿವೆ.

NAVAYUGA ENTERPRISE LIMITED, UDIPI.

Glad to announce to the public that permission to issue the remaining shares of the Company has been granted by the Examiner of Capital Issues, Finance Department New Delhi in his Order No. D/3805 – FCI/43 dated 6th November 1943.

Those desirous of going in for shares need apply soon since the issues are to be closed within the limited time.

UDIPI, 6–12–43.

K. H. Shetty,
Managing Director.

NAVAYUGA PRESS, UDIPI.

PROPRIETORS,
NAVAYUGA ENTERPRISE LIMITED.
DIRECTORS.

Sri. K. J. Ballal, B. A., LL. B., Vakil, Udipi. (*Chairman*).
Sri. M. S. Pejathaya, *Agent*, Palimar Mutt, Udipi
Sri. Balkattabeedu Krishnaya Hegde, Landholder, Athrady,
Sri. K. Honnayya Shetty, *Prop*: 'Navayuga'
(*Managing Director*.)

CHAMPAE'S
Snow & Castrex
Agents:—
Sukhananda Stores
Santhekatte, UDIPI, S. K.

ಕಲ್ಕತ್ತದ ಮೇಲೆ ಹಗಲುಧಾಳಿ.

ದಶಂಬರ ತಾ. ೫ರಲ್ಲಿ ಹಗಲಲ್ಲೇ ಕಲ್ಕತ್ತದ ಮೇಲೆ ಜಪಾನರ ವಿಮಾನ ಧಾಳಿ ನಡೆಯಿತು. "ಜಪಾನಿ ವಿಮಾನಗಳು ಈ ದಿನ ಕಲ್ಕತ್ತ ವಲಯದಲ್ಲಿ ಧಾಳಿ ನಡಿಸಿದವು. ಹಲವು ಬಾಂಬುಗಳೂ ಬಿದ್ದಿವೆ. ಅಲ್ಪ ಸೊತ್ತು ನಾಶ ಮತ್ತು ಕೆಲವು ಪ್ರಾಣ ಹಾನಿಯಾಗಿವೆ"–ಎಂದು ಅಧಿಕೃತ ಪ್ರಕಟಣೆಯಿದೆ. ಕಲ್ಕತ್ತದ ಮೇಲೆ ಹಗಲಲ್ಲೇ ಧಾಳಿಯಾದುದು ಇದೀಗ ಮೊದಲ ಬಾರಿ. ಕಳೆದ ದಶಂಬರ ಮತ್ತು ಜನವರಿಯಲ್ಲಿ ಜಪಾನರ ಇಂತಹ ಪ್ರಯತ್ನವನ್ನೆಲ್ಲಾ ವಿಫಲಗೊಳಿಸಲಾಗಿತ್ತು. ಈ ಬಾರಿ ಹಾಗಾಗಲಿಲ್ಲವೇಕೆ? ಜಪಾನರು ಬಲಗೊಂಡರೆ? ಅಥವಾ ಕಲ್ಕತ್ತದ ನಡುಹಗಲೂ ಈಗ ರಾತ್ರಿಯಂತಾಗಿದೆಯೆ?

ಸಂಧಿ ಸಲ್ಲಾಪ.

ಒಂದೆರಡು ವಾರಗಳಿಂದ ಸಂಧಾನ ಮಾತುಕತೆಯ ದಟ್ಟ ವದಂತಿ ಹಬ್ಬಿದೆ. ಟರ್ಕಿಯಲ್ಲಿ ಜರ್ಮನ್ ರಾಯಭಾರಿಯಾಗಿದ್ದ ವ್ರೋನ್ ಪೇಪನರೇ ಮೊದಲಾದವರು ರೋಮಿಗೆ ಹೋದುದು ಸಂಧಿ ಸಲ್ಲಾಪಕ್ಕೆಂದಾ ವಾರ್ತೆಯೆದ್ದಿತು. ಈಗ ಜರ್ಮನ್ ವಿದೇಶ ಮಂತ್ರಿ ರಿಬ್ಬೆಂಟ್ರಾಪರು ಲಿಸ್ಬನಿಗೆ ಅದಕ್ಕಾಗಿಯೇ ಬಂದಿದ್ದಾರೆಂಬ ಸುದ್ದಿ ಸುಳಿದಿದೆ. ಲಿಸ್ಬನಿನಲ್ಲಿ ಜರ್ಮನ್ ವಿದೇಶ ಮಂತ್ರಿಯನ್ನು ಕಣ್ಣಾರೆ ಕಂಡೆದ್ದೇವೆನ್ನುವವರೂ ಇದ್ದಾರೆ. ಜರ್ಮನರೂ ಇತರ ಸಂಬಂಧಿಕರೂ ಈ ಗಾಳೀ ಸುದ್ದಿಗಳನ್ನು ಆಗಾಗ ಅಲ್ಲಗಳೆದಿದ್ದಾರಾದರೂ, ಒಂದು ಬಿದ್ದೊಡನೆ ಮತ್ತೊಂದರಂತೆ ನವನೂತನ ವಾರ್ತೆಗಳೇಳುತ್ತಿವೆ. ನಾಯುವದಕ್ಕಾಗಿಯೇ ಹುಟ್ಟಿದ ಬಂಗಾಳಿಗಳ ಸಾಲಲ್ಲಿ ಈ ಸಂಧಾನ ಸುದ್ದಿಗಳನ್ನೂ ಸೇರಿಸಬಹುದು!

ಜೈಲು ಕಾಹಿಲೆ.

ಕಸ್ತೂರಿ ಭಾ ಗಾಂಧಿಯವರು ಆಗಾಖಾನ್ ಅರಮನೆಯಲ್ಲಿ ಕಠಿಣ ಕಾಹಿಲೆಯಲ್ಲಿದ್ದಾರೆ. ಅವರ ಪರಿಸ್ಥಿತಿ ಚಿಂತಾಜನಕವಿದೆ. ಆಗಾಗ ಹೃದಯ ವೇದನೆ ತಲೆ

ಸ್ಥಿತಿಗತಿ

ದೋರುತ್ತಿದೆಯೆಂದು ವಾರ್ತೆ. ರೋಗಶಯ್ಯೆಯಲ್ಲಿರುವ ಮಾತೆಯ ಭೇಟಿ ಪಡೆಯಲು ಶ್ರೀ ದೇವದಾಸ ಗಾಂಧಿಯವರು ಭಾರತ ಸರಕಾರಕ್ಕೆ ಬರಕೊಂಡಂತೆ, ಭಾರತ ಸರಕಾರವು ಬೊಂಬಾಯಿ ಸರಕಾರದೊಡನೆ ಪರ್ಯಾಲೋಚನೆ ನಡಿಸಿ ಅನುಮತಿಯಿತ್ತಿದೆ. ಇಷ್ಟೊಂದೆಡೆ ಸೆರೆಬಂಧದಲ್ಲಿರುವ ಮಹಾದೇವಿಯವರೂ ತೀರಾ ನಿತ್ರಾಣಗೊಂಡಿದ್ದಾರೆಂದೂ, ಪುತ್ರರು ಅವರ ಭೇಟಿಗೆ ಬಂದ ಉಪಪ್ರಾನಿಸಬಾರದೆಂದೂ ಡಾಕ್ಟರರ ಪ್ರಕಟಣೆಯಿದೆ. ಗಡಿನಾಡಿನ ಗಾಂಧಿ ಗಫರ್ ಖಾನರ ಪ್ರಕೃತಿಯ ಕುರಿತು ಈ ಮೊದಲೊಮ್ಮೆ ಆತುರಪಟ್ಟಿತ್ತು. ವಲ್ಲಭಾಯಿ ಮೊದಲಾದವರ ಅನಾರೋಗ್ಯದ ವಾರ್ತೆಗಳೂ ಆಗಾಗ ಮಿಂಚು ಸುಳಿದಂತೆ ಸುಳಿದು ಮಾಯವಾಗಿವೆ. ಸರಕಾರಕ್ಕಾವ ದ್ರೋಹವನ್ನೂ ಮಾಡದ ರೋಗಿಗಳನ್ನೂ ಜೈಲು ಹೂಗಿಸುವದೇಕೆ?

ಲೋರ್ಡ್ ವೇವೆಲ್.

ಗವರ್ನರರೊಡನೆ ಸಮ್ಮೇಲನ ನಡಸಿದಾಗ ರಾಜಕೀಯ ಕೈದಿಗಳ ಬಿಡುಗಡೆಯ ಪ್ರಶ್ನೆ ಬಂದಿಲ್ಲವೆಂದು ಮಿ. ಅಮೆರಿ ಕಾಮನ್ಸ್ ಸಭೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಗಾಂಧಿಜೀ ಮೊದಲಾದವರ ಬಿಡುಗಡೆ ಮಾಡಿ ಕಾಂಗ್ರೆಸನ್ನು ಸ್ವತಂತ್ರಗೊಳಿಸಿ ತೊಡಕಿಗೊಳಗಾಗಬಾರದೆಂದು ಗವರ್ನರರೆಲ್ಲಾ ವೈಸರಾಯರ ಕಿವಿಯೂದಿರುವರೆಂದು ಮತ್ತೊಂದು ವಾರ್ತೆ. ಲೋರ್ಡ್ ವೇವೆಲರಿಂದ ಆರಂಭಿಸಲ್ಪಟ್ಟ ಗಾಂಧಿ-ವೇವೆಲ್ ಪತ್ರವ್ಯವಹಾರ ನಡೆದಿದೆ; ತನ್ನನ್ನು ಭೇಟಿಯಾಗುವ ಇಚ್ಛೆ ನಿಮಗಿದೆಯೇ ಎಂದು ವೇವೆಲರು ಗಾಂಧಿಯವರನ್ನು ಆ ಮೂಲಕ ಕೇಳಿಕೊಂಡಿದ್ದಾರೆ–ಎಂದೆಲ್ಲಾ ನವದಿಲ್ಲಿಯಲ್ಲಿ ವದಂತಿ. ಲೋರ್ಡ್ ವೇವೆಲರು ಈ ವರೆಗೂ ಬಾಯಿಮುಚ್ಚಿಕೊಂಡಿದ್ದಾರೆ; ಆದರೆ ಇಂತಹ ವಾರ್ತೆಗಳಿಗೆ ಕಿವಿ ಮುಚ್ಚಿಕೊಳ್ಳಲಾರವೆ. ಬಾಯಿಬಿಡುವ ಸಂದರ್ಭ ಬರಬಹುದು!

ಜನರಲ್ ಸ್ಮಟ್ಸ್.

ಲಂಡನಿಗೆ ಹೋಗಿ ಬಹುಕಾಲವಾಯಿತು. ಇನ್ನೂ ಅಲ್ಲಿಂದ ಹೊರಡುವ ಸನ್ನಾಹ ಕಂಡುಬರುವದಿಲ್ಲ. ಲಂಡನಿನ ಒಂದು ಭಾಷಣದಲ್ಲಿ "ಯುದ್ಧಾನಂತರ ರಶ್ಯ, ಇಂಗ್ಲಾಂಡು, ಅಮೇರಿಕಗಳು ಲೋಕನಾಯಕ ರಾಷ್ಟ್ರಗಳಾಗುವವು. ಯುರೋಪನ್ನು ಸಮೆಯಿದ ದೈತ್ಯ ರಶ್ಯದ ಪ್ರಾಮುಖ್ಯತೆ ಬಹಳವಾಗಿ ಹೆಚ್ಚುವದು. ಜರ್ಮನಿ, ಫ್ರಾನ್ಸ್, ಇಟಲಿ, ಜಪಾನಗಳು ಭೂಪಟದಿಂದಲೇ ಅದೃಶ್ಯವಾಗುವವು" ಎಂಬ ಭವಿಷ್ಯ ನುಡಿದ್ದಾರೆ. ಮುದಿ ಸ್ಮಟ್ಸರಿಗೆ ಪ್ರಸ್ವಮಾಂದ್ಯವುಂಟಾಗಿದೆ ಎಂಬುದಕ್ಕೆ ದೂರದ ಚೀನಾ, ಹಿಂದುಸ್ಥಾನಗಳು ಗೋಚರಿಸದಿದ್ದುದೇ ದೃಷ್ಟಾಂತ. ಫ್ರಾನ್ಸ್ ಅದೃಶ್ಯವಾಗುವದೆಂದ ಮಾತನ್ನು ಸ್ವತಂತ್ರ ಫ್ರೆಂಚರು ಬಲವಾಗಿ ಖಂಡಿಸಿದ್ದಾರೆ. ನಮ್ಮಲ್ಲಿ ನಾರಭವಿಷ್ಯ, ಮಾಸಭವಿಷ್ಯ ಬರೆಯುತ್ತಿರುವ ಜೋಯಿಸರನ್ನೆಲ್ಲಾ ಸ್ಮಟ್ಸರು ನಾಚಿಸಿದ್ದಾರೆ!

ಮದ್ರಾಸಿನ ಅನ್ನ ಬಟ್ಟೆ.

ಹಿಂದುಸ್ಥಾನದ ಆಹಾರಾಭಾವಕ್ಕೆ ಅಮಿತ ಸಂತತಿಯೇ ಕಾರಣವೆಂದು ಮಿ. ಅಮೆರಿ ಹೇಳಿ ಮಿತ ಸಂತತಿಯೊಂದೇ ಪರಿಹಾರವೆಂಬುದನ್ನು ಮನಗಾಣಿಸಿದ್ದಾರೆ. ಆದರೆ ಮದ್ರಾಸ್ ಸರಕಾರಕ್ಕೆ ಮಿತಾಹಾರ ಮತ್ತು ಮಿತ ತೊಡಿಗೆಯ ತತ್ವದಲ್ಲೂ ವಿಶ್ವಾಸವಿರುವಂತೆ ಕಾಣುತ್ತದೆ. ಬರುವ ಜನವರಿಯಿಂದ ಇಡೀ ಪ್ರಾಂತ್ಯದಲ್ಲಿ ಆಹಾರ ಧಾನ್ಯಗಳ ನಿಯಂತ್ರಣವು ವ್ಯವಸ್ಥೆಯಿಂದ ಜ್ಯಾರಿಗೆ ಬರುವ ಸಂಭವವಿದೆ. ಜತೆಯಲ್ಲೇ ಅರಿವೇ ನಿಯಂತ್ರಣವೂ ಜ್ಯಾರಿಯಾಗಿದೆ. ದಶಂಬರಾಂತ್ಯದ ಬಳಿಕ ಮೊಹರಿಲ್ಲದ ಅರಿವೆಗಳನ್ನು ವಿಕ್ರಯಿಸಬಾರದೆಂಬ ನಿಯಂತ್ರಣಾಜ್ಞೆ ಬಂದಿದೆ. ನಿಯಂತ್ರಣಾಹಾರ ಸೇವಿಸಿ, ನಿಯಂತ್ರಣರಿವೆ ತೊಟ್ಟು 'ಆಳುವ ದೇವನು ಅನ್ನ ಬಟ್ಟೆ ಕೊಡಲಾರನೆ?' ಎಂಬ ಗಾದೆಯನ್ನು ಮದ್ರಾಸಿಗಳು ಪಠಿಸಿದರಾಯಿತು.

NOTICE.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O. P. No 121/1943.

ಕೊರಗಸೆಟ್ತಿ — ಅರ್ಜಿದಾರಳು.

ಮತ್ತು

1. ಕೊರಪಳು ಸೆಟ್ತಿ, 2 ಲಿಂಗಪ್ಪ ಸೆಟ್ತಿ, 3. ಪೀರು ಸೆಟ್ತಿ, 4. ಪಾಚಶೆಟ್ಟಿ, 5. ಮುದ್ದು ಶೆಟ್ಟಿ, ಯಿದ್ರಿರು—

ಯಿವರೊಳಗೆ

ಸದರಿ ಯಿದ್ರಿರಿಗೆ ವ ಯಿತರ ಸಮಸ್ತ ಜನರಿಗೆ ಸದರಿ ಅರ್ಜಿದಾರಳ ಹೆಸರಲ್ಲಿ ಕಳೆದ ತಾರೀಕು 17-7-1943ರಲ್ಲು ಕುದ್ದು ಶೆಟ್ಟಿಯು ಬರೆದಿಟ್ಟ ವೀಲು ನಾಮೆ ಪ್ರಕಾರ ಸದರಿ ಕುದ್ದು ಸೆಟ್ಟಿಗೆ ಸಾಲಗಾರರಿಂದ ಬರತಕ್ಕ ಬಾಕಿ ಸಾಲಗಳ ಕುರಿತು ಹಕ್ಕು ದಾರಳೆಂದ ಅರ್ಜಿದಾರಳಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕೆಂದು ಅರ್ಜಿದಾರಳು ಮೇಲೆ ಹೇಳಿದ ಅರ್ಜಿಯನ್ನು ದಾಖಲು ಮಾಡಿಯಿತ್ತಾಳೆ. ಸದರಿ ಅರ್ಜಿಗೆ ಆಕ್ಷೇಪ ಹೇಳುವವರು ಸದರಿ ಅರ್ಜಿ ತನ್ನ್ಯ ಬಗ್ಗೆಯಿಟ್ಟ ತಾರೀಕು 29-12-1943ರಲ್ಲು ಪೂರ್ವಾಹ್ನ 10ಗಂಟೆಗೆ ಸದರಿ ಕೋರ್ಟು ಮುಂದೆ ಸ್ವತಹಾ ಆಗಲೀ ವಕೀಲರ ಮುಖಾಂತ್ರ ವಾಗಲೀ ಹಾಜ್ರಿ ಆಗಿ ಆಕ್ಷೇಪಗಳನ್ನು ಹೇಳತಕ್ಕದ್ದು.

A. N. S. Achar.
Pleader For Petitioner.

Karkala }
6-12-43 }

तಾ. 9–1–44ರಿಂದ ತಾ. 15–1–44ರ ವರೆಗೆ

★ ಉಡುಪಿ ಜಾತ್ರೆ ★

ಇದೇ ಬರುವ ಪ್ರಸ್ತ ಸಂ. ಗಳ ಯು ಶನಿವಾರ ತಾ. 9—1—1944 ಮೊದಲ್ಗೊಂಡು ಒ. ೨. ಯು ಶನಿವಾರ ತಾ. 15—1—1944ರ ವರೆಗೆ ಶ್ರೀ ಕೃಷ್ಣಸನ್ನಿಧಿಯಲ್ಲಿ **ಮಕರ ಸಂಕ್ರಮಣ** ಸಂಯುಕ್ತ ಸಪ್ತೋತ್ಸವವು ಅಪೃಥ ಜಲೋತ್ಸವಾದಿ ಯುಕ್ತವಾಗಿ ವಿಶೇಷ ಸಮಾರಂಭದಿಂದ ಜರಗಲಿರುವದಲ್ಲದೆ, ನಮ್ಮ ಈ ಪರ್ಯಾಯ ಅವಧಿಯು ಪ್ರಸ್ತ ಬ. ೭ ಯು ಸೋಮವಾರ ... ಪರಿಸಮಾಪ್ತಿಯಾಗುವುದರಿಂದ ಆ ದಿನ ನಡೆಯುವ ಮಹಾಸಂತರ್ಪಣೆ, ಮಹೋತ್ಸವಾದಿಗಳೂ ವಿಶೇಷ ಸಿಯಿವೆ.

ಸಮಸ್ತ ಪರ್ಯಾಯ ಕಾಲದಲ್ಲೇ ನೀವು ಕುಟುಂಬ ಮಿತ್ರಪರಿವಾರ ಸಮೇತರಾಗಿ ಬಂದು ಉತ್ಸವಾದಿ ಸಂದರ್ಶನದಿಂದ ಶ್ರೀಕೃಷ್ಣ ಪರಮಾತ್ಮನ ಪರಮಾನುಗ್ರಹಕ್ಕೆ ಪಾತ್ರರಾಗಬೇಕಾಗಿ ನಾವು ಅಪೇಕ್ಷಿಸುತ್ತೇವೆ.

ಯಾತ್ರಿಕರಿಗೆ ತಕ್ಕ ಸೌಕರ್ಯಗಳ ವ್ಯವಸ್ಥೆ ಇವೆ. ಹೆಚ್ಚಿನ ಮಾಹಿತಿಗೆ ಬರೆಯಿರಿ –

ಮೆನೇಜರ್,
ಪರ್ಯಾಯ ಶ್ರೀಕೃಷ್ಣಾಪುರ ಮಠ,
ಉಡುಪಿ.

ಪ್ರಗತಿಯವರ ಪ್ರಥಮ ಶ್ರೇಣಿಯ ಚಿತ್ರ ಕನ್ನಡದ ಕಾವ್ಯಮಯ ಚಿತ್ರವು ಕಲೋಪಾಸಕರಾದ ಸುಬ್ಬಯ್ಯ ನಾಯ್ಡು, ನಾಗೇಂದ್ರ ರಾವ್, ಲಕ್ಷ್ಮೀ ಬಾಯಿ, ರಾಜ್ಯಯ್ಯಂಗಾರ್ ಮೊದಲಾದವರಿಂದ ಪರಿಪೂರ್ಣಚಿತ್ರವೆನಿಸಿತು.

ಹರಿಶ್ಚಂದ್ರ (ಕನ್ನಡ)

ತಾ. 9–12–43ರಿಂದ
ಯಶಸ್ವಿಯಾಗಿ ಎರಡನೇ ವಾರಕ್ಕೆ ಮುಂದರಿದಿದೆ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಪ್ರಕಟಣೆ.

ಮಂಗಳೂರು ಡಿ. ಮು ಕೋರ್ಟಿನಲ್ಲಿ.

O. S. No 445/1943

ಪರಮೇಶ್ವರಿ ಹೆಂಗ್ಸು — ವಾದಿ

ಮತ್ತು

ಅಬ್ಬಕ್ಕೆ ಹೆಂಗ್ಸು ವಗೈರಾ — ಪ್ರತಿವಾದಿರು.

2ನೇ ಪ್ರತಿವಾದಿ–ತ್ಯಾಂಪಣ್ಣ ಆಳ್ವ-ಅಪ್ಪಯ ಆಳ್ವರ ಮಗ. ಉಪಾಧ್ಯಾಯ- 3ನೇ ಪ್ರತಿವಾದಿ–ದೇಯಕ್ಕ ಹೆಂಗ್ಸು-ಅಂತಕ್ಕೆಯ ಮಗಳು- ಇಬ್ಬರೂ ಮಂಗಳೂರು ತಾಲೂಕು ಮಂಜನಾಡಿ ಗ್ರಾಮದಲ್ಲಿರುವವರು— ಇವರಿಗೆ

ಮೇಲ್ಕಂಡ ವಾದಿಯು ಪ್ರತಿವಾದಿರ ಮೇಲೆ, ಡಿಕ್ರಿ ಸಪ್ತಿತ್ತಿ ಬಗ್ಗೆ ಮಾಡಿದ ಮೇಲಿನ ದಾವೆಯು, ತಾರೀಕು 17ನೇ ದಶಂಬ್ರ 1943ಕ್ಕೆ 2ಮತ್ತು 3ನೇ ಪ್ರತಿವಾದಿರ ಹಾಜರಾತಿನ ಬಗ್ಗೆ ಯಿಟ್ಟಿರುವದರಿಂದ ಸದ್ರಿ ದಿನ ಸದ್ರಿ ಪ್ರತಿವಾದಿರು ಮೇಲ್ಕಂಡ ಕೋರ್ಟಿನಲ್ಲಿ ಹಗಲು 11ಗಂಟೆಗೆ ಖುದ್ದಾಗಲೀ ಯಾ ವಕೀಲದ್ವಾರವಾಗಲೀ ಹಾಜರು ಆಗಿ ತಮ್ಮ ಉತ್ತರವನ್ನು ಹಾಜರು ಪಡಿಸಲಿಕ್ಕೆ ತಪ್ಪಿದ್ರೆ ಸದರಿ ದಾವೆಯನ್ನು ತೀರ್ಮಾನ ಮಾಡಿ, ಅವರ ಗೈರಹಾಜರಿಯಲ್ಲಿ ಸದ್ರಿ ಸಂಬ್ರವನ್ನು ತೀರ್ಮಾನ ಮಾಡಲಾಗುವದು ತಿಳಿದಿರಲಿ.

(By order)
B. L. N. Rai.
Advocate For Plantiff.

Court Read. }
Mangalore. }
3—12—1943 }

ಔಷಧಗಳು

ನಮ್ಮಲ್ಲಿ **ಕಟಪಾಡಿಯ ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡಿನ** ಜನಪ್ರಿಯವಾದ ಔಷಧಗಳು, **ಮಂಗಳೂರಿನ ಗಣಪಯ್ಯ ಎಂಡ್ ಸನ್ಸ**ರವರ ಪ್ರಸಿದ್ಧ ಔಷಧಗಳೂ, **ಕುಂಬಳೆಯ ಸ್ವದೇಶಿ ಔಷಧ ಭಂಡಾರದ** ಜನಾದರಣೀಯ ಔಷಧಗಳೂ ಸಿಗುತ್ತವೆ.

ನವಭಾರತ ಪುಸ್ತಕ
ಭಂಡಾರ. ಉಡುಪಿ.

The Canara Banking Corporation Limited.

(Incorporated in British India Liability of members limited)

(Branches & Agencies in all principal cities of India)

Authorised Capital	....	Rs. 25,00,000/-
Issued & Subscribed Capital		Rs. 16,00,000/-
Paid up Capital	...	Rs. 12,65,000/-
Reserves ...	...	Rs. 3,88,000 -

Advances are made against approved securities and bills purchased or collected at most favourable rates. For further particulars please apply to the nearest branch.

ಉಡುಪಿ, ಗುರುವಾರ ೯-೧೨-೧೯೪೩

ಉಭಯ ಸಂಕಟ.

ಹಿಂದುಸ್ಥಾನದ ಸರಹದ್ದಿನಲ್ಲಿ ಇತ್ತೀಚಿಗೆ ಜಪಾನರು ನಡಿಸುತ್ತಿರುವ ಚಟುವಟಿಕೆಗಳನ್ನು ಅಲಕ್ಷಿಸಲು ಸಾಧ್ಯವೇ ಇಲ್ಲ. ಇಲ್ಲಿಂದ ಓಡಿದು ತಮ್ಮಲ್ಲಿಗೆ ಬಂದು ಬಿದ್ದ ಶ್ರೀ. ಸುಭಾಸ್ ಬೋಸರನ್ನೇ ಕೂಡಲೇ ಕಾವಾಗಿ ಮಾಡಿ ಹಿಂದುಸ್ಥಾನದ ಕಂಠಕ್ಕೆ ಬೀಸುವ ಇಚ್ಛೆ ಆಕ್ಸಿಸ್ ರಾಷ್ಟ್ರೀಯರಲ್ಲಿದೆ ಎಂಬುದನ್ನು ಅಧಿಕಾರಿಗಳೊಪ್ಪಿದ್ದಾರೆ. ಬೋಸರು ಇತ್ತೀಚಿಗೆ ಜರ್ಮನರಿಂದ ಜಪಾನರಿಗೆ ಕೈಬದಲಾವಣೆ ಹೊಂದಿ, ಸಿಂಗಾಪುರಕ್ಕೆ ಬಂದು, ಜನರಲ್ ಟೋಜೋರವರಿಂದ ಉಪದೇಶ ಪಡೆದು ರಂಗೂನಿನಲ್ಲಿ ಠಾಣ್ಯವೂರಿದ್ದಾರೆಂದೂ, ಅವರಿಗ 3 ಲಕ್ಷ ಹಿಂದೀ ಯೋಧರ ಸೇನಾಪಡೆಯಿಂದೂ ಸುದ್ದಿ ಬಂದಿದೆ. ಕಳೆದ ನವಂಬರಿನಲ್ಲಿ ಬಂಗಾಳದ ಸರಹದ್ದುಗಳಲ್ಲಿ ಅಪಾಯ ಲಕ್ಷಣಗಳು ಹಲವು ಬಾರಿ ಕಾಣಿಸಿಕೊಂಡಿವೆ, ಫೆಣಿ ಪ್ರದೇಶದ ಮೇಲೆ, ಇಸ್ಫೋಂವೆಡೆಯ ವಿಮಾನ ನಿಲ್ದಾಣದ ಮೇಲೆ ಆದ ಧಾಳಿ - ಮದ್ರಾಸಿನ ಮೇಲೊಂದೆರಡು ಬಾರಿ ಕಾಣಿಸಿಕೊಂಡ ಜಪಾನೀ ವಿಮಾನಗಳು—ಇವೆಲ್ಲ ಜಪಾನರ ಸ್ವೈಗಳ್ಳತನದಿಂದಾದ ವಿಮಾನ ಪ್ರವಾಸಗಳಲ್ಲ. ಪ್ಲೇಗು ಹಬ್ಬುವ ಮೊದಲು ಇಲಿ ಬೀಳುವಂತೆ, ಆಕ್ರಮಣಾರಂಭದ ಪೂರ್ವದಲ್ಲಿ ಬೇರೊಂದು ಬೀಳುವ ನಾಡಿಕೇ ಇದೇ ತಾ. ೫ರ ಕ್ಲಿಇವರ ಮೊದಲನೇ ಬಾರಿ ನಡು ಹಗಲಲ್ಲೇ ಕಲ್ಕತ್ತಾದ ಮೇಲೆ ನಡೆದ ವಿಮಾನಧಾಳಿಯು ಎಚ್ಚರಿಕೆಯ ಸ್ವರೂಪದ್ದಿರಬಹುದೇ ಎಂಬ ಅನುಮಾನ ಮೂಡುತ್ತದೆ. ಬರ್ಮಾದ ಮೇಲೂ ಬ್ರಿಟಿಷರ ಆಕಾಶಧಾಳಿಗಳಾಗುತ್ತಿವೆ. ತುಲನೆ ಮಾಡಿ-ಬಿದ್ದ ಬಾಂಬುಗಳ ತೂಕ ಮಾಡಿ-ಹೇಳುವದಾದರೆ ಇಲ್ಲಿಗಿಂತ ಅಲ್ಲಿ ಬಿದ್ದ ಹೊಡೆತವೇ ಹೆಚ್ಚಿನದಿರಬಹುದು. ಅಂತೂ ಈಗ ಹಿಂದುಸ್ಥಾನದ ಗಡಿಯಲ್ಲಿ ನಿಂತುಕೊಂಡು ಇತ್ತಂಡದವರೂ ಕಲ್ಲೆಸೆದುಕೊಳ್ಳುತ್ತಿದ್ದಾರೆ. ಇದು ಕೈಮೈ ಹೋರಾಟದ ಪೂರ್ವಕೃತ್ಯವಿರಬಹುದು. ಬರ್ಮಾ ನುಗ್ಗಬೇಕೆಂಬುದು ಮಿತ್ರರ ನಿಶ್ಚಿತ ಧ್ಯೇಯ; ಹಿಂದುಸ್ಥಾನ ನುಗ್ಗುವ ಇಚ್ಛೆ ಜಪಾನರದೆಂಬುದು ಎಂದೋ ಊಹಿಸಲ್ಪಟ್ಟ ವಿಷಯ. ಈಗ ಈ ನಿರೀಕ್ಷೆ ನಿಜವಾಗುವ ಲಕ್ಷಣಗಳು ಕಾಣುತ್ತಿವೆ. ಈ ಸಂಗ್ರಾಮದ ಆರಂಭವು ಯಾವ ಪರಿಯಿಂದಲೇ ಆದರೂ, ಅದರ ಪರಿಣಾಮವು ಇತ್ತಂಡದವರ ಬಲಾಬಲವನ್ನವಲಂಬಿಸಿಕೊಂಡಿದೆ. ಅಂತೂ ತೀಕ್ಷ್ಣಟದಿಂದ ಹಿಂದುಸ್ಥಾನದ ಮಾನಸಿಕ, ಆರ್ಥಿಕ ರಾಜಕೀಯ ವಿಭಾಗಗಳಲ್ಲಿ ಆಂದೋಲನ ಏಳುವದು ನಿಶ್ಚಯ. ಇದಿರುಗಡೆಯಲ್ಲಿ ಕಾಣುವದು ಸುಭಾಸರ ಮುಖವೆಂದ ಮೇಲೆ ಆ ಆಂದೋಲನದಲ್ಲಿ ಆತ್ಮಘಾತಕ ವಂಚನೆಯೂ ಸೇರಿಹೋಗುವದೆಂಬುದಕ್ಕೆ ಸಂಶಯವಿಲ್ಲ. ಕೆಂಪು ಯೋಧರ ಕೋವಿಗಳಿಗಿದಿರಾಗಿ ನಾಜೀ ಸೈನಿಕರು ತಮ್ಮ ಮುಂಭಾಗದಲ್ಲಿ ಸೆರೆ ಸಿಕ್ಕಿದ ರಶ್ಯಾನರನ್ನು ನಿಲ್ಲಿಸಿ, ಪಿಕಲಾಟವೂಡ್ಡಿದ ಹಲವು ಕಥೆಗಳನ್ನು ನಾವೀ ಯುದ್ಧದಲ್ಲಿ ಕೇಳಿದ್ದೇವೆ. ಸುಭಾಸರನ್ನು ಮುಂಭಾಗಕ್ಕೆ ಹಿಡಿದು ಜಪಾನರು ಹಿಂದುಸ್ಥಾನದಲ್ಲಿಬ್ಬಿಸುರುವ ಗೊಂದಲವೂ ಅಂತಹದೇ ಎಂಬುದನ್ನು ಮರೆಯಬಾರದು.

ಆತ್ಮದಲ್ಲೇ ವಂಚನಾಬುದ್ಧಿ ಹುಟ್ಟಿಕೊಳ್ಳಲಿದೆ—ಸುಭಾಸಬೋಸರು ಹಿಂದುಸ್ಥಾನದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಈ ವಿಲಕ್ಷಣ ಪರಿಸ್ಥಿತಿಯನ್ನಿದಿರಿಸಲು ಸರಕಾರವು ವಿಶೇಷ ಸಿದ್ಧತೆ ಮಾಡಬೇಕು. ಮನಸ್ಸಿದ್ದರೆ ಹಾದಿಯುಂಟು. ನೆಹರುಗಳಂತಹ ಫೇಸಿಸ್ಟ್ ವಿರೋಧ ಮನೋವೃತ್ತಿಯವರು ಬ್ರಿಟಿಷ್ ಮಂತ್ರಿಮಂಡಲದಲ್ಲಿ ಕೂಡಾ ಇಲ್ಲವೆನ್ನಬಹುದು. ಮಹಾತ್ಮಾಜೀ ಜಪಾನೀ ಪಕ್ಷಪಾತಿಗಳಲ್ಲ. ಜಪಾನರು ಬಂಗಾಳಕ್ಕೆ ಬೊಂಬೊಗೆದರೆ ಬ್ರಿಟಿಷರು ಒರ್ಮಕ್ಕೊಗೆಯುತ್ತಾರೆ. ಜಪಾನರು ಸುಭಾಸರನ್ನು ಮುಂದೆಮಾಡಿದಾಗ, ಅದಕ್ಕೆ ತಕ್ಕ ಪ್ರತೀಕಾರವೂ ಬ್ರಿಟಿಷರಲ್ಲಿರಬೇಕು. ಆಕ್ರಮಣ ವಿರೋಧಿ ಗಾಂಧಿನೆಹರುಗಳಂತಹ ದೇಶಪ್ರಮುಖರನ್ನು ಮುಂದೆಮಾಡಿ, ಅವರನ್ನಾಶ್ರಯಿಸಿರುವ ಅಖಿಲ ರಾಷ್ಟ್ರದ ವಿಶ್ವಾಸವನ್ನೇ ರಕ್ಷಣಾಕೋಟೆಯಾಗಿ ನಿಲ್ಲಿಸುವದಕ್ಕಿಂತ ಸುರಕ್ಷಿತವಾದ ಹಾಗೂ ಸುಗಮವಾದ ಇನ್ನೊಂದು ಹಾದಿಯು ಮಿತ್ರರಾಷ್ಟ್ರೀಯರಿಗಿಲ್ಲ. ಆದರೆ ಸರ್. ಓಸ್ವಾಲ್ಡ್ ಮೋಸ್ಲೀಯಂತಹ ನಾಜೀ ಪಕ್ಷಪಾತಿಗಳಿಗೆ ನಾಜೀ ವೈರಿ ಬ್ರಿಟನಿನಲ್ಲಿ ಬಿಡುಗಡೆಯುಂಟು, ಗಾಂಧೀ ನೆಹರುಗಳಂತಹ ಫೇಸಿಸ್ಟ್ ವಿರೋಧಿಗಳಿಗೆ 'ಫೇಸಿಸ್ಟ್ ವಿರೋಧ ಯುದ್ಧ ಕಾರ್ಯಕ್ಕಾಗಿ'ಯೇ ಬಿಡುಗಡೆಯಿಲ್ಲ! ದೇಶವೇ ಆತುರಗೊಂಡು ಯಾಚಿಸಿದರೂ ಪ್ರಾಣಾವಧಿ ಅನಾರೋಗ್ಯದಲ್ಲಿರುವ ಶ್ರೀಮತಿ ಕಸ್ತೂರಿಬಾ ಗಾಂಧಿಯವರಿಗೆ ಕೂಡ ಬಿಡುಗಡೆಯಿಲ್ಲ. ಸರಕಾರವು ಕಾಂಗ್ರೆಸನ್ನೇ ತನ್ನ ಪ್ರಥಮ ವೈರಿಯಾಗಿ ಭಾವಿಸಿದಂತಿದೆ. ಈ ಮನೋವೃತ್ತಿಯಿರುವ ತನಕ ಹಿಂದುಸ್ಥಾನವು ಎಂತೆಂತಹ ದುರದೃಷ್ಟಕ್ಕೊಳಗಾಗಲಿರುವದೋ ಹೇಳುವದಸಾಧ್ಯ. ದೇಶ ಹಿತೈಷಿಗಳು ಇನ್ನಷ್ಟು ಗಾಢವಾಗಿ ಯೋಚಿಸಿ ಸರಕಾರವನ್ನು ಹೇಗಾದರೂ ಸರಿದಾರಿಗೆ ತರಬೇಕಾದ ಸಂದರ್ಭವಿದು.

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.

ಈ ಕಂಪೆನಿಯ ಉಳಿದ ಶೇರುಗಳನ್ನು ಗ್ರಾಹಕರಿಗೆ ಕೊಡಲು ಈಗ ತಾನೆ ಕೇಂದ್ರ ಸರಕಾರದ ನಂಬ್ರ **D/ 3803-ECI /43**ನೆ ಹುಕುಂ ಪ್ರಕಾರ ಅನುಮತಿದೊರೆತಿರುವುದೆಂದು ತಿಳಿಸಲು ತುಂಬಾ ಸಂತೋಷಪಡುತ್ತೇವೆ. ಈ ಸಂಸ್ಥೆಯ ಪಾಲುಭಂಡವಾಳವು ರೂಪಾಯಿ 20,000/- ಇದ್ದು ಸುಮಾರು ಅರ್ಧಾಂಶದಷ್ಟು ಭಂಡವಾಳವು ಸಂಗ್ರಹಿಸಲ್ಪಟ್ಟಿದೆ. ಮೇಲಿನ ಹುಕುಮಿನಂತೆ ಸಂಸ್ಥೆಯ ಚಾಲಕರು ಉಳಿದ ಪಾಲುಗಳೆಲ್ಲವನ್ನು ನಿಯಮಿತ ಅವಧಿಯೊಳಗಾಗಿ ಗ್ರಾಹಕರಿಗೆ ಕೊಡಬಹುದಾಗಿದೆ. ನವಯುಗ ಎಂಟರ್‌ಪ್ರೈಸ್ ಸಂಸ್ಥೆಯು ಇಂದಿನ ವ್ಯಾಪಾರ ಹಾಗೂ ಕೈಗಾರಿಕೆಯ ಯುಗಧರ್ಮಕ್ಕೆ ಸರಿಹೋಗುವ ಕಾರ್ಯಕಲಾಪಗಳನ್ನು ಪ್ರೋತ್ಸಾಹ ದೂರೆತಂತೆ, ಭಂಡವಾಳ ಬೆಳೆದಂತೆ, ಅನುಕೂಲ, ಅವಕಾಶ, ಸೌಕರ್ಯ, ಸುಸಂದರ್ಭಗಳು ಒದಗಿ ಬಂದಂತೆ ಒಂದೊಂದಾಗಿಯೋ ಹೆಚ್ಚಿಚ್ಚಾಗಿಯೋ ಕೈಗೊಂಡು ಪಾಲು ಭಂಡವಾಳಕ್ಕೆ ಹಾನಿತಟ್ಟದಂತೆ, ತಕ್ಕಷ್ಟು ಲಾಭವೂ ಹುಟ್ಟಿಬರುವಂತೆ ಅದರೊಡನೆ ಜನತಾ ಸೇವೆಯೂ ದೇಶಾಭ್ಯುದಯ ಸಾಧನೆಯೂ ನೆರವೇರುವ ಹಾಗೆ ವಿಚಾರ, ವಿವೇಕ ಹಾಗೂ ವ್ಯವಹಾರ ದೃಷ್ಟಿಯಿಂದ ನಡೆಸಲ್ಪಡುವ ಸಂಸ್ಥೆ. ಇದು 'ನವಯುಗ ಪ್ರೆಸ್' ಎಂಬ ಮುದ್ರಾಮಂದಿರವನ್ನು ಸ್ಥಾಪಿಸಿಕೊಂಡು ಈಗಾಗಲೇ ಊರ ಪರವೂರುಗಳಲ್ಲಿ ಜನಾನುರಾಗಕ್ಕೆ ಪಾತ್ರವಾಗಿ ಪ್ರಥಮ ವರುಷದಲ್ಲೇ ಲಾಭಾಂಶವನ್ನು ಹಂಚಿದೆ. ಕರ್ನಾಟಕದಲ್ಲಿ ಪ್ರಥಮ ವರುಷದಲ್ಲೇ ಲಾಭದಾಯಕವಾಗಿ ನಡೆಸಲ್ಪಟ್ಟು, ಪಾಲುಗಾರರಿಗೆ ಲಾಭ ಹಂಚುವ ಸಂಸ್ಥೆಗಳು ಬಹಳ ವಿರಳ. ವ್ಯವಹಾರದಕ್ಷರಾದ ಜನಪ್ರಿಯ ವಕೀಲ್ ಶ್ರೀ ಕೆ. ಜೆ. ಬಲ್ಲಾಳರ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಸಂಸ್ಥೆಯು ಈ ವರ್ಷ ಶೇಕಡಾ ಎರಡು ಲಾಭಾಂಶ ಹಂಚಲು ಸಮರ್ಥವಾಗಿರುವುದೆಂದು ಊಹಿಸಲಾಗಿಯದೆ. ಯುದ್ಧಕಾಲದ ಅನಿಶ್ಚಿತ ಸಮಯದಲ್ಲಿ ಲಾಭದಾಯಕ ಸಂಸ್ಥೆಗಳಲ್ಲಿ ಹಣಹಾಕಿಯೊಂಗಿಸುವುದು ವಿಶೇಷ ಜಾಣತನವಿದೆ. ಆದುದರಿಂದ ಕನ್ನಡಿಗರು ಈ ಸಂಸ್ಥೆಯ ಪಾಲುಗಳನ್ನು ಹೆಚ್ಚಾಗಿ ಪಡಕೊಂಡು ಅದರ ಧ್ಯೇಯ ಉದ್ದೇಶಗಳ ಸಾಧನೆಗೆ ನೆರವಾಗುವರೆಂದು ನಿರೀಕ್ಷಿಸುತ್ತೇವೆ.

ಕಟಪಾಡಿ—ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತಾ 7-12-43ರಂದು ಗೀತಾ ಜಯಂತಿಯು ಆಚರಿಸಲ್ಪಟ್ಟಿತು. ಬೆಳಿಗ್ಗೆ ಗೀತಾ ಬಾಯಿಪಾಠ ಸ್ಪರ್ಧೆಯು ನಡೆಯಿತು. ಸಾಯಂಕಾಲ ಶ್ರೀ ಬಿ ಸೀತಾರಾಮ ಆಚಾರ್ಯ, ವಿದ್ವಾನ್—ಇವರು ಗೀತೆಯ ಕುರಿತಾಗಿ ಭಾಷಣವನ್ನಿತ್ತರು.

ದುರ್ಬೀನು

ತಿದಿಯೂದಿದರೆ ಕೆಂಡ ಪ್ರಜ್ವಲಿಸುತ್ತದೆ. ನಿಟ್ಟುಸಿರಿಂದ ಆತ್ಮಾಭಿಮಾನ ಜ್ವಲಿಸಬೇಕು.

೦೦ ೦೦ ೦೦

ಕಾಳು ಬೆಂದಾಗ ದೊಡ್ಡದಾಗುತ್ತದೆ. ಕಲಿತನವೂ ನೊಂದಾಗಲೇ ಬೆಳೆಯಬೇಕು.

೦೦ ೦೦ ೦೦

ಕಾಗದಕ್ಕೆ ಕಾಗದವಟಬೇಕಾದರೆ ಗೋಂದು ಬೇಕು; ಹೃದಯದೊಡನೆ ಹೃದಯ ಮಿಲನವಾಗಬೇಕಾದರೆ ಸಂದರ್ಭ ಒದಗಬೇಕು.

೦೦ ೦೦ ೦೦

ಪ್ರವಾಹವೂ ಹಾಗೇನೇ—ಗುಡ್ಡದ ಬುದದಲ್ಲೇ ಹರಿಯುತ್ತ ಪ್ರಪಾತಗ್ಗೆ ಜೋಗಾಗಿ ಧುಮುಕುತ್ತದೆ. ಪರಿಸ್ಥಿತಿಯೂ ಹಾಗೆಯೇ—ದೊಡ್ಡವರ ಕಾಲ ಬುಡದಲ್ಲಿರುತ್ತದೆ; ಬಡವರ ತಲೆಯ ಮೇಲೆ ಮುಗ್ಗರಿಸಿ ಬೀಳುತ್ತದೆ.

೦೦ ೦೦ ೦೦

ತಲೆಯಿಲ್ಲದ್ದ ಕಾಂಡವು ಮರದ ಬಾಚಣಿಗೆಗೆ ಬಗ್ಗುವಷ್ಟು ಕೈಬೆರಳಿಗೆ ಬಗ್ಗುವದಿಲ್ಲ. ತಲೆಯಲ್ಲದ್ದ ಯೋಚನೆಯೂ ಹೊರಗಿನ ಸ್ವವಿದ್ಯಮಾನದಿಂದ ತಿದ್ದುಪಡಿ ಹೊಂದುವಂತೆ ವಿಮರ್ಶೆಯಿಂದ ಬದಲಾಗುವದಿಲ್ಲ.

೦೦ ೦೦ ೦೦

ದೇಶ ಬದಲಾಯಿಸಬಹುದು; ದೇಹ ಬದಲಾವಣೆಯಸಾಧ್ಯ. ಸ್ಥಿತ್ಯಂತರವಾದಂತೆ ಮತಾಂತರವಾಗದು.

೦೦ ೦೦ ೦೦

ಕಿವಿಯುಳ್ಳುಗಿದ ಮಾತ್ರಕ್ಕೆ ಅದು ಕೇಳಿದ ವಾರ್ತೆಗಳೆಲ್ಲಾ ಹೊರಬೀಳುತ್ತವೇನು? ಮನ ಚಂಚಲಗೊಂಡ ಮಾತ್ರಕ್ಕೆ ಅದರ ಅನುಭವಗಳೆಲ್ಲಾ ಸುಳ್ಳಾಗುತ್ತವೇನು?

೦೦ ೦೦ ೦೦

ಹೆಂಗಸಿಗೆ ಮುಖಕ್ಷೌರವಿಲ್ಲ; ಹೇಡಿಗೆ ಮುಖಭಂಗವಿಲ್ಲ

೦೦ ೦೦ ೦೦

ಬಿರುಕು ಬಿದ್ದ ಮನೇ ಗೋಡೆಗೆ ಕೆಸರು ಮೆತ್ತಬೇಕು; ಆದರೆ ಬಿರುಕು ಬಿದ್ದ ಮನಸ್ಸು ತಾನೇ ಕೆಸರೆರಚುತ್ತದೆ.

೦೦ ೦೦ ೦೦

ಗುಬ್ಬಚ್ಚಿ ಗೂಡಿನ ಮೇಲೆ ಶಬರಿಕೆ ಮಾಡಿಸಿದರದು ಗುಡಿಸುವದಲ್ಲ—ಬೀಳಿಸುವದು. ಕಿರಿ ಹೃದಯಕ್ಕೆ ಅಗಾಧ ಬೋಧೆ ಕೊಟ್ಟರದು ಸುಧಾರಣೆಯಲ್ಲ—ತೊಂದರೆ.

೦೦ ೦೦ ೦೦

ದುಃಖವಾದಾಗ ಕಣ್ಣಿನಂತೆ ಮೂಗಿನಲ್ಲಿಯೂ ನೀರು ಸುರಿಯುವದಿದೆ; ಶೀತ ಬಾಧೆಯಿಂದ ಮೂಗಿನಂತೆ ಕಣ್ಣಿನಲ್ಲೂ ನೀರು ಬರುವದಿದೆ. ನೆರೆಯವರೊಳಗೆ ದುಃಖಭಾಗಿತ್ವವಿರುವದೇನು ಮಹಾ?

Degrees: Books: Medicines
Free H. L. M. S. M, B. H. M, D, etc Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs 4. Insanity Cure Pills Rs. 10 Enclose 2 annas stamp:—
Prof. Dr. N. H. Chhatbar,
Principal Indian Homeopathi Institute & Society (Govt. Regd)
P.O. MAHUVA (Kathiawar Dt. India.)

Sidha-Kalpa Kavach (Regd.)
No. 3 Rs 2, No 2 Rs 5 No. 1 Rs. 7 Special Rs. 10, Extra Special Rs. 17 to ove marriage health, wealth, Ask an six questions with M. O. Re. 1/4 an get correct answers by returnpost Life reading Rs.10 No V P.P.SendM.O,Free, pmplets
Prof. Dr. N. H Chhatbar.
P. O. MAHUVA (Kathiawar India.)

ಟೆಹರಾನ್ ನಿರ್ಧಾರ

ಮಾರ್ಶಲ್ ಸ್ಟಾಲಿನ್, ಅಧ್ಯಕ್ಷ ರುಸವೆಲ್ಟ್, ಪ್ರಧಾನಿ ಚರ್ಚಿಲ್ಲರು ಇರಾಣಿನ ಮುಖ್ಯ ಪಟ್ಟಣ ಟೆಹರಾನಿನಲ್ಲಿ ನಡಿಸಿದ ಚರಿತ್ರಾರ್ಹ ಸಮ್ಮೇಲನವು 4 ದಿನ ಮುಂದುವರಿದು ಇದೇ ತಾ. 6ರಲ್ಲಿ ಮುಕ್ತಾಯಗೊಂಡಿದೆ. ಜರ್ಮನಿಯ ಧ್ವಂಸಕ್ಕಾಗಿ ಅತಿ ದೊಡ್ಡ ದ್ವಿತೀಯ ರಂಗ ತೆರೆಯುವ ಯೋಜನೆಯನ್ನವರು ಪೂರ್ಣಗೊಳಿಸಿದ್ದಾರೆ. ಇನ್ನು ನೆಲ, ಜಲ, ಆಕಾಶ ಬಲಗಳಿಗೆ ಆಜ್ಞೆ ಕೊಡುವದೊಂದರ ಹೊರತು ಆ ಸಂಬಂಧದ ಇತರ ಎಲ್ಲಾ ಕಾರ್ಯಗಳೂ ಟೆಹರಾನಿನಲ್ಲಿ ಸಂಪೂರ್ಣವಾಗಿವೆ ಅದಕ್ಕೆ ಜತೆಯಾಗಿ ಪೂರ್ವ ಮತ್ತು ದಕ್ಷಿಣದಿಂದಲೂ ಆಕ್ರಮಣಗಳನ್ನಾರಂಭಿಸುವ ನಿರ್ಧಾರವೂ ಆಗಿದೆ. ಅಂತೆಯೇ ಯುದ್ಧಾನಂತರದ ಶಾಂತಿ ಕಾಲ ಸಂಬಂಧದಲ್ಲಿಯೂ ಒಪ್ಪಂದಗಳಾಗಿವೆ. ಮೂರು ಮಿತ್ರ ಪ್ರಮುಖರೊಂದು ಪ್ರಾಮುಖ್ಯ ಪ್ರಕಟಣೆ ಹೊರಡಿಸಿ, ತಾವು ಪ್ರತಿಪಾದಿಸಿದ ಯುದ್ಧ ಮತ್ತು ಶಾಂತಿಯೋಜನೆಗಳನ್ನು ಸಾರಿದ್ದಾರೆ. ವಿರೋಧೀ ಪಾಳಯದಲ್ಲಿ ಕಳವಳವೇಳುಹುದೆಂಬ ನಿರೀಕ್ಷೆಯಿದೆ ಪಶ್ಚಿಮದಿಂದಲೂ ಪೂರ್ವದಿಂದೂ ಜರ್ಮನಿಗೆ ಈ ತನಕ ಅನುಭವವಿಂದ ಅತಿದೊಡ್ಡ ಹೊಡೆತ ಬೀಳಲಿರುವುದೆಂದೂ, ಅದನ್ನು ರೂಪಿಸುವ ಕಾರ್ಯವು ಟೆಹರಾನಿನಲ್ಲಿ ಸಂಪೂರ್ಣವಾಗಿರುವದೆಂದೂ, ಇನ್ನು ಬಾಕಿಯುಳಿದುದು ಆರಂಭ ಮಾತ್ರವೆಂದೂ ಮಿತ್ರ ರಾಷ್ಟ್ರಗಳಲ್ಲೆಲ್ಲಾ ಆನಂದವೆದ್ದಿದೆ.

ಯುದ್ಧಗತಿ

ರಶ್ಯದಲ್ಲಿ ಕೆಂಪುಸೇನೆಯು ಮತ್ತೊಂದು ಹೊಸ ಧಾಳಿಯನ್ನು, ಬಿಳಿ ರಶ್ಯಾ ಸರಹದ್ದಿನಲ್ಲಿ ಆರಂಭಿಸಿದೆ. ಅಲ್ಲಿಯ ಹಲವು ನಗರಗಳು ರಶ್ಯಾನರ ವಶವಾಗಿವೆ. ಕೆಲದಿನಗಳ ಮೊದಲು ಕಿಂಮರಿನ್ ಎಂಬಲ್ಲಿ ಇಳಿದು ತಳವೂರಿದ್ದ ಜರ್ಮನರನ್ನು ರಶ್ಯನರು ಆಕ್ರಮಿಸಿ ಸಂಪೂರ್ಣ ನಾಶ ಮಾಡಿದ್ದಾರೆ. ನೀಪರ್ ನದೀ ಪೂರ್ವದಲ್ಲಿ ಜರ್ಮನರು ಅಮಾನುಷ ಸಾಹಸದಿಂದ ಹೋರಾಡಿದರೂ ಪ್ರಬಲ ಒತ್ತಡಕ್ಕೆ ಪ್ರಧಾನವಾಗಿ ಹಿಂದೆ ಸರಿಯುತಿದ್ದಾರೆ.

ಇಟೆಲಿಯಲ್ಲಿ ರೋಮ್ ನಗರಾಭಿಮುಖವಾಗಿ ಹೊರಟ 8ನೇ ಮತ್ತು 5ನೇ ಸೇನೆಗಳಿಗೆ ಜರ್ಮನರು ಅಸಹನೀಯ ಪ್ರತಿಭಟನೆ ಕೊಡುತ್ತಿದ್ದಾರೆ. ಇಟೆಲಿಯಲ್ಲಿರುವ 9 ಡಿವಿಜನ್ ಜರ್ಮನ್ ಸೇನೆಗಳಲ್ಲಿ 1 ಡಿವಿಜನು 8ನೇ ಸೇನೆಯನ್ನಿದಿರಿಸಿರುವದೆಂದೂ, ತಮ್ಮ ಚಳಿಗಾಲದ ಲೈನಿನಿಂದ ಹೆಜ್ಜೆ ಹಿಂದಿಡಬಾರದೆಂಬ ಪ್ರತಿಜ್ಞೆಯನ್ನು ನಾಜಿಗಳು ನಿಷ್ಠುರವಾಗಿ ಪಾಲಿಸುತ್ತಿದ್ದಾರೆಂದೂ ತಿಳಿದು ಬರುತ್ತದೆ. ಸಾಂಗ್ರೋ ನದೀ ಸಮೀಪದ ಒರ್ಸೋಗ್ನಾ ನಗರವನ್ನು 8ನೇ ಸೇನೆಯಿಂದ ನಾಜಿಗಳು ಕಸಗೊಂಡಿದ್ದಾರೆ.

ಚೀನಾ ಮತ್ತು ಶಾಂತ ಸಮುದ್ರ ದ್ವೀಪಗಳಲ್ಲಿ ವಿಶೇಷ ಯುದ್ಧಘಟನೆಗಳೇನೂ ಇಲ್ಲ. ಜಾಪಾನರು ಹೊಸ ಕಾರ್ಯದಲ್ಲಿ ಮಗ್ನರಾಗಿ ಈ ಕ್ಷೇತ್ರಗಳ ಯುದ್ಧವು ಸಡಿಲು ಬಿಟ್ಟಿರಬಹುದೆಂದು ಊಹೆ. ಜಾಪಾನಿನ್ನು ರಕ್ಷಣಾ ಯುದ್ಧವನ್ನಲ್ಲದೆ ಹೊಸ ಧಾಳಿಯ ಯೋಚನೆಯಲ್ಲಿಲ್ಲವೆಂದು ಮತ್ತೊಂದು ಊಹೆ.

ದ. ಕ. ಸೆಂಟ್ರಲ್ ಕೋಪರೇಟಿವ್ ಹೋಲ್ಸೇಲ್ ಸ್ಟೋರ್ಸ್, ಲಿಮಿಟೆಡ್ ಮಂಗಳೂರು.

ವಿನಂತಿ.

ಕಳೆದ ಬೆಳೆಯಿಂದ ರಿಕ್ವಿಜಿಶನ್ ಮಾಡಲ್ಪಟ್ಟ ಅಕ್ಕಿ ಭತ್ತಗಳನ್ನು ನಮ್ಮ ಸ್ಟೋರಿಗೆ ಕೊಟ್ಟು ಅದರ ಕ್ರಯವನ್ನು ಪಡೆಯಬೇಕೆಂದು ಎಲ್ಲರಿಗೂ ತಿಳಿದಿದೆಯಷ್ಟೆ. ಹೀಗೆ ರಿಕ್ವಿಜಿಶನಿನ ಅಕ್ಕಿ ಭತ್ತ ಯಾವುದಾದರೂ ಸ್ಟೋರಿಗೆ ಕೊಟ್ಟರೆ ಆಯಿತೆಂಬ ತಪ್ಪು ಗ್ರಹಿಕೆ ಅನೇಕರ ಮನಸ್ಸಿನಲ್ಲಿರಬಹುದೆಂತ ತಿಳಿಯುವದರಿಂದ ಈ ಮೂಲಕ ಸಂಬಂಧಪಟ್ಟವರಿಗೆ ಎಚ್ಚರಿಸುವದೇನೆಂದರೆ, ರಿಕ್ವಿಜಿಶನ್ ಮಾಡಲ್ಪಟ್ಟ ಅಕ್ಕಿ ಭತ್ತಗಳನ್ನು ಪಡೆಯುವರೆ ಮೇಲೆ ಹೆಸರು ಕಾಣಿಸಿದ ಸಂಸ್ಥೆಯೊಂದಕ್ಕೆ ಮಾತ್ರ ಅಧಿಕಾರವಿರುವುದು ಹೊರತು ಅಲ್ಲಲ್ಲಿರುವ ಸ್ಥಳೀಯ ಸಹಕಾರಿ ಸ್ಟೋರುಗಳಿಗೆ ಈ ಅಧಿಕಾರವಿಲ್ಲವೆಂಬುದು ಸ್ಪಷ್ಟವಾಗಿ ತಿಳಿಯತಕ್ಕದ್ದು. ಹೀಗಿರುತ್ತ, ಸ್ಥಳೀಯ ಸ್ಟೋರುಗಳಿಗೆ ಯಾರೊಬ್ಬರೂ ರಿಕ್ವಿಜಿಶನ್ ಅಕ್ಕಿ ಭತ್ತಗಳನ್ನು ಕೊಡಕೂಡದು. ನಮ್ಮ ಜಿಲ್ಲಾ ಸ್ಟೋರಿನ ಅಂಗಗಳಾಗಿ ಅಕ್ಕಿ ಭತ್ತಗಳನ್ನು ಪಡೆದು ಮೌಲ್ಯವನ್ನು ಕೊಡುವರೆ ಅಧಿಕೃತವಾದ ಡಿಪ್ಪೋ ಎಂಬ ಹೆಸರಿನ ಪ್ರತ್ಯೇಕ ಸಂಸ್ಥೆಗಳನ್ನು ರೈತರ ಅನುಕೂಲಕ್ಕೆ ಒಗ್ಗೆ ಕೆಳಗೆ ಕಾಣಿಸಿದ ಕೇಂದ್ರಗಳಲ್ಲಿ ಸ್ಥಾಪಿಸಲಾಗಿದೆ ಮತ್ತು ಆ ಡಿಪ್ಪೋಗಳಿಗೆ ಏಜಂಟರನ್ನು ಕೂಡಾ ನೇಮಿಸಿಯದೆ. ಆ ಡಿಪ್ಪೋಗಳಲ್ಲಿ ಆಯಾ ಏಜಂಟರುಗಳ ಕೂಡೆ ಈ ವ್ಯವಹಾರಗಳನ್ನು ನಡೆಸಬೇಕಾಗಿದೆ.

ಡಿಪ್ಪೊಗಳಿರುವ ಸ್ಥಳಗಳು

ಗಂಗೊಳ್ಳಿ, ಕುಂದಾಪುರ, ಹಂಗಾರಕಟ್ಟೆ, ಉಡುಪಿ, ಪಡುಬಿದ್ರಿ, ಕಾರ್ಕಳ, ಮೂಡಬಿದ್ರಿ, ಮಂಗಳೂರು (ಬಂದರು), ಮೂಲ್ಕಿ, ಬಂಟ್ವಾಳ, ಬೆಳ್ತಂಗಡಿ, ಪುತ್ತೂರು, ಉಪ್ಪಿನಂಗಡಿ. ಕಡಬ, ವಿಟ್ಲ, ಬೆಳ್ಳಾರೆ, ಸುಳ್ಯ, ಕಾಸರಗೋಡು.

ಮೊಳಹಳ್ಳಿ ಶಿವರಾವ್,
ಅಧ್ಯಕ್ಷ.

Sewing Mechine Needles

Agents and Stockists throughout India to sell Venu Sewing Machine Needles and their Parts. Highly Polished, strong and more lasting than other needless in the Market. Used with all kinds of Sewing Machines. Terms libera No business Guaranteed Ask for Sample Box. Please correspond in English only

M/G The American Trading (Engg. works) No. 49
Gurdaspur. (Panjab)

1944ನೇ ಇಸವಿಯ

ನವಭಾರತ ಪಾಕೆಟ್ ಡೈರಿ.

ಬಿಕರಿಗೆ ತಯಾರಾಗಿದೆ.

ದರಗಳು.

ಸಣ್ಣ ಸೈಜು (ಸಾದಾ) 1—0—0 (ಕೆಲಿಕೊ) 1—4—0
,, (ಮುಚ್ಚಳದ್ದು) 1—8—0 ದೊಡ್ಡ ಸೈಜು (ಕೆಲಿಕೊ) 2—0—0
ದೊಡ್ಡ ಸೈಜು (ಮುಚ್ಚಳದ್ದು) 2—6—0

ಕಳೆದ ವರ್ಷದಂತೆ ಈ ಸಾಲವೂ ನಮ್ಮ ಡೈರಿಗಳಿಗೆ ಸ್ಪೆಶಲ್ ಬಿಳುಪಾದ ಹೊಳಪಿನ ಕಾಗದವನ್ನು ಉಪಯೋಗಿಸಲಾಗಿದೆ. ಒಂದೊಂದು ಪ್ರತಿಯನ್ನು ಅಪೇಕ್ಷಿಸುವವರು ಸಣ್ಣ ಸೈಜಿನ ಬೆಲೆಗೆ 0- 0. ದೊಡ್ಡ ಸೈಜಿನದ್ದಕ್ಕೆ 0—4—0 ಪ್ರತ್ಯೇಕ ಅಂಚೆವೆಚ್ಚ ಕಳಿಸಬೇಕು. ವ್ಯಾಪಾರಿಗಳಿಗೆ ಕಮಿಶನ್ ಇದೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

The Victory Club

Opened on 2—12 1943

BY

Sri D Noronha, District Munsiff, Udipi.

Both Vegetarian & Non vegetarian dishes

Old Post office Building,

VICTORY ROAD. UDIPI.

ಆಧುನಿಕ ನಾಗರಿಕ ವ್ಯವಸ್ಥೆಯ [illegible] ಭೋಜನ ಮತ್ತು ವಿಶ್ರಾಂತಿ ಗೃಹ

ವಿಕ್ಟರಿ ಕ್ಲಬ್

ತಾ. 2—12—1943ರಲ್ಲಿ ಉಡುಪಿ ಡಿ. ಮುನ್ಸೀಫ್ ಶ್ರೀ. ಡಿ. ನೊರೋನ್ಹಾರವರಿಂದ ತೆರೆಯಲ್ಪಟ್ಟಿತು.

ಹಳೆ ಪೋಸ್ಟಾಪೀಸು ಕಟ್ಟಡ, ವಿಕ್ಟರಿ ರೋಡ್, ಉಡುಪಿ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಂಚ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಒಟ್ಟಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಉಡುಪಿ.

ಗೀತಾ ಜಯಂತಿ ಸಪ್ತಾಹವು

ಜನಪ್ರಿಯ ಕೊಟ್ಟಿಕಾರ್ ಬ್ರದರ್ಸ ಬೊಂಬೇ ಲೈಟ್ ಕಟ್ಟಡದ ಉಪ್ಪರಿಗೆಯಲ್ಲಿ ತಾ 1ರಿಂದ ತಾ 7ರ ತನಕ ಜರಗಿತು. ದಿನಾಲೂ ವಿವಿಧ ಕಾರ್ಯಕ್ರಮಗಳದ್ದು ಶ್ರೀ ಗೀತೆಯ ಕುರಿತಾಗಿ ಶ್ರೀಗಳಾದ ಎಮ್. ಆರ್. ರಾವ್, ಎಮ್. ಎ; ಬಿ. ಶ್ರೀನಿವಾಸ ಭಟ್, ಸಿ. ಕೃಷ್ಣ ಆಚಾರ್ಯ, ಲೀಲಾ ಕಾಮತ್, ಕೆ. ವೆಂಕಟ್ರಮಣಾಚಾರ್, ಬಿ. ಪಟ್ಟಾಭಿ ಬಾಳಿಗರ ಭಾಷಣಗಳೂ, ಕೀರ್ತನ ಕೇಸರಿ ಶಿವಮೂರ್ತಿ ಶಾಸ್ತ್ರಿಗಳ ಹಾಗೂ ಬಿ ರಾಜೀವ ರಾವ್ ಹರಿದಾಸರ ಹರಿಕಥಾ ಕಾಲಕ್ಷೇಪವೂ ಜರಗಿತ್ತು. ಗೀತಾ ಬಾಯಿ ಪಾಠದ ಸ್ಪರ್ಧೆಯಲ್ಲಿ ಕಟಪಾಡಿ ಹಾಯರ್ ಎಲಿಮೆಂಟರಿ ಶಾಲೆಯ ಇಬ್ಬರು ವಿದ್ಯಾರ್ಥಿಗಳಿಗೆ ಪ್ರಥಮ ಎರಡು ಬಹುಮಾನಗಳು ದೊರೆತಿರುವವು. ಕೊನೆಯ ದಿನ ಗೀತಾ ಸ್ಪರ್ಧೆಯಲ್ಲಿಯೂ ಸಹಗಾನದಲ್ಲೂ ಭಾಗ ವಹಿಸಿದ ಬಾಲಕ ಬಾಲಿಕೆಯರೆಲ್ಲರಿಗೂ ಸ್ಪೆಶಲ್ ಬಹುಮಾನಗಳೂ ಸಮಾಧಾನಕರ ಇನಾಮುಗಳೂ ಪವಳಿ ಮತ್ತು 'ಗೀತೆಯ ಕೈಗನ್ನಡಿ' ಪುಸ್ತಕಗಳ ರೂಪದಲ್ಲಿ ಕೊಡಲಾಯಿತು. ಶ್ರೀ ಅಜರಾನಂದ ಸ್ವಾಮಿಜಿಯವರು ಗೀತಾ ಸಪ್ತಾಹ ಮುಕ್ತಾಯ ಭಾಷಣದಲ್ಲಿ ಏಳು ದಿನಗಳಲ್ಲಿ ನಡೆದ ಉಪನ್ಯಾಸಗಳ ತತ್ವಗಳನ್ನು ಮನನಮಾಡಿ ಕಾರ್ಯರೂಪದಲ್ಲಿ ತರಬೇಕೆಂದು ಸರ್ವರನ್ನೂ ವಿನಂತಿಸಿದರು. ಶ್ರೀಮತಿ ಕಸ್ತೂರಿ ಬಾಯಿ ಗಾಂಧಿಯವರ ಆರೋಗ್ಯದ ಕುರಿತು ಮೌನ ಪ್ರಾರ್ಥನೆಯಾಯಿತು. ಸಪ್ತಾಹವು ಯಶಸ್ವಿಯಾಗಲು ನೆರವಾದ ಮಹಾಶಯರಿಗೂ ಉಪ್ಪರಿಗೆಯನ್ನಿತ್ತ ಕೊಟ್ಟಿಕಾರ್ ಬಂಧುಗಳಿಗೂ ಶ್ರೀ ಪಿ ನಾರಾಯಣ ಪ್ರಭುಗಳು ಧನ್ಯವಾದಗಳನ್ನರ್ಪಿಸಿದರು.

ವಿಕ್ಟರಿ ಕ್ಲಬ್ ಪ್ರಾರಂಭೋತ್ಸವ

ಈ ತಾ. 2ರಲ್ಲಿ ಶ್ರೀ ಡಿ ನೊರೋನ್ಹಾ, ಡಿ. ಮುನ್ಸೀಫ್, ಉಡುಪಿ ಅವರಿಂದ ಜರಗಿಸಲ್ಪಟ್ಟಿತು. ಊರ ಗಣ್ಯರು, ಗೃಹಿಣಿಯರು ಈ ಸಮಾರಂಭಕ್ಕೆ ಆಹ್ವಾನಿಸಲ್ಪಟ್ಟಿದ್ದರು. ಟೀಪಾರ್ಟಿ ಸಮಾರಂಭದ ಬಳಿಕ ಶ್ರೀ ಬಿ ಸಚ್ಚಿದಾನಂದ ಹೆಗ್ಡೆಯವರು ಶ್ರೀ ನೊರೋನ್ಹರನ್ನು ಕ್ಲಬ್ ತೆರೆಯುವರೆ ಕೇಳಿಕೊಂಡರು. [illegible] ಪಿ ಜಿ ನಿ ರೇಗೋ ಮೊದಲಾದವರ ಭಾಷಣಗಳಾದವು. ಕ್ಲಬ್ಬಿನ ಪರವಾಗಿ [illegible] ಧನ್ಯವಾದಗಳನ್ನರ್ಪಿಸಿದರು. ಉಡುಪಿ ನಗರದ ಕೇಂದ್ರ ಸ್ಥಳವಾದ ಹಳೆ ಪೋಸ್ಟಾಪೀಸು ಕಟ್ಟಡದಲ್ಲಿ ಸ್ಥಾಪಿತವಾದ ಈ 'ವಿಕ್ಟರಿ ಕ್ಲಬ್' ಅನೇಕ ನಾಗರಿಕ ವ್ಯವಸ್ಥೆಗಳಿಂದ ಕೂಡಿದ್ದು ಮಹಾಜನರ ಪ್ರೋತ್ಸಾಹಕ್ಕೆ ಅರ್ಹವಾಗಿದೆ.

ಪೆರ್ಡೂರಲ್ಲಿ ಪಬ್ಲಿಕ್ ಬ್ಯಾಡ್ಮಿಂಟನ್ ಟೂರ್ನಮೆಂಟ್:—ತಾ. 26—12—43ಕ್ಕೆ ಪ್ರಾರಂಭವಾಗುವುದು. (ಡಬ್ಬಲ್ಸ್ ಮತ್ತು ಸಿಂಗಲ್ಸ್-ಪ್ರವೇಶ ಫೀ ರೂ. 2-8-0 ಮತ್ತು 3-12-0) ಪ್ರವೇಶ ದಾಖಲೆಗಳನ್ನು ತಾ. 20ರ ತನಕ ಮಾತ್ರ ಸ್ವೀಕರಿಸಲಾಗುವುದು. ಗೆದ್ದವರಿಗೆ ಮತ್ತು ರನ್ನರ್ಸ್ ಅಪ್‌ನವರಿಗೆ ಬೆಳ್ಳಿಯ ಕಪ್ ಮತ್ತು ಮೆಡಲುಗಳನ್ನು ಕೊಡಲಾಗುವುದು. ಬರುವವರಿಗೆ ಕಮಿಟಿಯವರಿಂದ ಊಟ ಮತ್ತು ಉಳಕೊಳ್ಳುವಿಕೆಯ ವ್ಯವಸ್ಥೆ ಮಾಡಲ್ಪಡುವುದು.

Read & Advertise in
NAVAYUGA

ಶ್ರೀ. ಎ. ಬಿ. ಶೆಟ್ಟರ ನಿರೂಪಣೆ

ದಕ್ಷಿಣ ಕನ್ನಡದ ಆಹಾರ ನಿಯಂತ್ರಣಕಾರ್ಯ.

ದ. ಕ. ವರ್ಗದಾರ ಸಂಘ ಮತ್ತು ಆಹಾರ ಸಮಸ್ಯೆಯ ಕುರಿತು ಅಭಿರುಚಿಯಿದ್ದವರಿಂದ ಮಾಡಲ್ಪಟ್ಟ ವಿಜ್ಞಾಪನೆಗಳಿಗನುಸಾರವಾಗಿ ಸರಕಾರವು ಈ ಜಿಲ್ಲೆಯ ಆಹಾರ ನಿಯಂತ್ರಣದ ಕುರಿತು ಮಾಡಿರುವ ನಿರ್ಧಾರಗಳನ್ನು ರೈತರು ಸರಿಯಾಗಿ ತಿಳಿದುಕೊಳ್ಳುವದು ಅಪೇಕ್ಷಣೀಯವಿದೆ.

1. ವರ್ಗದಾರರ ಉತ್ಪತ್ತಿಯ ಶೇಕಡಾ ಇಂತಿಷ್ಟೇ ಅಂಶವು ಪ್ರಕೃತ 'ರೆಕ್ವಿಸಿಶನ್' ಮಾಡಲ್ಪಡಬೇಕೆಂದು ಎಡ್ವೈಸರರು ಒಂದು ಸೂತ್ರ ನಿರ್ಮಿಸಿದ್ದಾರೆ. ಆಕ್ಷೇಪಣಾ ಅರ್ಜಿಗಳ ವಿಚಾರಣಾ ಕಾಲದಲ್ಲಿ ಈ ಸೂತ್ರಕ್ಕೆ ಲಕ್ಷ್ಯಕೊಡಲಾಗುವದು. ಅಳಿಯ ಸಂತಾನ ಕುಟುಂಬಗಳಲ್ಲಾಗಿರುವ ಜೀವನಾಂಶ ವಿಭಾಗಗಳನ್ನೂ ಈ ಸಂದರ್ಭದಲ್ಲಿ ಗಮನಿಸಲಾಗುವದು.

2. ರೆಕ್ವಿಸಿಶನ್ ಮಾಡಲ್ಪಟ್ಟ ಭತ್ತವನ್ನು ಅಕ್ಕಿಯಾಗಿ ತಯಾರಿಸಿ ಒಪ್ಪಿಸಬಹುದು.

3. ಸಂಘದವರು ಸೂಚಿಸಿದ ಅಕ್ಕೀ ಧಾರಣೆಯು, ಪ್ರಾಂತ್ಯದ ಇತರ ಕಡೆಗಳ ನಿಶ್ಚಿತ ಧಾರಣೆಗಿಂತ ಅಧಿಕವಿದ್ದರೂ ನ್ಯಾಯವಾದದ್ದೆಂದು ಅಂಗೀಕರಿಸಲ್ಪಟ್ಟಿದೆ ಇದರಿಂದ ಕಳೆದ ವರುಷ ರಿಕ್ವಿಸಿಶನ್ ಅಕ್ಕಿಗೆ ದೊರೆತುದಕ್ಕಿಂತ ಮುಡಿಗೆ ರೂ. 1–8–0 ಹೆಚ್ಚಿಗೆ ದೊರೆಯುವದು. ಮತ್ತು ಈ ಕ್ರಯವು ಅಕ್ಕಿಯನ್ನು ಒಪ್ಪಿಸಿದ ಕೂಡಲೇ ಒಕ್ಕಲಿನವನಿಗೆ ಅಥವಾ ವರ್ಗದಾರನಿಗೆ (ಅವರು ತಮ್ಮೊಳಗೆ ಮಾಡಿಕೊಂಡ ವ್ಯವಸ್ಥೆಯಂತೆ) ದೊರೆಯುವದು.

4. ರಿಕ್ವಿಸಿಶನ್ ಅಕ್ಕಿಯನ್ನೆಲ್ಲಾ ಪಡಕೊಳ್ಳುವ ಮತ್ತು ಕೊಂಡುಕೊಳ್ಳುವವರಿಗೆ ವಿಕ್ರಯಿಸುವ ಕಾರ್ಯಭಾರವನ್ನು ಕೋಪರೇಟಿವ್ ಸ್ಟೋರ್ಸುಗಳಿಗೆ ಕೊಡಲಾಗಿದೆ. ರಿಕ್ವಿಸಿಶನ್ ಅಕ್ಕಿಯು ಕಳ್ಳಸಂತೆಯಲ್ಲಿ ಅಧಿಕ ಬೆಲೆಗೆ ಮಾರಲ್ಪಡುವ ಅಪಾಯವನ್ನು ಈ ರೀತಿ ತಡೆಗಟ್ಟಲಾಗಿದೆ.

5. ಕೋಪರೇಟಿವ್ ಸ್ಟೋರ್ಸುಗಳು ಜಿಲ್ಲೆಯ ಬೇರೆ ಬೇರೆ ವಿಭಾಗಗಳಲ್ಲಿ ಮಾರಬೇಕಾದ ನಿಶ್ಚಿತ ಧಾರಣೆಗಳು (Ceiling prices) ಈ ತಿಂಗಳಲ್ಲೇ ನಿರ್ಣಯಿಸಲ್ಪಡುವವು. ಯಾರಾದರೂ ಸಾಹುಕಾರರು ಅಕ್ಕಿಯನ್ನು ಅಧಿಕಬೆಲೆಗೆ ಮಾರಿದರೆ ಅಂಥವರ ಲೈಸೆನ್ಸ್ ರದ್ದಾಗುವದು.

6. ಮಂಗಳೂರು ಮತ್ತು ಕಾಸರಗೋಡು ತಾಲೂಕಿನ ಕೆಲವು ಕಡೆಗಳಲ್ಲಿ ಬರುವ ತಿಂಗಳಲ್ಲೇ ಹಸುಗೆ (Ratisning) ಪದ್ಧತಿ ಜ್ಯಾರಿಗೆ ಬರುವದು. ಉಡುಪಿಗೂ ಅತಿ ಬೇಗನೇ ರೇಶನಿಂಗ್ ಬರಲಿದೆ. ಮತ್ತು ಅದರ ಬೆನ್ನಲ್ಲೇ ಕುಂದಾಪುರ, ಕಾರ್ಕಳ ಮತ್ತು ಪುತ್ತೂರು ನಗರಗಳಿಗೂ ರೇಶನಿಂಗ್ ಬರಬಹುದು.

7 ಜಿಲ್ಲೆಯ ಸರಹದ್ದುಗಳಲ್ಲಿ ವಿಶೇಷ ಪೋಲೀಸು ಕಾವಲನ್ನಿಟ್ಟು ಈ ಜಿಲ್ಲೆಯಿಂದ ಉತ್ತರ ಕನ್ನಡ, ಮೈಸೂರು ಮತ್ತು ಮಲಬಾರುಗಳಿಗೆ ಅಕ್ಕಿ ರಫ್ತಾಗದಂತೆ ತಡೆಯಲಾಗುವದು.

8 ಜಿಲ್ಲೆಯಲ್ಲಿ ಅಕ್ಕಿ ಕಡಿಮೆಯಾಗುವಂತಿದ್ದರೆ ಹೊರಗಿನಿಂದ ಅಕ್ಕಿಯನ್ನು ತರಿಸಿಕೊಳ್ಳಲಾಗುವದು.

ಗವರ್ನರ್ ಸಲಹೆಗಾರರ ಭೇಟಿಯ ಮತ್ತು ಅವರಿಗಿಂತ ಮೊದಲು ಬಂದಿದ್ದ ಅವರ ಸಹಾಯಕ ಆಫೀಸರರೊಪ್ಪಿಸಿದ್ದ ವರದಿಯ ಪರಿಣಾಮವಾಗಿ ಸರಕಾರವು ನಿರ್ಧರಿಸಿದ ಮೇಲಿನ ಕಾರ್ಯಕ್ರಮಗಳನ್ನು ಅವಗಾಹನೆಗೆ ತಂದುಕೊಂಡು ಸದ್ಯದ ಯೋಜನೆಗೆ ಹೃತ್ಪೂರ್ವಕ ಸಹಕಾರವಿತ್ತು ಕೊಂಡುಕೊಳ್ಳುವ ಬಡವರಿಗೆ ನೆರವಾಗುವದು ಎಲ್ಲಾ ರೈತರ ಆದ್ಯ ಕರ್ತವ್ಯವಿದೆ.

ಎ. ಬಿ ಶೆಟ್ಟಿ.

ಚೂರು-ಚೂರು

'ಚರ್ಚಿಲ್, ಸ್ಟ್ಯಾಲಿನ್, ರುಸವೆಲ್ಟ ರೊಟ್ಟಾಗಿ ನಡೆಸಿದ ಸಮ್ಮೇಲನವು ಒಮ್ಮತವುಂಟಾಗದೆ ಅಪಜಯಗೊಂಡಿತು. ಮಿತ್ರರಾಷ್ಟ್ರಗಳೀಗ ಅದನ್ನು ಪ್ರಚಾರ ಮೂಲಕ ಬಚ್ಚಿಡಲು ಯತ್ನಿಸುತ್ತಿವೆ'—ಜರ್ಮನ್ ರೇಡಿಯೋ.

ಜರ್ಮನರಿಗದು ತಿಳಿದು ಹೋದ ಮೇಲೆ ಇನ್ನು ಬಚ್ಚಿಡುವದು ಯಾರಿಗಾಗಿ—ಹಿಂದೀಯರಿಗೆ ಗೊತ್ತಾಗಬಾರದೆಂದು?

೦೦ ೦೦ ೦೦

'ಶ್ರೀಮತಿ ಕಸ್ತೂರಿ ಬಾ ಗಾಂಧಿಯವರಿಗೆ ಒಂದೇ ವಾರ ಎರಡು ಬಾರಿ ಹೃದಯಬೇನೆ ಕಾಣಿಸಿಕೊಂಡು ಅವರು ದುರ್ಬಲರಾಗಿದ್ದಾರೆ; ಅವರ ಅಪೇಕ್ಷೆಯಂತೆ ಅವರ ಮಕ್ಕಳ ಮತ್ತು ಮೊಮ್ಮಕ್ಕಳ ಭೇಟಿಗವಕಾಶಮಾಡಿ ಕೊಡಲಾಗಿದೆ''—ಬೊಂಬಾಯಿ ಸರಕಾರದ ಪ್ರಕಟಣೆ.

ಹೊಸ ರೀತಿಯ ಚಿಕಿತ್ಸೆ—ಸಂಬಂಧಿಕರನ್ನು ಕಂಡರೆ ಹೃದಯ ವೇದನೆ ನಿವಾರಣೆ.

೦೦ ೦೦ ೦೦

''ನಿಮಗೆ ನನ್ನೊಡನೆ ಸಂಭಾಷಿಸುವ ಇಚ್ಛೆಯಿದೆಯೆ? ಎಂದು ಲೋರ್ಡ್ ವೇವಲರು ಗಾಂಧಿಯವರಿಗೆ ಪತ್ರ ಬರೆದಿದ್ದಾರೆ' — ನವದಿಲ್ಲಿಯಲ್ಲಿ ದಟ್ಟ ವದಂತಿ.

ಇರಲಾರದು—ಅವರಿಗಿರುವದು. ದೇವರನ್ನೇ ಸಾಕ್ಷಾತ್ ತರಿಸಿಕೊಳ್ಳಬೇಕೆಂಬ ಇಚ್ಛೆ ಮಾತ್ರ.

೦೦ ೦೦ ೦೦

'ಮೂವತ್ತೆಂಟು ವರುಷದ ವಾಲ್ಟರ್ ಬೆಸ್ಟ್ ಎಂಬ ಹಚ್ಚ ನೊಬ್ಬನು ಅಧ್ಯಕ್ಷ ರುಸವೆಲ್ಟರ ಕೊಲೆ ಮಾಡಲು ಕಳೆದ ತಿಂಗಳಲ್ಲಿ ವಿಫಲ ಪ್ರಯತ್ನ ಮಾಡಿದ'—ಅಮೇರಿಕದಿಂದ ವಾರ್ತೆ.

ಇಂತಹ ಹುಚ್ಚರೆಲ್ಲರಿಗೂ ಚಿಕಿತ್ಸೆಯಾಗುವ ತನಕ ರುಸವೆಲ್ಟರು ಮಧ್ಯ ಪೂರ್ವದಲ್ಲೇ ನಿಂತು ಇನ್ನೂ ಹಲವು ಪರಿಷತ್ತುಗಳನ್ನು ಕೂಡಿಸುವದು ವಾಸಿ.

೦೦ ೦೦ ೦೦

'ವೈಸರಾಯರು ಗವರ್ನರರುಗಳನ್ನಾಮಂತ್ರಿಸಿ ಮಾತುಕತೆ ನಡೆಸಿದುದು ರಾಜಕೀಯ ಸಂಬಂಧವಾಗಿ ಎನ್ನಲಾಗದು' ಕಾಮನ್ಸ್ ಸಭೆಯಲ್ಲಿ ಮಿ. ಅಮೆರಿಯವರ ಉತ್ತರ.

ಬೇಡ—ಅದಕ್ಕೆ 'ಗವರ್ನರರ ಓಟಹಾಗೂ ಊಟ ಸ್ಪರ್ಧೆ' ಎಂದೇ ಹೆಸರಿಡೋಣ!

೦೦ ೦೦ ೦೦

ಪಾನನಿಷೇಧ ಕಾನೂನನ್ನು ರದ್ದುಪಡಿಸಿದ ಮದ್ರಾಸ್ ಗವರ್ನರರ ವರ್ತನೆಯನ್ನು ನಿಷೇಧಿಸಿ ಶ್ರೀ ರಾಜಗೋಪಾಲಾಚಾರ್ಯರ ಧುರೀಣತ್ವದಲ್ಲಿ ಪ್ರಬಲ ಚಳವಳಿ ಎದ್ದಿದೆ.

ಕುಡಿಯದಿದ್ದವರು ಗಲಭೆಗಾರರಾಗುತ್ತಾರೆಂಬುದನ್ನು ಇದರಿಂದ ಮನಗಂಡ ಗವರ್ನರರು ಇನ್ನೆಂದೂ ನಿಷೇಧವನ್ನಿರಗೊಡಿಸಲಾರರು.

೦೦ ೦೦ ೦೦

ನಿರ್ಬಂಧದಲ್ಲಿರುವ ಮೆಹರಾಲಿಯವರು ಕಾಹಿಲೆ ಬಿದ್ದಿದ್ದಾರೆ; ಬಂಗಾಳದ ಮಾಜೀ ಮುಖ್ಯ ಮಂತ್ರಿ ಮಿ ಫಜಲುಲ್ ಹಕ್ಕರ ಸ್ಥಿತಿ ಚಿಂತಾ ಜನಕವಾಗಿದೆ.

'ಶುದ್ಧ ಹವೆ ಸೇವಿಸಿ ನಿರ್ಮಲ ಬುದ್ಧಿಯಲ್ಲಿರಿ'—ಎಂದು ಅಧಿಕಾರಿಗಳು ಇಂಥವರಿಗೆ ಹೇಳುತ್ತಿದ್ದುದ್ದು ಹೀಗಾಗಬಾರದೆಂದೇ!

—ವಿನೋದಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಅತ್ಯುತ್ತಮವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಉಚ್ಚುವದು, ಮಲಬದ್ಧತೆ, ಒಳಜ್ವರ, ಅರುಚಿ ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—0—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವದ ಆಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತರಕ್ತವನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ—1. ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ ಅಂಡ್ ಜನರಲ್ ಮರ್ಚೆಂಟ್ಸ್, 183 ಸುಖಾರಿಬಾಗ್ ರೋಡ್, ಪರೇಲ, ಬೊಂಬಾಯಿ, ನಂಬ್ರ 12. 2. ಜನರಲ್ ಸ್ಟೋರ್ಸ್, ಜಿ. ಐ. ಪಿ. ಮಾಟುಂಗಾ. 3. ಮುಲ್ಲರ್ ಪಟನ್ಸ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ. 4. ಧನ್ವಂತರಿ ವೈದ್ಯಶಾಲೆ, ಲೆನ್ಸಡೌನ ಬಜಾರ್, ಮೈಸೂರು. 5. ಮಂಗ್ಳೂರು ಸ್ಟೋರ್ಸ್, ಮಡಿಕೇರಿ. 6. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರ ಪೇಟೆ. 7. ಡಾ। ಶ್ರೀನಿವಾಸ ಪೈ, ಪುತ್ತೂರು. 8. ಕಾಂತಾವರ ವಾಸ್ದೇವ ಕಮ್ತಿ, ಬೆಳ್ತಂಗಡಿ. 9. ಮುಲ್ಕಿ ಮೆಡಿಕಲ್ ಸ್ಟೋರ್ಸ್, ಮುಲ್ಕಿ. 10. ನವಭಾರತ ಬುಕ್ ಡಿಪ್ಪೊ, ಸಂತೆಕಟ್ಟೆ, ಉಡುಪಿ. 11. ಕೃಷ್ಣ ಫಾರ್ಮಸಿ, ಕುಂದಾಪುರ. 12. ಎಚ್. ನರಸಿಂಹ ನಾಯ್ಕ, ಮರ್ಚಂಟ್, ಶಂಕರನಾರಾಯಣ. 13. ಕಾಸರಗೋಡು ಶ್ರೀ ರಾಮಾ ಸ್ಟೇಶನರಿ ಹೌಸ್, ಶ್ರೀ ರಾಮ ಪೇಟೆ. 14. ಕೆ. ಶ್ರೀನಿವಾಸ ಹೆಗ್ಡೆ, ತೀರ್ಥಹಳ್ಳಿ. 15. ಬಿ ಯಸ್. ನರಸಿಂಗ ರಾವ್, ಮರ್ಚೆಂಟ್, ಚಿಕ್ಕಮಂಗ್ಳೂರು.

ಪ್ರಕಟಣೆ

D. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisseri.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ-

ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುನ್ನಿರಾಮನ್,

ಮೆನೇಜರ್,

NOTICE.

ಉಡ್ಪಿ ಡಿ ಮು. ಕೋರ್ಟನಲ್ಲಿ.

O. P. No 82/1943

ಮಂದಾಕಿನಿ, ಪಿ ವಿ, ತಂತ್ರಿಗಳ ಎಡವೆ, ಮ್ಯಾನರುಲ್ಮೈನ ಜೀತಕ ಪಿ. ರಾಘವೇಂದ್ರ ತಂತ್ರಿ, ಪಿ. ರಾಮತಂತ್ರಿಗಳ ಮಗ, ಉಡ್ಪಿ ತಾಲೂಕು ಆಫೀಸು ಕ್ಲಾರ್ಕ, ಉಡ್ಪಿ ತಾಲ್ಕು ನಂಬ್ರ 76 ಬಡಗಬೆಟ್ಟು ಗಾವಾದ ಪೈಲೂರು — ಅರ್ಜದಾರಳು. ಈ ಮೂಲಕ ಸರ್ವರಿಗೂ ತಿಳಿಸುವುದೇನೆಂದರೆ:-

ಮ್ಯಾನರ ಅರ್ಜದಾರಳ ಗಂಡ ತಾ 23-5-1943 ರಲ್ಲಿ ಮೃತಪಟ್ಟ ಪಿ. ವಿ ತಂತ್ರಿಗಳೀಗೆ ''ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲ್ಯಾಫ್ ಎಶ್ಯೂರೆನ್ಸ್, ಕಂಪೆನಿ ಲಿಮಿಟೆಡ್'' ನಿಂದ ಪೋಲಿಸಿ ನಂಬ್ರ 777740ರ ಮುಖ್ತು ಸಲತಕ್ಕ ಆಶ್ಯೂರ್ ರಾಶಿ 1000-0-0ನ್ನು ವಸೂಲು ಪಡಿಯುವರೆ ಸದ್ರಿ ಮೃತ ಪಿ ವಿ. ತಂತ್ರಿಗಳ ವಾರೀಸುದಾರಳೆಂದು ಅರ್ಜದಾರಳೇ ಹಕ್ಕುದಾರಳೆಂತಲೂ, ಆ ಬಗ್ಗೆ ಮ್ಯಾನರ್ ಅರ್ಜದಾರಳ ಗೋಸ್ಕರ ಅವಳ ರಕ್ಷಕ ಮೇಲ್ಕಂಡ ಪಿ. ರಾಘವೇಂದ್ರ ತಂತ್ರಿಗಳ ಹೆಸರಿಗೆ ಸಕ್ಸೆಸ್ಸನ್ ಸರ್ಟಿಫಿಕೇಟು ಕೊಡಬೇಕಾಗಿಯೂ (ವಗೈರೆ ಸಂಗ್ತಿಗಳನ್ನು ಕಾಣಿಸಿ) ದಾಖಲ್ಮಾಡಿರುವ ಮೇಲ್ಕಂಡ ಅರ್ಜಿಯು ತಾ 23-12-1943 ಕ್ಕೆ ಇಟ್ಟಿರುತ್ತದೆ ಈ ಕುರಿತು ಆಕ್ಷೇಪ ಹೇಳುವವರು ಸದ್ರಿ ತಾ 23-12-1943ನೇ ದಿವಸ ಈ ಕೋರ್ಟಿನ ಮುಂದ ಬೆಳಗ್ಗೆ 11 ಘಂಟೆಗೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು.

P. V. Acharya.
Vakil For Petitioner.

ಮೊಕ್ಕಾಂ, ಉಡುಪಿ.
ತಾರೀಕು 29-11-1943

ತಾರುಣ್ಯ

ಕೊಟ್ಟು, ವೀರ್ಯಸ್ತಂಭನೆ ಮಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟುಮಾಡಲು ರಮಣ ವಿಲಾಸಿನಿ ಉತ್ತಮ ಔಷಧಿ. ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,

181 ಚೈನಾ ಬಜಾರ್ ರೋಡ್,
ಮದ್ರಾಸ

ಪುತ್ತೂರು ಏಜಂಟರು:—**ಪೈ ಫಾರ್ಮಸಿ**

ದಕ್ಷಿಣ ಕನ್ನಡ-

ಮಂಗಳೂರು.

ಶ್ರೀ. ಜೆ. ಸಿ. ಬೋಸರದಿನವು ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ತಾ 30 ರಂದು ಸಂಜೆ ಆಚರಿಸಲ್ಪಟ್ಟಿತು. ಸೈನ್ಸ್ ಅಧ್ಯಾಪಕರಾದ ಶ್ರೀ|| ಪಿ. ಸುಬ್ರಾಯ ಭಟ್ಟರು ಅಧ್ಯಕ್ಷತೆ ವಹಿಸಿದ್ದರು, ಶ್ರೀ|| ಪಿ. ಕೆ. ನಾರಾಯಣ ಇವರು ವಿಜ್ಞಾನಿ ಬೋಸರ ಜೀವನ ಚರಿತ್ರೆಯನ್ನು ಚಿತ್ರಿಸಿದರು. ದಿವಂಗತ ರವೀಂದ್ರರು ಬೋಸರ ಮರಣದ ಸಮಯದಲ್ಲಿ ಬರೆದಿದ್ದ ಕವಿತೆಯ ಕನ್ನಡ ಅನುವಾದವನ್ನು ಶ್ರೀ|| ಎಚ್. ಎಸ್. ಉಡುಪರು ಹಾಡಿದರು, ಮಿಸ್. ರಾಧಾಬಾಯಿ ಶೆಟ್ಟಿ ಅವರು ಧನ್ಯವಾದಗಳನ್ನರ್ಪಿಸಿದರು.

ಘಾಟೆ ಮತ್ತು ಜೋಳ್ಕರವರನ್ನು ಬಿಡಬೇಕೆಂಬ ಚಳವಳವು ನಗರದ ಹೊರಗೆ, [ಸಭೆ-ಮೆರವಣಿಗೆಗಳ ಮೇಲೆ ನಿರ್ಬಂಧವಿಲ್ಲದ ಪ್ರದೇಶದಲ್ಲಿ] ನಡೆಯುತ್ತಿದೆ. ಮಂಗಳೂರು ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ಈಗಾಗಲೇ ಪಡೀಲು, ಜೊಕ್ಕಟ್ಟೆ ಮತ್ತು ಉಳ್ಳಾಲಗಳಲ್ಲಿ ಸಭೆ ಜರಗಿರುವವು, ಶ್ರೀಯುತರು ಎಸ್. ವಿ ಘಾಟೆ ಮತ್ತು ಎಸ್. ಎನ್ ಜೋಳ್ಕ ಇವರ ಬಿಡುಗಡೆಯನ್ನು ಕೇಳಿಕೊಂಡು ಕಮ್ಯೂನಿಸ್ಟ್ ಪಕ್ಷದವರು ಪ್ರಾಂತಿಕ ಸರಕಾರಕ್ಕೆ ಬರೆದಿರುವರು.

ಭಾಷಣ ಸ್ಪರ್ಧೆಬಿಜೈ ಸೆಪ್ಟರ್ಸ್ ಕ್ಲಬ್ಬಿನ ಆಶ್ರಯದಲ್ಲಿ, ಶ್ರೀ|| ಬಿ. ವಿ. ರಮಣ. ಬಿ. ಎ. ಅವರ ಅಧ್ಯಕ್ಷತೆಯಲ್ಲಿ ಜಪ್ಪು ಸೈಂಟ್ ಜಾನ್ ಶಾಲೆಯಲ್ಲಿ ವಿದ್ಯಾರ್ಥಿಗಳ ಭಾಷಣ ಸ್ಪರ್ಧೆಯೊಂದು ಜರಗಿತು. ಬಿಜೈ ಹಾ. ಎ. ಶಾಲೆ, ಕದ್ರಿ ವಿದ್ಯಾಬೋಧಿನಿ ಶಾಲೆ ಮತ್ತು ಜಪ್ಪು ಸೈಂಟ್ ಜಾನ್ ಶಾಲೆಗಳ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದ್ದರು. ಸ್ಪರ್ಧೆಯಲ್ಲಿ ಬೆಳ್ಳಿಯ ಬಟ್ಟಲು ಕದ್ರಿ ವಿದ್ಯಾಬೋಧಿನಿ ಹಾ. ಎ. ಶಾಲೆಗೂ, ಪ್ರಥಮ ಬಹುಮಾನವಾದ ಪದಕವು ಅದೇ ಶಾಲೆಯ ವಿದ್ಯಾರ್ಥಿನಿ ಕು ಮಾರಿ ಭವಾನಿ ಬಾಯಿಗೂ ದೊರಕಿದೆ.

ಭಗಿನಿ ಸಮಾಜದ ಆಶ್ರಯದಲ್ಲಿ ಇತ್ತೀಚೆಗೆ ಜರಗಿದ ಮಹಿಳಾ ಪರಿಷತ್ತಿನಲ್ಲಿ, ಶ್ರೀ|| ರಾಮಮೂರ್ತಿಯವರು ಈ ಜಿಲ್ಲೆಗೆ ಬಂದಾಗ ಅವರನ್ನು ಭೇಟಿಯಾಗಲು ಶಿಷ್ಟ ಮಂಡಲವನ್ನು ಕಳುಹಬೇಕೆಂಬ ನಿರ್ಧಾರವಾಗಿತ್ತು. ಶಿಷ್ಟಮಂಡಲವನ್ನು ಸ್ವೀಕರಿಸುವುದಿಲ್ಲವೆಂದು ನೋಡಲು ನಿರ್ಧಾರವಾಗಿದ್ದು ತಾ. ೩೦ರಂದು ಸಂಜೆ ಲೇಡೀಸ್ ಕ್ಲಬ್ಬಿನಲ್ಲಿ ಸಮಾಜ ಪ್ರತಿನಿಧಿಗಳಿಗೆ ಗವರ್ನರರ ಸಲಹೆಗಾರರು ಭೇಟಿಕೊಟ್ಟರೆಂದು ತಿಳಿದು ಬರುತ್ತದೆ.

ಡಿ. ಸಿ. ಎಂ. ಶಾಲೆಯ ಹೊಸ ಕಾರ್ಯಕಾರಿ ಸಮಿತಿಯು ರಚಿಸಲ್ಪಟ್ಟಿರುವುದು. ಅದರಲ್ಲಿ ಪಂಡಿತ ಹೃದಯನಾಥ ಕುಂಜ್ರು ಅಧ್ಯಕ್ಷರು; ಡಾ| ಕೇಶವ ಪೈ ಉಪಾಧ್ಯಕ್ಷರು; ಶ್ರೀ ಎಸ್. ಆರ್. ವೆಂಕಟರಮಣ ಗೌಡ ಕಾರ್ಯದರ್ಶಿ; ಶ್ರೀ| ಎಂ. ಎಸ್. ಪಿತಾಂಬರರಾಯರು ಪತ್ರಿಕಾ ಮಾರ್ಗದರ್ಶಿ; ಮತ್ತು ಶ್ರೀ| ಎನ್. ಶಿವ ರಾಯರು ಗೌರವ ಕೋಶಾಧಿಕಾರಿ.

ಜಿಲ್ಲಾ ಕ್ಷೌರಿಕ ಕೂಟದ ಸಭೆಯು ಕಳೆದ ತಾ-27ರಂದು ಸಂಜೆ ಶ್ರೀ|| ಕೆ. ಕೃಷ್ಣರಾಯ ಅಧ್ಯಕ್ಷತೆಯಲ್ಲಿ ಜರಗಿತು. ತಿಂಗಳ ಕೊನೆಯ ವಾರಗಳಲ್ಲಿ ಎಲ್ಲ ಕ್ಷೌರಿಕರು ಅಂಗಡಿಗಳನ್ನು ಮುಚ್ಚಬೇಕೆಂದು ಒಬ್ಬರು ನಿರ್ಣಯ ತಂದರು. 'ಪ್ರತಿ ಅಮಾವಾಸ್ಯೆಯ ದಿನವೇ ರಜೆಯಾಗಬೇಕು' ಎಂದು ಕೆಲವರು ಹೇಳಿದರು; ಯಾವುದೂ ಅತ್ಯರ್ಥವಾಗದೆ ವಿಷಯವು ಮುಂದಿನ ಸಭೆಗೆ ಮುಂದುವರಿಸಲ್ಪಟ್ಟಿತು.

ಅಕ್ಕಿ ಸಂಗ್ರಹ ಸಪ್ತಾಹ
ತಾ ೭ರಿಂದ ೧೪ರ ತನಕ

ದ. ಕ. ಭೂಮಾಲಿಕರು ಮಾಡಿದ ವಿನಂತಿಯಲ್ಲಿ ಸರ್ವಜನರ ಹಿತ ದೃಷ್ಟಿಯಿಂದ ಕೇಳಿದ ಎಲ್ಲ ಸಂಗತಿಗಳನ್ನು ಸರಕಾರದವರು ಒಪ್ಪಿದ್ದಾರೆ. ಹಾಗಾಗಿ ಈ ಯೋಜನೆಯನ್ನು ಯಶಸ್ವಿ ಮಾಡುವ ಜವಾಬ್ದಾರಿ ನಮ್ಮದು, ಮಂಗಳೂರು ಪೇಟೆಗೆ ಬೇಕಾದ ೩೦ ಸಾವಿರ ಮುಡಿ ಅಕ್ಕಿ ಕೂಡಲೇ ದಶಂಬರ ೧೫ರ ಒಳಗೆ ಕೊಡಬೇಕಾಗಿದೆ. ವಿಳಂಬ ಮಾಡಿದರೆ ಕೊಂಡರೆಯೇ ವಿನಾ ಲಾಭವಿಲ್ಲ. ಇಂಥಾ ಅಕ್ಕಿಗಳನ್ನು ಸ್ಟೋರುಗಳಿಗೆ ವಿನಾ ವ್ಯಾಪಾರಿಗಳ ಕೊಡಬಾರದು. ದಶಂಬರ ತಾ ೭ರಿಂದ ೧೪ರ ತನಕ ಅಕ್ಕಿ ಸಂಗ್ರಹ ಸಪ್ತಾಹವನ್ನು ಜಿಲ್ಲೆಯಲ್ಲಿ ಎಲ್ಲ ಕಡೆಗಳಲ್ಲಿಯೂ ಆಚರಿಸಬೇಕು. ಈ ಸಪ್ತಾಹದ ದಿನಗಳಲ್ಲಿ ಪ್ರತಿ ಗ್ರಾಮದಲ್ಲಿ ಪ್ರತಿನಿತ್ಯ ಸಾಧ್ಯವಿದ್ದ ಅಂದರೆ ತಯಾರಾದ ಅಕ್ಕಿ ಸಂಗ್ರಹಿಸಿ ಕಳುಹಿಸಿ ಕೊಡಬೇಕು. ಗ್ರಾಮ ಮುಂದಾಳುಗಳು ಈ ಬಗ್ಗೆ ಪ್ರಯತ್ನ ಮಾಡಬೇಕು, ಹೀಗೆಂದು ದ. ಕ ಜಿಲ್ಲಾ ಭೂಮಾಲಿಕ ಸಂಘದವರು ವಿನಂತಿಸುತ್ತಾರೆ.

ಜಿಲ್ಲಾ ಬೋರ್ಡಿನ ಸಭೆ:—ದ. ಕ ಜಿಲ್ಲಾ ಬೋರ್ಡಿನ ಸಭೆಯು ತಾ. ೩೦ನೇ ನವಂಬರ ದಿ ಮಂಗಳೂರಿನಲ್ಲಿ ಶ್ರೀ|| ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾ ಸಮಯಕ್ಕಿಂತ ೧ಃ ಗಂಟೆ ಮೊದಲಾಗ ಅಧ್ಯಕ್ಷರು ಆಫೀಸು ರೂಮಿನಿಂದ ಸಭಾ ರಂಗಕ್ಕೆ ಬರದಿರಲು, ಶ್ರೀ|| ಕೃಷ್ಣಶೆಟ್ಟರು, ಎಮ್ಮೆ ಸಂತು ಅಧ್ಯಕ್ಷರು ಹಾಜರಾಗದಿರುವುದರಿಂದ ಒಬ್ಬರು ಉಪಾಧ್ಯಕ್ಷರನ್ನು ಆರಿಸಬೇಕೆಂದು ಸೂಚಿಸಿದರು. ಅಷ್ಟರಲ್ಲಿ ಅಧ್ಯಕ್ಷರು, ತಮ್ಮ ಆಫೀಸು ಕೋಣೆಯಿಂದ ಹೊರಟು ಬಂದು ಸಭಾ ಕಾರ್ಯ ತೊಡಗಿದರು. ಪ್ರಾರಂಭದಲ್ಲಿ ಹೊಸದಾಗಿ ಚುನಾಯಿತರಾದ ಶ್ರೀ|| ಮುಟ್ಟು ಸ್ವಾಮಿ, ಶಿವರಾಮ ಶೆಟ್ಟಿ, ವೆಂಕಪ್ಪ ಶೆಟ್ಟಿ, ಕೆ. ವಿ. ಗೌಡ, ಮಿತ್ರಂತಾಯ, ಪೈ, ಮಂಜಯ್ಯ ಶೆಟ್ಟಿ, ನಾಗಪ್ಪ ಹೆಗ್ಡೆ, ಕೆ. ಪಿ. ರಾಘವೇಂದ್ರ ರಾವ್, ಕೃಷ್ಣಶೆಟ್ಟಿ, ... ದಾಮೋದರ ಬಾಳಿಗಾ ಕಾಂತಣ್ಣ ಶೆಟ್ಟಿ, ಬಾಲಕೃಷ್ಣ ಪೈ ಮತ್ತು ಶ್ರೀಮತಿಯಂಥ ಅಕ್ಕಮ್ಮ ಮತ್ತು ... ಪ್ರತಿಜ್ಞೆ ತೆಗೆದುಕೊಂಡರು. ಅಧ್ಯಕ್ಷರು ಹೊಸ ಸದಸ್ಯರನ್ನು ಸ್ವಾಗತಿಸಿ ಸಹಕರಿಸಬೇಕಾಗಿ ಕೇಳಿಕೊಂಡರು. ಈ ಸಭೆಯ ಮುಂದಿದ್ದ ಸ್ವಪ್ನ ವಿಷಯ ವಾದ ಬಜೆಟ್ ಪಾಸಾಗಲಿಲ್ಲ. ಹೊಸತಾಗಿ ಬಂದ ಮಂದಿ ಸದಸ್ಯರು ಚುನಾಯಿತರಾಗಿದ್ದು, ಅವರೆಲ್ಲರ ಅನುಮತಿ ಅಂಗೀಕರಿಸಲು ಸ್ವಲ್ಪ ಅವಧಿಬೇಕೆಂದು ನಿರ್ಧರಿಸಿ ಅದನ್ನು ಮುಂದುವರಿಸಲಾಯಿತು. ಕಾಸರಗೋಡು ಪುತ್ತೂರು ಕುಂದಾಪುರ ಮಂಗಳೂರು ಉಡುಪಿ ತಾಲೂಕುಗಳ ಪ್ರೊಫೆಸನಲ್ ಟೇಕ್ಸ್ ಅಪೀಲು ಕಮಿಟಿಗಳಿಗೆ ಹೊಸ ಸದಸ್ಯರನ್ನು ಆರಿಸಲಾಯಿತು.

ಉಡುಪಿ.

ಕೀರ್ತನಕೇಸರಿ ಶ್ರೀ ಶಿವಮೂರ್ತಿ ಶಾಸ್ತ್ರಿಗಳು ಉಡುಪಿಗೆಬಂದಿದ್ದು ತಾ 1-12-43ರಲ್ಲಿ ಬೋರ್ಡ್ ಹೈಸ್ಕೂಲ್ ವಿದ್ಯಾರ್ಥಿಗಳಿಗೆ 'ಭಾರತ ಸಂಸ್ಕೃತಿ ಮತ್ತು ಸಾಹಿತ್ಯ' ಕುರಿತು ಭಾಷಣವಿತ್ತರು. ಮರುದಿನ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ 'ಕನ್ನಡನಾಡಿ'ನ ವಿಷಯ ಉಪನ್ಯಾಸ ಕೊಟ್ಟು ಸಂಜೆ ಗೀತಾಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ'ಶ್ರೀ ಕೃಷ್ಣಾರ್ಜುನ' ಎಂಬ ಹರಿಕಥೆ ಮಾಡಿದರು.

ಶ್ರೀ ಕೃಷ್ಣ ಸನ್ನಿಧಿಯಲ್ಲಿ—ಪರ್ಯಾಯ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಸ್ವಾಮಿಯವರು ಕಳೆದ ಸೋಮವಾರ ಷಷ್ಠಿ ಮಹೋತ್ಸವವನ್ನು ಮಹಾಸಹಸ್ರ ಬ್ರಾಹ್ಮಣ ಸಂತರ್ಪಣೆಯೊಂದಿಗೆ ಸಾಂಗವಾಗಿ ಜರಗಿಸಿದರು. ಆದಿತ್ಯವಾರ ದಿನ ರಾತ್ರಿ ಶ್ರೀ ಸುಬ್ರಹ್ಮಣ್ಯ ಸ್ವಾಮಿಗೆ ನಾಗ ಮಂಡಲ ಸೇವೆಯನ್ನು ನೆರವೇರಿಸಿದರು.

ಮುಂದಿನ ಪರ್ಯಾಯ ಪೀಠವನ್ನೇರಲಿರುವ ಶ್ರೀ ಪುತ್ತಿಗೆ ಸ್ವಾಮಿಗಳವರು ಪರ್ಯಾಯದ ಪೂರ್ವಸಿದ್ಧತೆಯ ಕೊನೆಯಂಗವಾದ 'ಭತ್ತ ಮುಹೂರ್ತ'ವನ್ನು ಕಳೆದ ಗುರುವಾರ ನೆರವೇರಿಸಿದರು.

ನಗರದ ಹೋಟೆಲುಗಳಲ್ಲಿ ದೋಸೆ ಹಾಗೂ ಉಪ್ಪಿಟ್ಟು ಸಿಗುವುದೇ ಕಷ್ಟವಾಗಿದೆ. ಸಿಗುವುದಿದ್ದರೆ ಇವುಗಳು ಇನ್ನೂ ಸಾಧಾರಣ ಯಲ್ಲೇ ಇವೆ. ನಗರ ಪ್ರಾಂತಗಳ ಈ ಕಡೆ ಗಮನವೀಯುವರೇ ಎಂದೊಂದು ಪ್ರಶ್ನೆ.

ಅಕ್ಕಿ ಪಡಿ ಕಡಿಮೆಯಾದಂತೆ ತೋರುತ್ತಿದ್ದು ಬಡ ಜನರ ಸಂಕಷ್ಟ ವಿಶೇಷವಾಗಿದೆ.

ಪ್ರಾಂತಿಕ ರೂರಲ್ ರಿಕ್ರಿಯೇಶನ್ ಆಫೀಸರರ ಸಮ್ಮೇಳನವು-ಇದೇ ತಾ. 26ರಿಂದ 28ರ ತನಕ ಮದ್ರಾಸಿನಲ್ಲಿ ವೈ. ಎಮ್. ಸಿ. ಎ. ಹಾಲಿನಲ್ಲಿ ಜರಗಲಿರುವುದು. ದ. ಕ. ಜಿಲ್ಲೆಯ ಪ್ರತಿನಿಧಿಯಾಗಿ ಶ್ರೀ. ಜಿ ಎಮ್, ... ಜಿಲ್ಲಾ ಕಲೆಕ್ಟರರು ನಿಯಾಮಿಸಿರುವರು. ಮದ್ರಾಸ್ ಸರಕಾರದ ಫಿಜಿಕಲ್ ಎಜ್ಯುಕೇಶನ್ ವಿಷಯ ಬೋಧಕರೂ, ಡವೆಲಪ್‍ಮೆಂಟ್ ಇಲಾಖೆಯ ಅಸಿಸ್ಟೆಂಟ್ ಸೆಕ್ರೆಟರಿಗಳೂ ಈ ಸಮ್ಮೇಳನದಲ್ಲಿ ಭಾಗವಹಿಸಿ ... ರೂರಲ್ ರಿಕ್ರಿಯೇಶನ್ ಯೋಜನೆಯು ... ಗುವ ರೀತಿ ... ನಡೆಸಲು ಪರಿಯಾಲೋಚಿಸ ಬರುತ್ತದೆ.

ಗುರುಪುರ— ಶ್ರೀ ವರದಾಯಿ ವೆಂಕಟರಮಣ ದೇವ ಸನ್ನಿಧಿಯಲ್ಲಿ ತಾ 7 12-43ರಲ್ಲಿ ಗೀತಾ ಜಯಂತಿಯು ಶ್ರೀವತ್ಸ ಕಾಶಿ ಮಠೇಂದ್ರ ತೀರ್ಥ ಶ್ರೀಪಾದಂಗಳವರ ಸಾನ್ನಿಧ್ಯದಲ್ಲಿ ವಿಜೃಂಭಣೆಯಿಂದ ಜರಗಿತು.

ಕಳತ್ತೂರು- ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲಾ ಹೊಸ ಕಟ್ಟೋಣದ ಸಂಕೂಸ್ಥಾಪನೆಯು ತಾ 2 12 43ರಲ್ಲು ಜಿಲ್ಲಾ ಬೋರ್ಡು ಪ್ರೆಸಿಡೆಂಟ್ ಶ್ರೀ ಆರೂರು ಲಕ್ಷ್ಮಣರಾವ್ ಬಿ. ಎ. ಬಿ. ಯವರವರಿಂದ ಜರಗಿಸಲ್ಪಟ್ಟೀತು. ಕಟ್ಟಡದ ಜೀರ್ಣೋದ್ಧಾರಕ್ಕಾಗಿ ರಚನೆಯಾದ ಕಮಿಟಿಯವರು ಈಗಾಗಲೇ ಧನ ಸಂಗ್ರಹಕ್ಕೆ ತೊಡಗಿರುತ್ತಾರೆ.

ಪಡುಬಿದ್ರೆ—ತಾ- 1-12-43ರಲ್ಲು ಬೋ. ಹೈ. ಎ. ಶಾಲಾ ವರ್ಷಾವಧಿ ಪರೀಕ್ಷೆಯಾಯಿತು. ಮಕ್ಕಳ ಸಂಖ್ಯೆಯು 500ಕ್ಕೆ ಮಿಕ್ಕಿದಯೇಂದೂ ಈ ಶಾಲೆಗೆ ಒಬ್ಬರು ಹೆಚ್ಚಿನ ಸೆಕೆಂಡರಿ ಗ್ರೇಡ್ ಉಪಾಧ್ಯಾಯರು ಬೇಕೆಂತಲೂ ಶಾಲೆಯ ಸ್ಥಿತಿಯು ಬಹಳ ತೃಪ್ತಿಕರವೆಂತಲೂ ಇನ್ಸ್‌ಪೆಕ್ಟರರ ಅಭಿಪ್ರಾಯ ಪಟ್ಟಿರುತ್ತಾರೆ.

ಉದ್ಯಾವರ ಆಫ್ರಿಕಾಮುಕಾಂ ಶ್ರೀ ವೇಲ್ಜಿ ಕಲ್ಯಾಣ್ಜಿ ಇವರು ಸ್ಥಳೀಕ ಬೋ. ಹೈ. ಎ. ಶಾಲಾ ಅಭಿವೃದ್ಧಿ ಫಂಡಿಗಾಗಿ ರೂ- 20-0-0ನ್ನು ದಾನಮಾಡಿರುವುದು ಸಂತೋಷಕರ.

ಪ್ರಕಟಣೆ.

ಜನತೆಯ ಜೀವನಕ್ಕೆ ಅತ್ಯವಶ್ಯವಾದ ಸರಬರಾಯಿಗಳನ್ನು ಕಾಪಾಡುವ ಬಗ್ಗೆ ಈ ಕೆಳಗಿನ ಏರ್ಪಾಡನ್ನು ಕೈಕೊಳ್ಳ ಬೇಕಾದ ಅಗತ್ಯವಿರುವ ಕಾರಣ, 1939ನೇ ಇಸ್ವಿ ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ 2(5)ನೇ ಸೆಕ್ಷನಿನ ಅನ್ವಯ ಮದ್ರಾಸು ಗವರ್ನ್‍ಮೆಂಟ್ ಪಬ್ಲಿಕ್ (ಸಪ್ಲೈ) ಇಲಾಖೆಯ ತಾರೀಕು 21-1-1942ರ ನಂಬ್ರ 243ನೇ ಹುಕುಮಿನ ಮೂಲಕ ಹೊಂದಿದ ಅಧಿಕಾರ ಪ್ರಕಾರ ಡಿಫೆನ್ಸ್ ಆಫ್ ಇಂಡಿಯಾ ರೂಲ್‍ಗಳ ಪೈಕಿ 81(2)ನೇ ರೂಲು ಮೇರೆಗೆ 1943ನೇ ಇಸವಿ ನವಂಬರ 15ನೇ ತಾರೀಕು ಮತ್ತು ಅನಂತರ ಯಾವನೊಬ್ಬನೂ ಗೋಧಿ ಯಾ ಗೋಧಿ ಹಿಟ್ಟು, ರುಲಾಂವ ಸಜ್ಜಿಗೆ ಇತ್ಯಾದಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಯ ಹೊರಗಿನ ಯಾ ಕಡೆಗೂ ಒಯ್ಯ ಕೂಡದು. ಹಾಗೆ ಒಯ್ಯ ಬೇಕಾದ ವಿಶೇಷ ಸಂದರ್ಭದಲ್ಲಿ ವ್ಯಾಪಾರಸ್ಥರು ಅದಿಸತ್ರದೋಳಗಾದರೆ ಜಿಲ್ಲಾ ಕಲೆಕ್ಟರರೂ ಹೊರಗಾದರೆ ಸಿವಿಲ್ ಸಪ್ಲೈಸ್ ಕಮಿಶನರೂ ಒದಗಿಸಿಕೊಡುವ ಪರವಾನಗಿ ಹೊಂದಿರತಕ್ಕ ಅಧಿಕಾರಿಗಳ ... ಗಿರುತ್ತಾರೆ.

ಈ ಹುಕುಂವನ್ನು ಉಲ್ಲಂಘಿಸಿದ ಯಾವನೊಬ್ಬನೂ ಮೂರು ವರ್ಷಗಳಿಗೆ ವಿಸ್ತರಿಸ ಬಹುದಾದ ಸಜೆ ಯಾ ಜುಲ್ಮಾನೆ, ಯಾ ಇವೆರಡು ವಿಧಿಸಲ್ಪಡಲು ಗುರಿಯಾಗುತ್ತಾನೆ.

(Sd). **M. Karamatullah**,
Collector.

South Kanara Collector's Office,
Mangalore, dated 1 . 11-1943.

ಶ್ರೀ ಕೆರೆಂಜೆ ತಿಮ್ಮಪ್ಪ ಹೆಗ್ಗಡೆಯವರ ನಿಧನ: ಶ್ರೀಯುತರು ಇತ್ತೀಚೆಗೆ ಮುಂಬಯಿಗೆ ಹೋಗಿದ್ದು ಅಲ್ಲಿಯೇ ಅಕಸ್ಮಾತ್ತಾಗಿ ರಕ್ತದ ಒತ್ತಡದಿಂದ ತಮ್ಮ 57ನೇ ವರ್ಷದಲ್ಲಿ ನಿಧನ ಹೊಂದಿದ ವರ್ತಮಾನ ವಿಷಾದಕರ ಮಾತ್ರ ಬಂದಿದೆ. ದಿವಂಗತರು ತಾಲೂಕು ಬೋರ್ಡು ಮತ್ತು ಎಕ್ಸಿಕ್ಯೂಟಿವ್ ಕೌನ್ಸಿಲಿನ ಸದಸ್ಯರಾಗಿ ಇದ್ದರು. ದಿವಂಗತರ ಆತ್ಮಕ್ಕೆ ಶಾಂತಿಯಿರಲಿ.

THE BEST PREVENTIVE IN EPIDEMICS OF
CHOLERA
"BHUVANENDRA"
CHANDRAMAS
Will give you the best results. Try once and be satisfied with the results.
Dose: For adults:- 3 to 5 drops 2 to 3 times a day with the decoction of cloves or ajwan
For Children: 1 to 2 drops with the said decoction
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS Ltd.

"ಭುವನೇಂದ್ರ"
ಚಂದ್ರಮಸ್
ಸಾಂಕ್ರಾಮಿಕ ಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ.
ದೊಡ್ಡವರಿಗೆ 3 ರಿಂದ 5 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು
ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in 1920.)

Registered Office. Court Road UDIPI South Canara District.

Business Offices Udipi, Mangalore, Katapadi, Kanhangad and Kinnigoli, South Canara.

Authorised and Issued Capital: Rs 2,00 000/-
Subscribed and Paid up Capital. Rs 2,00,000/-
Reserve Funds: Rs. 1,75,853/-

Short term bills are discounted for approved parties. Loans and advances are made and overdrafts granted on fairly easy terms.

Deposits are accepted at favourable rates of interest. More than twenty-three years' reliable banking Service stands to our credit.

For further particulars please call at or apply to the nearest office.

Dated 31-10-1943.



ನಮ್ಮ ಸುವರ್ಣೋತ್ಸವ ಸಂಚಿಕೆಗೆ ದಯಮಾಡಿ ನಿಮ್ಮ

ಸಹೃದಯ ಸಂದೇಶವನ್ನು

ಕಳುಹಿಸಿ ಕೊಡಿರಿ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1—8—0 ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. 2—8—0

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಜನಪ್ರಿಯವಾದ ಕಿರಿಯರ ಪ್ರಪಂಚದ ಪ್ರಕಟಣೆಗಳು

ಮಧುವನ	೨	೮	೦	ರಂಗಭೂಮಿ	೨	೮	೦
ಪ್ರಕಾಶ	೧	೧೨	೦	ಸಂಶಯ ಪಿಶಾಚಿ	೦	೮	೦
ಭಾರತೀಯ ಕತೆಗಳು	೦	೧೪	೦	ಸೇವಾಪಥ	೦	೮	೦
ನಾರೀ ಹೃದಯ	೦	೧೪	೦	ಕುಶಲವ	೧	೫	೦
ದೇವಭಕ್ತ	೦	೧೪	೦	ಹೆಂಡ್ತಿ ಗಂಡನಾದರೆ	೦	೪	೦
ಕಾವ್ಯ ಸಾಮ್ರಾಜ್ಯ	೦	೧೨	೦	ಪುರುಷವಧು	೦	೪	೦
ಪ್ರೇಮ ವಿಜಯ	೦	೧೨	೦	ಸ್ವತಂತ್ರ ಜೀವನೋಪಾಯ	೦	೩	೦
ವ್ಯಭಿಚಾರಿಣಿ ಯಾರು	೦	೧೨	೦	ನಾಟಕ ಕತೆಗಳು	೦	೩	೦
ನಂದಾದೀಪ	೦	೧೦	೦	ಮುಂದಿನ ದೇವರು	೦	೩	೦
ಸನ್ಯಾಸಿಯ ಸೋಗಿನ	೧	೮	೦	ಮೂರು ಪ್ರಹಸನಗಳು	೦	೧೪	೦

ಕಿರಿಯರ ಪ್ರಪಂಚ, ಉಡುಪಿ.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. ೩—೦—೦ ಪೋಸ್ಟ ಚಾರ್ಜು ೧೨ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್, ಎಲ್, ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, ಯಂ. ಆರ್. ಪೂಂಜ,
President & Manager ಪ್ರೆಸಿಡೆಂಟ್ ಮತ್ತು ಮೆನೇಜರ್.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ನಿರ್ದೇಶಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ** ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚುಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ಎರಡು ಬಾಟ್ಲಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. ೫ **ಕೊಡಿಯಾಲಬೈಲು, ದ.ಕ.**

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,

ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ : : : : ಮಂಗಳೂರು.

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.

ಹೆಡ್ ಆಫೀಸ್: ಮಂಗಳೂರು.

ಶಾಖೆಗಳು:

ಮಂಗಳೂರು, ಸಿಟಿ-ಮಂಗಳೂರು.

ಉಡುಪಿ, ಕಾರ್ಕಳ, ಕುಂದಾಪುರ,

ಕಾಪು, ಬ್ರಹ್ಮಾವರ, ಕಾಸರಗೋಡು,

ಪ್ರತಿ ಶಾಖೆಗಳಲ್ಲೂ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳು ಕೈಗೊಳ್ಳಲ್ಪಡುತ್ತವೆ.

The Vijaya Bank Ltd., Mangalore.

ಸ್ಥಾಪನೆ **ಕ್ರೌನ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618.

Estd. 1921 ಸ್ಥಾಪನೆ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೧೫

FOUNDER
Sri. A. B. Shetty.

Vol 24
No. 15

NAVAYUGA— Kannada Weekly —UDIPI, S. I.

ಉಡುಪಿ • 16—12—1943 • ಮಂಗಳೂರು.

ಕಿರಿಯರ ಪ್ರಪಂಚದ ಹೊಸ ಪ್ರಕಟಣೆ

—ಪ್ರಕಾಶ—

ಸಾಮಾಜಿಕ—ರಾಜಕೀಯ ನಾಟಕ.
ಮೂಲ ಲೇಖಕರು:—ಶೇಟ್ ಗೋವಿಂದ ದಾಸ್, ಎಂ. ಎಲ್. ಎ. (ಸೆಂಟ್ರಲ್)
ಅನುವಾದಕಿ: ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ.
ಬೆಲೆ ರೂ. 1-12-0, ಟ. ಖ. 0-1-0
ರೂ. 2ನ್ನು ಮನಿಯಾರ್ಡರ್ ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಲಕ ಕಳಿಸಲಾಗುವದು.

ನವಭಾರತ ಪುಸ್ತಕ ಭಂಡಾರ,
ಉಡುಪಿ

ಕಿರಿಯರ ಪ್ರಪಂಚದ
ಇನ್ನೊಂದು ಪ್ರಕಟಣೆ.

ಭಾರತೀಯ ಕತೆಗಳು

ಸಣ್ಣ ಕತೆಗಳ ಸಂಗ್ರಹ
ಮೂಲ ಲೇಖಕರು— ಶ್ರೀ. ಎ. ಎಸ್. ಪಂಚಾಪಕೇಶ ಐಯ್ಯರ್,
ಎಂ. ಎ., ಐ. ಸಿ. ಎಸ್., ಬಾರ್. ಎಟ್. ಲಾ., ಎಫ್. ಆರ್. ಎಸ್. ಎಲ್.,
ಅನುವಾದಕರು— ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರು.
ಬೆಲೆ 0-14-0 ಟ. ಖ. 0-2-0
ರೂ. 1/ನ್ನು ಮನಿಯಾರ್ಡರು ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಲಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

Is Your Scholarship Protected?

Donors of some well-known scholarships insist that their recipients should be insured to the extent of the whole scholarship amount. Why is that? Because they do not wish that, should the recipient's lives be lost their monies too should be lost. When they can easily avoid such loss, they are determined to do so. Hence their insistence on insurance

Are not Parents too donors of scholarships to their children? Then should not they also insure them?

Is it not in the mutual interests of both parents and children to do so? It is.

* Parents should insure their children to the extent of the total amount of money required for their upkeep and education or students should prevail upon their parents to do so, especially, when it is a question of higher education and larger expenditure.

The Canara Mutual Assurance Co., Ltd.,
UDIPI.

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ಸಲೀಸಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಕುಟುಂಬದವರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇವರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಮುಖ ಏಜಂಟರು.-
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ ಕನ್ನಡ)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್ ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMABY LIFE ASSURANCE CO., LTD.

ಗನೋರಿಯಾ ಪರಮಾರೆ[illegible] ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲೆ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ,ಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ರೂ. **ಪೋಸ್ಟ ಚಾರ್ಜ ೮ ಆಣೆ-**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ,ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ- [illegible] ಫಾರ್ಮಸಿ, ದಾವಣಗೇರಿ:ದಾವಣಗೇರಿ ಪ್ರೆಸ್. (ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಿ [illegible] ವಿನಂತಿ

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ.**
ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda Oushadalaya, GADAG.

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೪೨ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹಳ ಅಪಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನ್ನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ಶೀಘ್ರನೆ ಮುಂದುವರಿದವು.

೧೯೪೦. ರಲ್ಲಿ ಕೆನರಾ ಬೇಂಕು ೯೦ ಲಕ್ಷ ಠೇವಣೆಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣೆಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡುವರೆ ಕೋಟಿಗೆ ಏರಿದೆ. ಹಾಗೂ ತೆತ್ತ ಮೂಲಧನವು ನಾಲ್ಮಡಿಯಾಗಿದೆ.

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮವಿಶ್ವಾಸದಿಂದಲೂ, ದೃಢಬುದ್ಧಿಯಿಂದಲೂ, ಯೋಗ್ಯಸೇವೆಯನ್ನು ಸಲ್ಲಿಸಿದರಿಂದಲೂ, ಇಂದಿನ ಈ ಪ್ರಗತಿಗೆ ಕಾರಣ ಭೂತರಾದ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಮಹತ್ವದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

CANARA BANK LIMITED.
ಕೆನರಾ ಬೇಂಕ್ ಲಿಮಿಟೆಡ್.
ಸ್ಥಾಪನೆ 1906.

ದ. ಕ. ರೈತರಿಗಾದ ಮಹದನ್ಯಾಯ!

(ಓರ್ವ ರೈತನಿಂದ)

●

ಈ 'ರೈತ'ರ ಆಕ್ಷೇಪಗಳು ಅರ್ಥವಿಲ್ಲದವುಗಳಲ್ಲ. ರೆಕ್ವಿಜಿಶನಿನ ಆಕ್ಷೇಪಣಾ ಅರ್ಜಿಗಳ ವಿಚಾರಣೆಯು ನಡೆಯುತ್ತಿರುವ ಈ ಕಾಲದಲ್ಲಿ ಈ ವಾದವನ್ನು ಪ್ರಕಟಿಸುವದು ಸಮಂಜಸವೆಂದು ಕಂಡು ಬಂದುದರಿಂದ ಸ್ಥಾನ ಕೊಟ್ಟಿದ್ದೇವೆ. ಲೇಖಕರೇ ಹೇಳುವಂತೆ, ಅವರ ವಾದವನ್ನು ಕಾರ್ಯರೂಪಕ್ಕಿಳಿಸಲು, ದೊಡ್ಡ ವರ್ಗದಾರರ ಸಂಪರ್ಕವಿಲ್ಲದ ಸಾಮಾನ್ಯ ರೈತರ ಸಂಘವಿರಬೇಕಿತ್ತು; ಸರಕಾರದ ಸದ್ಯದ ಧೋರಣೆಯನ್ನು ಸಾಧ್ಯಗೊಳಿಸುವಷ್ಟು ಪ್ರಬಲಾಂದೋಲನವು ಅದರ ಮೂಲಕ ನಡೆಯಬೇಕಿತ್ತು. ಅಂತಹ ಪರಿಸ್ಥಿತಿ ಈಗ ಇಲ್ಲ. ಆದ್ದರಿಂದ ತನ್ನ ಅವಿಶ್ರಾಂತ, ಸುದೃಢ ಕಾರ್ಯಕ್ರಮಗಳ ಮೂಲಕ ರೆಕ್ವಿಶಿಶನಿನಲ್ಲಿ ಇಷ್ಟಾದರೂ ಸುಧಾರಣೆ ಸಾಧಿಸಿಕೊಂಡ ದ. ಕ. ವರ್ಗದಾರ ಸಂಘಕ್ಕೆ ಪೂರ್ಣ ಬೆಂಬಲ ಕೊಡುವದು ಪ್ರಸ್ತುತ ಜಿಲ್ಲೆಯ ರೈತರಿಗುಳಿದಿರುವ ಏಕಮಾತ್ರ ಹಾದಿ ಎಂಬುದನ್ನು ಮರೆಯಬಾರದು.

—ಸಂ. ನ.

●

'ದ. ಕ. ರೈತ ಸಂಘವೆಲ್ಲಿದೆ? ಏಕಿಲ್ಲ?' ಎಂದು ಈ ಮೊದಲು ಮೇಲಿಂದ ಮೇಲೆ 'ನವಯುಗ'ವು ಆಗ್ರಹ ಪೂರ್ವಕ ಹಾಕಿದ್ದ ಪ್ರಶ್ನೆಯನ್ನು ಪುನಃ ಎತ್ತಿಕೊಂಡು, ಇಡೀ ಜಿಲ್ಲೆಯ ರೈತರ ಹೃದಯದಲ್ಲಿ ಪ್ರತಿಧ್ವನಿಸುವಷ್ಟು ಗಟ್ಟಿಯಾಗಿ ಕೇಳೋಣವೆನ್ನಿಸುತ್ತದೆ; ಈಗಿನ ಸಂದರ್ಭ ಅಂತಹದು! ಅಕ್ಕಿ ಭತ್ತಗಳ ರೆಕ್ವಿಶಿಶನ್ ಸಂಬಂಧವಾಗಿ ಜಿಲ್ಲೆಯಲ್ಲೆದ್ದ ಮಂಥನ ಮತ್ತು ಅದರ ಪರಿಣಾಮದ ಚಿತ್ರವು ಈಗ ಎಲ್ಲರ ಕಣ್ಣ ಮುಂದಿದೆ. ರೆಕ್ವಿಶಿಶನ್ ಸೂಚನೆ ಬಂದಾಗ ರೈತ ಸಮೂಹದಲ್ಲಿ ಉಕ್ಕೇರಿ ಬಂದ ಕಳವಳ, ಆತುರಗಳು, ಅದು ತೀರ್ಮಾನ ಹೊಂದಿದಾಗ ತಣಿದಂತೆ ಕಾಣುತ್ತದೆ. ಯಾಕೆ? ರೈತರಿಗಾದ ಅನ್ಯಾಯ ನಿವಾರಣೆಯಾಯಿತೆ? ಅವರ ಆಕ್ಷೇಪವೇನು-ಜಿಲ್ಲೆಯ ವರ್ಗದಾರ ಪ್ರಮುಖರ ಪ್ರಯತ್ನ, ಶ್ರೀ ರಾಮಮೂರ್ತಿಯವರ ಆಗಮನದ ಪರಿಣಾಮವಾಗಿ ರೆಕ್ವಿಶಿಶನಿನಲ್ಲಿ ಆದ ಸುಧಾರಣೆಯೇನು? ಎಂಬುದನ್ನು ತುಲನಾತ್ಮಕ ದೃಷ್ಟಿಯಿಂದ ನೋಡುವ ಆಗತ್ಯವಿದೆ.

ಈ ರೆಕ್ವಿಶಿಶನ್

ಸದ್ಯದ ಗಂಡಾಂತರ ಕಾಲದಲ್ಲಿ ಆಹಾರ ನಿಯಂತ್ರಣ ಬೇಕೇ ಬೇಕೆಂಬುದು ಬಾಳಿಚ್ಛಿಸುವವರೆಲ್ಲರ ಬಯಕೆ. ಈ ನಿಯಂತ್ರಣಕ್ಕೆ ಸುದೃಢ ಅಸ್ತಿವಾರಬೇಕು; ಆದ್ದರಿಂದ ಆಹಾರ ಧಾನ್ಯಗಳ ನಿಯಂತ್ರಣದ ಮೂಲಕವೇ ಅದು ಆರಂಭವಾಗಬೇಕು. ಗವರ್ನರರ ಎಡ್ವೈಸರ್ ರಾಮಮೂರ್ತಿ ಐ. ಸಿ. ಎಸ್. ಇವರ ಕೈಯಲ್ಲಿ ಅದರ ಸೂತ್ರವಿರುವ ಬದಲಿಗೆ ಕಾಂಗ್ರೆಸ್ ರೆವಿನ್ಯೂ ಮಂತ್ರಿ ಶ್ರೀ. ಟಿ. ಪ್ರಕಾಶಮರ ಕೈಯಲ್ಲಿ ಅದು ಇರಬೇಕಿತ್ತು ಎಂಬ ಮೂಲವಾದವೊಂದಿದೆ. ಇದು ಇಡೀ ದೇಶದ ಸರ್ವ ವಿಭಾಗಗಳಿಗೆ ಸಂಬಂಧಿಸಿದ ಸಾಮಾನ್ಯ ತತ್ವವಾದ್ದರಿಂದ ಒತ್ತಟ್ಟಿಗಿರಲಿ. ಸ್ವಾತಂತ್ರ್ಯ ಸಿಗುವ ವರೆಗೆ ಬಾಳುವೆಯನ್ನೇ ಅಮಾನತಿಡುವೆವೆಂದಾಗುವದಿಲ್ಲ ತಾನೇ! ದ. ಕ. ದ ಧಾನ್ಯ ರೆಕ್ವಿಶಿಶನ್ ಪ್ರಶ್ನೆಯು ಜಿಲ್ಲೆಯ ಜನರ ಈ ವರ್ಷದ ಊಟದ ಪ್ರಶ್ನೆ. ಆದ್ದರಿಂದ ರಾಮಮೂರ್ತಿಯವರ ಬದಲು ಪ್ರಕಾಶಮರು ಬರುವ ವರೆಗೆ ಕಾಯಲಾಗುವದಿಲ್ಲ. ಶ್ರೀ ರಾಮಮೂರ್ತಿಯವರ ಯೋಜನೆಯನ್ನೇ ಪ್ರಕಾಶಮರ ಯೋಜನೆಯಾಗಿ ಮಾರ್ಪಡಿಸಲು ಸಾಧ್ಯವಾಗುತ್ತಿದ್ದರೂ ನಾವು ಈ ಮಟ್ಟಿಗೆ ತೃಪ್ತಿ ಹೊಂದಬಹುದಿತ್ತು. ಆದರೆ ಈಗ ಹಾಗಾಗಿದೆಯೆ?

ಮುಖ್ಯ ಪ್ರಮಾದ

"ಹಳ್ಳಿಗರನ್ನು ಉಪವಾಸ ಹಾಕಿ ಪೇಟೆ ಪಟ್ಟಣಗಳವರ ಹೊಟ್ಟೆ ತುಂಬಿಸುವಿರಾ?"-ಶ್ರೀ ರಾಮಮೂರ್ತಿಯವರಿಗೆ ಮುಂದಾಗಿ ಈ ಜಿಲ್ಲೆಗೆ ಬಂದಿದ್ದ ಡಿಪ್ಯುಟಿ ಕಮಿಶನರಿಗೆ ಶ್ರೀ ಎ. ಬಿ. ಶೆಟ್ಟರು ಹಾಕಿದ್ದ ಪ್ರಶ್ನೆ. ಈ ಪ್ರಶ್ನೆಯ ಉತ್ತರಾರ್ಧವಾಗಿ "ದೊಡ್ಡ ವರ್ಗದಾರರಲ್ಲಿ ಅಕ್ಕಿಯನ್ನುಳಿಸಿ ತುಂಡು ರೈತರ ಅನ್ನವನ್ನು ಅಪಹರಿಸುವಿರಾ?" ಎಂಬುದನ್ನು ಸೇರಿಸಿದರೆ ಇಲ್ಲಿದೆ-ಇಂದಿನ ರೆಕ್ವಿಶಿಶನಿನ ಸಂಪೂರ್ಣ ಅಪರಾಧ! ಇದನ್ನು ಇನ್ನಷ್ಟು ಸ್ಪಷ್ಟೀಕರಿಸಿ ತೋರಿಸೋಣ. ಸರಕಾರದ ರೆಕ್ವಿಶಿಶನ್ ಧೋರಣೆಯೆಂದರೆ ಮಾರಾಟದ ಅಕ್ಕಿಯನ್ನೆಲ್ಲಾ ಸ್ವಾಧೀನಪಡಿಸಿಕೊಳ್ಳಬೇಕೆಂಬುದೇ. ಸಾಗುವಳಿ ಕ್ಷೇತ್ರದಿಂದ ಮಾರಾಟವಾಗಲು ಸಿಗುವ ಅಕ್ಕಿಯಲ್ಲಿ ಒಂದೇ ಒಂದು ಸೇರನ್ನು ಬಾಕಿಬಿಡಬಾರದು. ಯಾಕಾಗಿ ಬಿಡಬೇಕು? ಎಲ್ಲರಿಗೂ ನಿಶ್ಚಿತ ಧಾರಣೆಯಲ್ಲಿ ಅಕ್ಕಿದೊರೆಯಲಾಗುವಂತೆ ಬೆಳೆಸಿದವರಿಗೆ ನಿಶ್ಚಿತ ಧಾರಣೆಯನ್ನು ಕೊಟ್ಟೇ ಈ ಅಕ್ಕಿಯನ್ನು ಸ್ವಾಧೀನಕ್ಕೆ ತರುವದು ತಾನೆ? ಅಂದಮೇಲೆ ಮಾರಾಟದ ಅಕ್ಕಿಯಲ್ಲಿ ಒಂದು ಕಳಸಿಗೆಯನ್ನು ಬಾಕಿ ಬಿಡುವದೆಂದರೆ 'ಒಂದು ಮುಡಿಯ ಕ್ರಯ' ಸಂಪಾದಿಸಿಕೋ ಎಂದು ಅದನ್ನು ಬ್ಲೇಕ್ ಮಾರ್ಕೆಟಿಗೆ ಹೋಗಬಿಡುವದಂತೇ ಅರ್ಥ. ಆದ್ದರಿಂದ ಮಾರಾಟದ ಅಕ್ಕಿಯಲ್ಲಿ ಯಾವ ಅಂಶವನ್ನೂ ಬಾಕಿ ಬಿಡದೆ ಪೂರ್ಣ ಸ್ವಾಧೀನಪಡಿಸಿಕೊಳ್ಳಬೇಕು. ಆದರೆ ರೈತರ ಊಟದ ಅಕ್ಕಿಯಲ್ಲಿ ಒಂದೇ ಒಂದು ಕಾಳನ್ನು ಮುಟ್ಟಬಾರದು. ಅದನ್ನೂ ಅಪಹರಿಸಿದರೆ ನ್ಯಾಯಮೀರಿದ, ಅಧಿಕಾರದರ್ಪದ ಅಪರಾಧವಾಗಬಹುದು. ಶ್ರೀ ಎ. ಬಿ. ಶೆಟ್ಟರಂದಂತೆ ಬೆಳೆಸಿದವರನ್ನು ಉಪವಾಸ ಹಾಕಿ, ಕೊಂಡುಕೊಳ್ಳುವವರ ಹೊಟ್ಟೆ ತುಂಬಿಸುವದಲ್ಲ; ಸುಭಿಕ್ಷವದಿಂದ ಕೊಂಡುಕೊಳ್ಳುವವರಿಗಾಗಿ ಬೆಳೆಸುವ ಸಾಮಾನ್ಯ ರೈತರನ್ನು ಉಪವಾಸ ಹಾಕುವ ದುಸ್ಥಿತಿ ದಕ್ಷಿಣ ಕನ್ನಡದಲ್ಲಿಲ್ಲ. ಕೊಂಡುಕೊಳ್ಳುವವರಿಗೆ ಸಾಕಾಗುವಷ್ಟು ಮಾರಾಟದ ಅಕ್ಕಿಯೇ ಇದೆ. ಆದರೆ ಅದು ಎಲ್ಲಿದೆ? ದೊಡ್ಡ ವರ್ಗದಾರರಲ್ಲಿ ಮಾತ್ರವಿದೆ. ಆ ಸಂಬಂಧವಾದ ಈಗಿನ ರೆಕ್ವಿಶಿಶನ್ ಯೋಜನೆ ಹೇಗಿದೆ? ದೊಡ್ಡ ವರ್ಗದಾರರ ಮಾರಾಟದ ಅಕ್ಕಿಯಲ್ಲಿ ಒಂದಂಶವನ್ನು ಬಾಕಿಬಿಟ್ಟು, ರೈತರ ಊಟದ ಅಕ್ಕಿಯ ಒಂದಂಶವನ್ನು ಅಪಹರಿಸುವ ರೂಪದಲ್ಲಿದೆ! ರೆಕ್ವಿಶಿಶನ್ ಅಸ್ತಿವಾರದಲ್ಲೇ ಅನ್ಯಾಯವಿದೆ ಎನ್ನುವದು ಇಷ್ಟಕ್ಕೇನೇ.

ಇದರ ಪರಿಣಾಮ

ಇಂದಿನ ಯೋಜನೆಯಂತೆ ರೂ. 50 ಕ್ಕೂ ಕಡಿಮೆ ತೀರ್ವೆ ತೆರುವ ವರ್ಗದಾರರ ಅಕ್ಕಿಯನ್ನೂ 1000ಕ್ಕೆ ಮೇಲ್ಪಟ್ಟು ತೀರ್ವೆ ಕೊಡುವ ವರ್ಗದಾರರ ಅಕ್ಕಿಯನ್ನೂ ಒಂದೇ ಪ್ರಮಾಣದಲ್ಲಿ ರೆಕ್ವಿಶಿಶನ್ ಮಾಡಲಾಗಿದೆ. ತಲೆ ತೆರಿಗೆಯೆತ್ತುವವರಾದರೂ ಮುಂಡಾಸು ಮತ್ತು ಮುಟ್ಟಾಳೆಯ ಭೇದವನ್ನು ಅಲಕ್ಷ್ಯಸುವದಿಲ್ಲ; ಸ್ಮಶಾನ ಪಂಕ್ತಿಗೆ ಹೊರಟವರಾದರೂ ಸಾಹುಕಾರ ಮತ್ತು ದಿನಕೂಲಿಯವನಿಂದ ಏಕರೀತಿಯ ವರಾಡ ಯಾಚಿಸುವದಿಲ್ಲ. ಆದರೆ ದಕ್ಷಿಣ ಕನ್ನಡದ ರೆಕ್ವಿಶಿಶನಿನ 'ಸಮತಾವಾದ'ವು ಎಲ್ಲರಿಗೂ ಒಂದೇರೀತಿ ಎನ್ನುತ್ತಿದೆ-ಹುಟ್ಟಿನ ಪೂಜೆಯಾಗಬೇಕೆಂದು, ಹೂವನ್ನು ಮಾರಲು ಕುಳಿತವರಿಂದಲೂ, ಹೂ ಮುಡಿದು ಕುಳಿತವರಿಂದಲೂ ಏಕಪ್ರಕಾರ ಹೂ ಪಡಕೊಳ್ಳುವದಲ್ಲ. ಅಕ್ಕಿ ಬೇಕೆಂದು ಮಾರಾಟದ ಅಕ್ಕಿಗೂ ಉಣ್ಣುವ ಅಕ್ಕಿಗೂ 'ಶೇಕಡಾ ಇಂತಿಷ್ಟು' ಎಂಬ ಒಂದೇ ಅಳತೆಯನ್ನು ಹಿಡಿಯುವದಲ್ಲ. ಹಾಗೆ ಮಾಡುವುದರಿಂದ ಒಂದೆಡೆಯಲ್ಲಿ ಬ್ಲೇಕ್ ಮಾರ್ಕೆಟಿನ ನಿರ್ಮಾಣವಾಗಿಯೇ ತೀರುವದು; ಇನ್ನೊಂದೆಡೆಯಲ್ಲಿ ಬಹುಸಂಖ್ಯಾಕರಾಗಿರುವ ಸಾಮಾನ್ಯ ರೈತರು ಉಪವಾಸಬೀಳಬೇಕಾಗುವದು. ಇನ್ನು ಮುಂದೆ ಕೊಂಡುಕೊಳ್ಳುವವರಿಗಾದರೂ ನಿಶ್ಚಿತ ಧಾರಣೆಯಲ್ಲಿ ಯೋಗ್ಯಕಾಲದಲ್ಲಿ ಅಕ್ಕಿ ದೊರೆಯಬಹುದೇ ಎಂಬುದು ಮುಂದಿನ ವ್ಯವಸ್ಥೆಯನ್ನು ಹೊಂದಿಕೊಂಡಿದೆ.

ಒಂದು ದಾಖಲೆ.

ರೆಕ್ವಿಶಿಶನಿನ ಮೂಲಭೂತ ಅಪರಾಧವಾದ ಸಾಮಾನ್ಯ ರೈತನ ಅನ್ನಾಪಹಾರದ ಕುರಿತು ಒಂದು ನಿದರ್ಶನವಾಗಿ ಉಡುಪಿ ತಾಲೂಕನ್ನೇ ತೆಗೆದುಕೊಳ್ಳೋಣ. ತಾಲೂಕಿನಲ್ಲಿರುವ ಬೇಸಾಯ ಕ್ಷೇತ್ರಗಳು ಒಟ್ಟಿಗೆ ಸುಮಾರು 73775 ಎಕ್ರೆ; ಅವುಗಳ ಒಟ್ಟು ತೀರ್ವೆ ಸುಮಾರು 412545 ರೂ. ಗಳು. ಈ ಆಸ್ತಿಗಳಿಗೆ ವಿಭಕ್ತ ಮತ್ತು ಅವಿಭಕ್ತ ಪಟ್ಟಾದಾರರು ಜುಮ್ಲಾ 27975 ಮಂದಿ. ಆ 412545 ರೂ. ತೀರ್ವೆಯ ಸಾಗುವಳಿ ಭೂಮಿಗಳು ಈ 27475 ಮಂದಿಯಲ್ಲಿ ಹಂಚಿಹೋದ ತರಗತಿ ಭೇದವನ್ನು ಲಕ್ಷ್ಯದಲ್ಲಿಡಬೇಕು. ರೂ. 30 ರ ವರೆಗೆ ತೀರ್ವೆಕೊಡುವ 'ಸಿಂಗಲ್' ಹಾಗೂ 'ಜೊಯಿಂಟ್' ಪಟ್ಟಾದಾರರನ್ನೂ ರೂ. 100ರ ವರೆಗೆ ತೀರ್ವೆತೆರುವ 'ಜೊಯಿಂಟ್' ಪಟ್ಟಾದಾರರನ್ನೂ ಪ್ರತ್ಯೇಕವಾಗಿ ವಿಂಗಡಿಸಬಹುದು. ಯಾಕೆಂದರೆ ಅವರ ಹುಟ್ಟುವಳಿಯು ತಮ್ಮ ಬೇಸಾಯ ವೆಚ್ಚ ಮತ್ತು ಕುಟುಂಬ ಪೋಷಣೆಗೆ ಸಾಲಾಗದು. ಇಂಥವರ ಸಂಖ್ಯೆ 24794. ಇವರ ಪೈಕಿ ರೂ. 10ಕ್ಕೂ ಕಡಿಮೆ ತೀರ್ವೆ ತೆರುವವರು 18996 ಮಂದಿ. ಅಂತೂ ಮೇಲಿನ 24704 ಮಂದಿ ವರ್ಗದಾರ ಕುಟುಂಬವೂ ವರ್ಷದ ನಾಲ್ಕು ತಿಂಗಳ ಊಟದ ಅಕ್ಕಿಯನ್ನು ಈತನಕ ಕೂಲಿ ಅಥವಾ ಬಡ್ಡಿಗೆ ಸಾಲಪಡೆಯುತ್ತಿದ್ದವರೇ. ಅಂದ ಮೇಲೆ ಈ ವರ್ಗವನ್ನು ಕೊಂಡುಕೊಳ್ಳುವವರ ಸಾಲಿಗೇನೇ ಸೇರಿಸಬಹುದು. 'ಅವಶ್ಯ ಕಂಡರೆ ರೂ. 50ಕ್ಕೆ ಕಡಿಮೆ ತೀರ್ವೆ ತೆರುವವರ ಅಕ್ಕಿಯನ್ನೂ ರೆಕ್ವಿಶಿಶನ್ ಮಾಡಲಾಗುವದು' ಎಂಬ ಸರಕಾರೀ ನಿಯಮದಂತೆ

(೬ನೇ ಪುಟ ನೋಡಿರಿ)

NAVAYUGA ENTERPRISE LIMITED, UDIPI.

Glad to announce to the public that permission to issue the remaining shares of the Company has been granted by the Examiner of Capital Issues, Finance Department New Delhi in his Order No. D/3803—FCI/43 dated 6th November 1943.

Those desirous of going in for shares need apply soon since the issues are to be closed within the limited time.

UDIPI, 6-12-43.

K. H. Shetty,
Managing Director.

NAVAYUGA PRESS, UDIPI.

PROPRIETORS,
NAVAYUGA ENTERPRISE LIMITED.
DIRECTORS.
Sri. K. J. Ballal, B. A., LL. B., Vakil, Udipi (*Chairman*).
Sri. M. S. Pejathaya, *Agent*, Palimar Mutt, Udipi
Sri. Balkattabeedu Krishnaya Hegde, Landholder, Athrady.
Sri. K. Honnayya Shetty, *Prop*: 'Navayuga'
(*Managing Director*.)

Sewing Mechine Needles

Agents and Stockists throughout India to sell Venus Sewing Machine Needles and their Parts. Highly Polished. Strong and more lasting than other needless in the Market. Used with all kinds of Sewing Machines. Terms liberal. No business Guaranteed. Ask for Sample Box. Please correspond in English only.

M/G The American Trading (Engg-works) No. 49
Gurdaspur. (Panjab)

CHAMPAE'S
Snow & Castrex
Agents:—
Sukhananda Stores
Santhekatte, UDIPI, S. K.

ಸ್ಥಿತಿಗತಿ

ಪರಿಷತ್ತು ವಾರ.

ಕಳೆದ ವಾರದಲ್ಲಿ ಯುದ್ಧಕ್ಕಿಂತಲೂ ಸಮ್ಮೇಲನಗಳಿಗೆ ಹೆಚ್ಚಿನ ಪ್ರಾಮುಖ್ಯತೆ ದೊರೆತಿದೆ. ಕೈರೋ ಟೆಹರಾನ್ ಪರಿಷತ್ತುಗಳ ಪರಿಣಾಮವಾಗಿ ಯುದ್ಧದ ಕೊನೆಯ ಅಂಕದ ಪೂರ್ವ ಯೋಜನೆ ಸಂಪೂರ್ಣವಾಯಿತೆಂಬ ಸಮಾಧಾನವೆದ್ದಿದೆ. ಬ್ರಿಟನು, ರಶ್ಯಾ, ಅಮೆರಿಕಗಳು ವಿರೋಧಿಯ ಅಂತ್ಯಕ್ರಿಯೆಗಾಗಿ ಅಧ್ಯಕ್ಷರು ಸುವೆಲ್ಟರ ಮಾತಿನಲ್ಲಿ ಹೇಳುವುದಾದರೆ "ಇನ್ನು ಮುಂದೆ ಒಂದೇ ಮೆದುಳಿನ ಸೂಚನೆ ಪಡೆದು ಏಕ ಮೈಯಲ್ಲಿ ಏಕ ಕೈಯಿಂದ ಏಕ ಹೊಡೆತ ಕೊಡಲಿವೆ"! ಅಮೆರಿಕಾಧ್ಯಕ್ಷರು ಟರ್ಕಿ ಅಧ್ಯಕ್ಷರೊಡನೆ ನಡೆಸಿದ ಮಾತುಕತೆ, ಚರ್ಚಿಲ್ಲರು ಯುಗೊಸ್ಲೊವಿಯಾ ರಾಜರೊಡನೆ ನಡೆಸಿದ ಸಂಭಾಷಣೆಗಳಿಗೂ ವಿಶೇಷ ಮಹತ್ವವನ್ನು ಕೊಡಲಾಗಿದೆ. ಟರ್ಕಿಯು ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಿ ಮಿತ್ರರಿಗೆ ಬೆಂಬಲವಾಗಬಹುದೆಂಬ ಊಹೆಯು ಪ್ರಕೃತ ನಿರಾಧಾರವಾದುದೆಂದು ಟರ್ಕಿ ಅಧಿಕಾರಿಗಳು ಪುನಃ ತಾಟಸ್ಥ್ಯವನ್ನೇ ಸಮರ್ಥಿಸಿಕೊಂಡುದರಿಂದ ಸುವ್ಯಕ್ತ. ಅಂತೂ ಸಮ್ಮೇಲನ, ಭೇಟಿಗಳ ಒಳರೂಪಕ್ಕೆ ಬೆಳಕು ಬಿದ್ದಿಲ್ಲವಾದರೂ ಹೊರ ವೈಯ್ಯ ಬಹಳ ಮಿರಗುತ್ತಿದೆ!

ರಶ್ಯದ ಯುದ್ಧ.

ಜರ್ಮನರು ಇತ್ತೀಚೆಗೆ ರಶ್ಯಾ ರಣರಂಗಗಳಲ್ಲಿ ಕೊಡುತ್ತಿರುವ ಪ್ರತಿಭಟನೆ, ಹೊಡುತ್ತಿರುವ ಪ್ರತಿಧಾಳಿ ಗಣನೀಯವಾದುದು. ಜರ್ಮನ್ ಜನರಲ್ ಮಾನ್ಸ್ಟೀನರು ಕೀವಿನ ಮೇಲೆ ಪ್ರಾರಂಭಿಸಿರುವ ಅತಿ ಪ್ರಬಲ ಟ್ಯಾಂಕು ಧಾಳಿಯಿದಿರು ರಶ್ಯಾನರು ಕೆಲವು ಸ್ಥಳಗಳನ್ನು ಬಿಟ್ಟುಕೊಡಬೇಕಾಗಿ ಬಂದಿದೆ. ಸ್ಟಾಲಿನ್‌ಗ್ರಾಡಿನ ನಂತರದ ಅತಿ ದೊಡ್ಡ ಧಾಳಿಯಿದು. ತಮ್ಮ ಅತಿ ಪ್ರಾಮುಖ್ಯ ನೆಲಯುದ್ಧವಾದ ರಶ್ಯಾರಂಗದಲ್ಲಿ, ಕಾರ್ಯಾವಶ್ಯತೆಗಾಗಿ ಹಿಂದೆಗೆಯಲು ಸಿದ್ಧರಿರುವ ನಾಜಿಗಳು ಸೋತು ಹಿಮ್ಮೆಟ್ಟಲು ತಯಾರಿಲ್ಲವೆಂಬುದನ್ನು ಇದು ಸೂಚಿಸುತ್ತದೆ. ಆದರೆ ನಿಕ್ಕ ಎಲ್ಲಾ ರಂಗಗಳಲ್ಲೂ ಪದ್ಧತಿಯಂತೆ ಕೆಂಪು ಸೇನೆಯೇ ಮೇಲ್ಗೈಯಾಗಿದೆ. ನೀಪರ್ ವಲಯಕ್ಕೆ ನಾಜಿಗಳ ಸಂಬಂ-

ಯಿ ರೈಲ್ವೇ ಕೇಂದ್ರವಾದ ನಾವೆಂಕಾವು ರಶ್ಯಾನರ ವಶವಾಗಿದೆ. ಹಲವು ಕಡೆ ನಾಜೀ ರಕ್ಷಣಾ ಲೈನು ರಶ್ಯಾನರಿಂದ ಭೇದಿಸಲ್ಪಟ್ಟಿದೆ. ಜರ್ಮನರು ಕಳೆದೆರಡು ವಾರಗಳಲ್ಲಿ ಹೊಸ ಹೊಸ ಸೇನೆ ಮತ್ತು ಉಪಕರಣಗಳನ್ನು ಅಧಿಕ ಪರಿಮಾಣದಲ್ಲಿ ಪೋಲೆಂಡಿನ ಮೂಲಕ ರಶ್ಯದೊಳಗೆ ನೂಗಿಸುತ್ತಿದ್ದಾರೆಂಬ ವರದಿ ಬಂದಿದೆ. ಪ್ರಗತಿಪರ ಕೆಂಪು ಸೇನೆಯು ಮುಂದೆ ತಡವರಿಸಬೇಕಾದ ಸಂದರ್ಭ ಬರಬಹುದು.

ಇಟೆಲಿ ಯುದ್ಧ

ಇಟೆಲಿಯಲ್ಲಿ ಮಿತ್ರರ ಪ್ರಗತಿ ಅದಿಯ ನಿರೀಕ್ಷೆಗಿಂತ ಎಷ್ಟೋ ಪಾಲು ಕಡಿಮೆಯಾಯಿತೆನ್ನದೆ ನಿರ್ವಾಹವಿಲ್ಲ. ಇಟೆಲಿಯಾಕ್ರಮಣಾರಂಭವಾಗಿ ಮೂರೂವರೆ ತಿಂಗಳು ಕಳೆದರೂ ಇನ್ನೂ ರೋಮ್ ನಗರವನ್ನು ಸಮೀಪಿಸಲಾಗಲಿಲ್ಲವೆಂಬುದು ಸಮಾಧಾನಕರವಲ್ಲ. ಇಟೆಲಿಯಲ್ಲಿ ಮಿತ್ರಸೇನೆಗಳಿಗೆ ವಿಳಂಬವೊಡ್ಡುವುದೇ ಹಿಟ್ಲರರ ಉದ್ದೇಶವಾಗಿದ್ದರೆ ಅವರು ಸಾಫಲ್ಯ ಹೊಂದಿದ್ದಾರೆ. ಈಗ ಜನರಲ್ ಆಲೆಕ್ಸಾಂಡರರು ರೋಮಿನ ಕಡೆಗೆ ಹೊರಡಿಸಿದ ದ್ವಿಮುಖ ಸೇನೆಗಳು-ಎಂಟನೇ ಮತ್ತು ಐದನೇ ದಳಗಳು--ಜರ್ಮನರ ಛಳಿಗಾಲದ ಲೈನನ್ನು ಹಲವು ಕಡೆ ಭೇದಿಸಿರುವವು; ಮಹಾ ಬಿಕ್ಕಟ್ಟಿನ ಪರ್ವತ ವಲಯಗಳಲ್ಲಿ ನಿಧಾನವಾಗಿಯಾದರೂ ಸುದೃಢವಾಗಿ ಮುಂದೊತ್ತಲಾರಂಭಿಸಿರುವವು. ಜರ್ಮನಿಯ ಸಮೀಪದಲ್ಲೇ ದ್ವಿತೀಯ ರಂಗವನ್ನು ತೆರೆಯುವಾಗ ಇಟೆಲಿ ಧಾಳಿಯನ್ನು ಇನ್ನಷ್ಟು ಬಲಗೊಳಿಸಬೇಕೆಂಬ ಟೆಹರಾನ್ ತೀರ್ಮಾನವು, ಹೆಚ್ಚಿನ ಸೈನ್ಯಹೂಗಿಸಿಯೇ ಸಾಧ್ಯವೆಂದು ತೋರುತ್ತದೆ.

ಬಂಗಾಳದ ಅನ್ನಕ್ಷಾಮ—

ಇನ್ನೂ ಪ್ರಾಬಲ್ಯದಲ್ಲೇ ಇದೆ. ಜನರು ನೂರುಗಟ್ಟಲೆಯಲ್ಲಿ ಸಾಯುತ್ತಲೇ ಇದ್ದಾರೆ. ದೇಶ ವಿದೇಶಗಳ ಸಹಾಯ, ಇತರ ಕಡೆಗಳಿಂದಾದ ಧಾನ್ಯಾಮದುಗಳು ಬಂಗಾಳದ ಉದರಾಗ್ನಿ ಕುಂಡಕ್ಕೆ ಘೃತ ಹೊಯ್ದಷ್ಟೇ ಪರಿಣಾಮ ಕೊಟ್ಟಂತಿದೆ. ಆದರೆ ಈಗ ಹೊಸ ಕಟಾವಿನ ಧಾನ್ಯ ಬರಲಾರಂಭವಾಗಿದೆಯೆಂದೂ, ಪರಿಸ್ಥಿತಿ ಸುಧಾರಿಸುತ್ತಿದೆಯೆಂದೂ ತಿಳಿದು ಬರುತ್ತಿದೆ. ಇಡೀ ಪ್ರಾಂತ್ಯದಲ್ಲಿ ಮಲೇರಿಯಾ, ಕೊಲೆರಾ, ಮೊದಲಾದ ನೀಚಾಹಾರ-ನಿರಾಹಾರಜನ್ಯ ಅಂಟುರೋಗಗಳು ಮಾತ್ರ ಹಬ್ಬಿವೆ. ಒಂದು ಲಕ್ಷ ಟನ್ ಗೋದಿಯನ್ನು ಹಿಂದುಸ್ಥಾನಕ್ಕೆ ಕೊಡಲು ಮುಂದೆ ಬಂದ ಕೆನಡಾ ಸರಕಾರದ ದಾನವನ್ನು ತಿರಸ್ಕರಿಸಿಬಿಟ್ಟ ವಿ. ಅಮೆರಿಯವರ ವರ್ತನೆಯು ಕಠಿಣ ಟೀಕೆಗೊಳಗಾಗಿದೆ. ಕಲ್ಕತ್ತದಲ್ಲಿದ್ದ ಅನಾಥನಿಗತಿಕ ಹಿಂದೂ ಸ್ತ್ರೀಪುರುಷರನ್ನು ಮುಸಲ್ಮಾನ್ ಪ್ರಚಾರಕರು ಹೊರವಲಯಗಳಿಗೊಯ್ಯುವ ಕುರಿತು ಹಿಂದುಗಳು ಅತೃಪ್ತಿ ಸೂಚಿಸಿ ಡಾ। ಮುಕರ್ಜಿಯವರ ಪ್ರಯತ್ನದಿಂದ ಸರಕಾರವು ಆ ಕುರಿತು ಹಿಂದುಗಳಿಗೆ ಆಶ್ವಾಸನೆಯಿತ್ತಿದೆ. ಅನ್ನಛತ್ರಗಳಲ್ಲಿರುವ ಹಿಂದುಗಳನ್ನು ಮುಸಲ್ಮಾನರು ಮತಾಂತರಿಸುತ್ತಿದ್ದಾರೆಂಬ ಶ್ರೀ ಸಾವರ್ಕರರ ಆರೋಪವು 'ನಿರಾಧಾರವಾದುದೆಂದು ಕೆಲವರು ಪ್ರತ್ಯಕ್ಷ ವಿಚಾರಿಸಿ ಪ್ರಕಟಿಸಿದ್ದಾರೆ. ಅಂತೂ ಉದರಾಗ್ನಿಯ ಪೀಡೆಗೊಳಗಾದವರ ಮೇಲೂ ಮತ್ಸರಾಗ್ನಿ ಕಾರುವ ಮಿ. ಅಮೆರಿಯಂಥವರಿರುವುದೇ ಒಂದು ಸೋಜಿಗ!

ಕಾಂಗ್ರೆಸ್ ಪ್ರಮುಖರಿಗೆ ಬಿಡುಗಡೆ?

'ಕಲ್ಕತ್ತದಲ್ಲಿ ನೆರೆಯಲಿರುವ 'ಬಂಗಾಳ ಚೇಂಬರ್ ಆಫ್ ಕಾಮರ್ಸ್'ನ ವಾರ್ಷಿಕಾಧಿವೇಶನದಲ್ಲಿ ಪದ್ಧತಿಯಂತೆ ಭಾಷಣ ಮಾಡುವಾಗಲೂ, ಫೆಬ್ರವರಿಯಲ್ಲಿ ಸೇರುವ ಕೇಂದ್ರ ನ್ಯಾಯ ವಿಧಾಯಕ ಸಭೆಗಳ ಭಾಷಣದಲ್ಲೂ ಲೋರ್ಡ್ ವೇವೆಲರು, ಕಾಂಗ್ರೆಸ್ ಪ್ರಮುಖರ ಬಿಡುಗಡೆಯೊಡನೆ ಪ್ರಾರಂಭಿಸಲಿರುವ ಧೋರಣೆಯನ್ನು ನಿವೇದಿಸಿಕೊಳ್ಳಲಿದ್ದಾರೆ' ಎಂಬುದು ತನಗೆ ವಿಶ್ವಸನೀಯವಾಗಿ ತಿಳಿದು ಬಂದಿದೆ ಎಂದು 'ದಿ ನೇಶನಲ್ ಕಾಲ್' ಪತ್ರಿಕೆಯ ವಿಶೇಷ ಬಾತ್ಮೀದಾರನು ಬರೆಯುತ್ತಾನೆ. ಆ ನೊದಲೇ ವೈಸರಾಯರು ತನ್ನ ಅಭಿಪ್ರಾಯಗಳನ್ನು ಕಾಂಗ್ರೆಸ್ ಪ್ರಮುಖರಿಗೆ ತಿಳಿಸಿ, ಕಾಂಗ್ರೆಸ್ ಪ್ರಮುಖರ ಅಂತರ್ಯವನ್ನು ತಾನೂ ಅರಿತುಕೊಳ್ಳುವರು. ಕ್ರಿಪ್ಸ್ ಸೂಚನೆಯನ್ನೆತ್ತಿಕೊಂಡು, ಕೇಂದ್ರಾಧಿಕಾರವನ್ನು 'ಭಾರತೀಯ'ವಾಗಿ ಮಾರ್ಪಡಿಸಿ, ಪ್ರಾಂತ್ಯಗಳಲ್ಲಿ ಮಿಶ್ರ ಮಂತ್ರಿಮಂಡಳನ್ನು ಸ್ಥಾಪಿಸುವ ಯೋಚನೆಯಿದೆಯಂತೆ. ಮಿ. ಅಮೆರಿಯವರೂ ಇತ್ತೀಚೆಗಿನ ಒಂದು ಭಾಷಣದಲ್ಲಿ "ಭಾರತದ ಭಾವೀ ಧೋರಣೆಯು ಅಟ್ಲಾಂಟಿಕ್ ಘೋಷಣೆಯನ್ನು ಆಧರಿಸಿಯೇ ಇದೆ" ಎಂದಿದ್ದಾರೆ. ಬ್ರಿಟನಿನ ಧೋರಣೆ ಮಾರ್ಪಾಟದ ಮೊದಲ ಹೆಜ್ಜೆಯಾಗಿ ಮಿ. ಅಮೆರಿಯನ್ನೋಡಿಸಬೇಕೆಂಬ ಕೂಗು ಇಂಗ್ಲಾಂಡಿನ ಕೂಲಿಗಾರ ಸಂಘಗಳಿಂದ ಕೇಳಿಬರುತ್ತಿದೆ. ಭಾರತದ ಕುರಿತು ಬ್ರಿಟಿಷ್ ಜನತೆ ಮತ್ತು ಅಧಿಕಾರಿಗಳಲ್ಲಿ ಹೃದಯಾಂದೋಲನವೆದ್ದಿದೆ ಎಂಬುದೊಂದು ನಿಜ.

ತಾ. 9—1—44ರಿಂದ ತಾ. 15—1—44ರ ವರೆಗೆ

★ ಉಡುಪಿ ಜಾತ್ರೆ ★

ಇದೇ ಬರುವ ಪುಷ್ಯ ಶು. ೧೫ ಯು ರವಿವಾರ ತಾ. 9—1—1944 ಮೊದಲ್ಗೊಂಡು ಬ. ೫ ಯು ಶನಿವಾರ ತಾ. 15—1—1944ರ ವರೆಗೆ ಶ್ರೀ ಕೃಷ್ಣಸನ್ನಿಧಿಯಲ್ಲಿ **ಮಕರ ಸಂಕ್ರಮಣ** ಪ್ರಯುಕ್ತ **ಸಪ್ತೋತ್ಸವವು** ಅವಭೃಥ ಜಲೋತ್ಸವಾದಿ ಯುಕ್ತವಾಗಿ ವಿಶೇಷ ಸಮಾರಂಭದಿಂದ ಜರಗಲಿರುವುದಲ್ಲದೆ, ನಮ್ಮ ಈ ಪರ್ಯಾಯ ಅವಧಿಯು ಪುಷ್ಯ ಬ. ೭ ಯು ಸೋಮವಾರ ತಾ. 17—1—1944ಕ್ಕೆ ಪರಿಸಮಾಪ್ತಿಯಾಗುವುದರಿಂದ ಆ ದಿನ ನಡೆಯುವ ಮಹಾಸಂತರ್ಪಣೆ, ಮಹೋತ್ಸವಾದಿಗಳೂ ಜರಗುವವು.

ನಮ್ಮ ಪರ್ಯಾಯ ಕಾಲದಲ್ಲೇ ನೀವು ಕುಟುಂಬ ಮಿತ್ರಪರಿವಾರ ಸಮೇತರಾಗಿ ಬಂದು ಉತ್ಸವಾದಿ ಸಂದರ್ಶನದಿಂದ ಶ್ರೀಕೃಷ್ಣ ಪರಮಾತ್ಮನ ಪರಮಾನುಗ್ರಹಕ್ಕೆ ಪಾತ್ರರಾಗಬೇಕಾಗಿ ನಾವು ಅಪೇಕ್ಷಿಸುತ್ತೇವೆ

ಯಾತ್ರಿಕರಿಗೆ ತಕ್ಕ ಸೌಕರ್ಯಗಳ ವ್ಯವಸ್ಥೆ ಇದೆ. ಹೆಚ್ಚಿನ ಮಾಹಿತಿಗೆ ಬರೆಯಿರಿ—

ಮೆನೇಜರ್,
ಪರ್ಯಾಯ ಶ್ರೀಕೃಷ್ಣಾಪುರ ಮಠ,
ಉಡುಪಿ.

ಪ್ರಗತಿಯವರ ಪ್ರಥಮ ಶ್ರೇಣಿಯ ಚಿತ್ರ. ಕನ್ನಡದ ಕಾವ್ಯಮಯ ಚಿತ್ರವು ಕಲೋಪಾಸಕರಾದ ಸುಬ್ಬಯ್ಯ ನಾಯ್ಡು, ನಾಗೇಂದ್ರ ರಾವ್, ಲಕ್ಷ್ಮೀ ಬಾಯಿ, ರಾಜ್ಜೈಯ್ಯಂಗಾರ್ ಮೊದಲಾದವರಿಂದ ಪರಿಪೂರ್ಣಚಿತ್ರವೆನಿಸಿತು.

ಹರಿಶ್ಚಂದ್ರ (ಕನ್ನಡ)

ತಾ. 16—12—43ರಿಂದ
ಯಶಸ್ವಿಯಾಗಿ ಮೂರನೇ ವಾರಕ್ಕೆ ಮುಂದರಿದಿದೆ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.



ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಾಂಜಿ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಪ್ರಕಟಣೆ.

ಉಡುಪಿ ಕಸಬಾ ಮೂಡನಿಡಂಬೂರು ಗ್ರಾಮದಲ್ಲಿ ಯಿರುವ ಶಂಕರಮಣೆ ಮುಕ್ತಕ್ಕ ಸೆಟ್ಟಿ ರ ಮಗ ವೀರಣ್ಣ ಸೆಟ್ಟಿಯು ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದರೆ, ನನ್ನ ತಾಯಿ ಯೂ ಗ ಕುಟುಂಬದ ಪಟ್ಟಾದಾರಳು ವ ಆಡಳ್ತೆದಾರಳಾಗಿದ್ದ ಸದ್ರಿಯವರು ಈಗ ಸುಮಾರು 70 ವರುಷದ ವಯೋವೃದ್ಧರಾಗಿರುತ್ತಾರೆ. ಕುಟುಂಬಕ್ಕೆ ಸಾಲ ಯಿರುವದಿಲ್ಲ. ಹೀಗಿರುತ್ತ— ನಾನು ಹೆಚ್ಚಾಗಿ ಬೊಂಬಾಯಿಯಲ್ಲಿರುವದರಿಂದ ನನ್ನ ಗೈರುಹಾಜರ್ ಸಮಯ ನನ್ನ ದ್ವೇಷಿಕರು ನನ್ನ ತಾಯಿಗೆ ದುರ್ಬೋಧನೆ ಕೊಟ್ಟು ಈ ಬಾಬಿನಲ್ಲಿ ಕ್ರಮ ನೋಕರು ವಗೈರೆ ಮಾಡಬಹುದಂತೆ ಯಾವ ರಿಕಾರ್ಡುಗಳೂ ನಮ್ಮ ಕುಟುಂಬಕ್ಕಾಗಲೀ ವ ಸದ್ರಿ ಆಸ್ತಿಯ ಮೇಲಾಗಲೀ ಬದ್ಧ ಕರಿಸತಕ್ಕದಲ್ಲ. ಸದ್ರಿ ನನ್ನ ತಾಯಿಯವರು ಕೊಡತಕ್ಕ ರಶೀದಿಗಳು ವಗೈರೆ ನನ್ನ ಸಾಕ್ಷಿ ನಿಶಾನಿ ಪಡಕೊಳ್ಳಬೇಕಲ್ಲದೆ ಯಿದ್ದೆ ವ್ಯತಿರಿಕ್ತವಾಗಿ ಮಾಡಿದ ಯಾವತ್ತೂ ರಿಕಾರ್ಡುಗಳು ನಮಗೆ ವ ನಮ್ಮ ಕುಟುಂಬದವರ ಆಸ್ತಿಗೆ ಬದ್ಧೀಕರಿಸತಕ್ಕದ್ದಲ್ಲ.

ಉಡುಪಿ,
ತಾರೀಖು 5-12-43. } ವೀರಣ್ಣ ಸೆಟ್ಟಿ ರುಜು.

The Canara Banking Corporation Limited.
(Incorporated in British India Liability of members limited)
(Branches & Agencies in all principal cities of India)

Authorised Capital	Rs. 25,00,000/-
Issued & Subscribed Capital	Rs. 16,00,000/-
Paid up Capital ...	Rs. 12,65,000/-
Reserves	Rs. 3,88,000/-

Advances are made against approved securities and bills purchased or collected at most favourable rates. For further particulars please apply to the nearest branch.

ನವಯುಗ

ಉಡುಪಿ, ಗುರುವಾರ ೧೬-೧೨-೧೯೪೩

ಜನ ಬೆಂಬಲ ಬೇಡವೇ?

"ಧಾಳಿ ನಡಿಸುವ ಪೂರ್ವ ತಯಾರಿಯಾಗಿ ನಾವು ಭಾರತದ ಗಡಿಯಲ್ಲೆಲ್ಲಾ ನಮ್ಮ ಸ್ಥಾನ ಭದ್ರತೆಯನ್ನೂ ನಿಲ್ದಾಣ ಜಾಗೂ ಜೋಡಣಾ ಪಥಗಳ ರಚನೆಯನ್ನೂ ಹದಿನೆಂಟು ತಿಂಗಳ ಮೊದಲು ಯೋಜನೆಗೂ ನಿಲುಕದಂತಹ ಪರಿಮಾಣದಲ್ಲೀಗ ಮಾಡಿಕೊಂಡಿದ್ದೇವೆ"-ಭಾರತದ ಸರ್ವ ಸೇನಾನಿ ಜನರಲ್ ಸರ್. ಅಫ್‌ಲೆಖರು ಇದೇ ತಾ 13ರಲ್ಲಿತ್ತ ಆಕಾಶವಾಣಿ ಭಾಷಣದಲ್ಲಿ ಬಂದ ಮಾತುಗಳಿವು. "ನಾವು ಒರಗಾಲು, ನರೆ, ಮತ್ತು ರೋಗಗಳಿಂದ ಹಿಂದೆ ಬೀಳುವ ಸಂದರ್ಭಗಳಿದ್ದುವು. ಅವುಗಳನ್ನು ಕಡೆಹಾಯುತ್ತಾ, ಭವಿಷ್ಯತ್ಕಾಲದಲ್ಲೊದಗುವ ಇಂತಹ ಆತಂಕಗಳನ್ನು ಪ್ರತಿರೋಧಿಸಲಿಕ್ಕೂ ಸಿದ್ಧರಿದ್ದೇವೆ" ಎಂದು ಸೇನಾನಿಗಳ ಅಭಯವಿದೆ. "ಪ್ರಕೃತ ಹಿಂದುಸ್ಥಾನದ ಪ್ರಾಮುಖ್ಯ ಸೈನ್ಯೋದ್ಯೋಗವೆಂದರೆ, ಧಾಳೀ ಪ್ರವೃತ್ತ ಸೇನೆಗಳು ಸಶಕ್ತವಾಗಿ ಸುದೃಢವಾಗಿ, ಎದ್ದೇಳುವ ಮಹಾ ನಿಲ್ದಾಣವಾಗಿ ದೇಶವು ತಾನಾಗಿ ಮಾರ್ಪಾಟು ಹೊಂದಬೇಕು. ಸಂಗ್ರಹ ಸಾಧ್ಯವಾದ ಎಲ್ಲಾ ಶಕ್ತಿ ಮತ್ತು ಚಾತುರ್ಯ ಮೂಲಕವೇ ಸಾಧಿಸಬೇಕಾದ ಅವಶ್ಯಕತಾ ಕಾರ್ಯವಿದು" ಎಂಬೂ ಜನರಲ್ ಅಫ್‌ಲೆಕರಿಗೆ ಗೊತ್ತಿದೆ. ಹಿಂದುಸ್ಥಾನದ ಆಕ್ರಮಣಕ್ಕೆಳಸುವ ಶಕ್ತಿ ಸಂಗ್ರಹವೀಗ ಜಾಪಾನಿನಲ್ಲಿರಬಹುದೆಂದು ಈ ಸೇನಾನಿ ನಂಬುವದಿಲ್ಲ. ಹೋದ ವರುಷ ಅವರು ಪ್ರಯತ್ನಿಸಬಹುದಾಗಿತ್ತು; ಈಗ ಸಂದರ್ಭ ಕಳಕೊಂಡಿದ್ದಾರೆ. ಜಾಪಾನಿನ ಮೇಲಿನ ಒತ್ತಡ ಬಲವಾಗುತ್ತಾ ಬಂದಂತೆ ಅದು ಉದ್ರೇಕಗೊಳ್ಳುವದು ಸಹಜ; ಹಿಂದುಸ್ಥಾನದ ಮೇಲೆ ನಡೆದ ಬೋಂಬು ಧಾಳಿಗಳು ಆಕ್ರೂರ ಬುದ್ಧಿಯ ಪ್ರದರ್ಶನ ಮಾತ್ರ. ನಮ್ಮ ಯುದ್ಧ ಸಿದ್ಧತೆಗೆ ಭಂಗವೊದ್ದುವದೇ ಅಂತಹ ಧಾಳಿಗಳ ಉದ್ದೇಶ ಎಂದು-ಭಾರತದ ಸೇನಾನಿ ಜಾಪಾನರ ಗುಟ್ಟನ್ನು ಹೊರಹಾಕಿದ್ದಾರೆ. ಹಿಂದುಸ್ಥಾನದಲ್ಲಿರುವ ರಕ್ಷಣಾ ವ್ಯವಸ್ಥೆಯ ಕುರಿತು ಜನರು ಅಸಮಾಧಾನ ಪಡಬಾರದೆಂದು "ಅತಿ ಪ್ರಬಲ ರಕ್ಷಣಾ ವ್ಯವಸ್ಥೆಯಿದ್ದರೂ-ಈ ದಿನ ಇಂಗ್ಲಾಂಡಿನಲ್ಲಿರುವಂತಹ ವ್ಯವಸ್ಥೆ ಕೂಡಾ-ಇಂತಹ ಆಕಾಶ ಧಾಳಿಗಳಿಂದ ಏನೊಂದೂ ಹಾನಿಯಾಗದಂತೆ ಮಾಡಲು ಶಕ್ಯವಾಗಲಾರದು"-ಎಂಬ ಕಾರಣವನ್ನು ಕೊಟ್ಟಿದ್ದಾರೆ. ಜಾಪಾನರೀಗ ಮಾಡುತ್ತಿರುವ ಪ್ರಚಾರಕ್ಕೆ ಬೆಂಬಲವಾಗಿ, ಅಥವಾ ಹಿಂದುಸ್ಥಾನದಲ್ಲಿ ಗೊಂದಲವೆಬ್ಬಿಸಬೇಕೆಂಬ ಇಚ್ಛೆಯಿಂದ ಕರಾವಳಿಯ ಅಲ್ಲಲ್ಲಿ ಸಣ್ಣ ಸಣ್ಣ ಗುಂಪುಗಳನ್ನಿಳಿಸಿಯಾರೆಂಬ ಭಯವು ಜ. ಅಫ್‌ಲೆಕರಿಗಿದೆಯಾದರೂ, ವ್ಯವಸ್ಥೆಯಿಂದ, ಹಿಂದುಸ್ಥಾನಾಕ್ರಮಣವಾದಂಥ ಸಮಯ ವಿರೋಧಿಯ ಕೈಮೀರಿದ ಕಾರ್ಯವೆನ್ನುತ್ತಾರೆ.

ಬರ್ಮಾ ಗಡಿಯಲ್ಲಾಗುತ್ತಿರುವ ಘರ್ಷಣೆಗಳನ್ನು ಆತುರದಿಂದ ಕಣ್ಣರಳಿಸಿ ನೋಡುತ್ತಿರುವ ಹಿಂದೀಯರು, ಇಲ್ಲಿಯ ಯುದ್ಧ ಹೊಣೆ ಹೊತ್ತ ಸೇನಾನಿಯ ಮಾತುಗಳನ್ನು ಕಿವಿಗೊಡಗಿಸಿ ಕೇಳದೆ ನಿರ್ವಾಹವಿಲ್ಲ; ಅವರ ಮಾತಿಗೆ 'ತಥಾಸ್ತು' ಎನ್ನದೆ ವಿಧಿಯಿಲ್ಲ. ಜಾಪಾನರು ಹಿಂದುಸ್ಥಾನದೊಳಗೆ ನುಸುಳಿ ಹೆಜ್ಜೆಯೂರಲಿದ್ದಾರೆ ಎಂಬ ನಿರೀಕ್ಷೆ ಸುಳ್ಳಾಗಿ, 'ಅವರು ತಂಟೆ ಮಾತ್ರ ಮಾಡಬಲ್ಲರು; ನಾವು ಮುಂದೊತ್ತಲಿದ್ದೇವೆ' ಎಂಬ ಜ. ಅಫ್‌ಲೆಕರ ಮಾತೇ ಸತ್ಯವಾಗಲಿ ಎಂದು ಎಲ್ಲರ ಹಾರೈಕೆ! ಆದರೆ ಅಂತಹ ಧಾಳೀನಿಲ್ದಾಣವಾಗಿ ಹಿಂದುಸ್ಥಾನವನ್ನು ಮಾರ್ಪಡಿಸಲು ದೇಶದ ಸರ್ವಶಕ್ತಿ ಚಾತುರ್ಯಗಳನ್ನು ಕೇಂದ್ರೀಕರಿಸಿಕೊಳ್ಳುವ ಆವಶ್ಯಕತೆಯನ್ನು ಜ. ಅಫ್‌ಲೆಕರು ಒತ್ತಿ ಹೇಳಿದ್ದಾರೆ. ಅಧಿಕಾರಿಗಳ ಓರ್ಡಿನೆನ್ಸ್ ಚಲಾವಣೆ, ಯುದ್ಧನಿಧಿ ಮತ್ತು ಸೈನಿಕ ಸಂಗ್ರಹವನ್ನೇ ಭಾರತ ಸೇನಾನಿಗಳು 'ಇಲ್ಲಿಯ ಸರ್ವ ಶಕ್ತಿ ಚಾತುರ್ಯ' ವೆಂದು ಕರೆದಿರಬಹುದೇ? ಹಾಗಲ್ಲ--ಯುದ್ಧಕ್ಕೇಳುವ ಸೈನ್ಯದ ಬೆಂಬಲದ ಬೆಂಗಡೆಯಲ್ಲಿ ಅಖಿಲ ಭಾರತೀಯರ 'ಶಕ್ತಿ ಚಾತುರ್ಯ'ಗಳ ನೆರವಿರಬೇಕೆಂಬುದೇ ಈ ಮಾತಿನ ಅರ್ಥವಾದರೆ ಸರಕಾರವಿನ್ನೂ ಅದನ್ನು ಸಂಪಾದಿಸಲು ತೊಡಗಿಲ್ಲ. ಏನೇನೋ ಬಯಲು ವಾರ್ತೆಗಳು ಕೇಳಿಬರುತ್ತಿವೆಯಾದರೂ ಲೋರ್ಡ್ ವೇವೆಲರು ಅದನ್ನಾರಂಭಿಸುವರೆಂಬ ಸ್ಪಷ್ಟ ಚಿಹ್ನೆಯೂ ಗೋಚರಿಸುವದಿಲ್ಲ. ರಾಷ್ಟ್ರ ಮಾನ್ಯ ಪ್ರಮುಖರನ್ನು ಬಂಧನದಲ್ಲಿಟ್ಟು, ಜನತಾಭಿಪ್ರಾಯವನ್ನು ಸರ್ವದೆಗಳಲ್ಲೂ ದಮನಿಸಿಟ್ಟು, ಯುದ್ಧ ಕಾರ್ಯಕ್ಕಾಗಿ ರಾಷ್ಟ್ರದ ಸರ್ವಶಕ್ತಿಯನ್ನು ಸಂಗ್ರಹಿಸಿಕೊಳ್ಳಬಹುದೆಂಬ ವಿಶ್ವಾಸವಿರುವವರನ್ನು ಚಿಕಿತ್ಸೆಗೆ ಸಿಗದ ಹುಚ್ಚರೆನ್ನಬೇಕು! ಜನರಲ್ ಅಫ್‌ಲೆಕರು, ತಾವು ಹಲವೆಡೆ ಹಿಂದೆ ಬಿದ್ದಿದ್ದೇವೆಂಬುದನ್ನು ಬಲ್ಲರು. ಆದರೆ ಅವರನ್ನು ಹಿಂದೂಡಿದುದು 'ಒರಗಾಲು, ನರೆ, ರೋಗ'ಗಳು ಮಾತ್ರ. ಮನುಷ್ಯವರ್ಗದಿಂದ ಈ ತೆರನ ಪರಾಭವವನ್ನೇ ಅನುಭವಿಸದ ಅಜಾತ ಶತ್ರುವಿನಂತೆ--ಹಿಂದುಸ್ಥಾನದ ರಾಜಕೀಯ ಸ್ಥಿತಿಗತಿಗಳು ತಮ್ಮನ್ನು ಹಿಂದೂಡಿದುದೇ ಇಲ್ಲವೆಂಬಂತೆ--ಭಾರತ ಸೇನಾನಿಗಳು ಪ್ರಕೃತಿಜನ್ಯ ಸಂಕಷ್ಟಗಳೆದುರು ಯುದ್ಧ ಸಾರುತ್ತಿದ್ದಾರೆ! ಇದೀಗ ಬ್ರಿಟಿಷ್ ಕುಯುಕ್ತಿಯ ಮಾದರಿ! ಬ್ರಿಟಿಷ್ ಅಧಿಕಾರಿಗಳ ಇಂತಹ ವ್ಯಂಗ್ಯ ವಾದಗಳನ್ನು ಜಿಗುಪ್ಸೆ ಪಡುವಷ್ಟು ಕೇಳಿಯಾಗಿದೆ. ಹಿಂದೀ ಸರಕಾರವು ತನ್ನ ಘೋಷಣೆ ಬದಲಾಯಿಸಿ ಕಾಂಗ್ರೆಸ್ ಪ್ರಮುಖರ ಬಿಡುಗಡೆ ಮಾಡಿ ದೇಶದ ಬೆಂಬಲ ಸಂಪಾದಿಸಲಿ; ಇಲ್ಲವೇ ತನ್ನ ಶಸ್ತ್ರಬಲವೊಂದನ್ನೇ ಆಧರಿಸಿಕೊಂಡಿರಲಿ; ತನ್ನ ಸೇನಾ ಶಕ್ತಿಗೂ ರಾಷ್ಟ್ರ ಶಕ್ತಿಗೂ ಕೃತಕ ಸಂಬಂಧವನ್ನು ಗಂಟುಹಾಕಿಕೊಳ್ಳುವ ಅಭ್ಯಾಸವನ್ನು ಬಿಟ್ಟು ಸ್ಪಷ್ಟ ವಾತಾವರಣವನ್ನು ನಿರ್ಮಿಸುವ ಇದೊಂದು ಉಪಕಾರವನ್ನಾದರೂ ಮಾಡಲಿ. ಎಂದು ವಿನಂತಿಸಿಕೊಳ್ಳಬೇಕಾಗಿದೆ. ಭಾರತೀಯರಿಗೆ ಕಹಿಯುಂಡು ಅಭ್ಯಾಸವಾಗಿದೆ; ಸಿಹಿಯುಣ್ಣುವದರಲ್ಲಿ ಸಂತೋಷವಿದೆ; ಆದರೆ ಸಿಹಿ ಕಹಿ ಮಿಶ್ರಣದ ಆ ವಿಲಕ್ಷಣ ರುಚಿಯೊಗ್ಗದು--ಎಂಬುವನ್ನು ಬ್ರಿಟಿಷ್ ಅಧಿಕಾರಿಗಳು ಮರೆಯಬಾರದು.

ದುರ್ಬೀನು

ಮನೇ ಹಾವಡಿ ಗುಡಿಸುವದು ಕಸಕಡ್ಡಿ ನಿವಾರಣೆಗಾಗಿ; ಮಠದಡಿ ಗುಡಿಸುವದು ಕಸಕಡ್ಡಿ ಸಂಗ್ರಹಕ್ಕಾಗಿ. ತನ್ನವರಿಗೆ ಬೋಧನೆ ಅವರ ದೌರ್ಬಲ್ಯ ನಿವಾರಣೆಗೆ; ಅನ್ಯರಿಗೆ ಬೋಧನೆ ಅವರ ದೌರ್ಬಲ್ಯವನ್ನು ಸ್ವಂತಕ್ಕುಪಯೋಗಿಸಿಕೊಳ್ಳುವದಕ್ಕಾಗಿ.

೦೦ ೦೦ ೦೦

ವಿಮಾನದಿಂದ ಪೆರಚ್ಯೂಟಿನಲ್ಲಿ ಜಾರಿದರಾಗಬಹುದು; ವಿಮಾನದಿಂದಲೇ ಜಾರಿಬಿದ್ದರಾಗದು. ಆಕಾಶಗಾಮಿತ್ವದಂತಿರುವ ಹೆಬ್ಬಯಕೆಗಳಿಂದ ವಿಚಾರಪೂರ್ವಕವಾಗಿ ದೂರವಾಗಬಹುದು; ಆದರೆ ಒಮ್ಮೆಗೇ ನಿರಾಶೆಗೊಳ್ಳಬಾರದು.

೦೦ ೦೦ ೦೦

ಎಲ್ಲರನ್ನೂ 'ಅಯ್ಯ' ಎನ್ನುವ ಕೂಲಿಕೆಲಸದವನು ತನ್ನ ಜೀವಾವಧಿಯಲ್ಲಿ 'ಅಯ್ಯಾ!' ಸಂಬೋಧನೆ ಪಡೆದಿರಲಾರ. ಎಲ್ಲರನ್ನೂ ಮುಖಸ್ತುತಿ ಮಾಡುತ್ತಾ ಹೋಗುವವನು ಎಂದೂ ಸ್ತೋತ್ರಾರ್ಹನಾಗಲಾರ.

೦೦ ೦೦ ೦೦

ಇಬ್ಬರು ಕೈ ಕೈ ಹಿಡಿದು ನಡೆದರೆ ಅವರು ಚತುರ್ಭುಜದ ಶ್ರೀಮನ್ನಾರಾಯಣರಾಗುವದಿಲ್ಲ. ಇಬ್ಬರ ಯೋಜನೆ ಬೆರಕೆಯೊಡನೆ ಅದರಲ್ಲಿ ಭೂತ-ಭವಿಷ್ಯವೆರಡೂ ಸೇರುವದೆಂದಿಲ್ಲ.

೦೦ ೦೦ ೦೦

ನಾಲಿಗೆ ಬಿಗಿ ಹಿಡಿದರೆ ಮಾತು ಕಡಿಮೆಯಾದೀತು; ಕೈ ಬಿಗಿ ಹಿಡಿದರೆ ಕಾರ್ಯವೇ ಕಡಿಮೆಬಿದ್ದೀತು.

೦೦ ೦೦ ೦೦

ಕೊಡಲಿ ಹಿಡಿದುಕೊಂಡು ಹೂದೋಟ ಪ್ರವೇಶಿಸಬೇಕೆಂದಿಲ್ಲ; ಉಗುರು ಬೆಳೆಯಿಸಿದವ ಕಾಡು ಹೊಕ್ಕರಾಗದು. ಕಟು ಮಾತಿನವನಿಗೆ ಸಂಭಾವಿತರ ಕೂಟವಲ್ಲ; ಮೃದು ಮಾತಿನವನಿಗೆ ಒರಟು ಜೀವಿಗಳ ಸಂಪರ್ಕವಲ್ಲದು.

ತಾರುಣ್ಯ
ಕೊಟ್ಟ್ಯ, ವೀರ್ಯಸ್ತಂಭನೆ ಮಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು ರಮಣಿ ವಿಲಾಸಿನಿ ಅತ್ಯುತ್ತಮ ಔಷಧಿ.
ಡಬ್ಬಿ 1ಕ್ಕೆ ರೂ. 1.
ಮದನಮಂಜರಿ ಫಾರ್ಮಸಿ,
184 ಚೈನಾ ಬಜಾರ್ ರೋಡ್, ಮದ್ರಾಸು.
ಪುತ್ತೂರು ಏಜಂಟರು: ಪೈ ಫಾರ್ಮಸಿ

ಕೇರಳ ವೇಪ್ ಸೋಪು
VEP SOAP
ವೈದ್ಯಕೀಯ ಸಾಬೂನು
ಚುನಾಯಿತ ದಿನಸುಗಳಿಂದ ತಯಾರಿಸಿದುದು.
— ಬೇವಿನೆಣ್ಣೆಯ ಸಾರಯುಕ್ತವಾದುದು —
ಸುಪ್ರಸಿದ್ಧವಾದ ಚರ್ಮ ವರ್ಧಕ ಟಾನಿಕ್.
ಕೇರಳಾ ಸೋಪ್ ಇನ್ಸ್ಟಿಟ್ಯೂಟ್.
ಕಲ್ಲಿಕೋಟೆ. ಸರಕಾರೀ ಸಂಸ್ಥೆ
K. S. I. 2.

Bhuvanendra Products Limited
Ref. No 1122/43-44.] **Katapady.** [14th Dec. 1943.
Ref. Your letter dated 11th Dec. 43
We are in due receipt of your above letter. Please reserve for us the front cover page for our advertisement in your annual numer of 1944. The matter will be sent to you shortly.
Assuring you of our best attention at all times,
We remain,
Yours faithfully,
P. J. NAYAK,
Managing Director.

ಕೀವಿನಲ್ಲಿ ಜರ್ಮನರ ಟೇಂಕು ಧಾಳಿ

ವೈಸರಾಯರ ಸಂಚಾರ.

ವೈಸರಾಯ ಲೋರ್ಡ್ ವೇವೆಲರು ಸಪತ್ನೀಕರಾಗಿ ಈಗ ಬಂಗಾಳದಲ್ಲಿ ಸಂಚರಿಸುತ್ತಿದ್ದಾರೆ. ಅವರು ದೇಶದ ಎಲ್ಲಾ ಪ್ರಾಂತ್ಯಗಳಿಗೂ ಭೇಟಿಕೊಡುವರೆಂದೂ ಬಂಗಾಳದ ಆದ್ಯಂತ ಸಂಚರಿಸಲಿರುವರೆಂದೂ ತಿಳಿದು ಬರುತ್ತದೆ. ಈ ದೇಶಪರ್ಯಟನದಲ್ಲಿ ವೈಸರಾಯಿಗಳು ಮುಖ್ಯವಾಗಿ ಆಹಾರ ಸ್ಥಿತಿಯ ಅನುಭವ ಸಂಪಾದಿಸಿಕೊಳ್ಳುವರು.

ಪಂಜಾಬಿನಲ್ಲೂ ಆಹಾರ ನಿಯಂತ್ರಣ.

ತಮ್ಮಲ್ಲಿಗೂ ಧಾನ್ಯ ನಿಯಂತ್ರಣ ಮತ್ತು ರೇಶನಿಂಗ್ ಜ್ಯಾರಿಗೆ ತರಬೇಕೆಂಬ ಕೇಂದ್ರ ಸರಕಾರದ ಯೋಜನೆಗೆ ಈ ತನಕ ಅಸಮ್ಮತಿ ಸೂಚಿಸುತ್ತಿದ್ದ ಪಂಜಾಬು ಮಂತ್ರಿಗಳು ಈಗ ಅದರ ಅಂಗೀಕಾರವನ್ನೊಪ್ಪಿ ಸರಕಾರೀ ಪ್ರಕಟಣೆ ಹೊರಡಿಸಿದ್ದಾರೆ ಸದ್ಯದ ಸ್ಥಿತಿಗತಿ, ವೈಸರಾಯರೊಡನೆ ಮಂತ್ರಿಗಳು ನಡಿಸಿದ ಖಾಸಗೀ ಸಂಭಾಷಣೆಗಳ ವಿವರಣೆಗಳು ಆ ಪ್ರಕಟಣೆಯಲ್ಲಿವೆ.

ಬಂಗಾಲದ ಆಹಾರಸ್ಥಿತಿ.

ಹಿಂದೀ ಸರಕಾರದ ಸುದ್ದಿಖಾತೆಯ ಸದಸ್ಯರಾದ ಸರ್. ಸುಲ್ತಾನ್ ಅಹಮ್ಮದರು ಬಂಗಾಳದ ಪರಿಸ್ಥಿತಿಯ ಕುರಿತು ಮಾತನಾಡುತ್ತಾ ಆಹಾರಾಭಾವವು ಈಗ ನಿಸ್ಸಂದೇಹವಾಗಿ ನಿವಾರಣೆಯಾಗುತ್ತಿದೆ ಎಂದರು. ಈ ಸಮಸ್ಯೆಗೆ ಯುದ್ಧ ಸ್ಥಿತಿಯೇ ಮುಖ್ಯಕಾರಣವೆಂದೂ, ಸರಕಾರವು ಅದರ ನಿವಾರಣೆಗೆ ಸಾಧ್ಯವಿದ್ದ ಪ್ರಯತ್ನಗಳನ್ನು ಮಾಡಿದೆ, ಮಾಡುತ್ತಿದೆಯೆಂದೂ ಸರ್. ಸುಲ್ತಾನರ ಹೇಳಿಕೆ

ಪಾನನಿಷೇಧದ ರದ್ದತಿ.

ಮದ್ರಾಸಿನ ನಾಲ್ಕುಜಿಲ್ಲೆಗಳಲ್ಲಿ ಜಾರಿಯಲ್ಲಿರುವ ರಾಜಾಜೀಕೃತ ಪಾನ ನಿಷೇಧವನ್ನು ಇದೇ ಜನವರಿಯಾರಂಭದಿಂದ ರದ್ದುಪಡಿಸಿರುವ ಮದ್ರಾಸ್ ಸರಕಾರದ ವರ್ತನೆಯನ್ನು ನಿಷೇಧಿಸಿ, ಸಭೆ, ಭಾಷಣ, ನಿರ್ಧಾರ, ಚಳವಳಿಗಳು ಸಂಬಂಧಪಟ್ಟ ಜಿಲ್ಲೆಗಳಲ್ಲಿದ್ದಿವೆ. 'ಇದು ಪ್ರಜಾಭಿಪ್ರಾಯಕ್ಕೆ ಕೊಟ್ಟ ಸಮಾಧಿ' 'ಮಹಾ ವಿನಾಶಾತ್ಮಕ ಹೆಜ್ಜೆ 'ಗವರ್ನರರು ನನ್ನ ಎದೆಗೆ ವಿಷಮಿಶ್ರಿತ ಬಾಣಹೂಡಿದ್ದಾರೆ' 'ಸರಕಾರವೇ ಜನರಿಗೆ ನರಕದ ಬಾಗಿಲನ್ನು ತೆರೆಯುತ್ತಿದೆ'-ಇತ್ಯಾದಿ ವೇದನಾಪೂರ್ಣ ಖಂಡನೆಗಳನ್ನು ರವಾನೆ ಮಾಡುತ್ತಿದ್ದಾರೆ.

ಆಂಧ್ರರ ಶಿಷ್ಟಮಂಡಲ.

ಆಂಧ್ರ ಪ್ರಾಂತ್ಯ ರಚನೆಗಾಗಿ ಆಂಧ್ರ ಮಹಾ ಸಭೆಯ ಡೆಪ್ಯುಟೇಶನೊಂದು ಇದೇ ತಾ [illegible] ಮದ್ರಾಸ್ ಗವರ್ನರರನ್ನು ಭೇಟಿಯಾಯಿತು. ಗವರ್ನರರು ಎಲ್ಲವನ್ನೂ ಸಹಾನುಭೂತಿ ಪೂರ್ವಕ ಪರಿಶೀಲಿಸುವೆನೆಂದು ಅಭಯವಿತ್ತಿದ್ದಾರೆ.

ಯು ಬೋಟು ನಾಶ.

ಉತ್ತರ ಅಟ್ಲಾಂಟಿಕದಲ್ಲಿ ಮಿತ್ರಹಡಗನ್ನು ಸಂರಕ್ಷಿಸುವುದಕ್ಕಾಗಿ ಜಮೆಯಾಗಿದ್ದ ಜರ್ಮನರ ದೊಡ್ಡ ಯು. ಬೋಟು ದಳದಮೇಲೆ ಮಿತ್ರರ ಯುದ್ಧ ಹಡಗಗಳು ಧಾಳಿ ನಡಿಸಿ ಅವುಗಳಲ್ಲೈದಕ್ಕೆ ಜಲಸಮಾಧಿಕೊಟ್ಟವೆಂದು ಪ್ರಕಟವಾಗಿದೆ ಜರ್ಮನಿಯ ಎಮ್ಡನ್ ನಿಲ್ದಾಣದ ಮೇಲೆ ಅಮೇರಿಕನ್ ವಿಮಾನಗಳು ಧಾಳಿ ನಡಿಸಿ 138ನಾಜೀ ವಿಮಾನಗಳನ್ನು ಧ್ವಂಸಮಾಡಿದವು.

ಹಿಂದೂ ಮಹಾಸಭಾ

ಅಖಿಲ ಭಾರತ ಹಿಂದೂ ಮ.ಹಾ.ಸಭೆಯ ಮುಂಬರುವ ರಜತೋತ್ಸವಾಧಿವೇಶನಕ್ಕೆ ಶ್ರೀ ಸಾವರ್ಕರರೇ ಮತ್ತೊಮ್ಮೆ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಸಾವರ್ಕರರೀಗ ಅನಾರೋಗ್ಯದಲ್ಲಿದ್ದು ಡಾಕ್ಟರರು ವಿಶ್ರಾಂತಿ ಪಡೆಯುವ ಸಲಹೆಯಿತ್ತಿದ್ದಾರೆ.

ರಶ್ಯದಲ್ಲಿ.

1943ರ ಅತಿ ದೊಡ್ಡ ನೆಲ ಯುದ್ಧವು ರಶ್ಯದ ಕೀವ್ ವಿಭಾಗದಲ್ಲಿ ನಡೆಯುವ ಸಂಭವ ಕಾಣುತ್ತದೆ. ನಾಜಿಗಳ ಪ್ರಬಲ ಟೇಂಕು ಧಾಳಿಯನ್ನು ಕಳೆದ 30 ದಿನಗಳಿಂದ ದೃಢವಾಗಿ ಪ್ರತಿಭಟಿಸುತ್ತಾ ಕೆಂಪು ಸೇನೆ ನಿಂತಿದೆ. ಕೀವ್ ಸ್ವಾಧೀನತೆಗಾಗಿ ಜರ್ಮನರು ಸ್ಟಾಲಿನ್‌ಗ್ರಾಡ್ ಹೋರಾಟದಂತಹ ಹೋರಾಟವನ್ನೂ, ರಶ್ಯನರು ಅಲ್ಲಿಯ ಪ್ರತಿಯ ಪ್ರತಿಭಟನೆಯಂತಹ ವಿರೋಧವನ್ನೂ ಮುಂದೊಡ್ಡುತ್ತಿದ್ದಾರೆ.

ಇಟೆಲಿಯಲ್ಲಿ.

ಹವೆಯು ಪ್ರತಿಕೂಲವಿದ್ದರೂ ತಮ್ಮ ಸೇನೆಗಳು ಕರಾವಳಿ ಮಾರ್ಗವಾಗಿ ಮುಂದೊತ್ತುತ್ತಿವೆಯೆಂದು ಮಿತ್ರರ ಪ್ರಕಟಣೆಯಿದೆ ಮಿತ್ರರು ಹೊಸ ಧಾಳಿಯನ್ನಾರಂಭಿಸಿದ್ದಾರೆಂದು ಜರ್ಮನರೊಪ್ಪಿಕೊಂಡಿದ್ದಾರೆ. ರಶ್ಯನ್ ಸೇನಾನಿಗಳು ಇಟೆಲಿ ರಣರಂಗಕ್ಕೆ ಭೇಟಿ ಕೊಟ್ಟದ್ದು, ಇದು ದ್ವಿತೀಯರಂಗದ ಪೂರ್ವ ತಯಾರಿಯ ನಿರೀಕ್ಷಣೆಗಾಗಿ ಎಂಬ ಊಹೆಯೆದ್ದಿದೆ

ಮಂಗಳೂರು-ಗವರ್ನಮೆಂಟ್ ಹಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ, ವರ್ಷ ವರ್ಧಂತ್ಯುತ್ಸವವು ಇದೇ ತಾ. 18ಕ್ಕೆ ಖಾನ್ ಸಾಹೇಬ್ ಯಚ್. ಎಸ್. ಹುಸೇನ್ ಸಾಹೇಬ್ ಬಹದ್ದೂರ್ ಬಿ. ಎ. ಬಿ. ಎಲ್., ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

An opportunity please!

NAVAYUGA

is glad to announce

A BUMPER SPECIAL

ON THE OCCASION OF

PARYAYAM

the popular South Indian festival.

Here is an opportunity to advertise!

Rates of Advertisement:

[1 full page Rs 35 - ½ page Rs. 10/-
¼ page Rs. 20/- ⅛ page Rs. 5 -]

Front cover page Rs. 200/ (booked)

Back cover page Rs 150/ Inside cover pages Rs. 100 - each

Date of publication 13—1—1944

ತಾ. 13—1—1944ಕ್ಕೆ ಹೊರಡುವ

ನವಯುಗದ

ಪರ್ಯಾಯ ವಿಶೇಷ ಸಂಚಿಕೆಯನ್ನು

ನಿರೀಕ್ಷಿಸಿರಿ.

The Victory Club

Opened on 2—12—1943

BY

Sri. D Noronha, District Munsiff, Udipi.

Both Vegetarian & Non-vegetarian dishes

Old Post office Building,

VICTORY ROAD, UDIPI.

(*Furnishing:* **Homes & Estats Ltd.**)

ಅತ್ಯಾಧುನಿಕ ನಾಗರಿಕ ವ್ಯವಸ್ಥೆಯಿಂದೊಡಗೂಡಿದ ಭೋಜನ ಮತ್ತು ವಿಶ್ರಾಂತಿ ಗೃಹ

ವಿಕ್ಟರಿ ಕ್ಲಬ್

ತಾ. 2—12—1943ರಲ್ಲಿ ಉಡುಪಿ ಡಿ ಮುನ್ಸೀಫ್ ಶ್ರೀ. ಡಿ. ನೊರೋನ್ಹಾರವರಿಂದ ತೆರೆಯಲ್ಪಟ್ಟಿತು.

ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ರೋಡ್, **ಉಡುಪಿ.**

1944ನೇ ಇಸವಿಯ

ನವಭಾರತ ಪಾಕೆಟ್ ಡೈರಿ.

ಬಿಕರಿಗೆ ತಯಾರಾಗಿದೆ.

ದರಗಳು.

ಸಣ್ಣ ಸೈಜು (ಸಾದಾ) 1—0—0 (ಕೆಲಿಕೊ) 1—4—0
,, (ಮುಚ್ಚಳದ್ದು) 1—8—0 ದೊಡ್ಡ ಸೈಜು (ಕೆಲಿಕೊ) 2—0—0
ದೊಡ್ಡ ಸೈಜು (ಮುಚ್ಚಳದ್ದು) 2—6—0

ಕಳೆದ ವರ್ಷದಂತೆ ಈ ಸಂಪ್ರದಾಯ ನಮ್ಮ ಡೈರಿಗಳಿಗೆ ನುಣುಪು ಬಿಳುಪಾದ ಹೊಳಪಿನ ಕಾಗದವನ್ನು ಉಪಯೋಗಿಸಲಾಗಿದೆ. ಒಂದೊಂದು ಪ್ರತಿಯನ್ನು ಅಪೇಕ್ಷಿಸುವವರು ಸಣ್ಣ ಸೈಜಿನ ದ್ದಕ್ಕೆ 0-3-0; ದೊಡ್ಡ ಸೈಜಿನದ್ದಕ್ಕೆ 0-4-0; ಪ್ರತ್ಯೇಕ ಅಂಚೆವೆಚ್ಚ ಕಳಿಸಬೇಕು. ವ್ಯಾಪಾರಿಗಳಿಗೆ ಕಮಿಶನ್ ಇದೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಂಗಳೂರು ಕೆನರಾ ಭಾಷಾಪಾಠಶಾಲೆಯಲ್ಲಿ ನಮ್ಮ ಡೈರಿಗಳು ದೊರೆಯುತ್ತವೆ.

ಔಷಧಗಳು

ನಮ್ಮಲ್ಲಿ **ಕಟಪಾಡಿಯ ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡಿನ** ಜನಪ್ರಿಯವಾದ ಔಷಧಗಳು, ಮಂಗ**ಳೂರಿನ ಗಣಪಯ್ಯ ಎಂಡ್ ಸನ್ಸ**ರವರ ಪ್ರಸಿದ್ಧ ಔಷಧಗಳೂ, **ಕುಂಜಾಲಿನ ಸ್ವದೇಶಿ ಔಷಧ ಭಂಡಾರದ** ಜನಾದರಣೀಯ ಔಷಧಗಳೂ ಸಿಗುತ್ತವೆ.

ನವಭಾರತ ಪುಸ್ತಕ ಭಂಡಾರ,

ಸಂತೆಕಟ್ಟೆ : : ಉಡುಪಿ.

ಪ್ರಕಟಣೆ.

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisserri.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ-

ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸಿವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುಞ್ಞಿರಾಮನ್,

ಮೆನೇಜರ್,

ಇನ್ನೂ

'ನವಯುಗ'ದ ಚಂದಾ ಹಣ ಬಾಕಿ ಇರುವವರು ಅದನ್ನು ಕೂಡಲೇ ಕಳುಹಿಸಿಕೊಡುವಂತೆ ಅಪೇಕ್ಷಿಸುತ್ತೇವೆ.

ಮೆನೇಜರ್.

ದ. ಕ. ರೈತರಿಗಾದ ಮಹದನ್ಯಾಯ!

(೨ನೇ ಪುಟದಿಂದ ಮುಂದುವರಿದುದು.)

ಇಂಥವರ ಅಕ್ಕಿ ರಿಕ್ವಿಶಿಸನ್ ಕಾಯಂವಾಗಿ ಡಲ್ಪಟ್ಟರೆ, ಅವರು ವರುಷದಲ್ಲಿ 8 ತಿಂಗಳು ಉಣ್ಣುವ ಅಕ್ಕಿಯನ್ನೇ ಅಪಹರಿಸಿದಂತಾಗುವದು. ಈಗ ಸರಕಾರಕ್ಕೆ ಹೋಗಿರುವ ಆಕ್ಷೇಪಣಾ ಅರ್ಜಿಗಳ ವಿಚಾರಣೆಯಿಂದಾಗಿ ಈ ವರ್ಗದ 24704 ಕುಟುಂಬಗಳಿಗೂ ಸಂಪೂರ್ಣ ನ್ಯಾಯದಾನವಾಗಲಿದೆ ಎಂದು ಭಾವಿಸಿಕೊಳ್ಳಬೇಕೆ? ಯಾವ ಆಧಾರದಿಂದ? ಆಗಲಿ-ಯಾವ ದೇವನ ಅನುಗ್ರಹದಿಂದಲಾದರೂ ಇವರು ಈ ವರ್ಗದ ಮೇಲೆ ಬಿದ್ದ ರೆಕ್ವಿಶಿಶನ್ ಉಪಸಂಹಾರವಾಗಲಿದೆ ಎಂದಿಟ್ಟುಕೊಂಡರೆ ರೂ. 30ಕ್ಕೆ ಮಿಕ್ಕಿ ತೀರ್ವೆ ತೆರುವ ವಿಭಕ್ತರೂ ಹಾಗೂ ರೂ. 100ಕ್ಕೆ ಮಿಕ್ಕಿ ತೆರುವ ಅವಿಭಕ್ತ ಕುಟುಂಬಗಳು 3271. ಈ ವರ್ಗದ ಕಾಂಡವು ರೂ. 30ರ ತೀರ್ವೆಯಿಂದಾರಂಭವಾದರೆ ಶಿಖರದಲ್ಲಿ ರೂ. 1000ಕ್ಕೆ ಮಿಕ್ಕಿ ತೀರ್ವೆ ತೆರುವ 24 ವರ್ಗದಾರರು, 1000ದಂತೆ ತೀರ್ವೆ ತೆರುವ 61 ವರ್ಗದಾರರಿದ್ದಾರೆ. ನಿಜವಾಗಿಯೂ ಮಾರಾಟದ ಅಕ್ಕಿಯ 'ಕೂಟಾಯಿ' ಇರುವವರು ಈ ಸಾವಿರ ಇಲ್ಲವೇ ಐನೂರರಂತೆ ತೀರ್ವೆ ತೆರುವವರೇ, ರೂ. 30ಕ್ಕೂ ಕಡಿಮೆ ತೀರ್ವೆತೆರುವವರು ವರುಷದ 4 ತಿಂಗಳಾದರೂ ಕೊಂಡು ಕೊಂಡೇ ಉಣ್ಣುವವರಾದರೆ ರೂ. 30ರಿಂದ 100ರ ತನಕ ತೀರ್ವೆ ತೆರುವ ವಿಭಕ್ತ ಮತ್ತು ರೂ. 100ರಿಂದ 250ರ ವರೆಗೆ ತೀರ್ವೆ ತೆರುವ ಅವಿಭಕ್ತ ಕುಟುಂಬಗಳನ್ನು ವರುಷದ ಹನ್ನೆರಡು ತಿಂಗಳಲ್ಲೂ ಉಣಬಲ್ಲವರೆಂದು ಇಟ್ಟುಕೊಳ್ಳಬಹುದು. ಈ ವರ್ಗವಾದರೂ ಅಕ್ಕಿ ಮಾರಿ ಜೀನಸು, ಉಡುಗೆ ತೊಡುಗೆ ಮೊದಲಾದ ಮೇಲ್ವೆಚ್ಚಿನ ವೆಚ್ಚಗಳನ್ನು ಪೂರೈಸಿಕೊಳ್ಳಬಲ್ಲರು ಹೊರತು ಹಣ ಶೇಖರಿಸಿಡಲಾರರು. ಅಥವಾ ಇಂಥವರಲ್ಲಿ ಮಾರುವ ಅಂಶವೂ ಸ್ವಲ್ಪ ಇರಬಹುದೆಂದೇ ಭಾವಿಸೋಣ. ಸದ್ಯದ ರೆಕ್ವಿಶಿಶನ್ ಆ ಅಂಶವೆಷ್ಟೆಂದು ನೋಡುತ್ತದೇನು? ಒಟ್ಟು ಹುಟ್ಟುವಳಿಯ ಸೇಕಡಾ 50ರಷ್ಟು ಬರಲಿ, ಎಂದೇ ಆಜ್ಞಾಪಿಸುತ್ತದೆ. ಅರ್ಥಾತ್ ಅವರ ಊಟ ಮತ್ತು ಖರ್ಚುವೆಚ್ಚದ ಅಂಶವನ್ನೂ ಅಪಹರಿಸುತ್ತದೆ. ಈ ವರ್ಗದವರ ಸಂಖ್ಯೆ ಸುಮಾರು 2417. ಇವರನ್ನು ಕೊಂಡುಕೊಳ್ಳಬೇಕಾದಗ-ಮಾರಾಟಕ್ಕಿಲ್ಲದ-ಮಧ್ಯಮ ವರ್ಗವೆಂದು ವಿಂಡಿಸಿಟ್ಟರೆ, ರೂ. 100 ರಿಂದಾರಂಭಿಸಿ ಸಾವಿರಕ್ಕೂ ಮಿಕ್ಕಿ ತೀರ್ವೆ ತೆರುವ ವಿಭಕ್ತ ಹಾಗೂ ರೂ. 250 ರಿಂದಾರಂಭಿಸಿ, 1000ಕ್ಕೂ ಮಿಕ್ಕಿ ತೀರ್ವೆ ತೆರುವ ಅವಿಭಕ್ತ 854 ವರ್ಗದಾರರುಳಿಯುತ್ತಾರೆ. ಉಡುಪಿ ತಾಲೂಕಿನ ನಿಜವಾದ ಮಾರಾಟದ ಅಕ್ಕಿಯಿರುವದು ಈ 854 ದೊಡ್ಡ ವರ್ಗದಾರರ ಕೈಯಲ್ಲೇ. ಈ ತುಲನೆಯು ಇಡೀ ಜಿಲ್ಲೆಗನ್ವಯಿಸುತ್ತದೆ. ಆದರೆ ಈ ಮಾರಾಟದ ಅಕ್ಕಿಯಲ್ಲೂ ರೆಕ್ವಿಶಿಶನ್ ಆದುದು ಎಲ್ಲರಂತೆ ಸೇಕಡಾ 50ರಷ್ಟೆ! ಉಳಿದ ಅಕ್ಕಿಯನ್ನು ಅವರು ಮನಸ್ವೇಚ್ಛೆ (ಇದಕ್ಕೆ ಸಂದರ್ಭದೊರೆಯಲಾರದೆನ್ನುವಿರಾ?) ವಿಕ್ರಯಿಸುವದಕ್ಕೇನಡ್ಡಿ?

ಈ ಚಿತ್ರವನ್ನು ಇನ್ನಷ್ಟು ಸ್ಪಷ್ಟವಾಗಿ ಗುರುತಿಸೋಣ. ರೂ. 4ಲಕ್ಷ ಮತ್ತು ಚಿಲ್ಲರೆ ತೀರ್ವೆಯಿರುವ ಉಡುಪಿ ತಾಲೂಕಿನ ಹುಟ್ಟುವಳಿ ಸುಮಾರು 8 ಲಕ್ಷ ಚಿಲ್ಲರೆ ಎಂದು ಅಂದಾಜು ಕಟ್ಟಲಾಗಿದೆ. ಒಂದು ರೂಪಾಯಿ ತೀರ್ವೆಗೆರಡು ಮುಡಿ ಅಕ್ಕಿಯುತ್ಪನ್ನವಿದೆಯೆಂದಾಯಿತು. 1000 ರೂ. ತೀರ್ವೆ ತೆರುವ ವರ್ಗದಾರನಿಗೆ 2000 ಮುಡಿ ಅಕ್ಕಿ ಹುಟ್ಟುವಳಿಯಿರಬೇಕು ತಾನೆ? ಅವನ ಕುಟುಂಬಿಕರ ಸಂಖ್ಯೆಯು ಈ ಪರಿಮಾಣಕ್ಕನುಸಾರವಾಗಿ ದೊಡ್ಡದಿರುವದೇನು? ಇಲ್ಲ ಅವನ ಮನೇ ಖರ್ಚು, ಅವನು ನಡಿಸಲಿರುವ ಸಮಾರಾಧನೆ,ಉಂಬಳಿ, ಇತ್ಯಾದಿ ಶ್ರೀಮಂತ ಸಹಜ ವಿಶೇಷ ಖರ್ಚುಗಳಿಗೆಂದು ವರ್ಷಕ್ಕೆ 500 ಮುಡಿ ಅಕ್ಕಿಯನ್ನು ತೆಗೆದಿಡೋಣ. ಉಳಿದ 1500 ಮುಡಿ ಅಕ್ಕಿ ಮಾರಾಟದ ಅಕ್ಕಿಯಷ್ಟೆ? ಇದರಲ್ಲಿ ರೆಕ್ವಿಶಿಶನ್ ಆದುದೆಷ್ಟು? ಒಟ್ಟು ಹುಟ್ಟುವಳಿಯ 50% ಎಂದಿಟ್ಟುಕೊಂಡರೆ 1000 ಮುಡಿ ಅಕ್ಕಿ ಮಾತ್ರ. ಬಾಕಿ 500 ಮುಡಿ ಅಕ್ಕಿಯನ್ನು ಕೊಂಡುಕೊಳ್ಳುವವರಿದ್ದರೆ, ಅವನು ರೂ. 20ರಂತೆಯೂ ಮಾರಲಾರನೆ? ಅದೇ ಸಮಯದಲ್ಲಿ ರೂ. 50 ತೀರ್ವೆ ತೆರುವ ಸಣ್ಣ ವರ್ಗದಾರನ ಸ್ಥಿತಿಗತಿಯನ್ನೂ ವಿಚಾರಿಸಿ ಬಿಡಿ. ಅವನ ಒಟ್ಟು ಹುಟ್ಟುವಳಿ ಅಕ್ಕಿ ನೂರು ಮುಡಿ. ದಾನ ಧರ್ಮ, ವಿಶೇಷ ಖರ್ಚುವೆಚ್ಚಗಳನ್ನು ಬಿಟ್ಟರೆ ಕುಟುಂಬದ ಊಟದ ವೆಚ್ಚ, 1000 ರೂಪಾಯಿ ತೀರ್ವೆ ತೆರುವವನಷ್ಟೇ ಇವನಿಗೂ ಇದೆ. ಅವ ಸರಿಯಾಗಿ ಉಣ್ಣುವದಿಲ್ಲ, ಮನೆಯವರನ್ನು ಅರೆ ಹೊಟ್ಟೆ ಉಣ್ಣಿಸಿ, ವರುಷಕ್ಕೆ ಹತ್ತು ಮುಡಿ ಅಕ್ಕಿಯನ್ನು ಮಾರುತ್ತಾನೆ ಎಂದಿಟ್ಟುಕೊಳ್ಳಿ. ಆದರೆ ರೆಕ್ವಿಜಿಶನು ಇವನಿಂದಲೂ ಪಡೆಯುವದು ಹುಟ್ಟುವಳಿಯ ಅರೆವಾಸಿ; ಅಂದರೆ 50 ಮುಡಿ ಅರ್ಥಾತ್ ಅವನ ಕೆಲವು ತಿಂಗಳ ಊಟದ ಅಕ್ಕಿಯನ್ನೇ! ಅನ್ಯಾಯವೆನ್ನುವದು ಇದನ್ನೇ!

ನ್ಯಾಯವಾದ ಮಾರ್ಗ

ಮೇಲಿನ ಏರುತಗ್ಗುಗಳ ಸ್ಪಷ್ಟ ತಿಳುವಳಿಕೆಯು ಸರಕಾರಕ್ಕಿರಲಿಲ್ಲವೆನ್ನೋಣವೆ? ಹಾಗೆಂದೇ ಭಾವಿಸೋಣ. ಆದರೆ ಅದು ಊಹೆಗೂ ನಿಲುಕದಷ್ಟು ಅವ್ಯಕ್ತ ವಿಷಯವೆ? ಒಂದೋ ಇಡೀ ಜಿಲ್ಲೆಯಲ್ಲುತ್ಪನ್ನವಾದ ಧಾನ್ಯವನ್ನು ಪ್ರಥಮತಃ ಕಾಳನ್ನೂ ಬಿಡದೆ ಸ್ವಾಧೀನ ಪಡಿಸಿಕೊಳ್ಳಬೇಕಿತ್ತು. ಆ ಮೇಲೆ ಮಂಗಳೂರು, ಉಡುಪಿ, ಕಾಸರಗೋಡು ಎಂಬ ಪಕ್ಷಪಾತವಿಡದೆ ಜಿಲ್ಲೆಯ ತೆಂಕು ಮೂಲೆಯಿಂದ ಬಡಗು ತುದಿಯವರೆಗೆ, ಪಶ್ಚಿಮ ಘಟ್ಟದಿಂದ ಅರಬೀಸಮುದ್ರದ ವರೆಗೆ ಸರ್ವತ್ರ ರೇಶನಿಂಗ್ ಜ್ಯಾರಿಗೆ ತರಬೇಕಿತ್ತು. ಬೇಸಾಯದ ಖರ್ಚುವೆಚ್ಚಗಳನ್ನೂ ರೇಶನ್ ಮೂಲಕವೇ ಕೊಡಬಾರದೆಂದಿಲ್ಲ. ಆದಾಗಲಿಲ್ಲ. ಎಲ್ಲವನ್ನೂ ಸಂಗ್ರಹಿಸಿ, ಎಲ್ಲರಿಗೂ ವಿತರಣೆ ಮಾಡುವ ಆವಶ್ಯಕತೆಯಿಲ್ಲ; ಇದ್ದಲ್ಲಿಂದ ತೆಗೆದು, ಇಲ್ಲದೆಡೆಗೆ ಚೆಲ್ಲಿದರಾಯಿತು, ಎಂದು ಸರಕಾರವು ಭಾವಿಸಿತೇನೋ. ಹೀಗೇನೇ ಹೊರತು ಕಡಿಮೆ ಬಿದ್ದಲ್ಲಿಂದಲೂ ತೆಗೆದು ಇಲ್ಲದಲ್ಲಿಗೆ ಹಾಕುವ ಆಲೋಚನೆಯಿಲ್ಲವಷ್ಟೆ? ಹಾಗಾದರೆ, ತೀರ್ವೆಯ ಪಟ್ಟಿಯನ್ನು ಮುಂದಿಟ್ಟುಕೊಂಡು, ಅದರಲ್ಲಿ ಸಾವಿರ ಗಟ್ಲೆ ಸಂಖ್ಯೆಗಳಿಂದಾರಂಭಿಸಿ, 50ಕ್ಕೆ ಕಡಿಮೆಯ ವರೆಗೂ ಒಂದೇ ಗೆರೆಯನ್ನೆಳೆದುದಾಗಲಿಲ್ಲ. 'ಉತ್ಪತ್ತಿಯ ಸೇಕಡಾ 50ರಷ್ಟು ಎಂದು ನಿರ್ಧರಿಸುವ ಬದಲಿಗೆ 'ಮಾರಾಟದ ಎಲ್ಲಾ ಅಕ್ಕಿ' ಎಂದು ವಿಧಿಸಬೇಕಿತ್ತು. ಹೀಗೆಮಾಡಲು ಬಿಡದೆ ವಿಶೇಷ ತೊಂದರೆಯೇನಾದರೂ ಸರಕಾರಕ್ಕಿತ್ತೆ? ಇಂದಿನ ರೆಕ್ವಿಶಿಶನಲ್ಲಾದರೂ ತೀರ್ವೆಯ ಸಂಖ್ಯೆ, ಗೇಣಿ ಸಂಖ್ಯೆ, ಜನಸಂಖ್ಯೆಗಳನ್ನು ಅಧಿಕಾರಿಗಳು ಗಣಿಸಿದ್ದಾರೆ. ಇದೇ ಗಣನೆಯ ಆಧಾರದಿಂದ 'ಮಾರಾಟದ ಅಕ್ಕಿಯೆಷ್ಟು? ಎಲ್ಲೆಲ್ಲಿದೆ?' ಎಂಬುದನ್ನೂ ಕಂಡು ಹಿಡಿಯಲು ಸಾಧ್ಯವಿತ್ತು. ಮಾತ್ರವಲ್ಲ, ಮಾರಾಟದ ಅಕ್ಕಿಯಿರುವವರು ಅಲ್ಪ ಸಂಖ್ಯಾಕ ದೊಡ್ಡ ವರ್ಗದಾರರು ಮಾತ್ರವಾದ್ದರಿಂದ ರೆವಿನ್ಯೂ ಅಧಿಕಾರಿಗಳ ಕೆಲಸವು ಈಗಿನದಕ್ಕಿಂತ ಅರೆವಾಸಿ ಕಡಿಮೆಯಾಗುತ್ತಿತ್ತು. ಇಡೀ ಜಿಲ್ಲೆಯ ಸಾಗುವಳಿ ಕ್ಷೇತ್ರಗಳಿಂದ, ಪೇಟೆ ಪಟ್ಟಣಗಳವರಿಗಾಗಿ ಎತ್ತಬೇಕೆಂದು ಸರಕಾರವು ನಿರ್ಧರಿಸಿದ 12ಲಕ್ಷ ಮುಡಿ ಅಕ್ಕಿಯನ್ನು (ಅಧಿಕಾರಿಗಳು ಅಧಿಕಾಂದಾಜು ಕಟ್ಟಿ ಈ ತಪ್ಪು ಲೆಕ್ಕ ಹಿಡಿದಿದ್ದಾರೆ ಎಂಬುದನ್ನು ಒತ್ತಟ್ಟಿಗಿಡೋಣ) ಈ ದೊಡ್ಡ ವರ್ಗದಾರ ಗುಂಪಿನಿಂದಲೇ ಸುಲಭವಾಗಿ ಸಂಗ್ರಹಿಸಲು ಸಾಧ್ಯವಿತ್ತು. ಆದರ ಬದಲಿಗೆ 50ಕ್ಕೆ ಕಡಿಮೆ ತೀರ್ವೆಯವರ ಹುಟ್ಟುವಳಿಗೂ ಸೇಕಡಾ 50ರಷ್ಟರ ರೆಕ್ವಿಶಿಶನ್ ತಾಗಿಸಿ ಒಂದೆಡೆಯಲ್ಲಿ ಊಟದ ಅಕ್ಕಿಯ ಅಪಹಾರ,-ಇನ್ನೊಂದೆಡೆ ಸಾವಿರಾರು ರೂ. ತೀರ್ವೆಯವರ ಹುಟ್ಟುವಳಿಯಲ್ಲಿಯೂ ಅರ್ಧಾಂಶವನ್ನಂಗೀಕರಿಸಿ, ಉಳಿದಾಂಶಗಳಲ್ಲಿ ಅವರ ಸ್ವೇಚ್ಛಾಚಾರ! ಇಂತಹ ಅಸ್ತವ್ಯಸ್ತ ರೆಕ್ವಿಶಿಶನ್ ಯೋಜನೆಯ ಅಕ್ಷಮ್ಯಾಪರಾಧವನ್ನೂ ಕ್ಷಮಿಸಬೇಕೇನು?

ಸಮಾಧಾನವಾರಿಗೆ?

ಆದರೂ ದಕ್ಷಿಣ ಕನ್ನಡದ ವರ್ಗದಾರ ಮನೋವೃತ್ತಿಯಲ್ಲಿ ಗಣನೀಯ ಮಾರ್ಪಾಟಾದುದು ಕಂಡುಬರುತ್ತಿದೆ. ಆದಿಯಲ್ಲಿ ರೆಕ್ವಿಶಿಶನ್ ವಿರೋಧವೆಬ್ಬಿಸಿದ ಆಢ್ಯ ಮಹನೀಯರು ಈಗ 'ನಮ್ಮ ಬೇಡಿಕೆಯನ್ನು ಸರಕಾರವು ಮನ್ನಿಸಿದೆ; ಅದಕ್ಕೆ ಪ್ರತಿಯಾಗಿ ಸರಕಾರದ ಅಕ್ಕೀ ಬೇಡಿಕೆಯನ್ನು ನಾವು ಪೂರೈಸಿಕೊಡೋಣ' ಎಂದು ಅಕ್ಕೀ ಸಂಗ್ರಹಕ್ಕಿಳಿದಂತಿದೆ. ಇದಕ್ಕೆ ಕಾರಣವಿಷ್ಟೆ: ದಕ್ಷಿಣ ಕನ್ನಡದಲ್ಲಿ ಬೇಸಾಯ ಮಾಡಿ ಉಣ್ಣುವ-ಒಕ್ಕಲುಗಳು ಹಾಗೂ ಸಣ್ಣ ವರ್ಗದಾರರದೇ ಆದ 'ರೈತ ಸಂಘ'ವೊಂದಿಲ್ಲ. ಆದ್ದರಿಂದ ಸಾಮಾನ್ಯ ರೈತರ ಪರವಾಗಿ, ಸಂಘಟನಾ ರೂಪದಿಂದ ಈ ಮೊದಲಾದರೂ ಯಾವ ವಿರೋಧವೂ ಮುಂದೆ ಬಂದುದಿಲ್ಲ; ಪ್ರತಿಭಟನೆಯ ಪೂರ್ಣ ಮುಂದಾಳುತ್ವ ವಹಿಸಿ, ಕಾರ್ಯಕ್ರಮ ಹಾಕಿ ಕೊಟ್ಟವರೆಂದರೆ ಮಾರಾಟದ ಅಕ್ಕಿಯಿರುವ ದೊಡ್ಡ ಜಮೀನ್ದಾರರು, ಅಥವಾ ಅವರ ಪ್ರತಿನಿಧಿಗಳು. ಈ ವರ್ಗವೀಗ ಸಕಾರಣವಾಗಿ ಸಮಾಧಾನಗೊಂಡು, ಶಾಂತವಾಗಿದೆ; ಇಡೀ ಜಿಲ್ಲೆಯೇ ಶಾಂತವಾದಂತೆ ಕಾಣುತ್ತಿದೆ. ದೊಡ್ಡ ಜಮೀನ್ದಾರರು ಮುಂದೊಡ್ಡಿದ್ದ ಮುಖ್ಯ ಆಕ್ಷೇಪಗಳು ಇವು: 1. ತಮ್ಮಿಂದ ಧಾರಣೆ ನಿಯಂತ್ರಣದಂತೆ ಅಕ್ಕಿ ಪಡಕೊಂಡು ಸಾಹುಕಾರರು ಲಾಭ ಹೊಡೆಯುವಂತಾಗಬಾರದು. 2. ಗೇಣಿಯನ್ನು ಒಕ್ಕಲುಗಳು ತಿನ್ನುವಂತಾಗಬಾರದು. ಮತ್ತು ಕ್ರಯ ತೆರಲು ವಿಳಂಬವಾಗಬಾರದು. ಸರಕಾರವು ಈ ಆಕ್ಷೇಪಗಳನ್ನು ಮಾನ್ಯ ಮಾಡಿದ ಬಗೆ:- 1. ರೆಕ್ವಿಜಿಶನ್ ಅಕ್ಕಿಯನ್ನು ಪಡಕೊಳ್ಳುವ ಮತ್ತು ವಿತರಣಾಧಿಕಾರಗಳು ಕೋಪರೇಟಿವ್ ಸ್ಟೋರ್ಸುಗಳಿಗೆ ಮಾತ್ರ. 2. ಒಕ್ಕಲಿನವನ ಸಮ್ಮತಿಯಿಂದ ಅವನೊಪ್ಪಿಸಿದ ರೆಕ್ವಿಜಿಶನ್ ಅಕ್ಕಿಯ ಹಣವನ್ನು ಕೂಡಲೇ ವರ್ಗದಾರನು ಪಡೆಯಬಹುದು ಅಂದಮೇಲೆ ದೊಡ್ಡ ವರ್ಗದಾರರು ತೃಪ್ತಿಹೊಂದುವನು ಬೇಡವೆ? ಅವರಿಗಾದ ನಷ್ಟವೇನು? ನಾನು ಮೇಲ್ಗಡೆ ವಿವರಿಸಿರುವ ರೆಕ್ವಿಶಿಶನಿನ ಪ್ರಥಮ ಪ್ರಮುಖ್ಯಾಪರಾಧದ ಪ್ರಸ್ತಾಪವನ್ನೇ ಎರೆಗೆತ್ತಿದವರಿಲ್ಲ. ದೊಡ್ಡ ವರ್ಗದಾರನ ಮಾರಾಟದ ಅಕ್ಕಿಯೊಡನೆ ತುಂಡುವರ್ಗದಾರನ ಊಟದ ಅಕ್ಕಿಯೂ ಹೋಗುತ್ತಿದೆ ಎಂದು ವಿಂಗಡಿಸಿ ತೋರಿಸಿದವರಿಲ್ಲ. ಇದೀಗ ಸಾಮಾನ್ಯ ರೈತನ ದೀನ, ಕನಿಕರಾರ್ಹ ದುಸ್ಥಿತಿ! ಈ ಕಾಲದಲ್ಲಿ ರೈತರಿಗೆ 'ಬಾಳುವೆ ಬೇಕಾದರೆ ಅವರು ಸಂಘಟಿತರಾಗಬೇಕು; ಅವರದೇ ಒಂದು ಸಂಘ ಬೇಕು'-ಎಂಬುದು ಕೃತಕಾವೇಶದ ಬೊಬ್ಬೆಯಲ್ಲ, ಕರುಳಿನ ಕೂಗು ಎಂಬುದು ಈಗಲಾದರೂ ರೈತರಿಗೆ ಮಂದಟ್ಟಾಗದೆ?

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—0—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮುನೆಯ ಔಷಧಿಗಳು ದೊರೆಯುತ್ತವೆ.

ಕ್ಯಾಟೆ ಸಂಗ್ತಿ ಬರದಲ್ಲಿ ತಕ್ಕವಾದ ಔಷಧಿ ಚುನಾಯಿಸಿ ರವಾನಿಸಬಹುದು.

ಕೆಟಲೋಗಿಗೆ ಬರಿ.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಉಡುಪಿ ಏಜಂಟರು:- **ನವಭಾರತ ಬುಕ್ ಡಿಪೋ.**

ದಕ್ಷಿಣ ಕನ್ನಡ-

ಮಂಗಳೂರು.

ಎ. ಆರ್. ಪಿ. ಮುಕ್ತಾಯ— ಎ ಆರ್. ಪಿ ದಳವು ಅವಶ್ಯವಿಲ್ಲೆಂದು ಕಂಡು ಬಂದು ಇದೇ ಜನವರಿ ಒಂದರಿಂದ ಅದನ್ನು ಮುಕ್ತಾಯಗೊಳಿಸುವರೆಂದು ತಿಳಿದು ಬರುತ್ತದೆ. (ಮಂಗಳೂರು ಎ. ಆರ್. ಪಿ. ದಳದಲ್ಲಿ ಸುಮಾರು ೩೦೦ ಮಂದಿ ಕೆಲಸದಲ್ಲಿರುವರು) ಫಯರ್ ಬ್ರಿಗ್ರೇಡ್ ದಳವು ಇರುವುದಂತೆ.

ಉಪವಾಸ-ಉಪವಾಸದಿಂದ ಸೈ ಹುಣ್ಣಿನಿಂದ ಕೊರಗುತ್ತಿದ್ದ ಅನ್ನಾನ್ನಗತಿಕನಾದ ಒಬ್ಬನು ಈಚೆಗೆ ಮಿಶನ್ ಹ್ಯಾಸ್ಪಿಟಲ್ ರಸ್ತೆಯ ಒಂದು ಅಂಗಡಿಯ ಕೆಳಗೆ ಚರಂಡಿಯ ಮೇಲೆ ಹಾಸಿದ ಕಲ್ಲುಗಳ ಮೇಲೆ ಬಿದ್ದುಕೊಂಡಿದ್ದ. ಉಸಿರಾಡುತ್ತಿದ್ದನು ಮಾತ್ರ ಇರುತ್ತಿತ್ತು. ಈ ಸಂಗತಿ ತಿಳಿಸಿದ ಮೇಲೆ ಇಲ್ಲಿನ ಹೆಲ್ತ್ ಆಫೀಸರರು ಕರಕೊಂಡು ಹೋದರೆಂದೂ ಆತನು ಕಾಸರಗೋಡು ಪ್ರಾಂತದ ಗೌ|| ಸಾ|| ಬ್ರಾಹ್ಮಣ ಸಮೂಹಕ್ಕೆ ಸೇರಿದವನೆಂದೂ ಹೇಳಲಾಗಿದೆ.

ಅಹಲ್ಯಾ ಪ್ರೇಮ — ಗೌಡ ಸಾರಸ್ವತ ಸಮಾಜದ ಚಿಕ್ಕ ವಯಸ್ಸಿನ ಸುಂದರಿ ಎಂಬಾಕೆಯು ಆಶ್ರಯವಿಲ್ಲದವಳಾಗಿ ಪರಮತಾವಲಂಬಿಯಾಗುವ ಸಂದರ್ಭದಲ್ಲಿ ಕೊಡಿಯಾಲ ಬೈಲಿನ ಅಹಲ್ಯಾ ಪ್ರೇಮದವರು ಆಶ್ರಯ ಕೊಟ್ಟು ರಕ್ಷಿಸಿರುವರೆಂದು ತಿಳಿದು ಬಂದಿದೆ. ಇದು ಆ ಸಂಸ್ಥೆಯ ಪ್ರಶಂಸೆಯ ಕಾರ್ಯಗಳಲ್ಲಿ ಒಂದಾಗಿದೆ

ಮಂಗಳೂರು ಡಿಪ್ರೆಸ್ಡ್ ಕ್ಲಾಸಸ್ ಮಿಶ್ಶನ್ 28,000 ರೂ.ಗಳಿಗಾಗಿ ಮಹಾಜನರಲ್ಲಿ ಬಿನ್ನಹ

1892ನೇ ಇಸವಿಯಲ್ಲಿ ರಾವ್ ಸಾಹೇಬ್ ಕುದ್ಮುಲ್ ರಂಗರಾಯರಿಂದ ಸ್ಥಾಪನೆಯಾದ 'ಡಿಪ್ರೆಸ್ಡ್ ಕ್ಲಾಸಸ್ ಮಿಶ್ಶನ್' ದಕ್ಷಿಣ ಕನ್ನಡ ಜಿಲ್ಲೆಯ ಹರಿಜನರ ಉದ್ಧಾರಕ್ಕಾಗಿ ಕಳೆದ 46 ವರ್ಷಗಳಿಂದಲೂ ಕೆಲಸ ಮಾಡುತ್ತಲಿದೆ.

1923ನೇ ಇಸವಿಯಿಂದ ಈ ಸಂಸ್ಥೆಯು 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ'ಯ ಆಡಳಿತೆಯಲ್ಲಿದೆ. 300 ಮಕ್ಕಳಿರುವ 5 ಶಾಲೆಗಳೂ 86 ಹುಡುಗರೂ 20 ಹುಡುಗಿಯರೂ ಇರುವ 3 ಬೋರ್ಡಿಂಗ್ ಹೌಸೂ, ಈ ಸಂಸ್ಥೆಯ ಕೈಕೆಳಗೆ ನಡೆಸಲ್ಪಡುತ್ತವೆ. ಮಕ್ಕಳಿಗೆ ನೆಯಿಗೆ, ಮರದ ಕೆಲಸ, ಹೊಲಿಗೆಯ ಕೆಲಸ ಮತ್ತು ತೋಟದ ಕೆಲಸ ಇವುಗಳು ಈ ಶಾಲೆಗಳಲ್ಲಿ ಕಲಿಸಲ್ಪಡುವುವು. ಮಾರ್ಚ್ 1943ರಲ್ಲಿ ಇಬ್ಬರು ಹುಡುಗರೂ ಒಬ್ಬಳು ಹುಡುಗಿಯೂ ಇಂಟರ್‌ಮಿಡಿಯೆಟ್ ಪರೀಕ್ಷೆಗೆ ಕುಳಿತಿರುವರು; ಒಬ್ಬ ಹುಡುಗನು ಬಿ. ಎ., ಪರೀಕ್ಷೆಗೆ ಕುಳಿತಿರುವನು. ಇಂಟರ್‌ಮಿಡಿಯೆಟ್ ಕ್ಲಾಸಿನ ಒಬ್ಬ ಹುಡುಗನು ಮೊದಲನೇ ಕ್ಲಾಸಿನಲ್ಲಿ ತೇರ್ಗಡೆ ಹೊಂದಿದನು; ಉಳಿದವರು ಕೆಲವು ಭಾಗಗಳಲ್ಲಿ ಮಾತ್ರ ತೇರ್ಗಡೆ ಹೊಂದಿರುತ್ತಾರೆ. 6 ಹುಡುಗರೂ 4 ಹುಡುಗಿಯರೂ ಹೈಸ್ಕೂಲು ಕ್ಲಾಸುಗಳಲ್ಲೂ 3 ಹೆಚ್ಚು ಹುಡುಗರು ಕೋಲೇಜ್ ಕ್ಲಾಸಿನಲ್ಲೂ ಕಲಿಯುತ್ತಿರುವರು.

ದಕ್ಷಿಣ ಕನ್ನಡದ ಜಿಲ್ಲೆಯಲ್ಲಿ ಅತೀ ಹಿಂದುಳಿದವರೆಂದು ಕರೆಯಲ್ಪಡುವ ಕೊರಗ ಜಾತಿಯ ಗರ್ಭಿಣಿ ಹೆಂಗಸರಿಗೆ ಸಹಾಯವು ಈಗಲೂ ಕೊಡಲ್ಪಡುತ್ತಿದೆ. ಇನ್ನೂ ಮುಂದೆ ಕೊಡಲ್ಪಡುತ್ತದೆ. ೨೨ ಎಕ್ರೆ ಸ್ಥಳಗಳಲ್ಲಿ ಹರಿಜನರ 68 ಕುಟುಂಬಗಳು ಮನೆ ಮಾಡಿ ನೆಲೆಸಿಂತಿರುವುವು. ಯೋಗ್ಯವಾದ ಜೀವನವನ್ನು ಸಾಗಿಸಲು ಅವರಿಗೆ ಸೌಕರ್ಯಗಳನ್ನು ಒದಗಿಸುತ್ತದೆ ಎಲ್ಲಾ ವಿದ್ಯಾರ್ಥಿಗಳಿಗೂ ಧರ್ಮಾರ್ಥವಾಗಿ ಉಡಿಗೆ, ಪುಸ್ತಕ, ವಿದ್ಯಾರ್ಥಿಗಳ ಊಟ, ವೈದ್ಯಕೀಯ ಸಹಾಯ ಇವುಗಳೆಲ್ಲವೂ ಕೊಡಲ್ಪಡುತ್ತವೆ.

ಸಂಸ್ಥೆಗೆ ಸಂಬಂಧಪಟ್ಟ 20 ಉಪಾಧ್ಯಾಯರ ವೃಂದವಿದೆ, ಅದರ ವಾರ್ಷಿಕ ಖರ್ಚು ರೂ. 24,000 ಆಗುವುದು. ಈ ಖರ್ಚಿಗಾಗಿ 12000 ರೂ. ಗ್ರಾಂಟು ಮದ್ರಾಸು ಗವರ್ನ್‌ಮೆಂಟಿನಿಂದ ಕೊಡಲ್ಪಡುತ್ತವೆ. ಉಳಿದ 12000 ರೂ. ಇನ್ನು ಕೂಡಿಸಲ್ಪಡಬೇಕು. ಎರಡು ಬೋರ್ಡಿಂಗುಗಳಿಗಾಗಿ ಎರಡು ಬಾವಿಗಳನ್ನು ತೋಡಲೂ, ಹುಡುಗರ ಬೋರ್ಡಿಂಗಿಗೆ ಒಂದು ಪ್ರಾರ್ಥನಾ ಮಂದಿರವನ್ನು ಕಟ್ಟಿಸಲೂ, 6 ಮಂಚಗಳಿರುವ ಒಂದು ರೋಗಿಗಳ ಕೋಣೆ, ಹುಡುಗಿಯರ ಬೋರ್ಡಿಂಗಿಗೆ ಒಂದು ಅಡಿಗೆಯ ಮನೆ, ಇಬ್ಬರು ಮಾರ್ಜನರ ಮತ್ತು 4 ಮಂದಿ ಉಪಾಧ್ಯಾಯರ ನಿವಾಸಸ್ಥಳಗಳನ್ನು ಕಟ್ಟಿಸಲು ರೂ. 16000 ಆಗತ್ಯವಿದೆ

ಹೀಗೆ ಸಂಸ್ಥೆಗೆ ಒಟ್ಟಿಗೆ ರೂ 28,000 ಒಟ್ಟು ಮಾಡಲಿದೆ, ಆದರ ಖರ್ಚಿಗಾಗಿ ಮಿಶ್ಶನಿನ ಅಭಿವೃದ್ಧಿಯನ್ನು ಬಯಸುವ ಮಹಾಜನರು ಉದಾರ ಮನಸ್ಸಿನಿಂದ ತಮ್ಮ ವಂತಿಗೆಯನ್ನು ದಯವಿಟ್ಟು ಮಿಶ್ಶನಿನ ಗೌರವ ಕಾರ್ಯದರ್ಶಿಗಳವರಾದ ಶ್ರೀ| ಎಸ್. ಆರ್. ವೆಂಕಟ್ರಮಣರಿಗೆ ಅಥವಾ ಮಿಶ್ಶನಿನ ಕೋಶಾಧಿಕಾರಿಗಳವರಾದ ಶ್ರೀ| ಎನ್. ರಾಮರಾಯರಿಗೆ ಕಳುಹಿಸಬೇಕಾಗಿ ಸವಿನಯ ವಿನಂತಿ.

ಉಡುಪಿ.

ಶ್ರೀ ಕೃಷ್ಣ ದೇವರ ವರದ ಮತ್ತು ವಂದಿನ ಪರ್ಯಾಯ ಮಠವಾರ ಶ್ರೀ ಪುತ್ತಿಗೆ ಮಠದ ರಿಕ್ವಿಜಿಶನ್ ಮಾಡಿದ ಅಕ್ಕಿಯನ್ನು ಬಿಟ್ಟು ಕೊಟ್ಟಿರುವರಾಗಿ ತಿಳಿದು ಬರುತ್ತದೆ.

ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳಲ್ಲಿ ರಿಕ್ವಿಜಿಶನ್ ಮಾಡಿದ ಅಕ್ಕಿ ವ ಭತ್ತವನ್ನು ಕೊಂಡುಕೊಳ್ಳುವ ಡಿಪ್ಪೋಗಳ ವಿವರ:—

ಕುಂದಾಪುರ ತಾಲೂಕು:- ಶಂಕರನಾರಾಯಣ ಸಹಕಾರ ಸಂಘ.

ಉಡುಪಿ ತಾಲೂಕು– ಬ್ರಹ್ಮಾವರ, ಪೆರ್ಡೂರು, ಹಿರಿಯಡ್ಕ, ಕಟ್ಪಾಡಿ, ಶಿರ್ವ, ಸಾಲು ಸಹಕಾರ ಸಂಘಗಳು.

ಕಾರ್ಕಳ ತಾಲೂಕು– ಹೆಬ್ರಿ, ಅಜೆಕಾರು, ಬೈಲೂರು ಸಹಕಾರ ಸಂಘಗಳು. ನೇಮಿಸಲ್ಪಟ್ಟ ಸಹಕಾರ ಸಂಘಗಳು ದ. ಕ. ಜಿಲ್ಲಾ [illegible] ಡಿಪೋ ಏಜಂಟರಾಗಿ ನೇಮಿಸಲ್ಪಟ್ಟಿವೆ. ರಿಕ್ವಿಜಿಶನ್ ಅಕ್ಕಿ ವ ಭತ್ತವನ್ನು ಆಯಾಯಾ ತಾಲೂಕಿನವರು ಆಯಾಯಾ ತಾಲೂಕುಗಳ ಡಿಪೋಗಳಲ್ಲಿ ಕೊಟ್ಟು ಚೆಕ್ ಮೂಲಕ ಹಣ ಪಡೆಯಬಹುದಾಗಿದೆ

ಕಟಪಾಡಿ:- ದ. ಕ. ಜಿಲ್ಲಾ ಎಡ್ಯುಕೇಶನಲ್ ಆಫೀಸರು ಇಲ್ಲಿಯ ಶ್ರೀ. ವೆಂ. ಸ್ವಾ. ಹಾಯರ್ ಎಲಿಮೆಂಟರಿ ಶಾಲೆಯನ್ನು 13-12-43ರ ರ್ಶಿಸಂದರ್ಶಿಸಿ ರೀತಿಯ ಉತ್ತಮ ಸ್ಥಿತಿಯನ್ನೂ ಶಾಲೆಯ ಕಟ್ಟಡ ಆಟದ ಬಯಲು, ತೋಟ ಮೊದಲಾದವುಗಳ ಸ್ಥಿತಿಯನ್ನೂ, ಮಕ್ಕಳ ವಿಶೇಷ ಚಟುವಟಿಕೆಗಳನ್ನು ಕಂಡು ಬಹಳವಾಗಿಯೂ ಕೇಂದ್ರದಲ್ಲಿ ಒಂದು ಹೈಸ್ಕೂಲು ಆಗತ್ಯವಾಗಿರುವುದಾಗಿಯೂ ಅಭಿಪ್ರಾಯ ಪಟ್ಟಿರುವರು. ಅಂದು ಸಾಯಂಕಾಲ ಮಕ್ಕಳ ವ್ಯಾಯಾಮ ಮತ್ತು ಯಕ್ಷಗಾನ ಪ್ರದರ್ಶನವೂ ಉತ್ತಮ ರೀತಿಯಲ್ಲಿ ಜರಗಿದುವು

ದಕ್ಷಿಣ ಕನ್ನಡದ ಭೂಮಾಲಿಕರ ಸಂಘದ ವಿನಂತಿ.

ಎಲ್ಲಾ ಭೂಮಾಲಿಕರೂ ರೈತರೂ ಅತ್ಯಾವಶ್ಯಕವಾಗಿ ಗಮನಿಸತಕ್ಕ ವಿಷಯ. ನಮ್ಮ ಮನವಿಯಂತೆ ಸರಕಾರದವರು ಒಪ್ಪಿದ ಮೇರೆಗೆ ಎಲ್ಲಾ ಭೂಮಾಲಿಕರೂ ರೈತರೂ ವ ಇತರ ಅಕ್ಕಿ ಉತ್ಪತ್ತಿಯುಳ್ಳವರು ಬರುವ ತಾ- 15-12-43ರ ಒಳಗೆ ಆದಷ್ಟು ಹೆಚ್ಚಾಗಿ ಅಕ್ಕಿಯನ್ನು ತಯಾರಿಸಿ ಜಿಲ್ಲೆಯಲ್ಲಿ ಅಲ್ಲಲ್ಲಿ ಏರ್ಪಡಿಸಿದ ಕೋ. ಆಪರೇಟಿವ್ ಸ್ಟೋರ್ಸ್‌ಗಳಿಗೇನೆ ನಿಶ್ಚಯಿಸಿದ ಕ್ರಯಕ್ಕೆ ಮಾರಬೇಕಲ್ಲದೆ ಬೇರೆ ಯಾರಿಗೂ ಮಾರಾಟ ಮಾಡಬಾರದು.

ಸ್ಟೋರ್ಸ್‌ಗಳಿಗೆ ನಿಶ್ಚಯಿಸಿದ ಕ್ರಯಕ್ಕೆ ಕೊಡದೆ ಅಲ್ಪ ಹಾಗೂ ತಾತ್ಕಾಲಿಕ ಲಾಭದ ಆಸೆಯಿಂದ ಬೇರೆ ಜನರಿಗೆ ವಿಕ್ರಯಿಸಿದರೆ ಪಟ್ಟಣವಾಸಿಗಳಿಗೆ ಆಗತ್ಯ ಬೇಳುವ ಅಕ್ಕಿ ದೊರೆಯದೆ ಭೂಮಾಲಿಕರು ತಮ್ಮ ಸ್ವಂತಕ್ಕೆ ಇಟ್ಟುಕೊಂಡ ಅಕ್ಕಿಯನ್ನು ಕೂಡಾ ಏನೊಂದೂ ರಿಯಾಯಿತಿ ಇಲ್ಲದ ಕಟು ದರದಲ್ಲಿ ಸರಕಾರದವರು ಬಲಾತ್ಕಾರದಿಂದ ಒಯ್ಯುವ ಸಂದರ್ಭ ಉಂಟಾಗಬಹುದು.

ಆದುದರಿಂದ ಎಲ್ಲಾ ರೈತರೂ ಒಮ್ಮನಸ್ಸಿನಿಂದ ತಮ್ಮ ಮಾರಾಟಕ್ಕಿರುವ ಅಕ್ಕಿಯನ್ನು ತಾವಾಗಲೀ ತಮ್ಮ ಒಕ್ಕಲುಗಳ ಮೂಲಕವಾಗಲಿ, ಸ್ಟೋರ್ಸ್‌ಗಳಿಗೇನೇ ಮಾರಾಟ ಮಾಡಬೇಕಾಗಿ ಆಗ್ರಹಪೂರ್ವಕ ವಿಜ್ಞಾಪಿಸಿಕೊಳ್ಳುತ್ತೇವೆ.

ಸರಕಾರದವರು ನಮ್ಮ ಯೋಜನೆಯು ಫಲಕಾರಿಯಾಗ ಬಹುದೋ ಇಲ್ಲವೋ ಎಂದು ನಿರೀಕ್ಷಿಸುತ್ತಿರುವುದರಿಂದ ನಾವೆಲ್ಲರೂ ಈ ವಿಚಾರದಲ್ಲಿ ಆದಷ್ಟು ಎಚ್ಚರದಿಂದಿದ್ದು ಯತ್ನವನ್ನು ಮಾಡಬೇಕಾಗಿದೆ.

ಸಹಿ/ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ, ಕೆ. ಆರ್. ಬಲ್ಲಾಳ್, ಕೆ. ಬಿ ಜನಾರ್ದನ ಹೆಗಡೆ, ಕೆ. ಸದಾಶಿವ ಅಡಿಗ, ಎಸ್. ಕೃಷ್ಣ ಭಟ್, ಎ. ಬಿ. ಶೆಟ್ಟಿ, ಕೆ. ಟಿ. ಆಳ್ವ, ಎ. ಆರ್. ರಂಗನಾಥ ಪೂಂಜ, ಬಿ. ಮಂಜಯ್ಯ ಹೆಗ್ಡೆ, ಕೆ ಎಸ್ ಹೆಗ್ಡೆ.

ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘ

ನಮ್ಮ ಸಂಘದ ವಾರ್ಷಿಕ ಮಹಾ ಸಭೆಯು ಇದೇ ದಶಂಬರ ತಿಂಗಳ ತಾ 26ನೇ ಆದಿತ್ಯವಾರ ಬೆಳಿಗ್ಗೆ ಘಂಟೆ 10ಕ್ಕೆ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗಬೇಕಾಗಿ ನಿಶ್ಚಯಿಸಿರುವುದರಿಂದ ತಾವು ದಯವಿಟ್ಟು ಸಭೆಗೆ ಆಗತ್ಯ ಬರಬೇಕಾಗಿ ಪ್ರಾರ್ಥಿಸುತ್ತೇವೆ.

ಕೆ. ಸದಾನಂದ ಹೆಗ್ಗಡೆ, ಎಡ್ವೊಕೇಟ್
ಕಾರ್ಯದರ್ಶಿ.

ಮಂಗಳೂರು,
ತಾ. 8-12-43

ಕಾರ್ಯಕ್ರಮ

I ತಾ. 26-12-43ನೇ ಬೆಳಿಗ್ಗೆ ಘಂಟೆ 9ಕ್ಕೆ ಸಂಘದ ಕಾರ್ಯ ನಿರ್ವಾಹಕ ಕಮಿಟಿ ಸಭೆ

II ಬೆಳಿಗ್ಗೆ ಘಂಟೆ 10ಕ್ಕೆ ಮಹಾಸಭೆ,

III. ಪೂರ್ವಾಹ್ನ ಘಂಟೆ11-30ಕ್ಕೆ ಹೊಸತಾಗಿ ಆರಿಸಲ್ಪಟ್ಟ ಸಂಘದ ಕಾರ್ಯನಿರ್ವಾಹಕ ಕಮಿಟಿ ಸಭೆ

ಕ್ರಿಸ್‌ಮಸ್ ಮತ್ತು ಹೊಸ ವರ್ಷ!

ಶುಭ ಸಂದೇಶಗಳು.

ನನ್ನ ಹಿತಚಿಂತಕರಾದ ಎಲ್ಲಾ ಗ್ರಾಹಕರಿಗೂ ವ್ಯಾಪಾರಸ್ಥರಿಗೂ ಮಿತ್ರರಿಗೂ ಮತ್ತು ಸಂಬಂಧಿಕರಿಗೂ ನನ್ನ ಶುಭ ಸಂದೇಶದೊಡನೆ ಅಭಿವಂದನೆಗಳನ್ನು ಅರ್ಪಿಸುವಾಗ, ತಾ. 4—12—1943ರಲ್ಲು 'ಸದಾನಂದ ಸ್ಟೋರ್ಸ್'ನ ಪಾಲು ವ್ಯವಸ್ಥಾಪತ್ರದಂತೆ,

1. ಕೆ. ಗೋಪಾಲಕೃಷ್ಣ ನಾಯಕನಾದ ನಾನು ತಾ 23-11-43ರ ವರೆಗೆ ಸದಾನಂದ ಸ್ಟೋರ್ಸ್ ಮತ್ತು ಚೆಂಪೀ ಪರ್ಫ್ಯೂಮರೀಸ್ (ಇಂಡಿಯಾ) ಇವರಿಗೆ ಬರಬೇಕಾದ ಏವೆಜನ ಸಂಪೂರ್ಣ ವಸೂಲಿ ಹಕ್ಕುದಾರನಾಗಿರುತ್ತೇನೆ 2. ನಾನು ತಾ. 24-11-43ರ ಆರಭ್ಯ ಚಾಂಪೀ ಪರ್ಫ್ಯೂಮರೀಸ್ (ಇಂಡಿಯಾ) ಇದರ ಸಂಪೂರ್ಣ ಮಾಲಕನಾಗಿರುತ್ತೇನೆ 3. ತಾ 24-11-43ರ ಆರಭ್ಯ 'ಸದಾನಂದ ಸ್ಟೋರ್ಸ್'ನವರು ಚಾಂಪೀ ಪರ್ಫ್ಯೂಮರೀಸ್ (ಇಂಡಿಯಾ) ಇವರ ಸೋಲ್ ಡಿಸ್ಟ್ರಿಬ್ಯೂಟರ್ಸ್ ಆಗಿರುವುದಿಲ್ಲ. 4. ತಾ. 24-11-43ರ ಆರಭ್ಯ 'ಸುಖಾನಂದ ಸ್ಟೋರ್ಸ್' ಸಂತೆಕಟ್ಟೆ, ಉಡುಪಿ, ಇವರು ಚಾಂಪೀ ಪರ್ಫ್ಯೂಮರೀಸ್(ಇಂಡಿಯಾ) ಇದರ ಸೋಲ್ ಡಿಸ್ಟ್ರಿಬ್ಯೂಟರ್ಸ್ ಆಗಿರುತ್ತಾರೆ ಎಂದು ತಿಳಿಸಲು ಸಂತೋಷಪಡುತ್ತೇನೆ. ಅಲ್ಲದೆ ಎಂದಿನಂತೆ ಇನ್ನು ಮುಂದೆ ಕೂಡ ತಮ್ಮೆಲ್ಲರ ವಿಶ್ವಾಸಪಾತ್ರನಾಗಿರುವ,

ತಮ್ಮ ಸ್ನೇಹಾಭಿಲಾಷಿ,

ಕೆ. ಗೋಪಾಲಕೃಷ್ಣ ನಾಯಕ್,
ಸಂಪೂರ್ಣ ಮಾಲಕರು,
ಚೆಂಪೀ ಪರ್ಫ್ಯೂಮರೀಸ್ (ಇಂಡಿಯಾ),
ಮತ್ತು ಸುಖಾನಂದ ಸ್ಟೋರ್ಸ್,
ಸಂತೆಕಟ್ಟೆ, ಉಡುಪಿ.

Degrees: Books: Medicines
Free H. L. M. S, M. B. H. M, D, etc. Free Homeo-Ayur UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs 4 Insanity Cure Pills Rs. 10 Enclose 2 annas stamp —
Prof Dr. N H. Chhatbar,
Principal Indian Homeopathi Institute & Society (Govt. Regd)
P.O MAHUVA (Kathiawar Dt. India.)

Sidha-Kalpa Kavach (Regd.)
No 3 Rs 2 No 2 Rs 5 No. 1 Rs. 7 Special Rs. 10, Extra Special Rs. 17 for marriage health, wealth. Ask any six questions with M O. Re. 1/4 and get correct answers by returnpost Life reading Rs.10 No V.P.P.SendM.O.Free. pmplets
Prof. Dr. N. H Chhatbar,
P. O. MAHUVA (Kathiawar India.)

THE BEST PREVENTIVE IN EPIDEMICS OF
CHOLERA
"BHUVANENDRA"
CHANDRAMAS
Will give you the best results Try once and be satisfied with the results
Dose: For adults:- 3 to 5 drops 2 to 3 times a day [illegible] with the decoction of cloves or ajwan
For Children: 1 to 2 drops [illegible]
Also a sovereign remedy for diarrhoea, Stomachache, Vomiting and Nausea
BHUVANENDRA PRODUCTS Ltd.

"ಭುವನೇಂದ್ರ"
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರಬೇಕಾದ ಅತ್ಯುತ್ತಮ ಔಷಧಿ
ದೊಡ್ಡವರಿಗೆ 1ರಿಂದ 3 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.
ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಯ್ಸ್ ಫಾರ್ಮಸಿ; ಡಾ. ಕೆ ಕೇಶವರಾವ್ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪ್ಪೋ.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in 1920)

Registered Office: Court Road UDIPI South Canara District.
Business Offices Udipi, Mangalore, Katapadi, Kanhangad and Kinnigoli, South Canara.

Authorised and Issued Capital: Rs 2,00 000/-
Subscribed and Paid up Capital: Rs 2,00,000/-
Reserve Funds: Rs. 1,75,852/-

Short term bills are discounted for approved parties. Loans and advances are made and overdrafts granted on fairly easy terms.

Deposits are accepted at favourable rates of interest More than twenty-three years' reliable banking Service stands to our credit.

For further particulars please call at or apply to the nearest office.

Dated 31-10-1943.

ಜನಪ್ರಿಯವಾದ ಕಿರಿಯರ ಪ್ರಪಂಚದ ಪ್ರಕಟಣೆಗಳು

ಮಧುವನ	೨	೮	೦	ರಂಗಭೂಮಿ	೦	೮	೦
ಪ್ರಕಾಶ	೧	೧೨	೦	ಸಂಶಯ ಪಿಶಾಚಿ	೦	೮	೦
ಭಾರತೀಯ ಕತೆಗಳು	೦	೧೪	೦	ಸೇವಾಪಥ	೦	೮	೦
ನಾರೀ ಹೃದಯ	೦	೧೪	೦	ಕುಲಲತ	೦	೫	೦
ದೇಶಭಕ್ತ	೦	೧೪	೦	ಹೆಂಡ್ತಿ ಗಂಡನಾದರೆ	೦	೪	೦
ಕಾವ್ಯ ಸಾಮ್ರಾಜ್ಯ	೦	೧೨	೦	ಪುರುಷವಧು	೦	೪	೦
ಪ್ರೇಮ ವಿಜಯ	೦	೧೨	೦	ಸ್ವತಂತ್ರ ಜೀವನೋಪಾಯ	೦	೩	೦
ವ್ಯಭಿಚಾರಿಣಿ ಯಾರು	೦	೧೨	೦	ನಾಡಕತೆಗಳು	೦	೩	೦
ಸಂಧ್ಯಾದೀಪ	೦	೧೦	೦	ಮುಂದಿನ ಮೇವು	೦	೩	೦
ಸನ್ಯಾಸಿಯ ಸೋಗಿನ	೦	೮	೦	ಮೂರು ಪ್ರಹಸನಗಳು	೦	೧೪	೦

ಕಿರಿಯರ ಪ್ರಪಂಚ, ಉಡುಪಿ.

The Moolky Bank, Ltd.,

MOOLKY, S. K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ **1929**ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager — ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ : : : : ಮಂಗಳೂರು.

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.

ಹೆಡ್ ಆಫೀಸ್: ಮಂಗಳೂರು.

ಶಾಖೆಗಳು:

ಮಂಗಳೂರು, ಸಿಟಿ-ಮಂಗಳೂರು.
ಉಡುಪಿ, ಕಾರ್ಕಳ, ಕುಂದಾಪುರ,
ಕಾಪು, ಬ್ರಹ್ಮಾವರ, ಕಾಸರಗೋಡು,

ಪ್ರತಿ ಶಾಖೆಗಳಲ್ಲೂ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳು ಕೈಗೊಳ್ಳಲ್ಪಡುತ್ತವೆ.

The Vijaya Bank Ltd., Mangalore.

ನಮ್ಮ ಸುವರ್ಣ ಮಹೋತ್ಸವ ಸಂಚಿಕೆಗೆ ದಯಮಾಡಿ ನಿಮ್ಮ

ಸಹೃದಯ ಸಂದೇಶವನ್ನು ಕಳುಹಿಸಿ ಕೊಡಿರಿ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. **1—8—0** ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. **2—8—0**

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

— ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಷ್ಟ ಚಾರ್ಜು ೧೨ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ಸ. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ನೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ. ಕ.**

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K H. SHETTY AT THE NAVAYUGA PRESS, UDIPI, S. INDIA.

Regd. No. M. 3618.

Estd. 1921 ಸ್ಥಾಪನೆ.

ಕರಿಯರ ಪ್ರಪಂಚದ ಹೊಸ ಪ್ರಕಟಣೆ

—ಪ್ರಕಾಶ—

ಸಾಮಾಜಿಕ—ರಾಜಕೀಯ ನಾಟಕ.
ಮೂಲ ಲೇಖಕರು:—ಶೇಟ್ ಗೋವಿಂದ ದಾಸ್, ಎಂ. ಎಲ್. ಎ. (ಸೆಂಟ್ರಲ್)
ಅನುವಾದಕಿ: ಶ್ರೀಮತಿ ಸರಸ್ವತಿ ಬಾಯಿ ರಾಜವಾಡ.
ಬೆಲೆ ರೂ. 1-12-0. ಟ. ಖ. 0-4-0
ರೂ. 2ನ್ನು ಮನಿಯಾರ್ಡರ್ ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಲಾಗುವದು

ನವಭಾರತ ಪುಸ್ತಕ ಭಂಡಾರ,
ಉಡುಪಿ

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೧೬

FOUNDER
Sri. A. B. Shetty.

Vol. 24
No. 16

NAVAYUGA— Kannada Weekly —UDIPI, S. I.

ಉಡುಪಿ ● 23—12—1943 ● ಮಂಗಳೂರು.

ಕರಿಯರ ಪ್ರಪಂಚದ
ಇನ್ನೊಂದು ಪ್ರಕಟಣೆ.

ಭಾರತೀಯ ಕತೆಗಳು

ಸಣ್ಣ ಕತೆಗಳ ಸಂಗ್ರಹ
ಮೂಲ ಲೇಖಕರು— ಶ್ರೀ. ಎ. ಎಸ್. ಪಂಚಾಪಕೇಶ ಐಯ್ಯರ್,
ಎಂ. ಎ., ಐ. ಸಿ. ಎಸ್., ಬಾರ್. ಎಟ್. ಲ, ಎಫ್. ಆರ್. ಎಸ್. ಎಲ್.,
ಅನುವಾದಕರು.— ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರು.
ಬೆಲೆ 0-11-0 ಟ. ಖ. 0-2-0
ರೂ. 1/ನ್ನು ಮನಿಯಾರ್ಡರು ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಲಾಗುವದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

Is Your Scholarship Protected?

Donors of some well-known scholarships insist that their recipients should be insured to the extent of the whole scholarship amount. Why is that? Because they do not wish that, should the recipient's lives be lost their monies too should be lost. When they can easily avoid such loss, they are determined to do so. Hence their insistence on insurance

Are not Parents too donors of scholarships to their children? Then should not they also insure them?

Is it not in the mutual interests of both parents and children to do so? It is.

Parents should insure their children to the extent of the total amount of money required for their upkeep and education or students should prevail upon their parents to do so, especially, when it is a question of higher education and larger expenditure

The Canara Mutual Assurance Co., Ltd.,
UDIPI.

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ನವೀಕರಣವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸಮೀಪದವರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇವರಲ್ಲೊಂದು ಪೋಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಡ್ಕಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದ. ಕನ್ನಡ ಜಿಲ್ಲೆಯ ಪ್ರಮುಖ್ಯ ಏಜಂಟರು -
ದಿ ಬೊಂಬೇ ಲೈಫ್ ಬಿಲ್ಡಿಂಗ್. ಉಡುಪಿ. (ದ ಕನ್ನಡ)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್ ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವೇಂದ್ರಂ

THE BOMABY LIFE ASSURANCE CO., LTD.

ಗನೋರಿಯಾ ಪರಮಾ ರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ...ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಜಾಡ್ಯಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು ಮುಂದಿನ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. [ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು]

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda Oushadalaya, GADAG.

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೩೯ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಒಳ್ಳೆ ಒಳ್ಳೆ ಆದಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅದಾಯಗಳನ್ನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ಶೀಘ್ರನೆ ಮುಂದುವರಿದವು.

೧೯೪೦, ೪೧ರಲ್ಲಿ ಕೆನರಾ ಬೇಂಕು ೬೦ ಲಕ್ಷ ಠೇವಣಿಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಆಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣಿಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡುವರೆ ಕೋಟಿಗೆ ಮಿಕ್ಕಿದೆ. ಹಾಗೂ ತೆತ್ತ ಮೂಲಧನವು ನಾಲ್ಮಡಿಯಾಗಿದೆ.

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮವಿಶ್ವಾಸದಿಂದಲೂ, ದೃಢಬುದ್ಧಿಯಿಂದಲೂ, ಯೋಗ್ಯಸೇವೆಯನ್ನು ಸಲ್ಲಿಸಿದುದರಿಂದಲೂ, ಇಂದಿನ ಈ ಪ್ರಗತಿಗೆ ಕಾರಣ ಭೂತರಾದ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಮಹತ್ವದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

CANARA BANK LIMITED.

ಕೆನರಾ ಬೇಂಕ್ ಲಿಮಿಟೆಡ್.

ಸ್ಥಾಪನೆ 1906.

ಟೆಹರಾನ್ ವಿಘ್ನ— ಜರ್ಮನರು ಮತ್ತು ಜ್ವರ!

★



ಇವರನ್ನು ಡಾಕ್ಟರರುಳಿಸಬೇಕು.

ಇಂಗ್ಲಾಂಡು ಜೀತೇಗಾಗಿದೆ; ಮಿತ್ರ ರಾಷ್ಟ್ರಗಳೆಲ್ಲಾ ಆತುರಗೊಂಡಿವೆ-ಬ್ರಿಟಿಷ್ ಪ್ರಧಾನ ಮಂತ್ರಿ ಮಿ. ಚರ್ಚಿಲ್ಲರು ಜ್ವರ ಪೀಡೆಯಿಂದ ಮಧ್ಯಪೂರ್ವದ ಯಾವುದೋ ಒಂದು ಊರಲ್ಲಿ ಮಂಚ ಹಿಡಿದಿದ್ದಾರೆ. ಮಿ. ಚರ್ಚಿಲ್ ಬ್ರಿಟನಿನ ರಾಜದಂಡ ಹಿಡಿದಂದಿನಿಂದ, ಜರ್ಮನ್ ಜಾಪಾನರು, ಊರೂರು ದೇಶದೇಶಗಳನ್ನು ಕಂಪಿಸುವ ಹಲವು ಅದ್ಭುತ ಕಾರ್ಯಗಳನ್ನು ಸಾಧಿಸಿದುದಿವೆ-ಆದರೆ ಚರ್ಚಿಲ್ಲರ ಕೈ ದಂಡವನ್ನು ಕ್ಷಣಮಾತ್ರಕ್ಕಾದರೂ ಅಲುಗಿಸುವ ಶಕ್ತಿ ಹಿಟ್ಲರ್ ಟೋಜೋರಲ್ಲಿರಲಿಲ್ಲ; ಇಂಗ್ಲಾಂಡಿನ ವಿರುದ್ಧ ಪಕ್ಷಗಳಿಗೂ ಇರಲಿಲ್ಲ—ಆ ಕೀರ್ತಿ ಚರ್ಚಿಲ್ಲರನ್ನಿಂದು ಆಕ್ರಮಿಸಿರುವ ಜ್ವರಕ್ಕೆ ಮಾತ್ರ! ಕೆಲಕಾಲದ ವರೆಗೆ ಪ್ರಧಾನಿ ಪಟ್ಟಕ್ಕೆ ಬೇರೊಬ್ಬನನ್ನೇರಿಸುವ ಬಿಕ್ಕಟ್ಟಿನ ಪ್ರಸಂಗ ಈಗ ಒದಗಿದೆ.

ಮಧ್ಯ ಪೂರ್ವದಲ್ಲಿ

ಕೈರೋ ಟೆಹರಾನ್ ಪರಿಷತ್ತುಗಳಿಗಾಗಿ ಮಿ. ಚರ್ಚಿಲ್ಲರು ಲಂಡನಿನ ಡೌನಿಂಗ್ ಸ್ಟ್ರೀಟ್ ನ. 10. ಇಲ್ಲಿಂದ ಹೊರಡುವಾಗ ಮಿ. ಅಮೆರಿಯವರ ಮುಖ ಕಂಡಿರಬೇಕು! ಅಥವಾ ಲೋರ್ಡ್ ಲಿನ್‌ಲಿತ್‌ಗೋ ಆ ದಿನ ಭಾರತಕ್ಕೆ ಹೊರಟದ್ದ-ಪ್ರಿನ್ಸ್ ಓಫ್ ವೇಲ್ಸ್ ಹಡಗ ಅಂದು ಸಿಂಗಾಪುರದತ್ತ ಹೊರಟದ್ದ—'ವಿಷಘಳಿಗೆಯಲ್ಲೇ ಈ ಬಾರಿ, ಚರ್ಚಿಲ್ಲರೂ ಪ್ರಯಾಣವಾರಂಭಿಸಿರಬೇಕು. ಅಂತೂ ಹೊರಟ ಮುಹೂರ್ತ ಚೆನ್ನಾಗಿರದ ದೆಸೆಯಿಂದ ಅವರು ಸೌಖ್ಯವಾಗಿ ಇಂಗ್ಲಾಂಡಿಗೆ ಮರಳದಂತಾಗಿದೆ. ಮಧ್ಯಪೂರ್ವದಲ್ಲೇ ಹಾಸಿಗೆ ಹಿಡಿದಿದ್ದಾರೆ. ಲಂಡನಿನಿಂದ ಶ್ರೀಮತಿ ಚರ್ಚಿಲ್ಲರು ಪತಿ ಸೇವೆಗಾಗಿ ವಿಮಾನ ಹತ್ತಿ ಅಲ್ಲಿಗೆ ಹೋಗಿದ್ದಾರೆ. ತಜ್ಞ ಡಾಕ್ಟರರುಗಳಾದ ಲೋರ್ಡ್ ಮೋರನ್, ಎವನ್ ಬೆಡ್‌ಫೋರ್ಡ್, ಫ್ರುಲ್ ವರ್ಟಾರ್ಫ್ಟ್—ಇವರು ಆರೈಕೆಯಲ್ಲಿದ್ದು ಪ್ರಧಾನಿ ದೇಹ ಸ್ಥಿತಿಯ ಕುರಿತು ದೈನಿಕ ಬುಲ್ಲೆಟಿನುಗಳ ಹೊರಡುತ್ತಿವೆ. ಈಗ ಜ್ವರ ಇಳಿಮುಖವಾಗುತ್ತಿದೆ. ಒಂದೇ ವರುಷದೊಳಗೆ ಮಿ. ಚರ್ಚಿಲ್ಲರು ಇದೀಗ ಎರಡನೇ ಬಾರಿ ಜ್ವರಪೀಡಿತರಾದುದರಿಂದ ಸಹಜವಾಗಿ ಆತುರವೆದ್ದಿದೆ. ಕಳೆದ ಜೂನಿನಲ್ಲಿ ಜ್ವರ ಹಿಡಿದಾಗ ಮಿ. ಚರ್ಚಿಲ್ಲರು ಲಂಡನಿನಲ್ಲೇ ಇದ್ದರು. ಮೈಯಲ್ಲಿ ಜ್ವರವಿದ್ದರೂ ಮನಸ್ಸು ಮಂಕಾಗಿರಲಿಲ್ಲ ವಾದ್ದರಿಂದ ಪ್ರಧಾನಿಯಾಗಿಯೇ ಇದ್ದರು. ಈ ಬಾರಿ ಅತಿ ದೂರದಲ್ಲಿದ್ದಾರೆ. ಆದ್ದರಿಂದ ತಾತ್ಕಾಲಿಕ ಪ್ರಧಾನಿಯೊಬ್ಬನು ಬೇಕಾಗಿದ್ದಾನೆ.

ಯಾರು ಯೋಗ್ಯ?

ಚರ್ಚಿಲ್ಲರು ಬದುಕಿರುವಾಗಲೇ, ಅವರ ವಾರೀಸ್ದಾರ - ಅವರಿಗೆರಡನೆಯವ - ಇಂಗ್ಲಾಂಡಿನಲ್ಲಾರು ಎಂಬ ಸಮಸ್ಯಾತ್ಮಕ ಪರೀಕ್ಷೆಯೊಂದು ನಡೆಯಬೇಕಾಗಿ ಬಂದಿದೆ. ಮಿ. ಚರ್ಚಿಲ್ಲರ ವ್ಯಕ್ತಿತ್ವ ಮತ್ತು ಪ್ರತಿಷ್ಠೆಯುಳ್ಳವರು, ಅವರ ಅನುಯಾಯಿಗಳಲ್ಲಾಗೂ ಇಲ್ಲವೆಂಬುದೊಂದು ಸಿದ್ಧಾಂತ. ಇದ್ದಮಟ್ಟಿಗೆ ವಿದೇಶಮಂತ್ರಿ ಮಿ. ಈಡೆನ್ನರಿಗೆ ಮೊದಲ ಸ್ಥಾನ. ಆದರೆ ಅವರಿಗೆ ಕನ್ಸರ್ವೇಟಿವ್ ಪಕ್ಷೀಯರ ಬೆಂಬಲವಿಲ್ಲ. ಉಪ ಪ್ರಧಾನಿ ಮಿ. ಆಟ್ಲಿಯವರು ಅಂತಹ ವಿಶೇಷ ವ್ಯಕ್ತಿತ್ವವಿದ್ದ ಜನವಲ್ಲ. ಲೇಬರ್ ಮಂತ್ರಿ ಮಿ. ಬೆವಿನರು ಪುರುಷತ್ವವಿದ್ದವರು; ಆದರೆ ಅವರು ತನ್ನ ಇತ್ತೀಚೆಗಿನ ಧೋರಣೆಯಿಂದ ಕೂಲಿಗಾರರೇ ಮೊದಲಾದವರ ವಿಶ್ವಾಸ ಕಳಕೊಂಡಿದ್ದಾರೆ ಗೃಹಮಂತ್ರಿ ಮೊರಿಸನರು ಅಸಾಧಾರಣ ವಾಗ್ಮಿಯೇನೋ ಹೌದು; ಆದರೆ ವ್ಯಕ್ತಿತ್ವವಾಗಲೀ ಅಂತರ್ರಾಷ್ಟ್ರೀಯ ಜ್ಞಾನವಾಗಲೀ ಸಾಕಷ್ಟಿದ್ದವರಲ್ಲ, ಸಾಲದುಕ್ಕೆ ನಾಜೀ ತತ್ವವಾದಿ ಮೋಸ್ಲೆಯವರ ಬಿಡುಗಡೆ ಮಾಡಿ ಇಂಗ್ಲಾಂಡಿನ 'ಕಹಿ ಮನುಷ್ಯ'ನಾಗಿ ಹೋಗಿದ್ದಾರೆ. ಎರಡು ವರುಷಗಳ ಮೊದಲಾದರೆ, ಈಗ ಆಕಾಶಮಂತ್ರಿಯಾಗಿರುವ ಸರ್. ಕ್ರಿಪ್ಸರಿಗೇನೇ ಮೀಸಲಿದ್ದ ಸ್ಥಾನವದು. ಆದರೆ ಭಾರತಕ್ಕೆ ಸಂಧಿಗಾಗಿ ಬಂದು ಮುಖಭಂಗಿತರಾಗಿ ಹೋದಮೇಲೆ ಚರ್ಚಿಲ್ಲರವರ ಯುದ್ಧಮಂಡಲದ ಮಣೆ ತಪ್ಪಿಸಿ 'ಗಗನ ಗದ್ದುಗೆ' ಕೊಟ್ಟಂದಿನಿಂದ ಹಿಂದೆ ಬಿದ್ದಿದ್ದಾರೆ. ಅಂತೂ ಬ್ರಿಟಿಷ್ ಮಂತ್ರಿ ಮಂಡಲಕ್ಕೇನೇ ಈಗ ಕಾಹಿಲೆ ಎನ್ನಬಹುದು—ಚರ್ಚಿಲ್ಲರಿಗೆ ನಿಜ ಜ್ವರ-ಮಿಕ್ಕವರಿಗೆ ಯೋಚನಾ ಜ್ವರ!

ಇವರನ್ನು ಸ್ಟಾಲಿನರುಳಿಸಿದರು.

ಕೊಲೆಯ ಯತ್ನ?

ಅಂತೂ ಮಧ್ಯಪೂರ್ವಕ್ಕೆ ಹೊರಡಲು ತ್ರಿಮೂರ್ತಿಗಳಿಗೆ ಹೇಳಿ ಮುಹೂರ್ತದ ಜೋಯಿಸನನ್ನು ಬಂಧಿಸಿ,ಮೋಸ್ಲೆಯಿದ್ದ ಕೋಣೆಗೆ ತುರುಕಿಸಬೇಕೆಂಬುದಕ್ಕೆ ಸಾಕಷ್ಟು ಕಾರಣವಿದೆ. ಟೆಹರಾನಿಗೆ ತೆರಳಿದಂದಿನಿಂದಲೂ 'ಕಾಹಿಲೆ ಮತ್ತು ಕಾಪುರುಷ'ರಿಂದ್ಯಪ್ರಾಣಾಪಾಯದ ಭೀತಿ ಈ ಮೂವರಿಗೂ ಇದ್ದೇ ಇದ್ದಿತು. ಒಂದು ಗುಟ್ಟನ್ನು ಮಧ್ಯಪೂರ್ವದಿಂದ ಮೊನ್ನೆ ತಾನೇ ವಾಷಿಂಗ್ಟನಿಗೆ ಸುಖವಾಗಿ ಬಂದು ಮುಟ್ಟಿದ ಅಧ್ಯಕ್ಷ ರುಸವೆಲ್ಟರು ಹೊರಗೆಡಹಿದರು. ಚರ್ಚಿಲ್, ರುಸವೆಲ್ಟ್, ಸ್ಟಾಲಿನ್-ಈ ಮೂವರನ್ನೂ ತೀರಿಸಿಬಿಡಬೇಕೆಂದು ಸುಮಾರು ನೂರು ಮಂದಿ ನಾಜೀ ಗುಪ್ತಚರರು ಟೆಹರಾನಿನಲ್ಲಿ ಸುಳಿದಾಡುತ್ತಿದ್ದರಂತೆ. ಆದರೆ ಟೆಹರಾನಿನಲ್ಲಿದ್ದುದು ಸ್ಟಾಲಿನ್ ತಲೆ!—ಅದು ನಾಜಿಗಳ ಯಾವ ಯೋಜನೆಯನ್ನಾದರೂ ಗುರಿಮುಟ್ಟಲು ಬಿಟ್ಟುದುಂಟೇನು? ಸ್ಟಾಲಿನರು ಅಧ್ಯಕ್ಷ ರುಸವೆಲ್ಟರನ್ನು ಸೋವಿಯೆಟ್ ಕಚೇರಿಯಲ್ಲಿಯೇ ನಿಲ್ಲುವಂತೆ ಹೇಳಿದರು. ಅಮೇರಿಕನ್ ರಾಯಭಾರಿ ಕಚೇರಿ ಅಲ್ಲಿಗೆ ಒಂದು ಮೈಲು ದೂರವಲ್ಲಿದೆ. ಪರಿಷತ್ತು ನಡೆಯುವ ಸೋವಿಯೆಟ್ ಕಚೇರಿಗೆ ಬಂದು ಹೋಗುವಾಗ ನಾಜಿಗಳಿಂದ ಅಪಾಯಕ್ಕೀಡಾಗುವ ಸಂಭವವಿದೆ, ಎಂದು ಸ್ಟಾಲಿನರು ರುಸವೆಲ್ಟರಿಗೆ ತಿಳಿಸಿ ತಮ್ಮಲ್ಲಿಯೇ ಇರಿಸಿಕೊಂಡರು. ಮಿ. ಚರ್ಚಿಲ್ಲರಂತೂ ರಶ್ಯದ ಕಚೇರಿಯ ಪಕ್ಕದಲ್ಲೇ ಇದ್ದ ಬ್ರಿಟಿಷ್ ಕಾರ್ಯಾಲಯದಲ್ಲುಳಿದಿದ್ದರು. "ನಾವು ಮೂವರೂ ಒಟ್ಟಿಗೆ ಟೆಹರಾನ್ ರಸ್ತೆಗಳಲ್ಲಿ ಹೋಗುತ್ತಿದ್ದಾಗ ನಾಜಿಗಳು ತಮ್ಮ ಕಾರ್ಯ ಸಾಧಿಸಿ ಬಿಡುತ್ತಿದ್ದರೆ, ಜರ್ಮನರು ತಮ್ಮ ಪಾಲಿನ ಅಮಿತಾನಂದವನ್ನು ಪಡೆಯಬಹುದಿತ್ತು"-ಎಂದು ರುಸವೆಲ್ಟರನ್ನುತ್ತಾರೆ. ಲೋಕ ಕಲ್ಯಾಣಕ್ಕಾಗಿ ನೆರೆದ ಟೆಹರಾನ್ ಪರಿಷತ್ತು ಕ್ಷೇಮವಾಯಿಯುರಲಿಲ್ಲ!

ಹೊಸ ವರ್ಷ! ಹೊಸ ಡೈರಿಗಳು!!

1944ನೇ ಇಸವಿಯ

ನವಭಾರತ ಪಾಕೆಟ್ ಡೈರಿ.

ಸುಭದ್ರ ಹೊದಿಕೆಯಿಂದೊಡಗೂಡಿ ನಯನ ಮನೋಹರವಾಗಿದೆ.

ದರಗಳು:

ಸಣ್ಣ ಸೈಜು (ಸಾದಾ)	1—0—0	ದೊಡ್ಡ ಸೈಜು (ಕೆಲಿಕೊ)	2—0—0
,, (ಕೆಲಿಕೊ)	1—4—0	(ಮುಚ್ಚಳದ್ದು)	1—8—0
ದೊಡ್ಡ ಸೈಜು (ಮುಚ್ಚಳದ್ದು)	2—6—0		

ಎಂದಿನಂತೆ ಈ ವರ್ಷವೂ **ನವಭಾರತ ಡೈರಿ**ಗಳಿಗೆ ಬಿಳುಪು ನುಣುಪಾದ ಹೊಳಪಿನ ಕಾಗದವನ್ನೇ ಉಪಯೋಗಿಸಲಾಗಿದೆ.

ವ್ಯಾಪಾರಿಗಳಿಗೆ ಕಮಿಶನ್ ಇದೆ. ಬೇಕಾದವರು ಮುಂಗಡದೊಂದಿಗೆ ಕೂಡಲೇ ಬರೆಯುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

(ರಜಿಸ್ಟರ್ಡ್ ಪಬ್ಲಿಷರ್ಸ್.)

ನಮ್ಮ ಡೈರಿಗಳು ಸಿಗುವ ಸ್ಥಳಗಳು:

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.
ಕೆನೆರಾ ಛಾಪಖಾನೆ, ಮಂಗಳೂರು.
ಮೆಜೆಸ್ಟಿಕ್ ಪ್ರೆಸ್, ರಥಬೀದಿ ಉಡುಪಿ.
ಎಂ. ಎಸ್. ಮಯ್ಯ, ನ್ಯೂಸ್ ಏಜಂಟ್, ಪುತ್ತೂರು.
ವೆಂಕಟೇಶಯ್ಯ & ಬ್ರದರ್ಸ್, ಶಿವಮೊಗ್ಗಾ.
ಟಿ. ವಿ. ಬಾಲಕೃಷ್ಣ ಶೆಣೈ & ಬ್ರದರ್ಸ್, ತೀರ್ಥಹಳ್ಳಿ.
ನೂತನ ಪುಸ್ತಕಾಲಯ, ಬಿಜಾಪುರ.
ಅನಂತ ವಾಮನ ಪೈ, ಬಾಗಲಕರ್, ಶಿರ್ಶಿ.
ಕಥಾಕುಂಜ ಗ್ರಂಥ ಭಂಡಾರ, ಬೆಳಗಾಂ.
ಯು. ಲಕ್ಷ್ಮಣ ರಾವ್, 180 ಜೈನಬಜಾರ್, ಜಿ. ಟಿ. ಮದ್ರಾಸ್.
ಯಸ್. ಯಸ್. ಬಾಪಟ್, ಸಿರ್ಸಿ.
ಆರ್. ಯನ್. ಭಟ್ಕಳ್‌ಕರ್ & ಸನ್ಸ್, ಸಿದ್ದಾಪುರ.
ಬಡವರ ಬಂಧು ಪ್ರಿಂಟಿಂಗ್ ಪ್ರೆಸ್, ಲಿ. ಮಂಗಳೂರು.
ನವಯುಗ ಪ್ರೆಸ್, ಉಡ್ಪಿ.

ಇತ್ಯಾದಿ— ಇತ್ಯಾದಿ.

ಶ್ರೀ. ಎ. ಬಿ. ಸೆಟ್ಟರ ಸ್ಪಷ್ಟೀಕರಣ

ನಿಮ್ಮ ಕಳೆದ ಸಂಚಿಕೆಯಲ್ಲಿ 'ಓರ್ವ ರೈತ'ನಿಂದ ಬರೆಯಲ್ಪಟ್ಟ 'ದ. ಕ. ರೈತರಿಗಾದ ಮಹದನ್ಯಾಯ' ಎಂಬ ಲೇಖನವು ದೊಡ್ಡ ಮತ್ತು ಸಣ್ಣ ರೈತರ ಅಕ್ಕಿಯನ್ನು ಒಂದೇ ಶೇಕಡಾಂಶ (percentage) ಕ್ರಮದಲ್ಲಿ ರೆಕ್ವಿಶಿಶನ್ ಮಾಡಬಾರದೆಂಬ ವಾದ ಹೂಡಿರುವದು ನ್ಯಾಯವೇ ಇದೆ. ಯಥಾರ್ಥವಾದಗೆ ಕಳೆದ ಸಪ್ಟಂಬರ್ ತಿಂಗಳಲ್ಲಿ ಕಲೆಕ್ಟರರ ಬಂಗಲೆಯಲ್ಲಿ ಸೇರಿದ ಸಭೆಯಲ್ಲಿಯೇ, ತೆರುವ ಲೀವೆಯನ್ನು ಆಧರಿಸಿ ಹೆಚ್ಚು ಕಡಿಮೆಯಿರಬೇಕೆಂಬ ಸೂಚನೆಯು ದ. ಕ. ವರ್ಗದಾರ ಸಂಘದಿಂದಲೇ ಸೂಚಿಸಲ್ಪಟ್ಟಿದ್ದಿತು. ಕಲೆಕ್ಟರರು ತಹಶೀಲ್ದಾರರುಗಳಿಗೆ ಕೊಟ್ಟ ಸೂಚನೆಗಳಲ್ಲಿ ದೊಡ್ಡ ರೈತರಿಂದ 50% ಕ್ಕೆ ಮಿಕ್ಕಿಯೂ ರೆಕ್ವಿಶಿಶನ್ ಮಾಡಬಹುದೆಂದು ತಿಳಿಸಿದ್ದರಲ್ಲದೆ, ಕೊನೆಯ ಪಕ್ಷ ಕೆಲವು ತಾಲೂಕುಗಳಲ್ಲಾದರೂ ರೆಕ್ವಿಶಿಶನ್ ಮಾಡುವಾಗ ಈ ರೀತಿಯಲ್ಲೇ ಮಾಡಲಾಗಿದೆ. ರೆವಿನ್ಯೂ ಬೋರ್ಡಿನ ಜ್ಞಾಪಕ ಪತ್ರ (Memorandum) ದಲ್ಲಿ ರೈತರಲ್ಲಿರುವ ಎಲ್ಲಾ 'ಉಳಿತಾಯದ ಅಕ್ಕಿ' (Surplus rise) ಯನ್ನೂ ಪಡೆಕೊಂಡು ಕೋಪರೇಟಿವ್ ಸ್ಟೋರ್ಸ್ಸುಗಳಿಗೆ ಕೊಡಬೇಕು—ಎಂದು ಇದೆ. 'ಉಳಿತಾಯದ ಅಕ್ಕಿ' ಎಂದರೆ, ಮನೆ ಖರ್ಚು ಮತ್ತು ಸಾಗುವಳಿ ವೆಚ್ಚವನ್ನು ಬಿಟ್ಟು ಉಳಿಯುವ ಎಲ್ಲಾ ಅಕ್ಕಿಯೆಂದೇ ಅರ್ಥ. ಎಡ್ವೈಸರು ತನ್ನ ರೆಕ್ವಿಶಿಶನ್ ಸೂತ್ರ (Formula) ವನ್ನು ಮಂಗಳೂರು ಮತ್ತು ಉಡುಪಿಯ ಸಭೆಗಳಲ್ಲಿ ಜ್ಯಾಹೀರು ಮಾಡಿದ್ದರು. ಅದನ್ನು ಅವರು ಇಲ್ಲಿಯ ವರ್ಗದಾರರೊಡನೆ ಪರ್ಯಾಲೋಚಿಸಿ ನಿರ್ಧರಿಸಿದುದೇನೂ ಅಲ್ಲ. ರಾಮ್ನಾಡು, ತಿನ್ನವೆಲ್ಲಿಗಳಂತಹ ಜಿಲ್ಲೆಗಳ ಸಾರ್ವಜನಿಕಾಭಿಪ್ರಾಯಗಳನ್ನು ಸಂಗ್ರಹಿಸಿ, ಅವರು ತಾವಾಗಿ ನಿರ್ಣೈಸಿಕೊಂಡು ಬಂದಿದ್ದ ವಿಷಯವದು.

ಜಿಲ್ಲಾ ಆಹಾರ ಸಮಿತಿಯ ಪ್ರಥಮ ಸಭೆಯು ನಾಳೆ (ತಾ. 20ರಲ್ಲಿ) ಕಲೆಕ್ಟರರ ಆಫೀಸಿನಲ್ಲಿ ಸೇರಲಿದೆ. ಎಡ್ವೈಸರರ 'ಫೋರ್ಮ್ಯುಲ'ಕ್ಕೊಂದು ತಿದ್ದುಪಡಿಯಾಗಿ ರೆಕ್ವಿಶಿಶನಿನಲ್ಲಿ ತಾರತಮ್ಯ ವಿಧಾನ (Sliding scale) ವಿರಬೇಕೆಂಬ ಠರಾವೊಂದನ್ನು ತರುವದೆ ನಾನು ನೋಟೀಸು ಕೊಟ್ಟಿದ್ದೇನೆ. ನಮ್ಮ ಸಂಘದ ಕಾರ್ಯಕಾರೀ ಸಮಿತಿಯ ಮಂಜೂರಾತಿ ಪಡೆದೇ ನಾನೀ ಸೂಚನೆ ತಂದುದಾಗಿದೆ. ಇಂತಹ ಸ್ಥಿತಿಯಲ್ಲಿ ಎಡ್ವೈಸರರ ಫೋರ್ಮ್ಯುಲದ ಜವಾಬ್ದಾರಿಯನ್ನು ವರ್ಗದಾರ ಸಂಘದ ಮೇಲೆ ಹೊರಿಸಿ, ದೊಡ್ಡ ವರ್ಗದಾರರ ಮೇಲೆ ಕೆಳ ತರಗತಿಯ ರೈತರಿಗೆ ದ್ವೇಷಾಸೂಯೆ ಹುಟ್ಟಿಸಲು ಪ್ರಯತ್ನಿಸುವದು ಎಂದೂ ನ್ಯಾಯವಾದುದಲ್ಲ. ಸಂಘದ ಸದಸ್ಯತ್ವವುಎಲ್ಲಾ ವರ್ಗದ ರೈತರಿಗೂ ತೆರೆದಿಡಲ್ಪಟ್ಟಿದೆ; ಮತ್ತು ಎಲ್ಲಾ ಜನರ ಹಿತಸಾಧನೆಗಳೂ ಅಲ್ಲಿ ಸರಿಯಾಗಿ ಪ್ರತಿನಿಧಿತ್ವ ಪಡೆವಂತೆ ನೋಡುವದು ನಮ್ಮೆಲ್ಲರ ಕರ್ತವ್ಯವಾಗಿದೆ

ರೇಶನಿಂಗ್ ಬ್ಯಾರಿಗೆ ತರಲು ಅವಶ್ಯವಾಗಿರುವ ಹಳ್ಳಿಗಳ ಆಹಾರದ ಅಂಕೆಗಳ ಪ್ರಮಾಣಗಳನ್ನು ಮಾಡಿಕೊಳ್ಳಲಾಗಿದೆ. ಇದು 'ಕಡಿಮೆ ಉತ್ಪತ್ತಿಯ'(deficit) ಜಿಲ್ಲೆ, ಈ ವರ್ಷವಂತೂ ಮಳೆಯ ವೈಪರೀತ್ಯದಿಂದಾಗಿ ಆ ಕೊರತೆಯು ಇನ್ನಷ್ಟು ಅಧಿಕವಾಗಬಹುದು, ಆದ್ದರಿಂದ ನಮ್ಮಲ್ಲಿಯ ಆಹಾರಕ್ಕೆ ಸಾಕಾಗುವಷ್ಟು ಅಕ್ಕಿಯನ್ನು ಹೊರಗಿನಿಂದ ಆಮದುಪಡಿಸಿಕೊಳ್ಳಬೇಕು-ಎಂದು ಸಂಘವು ಎಡ್ವೈಸರರಿಗೊಪ್ಪಿಸಿದ 'ಮೆಮೊರಾಂಡಮ್'ನಲ್ಲಿ ಎತ್ತಿ ತೋರಿಸಿಯದೆ. ಈ ವರೆಗೆ ಮಾಡಿದ ರೆಕ್ವಿಶಿಶನಿನಿಂದ ದೊರೆಯಬಹುದೆಂದು ಅಂದಾಜು ಕಟ್ಟಿರುವ ಅಕ್ಕಿಯು, ಒಬ್ಬೊಬ್ಬನಿಗೆ ದಿನಕ್ಕೊಂದೂವರೆ ಪಾವಿನಂತೆ ಹಿಡಿದರೂ ಜಿಲ್ಲೆಯ ಪೇಟೆ ಪಟ್ಟಣಗಳಿಗೆ ಮತ್ತು ಕಡಿಮೆಯಿರುವ ಕ್ಷೇತ್ರಗಳಿಗೆ ವರುಷಕ್ಕೆ ಸಾಕಾಗುವಷ್ಟಾಗುವದಿಲ್ಲವೆಂಬುದನ್ನು ಈ ಸಂದರ್ಭದಲ್ಲಿ ಹೇಳಲೇಬೇಕಾಗಿದೆ.

ಮಂಗಳೂರು, 19-12-43. ಎ. ಬಿ. ಶೆಟ್ಟಿ.

CHAMPAE'S
Snow & Castrex
Agents:—
Sukhananda Stores
Santhekatte, UDIPI, S. K.

ತಾ. 9-1-44ರಿಂದ ತಾ. 15-1-44ರ ವರೆಗೆ

★ ಉಡುಪಿ ಜಾತ್ರೆ ★

ಇದೇ ಬರುವ ಪುಷ್ಯ ಶು. ೧೪ ಯು ರವಿವಾರ ತಾ. 9—1—1944 ಮೊದಲ್ಗೊಂಡು ಬ. ೫ ಯು ಶನಿವಾರ ತಾ. 15—1—1944ರ ವರೆಗೆ ಶ್ರೀ ಕೃಷ್ಣಸನ್ನಿಧಿಯಲ್ಲಿ **ಮಕರ ಸಂಕ್ರಮಣ** ಪ್ರಯುಕ್ತ **ಸಪ್ತೋತ್ಸವವು** ಅವಭೃಥ ಚೂರ್ಣೋತ್ಸವಾದಿ ಯುಕ್ತವಾಗಿ ವಿಶೇಷ ಸಮಾರಂಭದಿಂದ ಜರಗಲಿರುವುದಲ್ಲದೆ, ನಮ್ಮ ಈ ಪರ್ಯಾಯ ಅವಧಿಯು ಪುಷ್ಯ ಬ. ೭ ಯು ಸೋಮವಾರ ತಾ. 17—1—1944ಕ್ಕೆ ಪರಿಸಮಾಪ್ತಿಯಾಗುವುದರಿಂದ ಆ ದಿನ ನಡೆಯುವ ಮಹಾಸಂತರ್ಪಣೆ, ಮಹೋತ್ಸವಾದಿಗಳೂ ವರ್ಣನೀಯವು.

ನಮ್ಮ ಪರ್ಯಾಯ ಕಾಲದಲ್ಲೇ ನೀವು ಕುಟುಂಬ ಮಿತ್ರಪರಿವಾರ ಸಮೇತರಾಗಿ ಬಂದು ಉತ್ಸವಾದಿ ಸಂದರ್ಶನದಿಂದ ಶ್ರೀಕೃಷ್ಣ ಪರಮಾತ್ಮನ ಪರಮಾನುಗ್ರಹಕ್ಕೆ ಪಾತ್ರರಾಗಬೇಕಾಗಿ ನಾವು ಅಪೇಕ್ಷಿಸುತ್ತೇವೆ.

ಯಾತ್ರಿಕರಿಗೆ ತಕ್ಕ ಸೌಕರ್ಯಗಳ ವ್ಯವಸ್ಥೆ ಇದೆ. ಹೆಚ್ಚಿನ ಮಾಹಿತಿಗೆ ಬರೆಯಿರಿ —

ಮೆನೇಜರ್,
ಪರ್ಯಾಯ ಶ್ರೀಕೃಷ್ಣಾಪುರ ಮಠ,
ಉಡುಪಿ.

4 ನೇ ವಾರ
ತಾ. **23—12—43** ರಿಂದ
ಹಿಂದಿನ ದಾಖಲೆಗಳನ್ನು ಹಿಮ್ಮೆಟ್ಟಿ ಮುಂದೊತ್ತುತ್ತಿದೆ-
ಪ್ರಗತಿಯವರ ಕನ್ನಡ

ಹರಿಶ್ಚಂದ್ರ

ಸುಬ್ಬಯ್ಯ ನ್ಯಾಡು, ಲಕ್ಷ್ಮೀ ಬಾಯಿ, ನಾಗೇಂದ್ರ ರಾವ್
ಮುಂತಾದವರಿಂದ ಶೋಭಿಸುತ್ತಿರುವ ಕನ್ನಡಿಗರ ಹೆಮ್ಮೆಯ ಚಿತ್ರ-
ತಾರೀಕು 26-12-43
ರಜತೋತ್ಸವ ದಿನ
(Silver Jubilee Day)
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

Notce

In the Court of the District Munsif of Kasaragod,

O. P. No. 308/1943.

Between:-

P. Kunhambu Nair and others-Petitioners and Mani and others- Respondents·

Notice! To all those whom it may concern.

The petitioners have applied to the above Court for the issue of a Succession Certificate to them for recovering the amount due to the late Unnamadath Kunhambu Nair of Belur Village of Kasaragod Taluk under a promissory note dated 17-8-1940 for Rs. 40-4-0 executed in his favour by Poravangara Kunhiraman Nair of Ajanur village. The said petition now stands posted to 27-12-1943 for hearing. Those who propose to oppose the same may appear before the Court on that date, failing which the matter will proceed ex-parte.

B. S. Kakkilaya.

Kasaragod, S.K. 16-12-1943. Advocate for Petitioners.

ಚೂರು-ಚೂರು

'ಬ್ರಿಟನಿನ ಆಹಾರ ತಜ್ಞರಾದ ಡಾ! ಜೆ. ಸಿ. ಫಿಶ್ಟರ್ ಮತ್ತು ಟಿ. ಜಿ. ಕ್ರಾಹಾ ಮದ್ರಾಸಿಗೆ ಆಗಮಿಸಿದ್ದಾರೆ!

ಇವರು ಆಹಾರ ತಜ್ಞರಾಗುವುದರಿಂದ ಹಿಂದುಸ್ಥಾನದ ಯಾವ ಆಹಾರವೂ ಸೇವನೆಗೆ ಯೋಗ್ಯವಲ್ಲವೆಂದು ಮನಗಂಡು ಬಂಗಾಲಿಗಳಂತೆ ಉಪವಾಸಬಿದ್ದು ಸಾಯಬೇಕಾಗುವದೇನೋ ಎಂದು ನಮ್ಮ ಭಯ.

●

'ಈ ಬಾರಿಯ ಮುಸ್ಲಿಂಲೀಗ್ ಅಧಿವೇಶನದಲ್ಲಿ ಅಧ್ಯಕ್ಷ ಜಿನ್ನರಿಗಾಗಿ ಬೆಳ್ಳಿಯ ಪೀಠವನ್ನು ಸಿದ್ಧಪಡಿಸುತ್ತಿದ್ದಾರೆ'

ಭಂಗಾರದ ಕಿರೀಟವೊಂದನ್ನೂ ತಯಾರಿಸಿದರೆ, ಮಿ. ಜಿನ್ನರಿಗೆ ಕೊಡತಕ್ಕ ಮೊಸವರುಷದ ಬಿರುದು 'ಬಾದಶಹಾ'

●

'ಮಿತ್ರರು ರಾಬಾಲಿನ ಮೇಲೆ ನಾಲ್ಕು ದಿಕ್ಕುಗಳಿಂದಲೂ ಧಾಳಿಮಾಡುವ ಸಿದ್ಧತೆಯಲ್ಲಿದ್ದಾರೆ'-ಜಾಪಾನರಿಗೆ ಟೋಕಿಯೋ ರೇಡಿಯೋದ ಎಚ್ಚರಿಕೆ.

ಪ್ರಾಯಶಃ ಇನ್ನು 'ಚತುರ್ದಿಕ್ಕುಗಳ' ಬದಲಿಗೆ 'ಪಂಚದಿಕ್ಕುಗಳ' ನಿರ್ಮಾಣವು ಜಾಪಾನರಿಂದ ಆಗುವ ಸಂಭವ.

●

'ಏಪ ನೋಪೀಗರಾಗೀರುವ ಶ್ರೀಮತಿ ಗಾಂಧಿಯವರು, ಹಿಂದುಸ್ಥಾನದ ಅತಿ ಪ್ರಮುಖ ಹೃದಯ ತಜ್ಞ ಡಾಕ್ಟರರು ಪಕ್ಕದಲ್ಲೇ ವಾಸಿಸುತ್ತಿರುವ ಆಗಖಾನ್ ಅರಮನೆಯಲ್ಲಿರುವದು ಶ್ರೀಮತಿಯವರ ಹಿತದೃಷ್ಟಿಯಿಂದಲೇ ಅಗತ್ಯ'—ಇಂಡಿಯಾ ಕಾರ್ಯದರ್ಶಿ ಮತ್ತು ಉಪಕಾರ್ಯದರ್ಶಿಗಳಾದ ಮಿ. ಅಮೆರಿ, ಲೋರ್ಡ್ ಮನ್ಸ್ಟರರ ಮಾತು.

ಅಂದ ಮೇಲೆ ಎದೆರೋಗ್ಯ ರೋಗಿ ಮಿ. ಅಮೇರಿಯವರನ್ನೂ ಅದೇ ಡಾಕ್ಟರರ ಆರೈಕೆಗಾಗಿ ಕೂಡಿಸಿಡುವದು ವಿಹಿತವಲ್ಲವೆ?

●

'ಮಾರ್ಶಲ್ ಸ್ಟಾಲಿನರೆಂದರೆ ನನ್ನ ಹೆಚ್ಚಿನ ನಿರೀಕ್ಷೆಗೆ ತಕ್ಕಂತೆ ಇರುವ ಮನುಷ್ಯ'—ರೂಸವೆಲ್ಟ್.

ಹಿಟ್ಲರ್? ಅವನಿಂದ ನಿರೀಕ್ಷಿಸಿದ್ದ ಅತಿ ಹೆಚ್ಚಿನದಕ್ಕಿಂತಲೂ ಹೆಚ್ಚನ್ನೇ ಅವ ಸಾಧಿಸಿರಬಹುದೆ?

●

'ಹಿಂದೂ ಮಹಾಸಭೆಯ ನಿಯೋಜಿತ ಅಧ್ಯಕ್ಷ ಶ್ರೀ ಸಾವರ್ಕರರು ಅನಾರೋಗ್ಯದ ನಿಮಿತ್ತ ಅಧ್ಯಕ್ಷ ಭಾಷಣ ತಯಾರಿ ಅಥವಾ ಪ್ರಯಾಣದ ಸಿದ್ಧತೆಯಲ್ಲಿಲ್ಲ!'

ಕಾಹಿಲೆ ಬಿದ್ದಾಗ ಹೊತ್ತೆ ನಿರ್ವಹಿಸುವ ವಿಧಾನ ಹೇಗೆಂಬುದನ್ನು ತಿಳಿಯಲು ಸಾವರ್ಕರರು ಮಿ. ಚರ್ಚಿಲ್ಲರೊಡನೆ ಪತ್ರವ್ಯವಹಾರ ನಡಿಸಲಿ.

●

'ರೋಮಿನ ರಸ್ತೆಯೂ ಸಂಪೂರ್ಣವಾಗಿ ಮಿತ್ರ ಸೇನೆಗಳ ಕೈಯಲ್ಲಿದೆ'-ಇಟಲಿ ಯುದ್ಧವಾರ್ತೆ.

ಇವನ್ನು ಇನ್ನಷ್ಟು ಸ್ಪಷ್ಟೀಕರಿಸಿ,'ಮಿತ್ರಸೇನೆಯು ರೋಮ್ ರಸ್ತೆಯನ್ನು ಪರಡುತ್ತಾ ಇದೆ' ಎಂದು ಯಾರೂ ಅರ್ಥಮಾಡಿಕೊಳ್ಳದಂತೆ ಹೇಳಬೇಕಿತ್ತು.

●

'ಜರ್ಮೇನಿಯಲ್ಲಿ ದೊಡ್ಡ ರೈಲ್ವೇ ಮುಷ್ಕರವಾರಂಭವಾಗುವ ಲಕ್ಷಣ ಕಂಡು ಬರುತ್ತಿವೆ!

ಜರ್ಮನಿಯ ರೈಲ್ವೇ ಕೇಂದ್ರಗಳ ಮೇಲೆ ಇನ್ನನ್ನು ಬಲವಾಗಿ ಬಾಂಬುಹಾಕುವದೊಂದೇ ಇದಕ್ಕೆ ತಕ್ಕ ಶಮನ.

—ವಿನೋದಿ

The Canara Banking Corporation Limited.

(Incorporated in British India with limited Liability)

ESTD: 1906

Notice

The rate of interest in Current Accounts at Branches and Head Office, will be ½% per annum, with effect from 1—1—1944.

Udipi
Dated, 10-12-43.

V. R. Kamath,
Manager.

ಉಡುಪಿ, ಗುರುವಾರ ೨೩-೧೨-೧೯೪೩

ಈ ತಾರತಮ್ಯವೇಕೆ?

ಬ್ರಿಟಿಷ್ ಸರಕಾರಕ್ಕೆ ನಾಜಿಗಳಿಗಿಂತಲೂ ಮೊದಲಿನ ವೈರಿಗಳೆಂದರೆ ರೋಗರುಜೆಗಳೆಂಬುದು 'ಮೋಸ್ಲೇ ಪ್ರಕರಣ'ದಿಂದ ಸ್ಪಷ್ಟವಾಗಿದೆ. ಸರ್. ಒಸ್ವಾಲ್ಡ್ ಮೋಸ್ಲೆಯವರು ಬ್ರಿಟನಿನ ನಾಜೀ ತತ್ವವಾದಿ; ಇಂಗ್ಲಾಂಡಿನೊಳಗಿರುವ ಹಿಟ್ಲರ್! ಆದ್ದರಿಂದಲೇ ಹೆರ್. ಹೆಸ್ಸರಂತೆ ಸರ್. ಮೋಸ್ಲೆಯವರೂ ಬಂಧಿಸಲ್ಪಟ್ಟಿದ್ದರು. ಅವರು ಅನಾರೋಗ್ಯದಲ್ಲಿದ್ದಾರೆ, ಎಂದು ತಿಳಿದೊಡನೆ ಬ್ರಿಟನಿನ ಗೃಹಮಂತ್ರಿ ಮಿ. ಮೋರಿಸನರು, ಜನವಿರೋಧವಿದ್ದರೂ ಗಣಿಸದೆ ಮಿ. ಮೋಸ್ಲೆಯವರ ಬಿಡುಗಡೆಮಾಡಿದ್ದಾರೆ. "ಅವರ ಶ್ರೀಮಂತಿಕೆ, ಅವರು ದೊಡ್ಡವರ ಸಾಲಲ್ಲಿ ಪಡೆದಿರುವ ಸ್ಥಾನಮಾನಗಳಿಗೆ ಚಿಕ್ಕಾಸಿನ ಬೆಲೆಕೊಡುವವನು ನಾನಲ್ಲ; ಬಿಡುಗಡೆ ಮಾಡಿದುದು ರೋಗವನ್ನು ನೋಡಿಯೇ!" ಎಂದು ವಿಮರ್ಶಕರಿಗೆ ಮೋರಿಸನರ ಉತ್ತರ. 'ಮೋಸ್ಲೆಯನ್ನು ತಿರುಗಿ ಜೈಲಿಗೆ ನೂಕಬೇಕು.' ಎಂದು ಇಂಗ್ಲಾಂಡಿನಲ್ಲೆಲ್ಲಾ ಚಳವಳವೆದ್ದಿರುವದು ಅವರು ಶ್ರೀಮಂತಿಕೆ, ಸ್ಥಾನಮಾನಗಳನ್ನು ಸಂಪಾದಿಸಿಕೊಂಡಿದ್ದಾರೆಂದಲ್ಲ-ನಾಜಿಯಾಗಿದ್ದಾರೆಂದು. ಇದಕ್ಕೂ ಮಿ. ಮೋರಿಸನರ ಉತ್ತರವಿದೆ. "ಅಂತಹದೇನನ್ನಾದರೂ ಮಿ. ಮೋಸ್ಲೆ ಇನ್ನು ಮುಂದೆ ಮಾಡಿಯಾನೆಂದು ತಿಳಿದೊಡನೆ ಕಠಿಣ ಕಾರ್ಯ ಕೈಕೊಳ್ಳಲು ನನಗೆ ಗೊತ್ತಿದೆ!"

ಮೋರಿಸನ್'ವ್ರಾಣದಯೆ' ಅರ್ಥಯಸ್ಪಷ್ಟವಿದೆ. ಆದರೆ ಇಂತಹ ಕನಿಕರಗಳಿಗೂ ಕ್ಷೇತ್ರಮಿತಿಯಿದೆ ಎಂಬುದೇ ಕೌತುಕವನ್ನು ಹುಟ್ಟಿಸುವ ವಿಷಯ. ಶ್ರೀಮತಿ ಕಸ್ತೂರಿಭಾ ಗಾಂಧಿಯವರು-74ವರುಷ ಪ್ರಾಯದ ನಿರುಪಾಯಕಾರಿ ಮುದಿಮುದುಕಿ-ಆಗಾಗ ದಾರುಣ ಎದೆನೋವನ್ನನುಭವಿಸುತಿದ್ದು ಅವರ ಪರಿಸ್ಥಿತಿಯೀಗ ಇಡೀ ದೇಶದಲ್ಲಿ ಆತುರವನ್ನು ಹುಟ್ಟಿಸಿದೆ. 'ಆತುರಕ್ಕೆ ಸಹಜವಾದ ಕಾರಣವಿದೆ' ಎಂದು ಬೊಂಬಾಯಿ ಸರಕಾರವೂ ಒಪ್ಪುತ್ತದೆ. ಆದರೆ ಅದು ಆತುರಕ್ಕೆ ಕಾರಣವಾಗ ಬಲ್ಲುದೇ ಹೊರತು ಶ್ರೀಮತಿಯವರ ಬಿಡುಗಡೆಗೆ ಸಾಕಾಗುವ ಕಾರಣ ಅದಲ್ಲ! ಮೋಸ್ಲೆ-ಕಸ್ತೂರಿ ಭಾ ರವರ ಕುರಿತು ಬ್ರಿಟಿಷ್ ಮತ್ತು ಹಿಂದೀ ಸರಕಾರಗಳು ತೋರಿಸಿರುವ ಪರಸ್ಪರ ವಿರುದ್ಧ ಭಾವನೆಗಳ ಮೇಲಿಂದ ಈ ಯೊಂದು ವಿಷಯವನ್ನು ಯಾರಾದರೂ ಗ್ರಹಿಸಿಕೊಳ್ಳಬಹುದು: ಬ್ರಿಟಿಷರಿಗೆ ನಾಜಿಗಿಂತ ಪ್ರಬಲ ವಿರೋಧಿ ಜ್ವರ; ಜ್ವರಕ್ಕಿಂತ ದೊಡ್ಡ ವೈರಿ ಕಾಂಗ್ರೆಸ್‌ವಾದಿ! ಆದರೆ ಇಂತಹ ಆರೋಪಗಳಿಂದ ತಪ್ಪಿಸಿಕೊಳ್ಳುವ ಚಾತುರ್ಯವೇ ಬ್ರಿಟಿಷ್ ಮುತ್ಸದ್ದಿಗಳ ಆತ್ಮ ಸಮರ್ಥನೆಯ ಆಯುಧ. ಮಿ. ಅಮೆರಿ ಮತ್ತು ಲೋರ್ಡ್ ಮನ್ಸ್ಟರರು, ಶ್ರೀಮತಿ ಗಾಂಧಿಯವರ ಬಂಧನವಾಸಕ್ಕೆ ಅತಿ ಮೋಹಕವಾದ ಒಂದು ಪ್ರತ್ಯೇಕ ಕಾರಣಕೊಟ್ಟಿದ್ದಾರೆ. "ಶ್ರೀಮತಿ ಗಾಂಧಿಯವರ ಆರೋಗ್ಯ ದೃಷ್ಟಿಯಿಂದ ಅವರ ಬಿಡುಗಡೆಯ ಪ್ರಶ್ನೆಯನ್ನು ಹಿಂದೀ ಸರಕಾರವೂ ಒಮ್ಮೆ ಯೋಚಿಸಿದ್ದಿತು; ಯೋಚಿಸುವಾಗ ಹಿಂದುಸ್ಥಾನದ ಹೃದಯ ತಜ್ಞ ಚಿಕಿತ್ಸಕರಲ್ಲಿ ಅತಿ ಮುಖ್ಯರಾದವರಲ್ಲೊಬ್ಬರು ಅವರ ಪಕ್ಕದಲ್ಲೇ ಇರುವುದರಿಂದ ಶ್ರೀಮತಿಯವರ ಚಿಕಿತ್ಸಾ ದೃಷ್ಟಿಯಿಂದಲೇ ಅವರ ಬಂಧ ವಿಮೋಚನೆ ಬೇಡವೆನ್ನಿಸಿತು.' ಮಹಾತ್ಮಾಜೀಯ ಅರ್ಧಾಂಗಿಯನ್ನು ಪೀಡಿಸುತ್ತಿರುವ ಈ ಹೃದಯವೇದನೆಯೇ, ಅವರ ಒಲಗ್ಗೆ ಮಹದೇವ ದೇಸಾಯಿಯನ್ನು ಇದೇ ಹೃದಯ ತಜ್ಞ ಚಿಕಿತ್ಸಕರಿದ್ದ ಅದೇ ಆಗಾಖಾನ್ ಅರಮನೆಯಲ್ಲಿ ಬಲಿಗೊಂಡಿದ್ದಿತು. ಆ ಡಾಕ್ಟರರಾದರೂ ಶ್ರೀಮತಿ ಗಾಂಧಿಯವರಂತೆಯೇ ಸ್ಥಾನಬದ್ಧ ಕೈದಿ. ಈ ರೋಗಿಗೆ 'ಈ ನಿರ್ಬಂಧಿತ ಡಾಕ್ಟರರ ಚಿಕಿತ್ಸೆಯೊಂದೇ ತಾಗುತ್ತದೆ'-ಎಂದು ಸರಕಾರಕ್ಕೆ ಮನವರಿಕೆಯಾಗಿದ್ದರೆ, ಡಾಕ್ಟರರ ಅನ್ಯಚಟುವಟಿಕೆಗಳಿಗೆ ನಿರ್ಬಂಧ ಹೊರಿಸಿ, ಇಬ್ಬರನ್ನೂ ಬಿಡಬಾರದೇಕೆ? ಲೇಡಿ' ವೇವೆಲರಿಗೆ ಹೃದಯವೇದನೆಯಾರಂಭವಾದರೆ ಆಗಾಖಾನ್ ಅರಮನೆಯ ಚಿಕಿತ್ಸೆಯಾದೀತೆ? ಗಾಂಧೀ ಸಹಧರ್ಮಿಣಿಯ, ಇಂದಿನ ಅವರ ವಯಸ್ಸಿನ ಅತಿ ಕಠೋರ ಕಾಹಿಲೆಯ ಕಾಲದಲ್ಲಾದರೂ, ಸರಕಾರೀ ಜೈಲಿನ ಕದ ತೆರೆಯಲ್ಪಡದಿದ್ದುದು ಭಾರತೀಯರೆಲ್ಲರ ಹೃದಯದಲ್ಲೂ ವೇದನೆಯನ್ನುಂಟುಮಾಡಿದೆ- ಸರಕಾರವಿದನ್ನು ಅಲಕ್ಷ್ಯಿಸಬಾರದು! 'ಆಗಾಖಾನ್ ಸೆರೆಮನೆಯಲ್ಲಿ-ಆದು ಆಸ್ಪತ್ರೆ'-ಎಂಬ ವಾದವು 'ಹಿಂದುಸ್ಥಾನದಲ್ಲಿ ಸ್ವಾತಂತ್ರ್ಯವಿಲ್ಲ-ಸ್ವಾತಂತ್ರ್ಯವಿತ್ತಿದ್ದೇವೆ'-ಎಂಬ ಮಾತಿನಷ್ಟೇ ಕಠೋರವಾದುದು, ವ್ಯಂಗ್ಯವಾದುದು. ಸರಕಾರವು ಕೂಡಲೇ ಶ್ರೀಮತಿಗಾಂಧಿಯವರ ಬಿಡುಗಡೆ ಮಾಡತಕ್ಕುದೆಂಬ ರಾಷ್ಟ್ರದ ಬೇಡಿಕೆಯೊಡನೆ ನಾವೂ ಸ್ವರಗೂಡಿಸುತ್ತೇವೆ.

ದುರ್ಬೀನು

ಕೈಯಿಂದ ಹೊಡೆಯುವದಕ್ಕಿಂತ ಖಡ್ಗದಿಂದ ಹೊಡೆದರೆ ಅಪಾಯವಧಿಕ; ತಾನು ಮಾಡಿದುದಕ್ಕಿಂತಲೂ ಅನ್ಯರಿಂದ ಮಾಡಿಸಿದ ಅನ್ಯಾಯದಲ್ಲಿ ದ್ವೇಷವಧಿಕ.

೦೦ ೦೦ ೦೦

ರೆಪ್ಪೆಯಿದ್ದ ಕಣ್ಣು ತಾನಾಗಿ ಮುಚ್ಚುತ್ತದೆ—ಕಿವಿ ಮೂಗುಗಳನ್ನು ಮುಚ್ಚಿಕೊಳ್ಳಬೇಕು ಕೈಯಿಂದಲೇ; ವಿಚಾರವಿದ್ದ ಮನುಷ್ಯ ತಾನೇ ಹುರುಪುಗೊಳ್ಳಲೂ ಬಲ್ಲನು, ಸಹಿಸಿಕೊಳ್ಳಲೂ ಬಲ್ಲನು-ಅವಿಚಾರಿಗಳಿಗೆ ತಡೆಯಾಗಬೇಕು ಅನ್ಯರೇ.

೦೦ ೦೦ ೦೦

ಸೆರಗು ಹಿಡಿದವನೂ ಧ್ವಜಧಾರಿಯೂ ಸಮಾನರಲ್ಲ; ಪರಾಶ್ರಯಿಯೂ ಪರಾಕ್ರಮಿಯೂ ಒಂದೇ ಅಲ್ಲ.

೦೦ ೦೦ ೦೦

ಮೊಸರು ಕಡೆದರೆ ಬೆಣ್ಣೆ ಬರುತ್ತದೆ; ಕೆಸರು ಕದಡಿದರೆ ಬಾರದು. ವಿಚಾರ ಮಂಥನದಿಂದ ಸತ್ಪಥ ಹೊಳೆಯುತ್ತದೆ; ಕಲ್ಮಷ ಬುದ್ಧಿಯಿಂದ ಆಲೋಚಿಸಿದರೆ ಹೊಳೆಯದು.

೦೦ ೦೦ ೦೦

ಭಾವಚಿತ್ರ ತೆಗೆಯಬೇಕು ಕೆಮರಾದಿದಿರು ನಿಲ್ಲಿಸಿ- ಸ್ವಭಾವಚಿತ್ರ ತೆಗೆಯಬೇಕು ಕೆಲಸದಿದಿರು ನಿಲ್ಲಿಸಿಯೇ.

೦೦ ೦೦ ೦೦

ಉಯ್ಯಾಲೆ ತೂಗಬೇಕು-ಕುಳಿತ ದೋಣಿಯನ್ನೂ ಹಾಗೇನೇ ತೂಗಾಡಿಸುವದು ಅಪಾಯಕರ; ವಿನೋದದಲ್ಲಿರುವಾಗ ಲಘುತ್ವಬೇಕು-ಕಾರ್ಯದೆಡೆಯಲ್ಲೂ ಹಾಗಿರಬಾರದು.

೦೦ ೦೦ ೦೦

ಮಿತಿಮೀರಿ ಮೂಸೆ ಬೆಳೆಸಿದರೆ ಅದು ಕಡಿವಾಣವಾದೀತು; ಮಿತಿಮೀರಿ ಆಸೆ ಬೆಳೆಸಿದರೆ ಅದು ಕಡಿದು ಹೋದೀತು.

೦೦ ೦೦ ೦೦

ಮುಂಡಾಸು ಸುತ್ತಿಕೊಳ್ಳುತ್ತಾರೆ. ಆದರೂ ವಸ್ತ್ರದ ತುಂಡೊಂದು ತಲೆಗೆ ಬಿದ್ದರೆ ಎತ್ತಿ ಬಿಸಾಡುತ್ತಾರೆ. ಮಹತ್ಕಾರ್ಯ ಸಾಧಿಸಬಲ್ಲವರೂ ಹೇಯ ಕೃತ್ಯ ಮಾಡಲು ಹೇಸುತ್ತಾರೆ.

೦೦ ೦೦ ೦೦

ಜ್ಞಾನಿಯೊಡನೆ ವಾದ ಹೂಡಿದರೆ ಒಂದು ವಿಷಯದ ಬಾಗಿಲು ತೆರೆದಂತೆ; ಅಜ್ಞಾನಿಯೊಡನೆ ತರ್ಕಿಸುವದೆಂದರೆ ಬಾಗಿಲ ಬದಿಯ ಗೋಡೆಗೆ ತಲೆ ತಾಡಿಸಿದಂತೆ.

೦೦ ೦೦ ೦೦

ಬಾಯಿಯ ಬೈಗಳಿಗಿಂತ ಕಾಲ್ಗೆಜ್ಜೆಯ ಝಣತ್ಕಾರ ಮಧುರ; ಸ್ಥಾನಾಪನ್ನರ ಅಹಂಭಾವಕ್ಕಿಂತ ಕೆಳ ದರ್ಜೆಯವರ ವಿನಯ ಉತ್ತಮ.

೦೦ ೦೦ ೦೦

ಮಗು ಅಂಬೆಗಾಲಿಡುವುದು ಸ್ವಾಭಾವಿಕ; ಪ್ರಾಯ ಪ್ರಬುದ್ಧನೂ ಹಾಗೆ ಮಾಡಬೇಕಾದರೆ ಸೊಂಟ ಮುರಿದಿರಬೇಕು. ಬಂದ್ರನು ಬಗ್ಗಿ ನಡೆಯಲಿ- ಅನುಕೂಲತೆಯಿದ್ದೂ ದೀನನಾಗಿರಬೇಕಾದರೆ ಬೆಂಗೋಲಿಲ್ಲದಿರಬೇಕು.

WANTED

Applications are invited from (1) Secondary Grade trained teachers and (ii) Manual training Instructors in wood work holding Manual TrainedCertificate of the Teachers College, Saidapet and completed Secondary School Leaving Certificate, for appointment as Secondary Grade Teachers and Manual Training Instructors in Board Secondary Schools. Preference will be given to candidates belonging to the scheduled classes, Mahamodan (Muslim) and Anglo Indian or Christian or Asiatic. The Applicants should pay a fee of Rupee one to the creoit of this Board and the application should be accompanied by either Treasury receipt of the Local Sub-Treasury or money order receipt in support of the payment of the above fees. Applications which do not contain particulars regarding caste, date of birth, qualifications etc., and accompanied by the above fee will not be considered. The applications should reach the undersigned on or before 31st December, 1943.

(*Sa*). **A. Laxminarayana Rao.**
President, District Bd, South Kanara.

Degrees: Books: Medicines
Free H. L. M. S, M, B. H. M, D, etc. Free Homeo-Ayur- Unani-Nature degree by post also—Practitioner also get soon Homeo Materiamedica. Rs. 5 Homeo Practice book Rs 4. Insanity Cure Pills Rs. 10 Enclose 2 annas stamp:—
Prof, Dr. N. H. Chhatbar,
Principal Indian Homeopathi Institute & Society (Govt. Regd)
P.O. MAHUVA (Kathiawar Dt. India.)

Sidha-Kalpa Kavach (Regd.)
No. 3 Rs 2. No. 2 Rs 5 No. 1 Rs. 7 Special Rs. 10. Extra Special Rs. 17 for love marriage health, wealth. Ask any six questions with M. O. Re. 1/4 and get correct answers by returnpost Life reading Rs.10 No V.P.P. Send M.O. Free. pmplets.
Prof. Dr. N. H Chhatbar.
P. O. MAHUVA (Kathiawar India.)

ಔಷಧಗಳು

ನಮ್ಮಲ್ಲಿ **ಕಟಪಾಡಿಯ ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡಿನ** ಜನಪ್ರಿಯವಾದ ಔಷಧಗಳು, **ಮಂಗಳೂರಿನ ಗಣಪತಿಯ್ಯ ಎಂಡ್ ಸನ್ಸ**ರವರ ಪ್ರಸಿದ್ಧ ಔಷಧಗಳೂ, **ಕುಂದಾಪುರದ ಸ್ವದೇಶಿ ಔಷಧ ಭಂಡಾರದ** ಜನಾದರಣೀಯ ಔಷಧಗಳೂ ಸಿಗುತ್ತವೆ.

ನವಭಾರತ ಪುಸ್ತಕ ಭಂಡಾರ,
ಸಂತೆಕಟ್ಟೆ : : ಉಡುಪಿ.

ಸಿಂಧ ಮತ್ತು ಹಿಂದೀ ಸರಕಾರಗಳೊಳಗೆ ಘರ್ಷಣೆ

ರಶ್ಯದಲ್ಲಿ

ಯುದ್ಧವು ಅತಿ ರಭಸದಿಂದ ಸಾಗಿದೆ. ಬಾಲ್ಟಿಕ್ ಕಡೆಯಲ್ಲಿ ರಶ್ಯಾನರು ಕೆಲವು ದಿನಗಳ ಹಿಂದೆ ಆರಂಭಿಸಿದ ಪ್ರಬಲ ಧಾಳಿಯ ಪರಿಣಾಮವಾಗಿ ನೆವೆಲ್ ವಲಯದ ಸುಮಾರು 500 ಊರುಗಳು ರಶ್ಯಾನರಿಗೆ ದೊರೆತಿವೆ. ಇದು ಅತಿ ಪ್ರಬಲ ವಿಜಯವೆನ್ನಬೇಕು. ನೆವೆಲ್ ಪೋಲೆಂಡಿನ ಹಿಂದಿನ ಗಡಿ ಮತ್ತು ಲೆಟ್ವಿಯಾಕ್ಕೆ ಕೇವಲ 70ಮೈಲು ದೂರದಲ್ಲಿದೆ. ಇಲ್ಲಿ ಕೆಂಪುಸೇನೆ ಪಡೆದ ವಿಜಯದ ಪರಿಣಾಮವು ಉತ್ತರ ರಶ್ಯದಲ್ಲಿ ಜರ್ಮನರು ಕಟ್ಟಿರುವ ಲೆನಿನ್‌ಗ್ರಾಡ್ ವರೆಗಿನ ರಕ್ಷಣಾ ಲೈನಿನ ಮೇಲೆಲ್ಲಾ ಆಗುವದು. ಮಾತ್ರವಲ್ಲ. ಈ ಭಾಗದಿಂದ ಕೆಂಪು ಸೇನೆ ಲೆಟ್ವಿಯಾದ ಗಡಿಗೆ ಮುಂದೊತ್ತುವಾಗ ಅಲ್ಲಿ ನಾಜೀ ವಿರುದ್ಧಗೊಂದಲಗಳು ಬಲವಾಗಿ ಏಳುವ ಸಂಭವ ಊಹೆಯಿದೆ. ಕೀವ್ ಕಡೆಯ ಜರ್ಮನ್ ಒತ್ತಡವು ಅತಿ ಪ್ರಬಲವಿರುವದಾದರೂ ಕೆಂಪು ಸೇನೆಯ ಪ್ರತಿಭಟನೆಯಿದಿರು ಕುಂಠಿತವಾದಂತಿದೆ ಅಲ್ಲಿಯ ನಾಜೀ ಸೇನಾನಿ, ಫೀಲ್ಡ್‌ಮಾರ್ಶಲ್ ಮಾನ್ಸ್ಟೀನರಿಗೆ ಹಿಟ್ಲರರು ಎಚ್ಚರಿಕೆಕೊಟ್ಟಿದ್ದಾರೆಂದೂ, ಶೀಘ್ರದಲ್ಲೇ ಕೀವ್ ನಗರವನ್ನು ವಶಪಡಿಸಿಕೊಂಡು ಜರ್ಮನರ ಗತ ಪ್ರತಿಷ್ಠೆಯ ಮರುಸಂಪಾದನೆ ಮಾಡಿಕೊಡದಿದ್ದರೆ, ನಿನ್ನ ತೇಜೋವಧೆ ಮಾಡುವದು ಮಾತ್ರವಲ್ಲ, ಅದಕ್ಕೂ ಮಿಕ್ಕಿದ ಶಿಕ್ಷೆ ವಿಧಿಸುವೆನೆಂದು ಬೆದರಿಕೆಹಾಕಿದ್ದಾರೆಂದೂ ವಾರ್ತೆ.

ಇಟಲಿಯಲ್ಲಿ.

ರೋಮಿನ ಕಡೆಗೆ ಮಿತ್ರರ 8ನೇ ದಳ ಮತ್ತು 5ನೇ ದಳಗಳು ನಡಿಸಿರುವ ಧಾಳಿಯು ಕೆಲವು ಪ್ರಾಮುಖ್ಯ ಫಲಗಳನ್ನು ಪಡೆದಿದೆ. ನಾಲ್ಕುದಿನಗಳ ಘೋರ ಹೋರಾಟದ ನಂತರ 5ನೇ ಸೇನೆಯು ಸಾನ್ ಪ್ರೋವಲಯವನ್ನು ಸ್ವಾಧೀನ ಪಡಿಸಿಕೊಂಡುದರಿಂದ ರೋಮ್ ನಗರದ ಬಾಗಿಲು ತೆರೆದಂತಾಗಿದೆ. ಜರ್ಮನರು ಈ ವಲಯದಲ್ಲಿ ಬಲವಾದ ರಕ್ಷಣಾ ಕೋಟೆಗಳನ್ನು ಕಟ್ಟಿದ್ದರಾದರೂ ಅಮೆರಿಕಾನರ ಪ್ರಬಲ ಮುತ್ತಿಗೆಯಿದಿರು ಹಿಂದೆಗೆಯಬೇಕಾಯಿತು. ಇನ್ನೊಂದೆಡೆಯಿಂದ 8ನೇ ಸೇನೆಯೂ ಪೂಸಿಯೊಫ್ರೋರಿಟೋದಂತಹ ಮುಖ್ಯ ನೆಲೆಗಳನ್ನು ವಶಪಡಿಸಿಕೊಂಡು ಮುಂದೊತ್ತುತ್ತಿದೆ. ಇಟಲಿ ವಿಮಾನಗಳು ಮಿತ್ರ ಪಕ್ಷ ಹಿಡಿದು ಕಾದಾಡುತ್ತಿವೆ. ರೋಮ್ ನಗರದಲ್ಲಿ ಜರ್ಮನರು ಕರ್ಫ್ಯೂ ಆಜ್ಞೆ ಜ್ಯಾರಿಮಾಡಿ, ರಕ್ಷಣಾ ಸಿದ್ಧತೆ, ಮುಂಜಾಗ್ರತೆ ವಹಿಸಿದ್ದಾರೆ. ರೋಮ್ ನಗರದ ಇದಿರು ಹಾದಿಯಲ್ಲಿ ಜರ್ಮನರ ಹೂಡಿದ್ದ ಪ್ರತಿಧಾಳಿಗಳೆಲ್ಲಾ ನಿರರ್ಥಕವಾಗಿವೆ.

ನಾಜಿಗಳ ಸಿದ್ಧತೆ.

ಮಿತ್ರ ಪಾಳಯದಲ್ಲಿ ಪಶ್ಚಿಮ ಯುರೋಪು ಧಾಳಿಯ ಸಿದ್ಧತೆಯ ಸಂಭ್ರಮ ಕಂಡು ಬರುತ್ತಿರುವಾಗ ಹಿಟ್ಲರನು ತನ್ನ ಪಶ್ಚಿಮ ಕೋಟೆಯ ಭದ್ರತೆಗಾಗಿ ವಿಶೇಷ ಜಾಗರೂಕತೆ ವಹಿಸುತ್ತಿದ್ದಾನೆ. ದಕ್ಷಿಣ ನಾಜೀ ಸೇನಾನಿ, ಲಿಬಿಯಾ ಯುದ್ಧ ಪ್ರಸಿದ್ಧ ಮಾರ್ಶಲ್ ರೊಮೆಲನು ಪಶ್ಚಿಮ ಯುರೋಪಿನ ಸೇನಾನಿ ಮಾರ್ಶಲ್ ವಾನ್ ರುಂಡ್‌ಸ್ಟೆಡನೊಡನೆ ಪರ್ಯಾಲೋಚನೆ ನಡಿಸಿ, ಅಟ್ಲಾಂಟಿಕ್ ಗೋಡೆಯನ್ನೂ ಅಲ್ಲಿರುವ ನಾಜೀ ಸೇನಾ ಶಕ್ತಿಯನ್ನೂ ಪರೀಕ್ಷಿಸುತ್ತಿದ್ದಾನೆ.

ಬೆಲೆನಿಯಂತ್ರಣಕ್ಕೆ ಸಿಂಧಮಂತ್ರಿಗಳ ವಿರೋಧ.

ಸಿಂಧದಲ್ಲಿ ಆಹಾರ ಧಾನ್ಯಗಳ ಬೆಲೆಯು, ಹಿಂದೀ ಸರಕಾರವು ದೇಶದಲ್ಲೆಲ್ಲಾ ಜ್ಯಾರಿಗೆ ತಂದಿರುವ ನಿಯಂತ್ರಿತ ದರಕ್ಕೆ ಮಿಕ್ಕಿ ಏರುತ್ತಿರುವದರಿಂದ, ತಮ್ಮ ಅನುಮತಿ ವಿನಹ ಕ್ರಯ ಏರಿಸಬಾರದೆಂದು ಹಿಂದೀ ಸರಕಾರವು ಸಿಂಧ ಸರಕಾರಕ್ಕೆ ಸೂಚನೆಕೊಟ್ಟುದರಿಂದಾಗಿ ಅಲ್ಲಿಯ ಮಂತ್ರಿಗಳು ಉದ್ರೇಕಗೊಂಡಿದ್ದಾರೆ. ಮುಖ್ಯಮಂತ್ರಿ ಸರ್. ಗುಲಾಮ್ ಹಿದಯತುಲ್ಲಾರವರೊಂದು ಪ್ರಕಟಣೆ ಹೊರಡಿಸಿ ಹಿಂದೀ ಸರಕಾರದ ವರ್ತನೆಯನ್ನು ಕಠಿಣವಾಗಿ ಟೀಕಿಸಿದ್ದಾರೆ. ಅಲ್ಲಿಯ ಗವರ್ನರ್ ಮತ್ತು ಮುಸ್ಲಿಂ ಲೀಗ್ ಮಂತ್ರಿಗಳೊಳಗೆ ತೀವ್ರ ಬಿಕ್ಕಟ್ಟವಾರಂಭವಾಗಿದೆ. ಇದರ ಪರ್ಯವಸಾನವು ಹೇಗೇನೇ ಆದರೂ ತಾವು ರಾಜೀ ನಾಮೆಕೊಡುವಂತಿಲ್ಲವೆಂದೂ ತಮ್ಮ ಧೋರಣೆಯನ್ನು ಗವರ್ನರರು ತಮ್ಮನ್ನು ಡಿಸ್‌ಮಿಸ್ ಮಾಡುವವರೆಗೂ ಬಿಡುವಂತಿಲ್ಲವೆಂದೂ ಮಂತ್ರಿಗಳು ಹಠಹಿಡಿದಿದ್ದಾರೆ.

ಜರ್ಮನರ ನೂತನಾಸ್ತ್ರ

ನಾಜಿಗಳ ಗುಪ್ತ ಶಸ್ತ್ರಗಳ ಬಗ್ಗೆ ಹಲವು ವಿಧದ ಊಹಾಪೋಹಗಳು ಇತ್ತೀಚೆಗೆ ಪ್ರಕಟವಾಗುತ್ತಿವೆ. ಈ ಕುರಿತು ಎಚ್ಚರಿಕೆಗಳು ಪ್ರಧಾನಿ ಚರ್ಚಿಲ್ಲರ ಹಿಂದಿನ ಭಾಷಣಗಳಲ್ಲಿಯೂ ಬಂದಿದ್ದುವು. ಸ್ವಿಸ್ ಯುದ್ಧೋತ್ಪಾದನಾಧಿಕಾರಿಗಳು ಇತ್ತೀಚೆಗ ಹೇಳಿರುವಂತೆ ಜರ್ಮನರ ಗುಪ್ತಾಸ್ತ್ರವೆಂದರೆ ಸ್ವಯಂ ಹಾರುವ 12 ಟನ್ನಿನ ಕರಟವಂತೆ. ಅದಕ್ಕಾಗಿ ವಿಶೇಷ ಗನ್ನುಗಳನ್ನು ಜರ್ಮನರು ಫ್ರೆಂಚ ಕರಾವಳಿಯಲ್ಲಿ ನಿಲ್ಲಿಸುತ್ತಿದ್ದಾರೆ. ಸದ್ಯದಲ್ಲೇ ಇಂಗ್ಲಾಂಡಿನ ಮೇಲೆ ಅವುಗಳ ಪ್ರಯೋಗವಾಗುವ ಭೀತಿಯಿದ್ದಿದೆ.

Notice.

In the Court of the District Munsiff of Mangalore.

R. E P No. 315/43.

Between—

U. Parameshwaraya- Petitioner

and

P- Sadashiva Rao- Respondent.

To

Respondent P-Sadashiva Rao, son of Deva Rao residing in Codialbail, Mangalore Town.

Whereas in the abovenamed suit the petitioner decree holder has applied for sale of immoveable property. You are hearby informed that the 29th day of December 1943 has been fixed for settling the terms of the proclamation of sale.

(By order of Court)

U. A. Mallya.

Vakil for petitioner.

Mangalore.
10th December 1943.

An opportunity please!

NAVAYUGA

is glad to announce

A BUMPER SPECIAL

ON THE OCCASION OF

PARYAYAM

the popular South Indian festival.

Here is an opportunity to advertise!

Rates of Advertisement:

1 full page Rs. 35/- ½ page Rs. 10/-
¼ page Rs. 20/- ⅛ page Rs. 5/-

Front cover page Rs. 200/- (booked)

Back cover page Rs 150/- Inside cover pages Rs. 100/- each

Date of publication 13—1—1944

ತಾ. 13—1—1944ಕ್ಕೆ ಹೊರಡುವ

ನವಯುಗದ

ಪರ್ಯಾಯ ವಿಶೇಷ ಸಂಚಿಕೆಯನ್ನು ನಿರೀಕ್ಷಿಸಿರಿ.

The Victory Club

Both Vegetarian & Non-vegetarian dishes

Old Post office Building,

VICTORY ROAD, UDIPI.

(*Furnishing:* **Homes & Estats Ltd.**)

ಅತ್ಯಾಧುನಿಕ ನಾಗರಿಕ ವ್ಯವಸ್ಥೆಯಿಂದೊಡಗೂಡಿದ ಭೋಜನ ಮತ್ತು ವಿಶ್ರಾಂತಿ ಗೃಹ.

ವಿಕ್ಟರಿ ಕ್ಲಬ್

ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿದೆ.

ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ರೋಡ್, ಉಡುಪಿ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ತಾರುಣ್ಯ

ಕೊಬ್ಬು, ವೀರ್ಯಸ್ತಂಭನೆ ಮಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು **ರಮಣಿ ವಿಲಾಸಿನಿ** ಅತ್ಯುತ್ತಮ ಔಷಧಿ.

ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ,

184 ಚೈನಾ ಬಜಾರ್ ರೋಡ್, ಮದ್ರಾಸು.

ಪುತ್ತೂರು ಏಜಂಟರು: — **ಶೈ ಫಾರ್ಮಸಿ**

ಪ್ರಕಟಣೆ.

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisserri.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ- ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮನಿಯಾರ್ಡರ್ ಮೂಲಕ ತಲುಪಿಸುವದು. ಬೇರೆಯವರ ಕೈಯಲ್ಲೂ ಕಳುಹಿಸಬೇಕೆಂದು ಪ್ರಾರ್ಥನೆ.

ಪಿ. ಯಂ. ಕುನ್ಹಿರಾಮನ್,
ಮೆನೇಜರ್,

ಸ್ಥಿತಿಗತಿ

ಗಾಂಧಿಜೀಯೊಡನೆ ಚಿಯಾಂಗರ ವಿನಂತಿ.

ಲಂಡನಿನ 'ಡೈಲಿಮೈಲ್' ಪತ್ರಿಕೆಯ ನವಡಿಲ್ಲಿಯ ಬಾತ್ಮೀದಾರನ ವರದಿಯಿದು: 'ಚಿಯಾಂಗ್ ಕೈ ಶೇಕರು ಕಾಂಗ್ರೆಸ್ ಪ್ರಮುಖರೊಡನೆ ಮಾಡಿಕೊಂಡ ವಿನಂತಿಯಲ್ಲಿ, ನೀವು ಹಿಂದೂ ಸ್ಥಾನದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಿಕೊಂಡು ಜಪಾನೀ ವಿರುದ್ಧಯುದ್ಧಕ್ಕೆ ಅನುಯಾಯಿಗಳ ಬೆಂಬಲವನ್ನು ದೊರಕಿಸಿಕೊಡಬೇಕೆಂದು ಕೇಳಿಕೊಂಡಿದ್ದಾರೆ. ಈ ವಿಜ್ಞಾಪನೆಯು ಇತ್ತೀಚೆಗೆ ಚುಂಕಿಂಗಿಗೆ ಬಂದುಹೋದ ಓರ್ವ ಹಿಂದೀ ರಾಯಭಾರಿಯ ಮೂಲಕರವಾನಿಸಲ್ಪಟ್ಟಿದೆ.' ಜನರಲಿಸಮೋರವರು ಗಾಂಧಿಜೀ ಮತ್ತು ಮಿಕ್ಕ ಕಾಂಗ್ರೆಸ್ ಪ್ರಮುಖರಿಗೆ ಈ ಸೂಚನೆಯನ್ನು ಕಳುಹಿಸಿದ್ದಾರೆ. ಅವರ ಅಭಿಪ್ರಾಯ ಹೀಗೆ: ಜಪಾನರ ವಿರುದ್ಧವಾಗಿ ದೊಡ್ಡ ಧಾಳಿಗಳನ್ನು ಮಾಡುವಾಗ, ಸಶಸ್ತ್ರ ಸೇನೆಗಳ ಹಿನ್ನಲೆಯಲ್ಲಿ ಗೃಹಸಮಸ್ಯೆಗಳು ತೊಡಕಾಗಿ ಇರಬಾರದು. ದೊಡ್ಡ ಪರಿಮಾಣದ ಧಾಳಿ ಹೂಡುವ ಮೊದಲೇ ಬರಗಾಲವನ್ನು ನಿವಾರಿಸಿಕೊಳ್ಳಬೇಕು. ಆದರೆ ಬ್ರಿಟಿಷ್ ಅಧಿಕಾರಿಗಳ ಅಭಿಪ್ರಾಯದಲ್ಲಿ ಜಪಾನರಂತೆಯೇ ಹಿಂದೀಯರನ್ನೂ ಸೋಲಿಸಿಯೇ ಗೆಲ್ಲಬೇಕೆಂದಿದೆ ಎಂಬುದು ಚಿಯಾಂಗರಿಗೆ ತಿಳಿದಿಲ್ಲವೆ?

ಅಮೆರಿ ಹೋಗುವರೇ?

ಹೊಸ ವರುಷದ ಆದಿಯಲ್ಲಿ ಪ್ರಥಮ ಬಿಡುಗಡೆ ಹೊಂದುವವರು ಮಿ. ಅಮೆರಿಯವರೆಂಬ ವಾರ್ತೆ ಲಂಡನಿನಲ್ಲಿ ಹರಡಿದೆ. ಹಾಗಾದರೆ 1944ನೇ ವರುಷವು ಭಾರತದ ಪಾಲಿಗೆ ಆಶೀರ್ವಾದದೊಡನೆಯೇ ಆರಂಭವಾದಂತಾಗುವದು. ಮಿ. ಅಮೆರಿ ಭಾರತ ಕಾರ್ಯದರ್ಶಿಸ್ಥಾನಕ್ಕೆ ರಾಜಿನಾಮೆಯಿತ್ತೊಡನೆ, ಲೋರ್ಡ್ ವೇವೆಲರು ಗಾಂಧಿಜೀ, ನೆಹರು, ಆಜಾದರನ್ನು ಬಿಡುಗಡೆ ಮಾಡುವರು; ರಾಷ್ಟ್ರೀಯ ಸರಕಾರ ಸ್ಥಾಪನೆಯ ಅಸ್ತಿವಾರವಾವುದೆಂದು ನೋಡುವರು, ಎಂದೆಲ್ಲಾ ವಾರ್ತೆ. ಮತ್ತೊಂದು ವಾರ್ತೆಯಂತೆ ವೈಸರಾಯರು ಸದ್ಯದಲ್ಲೇ ತನ್ನ ಎಗ್ಸಿಕ್ಯೂಟಿವ್ ಕೌನ್ಸಿಲನ್ನು ಸಂಪೂರ್ಣವಾಗ ಹಿಂದೀಯರಿಂದಲೇ ತುಂಬಿಸಿಕೊಳ್ಳಲಿದ್ದಾರೆ. ಸರ್. ಎ. ರಾಮಸ್ವಾಮಿ ಮುದಲಿಯಾರರು ಆರ್ಥಿಕ ಮಂತ್ರಿಯಾಗಲಿದ್ದಾರೆ. ಇಂತಹ ಬಯಲಾಸೆ ಕಟ್ಟಿಕೊಳ್ಳುವವರು, ಬ್ರಿಟಿಷ್ ಮನೋವೃತ್ತಿಯನ್ನು ಬದಲಾಯಿಸಬಲ್ಲ ಮಹತ್ವದ ಘಟನೆ ಇತ್ತೀಚೆಗೇನಾದರೂ ನಡೆದುದಿದೆಯೇ ಎಂಬುದನ್ನೇಕೆ ಶೋಧಿಸುವದಿಲ್ಲ?

ಶ್ರೀಮತಿ ಗಾಂಧಿಯವರಿಗೆ

ಮತ್ತೊಂದು ಬಾರಿ ಕಠಿಣ ಎದೆನೋವು ಕಾಣಿಸಿಕೊಂಡಿತು; ಆದರಿಂದ ಪಾರಾಗಿ ಈಗ ಸುಖದಲ್ಲಿದ್ದಾರಾದರೂ,ಅವರಪ್ರಾಯ ಮತ್ತು ದೇಹಸ್ಥಿತಿಯ ಮೇಲಿಂದ ಇನ್ನೂ ಆತುರಪಡಲು ಕಾರಣವಿದ್ದೆ,ಎಂದು ಬೊಂಬಾಯಿ ಸರಕಾರವು ತಾ. 20ರಲ್ಲಿ ಪ್ರಕಟಿಸಿದೆ. ಶ್ರೀ ದೇವದಾಸ ಗಾಂಧಿಯವರು ಪತ್ನೀಪುತ್ರರೊಡನೆ ನಿಶ್ಚಿತ ಸಮಯಕ್ಕಿಂತ ಮೂರು ದಿನ ಮುಂಚಿತವಾಗಿಯೇ ಆಗಾಖಾನ್ ಅರಮನೆಗೆ ಧಾವಿಸಿದರೆಂಬುದರಿಂದ ಪರಿಸ್ಥಿತಿಯ ವಿಷಮತೆಯನ್ನರಿಯಬಹುದು. ಶ್ರೀಮತಿ ಕಸ್ತೂರಿ ಬಾಯಂತಹ ನಿರುಪದ್ರವೀ ಮುದುಕಿಯ ಬಿಡುಗಡೆಯ ಕುರಿತು ಪಾರ್ಲಿಮೆಂಟಿನ ಲೋರ್ಡ್ಸ್ ಮತ್ತು ಕಾಮನ್ಸ್ ಸಭೆಯಲ್ಲಿ ಪ್ರಶ್ನೆ ಬಂದಾಗ ಭಾರತ ಉಪಕಾರ್ಯದರ್ಶಿ ಮತ್ತು ಕಾರ್ಯದರ್ಶಿಗಳ ಉತ್ತರ:-'ಹಿಂದೀ ಸರಕಾರವು ಆರೋಗ್ಯ ದೃಷ್ಟಿಯಿಂದ ಶ್ರೀಮತಿ ಗಾಂಧಿಯವರ ಬಿಡುಗಡೆಯನ್ನೂ ಪ್ಮೆ ಪರ್ಯಾಲೋಚಿಸಿದ್ದಿತು; ಆದರೆ ಅವರಿರುವ ಕಂಪಾಂಡಿನೊಳಗೇನೇ ಯಾವ ಕಾಲಕ್ಕೂ ಅವರ ಚಿಕಿತ್ಸೆಗೆ ಅನುಕೂಲರಾಗಿ ಹಿಂದುಸ್ಥಾನದ ಅತಿ ಮುಖ್ಯ ಹೃದಯ ತಜ್ಞರೊಬ್ಬರು, ಇರುವದರಿಂದ ಶ್ರೀಮತಿ ಕಸ್ತೂರಿ ಬಾ ಗಾಂಧಿಯನ್ನು ಅಲ್ಲಿಯೇ ಇರಗೊಡಿಸುವದು, ಅವರ ಹಿತದೃಷ್ಟಿಯಿಂದಲೇ ಅಗತ್ಯವೆಂಬ ತೀರ್ಮಾನಕ್ಕೆ ಬಂದಿದೆ'—ಎಪ್ಪತ್ತನಾಲ್ಕರ ಮುದುಕಿ ಅಂತಿಮ ಯಾತನೆಗೀಡಾದಾಗಲೂ, ಅವರನ್ನು ಜೈಲಲ್ಲೇ ಇರಗೊಡಿಸುವರೆ ಬ್ರಿಟಿಷ್ ಅಧಿಕಾರಿಗಳಿಗೆ ಕಾರಣ ದೊರೆಯುತ್ತದಲ್ಲಾ-ಇದೀಗ ಲೋಕದ ಮಹಾದ್ಭುತ!

ವೈಸರಾಯರ ಭಾಷಣ

"ಭಾರತವು ಸದಾ ಕಾಲ ನಮ್ಮ ಬೇಡಿಕೆಗಳನ್ನು ಎಂತಹ ಉತ್ಸಾಹ ಮತ್ತು ಸಹಾಯ ಬುದ್ಧಿಪೂರ್ವಕ ಮಾನ್ಯಮಾಡುತ್ತಾ ಬಂದಿದೆ ಎಂಬುದರ ಸ್ಪಷ್ಟ ನೆನಪು ನನಗಿದೆ. ಸಂಧಿಗ್ಧ ಕಾಲದಲ್ಲಿ ಮಧ್ಯಪೂರ್ವವನ್ನು ಉಳಿಸಿ ಭೂಮಧ್ಯ ಸಮುದ್ರದ 1943ರ ವಿಜಯಕ್ಕೆ ಅಸ್ತಿವಾರವನ್ನು ಹಾಕಿದುದೇ ಹಿಂದುಸ್ಥಾನದ ಸಹಾಯವೆಂಬುದಕ್ಕನುಮಾನವಿಲ್ಲ"-ಇದೇ ತಾ. 20ರಲ್ಲಿ ಕಲ್ಕತ್ತದ 'ಎಸೋಸಿಯೇಟಡ್ ಚೇಂಬರ್ಸ್ ಓಫ್ ಕಾಮರ್ಸ್'ನ ವಾರ್ಷಿಕಾಧಿವೇಶನದಲ್ಲಿ ಭಾಷಣವೀಯುತ್ತಾ ವೈಸರಾಯ ಹೇಳಿದ ಮಾತುಗಳಿವು. ಆ ಭಾಷಣದಲ್ಲಿ ವೈಸರಾಯರು ಮುಖ್ಯವಾಗಿ ದೇಶದ ಆಹಾರ ಪರಿಸ್ಥಿತಿಯ ಕುರಿತೇ ವರ್ಣಿಸಿದ್ದಾರೆ. ಬಂಗಾಳದ ಅನ್ನಾನ್ನಗತಿಕರೊಡನೆ ಸಹಾನುಭೂತಿ ಸೂಚಿಸಿ, 'ಬಂಗಾಳದ ಸಮಸ್ಯೆಯೀಗ ಬಂಗಾಳದ ಕೈಯ್ಯಲ್ಲಿಯೇ ಇದೆ' ಎಂದಿದ್ದಾರೆ. ದೇಶದ ಆಹಾರ ಸುವ್ಯವಸ್ಥೆಗಾಗಿ ಕಠಿಣ ಕಾರ್ಯ ಕೈಕೊಳ್ಳುವ ಸಿದ್ಧತೆ ತೋರಿಸಿದ್ದಾರೆ,

ರಾಜಕೀಯ ಪ್ರಸ್ತಾಪವಿಲ್ಲ!

ಕಾಂಗ್ರೆಸ್ ಪ್ರಮುಖರ ಬಿಡುಗಡೆಯ ಮೊದಲ ವಾರ್ತೆ ಇದೇ ಭಾಷಣದಲ್ಲಿ ಬರಬಹುದೆಂಬ ನಿರೀಕ್ಷೆಯಿತ್ತು. ಅದು ಸುಳ್ಳಾಗಿದೆ! "ಭಾರತದ ಸ್ವರಾಜ್ಯ ಭಾವನೆಯ ಕುರಿತು ಪೂರ್ಣ ಸಹಾನುಭೂತಿ ನನಗಿಲ್ಲದುದರಿಂದಲ್ಲ—ಯುದ್ಧಕಾಲದಲ್ಲಿ ರಾಜಕೀಯಾಭಿವೃದ್ಧಿ ಅಸಾಧ್ಯವೆಂಬ ನಂಬಿಕೆಯಿಂದ ಅಲ್ಲ-ಯುದ್ಧಾಂತ್ಯವೇ ಭಾರತದ ರಾಜಕೀಯ ಬಿಕ್ಕಟ್ಟನ್ನು ಕೂಡಲೇ ಅಂತ್ಯಗೊಳಿಸುವದೆಂಬ ವಿಶ್ವಾಸದಿಂದ ಕೂಡಾ ಅಲ್ಲ-ಮತ್ತೇಕೆಂದರೆ ಪ್ರಕೃತ ನಾನು ಆ ಕುರಿತು ಪ್ರಸ್ತಾಪಿಸಿ, ಭಾರತ ಸಮಸ್ಯಾ ನಿವಾರಣೆಯನ್ನು ಸುಗಮಗೊಳಿಸಬಲ್ಲೆನೆಂಬ ನಂಬಿಕೆ ನನಗಿಲ್ಲದುದರಿಂದ ನಾನೀಗ ಭಾರತದ ರಾಜ್ಯರಚನೆ ಅಥವಾ ರಾಜಕೀಯ ವಿಷಯಗಳ ಕುರಿತು ಏನನ್ನೂ ಹೇಳಲಾರೆ" ಎಂದು ಲೋರ್ಡ್ ವೇವೆಲರನ್ನುತ್ತಾರೆ. ನಮ್ಮ ವೈಸರಾಯರ ಈ ರಾಜಕೀಯ ಮೌನವು 'ಗಾಢಾಲೋಚನೆ' ಯೆನ್ನಬಹುದುದುದಕ್ಕಿಂತಲೂ ತುಸು ದೀರ್ಘವಾಯಿತೆನ್ನಬೇಕು! ಇದರ ಅರ್ಥವೇನು? ಸ್ಥಿತಿಗತಿಗಳ ವಿಮರ್ಶೆಗೆ ಲೋರ್ಡ್ ವೇವೆಲರಿಗೆ ಈ ವರೆಗೆ ದೊರೆತಿದ್ದ ಅವಧಿಯೇ ಸಾಕು. ಇನ್ನೂ ಅವರು ಕಾಯುತ್ತಾ ಇರಬೇಕಾದರೆ, ಲಂಡನಿನಲ್ಲಿ ಹಿಂದೀ ಧೋರಣೆ ರೂಪಾಂತರಗೊಂಡು ಒದಗಲಿದೆ, ಎಂದು ನಾವು ಖಂಡಿತವಾಗಿ ಊಹಿಸಬಹುದೆ? ಅಮೆರಿ ರದ್ದತಿ ನಿಜವಿರಬಹುವೆ? ಮಿ. ಅಮೆರಿಯವರು ಪದಚ್ಯುತರಾದೊಡನೆ ಲೋರ್ಡ್ ವೇವೆಲರು ಹಿಂದೀಯ ಬಿಕ್ಕಟ್ಟನ್ನು ಬಿಡಿಸಬಲ್ಲರೆಂಬ ಶ್ರೀ. ಕೆ. ಎಮ್. ಮುನ್ಶಿಯವರ ಅಭಿಪ್ರಾಯಕ್ಕೆ 'ಅಸ್ತು' ದೊರೆಯಬಹುದೆ?

ಯುದ್ಧಸ್ಥಿತಿ

ರಶ್ಯದ ಕೆಲವು ರಂಗಗಳಲ್ಲಿ ಜರ್ಮನರು ಇತ್ತೀಚೆಗೆ ಪ್ರಬಲಪ್ರತಿಧಾಳಿಗಳನ್ನು ಹೂಡುತ್ತಿದ್ದಾರೆ.ಮುಖ್ಯವಾಗಿ ಕೀವ್ ನಗರವನ್ನು ಪುನರಾಧೀನಪಡಿಸಿಕೊಳ್ಳದೆ ಹಿಟ್ಲರರಿಗೆ ನಿದ್ದೆಬೀಳುವಂತಿಲ್ಲವೆಂಬುದು ಖಚಿತವಾಗಿದೆ. ಇಟೆಲಿಯಲ್ಲಿಯೂ ಮಿತ್ರರ ರೋಮ್ ಧಾಳಿ ಮಂದಗತಿಯಿಂದ, ಆದರೆ ದೃಢವಾಗಿ ಸಾಗಿದೆ. ನಾಜೀ ಸೇನೆಯ ಸ್ವರಕ್ಷಣಾ ಶಕ್ತಿಯು ಅಗಾಧವಿದೆ ಎಂಬುದನ್ನು ರಶ್ಯಾ-ಇಟಲಿಗಳ ಯುದ್ಧಗಳು ಮಂದಟ್ಟುಮಾಡಿಕೊಟ್ಟಿವೆ. ಶಾಂತ ಸಮುದ್ರದಲ್ಲಿ ಮಿತ್ರ ಸೇನೆಗಳು 'ನ್ಯೂ ಬ್ರಿಟನಿನ'ದ ದ್ವೀಪಗಳಲ್ಲಿ ಇಳಿದುದು. ಕಳೆದ ವಾರದ ಹೊಸಸಾಹಸ. ಇದರಿಂದಾಗಿ ರಾಬಾಲಿನ ಮೇಲೆ ನಾಲ್ಕೂ ದಿಕ್ಕುಗಳಿಂದ ಧಾಳಿಯಾಗುವದನ್ನು ಜಾಪಾನರು ನಿರೀಕ್ಷಿಸುತ್ತಿದ್ದಾರೆ. ಜಾಪಾನಿನಲ್ಲಿ ಬಲವಾದ ಗೃಹವ್ಯವಸ್ಥೆಯಾರಂಭವಾಗಿದೆ. '1944ನೇ ಇಸವಿಯು ಅಸಹನೀಯ ಕಷ್ಟಕೊಡುವ ವರುಷ; ಆದರೆ ನಮ್ಮ ಶಕ್ತಿ, ದೃಢತೆಗಳಿಂದ ಆ ವರುಷವನ್ನೇ ವಿಜಯದ ಫಲಬರುವಂತೆ ಮಾಡಿ ಬಿಡುವೆವು.' ಎಂದು ಜ. ಟೋಜೋನ ವಿಶ್ವಾಸ.ಮಿತ್ರರ ಎಲ್ಲಾ ಪ್ರಬಲ ಯುದ್ಧ ಸನ್ನಾಹಗಳಲ್ಲಿಯೂ ಆಕ್ಸಿಸ್ ರಾಷ್ಟ್ರೀಯರು ಟೊಳ್ಳನ್ನೇ ಕಾಣುತ್ತಿದ್ದಾರೆಂಬುದನ್ನು ತಿಳಿದಿರಬೇಕು.

ನೋಟೀಸು

ಪುತ್ತೂರು ಡಿ. ಮು. ಕೋರ್ಟನಲ್ಲಿ.

R. E. P. 438/1943
in O. S. 29/35

ನೂಜಿಬೈಲು ಗೋಪಾಲಕೃಷ್ಣಯ್ಯ—ಅರ್ಜದಾರ
ಕುಕ್ಕೃಪ್ಪಗೌಡ ಕೂಡಾ — ಎದ್ರಿರು

2 ಅಂಬಕ್ಕಗೌಡ 4 ಕೃಷ್ಣಗೌಡ 5 ಸಂಕಪ್ಪಗೌಡ. ಮದನಗೌಡರ ಮಕ್ಕಳು, 2ನೇಯವ ನಿರಮೂಗ್ರಾಮ 4. 5 ನೇಯವರು ಕೊಡಗು ಜಿಲ್ಲಾ ಯದನಾಡುನಾಡು ತಾಲೂಕು ಅಬ್ಬೇತಿ ಮಂಗಲಗ್ರಾಮ — ಇವರಿಗೆ

ಮೇಲ್ಕಂಡ ಡಿಕ್ರಿಯ ಕುರಿತು ಅರ್ಜದಾರರಿಗೆ ಆದ ಪರುಭಾರೆ ಮಂಜೂರುಮಾಡಿ, ಡಿಕ್ರಿ ಪ್ರಕಾರದ ಸ್ಥಿರಾಸ್ತಿ ಏಲಂ ಪಡ್ಸಿಕ್ಕೊಳ್ಳಬೇಕು ಕೊಡಿಸಬೇಕಾಗಿ ಕೂಡಾ ಅರ್ಜದಾರನು ಮಾಡಿದ ಮೇಲ್ಕಂಡ ಅಂಮ್ಲುಜಾರಿಯು ನೋಟೀಸು ಬಗ್ಗೆ ತಾರೀಕು 28-12-1943ಕ್ಕೆ ಯಿಟ್ಟಿರುವುದರಿಂದ ಆ ಕುರಿತು ನಿಂಮ ಆಕ್ಷೇಪಣೆದ್ರೆ ಸದ್ರಿ ವ್ಯಾದೆಗೆ ಈ ಕೋರ್ಟ ಮುಂದೆ ಹಾಜರಾಗಿ ಉದಹರ್ಸಿಕೊಳ್ಳತಕ್ಕದ್ದೆಂತಲೂ ತಪ್ಪಿದ್ರೆ ನಿಂಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತೆಂತಲೂ ಕೋರ್ಟ ಹುಕುಂ ಪ್ರಕಾರ ತಿಳಿಯಪಡಿಸೋಣಾಗಿಯದೆ.

B. Narayana Baliga.
Advocate for Petitioner

Puttur
Date 13-12-1943

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ರಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು, ಬಾಟ್ಲಿ 1ರ ದರ ರೂ. 3—0—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ರಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

ಕ್ವಾಲಿಟೆ ಸಂಗ್ತಿ ಬರದಲ್ಲಿ ತಕ್ಕವಾದ ಔಷಧಿ ಚುನಾಯಿಸ್ಕಿ ರವಾನ್ನಿಬಹುದು.

ಕೆಟಲೋಗಿಗೆ ಬರಿ.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಉಡುಪಿ ಏಜಂಟರು:- **ನವಭಾರತ ಬುಕ್, ಡಿಪೊ.**

ಸೌಂದರ್ಯದ ಚೆಲುವಿಕೆಗೆ

ಕೇರಳ

ಸ್ಯಾಂಡಲ್ ವುಡ್ ಸೋಪು

SANDALWOOD SOAP

ಓರಿಯಂಟಿನ ಜಗದ್ವಿಖ್ಯಾತ ಸುವಾಸನೆ ಬೀರುವ ಗಂಧದೆಣ್ಣೆಯ ಸಾರದಿಂದ ಕೂಡಿದುದು.

ತಯಾರಿಸುವವರು: ಕೇರಳ ಸೋಪು ಇನ್ಸ್ಟಿಟ್ಯೂಟ್
ಕಲ್ಲಿಕೋಟೆ. (ಸರಕಾರೀ ಸಂಸ್ಥೆ)

K. S I-3.

ದಕ್ಷಿಣ ಕನ್ನಡ-
ಮಂಗಳೂರು.

ಮಹಾಸಭೆ-- ಎಸ್. ಆರ್. ಎಸ್. ಹೋಮಿನ ಹಳೆ ವಿದ್ಯಾರ್ಥಿ ಸಂಘದ ವರ್ಷಾವಧಿ ಮಹಾ ಸಭೆಯು ಇದೇ ತಾ. 26ನೆ ಆದಿತ್ಯವಾರ ಸಾಯಂಕಾಲ 4-30 ಘಂಟೆಗೆ ವೆಂಕಪ್ಪ ಪೊಂಪ ಹಾಲಿನಲ್ಲಿ ಜರಗುವುದೆಂದೂ ಸದ್ರಿ ಸಭೆಗೆ ಸದಸ್ಯರೆಲ್ಲರೂ ಸಕಾಲದಲ್ಲಿ ಹಾಜರಾಗಬೇಕಾಗಿಯೂ ಸಂಘದ ಜತೆ ಕಾರ್ಯದರ್ಶಿಯವರು ಅಪೇಕ್ಷಿಸುತ್ತಾರೆ.

ಡಿಸ್ಟ್ರಿಕ್ಟ್ ಬೋರ್ಡು ಸಭೆ.

ತಾ. ೧೬ರಂದು ಪ್ರಾತಃ ೧೧ ಗಂಟೆಗೆ ಡಿ. ಬೋ. ಆಫೀಸಿನಲ್ಲಿ ಅಧ್ಯಕ್ಷರಾದ ಶ್ರೀ|| ಆ ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಿಂದ ಸಭೆ ಜರಗಿತು. ಸಭಾ ಪ್ರಾರಂಭದಲ್ಲಿ ಶ್ರೀ ಸಿ. ಎಲ್. ಲೋಬೋರವರ ಸೂಚನೆಯಂತೆ ನಿಶ್ಚಿತ ಧಾರಣೆ ಬಂದೊಡನೆ ಅಕ್ಕಿಯ ಅಭಾವವುಂಟಾದ ಕುರಿತು ಠರಾವೊಂದು ಮಂಜೂರಾಯಿತು. ಆ ಮೇಲೆ ಪ್ರೆಸಿಡೆಂಟರು ೧೯೪೪-೪೫ರ ಬಜೆಟ್ ಎಸ್ಟಿಮೇಟ್ ಮತ್ತು ೧೯೪೩-೪೪ರ ರಿವೈಸ್ಡ್ ಎಸ್ಟಿಮೇಟಿನ ವಿಷಯ ಪ್ರಾರಂಭಿಕ ಮಾತನಾಡಿದರು. ಡಾ| ಪಿ. ಪಿ. ಅಬ್ರೊ, ವಿ. ಚವ್ಹಾಣ್, ಶ್ರೀಗಳಾದ ವೈ. ಮಂಜಯ್ಯ ಶೆಟ್ಟಿ, ಕೃಷ್ಣ ಶೆಟ್ಟಿ, ವೆಂಕಪ್ಪ ಶೆಟ್ಟಿ, ಜತ್ತಪ್ಪ ರೈಗಳು ಸೂಚನೆಗಳನ್ನು ತಂದು ದೀರ್ಘ ಚರ್ಚೆಯಾದ ಮೇಲೆ, ಬೋರ್ಡು ಅಧಿಕ ತೆರಿಗೆ ಹಾಕಬಾರದೆಂದೂ, ಸೆಕೆಂಡರಿ ಶಾಲೆಗಳ ೧ನೇ ತರಗತಿ ತೆಗೆಯಬಾರದೆಂದೂ ಅಗ್ರಿ ಮುಟ್ಟಿಭತ್ತೆ ಕೊಡುವ ವಿಷಯ ಸರಕಾರ ಬೋರ್ಡಿಗೆ ಗ್ರಾಂಟು ಕೊಡಬೇಕೆಂದೂ ಬಜೆಟ್ ದಾಸಾಯಿತು, ಬಂಗ್ಲೆಗಳನ್ನು ಮತ್ತು ತಡ್ಡುಗಳನ್ನು ಪ್ರೆಸಿಡೆಂಟ್, ವೈಸ್ ಪ್ರೆಸಿಡೆಂಟ್ ಬೋರ್ಡಿನ ಯಾವುದೇ ಆಫೀಸರರಿಗೆ ಉಚಿತ ಕೊಡಬಾರದೆಂಬ ಶ್ರೀ ನಾಗಣ್ಣ ಹೆಗ್ಡೆಯವರ ಠರಾವೂ, ಮದ್ರಾಸ್ ಸರಕಾರವು ಮದ್ಯಪಾನ ಕಾನೂನನ್ನು ಹಿಂತೆಗೆದ ವಿಚಾರ ನಿಷೇಧ ತೋರಿಸಿ ಪುನಃ ಆ ಕಾನೂನನ್ನು ಆ ಜಿಲ್ಲೆಗಳಲ್ಲಿ ಜಾರಿಮಾಡಬೇಕೆಂಬ ಶ್ರೀ ಜತ್ತಪ್ಪ ರೈಗಳ ಠರಾವೂ ಮಂಜೂರಾಯಿತು.

ಅಕ್ಕಿಯ ಬೆಲೆಯ ನಿಯಂತ್ರಣ.

ಮಂಗಳೂರು ನಗರ ಸಭಾ ಕ್ಷೇತ್ರದೊಳಗೆ ಅಕ್ಕಿಯ ಬೆಲೆಯ ನಿಯಂತ್ರಣವಾಗಿದೆ. ಕೆಳಗೆ ಕಾಣಿಸಿದಂತಕ್ಕಿಂತ ಹೆಚ್ಚಿನ ಬೆಲೆಯಲ್ಲಿ ವ್ಯಾಪಾರ ಮಾಡುವುದು ಕಾನೂನಿಗೆ ವಿರುದ್ಧವಾಗಿರುವುದು.

ಬೆಲೆಗಳು:- ಸುಗ್ಗಿ ರಾಶಿ ಮತ್ತು ಆ ಜಾತಿಯ ಅಕ್ಕಿ ಮುಡಿಗೆ ೧೦-೮-೦ ಸೇರಿಗೆ ೦-೪-೦ ಗುಡ್ಡು ಮುಡಿಗೆ ೧೧-೦-೦ ಸೇರಿಗೆ ೧-೪-೩ ಮಸ್ಕತಿ ಮುಡಿಗೆ ೧೧-೮-೦ ಸೇರಿಗೆ ೦-೪-೫ ಬೆಳತಿಗೆ ಸಾಮಾನ್ಯ ಮುಡಿಗೆ ೧೨-೮-೦ ಸೇರಿಗೆ ೦-೪-೯ ಉತ್ತಮ ಜಾತಿಯ ಬೆಳತಿಗೆ ಮುಡಿಗೆ ರೂ; ೧೩-೮-೦ ಸೇ.

ಇದೇ ಜಾತಿಯ ಬತ್ತಕ್ಕೂ ಬೆಲೆ ಇಳಿಸಲ್ಪಟ್ಟಿದೆ. ಪರಿಣಾಮ, ಬೆಲೆಯ ನಿಯಂತ್ರಣವಾದೊಡನೆ, ಕೆಲ ವ್ಯಾಪಾರಿಗಳು ಅಕ್ಕಿಯನ್ನು ಮರೆಯಿಸುವುದಕ್ಕೆ ಪ್ರಯತ್ನ ಪಟ್ಟರು; ಕೆಲವರು ಇರುವ ಅಕ್ಕಿಯನ್ನು ಮಾರುವುದಕ್ಕೆ ಒಪ್ಪಲಿಲ್ಲ; ಮಂಗಳೂರು ನಗರದ ಹೊರಗೆ ಹೋಗುತ್ತಿದ್ದ ಕೆಲವು ಅಕ್ಕಿ ಮುಡಿಗಳನ್ನು ಪೋಲೀಸರು ಹಿಡಿದಿದ್ದಾರೆ; ಮತ್ತು ಕೆಲ ಅಂಗಡಿಗಳಲ್ಲಿ ಅಕ್ಕಿಯನ್ನು ಮಾರುವಂತೆ ನಿರ್ಬಂಧಿಸಲಾಯಿತು.

ಅಂಗಡಿಗಳಲ್ಲಿ ಅಕ್ಕಿ ಇಲ್ಲ ಎಂಬ ಕೂಗು ಕೇಳಿ ಬಂತು. ಸರಕಾರದವರು ಕಾದಿರಿಸಿಟ್ಟ ಅಕ್ಕಿಯಲ್ಲಿ ಅಲ್ಪಾಂಶವನ್ನು ಅಲ್ಲಲ್ಲಿ 'ಸೇರುಗಟ್ಟಲೆ'ಯಾಗಿ ಬಡವರಿಗೆ ಹಂಚುವ ವ್ಯವಸ್ಥೆಯಾಗಿದೆ. ಸಹಕಾರ ಸಂಘಗಳ ಅಧಿಕಾರಿಗಳು ಈ ವಿಷಯದಲ್ಲಿ ಅತ್ಯುತ್ಸಾಹದಿಂದ ಕೆಲಸಮಾಡಿದ್ದಾರೆ.

ನಗರದೊಳಗೆ ಬೇಗನೆ ಹಸಗೆಯ ಪದ್ಧತಿ ಜಾರಿಗೆ ಬರುವುದಂತೆ; ಪ್ರತಿಯೊಬ್ಬ ವ್ಯಕ್ತಿಗೆ ಅರ್ಧಸೇರು ಅಕ್ಕಿಯ ಪ್ರಮಾಣದಲ್ಲಿ ಹಂಚಿಕೆಯಾಗುವುದು. ಈಗಲೇ ೩೪ ವ್ಯಾಪಾರದ ಕೇಂದ್ರಗಳನ್ನು ಮಂಜೂರು ಮಾಡಿದುದಾಯಿತು; ಹಸುಗೆಯ ಪತ್ರಗಳು (ration cards) ಬರೆಯಲ್ಪಡುತ್ತಾ ಇವೆ. ಎಂದು ನಾವು ವಿಚಾರಿಸಲಾಗಿ ತಿಳಿಯ ಬಂತು.

ನಗರ ಸಭಾ ಸದಸ್ಯರ:-ಸದಸ್ಯತ್ವದ ಅವಧಿಯನ್ನು ಬರುವ ನವೆಂಬರ್ ಅಂತ್ಯದ ವರೆಗೆ ಮುಂದೆಳೆಯಲಾಗಿದೆ

ಉಡುಪಿ.

ಜಿಲ್ಲಾ ಪ್ರಚಾರಾಧಿಕಾರಿಗಳ ಪರ್ಸನಲ್ ಅಸಿಸ್ಟೆಂಟ್ ಶ್ರೀ. ಬಿ. ವಿ. ರಾಮರ ಎಂ. ಎ ಎಲ್. ಟಿ. ಯವರು ಉಡುಪಿ ಕುಂದಾಪುರ ತಾಲೂಕುಗಳಲ್ಲಿ ಸಂಚರಿಸಿ ಯುದ್ಧ ಪ್ರಚಾರ ಕಾರ್ಯಮಾಡಿರುವರು.

ಕಳೆದ ವಾರದಲ್ಲಿ ರೂರಲ್ ರಿಕ್ರಿಯೇಶನ್ ಆಫೀಸರರಾದ ಶ್ರೀ. ಬಿ. ಎಂ. ಬಾಳಿಗರು ಉಡುಪಿಗೆ ಬಂದಿದ್ದು ಬ್ರಹ್ಮಾವರ, ಬಾರ್ಕೂರು, ಕಲ್ಯಾಣಪುರ, ಉದ್ಯಾವರಗಳಲ್ಲಿ ರಿಕ್ರಿಯೇಶನ್ ಕೇಂದ್ರಗಳನ್ನು ತೆರೆದಿರುತ್ತಾರೆ. ಉಡುಪಿಯಲ್ಲಿ ಮಿ. ರೋಕೀ ಫೆರ್ನಾಂಡಿಸ್ ಬಿ. ಎ ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಸಭೆಜರಗಿ ಕೇಂದ್ರವು ಸ್ಥಾಪಿಸಲ್ಪಟ್ಟಿತು.

ಭಾಷಣ:—ಮದ್ರಾಸು ಕ್ರಿಶ್ಚನ್ ಕಾಲೇಜಿನ ಕನ್ನಡ ಲೆಕ್ಚರರಾಗಿರುವ ಕೆ. ಶ್ರೀ. ನರಸಿಂಗರಾವ್ ಎಮ್. ಎ., ಎಲ್. ಟಿ. ಇವರು ಇಲ್ಲಿಗೆ ಯಾತ್ರಾರ್ಥಿಗಳಾಗಿ ಬಂದವರು ಇಲ್ಲಿಯ ಬೋರ್ಡು ಹ್ಯಾಸ್ಕೂಲಿನಲ್ಲಿ 'ಆಧುನಿಕ ಕನ್ನಡ ಸಾಹಿತ್ಯ'ದ ವಿಷಯ ಭಾಷಣವಿತ್ತರು. ಆರಂಭದಲ್ಲಿ ಭಾಷಣ ಕರ್ತರ ಪರಿಚಯವನ್ನು ಶ್ರೀ. ಕೊರಡ್ಕಲ್ಲರು ಮಾಡಿಕೊಟ್ಟರು. ಭಾಷಣಾಂತ್ಯದಲ್ಲಿ ಶ್ರೀ. ಬಿ. ವ್ಯಾಸರಾಯ ಬಲ್ಲಾಳರು ಧನ್ಯವಾದವನ್ನಿತ್ತರು.

ಸ್ಕೂಲ್ ಡೇ ಸಮಾರಂಭ- ಸ್ಥಳೀಯ ಕ್ರಿಶ್ಚಿಯನ್ ಹ್ಯಾಸ್ಕೂಲಿನ ಸ್ಕೂಲ್‌ಡೇ ಸಮಾರಂಭವು ತಾ. 18ರಲ್ಲು ಜಿಲ್ಲಾ ಎಜ್ಯುಕೇಶನಲ್ ಆಫೀಸರ್ ಶ್ರೀ ಎನ್. ಸುಬ್ಬರಾಯರ ಅಧ್ಯಕ್ಷತೆಯ ಜರಗಿತು. ಡಾ| ಟಿ. ಎಮ್. ಎ. ಪೈಗಳವರು ಪ್ರಾರ್ಥನೆಯ ಸ್ವಸ್ತಿ ವಾಚನವನ್ನು ಮಾಡಿದರು. ಶಾಲಾ ಹೆಡ್ಮಾಸ್ತರ್ ಮಿ| ಎ. ಎಸ್. ಕಾರೆಟರು ಶಾಲಾ ವರದಿಯನ್ನೋದಿದ ನಂತರ ಅಧ್ಯಕ್ಷರು ಬಹುಮಾನಗಳನ್ನು ಹಂಚಿದರು. ಶಾಲೆಯ ಚಟುವಟಿಕೆಗಳನ್ನು ಕೊಂಡಾಡಿದ ಅಧ್ಯಕ್ಷರು ವಿದ್ಯಾಭ್ಯಾಸವು ಕನ್ನಡ ಭಾಷೆಯಲ್ಲಿಯೇ ನಡೆಯುವ ಆವಶ್ಯಕತೆಯ ಕುರಿತು ಸೂಚನೆಗಳನ್ನಿತ್ತರು. ವಿವಿಧ ವಿನೋದಾವಳಿಗಳ ದೇಖಾವೆಗಳು ನಡೆದು ಸಮಾರಂಭವು ಮುಕ್ತಾಯವಾಯಿತು.

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟು ವಾರವು--ಉಡುಪಿಯಲ್ಲೂ ಆಚರಿಸಲಾಯಿತು. ಮುನಿಸಿಪಲ್ ಶಾಲಾ ಮಕ್ಕಳ ಮೆರವಣಿಗೆ, ಶಾಲಾ ಮಕ್ಕಳಿಗೆ ಸಿಹಿತಿಂಡಿ ಹಂಚೋಣ, ವಿವಿಧ ವಿನೋದ ಕಾಲಕ್ಷೇಪಗಳು, ಭಾಷಣಗಳು, ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳ ಬಗ್ಗೆ ಹಣ ಸಂಗ್ರಹ ಇತ್ಯಾದಿ ಕಾರ್ಯಕ್ರಮಗಳಿದ್ದುವು.

ಪರ್ಯಾಯ ಮಹೋತ್ಸವ:--ಶ್ರೀ ಪುತ್ತಿಗೆ ಮಠದ ಶ್ರೀ ಶ್ರೀಮತ್ಸುಧೀಂದ್ರ ತೀರ್ಥ ಶ್ರೀಪಾದಂಗಳವರು ತಮ್ಮ ಸಂಸ್ಥಾನ ಪೀಠಾಧಿಪತಿಗಳಾದ 'ವಿದ್ಯಾ ವಲ್ಲಭ' ಗುಣ ನಾಮಾಂಕಿತರಾದ ಸಜ್ಞಾನೇಂದ್ರ ತೀರ್ಥ ಶ್ರೀಪಾದಂಗಳವರೊಂದಿಗೆ ಕೃಷ್ಣಾಪ್ರಾಪ್ತವಾದ ಶ್ರೀ ಕೃಷ್ಣ ಪರ್ಯಾಯ ಪೂಜೋತ್ಸವ ಸಮಾರಂಭವನ್ನು ತಾ. 18-1-1944 ಭೌಮವಾರ ದಿನ ಪ್ರಾತಃಕಾಲ ಶುಭ ಮುಹೂರ್ತದಲ್ಲಿ ನೆರವೇರಿಸಲಿರುವರು.

ದಾನ- ಜನವರಿ ತಿಂಗಳಲ್ಲಿ ಪರ್ಯಾಯ ಪೀಠವನ್ನು ಬಿಟ್ಟುಕೊಡಲಿರುವ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀ ಪಾದಂಗಳವರು ತಾ. 17—12—1943 ರಲ್ಲಿ ಶ್ರೀ ಕೃಷ್ಣ ದೇವರ ಮಠದಲ್ಲಿ ಮಠದ ಸಿಬ್ಬಂದಿಯವರನ್ನೆಲ್ಲಾ ಕೂಡಿಸಿ ಸರ್ವರಿಗೂ ಸುಮಾರು ಸಾವಿರ ರೂಪಾಯಿ ಬೆಲೆ ಬಾಳುವ ವಸ್ತ್ರವನ್ನು ಹಂಚಿರುವುದು ಸ್ತೋತ್ರಾರ್ಹವಾಗಿದೆ. ಈ ಸಂದರ್ಭದಲ್ಲಿ ಮಠದ ಕಡೆಯಿಂದ ವಿದ್ವಾನ್ ಶ್ರೀನಿವಾಸ ಭಟ್ಟರೂ ಸಬಂಧಿಯ ಪರವಾಗಿ, ವಿದ್ವಾನ್ ಕಟ್ಟೆ ಶ್ರೀನಿವಾಸ ಆಚಾರ್ಯರೂ ಮಾತನಾಡಿದರು.- ಕೊನೆಗೆ ಭಾವಚಿತ್ರ ತೆಗೆಯಲಾಯಿತು.

ಪದವಿ ದಾನ- ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್, ಮಣಿಪಾಲ ಇದರ ಎರಡನೇ ಪದವಿದಾನ ಸಮಾರಂಭ (ಕೊನ್ವೊಕೇಶನ್)ವು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ತಾ. 2-1-1944 ನೇ ರವಿವಾರ ಅಪರಾಹ್ನ 4 ಘಂಟೆಗೆ ಜರಗುವುದು. ಶ್ರೀ| ಎ. ಬಿ ಶೆಟ್ಟರವರು ಅಭಿಭಾಷಣವನ್ನು ಈಯುವರೆ ಒಪ್ಪಿರುತ್ತಾರೆ. ವಿದ್ಯಾಭಿಮಾನಿಗಳೆಲ್ಲರೂ ದಯೆಯಿಟ್ಟು ಸದರಿ ಸಮಾರಂಭಕ್ಕೆ ಆಗಮಿಸಬೇಕಾಗಿ ಸವಿನಯವಾಗಿ ಎಕೆಡೆಮಿಯ ಚಾಲಕರು ಕೇಳಿಕೊಳ್ಳುತ್ತಾರೆ.

ಅಲ್ಲದೆ, ಅದೇ ದಿನ ಮಧ್ಯಾಹ್ನ 12 ಗಂಟೆಗೆ ಸದ್ರಿ ಎಕೆಡೆಮಿಯ ಸದಸ್ಯರ ವರ್ಷಾವಧಿ ಮಹಾಸಭೆಯೂ ಕೆನರಾ ಮ್ಯೂಚುವಲ್ ಬಿಲ್ಡಿಂಗ್ಸ್‌ನಲ್ಲಿ 1943ರ ಲೆಕ್ಕಪತ್ರಗಳ ಸ್ವೀಕರಿಸುವುದಕ್ಕೆ ಮತ್ತು ಸುಪ್ರೀಮ್ ಗವರ್ನಿಂಗ್ ಬೋರ್ಡಿಗೆ ಸದಸ್ಯರನ್ನು ಆರಿಸುವುದಕ್ಕೆ ಸೇರಲಿರುವುದು.

ಟೊಳೆ ಕಡಾವು ಏಲಂ-ಜಿಲ್ಲಾ ಬೋರ್ಡಿನ ಅಧೀನದಲ್ಲಿರುವ ಹೊಳೆಗಳ ಕಡಾವು ಏಲಂಗಳು ಮಂಗಳೂರು, ಕಾಸರಗೋಡು, ಪುತ್ತೂರು, ಉಡುಪಿ, ಕುಂದಾಪುರ, ಕಾರ್ಕಳ ತಾಲೂಕು ಕೇಂದ್ರಗಳಲ್ಲಿ ಜನವರಿ ತಾ. 6, 8, 10, 12ರಲ್ಲಿ ಅನುಕ್ರಮವಾಗಿ ಜರಗುವುವು, ಏಲಮಿಗೆ ಸಂಬಂಧಪಟ್ಟ ಹೆಚ್ಚಿನ ಮಾಹಿತಿಯನ್ನು ಆಯಾಯ ತಾಲೂಕಿನ ಎಂಜಿನಿಯರರಿಂದ ಪಡೆಯಬಹುದೆಂದು ಜಿಲ್ಲಾ ಬೋರ್ಡು ಪ್ರೆಸಿಡೆಂಟರು ತಿಳಿಸುತ್ತಾರೆ.

ಕಾರ್ಕಳ:—ಶ್ರೀ. ಕೆ. ಗೋಪಾಲ ಪ್ರಭುಗಳ ಯಶಸ್ವಿ ಸಂಚಾಲನೆಯಿಂದ ನಡೆದ ಸಿಟಿಜ್ಹನ್ಸ್ ಕಾರ್ಪರೇಶನ ಕ್ರಿಕೆಟು ಟೋರ್ನಮೆಂಟಿನ ಸಿಲ್ವರ ಕಪ್ಪನ್ನು ಪಂದ್ಯಾಟದಲ್ಲಿ ವಿಜಯಿಗಳಾದ ಕಾರ್ಕಳ ಕ್ರಿಕೆಟ್ ಕ್ಲಬ್ಬಿನವರಿಗೆ ಕೊಡುವ ಒಂದು ಸಮಾರಂಭವು ಇದೇ ತಾ 19ರಂದು ಶ್ರೀ: ವಿ. ಯಸ್. ಕುದ್ವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ಲಘು ಉಪಾಹಾರದ ಸತ್ಕಾರವು ಮುಗಿದ ಬಳಿಕ ಸಾರ್ವಜನಿಕ ಸಭೆಯು ಕೂಡಿ ಶ್ರೀಗಳಾದ ಕೆ. ಯಸ್. ಪುರಾಣಿಕ, ಕೆ. ಗೋಪಾಲ ಪ್ರಭು, ಕೆ. ಗಣಪತಿ ಶೆಣೈ, ಡಿ. ವಿ. ಭಟ್, ಯಫ್. ಎ. ಸುಕೇರ್, ಮತ್ತು ಯಚ್. ದೇವರಾಯರ ಸಂದರ್ಭೋಚಿತ ಭಾಷಣಗಳಾದುವು. ಆ ಮೇಲೆ ಸಿಲ್ವರಕಪ್ ಮತ್ತು ಕೆಲವು ಆಟಗಾರರಿಗೆ ಪದಕಗಳ ವಿತರಣೆಯಾಯಿತು, ಧನ್ಯವಾದಗಳೊಂದಿಗೆ ಕಾರ್ಯಕ್ರಮವು ಮುಗಿಯಿತು.

ಕುಂದಾಪುರ:—ಇಲ್ಲಿ ಹೊಸತಾಗಿ ಕಟ್ಟಿಸಿದ ಅಂಜುಮನ್ ಯಿಸ್ಲಾಹುಲ್ ಮುಸ್ಲಿಮೀನ ಕಟ್ಟಡದ ತೆರೆಯುವ ಸಮಾರಂಭವು ತಾ. 5-12-43ರಲ್ಲಿ ಜಿಲ್ಲಾ ಕಲೆಕ್ಟರ ಪತ್ನಿ ಬೇಗಮ್ ಸಾಹೇಬಾ ಕರಮತುಲ್ಲರವರ ಹಸ್ತದಿಂದ ತೆರೆಯಲ್ಪಟ್ಟಿತು. ಅಂದಿನ ಸಭಾಧ್ಯಕ್ಷತೆಯನ್ನು ಜಿಲ್ಲಾ ಕಲೆಕ್ಟರರಾದ ಜನಾಬ್ ಎಮ್. ಕರಮತುಲ್ಲಾ, J. C. S ಇವರು ವಹಿಸಿದ್ದರು, ಮಿ| ಡಿ. ಡಿ ಸಾತೆ I C. S. ಶ್ರೀ. ಆರೂರ್ ಲಕ್ಷ್ಮೀನಾರಾಯಣರಾವ್, ಇವರೂ, ಖಾನ್ ಸಾಹೇಬ್. ಎಚ್. ಎಸ್. ಹುಸೇನ್ ಸಾಹೇಬ್ ಬಹದ್ದೂರ್, ವಕೀಲ್ ಶ್ರೀ| ನರಸಿಂಹ ಕಾಮತರೂ ಶ್ರೀ ಅಸ್ಥ ಶ್ಯಕಾರಂತರೂ ಭಾಷಣಮಾಡಿದರು, ಸಂಗೀತಾದಿಗಳೊಂದಿಗೆ ಸಭೆ ಅಂತ್ಯವಾಯಿತು.

ಜಿಲ್ಲಾ ಕಲೆಕ್ಟರರ ಪ್ರಕಟಣೆ—ಅಕ್ಕಿ ಯಾ ಭತ್ತವನ್ನು ಜಿಲ್ಲೆಯ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ರೈಲ್ವೆ ಮೂಲಕ ಸಾಗಿಸುವುದು ನಿಷೇಧಿಸಲಾಗಿರುವುದು, ಕಲೆಕ್ಟರರಿಂದ ಪಡೆದ ಪರ್ಮಿಟ್‌ದಾರರಿಗೆ ಮಾತ್ರ ಈ ನಿರ್ಬಂಧ ಅನ್ವಯಿಸಲಾರದು, ಕಂದಾಯ ಖಾತೆಯ ಡಿಪ್ಯುಟಿ ತಹಶಿಲ್ದಾರ್ ಅಥವಾ ಡೆಪ್ಯುಟಿ ಆಫೀಸರ್ ಮೊದಲಾದ ಆಫೀಸರರು ಬರಹ ಮೂಲಕ ಅಪ್ಪಣೆಯಿತ್ತ ಪರ್ಮಿಟ್ ಪಡೆಯದ ವಿನಃ ಜಿಲ್ಲೆಯಲ್ಲಿಯ ಅಕ್ಕಿ ವ ಭತ್ತವನ್ನು ಒಂದು ತಾಲೂಕಿನಿಂದ ಇನ್ನೊಂದು ತಾಲೂಕಿಗೆ ಒಯ್ಯಲ್ಪಡುವುದು ಕಂಡುಬಂದರೆ ಅಂತಹ ಅಕ್ಕಿ ವ ಭತ್ತವನ್ನು 'ರಿಕ್ವಿಸಿಶನ್' ಮಾಡಲಾಗುವುದು, ಈ ಆಜ್ಞೆಯು ಇದೇ ತಾ. 10ರಿಂದ ಜ್ಯಾರಿಗೆ ಬಂದಿರುವುದರಿಂದ ಮಹಾ ಜನರು ಈ ಕಡೆ ನಿಗಾ ಕೊಡಬೇಕಾಗಿದೆ-

---

ಇನ್ನೂ

'ನವಯುಗ'ದ ಚಂದಾ ಹಣ ಬಾಕಿ ಇರುವವರು ಅದನ್ನು ಕೂಡಲೇ ಕಳುಹಿಸಿಕೊಡುವಂತೆ ಅಪೇಕ್ಷಿಸುತ್ತೇವೆ.

ಮೆನೇಜರ್.

THE BEST PREVENTIVE IN EPIDEMICS OF
CHOLERA
"BHUVANENDRA"
CHANDRAMAS
Will give you the best results. Try once and be satisfied with the results.
Dose: For adults:- 3 to 5 drops 2 to 3 times a day with the decoction of cloves or ajwan.
For Children: 1 to 2 drops with the said decoction.
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS Ltd.

"ಭುವನೇಂದ್ರ"
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ
ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.
ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಯ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in 1920)

Registered Office: Court Road UDIPI South Canara District,
Business Offices Udipi, Mangalore, Katapadi, Kanhangad and Kinnigoli, South Canara.

Authorised and Issued Capital: Rs 2,00,000/-
Subscribed and Paid up Capital Rs 2,00,000/-
Reserve Funds: Rs. 1,75,853/-

Short term bills are discounted for approved parties. Loans and advances are made and overdrafts granted on fairly easy terms.
Deposits are accepted at favourable rates of interest. More than twenty-three years' reliable banking Service stands to our credit.
For further particulars please call at or apply to the nearest office

Dated 31-10-1943.

ನಮ್ಮ ಸುವರ್ಣ ಮಹೋತ್ಸವ ಸಂಚಿಕೆಗೆ ದಯಮಾಡಿ ನಿಮ್ಮ ಸಹೃದಯ ಸಂದೇಶವನ್ನು ಕಳುಹಿಸಿ ಕೊಡಿರಿ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ
ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯೂಲಾರುಗಳೂ ಪ್ರಕಟವಾಗುತ್ತವೆ.
ವಾರ್ಷಿಕ ಚಂದಾ ರೂ. 1-8-0 ಮಾತ್ರ
ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. 2-8-0
ಹೆಚ್ಚಿನ ವಿಚಾರಕ್ಕೆ ಬರೆಯಿರಿ
ಬಾಲಚಂದ್ರ, ಉಡುಪಿ.

ಜನಪ್ರಿಯವಾದ ಕಿರಿಯರ ಪ್ರಪಂಚದ ಪ್ರಕಟಣೆಗಳು

ಮಧುವನ	೨	೮	೦	ರಂಗಭೂಮಿ	೦	೮	೦
ಪ್ರಕಾರಿ	೧	೧೩	೦	ಸಂಶಯ ಪಿಶಾಚಿ	೦	೮	೦
ಭಾರತೀಯ ಕತೆಗಳು	೦	೧೪	೦	ಸೇವಾಪಥ	೦	೮	೦
ನಾರೀ ಹೃದಯ	೦	೧೪	೦	ಕುಶಲವ	೦	೬	೦
ದೇಶಭಕ್ತ	೦	೧೪	೦	ಹೆಂಡತಿ ಗಂಡನ ದಾಸಿ	೦	೪	೦
ಕಾವ್ಯ ಸಾಮ್ರಾಜ್ಯ	೦	೧೦	೦	ಪುರುಷವಧು	೦	೪	೦
ಪ್ರೇಮ ವಿಜಯ	೦	೧೩	೦	ಸ್ವತಂತ್ರ ಜೀವನೋಪಾಯ	೦	೩	೦
ವ್ಯಭಿಚಾರಿಣಿ ಯಾರು	೦	೧೨	೦	ನಾಡಕತೆಗಳು	೦	೩	೦
ನಂದಾದೀಪ	೦	೧೦	೦	ಮಂದಿನ ದೈವ	೦	೩	೦
ಸನ್ಯಾಸಿಯ ಸೋಗಿನಲ್ಲಿ	೦	೮	೦	ಮಾತಿರು ಪ್ರಹಸನಗಳು	೦	೧೪	೦

ಕಿರಿಯರ ಪ್ರಪಂಚ ಉಡುಪಿ.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ** ಬೇಡಿ ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಹುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಶೂಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧ಬೇರೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.
ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ದಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕವಾಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Poonja, President & Manager — ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ನ್ಯಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ ಅಮೋಘವಾದ ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚುಕಡಿಮೆ ೪೦ ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು, ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ.ಕ**

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,
ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ : : : : ಮಂಗಳೂರು.

THE VIJAYA BANK, LTD.,

Head office: MANGALORE.

Glad to announce that a Branch of the Bank will be opened at PUTTUR, shortly.

ನಮ್ಮ ಬ್ಯಾಂಕಿನ ಶಾಖೆಯೊಂದು ಸದ್ಯವೇ ಪುತ್ತೂರಲ್ಲಿ ತೆರೆಯಲ್ಪಡುವುದು.

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.

ಸ್ಥಾಪನೆ 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. M ೨೮೭೦.

Estd. 1921 ಸ್ಥಾಪನೆ.

ತಿರಿಯರ ಪ್ರಪಂಚದ ಹೊಸ ಪ್ರಕಟಣೆ

—ಪ್ರಕಾಶ—

ಸಾಮಾಜಿಕ—ರಾಜಕೀಯ ನಾಟಕ

ಮೂಲ ಲೇಖಕರು:—ಶೇಟ್ ಗೋವಿಂದ ದಾಸ್, ಎಂ ಎಲ್. ಎ. (ಸೆಂಟ್ರಲ್)

ಅನುವಾದಕಿ ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ.

ಬೆಲೆ ರೂ 1-12-0. ಟ. ಖ. 0-1-0

ರೂ. 2ನ್ನು ಮನಿಯಾರ್ಡರ್ ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಲಾಗುವದು

ನವಭಾರತ ಪುಸ್ತಕ ಭಂಡಾರ,

ಉಡುಪಿ

ನವಯುಗ

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೧೭

FOUNDER
Sri. A. B. Shetty.

Vol 24
No. 17

NAVAYUGA— Kannada Weekly —UDIPI, S. I.

ಉಡುಪಿ • 30—12—1943 • ಮಂಗಳೂರು.

ತಿರಿಯರ ಪ್ರಪಂಚದ ಇನ್ನೊಂದು ಪ್ರಕಟಣೆ.

ಭಾರತೀಯ ಕತೆಗಳು

ಸಣ್ಣ ಕತೆಗಳ ಸಂಗ್ರಹ

ಮೂಲ ಲೇಖಕರು — ಶ್ರೀ. ಎ. ಎಸ್. ಪಂಚಾಪಕೇಶ ಐಯ್ಯರ್, ಎಂ. ಎ., ಐ ಸಿ ಎಸ್. ಬಾರ್ ಎಟ್. ಲಾ., ಎಫ್. ಆರ್ ಎಸ್. ಎಲ್.,

ಅನುವಾದಕರ — ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರು.

ಬೆಲೆ 0-11-0 ಟ. ಖ. 0-2-0

ರೂ. 1/ನ್ನು ಮನಿಯಾರ್ಡರು ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಲಾಗುವುದು.

ನವಭಾರತ ಪುಸ್ತಕ ಭಂಡಾರ,

ಉಡುಪಿ.

Is Your Scholarship Protected?

Donors of some well-known scholarships insist that their recipients should be insured to the extent of the whole scholarship amount. Why is that? Because they do not wish that, should the recipient's lives be lost their monies too should be lost. When they can easily avoid such loss, they are determined to do so. Hence their insistence on insurance.

Are not Parents too donors of scholarships to their children? Then should not they also insure them?

Is it not in the mutual interests of both parents and children to do so? It is.

Parents should insure their children to the extent of the total amount of money required for their up-keep and education or students should prevail upon their parents to do so. especially, when it is a question of higher education and larger expenditure.

The Canara Mutual Assurance Co., Ltd.,
UDIPI.

Hearty New Year Greetings

To

All our Policy-holders, Agents, Medical Examiners and well-wishers.

We look forward to continue to serve every one of our clients in the New Year and Every Year to come.

KOCHIKAR BROTHERS LTD.,

Branch Secretaries for Madras Prcy.
Chief Agents for South India.

THE BOMBAY LIFE ASSURANCE CO., LTD.

"Bombay Life" Building,
UDIPI.

Bombay, Madras, Calicut, Manglore, Bangalore, Madura, Trivandrum.

And Agencies all over South India.

ಗನೋರಿಯಾ ಪರಮಾರೋ[illegible]ಷ ರೋಗದ ಮೇಲೆ
—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಸೂಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ,ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ.—[illegible] ಫಾರ್ಮಸಿ, ದಾವಣಗೇರಿ:ದಾವಣಗೇರಿ ಪ್ರೆಸ್. [ಮಾಲಕರ ವಿಶೇಷ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ. **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**

ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda Oushadalaya, GADAG.

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೪೨ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹು ಬಹು ಅಪಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನ್ನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ತೀವ್ರನೆ ಮುಂದುವರಿದವು.

೧೯೪೦, ೪೧ರಲ್ಲಿ ಕೆನರಾ ಬೇಂಕು ೯೦ ಲಕ್ಷ ಠೇವಣಿಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣಿಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡುವರೆ ಕೋಟಿಗೆ ಏರಿದೆ. ಹಾಗೂ ತೆತ್ತ ಮೂಲಧನವು ನಾಲ್ಮಡಿಯಾಗಿದೆ

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮವಿಶ್ವಾಸದಿಂದಲೂ, ದೃಢಬುದ್ಧಿಯಿಂದಲೂ, ಯೋಗ್ಯಸೇವೆಯನ್ನು ಸಲ್ಲಿಸಿದರಿಂದಲೂ, ಇಂದಿನ ಈ ಪ್ರಗತಿಗೆ ಕಾರಣಭೂತರಾದ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಮಹತ್ವದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

CANARA BANK LIMITED.

ಕೆನರಾ ಬೇಂಕ್ ಲಿಮಿಟೆಡ್.

ಸ್ಥಾಪನೆ 1906.

> 'ನಮ್ಮ ಪ್ರತಿಪಕ್ಷೀಯರಾದ ಕಾಂಗ್ರೆಸ್, ಅಥವಾ ಹಿಂದೂ ನಾಯಕತ್ವ ಇಲ್ಲವೇ ಬ್ರಿಟಿಷ್ ಸರಕಾರಗಳಿಗೆ ನಾನು ಗೌರವ ಪೂರ್ವಕ ಕೊಡುವ ಹಿತೋಪದೇಶವೆಂದರೆ— ನಮ್ಮನ್ನು ಬಗ್ಗು ಬಡಿಯಲು ನಿಮ್ಮಿಂದಾಗದು. ಆದ್ದರಿಂದ ನಮ್ಮ ಸ್ವಕಾರ್ಯದ ತಂಟೆಗೆ ನೀವು ಬರಬೇಡಿ. ನಿಮಗೆ ಒಪ್ಪಂದಬೇಕೋ-ಗೌರವಾರ್ಹ ಒಪ್ಪಂದಕ್ಕೆ ನಾವು ಸದಾ ಸಿದ್ಧರಿದ್ದೇವೆ'
>
> —ಮಿ. ಜಿನ್ನ.

ಲೀಗ್-ಮಹಾಸಭಾ

ಹಿಂದುಸ್ಥಾನದ, ಎರಡು ವಿರುದ್ಧ ಮಹಾಸಭೆಗಳ— ಮುಸ್ಲಿಂ ಲೀಗ್ ಮತ್ತು ಹಿಂದೂ ಮಹಾಸಭೆಯ—ವಾರ್ಷಿಕಾಧಿವೇಶನಗಳು ಈ ತಿಂಗಳ ಕೊನೆಯ ಭಾಗದಲ್ಲಿ ಜರಗಿದವು. ಲೀಗಿನ 31ನೇ ಮಹಾಧಿವೇಶನವು ಕರಾಚಿಯಲ್ಲಿ ತನ್ನ ಅದ್ವಿತೀಯ ನಾಯಕ ಮಿ. ಜಿನ್ನಾರವರ ಅಧ್ಯಕ್ಷತೆಯಲ್ಲಿ ತಾ. 23ರಲ್ಲಾರಂಭವಾಗಿ ತಾ.26ರ ವರೆಗೆ ನಡೆಯಿತು. ಮಹಾಸಭೆಯ 25ನೇ ರಜತೋತ್ಸವವು ನಿಯೋಜಿತಾಧ್ಯಕ್ಷ ಶ್ರೀ. ಸಾವರ್ಕರರ ಅನಾರೋಗ್ಯದ ದೆಸೆಯಿಂದ ಡಾ। ಶ್ಯಾಮಪ್ರಸಾದ ಮುಖರ್ಜಿಯವರ ಅಧ್ಯಕ್ಷತೆಯಲ್ಲಿ ಅಮೃತಸರದಲ್ಲಿ ಆರಂಭವಾಯಿತು. ಒಮ್ಮೆ ಅದನ್ನು, ಮತ್ತೊಮ್ಮೆ ಇದನ್ನು ನೋಡುವವರಿಗೆ ಪರಸ್ಪರ ಹೋರಾಟಕ್ಕಣಿಯಾಗುತ್ತಿರುವ ಎರಡು ಸೇನಾ ಶಿಬಿರಗಳ ದೃಶ್ಯವೇ ಹೊಳೆದೀತು.

ಪಾಕಿಸ್ತಾನ್, ಯೂನೆ, ಸಿಂಧು

ಲೀಗ್ ಅಧಿವೇಶನದಲ್ಲಿ ಮುಸ್ಲಿಂ ಸ್ಫೂರ್ತಿಯ ತಾಂಡವವೇ ನಡೆದಿತ್ತು. ಪ್ರತಿನಿಧಿಗಳು ಬಹುಸಂಖ್ಯೆಯಿಂದ ಬಂದಿದ್ದರಲ್ಲದೆ 50 ಸಾವಿರ ಪ್ರೇಕ್ಷಕರು ನೆರೆದಿದ್ದರು. ಚಪ್ಪರ, ಬಾಗಿಲುಗಳ ನಿರ್ಮಾಣ, ಬಿಚ್ಚುಗತ್ತಿಯ ಸ್ವಯಂಸೇವಕ ಪಹರೆಯೊಡನೆ ಅಧ್ಯಕ್ಷರ ಆಗಮನ, ಜಿನ್ನರ ಜಯಜಯಕಾರ, ಮೇಲಾಗಿ ಇಡೀ ಸಭೆಯು ತರ್ಕ ಪ್ರತಿಸೂಚನೆಗಳಿಲ್ಲದೆ ಕ್ವಯದ್-ಇ- ಆಝಾಮರ ಏಕ ನಾಯಕತ್ವವನ್ನು-ಎಲ್ಲಾ ಠರಾವುಗಳನ್ನು—ಒಮ್ಮತದಿಂದ ಅಂಗೀಕರಿಸಿಕೊಂಡ ರೀತಿ-ಇವೆಲ್ಲವೂ 'ಹಿಟ್ಲರ್ ಓಲಗ'ವನ್ನು ನೆನಪಿಗೆ ತರುವಂತಿದ್ದವು. ಸ್ವಾಗತಾಧ್ಯಕ್ಷ ಮಿ. ಜಿ. ಎಂ. ಸಯ್ಯದರು, ಸಿಂಧು ನದಿ ಹರಿಯುವ ಪ್ರಾಂತ್ಯಗಳೆಲ್ಲಾ ಸೇರಿ ಪಾಕಿಸ್ತಾನವಾಗಬೇಕಾದ್ದರಿಂದ ಪಾಕಿಸ್ತಾನ್ ಬದಲಿಗೆ 'ಸಿಂಧು' ಎಂಬ ಹೆಸರನ್ನು ಸೂಚಿಸಿದರು. ಹೆಸರಿನ ಬಲದಿಂದಾದರೂ ಅದು ಸಿಂಧುವಾಗಲಿ, ಎಂಬ ಬಯಕೆಯೇನೋ!

ಜಿನ್ನರ ಅಧ್ಯಕ್ಷ ಭಾಷಣ

ರಣ ಕಹಳೆಯಂತಿತ್ತು. ಕಳೆದ ಏಳು ವರುಷಗಳಲ್ಲಿ ಲೀಗ್ ಬಲ ಹೊಂದಿದುದನ್ನು, ವಿಜಯ ಸಂಪಾದಿಸಿದುದನ್ನು, ಅವರು ವರ್ಣಿಸಿ, ಸರಕಾರವು ಬಂಡಾಯವೆಬ್ಬಿಸಿದ ಕಾಂಗ್ರೆಸನ್ನು ನೋಡುವಂತೆಯೇ ಲೀಗನ್ನೂ ಅನುಮಾನ ದೃಷ್ಟಿಯಿಂದ ಕಾಣುವದನ್ನು ಖಂಡಿಸಿ, ಲೋರ್ಡ್ ವೇವೆಲರು ಯಾಚಿಸಿರುವ ಸಹಕಾರ ದೊರೆಯಬೇಕಾದರೆ ಮುಸ್ಲಿಂ ಲೀಗಿನ ಬೇಡಿಕೆಯನ್ನು ಮನ್ನಿಸುವದೊಂದೇ ಉಪಾಯವೆಂದರು. ಕಾಂಗ್ರೆಸ್ ಧೋರಣೆಯ ಖಂಡನೆ ಹಿಂದುಗಳ ವರ್ತನೆಯ ತೀವ್ರ ನಿಷೇಧ ಆಹಾರ ಸಮಸ್ಯೆ-ಇವೆಲ್ಲಾ ಮಿ. ಜಿನ್ನರ ಭಾಷಣದಲ್ಲಿದ್ದುವು. ಬ್ರಿಟಿಷ್ ಸಾಮ್ರಾಜ್ಯವನ್ನು ಬರಖಾಸ್ತು ಮಾಡಲಾರೆನೆಂದ ಮಿ. ಚರ್ಚಿಲ್ಲರಿಗೆ 'ನೀವು ಬರಖಾಸ್ತು ಮಾಡಬೇಕೆಂದಿಲ್ಲ ಸ್ವೇಚ್ಛೆಯಿಂದ ಬರಖಾಸ್ತಾಗಲು ಬಿಡುವದು ವಾಸಿ; ಇಲ್ಲವಾದರೆ ನೀವಿಚ್ಛಿಸಿದರೂ, ಬೇಡವೆಂದರೂ ಆಗುವದು ಆಗಿಯೇ ತೀರುವದು' ಎಂದು ಲೀಗ್ ಅಧ್ಯಕ್ಷರ ಉತ್ತರ. ಯಾರ ಆಶ್ರಯವೂ ಇಲ್ಲದೆ ತಾವು ಪಾಕಿಸ್ತಾನ ಸಂಪಾದಿಸಿಯೇ ತೀರುವೆವೆಂದು ಜಿನ್ನರು ಒತ್ತಿ ಹೇಳಿ 'ಪಾಕಿಸ್ತಾನದಲ್ಲೇ ನಮ್ಮ ಸ್ವಾತಂತ್ರ್ಯ. ನಮ್ಮ ರಕ್ಷಣೆ, ನಮ್ಮ ಭವಿಷ್ಯವಿದೆ' ಎಂದು ಭಾಷಣ ಮುಗಿಸಿದಾಗ, ಇಡೀ ಸಭೆಯು ಕೆಲವು ಮಿನಿಟುಗಳ ತನಕ ಪ್ರಚಂಡ ಕೈಚಪ್ಪಾಳೆ ಮತ್ತು ಜಿನ್ನರ ಜಯಜಯಕಾರಗಳನ್ನೆಬ್ಬಿಸಿತು.

ಪಾಕಿಸ್ತಾನ್ ಪ್ರವರ್ತಕ ಸಮಿತಿ

ಇಡೀ ಹಿಂದುಸ್ಥಾನದ, ಮುಖ್ಯವಾಗಿ ಪಾಕಿಸ್ತಾನ್ ವಲಯದ ಮುಸಲ್ಮಾನರಲ್ಲಿ ಜಾಗ್ರತಿಕ ಸಂಘಟನೆ, ಹೋರಾಟ ಯೋಗ್ಯಯೋಧತ್ವವನ್ನು ನಿರ್ಮಿಸಬೇಕಲ್ಲದೆ ಸರಕಾರ ಮತ್ತು ಹಿಂದುಗಳನ್ನು ಪ್ರತಿಭಟಿಸಿ ಪಾಕಿಸ್ತಾನ್ ಸಿದ್ಧಿ ಹೊಂದಲು ಅಧ್ಯಕ್ಷರು 5ಕ್ಕೆ ಕಡಿಮೆಯಿರದ 7ಕ್ಕೆ ಮಿಕ್ಕದ ಸದಸ್ಯರುಳ್ಳ ಒಂದು ಸಮಿತಿಯನ್ನು ನೇಮಿಸಬೇಕೆಂಬುದೇ ಲೀಗ್ ಅಧಿವೇಶನದ ಮುಖ್ಯ ನಿರ್ಧಾರ. ಬೇರೆ ಕೆಲವು ನಿರ್ಣಯಗಳೂ ಆಗಿವೆ. ಅಲ್ಲಿಯೇ ಅ. ಭಾ. ಸಂಸ್ಥಾನಿಕ ಲೀಗ್, ಮುಸ್ಲಿಂ ಲೀಗ್, ಮಹಿಳಾ ಪರಿಷತ್ತು, ಮುಸ್ಲಿಂ ರೈಲೋದ್ಯೋಗಿ ಪರಿಷತ್ತು ಮೊದಲಾದುವುಗಳೂ ನೆರೆದಿವೆ.

ಹಿಂದೂ ಮಹಾಸಭೆ

ಅಮೃತಸರದಲ್ಲಿ ಅತಿ ವಿಜೃಂಭಣೆಯಿಂದ ತಾ. 26ರಲ್ಲಿ ಆರಂಭವಾಯಿತು. ಅಧ್ಯಕ್ಷ ಡಾ। ಮುಖರ್ಜಿಯವರ ಸ್ವಾಗತ ಸಂಭ್ರಮ, ಅಧಿವೇಶನದ ಹಿಂದೂ ಸ್ಫೂರ್ತಿ, ಇವೆಲ್ಲಾ ಅಪೂರ್ವವಿದ್ದುವು ಅಧ್ಯಕ್ಷ ಮೆರವಣಿಗೆಯಲ್ಲಿ ಖಾಕಿ ಯುನಿಫೋರ್ಮ್ ಧರಿಸಿದ 'ಮಹಾ ವೀರದಲ'ದ ಸ್ವಯಂಸೇವಕರಿರಬಾರದೆಂದು ಅಲ್ಲಿಯ ಸುಪರಿಂಟೆಂಡಂಟರು ಕೊಟ್ಟ ಆಜ್ಞೆಯನ್ನು ಉಲ್ಲಂಘಿಸಿ ಮೆರವಣಿಗೆ ಹೊರಟಾಗ ಡಿ. ಮಜಿಸ್ಟ್ರೇಟರು ಮೆರವಣಿಗೆಯ ಲೈಸೆನ್ಸನ್ನೇ ರದ್ದುಪಡಿಸಿ ನಿಲ್ಲಿಸಿದರು. ಅಧ್ಯಕ್ಷರು ತನ್ನ ಭಾಷಣದಲ್ಲಿ ಎಲ್ಲಾ ಜಾತಿ ಮತ್ತು ಧಾರ್ಮಿಕ ವಿಚಾರಗಳನ್ನು ರಾಜಕೀಯದಿಂದ ಬೇರ್ಪಡಿಸಿ ಹಾಕುವುದೇ ಸಮಸ್ಯಾ ನಿವಾರಣೆಯ ಹಾದಿಯೆಂದರು. 'ಹಿಂದುಸ್ಥಾನವು ಅಖಂಡವಾದುದು, ಅಖಂಡವಾಗಿಯೇ ಇರಬೇಕು, ಇದಕ್ಕೆ ನ್ಯೂನತೆಯುಂಟಾಗದಂತೆ ಸರ್ವಶಕ್ತಿಯಿಂದ ಕಾದಾಡುವೆವು' ಎಂದು ಎಚ್ಚರಿಸಿ ರಾಷ್ಟ್ರ ಸ್ವಾತಂತ್ರ್ಯವೇ ಮಹಾಸಭೆಯ ಧ್ಯೇಯವೆಂದು ಸ್ಪಷ್ಟೀಕರಿಸಿದರು. ಭಾಷಣವು ವಿಚಾರ, ವಿವೇಕಗಳ ಮಿಶ್ರಣದಂತಿದ್ದು ಅಮೋಘವಿತ್ತು.

> 'ಲೀಗಿನ ಕಂಟಕದಾಯೀ ಮತ್ತು ರಾಷ್ಟ್ರಘಾತುಕ ಧೋರಣೆಯಿಂದಾಗಿ ಅದರೊಡನೆ ಒಪ್ಪಂದವಸಾಧ್ಯವಾದರೂ ಭಾರತದ ಒಗ್ಗಟ್ಟು ಮತ್ತು ಸ್ವಾತಂತ್ರ್ಯಕ್ಕೊಗ್ಗುವ ಧೋರಣೆಯ ಮುಸಲ್ಮಾನರೊಡನಾಗಲೀ ಇತರ ಸಮಾಜದವರೊಡನಾಗಲೀ ನಾವು ಸಂಧಾನ ಹಸ್ತವನ್ನು ನೀಡಲು ಸದಾ ಸಿದ್ಧರು. ಕಾಂಗ್ರೆಸನ್ನು ಬಿಟ್ಟು ರಾಜಕೀಯ ತೀರ್ಮಾನ ಹೊಂದುವದಸಾಧ್ಯ'
>
> —ಡಾ। ಮುಖರ್ಜಿ.

Degrees: Books: Medicines
Free H. L. M. S, M. B. H. M. D, etc. Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp:—
Prof. Dr. N. H. Chbatbar,
Principal Indian Homeopathi Institute & Society (Govt. Regd)
P.O. MAHUVA (Kathiawar Dt. India.)

Sidha-Kalpa Kavach (Regd.)
No. 3 Rs 2. No. 2 Rs. 5 No. 1 Rs. 7 Special Rs. 10, Extra Special Rs. 17 fo ove marriage health, wealth. Ask an six questions with M. O. Re. 1/4 an get correct answers by returnpost Life reading Rs.10 No V.P.P. Send M.O. Free. pmplets.
Prof. Dr. N. H Chhatbar.
P.O. MAHUVA (Kathiawar India.)

ಸಂಹವರ್ಷಾರಂಭದಲ್ಲಿ - - - ಪರ್ಯಾಯೋತ್ಸವ ಕಾಲದಲ್ಲಿ

ವಿಶೇಷ ರೀತಿಯಿಂದ ಹೊರಡುವ

ನವಯುಗದ ಪರ್ಯಾಯ ಸಂಚಿಕೆ

ಪ್ರಸಿದ್ಧರನೇಕರ ಲೇಖನಗಳು.

ಬಣ್ಣಬಣ್ಣದ ಚಿತ್ರಗಳು!

ಜಾಹೀರಾತುದಾರರಿಗೆ ಸುವರ್ಣ ಸಂಧಿ!

ದರಗಳು:-(ಸಾಮಾನ್ಯ ಪುಟಗಳಿಗೆ)

1 ಪುಟಕ್ಕೆ ರೂ. 35. ಅರ್ಧ ಪುಟಕ್ಕೆ ರೂ. 20

ಕಾಲು ಪುಟಕ್ಕೆ ರೂ.10

ಎದುರು ಕವರು ಪುಟವನ್ನು ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ ಇವರೂ; ಒಳಗಡೆಯ ಒಂದನೆ ಕವರು ಪುಟವನ್ನು ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಇವರೂ; ಒಳಗಡೆಯ ಎರಡನೆ ಕವರು ಪುಟವನ್ನು ಕೆನರಾ ಮ್ಯೂಚುವಲ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್ ಇವರೂ ವಹಿಸಿಕೊಂಡಿದ್ದಾರೆ.

ಕೂಡಲೇ ಜಾಹೀರಾತುಗಳನ್ನು ಕಳಿಸಿರಿ.

ಮೆನೇಜರ್—ನವಯುಗ, ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—0—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

ಕ್ವಾಲಿ ಸಂಗ್ತಿ ಬರೆದಲ್ಲಿ ತಕ್ಕವಾದ ಔಷಧಿ ಚುನಾಯಿಸಿ ರವಾನಿಸಬಹುದು.

ಏಜಂಟರಿಗೆ ಬಿಂ.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಉಡುಪಿ ಏಜಂಟರು:- **ನವಭಾರತ ಬುಕ್ ಡಿಪ್ಪೊ.**



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ **ರಥಬೀದಿಯ**

ಕಲ್ಯಾಣಿ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಸ್ಥಿತಿಗತಿ

ದೇವದಾಸ ಗಾಂಧಿಯವರು

ಮಹಾತ್ಮಾಜೀಯೊಡನೆ ರಾಜಕೀಯ ಚರ್ಚೆ ನಡಿಸಿದ್ದಾರೆ; ಅವರ ಮೂಲಕ ಸಾರ್ವಜನಿಕರಿಗೊಂದು ಸಂದೇಶ ಕಳುಹಿಸುವರೆ ಗಾಂಧಿಜೀಗೆ ಸರಕಾರದ ಸಮ್ಮತಿ ದೊರೆತಿದೆ, ಎಂಬ ವಾರ್ತೆಯೊಂದು ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಶ್ರೀ ದೇವದಾಸ ಗಾಂಧಿಯವರು ತತ್ಸಂಬಂಧ ಒಂದು ಹೇಳಿಕೆ ಕೊಟ್ಟಿದ್ದಾರೆ:- "ಬೇಜವಾಬ್ದಾರಿಯ, ತುಂಟತನದ ಹಾಗೂ ನಿರಾಧಾರವಾದ ವಾರ್ತೆಯಿದು. ಮಾತೆಯ ವಿಶೇಷ ಕಾಹಿಲೆಯ ದೆಸೆಯಿಂದಾಗಿ ಪ್ರತಿಯೊಂದು ಸಲವೂ ಒಂದೊಂದು ಘಂಟೆ ಅವರನ್ನು ನೋಡುವರೆ ನನಗನುಮತಿ ದೊರೆತಿತ್ತು. ಅಧಿಕಾರಿಗಳ ಕಟ್ಟುನಿಟ್ಟಿನ ಮೇಲ್ವಿಚಾರಕತ್ವಕ್ಕೊಳಪಟ್ಟೇ ಇವೆಲ್ಲಾ ಸಂಭಾಷಣೆಗಳು ನಡೆದಿದ್ದುವು. ಸಹಜತಃ ತಂದೆಯವರೂ ಈ ಮಾತುಕತೆಗಳ ವೇಳೆ ಹಾಜರಿರುತ್ತಿದ್ದರು. ಆದರೆ ಅವರೊಡನಾಗಲೀ, ಆ ನಿರ್ಬಂಧಿತ ಶಿಬಿರದಲ್ಲಿರುವ ಯಾರೊಡನೆಯೇ ಆಗಲಿ, ಯಾವ ರಾಜಕೀಯ ವಿಷಯವನ್ನೂ ಚರ್ಚಿಸಕೂಡದೆಂದು ನನಗೆ ಸರಕಾರದ ಸ್ಪಷ್ಟ ನಿರೂಪಣೆಯಿದ್ದಿತು. ಈ ನಿರ್ಬಂಧವನ್ನು ನಿರ್ದಾಕ್ಷಿಣ್ಯವಾಗಿ ಚಲಾಯಿಸಿದ್ದುದರಿಂದ, ನಾನು ಗಾಂಧಿಯವರಿಂದ ಸಾರ್ವಜನಿಕರಿಗೆ ಅಥವಾ ಬೇರೊಬ್ಬರಿಗೆ ಸಂದೇಶ ಪಡೆಯುವ ಪ್ರಶ್ನೆಯೇ ಇಲ್ಲ."

ಈ ಹೇಳಿಕೆಯಿಂದ ಯಾರು ನಿರಾಶೆಗೊಂಡರೂ ಸುದ್ದಿ ಬ್ರಹ್ಮರು ಎದೆಕೆಡುವಂತಿಲ್ಲ-ತಂದೆ ಮತ್ತು ಮಗ ಕೈ ಕಣ್ಣುಗಳ ಸಂಜ್ಞೆಯಿಂದಲೇ ಮಾತಾಡಿಕೊಂಡಿರಲಾರರೆ?

ಬಂಗಾಳದ ಹೊಸ ಗವರ್ನರ್

ಮಧ್ಯಪೂರ್ವದ ಸ್ಥಾನ ಮಂತ್ರಿಯಾಗಿದ್ದ ಮಿ. ಆರ್. ಜಿ. ಕೇಸಿ ಇವರು ಬಂಗಾಳದ ಗವರ್ನರರಾಗಿ ನೇಮಕಹೊಂದಿದ್ದಾರೆ. ಅತಿ ಚತುರ, ಸುಪ್ರಸಿದ್ಧ ರಾಜಕೀಯ ವ್ಯಕ್ತಿಯನ್ನು ಪಡೆದುದು ಬಂಗಾಳದ ಭಾಗ್ಯವೆಂದು ಮಿ. ಅಮೆರಿ ಮತ್ತು ಬ್ರಿಟಿಷ್ ಪತ್ರಿಕೆಗಳು ಶಿಫಾರಸು ಮಾಡಿವೆ. ಆದರೆ ಕೇಸಿಯವರು ಆಸ್ಟ್ರೇಲಿಯಾದವರು ಹಿಂದೀಯರು ಬಂದು ನೆಲಸುವದನ್ನು ಬಹಿಷ್ಕರಿಸಿರುವ ದೇಶದವರು. ಸಂಚಾರಿಕರಾಗಿ ಹೋದ ಹಿಂದೀಯರಿಗೆ ಆಸ್ಟ್ರೇಲಿಯದಲ್ಲಿ ಆತಿಥ್ಯವಿದೆಯಾದರೂ, ಅಲ್ಲಿ ನೆಲೆನಿಲ್ಲುವ ಅಧಿಕಾರ ಹಿಂದೀಯರಿಗಿಲ್ಲವೇ ಇಲ್ಲ. ಈ ಯುದ್ಧದ ಮೊದಲು ಜರ್ಮನರು ಮತ್ತು ಇಟೆಲಿಯಾನರಿಗೆ ಕೂಡಾ ಇಂತಹ ಬಹಿಷ್ಕಾರವಿರಲಿಲ್ಲ. ಇಂತಹ ಭಾರತೀಯ ವಿರೋಧಿ ರಾಷ್ಟ್ರದ ಪ್ರಜೆಯೊಬ್ಬನ ಕೈಯಲ್ಲಿ ಬಂಗಾಳದ 60 ಮಿಲಿಯ ಭಾರತೀಯರ ಅದೃಷ್ಟವನ್ನಿಟ್ಟುದನ್ನು ಇಡೀ ದೇಶವು ಖಂಡಿಸಬೇಕೆಂದು ಪಂಡಿತ ಕುಂಜ್ರುಗಳನ್ನುತ್ತಾರೆ.

ಅಮೆರಿಯವರನ್ನು ಬಹುಶಃ:—"ತಮಗೆ ಅಸ್ಪೃಶ್ಯರಾಗಿರುವ ಭಾರತೀಯರ ನಡುವೆ ವಾಸಿಸಲೊಪ್ಪಿದ ಮಿ. ಕೇಸಿಯವರ ಉದಾರ ಬುದ್ಧಿಗಾಗಿ ಅವರನ್ನು ಮತ್ತಷ್ಟು ಹೊಗಳುವದು ಬೇಡವೆ?'

ಕ್ರಿಸ್‌ಮಸ್ ಸಂದೇಶಗಳು

ಜೋರ್ಜ್ ಚಕ್ರವರ್ತಿಗಳು ತನ್ನ ಕ್ರಿಸ್‌ಮಸ್ ಸಂದೇಶದಲ್ಲಿ 'ನಮ್ಮ ಜನರಲ್ಲಿ ಸ್ಫೂರ್ತಿ ಬದಲಾವಣೆಯಿಲ್ಲ. ಅಪಜಯಗಳ ವೇಳೆ ನಾವು ಎದೆಗುಂದದಂತೆಯೇ ವಿಜಯಗಳನ್ನು ಕಂಡು ಅನಗತ್ಯವಾಗಿ ಉಬ್ಬುವದೂ ಇಲ್ಲ. ಲೋಕವನ್ನು ಕವಿದ ಕಾರ್ಮೋಡಗಳೀಗ ಚದರಹತ್ತಿವೆ ಎಂದಿದ್ದಾರೆ. ಅಧ್ಯಕ್ಷ ರೂಸವೆಲ್ಟರು ಯುದ್ಧಗತಿಯು ಆ ತುದಿಯಿಂದ ಈ ತುದಿಯ ವರೆಗೂ ತಮಗನುಕೂಲವಾಗಿರುವದನ್ನು ವರ್ಣಿಸಿ, ಭಾವೀ ಜಾಗತಿಕ ವ್ಯವಸ್ಥೆಯನ್ನು ತಿಳಿಸಿ ಅಗತ್ಯ ಬಿದ್ದರೆ ಬಲ ಪ್ರಯೋಗದಿಂದ ಆಗಲೂ ಶಾಂತಿರಕ್ಷಣೆಮಾಡುವೆವೆಂಬ ಆಶ್ವಾಸನೆ ಕೊಟ್ಟಿದ್ದಾರೆ. ಪೋಪ್ ಗುರುಗಳು ಈ ವಿಷಮ ಕಾಲದಲ್ಲಿ ಬಂದ ಕ್ರಿಸ್‌ಮಸ್ ದುರದೃಷ್ಟಕ್ಕಾಗಿ ಮರುಗಿ ಶಾಂತಿ ದೊರೆಯುವಂತೆ ಎಲ್ಲರೂ ಪ್ರಾರ್ಥನೆ ನಡಿಸಬೇಕೆಂದಿದ್ದಾರೆ. ಕ್ರಿಸ್‌ಮಸ್ ದಿನದಲ್ಲಿ ಇಂಗ್ಲಾಂಡು ಜರ್ಮನಿಗಳೆರಡೂ ವಿಮಾನ ಧಾಳಿಯಿಲ್ಲದೆ ಸುಖನಿದ್ರೆಮಾಡಿವೆ.

ಆದರೆ ಮಹಾತ್ಮಾ ಕ್ರೈಸ್ತನೀಗ ಬರುತ್ತಿದ್ದರೆ ಅನ್ಯರಿಗೆ ಸಂದೇಶಕೊಡುವ ಬದಲಿಗೆ ತನ್ನ ಮೇಲೆ ತಾನೇ ಸಂದೇಹಗೊಳ್ಳುತ್ತಿದ್ದ!

ಜನರಲ್ ಈಸೆನೋವರ್

ಲಿಬಿಯಾ, ಸಿಸಿಲಿ, ಇಟೆಲಿ ಯುದ್ಧ ಪ್ರಸಿದ್ಧಿಯ ಜನರಲ್ ಈಸೆನೋವರರು ಮುಂಬರುವ ದ್ವಿತೀಯ ರಂಗದ ಸೇನಾನಿಯಾಗಿ ನೇಮಕ ಹೊಂದಿದ್ದಾರೆಂದು ಲಂಡನಿನಿಂದಲೂ ವಾಷಿಂಗ್ಟನಿನಿಂದಲೂ ಪ್ರಕಟಣೆಹೊರಟಿದೆ. ಜರ್ಮನಿಯ ಮೇಲಿನ ಆಕಾಶಧಾಳಿಯ ಅಮೇರಿಕನ್ ವಿಮಾನ ಸೇನಾನಿಯಾಗಿ ಜನರಲ್ ಕಾರ್ಲ್ ಸ್ಪಾಟ್ಜರ ನೇಮಕವಾಗಿದೆ. ಭೂಮಧ್ಯ ಸಮುದ್ರದ ಸೇನಾನಿಯಾಗಿ ಜನರಲ್ ಸರ್ ಹೆನ್ರಿ ಮೈಟ್‌ಲೆಂಡ್ ವಿಲ್ಸನ್ ಮತ್ತು ಇಟೆಲಿ ಸೇನೆಗಳ ಸರ್ವ ಸೇನಾನಿಯಾಗಿ ಜನರಲ್ ಸರ್. ಅಲೆಕ್ಝಾಂಡರರು ನೇಮಿಸಲ್ಪಟ್ಟಿದ್ದಾರೆ. ಈ ಸಂಬಂಧ ಇನ್ನೂ ನೇಮಕಗಳಾಗಲಿವೆಯೆಂದೂ ಪಶ್ಚಿಮ ಯುರೋಪಿನ ಧಾಳಿಗೆ ಅಮೇರಿಕವು ಸೇಕಡಾ 73 ರಷ್ಟು ಸೇನೆಯನ್ನೂ ಇಂಗ್ಲಾಂಡು ಉಳಿವ ಅಂಶವನ್ನೂ ಸೇರಿಸುವವೆಂದೂ ಸುದ್ದಿ. ಹವಾಮಾನದ ದೆಸೆಯಿಂದ ಬರುವ ಎಪ್ರಿಲ್‌ನೊಳಗೆ ದ್ವಿತೀಯ ರಂಗವನ್ನು ತೆರೆಯುವದಸಾಧ್ಯ ಆದರೆ ಮಾರ್ಚಿಯ ನಂತರವೂ ಬರ್ಲಿನ್ ಬೋಂಬು ಧಾಳಿಯನ್ನಾದರೂ ಸಹಿಸಿ ನಿಲ್ಲುವದು ಜರ್ಮನಿಯಿಂದ ಅಸಾಧ್ಯ ಎಂದು ಕೆಲವರ ಅಂದಾಜು. ಇತ್ತ ಆಕ್ರಮಿತ ಯುರೋಪಿನ ಕರಾವಳಿಯಲ್ಲೆಲ್ಲಾ ಹಿಟ್ಲರರು ತನ್ನ ಆಕ್ರಮಣ ವಿರೋಧೀ ಸೇನೆಯನ್ನು ಸಂಘಟನೆಗೊಳಿಸುತಿದ್ದಾರೆ.

ಅಂತೂ ದ್ವಿತೀಯ ರಂಗದ ಗುಡುಗಾಟ ಮತ್ತು ಅದರ ಗುಂಡುಹಾರಾಟಗಳ ನಡುವೆ ಮಹಾ ಸಭಾ-ಲೀಗುಗಳಿಗಿದ್ದ ಸ್ಪರ್ಧೆ ದೂರವಿದ್ದಂತೆ ಕಾಣುತ್ತದೆ!

Notice.

ದ. ಕ. ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. P. 486/43
and R. E. A. 982/43

M ಗಂಗಾಧರ ರಾವ್ ಇವರ ಪವರ್ ಒಫ್ ಎಟರ್ನಿಯಾಗಿ ಇವರ ತಾಯಿ ಎಮ್. ಕೃಷ್ಣ ಬಾಯಿ ಅರ್ಜಿದಾರ್ರು (ವಾದಿ)

ಮತ್ತು

1. ಗೌರಿ ಹೆಂಗಸು, 2. ಪಿಯಾದ್ ಪತ್ರಾಂಬು--ರೆಸ್ಪಾಂಡೆಂಟ್ರು (ಪ್ರತಿವಾದಿರು)

ಪ್ರತಿವಾದಿ—ರೆಸ್ಪಾಂಡೆಂಟ್ಸ್:-

ಮಂಗಳೂರು ತಾಲ್ಲೂಕು ಜಪ್ಪಿನ ಮೊಗ್ರು ಗ್ರಾಮದ ಕಂಕನಾಡಿಯಲ್ಲಿರುವ ಕಾಂತು ಪೂಜಾರಿ ಮಗಳು 1ನೇ ಗೌರಿ ಹೆಂಗಸು—

ಸದ್ರಿ ಮಂಗಳೂರು ತಾಲ್ಲೂಕು ಜಪ್ಪಿನ ಮೊಗ್ರು ಗ್ರಾಮದಲ್ಲಿರುವವ ಬೌತಿಸ್ ಪಿರೇರನ ವಿಧವೆ 2ನೇ ಪಿಯಾದ್ ಪತ್ರಾಂಬು ಕೂಡಾ 2 ಜನರಿಗೆ—

ಮೇಲ್ಕಂಡ ವಾದಿಯು ನಿಮ್ಮ ಮೇಲೆ O. S 83/41ರಲ್ಲಿ ಪಡ್ಡ ಡಿಕ್ರಿಯ ಅಮಲ್ದಾರಿಯಲ್ಲಿ ನಿಮ್ಮ ಬಾಬ್ತು ಸ್ಥಿರಾಸ್ತಿಗಳನ್ನು ಯೇಲಂಗೆ ಕೋರಿ ಆ ಬಾಬ್ತು ಬೇಕಾದ ಯೇಲಂ ಇಸ್ತಿಹಾರನ್ನು ಮೇಲ್ಕಂಡ ಅಮಲ್ದಾರಿಯಲ್ಲಿ ಹಾಜರು ಪಡಿಸಿರುತ್ತಾರೆ. ಮತ್ತು ಏಲಂನ ವೇಳೆ ತನಗೆ ಬಿಡ್ ಎಂಡ್ ಸೆಟ್ ಒಫ್‌ಗೆ ಪರ್ಮಿಶನ್ ಕೊಡಬೇಕೆಂದು R. E. A. 982/43ನೇ ಅರ್ಜಿಯನ್ನು ಸಹ ದಾಖಲು ಮಾಡಿರುತ್ತಾರೆ, ಸದ್ರಿ ಯೇಲಂ ಇಸ್ತಿಹಾರಿನ ಶರತ್ತುಗಳನ್ನು ನಿರ್ಣಯಿಸುವರೆಯೂ, ಅರ್ಜಿಯನ್ನು ತನಿಖೆ ಮಾಡುವರೆಯೂ ಇದೇ ಬರುವ 11-1-1944ಕ್ಕೆ ಇಟ್ಟಿರುತ್ತದೆ.

ಆದ್ದರಿಂದ ಈ ಮೂಲಕ ನಿಮಗೆ ತಿಳಿಸುವುದೇನೆಂದ್ರೆ ಸದ್ರಿ ಇಸ್ತಿಹಾರಿಗೆ ಮತ್ತು ಅರ್ಜಿಗೆ ನಿಮಗೇನಾದ್ರೂ ಆಕ್ಷೇಪಣೆಯಿರುವಲ್ಲಿ ಅದನ್ನು ನೀವು ಖುದ್ದು ಯಾ ವಕೀಲ್ ಮುಖಾಂತ್ರ ಸದ್ರಿ ತಾ. 11-1-44ರಲ್ಲು ಈ ಕೋರ್ಟಿನ ಮುಂದೆ ಹಾಜರು ಮಾಡದಿದ್ದಲ್ಲಿ ಅವುಗಳನ್ನು ನಿಮ್ಮ ಗೈರು ಹಾಜರಿನಲ್ಲಿಯೇ ತೀರ್ಮಾನಿಸಿ ಮುಂದರಿಸಲಾಗುವುದು.

Sd/- **K. B. Shanker Rao.**

Mangalore
25-12-43. } Vakil for Petr.

ನೋಟೀಸು.

ದ. ಕ. ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

R. E. A. 966/1943
in R. E. P. 462/1943

ರಾಮಣ್ಣ ಭಟ್ಟ— ಅರ್ಜಿದಾರ

ಮತ್ತು

ನೇಸ ಪೂಜಾರಿ ಕೂಡಾ ರೆಸ್ಪೋಂಡೆಂಟ್ರು.

1 ನೇಸ ಪೂಜಾರಿ-ತಿಮ್ಮ ಪೂಜಾರಿ ಮಗ. 3. ಚನ್ನಮೂಲ್ಯ--ತುಕ್ರ ಮೂಲ್ಯನ ಮಗ. ಮಂಗಳೂರು ತಾಲ್ಲೂಕು ಪುದು ಗ್ರಾಮಸ್ಥರು. ಈ ಎರಡು ಜನ ರೆಸ್ಪೋಂಡೆಂಟರಿಗೆ-

ಮೇಲಿನ ಅಮಲ್ದಾರಿಯಲ್ಲಿ ಅರ್ಜಿದಾರನು ತನ್ನ [illegible] ಡಿಕ್ರಿ ಪ್ರಕಾರ ಅದರಿಂದ [illegible] ಆಸ್ತಿಯ ಸ್ವಾಧೀನತೆಯನ್ನು ರೆಸ್ಪೋಂಡೆಂಟರ ಆಕ್ಷೇಪಣೆ ಇದ್ದರು ಶಿವಾಯಿ ತನಗೆ ಬಿಡಿಸಿಕೊಡಬೇಕೆಂದು ಮಾಡಿದ ಮೇಲಿನ ಅರ್ಜಿಯು ತಾ. 13-1-1944ಕ್ಕೆ ಇಟ್ಟಿದೆ. ಆ ದಿನ ಪೂರ್ವಾಹ್ನ 11 ಘಂಟೆ ವರೆಗೆ ಸ್ವತಃ ಯಾ ವಕೀಲ್ ಮುಖಾಂತರ ಮೇಲಿನ ಕೋರ್ಟಿನ ಮುಂದೆ ಮೇಲೆ ಹೇಳಿದ ರೆಸ್ಪೋಂಡೆಂಟರು ಹಾಜರಾಗಿ ತಮಗೆ ಹೇಳಿಕೊಳ್ಳತಕ್ಕದ್ದನ್ನು ಹೇಳಿಕೊಳ್ಳದಿದ್ದರೆ ಸದ್ರಿ ಅರ್ಜಿಯು ಅವರ ಗೈರ್ ಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು ಎಂತ ಅವರಿಗೆ ಈ ಮೂಲಕ ತಿಳಿಸಲಾಗಿದೆ.

ಮಂಗಳೂರು. } K. R. Achar,
22-12-1943 } ಅರ್ಜಿದಾರನ ಕಡೆ ವಕೀಲ್.

ಹೊಸ ವರ್ಷ! ಹೊಸ ಡೈರಿಗಳು!!

1944ನೇ ಇಸವಿಯ
ನವಭಾರತ ಪಾಕೆಟ್ ಡೈರಿ.

ಸುಭದ್ರ ಹೊದಿಕೆಯಿಂದೊಡಗೂಡಿ ನಯನ ಮನೋಹರವಾಗಿದೆ.

ದರಗಳು:

ಸಣ್ಣ ಸೈಜು (ಸಾದಾ) 1—0—0 ದೊಡ್ಡ ಸೈಜು (ಕೆಲಿಕೊ) 2—0—0
,, (ಕೆಲಿಕೊ) 1—4—0 (ಮುಚ್ಚಳದ್ದು) 1—8—0
ದೊಡ್ಡ ಸೈಜು (ಮುಚ್ಚಳದ್ದು) 2—6—0

ಎಂದಿನಂತೆ ಈ ವರ್ಷವೂ **ನವಭಾರತ ಡೈರಿ**ಗಳಿಗೆ ಬಿಳುಪು ನುಣುಪಾದ ಹೊಳಪಿನ ಕಾಗದವನ್ನೇ ಉಪಯೋಗಿಸಲಾಗಿದೆ.

ವ್ಯಾಪಾರಿಗಳಿಗೆ ಕಮಿಶನ್ ಇದೆ. ಬೇಕಾದವರು ಮುಂಗಡದೊಂದಿಗೆ

ಕೂಡಲೇ ಬರೆಯುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ.
(ರಿಜಿಸ್ಟರ್ಡ್ ಪಬ್ಲಿಶರ್ಸ್)

ನಮ್ಮ ಡೈರಿಗಳು ಸಿಗುವ ಸ್ಥಳಗಳು:

ವಿಜಯಾ ಸ್ಟೋರ್ಸ್, ಕುಂದಾಪುರ.
ಕೆನರಾ ಛಾಪಖಾನೆ, ಮಂಗಳೂರು.
ಮೆಜಿಸ್ಟಿಕ್ ಪ್ರೆಸ್, ರಥಬೀದಿ ಉಡುಪಿ.
ಎಂ. ಎಸ್. ಮಯ್ಯ, ನ್ಯೂಸ್ ಏಜಂಟ್, ಪುತ್ತೂರು.
ವೆಂಕಟೇಶಯ್ಯ & ಬ್ರದರ್ಸ್, ಶಿವಮೊಗ್ಗ.
ಟಿ. ವಿ. ಬಾಲಕೃಷ್ಣ ಶೆಣೈ & ಬ್ರದರ್ಸ್, ತೀರ್ಥಹಳ್ಳಿ.
ನೂತನ ಪುಸ್ತಕಾಲಯ, ಬಿಜಾಪುರ.
ಅನಂತ ವಾಮನ ಪೈ, ಕಾಗಲಕರ್, ಶಿರ್ಸಿ.
ಕಥಾಕುಂಜ ಗ್ರಂಥ ಭಂಡಾರ, ಬೆಳಗಾಂ.
ಯು. [illegible] 180 ಜೈನಾಬಜಾರ್, ಜಿ. ಟಿ. ಮದ್ರಾಸ್.
ಯಸ್. ಯಸ್. ಬಾಪಟ್, ಸಿರ್ಸಿ
ಆರ್. ಯನ್. ಭಟ್ಕಳ್‌ಕರ್ & ಸನ್ಸ್, ಸಿದ್ಧಾಪುರ.
ಬಡವರ ಬಂಧು ಪ್ರಿಂಟಿಂಗ್ ಪ್ರೆಸ್, ಲಿ. ಮಂಗಳೂರು.
ನವಯುಗ ಪ್ರೆಸ್, ಉಡುಪಿ.

ಇತ್ಯಾದಿ- ಇತ್ಯಾದಿ.

—ತಾರುಣ್ಯ—

ಕೊಟ್ಟು, ವೀರ್ಯಸ್ತಂಭನೆ ಮಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು **ರಮಣಿ ವಿಲಾಸಿನಿ** ಅತ್ಯುತ್ತಮ ಔಷಧಿ.

ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ,
184 ಚೈನಾ ಬಜಾರ್ ರೋಡ್, ಮದ್ರಾಸು.
ಪತ್ರಿಕಾ ಏಜಂಟರು. —ಪೈ ಫಾರ್ಮಸಿ

To Greet you

FOR THE PAST
REMEMBRANCE
FOR THE PRESENT
KIND THOUGHTS
FOR THE FUTURE
GOOD WISHES

From

The Canara Banking Corporation Limited.
(Incorporated in British India with limited Liability)
ESTD: 1906
Head Office: UDIPI.

ಉಡುಪಿ, ಗುರುವಾರ ೩೦-೧೨-೧೯೪೩

ಯುದ್ಧಗತಿ

ದ್ವಿತೀಯ ರಂಗದ ಕೂಗನ್ನು ಕೇಳಲಾರಂಭಿಸಿ ವರುಷಗಳು ಕಳೆದವು. ಈ ವರುಷಾಂತ್ಯದಲ್ಲಿ ಅದರ ತಯಾರಿಯ ವಾರ್ತೆಯನ್ನು ಕೇಳುವ ಸುಯೋಗವೊದಗಿತು. ದ್ವಿತೀಯ ರಂಗ ನಿರ್ಮಾಣ ಖಂಡಿತವೆಂದಾದುದು ಟೆಹರೀನ್ ಸಮ್ಮೇಲನದ ನಂತರವೇ. ಇನ್ನಾದರೂ ಆ ಸಂಬಂಧದ ಮಾಂದ್ಯತೆ ಗತಿ ತೊಲಗಿಲ್ಲ. ಸನ್ನಾಹದ ಸಲ್ಲಕ್ಷಣವಾಗಿ ಜನರಲ್ ಈಸೆನೋವರರು ಹೊಸರಂಗದ ಸರ್ವ ಸೇನಾಪತಿಯಾಗಿ ನೇಮಕಗೊಂಡರು. ಇನ್ನು ಅಪ್ರಕಟಿತ ಸಿದ್ಧತೆಗಳು ಭರದಿಂದ ನಡೆದಿರಬಹುದು. ಆದರೆ ಅದು ಆರಂಭವಾಗುವದೆಂದಿಗೆ? ಎಂಬ ಪ್ರಶ್ನೆಗೆ 'ಮುಂದಿನ ವಸಂತಕಾಲದಲ್ಲಿ' 'ಎಪ್ರಿಲ್ ತಿಂಗಳ ಮೊದಲು ಅದನ್ನಾರಂಭಿಸದಂತೆ ಹವಾಮಾನದ ಪ್ರತಿಬಂಧವಿದೆ' ಇತ್ಯಾದಿ ಉತ್ತರಗಳು ಕೇಳಿಬರುತ್ತಿವೆ. 'ಈವಿಳಂಬವೇಕೆ?' ಎಂಬ ಪ್ರಶ್ನೆಗೆ ಈಗ ಕೂಡಾ ಅವಕಾಶವಿದೆ. ಹೊಸರಂಗ ತೆರೆಯದಿದ್ದರೆ ರಶ್ಯಾನರಿಗುಳಿಗಾಲವಿಲ್ಲವೆಂಬ ಹೆದರಿಕೆ ಮೊದಲಿತ್ತು; ಈಗ ಆ ಭಯವನ್ನು ಕೆಂಪು ಸೇನೆ ಸ್ವಸಾಮರ್ಥ್ಯದಿಂದ ನಿವಾರಿಸಿಕೊಂಡಿದೆ. ಸನ್ನಾಹವೇ ಇಷ್ಟೊಂದು ದೀರ್ಘಕಾಲವನ್ನು ತಿಂದಿರುವಾಗ ಅದು ವಿಜಯ ಪರ್ಯವಸಾನ ಹೊಂದಲು ಇನ್ನೆಷ್ಟು ವರುಷ ತಾಗಬಹುದೋ ಎಂಬುದೇ ಸದ್ಯದ ಭೀತಿ. ಅಂದು ರಶ್ಯಕ್ಕಾಗಿ ದ್ವಿತೀಯ ರಂಗಯಾಚಿಸಿದವರು ಇಂದು ಇಡೀ ಪ್ರಪಂಚಕ್ಕಾಗಿ ಅದನ್ನು ಯಾಚಿಸುತ್ತಿದ್ದಾರೆ ಕಾರಣ' ಯುದ್ಧವಿನ್ನು ಬೆಳೆಯಬಾರದು. ಲೋಕವಿಷ್ಟರಲ್ಲೇ ಸೋತು ಸುಣ್ಣವಾಗಿದೆ ಎಂಬುದರಿಂದ ಮಾತ್ರವಲ್ಲ ದೀರ್ಘಾವಧಿ ಹೋರಾಟದಿಂದ ಹಿಟ್ಲರನ ಅನುಕೂಲತೆ, ಮಿತ್ರರಿಗಡಚಣೆ ಹೆಚ್ಚಬಹುದೆಂಬ ಕಾರಣದಿಂದಲೂ ದಿನಯಾಪನೆ ಸಲ್ಲದು. ಯಾಕೆಂದರೆ ಸ್ಟಾಲಿನ್‌ಗ್ರಾಡ್ ಹೋರಾಟದ ನಂತರ ನಾಜಿಗಳು ಕೈಕೊಂಡ ಪ್ರತಿಭಟನಾವ್ಯವಸ್ಥೆಯು ಪೂರ್ಣವಾಗುವಷ್ಟು ಅವಧಿ ಇಷ್ಟರಲ್ಲೇ ಹಿಟ್ಲರರಿಗೆ ದೊರೆತಾಗಿದೆ. ಇನ್ನೂ ಸಮಯಕೊಡುವದೆಂದರೆ ನಾಜಿಗಳ ಶಕ್ತಿ ತುಂಬಿ ತುಳುಕ ಹತ್ತುವ ವರೆಗೆ ಕಾಯುವದೆಂದೇ ಅರ್ಥ. ಈ ಚರಿತ್ರಾಪೂರ್ವ ಹೋರಾಟಕ್ಕೆ ಅವಸರವೊಂದೇ ಮುಖ್ಯವೆಂದು ಯಾರೂ ಹೇಳುವಂತಿಲ್ಲ. ಆದರೆ ಕಾಲಹರಣೆಯು ಅಪಾಯಕರವೆಂದು ಮಾತ್ರ ಹೇಳದಿರಲಾಗುವುದಿಲ್ಲ, ಇನ್ನೂ ಸಿದ್ಧತೆಯಾಗುತ್ತಿದೆ ಎಂಬ ವಾರ್ತೆ ಕೇಳುತ್ತಿರುವಾಗ ಈ ವರೆಗಾಗುತ್ತಿದ್ದುದೇನು? ಎಂದು ಪ್ರಶ್ನಿಸಬೇಕಾಗುತ್ತದೆ. ದ್ವಿತೀಯರಂಗಾರಂಭವೇ ನಾಜೀ ಪತನದ ಪ್ರಾರಂಭವನ್ನುವದಸಾಧ್ಯ. ಇಟೆಲಿ ಯುದ್ಧ ಪ್ರಾರಂಭವಾಗಿ ಕೆಲವು ತಿಂಗಳುಗಳೇ ಕಳೆದರೂ, ಅಲ್ಲಿಯ ನಾಜೀ ಪ್ರತಿಷ್ಠೆಯು ಮುಸಲಿನಿ ಸರ್ವಾಧಿಕಾರ ಕಾಲದಲ್ಲಿದ್ದಷ್ಟೇ ಇದೆ. ಇನ್ನೂ ತಿಂಕು ಮೂಲೆಯಲ್ಲಿ ಮಿತ್ರ ಸೇನೆ ಮದುವಣಗಿತ್ತಿಯ ಹೆಜ್ಜೆಯಿಡುತ್ತದೆ 'ರೋಮ್ ನಗರಕ್ಕೆಬರುವಾಗ ಎಪ್ರಿಲಿಗೂ ಬರುವೆವು' ಎಂದು ಮಿತ್ರ ಪಾಳೆಯದವರೇ ಅಂದಾಜು ಕಟ್ಟಿದ್ದಾರೆ. ಎಲ್ಲವನ್ನೂ ತೂಗಿ ನೋಡಿ, ಕಾಲ ಕಳೆಯಬಾರದೆಂಬ ತತ್ವವನ್ನು ಮರೆಯದೆ, ಎಲ್ಲಾ ಯುದ್ಧ ಮುಖಗಳನ್ನೂ ಒಂದೇ ದಿಕ್ಕಿಗೆ ತಿರುಗಿಸುವ ಮಹಾ ಯೋಜನೆಯೊಂದನ್ನು ಮಿತ್ರ ಪ್ರಮುಖರು ತಯಾರಿಸಿರುವರೆಂಬುದಕ್ಕೆ ಅಡ್ಡಿಯಿಲ್ಲ. "ಜರ್ಮನಿಯ ಪೂರ್ವ ದಿಕ್ಕಿನಲ್ಲಿ ಎಂದಿನಂತೆ ರಶ್ಯದ ಸೇನೆಯು ಕಠೋರ ಧಾಳಿಯನ್ನು ನಡೆಸುತ್ತಿರುವಾಗ, ಇತ್ತ ದಕ್ಷಿಣ ದಿಕ್ಕಿನಿಂದ ಇಟೆಲಿ ಮತ್ತು ಆಫ್ರಿಕದ ಸೇನೆಗಳು ಜರ್ಮನಿಯ ಮೇಲೆ ಒತ್ತುವಾಗ, ಬೇರೊಂದು ಕಡೆಯಿಂದ ಆಂಗ್ಲೋ ಅಮೆರಿಕಾನ ಮಹಾ ಸೇನೆಯು ಮುನ್ನುಗ್ಗಿದರೆ ಜರ್ಮನಿಯ ಮುತ್ತಿಗೆ ಸಂಪೂರ್ಣವಾಗುವದು" ಎಂದು ಅಧ್ಯಕ್ಷ ರುಷವೆಲ್ಟರನ್ನುತ್ತಾರೆ. ಆದರೆ ಇಂದಿನ ವರೆಗೆ ಇದು ನಿರೀಕ್ಷೆ ಮಾತ್ರವಾಗಿ ಉಳಿದಿದೆ. ಈ ತನಕ ಅತ್ಯಾಶಾವಾದಿಯ ನಿರೀಕ್ಷೆಯ ಕೊನೆಯ ಗುರಿಯನ್ನು ಮುಟ್ಟಿದ ಕೀರ್ತಿ ಕೆಂಪು ಸೇನೆಗೆ ಮಾತ್ರ. ಇಟೆಲಿ ಯುದ್ಧವು, ಆರಂಭದಲ್ಲಿದ್ದ ಆಶೆಯ ಕಾಲಂಶದಷ್ಟು ಕೂಡಾ ಫಲ ಕೊಟ್ಟಿಲ್ಲ. ಅಲ್ಲಿ ಮಿತ್ರ ಯೋಜನೆಯಂತೆ ಕಾರ್ಯ ಸಾಗುತ್ತಿದೆಯೋ, ನಾಜೀ ಯೋಜನೆ ಮಂಜೂರು ಪಡೆಯುತ್ತಿದೆಯೋ ಹೇಳುವದಸಾಧ್ಯ. ಇಟೆಲಿಯಲ್ಲೇ ಮಿತ್ರ ಸೇನೆಗಳನ್ನು ಆದಷ್ಟು ದೀರ್ಘಾವಧಿ ತಡೆದಿಡುವದೇ ಹಿಟ್ಲರರ ಗುರಿಯಾಗಿದ್ದರೆ ಅವರೇ ಸಫಲರಾಗಿದ್ದಾರೆ. ಮಿತ್ರ ಪಾಳಯಕ್ಕೆ ಕೊನೆಯ ವಿಜಯವೆಂಬ ಕುರಿತು ಈಗ ಸಂದೇಹವುಳಿದಿಲ್ಲ. ಆದರೆ ಅದು ಯಾವಾಗ ಆಸವಿಗೆಂಬುದನ್ನು ಊಹಿಸುವದು ಕೂಡಾ ಕಷ್ಟವಾಗಿದೆ. ಅವಧಿ ನಿರ್ಬಂಧವಿಲ್ಲದೆ ಯುದ್ಧ ಬೆಳೆಯುತ್ತಾ ಹೋದರೆ ನಾಜಿಗಳಿಗಿಂತ 'ಮೊದಲು ಲೋಕ ಸೋಲಲಿದೆ' ಎಂಬುದೇ ಈಗ ಗಮನಿಸಬೇಕಾದ ವಿಷಯ.

ದುರ್ಬೀನು

ಕೈ ಕಾಲ ನರಗಳನ್ನು ಎಣ್ಣೆ ತಿಕ್ಕಿ ಸಡಿಲುಗೊಳಿಸಬಹುದು--ಕಬ್ಬಿಣದ ಸರಳನ್ನು ಸಾಧ್ಯವೆ? ಮಾನವತ್ವವಿದ್ದವನು ವಿನಯಿಕೊಳ್ಳಲಿದಾನು--ದರ್ಪ ಜೀವಿಯೂ ಒಲಿದಾನೆ?

oo oo oo

ಬುಡುಬುಡಿಕೆಯವನು ಮುಂಡಾಸಿನ ಲ್ಲಿಟ್ಟುಕೊಳ್ಳುವ ಹಕ್ಕಿಯ ಗರಿಯೇ ಅವನ ಪಾಲಿಗೆ ಮುತ್ತಿನ ಮಾಲೆ; ಹೇಯ ಬುದ್ಧಿಯವನ ಬಾಯಿಯಿಂದ ಬರುವ ಅಶ್ಲೀಲ ಮಾತೇ ಅವನ ಪಾಲಿನ ನಾಣ್ಣುಡಿ

oo oo oo

ನೀರ ಮಡುವಿದ್ದರೆ ಮುಳುಗಬೇಕು; ನೀರ ಕೊಡವಿದ್ದರೆ ತಲೆಗೆ ಹೊಯ್ದುಕೊಂಡರಾಯಿತು. ಆಪತ್ತು ಸಂಪತ್ತುಗಳೂ ಹಾಗೇನೇ-ಅಗಾಧವಿದ್ದರೆ ಅದರಲ್ಲೇ ಮುಳುಗಿ ಹೋಗುತ್ತಾರೆ, ಅಲ್ಪವಿದ್ದರೆ ತಲೆಗೆ ಹಚ್ಚಿಕೊಳ್ಳುತ್ತಾರೆ.

oo oo oo

ತಮ್ಮ ಕೈಯ್ಯ ನರ ಕುಸಿಯುವ ವರೆಗೂ ಅನ್ಯರ ಕಾಲೊತ್ತುವದಲ್ಲ; ಸ್ವವ್ಯಕ್ತಿತ್ವಕ್ಕೆ ಭಂಗ ಬರುವ ವರೆಗೂ ಪರಸೇವೆಯಲ್ಲ.

oo oo oo

ಕವಚಿ ಬಿದ್ದ ಕಾರನ್ನು ಓಪೇರಿ ಮಾಡಬೇಕು ಹೊರತು, ಆ ಕಣಿವೆಯನ್ನು ಮುಚ್ಚಿ ತೃಪ್ತಿ ಹೊಂದಿದರಾಗುವದಿಲ್ಲ; ಪರಾಭವಗೊಂಡವನು ತನ್ನನ್ನು ತಾನು ಸುಧಾರಿಸಿಕೊಳ್ಳಬೇಕು ಹೊರತು, ಪರಾಭವಗೊಳಿಸಿದವನ ಮುಯ್ಯಿ ತೀರಿಸಿ ತೃಪ್ತಿ ಕೊಂದಬಾರದು.

: ಕನ್ನಡ ಸಾಹಿತ್ಯ ಸಮ್ಮೇಲನ :

ಇದೇ ತಾ. 26ರಲ್ಲಿ ಶಿವಮೊಗ್ಗದಲ್ಲಿ ಕನ್ನಡ ಸಾಹಿತ್ಯ ಸಮ್ಮೇಲನದ 27ನೇ ಅಧಿವೇಶನವು ಶ್ರೀಮಾನ್ ದ. ರಾ. ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಅಧ್ಯಕ್ಷರ ಮೆರವಣಿಗೆ, ಸಭಾಸಂಭ್ರಮಗಳು ಅಭೂತಪೂರ್ವವಿದ್ದವು. ಶ್ರೀ. ಹಸೂಡಿ ವೆಂಕಟೇಶ ಶಾಸ್ತ್ರಿಗಳು ತಮ್ಮ ಸ್ವಾಗತ ಭಾಷಣದಲ್ಲಿ ಶಿವಮೊಗ್ಗೆಯ ಪೂರ್ವೇತಿಹಾಸವನ್ನು ವಿವರಿಸಿ, ಕನ್ನಡ ಪ್ರಾಂತ್ಯ, ವಿಶ್ವವಿದ್ಯಾಲಯಗಳ ನಿರ್ಮಾಣದ ಆವಶ್ಯಕತೆಯನ್ನು ಒತ್ತಿ ಹೇಳಿದರು.

ಅಧ್ಯಕ್ಷ ಕವಿ ಬೇಂದ್ರೆಯವರ ಭಾಷಣವು ಅಮೋಘವಿದ್ದಿತು. ಕನ್ನಡಿಗರ ಮುಂದಿನ ಹಾದಿಯನ್ನು ತೋರಿಸುವ ತೋರ್ಗಂಭದ ಸ್ವಚ್ಛ ಲಿಪಿಯಂತೆ, ಕನ್ನಡ ಪುನರುತ್ಥಾನದ ರೀತಿನೀತಿಗಳು ಮನಮೋಹಿಸುವ ಸಾಹಿತಿಕ ಭಾಷೆಯಲ್ಲೇ ಬಂದಿದ್ದುವು. "ನಮಗೆ ಮೂರು ಏಕೀಕರಣಗಳು ಬೇಕು— ಕನ್ನಡದ ಏಕೀಕರಣ, ಕನ್ನಡಿಗರ ಏಕೀಕರಣ, ಕರ್ನಾಟಕದ ಏಕೀಕರಣ. ನಮ್ಮ ಮಾತೇ ಮನಸ್ಸಿನಲ್ಲಿ ನೆಲೆಯೂರಿದೆ ಎನ್ನುವಂತಾಗಬೇಕಾದರೆ ಹೊಸ ಕನ್ನಡವು ಹೊಸ ಹಾದಿಯನ್ನು ಹಾಕಬೇಕು. ಕರ್ನಾಟಕದ ಮಟ್ಟಿಗೆ ಕನ್ನಡವೇ ಸಾರ್ವಭೌಮವೆಂಬದನ್ನು ನಾವು ಆಚರಣೆಗೆ ತಂದಿದ್ದರೆ ಕಟ್ಟೆಯಿಲ್ಲದ ಕೆರೆಯಂತೆ, ದಂಡೆಯೊಡೆದ ನದಿಯಂತೆ ಕನ್ನಡವು ಹುಚ್ಚು ಹೊಳೆಯಾದೀತು. ಕನ್ನಡದ ಮನೆಯಲ್ಲಿ ಕನ್ನಡಿತಿ ಯಜಮಾನಿ, ಮಿಕ್ಕ ಹೆಂಗಸರೆಲ್ಲ ಒಕ್ಕಲಷ್ಟೇ ಎಂಬುದರ ನಿಜವನ್ನರಿತರೆ ಎಲ್ಲರಿಗೂ ಸುಖವಾದೀತು." ಎಂದು ಬೇಂದ್ರೆವಾಣಿ.

FORM No. 13.

Notice of Publication Central Ward Town Planning draft Scheme.

(Under rule 43 of the Madras Town Planning Rules 1933).

It is hereby notified that the Central Ward Town Planning draft scheme prepared dy the Municipal Council for the area described in the schedule below has been published on the Notice Bord of the Municipal Office on 24-12-1943.

2 The scheme in full, together with all enclosures, maps, may be inspected free of cost during office hours at the Municipal Office. Copies of the scheme are available at the Municipal Office at the following price.

Scheme ... ... Rs. 1—0—0

3. Any person affected by the said scheme may before 1st March 1944 communicate-in writing to the Commissioner, any objection or suggestion relating thereto.

Boundaries. Schedule.

North:—	S. Nos 106,109 of Mudanidambur village and S. No. 114 of Shivalli village.
South:—	S. Nos. 112,111,110/B of Shivalli village and 149 of Mudanidambur village.
West:—	S No. 122,100,101 and 103 of Mudanidambur village.
East:—	S Nos. 114 and 103 of Shivalli Village.

Municipal Office, Udipi.
Dated 24 12-1943.
PSS—24/12—P.

K. Ramanunni Nayar, B. A
Commissioner.

ಸುದ್ದಿ ಸೂಚನೆ.

ರಶ್ಯದಲ್ಲಿ

ಕೆಂಪುಸೇನೆ ದೃಢವಾಗಿ ಮುಂದೊತ್ತುತ್ತಲೇ ಇದೆ. ಬಾಲ್ಟಿಕ್ ಸಂಸ್ಥಾನಗಳ ಹಾದಿಯಲ್ಲಡ್ಡವಾಗಿರುವ ವಿಟೆಬ್ಸ್ಕ ನಗರವನ್ನವರು ಸಂಪೂರ್ಣ ಸುತ್ತುಗಟ್ಟಿದರು. ಕಳೆದ ೨ ವಾರಗಳಿಂದ ಕೀವ್ ವಲಯದಲ್ಲಿ ಪ್ರಬಲ ಧಾಳಿಗಳನ್ನುಹೂಡುತ್ತಿದ್ದ ಜರ್ಮನರು ಈಗ ಅಲ್ಲಿಯ ಕೊರೆಸ್ಟನ್ ವಿಭಾಗದಲ್ಲಿ ಮಾತ್ರವೇ ಧಾಳಿ ನಡಿಸುತ್ತಿದ್ದಾರೆ. ಕೀವ್ ಪುನರಾಧೀನತೆಯ ಜರ್ಮನರ ಪ್ರಯತ್ನದಲ್ಲಿ ಪ್ರಬಲ ಹೋರಾಟವುಂಟಾದಂತೆ ಕಂಡುಬರುತ್ತದೆ. ಅಂತೂ ರಶ್ಯಾನರ ಪ್ರಗತಿಯನ್ನು ತಡೆಯಲು ಜರ್ಮನರೀಗ ಪ್ರೈಬಿಟ್ಟು, ಸರ್ವಶಕ್ತಿಯನ್ನು ಪ್ರಯೋಗಿಸಿ ಹೋರಾಡಿಯೂ ವಿಫಲರಾಗಿರುವರೆಂಬುದು ಗೋಚರಿಸುತ್ತದೆ.

ಇಟಲಿಯಲ್ಲಿ

ರೋಮಿನ ಕಡೆಗೆ ಮುಂದೊತ್ತಿದ ಎಂಟನೇ ಮತ್ತು ಐದನೇ ಸೇನೆಗಳು ಜರ್ಮನರ ಪ್ರಬಲ ಪ್ರತಿಭಟನೆಯಿದಿರು ಹೆಜ್ಜೆ ಹಿಂದಿಕ್ಕದೆ ಸಾವಧಾನವಾಗಿಯಾದರೂ ಮುಂದೆ ಚಲಿಸುತ್ತಿರುವದೇ ವಿಶೇಷವೆನ್ನಬೇಕು. ಪೆಸ್ಕಾರಾದ ಸಮೀಪದ ಇಟಾಲಿಯನ್ ಬಂದರ ಒರ್ಟೋನವು 8ನೇ ದಲದ ವಶವಾಗಿದೆ. ಹೋರಾಟವು ಅತಿ ಬಿರುಸಾಗಿ ಸಾಗಿದೆ.

ನೋಟೀಸು.

ದಕ್ಷಿಣ ಕನ್ನಡ ಜಿಲ್ಲಾ ಕಾರ್ಕಳ ತಾಲೂಕು ನಂದಳ್ಕೆ ಗ್ರಾಮದ ಏರ್ಬೆಟ್ಟಿನಲ್ಲಿರುವ ಮಥ್ಯಾಸ್ ಬಬೋರ್ಜರ ಹೆಂಡ್ತಿ, ದಿವಂಗತ ಇನ್ನಸ ನಜ್ರೇತಬಾಯಿಯು, ನಂಬ್ರ 1059ನೇ ಶಿರ್ವ ಕೆಥೋಲಿಕ್ ಕೋಓಪರೇಟಿವ್ ಸೊಸೈಟಿಯಲ್ಲಿ ಇದ್ದ ತನ್ನ ನಂಬ್ರ 83ನೇ ಮತ್ತು 110ನೇ ನಿರಖು ಠೇವಣಾತಿಗಳನ್ನು ತನ್ನ ಕಾಲಾನಂತರ ತನ್ನ ಗಂಡ ಮಥ್ಯಾಸ್ ಬಬೋರ್ಜಗೆ ಪಾವತಿ ಮಾಡಬೇಕೆಂಬದಾಗಿ ನೇಮಕ ಪತ್ರವನ್ನು ಬರೆದುಕೊಟ್ಟು ಮೃತಪಟ್ಟಿರುತ್ತಾಳೆ. ಸದ್ರಿ ಮಥ್ಯಾಸ್ ಬಬೋರ್ಜರೂ ನಿಸ್ಸಂತತಿಯಾಗಿ ಈಗ ಮೃತಪಟ್ಟಿರುವುದರಿಂದ ಮೇಲ್ಕಾಣಿಸಿದ ಠೇವಣಿಗೆ ತಾವೇ ಹಕ್ಕುದಾರರೆಂದೂ, ಸದ್ರಿ ಹಣಗಳನ್ನು ತಮ್ಮ ಪರವಾಗಿ ಶಿರ್ವ ಇಗರ್ಜಿಯ ವಿಕಾರರಾದ ವೆರಿ. ರೆ.ಫಾ.ಎಚ್. ಗೊನ್ಸಾಲ್ವಿಸರಿಗೆ ಪಾವತಿಮಾಡಬೇಕೆಂದು ಜಾಕೆ ಬಬೋರ್ಜ, ಲಗತ ಮೆಂದೋನ್ಸಬಾಯಿ, ಸೆಫ್ರಿನ ಬಬೋರ್ಜಬಾಯಿ, ಎಸ್ತೆರ್ ಮೋತಿಬಾಯಿ ಕೂಡಾ ನಾಲ್ಕು ಜನರು ಏಕಸ್ಥರಾಗಿ ಸಂಘಕ್ಕೆ ಅರ್ಜಿ ಮಾಡಿರುತ್ತಾರೆ. ಆದುದರಿಂದ ಈ ಮೂಲಕ ತಿಳಿಯ ಪಡಿಸುವುದೇನೆಂದರೆ, ಮೇಲ್ಕಾಣಿಸಿದ ಠೇವಣಿಗೆ ಠೇವಣಾತಿದಾರರ ಇತರ ವಾರೀಸುದಾರರು ಯಾರಾದರೂ ಇರುವುದಾದರೆ ಇಂದಿನಿಂದ 8 ದಿನಗಳ ಒಳಗೆ ಸಂಘಕ್ಕೆ ಅರ್ಜಿಮಾಡತಕ್ಕದ್ದು. ಅನಂತರ ಬಂದ ಅರ್ಜಿಗಳಿಗೆ ನಿಗಾಕೊಡಲಿಕ್ಕಿಲ್ಲ. ತಿಳಿದಿರುವುದು.

C. L. Nazareth.
Secretary.

ಶಿರ್ವ }
29-12-43 }

ದ್ವಿತೀಯ ರಂಗದ ಸಿದ್ಧತೆ

ಭರದಿಂದ ನಡೆಯುವಂತಿಗೆ ಜನರಲ್ ಈ ಸೆನ್ಹೋವರರ ನೇಮಕದಿಂದ ಆಂಗ್ಲೋ ಅಮೇರಿಕಾನರಂತೆಯೇ ರಶ್ಯಾನರೂ ತೃಪ್ತಿಗೊಂಡಿದ್ದಾರೆ. ಮೋಸ್ಕೋ ರೇಡಿಯೋದ ವಿಮರ್ಶಕನು '1914 ಜರ್ಮನರ ಅದೃಷ್ಟ ನಿರ್ಣಯಮಾಡಲಿದೆ ಮೂರು ಮಿತ್ರ ರಾಷ್ಟ್ರಗಳಿಂದ ಬೀಳುವ ಹೊಡೆತವನ್ನು ಸಹಿಸಿ ನಿಲ್ಲುವ ಶಕ್ತಿ ಜರ್ಮನರಲ್ಲಿಲ್ಲ. ಕೋಟೆಕೊತ್ತಳಗಳಿಂದು ಕರೆಯಲ್ಪಡುವ ಯಾವುದೂ ಜರ್ಮನ್ ಸೇನೆಯನ್ನು ಪರಾಭವದಿಂದ ಪಾರುಮಾಡುವಂತಿಲ್ಲ. ಫೇಸಿಸ್ಟ್ ಸೇನೆಯು ವಿನಾಶದ ದಡದಲ್ಲಿದೆ' ಎಂದು ಘೋಷಿಸಿದ್ದಾನೆ.

ಔಷಧಗಳು

ನಮ್ಮಲ್ಲಿ ಕಟಪಾಡಿಯ ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡಿನ ಜನಪ್ರಿಯವಾದ ಔಷಧಗಳು, ಮಂಗಳೂರಿನ ಗಣಪಯ್ಯ ಎಂಡ್ ಸನ್ಸರವರ ಪ್ರಸಿದ್ಧ ಔಷಧಗಳೂ, ಕುಂಜಾಲಿನ ಸ್ವದೇಶಿ ಔಷಧ ಭಂಡಾರದ ಜನಾದರಣೀಯ ಔಷಧಗಳೂ ಸಿಗುತ್ತವೆ.

ನವಭಾರತ ಪುಸ್ತಕ ಭಂಡಾರ,
ಸಂತೆಕಟ್ಟೆ : : ಉಡುಪಿ

ಶ್ರೀಕೃಷ್ಣ ಪರ್ಯಾಯ ಪ್ರಕಾಶಿನಿ

ಮಾಸ ಪತ್ರಿಕೆ

೧, ೨ನೆಯ ಸಂಪುಟಗಳು ಬೇಕಾದವರು ಕೂಡಲೇ ಬರೆಯುವುದು. ಕೆಲವೇ ಪ್ರತಿಗಳು ದೊರೆಯುತ್ತವೆ.

ಮೆನೇಜರ್,
ಶ್ರೀಕೃಷ್ಣಾಪುರ ಮಠ,
ಉಡುಪಿ.

3ನೇ ಸಂಪುಟವು ಜನವರಿಯಿಂದ ಆರಂಭವಾಗುವುದು. ಚಂದಾದಾರರಾಗುವವರಿಗೆ ಸುಸಂದರ್ಭ!

ಮೆನೇಜರ್,
ಶ್ರೀಕೃಷ್ಣ ಪರ್ಯಾಯ ಪ್ರಕಾಶಿನಿ,
ಸಂತೆಕಟ್ಟೆ, ಉಡುಪಿ

Notice

In the Court of the District Munsif of Kasaragod.

O. S. No. 332/43

Between—

Immambi & others— Plffs.
and
Sheik Hussain saheb & others — Defendants.

9th defendant Beejambi Wife of Sheik Meeran Saheb risiding at Victoria Hotel-military Ecola Road Santa Cruz, Bombay

Take notice that above suit filed against you and others is posted for your appearance to 5-1-44 to file your objections if any by that date.

By order

K. Kamalaksha Rao, B. A. L. T.
Advocate for Plffs.

The Victory Club

Both Vegetarian & Non-vegetarian dishes
Old Post office Building,
VICTORY ROAD, UDIPI.
(*Furnishing:* **Homes & Estats Ltd.**)

ಅತ್ಯಾಧುನಿಕ ನಾಗರಿಕ ವ್ಯವಸ್ಥೆಯಿಂದೊಡಗೂಡಿದ ಭೋಜನ ಮತ್ತು ವಿಶ್ರಾಂತಿ ಗೃಹ.

ವಿಕ್ಟರಿ ಕ್ಲಬ್

ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿದೆ.
ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ರೋಡ್, ಉಡುಪಿ.

ಹೊಸವರ್ಷದಲ್ಲಿ ನಿಮಗೆ ಬೇಕಾದುದೇನು?

ಪಾಕೆಟ್ 'ಕೆಲೆಂಡರ್'

- **1944**ನೇ ಇಸವಿಯ ಪಾಕೆಟ್ ಕೆಲೆಂಡರ್ ಈಗ ತಾನೆ ಬಿಕರಿಗೆ ಸಿದ್ಧವಾಗಿದೆ.
- ಇದರಲ್ಲಿ ತಾರೀಕು, ತಿಂಗಳಿನ ವಿಶೇಷ ದಿನಗಳು, ಜ್ಞಾಪಕ ಪತ್ರ ಇತ್ಯಾದಿ ನಿತ್ಯೋಪಯೋಗೀ ಮಾಹಿತಿಗಳು ಕೊಡಲ್ಪಟ್ಟಿವೆ.
- ಪ್ರತಿಯೊಬ್ಬನಲ್ಲೂ ಅತ್ಯಾವಶ್ಯಕವಾಗಿ ಇರಬೇಕಾದ ಕೈಗನ್ನಡಿ.

ಬೆಲೆ ಕೇವಲ ಒಂದಾಣೆ ಮಾತ್ರ

0-1-9 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮೂಲಕ ಕಳುಹಿಸಲಾಗುತ್ತದೆ. ಏಜಂಟರಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕೇರಳ
ಘನತರ

'ಡೆಂಟಿಫ್ರಿಸ್' ದಂತಚೂರ್ಣ

ಹಲ್ಲುರೋಗಗಳಿಗೆ ಅತ್ಯುತ್ತಮ.

ಶಾಸ್ತ್ರೀಯರೀತ್ಯಾ ತಯಾರಿಸಲ್ಪಟ್ಟುದು
ಮತ್ತು
ಮಿತ ದರದಲ್ಲಿ ಮಾರಾಟಮಾಡಲ್ಪಡುವುದು

ಕಾರ್ಡುಬೋರ್ಡು ಪೊಟ್ಟಣಗಳಲ್ಲೂ 'ಬೆಕೆಲೈಟ್' ಕರಡಿಗೆಗಳಲ್ಲೂ ಸೀಸೆಗಳಲ್ಲೂ ಭದ್ರವಾಗಿರಿಸಲ್ಪಟ್ಟಿದೆ

ತಯಾರಿಸಿದವರು,—

ಕೇರಳ ಸೋಪು ಇನ್ಸ್ಟಿಟ್ಯೂಟ್, ಕಲ್ಲಿಕೋಟೆ
(ಸರಕಾರೀ ಸಂಸ್ಥೆ)

K. S. I.

5ನೇ ವಾರ
ತಾ. 23—12—43ರಿಂದ
ಹಿಂದಿನ ದಾಖಲೆಗಳನ್ನು ಹಿಮ್ಮೆಟ್ಟಿ ಮುಂದೊತ್ತುತ್ತಿದೆ.
ಪ್ರಗತಿಯವರ ಕನ್ನಡ

ಹರಿಶ್ಚಂದ್ರ

ಸುಬ್ಬಯ್ಯ ನಾಯ್ಡು, ಲಕ್ಷ್ಮೀಬಾಯಿ, ನಾಗೇಂದ್ರ ರಾವ್
ಮೊದಲಾದವರಿಂದ ಶೋಭಿಸುತ್ತಿರುವ ಕನ್ನಡಿಗರ ಹೆಮ್ಮೆಯ ಚಿತ್ರ.
ತಾರೀಕು 26-12-43
ರಜತೋತ್ಸವ ದಿನ
(Silver Jubilee Day)
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಚೂರು-ಚೂರು

'ಮೇ 25ರಿಂದ ದಶಂಬರಾಂತ್ಯದ ವರೆಗೆ ಜರ್ಮನಿಯ ಮೇಲೆ ಹಾಕಿದ ಬೋಂಬುಗಳು 100000 ಟನ್. 1940ರಿಂದ 43ನೇ ಇಸವೀ ವರೆಗೆ ಹಾಕಿದ್ದ ಬೋಂಬುಗಳು 100000 ಟನ್. ಅಂತೂ ಈ ತನಕ ಜರ್ಮನಿಯ ಮೇಲೆ ಹಾಕಿದ ಜುಮ್ಲಾ ಬೋಂಬು ಭಾರ 2 ಲಕ್ಷ ಟನ್'-

ಜರ್ಮನಿಗೆಲ್ಲಾ ಬೆಂಕಿ ಹಚ್ಚಿದೆವೆಂದು ಮಿತ್ರರೂ ಮಿತ್ರರ, ಬೋಂಬುಗಳನ್ನೆಲ್ಲಾ ನಾಶ ಮಾಡಿದೆವೆಂದು ಜರ್ಮನರು ಬಡಾಯಿ ಹಾರಿಸುವುದಕ್ಕೇನಡ್ಡಿ?

o

"ರಶ್ಯದಲ್ಲಿ ಕೆಂಪು ಸೇನೆಯು ಪ್ರತಿ ರಾತ್ರಿಯೂ ಯುದ್ಧ ನಡೆಸಿ, ರಾತ್ರಿ ಯುದ್ಧದ ದಾಖಲೆಗಳನ್ನೆಲ್ಲಾ ಮುರಿದಿದೆ"-

ರಾತ್ರಿಯೇ ಹಗಲಿನಂತಾಗಬೇಕಾದರೆ ಜರ್ಮನ್ ಗನ್ನುಗಳು ಹೆಚ್ಚೆಚ್ಚು ಬೆಂಕಿಯನ್ನು ಕಾರಿರಬೇಕು.

o

'ಕಸ್ತೂರಿ ಬಾ ಗಾಂಧಿಯವರನ್ನು ಬಿಟ್ಟರೆ ಅವರನ್ನು ಕಠಿಣ ಕಾಹಿಲೆಯ ವೇಳೆ ಗಂಡನಿಂದಗಲಿಸಿದಂತಾಗುತ್ತದೆ'--ಹಿಂದೀ ಸರಕಾರದ ಪ್ರಕಟಣೆ.

'ಪತಿಯ ಪಾದದ ಬಳಿಯಲ್ಲೇ ಪ್ರಾಣ ಬಿಡಬೇಕು' ಎಂಬ ಪತಿವ್ರತಾ ಧರ್ಮವನ್ನೇ ಹಿಂದೀ ಸರಕಾರ ಪಾಲಿಸುತ್ತಿದೆ.

o

'ಗಾಯನ ಕಲೆಯ ಮೇಲ್ಮಟ್ಟವನ್ನು ತಗ್ಗಿಸುವ ಯಾವ ಕಾರ್ಯವನ್ನೂ ಮಾಡಬೇಡಿ' ಮದ್ರಾಸಿನ ಕಲಾ ಸಂಸ್ಥೆಯ ಪ್ರಾರಂಭಿಕ ಭಾಷಣದಲ್ಲಿ ಶ್ರೀ ಎನ್. ಚಂದ್ರಶೇಖರ ಐಯ್ಯರ್.

ಹಳೇ ಗಾಯಕರು ಆಲಾಪವನ್ನು ನರೀ ಕೂಗಿನಂತೆ ಮೇಲ್ಮೇಲೆ, ಎತ್ತರ ಎತ್ತರಕ್ಕೆ ಎಳೆಯುತ್ತಿರುವದರ ಮರ್ಮವೀಗ ತಿಳಿಯಿತು!

o

'ಸೋಲ್ಜರ್ ವೈಸರಾಯಿ ಲೋರ್ಡ್ ವೇವೆಲರು ಸ್ವಾಭಾವಿಕವಾಗಿ ಸ್ಪಷ್ಟ ಭಾಷೆಯಲ್ಲಾಡಿದ್ದಾರೆ'-- ಮಿ. ಜಿನ್ನ.

ಸೋಲ್ಜರ್ ವೈಸರಾಯರ ಭಾಷಣ ಸ್ಪಷ್ಟವಿದ್ದ ಮೇಲೆ ಸೇನಾನಿ ಜಿನ್ನರ ಭಾಷಣ ಕಠೋರವಿರುವದೂ ಸ್ವಾಭಾವಿಕ.

o

'ಯುಗೊಸ್ಲಾವಿಯಾದಲ್ಲಿ ದರೋಡೆಯೆದ್ದು ಹಿಂದಿನ ಪೀಟರ್ ಅರಸರು ದೇಶಭ್ರಷ್ಟರಾಗಿದ್ದಾರೆ- ಅಲ್ಲಿ ಫೇಸಿಸ್ಟ್ ವಿರೋಧಿ ರಾಷ್ಟ್ರ ವಿಮೋಚನ ಸಮಿತಿಯ ಕಾರಬಾರು ನಡೆದಿದೆ'.

ಕೆಲವು ದೇಶಗಳ ರಾಜರಾಣಿಯರೀಗ ಲಂಡನಿನ ಹೊಟೆಲು ಸೇರಿದ್ದಾರೆ-ಇನ್ನು ಕೆಲವು ದೇಶಗಳವರು ಬರ್ಲಿನಿನಹೊಟೆಲು ಸೇರಲಿ!

o

'ನಮಗೆ ಮೂರು ಏಕೀಕರಣಗಳು ಬೇಕು-ಕನ್ನಡದ ಏಕೀಕರಣ, ಕನ್ನಡಿಗರ ಏಕೀಕರಣ, ಕರ್ನಾಟಕದ ಏಕೀಕರಣ' —ಶಿವಮೊಗ್ಗದಲ್ಲಿ ಸೇರಿದ ೨೭ನೇ ಕನ್ನಡ ಸಾಹಿತ್ಯ ಸಮ್ಮೇಲನಾಧ್ಯಕ್ಷ ಶ್ರೀ. ದಾ. ರಾ. ಬೇಂದ್ರೆಯವರ ಅಮರವಾಣಿ.

ಈ ಮೂರು ಏಕೀಕರಣಗಳೂ ಏಕೀಕರಣಹೊಂದಬೇಕೆಂಬುದನ್ನು ತಿಳಿಸುವ ಭಾರ ಮುಂದಿನ ವರುಷದ ಸಾಹಿತ್ಯ ಸಮ್ಮೇಲನಾಧ್ಯಕ್ಷರದು.

—ವಿನೋದಿ.

ಬಸೆಂಟ್ ನೇಶನಲ್ ಗರ್ಲ್ಸ್ ಶಾಲೆಯ ರಜತೋತ್ಸವವು-ತಾ-14-1-44ನೇ ಶುಕ್ರವಾರ ಶ್ರೀ| ಸಿ- ರಾಜಗೋಪಾಲಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

NOTICE·

ಉಡ್ಪಿ ಡಿ ಮು. ಕೋರ್ಟಿನಲ್ಲಿ.

O. P. 87/1943.

1. ಯು. ಸುಂದರಕಾಮತ್- 2. ಯು. ಕೇಶವಕಾಮತ್. ಉದಿಯೂವರ ಶೇಷಗಿರಿ ಕಂಪ್ತಿರ ಮಕ್ಕಳು.

3. ಚಂದ್ರಭಾಗಿ ಅಂಮ· ಶೇಷಗಿರಿ ಕಂಪ್ತಿರ ವಿಧವೆ. 4 ಯಶವಂತ ಕಾಮತ್. 5. ಮತಿವಂತ ಕಾಮತ್ ಮ್ಯಾನರು. ಕ್ಷೇಮಚಿಂತಕ 2ನೇ ಅರ್ಜಿದಾರ. ಉಡ್ಪಿ ಕಸಬೆಯಲ್ಲಿರುವವರು.

—ಅರ್ಜಿದಾರರು.

1ನೇ 2ನೇ ಅರ್ಜಿದಾರರ ಸಹೋದರ 3ನೇ ಅರ್ಜಿದಾರಳ ಮಗ 4ನೇ 5ನೇ ಅರ್ಜಿದಾರರ ತಂದೆ ಮೃತ ಉದಿಯೂವರ ಮಾಧವ ಕಾಮತರ ಬಾಬ್ತು The Oriantal Government Security Life Assurance Co. Ltd- Bombay, Zeniths Life Assurance Co. Ltd· Bombay, The Canara Mutual Assurance Company Ltd. Udipi, ಯೀ ಕಂಪೆನಿಯಿಂದ ಬರತಕ್ಕಯಿನ್ಶ್ಯುರುಷ ಬೋನಸ್ ಮತ್ತು The Kalyanpur Sugar Mills, Ltd, The P· V· Motor service Ltd. Mangalore. ಮತ್ತು Southern Land Trust Ltd. Mangalore, ಈ ಕಂಪೆನಿಗಳಿಂದ ಬರತಕ್ಕ ಅಯಿವೇಜು ವ ಬಡ್ಡಿ ಮತ್ತು dividends ವಗೈರೆ ಅಯಿವೇಜುಗಳ ವ್ಸಲು ಪಕ್ಕಿನ ಕುರಿತು 2ನೇ ಅರ್ಜಿದಾರಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಮೇಲ್ಕಂಡ ಕೋರ್ಟಿನಲ್ಲಿ ದಾಖ್ಲುಮಾಡಿದ ಸದ್ರಿ ಅರ್ಜಿಯು ತಾರೀಕು 20-1-1944ರಲ್ಲು ಯಿಡೋಣಾಗಿಯದೆ. ಅ ಬಗ್ಯೆ ಆಕ್ಷೇಪ ಹೇಳುವವರು ಸದ್ರಿ ತನ್ನಿ ದಿವ್ಸ ಬೆಳಗ್ಯೆ 10 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಆಕ್ಷೇಪ ಜ್ಯಾಹೀರುಮಾಡಿಕೊಳ್ಳತಕ್ಕದ್ದು.

K Varadaraya Pai·

Advocate for petitioners

Dated. 23—12—43.

Udipi, S· K·

ಯುದ್ಧಕಾಲದಲ್ಲಿ ಹಣಕ್ಕೆ ಬೆಲೆಯಿಲ್ಲ

ಅಂಗಡಿಗಳ ಅನೇಕ ಪದಾರ್ಥಗಳ ಬೆಲೆಗಳು ಇಂದಿಗೆ ಕಂಡಾಬಟ್ಟೆ ಹೆಚ್ಚಿದೆ. ಯುದ್ಧಕಾಲದಲ್ಲಿ ಅತ್ಯವಶ್ಯಕನಾದ ಪದಾರ್ಥಗಳ ವಿನಹಾ ಇತರ ಪದಾರ್ಥಗಳನ್ನು ಕೊಂಡರೆ ಗಿಟ್ಟುವುದೇ ಇಲ್ಲ. ಇದಕ್ಕೆ ಪ್ರತಿಯಾಗಿ ನೀವು ಕೂಡಿಡಬಹುದಾದ ಪ್ರತಿಯೊಂದು ಆಣೆಗೂ ಪೂರ್ಣ ಬೆಲೆಯು ದೊರೆಯಬೇಕೆಂದರೆ ಅದು ಸಾಧಾರಣ ಕಾಲ ಪುನಹಾ ಬಂದಾಗಲೇ ಸಾಧ್ಯ. ಶಾಂತಿಸಮಯದಲ್ಲಿ ವೆಚ್ಚಮಾಡಲು ಈಗಲೇ ಹಣವನ್ನು ಕೂಡಿಡಿ.

ಮುಂಬರುವ ದಿನಗಳಿಗಾಗಿ ಕ್ಷೇಮಕರವಾಗಿ ಕೂಡಿಡಿ

ಸುರಕ್ಷಿತವಲ್ಲ ಭಂಗಾರ, ಬೆಳ್ಳಿ, ಆಭರಣಗಳು, ಭೂಮಿ, ಕಟ್ಟಡಗಳು ಅಥವಾ ಸಾಮಾನುಗಳಮೇಲೆ ವಿನಿಯೋಗಿಸಿ ಶೇಖರಿಸಿದ ಎಷ್ಟೋ ಮೌಲ್ಯವು, ಬೆಲೆಗಳು ಸರಿಯಾದ ಸ್ಥಿತಿಗೆ ಬಂದಕೂಡಲೇ ತಗ್ಗಿಹೋಗುತ್ತವೆ.

ಸುರಕ್ಷಿತ ಭದ್ರತೆಗೆ ಮತ್ತು ಶಾಶ್ವತ ಮೌಲ್ಯಕ್ಕೆ ಗೋಸ್ಕರ ನಿಮ್ಮ ಹಣವನ್ನು ಸಹಕಾರ ಸಂಸ್ಥೆ, ಇನ್ಶೂರೆನ್ಸು, ಬ್ಯಾಂಕ್ ಸೇವಿಂಗ್ಸು ಅಕೌಂಟಿನಲ್ಲಿ ಅಥವಾ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕ್ ನಲ್ಲಿ ಇಡಿ. ಇವೆಲ್ಲವುಗಳಿಗೂ ಉತ್ತಮವಾದುದೆಂದರೆ ಸರ್ಕಾರದ ಸಾಲಗಳಲ್ಲಿ ಮತ್ತು ಸೇವಿಂಗ್ಸ್ ಸರ್ಟಿಫಿಕೇಟುಗಳಲ್ಲಿ ವಿನಿಯೋಗಿಸುವುದು



ರಾಷ್ಟ್ರೀಯ ಯುದ್ಧಮುಖದವರು ದೇಶೀಯರಿಗೆ ಮಾಡುವ ಮನವಿ

ದಕ್ಷಿಣ ಕನ್ನಡ-

ಮಂಗಳೂರು.

ಅಕ್ಕಿ ಭತ್ತದ ವಿಚಾರ ಕಲೆಕ್ಟರ ಪ್ರಕಟಣೆ—ಮಂಗಳೂರು ಮುನ್ಸಿಪಾಲಿಟಿಯೊಳಗೆ ೧೦ ಮುಡಿ ಮತ್ತು ಅದಕ್ಕಿಂತ ಹೆಚ್ಚು ಅಕ್ಕಿ ಅಥವಾ ಭತ್ತವಿಟ್ಟುಕೊಂಡವರು, ಅದರ ವಿವರವನ್ನು ತನಗೆ ತಾ. ೩೧-೧೨-೧೯೪೩ರ ಒಳಗೆ ತಿಳಿಸಬೇಕೆಂದು ಜಿಲ್ಲಾ ಕಲೆಕ್ಟರರು ಪ್ರಕಟಣೆ ಹೊರಡಿಸಿದ್ದಾರೆ.

ಜಿಲ್ಲಾ ಹರಿಜನ ಸೇವಕ ಸಂಘ-ಇದರ ಸಭೆ ತಾ ೯-೨ರಂದು ವಿ. ಸಿ. ಎಂ, ಲಟ್ಟದಲ್ಲಿ ಶ್ರೀ ಎ. ಬಿ. ಶೆಟ್ಟರ ಅಧ್ಯಕ್ಷತೆಯಿಂದ ಜರಗಿ ವಾರ್ಷಿಕ ವರದಿ ವಾಚನ, ಲೆಕ್ಕಪತ್ರಗಳ ಸ್ವೀಕಾರ, ಬಜೆಟ್ ಅಂದಾಜುಗಳಾದ ಮೇಲೆ ಹೊಸ ವರ್ಷದ ಕಾರ್ಯಕಾರೀ ಮಂಡಳದ ರಚನೆಯಾಯಿತು. ಶ್ರೀ ಎ. ಬಿ. ಶೆಟ್ಟರು ಅಧ್ಯಕ್ಷರು, ಶ್ರೀ ಎಂ. ಅಣ್ಣಪ್ಪರು ಉಪಾಧ್ಯಕ್ಷರು, ಶ್ರೀ. ಬಿ. ಅನಂತ ರಾಯರು, ಕಾರ್ಯದರ್ಶಿ, ಮತ್ತು ಭಜನ ಕಾರ್ಯಕಾರೀ ಸಮಿತಿ ಸದಸ್ಯರು.

ವರ್ಧಂತಿಗಳು—ಸರಕಾರೀ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲಾ ವರ್ಧಂತ್ಯುತ್ಸವವು ಕಳೆದ ಶನಿವಾರ ಸಂಜೆ ಖಾ| ಸಾ|ಎಚ್. ಎಸ್. ಹುಸೇನ್ ಸಾಹೇಬ್, ಎಂ. ಎಲ್. ಎ. ಇವರು ಅಧ್ಯಕ್ಷತೆಯಿಂದ ನೆರವೇರಿತು. ಶಾಲಾ ಹೆಡ್ ಮಾಸ್ತರು ಶ್ರೀ ರೋಬರ್ಟ್ಸ್ ಇವರು ಶಾಲಾ ವರದಿಯನ್ನೋದಿದರು. ಶ್ರೀ ಪಿ. ಶಿವಣ್ಣ ಹೆಗ್ಡೆಯವರು ಶಾಲಾ ಕ್ರೀಯ ಪ್ರಾರ್ಥನೆ ಮಾಡಿದರು, ವಿವಿಧ ವಿನೋದಾವಳಿಗಳಿದ್ದವು.

ಕೆನರಾ ಸ್ಕೂಲ್ ಓಫ್ ಕಾಮರ್ಸಿನ ವರ್ಧಂತಿ ಕಳೆದ ಆದಿತ್ಯವಾರ ಸಂಜೆ ೬ ಶಾಲೆಯಲ್ಲಿ ಗ| ಕಾಲೇಜಿನ ಪ್ರಿನ್ಸಿಪಾಲ್ ಶ್ರೀ| ಕೆ. ಐ. ವರ್ಗೀಸ್, ಇವರ ಅಧ್ಯಕ್ಷತೆಯಲ್ಲಿ ಜರಗಿತು.

ದಿವಂಗತರಾದರು.

ಮಂಗಳೂರು ಮಿಶನ್ ಹ್ಯಾಸ್ಕೂಲಿನಲ್ಲಿ ೬ ವರ್ಷಗಳ ವರೆಗೆ ಗಣಿತಾಧ್ಯಾಪಕರಾಗಿದ್ದು ಜನಪ್ರಿಯರಾಗಿದ್ದ ಶ್ರೀ ಕೆ. ಗಣಪಯ್ಯನವರು ತಮ್ಮ ೭೩ನೇ ವಯಸ್ಸಿನಲ್ಲಿ ತಾ. ೨೧ರಂದು ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಜ್ಯೋತಿಶ್ಶಾಸ್ತ್ರದಲ್ಲಿ ಬಹಳ ಪ್ರಸಿದ್ಧ ವಿದ್ವಾಂಸರಿದ್ದರು.

ಕಾಸರಗೋಡಿನ ಪ್ರಸಿದ್ಧ ಡಾಕ್ಟರರಾದ ಶ್ರೀ ಕೆ. ಪಿ. ರಾಘವೇಂದ್ರ ರಾಯರು ತಾ. ೧೯ರಂದು ರಾತ್ರಿ ತಮ್ಮ ೪೫ನೇಯ ಪ್ರಾಯದಲ್ಲಿ ದಿವಂಗತರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ನಿಧನದ ಬಗ್ಗೆ ಮರುದಿನ ಕಾಸರಗೋಡು ಪೇಟೆಯಲ್ಲಿ ಸಂಪೂರ್ಣ ಹರತಾಳವಿತ್ತು.

ತಾ. ೧೭ರಂದು ಮಂಗಳೂರಿನ ಪ್ರಸಿದ್ಧ ಸಾಹುಕಾರರಾದ ಶ್ರೀ ಉಲ್ಲಾಳ ವಾಸುದೇವ ಮಲ್ಯರು ದಿವಂಗತರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ವಯಸ್ಸು ಸುಮಾರು ೭೦ ವರುಷವಿರಬಹುದು.

ಉಡುಪಿ.

ರೇಶನಿಂಗ್ ಸಭೆ—ಸದ್ಯವೆ ಉಡುಪಿ ಮುನಿಸಿಪಾಲಿಟಿಗೂ ಅದಕ್ಕೆ ಸಂಬಂಧಿಸಿದ ಕೆಲವು ಹೊರಗಿನ ಭಾಗಗಳಿಗೂ ಜ್ಯಾರಿಯಲ್ಲಿ ಬರಲಿರುವ ರೇಶನಿಂಗ್ ಪದ್ಧತಿಯ ಸರ್ವ ಸಾಮಾನ್ಯ ಮಾಹಿತಿಯನ್ನೀಯುವರೆ ತಾ. 25ರಲ್ಲು ಸಂಜೆ ತಾಲೂಕು ಕಚೇರಿ ವರಾಂಡದಲ್ಲೊಂದು ಸಭೆಯು ಮಿಸೆಸ್ ಕೆ. ಕಣ್ಣನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ರೇಶನಿಂಗ್ ಆಫೀಸರ್ ಶ್ರೀ ಮೇನಕೆಯವರು ರೇಶನಿಂಗ್ ಪದ್ಧತಿ ಪ್ರಕಾರ ಐಶ್ವರ್ಯವಂತರಿಗೂ ಬಡವರಿಗೂ ಸರಿ ಸಮಾನವಾದ ರೀತಿಯಲ್ಲಿ ಅಕ್ಕಿ ಸಿಗುವ ಏರ್ಪಾಡು ಮಾಡಲಾಗುವುದೆಂದು ತಿಳಿಸಿ ಮಹಾಜನರೆಲ್ಲರೂ ತನ್ನ ಕಾರ್ಯವು ಜಯಶೀಲವಾಗುವಂತೆ ಸಹಾಯ ಸಹಕಾರವನ್ನೀಯಬೇಕಾಗಿ ವಿನಂತಿಸಿದರು. ರೇಶನಿಂಗ್ ಪದ್ಧತಿ ಪ್ರಕಾರ ಎರಡು ವರುಷಗಳಿಗೆ ಮೇಲ್ಪಟ್ಟು ಹನ್ನೆರಡು ವರುಷದೊಳಗಿನವರಿಗೆ ದಿನಕ್ಕೆ ಒಂದು ಪಾವಿನಂತೆಯೂ ಹನ್ನೆರಡು ವರುಷಕ್ಕೆ ಮೇಲ್ಪಟ್ಟವರಿಗೆ ದಿನಕ್ಕೆ ಅರ್ಧ ಸೇರಿನಂತೆಯೂ ಅಕ್ಕಿ ಸಿಗುವುದು. ಹಪ್ತೆಗೊಮ್ಮೆ ಯಾ ಎರಡು ಸಲ ಯಾ ದಿನಾ ಪ್ರತಿ ಅಕ್ಕಿ ಸಿಗುವಂತೆ ತಕ್ಕ ವ್ಯವಸ್ಥೆಯಿದೆ. ಈಗ ರೂಢಿಯಲ್ಲಿರುವಂತೆ ಮದುವೆ ಉಪನಯನ ಮರಣ ಕ್ರಿಯೆಗಳಿಗೆ ಬೇಕಷ್ಟು ಜನರಿಗೆ ಸಾಕಷ್ಟು ಭೋಜನವನ್ನೀಯಲು ರೇಶನಿಂಗ್ ಪದ್ಧತಿಯಲ್ಲಿ ಎಡೆಯಿಲ್ಲ. ಮನೆಯಲ್ಲಿರುವ ಜನರ ವಿನಹ ಮದುವೆಗೆ (ದಿಬ್ಬಣ್ಣ ಮರು ದಿಬ್ಬಣ್ಣ ಕೂಡಾ) ಮೂವತ್ತು ಮಂದಿಗೂ ಉಪನಯನಕ್ಕೆ ಆರು ಮಂದಿ, ಶವದಹನಕ್ಕೆ ಆರು ಮಂದಿಗೆ, ವೈಕುಂಠ ಸಮಾರಾಧನೆಗೆ ಹತ್ತು ಮಂದಿಗೆ ಪ್ರತ್ಯೇಕ ಅಪೇಕ್ಷೆಯಂತೆ ರೇಶನ್ ಕಾರ್ಡುಗಳು ಕೊಡಲ್ಪಡುವುವು. ಗಣೇಶಹಬ್ಬ, ಅನಂತನ ವ್ರತ, ನವರಾತ್ರಿ, ದೀಪಾವಳಿ, ಕೃಷ್ಣಾಷ್ಟಮಿ, ಯುಗಾದಿ ಹಬ್ಬಗಳಿಗೆ ಸ್ಪೆಶಲ್ 'ರೇಶನಿಂಗ್ ಕಾರ್ಡುಗಳು ದೊರೆಯಬೇಕಾಗಿ ಸಭಿಕರು ಕೊಟ್ಟ ಸದಭಿಪ್ರಾಯವನ್ನು 'ರೇಶನಿಂಗ' ಆಫೀಸರರು ತನ್ನ ಮೇಲಧಿಕಾರಿಗಳಿಗೆ ಬರೆದುಕೊಳ್ಳುವೆನಾಗಿ ಭರವಸೆಯಿತ್ತರು.

ಮುನಿಸಿಪಲ್ ಶಾಲಾ ಉಪಾಧ್ಯಾಯರೂ ಬಿಲ್ ಕಲೆಕ್ಟರರೂ ಮುನಿಸಿಪಾಲಿಟಿಯೊಳಗಿನ ಮನೆಗಳನ್ನು ಪರಿಶೀಲಿಸುವಾಗ ಬಗ್ಗೆ ಸಂದರ್ಶಿಸಲಿಕ್ಕಾರಂಭಿಸಿರುವರು. ಅವರು ಕೇಳಿ ದಾಖಲೆ ಮಾಡುವ ಪ್ರಶ್ನೆಗಳಿಗೆ ನಗರವಾಸಿಗಳು ಇದ್ದುದನ್ನು ಇದ್ದಂತೆ ಉತ್ತರ ಕೊಡಬೇಕಾಗಿದೆ. ಜಾಸ್ತಿ ಅಕ್ಕಿಯನ್ನು ಪಡೆಯಬೇಕೆಂಬ ದುರುದ್ದೇಶದಿಂದ ಸುಳ್ಳು ಉತ್ತರ ಕೊಟ್ಟವರಿಗೆ ಇಂಡಿಯಾ ಸಂರಕ್ಷಣಾ ಕಾನೂನಿನ ಮೇರೆಗೆ ದಂಡನೆ ಮಾತ್ರವಲ್ಲದೆ ಕಠಿಣ ಸಜೆ ಸಹಾ ವಿಧಿಸಲ್ಪಡುವುದು. ರೇಶನಿಂಗ್ ಕಾರ್ಡುಗಳು ಕೊಡಲ್ಪಟ್ಟ ಬಳಿಕ ಚಿಮಣಿ ಎಣ್ಣೆ, ಸಕ್ಕರೆಯಂತೆ ಸ್ಪೆಶಲ್ ಲೈಸನ್ಸುದಾರರು ಅಕ್ಕಿಯನ್ನು ಕೊಡುವರು.

ಉದ್ಯಾವರ, ಮಲ್ಪೆ, ಕಲ್ಯಾಣಪುರ ಇತ್ಯಾದಿ ಕೇಂದ್ರಗಳಿಗೆ ಪ್ರತ್ಯಪ್ರತ್ಯೇಕ ಅಕ್ಕಿ ಸಾರಾಟದ ಡಿಪೋ ತೆರೆಯಲ್ಪಡುವುದು. ಅಲ್ಲಿಯ ಗ್ರಾಮನಿವಾಸಿಗಳಿಗೂ ರೇಶನ್ ಕಾರ್ಡುಗಳು ಕೊಡಲ್ಪಡುವವು.

ಪರ್ಯಾಯ ಶ್ರೀ| ಕೃಷ್ಣಾಪುರ ಮಠದ ಶ್ರೀ. ಮ. ವಿದ್ಯಾರತ್ನತೀರ್ಥ ಶ್ರೀಪಾದಂಗಳವರು ಬರುವ ತಾ| 18-1-44ಕ್ಕೆ ಪರ್ಯಾಯ ಪೀಠಾರೂಢರಾಗತಕ್ಕ ಶ್ರೀಮದ್ ಸುಧೀಂದ್ರತೀರ್ಥ ಶ್ರೀಪಾದಂಗಳವರಿಗೆ ತಾ| 22-12-43ರಲ್ಲು ಪಟ್ಟದ ದೇವರನ್ನು ಚಿನ್ನದ ಪಾಲಕಿಯಲ್ಲಿ ಮೆರವಣಿಗೆಯಲ್ಲಿ ಕಳಿಸಿಕೊಟ್ಟು, ಪಾದ ಪೂಜಾದಿಗಳಿಂದ ಸತ್ಕರಿಸಿ, ರಾತ್ರಿ ಮಾಲಿಕೆ ಮಂಗಳಾರತಿ ಇತ್ಯಾದಿಗಳನ್ನು ಬಹಳ ವಿಜೃಂಭಣೆಯಿಂದ ನೆರವೇರಿಸಿದರು.

ಸಹಕಾರಿ ಹೊಸ ಡಿಪೊಗಳು:—ರಿಕ್ವಿಶಿಸನ್ ಅಕ್ಕಿ ಪಡೆಯುವರೆ ಕುಂದಾಪುರ ಡಿವಿಜನಲ್ಲಿ ತೆರೆಯಲಾದ ಶಿರೂರು, ಬೈಂದೂರು, ಉಪ್ಪುಂದ, ಕಿರಿಮಂಜೇಶ್ವರ, ಬಸ್ರೂರು, ಕೋಟೇಶ್ವರ, ವಂಡ್ಸೆ, ಕೋಟ, ಕಾಪು, ವೇಣೂರು.

ಕುಂಬಳೆ—ಮಂಗಳೂರು ಕಡೆಗೆ ಸುಮಾರು ೪೫೦ ಡಬ್ಬಿ ಚಿಮ್ಣಿ ಎಣ್ಣೆ ತುಂಬಿಕೊಂಡು ಬರುತ್ತಿದ ಒಂದು ಲೈರ್ರಿ ವೇಗದಿಗೆ ಬೆಂಕಿ ಬಿದ್ದು ಸುಮಾರು ೪೦೦ ಡಬ್ಬಿ ಸುಟ್ಟು ಹೋಗಿವೆಯೆಂದೂ ಬೆಂಕಿ ಹುಟ್ಟಿದಂತ ಲೈರ್ರಿ ಸಂಬಂಧಿಯವರು ಬಹಳ ಸಾಹಸ ಮಾಡಿದ್ದರಿಂದ ಯಾರಿಗೂ ಏನೂ ಅಪಾಯವಾಗಲಿಲ್ಲವೆಂದೂ ತಿಳಿದಿದೆ.

ಜಿಲ್ಲೆಯಲ್ಲಿ ಜಾನುವಾರು ರೋಗ-ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಹಳ್ಳಿಗಳಲ್ಲಿ ಜಾನುವಾರು ರೋಗ ಪ್ರಬಲವಾಗಿದೆ. ಹಟ್ಟಿಹಟ್ಟಿಗಳೇ ಖಾಲಿಯಾಗುತ್ತಿವೆ ಮುಖ್ಯತ್ತರು ಕಾಸರಗೋಡು ತಾಲೂಕಿನಲ್ಲಿ ಜಾನುವಾರು ರೋಗ ಪ್ರಬಲವಾಗಿದೆ. ಜಾನುವಾರುಗಳಿಗೆ ಕ್ರಯ ಹೆಚ್ಚಾಗಿರುವಾಗ, ತೆಚ್ಚಾದರೂ ಸಿಗುವುದೇ ಕಷ್ಟವಾಗಿರುವಾಗ, ಹೀಗೆ ರೋಗವು ಪ್ರಬಲಿಸಿ, ಜಾನುವಾರುಗಳೆಲ್ಲಾ ಮಡಿದು ಹೋದರೆ ಹಳ್ಳಿಯ ಬೇಸಾಯಗಾರರ ಬಾಳು ಗೋಳೇ ಸರಿ. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಈ ಕುರಿತು ಬೇಗನೆ ತಕ್ಕ ತರದ ಯೋಗ್ಯ ಕೆಲಸ ಕೈಗೊಳ್ಳುವುದು ಯುಕ್ತವಿದೆ. ಜಾನವಾರುಗಳು ಸಾಯುವುದೆಂದರೆ ಕೃಷಿಕನ ಆಸ್ತಿಯೇ ಹೋದಂತೆ. ಬೆಳೆ ಮಾಡಲಿಕ್ಕಿಲ್ಲ ಮಾತ್ರವಲ್ಲದೆ ದನ ಪೋಷಣೆಗೆ ಹಾಲು ಮಜ್ಜಿಗೆಯೂ ಇಲ್ಲದೆ ಬಹಳ ತೊಂದರೆಯುಂಟಾಗುತ್ತದೆ. ಬೆಳ್ಳಾವೆ ಮೊದಲಾದ ಕಡೆಗಳಿಂದ ರಿಪೋರ್ಟು ಬಂದರೂ ಡಿಪಾರ್ಟ್ಮೆಂಟಿನವರು ಈ ವರೆಗೂ ಗಮನಕ್ಕೆ ತಂದಿಲ್ಲವೆಂಬ ದೂರೂ ಕೇಳಿಬರುತ್ತಿದೆ. ಇನ್ನಾದರೂ ಸಂಬಂಧಪಟ್ಟವರು ಗಮನಿಸುವರೇ?

ಪ್ರಕಟಣೆ.

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisserri.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ- ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ...ನು ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುನ್ನಿರಾಮನ್,
ಮೆನೇಜರ್,

ಟೆಂಡರ್ ನೋಟೀಸು

ಉಡ್ಪಿ ಮುನ್ಸಿಪಾಲಿಟಿಯ 1944-45ನೇ ವರ್ಷದ ಕಾಮಗಾರಿಕೆಯ ಬಗ್ಗೆ ತಾರೀಕು 12—1—1944ನೇ ಬುಧವಾರ ಅಪರಾಹ್ನ ನಾಲ್ಕು ತಾಸಿನ ತನಕ ಕಂಟ್ರಾಕ್ಟರರಿಂದ ಟೆಂಡರುಗಳು ಸ್ವೀಕರಿಸೋಣಾಗುವವು. ಮುನ್ಸಿಪಾಲಿಟಿಯ ದಾಖಲೆಯಲ್ಲಿ ರಿಜಿಸ್ಟ್ರಿಯಾಗದ ಉಮೇದ್ವಾರರು ರೂಪ್ಯಾ 5/-ನ್ನು ಮುನ್ಸಿಪಲ್ ಖಜಾನೆಗೆ ಪಾವತಿ ಮಾಡಿ ರಿಜಿಸ್ಟರ್ ಮಾಡಿಸಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಯನ್ನು ಮುನ್ಸಿಪಲ್ ಆಫೀಸು ಸಮಯ ಖುದ್ದು ಬಂದು ಪಡೆಯಬಹುದು.

ಕಾಮಗಾರಿಕೆಯ ತಪಸಿಲು

ಕಾಮಗಾರಿಯ ವಿವರ.	ಅಂದಾಜು ಖರ್ಚು	ಟೆಂಡರ್ ಡಿಪ್ರೋಜಿಟ್
	ರೂಪ್ಯಾ	ರೂಪ್ಯಾ
1 ಕರಾವಳಿ ರಸ್ತೆಯ ದುರುಸ್ತಿ	3500/-	175/-
2 ಕಾರ್ಕಳ ರಸ್ತೆಯ ದುರುಸ್ತಿ	3500/-	175/-
[illegible] ಮೂಡು ಬ್ಲೋಕು	1750/-	90/-
4 ಡಿ ಪಡು ಬ್ಲೋಕ	1400/-	70/-
5 ಚಿಲ್ಲರೆ ಕಾಮಗಾರಿ	—	100/-

ಮುನ್ಸಿಪಲ್ ಆಫೀಸು, ಉಡುಪಿ
ತಾ. 24—12—1943

K. Ramanunni Nayar, B. A.
ಕಮಿಶ್ನರ್.

ಇನ್ನೂ

'ನವಯುಗ'ದ ಚಂದಾ ಹಣ ಬಾಕಿ ಇರುವವರು ಅದನ್ನು ಕೂಡಲೇ ಕಳುಹಿಸಿಕೊಡುವಂತೆ ಅಪೇಕ್ಷಿಸುತ್ತೇವೆ.

ಮೆನೇಜರ್,

Bhuvanendra Products Limited,

KATAPADI, S. Kanara.

We wish a happy and prosperous new year to all our agents & stockists, customers and well-wishers

BHUVANENDRA PRODUCTS LIMITED,
KATAPADI, S. Kanara.
Depot:—Maharata Galli, HUBLI.

The Pangal Nayak Bank Limited.
ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in 1920)

Registered Office: Court Road UDIPI South Canara District.
Business Offices: Udipi, Mangalore, Katapadi, Kanhangad and Kinnigoli, South Canara.

Authorised and Issued Capital: Rs 2,00,000/-
Subscribed and Paid up Capital: Rs. 2,00,000/-
Reserve Funds: Rs. 1,75,852/-

Short term bills are discounted for approved parties. Loans and advances are made and overdrafts granted on fairly easy terms.

Deposits are accepted at favourable rates of interest. More than twenty-three years' reliable banking Service stands to our credit.

For further particulars please call at or apply to the nearest office.

Dated 31-10-1943.

ಜನಪ್ರಿಯವಾದ ಕಿರಿಯರ ಪ್ರಪಂಚದ ಪ್ರಕಟಣೆಗಳು

ಮಧುವನ	೨	೮	೦	ರಂಗಭೂಮಿ	೦	೮	೦
ಪ್ರಕಾಶ	೧	೧೨	೦	ಸಂಶಯ ಪಿಶಾಚಿ	೦	೮	೦
ಭಾರತೀಯ ಕತೆಗಳು	೦	೧೪	೦	ಸೇವಾಪಥ	೦	೮	೦
ನಾರೀ ಹೃದಯ	೧	೧೪	೦	ಕುಶಲವ	೦	೫	೦
ದೇಶಭಕ್ತ	೦	೧೪	೦	ಹೆಂಡ್ತಿ ಗಂಡನಾದರೆ	೦	೪	೦
ಕಾವ್ಯ ಸಾಮ್ರಾಜ್ಯ	೦	೧೨	೦	ಪುರುಷವಧು	೦	೪	೦
ಪ್ರೇಮ ವಿಜಯ	೦	೧೨	೦	ಸ್ವತಂತ್ರ ಜೀವನೋಪಾಯ	೦	೩	೦
ವ್ಯಭಿಚಾರಿಣಿ ಯಾರು	೦	೧೨	೦	ನಾಡಕತೆಗಳು	೦	೩	೦
ಸಂಧ್ಯಾದೀಪ	೦	೧೦	೦	ಮುಂದಿನ ದೇವರು	೦	೩	೦
ಸನ್ಯಾಸಿಯ ಸೋಗಿನಲ್ಲಿ	೦	೮	೦	ಮೂರು ಪ್ರಹಸನಗಳು	೦	೧೪	೦

ಕಿರಿಯರ ಪ್ರಪಂಚ. ಉಡುಪಿ.

The Moolky Bank, Ltd.,
MOOLKY, S.K.
ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ **1929**ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager — **ಯಂ. ಆರ್. ಪೂಂಜ,** ಪ್ರೆಸಿಡೆಂಟ್ ಮತ್ತು ಮೆನೇಜರ್.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ : : : : ಮಂಗಳೂರು.

THE VIJAYA BANK, LTD.,
Head office: MANGALORE.

Glad to announce that a Branch of the Bank will be opened at PUTTUR, shortly.

ನಮ್ಮ ಬ್ಯಾಂಕಿನ ಶಾಖೆಯೊಂದು ಸದ್ಯವೇ ಪುತ್ತೂರಲ್ಲಿ ತೆರೆಯಲ್ಪಡುವುದು.

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.

ಶ್ರೀ

ನಮ್ಮ ಸುವರ್ಣ ಮಹೋತ್ಸವ ಸಂಚಿಕೆಗೆ ದಯಮಾಡಿ ನಿಮ್ಮ ಸಹೃದಯ ಸಂದೇಶವನ್ನು ಕಳುಹಿಸಿ ಕೊಡಿರಿ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದ
ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. **1-8-0** ಮಾತ್ರ
ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. **2-8-0**
ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು, ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರಪೀಸಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಷ್ಟ ಚಾರ್ಜು ೧೨ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.
ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ—ಕುಂಬರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕಮಲದಾನ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ** ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೮ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ.ಕ.**

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.
ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.
Approved firm by the Govt. Mysore.
Certified by the Agent of the Govt of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI. S. India